॥ ಶ್ರೀಮನ್ ಮೂಲರಾಮೋ ವಿಜಯತೇ ॥ ಭಾಗ–1 ॥ ಶ್ರೀ ಗುರುರಾಜೋ ವಿಜಯತೇ ॥

## ತತ್ವಪ್ರಕಾಶಿಕಾ

# ಭಾವದೀಪ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ತತ್ವಪ್ರಕಾಶಿಕಾ ಇವುಗಳೊಂದಿಗೆ
ಶ್ರೀ ಮಂತ್ರಾಲಯ ಪ್ರಭುಗಳ ಭಾವದೀಪ ಗ್ರಂಥದ ಸಂಸ್ಕೃತ ಮೂಲ ಹಾಗೂ ಕನ್ನಡ ಅನುವಾದ

**ವಿಶೇಷವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ**


ಅಧ್ಯಕ್ಷರು

**ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದರು**

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ

ಗೌರವ ಸಂಪಾದಕರು

**ವಿ॥ ರಾಜಾ ಎಸ್. ಗಿರಿಆಚಾರ್ಯರು**

ಮಂತ್ರಾಲಯ

ಅನುವಾದ ಮತ್ತು ವಿವರಣೆ

**ವಿ॥ ಬೆಮ್ಮತ್ತಿ ವೆಂಕಟೇಶಾಚಾರ್ಯ**

ಬೆಂಗಳೂರು



ಪ್ರಕಾಶನ

**ಶ್ರೀ ಗುರುಸಾರ್ವಭೌಮ ಸಂಶೋಧನಾ ಮಂದಿರ**

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀ ರಾಘವೇಂದ್ರಸ್ವಾಮಿಗಳ ಮಠ,
ಮಂತ್ರಾಲಯ – 518 345 (A.P.)

# ಭಾಗ -೧

ತತ್ವಪ್ರಕಾಶಿಕಾ

# ಭಾವದೀಪ

## ಜಿಜ್ಞಾಸಾಧಿಕರಣ, ಜನ್ಮಾದ್ಯಧಿಕರಣ, ಶಾಸ್ತ್ರಯೋನಿತ್ವಾಧಿಕರಣ, ಸಮನ್ವಯಾಧಿಕರಣ

* * * * * *

ಅಧ್ಯಕ್ಷರು :

ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು:

ವಿ॥ ರಾಜಾ ಎಸ್. ಗಿರಿ-ಆಚಾರ್ಯ

ಮಂತ್ರಾಲಯ

ಅನುವಾದ ಮತ್ತು ವಿವರಣೆ:

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು

- - - - - -

ಪ್ರಕಾಶಕನ :

ಶ್ರೀಗುರುಸಾರ್ವಭೌಮಸಂಶೋಧನಾಮಂದಿರ,

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,

ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 (A.P.)

'ಭಾವದೀಪ' ಜಯನಾಮಸಂವತ್ಸರ ಭಾದ್ರಪದ ಶುದ್ಧ ಅನಂತಚತುರ್ದಶಿ (ದಿನಾಂಕ : ೦೮-೦೯-೨೦೧೪) ಶುಭಮುಹೂರ್ತದಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ಪವಿತ್ರಕ್ಷೇತ್ರವಾದ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಮಠಾಧೀಶರಾದ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂರಿಂದ ಗುರುಗಳ ಅಂತರ್ಯಾಮಿಗಳಾದ ಮೂಲರಾಮಚಂದ್ರದೇವರಿಗೆ ಸಮರ್ಪಣೆ ಮಾಡುವ ಮೂಲಕ ಬಿಡುಗಡೆ ಮಾಡಲಾಯಿತು.


ಪ್ರಕಾಶನ : ಶ್ರೀಗುರುಸಾರ್ವಭೌಮಸಂಶೋಧನಾಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 (A.P.)

ಅನುವಾದ : ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಪ್ರಥಮಮುದ್ರಣ : 2014

ಪುಟಗಳು : 738

ಬೆಲೆ : 600 ರೂ

ಪ್ರತಿಗಳು : 1000



©

Publication Copy right :

ಶ್ರೀಗುರುಸಾರ್ವಭೌಮಸಂಶೋಧನಾಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 (A.P.)



ಅಕ್ಷರಜೋಡಣೆ :
ಎಸ್. ನಾಗಲತ

ಮುಖಪುಟ :
ಕೆ. ಗಿರಿ.

ಮುದ್ರಣ :
ಪವನ್‌ಪ್ರಿಂಟರ್ಸ್,
ಚಾಮರಾಜಪೇಟೆ, ಬೆಂಗಳೂರು.

# ಭಾವದೀಪ

ನಾಕು ವೇದಗಳ ಸಾರವೇ ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರ.

ಇದರ ನಿಜವಾದ ಅರ್ಥವನ್ನು ತಿಳಿಸುವ ಏಕೈಕ ಭಾಷ್ಯವೇ ಜಗದ್ಗುರು ಶ್ರೀಮಧ್ವಾಚಾರ್ಯರಿಂದ ಅನುಗ್ರಹಿಸಲ್ಪಟ್ಟ ಬ್ರಹ್ಮಸೂತ್ರಭಾಷ್ಯ.

ಇದರ ಅರ್ಥವನ್ನು ಪರಿಪೂರ್ಣವಾಗಿ ಸರಳವಾಗಿ ವ್ಯಾಖ್ಯಾನ ಮಾಡಿದ ಟೀಕೆಯೇ ಶ್ರೀಮತ್‌ಟೀಕಾಕೃತ್ಪಾದರೆಂದು ಪ್ರಸಿದ್ಧರಾದ ಶ್ರೀ ಜಯತೀರ್ಥರ ತತ್ತ್ವಪ್ರಕಾಶಿಕಾ.

ಇದರ ವಿವರಣೆ - ತುಲನೆ - ವಿಶ್ಲೇಷಣೆ - ತಾತ್ಪರ್ಯಗಳನ್ನೊಳಗೊಂಡ ಟಿಪ್ಪಣಿಯೇ ಮಂತ್ರಾಲಯದಲ್ಲಿ ವಿರಾಜಮಾನರಾದ ಶ್ರೀಮತ್-ರಾಘವೇಂದ್ರಗುರುಸಾರ್ವಭೌಮರ ಭಾವದೀಪ.

'ಕಬ್ಬಿಣದ ಕಡಲೆ' ಎಂದೇ ಪ್ರಸಿದ್ಧಿ ಪಡೆದ ಭಾವದೀಪ ಗ್ರಂಥದ ಸರಳ ಕನ್ನಡಾನುವಾದ ಕೃತಿಯಿದು. ಅನುವಾದ, ವಿಶೇಷವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ ಕಸ್ತೂರಿ ಕನ್ನಡದಲ್ಲಿ ನೀವೀಗ ಭಾವದೀಪವನ್ನು ಅಧ್ಯಯನ ಮಾಡಿ ರಾಯರ ಕೃಪೆಗೆ ಪಾತ್ರರಾಗಬಹುದು

॥ ಶ್ರೀಮನ್ಮಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಮತ್-ಪರಮಹಂಸ-ಪರಿವ್ರಾಜಕಾಚಾರ್ಯ-ಪದ-ವಾಕ್ಯ-ಪ್ರವೀಣ-ಪಾರವಾರ-ಪಾರಂಗತ-
ಸರ್ವತಂತ್ರ-ಸ್ವತಂತ್ರ-ಶ್ರೀಮನ್-ಮೂಲರಘುಪತಿ-ವೇದವ್ಯಾಸ-ದೇವ-ದಿವ್ಯ-ಶ್ರೀಪಾದ
ಪದ್ಮಾರಾಧಕ-ಜಗದ್ಗುರು-ಶ್ರೀಮನ್-ಮಧ್ವಾಚಾರ್ಯ-ಮೂಲಮಹಾಸಂಸ್ಥಾನ-
ಮಂತ್ರಾಲಯ-ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತ-ಸಾಮ್ರಾಜ್ಯ-
ದಿಗ್ವಿಜಯ-ವಿದ್ಯಾಪಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರರಾದ
ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

# ಅನುಗ್ರಹ ಸಂದೇಶ

ಬ್ರಹ್ಮಸೂತ್ರಕ್ಕೆ-ತಂತ್ರದೀಪಿಕಾ, ಅಧಿಕರಣಗಳಿಗೆ-ನ್ಯಾಯಮುಕ್ತಾವಳಿ, ತತ್ವಪ್ರಕಾಶಿಕಕ್ಕೆ- ಭಾವದೀಪ, ತಾತ್ಪರ್ಯಚಂದ್ರಿಕಾಕ್ಕೆ-ಪ್ರಕಾಶ, ಅಣುಭಾಷ್ಯಕ್ಕೆ-ತತ್ವಮಂಜರೀ. ಹೀಗೆ ರಾಯರು ಬ್ರಹ್ಮಸೂತ್ರಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ಹಂತದಲ್ಲಿಯೂ ಟಿಪ್ಪಣಿ ಬರೆದಿದ್ದಾರೆ.

ಇವುಗಳಲ್ಲಿ ಭಾವದೀಪಕೃತಿಯ ವೈಶಿಷ್ಟ್ಯ ಅನುಪಮ. ಇದಕ್ಕೆ ಸರಿಸಮಾನವಾದ ಇನ್ನೊಂದು ಕೃತಿ ದುರ್ಲಭ. ಸಂಸ್ಕೃತ ವಾಙ್ಮಯದ ತತ್ವಶಾಸ್ತ್ರೀಯ ಗ್ರಂಥಪ್ರಪಂಚದಲ್ಲಿ ಈ ಕೃತಿ ಬಲು ವ್ಯಾಪಕ. ಇದರಲ್ಲಿರುವ ವಿದ್ವತ್ತು ಮುಗಿಲು ಮುಟ್ಟಿದೆ. ವಿದ್ವಾಂಸರಿಗೂ ಅರ್ಥವಾಗದ ಜಟಿಲ ವಾಕ್ಯಗಳಿದ್ದರೂ ಬಾಲಕರಿಗೂ ಅರ್ಥವಾಗುವ ಸುಲಭಶೈಲಿಯಲ್ಲಿ ಹೆಣೆದಿರುವ ಅಭೂತಪೂರ್ವ ಕೃತಿಯಿದು. ಸೂತ್ರಗಳ ಹಾರ್ದವನ್ನು ಸ್ಪಷ್ಟಪಡಿಸುವ ಇದರ ವಾಕ್ಯಾರ್ಥ ಕುಶಲತೆಯನ್ನು ಓದಿಯೇ ಅನುಭವಿಸಬೇಕು. ಇದು ಸೂತ್ರ ಪ್ರಸ್ಥಾನದ ಕೃತಿಗಳ ಮಧ್ಯ ಅಧ್ಯಯನಕ್ಕೆ ಹೆಸರಾದಂತಹ ಕೃತಿ. ಪಾಂಡಿತ್ಯ, ಸೂಕ್ಷ್ಮ-ವಿಶ್ಲೇಷಣೆ, ನಿಷಿತ-ವಿಮರ್ಶೆ, ಪ್ರೌಢಪ್ರತಿಪಾದನಾ-ಶೈಲಿ, ಟೀಕಾಕೃತ್ಪಾದರ ಅಂತಃಪ್ರಜ್ಞೆಯನ್ನು ಬೆಳಗಿಸುವ ಅತ್ಯುತ್ತಮ ಕೃತಿಯಿದು.

ಶ್ರೀಮತ್-ಟೀಕಾಕೃತ್ಪಾದರ 'ತತ್ವಪ್ರಕಾಶಿಕಾ' ಎಂಬ ಟೀಕೆಯ ಮರ್ಮವನ್ನು ತಿಳಿಸುವುದರಲ್ಲಿ ವಿಮರ್ಶಾತ್ಮಕ-ಅಧಿಕೃತವಾದ ಟಿಪ್ಪಣಿಯೇ 'ಭಾವದೀಪ'. ಶ್ರೀಮದಾಚಾರ್ಯರ ಭಾಷ್ಯದ ಅಭಿಪ್ರಾಯವನ್ನು ಅಂತಿಮವಾಗಿ ಅರ್ಥ ಮಾಡಿಕೊಳ್ಳಲು ಭಾವದೀಪ-ಟಿಪ್ಪಣಿಯನ್ನು ಅಧ್ಯಯನ ಮಾಡಲೇ ಬೇಕು. ನ್ಯಾಯಸುಧಾಗ್ರಂಥಕ್ಕೆ ಪರಿಮಳ ಟಿಪ್ಪಣಿಯು ಎಷ್ಟು ಆವಶ್ಯಕವೋ, ತತ್ವಪ್ರಕಾಶಿಕಾ ಗ್ರಂಥಕ್ಕೆ ಭಾವದೀಪ-ಗ್ರಂಥವು ಅಷ್ಟೇ ಆವಶ್ಯಕ.

ಗೊಂಡಾರಣ್ಯದಲ್ಲಿ ಸಿಲುಕಿಕೊಂಡು ದಿಙ್ಮೂಢರಂತೆ ಶಾಸ್ತ್ರಗ್ರಂಥಗಳ ಗೊಡವೆಯೇ ಬೇಡ ಎಂಬ ನಿರಾಶಿತ ಭಕ್ತರಿಗೆ ಉತ್ಸಾಹ ಚಿಲುಮೆಯನ್ನು ಉಕ್ಕಿಸುವ ಏಕೈಕ ಧೀರರೆಂದರೆ ಶ್ರೀ ರಾಘವೇಂದ್ರಸ್ವಾಮಿಗಳು

ಮಾತ್ರ. ಇವರ ಟಿಪ್ಪಣಿಗಳೆಲ್ಲವೂ ದಿಙ್ಮಾತ್ರರಿಗೆ ದಾರಿದೀಪಗಳು. ಆದರಲ್ಲಿಯೂ ಭಾವದೀಪ ಗ್ರಂಥ. ಹಗಲಿನ ಸೂರ್ಯನಂತೆ ಕತ್ತಲೆಯನ್ನು ಪರಿಹರಿಸುವ ಉಜ್ವಲ ಪ್ರದೀಪ.

ತತ್ವಪ್ರಕಾಶಿಕಾ ಗ್ರಂಥಕ್ಕೆ ಮೊಟ್ಟಮೊದಲು ಟಿಪ್ಪಣಿಯನ್ನು ಬರೆದವರು ಶ್ರೀವ್ಯಾಸರಾಜರು. ಆದರೆ ಇವರ ತಾತ್ಪರ್ಯ ಚಂದ್ರಿಕಾ ಎಂಬ ಟಿಪ್ಪಣಿಯು ಉಪನ್ಯಾಸದ ಶೈಲಿಯಲ್ಲಿದ್ದು, ಟೀಕೆಯ ಪ್ರತಿಯೊಂದು ವಾಕ್ಯಗಳನ್ನು ಉದ್ಧಾರ ಮಾಡಿ, ವಿವರಣೆ ನೀಡುವುದಿಲ್ಲ. ಅದಕ್ಕೋಸ್ಕರ ಮಂದಮತಿಗಳಿಗೂ ಅರ್ಥವಾಗುವಂತೆ ಯೋಗ್ಯವಾದ ಶೈಲಿಯಲ್ಲಿ ಮೂಲಗ್ರಂಥದ ಪ್ರತಿಯೊಂದು ವಾಕ್ಯಗಳನ್ನು ಎತ್ತಿ ಹಿಡಿದು ವಿವರಣೆ ಮಾಡುವುದಕ್ಕಾಗಿ ಶ್ರೀ ರಾಘವೇಂದ್ರಸ್ವಾಮಿಗಳು ಭಾವದೀಪ ಎಂಬ ಅಪೂರ್ವ ಟಿಪ್ಪಣಿಯನ್ನು ಬರೆದಿರುವರು. ಈ ಕೃತಿಯಲ್ಲಿ ಶ್ರೀ ವ್ಯಾಸರಾಜರ ತಾತ್ಪರ್ಯಚಂದ್ರಿಕಾ ಗ್ರಂಥದ ಮೇಲೆ ಅಪ್ಪಯ್ಯದೀಕ್ಷಿತರೇ ಮೊದಲಾದ ಅನ್ಯಮತೀಯರು ಮಾಡಿದ ಆಕ್ಷೇಪವನ್ನು ಪರಿಹರಿಸಲಾಗಿದೆ. ಅನ್ಯಮತೀಯರ ಆಕ್ಷೇಪವೆಂಬ ಹುಳಗಳನ್ನು ಭಸ್ಮ ಮಾಡುವುದರಿಂದ ಇದಕ್ಕೆ ಭಾವದೀಪ ಎಂಬ ಹೆಸರು ಸಾರ್ಥಕವಾಗಿದೆ. ಟೀಕೆಯ ಅಭಿಪ್ರಾಯವನ್ನು ದೀಪದಂತೆ ಸ್ಪಷ್ಟಪಡಿಸುವುದರಿಂದಲೂ ಭಾವದೀಪ ಎಂಬ ಹೆಸರು ಅನ್ವರ್ಥಕವಾಗಿದೆ.

ಇಂಥ ಅಪೂರ್ವವಾದ ಭಾವದೀಪ ಗ್ರಂಥದ ಅಧ್ಯಯನ ಬಹಳ ವಿರಳವಾಗುತ್ತಿದೆ. ಬುಭುತ್ಸುವರ್ಗದಲ್ಲಿ ಭಾವದೀಪ ಗ್ರಂಥವನ್ನು ಅಧ್ಯಯನ ಮಾಡುವ ಹಂಬಲವುಳ್ಳ ಸಾಧಕರು ಅನೇಕರಿದ್ದಾರೆ. ಆದರೆ ಅಧ್ಯಯನಕ್ಕೆ ಅನುಕೂಲವಾಗುವಂತೆ ಶುದ್ಧವಾದ ಪುಸ್ತಕಗಳು ಬಹಳ ವಿರಳ. ನಮ್ಮ ಮಠದ ಆಸ್ಥಾನ ವಿದ್ವಾಂಸರಾಗಿದ್ದ ವಿದ್ಯಾರತ್ನಂ. ರಾ. ಸ್ವಾ. ಪಂಚಮುಖೀ ಅವರು ಸಂಶೋಧನೆ ಮಾಡಿ, ವಿಶಿಷ್ಟ ವಿಷಯಗಳಿಂದ ಕೂಡಿದ ಭಾಷ್ಯ, ತತ್ವಪ್ರಕಾಶಿಕಾ, ಭಾವದೀಪದ ಪ್ರಕಾಶನವು ಬಹಳ ಉಪಕಾರಕವಾಗಿದೆ. ಆದರೆ ಕನ್ನಡ ಅನುವಾದದ ಪುಸ್ತಕದ ಅವಶ್ಯಕತೆ ಬಹಳವಾಗಿತ್ತು. ಜಿಜ್ಞಾಸುಗಳ ಅಪೇಕ್ಷೆಯಂತೆ ಈ ಭಾವದೀಪ ಕೃತಿಯ ಸಂಸ್ಕೃತ-ಮೂಲ ಹಾಗೂ ಕನ್ನಡಾನುವಾದದ ಪುಸ್ತಕ ಮುದ್ರಣವನ್ನು ನಮ್ಮ ಸಂಸ್ಥಾನದಿಂದ ಮಾಡುತ್ತಿದ್ದೇವೆ. ಇದರ ಸದುಪಯೋಗವನ್ನು ಎಲ್ಲಾ ಜಿಜ್ಞಾಸುಗಳು ಪಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಭಾವದೀಪದಲ್ಲಿ ಒಂದು ವಿಷಯವನ್ನು ಹೇಳಿದ ಮೇಲೆ ಪುನಃ ಅದನ್ನು ಹೇಳುವುದಿಲ್ಲ. ಆದ್ದರಿಂದಲೇ 'ಉಕ್ತಂ ನೋ ವಕ್ತಿ ಭೂಯಃ' ಎಂಬುದಾಗಿ ಗುರುಗುಣಸ್ತವನದಲ್ಲಿ ರಾಯರನ್ನು ಪ್ರಶಂಸಿಸುತ್ತಾರೆ. ಆದರೂ ಕೂಡ ಯಾವುದೇ ಸಂದೇಹದ ಲೇಶವನ್ನು ಪರಿಹಾರ ಮಾಡದೇ ಬಿಡುವುದಿಲ್ಲ. 'ಅಸಂಶಯಃ ಸಂಶಯಚ್ಛಿತ್ ಗುರುರುಕ್ತೋ ಮನೀಷಿಭಿಃ' ತನಗೆ ಸಂಶಯವಿಲ್ಲದೇ ಮತ್ತೊಬ್ಬರ ಸಂಶಯವನ್ನು ಪರಿಹರಿಸುವ ನಿಜವಾದ ಗುರುಗಳು ಎಂಬ ಹೆಗ್ಗಳಿಕೆಗೆ ಭಾವದೀಪಕಾರರು ಪಾತ್ರರಾಗಿದ್ದಾರೆ.

ಈಕ್ಷತ್ಯಧಿಕರಣದ ಕೊನೆಯಲ್ಲಿ ರಾಯರು ನುಡಿದ ಮಾತು ಬಲು ರೋಮಾಂಚನಕಾರಿ -

ದೇವೋತ್ತಮೈರ್ಲಾಲನೀಯೋ ಭಾಷ್ಯಕಾರನಿರೂಪಿತಃ।
ಸೂತ್ರಾರ್ಥೋ ಽನೇಕಮಾನೇತಃ ಸರ್ವೈರ್ಗ್ರಾಹ್ಯೋ ಬುಭೂಷುಭಿಃ ॥

''ಎಲ್ಲಾ ಸಂಶಯಗಳಿಗೂ ಉತ್ತರ ನೀಡುವ ಶ್ರೀಮದಾಚಾರ್ಯರ ಸೂತ್ರಾರ್ಥವೇ ಸರ್ವಪ್ರಮಾಣಸಮ್ಮತವಾಗಿದೆ. ಎಲ್ಲಾ ಮುಮುಕ್ಷುಗಳಿಗೂ ಗ್ರಾಹ್ಯವಾಗಿದೆ. ದೇವೋತ್ತಮರಿಗೂ ಅತ್ಯಂತ ಪ್ರಿಯವಾಗಿದೆ'' ಎಂದು ಘಂಟಾಘೋಷವಾಗಿ ಸಾರಿದ್ದಾರೆ.

ರಾಘವೇಂದ್ರವಿಜಯದಲ್ಲಿ ರಾಯರ ಬಗ್ಗೆ ಹೀಗೆ ಹೇಳಿದ್ದಾರೆ - 'ವೇತ್ತಿ ವರ್ಣನಿಚಯಂ ಸಮಯಾನಾಂ ಸಂಖ್ಯಯಾ ಸಹಧಿಯೈವ ಸಹಾರ್ಥೈಃ' - ಶ್ರೀ ರಾಘವೇಂದ್ರತೀರ್ಥರಿಗೆ ಎಲ್ಲಾ ಶಾಸ್ತ್ರಗಳಲ್ಲಿರುವ ಅಕ್ಷರಗಳೆಷ್ಟು ಅವುಗಳ ಅರ್ಥಗಳೆಷ್ಟು ಎಂಬುದು ತಿಳಿದಿದೆ. ವಾಯುದೇವರ ಆವೇಶವಿರುವ ಪ್ರಯುಕ್ತ ಈ ಮಾತು ಅತಿಶಯೋಕ್ತಿಯಾಗುವುದಿಲ್ಲ. ಇಂತಹ ವಿದ್ವನ್ಮಣಿಗಳಾಗಿದ್ದರೂ ರಾಯರು ಜಿಜ್ಞಾಸಾಧಿಕರಣದ ಕೊನೆಯಲ್ಲಿ ವಿನಯದಿಂದ ಹೀಗೆ ಹೇಳಿದ್ದಾರೆ -

ಟೀಕಾತಾತ್ಪರ್ಯವಿವೃತೌ ವ್ಯಾಸತೀರ್ಥಾದಯಃ ಕ್ಷಮಾಃ।
ವಯಂ ತು ತತ್ಕೃತವ್ಯಾಖ್ಯಾಲೇಶಭಾಜೋ ವಂದಾಮಹೇ ॥

ಟೀಕೆಯ ನಿಗೂಢವಾದ ಅಭಿಪ್ರಾಯಗಳನ್ನು ತೆರೆದು ತೋರಿಸುವಲ್ಲಿ ಶ್ರೀವ್ಯಾಸತೀರ್ಥರೇ ಸಮರ್ಥರು. ಅವರು ಹೇಳಿದ್ದನ್ನೇ ನಾವು ಲೇಶಮಾತ್ರ ತಿಳಿದುಕೊಂಡು ಹೇಳುತ್ತಿದ್ದೇವೆ. ಮಹಾನುಭಾವರಾದ ಜಯತೀರ್ಥರೇ 'ನ ಶಬ್ದಾಬ್ಧೌ ಗಾಢಾಃ' ಎಂದು ಯಾವ ಶಾಸ್ತ್ರದಲ್ಲಿಯೂ ತನಗೆ ಪರಿಣತಿ ಇಲ್ಲ ಎಂದಿದ್ದಾರೆ. ಅಂದ ಮೇಲೆ ಅವರ ಶಿಷ್ಯರಾದ ಶ್ರೀ ರಾಘವೇಂದ್ರತೀರ್ಥರು ಅಂತಹ ಮಾತು ಹೇಳಿದರೆ ಅದು ಭೂಷಣವೇ ಆಗಿದೆ. ರಾಯರ ವಿದ್ವತ್ತಿನ ಪರಾಕಾಷ್ಠೆಯೂ ನಮಗೆ ಅರ್ಥವಾಗುವುದಿಲ್ಲ; ವಿನಯದ ಪರಾಕಾಷ್ಠೆಯೂ ಅರ್ಥವಾಗುವುದಿಲ್ಲ.

ವಿಶೇಷ ವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ ಭಾವದೀಪ ಗ್ರಂಥ ಕನ್ನಡಾನುವಾದದ ಬೃಹತ್ ಯೋಜನೆಯ ಜವಾಬ್ದಾರಿಯನ್ನು ವಿ॥ ಬೆಮ್ಮತ್ತಿ ವೆಂಕಟೇಶಾಚಾರ್ಯರಿಗೆ ನಾವು ವಹಿಸಿರುತ್ತೇವೆ. ಹತ್ತಾರು ವರ್ಷಗಳಿಂದ ಸೂತ್ರಪ್ರಸ್ಥಾನದ ಅಧ್ಯಯನದಲ್ಲಿಯೇ ತೊಡಗಿಕೊಂಡಿರುವ ಇವರು ಸುಧಾಸೌರಭ ಗ್ರಂಥದ ಸಂಪಾದಕರಾಗಿ ಹಾಗೂ ಪರಿಪೂರ್ಣಚಂದ್ರಿಕಾ ಗ್ರಂಥದ ನಿರ್ಮಾತೃಗಳಾಗಿ ಈಗಾಗಲೇ ಜಿಜ್ಞಾಸುಗಳಿಗೆ ಪರಿಚಿತರಾಗಿದ್ದಾರೆ. ವಿಜಯನಾಮ ಸಂವತ್ಸರದ ಫಾಲ್ಗುಣ ಮಾಸದಲ್ಲಿ ನಡೆದ ಶ್ರೀಮದ್-ರಾಘವೇಂದ್ರ-ಗುರುಸಾರ್ವಭೌಮರ ವರ್ಧಂತಿಯ ಸುಮುಹೂರ್ತದಲ್ಲಿ ಈ ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳುವಂತೆ ಅವರಿಗೆ ರಾಯರ ಅನುಗ್ರಹಿಸಿದ್ದಾರೆ. ಸುಮಾರು ಎಂಟು ಬೃಹತ್ ಸಂಪುಟಗಳಿಂದ ಹೊರಬರುವ ಈ ಪುಸ್ತಕಗಳನ್ನು ನಿರ್ವಿಘ್ನವಾಗಿ ಬರೆಯಲು ಇವರಿಗೆ ಅಸ್ಮದ್ಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತ-ಭಾರತೀರಮಣ-ಮುಖ್ಯಪ್ರಾಣಾಂತರ್ಗತ-ಶ್ರೀಮನ್ ಮೂಲರಘುಪತಿ-ವೇದವ್ಯಾಸದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು

# ಅನುಕ್ರಮಣಿಕಾ


| | |
|---|---|
| ಅನುಗ್ರಹ ಸಂದೇಶ | iv-vi |
| ಮುನ್ನುಡಿ | viii-x |
| ಪ್ರಾಸ್ತಾವಿಕ - (ಆಂಗ್ಲಭಾಷೆ) | xi-xiii |
| ಭೂಮಿಕೆ | xiv-xxxix |
| ಸಾರಾಂಶ | xl-lx |
| ಜಿಜ್ಞಾಸಾಧಿಕರಣ | ೧-೪೨೪ |
| ಜನ್ಮಾಧಿಕರಣ | ೪೨೫-೪೯೦ |
| ಶಾಸ್ತ್ರಯೋನಿತ್ವಾಧಿಕರಣ | ೪೯೧-೫೬೮ |
| ಸಮನ್ವಯಾಧಿಕರಣ | ೫೬೯-೬೨೦ |
| ಪರಿಶಿಷ್ಟ | ೬೨೧-೬೪೫ |
| ವಿವರವಾದ ವಿಷಯಾನುಕ್ರಮಣಿಕೆ | ೬೪೬-೬೬೧ |

# ಮುನ್ನುಡಿ

''ಟಿಪ್ಪಣ್ಣಾಚಾರ್ಯಚಕ್ರವರ್ತಿಗಳು' ಎಂದು ಪ್ರಸಿದ್ಧರಾದ ಮಂತ್ರಾಲಯಪ್ರಭುಗಳಾದ ಶ್ರೀರಾಘವೇಂದ್ರಗುರುಸಾರ್ವಭೌಮರು 48ಕ್ಕೂ ಮಿಗಿಲಾದ ಗ್ರಂಥಗಳನ್ನು ರಚಿಸಿ ಸಾರಸ್ವತ ಪ್ರಪಂಚಕ್ಕೆ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿರುತ್ತಾರೆ. ಪುಟ್ಟ-ಪುಟ್ಟ ಕೃತಿಗಳಿಂದ ಆರಂಭಿಸಿ ಬೃಹತ್ತಾದ ಗ್ರಂಥಗಳವರೆಗೆ ಬರೆದಿರುವ ಕೀರ್ತಿ ಅವರದ್ದು.

## ಭಾವದೀಪ

ಶ್ರೀವೇದವ್ಯಾಸರು ಬರೆದ ಬ್ರಹ್ಮಸೂತ್ರಗಳಿಗೆ ಶ್ರೀಮದಾಚಾರ್ಯರು ಭಾಷ್ಯವನ್ನು ರಚಿಸಿದರು. ಅದಕ್ಕೆ ಟೀಕಾಕಾರರಾದ ಶ್ರೀಜಯತೀರ್ಥರು ''ತತ್ವಪ್ರಕಾಶಿಕಾ'' ಟೀಕೆಯನ್ನು ಬರೆದಿರುತ್ತಾರೆ. ಅದಕ್ಕೆ ಶ್ರೀರಾಘವೇಂದ್ರತೀರ್ಥರು ಟಿಪ್ಪಣಿಯನ್ನು ರಚಿಸಿರುತ್ತಾರೆ. ಇದರ ಹೆಸರೇ ''ಭಾವದೀಪ'' ಎಂದು. ಹೆಸರೇ ಹೇಳುವಂತೆ ಭಾಷ್ಯ, ಟೀಕೆಗಳ ಭಾವವನ್ನು ವಿವರಿಸುವ ಗ್ರಂಥವು ಇದಾಗಿದೆ.

ಶ್ರೀವ್ಯಾಸರಾಜರೂ ಕೂಡ ಇದೇ ತತ್ವಪ್ರಕಾಶಿಕೆಗೆ ''ಚಂದ್ರಿಕಾ'' ಎಂಬ ಒಂದು ಅದ್ಭುತವಾದ ವ್ಯಾಖ್ಯಾನವನ್ನು ರಚಿಸಿರುತ್ತಾರೆ. ಅವರು ಪರಮತ ನಿರಾಕರಣೆಯಲ್ಲಿ ತಮ್ಮ ವ್ಯಾಖ್ಯಾನವನ್ನು ಬಳಸಿಕೊಂಡು ತರ್ಕ, ವ್ಯಾಕರಣ, ಮೀಮಾಂಸಾದಿ ವಿಚಾರಗಳ ಧಾರೆಯಿಂದ ಅಲ್ಲಿ ಪ್ರಾಪ್ತವಾದ ಪೂರ್ವಪಕ್ಷಗಳ ಖಂಡನೆಯನ್ನು ಮಾಡುತ್ತಾರೆ. ಹಾಗಾಗಿ ತತ್ವಪ್ರಕಾಶಿಕೆಯ ಎಲ್ಲಾ ವಾಕ್ಯಗಳಿಗೆ ವ್ಯಾಖ್ಯಾನ ಮಾಡುವ ವಿಚಾರಕ್ಕೆ ಹೋಗಿಲ್ಲ. ಆದರೆ ಆ ಒಂದು ಕಾರ್ಯವನ್ನು ತಮ್ಮ ಮುಂದಿನ ಅವತಾರವಾದ ಶ್ರೀರಾಘವೇಂದ್ರತೀರ್ಥರಾದಾಗ ಮಾಡಿರುತ್ತಾರೆ. ''ಭಾವದೀಪ''ದಲ್ಲಿ ತತ್ವಪ್ರಕಾಶಿಕೆಯ ಎಲ್ಲಾ ವಾಕ್ಯಗಳಿಗೂ ವ್ಯಾಖ್ಯಾನವನ್ನು ಮಾಡಿರುತ್ತಾರೆ.

ಶ್ರೀಚಂದ್ರಿಕಾಚಾರ್ಯರು ತತ್ಕಾಲದಲ್ಲಿ ಬಂದ ಎಲ್ಲಾ ಆಕ್ಷೇಪಗಳಿಗೆ ಉತ್ತರವನ್ನು ನೀಡಿ ಸಿದ್ಧಾಂತ ಸ್ಥಾಪನೆಯನ್ನು ಮಾಡಿರುತ್ತಾರೆ. ಆದರೆ ಅವರ ನಂತರ ಬಂದ ಅಪ್ಪಯ್ಯದೀಕ್ಷಿತರೇ ಮೊದಲಾದ ಅರ್ವಾಚೀನರ ಆಕ್ಷೇಪಗಳಿಗೆಲ್ಲಾ ಶ್ರೀರಾಯರು ತಮ್ಮ ಭಾವದೀಪದಲ್ಲಿ ಉತ್ತರಿಸಿರುತ್ತಾರೆ. ಅದಕ್ಕೇನೇ ತಮ್ಮ ಗ್ರಂಥಾರಂಭದಲ್ಲಿ

ನೂತನೈರುದಿತಾ ಯೇ ತು ದೋಷಾಸ್ತೇಷಾಮಲಗ್ನತಾಮ್ ।
ಸಂಪ್ರದರ್ಶಯಿತುಂ ಚಾಽತಃ ಪ್ರಸನ್ನಾಃ ಸಂತು ಸಜ್ಜನಾಃ ॥

ಎಂಬ ಶ್ಲೋಕದಿಂದ ನೂತನರು ಮಾಡಿದ ಆಕ್ಷೇಪಗಳ್ಯಾವೂ ನಮ್ಮ ಟೀಕಾಕೃತ್ಪಾದರ ಗ್ರಂಥಕ್ಕೆ ಕೂಡುವುದಿಲ್ಲ ಎಂಬುದನ್ನು ತೋರಿಸಲು ಈ ನಮ್ಮ ಕೃತಿಯಾಗಿದೆ ಎಂದು ಶ್ರೀಗುರುರಾಜರು ಅಭಿಪ್ರಾಯಪಡುತ್ತಾರೆ.

ಅಷ್ಟೇ ಅಲ್ಲ, ಶ್ರೀವ್ಯಾಸರಾಜರ ಚಂದ್ರಿಕೆಯ ಆರಂಭದ ಎರಡು ಅಧ್ಯಾಯಗಳಿಗೆ ಮಾತ್ರ ಬರೆಯಲ್ಪಟ್ಟಿದೆ. ಮುಂದಿನ ಎರಡು ಅಧ್ಯಾಯಗಳಿಗೆ ಶ್ರೀರಾಯರ ಭಾವದೀಪವೇ ಆ ಕಾರ್ಯವನ್ನು ಮಾಡುತ್ತದೆ. ಭಾವದೀಪದ ಮೂರು, ನಾಲ್ಕನೇ ಅಧ್ಯಾಯಗಳ ಪರ್ಯಾಲೋಚನೆ ಮಾಡಿದವರಿಗೆ ಮೊದಲನೆ ಎರಡು ಅಧ್ಯಾಯಕ್ಕೂ ಮತ್ತು ನಂತರದ ಎರಡು ಅಧ್ಯಾಯಗಳಿಗೆ ಇರುವ ವ್ಯತ್ಯಾಸವು ತಿಳಿಯುತ್ತದೆ. ಅಲ್ಲಿ ವಿಶೇಷ ವ್ಯಾಖ್ಯಾನ ಕ್ರಮವನ್ನು ಮಾಡಿರುತ್ತಾರೆ.

ಈ ತತ್ತ್ವಪ್ರಕಾಶಿಕಾ ಭಾವದೀಪದ ಬಗ್ಗೆ ಬರೆಯುತ್ತಾ ಗುರುಗುಣಸ್ತವನಕಾರರಾದ ಶ್ರೀವಾದೀಂದ್ರತೀರ್ಥರು -

ಪ್ರಾಯಃ ಪ್ರಾಗನ್ಯದೀಯತನುತರವಿವೃತಿಗ್ರಂಥವಾಸೋವಿಹೀನಾ
ಹ್ರೀಣಾ ನಾದರ್ಶಿ ಧೀರೈರಪಿ ಕಿಲ ಯುವತಿರ್ಭಾಷ್ಯಟೀಕಾಭಿಧಾನಾ ।
ಅದ್ಯ ಶ್ರೀರಾಘವೇಂದ್ರವ್ರತಿಕೃತ ವಿವೃತಿ ಫ್ರೌಢಕೌಶೇಯ ರತ್ನಂ
ಸ್ವಾಭಿಪ್ರೇತಂ ವಸಾನಾ ವಿಹರತಿ ಸುಧಿಯಾಮಗ್ರತಃ ಸ್ವೈರಿಣೀವ ॥

ಅಂದರೆ ಬ್ರಹ್ಮಸೂತ್ರಭಾಷ್ಯಕ್ಕೆ ಶ್ರೀಜಯತೀರ್ಥರು ಬರೆದ ತತ್ವಪ್ರಕಾಶಿಕಾ ಎಂಬ ಯುವತಿಯು ಬೇರೆಯವರು ಬರೆದ ವ್ಯಾಖ್ಯಾನಗಳೆಂಬ ವಸ್ತ್ರಗಳಿದ್ದರೂ ಅವುಗಳಿಂದ ತನ್ನ ಶರೀರವು ಪೂರ್ತಿಯಾಗಿ ಮುಚ್ಚುವುದಿಲ್ಲವೆಂದು, ಯಾವ ವಿದ್ವಾಂಸರ ಕಣ್ಣಿಗೆ ಕಾಣದೇ ಅಡಗಿ ಕುಳಿತಿದ್ದಳು. ಯಾವಾಗ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು 'ತತ್ವಪ್ರಕಾಶಿಕಾ' ಎಂಬ ಯುವತಿಗೆ ''ಭಾವದೀಪ'' ಎಂಬ ವ್ಯಾಖ್ಯಾನರೂಪವಾದ ಶ್ರೇಷ್ಠ ಪೀತಾಂಬರವನ್ನು ಉಡಿಸಿದರೋ ಆಗ, ಸ್ವಚ್ಛಂದ ಸ್ತ್ರೀಯಂತೆ ವಿದ್ವಾಂಸರ ಮುಂದೆ ಓಡ್ಯಾಡಿದಳು ಎಂದು ವರ್ಣಿಸಿದ್ದಾರೆ. ಇದರಿಂದ ಶ್ರೀಗುರುರಾಜರ ಈ ವ್ಯಾಖ್ಯಾನವು ತತ್ವಪ್ರಕಾಶಿಕಾಕ್ಕೆ ಒಳ್ಳೇ ಪೀತಾಂಬರ ಉಡಿಸಿದಂತೆ ಇದೆ ಎಂದು ತಿಳಿದುಬರುತ್ತದೆ. ಇಂತಹ ಅಪೂರ್ವವಾದ ಗ್ರಂಥವನ್ನು ಇದಂಪ್ರಥಮತಯಾ ಕನ್ನಡಾನುವಾದವನ್ನು ಮಾಡಿಸಿ ಶ್ರೀಮಠದಿಂದ ಮುದ್ರಿಸುವ

ಸಂಕಲ್ಪವನ್ನು ಮಾಡಿದ ಪರಮಪೂಜ್ಯ ಶ್ರೀಪಾದಂಗಳವರು ಇದರ ಅನುವಾದ ಕಾರ್ಯವನ್ನು ನಮ್ಮ ನೇತೃತ್ವದಲ್ಲಿ ಬೆಂಗಳೂರಿನ ವಿದ್ವಾಂಸರಾದ ಶ್ರೀಮಠದ ಶಿಷ್ಯರಾದ ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರಿಗೆ ವಹಿಸಿದ್ದರು. ಅವರು ಬಹಳ ವಿಶೇಷವಾಗಿ ಪ್ರತಿಯೊಂದು ಭಾಗವನ್ನು ಬಿಡದಲೇ ಅನುವಾದಿಸಿ ಸಮಯಕ್ಕೆ ಮುದ್ರಣವಾಗುವಂತೆ ಒದಗಿಸಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತಿದ್ದೇವೆ. ಶ್ರೀಗುರುರಾಜರ ಈ ಕೃತಿಯನ್ನು ಪ್ರತಿಯೊಬ್ಬರೂ ಪಡೆದು ಅಧ್ಯಯನವನ್ನು ಮಾಡಿ ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಲೆಂದು ನಮ್ಮ ಕುಲಸ್ವಾಮಿಯಲ್ಲಿ ಪ್ರಾರ್ಥಿಸುತ್ತೇವೆ.

ಪಂಡಿತಕೇಸರಿ
ಮಹಾಮಹೋಪಾಧ್ಯಾಯ
**ರಾಜಾ ಎಸ್. ಗಿರಿ ಆಚಾರ್ಯರು**
ಶ್ರೀರಾಘವೇಂದ್ರಸ್ವಾಮಿಗಳ ಮಠ,
ಮಂತ್ರಾಲಯ.

# BhavaDipa

## ENGLISH INTRODUCTION

We express our Gratitude with Danda Pranaamas, to HH Sri Sri Subudhendra Tirtha, Pontiff, Sri Raghavendra Swamy Mutt, for His Anugraha Vachana for this Volume of Vidwan Bemmatti Venkateshacharya, concerned with translation and explanatory Notes on Tatwaprakashika and Bhavadipa.

"BhavaDipa" is the Gloss (Tippani) composed by Sri Raghavendra Tirtha, on "Tatvaprakashika", which itself is a commentary, by Sri Jayatirtha, called Tatvaprakaashika, on BrahmaSutra Bhashya, composed by Sri Madhvacharya, as Bhashya on Sri BrahmaSutras, authored by Sri Vedavyasa with a view to facilitating the correct interpretation of the Vedas. Bhavadipa literally means light on the essence or purport. Thus, Bhavadipa on Tatvaprakaashika means a Gloss throwing light on the essential meanings and special intellectual and philosophical issues dealt with in Tatvaprakaashika, by Sri Jayatirtharu.

Most of the Glosses authored by Sri Raghavendra Tirtha are called by names, such as, Bhavadipa, Prakash and Dipika. The main purpose of Sri Raghavendra Tirtha in writing these glosses is to elaborate on the meanings of the main texts in such a manner that the scholars and even the beginners do not miss the subtle points of the Prameyas. Further, another purpose is to repudiate the negative comments made by the adverseries and thereby to bring to lime light the main messages of the original author. This Bhavadipa onTatvaprakashika, is meant to fulfill all these objectives. Sri Raghavendra Tirtha spells out all these objectives, in the Mangala Slokas of Bhava-Dipa, as follows:

लक्ष्मीनारायणं नत्वा पूर्णबोधान् गुरूनपि ।
तत्वप्रकाशिकाभावदीपं कुर्यां यथामति ।।
यद्यपि तत्वप्रकाशिकाऽऽकूतं चन्द्रिकातः प्रकाशितम् ।
अपि मन्दकृते सर्वविषया च कृतिर्मम ।।
नूतनैरुदिता ये तु दोषास्तेषामलग्नतां ।
सम्प्रदर्शयितुं चाऽतः प्रसन्नाः सन्तु सज्जनाः ।।

Sri Vadindra Tirtha, who is hailed as उभयवंशाब्धिचन्द्रमाः, has written an extremely insightful Stotram, focusing on the contributions of Sri Raghavendra Swamigalu to the ज्ञानभान्डागार through the composition of several treatises of great philosophical importance. While eulogising the greatness of TatvaprakaaSika BhaavaDipa, Sri Vadindra Tirtha writes as follows:

प्रायः प्रागन्यदीयातनुतरविवृतिग्रंथवासोविहीना ।
ह्रीणा नादर्शि धीरैरपि किल युवतिर्भाष्यटीकाभिधाना ।।
अद्य श्रीराघवेन्द्रव्रतिकृतविवृतिप्रौढकौशेयवासः ।
स्वाभिप्रेतं वसाना विहरति सुधियामग्रतः स्वैरिणीव ।।

There is a beautiful allegory that is made here. Tatvaprakaashika is likened to a charming Lady. It is argued that the Bhavadipa of Sri Rayaru is like a rich silk Saree with all embroideries, liked by this Lady. Prior to the availability of this full Saree, the Lady did not have full protection for her body and as such she was shy to appear in front of the scholarly community. But with the Gift of this elaborate Saree (in the form of Bhavadipa), the Tatvaprakaashika Lady could walk freely in front of the scholarly community. The purport is that the earlier commentaries were very brief and as such the scholars could not study Tatvaprakashika to their full satisfaction. The Bhavadipa of Sri Raghavendra Swamigalu, encouraged the scholars and the .beginners to study SutraBhashya and Tatvaprakasika with hitherto greater intensity than before.

This Volume, written by Vidwan Bemmatti Venkateshacharya, with translation and explanatory Notes, is an extremely scholarly treatise. It is based on extensive research and study of the different related Granthas, on Brahmasutras. Vidwan Venkateshacharya, has a very systematic style of presenting the themes of Prameya and Vyakarana. While justifyimg the formation of different words, such as, कृपालुः, श्रद्धालुः, and स्पृहयालुः, Sri Venkateshacharya spares no efforts in explaining the correct use of the different rules of Grammar by quoting approapriate Panini Sutras.

While clearing the various doubts of interpretations, the author adopts the innovative method of presenting the sequence of प्रश्न's and उत्तर's, making it clearer and easier to the readers. The author is competent in using the most modern research methodology in presenting even the complex thoughts in simplified fashion.

My intention is not to present the illustrations of the genius of Sri Raghavendra Swamigalu in giving the various interpretations of the issues presented in Tatvaprakasika. Lot of insight would be available in the scholarly treatise in Kannada, put forward by Vidwan Sri Venkateshacharya in this Volume.

However, I am tempted to raise one minor Issue for Debate. In most of the Texts of the second Mangala Sloka of Tatvaprakaasika, the word याञ्चा is written. Sri Venkateshacharya, also accepts this patha and writes that याच्ना is a पाठान्तर. By the study of बृहद्धातुकुसुमाकर, संस्कृत कोश, अमरकोश, मेघदूतं (कालिदास) (Mallinath Commentary), one feels that the correct words are याच्+ञा= याच्ञा, याचना, याचनम्. The word याच्+ञा=याच्ना will have to be considered as the equivalent of याच्+ञा I. Even though there is lot of discussion on this topic, in वाक्यार्थमञ्जरी, मल्लिनाथटिप्पणी, it is puzzling to note that the word याञ्चा continues to be in vogue, at various levels.

Vidwan Bemmatti Venkateshacharya deserves all accollades for his painstaking efforts in not only translating the Bhashya, Tatwaprakaasika and Bhavadipa, in Kannada but also for his scholarly presentation of the various themes of Siddhanta and related Shastras.

Sri Gurusarvabhouma Samsodhan Mandira is happy to bring out this first Volume in the series of more Volumes on Bhavadipa and other Granthas of Sri Raghavendra Swamigalu.

Vachaspati Dr. Vadirajacharya. R. Panchamukhi
Executive Director,
Sri Gurusarvabhouma Samsodhan Mandira
Mantralayam
1-9-2014

## ಅಧ್ಯಯನಕ್ಕೊಂದು ಭೂಮಿಕೆ

ಯಾವುದೇ ಸಂಶಯ ಕೂಪದಲ್ಲಿ ಬೀಳದಂತೆ ಎಚ್ಚರ ವಹಿಸುವ ಕೈಬೀಸಿ ಕರೆದು ಸುಸ್ಪಷ್ಟವಾಗಿ ತತ್ವನಿಶ್ಚಯವನ್ನು ನೀಡುವ ಕತ್ತಲೆಯಿಂದ ಅಮೃತತ್ವದೆಡೆಗೆ ಅಕ್ಕರೆಯಿಂದ ಕೈಹಿಡಿದು ಕರೆದೊಯ್ಯುವ ಸತ್ಯಧರ್ಮಗಳ ತವರು.....

ಐಹಿಕ ಸಿರಿಯ ಜೊತೆ ಆಮುಷ್ಮಿಕ ಸಿರಿಯನ್ನು ಅವ್ಯಕ್ತವಾಗಿ ನೀಡುವ ಕಲ್ಪವೃಕ್ಷ.....

ಸೂತ್ರ - ಭಾಷ್ಯ- ಟೀಕಾ - ಟಿಪ್ಪಣಿ - ವಿವರಣೆ - ತುಲನೆ - ವಿಶ್ಲೇಷಣೆ - ಕಠಿಣಪದಾರ್ಥ- ತಾತ್ಪರ್ಯ..... ಬಯಸಿದ್ದೆಲ್ಲವನ್ನು ನೀಡುವ ಕಾಮಧೇನು.....

ಇದುವೇ ಮಂತ್ರಾಲಯ ಪ್ರಭುಗಳ ಪ್ರತಿಬಿಂಬದಂತಿರುವ ಮೇರುಕೃತಿ 'ಭಾವದೀಪ'.

ಇಂಥ ಶ್ರೇಷ್ಠವಾದ ಭಾವದೀಪ ಗ್ರಂಥದ ಅಧ್ಯಯನ ಮಾಡುವ ಅವಕಾಶ ನಮಗೆ ಲಭಿಸಿರುವುದು ಮಹಾಸೌಭಾಗ್ಯ. ಭಾವದೀಪ ಅಧ್ಯಯನಕ್ಕಿಂತ ಮೊದಲು ಸೂತ್ರ, ಸೂತ್ರಭಾಷ್ಯ, ತತ್ವಪ್ರಕಾಶಿಕಾ ಇವುಗಳ ಬಗ್ಗೆ ತಿಳಿಯೋಣ. ಭಾವದೀಪದ ವೈಶಿಷ್ಟವನ್ನೂ ಅರಿತು ಅಧ್ಯಯನದಲ್ಲಿ ತಲ್ಲೀನರಾಗೋಣ.

*ವೇದವ್ಯಾಸದೇವರು ಅವತರಿಸಿ ವೇದವಿಭಾಗ ಮಾಡಿದರು.*

ಕೃತಯುಗದಲ್ಲಿ ವೇದವು ಅಖಂಡವಾಗಿ ಒಂದೇ ಆಗಿತ್ತು. ಋಗ್ವೇದ, ಯಜುರ್ವೇದ, ಸಾಮವೇದ ಎಂಬ ವಿಭಾಗ ಇರಲಿಲ್ಲ. ಇದನ್ನು ಮೂಲವೇದ ಎಂಬುದಾಗಿ ಶಾಸ್ತ್ರದಲ್ಲಿ ಕರೆಯಲಾಗಿದೆ. ನಾರಾಯಣನ ಉಪದೇಶದಿಂದ ಬ್ರಹ್ಮಾದಿಗಳಿಂದ ಪ್ರಕಟಗೊಂಡ ಯಾವ ತತ್ವಜ್ಞಾನವಿದೆಯೋ ಅದು ಸ್ಥಿರವಾಗಿತ್ತು. ಸಂದೇಹದಿಂದ ಮತ್ತು ಭ್ರಮೆಯಿಂದ ಕಲುಷಿತವಾಗಿರಲಿಲ್ಲ.

ತ್ರೇತಾಯುಗದಲ್ಲಿ ಧರ್ಮದ ಒಂದು ಭಾಗ ನಶಿಸಿದ್ದರಿಂದ ತತ್ವಜ್ಞಾನವು ಸ್ವಲ್ಪ ಸಂದೇಹ ಹಾಗೂ ಭ್ರಮೆಗಳಿಂದ ಕಲುಷಿತವಾಯಿತು. ಆ ಸಂದರ್ಭದಲ್ಲಿ ಹಯಗ್ರೀವರೂಪಿಯಾದ ಭಗವಂತನು ಋಕ್, ನಿಗದ, ಸಾಮ ಎಂಬುದಾಗಿ ಮೂಲವೇದದಿಂದ ಮೂರು ವಿಭಾಗವನ್ನು ಮಾಡಿದನು. ಇವುಗಳಿಗೆ ಉಪವೇದ ಎಂದು ಶಾಸ್ತ್ರದಲ್ಲಿ ಕರೆಯಲಾಗಿದೆ. ಅಥರ್ವವೇದ ಎಂಬುದು ಪ್ರತ್ಯೇಕವಾದ ವೇದವಾಗಿರಲಿಲ್ಲ. ಮುಂದೆ ವೈವಸ್ವತ ಮನ್ವಂತರವು ಪ್ರಾಪ್ತವಾದಾಗ ಅಥರ್ವ ಎಂಬ ಋಷಿಯು ಚತುರ್ಮಖಬ್ರಹ್ಮದೇವರ ಮಗನಾಗಿ ಜನಿಸಿದನು. ನಿಗಧದಲ್ಲಿ ಸೇರಿರುವ ವೇದಭಾಗವನ್ನು ತನ್ನ ದಿವ್ಯಜ್ಞಾನದಿಂದ ಪ್ರತ್ಯಕ್ಷೀಕರಿಸಿಕೊಂಡನು. ಆದ್ದರಿಂದ ಆ ವೇದಭಾಗಕ್ಕೆ ಅಥರ್ವವೇದ ಎಂದು ಪ್ರಸಿದ್ಧಿ ಬಂದಿತು. ಹೀಗೆ ಒಂದು ವೇದ ಮೂರು ಕವಲಾಗಿ ವೈವಸ್ವತ ಮನ್ವಂತರದಲ್ಲಿ ನಾಲ್ಕಾಯಿತು.

ದ್ವಾಪರಯುಗದ ಕೊನೆಯಲ್ಲಿ ಧರ್ಮದ ಎರಡು ಪಾದಗಳು ನಾಶವಾಗಿ ಇನ್ನೆರೆಡು ಪಾದಗಳು ಮಾತ್ರ ಉಳಿದಿದ್ದವು. ಹೀಗೆ ಕಾಲಪ್ರಭಾವದಿಂದ ತತ್ವಜ್ಞಾನವು ಮತ್ತಷ್ಟು ಹಾಳಾಯಿತು. ಜೊತೆಯಲ್ಲಿ ಗೌತಮರ ಶಾಪವೂ ಕೂಡ ಸೇರಿತ್ತು. ಆದ್ದರಿಂದ ಸಕಲ ಸಜ್ಜನರಲ್ಲಿ ಸಂಪ್ರದಾಯದಿಂದ ಆಗತವಾದ ತತ್ವಜ್ಞಾನವು ವಿಪರೀತಜ್ಞಾನ ಹಾಗೂ ಭ್ರಮೆಗಳಿಂದ ಕಲುಷಿತವಾಯಿತು. ಶ್ರೀಹರಿಯು ಸರ್ವೋತ್ತಮನೋ ? ಅಲ್ಲವೋ ? ಎಂಬ ಸಂಶಯವೂ, ಇದು ತತ್ವಜ್ಞಾನವೇ ಅಲ್ಲವೆಂಬ ವಿಪರೀತಜ್ಞಾನವೂ ಉಂಟಾಯಿತು.

ಈ ಸಂದರ್ಭದಲ್ಲಿ ಬ್ರಹ್ಮರುದ್ರಾದಿ ದೇವತೆಗಳು ಸಜ್ಜನರ ಮೇಲಿನ ಅನುಕಂಪೆಯಿಂದ ಕ್ಷೀರಸಮುದ್ರಶಾಯಿಯಾದ ನಾರಾಯಣನನ್ನು ಮೊರೆಹೊಕ್ಕರು. ದೇವತೆಗಳ ವಿಜ್ಞಾಪನೆಯ ಪ್ರಕಾರವಾಗಿ ಜಗದೊಡೆಯನಾದ ಮಹಾವಿಷ್ಣುವು ಸತ್ಯವತಿಯಲ್ಲಿ ಪರಾಶರರಿಂದ ವೇದವ್ಯಾಸರಾಗಿ ಅವತರಿಸಿದನು. ಅವತಾರಮಾಡಿದ ಕೂಡಲೇ ಗುರುಗಳ ಉಪದೇಶ ಮೊದಲಾದವುಗಳನ್ನೂ ಕೂಡ ಪಡೆಯದೇ ಬದರಿಕಾಶ್ರಮಕ್ಕೆ ತೆರಳಿ ಅಪಪಾಠಗಳಿಂದ ತಿರೋಹಿತವಾದ ವೇದಗಳನ್ನು ತಮ್ಮ ಉಚ್ಚಾರಣೆಯ ಮೂಲಕ ಅಭಿವ್ಯಕ್ತಿಗೊಳಿಸಿದರು. ಅನಂತರ ನಾಲ್ಕು ವಿಭಾಗವನ್ನು ಮೊದಲೇ ಹೊಂದಿರುವ ವೇದಭಾಗಗಳನ್ನು ಸಂಗ್ರಹಿಸಿ ಪುನಃ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬುದಾಗಿ ನಾಲ್ಕು ಭಾಗಗಳಾಗಿ ವಿಂಗಡನೆ ಮಾಡಿದರು. ಇದನ್ನು ಅವಾಂತರವೇದ ಎಂದು ಶಾಸ್ತ್ರದಲ್ಲಿ ಕರೆಯಲಾಗಿದೆ. ಪುನಃ ಋಗ್ವೇದವನ್ನು ಇಪ್ಪತ್ತಾಲ್ಕು ಶಾಖೆಗಳನ್ನಾಗಿ, ಯಜುರ್ವೇದವನ್ನು ನೂರ ಒಂದು ಶಾಖೆಗಳನ್ನಾಗಿ, ಸಾಮವೇದವನ್ನು ಸಾವಿರ ಶಾಖೆಗಳನ್ನಾಗಿ, ಅಥರ್ವವೇದವನ್ನು ಹನ್ನೆರಡು ಶಾಖೆಗಳನ್ನಾಗಿ ವಿಭಾಗ ಮಾಡಿದರು. ಇದನ್ನು ಋಗ್ಭಾಷ್ಯದಲ್ಲಿ ಶ್ರೀಮದಾಚಾರ್ಯರು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ -

ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ಪ್ರಭುಃ ।
ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ ॥

ಮೊದಲೇ ಉಪವೇದ ರೂಪದಲ್ಲಿ ಇದ್ದ ಋಕ್‌ನಿಂದ ಋಗ್ವೇದವನ್ನು, ನಿಗದದಿಂದ ಯಜುರ್ವೇದನ್ನು, ಸಾಮದಿಂದ ಸಾಮವೇದವನ್ನು ಪ್ರಭುಗಳಾದ ವೇದವ್ಯಾಸದೇವರು ಉದ್ಧಾರಮಾಡಿದರು.

ಅಥರ್ವಣಭಾಷ್ಯದಲ್ಲಿಯೂ ಶ್ರೀಮದಾಚಾರ್ಯರು ವೇದವ್ಯಾಸದೇವರು ಮಾಡಿರುವ ವೇದವಿಭಾಗದ ಕ್ರಮವನ್ನು ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ -

ಏಕೋ ವೇದಃ ಕೃತೇ ಹ್ಯಾಸೀತ್ ತ್ರೇತಾಯಾಂ ಸ ತ್ರಿಧಾऽಭವತ್ ।
ಸ ಏವ ಪಂಚಧಾ ಜಾತೋ ದ್ವಾಪರಂ ಪ್ರಾಪ್ಯ ವೈ ಯುಗಮ್ ।
ಉತ್ಸನ್ನಃ ಸ ಕಲಿಂ ಪ್ರಾಪ್ಯ ವೇದಃ ಪ್ರಾಯೇಣ ಸರ್ವಶಃ ॥

ಕೃತಯುಗದಲ್ಲಿ ಮೂಲವೇದ ಮಾತ್ರ ಅಸ್ತಿತ್ವವನ್ನು ಹೊಂದಿತ್ತು. ತ್ರೇತಾಯುಗದಲ್ಲಿ ಋಕ್, ನಿಗದ, ಸಾಮ ಎಂಬ ಮೂರು ಕವಲಾಯಿತು. ದ್ವಾಪರಯುಗದಲ್ಲಿ ಋಗ್ವೇದ, ಯಜರ್ವೇದ, ಸಾಮವೇದ, ಅಥರ್ವವೇದ, ಮಹಾಭಾರತ ಎಂಬುದಾಗಿ ಐದು

ಪ್ರಭೇದಗಳನ್ನು ಪಡೆಯಿತು. ಕಲಿಯುಗದಲ್ಲಿ ಈ ವೇದವು ಸಂಪೂರ್ಣವಾಗಿ ನಾಶದ ಸ್ಥಿತಿಯನ್ನು ತಲುಪಿತು.

## *ಬ್ರಹ್ಮಮೀಮಾಂಸಾಶಾಸ್ತ್ರ*

ವೇದವ್ಯಾಸದೇವರು ವೇದವಿಭಾಗವನ್ನು ಮಾಡಿದ ಮೇಲೆ ಅನುಪಮವಾದ ಬ್ರಹ್ಮಮೀಮಾಂಸಾಶಾಸ್ತ್ರವನ್ನು ರಚನೆ ಮಾಡಿದರು. ಸಮಗ್ರವೇದಗಳ ಅರ್ಥವನ್ನು ಸುಲಭವಾಗಿ ತಿಳಿಯುವಂತೆ ವಿಷ್ಣುಸರ್ವೋತ್ತಮತ್ವದ ವಿಷಯದಲ್ಲಿ ಅಜ್ಞಾನ-ವಿಪರೀತಜ್ಞಾನ ಲವಲೇಶವೂ ಮೂಡದಂತೆ ಅತ್ಯುತ್ತಮವಾದ ಬ್ರಹ್ಮಮೀಮಾಂಸಾಶಾಸ್ತ್ರವನ್ನು ಸಜ್ಜನರ ಮೇಲಿನ ಅನುಕಂಪೆಯಿಂದ ರಚಿಸಿದರು. ಈ ಶಾಸ್ತ್ರದಲ್ಲಿರುವ ಪ್ರತಿಯೊಂದು ಸೂತ್ರಗಳೂ ಮಂತ್ರತುಲ್ಯವಾಗಿವೆ. ಒಂದು ಅಕ್ಷರದ ಪಾರಾಯಣದಿಂದಲೇ ನೂರು ಗಾಯತ್ರೀಮಂತ್ರದ ಫಲ ದೊರೆಯುತ್ತದೆ. ''ಪ್ರತ್ಯಕ್ಷರಂ ತು ಲಭತೇ ಗಾಯತ್ರೀಶತಜಂ ಫಲಮ್'' ಹೀಗೆ ಪುರಾಣಗಳು ಬ್ರಹ್ಮಸೂತ್ರದ ಮಹಿಮೆಯನ್ನು ಕೊಂಡಾಡಿವೆ. ಪ್ರತಿಯೊಂದು ಸೂತ್ರಗಳೂ ಕೂಡ ಹರಿಮಂದಿರದಂತೆ ಕಂಗೊಳಿಸುತ್ತಿವೆ. ಒಂದೊಂದು ಅಧಿಕರಣದಲ್ಲಿಯೂ ಪ್ರತಿಯೊಂದು ಸೂತ್ರಗಳಲ್ಲಿಯೂ, ಪ್ರತಿಯೊಂದು ಪದಗಳಲ್ಲಿಯೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಭಗವಂತನ ನಾಲ್ಕು ರೂಪಗಳು ದಿವ್ಯಸನ್ನಿಧಾನವನ್ನು ಪಡೆದಿದೆ. ಅಥವಾ ನಾರಾಯಣನನ್ನು ಸೇರಿಸಿಕೊಂಡು ಐದು ರೂಪಗಳು ನೆಲೆಸಿವೆ. ಈ ಐದು ರೂಪಗಳೇ ಬ್ರಹ್ಮಸೂತ್ರಗಳಿಂದ ಪ್ರತಿಪಾದ್ಯವೂ ಆಗಿವೆ.

ವಾಸುದೇವಾದಿರೂಪೇಣ ಚತುರ್ಮೂರ್ತಿಶ್ಚ ಸರ್ವಶಃ।
ಅಥವಾ ಪಂಚಮೂರ್ತಿಃ ಸ ಪ್ರೋಕ್ತೋಽಧಿಕರಣಂ ಪ್ರತಿ।
ಪ್ರತಿಸೂತ್ರಂ ಪ್ರತಿಪದಂ ಪ್ರತ್ಯಕ್ಷರಮಥಾಪಿ ವಾ ॥ – (ಅನುವ್ಯಾಖ್ಯಾನ)

## *ಸೂತ್ರಗಳಲ್ಲಿ ಓಂಕಾರ ಉಚ್ಚಾರಣೆ*

ಪ್ರತಿಯೊಂದು ಸೂತ್ರಗಳು ಮಂತ್ರತುಲ್ಯವಾಗಿರುವುದರಿಂದಲೇ ಆದ್ಯಂತಗಳಲ್ಲಿ ಓಂಕಾರವನ್ನು ಉಚ್ಚರಿಸಬೇಕೆಂದು ಶ್ರೀಮದಾಚಾರ್ಯರು ಆಜ್ಞೆ ನೀಡಿದ್ದಾರೆ. ಪ್ರಾರಂಭದಲ್ಲಿ ಓಂಕಾರವನ್ನು ಉಚ್ಚಾರ ಮಾಡದಿದ್ದರೆ ಸಂಪಾದಿಸಿದ ಪುಣ್ಯವು ಹ್ರಾಸವಾಗುತ್ತದೆ. ಕೊನೆಯಲ್ಲಿ ಓಂಕಾರವನ್ನು ಉಚ್ಚಾರ ಮಾಡದಿದ್ದರೆ ಪಾಪಭಾಗಿಯಾಗುತ್ತಾನೆ. ಆದ್ದರಿಂದ ಆದ್ಯಂತಗಳಲ್ಲಿಯೂ ಓಂಕಾರವನ್ನು ಉಚ್ಚಾರ ಮಾಡಲೇಬೇಕು. ಇದನ್ನು ತಿಳಿಸಿದವರು

ಶ್ರೀಮದಾಚಾರ್ಯರು ಮಾತ್ರ. ಬೇರೆ ಭಾಷ್ಯಕಾರರು ಬ್ರಹ್ಮಸೂತ್ರಗಳನ್ನು ಪಾಣಿನಿ ಸೂತ್ರದಂತೆ, ಓಂಕಾರದ ಉಚ್ಚಾರಣೆಯು ಅನಾವಶ್ಯಕವೆಂದು ಹೇಳುತ್ತಾರೆ.

ಈ ಪುಸ್ತಕದಲ್ಲಿ ಸೂತ್ರಗಳ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಓಂಕಾರವನ್ನು ಮುದ್ರಣೆ ಮಾಡಿರುವುದಿಲ್ಲ. ಏಕೆಂದರೆ ಪ್ರಾಚೀನ ಹಸ್ತಪ್ರತಿಗಳಲ್ಲಿ ಓಂಕಾರ ಸಹಿತವಾಗಿ ಸೂತ್ರವನ್ನು ಉಲ್ಲೇಖಿಸಿಲ್ಲ. ಕೇವಲ ಜಪ-ಪಾರಾಯಣಾದಿಗಳಲ್ಲಷ್ಟೇ ಓಂಕಾರದ ಉಚ್ಚಾರಣೆಯು ವಿಹಿತವಾಗಿದೆ ಹೊರತು ಸೂತ್ರದ ಪದಗಳ ಜೊತೆ ಅದು ಅರ್ಥವನ್ನು ಪಡೆದಿಲ್ಲ. ಆದ್ದರಿಂದ ಬ್ರಹ್ಮಸೂತ್ರಗಳನ್ನು ಪಠಣೆ ಮಾಡುವಾಗ ಓಂಕಾರ ಸಹಿತವಾಗಿಯೇ ಪಠಣೆ ಮಾಡಬೇಕು. ಆದರೆ ಅದನ್ನು ಬರೆಯುವ ಕ್ರಮವಿಲ್ಲ.

### *ಸೂತ್ರಸಂಖ್ಯೆಯಲ್ಲಿ ಬ್ರಹ್ಮಸೂತ್ರಗಳ ಸಂಖ್ಯೆ ಎಷ್ಟು?*

೧. ಭಾಸ್ಕರಾಚಾರ್ಯರು - ೫೪೪

೨. ವಿಜ್ಞಾನಭಿಕ್ಷುಗಳು - ೫೫೬

೩. ನಿಂಬಾರ್ಕಾಚಾರ್ಯರು - ೫೪೯

೪. ವಲ್ಲಭಾಚಾರ್ಯರು - ೫೫೫

೫. ಶ್ರೀಕಂಠರು - ೫೪೫

೬. ಶಂಕರಾಚಾರ್ಯರು - ೫೫೫

೭. ರಾಮಾನುಜಾಚಾರ್ಯರು - ೫೪೫

೮. ಶ್ರೀಮದಾಚಾರ್ಯರು - ೫೬೪ - ೫೬೨ ಸೂತ್ರಗಳು

ಬ್ರಹ್ಮಸೂತ್ರಗಳು ೫೬೪ ಎಂಬುದು ಸರ್ವಜನಪ್ರಸಿದ್ಧವಾದ ವಿಚಾರ. ಆದರೆ ತ್ರಿವಿಕ್ರಮಪಂಡಿತರ ತತ್ವಪ್ರದೀಪವನ್ನು ನೋಡಿದಾಗ ೫೬೨ ಸೂತ್ರಗಳೆಂದು ತಿಳಿಯುತ್ತದೆ.

'ಯುಕ್ತೇಶ್ಚ' (೨-೩-೧೯) 'ಸ್ಮರಣಾಚ್ಚ' (೩-೧-೨೩) ಇವೆರಡು ಸೂತ್ರಗಳನ್ನು ತ್ರಿವಿಕ್ರಮಪಂಡಿತರು ಪರಿಗಣನೆ ಮಾಡಿರುವುದಿಲ್ಲ; ಭಾಷ್ಯದ ವಾಕ್ಯವನ್ನಾಗಿ ಪರಿಗಣಿಸಿದ್ದಾರೆ. ಮತ್ತು ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯಂದಿರಾದ ಶ್ರೀ ಹೃಷೀಕೇಶತೀರ್ಥರು ಬರೆದಿರುವ ಸರ್ವಮೂಲಗ್ರಂಥದ ಹಸ್ತಪ್ರತಿಯಲ್ಲಿ ಈ ಎರಡು ಸೂತ್ರಗಳನ್ನು ಉಲ್ಲೇಖ ಮಾಡಿರುವುದಿಲ್ಲ. ಆದ್ದರಿಂದ ಹೃಷೀಕೇಶತೀರ್ಥರ ಪಾಠದಂತೆ ಮತ್ತು ತತ್ವಪ್ರದೀಪಕಾರರ ಪಾಠದಂತೆ ೫೬೨ ಸೂತ್ರಗಳು. ಉಳಿದ ಟಿಪ್ಪಣಿಕಾರರ ದೃಷ್ಟಿಯಲ್ಲಿ ೫೬೪ ಸೂತ್ರಗಳು.

## ಬ್ರಹ್ಮಸೂತ್ರದ ವಿಭಾಗ

ಒಂದು ನಿರ್ದಿಷ್ಟವಾದ ವಿಷಯವನ್ನು ನಿರ್ಣಯ ಮಾಡುವ ಘಟ್ಟಕ್ಕೆ ಅಧಿಕರಣ ಎಂದು ಕರೆಯುತ್ತಾರೆ. ಕೆಲವೆಡೆ ಒಂದೇ ಸೂತ್ರದಲ್ಲಿ ವಿಷಯವನ್ನು ನಿರ್ಧಾರ ಮಾಡುತ್ತಾರೆ. ಕೆಲವೆಡೆ ಅನೇಕ ಸೂತ್ರಗಳಿಂದ ಒಂದು ವಿಷಯಗಳನ್ನು ನಿರ್ಧಾರ ಮಾಡುತ್ತಾರೆ. ಆದ್ದರಿಂದ ಒಂದು ಅಧಿಕರಣದಲ್ಲಿ ಒಂದು ಸೂತ್ರವೂ ಇರಬಹುದು ಹೆಚ್ಚು ಸೂತ್ರಗಳೂ ಕೂಡ ಇರಬಹುದು.

ಸೂತ್ರಗಳನ್ನು ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ. ಪ್ರತಿಯೊಂದು ಅಧ್ಯಾಯದಲ್ಲಿ ನಾಲ್ಕು ಪಾದಗಳಿವೆ. ಅಧ್ಯಾಯಗಳು ಯಾವುದೆಂದರೆ ೧. ಸಮನ್ವಯಾಧ್ಯಾಯ, ೨. ಅವಿರೋಧಾಧ್ಯಾಯ, ೩. ಸಾಧನಾಧ್ಯಾಯ, ೪. ಫಲಾಧ್ಯಾಯ.

ಅಧಿಕರಣವೆಂದರೆ -

ವಿಷಯೋ ವಿಶಯಶ್ಚೈವ ಪೂರ್ವಪಕ್ಷಸ್ತಥೋತ್ತರಮ್ ।
ಪ್ರಯೋಜನಂ ಚ ಪಂಚೈತಾನ್ ತಂತ್ರೇऽಧಿಕರಣಂ ವಿದುಃ ॥

೧. ವಿಷಯ, ೨. ಸಂಶಯ, ೩. ಪೂರ್ವಪಕ್ಷ, ೪. ಸಿದ್ಧಾಂತ, ೫. ಪ್ರಯೋಜನ. ಈ ಐದೂ ಉಳ್ಳದ್ದನ್ನು ಅಧಿಕರಣವೆನ್ನುವರು.

### ಸಮನ್ವಯಧ್ಯಾಯ

| | ಅಧಿಕರಣಗಳು | ಸೂತ್ರಗಳು |
|---|---|---|
| ಅನ್ಯತ್ರಪ್ರಸಿದ್ಧ ನಾಮಪಾದ | ೧೨ | ೩೧ |
| ಅನ್ಯತ್ರಪ್ರಸಿದ್ಧಲಿಂಗಪಾದ | ೭ | ೩೨ |
| ಉಭಯತ್ರಪ್ರಸಿದ್ಧ ನಾಮಲಿಂಗಾತ್ಮಕಪಾದ | ೧೪ | ೪೩ |
| ಅನ್ಯತ್ಯೈವಪ್ರಸಿದ್ಧನಾಮಲಿಂಗಪಾದ | ೭ | ೨೯ |
| ಒಟ್ಟು | ೪೦ | ೧೩೫ |

### ಅವಿರೋಧಾಧ್ಯಾಯ

| | | |
|---|---|---|
| ಯುಕ್ತಿಪಾದ | ೧೧ | ೩೮ |
| ಸಮಯಪಾದ | ೧೨ | ೪೫ |
| ಪರಸ್ಪರಶ್ರುತ್ಯವಿರೋಧಪಾದ | ೧೯ | ೫೩ |
| ನ್ಯಾಯೋಪೇತಶ್ರುತ್ಯವಿರೋಧಪಾದ | ೧೩ | ೨೩ |
| ಒಟ್ಟು | ೫೫ | ೧೫೯ |

ಸಾಧನಾಧ್ಯಾಯ

| | | |
|---|---|---|
| ವೈರಾಗ್ಯಪಾದ | ೨೦ | ೨೯ |
| ಭಕ್ತಿಪಾದ | ೨೦ | ೪೨ |
| ಉಪಾಸನಾಪಾದ | ೪೨ | ೬೮ |
| ಜ್ಞಾನಪಾದ | ೧೧ | ೫೧ |
| ಒಟ್ಟು | ೯೩ | ೧೯೦ |

ಫಲಾಧ್ಯಾಯ

| | | |
|---|---|---|
| ಕರ್ಮಕ್ಷಯಪಾದ | ೮ | ೧೯ |
| ಉತ್ಕ್ರಾಂತಿಪಾದ | ೧೦ | ೨೨ |
| ಮಾರ್ಗಪಾದ | ೬ | ೧೬ |
| ಭೋಗಪಾದ | ೧೧ | ೨೩ |
| ಒಟ್ಟು | ೩೫ | ೮೦ |

### *ಅಧಿಕರಣಸಂಗತಿ*

ಪ್ರತಿಯೊಂದು ಅಧಿಕರಣಗಳಿಗೂ ಪರಸ್ಪರ ಸಂಬಂಧವಿರುತ್ತದೆ. ಆ ಸಂಬಂಧವನ್ನೇ ಸಂಗತಿಯೆಂದು ಕರೆಯುತ್ತಾರೆ. ಒಂದು ಅಧಿಕರಣಕ್ಕೆ ಸಮಗ್ರಶಾಸ್ತ್ರದಿಂದ ಸಂಬಂಧವಿರಬೇಕು. ಅಧ್ಯಾಯದ ಜೊತೆ ಸಂಬಂಧವಿರಬೇಕು, ಆ ಪಾದದ ಜೊತೆ ಸಂಬಂಧವಿರಬೇಕು, ಮತ್ತು ಹಿಂದಿನ ಮುಂದಿನ ಅಧಿಕರಣಗಳ ಜೊತೆಗೂ ಸಂಬಂಧವಿರಬೇಕು. ಮತ್ತು ಹಿಂದಿನ ಅಧಿಕರಣದಲ್ಲಿ ಯಾವ ವೇದವಾಕ್ಯದ ಅರ್ಥವನ್ನು ನಿರ್ಣಯ ಮಾಡಿರುತ್ತಾರೋ, ಆ ವೇದವಾಕ್ಯಕ್ಕೆ ಮುಂದಿನ ಅಧಿಕರಣದಲ್ಲಿ ವಿಚಾರ ಮಾಡುವ ವೇದವಾಕ್ಯದ ಜೊತೆ ಸಂಬಂಧವಿರಬೇಕು. ಇವುಗಳನ್ನು ಕ್ರಮವಾಗಿ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿ, ಅಧಿಕರಣಸಂಗತಿ ಎಂದು ಕರೆಯುತ್ತಾರೆ.

ಸಮಗ್ರವಾದ ಶಾಸ್ತ್ರ, ಅಧ್ಯಾಯ ಹಾಗೂ ಪಾದಗಳಿಗಿರುವ ಸಂಗತಿಗೆ ಆಂತರ್ಭಾವಸಂಗತಿ ಎಂದು ಒಂದೇ ಹೆಸರಿನಿಂದ ಕರೆಯುತ್ತಾರೆ. ಹಿಂದಿನ-ಮುಂದಿನ ಅಧಿಕರಣಗಳ ಜೊತೆಗೆ ಹಾಗೂ ವಿಷಯವಾಕ್ಯಗಳ ಜೊತೆ ಇರುವ ಸಂಗತಿಯನ್ನು 'ಆನಂತರ್ಯಸಂಗತಿ' ಎಂದು ಕರೆಯುತ್ತಾರೆ. ಈ ಆನಂತರ್ಯಸಂಗತಿಯು ಆಕ್ಷೇಪಿಕೆ, ಆತಿದೇಶಕೀ, ಔಪೋದ್ಘಾತಕಿ, ಆಪವಾದಿಕೀ ಇತ್ಯಾದಿಯಾಗಿ ಅನೇಕ ಬಗೆಯಲ್ಲಿರುತ್ತದೆ.

೧. ಜಿಜ್ಞಾಸಾಧಿಕರಣ, ೨. ಜನ್ಮಾದ್ಯಧಿಕರಣ, ೩. ಶಾಸ್ತ್ರಯೋನಿತ್ವಾಧಿಕರಣ, ೪. ಸಮನ್ವಯಾಧಿಕರಣ, ೫. ಈಕ್ಷತ್ಯಧಿಕರಣ ಹೀಗೆ ಪ್ರಾರಂಭದ ಐದು ಅಧಿಕರಣಗಳು ಸಮಗ್ರಶಾಸ್ತ್ರಕ್ಕೆ ಪೀಠಿಕಾರೂಪದಲ್ಲಿ ರಚಿತವಾಗಿವೆ. ಈ ಐದು ಅಧಿಕರಣಗಳಲ್ಲಿ ಯಾವುದೇ ಶಬ್ದದ ಸಮನ್ವಯವನ್ನು ನಿರೂಪಣೆ ಮಾಡುತ್ತಿಲ್ಲ. ಆದ್ದರಿಂದ ಸಮನ್ವಯಾಧ್ಯಾಯದ ಜೊತೆ ಹಾಗೂ ಪಾದದ ಜೊತೆ ಸಂಗತಿಯನ್ನು ಇವುಗಳು ಹೊಂದಿರುವುದಿಲ್ಲ. ಆದ್ದರಿಂದ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳನ್ನು ಆನಂದಮಯಾಧಿಕರಣದಿಂದ ಮುಂದಿನ ಅಧಿಕರಣಗಳಲ್ಲಿ ಚಿಂತನೆ ಮಾಡಬೇಕು. ಪ್ರಾರಂಭದ ಜಿಜ್ಞಾಸಾಧಿಕರಣದಲ್ಲಿ ಅಧಿಕರಣ-ಸಂಗತಿಯೂ ಕೂಡ ಇರುವುದಿಲ್ಲವೆಂಬುದು ಗಮನಾರ್ಹ.

### ೨೧ ಕುಭಾಷ್ಯಗಳು

ಏಕವಿಂಶತಿಕುಭಾಷ್ಯದೂಷಕಂ ।
ಬ್ರಹ್ಮಸೂತ್ರಗಣಭಾಷ್ಯಮದ್ಭುತಮ್ ॥
ಅಪ್ಯದೂಷ್ಯಮತನೋದನಂತಧೀ -।
ರ್ಭೂತಭಾವಿಭವದಾತ್ಮಭಿಃ ಕ್ವಚಿತ್ ॥

ಶ್ರೀಪೂರ್ಣಪ್ರಜ್ಞರು ಇಂತಹ ಅದ್ಭುತವಾದ ಬ್ರಹ್ಮಸೂತ್ರಭಾಷ್ಯವನ್ನು ಮಾಡಿದರು. ಅದರಲ್ಲಿ ಅಪರು ಭಾರತೀವಿಜಯ, ಸಂವಿದಾನಂದ, ಬ್ರಹ್ಮಘೋಷ, ಶತಾನಂದ, ಉದ್ವರ್ತ, ವಿಜಯ, ರುದ್ರಭಟ್ಟ, ವಾಮನ, ಯಾದವಪ್ರಕಾಶ, ರಾಮಾನುಜ, ಭರ್ತೃಪ್ರಪಂಚ, ದ್ರವಿಡ, ಬ್ರಹ್ಮದತ್ತ, ಭಾಸ್ಕರ, ಪಿಶಾಚ, ವೃತ್ತಿಕಾರಕ, ವಿಜಯಭಟ್ಟ, ವಿಷ್ಣುಕ್ರಾಂತ, ವಾದೀಂದ್ರ, ಮಾಧವದಾಸಕ, ಸಂಕರ ಈ ಇಪ್ಪತ್ತೊಂದು ಜನರು ಮಾಡಿರುವ ಬ್ರಹ್ಮಸೂತ್ರಭಾಷ್ಯಗಳನ್ನು ಖಂಡಿಸಿದ್ದಾರೆ. ಹಿಂದಿನ ಮುಂದಿನ ಮತ್ತು ಇಂದಿನ ಯಾವ ವಿದ್ವಾಂಸರೂ ಅದರ ಒಂದು ವಾಕ್ಯವನ್ನೂ ದೂಷಿಸಲಾರರು. ಅವರ ರೂಪವೂ ಹೀಗೆಯೇ ಇರುವುದು.

ಇಂಥ ಶ್ರೇಷ್ಠವಾದ ಬ್ರಹ್ಮಸೂತ್ರಗಳಿಗೆ ಅನೇಕರು ಸ್ವಕಪೋಲ ಕಲ್ಪಿತವಾದ ಅರ್ಥಗಳನ್ನು ಬರೆಯುವ ಮೂಲಕ ಕುಭಾಷ್ಯಗಳನ್ನು ರಚನೆ ಮಾಡಿದ್ದಾರೆ. ಅವುಗಳು ಹೀಗಿವೆ - ೧) ಭಾರತೀವಿಜಯ ೨) ಸಚ್ಚಿದಾನಂದ ೩) ಬ್ರಹ್ಮಘೋಷ ೪) ಶತಾನಂದ ೫) ಉದ್‌ವರ್ತ ೬) ವಿಜಯ ೭) ರುದ್ರಭಟ್ಟ ೮) ವಾಮನ ೯) ಯಾದವಪ್ರಕಾಶ ೧೦) ರಾಮಾನುಜ ೧೧) ಭರ್ತೃಪ್ರಪಂಚ ೧೨) ದ್ರವಿಡ ೧೩) ಬ್ರಹ್ಮದತ್ತ ೧೪) ಭಾಸ್ಕರ

೧೫) ವಿಶಾಖ ೧೬) ವೃತ್ತಿಕಾರಕ ೧೭) ವಿಜಯಭಟ್ಟ ೧೮) ವಿಷ್ಣುಕ್ರಾಂತ ೧೯) ವಾದೀಂದ್ರ ೨೦) ಮಾಧವದಾಸ ೨೧) ಸಂಕರ.

ಶ್ರೀಮದಾಚಾರ್ಯರ ಭಾಷ್ಯ ಅಂತಿಮನಿರ್ಣಾಯಕ

'ಸತ್‌ಸೂತ್ರ ಭಾವೇ ಪ್ರವಿಚಾರಿತೇ ಪೃಥಗ್
ಭಾಷ್ಯಾಭಿಸಂಧೌ ಚ ವಿಶುದ್ಧಬುದ್ಧಿಭಃ ।
ನಿಗೃಹ್ಯ ಗೂಢಾಗ್ರಹಮುಗ್ರಮೇತಯೋ - ।
ರ್ಮಾನ್ಯೋಽನ್ಯಯೋಽನ್ಯೋನ್ಯಮಹೋ ನ ದೃಶ್ಯತೇ ।'

ರಾಗದ್ವೇಷವಿಲ್ಲದ ನಿರ್ಮಲವಾದ ಮನಸ್ಸುಳ್ಳ ವಿದ್ವಾಂಸರು ಪಾಪಸಾಧಕವಾದ ಹಠವನ್ನು ಬಿಟ್ಟು, ಬ್ರಹ್ಮಸೂತ್ರಗಳನ್ನು ಹಾಗೂ ಶಂಕರಾಚಾರ್ಯರ ಭಾಷ್ಯವನ್ನು ಪರಸ್ಪರ ಹೊಂದಿಕೆಯಾಗುವಂತೆ ವಿಮರ್ಶೆ ಮಾಡಲಿ. ಆವಾಗ ಒಂದಕ್ಕೊಂದು ಸಂಬಂಧವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೂ ಕೂಡ ಇಂಥ ಭಾಷ್ಯವನ್ನು ಜನರು ಮನ್ನಣೆಮಾಡುತ್ತಿರುವುದು ಬಹಳ ಆಶ್ಚರ್ಯ !

## *ಶ್ರೀಮದಾಚಾರ್ಯರ ಭಾಷ್ಯದ ಮಹಿಮೆ*

ಪರಮಶ್ರೇಷ್ಠವಾದ ಬ್ರಹ್ಮಸೂತ್ರಗಳಿಗೆ ಶ್ರೀಮದಾಚಾರ್ಯರು ಎಲ್ಲಿಲ್ಲದ ಸ್ಥಾನಮಾನವನ್ನು ನೀಡಿರುತ್ತಾರೆ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ ಹೀಗೆ ಘೋಷಣೆ ಮಾಡಿರುವರು - 'ಅಥೋ ನೈತಾದೃಶಂ ಕಿಂಚಿತ್ ಪ್ರಮಾಣತಮವಿಶ್ಯತೇ । ಬ್ರಹ್ಮಸೂತ್ರಗಳಿಗಿಂತ ಅತ್ಯುತ್ತಮ ಪ್ರಮಾಣ ಮತ್ತೊಂದಿಲ್ಲ ಎಂದು.

ಹೀಗೆ ಘೋಷಣೆ ಮಾಡಿ ಸೂತ್ರಕಾರರಾದ ಬಾದರಾಯಣರಿಗೆ ಸಮ್ಮತವಾದ ಅರ್ಥವನ್ನು ತಮ್ಮ ಭಾಷ್ಯದ ಮೂಲಕ ತಿಳಿಸಿಕೊಟ್ಟಿದ್ದಾರೆ. ಸೂತ್ರಕಾರರಾದ ವೇದವ್ಯಾಸದೇವರಿಗೆ ಸಮ್ಮತವಲ್ಲದ ಭಾಷ್ಯಗಳು ಜಗತ್ತಿನಲ್ಲೆಲ್ಲೆಡೆ ಪ್ರಸಿದ್ಧವಾಗಿರುವಾಗ ಶ್ರೀಮದಾಚಾರ್ಯರ ಬಳಿ ಸಾಕ್ಷಾತ್ ವೇದವ್ಯಾಸದೇವರು ತಮ್ಮ ಅಪೇಕ್ಷೆಯನ್ನು ಹೀಗೆ ಹೇಳಿದರು - 'ಕುರುಸೂತ್ರಭಾಷ್ಯಂ ಅವಿಲಂಬಿತಂ ವ್ರಜೇಃ' 'ತಡಮಾಡದೇ ಸೂತ್ರಭಾಷ್ಯವನ್ನು ರಚನೆ ಮಾಡು' ಎಂದು. ಶ್ರೀಮದಾಚಾರ್ಯರು ಗೀತಾಭಾಷ್ಯವನ್ನು ಸಮರ್ಪಣೆ ಮಾಡಿದಾಗ ಆದರಿಂದ ಬಹಳಷ್ಟು ಸಂತೋಷಪಟ್ಟ ವೇದವ್ಯಾಸದೇವರು ಸೂತ್ರಭಾಷ್ಯವನ್ನು ರಚನೆ ಮಾಡುವಂತೆ ಪ್ರೇರಣೆ ನೀಡಿದರು. ಇದರಿಂದ ಶ್ರೀಮದಾಚಾರ್ಯರ ಭಾಷ್ಯವು ಉಳಿದ ಭಾಷ್ಯಗಳಿಗಿಂತ ಭಿನ್ನವಾಗಿದೆ. ಮತ್ತು ವೇದವ್ಯಾಸದೇವರಿಗೆ ಸಮ್ಮತವಾದ ಅರ್ಥದಿಂದ ಕೂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಸೂತ್ರಪ್ರಸ್ಥಾನಕ್ಕೆ ಹೀಗೆ ಅನೇಕ ಮಂದಿ ಭಾಷ್ಯವನ್ನು ಬರೆದಿದ್ದರೂ, ಶ್ರೀಮದಾಚಾರ್ಯರ ಭಾಷ್ಯವು ಸರ್ವೋತ್ಕೃಷ್ಟವಾಗಿದೆ. ಟೀಕಾ-ಟಿಪ್ಪಣಿಗಳ ಸಹಾಯವಿಲ್ಲದೇ ಪಂಡಿತವರೇಣ್ಯರಿಂದಲೂ ಅರ್ಥಮಾಡಿಕೊಳ್ಳಲು ಅಸಾಧ್ಯವಾಗಿದೆ. ಆದರೂ ಕೂಡ ಬಾಲಕರಿಗೂ ಅರ್ಥವಾಗುವಂಥ ಸುಂದರ ಶೈಲಿಯನ್ನು ಪಡೆದಿದೆ. ಇದನ್ನೇ ನಾರಾಯಣಾಪಂಡಿತಾಚಾರ್ಯರು ಹೀಗೆ ವರ್ಣಿಸಿದ್ದಾರೆ -

ಬಾಲಸಂಭ್ರಮಪಿ ಬೋಧಯದ್ಭ್ರಶಂ ।
ದುರ್ನಿರೂಪವಚನಂ ಚ ಪಂಡಿತೈಃ ॥
ಅಪ್ರಮೇಯಹೃದಯಂ ಪ್ರಸಾದವತ್ ।
ಸೌಮ್ಯಕಾಂತಿ ಚ ವಿಪಕ್ಷಭೀಷಣಮ್ ॥

ಶ್ರೀಮದಾಚಾರ್ಯರ ಭಾಷ್ಯವು ಮೂಢರಿಗೂ ಭಗವತ್ಸ್ವರೂಪವನ್ನು ಬೋಧಿಸುತ್ತಿದ್ದಿತು. ಪಂಡಿತರಿಗೂ ಅದರಲ್ಲಿರುವ ವಾಕ್ಯಗಳ ಅರ್ಥವನ್ನು ನಿರ್ಣಯಿಸಿ ಹೇಳಲು ಕಷ್ಟವಾಗಿದ್ದಿತು. ಅದರ ಭಾವಾರ್ಥವು ತಿಳಿಯಲು ಅಶಕ್ಯವಾಗಿದ್ದಿತು. ಸರಳಶಬ್ದ ಒಳ್ಳೆಯುಕ್ತಿಗಳಿಂದ ಕೂಡಿ ಪ್ರತಿವಾದಿಗಳಿಗೆ ಭಯವನ್ನುಂಟು ಮಾಡುತ್ತಿದ್ದಿತು.

ಇಂಥ ಬ್ರಹ್ಮಸೂತ್ರಭಾಷ್ಯವನ್ನು ಓದುವುದರ ಫಲವನ್ನು ನಾರಾಯಣಪಂಡಿತರು ಹೀಗೆ ವರ್ಣನೆ ಮಾಡಿದ್ದಾರೆ -

ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ
ಮನೋ ವಾಗ್ಬಿರಾವರ್ತಯಂತೇ ಸ್ವಶಕ್ತ್ಯಾ ।
ಸುರಾದ್ಯಾ ನರಾಂತಾ ಮುಕುಂದಪ್ರಸಾದಾತ್
ಇಮಂ ಮೋಕ್ಷಮೇತೇ ಭಜಂತೇ ಸದೇತಿ ॥

ಸರ್ವಜೀವರಲ್ಲಿ ಉತ್ತಮರಾದ ಶ್ರೀಮದಾನಂದತೀರ್ಥರ ಬ್ರಹ್ಮಸೂತ್ರಭಾಷ್ಯದ ಅರ್ಥವನ್ನು ತಮ್ಮ ಶಕ್ತ್ಯಾನುಸಾರ ಯಾವಾಗಲೂ ಮನಸ್ಸಿನಿಂದ ಮನನ ಮಾಡುವ ಮತ್ತು ಮಾತಿನಿಂದ ಹೇಳುವ ದೇವತೆ ಮೊದಲ್ಗೊಂಡು ಮನುಷ್ಯರೇ ಕೊನೆಯಾಗುಳ್ಳವರೆಲ್ಲರೂ ಆ ವೈಕುಂಠಾಧಿಪನ ಅನುಗ್ರಹದಿಂದ ಯಾವಾಗಲೂ ಮೋಕ್ಷವನ್ನು ಪಡೆಯುವರು.

ಶ್ರೀಮದಾಚಾರ್ಯರು ತಮ್ಮ ಭಾಷ್ಯದಲ್ಲಿ ತಾವು ಪ್ರತಿಪಾದನೆ ಮಾಡಿದ ವಿಷಯದಲ್ಲಿ ಹೆಜ್ಜೆ-ಹೆಜ್ಜೆಗೂ ಪ್ರಮಾಣಗಳನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ತ್ರಿವಿಕ್ರಮಪಂಡಿತರು

ನುಡಿಯುವ ಮಾತು ಬಲು ರೋಮಾಂಚನಕಾರಿ - 'ಯದ್ಯಪಿ ಆಚಾರ್ಯಃ ಸ್ವೋಕ್ತಾರ್ಥೇ ಸ್ವಯಮೇವ ಪ್ರಮಾಣಮ್, ಸರ್ವಜ್ಞತ್ವಾತ್ ಅವಿಪ್ರಲಂಭಕತ್ವಾಚ್ಚ । ತಥಾಪಿ ಸ್ಯಾಂದೇಚೋಕ್ತಮಿತಿ ಪ್ರೌಢಿವಾದಂ ಕರೋತಿ' ಶ್ರೀಮದಾಚಾರ್ಯರು ಸರ್ವಜ್ಞರಾಗಿದ್ದಾರೆ ಮೋಸ ಮಾಡುವ ಸ್ವಭಾವ ಲವಲೇಶವೂ ಅವರಲ್ಲಿ ಇಲ್ಲ. ಆದ್ದರಿಂದ ತಾವು ಹೇಳಿದ ವಿಷಯದಲ್ಲಿ ತಾವೇ ಸ್ವತಃ ಪ್ರಮಾಣ, ಮತ್ತೊಂದು ಪ್ರಮಾಣವನ್ನು ಉಲ್ಲೇಖಿಸುವ ಅವಶ್ಯಕತೆಯಿಲ್ಲ. ಆದರೂ ಕೂಡ 'ತಚ್ಚೋಕ್ತಂ ಸ್ಯಾಂದೇ' ಇತ್ಯಾದಿ ಪ್ರೌಢೀವಾದವನ್ನು ಮಾಡುತ್ತಾರೆ.

ಇಂಥ ಶ್ರೇಷ್ಠವಾದ ಬ್ರಹ್ಮಸೂತ್ರಭಾಷ್ಯವನ್ನು ಅಧ್ಯಯನ ಮಾಡಿ ಧನ್ಯರಾಗೋಣ.

### *ತತ್ವಪ್ರದೀಪ*

ಶ್ರೀಮದಾಚಾರ್ಯರ ಅಪ್ಪಣೆಯಂತೆ ತ್ರಿವಿಕ್ರಮಪಂಡಿತರು 'ತತ್ವಪ್ರದೀಪ' ಎಂಬ ಟೀಕೆಯನ್ನು ಬ್ರಹ್ಮಸೂತ್ರಭಾಷ್ಯಕ್ಕೆ ಮೊಟ್ಟಮೊದಲು ಬರೆದರು. ತಾವು ಬರೆದ ಟೀಕೆಯನ್ನು ಶ್ರೀಮದಾಚಾರ್ಯರಿಗೆ ಸಮರ್ಪಣೆ ಮಾಡಿ ಸಂತೋಷ ಪಡಿಸಿದರು. ಶ್ರೀಮದಾಚಾರ್ಯರ ಸಮಕಾಲೀನರಾದ ತ್ರಿವಿಕ್ರಮಪಂಡಿತರು ರಚನೆ ಮಾಡಿರುವ ಈ ತತ್ವಪ್ರದೀಪ ಗ್ರಂಥ ಅತ್ಯಂತ ಗಂಭೀರವೂ ಅಪೂರ್ವವೂ ಆಗಿದೆ. ಬಹಳ ಗಹನವಾಗಿರುವುದರಿಂದ ಇದರ ಅಧ್ಯಯನದ ಪರಂಪರೆ ನಿಂತು ಹೋಗಿದೆ. ಆದರೆ ಶ್ರೀ ರಾಘವೇಂದ್ರ ಗುರುಸಾರ್ವಭೌಮರು ಎಲ್ಲೆಡೆಯೂ ತತ್ವಪ್ರದೀಪದ ವಿಶೇಷ ವಿಚಾರವನ್ನು ತಮ್ಮ ವ್ಯಾಖ್ಯಾನದಲ್ಲಿ ಎತ್ತಿತೋರಿಸುತ್ತಾರೆ. ತಾತ್ಪರ್ಯಚಂದ್ರಿಕೆಯಲ್ಲಿ ಶ್ರೀವ್ಯಾಸತೀರ್ಥರೂ ಕೂಡ ತತ್ವಪ್ರದೀಪಕಾರರು ಮಾಡುವ ವ್ಯಾಖ್ಯಾನದ ಸ್ವಾರಸ್ಯವನ್ನು ತೋರಿಸುತ್ತಾರೆ.

### *ತತ್ವಪ್ರಕಾಶಿಕಾ*

ಬ್ರಹ್ಮಸೂತ್ರಭಾಷ್ಯಕ್ಕೆ ಶ್ರೀತ್ರಿವಿಕ್ರಮಪಂಡಿತರ ಅನಂತರ ಶ್ರೀಮಟ್ಟೀಕಾಕೃತ್ಪಾದರೆಂದೇ ಪ್ರಸಿದ್ಧರಾದ ಶ್ರೀಜಯತೀರ್ಥಪೂಜ್ಯಚರಣರು 'ತತ್ವಪ್ರಕಾಶಿಕಾ' ಎಂಬ ಟೀಕೆಯನ್ನು ಬರೆದರು. ಶ್ರೀಮದಾಚಾರ್ಯರ ಭಾಷ್ಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂಥ ಸರಳಶೈಲಿಯಿಂದ ಕೂಡಿದೆ. ಈ ಗ್ರಂಥಕ್ಕೆ ಶ್ರೀ ವ್ಯಾಸತೀರ್ಥರು 'ತಾತ್ಪರ್ಯಚಂದ್ರಿಕಾ' ಎಂಬ ಟಿಪ್ಪಣಿಯನ್ನು ಬರೆದಿದ್ದಾರೆ. ಬ್ರಹ್ಮಮೀಮಾಂಸಾಗ್ರಂಥದ ಅಧ್ಯಯನವು ಪರಿಪೂರ್ಣವಾಗಬೇಕೆಂದರೆ ತಾತ್ಪರ್ಯಚಂದ್ರಿಕಾ ಗ್ರಂಥವನ್ನು ಓದಲೇ ಬೇಕು. ಈ ಗ್ರಂಥದ ಪ್ರಾರಂಭದಲ್ಲಿ

ಶ್ರೀ ವ್ಯಾಸತೀರ್ಥರು ಶ್ರೀಮಟ್ಟೀಕಾಕೃತ್ಪಾದಕರನ್ನು ಹೀಗೆ ಪ್ರಶಂಸಿಸುತ್ತಾರೆ -

ಮಿಥ್ಯಾಸಿದ್ಧಾಂತದುರ್ಧ್ವಾಂತವಿಧ್ವಂಸನವಿಚಕ್ಷಣಃ।
ಜಯತೀರ್ಥಾಖ್ಯತರಣಿರ್ಭಾಸತಾಂ ನೋ(ಮೇ) ಹೃದಂಬರೇ ॥

ಸುಳ್ಳನ್ನು ಹೇಳುವ ಸಿದ್ಧಾಂತ, ಅಥವಾ ಸುಳ್ಳುಸಿದ್ಧಾಂತಗಳೆಂಬ ಕೆಟ್ಟ ಅಜ್ಞಾನವನ್ನು ಪರಿಹರಿಸುವುದರಲ್ಲಿ ನಿಪುಣರಾದ ಜಯತೀರ್ಥರೆಂಬ ಸೂರ್ಯರು ನಮ್ಮ ಹೃದಯದಲ್ಲಿ ಪ್ರಕಟವಾಗಲಿ ಎಂದು.

ಬ್ರಹ್ಮಸೂತ್ರಭಾಷ್ಯದ ಸಂಪೂರ್ಣ ಅರ್ಥವನ್ನು ವಿವರಿಸುವ ಏಕೈಕ ಕೃತಿ ಟೀಕಾಕೃತ್ಪಾದರ 'ತತ್ವಪ್ರಕಾಶಿಕಾ'. ಆದ್ದರಿಂದಲೇ ಈ ತತ್ವಪ್ರಕಾಶಿಕೆಗೆ ಮಾಧ್ವಸಂಪ್ರದಾಯದಲ್ಲಿ ಎಲ್ಲಿಲ್ಲದಷ್ಟು ಗೌರವವಿದೆ. ಮೂವತ್ತಕ್ಕೂ ಹೆಚ್ಚು ಟಿಪ್ಪಣಿಗಳನ್ನು ಅನೇಕ ಜ್ಞಾನಿಗಳು ಈ ಗ್ರಂಥಕ್ಕೆ ಬರೆದಿದ್ದಾರೆ. -

೧. ತಾತ್ಪರ್ಯಚಂದ್ರಿಕಾ (ಶ್ರೀ ವ್ಯಾಸತೀರ್ಥರು)
೨. ಭಾವಬೋಧ (ಶ್ರೀರಘೂತ್ತಮತೀರ್ಥರು)
೩. ಗುರ್ವರ್ಥದೀಪಿಕಾ (ಶ್ರೀವಾದಿರಾಜತೀರ್ಥರು)
೪. ಭಾವದೀಪ (ಶ್ರೀರಾಘವೇಂದ್ರತೀರ್ಥರು)
೫. ಅಭಿನವಚಂದ್ರಿಕಾ (ಶ್ರೀಸತ್ಯನಾಥತೀರ್ಥರು)
೬. ಶೇಷತಾತ್ಪರ್ಯಚಂದ್ರಿಕಾ (ಶ್ರೀರಘುನಾಥತೀರ್ಥರು)
೭. ಭಾವರತ್ನಕೋಶ (ಶ್ರೀಸುಮತೀಂದ್ರತೀರ್ಥರು)
೮. ತತ್ವಪ್ರಕಾಶಿಕಾವ್ಯಾಖ್ಯಾ (ಶ್ರೀಸತ್ಯಪ್ರಿಯತೀರ್ಥರು)
೯. ತತ್ವಪ್ರಕಾಶಿಕಾ ಟಿಪ್ಪಣಿ (ಶ್ರೀಬ್ರಹ್ಮಣ್ಯತೀರ್ಥರು)
೧೦. ಚಂದ್ರಿಕಾಬಿಂದು (ಶ್ರೀಸತ್ಯಪ್ರಿಯತೀರ್ಥರು)
೧೧. ಚಂದ್ರಿಕಾಟಿಪ್ಪಣಿ (ಶೇಷದಾಸಾರ್ಯ ಆದ್ಯ)
೧೨. ಚಂದ್ರಿಕಾವ್ಯಾಖ್ಯಾನ (ಶ್ರೀಸುಬ್ರಹ್ಮಣ್ಯಾಚಾರ್ಯ ಗುರ್ಜಾರಿ)
೧೩. ಶರದಾಗಮಚಂದ್ರಿಕಾಟಪ್ಪಣಿ (ಶ್ರೀವ್ಯಾಸತತ್ವಜ್ಞರು)
೧೪. ದ್ವೈತಭೂಷಣಂ (ಚಂದ್ರಿಕಾಖಂಡನಾಖಂಡನ) (ಶ್ರೀಕಾಶೀತಿಮ್ಮಣ್ಣಾಚಾರ್ಯರು)
೧೫. ಚಂದ್ರಿಕಾಭೂಷಣಂ (ಶ್ರೀಕೊಚ್ಚರಂಗಪ್ಪಾಚಾರ್ಯ)
೧೬. ಚಂದ್ರಿಕಾಪ್ರಕಾಶಪ್ರಸರಃ (ಶ್ರೀಗೌಡಗೆರಿ ವೆಂಕಟರಮಣಾಚಾರ್ಯ)
೧೭. ಅದ್ವೈತದೀಪಿಕಾವಾತಾಗಮಃ (ಶ್ರೀಗೌಡಗೆರಿ ವೆಂಕಟರಮಣಾಚಾರ್ಯ)

೧೮. ಚಂದ್ರಿಕಾಮಂಡನಂ (ಶ್ರೀಸತ್ಯಧ್ಯಾನತೀರ್ಥರು)
೧೯. ಸಭಾಪ್ರಸರ (ಶ್ರೀಅನಂತಾಚಾರ್ಯ ಗಲಗಲಿ)
೨೦. ಚಂದ್ರಿಕಾನ್ಯಾಯವಿವರಣಂ (ಶ್ರೀವರಖೇಡಿ ತಿಮ್ಮಣ್ಣಾಚಾರ್ಯ)
೨೧. ತತ್ವಪ್ರಕಾಶಿಕಾಟಪ್ಪಣಿ (ಬಿದರಹಳ್ಳಿ ಶ್ರೀನಿವಾಸತೀರ್ಥರು)
೨೨. ವ್ಯಾಕ್ಯಾರ್ಥಮಂಜರಿ (ಶರ್ಕರಾ ಶ್ರೀನಿವಾಸಾಚಾರ್ಯ)
೨೩. ತತ್ವಪ್ರಕಾಶಿಕಾಟಪ್ಪಣಿ (ಶ್ರೀ ವಿಜಯೀಂದ್ರತೀರ್ಥರು)
೨೪. ಗುರುರಾಜೀಯ (ಪಾಂಡುರಂಗಿ ಕೇಶವಾಚಾರ್ಯರು)
೨೫. ಅನಂತಭಟ್ಟೀಯ (ಶ್ರೀಮುಷ್ಣಂ ಅನಂತಾಚಾರ್ಯರು)
೨೬. ಕುಂಡಲಗಿರಿಯಾ (ಕುಂಡಲಗಿರಿಆಚಾರ್ಯರು)
೨೭. ಭಾವಪ್ರದೀಪಭಾಷ್ಯವ್ಯಾಖ್ಯಾನ (ಚಕ್ಕೋಡಿ ಭಗವಂತರಾಯರು)
೨೮. ಸುಬೋಧಚಂದ್ರಿಕಾ (ಆದ್ಯ ವರದಾಚಾರ್ಯರು)
೨೯. ನಯದರ್ಪಣ (ಶ್ರೀ ವಾದೀಂದ್ರ ತೀರ್ಥರು)
೩೦. ತತ್ವಸುಬೋಧಿನಿ (ಪಾಂಡುರಂಗಿ ಶ್ರೀನಿವಾಸಚಾರ್ಯರು)
೩೧. ಪ್ರಮೇಯಮುಕ್ತಾವಲಿ (ತಾಮ್ರಪರ್ಣಿ ಶ್ರೀನಿವಾಸಾಚಾರ್ಯರು)
೩೨. ತತ್ವಪ್ರಕಾಶಿಕಾ ಟಿಪ್ಪಣಿ (ಛಲಾರಿ ಸಂಕರ್ಷಣಾಚಾರ್ಯರು)
೩೩. ವ್ಯಾಕ್ಯಾರ್ಥಮುಕ್ತಾವಲಿ (ತಾಮ್ರಪರ್ಣಿ ಶ್ರೀನಿವಾಸಾಚಾರ್ಯರು)
೩೪. ತತ್ವಪ್ರಕಾಶಿಕಾಟೀಕಾಟಪ್ಪಣಿಸಾರೋದ್ಧಾರ (ಮಹಿಷಿ ವ್ಯಾಸರಾಯಾಚಾರ್ಯರು)
೩೫. ತತ್ವಪ್ರಕಾಶಿಕಾ ಸಾರ (ಶ್ರೀಧರಾಚಾರ್ಯ ಅಪಸಂಗಿ ನೀಲಂಗ)

ತತ್ವಪ್ರಕಾಶಿಕಾ ಗ್ರಂಥವು ಸುಮಾರು ೮೦೦೦ ಗ್ರಂಥಗಳಷ್ಟು ವಿಸ್ತಾರವಾಗಿದೆ. ಪ್ರಾಚೀನ ಹಾಗೂ ಅರ್ವಾಚೀನ ಟೀಕೆಗಳೆನ್ನೆಲ್ಲಾ ಮೀರಿಸಿದ ಮೇರು ಕೃತಿ ಇದು. ಈ ಗ್ರಂಥದ ಮೇಲೆ ಶ್ರೀವ್ಯಾಸತೀರ್ಥರು ತಾತ್ಪರ್ಯಚಂದ್ರಿಕಾ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ರಾಯರು 'ಭಾವದೀಪ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಅವರೇ ಪುನಃ ತಾತ್ಪರ್ಯಚಂದ್ರಿಕಾ ಗ್ರಂಥಕ್ಕೂ 'ಪ್ರಕಾಶ'ವೆಂಬ ವ್ಯಾಖ್ಯಾನ ಬರೆದಿದ್ದಾರೆ. ಇದರಿಂದಲೇ ತತ್ವಪ್ರಕಾಶಿಕೆಯು ಎಷ್ಟು ಅಗಾಧವೆಂದು ಸ್ಪಷ್ಟವಾಗುತ್ತದೆ. ತತ್ವಪ್ರಕಾಶಿಕೆಯ ಮೇಲೆ ತಿಳಿಸಿದಂತೆ ಅನೇಕ ಟಿಪ್ಪಣಿಗಳು ಹೊರಟಿರುವುದಲ್ಲದೆ ಪರಮತೀಯರೂ ಸಹ ಕೆಲವೆಡೆ ಇದನ್ನು ನಿರಾಕರಿಸಿದ್ದಾರೆ. ಪರಮತೀಯರ ಆ ಜೊಳ್ಳುವಾದಗಳನ್ನೆಲ್ಲಾ ಚಂದ್ರಿಕಾಚಾರ್ಯರು ಮತ್ತು ಭಾವದೀಪಾಚಾರ್ಯರು ನಿರಾಕರಿಸಿದ್ದಾರೆ.

ಛಲಾರಿ ಆಚಾರ್ಯರು ತಮ್ಮ ''ಜಯತೀರ್ಥವಿಜಯ'' ಎಂಬ ಕಾವ್ಯದಲ್ಲಿ ನ್ಯಾಯಸುಧಾ-ಗ್ರಂಥವನ್ನು ಐರಾವತವೆಂದು ವರ್ಣಿಸಿ, ತತ್ವಪ್ರಕಾಶಿಕೆಯನ್ನು ಉಚ್ಚೈಶ್ರವಸ್ಸು ಎಂದು ಹೃದಯಂಗಮವಾಗಿ ವರ್ಣಿಸಿದ್ದಾರೆ. ಮತ್ತು ಶ್ರೀಜಯತೀರ್ಥರು ಮೊದಲ ಎರಡು ಅಧ್ಯಾಯಗಳಿಗೆ ಮಾತ್ರ ಟೀಕೆಯನ್ನು ಬರೆದಿರುವ ಶ್ರೀಮದಾಚಾರ್ಯರ ನ್ಯಾಯವಿವರಣ ಗ್ರಂಥದ ಮೂರು ಮತ್ತು ನಾಲ್ಕನೆಯ ಅಧ್ಯಾಯಗಳಿಗೆ ಶ್ರೀರಘೂತ್ತಮತೀರ್ಥರು ಟೀಕೆಯನ್ನು ಬರೆದಿದ್ದಾರೆ. ಕೊನೆಯಲ್ಲಿ ಅವರು ಮಾಡಿದ ಮಂಗಳಶ್ಲೋಕ ಹೀಗಿದೆ.

ತತ್ವಪ್ರಕಾಶಿಕಾಸಂಸ್ಥೋ ಮಯಾऽನುಗ್ರಹತೋ ಹರೇಃ ।
ಸನ್ನ್ಯಾಯವಿವೃತೇರ್ಭಾವೋ ಬಾಲಬೋಧಾರ್ಥಮುದ್ಧೃತಃ ॥

''ತತ್ವಪ್ರಕಾಶಿಕೆಯಲ್ಲಿರುವ ವಿಷಯವನ್ನೇ ನಾನು ನ್ಯಾಯವಿವರಣದ ಟೀಕೆಯಲ್ಲಿ ಹರಿಯ ಅನುಗ್ರಹದಿಂದ ಬರೆದಿದ್ದೇನೆ. ಇದರಿಂದ ಬಾಲಕರಿಗೆ ಅನುಕೂಲವಾಗುತ್ತದೆ''.

ಇವರ ಈ ಮಾತಿನಿಂದ ತತ್ವಪ್ರಕಾಶಿಕೆಯಲ್ಲಿ ಎಲ್ಲವೂ ಇದೆ ಎಂದು ತಿಳಿಯುತ್ತದೆ. ತತ್ವ-ಪ್ರಕಾಶಿಕೆಯು ಮೇಲ್ನೋಟಕ್ಕೆ ಸುಲಭವೆಂದು ತೋರಬಹುದು. ಆದರೆ ಇದರಲ್ಲಿರುವ ಗಾಂಭೀರ್ಯಅರ್ಥದ ವಿಸ್ತಾರ ಇವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಜನ್ಮಾಧಿಕರಣದ ಪ್ರಾರಂಭದಲ್ಲಿ ರಾಯರೇ ಹೇಳಿದ್ದಾರೆ - ''ಶ್ರೀಮಜ್ಜಯತೀರ್ಥರು ಭಾಷ್ಯದ ಶೈಲಿಯಲ್ಲಿ ತತ್ವಪ್ರಕಾಶಿಕೆಯನ್ನು ರಚಿಸಿದ್ದಾರೆ. ಅನುವ್ಯಾಖ್ಯಾನದ ಶೈಲಿಯಲ್ಲಿ ನ್ಯಾಯಸುಧೆಯನ್ನು ರಚಿಸಿದ್ದಾರೆ''.

''ಬಾಲಸಂಘಮಪಿ ಬೋಧಯದ್‌ಭೃಶಂ ದುರ್ನಿರೂಪವಚನಂ ಚ ಪಂಡಿತೈಃ ।'' ಎಂಬ ಶ್ರೀಮದಾಚಾರ್ಯರ ಭಾಷ್ಯಸ್ವರೂಪವನ್ನು ವಿವರಿಸುವ ಪಂಡಿತಾಚಾರ್ಯರ ಮಾತಿನಂತೆ ತತ್ವಪ್ರಕಾಶಿಕೆಯು ಕೂಡ ಸುಲಭವಾಗಿ ತೋರಿದರೂ ಅಷ್ಟೇ ಗಹನಾರ್ಥಗಳಿಂದ ತುಂಬಿದೆ.

ಪ್ರತಿಯೊಂದು ಅಧಿಕರಣಗಳಲ್ಲಿಯೂ ವಿಷಯ, ಸಂಶಯ, ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ತೋರಿಸುತ್ತಾರೆ. ಇಂಥ ಶ್ರೇಷ್ಠವಾದ ತತ್ವಪ್ರಕಾಶಿಕಾ ಗ್ರಂಥವನ್ನು ಅಧ್ಯಯನ ಮಾಡಿ ಭಾಷ್ಯದ ನಿಜಾಭಿಪ್ರಾಯವನ್ನು ತಿಳಿದು ಧನ್ಯರಾಗೋಣ. ಪ್ರತಿಯೊಂದು ಅಧಿಕರಣಗಳಲ್ಲಿಯೂ ಇದನ್ನೇಕೆ ತೋರಿಸಬೇಕು? ಎಂಬ ಪ್ರಶ್ನೆಗೆ ಅಭಿನವಚಂದ್ರಿಕೆಯಲ್ಲಿ ಸುಂದರವಾಗಿ ಉತ್ತರಿಸಿದ್ದಾರೆ. ''ಬ್ರಹ್ಮಮಿಮಾಂಸಾಶಾಸ್ತ್ರದಲ್ಲಿರುವ ಪ್ರತಿಯೊಂದು ಅಧಿ ಕರಣಗಳೂ ಸಹ ಒಂದೊಂದು ಶಾಸ್ತ್ರದಂತಿವೆ. ಬೇರೆ ಬೇರೆ ಶಾಸ್ತ್ರಗಳಾದ್ದರಿಂದ ಎಲ್ಲಾ ಅಧಿ ಕರಣಗಳಲ್ಲಿಯೂ ಪ್ರತ್ಯೇಕವಾಗಿ ವಿಷಯಾದಿಪಂಚಕಗಳನ್ನು ತೋರಿಸಿದ್ದಾರೆ.

*ಭಾವದೀಪಕಾರರಾದ ಶ್ರೀರಾಘವೇಂದ್ರಗುರುಸಾರ್ವಭೌಮರು*

ನಾಸ್ತಿಕಭೂಯಿಷ್ಠವಾದ ಈ ಘೋರ ಕಲಿಯುಗದಲ್ಲಿಯೂ ಹರಿಭಕ್ತಿ, ಗುರುಭಕ್ತಿ, ಸನಾತನಧರ್ಮ ಮೊದಲಾದ ಸದ್ಗುಣಗಳು ಅಖಂಡವಾಗಿ ಬೆಳಗುವಂತೆ ಮಾಡಿದ ಶ್ರೇಯಸ್ಸು ಶ್ರೀ ಮಂತ್ರಾಲಯ ಪ್ರಭುಗಳಿಗೆ ಸೇರುತ್ತದೆ. ಸಮಗ್ರ ದಕ್ಷಿಣ ಭಾರತದಲ್ಲಿ ಇವರ ಹೆಸರನ್ನು ಕೇಳದ ಆಸ್ತಿಕರಿಲ್ಲ. ಭಕ್ತರಿಗೆ ಕಾಮಿತಾರ್ಥಗಳನ್ನು ಈಡೇರಿಸುವ ಕಾಮಧೇನು ಆಗಿದ್ದಾರೆ. ಲಕ್ಷಾವಧಿ ಜನರ ಇಷ್ಟಾರ್ಥಗಳನ್ನು ಪೂರೈಸುವುದರಲ್ಲಿ ಕಲ್ಪವೃಕ್ಷವೂ ಆಗಿದ್ದಾರೆ. ಇವರ ವೃಂದಾವನದ ಪ್ರಭಾವದಿಂದ ತಿರುಪತಿ, ಉಡುಪಿ, ಪಂಢರಾಪುರ, ಕಾಶೀ, ಬದರಿಗಳಂತೆ ಮಂತ್ರಾಲಯವೂ ಕೂಡ ದಿವ್ಯಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ.

ಜನರ ಕಷ್ಟ-ಕಾರ್ಪಣ್ಯಗಳನ್ನು ಪರಿಹರಿಸಿ ಇಷ್ಟಾರ್ಥಪ್ರಧಾನದಲ್ಲಿ ರಾಯರು ಅದ್ವಿತೀಯರಾಗಿದ್ದಾರೆ. ಆದರೆ ಲೌಕಿಕ ಫಲಗಳನ್ನು ನೀಡುವ ಮಾತ್ರದಿಂದ ಅವರಲ್ಲಿ ಮಹತ್ವಬುದ್ಧಿಯನ್ನು ತಾಳುವುದು ದೊಡ್ಡದಲ್ಲ. ಅಧ್ಯಾತ್ಮಪ್ರಪಂಚದಲ್ಲಿ ಅವರು ಅನುಗ್ರಹಿಸಿದ ವಿಚಾರವನ್ನು ತಿಳಿದು ಅವರ ಮಹಿಮೆಯನ್ನು ಅರಿಯಬೇಕು. ಅವರು ಬರೆದಿರುವ ಗ್ರಂಥಗಳು ಅಪಾರವಾಗಿವೆ. ಮತ್ತು ವ್ಯಾಕರಣ, ಮೀಮಾಂಸಾ, ನ್ಯಾಯ ಮೊದಲಾದ ಶಾಸ್ತ್ರಗಳ ನೈಪುಣ್ಯವನ್ನು ಎತ್ತಿತೋರಿಸಿವೆ. ಅವರಿಗಿರುವ ವೇದವೈದುಷ್ಯ ಅಸಾಧಾರಣವಾದದ್ದು. ಇವರು ಬರೆದಿರುವ ನ್ಯಾಯಸುಧೆಗೆ - ಪರಿಮಳ, ತಾತ್ಪರ್ಯಚಂದ್ರಿಕೆಗೆ - ಪ್ರಕಾಶ, ತತ್ವಪ್ರಕಾಶಿಕೆಗೆ - ಭಾವದೀಪ ಮೊದಲಾದ ಗ್ರಂಥಗಳನ್ನು ಕಂಡಾಗ ಇವರೊಬ್ಬರು ''ಸರ್ವಜ್ಞಕಲ್ಪರಾದ ಭೂಲೋಕದ ಕಲ್ಪವೃಕ್ಷ'' ಎಂಬ ಭಾವನೆ ಸಹಜವಾಗಿ ಹುಟ್ಟುತ್ತದೆ.

ಶ್ರೀಮದಾಚಾರ್ಯರ ಭಾಷ್ಯಕ್ಕೆ ಟೀಕೆಯಾದ ತತ್ವಪ್ರಕಾಶಿಕೆಗೆ ರಾಯರು ಬರೆದಿರುವ 'ಭಾವದೀಪ' ಬಲು ಅದ್ಭುತ. ಇವರು ತತ್ವಪ್ರಕಾಶಿಕೆಗೆ ಟಿಪ್ಪಣಿ ಬರೆದದ್ದಷ್ಟೇ ಅಲ್ಲದೇ, ತತ್ವಪ್ರಕಾಶಿಕೆಗೂ ಮೂಲವಾದ, ಮಧ್ವಭಾಷ್ಯಕ್ಕೂ ಮೂಲವಾದ, ಬ್ರಹ್ಮಸೂತ್ರಗಳಿಗೂ ನೇರವಾಗಿ ಟೀಕೆ ಬರೆದು 'ತಂತ್ರದೀಪಿಕಾ' ಎಂಬ ಹೆಸರಿಟ್ಟಿದ್ದಾರೆ. ಪುನಃ ತತ್ವಪ್ರಕಾಶಿಕೆಯ ವ್ಯಾಖ್ಯಾನವಾದ ಚಂದ್ರಿಕಾಗ್ರಂಥಕ್ಕೂ 'ಪ್ರಕಾಶ' ಎಂಬ ಟಿಪ್ಪಣಿಯನ್ನು ಬರೆದಿದ್ದಾರೆ.

ರಾಘವೇಂದ್ರಸ್ವಾಮಿಗಳ ೪೭ ಗ್ರಂಥಗಳು

೧. ತತ್ವಪ್ರಕಾಶಿಕಾ-ಭಾವದೀಪ

೨. ಶ್ರೀಮನ್ನ್ಯಾಯಸುಧಾ ಪರಿಮಳ

೩. ಚಂದ್ರಿಕಾ-ಪ್ರಕಾಶ

೪. ತರ್ಕತಾಂಡವವ್ಯಾಖ್ಯಾ

೫. ತಾತ್ಪರ್ಯನಿರ್ಣಯ ಭಾವಸಂಗ್ರಹ

೬. ಮಂತ್ರಾರ್ಥಮಂಜರೀ

೭. - ೧೬ ದಶೋಪನಿಷತ್ತುಗಳ ಖಂಡಾರ್ಥ

೧೭. ತಂತ್ರದೀಪಿಕಾ

೧೮. ನ್ಯಾಯಮುಕ್ತಾವಳಿ

೧೯. ಪ್ರಮೇಯದೀಪಿಕಾವ್ಯಾಖ್ಯಾ

೨೦. ಗೀತಾತಾತ್ಪರ್ಯಟೀಕಾವಿವರಣಮ್

೨೧. - ೨೩. ವೇದತ್ರಯವಿವೃತ್ತಿ

೨೪. - ೨೮. ಪುರುಷಸೂಕ್ತಾದಿಪಂಚಸೂಕ್ತವ್ಯಾಖ್ಯಾ

೨೯. ತತ್ವಮಂಜರೀ

೩೦. ವಾದವಳೀವ್ಯಾಖ್ಯಾ

೩೧. - ೪೦ ದಶಪ್ರಕರಣವ್ಯಾಖ್ಯಾ

೪೧. ರಾಮಚಾರಿತ್ರ್ಯಮಂಜರೀ

೪೨. ಕೃಷ್ಣಚಾರಿತ್ರ್ಯಮಂಜರೀ

೪೩. ಪ್ರಮಾಣಪ್ರದ್ಧತಿವ್ಯಾಖ್ಯಾ

೪೪. ಅಣುಮಧ್ವವಿಜಯವ್ಯಾಖ್ಯಾ

೪೫. ಪ್ರಾತಃಸಂಕಲ್ಪಗದ್ಯ

೪೬. ಭಾಟ್ಟಸಂಗ್ರಹ.

೪೭. ಗೀತಾರ್ಥ ಸಂಗ್ರಹ

ಪ್ರಕೃತ ರಾಯರ ಭಾವದೀಪದ ವೈಶಿಷ್ಟ್ಯವನ್ನು ಅರಿಯೋಣ. ಭಾವದೀಪದಲ್ಲಿ ಎಲ್ಲೆಡೆಯೂ ಸ್ವಾರಸ್ಯವೇ ತುಂಬಿದೆ. ಕೆಲವೊಂದಷ್ಟೇ ಈಗ ಉದಾಹರಿಸಬಹುದು -

೧. ಟೀಕೆಯಲ್ಲಿ ಹೇಳಲ್ಪಟ್ಟ ವಿಷಯವು ಭಾಷ್ಯಕಾರರಿಗೆ ಸಮ್ಮತವಾಗಿದೆಯೋ ಇಲ್ಲವೋ ಎಂಬ ಕುತೂಹಲ ಸಹಜವಾಗಿ ಬರುತ್ತದೆ. ಈ ಕುತೂಹಲಕ್ಕೆ ಭಾವದೀಪದಲ್ಲಿ ರಾಯರು ಹೇಗೆ ಉತ್ತರಿಸಿದ್ದಾರೆಂದು ನೋಡೋಣ - ''ಅಥಾತೋ ಬ್ರಹ್ಮಜಿಜ್ಞಾಸಾ'' ಎಂಬ ಸೂತ್ರದಲ್ಲಿ ಟೀಕೆಯಲ್ಲಿ ಮಾಡಿದ ಪೂರ್ವಪಕ್ಷವು ಭಾಷ್ಯದಿಂದ ಲಭ್ಯವಾದಂತೆ ತೋರುವುದಿಲ್ಲ. ಏಕೆಂದರೆ ಟೀಕೆಯ ಪೂರ್ವಪಕ್ಷದ ಸಿದ್ಧಾಂತವು ಹೀಗಿವೆ. 'ಬ್ರಹ್ಮನು ಜೀವನಿಂದ ಅಭಿನ್ನನಾಗಿದ್ದಾನೆ. ನಾನು ಎಂಬ ಅನುಭವದಿಂದ ಜೀವನು ನಿತ್ಯಸಿದ್ಧನಾಗಿದ್ದಾನೆ. ಜೀವನಿಂದ ಅಭಿನ್ನನಾದ ಬ್ರಹ್ಮನು ನಿರ್ವಿಶೇಷನಾದ್ದರಿಂದ ನಾನು ಎಂಬ ಜ್ಞಾನಕ್ಕಿಂತ ಹೆಚ್ಚಿನ ಅಂಶವನ್ನು ಬ್ರಹ್ಮನ ವಿಷಯದಲ್ಲಿ ವೇದಾಂತಗಳು ಹೇಳಲಾರವು. ಆದ್ದರಿಂದ ಸಂದಿಗ್ಧನಲ್ಲದ ಬ್ರಹ್ಮನು ವಿಷಯನಾಗಲಾರ. ಆದ್ದರಿಂದ ಬ್ರಹ್ಮಜಿಜ್ಞಾಸೆಯೂ ಕೂಡುವುದಿಲ್ಲವೆಂದು ಪೂರ್ವಪಕ್ಷ.

''ತದ್ವಿವಿಜಿಜ್ಞಾಸಸ್ವ'' ಎಂಬಲ್ಲಿ ಜಿಜ್ಞಾಸೆಗೆ ವಿಷಯನಾದವನು ಬ್ರಹ್ಮ. ಆದರೂ 'ಅಥ ಕಸ್ಮಾತ್ ಉಚ್ಯತೇ ಬ್ರಹ್ಮೇತಿ । ಬೃಹಂತೋ ಹ್ಯಸ್ಮಿನ್ ಗುಣಾಃ'' ಎಂಬ ಶ್ರುತಿಯ ಆಧಾರದಿಂದ ಬ್ರಹ್ಮನು ಗುಣಪೂರ್ಣನಾಗಿದ್ದಾನೆಂದು ಸಿದ್ಧನಾಗಿದ್ದಾನೆ. ಆದರೆ ಜೀವನು ಅಲ್ಪಗುಣನೆಂದೂ ಅನುಭವದಿಂದ ಸಿದ್ಧನಾಗಿದ್ದಾನೆ. ಇಂತಹ ಜೀವನಿಗಿಂತ ಬ್ರಹ್ಮನು ಭಿನ್ನನಾದ್ದರಿಂದ ಅಸಂದಿಗ್ಧನಾಗಿದ್ದಾನೆ. ಆದ್ದರಿಂದಲೇ ವೇದಾಂತಗ್ರಂಥಗಳಿಗೆ ವಿಷಯನೂ ಆಗುತ್ತಾನೆ. ಬ್ರಹ್ಮಜಿಜ್ಞಾಸೆಯು ಕರ್ತವ್ಯವೂ ಆಗಿದೆಯೆಂದು ಸಿದ್ಧಾಂತ.

ಆದರೆ ಭಾಷ್ಯಕಾರರು ಸೂತ್ರದಲ್ಲಿರುವ ಬ್ರಹ್ಮಪದಕ್ಕೆ ಬ್ರಹ್ಮಶಬ್ದಶ್ಚ ವಿಷ್ಣಾವೇವ ಎಂದು ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿ ರೂಢ್ಯರ್ಥವನ್ನು ಹೇಳಿದ್ದಾರೆ. ಆದ್ದರಿಂದ ಟೀಕೆಯಲ್ಲಿ ಹೇಳಿದ ಗುಣಪೂರ್ಣತ್ವವೆಂಬ ಯೌಗಿಕಾರ್ಥವು ಹೇಗೆ ಭಾಷ್ಯಾರೂಢವಾಗುತ್ತದೆ ? ಎಂದೇ ತಿಳಿಯುವುದಿಲ್ಲ. ಈ ಸಂದರ್ಭದಲ್ಲಿ ಭಾವದೀಪಕಾರರು ಗೊಂದಲ ಪರಿಹರಿಸಿದ್ದಾರೆ - ಭಾಷ್ಯದಲ್ಲಿರುವ ಅತಃ ಎಂಬ ಪದವನ್ನು ಆವೃತ್ತಿ ಮಾಡಿ ಯೋಜನೆ ಮಾಡಿದಾಗ ಟೀಕೆಯಲ್ಲಿ ಈ ರೀತಿಯ ಪೂರ್ವಪಕ್ಷ ಸಿದ್ಧಾಂತಗಳನ್ನು ಮಾಡಿದ್ದಾರೆಂದು ತಿಳಿಸಿದ್ದಾರೆ. ಇಷ್ಟರಿಂದಲೇ ಎಲ್ಲ ಗೊಂದಲಗಳು ಪರಿಹಾರವಾಗುತ್ತವೆ.

೨. ಸೂತ್ರಲಕ್ಷಣದಲ್ಲಿ ಎಲ್ಲಾ ವಿಶೇಷಣಗಳು ಸಾರ್ಥಕವೆನ್ನಲು ತತ್ವಪ್ರದೀಪವನ್ನು ಉದಾಹರಿಸುತ್ತಾರೆ.

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ಒಟ್ಟು ಸೂತ್ರಕ್ಕೆ ಆರು ವಿಶೇಷಣಗಳು. ಅಲ್ಪಾಕ್ಷರತ್ವವನ್ನು ಹೇಳದಿದ್ದರೆ ಭಾಷ್ಯದಲ್ಲಿ ಅತಿವ್ಯಾಪ್ತಿ. ಅಸಂದಿಗ್ಧತ್ವವನ್ನು ಹೇಳದಿದ್ದರೆ ನಿರ್ಣಾಯಕವಲ್ಲದ ವಾಕ್ಯದಲ್ಲಿ ಅತಿವ್ಯಾಪ್ತಿ. ಸಾರವತ್ವವನ್ನು ಹೇಳದಿದ್ದರೆ ಚತುರನಾದ ಪುರುಷನಿಂದ ಹೇಳಲ್ಪಟ್ಟ ಲೋಕವಾರ್ತಾದಿವಾಕ್ಯದಲ್ಲಿ ಅತಿವ್ಯಾಪ್ತಿ. ವಿಶ್ವತೋಮುಖತ್ವವನ್ನು ಹೇಳದಿದ್ದರೆ ನಾರಾಯಣ ಮೊದಲಾದ ಭಗವನ್ನಾಮಾದಿಗಳಲ್ಲಿ ಅತಿವ್ಯಾಪ್ತಿ. ಅಸ್ತೋಭತ್ವವನ್ನು ಹೇಳದಿದ್ದರೆ ವ್ಯರ್ಥಾಕ್ಷರಗಳಿಂದ ಕೂಡಿದ ವಾಕ್ಯದಲ್ಲಿ ಅತಿವ್ಯಾಪ್ತಿ. ಅನವದ್ಯತ್ವವನ್ನು ಹೇಳದಿದ್ದರೆ ಅಪಶಬ್ದದಿಂದ ಕೂಡಿದ ವಾಕ್ಯದಲ್ಲಿ ಅತಿವ್ಯಾಪ್ತಿ ಬರುತ್ತದೆ. ಇವುಗಳನ್ನು ಪರಿಹರಿಸಲು ಆರು ವಿಶೇಷಣಗಳನ್ನು ಸೂತ್ರದಲ್ಲಿ ಹೇಳಬೇಕು. ಈ ವಿಚಾರವು ತತ್ವಪ್ರದೀಪದಲ್ಲಿ ಹೇಳಲ್ಪಟ್ಟಿದೆ.

ಹೀಗೆ ಭಾವದೀಪಕಾರರು ಅಲ್ಲಲ್ಲಿ ತತ್ವಪ್ರದೀಪದಲ್ಲಿರುವ ವೈಶಿಷ್ಟ್ಯವನ್ನು ಎತ್ತಿತೋರಿಸಿದ್ದಾರೆ.

೩. 'ಬ್ರಹ್ಮರುದ್ರಾದಿದೇವೇಷು ಜ್ಞಾನಂ ಸಂಸ್ಥಾಪ್ಯ' ಎಂಬ ಟೀಕೆಗೆ ಭಾವದೀಪದಲ್ಲಿ ಮಾಡಿದ ವ್ಯಾಖ್ಯಾನ ಬಲು ಮಾರ್ಮಿಕವಾಗಿದೆ -

ಬ್ರಹ್ಮಾದಿಗಳಲ್ಲಿರುವ ಜ್ಞಾನವು ತಿರೋಹಿತವೇ ಆಗಿಲ್ಲ. ಹೀಗಿರುವಾಗ ಬ್ರಹ್ಮಾದಿಗಳಲ್ಲಿಯೂ. ಜ್ಞಾನದ ಸ್ಥಾಪನೆ ಏಕೆ? ಎಂಬ ಪ್ರಶ್ನೆ ಬಂದರೆ, ಬ್ರಹ್ಮಾದಿಗಳಿಗೆ ಮೊದಲೇ ಯಥಾರ್ಥಜ್ಞಾನವಿತ್ತು. ಆದನ್ನು ಮತ್ತಷ್ಟು ದೃಢಗೊಳಿಸಿದ ಎಂದರ್ಥ.

ಇಲ್ಲಿ ಕೆಲವರು ಹೀಗೆ ಹೇಳುತ್ತಾರೆ - ಬ್ರಹ್ಮದೇವರ ಜ್ಞಾನವನ್ನಷ್ಟೇ ದೃಢಗೊಳಿಸಿದ. ರುದ್ರಾದಿಗಳಿಗೆಲ್ಲ ಮೊದಲಿಲ್ಲದ ಹೊಸ ಜ್ಞಾನವನ್ನೇ ನೀಡಿದ ಎಂದು. ಆದರೆ ವಸ್ತುತಃ ಬ್ರಹ್ಮದೇವರಿಗೂ ಅಪ್ರಾಪ್ತಜ್ಞಾನವನ್ನು ನೀಡಿದನೆಂದು ಹೇಳಬಹುದು. ಏಕೆಂದರೆ 'ಬ್ರಹ್ಮಾದೀನಾಮಪ್ಯಪ್ರಾಪ್ತಜ್ಞಾನಮುತ್ಪದ್ಯತೇ' 'ಬ್ರಹ್ಮಾದಿಗಳಿಗೂ ಅಪ್ರಾಪ್ತಜ್ಞಾನ ಹುಟ್ಟುತ್ತದೆ'ಂದು ಈಶಾವಾಸ್ಯೋಪನಿಷತ್ತಿನ ಭಾಷ್ಯ-ಟೀಕೆಯಲ್ಲಿ ಹೇಳಿದ್ದಾರೆ. ಭಗವಂತನ ವಿಷಯದಲ್ಲಿ ಹೊಸಹೊಸಜ್ಞಾನವನ್ನು ಬ್ರಹ್ಮದೇವರು ನಿರಂತರವಾಗಿ ಪಡೆಯುತ್ತಲೇ ಇರುತ್ತಾರೆ.

ಪ್ರಶ್ನೆ - 'ಏವಂ ಜ್ಞಾನಂ ಪುನಃ ಪ್ರಾಪುರ್ದೇವಾಶ್ಚ ಋಷಯಸ್ತಥಾ' ಎಂದು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪುನಃಪದವನ್ನು ಹೇಳಿದ್ದರಿಂದ ದೇವತೆಗಳಿಗೂ ತಿರೋಹಿತವಾದ ಜ್ಞಾನವು ಲಭಿಸಿತ್ತೆಂದು ತಿಳಿಯುತ್ತದೆ. ಆದ್ದರಿಂದ ಬ್ರಹ್ಮದೇವರಿಗೂ ಸಹ ತಿರೋಹಿತಜ್ಞಾನದ ಪ್ರಾಪ್ತಿಯನ್ನು ಹೇಳಬೇಕಲ್ಲವೇ?

ಉತ್ತರ - 'ಏವಂ ಜ್ಞಾನಂ ಪುನಃ' ಎಂಬ ಮಾತಿಗೆ ಬ್ರಹ್ಮದೇವರ ವಿಷಯದಲ್ಲಿ ಮೊದಲೇ ಇರುವ ಜ್ಞಾನದಲ್ಲಿ ವಿಶೇಷದಾರ್ಢ್ಯ ತಂದುಕೊಟ್ಟರೆಂದು ಅರ್ಥೈಸಬೇಕು. ಉಳಿದ ದೇವತೆಗಳ ವಿಷಯದಲ್ಲಿ ತಿರೋಹಿತವಾದ ಜ್ಞಾನದ ಪ್ರಾಪ್ತಿಯಾಯಿತೆಂದು ಅರ್ಥೈಸಬೇಕು. ಏಕೆಂದರೆ ಆಚಾರ್ಯರು ಗೀತಾತಾತ್ಪರ್ಯದಲ್ಲಿ ಬ್ರಹ್ಮದೇವರನ್ನು ಬಿಟ್ಟು ಉಳಿದ ದೇವತೆಗಳಿಗಷ್ಟೇ ತಿರೋಹಿತ ಜ್ಞಾನದ ಪ್ರಾಪ್ತಿಯನ್ನು ಹೇಳಿದ್ದಾರೆ.

'ಉಪಾಸ್ಯೈವ ತು ಪಶ್ಯಂತಿ ನಾನ್ಯಥಾ ತು ಕಥಂಚನ ।
ಋಷೀನ್ ರಾಜ್ಞಸ್ತಥಾರಭ್ಯ ಪ್ರತಿಭಾऽಭ್ಯಧಿಕಾಃ ಕ್ರಮಾತ್ ।
ಯಾವದ್ ಬ್ರಹ್ಮಾ ಬ್ರಹ್ಮಣಸ್ತು ಪ್ರಾಯೋ ನಾಪ್ರತಿಭಾಸಿತಮ್॥''

ಗೀತಾತಾತ್ಪರ್ಯದಲ್ಲಿ ಉದಾಹರಿಸಿದ ಇದೇ ಶ್ಲೋಕದಲ್ಲಿ 'ಪ್ರಾಯಃ' ಎಂಬ ಶಬ್ದವಿದೆ. ಇದರಿಂದ ಬ್ರಹ್ಮದೇವರಿಗೂ ಸಹ ಕೆಲವೊಮ್ಮೆ ಜ್ಞಾನದ ತಿರೋಧಾನವಿದೆಯೆಂದು ತಿಳಿಯುತ್ತದೆ. ಮತ್ತು ಭಾಗವತ ದ್ವಿತೀಯಸ್ಕಂಧದಲ್ಲಿ 'ಏವಂ ಪುರಾ ಧಾರಣಯಾತ್ಮಯೋನಿಃ ನಷ್ಟಾಂ ಸ್ಮೃತಿಂ ಪ್ರತ್ಯವರುಹ್ಯ ತುಷ್ಯನ್' ಎಂದು ನಷ್ಟವಾದ ಸ್ಮೃತಿಯನ್ನು ಹೊಂದಿದರೆಂದು ಹೇಳಲಾಗಿದೆ. ಮತ್ತು 'ಅಪಾಶ್ರಿತಃ ಕಂಜಮು ಲೋಕತಂತ್ರಂ ನಾತ್ಮಾನಮದ್ಧಾವಿಧದಾದಿದೇವಃ' ಎಂದು ತೃತೀಯಸ್ಕಂಧದಲ್ಲಿ ಪರಮಾತ್ಮನನ್ನು ತಿಳಿಯಲಿಲ್ಲವೆಂದು ಅಜ್ಞಾನವನ್ನು ಹೇಳಿದ್ದಾರೆ. ಇದರಿಂದ ಬ್ರಹ್ಮದೇವರಿಗೂ ಜ್ಞಾನದ ತಿರೋಧಾನವಿದೆಯೆಂದು ತಿಳಿಯುವಾಗ ಬ್ರಹ್ಮದೇವರನ್ನು ಬಿಟ್ಟು ಉಳಿದ ದೇವತೆಗಳಲ್ಲಷ್ಟೇ ಜ್ಞಾನದ ತಿರೋಧಾನವೆಂದು ಹೇಗೆ ಹೇಳಿದಿರಿ.

ಉತ್ತರ - ಬ್ರಹ್ಮದೇವರಿಗೆ ಯಾವುದೇ ಕಾಲದಲ್ಲಿಯೂ ಜ್ಞಾನದ ತಿರೋಧಾನವಿಲ್ಲ. ಏಕೆಂದರೆ 'ಸೂರ್ಯಕ್ರೋ್ಷೇऽಭವತ್ ಕ್ಷೋಭಮಾತ್ರಕಂ ನೈವಾಜ್ಞಾನಂ ಯಥಾ ಸೂರ್ಯೇ ತಮೋ ನಾಸ್ತಿ ಕಥಂಚನ' ಎಂದು ಏಕಾದಶತಾತ್ಪರ್ಯದಲ್ಲಿ ಹೇಳಿದಂತೆ ಮಧ್ಯಾಹ್ನಕಾಲದ ಸೂರ್ಯನಲ್ಲಿ ಅಲ್ಪವಾದ ಚಲನೆಯಿದ್ದರೂ ತಮಸ್ಸು ಬರಲು ಹೇಗೆ ಸಾಧ್ಯವೇ ಇಲ್ಲವೋ ಅದರಂತೆ ಬ್ರಹ್ಮದೇವರಿಗೆ ಅಲ್ಪವಿಧವಾದ ಕ್ಷೋಭೆಯಿದ್ದರೂ ಅಜ್ಞಾನ ಬರಲು ಸಾಧ್ಯವೇ ಇಲ್ಲ. ಆ ಕ್ಷೋಭೆಯಾದರೂ ಸಹ ಕೇವಲ ವಿಷ್ಣುಪ್ರೀತಿಗಾಗಿ. ಅಂದರೆ ವಸ್ತುತಃ ಬ್ರಹ್ಮದೇವರಿಗೆ ಅಜ್ಞಾನವಿಲ್ಲ. ಆದರೆ ಕೆಲವು ಕ್ಷಣಗಳ ಕಾಲ ಅಜ್ಞಾನವಿರುವಂತೆ ನಟನೆ ಮಾಡುತ್ತಾರೆ. ಈ ನಟನೆಯು ವಿಷ್ಣುಪ್ರೀತಿಗಾಗಷ್ಟೇ ಹೊರತು ಅಸಾಮರ್ಥ್ಯದಿಂದಲ್ಲ.

''ಅಜ್ಞಾನಂ ಚ ಚತುರ್ವಾರಂ ದ್ವಿವಾರಂ ಭಯಮೇವ ಚ ।
ಶೋಕೋಪಿ ತಾವನ್ನಾನ್ಯತ್ರ ಕದಾಚಿತ್ ಬ್ರಹ್ಮಣೋ ಭವೇತ್ ॥''

ಕೆಲವು ಕ್ಷಣದಲ್ಲಷ್ಟೇ ಇರುವ ಅಜ್ಞಾನ ಭಯ ಶೋಕ ಮೊದಲಾದವುಗಳು ಭಗವತ್ಪ್ರೀತಿಯ ಜಿನ್ನತ್ಯಕ್ಕಾಗಿ ಎಂದು ಷಷ್ಠಸ್ಕಂಧದ ತಾತ್ಪರ್ಯದಲ್ಲಿ ನಿರ್ಣಯಿಸಿದ್ದಾರೆ. (ಅಜ್ಞಾನಾದಿಗಳಿಗೆ ಅಭಿಮಾನಿ ದೇವತೆ ದುರ್ಗಾರೂಪಿಯಾದ ಲಕ್ಷ್ಮಿ. ಅವಳಿಗೂ ಗೌರವ ನೀಡುವುದಕ್ಕಾಗಿ ಅಜ್ಞಾನಾದಿಗಳನ್ನು ಕೆಲವು ಕ್ಷಣಗಳ ಕಾಲ ತಮ್ಮಲ್ಲಿರುವಂತೆ ನಟಿಸುತ್ತಾರೆ.) ಶ್ರವಣಾದಿಗಳನ್ನೂ ಸಹ ವಿಷ್ಣುಪ್ರೀತಿಗಾಗಿಯೇ ನಡೆಸುತ್ತಾರೆ. 'ವಿಷ್ಣುಪ್ರೀತ್ಯರ್ಥಮೇವಾಸ್ಯ ಶ್ರೋತವ್ಯಂ ಪ್ರಾಯಶೋ ಭವೇತ್' (ಗೀತಾತಾತ್ಪರ್ಯ).

ವಸ್ತುತಃ ಬ್ರಹ್ಮದೇವರನ್ನು ಬಿಟ್ಟು ಉಳಿದದೇವತೆಗಳಿಗೂ ಹಿಂದೆ ಹೇಳಿದ ಪ್ರಕಾರ ಜ್ಞಾನತಿರೋಧಾನವನ್ನು ಹೇಳಲಾಗದು. ಗೌತಮರ ಶಾಪವಾಗಲೀ ಕಾಲಪ್ರಭಾವ- ವಾಗಲೀ ದೇವಲೋಕದಲ್ಲಿ ಬರಲು ಸಾಧ್ಯವಿಲ್ಲ. ಆದರೆ ಬ್ರಹ್ಮವರದಿಂದ ದೃಪ್ತರಾದ ಕಲಿ ಮೊದಲಾದ ದೈತ್ಯರ ಆವೇಶದಿಂದ ಜ್ಞಾನವು ತಿರೋಧಾನವಾಗಬಹುದು. ದೈತ್ಯಾವೇಶವು ಹೋದಾಗ ಪುನಃ ಜ್ಞಾನದ ಪ್ರಾಪ್ತಿಯಾಗಬಹುದು. ಇದನ್ನೇ ತಾತ್ಪರ್ಯನಿರ್ಣಯದಲ್ಲಿ ಆಚಾರ್ಯರು ಹೇಳಿದ್ದಾರೆ.

''ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ ನಿಬಾಧತೇಽಸ್ಮಾನ್ ಸಕಲಾ ಪ್ರಜಾಶ್ಚ।
ಅಜ್ಞಾನಮಿಥ್ಯಾಮತಿರೂಪತೋಧಿಸೌ ಪ್ರವಿಶ್ಯ ಸಜ್ಞಾನವಿರುದ್ಧರೂಪಃ ॥' (೧೦/೩೬)

(ಯಥಾರ್ಥಜ್ಞಾನಕ್ಕೆ ವಿರುದ್ಧರೂಪನಾದ ಕಲಿಯು ಬ್ರಹ್ಮವರದಿಂದ ದೃಪ್ತನಾಗಿ ಅಜ್ಞಾನ ಹಾಗೂ ಮಿಥ್ಯಾಜ್ಞಾನಗಳಿಂದ ನಮ್ಮೆಲ್ಲ ಪ್ರಜೆಗಳನ್ನು ಈಗ ಪ್ರವೇಶಮಾಡಿ ಪೀಡಿಸುತ್ತಿದ್ದಾನೆ.

''ಅಸೌ ಗಿರೀಶಾದಿಮನೋಽನುಶಾಯೀ ಕಲಿರ್ಮಮಾರಾಶು ಸುವಾಙ್ಮಯೈಃ ಶರೈಃ।
ನಿಕೃಂತಶೀರ್ಷೋ ಭಗವನ್ಮುಖೇರಿತೈಃ ಸುರಾಶ್ಚ ಸಜ್ಞಾನಸುಧಾರಸಂ ಪಪುಃ'' (೧೦/೬೦)

(ರುದ್ರಾದಿಗಳ ಮನಸ್ಸಿನಲ್ಲಿ ಕಲಿಯು ಮನೆಮಾಡಿದ್ದ. ಭಗವಂತನ ಮುಖದಿಂದ ಹೊರಹೊಮ್ಮಿದ ವಾಙ್ಮಯಬಾಣಗಳಿಂದ ಇವನ ತಲೆಯು ಛಿನ್ನವಾಗಿ ಮರಣಹೊಂದಿದ. ಆವಾಗ ದೇವತೆಗಳು ಒಳ್ಳೆಯ ಜ್ಞಾನಾಮೃತರಸವನ್ನು ಪಾನಮಾಡಿದರು.) ಈ ಪ್ರಮಾಣದ ಆಧಾರದಿಂದ ದೇವತೆಗಳಿಗೆ ಜ್ಞಾನದ ತಿರೋಧಾನವು ಕಲ್ಯಾವೇಶದಿಂದ ಉಂಟಾಗಬಹುದೆಂದು ತಿಳಿಯುತ್ತದೆ. ಇದಕ್ಕನುಸಾರಿಯಾಗಿಯೇ ಹಿಂದಿನ ಮಾತುಗಳನ್ನು ವ್ಯಾಖ್ಯಾನಿಸಬೇಕು. ದ್ವಾಪರಕಾಲದ ಪ್ರಭಾವ ಹಾಗೂ ಗೌತಮರ ಶಾಪದ ಪ್ರಭಾವವು ಭೂಲೋಕದಲ್ಲಿರುವ ಸಜ್ಜನರ ವಿಷಯದಲ್ಲಷ್ಟೇ ಎಂದು ಭಾವಿಸಬೇಕು.

೪. ಟೀಕೆಯಲ್ಲಿ ಪಾಠಶೋಧನೆಯ ಬಗ್ಗೆಯೂ ರಾಯರು ಅನೇಕ ಕಡೆ ಗಮನಹರಿಸಿದ್ದಾರೆ. ಜನ್ಮಾಧಿಕರಣದಲ್ಲಿ ಒಂದು ಪ್ರಸಂಗ ಹೀಗಿದೆ -

ಇಲ್ಲಿ ಕೆಲವೊಂದು ಕೋಶದಲ್ಲಿ 'ಜಾತ್ಯಾದೇಃ ಮುಖ್ಯತಃ ಅಜಿಜ್ಞಾಸ್ಯತ್ವಾತ್ ದೇಹಾತ್ಮ-ವಿವೇಕಸ್ಯಾವಶ್ಯಕತ್ವಾತ್' ಎಂಬ ವಾಕ್ಯವು ಟೀಕಾಪಾಠವಾಗಿ ಬಂದಿದೆ. ಇದು ಇಲ್ಲಿಗೆ ಸಂಬಂಧಪಟ್ಟ ವಾಕ್ಯವಲ್ಲ. 'ತಸ್ಯ ಚ' ಇತ್ಯಾದಿ ಉತ್ತರವಾಕ್ಯಕ್ಕೆ ಇದು ಹೊಂದಾಣಿಕೆ-ಯಾಗುವುದಿಲ್ಲ. ಹಾಗೆಯೇ ಚಂದ್ರಿಕಾವಾಕ್ಯಕ್ಕೂ ಕೂಡ ಹೊಂದಾಣಿಕೆಯಾಗುವುದಿಲ್ಲ. ಆದ್ದರಿಂದ ನ್ಯಾಯವಿವರಣಟೀಕಾದಿ ಗ್ರಂಥಗಳಲ್ಲಿ ಇರುವ ಈ ವಾಕ್ಯವನ್ನು ಕೆಲವರು ಇಲ್ಲಿ ಸೇರಿಸಿದ್ದಾರೆ. ಹೆಚ್ಚಿನ ಕೋಶಗಳಲ್ಲಿ ಈ ವಾಕ್ಯವು ಇರುವುದಿಲ್ಲ ಎಂಬುದಾಗಿ ಜ್ಞಾನಿಗಳು ಹೇಳುತ್ತಿದ್ದಾರೆ.

ಹೀಗೆ ಗುರುಸಾರ್ವಭೌಮರು ಭಾವದೀಪದಲ್ಲಿ ಅಪೂರ್ವವಿಷಯಗಳನ್ನು ಹೆಜ್ಜೆ-ಹೆಜ್ಜೆಗೂ ತಿಳಿಸಿದ್ದಾರೆ. ತತ್ವಪ್ರಕಾಶಿಕೆಯನ್ನು ಪರಿಪೂರ್ಣವಾಗಿ ಅರ್ಥಮಾಡಿಸಿದ್ದಾರೆ. ಮತ್ತು ಅರ್ಥವಾಗದ ಸಂದರ್ಭಗಳಲ್ಲಿ ಸುಲಲಿತವಾಗಿ ಅರ್ಥವಾಗುವಂತೆ ವ್ಯಾಖ್ಯಾನ ಮಾಡಿದ್ದಾರೆ. ಇಂಥ ಕಾಮಧೇನುಗಳಿಗೆ ಅನಂತ ನಮನಗಳು.

## *ಈ ಪುಸ್ತಕದ ಬಗ್ಗೆ*

ಈ ಪುಸ್ತಕದಲ್ಲಿ ಕಸ್ತೂರಿ ಕನ್ನಡದಲ್ಲಿ ಭಾವದೀಪದ ಅನುವಾದ ಮಾಡಲಾಗಿದೆ. ಆದರೆ, ಭಾವದೀಪದ ಅನುವಾದ ಪರಿಪೂರ್ಣಚಂದ್ರಿಕೆಯಲ್ಲಿಯೇ ಇದೆ. ಪುನಃ ಈ ಪುಸ್ತಕವೇಕೆ....?

ಹೌದು! ಆದರೆ ಈಗೊಮ್ಮೆ ಪರಿಪೂರ್ಣಚಂದ್ರಿಕಾ ಪುಸ್ತಕವನ್ನು ಹಿಡಿದು ತುಲನೆಮಾಡಿ ನೋಡಿ.....

ಹೌದು... ಎಲ್ಲೆಡೆ ವ್ಯತ್ಯಾಸವಿದೆ.... ಹೀಗೇಕೆ ವ್ಯತ್ಯಾಸ....?

ವ್ಯತ್ಯಾಸಕ್ಕೆ ಕಾರಣವಿದೆ.... ಅಲ್ಲಿ ತಾತ್ಪರ್ಯ ಚಂದ್ರಿಕೆ ಹಾಗೂ ಪ್ರಕಾಶ ಟಿಪ್ಪಣಿಗಳಿಗೆ ಹೆಚ್ಚು ಮಹತ್ವ. ಅವುಗಳ ಅಧ್ಯಯನಕ್ಕೆ ಅನುಕೂಲವಾಗಲು ಭಾವದೀಪ ಸೇರಿಕೊಂಡಿದೆ. ಭಾವದೀಪದ ಪಂಕ್ತಿಗಳ ಅನುವಾದ ಅಲ್ಲಿ ಸಿಗದು. ಕೆಲವೊಮ್ಮೆ ಸಿಗುವುದಾದರೂ ಸಾರಾತ್ಮಕವಾದ ಅನುವಾದವೇ ಜಾಸ್ತಿ. ಇಲ್ಲಿ ಪ್ರತಿಯೊಂದು ಪಂಕ್ತಿಗಳಿಗೂ ಅನುವಾದವಿದೆ.

ಪ್ರತಿಯೊಂದು ವಿಷಯಗಳಿಗೂ ''ಶಿರೋನಾಮ'' ರಾರಾಜಿಸುತ್ತಿದೆ.... ವಿವರಣೆ ಇದೆ.... ಒಟ್ಟು ಸಾರಾಂಶವಿದೆ.... ವಿಶೇಷ ವಿಚಾರವಿದೆ .... ವಿಶ್ಲೇಷಣೆ ಇದೆ .... ಇನ್ನೂ ಹೆಚ್ಚು ವಿಚಾರ ಮಾಡಬೇಕೆಂಬ ಬುದ್ಧಿವಿಕಾಸಕ್ಕೆ ವಿವಿಧ ಮಾರ್ಗಗಳಿವೆ....

ಇದೆಲ್ಲಾ ಸರಿ; ಆದರೆ, ವಿಶೇಷವಿಚಾರ ವಿವರಣೆಗಳು ಅನುವಾದಕರ ಸ್ವಂತ ವಿಚಾರವೋ....? ಅಥವಾ, ಟಿಪ್ಪಣಿಗಳ ಆಧಾರದಲ್ಲಿ ಬರೆದದ್ದೋ....?

ಹೌದು....ಈ ಪ್ರಶ್ನೆ ಬಹಳ ಪ್ರಸುತ.... ಶ್ರೀರಘೂತ್ತಮತೀರ್ಥರ ಭಾವಬೋಧ, ಶರ್ಕರಾಶ್ರೀನಿವಾಸಾಚಾರ್ಯರ ವಾಕ್ಯಾರ್ಥಮಂಜರಿ ಹಾಗೂ ಉಳಿದ ಟಿಪ್ಪಣಿಗಳ ಆಧಾರದಲ್ಲಿ ''ವಿವರಣೆ'' ಬರೆಯಲಾಗಿದೆ. ತಾತ್ಪರ್ಯಚಂದ್ರಿಕಾ ಹಾಗೂ ಪ್ರಕಾಶ ಟಿಪ್ಪಣಿಗಳ ಆಧಾರದಲ್ಲಿ ''ವಿಶೇಷವಿಚಾರ'' ಬರೆಯಲಾಗಿದೆ.

ಓಹೋ....!! ಹಾಗಿದ್ದರೆ ಚಂದ್ರಿಕಾ ಹಾಗೂ ಪ್ರಕಾಶ ಸೇರಿದಂತೆ ಎಲ್ಲಾ ಟಿಪ್ಪಣಿಗಳು ಇದರಲ್ಲೇ ಸೇರಿವೆ....ಅಲ್ಲವೇ...!!

ಸರ್ವಥಾ ಇಲ್ಲ. ಬೇರೆ ಟಿಪ್ಪಣಿಗಳ ಕೆಲವು ಭಾಗಗಳ ವಿಚಾರ ಮಾತ್ರ ಇಲ್ಲಿದೆ. ಎಲ್ಲವೂ ಇಲ್ಲ. ಆಯಾ ಟಿಪ್ಪಣಿಗಳನ್ನು ಆಮೂಲಾಗ್ರವಾಗಿ ಓದಿದಾಗಲೇ ಅವುಗಳ ಸ್ವಾರಸ್ಯವನ್ನು ಅನುಭವಿಸಲು ಸಾಧ್ಯ.

ಭಾವದೀಪ ಗ್ರಂಥ ಕೆಲವೊಮ್ಮೆ ಬಲು ಸುಲಭ ಕೆಲವೊಮ್ಮೆ ಬಲು ಕಠಿಣ. ಸುಲಭವಿದ್ದಾಗ ಹೆಚ್ಚು ವಿವರಣೆ ಅಥವಾ ವಿಶೇಷ ವಿಚಾರಗಳನ್ನು ಈ ಪುಸ್ತಕದಲ್ಲಿ ನೀಡಿರುವುದಿಲ್ಲ ಎಲ್ಲಿ ವಿವರಣೆ ಮಾಡಬಹುದೋ, ಎಲ್ಲಿ ವಿಶೇಷ ವಿಚಾರ ನೀಡಬಹುದೋ ಅಲ್ಲಿ ವಿವರಣೆ ಹಾಗೂ ವಿಶೇಷ ವಿಚಾರಗಳನ್ನು ಬರೆಯಲಾಗಿದೆ. ಎಷ್ಟು ಓದಿದರೂ ಮನಸ್ಸಿಗೆ ಕಸಿವಿಸಿ ಹಾಗೇ ಉಳಿದರೆ ''ಒಟ್ಟು ಅಭಿಪ್ರಾಯ'' ಎಂದು ಅಲ್ಲಲ್ಲಿ ಬರೆಯಲಾಗಿದೆ. ಆದಷ್ಟೂ ಸುಲಭ ಶೈಲಿಯಲ್ಲಿ ಸರಳ ಕನ್ನಡದಲ್ಲಿ ಬರೆಯಲು ಪ್ರಯತ್ನಿಸಲಾಗಿದೆ. ಎಷ್ಟೇ ಆದರೂ ವೇದಾಂತದ ಪಾರಿಭಾಷಿಕ ಶಬ್ದಗಳ ಚೌಕಟ್ಟಿನಿಂದ ಹೊರಬಂದು ಬರೆಯಲು ಸಾಧ್ಯವಿಲ್ಲ ....ಅಲ್ಲವೇ...!!

ಇದೆಲ್ಲಾ ಸರಿ.... ಎಷ್ಟು ದಪ್ಪ ಅಕ್ಷರ....? ಎಷ್ಟು ಮಧ್ಯದಲ್ಲಿ ಖಾಲಿ ಜಾಗಗಳು....? ಎಷ್ಟು ಶಿರೋನಾಮೆಗಳು....? ಎಷ್ಟು ಸಂಪುಟಗಳು....? ಎಷ್ಟು ದುಬಾರಿ ಹಾಳೆಗಳು....? ಇನ್ನೂ ಸಣ್ಣದಾಗಿ ಮುದ್ರಿಸಿ ಎಂಟನ್ನು ಕಿರುಗಾತ್ರದಲ್ಲಿ ನಾಲ್ಕು ಸಂಪುಟಗಳಲ್ಲಿ ಮುಕ್ತಾಯ ಮಾಡಬಹುದಾಗಿತ್ತು....? ಇದೆಲ್ಲಾ ವ್ಯರ್ಥವಲ್ಲವೇ....?

ಹೌದು....!! ಯಾವುದು ವ್ಯರ್ಥ....!! ಯಾವುದು ಸಾರ್ಥಕ....!! ನಿರ್ಧಾರವಾಗುವುದು ಬಾಹ್ಯದಿಂದಲ್ಲ; ಅಂತರಂಗದ ಭಾವದಿಂದ. ಒಬ್ಬನಿಗೆ ಸಾರ್ಥಕವಾದದ್ದು ಇನ್ನೊಬ್ಬನಿಗೆ ನಿರರ್ಥಕ ಎನಿಸಬಹುದು ಅವರವರ ಭಾವನೆಯೇ ಅವರವರ ಪರಮಾರ್ಥ. ಒಬ್ಬನಿಗೆ ಕಂಡಿರುವ ಸತ್ಯದ ಅಂಶದಲ್ಲಿ ಇನ್ನೊಬ್ಬನಿಗೆ ಸುಳ್ಳಿನ ಅಂಶ ಕಾಣಬಹುದು. ಇನ್ನೊಬ್ಬನ ಭಾವನೆಯಲ್ಲಿ ಮತ್ತೊಬ್ಬನಿಗೆ ಸುಳ್ಳಿನ ಅಂಶ ಕಾಣಬಹುದು. ಹೀಗಿರುವಾಗ ಇದು ಹೀಗೆ ಎಂದು ನಿರ್ಧರಿಸುವುದು ಹೇಗೆ ಸಾಧ್ಯ....? ಭಾವುಕರ ಲೆಕ್ಕಾಚಾರದ ಮುಂದೆ ಅರ್ಥಶಾಸ್ತ್ರಜ್ಞರ ಆರ್ಥಿಕ ಲೆಕ್ಕಾಚಾರ ತಲೆಕೆಳಗಾಗಿಬಿಡುವುದುಂಟು. ಭಾವದೀಪ ರಾಯರ ಪ್ರತಿಬಂಬ. ಗ್ರಂಥದ ವೈಭವವೇ ರಾಯರ ಸೇವೆ.

ಈ ಪುಸ್ತಕ ಯಾರಿಗೂ ಭಾರವಲ್ಲ, ಬಲು ಹಗುರ. ಧನದ ವಿನಿಯೋಗವೂ ಹಗುರ. ಅಕ್ಷರಗಳು ಬಲು ಸುಂದರ ಮತ್ತು ದಪ್ಪ. ಎಷ್ಟೇ ವರ್ಷಗಳಾದರೂ ಹಾಳಾಗದ ಹಾಳೆ. ಯೋಜನೆಯೂ ಕೂಡ ಬಲು ಆಕರ್ಷಕ.

ಇಷ್ಟೆಲ್ಲಾ ಅನುಕೂಲ ಮಾಡುತ್ತಿರುವವರು ಯಾರು...? ಇಂತಹ ಒಳ್ಳೆ ವಿಚಾರ ಮಾಡಿದವರು ಯಾರು....? ಗೊಂಡಾರಣ್ಯದಲ್ಲಿ ದಿಕ್ಕುತಪ್ಪಿದವರಿಗೆ ದಾರಿ ತೋರಲು ಬಂದ ಆಪ್ತರು ಯಾರು....?

## ಶ್ರೀಸುಬುಧೇಂದ್ರತೀರ್ಥ ಶ್ರೀಪಾದರು

ಬೇರೆ ಯಾರೂ ಅಲ್ಲ.... !! ಶ್ರೀರಾಘವೇಂದ್ರಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಸುಬುಧೇಂದ್ರತೀರ್ಥ ಶ್ರೀಪಾದರು.

ಇವರ ಬಗ್ಗೆ ಎಲ್ಲರಿಗೂ ತಿಳಿದಿದೆ. ತಿಳಿದಿರುವುದಷ್ಟೇ ಅಲ್ಲ, ಕಲ್ಪನೆಗೂ ಮೀರಿದ ಇವರ ಸಾಧನೆಗಳನ್ನು ಕಂಡು ಎಲ್ಲರೂ ಅಚ್ಚರಿ ಪಟ್ಟಿದ್ದಾರೆ. ಇಂದಿನ ದಿವಸಗಳಲ್ಲಿ ಅನೇಕ ಬೃಹತ್ ಕಾರ್ಯಗಳನ್ನು ಹಮ್ಮಿಕೊಂಡು ಲೋಕರಕ್ಷಣೆಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಸತ್ಯ ಹಾಗೂ ಪ್ರಾಮಾಣಿಕತೆಗಳ ಬಗ್ಗೆ ಹೋರಾಟ ನಡೆಸಿ ರಾಯರ ಸೇವೆಯಲ್ಲಿ ತಲ್ಲೀನರಾಗಿರುವರು. ಪ್ರಕೃತ ಈ ಭಾವದೀಪ ಯೋಜನೆಯನ್ನು ಹಮ್ಮಿಕೊಂಡು ಬುಭುತ್ಸುಗಳಿಗೆ ಅತ್ಯುಪಯುಕ್ತವಾದ ಕಾರ್ಯವನ್ನು ಮಾಡುತ್ತಿರುವರು. ಸಜ್ಜನ ಪ್ರಪಂಚಕ್ಕೆ ಆಶಾವಾದಿಗಳಾಗಿ ವಿರಾಜಿಸುತ್ತಿರುವರು.

ಶ್ರೀಗಳಿಗೆ ಪ್ರತಿಯೊಂದು ಕಾರ್ಯಗಳಲ್ಲಿರುವ ಉತ್ಸಾಹ ಅದಮ್ಯ... ಅದರಲ್ಲಿಯೂ ಜ್ಞಾನಕಾರ್ಯದಲ್ಲಿ ಎಲ್ಲಿಲ್ಲದ ಒಲವು.... ನ್ಯಾಯಸುಧಾದಿ ಗ್ರಂಥಗಳ ಪಾಠಪ್ರವಚನದಲ್ಲಿ

ಬಲು ಶ್ರದ್ಧೆ. ಅಕೃತ್ರಿಮ.... ಸರಳತೆ.... ಅವಿಶಂಕೆ... ಮೊದಲಾದ ಗುಣಗಳಿಂದ ಶ್ರೀಗಳು ಬಲು ಪ್ರಸಿದ್ಧರು.

ಭಾವದೀಪದ ಈ ಬೃಹತ್ ಕಾರ್ಯವು ನನ್ನಿಂದ ಸಾಧ್ಯವೋ....? ಎಂಬ ಸಂಶಯದಲ್ಲಿ ಅದೊಂದು ದಿವಸ ಮಂತ್ರಾಲಯದಲ್ಲಿ ರಾಯರ ಎದುರು ನಿಂತಿದ್ದೆ. ಅದೇ ಕ್ಷಣದಲ್ಲಿ ರಾಯರ ಪೂಜೆ ಮುಗಿಸಿ ಬಂದ ಶ್ರೀಗಳು ನೇರ ನನ್ನ ಬಳಿ ಬಂದು ''ನೀವು ಅಂದುಕೊಂಡ ಭಾವದೀಪದ ಕಾರ್ಯ ನಿರ್ವಿಘ್ನವಾಗಿ ನೆರವೇರುತ್ತದೆ'' ಎಂದು ಗಟ್ಟಿಯಾಗಿ ಹೇಳಿ ಕೈತುಂಬ ಫಲಮಂತ್ರಾಕ್ಷತೆ ನೀಡಿದರು. ಆ ಕ್ಷಣದಲ್ಲಿ ನಾನು ದಿಗ್ಭ್ರಾಂತನಾದೆ...!! ಶ್ರೀಗಳ... ಮಾತು....!! ಮೈ ನಿಮಿರೇಳಿಸಿತು....!! ಕೆಲವೇ ಗಂಟೆಗಳಲ್ಲಿ ಭಾವದೀಪದ ಯೋಜನೆಯ ಬಗ್ಗೆ ಇದ್ದ ಸಮಸ್ಯೆಗಳೆಲ್ಲಾ ಪರಿಹಾರವಾಗಿ ರಾಜಮಾರ್ಗ ನಿರ್ಮಾಣವಾಯಿತು.

ಮತ್ತೊಂದು ರೋಮಾಂಚನ ಪ್ರಸಂಗ - ಭಾವದೀಪಗ್ರಂಥದ ಅನುವಾದವನ್ನು ಹಿಡಿದುಕೊಂಡು ಶ್ರೀಗಳ ಬಳಿ ತೆರಳಿದ್ದೆ. ವಿಚಾರ ಮಾಡದೆ ಬಲು ವಿಶ್ವಾಸದಲ್ಲಿ ಶ್ರೀಮಠದ ವತಿಯಿಂದ ಪುಸ್ತಕವನ್ನು ಮುದ್ರಿಸುತ್ತೇನೆಂದು ಹೇಳಿದರು. ಆ ಸಂದರ್ಭದಲ್ಲಿ ಅಲ್ಲಿಯೇ ಕುಳಿತ ಶ್ರೀಗಳ ಆಪ್ತರೊಬ್ಬರು ಭಾವದೀಪಗ್ರಂಥದ ಪ್ರಕಾಶನಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ದಾನಿಗಳ ಮೂಲಕ ವಿಪ್ರಾಡು ಮಾಡುವುದಾಗಿ ತಿಳಿಸಿದರು. ತಕ್ಷಣ ಶ್ರೀಗಳು ''ಬೇಡ, ನಮ್ಮ ಪಾದಕಾಣಿಕೆಯಿಂದಲೇ ಪ್ರಕಾಶನವಾಗಲಿ'' ಎಂದು ಹೇಳಿ ಕೂಡಲೇ ಪಾದಕಾಣಿಕೆಯನ್ನು ಪುಸ್ತಕ ಮುದ್ರಣದ ವೆಚ್ಚಕ್ಕೆಂದು ನನ್ನ ಕೈಗೆ ನೀಡಿ ಆಶೀರ್ವದಿಸಿ ಕಳುಹಿಸಿದರು.

ಈ ಒಂದು ಘಟನೆಯಿಂದ ಶ್ರೀಗಳಲ್ಲಿರುವ ಔದಾರ್ಯ, ಅಪ್ರತಿಮ ವಿಶ್ವಾಸ, ರಾಯರ ಗ್ರಂಥಗಳ ಬಗ್ಗೆ ಶ್ರದ್ಧೆ, ಜ್ಞಾನಕಾರ್ಯದಲ್ಲಿ ಒಲವು, ಸತ್ಕಾರ್ಯಗಳನ್ನು ವಿನಾಕಾರಣ ಮುಂದೂಡದಿರುವಿಕೆ, ಪ್ರತಿಭೆ-ವಿದ್ಯೆಗಳ ಪ್ರೋತ್ಸಾಹ, ನಿರಹಂಕಾರ-ಸರಳ-ಸಜ್ಜನಿಕೆಗಳನ್ನು ಪ್ರತ್ಯಕ್ಷವಾಗಿ ಅನುಭವಿಸುವಂತಾಯಿತು. ಆದ್ದರಿಂದಲೇ ರಾಯರು ಪವಾಡತುಲ್ಯವಾಗಿ ಇವರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿರುವುದರಲ್ಲಿ ಸಂದೇಹವಿಲ್ಲ ಮತ್ತು ಮುಂದಿನ ದಿವಸಗಳಲ್ಲಿ ಇವರಿಂದ ವ್ಯಾಪಕವಾಗಿ ಜ್ಞಾನಕಾರ್ಯ ನಡೆಯುವುದರಲ್ಲಿಯೂ ಸಂದೇಹವಿಲ್ಲ.

ಪ್ರಸ್ತುತ ಈ ಬೃಹತ್‌ಕಾರ್ಯದ ಸಂಪೂರ್ಣ ಆತ್ಮಶಕ್ತಿ ಶ್ರೀಗಳವರೇ ಆಗಿರುತ್ತಾರೆ. ಲೇಖಕನು ಲೇಖನಿಯಿಂದ ಅಕ್ಷರಗಳನ್ನು ಬರೆಯುವಂತೆ ಶ್ರೀಗಳು ಲೇಖಕರಾಗಿ ಈ ಗ್ರಂಥವನ್ನು

ಬರೆಸಬೇಕು. ನನ್ನದು ಲೇಖನಿಯ ಪಾತ್ರ ಮಾತ್ರ. ನಮಗೆಲ್ಲಾ ಅತ್ಯಂತ ಹೆಮ್ಮೆಯ ಗುರುಗಳಾದ ಪರಮಪೂಜ್ಯ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರಿಗೆ ಅನಂತ ನಮಸ್ಕಾರಗಳು ಹಾಗೂ ಕೃತಜ್ಞತೆಗಳು.

## ಕೃತಜ್ಞತೆ

ಅಶನ ವಸನಗಳ ಜೊತೆ ವಿದ್ಯಾದಾನ ಮಾಡಿ ವ್ಯಕ್ತಿತ್ವವನ್ನು ರೂಪಿಸಿದ ನೆಚ್ಚಿನ ವಿದ್ಯಾಗುರುಗಳಾದ ಶ್ರೀವಿಶ್ವೇಶತೀರ್ಥರ ಚರಣಕಮಲಗಳಲ್ಲಿ ಭಕ್ತಿಯ ಭಾರದಿಂದ ಸದಾ ಆನಮಿಪೆ.

ಶ್ರೀಪಾದಪುತ್ರರಾದ ಪಂಡಿತಮೂರ್ಧನ್ಯರಾದ ಪೂಜ್ಯ ।। ಶ್ರೀ ರಾಜಾ ಎಸ್. ಗಿರಿ ಆಚಾರ್ಯರು ಪುಸ್ತಕಪ್ರಕಾಶನಕ್ಕೆ ಸಂಪೂರ್ಣ ಪ್ರೋತ್ಸಾಹ ನೀಡಿ ಹರಸಿದ್ದಾರೆ. ಸುಂದರ ಮುನ್ನುಡಿ ಬರೆದು ಯೋಜನೆಗೆ ಚಾಲನೆ ನೀಡಿದ್ದಾರೆ. ಇವರಿಗೆ ನನ್ನ ಅನಂತ ಕೃತಜ್ಞತಾಪೂರ್ವಕ ನಮನಗಳು.

ನಿವೃತ್ತ ಕುಲಪತಿಗಳೂ ಪ್ರಚಂಡ ವಿದ್ಯಾವಂತರೂ ಆದ ಸರಳ ಸಜ್ಜನಿಕೆಯುಳ್ಳ ಗುರುಸಾರ್ವಭೌಮಸಂಶೋಧನಾ ಮಂದಿರದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ।। ವಾದಿರಾಜಾಚಾರ್ಯ ಆರ್. ಪಂಚಮುಖಿ ಇವರು ಆಂಗ್ಲಭಾಷೆಯಲ್ಲಿ ಪ್ರಾಸ್ತಾವಿಕ ಬರೆದು ನೀಡಿದ್ದಾರೆ. ಬಹಳ ಅಭಿಮಾನದಿಂದ ಈ ಪುಸ್ತಕವನ್ನು ಅವಲೋಕಿಸಿ ಸಂತೋಷಪಟ್ಟಿದ್ದಾರೆ. ಇವರಿಗೂ ನನ್ನ ನಮನಗಳು.

ವಿಶೇಷವಿಚಾರ ಬರೆಯಲು ಗಹನವಿಷಯಗಳನ್ನು ಹಾಗೂ ಅಪೂರ್ವವಿಷಯಗಳನ್ನು ಸುಲಲಿತವಾಗಿ ತಿಳಿಸಿಕೊಟ್ಟ ಎಲೆಮರೆ ಹಣ್ಣಾಗಿ ಸಾಧನೆಯಲ್ಲಿ ಮುಳುಗಿದ ವಿದ್ವಾನ್ ಶ್ರೀರಂಗಂ ಆರ್. ವೇಂಕಟೇಶಾಚಾರ್ಯರಿಗೆ ಅನಂತ ನಮಸ್ಕಾರಗಳು. ಇವರ ಉಪಕಾರ ಎಂದೂ ಯಾವ ಕ್ಷಣದಲ್ಲಿಯೂ ಮರೆಯಲಾರೆ.

ಜನ್ಮಾಧಿಕರಣದಿಂದ ಆನಂದಮಯಾಧಿಕರಣದ ತನಕ ಮಾಡಿರುವ ಭಾವದೀಪದ ಅನುವಾದ ಕಾರ್ಯದಲ್ಲಿ ಸಂಪೂರ್ಣ ಉಪಕರಿಸಿದ ವಿದ್ವಾನ್ ಎನ್. ರವಿಕುಮಾರಾಚಾರ್ಯರ ಉಪಕಾರ ನೆನೆದು ಕೃತಜ್ಞತೆ ಸಲ್ಲಿಸುವೆ.

ಜನ್ಮದಾತರಾದ ಪಿ. ಎಸ್. ನಾಗರಾಜರಾವ್ ಹಾಗೂ ಕುಂ।। ಸೌ।। ಪರಿಮಳ ಇವರ ಪ್ರೋತ್ಸಾಹ, ವಾತ್ಸಲ್ಯ, ಉತ್ಸಾಹಗಳಿಗೆ ನಿರಂತರ ನಮಿಸುವೆ. ಹಾಗೂ ಹಗಲು ರಾತ್ರಿ ಕುಳಿತು ಬರೆಯಲು ಸಂಪೂರ್ಣ ಅನುಕೂಲ ಮಾಡಿಕೊಟ್ಟು ಕೆಲವು ಭಾಗ ಅಕ್ಷರ ಜೋಡಣೆಯಲ್ಲಿಯೂ

ಸಹಕರಿಸಿದ ಮನಸ್ಸಿಗೆ ಶಕ್ತಿ ತುಂಬಿದ ಅಣ್ಣ ಶ್ರೀನಿವಾಸನಿಗೆ ಕೃತಜ್ಞತೆಯನ್ನು ಸಲ್ಲಿಸುವೆ. ನನ್ನ ಪ್ರತಿಯೊಂದು ಕಾರ್ಯಗಳ ವಿಘ್ನಪರಿಹಾರಕರಾದ ಅಣ್ಣ ವಿಜಯೀಂದ್ರಾಚಾರ್ಯರಿಗೂ ಕೃತಜ್ಞತೆಯ ನಮನಗಳು.

ಪವನ್‌ಪ್ರಿಂಟರ್ಸ್ ಮಾಲೀಕ ಮಂಜುನಾಥ ಬಹಳ ಶ್ರಮಪಟ್ಟು ಅಲ್ಪಕಾಲದಲ್ಲಿ ಸುಂದರವಾಗಿ ಹಾಗೂ ಆಚ್ಚುಕಟ್ಟಾಗಿ ಪುಸ್ತಕವನ್ನು ಮುದ್ರಣ ಮಾಡಿ ನೀಡಿರುವರು. ಇವರಿಗೆ ಶ್ರೀರಾಘವೇಂದ್ರಗುರುಸಾರ್ವಭೌಮರು ಇನ್ನೂ ಹೆಚ್ಚಿನ ಶಕ್ತಿ ತುಂಬಿ ಆಶೀರ್ವದಿಸಲಿ.

ಈ ಪುಸ್ತಕದ ಡಿ.ಟಿ.ಪಿ ಕಾರ್ಯದಲ್ಲಿ ನಿರತರಾದ ಕುಂ॥ ಸೌ॥ ಎಸ್. ನಾಗಲತ ಇವರ ಬಗ್ಗೆ ಎಷ್ಟು ಹೇಳಿದರೂ ಕಮ್ಮಿ. ಹಗಲಿರಳೂ ಶ್ರಮಪಟ್ಟು ಕಣ್ಣಲ್ಲಿ ಕಣ್ಣಿಟ್ಟು ತಪ್ಪು ಬಾರದಂತೆ ಎಚ್ಚರವಹಿಸಿ ಸಮಯಕ್ಕೆ ತಕ್ಕಂತೆ ಏಕೈಕರಾಗಿ ಕೆಲಸ ಮಾಡಿಕೊಟ್ಟ ಇವರಿಗೆ ಎಂದೆಂದೂ ಕೃತಜ್ಞನಾಗಿದ್ದೇನೆ. ರಾಯರು ಇವರಿಗೆ ಎಲ್ಲಾ ರೀತಿಯಲ್ಲಿಯೂ ಶ್ರೇಯಸ್ಸನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುವೆ; ಹಾಗೂ ಕೆ. ಗಿರಿಯವರು ಎಲ್ಲಾ ರೀತಿಯಲ್ಲಿಯೂ ಸಹಕರಿಸಿದ್ದಾರೆ. ಇವರಿಗೂ ಅನಂತ ಕೃತಜ್ಞತೆಗಳು.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉಪಕರಿಸಿದ ಎಲ್ಲ ಮಹನೀಯರಿಗೂ ಮತ್ತೊಮ್ಮೆ ಕೃತಜ್ಞತೆಗಳು.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ
ಬೆಂಗಳೂರು.

ಬರೆಸಬೇಕು. ನನ್ನದು ಲೇಖನಿಯ ಪಾತ್ರ ಮಾತ್ರ. ನಮಗೆಲ್ಲಾ ಅತ್ಯಂತ ಹೆಮ್ಮೆಯ ಗುರುಗಳಾದ ಪರಮಪೂಜ್ಯ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರಿಗೆ ಅನಂತ ನಮಸ್ಕಾರಗಳು ಹಾಗೂ ಕೃತಜ್ಞತೆಗಳು.

## ಕೃತಜ್ಞತೆ

ಅಶನ ವಸನಗಳ ಜೊತೆ ವಿದ್ಯಾದಾನ ಮಾಡಿ ವ್ಯಕ್ತಿತ್ವವನ್ನು ರೂಪಿಸಿದ ನೆಚ್ಚಿನ ವಿದ್ಯಾಗುರುಗಳಾದ ಶ್ರೀವಿಶ್ವೇಶತೀರ್ಥರ ಚರಣಕಮಲಗಳಲ್ಲಿ ಭಕ್ತಿಯ ಭಾರದಿಂದ ಸದಾ ಆನಮಿಪೆ.

ಶ್ರೀಪಾದಪುತ್ರರಾದ ಪಂಡಿತಮೂರ್ಧನ್ಯರಾದ ಪೂಜ್ಯ ॥ ಶ್ರೀ ರಾಜಾ ಎಸ್. ಗಿರಿ ಆಚಾರ್ಯರು ಪುಸ್ತಕಪ್ರಕಾಶನಕ್ಕೆ ಸಂಪೂರ್ಣ ಪ್ರೋತ್ಸಾಹ ನೀಡಿ ಹರಸಿದ್ದಾರೆ. ಸುಂದರ ಮುನ್ನುಡಿ ಬರೆದು ಯೋಜನೆಗೆ ಚಾಲನೆ ನೀಡಿದ್ದಾರೆ. ಇವರಿಗೆ ನನ್ನ ಅನಂತ ಕೃತಜ್ಞತಾಪೂರ್ವಕ ನಮನಗಳು.

ನಿವೃತ್ತ ಕುಲಪತಿಗಳೂ ಪ್ರಚಂಡ ವಿದ್ಯಾವಂತರೂ ಆದ ಸರಳ ಸಜ್ಜನಿಕೆಯುಳ್ಳ ಗುರುಸಾರ್ವಭೌಮಸಂಶೋಧನಾ ಮಂದಿರದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ॥ ವಾದಿರಾಜಾಚಾರ್ಯ ಆರ್. ಪಂಚಮುಖಿ ಇವರು ಆಂಗ್ಲಭಾಷೆಯಲ್ಲಿ ಪ್ರಾಸ್ತಾವಿಕ ಬರೆದು ನೀಡಿದ್ದಾರೆ. ಬಹಳ ಅಭಿಮಾನದಿಂದ ಈ ಪುಸ್ತಕವನ್ನು ಅವಲೋಕಿಸಿ ಸಂತೋಷಪಟ್ಟಿದ್ದಾರೆ. ಇವರಿಗೂ ನನ್ನ ನಮನಗಳು.

ವಿಶೇಷವಿಚಾರ ಬರೆಯಲು ಗಹನವಿಷಯಗಳನ್ನು ಹಾಗೂ ಅಪೂರ್ವವಿಷಯಗಳನ್ನು ಸುಲಲಿತವಾಗಿ ತಿಳಿಸಿಕೊಟ್ಟ ಎಲೆಮರೆ ಹಣ್ಣಾಗಿ ಸಾಧನೆಯಲ್ಲಿ ಮುಳುಗಿದ ವಿದ್ವಾನ್ ಶ್ರೀರಂಗಂ ಆರ್. ವೇಂಕಟೇಶಾಚಾರ್ಯರಿಗೆ ಅನಂತ ನಮಸ್ಕಾರಗಳು. ಇವರ ಉಪಕಾರ ಎಂದೂ ಯಾವ ಕ್ಷಣದಲ್ಲಿಯೂ ಮರೆಯಲಾರೆ.

ಜನ್ಮಾಧಿಕರಣದಿಂದ ಆನಂದಮಯಾಧಿಕರಣದ ತನಕ ಮಾಡಿರುವ ಭಾವದೀಪದ ಅನುವಾದ ಕಾರ್ಯದಲ್ಲಿ ಸಂಪೂರ್ಣ ಉಪಕರಿಸಿದ ವಿದ್ವಾನ್ ಎನ್. ರವಿಕುಮಾರಾಚಾರ್ಯರ ಉಪಕಾರ ನೆನೆದು ಕೃತಜ್ಞತೆ ಸಲ್ಲಿಸುವೆ.

ಜನ್ಮದಾತರಾದ ಪಿ. ಎಸ್. ನಾಗರಾಜರಾವ್ ಹಾಗೂ ಕುಂ॥ ಸೌ॥ ಪರಿಮಳ ಇವರ ಪ್ರೋತ್ಸಾಹ, ವಾತ್ಸಲ್ಯ, ಉತ್ಸಾಹಗಳಿಗೆ ನಿರಂತರ ನಮಿಸುವೆ. ಹಾಗೂ ಹಗಲು ರಾತ್ರಿ ಕುಳಿತು ಬರೆಯಲು ಸಂಪೂರ್ಣ ಅನುಕೂಲ ಮಾಡಿಕೊಟ್ಟು ಕೆಲವು ಭಾಗ ಅಕ್ಷರ ಜೋಡಣೆಯಲ್ಲಿಯೂ

ಸಹಕರಿಸಿದ ಮನಸ್ಸಿಗೆ ಶಕ್ತಿ ತುಂಬಿದ ಅಣ್ಣ ಶ್ರೀನಿವಾಸನಿಗೆ ಕೃತಜ್ಞತೆಯನ್ನು ಸಲ್ಲಿಸುವೆ. ನನ್ನ ಪ್ರತಿಯೊಂದು ಕಾರ್ಯಗಳ ವಿಘ್ನಪರಿಹಾರಕರಾದ ಅಣ್ಣ ವಿಜಯೀಂದ್ರಾಚಾರ್ಯರಿಗೂ ಕೃತಜ್ಞತೆಯ ನಮನಗಳು.

ಪವನ್‌ಪ್ರಿಂಟರ್ಸ್ ಮಾಲೀಕ ಮಂಜುನಾಥ ಬಹಳ ಶ್ರಮಪಟ್ಟು ಅಲ್ಪಕಾಲದಲ್ಲಿ ಸುಂದರವಾಗಿ ಹಾಗೂ ಅಚ್ಚುಕಟ್ಟಾಗಿ ಪುಸ್ತಕವನ್ನು ಮುದ್ರಣ ಮಾಡಿ ನೀಡಿರುವರು. ಇವರಿಗೆ ಶ್ರೀರಾಘವೇಂದ್ರಗುರುಸಾರ್ವಭೌಮರು ಇನ್ನೂ ಹೆಚ್ಚಿನ ಶಕ್ತಿ ತುಂಬಿ ಆಶೀರ್ವದಿಸಲಿ.

ಈ ಪುಸ್ತಕದ ಡಿ.ಟಿ.ಪಿ ಕಾರ್ಯದಲ್ಲಿ ನಿರತರಾದ ಕುಂ॥ ಸೌ॥ ಎಸ್. ನಾಗಲತ ಇವರ ಬಗ್ಗೆ ಎಷ್ಟು ಹೇಳಿದರೂ ಕಮ್ಮಿ. ಹಗಲಿರಳೂ ಶ್ರಮಪಟ್ಟು ಕಣ್ಣಲ್ಲಿ ಕಣ್ಣಿಟ್ಟು ತಪ್ಪು ಬಾರದಂತೆ ಎಚ್ಚರವಹಿಸಿ ಸಮಯಕ್ಕೆ ತಕ್ಕಂತೆ ಏಕೈಕರಾಗಿ ಕೆಲಸ ಮಾಡಿಕೊಟ್ಟ ಇವರಿಗೆ ಎಂದೆಂದೂ ಕೃತಜ್ಞನಾಗಿದ್ದೇನೆ. ರಾಯರು ಇವರಿಗೆ ಎಲ್ಲಾ ರೀತಿಯಲ್ಲಿಯೂ ಶ್ರೇಯಸ್ಸನ್ನು ಉಂಟುಮಾಡಲಿ ಎಂದು ಪ್ರಾರ್ಥಿಸುವೆ; ಹಾಗೂ ಕೆ. ಗಿರಿಯವರು ಎಲ್ಲಾ ರೀತಿಯಲ್ಲಿಯೂ ಸಹಕರಿಸಿದ್ದಾರೆ. ಇವರಿಗೂ ಅನಂತ ಕೃತಜ್ಞತೆಗಳು.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉಪಕರಿಸಿದ ಎಲ್ಲ ಮಹನೀಯರಿಗೂ ಮತ್ತೊಮ್ಮೆ ಕೃತಜ್ಞತೆಗಳು.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ
ಬೆಂಗಳೂರು.

# ತತ್ತ್ವಪ್ರಕಾಶಿಕಾ - ಭಾವದೀಪ

## ಸಾರಾಂಶ

### ಜಿಜ್ಞಾಸಾಧಿಕರಣ

ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್ ಗುರೂನಪಿ ।
ತತ್ತ್ವಪ್ರಕಾಶಿಕಾಭಾವದೀಪಂ ಕುರ್ಯಾಂ ಯಥಾಮತಿ ॥

ಲಕ್ಷ್ಮೀನಾರಾಯಣನನ್ನು ನಮಸ್ಕರಿಸಿ, ಗುರುಗಳಾದ ಪೂರ್ಣಪ್ರಜ್ಞರನ್ನೂ ಸಹ ನಮಿಸಿ, ತತ್ತ್ವಪ್ರಕಾಶಿಕಾಗ್ರಂಥಕ್ಕೆ ಬುದ್ಧಿಗೆ ನಿಲುಕಿದಷ್ಟು ''ಭಾವದೀಪ'' ಎಂಬ ವ್ಯಾಖ್ಯಾನವನ್ನು ರಚಿಸುತ್ತಿದ್ದೇವೆ.

ತತ್ತ್ವಪ್ರಕಾಶಿಕಾऽऽಕೂತಂ ಚಂದ್ರಿಕಾತಃಪ್ರಕಾಶಿತಮ್ ।
ಅಪಿ ಮಂದಕೃತೇ ಸರ್ವವಿಷಯಾ ಚ ಕೃತಿರ್ಮಮ ॥

ವಸ್ತುತಃ ತತ್ತ್ವಪ್ರಕಾಶಿಕೆಯ ಅಭಿಪ್ರಾಯವನ್ನು ಚಂದ್ರಿಕೆಯಲ್ಲೇ ಸ್ಪಷ್ಟಪಡಿಸಿದ್ದಾರೆ. ಆದರೂ ಪ್ರತಿಪಂಕ್ತಿಗಳ ಅರ್ಥವನ್ನು ನಿರೂಪಿಸುವುದಕ್ಕಾಗಿ ಈ ಕೃತಿಯು ಹೊರಟಿದೆ. ಮಂದಜನರಿಗೆ ಉಪಯೋಗವಾಗಬೇಕೆಂಬುದೇ ಇದರ ಉದ್ದೇಶ.

ನೂತನೈರುದಿತಾ ಯೇ ತೆ ದೋಷಾಸ್ತೇಷಾಮಲಗ್ನತಾಮ್ ।
ಸಂಪ್ರದರ್ಶಯಿತುಂ ಚಾऽತಃ ಪ್ರಸನ್ನಾಃ ಸಂತು ಸಜ್ಜನಾಃ ॥

ತತ್ತ್ವಪ್ರಕಾಶಿಕಾಗ್ರಂಥದ ಮೇಲೆ ಹೊಸದಾಗಿ ಮಾಡಲ್ಪಟ್ಟ ಎಲ್ಲ ಆಕ್ಷೇಪಗಳನ್ನು ನಿರಾಕರಿಸುವುದು ಈ ಕೃತಿಯ ಮತ್ತೊಂದು ಉದ್ದೇಶ. ಇದರಿಂದ ಸಜ್ಜನರೆಲ್ಲರೂ ಸಂತುಷ್ಟರಾಗಲಿ.

ಟೀಕಾಕೃತ್ಪಾದರ ಮೊದಲ ಮಂಗಲಪದ್ಯ ಭಾಷ್ಯದ ಮಂಗಲಪದ್ಯಕ್ಕೆ ವ್ಯಾಖ್ಯಾನ ರೂಪವಾಗಿದೆ. ಅದರಂತೆಯೇ ಬ್ರಹ್ಮಸೂತ್ರದ ನಾಲ್ಕು ಅಧ್ಯಾಯಗಳ ಸಾರರೂಪವಾಗಿದೆ. ಮುಂದೆ ಸೂತ್ರಕಾರರಿಗೂ ಭಾಷ್ಯಕಾರರಿಗೂ ನಮಿಸಿ ಭಾಷ್ಯಕ್ಕೆ ಟೀಕೆ ರಚಿಸಲು ಸಂಕಲ್ಪಿಸುತ್ತಾರೆ. ಅದರಿಂದ ವಾಕ್‌ಶುದ್ಧಿಯಾಗಲಿ ಎನ್ನುತ್ತಾರೆ ಟೀಕಾಕೃತ್ಪಾದರು.

#### ಟೀಕೆಯ ಮೊದಲ ಅಥಶಬ್ದ

ಸಮಗ್ರ ಗ್ರಂಥದ ವ್ಯಾಖ್ಯಾನವನ್ನು ಸಂಕ್ಷೇಪವಾಗಿ ಮಂಗಲಪದ್ಯದಲ್ಲಿ ಮಾಡಿ ಮುಂದೆ ಭಾಷ್ಯದ ಪ್ರತಿವಾಕ್ಯ ಪ್ರತಿಪದಗಳ ವ್ಯಾಖ್ಯಾನ ಪ್ರಾರಂಭಿಸುತ್ತಿದ್ದೇವೆ ಎನ್ನುತ್ತಿದ್ದಾರೆ, ಅಥಶಬ್ದದಿಂದ.

## ನಾರಾಯಣ ಶಬ್ದಾರ್ಥ

ನಾರಾಯಣನೆ ಬ್ರಹ್ಮಸೂತ್ರ ಪ್ರತಿಪಾದ್ಯನೆಂದು ಸೂಚಿಸಲು ಭಾಷ್ಯದಲ್ಲಿರುವ ನಾರಾಯಣಶಬ್ದ ಬ್ರಹ್ಮಶಬ್ದ ಸಮಾನಾರ್ಥಕವೆಂದೂ ಬ್ರಹ್ಮಸೂತ್ರದ ನಾಲ್ಕು ಅಧ್ಯಾಯಗಳ ಸಾರರೂಪವೆಂದೂ ಟೀಕಾಕೃತ್ಪಾದರು ಹೇಳುತ್ತಾರೆ. 'ನಾರ'ವೆಂದರೆ ಆಮೃತತ್ವಕ್ಕೆ ಮೋಕ್ಷಕ್ಕೆ ಸಾಧನವಾದ ತತ್ವಜ್ಞಾನ. ಅಥವಾ ನಿರ್ದುಃಖವಾದ ಸ್ಥಾನಕ್ಕೆ ಒಯ್ಯುವ ತತ್ವಜ್ಞಾನ. ಅಥವಾ ನಿರ್ದೋಷ ವೇದೋತ್ಪನ್ನವಾದ ತತ್ವಜ್ಞಾನ. ಇಂಥ ತತ್ವಜ್ಞಾನಕ್ಕೆ ವಿಷಯನಾಗಿ ಆಶ್ರಯನೆನಿಸಿದವನು ನಾರಾಯಣ. ಇಲ್ಲಿ 'ನಾರ'ವೆಂದರೆ ನಿರ್ದೋಷವಾದ ವೇದ. ಆದರಿಂದ ಬರುವ ಜ್ಞಾನವೂ 'ನಾರ'. ಅಣ್ ಪ್ರತ್ಯಯ ಸೇರಿಸಬೇಕು. ಛ ಪ್ರತ್ಯಯ ಬಂದು ನಾರೀಯ ಎಂದಾದೀತು ಎಂಬ ಸಮಸ್ಯೆಗೆ ಪರಿಹಾರವಿದೆ.

## ನಾರಾಯಣ ಶಬ್ದದಲ್ಲಿ ನಲೋಪಾಭಾವ

ದೋಷದೂರ ಎಂಬ ಅರ್ಥದಲ್ಲಿ 'ನ ಅರಾಯನ'ವು 'ನಾರಾಯಣ' ಎಂದಾಗುವುದು. ಆದರೆ ಇಲ್ಲಿ ನಲೋಪ ಬಂದೀತು. 'ನ ಆರೋಗ್ಯ' 'ಅನಾರೋಗ್ಯ'ವಾಗುವಂತೆ 'ನ ಅರಾಯನ'ವು 'ಅನರಾಯಣ' ಏಕಾಗುವುದಿಲ್ಲ? ಇದಕ್ಕೆ ಪರಿಹಾರ - 'ನಲೋಪವನ್ನು ಹೇಳುವ ಸೂತ್ರದಲ್ಲಿ ವಿಕಲ್ಪವನ್ನು ಹೇಳುವ 'ವಿಭಾಷಾ' ಪದದ ಅನುವೃತ್ತಿ ಇದೆ ಎಂದು ನ್ಯಾಸಗ್ರಂಥದಲ್ಲಿ ಹೇಳಿದೆ' ಎಂದು ಹೇಳಬಹುದು. ವಸ್ತುತಃ ಅನುವೃತ್ತಿ ಬೇಡ. ಆದರಿಂದ ಇಲ್ಲಿ 'ನ ಅರಾಯನ' ಎಂಬಲ್ಲಿ 'ನಞ್' ಎಂಬ ಅವ್ಯಯವಲ್ಲ. 'ನ' ಎಂಬ ಅವ್ಯಯ ಎಂದಿಟ್ಟುಕೊಳ್ಳಬೇಕು.

## ನಾರಾಯಣ ಶಬ್ದದಲ್ಲಿ ಣತ್ವ

ರೇಫದ ಮುಂದೆ ಬರುವ ನಕಾರಕ್ಕೆ ಣಕಾರ ಬರುವುದು ಸಾಮಾನ್ಯವಾಗಿ ಅವೆರಡೂ ಒಂದು ಅಖಂಡಪದದಲ್ಲಿ ಬಂದಾಗ ಮಾತ್ರ. ಪ್ರಕೃತದಲ್ಲಿ 'ನಾರ ಅಯನ' ಎಂದು ಎರಡು ಪದ ಸೇರಿ ಒಂದಾಗಿದೆ. ಅಖಂಡವಲ್ಲ. ಆದರೂ ರೂಢಿಯ ಹೆಸರುಗಳಲ್ಲಿ ಈ ನಿಯಮವಿಲ್ಲ. ಆದರಿಂದ ಣತ್ವ ಬರಬಹುದು. 'ಶೂರ್ಪ ನಖಾ' ಶೂರ್ಪಣಖಾ ಎಂದಾಗುತ್ತದೆ. ಹಾಗೇ ಇದು.

## ನಾರಾಯಣ ಶಬ್ದದ ಪುಲ್ಲಿಂಗ

'ನಾರ ಅಯನ' ಎಂಬಲ್ಲಿ ಅಯನಶಬ್ದ ಲ್ಯುಟ್ ಪ್ರತ್ಯಯಾಂತ, ನಪುಂಸಕವಾಗಬೇಕು. ಈ ಸಮಸ್ಯೆಗೆ ಪರಿಹಾರ - ಕರಣ ಅಧಿಕರಣ ಅರ್ಥಗಳಲ್ಲಿ ಲ್ಯುಟ್ ವಿಧಾಯಕವಾದ ಸೂತ್ರದಲ್ಲಿ 'ನಪುಂಸಕೇ' ಎಂದು ಅನುವೃತ್ತಿ ಇಲ್ಲ ಎಂದು ಒಂದು ಪರಿಹಾರ. 'ಲ್ಯುಟ್' ಎಂಬಲ್ಲಿ ಟಕಾರ ಇತ್ ಏಕೆ? 'ರಾಜಧಾನೀ' ಎಂದು ಮುಂತಾಗಿ ಸ್ತ್ರೀಲಿಂಗ ಪ್ರತ್ಯಯ ಬರುವುದಕ್ಕಾಗಿ ಎನ್ನಬೇಕು. ಆಗ ನಪುಸಂಕಲಿಂಗ ನಿಯಮವಿಲ್ಲವೆಂದು ಹೇಳಿದಂತಾಯಿತು. ಆದರಿಂದಲೆ ಭಾಷ್ಯಕಾರನೂ 'ಅನುಮಾನ' ಶಬ್ದವನ್ನು ಪುಲ್ಲಿಂಗದಲ್ಲಿ ಪ್ರಯೋಗಿಸಿದ್ದಾನೆ. ಇದು ಇನ್ನೊಂದು ಪರಿಹಾರ. 'ಕೃತ್ಯಲ್ಯುಟೋ ಬಹುಲಂ' ಎಂಬ ಸೂತ್ರದಲ್ಲಿ ಸ್ಪಷ್ಟವಾಗಿ ಲ್ಯುಟ್ ಪ್ರತ್ಯಯಾಂತ ಶಬ್ದಕ್ಕೆ ಲೋಕರೂಢಿಗನುಸಾರ ಯಾವ ಲಿಂಗವನ್ನೂ ಇಟ್ಟುಕೊಳ್ಳಬಹುದೆಂದಿದೆ ಎಂದು ಮತ್ತೊಂದು ಪರಿಹಾರ.

## ಗುರುದೇವತಾ ನಮಸ್ಕಾರ

ಶಿಷ್ಯರು ಮುಂದೆ ಗ್ರಂಥ ರಚನೆ ಮಾಡುವಾಗ ಗುರುದೇವತಾ ನಮಸ್ಕಾರ ಮಾಡಬೇಕು. ಗ್ರಂಥದ ವಿಷಯ ಪ್ರಯೋಜನಾದಿಗಳನ್ನು ಸೃಠಿಸಿ ಮೋಕ್ಷಾದಿ ಮಹಾಫಲಭಾಗಿಗಳಾಗಬೇಕು ಎಂಬ ಉದ್ದೇಶದಿಂದ ಶ್ರೀಮದಾಚಾರ್ಯರು ನಮಸ್ಕಾರವನ್ನೂ ವಿಷಯಪ್ರಯೋಜನಾದಿಗಳನ್ನೂ ಹೇಳಿದ್ದಾರೆ.

# ತತ್ತ್ವಪ್ರಕಾಶಿಕಾ - ಭಾವದೀಪ

## ಸಾರಾಂಶ

### ಜಿಜ್ಞಾಸಾಧಿಕರಣ

ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್ ಗುರೂನಪಿ ।
ತತ್ತ್ವಪ್ರಕಾಶಿಕಾಭಾವದೀಪಂ ಕುರ್ಯಾಂ ಯಥಾಮತಿ ॥

ಲಕ್ಷ್ಮೀನಾರಾಯಣನನ್ನು ನಮಸ್ಕರಿಸಿ, ಗುರುಗಳಾದ ಪೂರ್ಣಪ್ರಜ್ಞರನ್ನೂ ಸಹ ನಮಿಸಿ, ತತ್ತ್ವಪ್ರಕಾಶಿಕಾಗ್ರಂಥಕ್ಕೆ ಬುದ್ಧಿಗೆ ನಿಲುಕಿದಷ್ಟು ''ಭಾವದೀಪ'' ಎಂಬ ವ್ಯಾಖ್ಯಾನವನ್ನು ರಚಿಸುತ್ತಿದ್ದೇವೆ.

ತತ್ತ್ವಪ್ರಕಾಶಿಕಾऽऽಕೂತಂ ಚಂದ್ರಿಕಾತಃಪ್ರಕಾಶಿತಮ್ ।
ಅಪಿ ಮಂದಕೃತೇ ಸರ್ವವಿಷಯಾ ಚ ಕೃತಿರ್ಮಮ ॥

ವಸ್ತುತಃ ತತ್ತ್ವಪ್ರಕಾಶಿಕೆಯ ಅಭಿಪ್ರಾಯವನ್ನು ಚಂದ್ರಿಕೆಯಲ್ಲೇ ಸ್ಪಷ್ಟಪಡಿಸಿದ್ದಾರೆ. ಆದರೂ ಪ್ರತಿಪಂಕ್ತಿಗಳ ಅರ್ಥವನ್ನು ನಿರೂಪಿಸುವುದಕ್ಕಾಗಿ ಈ ಕೃತಿಯು ಹೊರಟಿದೆ. ಮಂದಜನರಿಗೆ ಉಪಯೋಗವಾಗಬೇಕೆಂಬುದೇ ಇದರ ಉದ್ದೇಶ.

ನೂತನೈರುದಿತಾ ಯೇ ತೆ ದೋಷಾಸ್ತೇಷಾಮಲಗ್ನತಾಮ್ ।
ಸಂಪ್ರದರ್ಶಯಿತುಂ ಚಾऽತಃ ಪ್ರಸನ್ನಾಃ ಸಂತು ಸಜ್ಜನಾಃ ॥

ತತ್ತ್ವಪ್ರಕಾಶಿಕಾಗ್ರಂಥದ ಮೇಲೆ ಹೊಸದಾಗಿ ಮಾಡಲ್ಪಟ್ಟ ಎಲ್ಲ ಆಕ್ಷೇಪಗಳನ್ನು ನಿರಾಕರಿಸುವುದು ಈ ಕೃತಿಯ ಮತ್ತೊಂದು ಉದ್ದೇಶ. ಇದರಿಂದ ಸಜ್ಜನರೆಲ್ಲರೂ ಸಂತುಷ್ಟರಾಗಲಿ.

ಟೀಕಾಕೃತ್ಪಾದರ ಮೊದಲ ಮಂಗಲಪದ್ಯ ಭಾಷ್ಯದ ಮಂಗಲಪದ್ಯಕ್ಕೆ ವ್ಯಾಖ್ಯಾನ ರೂಪವಾಗಿದೆ. ಅದರಂತೆಯೇ ಬ್ರಹ್ಮಸೂತ್ರದ ನಾಲ್ಕು ಅಧ್ಯಾಯಗಳ ಸಾರರೂಪವಾಗಿದೆ. ಮುಂದೆ ಸೂತ್ರಕಾರರಿಗೂ ಭಾಷ್ಯಕಾರರಿಗೂ ನಮಿಸಿ ಭಾಷ್ಯಕ್ಕೆ ಟೀಕೆ ರಚಿಸಲು ಸಂಕಲ್ಪಿಸುತ್ತಾರೆ. ಅದರಿಂದ ವಾಕ್‌ಶುದ್ಧಿಯಾಗಲಿ ಎನ್ನುತ್ತಾರೆ ಟೀಕಾಕೃತ್ಪಾದರು.

#### ಟೀಕೆಯ ಮೊದಲ ಅಥಶಬ್ದ

ಸಮಗ್ರ ಗ್ರಂಥದ ವ್ಯಾಖ್ಯಾನವನ್ನು ಸಂಕ್ಷೇಪವಾಗಿ ಮಂಗಲಪದ್ಯದಲ್ಲಿ ಮಾಡಿ ಮುಂದೆ ಭಾಷ್ಯದ ಪ್ರತಿವಾಕ್ಯ ಪ್ರತಿಪದಗಳ ವ್ಯಾಖ್ಯಾನ ಪ್ರಾರಂಭಿಸುತ್ತಿದ್ದೇವೆ ಎನ್ನುತ್ತಿದ್ದಾರೆ, ಅಥಶಬ್ದದಿಂದ.

## ನಾರಾಯಣ ಶಬ್ದಾರ್ಥ

ನಾರಾಯಣನೆ ಬ್ರಹ್ಮಸೂತ್ರ ಪ್ರತಿಪಾದ್ಯನೆಂದು ಸೂಚಿಸಲು ಭಾಷ್ಯದಲ್ಲಿರುವ ನಾರಾಯಣಶಬ್ದ ಬ್ರಹ್ಮಶಬ್ದ ಸಮಾನಾರ್ಥಕವೆಂದೂ ಬ್ರಹ್ಮಸೂತ್ರದ ನಾಲ್ಕು ಅಧ್ಯಾಯಗಳ ಸಾರರೂಪವೆಂದೂ ಟೀಕಾಕೃತ್ಪಾದರು ಹೇಳುತ್ತಾರೆ. 'ನಾರ'ವೆಂದರೆ ಅಮೃತತ್ವಕ್ಕೆ ಮೋಕ್ಷಕ್ಕೆ ಸಾಧನವಾದ ತತ್ವಜ್ಞಾನ. ಅಥವಾ ನಿರ್ದುಃಖವಾದ ಸ್ಥಾನಕ್ಕೆ ಒಯ್ಯುವ ತತ್ವಜ್ಞಾನ. ಅಥವಾ ನಿರ್ದೋಷ ವೇದೋತ್ಪನ್ನವಾದ ತತ್ವಜ್ಞಾನ. ಇಂಥ ತತ್ವಜ್ಞಾನಕ್ಕೆ ವಿಷಯನಾಗಿ ಆಶ್ರಯನೆನಿಸಿದವನು ನಾರಾಯಣ. ಇಲ್ಲಿ 'ನಾರ'ವೆಂದರೆ ನಿರ್ದೋಷವಾದ ವೇದ. ಅದರಿಂದ ಬರುವ ಜ್ಞಾನವೂ 'ನಾರ'. ಅಣ್ ಪ್ರತ್ಯಯ ಸೇರಿಸಬೇಕು. ಛ ಪ್ರತ್ಯಯ ಬಂದು ನಾರೀಯ ಎಂದಾದೀತು ಎಂಬ ಸಮಸ್ಯೆಗೆ ಪರಿಹಾರವಿದೆ.

## ನಾರಾಯಣ ಶಬ್ದದಲ್ಲಿ ನಲೋಪಾಭಾವ

ದೋಷದೂರ ಎಂಬ ಅರ್ಥದಲ್ಲಿ 'ನ ಅರಾಯನ'ವು 'ನಾರಾಯಣ' ಎಂದಾಗುವುದು. ಆದರೆ ಇಲ್ಲಿ ನಲೋಪ ಬಂದೀತು. 'ನ ಆರೋಗ್ಯ' 'ಅನಾರೋಗ್ಯ'ವಾಗುವಂತೆ 'ನ ಅರಾಯನ'ವು 'ಅನರಾಯಣ' ಏಕಾಗುವುದಿಲ್ಲ? ಇದಕ್ಕೆ ಪರಿಹಾರ - 'ನಲೋಪವನ್ನು ಹೇಳುವ ಸೂತ್ರದಲ್ಲಿ ವಿಕಲ್ಪವನ್ನು ಹೇಳುವ 'ವಿಭಾಷಾ' ಪದದ ಅನುವೃತ್ತಿ ಇದೆ ಎಂದು ನ್ಯಾಸಗ್ರಂಥದಲ್ಲಿ ಹೇಳಿದೆ' ಎಂದು ಹೇಳಬಹುದು. ವಸ್ತುತಃ ಅನುವೃತ್ತಿ ಬೇಡ. ಆದರಿಂದ ಇಲ್ಲಿ 'ನ ಅರಾಯನ' ಎಂಬಲ್ಲಿ 'ನಞ್' ಎಂಬ ಅವ್ಯಯವಲ್ಲ. 'ನ' ಎಂಬ ಅವ್ಯಯ ಎಂದಿಟ್ಟುಕೊಳ್ಳಬೇಕು.

## ನಾರಾಯಣ ಶಬ್ದದಲ್ಲಿ ಣತ್ವ

ರೇಫದ ಮುಂದೆ ಬರುವ ನಕಾರಕ್ಕೆ ಣಕಾರ ಬರುವುದು ಸಾಮಾನ್ಯವಾಗಿ ಅವೆರಡೂ ಒಂದು ಅಖಂಡಪದದಲ್ಲಿ ಬಂದಾಗ ಮಾತ್ರ. ಪ್ರಕೃತದಲ್ಲಿ 'ನಾರ ಅಯನ' ಎಂದು ಎರಡು ಪದ ಸೇರಿ ಒಂದಾಗಿದೆ. ಅಖಂಡವಲ್ಲ. ಆದರೂ ರೂಢಿಯ ಹೆಸರುಗಳಲ್ಲಿ ಈ ನಿಯಮವಿಲ್ಲ. ಆದರಿಂದ ಣತ್ವ ಬರಬಹುದು. 'ಶೂರ್ಪ ನಖಾ' ಶೂರ್ಪಣಖಾ ಎಂದಾಗುತ್ತದೆ. ಹಾಗೇ ಇದು.

## ನಾರಾಯಣ ಶಬ್ದದ ಪುಲ್ಲಿಂಗ

'ನಾರ ಅಯನ' ಎಂಬಲ್ಲಿ ಅಯನಶಬ್ದ ಲ್ಯುಟ್ ಪ್ರತ್ಯಯಾಂತ, ನಪುಂಸಕವಾಗಬೇಕು. ಈ ಸಮಸ್ಯೆಗೆ ಪರಿಹಾರ - ಕರಣ ಅಧಿಕರಣ ಅರ್ಥಗಳಲ್ಲಿ ಲ್ಯುಟ್ ವಿಧಾಯಕವಾದ ಸೂತ್ರದಲ್ಲಿ 'ನಪುಂಸಕೇ' ಎಂದು ಅನುವೃತ್ತಿ ಇಲ್ಲ ಎಂದು ಒಂದು ಪರಿಹಾರ. 'ಲ್ಯುಟ್' ಎಂಬಲ್ಲಿ ಟಕಾರ ಇತ್ ಏಕೆ? 'ರಾಜಧಾನೀ' ಎಂದು ಮುಂತಾಗಿ ಸ್ತ್ರೀಲಿಂಗ ಪ್ರತ್ಯಯ ಬರುವುದಕ್ಕಾಗಿ ಎನ್ನಬೇಕು. ಆಗ ನಪುಸಂಕಲಿಂಗ ನಿಯಮವಿಲ್ಲವೆಂದು ಹೇಳಿದಂತಾಯಿತು. ಆದರಿಂದಲೆ ಭಾಷ್ಯಕಾರನೂ 'ಅನುಮಾನ' ಶಬ್ದವನ್ನು ಪುಲ್ಲಿಂಗದಲ್ಲಿ ಪ್ರಯೋಗಿಸಿದ್ದಾನೆ. ಇದು ಇನ್ನೊಂದು ಪರಿಹಾರ. 'ಕೃತ್ಯಲ್ಯುಟೋ ಬಹುಲಂ' ಎಂಬ ಸೂತ್ರದಲ್ಲಿ ಸ್ಪಷ್ಟವಾಗಿ ಲ್ಯುಟ್ ಪ್ರತ್ಯಯಾಂತ ಶಬ್ದಕ್ಕೆ ಲೋಕರೂಢಿಗನುಸಾರ ಯಾವ ಲಿಂಗವನ್ನೂ ಇಟ್ಟುಕೊಳ್ಳಬಹುದೆಂದಿದೆ ಎಂದು ಮತ್ತೊಂದು ಪರಿಹಾರ.

## ಗುರುದೇವತಾ ನಮಸ್ಕಾರ

ಶಿಷ್ಯರು ಮುಂದೆ ಗ್ರಂಥ ರಚನೆ ಮಾಡುವಾಗ ಗುರುದೇವತಾ ನಮಸ್ಕಾರ ಮಾಡಬೇಕು. ಗ್ರಂಥದ ವಿಷಯ ಪ್ರಯೋಜನಾದಿಗಳನ್ನು ಸ್ಮರಿಸಿ ಮೋಕ್ಷಾದಿ ಮಹಾಫಲಭಾಗಿಗಳಾಗಬೇಕು ಎಂಬ ಉದ್ದೇಶದಿಂದ ಶ್ರೀಮದಾಚಾರ್ಯರು ನಮಸ್ಕಾರವನ್ನೂ ವಿಷಯಪ್ರಯೋಜನಾದಿಗಳನ್ನೂ ಹೇಳಿದ್ದಾರೆ.

## ಬ್ರಹ್ಮಸೂತ್ರದ ಹಿರಿಮೆ

ಮೋಕ್ಷ ಸಂಪಾದನೆಗಾಗಿ ಅಧ್ಯಯನ ಮಾಡಬೇಕಾಗಿರುವ ಗ್ರಂಥ ಬ್ರಹ್ಮಸೂತ್ರ. ಅದರಿಂದ ಅದು ವಾಸ್ತವವಿಷಯಗಳನ್ನೇ ಹೇಳುತ್ತದೆ. ಗ್ರಂಥಕಾರರಾದ ಬಾದರಾಯಣರೂ ಸ್ವತಃ ಸರ್ವಜ್ಞರು. ಅವತರಿಸಿದೊಡನೆಯೆ, ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡದೆಯೆ, ಗ್ರಂಥರಚನೆ ಮಾಡಿದ್ದಾರೆ.

## ಸೂತ್ರಲಕ್ಷಣ

ಸೂತ್ರಲಕ್ಷಣಗಳಲ್ಲಿ ಮುಖ್ಯವಾದ ಅಲ್ಪಾಕ್ಷರತ್ವ ವಿಶ್ವತೋಮುಖತ್ವಗಳನ್ನೂ ಅಸ್ತೋಭತ್ವವನ್ನೂ ಸ್ಪಷ್ಟಗೊಳಿಸಲಾಗಿದೆ. ಬ್ರಹ್ಮಸೂತ್ರದಲ್ಲಿಯ ಎಲ್ಲ ಸೂತ್ರಲಕ್ಷಣಗಳೂ ಪುಷ್ಕಲವಾಗಿ ಬರುವುದರಿಂದ ಅದೇ ಮುಖ್ಯವಾಗಿ 'ಸೂತ್ರ' ಎನಿಸುತ್ತದೆ. ಆದರಿಂದ 'ಸೂತ್ರ' ಎಂದರೆ ಬ್ರಹ್ಮಸೂತ್ರವೆ. ಬೇರೆ ಸೂತ್ರಗಳಿಗೆ ಜೈಮಿನಿಸೂತ್ರ ಪಾಣಿನಿಸೂತ್ರ ಎಂದು ಮುಂತಾಗಿ ವಿಶೇಷಣ ಕೊಟ್ಟೇ ಹೇಳಬೇಕಾಗುತ್ತದೆ.

## ಜಿಜ್ಞಾಸಾಧಿಕರಣದ ಸಂಗತಿ

ಬ್ರಹ್ಮವಿಚಾರವು ಶಾಸ್ತ್ರದಲ್ಲಿ ನಡೆಯಬೇಕಾದರೆ ಅದರ ಅವಶ್ಯಕತೆಯನ್ನು ಮೊದಲಿಗೆ ಸೂತ್ರ ಸಮರ್ಥಿಸುವುದರಿಂದ ಶಾಸ್ತ್ರದ ಉಪೋದ್ಘಾತ ಸಂಗತಿ ಇದೆ. ಆದರೆ ಪ್ರಥಮಾಧ್ಯಾಯ ಪ್ರಥಮ ಪಾದಗಳ ಸಂಗತಿಗಳಿಲ್ಲ. ಈ ಸೂತ್ರದ ಬಲದಿಂದಲೆ ಪ್ರಥಮಾಧ್ಯಾಯ ಪ್ರಥಮ ಪಾದಗಳು ಪ್ರವೃತ್ತಿ ಮಾಡುವುದು ನಿಜವೆ. ಆದರೆ ಕ್ರಮವಾಗಿ ನಾಲ್ಕು ಪಾದಗಳೂ ಆ ಮೂಲಕ ನಾಲ್ಕು ಅಧ್ಯಾಯಗಳೂ ಈ ಸೂತ್ರದ ಬಲದಿಂದಲೆ ಪ್ರವೃತ್ತಿ ಮಾಡುವುದರಿಂದ ಪ್ರತ್ಯೇಕವಾಗಿ ಪ್ರಥಮಾಧ್ಯಾಯ ಪ್ರಥಮಪಾದಗಳ ಸಂಗತಿಗಳಿಲ್ಲ.

ಬ್ರಹ್ಮವಿಚಾರ ವಿಧಾಯಕ ವಾಕ್ಯದ ಅರ್ಥನಿರ್ಣಯಕ್ಕೆ ಯುಕ್ತಿಯನ್ನು ಹೇಳುವ ಮೂಲಕ ಈ ಸೂತ್ರ ಬ್ರಹ್ಮವಿಚಾರವೆನಿಸುವುದರಿಂದ ಬ್ರಹ್ಮವಿಚಾರರೂಪವಾದ ಶಾಸ್ತ್ರದ ಅಂತರ್ಭಾವ ಸಂಗತಿಯೂ ಈ ಸೂತ್ರಕ್ಕೆ ಇದೆ.

## ಜಿಜ್ಞಾಸಾಧಿಕರಣದ ವಿಷಯ ಮತ್ತು ಸಂದೇಹ

ಜಿಜ್ಞಾಸಾಧಿಕರಣಕ್ಕೆ ವಿಚಾರಶಾಸ್ತ್ರವೆ ವಿಷಯ. ಅದು ಬೇಕೆ ಬೇಡವೆ ಎಂದು ಸಂದೇಹ. ಏಕೆಂದರೆ ಬ್ರಹ್ಮ ಜೀವನಿಗಿಂತ ಬೇರಲ್ಲವಾದರೆ ಅವನು ಅನುಭವವೇದ್ಯನಾಗಿರುವುದರಿಂದ ವಿಚಾರ ಬೇಡ, ವಿಚಾರಶಾಸ್ತ್ರವೂ ಬೇಡ. ಬ್ರಹ್ಮ ಜೀವನಿಗಿಂತ ಬೇರೆಯೆಂದಾದರೆ ಅನುಭವವೇದ್ಯನಾದ ಜೀವನ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲದಿದ್ದರೂ ಬ್ರಹ್ಮ ವಿಚಾರಯೋಗ್ಯನೆನಿಸಬಹುದು. ವಿಚಾರಶಾಸ್ತ್ರಬೇಕೆನ್ನಬಹುದು. ವಿಷಯದ ಬಗ್ಗೆ ಸಂದೇಹದಂತೆ ಪ್ರಯೋಜನದ ಬಗ್ಗೆಯೂ ಸಂದೇಹವನ್ನು ಹೇಳಬಹುದು. ಮೋಕ್ಷ ಕರ್ಮಸಾಧ್ಯವೆ, ಜ್ಞಾನಸಾಧ್ಯವೆ? ಕರ್ಮಸಾಧ್ಯವಾದರೆ ಜ್ಞಾನಕ್ಕಾಗಿ ವಿಚಾರ ಮಾಡಬೇಕಾಗಿಲ್ಲ, ಶಾಸ್ತ್ರ ಬೇಡ. ಜ್ಞಾನಸಾಧ್ಯವೆಂದಾದರೆ ಜ್ಞಾನಕ್ಕಾಗಿ ವಿಚಾರ ಬೇಕು, ಶಾಸ್ತ್ರ ಬೇಕು ಎಂದು. ಆದರೆ ಈ ಸಂದೇಹವನ್ನು ತೋರಿಸದಿರಲು ಅನೇಕ ಕಾರಣಗಳಿವೆ. ವಿಷಯ ಸಂದೇಹವನ್ನು ತೋರಿಸಿದ್ದರಿಂದಲೆ ಪ್ರಯೋಜನ ಸಂದೇಹವನ್ನೂ ತೋರಿಸಿದಂತಾಯಿತು. ಅಥವಾ ಮುಂದೆ ವಿದ್ಯಾಧಿಕರಣದಲ್ಲಿ ಇದರ ಬಗ್ಗೆ ವಿಚಾರವಿರುವುದರಿಂದ ಇಲ್ಲಿ ಕೈಬಿಡಲಾಗಿದೆ. ಅಥವಾ ಕರ್ಮದಿಂದ ಮೋಕ್ಷಲಭ್ಯವೆನ್ನುವ ಪಕ್ಷದಲ್ಲಿ ಹೇಗೆ ವಿಚಾರ ವ್ಯರ್ಥವೋ ಹಾಗೆಯೆ ಜ್ಞಾನದಿಂದ ಲಭ್ಯವೆನ್ನುವ ಪಕ್ಷದಲ್ಲಿಯೂ ವ್ಯರ್ಥವೆ. ಏಕೆಂದರೆ ಮುಂದೆ ಹೇಳುವಂತೆ ಜ್ಞಾನವಿದ್ದರೂ ಮೋಕ್ಷ ಲಭಿಸಬೇಕಿಲ್ಲ. ಆದ್ದರಿಂದ ಸಂದೇಹವೆ ಅನುಚಿತ. ವಸ್ತುತಃ ಸೂತ್ರದ ಬ್ರಹ್ಮಶಬ್ದದಿಂದ

ನಿವಾರಣೆಯಾಗುವುದು ಈ ವಿಷಯಾಭಾವಪೂರ್ವಪಕ್ಷ ಆತಃಶಬ್ದದಿಂದ ನಿವಾರಣೆಯಾಗುವ ಪ್ರಯೋಜನಾಭಾವ ಪೂರ್ವಪಕ್ಷ ಈಗ ಅಪ್ರಸಕ್ತ ಎಂದು ಪ್ರಯೋಜನ ಸಂದೇಹವನ್ನು ತೋರಿಸಿಲ್ಲ.

## ಜಿಜ್ಞಾಸಾಧಿಕರಣ ಪೂರ್ವಪಕ್ಷ-ಅದ್ವೈತಿರೀತಿಯಿಂದ

ಸೂತ್ರದ ಬ್ರಹ್ಮಶಬ್ದಕ್ಕೆ ಬ್ರಹ್ಮನು ಗುಣಪೂರ್ಣನಾದ್ದರಿಂದ ಜೀವನಿಗಿಂತ ವಿಲಕ್ಷಣ ಎಂದು ತಿಳಿಸುವ ಅಭಿಪ್ರಾಯವಿರುವುದರಿಂದ ಆ ಶಬ್ದದಿಂದ ನಿವಾರಣೆಯಾಗುವ ಪೂರ್ವಪಕ್ಷವನ್ನು ಹೇಳಬೇಕು -

ವೇದದಲ್ಲಿ ಕರ್ಮಕಾಂಡ ಕರ್ಮವನ್ನು ಹೇಳಲು ಹೊರಟಿದೆ. ವೇದಾಂತಕ್ಕೆ ಅದ್ವೈತಿಗಳು ಹೇಳಿದಂತೆ ಉಪಕ್ರಮಾದಿ ಲಿಂಗಗಳಿಂದ ನಿರ್ಧರ್ಮಕ ಚೈತನ್ಯವನ್ನು ಹೇಳುವ ಅಭಿಪ್ರಾಯ ಮೇಲುನೋಟಕ್ಕೆ ಕಾಣುತ್ತದೆ. ಹೀಗಾಗಿ ಜೀವನಿಗಿಂತ ಬೇರೆ ಗುಣಪೂರ್ಣ ಬ್ರಹ್ಮನಿಲ್ಲ. ಜೀವ ಸ್ವಪ್ರಕಾಶನಾಗಿ ಸಿದ್ಧನಾಗಿದ್ದಾನೆ. ಆತ್ಮನಿಗಿಂತ ಬೇರೆ ಯಾವುದೂ ಸತ್ಯವಲ್ಲ. ಶಾಸ್ತ್ರವೇದ್ಯವೂ ಅಲ್ಲ. ಸತ್ಯವಲ್ಲದ್ದು ಶಾಸ್ತ್ರವೇದ್ಯವಾದರೆ ಶಾಸ್ತ್ರ ಅಪ್ರಮಾಣವಾದೀತು. ವೇದಾಂತವೇದ್ಯವಾದ ಶುದ್ಧಚೈತನ್ಯ ಅನುಭವದಲ್ಲಿ ಅವೇದ್ಯ ಎನ್ನುವ ವಾದವನ್ನು ಹಿಂದೆಯೆ ನಿರಾಕರಿಸಲಾಗಿದೆ. ವೇದ್ಯವೆ ಆದರೂ ಅವಿದ್ಯೆಯ ಪ್ರಭಾವದಿಂದ ಅವೇದ್ಯವೂ ಹೌದೆನ್ನುವುದನ್ನೂ ಹಿಂದೆ ನಿರಾಕರಿಸಲಾಗಿದೆ. ಪ್ರತ್ಯಕ್ಷ ವಿರೋಧವಿರುವಾಗ ವೇದಾಂತ ಶುದ್ಧ ಚೈತನ್ಯವನ್ನು ಹೇಗೆ ಹೇಳುತ್ತದೆ ಎಂದರೆ ಅದ್ವೈತಿ ರೀತಿಯಿಂದ ಪ್ರತ್ಯಕ್ಷ ದುರ್ಬಲ.

ನ್ಯಾಯವಿವರಣಾನುಸಾರವಾಗಿ ಇಲ್ಲಿ ಟೀಕೆ ಹೀಗೆ ಹೇಳಿದೆ. ಸುಧೆಯಲ್ಲಿ ಯಾವ ರೀತಿಯಿಂದ ನೋಡಿದರೂ ವಿಚಾರ ಅನಾವಶ್ಯಕವೆನ್ನಲು ಪ್ರತ್ಯಕ್ಷ ವಿರುದ್ಧವಾಗಿ ಶ್ರುತಿ ಏನು ಹೇಳಿದರೂ ಅದು ನಿರರ್ಥಕ, ವಿಚಾರಕ್ಕೇ ಅಯೋಗ್ಯವೆಂದು ಪೂರ್ವಪಕ್ಷವಿದೆ.

## ಆತ್ಮಸ್ವಪ್ರಕಾಶ

'ನಾನು' ಎಂಬುದು ತಾರ್ಕಿಕರು ಹೇಳುವಂತೆ ಮಾನಸಾನುಭವವೆಂದರೆ ಅದು ಇನ್ನೊಂದು ಮಾನಸಾನುಭವಕ್ಕೆ ವೇದ್ಯ ಆದೂ ಮತ್ತೊಂದಕ್ಕೆ ಎಂದು ಅನವಸ್ಥೆ. ಜಿಜ್ಞಾಸೆ ಬಂದರೆ ಮಾತ್ರ ಜ್ಞಾನಗೋಚರವಾಗಬೇಕು. ಇಲ್ಲದಿದ್ದರೆ ಇಲ್ಲ, ಅನವಸ್ಥೆ ಇಲ್ಲ ಎನ್ನಕೂಡದು. ಜ್ಞಾನಗೋಚರವಾಗದ ಜ್ಞಾನ ಒಂದರ ಅಸ್ತಿತ್ವದಲ್ಲಿ ಏನು ಪ್ರಮಾಣ? ಆದರಿಂದ 'ನಾನು' ಎಂಬುದು ಸ್ವಪ್ರಕಾಶಾತ್ಮಾನುಭವವೆನ್ನಬೇಕು. ಪ್ರಾಭಾಕರರ ಪ್ರಕಾರ ಜ್ಞಾನ ಸ್ವಪ್ರಕಾಶ. ಆತ್ಮನಲ್ಲ. ಜ್ಞಾನ ತನ್ನನ್ನು ತಾನು ಕಾಣುವಾಗ ತನಗೆ ಆಶ್ರಯನಾದ ಆತ್ಮನನ್ನೂ ಕಾಣುತ್ತದೆ ಎನ್ನುತ್ತಾರೆ. ಆದರೆ ನಿದ್ದೆಯಲ್ಲಿಯೂ 'ನಾನು' ಎಂಬ ಜ್ಞಾನವಿದೆ. ಅದು ಮಾನಸಜ್ಞಾನವಲ್ಲ. ಆಗಲೂ ಮಾನಸಜ್ಞಾನವಿದ್ದರೆ ಅದು ನಿದ್ದೆಯೆ ಅಲ್ಲ. ನಿದ್ದೆಯಿಂದ ಎದ್ದಾಗ ನಾನು ಇಷ್ಟು ಹೊತ್ತು ಸುಖವಾಗಿ ನಿದ್ದೆ ಮಾಡಿದ್ದೇನೆ ಎಂದು ನಮ್ಮ ನಿದ್ದೆಯನ್ನು ನಾವು ನೆನೆಯುವುದರಿಂದ ನಿದ್ದೆಯಲ್ಲಿ ಆತ್ಮಾನುಭವವಿದೆ. ಅದು ಸ್ವಪ್ರಕಾಶ. ಆತ್ಮನ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲವೆನ್ನಲು ಯಾವುದಾದರೊಂದು ಬಗೆಯಿಂದ ಆತ್ಮನು ಪ್ರಕಾಶನೆಂದಾದರೆ ಸಾಕು. ವಸ್ತುಸ್ಥಿತಿ ಆತ ಸ್ವಪ್ರಕಾಶನೆಂದು.

## ಪೂರ್ವಪಕ್ಷ ಪ್ರಾಭಾಕರ ರೀತಿಯಿಂದಲ್ಲ

ಪ್ರಾಭಾಕರ ರೀತಿಯಿಂದ ಪೂರ್ವಪಕ್ಷವೆಂದರೆ ನ್ಯಾಯವಿವರಣ ವಿರೋಧ. ಅಲ್ಲಿ ಆತ್ಮ ಸ್ವಪ್ರಕಾಶ ಎಂದಿದೆ. ಅದು ವಸ್ತುಸ್ಥಿತಿಯ ಅಭಿಪ್ರಾಯದಿಂದ ಹೇಳಿದ್ದೆಂದರೂ ಪ್ರಾಭಾಕರ ರೀತಿಯಿಂದ ಪೂರ್ವಪಕ್ಷ ಮಾಡುವುದಾದರೆ ಜೀವಸ್ವರೂಪದ ಬಗ್ಗೆ ಸಂದೇಹವಿಲ್ಲದಿದ್ದರೂ ಶರೀರಾದಿ ವಿಲಕ್ಷಣತ್ವದಂಥ ಸತ್ಯವಸ್ತುಗಳು ವಿಚಾರ ವಿಷಯವಾಗುವ

ಸಂಭವವಿದೆ. ಜೀವ ಆನಂದರೂಪನೆ ಅಲ್ಲವೆ? ಜ್ಞಾನರೂಪನೆ ಅಲ್ಲವೆ, ಅಣುವೆ, ಮಹತ್ತೆ ಎಂದು ಮುಂತಾಗಿ ವಿಚಾರ ಶಕ್ಯವಿದೆ. ವೇದವೆಲ್ಲ ಕಾರ್ಯಪರವಾದ್ದರಿಂದ ಜೀವವಿಲಕ್ಷಣನಾದ ಬ್ರಹ್ಮನ ವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲ ಎಂಬ ಆಂಶದಲ್ಲಿ ಪ್ರಾಭಾಕರ ರೀತಿ. ಶರೀರಾದಿ ವಿಲಕ್ಷಣತ್ವಾದಿ ವಿಷಯದಲ್ಲಿ ಅವು ಸತ್ಯವಲ್ಲ, ತತ್ವಾವೇದಕವಾದ ವೇದಾಂತದಲ್ಲಿ ಅವುಗಳ ವಿಚಾರ ಶಕ್ಯವಿಲ್ಲವೆಂದು ಅದ್ವೈತರೀತಿ ಎಂದರೆ ಅರ್ಧಚರತೀಯ ನ್ಯಾಯವಾಗುತ್ತದೆ.

ಸುಧೆಯಲ್ಲಿ ಕಾರ್ಯಪರತ್ವ ಪೂರ್ವಪಕ್ಷವಿದೆ. ಆದರೆ ಅದು ಸೂತ್ರದ ಅತಃಶಬ್ದದಿಂದ ಪರಿಹಾರವಾಗುವ ಬೇರೆಯ ಒಂದು ಪೂರ್ವಪಕ್ಷ. ಪ್ರಕೃತ ಟೀಕೆಯಲ್ಲಿ ನ್ಯಾಯವಿವರಣಕ್ಕೆ ಅನುಸಾರವಾಗಿ ಬ್ರಹ್ಮಶಬ್ದದಿಂದ ಪರಿಹಾರವಾಗುವ ಪೂರ್ವಪಕ್ಷವನ್ನು ತೋರಿಸಲಾಗಿದೆ. ಏಕೆಂದರೆ ಬ್ರಹ್ಮಶಬ್ದ ಅದ್ವೈತಿಗಳು ಹೇಳುವ ಜೀವಬ್ರಹ್ಮೈಕ್ಯಕ್ಕೆ ವಿರೋಧಿ.

## ಪೂರ್ವಪಕ್ಷ ಪೂರ್ತಿ ಅದ್ವೈತ ರೀತಿಯಲ್ಲ

'ಸ್ವಪ್ರಕಾಶ ಶುದ್ಧ ಆತ್ಮಸ್ವರೂಪ ಸಿದ್ಧವಾಗಿರುವುದರಿಂದ ಅದನ್ನು ವರ್ಣಿಸುವ ವೇದಾಂತ ಅನುವಾದಕ' ವೆನ್ನುವುದು ಅದ್ವೈತ ರೀತಿಯಲ್ಲ. ಅದ್ವೈತಿಗಳು ಅದನ್ನು ಒಪ್ಪಿದರೆ ಅವರ ಜಿಜ್ಞಾಸಾಧಿಕರಣಸಿದ್ಧಾಂತ ಹೊರಡಲಾರದು, ಸ್ವಪ್ರಕಾಶ ಎಂದರೆ ಅದ್ವೈತದಲ್ಲಿ ಕರ್ತೃಕರ್ಮ-ವಿರೋಧಭಯದಿಂದ ಅವೇದ್ಯ ಎಂದು ಅರ್ಥ ಹೇಳುತ್ತಾರೆ. ಅದರಿಂದ ವೇದಾಂತವು ಅಖಂಡ ಆತ್ಮಸ್ವರೂಪ ಮಾತ್ರ ಪರ ಎಂಬ ವಿಷಯದಲ್ಲಿ ಮಾತ್ರ ಅದ್ವೈತರೀತಿ. ಆತ್ಮನಿಗೆ ಸ್ವಪ್ರಕಾಶಾನು- ಭವಸಿದ್ಧತ್ವವು ಸಿದ್ಧಾಂತರೀತಿಯಿಂದ.

ಅಥವಾ ಆತ್ಮ ಸ್ವಪ್ರಕಾಶಾನುಭವಕ್ಕೆ ವಿಷಯನೂ ಆಗುತ್ತಾನೆ. ಇಲ್ಲಿ 'ವಿಷಯ'ವೆಂದರೆ ಅನುಭವವನ್ನು ಮಾತಿನಲ್ಲಿ ವ್ಯಕ್ತಗೊಳಿಸಲು ನಿಮಿತ್ತವೆಂದರ್ಥ. ಆತ್ಮನೂ ಇಂಥ ವಿಷಯನೆಂದು ಅದ್ವೈತಿಗಳು ಒಪ್ಪಿದ್ದಾರೆ. ಆತ್ಮ ತನ್ನ ಸ್ವರೂಪವೆ ಆದ ಪ್ರಕಾಶಕ್ಕೆ ತಾನು ಕರ್ಮ ಎನಿಸದಿದ್ದರೂ ತನ್ನಿಂದ ಉಂಟಾಗುವ ಶಬ್ದಪ್ರಯೋಗಕ್ಕೆ ತಾನು ವಿಷಯನಾಗಲು ಯೋಗ್ಯ. ಈ ಅರ್ಥದಲ್ಲಿ ಅವನು ಸ್ವತಃಸಿದ್ಧ. ಅಂಥ ಆತ್ಮನ ಸ್ವರೂಪಭೂತವಾದ ಐಕ್ಯವನ್ನು ವೇದಾಂತವು ಬೋಧಿಸಿದರೆ ಅದು ಅನುವಾದಕವೆಂದು ಅದ್ವೈತರೀತಿಯಿಂದಲೆ ಹೇಳಲು ಬರುತ್ತದೆ.

## ಪೂರ್ವಪಕ್ಷಸಿದ್ಧಾಂತ ಸಂಕ್ಷೇಪ

ಜೀವನಿಗಿಂತ ಬೇರೆ ಈಶ್ವರ ಎಂಬುವನಿಲ್ಲ. ಜೀವ ಸ್ವಪ್ರಕಾಶನಾದ್ದರಿಂದ ವಿಚಾರ ಯೋಗ್ಯನಲ್ಲ. ಜ್ಞಾನದಿಂದ ಮೋಕ್ಷವು ಬರುತ್ತಿಲ್ಲವಾದ್ದರಿಂದ ಮೋಕ್ಷವು ಫಲವೂ ಅಲ್ಲ. ಅದರಿಂದ ವಿಚಾರಬೇಡ ಎಂದು ಪೂರ್ವಪಕ್ಷ. ಜೀವ ಅಲ್ಪಗುಣ. ಪೂರ್ಣಗುಣನಾದ ಭಗವಂತ ಬೇರೆಯೆ ಇದ್ದಾನೆ. ಅವನ ಬಗ್ಗೆ ವಿಚಾರಬೇಕು. ಅವನ ಜ್ಞಾನದಿಂದ ಮೋಕ್ಷ ಸಿಗುವುದರಿಂದ ಫಲವೂ ಇದೆ ಎಂದು ಸಿದ್ಧಾಂತ.

## ಜಿಜ್ಞಾಸಾಧಿಕರಣ ಸಿದ್ಧಾಂತ

ಬ್ರಹ್ಮಶಬ್ದವು 'ಗುಣಪೂರ್ಣ' ಎಂಬ ಅರ್ಥವನ್ನು ಕೊಡುತ್ತದೆ. 'ನಾನು' ಎಂದು ಅನುಭವದಲ್ಲಿ ಕಾಣುವ ಜೀವ 'ಅಪೂರ್ಣಗುಣ' ಎಂದೇ ಸಿದ್ಧನಾಗಿದ್ದಾನೆ. ಅದರಿಂದ ಬ್ರಹ್ಮಶಬ್ದವು ಹೇಳುವ ಗುಣಪೂರ್ಣನು ಜೀವನಿಗಿಂತ ಬೇರೆ ಎಂದು ತಿಳಿಯುತ್ತದೆ. ಅನುಭವವೂ ಜೀವನನ್ನು ಗ್ರಹಿಸುವಾಗ ಬ್ರಹ್ಮಶಬ್ದವು ಹೇಳುವ ಗುಣಪೂರ್ಣನಿಗಿಂತ ಜೀವನು ಬೇರೆ ಎಂದೇ ಗ್ರಹಿಸುತ್ತದೆ. ಬ್ರಹ್ಮಜಿಜ್ಞಾಸೆ ಮಾಡೆಂದು ಶ್ರುತಿ ವಿಧಿಸುತ್ತಿದೆ. ಬ್ರಹ್ಮ ಜಿಜ್ಞಾಸ್ಯ. ಜೀವ ಜಿಜ್ಞಾಸು. ಇವರಿಬ್ಬರೂ ಬೇರೆಯೆ ಆಗಿರಬೇಕು. 'ಜೀವ ಪರಮಾತ್ಮರು ಬೇರೆ. ಅವರ ಸ್ವಭಾವ ಬೇರೆಯಾದ್ದರಿಂದ

ನೀರು ಬೆಂಕಿಗಳಂತೆ' ಎಂದು ಅನುಮಾನವೂ ಇದೆ. ಹೀಗೆ ಬ್ರಹ್ಮ ಬೇರೆಯೆ ಇರುವುದರಿಂದ ಅವನು 'ನಾನು' ಎಂಬ ಸ್ವಪ್ರಕಾಶಾನುಭವದಲ್ಲಿ ಜೀವನಿಗೆ ಗೋಚರನಲ್ಲ. ಅವನು ನಿರ್ಗುಣ, ಎಂಟು ಗುಣಉಳ್ಳವನೆಂದು ಮುಂತಾಗಿ ವಿವಾದವೂ ಇರುವುದರಿಂದ ಸಂದೇಹವಿದೆ. ವಿಚಾರಕ್ಕೆ ಯೋಗ್ಯನೇ ಆಗಿದ್ದಾನೆ. ಪೂರ್ಣತ್ವ ಅಪೂರ್ಣತ್ವಗಳು ಅವಾಸ್ತವವಾದ್ದರಿಂದ ಭೇದವಿಲ್ಲ ಎನ್ನಬಾರದು. ಪೂರ್ಣತ್ವ ಶ್ರುತಿಸಿದ್ಧ. ಅಪೂರ್ಣತ್ವ ಸಾಕ್ಷಿವೇದ್ಯ. ಶ್ರುತಿ ಸಾಕ್ಷಿಗಳೆರಡೂ ಅನಾದಿ ನಿರ್ದೋಷ. ಅವುಗಳಿಂದ ಸಿದ್ಧವಾದುದು ಅವಾಸ್ತವವಾಗಲಾರದು.

ಸಮಸ್ತ ವೇದಾಂತವು ಉಪಕ್ರಮ ಮುಂತಾದ ಬಲವಾದ ಯುಕ್ತಿಗಳಿಂದ ಅದ್ವೈತಪರವೆಂದು ಸಿದ್ಧವಾಗಿರುವಾಗ ಒಂದು ಬ್ರಹ್ಮಶಬ್ದ ಅದಕ್ಕೆ ವಿರುದ್ಧವಾಗಿ ಗುಣಪೂರ್ಣತ್ವವನ್ನು ಹೇಳೀತೆ? ಅದ್ವೈತಿಗಳು ಹೇಳುವಂತೆ ವಸ್ತುಪೂರ್ಣತ್ವರೂಪವಾದ ಅದ್ವೈತವನ್ನೆ ಬ್ರಹ್ಮಶಬ್ದ ಹೇಳಬೇಕು'- ಈ ಆಕ್ಷೇಪ ಸರಿಯಲ್ಲ. ಸಮಸ್ತ ವೇದಾಂತವು ವಿಚಾರವಿಧಿಗೆ ಅಧೀನ. ವಿಚಾರವಿಧಿ ಪ್ರಧಾನ. ಅದರಲ್ಲಿರುವ ಬ್ರಹ್ಮಶಬ್ದ ಪ್ರಬಲ. ಅದ್ವೈತ ಬೋಧಕವಾದ ವೇದಾಂತ ವಾಕ್ಯಪ್ರಮಾಣ. ಉಪಕ್ರಮಾದಿಗಳು ಲಿಂಗಪ್ರಮಾಣ. ಬ್ರಹ್ಮಶಬ್ದ ಶ್ರುತಿಪ್ರಮಾಣ. ವಾಕ್ಯಲಿಂಗಗಳಿಗಿಂತ ಶ್ರುತಿ ಪ್ರಬಲ ಎಂದು ಪೂರ್ವ ಮೀಮಾಂಸೆಯಲ್ಲಿ ನಿರ್ಣಯವಾಗಿದೆ. ಇಲ್ಲಿಯೂ ಮುಂದೆ ವಾಮನಾಧಿಕರಣದಲ್ಲಿ ಅದು ಸ್ಪಷ್ಟವಿದೆ. ವೇದಾಂತ ಐಕ್ಯವನ್ನು ಹೇಳಲು ಮೊದಲಿಗೆ ಬ್ರಹ್ಮಶಬ್ದದಿಂದ ಬ್ರಹ್ಮನನ್ನು ಹೇಳಬೇಕು. ಅದರಿಂದ ಬ್ರಹ್ಮಶಬ್ದ ಉಪಜೀವ್ಯವೂ ಹೌದು. ಹೀಗಾಗಿ ಸಂಖ್ಯೆಯಲ್ಲಿ ಬ್ರಹ್ಮಶಬ್ದ ಒಂದೇ ಆಗಿದ್ದರೂ ಸ್ವಭಾವದಿಂದ ಪ್ರಬಲವೆ ಆಗಿದೆ. ಸಂಖ್ಯಾಪ್ರಾಬಲ್ಯಕ್ಕಿಂತಲೂ ಸ್ವಭಾವ ,ಪ್ರಾಬಲ್ಯ ಮೇಲು. ಬ್ರಹ್ಮಶಬ್ದಕ್ಕೆ ವಸ್ತುಪೂರ್ಣತ್ವ ಅರ್ಥಹೇಳಲು ಬರುವುದಿಲ್ಲವೆಂದು ಮುಂದೆ ಹೇಳುತ್ತೇವೆ. ಅದರಿಂದ ಅದು ನಿರವಕಾಶ. ಉಪಕ್ರಮಾದಿಗಳು ದ್ವೈತಪರವಾಗಬಲ್ಲವು. ಅದರಿಂದ ಸಾವಕಾಶ. ವಸ್ತುತಃ ವಿಚಾರವಿಧಾಯಕವಾಕ್ಯಗಳು ಸಾವಿರಾರು. ಅವುಗಳಲ್ಲಿರುವ ಓಂ ಬ್ರಹ್ಮ ಆತ್ಮ ನಾರಾಯಣಾದಿ ಶಬ್ದಗಳೂ ಸಾವಿರಾರು. ಅವುಗಳಲ್ಲಿ ಒಂದೊಂದು ಶಬ್ದವೂ ನಾನಾವಿಧ ವಿಚಾರ ವಿಧಿಗಳಲ್ಲಿ ಬರುವುದರಿಂದ ಸಂಖ್ಯೆಯಲ್ಲಿಯೂ ಅಪರಿಮಿತವೆ. ಬ್ರಹ್ಮಶಬ್ದವು ಜೀವಬ್ರಹ್ಮ ಭೇದದ ವಿಷಯದಲ್ಲಿ ಪ್ರತ್ಯಕ್ಷ ಅನುಮಾನ ಆಗಮ ಎಂಬ ಮೂರು ಪ್ರಮಾಣಗಳನ್ನು ಸೂಚಿಸುತ್ತಿದೆ. ಅವುಗಳಲ್ಲಿ ಪ್ರತ್ಯಕ್ಷಾನುಭವ ಒಂದಕ್ಕೇ ಸಾವಿರ ಆಗಮ ವಾಕ್ಯಗಳಿದ್ದರೂ ಅವು ಬಾಧಕವಾಗಲಾರವು. ಆದರಿಂದ ವಿಷಯಾದಿಗಳಿರುವುದರಿಂದ ವಿಚಾರ ಯುಕ್ತವೇ ಆಗಿದೆ.

ಬ್ರಹ್ಮಶಬ್ದಕ್ಕೂ ಗುಣಪೂರ್ಣ ಎಂದೇ ಅರ್ಥ. ಓಂಕಾರಕ್ಕೂ ಅದೇ ಅರ್ಥವೆಂದರೆ ವ್ಯರ್ಥವಾಗುವುದಿಲ್ಲವೆ? ಎಂದರೆ, ಬ್ರಹ್ಮ ಜೀವನಿಗಿಂತ ಭಿನ್ನನಾಗಿದ್ದು ವಿಚಾರಯೋಗ್ಯನೆನ್ನಲು 'ತದ್ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬಲ್ಲಿ ಗುಣಪೂರ್ಣ ಎಂಬ ಅರ್ಥದ ಬ್ರಹ್ಮಶಬ್ದವಿರುವಂತೆ 'ಓಮಿತ್ಯೇತದಕ್ಷರಮುದ್ಗೀಥಮುಪಾಸೀತ' ಎಂಬಲ್ಲಿ ಅದೇ ಅರ್ಥದ ಓಂಕಾರವಿದೆ. ಇದು ಉಪಲಕ್ಷಣ. 'ನಾರಾಯಣಂ ಮಹಾಜ್ಞೇಯಂ' ಎಂಬಲ್ಲಿ ಅದೇ ಅರ್ಥದ ನಾರಾಯಣ ಶಬ್ದವಿದೆ. ಹೀಗೆ ಅನೇಕ ವಿಚಾರವಿಧಿ ವಾಕ್ಯಗಳಲ್ಲಿ ಅನೇಕ ಸಿದ್ಧಾಂತ ಯುಕ್ತಿಗಳಿವೆ ಎಂದು ಸೂಚಿಸಲು ಓಂಕಾರ ಸೂತ್ರದಲ್ಲಿ ಬೇಕು.

ಒಂದೇ ಅರ್ಥದ ಎರಡು ಶಬ್ದಗಳಿಗೆ ಅನ್ವಯ ಹೇಳಿದರೆ 'ಗುಣಪೂರ್ಣನಾದ ಗುಣಪೂರ್ಣ' ಎಂದಾದೀತೆಂಬ ಸಮಸ್ಯೆ ಬಂದರೆ ಎರಡೂ ವಿಷ್ಣು ಎಂಬರ್ಥದಲ್ಲಿ ಯೋಗರೂಢವಾಗಿರುವುದರಿಂದ ಒಂದರ ಯೋಗಾಂಶವನ್ನು ಇನ್ನೊಂದರ ರೂಢ್ಯಂಶವನ್ನೂ ಇಟ್ಟುಕೊಂಡು ಅನ್ವಯ ಹೇಳಬೇಕು. 'ಆತ್ಮೇತಿ ತೂಪಗಚ್ಛಂತಿ' ಸೂತ್ರದಲ್ಲಿ ಸುಧೆಯಲ್ಲಿ ಎರಡು ಆತ್ಮ ಶಬ್ದಗಳಿಗೆ ಹಾಗೇ ಅನ್ವಯವೆಂದು ಹೇಳಿದೆ. 'ಪರಿ ಯದಿಂದ್ರ ರೋದಸೀ ಉಭೇ' ಎಂಬ ಮಂತ್ರವ್ಯಾಖ್ಯಾನದಲ್ಲಿ ಋಗ್ಭಾಷ್ಯ ಟೀಕೆಯಲ್ಲಿ ಎರಡು ಇಂದ್ರಶಬ್ದಗಳಿಗೆ ಹಾಗೇ ಅನ್ವಯ ಉಕ್ತವಾಗಿದೆ.

ಓಂಕಾರ ಪ್ರತಿಪಾದ್ಯನಾದ ಬ್ರಹ್ಮನನ್ನು ಜಿಜ್ಞಾಸೆ ಮಾಡಬೇಕೆಂದು ಹೇಳುವುದಕ್ಕೆ ಇನ್ನೊಂದು ಪ್ರಯೋಜನವಿದೆ. ಓಂಕಾರಾರ್ಥವೆ ವ್ಯಾಹೃತಿ ಗಾಯತ್ರಿ ಪುರುಷಸೂಕ್ತಗಳ ಮೂಲಕ ಸಮಸ್ತವೇದಾರ್ಥ. ಆದರಿಂದ ಸಮಸ್ತವೇದಗಳು ಈ ವಿಚಾರಶಾಸ್ತ್ರದಲ್ಲಿ ವಿಚಾರಕ್ಕೊಳಪಡುವ ಪ್ರಮಾಣಗಳು ಎಂದು ಸೂಚಿಸಿದಂತಾಗುತ್ತದೆ. 'ಸ್ರವತ್ಯನೋಂಕೃತಂ ಬ್ರಹ್ಮ' ಎನ್ನುವಂತೆ ಅದೃಷ್ಟಫಲಕ್ಕಾಗಿಯೂ ಓಂಕಾರ ಬೇಕು

## ಅಥಶಬ್ದಕ್ಕೆ ಮಂಗಳ ಅರ್ಥವಲ್ಲ

ಮಂಗಲ ಅಥಶಬ್ದೋಚ್ಚಾರಣದಿಂದಾಗುವ ಪ್ರಯೋಜನವೆ ಹೊರತು ಶಕ್ತಿಯಿಂದಾಗಲಿ ಲಕ್ಷಣೆಯಿಂದಾಗಲಿ ಅಥಶಬ್ದದಿಂದ ಮಂಗಳದ ಪ್ರತೀತಿ ಉಂಟಾಗುವುದಿಲ್ಲ. ಸೂತ್ರದಲ್ಲಿ ಅಥಶಬ್ದದಿಂದ ಮಂಗಳ ವಿವಕ್ಷಿತವೂ ಅಲ್ಲ. ವಿವಕ್ಷೆ ಮಾಡಿದರೆ ಅಧಿಕಾರದ ಬಗ್ಗೆ ಸೂತ್ರದಲ್ಲಿ ಎನೂ ಹೇಳಿದಂತಾಗುವುದಿಲ್ಲ ಎಂಬ ಪ್ರಸಂಗವೂ ಇದೆ.

## ಜಿಜ್ಞಾಸುವಿನ ಅರ್ಹತೆಗಳು

'ಭಕ್ತಿಮಾನ್ ಪರಮೇ ವಿಷ್ಣೌ' ಎಂದು ಮುಂತಾಗಿ ನಮ್ಮ ಭಾಷ್ಯದಲ್ಲಿ ಹೇಳಿದ ವಿಷ್ಣು ಭಕ್ತಿಪೂರ್ವಕ ಅಧ್ಯಯನ ಮುಂತಾದುವೆ ಜಿಜ್ಞಾಸುವನಲ್ಲಿರಬೇಕಾದ ನಿಜವಾದ ಅರ್ಹತೆಗಳು. ಪರಭಾಷ್ಯಕಾರರು ಹೇಳಿದುದಲ್ಲ.

## .ಟೀಕಾಪಾಠ ಶೋಧನೆ

ಅಥಶಬ್ದಾರ್ಥ ವಿವರಣೆಗೆ ಹೊರಟ ಟೀಕಾಪಂಕ್ತಿಯಲ್ಲಿ 'ತತ್ಫಲತಯಾ' 'ಅಥಶಬ್ದ ಮಂಗಳವನ್ನು ಉಂಟುಮಾಡುವುದರಿಂದ' ಎಂದಿದೆ. 'ತತ್ಪರತಯಾ' 'ಮಂಗಳವೆಂಬ ಅರ್ಥದಲ್ಲಿ ಅಥಶಬ್ದಕ್ಕೆ ತಾತ್ಪರ್ಯವಿದೆ' ಎಂದೂ ಪಾಠವಿದೆ. ಇದು ಸರಿಯಲ್ಲ. ಅಥಶಬ್ದದಲ್ಲಿ ಆಕಾರ ವಿಷ್ಣುವಾಚಕ. ವಿಷ್ಣು ಮಂಗಳಸ್ವರೂಪ. ಆದರಿಂದ ಮಂಗಳಪರತ್ವವನ್ನು ಅಥಶಬ್ದಕ್ಕೆ ಏಕೆ ಹೇಳಬಾರದು? ಎಂದರೆ ಗ್ರಂಥಾರಂಭದಲ್ಲಿ ಇಂಥ ಮಂಗಳ ಪ್ರಸಕ್ತವಲ್ಲ. ವಿಘ್ನ ನಿವಾರಣೆ ಮಾಡಬಲ್ಲ ವಿಷ್ಣುಸ್ಮರಣೆ ಅಥಶಬ್ದೋಚ್ಚಾರಣೆಗಳು ಮಂಗಳಗಳು. ಇವು ಅಥಶಬ್ದಾರ್ಥವಲ್ಲ. 'ಮಂಗಲೋಕ್ಯಾದೇಃ ಶಬ್ದಾಂತರೇಣಾಪಿ ಸಂಭವಾತ್' 'ಮಂಗಲವನ್ನು ಹೇಳುವುದು ಬೇರೆ ಶಬ್ದದಿಂದಲೂ ಶಕ್ಯ' ಎಂಬ ಟೀಕಾವಾಕ್ಯಕ್ಕೂ ಮಂಗಳ ಅಥಶಬ್ದದ ಅರ್ಥ ಎಂದರ್ಥವಲ್ಲ. 'ಮಂಗಲವನ್ನು ಹೇಳುವುದು' ಎಂದರೆ ಮಂಗಳಕರವಾದ ಅಥಶಬ್ದಾದಿಗಳನ್ನು ಉಚ್ಚರಿಸುವುದು ಎಂದರ್ಥ. 'ತತ್ಪರತಯಾ' ಎಂಬ ಪಾಠ ಪ್ರಾಮಾಣಿಕವಾಗಿರುವುದಾದರೆ 'ಪರ' ಎಂದರೆ ಮುಖ್ಯಪ್ರಯೋಜನ, ಅಥಶಬ್ದಕ್ಕೆ ಮಂಗಳ ಉಂಟುಮಾಡುವುದೆ ಮುಖ್ಯಪ್ರಯೋಜನ ಎಂದು ಅಭಿಪ್ರಾಯ ಹೇಳಬೇಕು.

'ಅಥಶಬ್ದೋ ಮಂಗಲಾರ್ಥಃ' ಎಂಬ ಭಾಷ್ಯದಲ್ಲಿ ಎರಡೂ ಅರ್ಥ ವಿವಕ್ಷಿತವೆನ್ನಬಹುದು. ವಿಷ್ಣುಸ್ಮರಣ ಅಥಶಬ್ದೋಚ್ಚಾರಣರೂಪ ಮಂಗಲವು ಅಥಶಬ್ದಕ್ಕೆ 'ಅರ್ಥ', ಅಂದರೆ ಪ್ರಯೋಜನ ಎಂದು. ಮತ್ತು ಮಂಗಲಸ್ವರೂಪನಾದ ವಿಷ್ಣು ಅಥಶಬ್ದಕ್ಕೆ 'ಅರ್ಥ' ಅಂದರೆ ವಾಚ್ಯ ಎಂದು. ವಿಷ್ಣುವಾಚಕವಾದ್ದರಿಂದ ಅಥಶಬ್ದ ವಿಷ್ಣುಸ್ಮರಣೆ ಉಂಟುಮಾಡುತ್ತ ಮಂಗಲಪ್ರಯೋಜನಕವಾಗುತ್ತದೆ ಎಂದು ತತ್ವಪ್ರದೀಪ ಹೇಳಿದೆ.

## ಅಥಾತಃ ಶಬ್ದಗಳ ವೈಶಿಷ್ಟ್ಯ

ಎಲ್ಲ ಸೂತ್ರಗ್ರಂಥಗಳಲ್ಲಿ ಅಥ ಅತಃ ಶಬ್ದಗಳು ಪ್ರಾರಂಭದಲ್ಲಿ ತಪ್ಪದೆ ಬರಲು ಮೂರು ಕಾರಣಗಳಿವೆ. ೧. ಅವಶ್ಯ ಹೇಳಬೇಕಾಗಿರುವುದನ್ನು ಅವು ಹೇಳುತ್ತವೆ. ೨. ಆ ಶಬ್ದಗಳ ಸ್ವರೂಪದಲ್ಲಿಯೆ ಏನೋ ಶಕ್ತಿ ಅಡಗಿದೆ. ೩. ಅತ್ಯಂತ ಪ್ರಶಸ್ತವಾದ ಅರ್ಥಗಳು ಅವುಗಳಿಗೆ ಇವೆ.

## 'ಮಹತ್ತತ್ವ' ಶಬ್ದಪ್ರಯೋಗ

'ಮಹತ್‌ತತ್ವ' 'ಮಹಾತತ್ವ'ವಾಗಬೇಕೆಂದು 'ಆನ್‌ಮಹತಃ ಸಮಾನಾಧಿಕರಣ ಜಾತೀಯಯೋಃ' ಎಂಬ ಪಾಣಿನಿಸೂತ್ರ ಹೇಳುತ್ತದೆ. 'ಮಹತ್ತತ್ವ' ಎಂಬ ಪ್ರಯೋಗ ಸರಿಯೆ? ಈ ಪ್ರಶ್ನೆಗೆ ಸಮಾಧಾನ - ಈ ಸೂತ್ರದಲ್ಲಿ ಪದಗಳ ಜೋಡಣೆಯಲ್ಲಿ ವೈಚಿತ್ರ್ಯವಿರುವುದರಿಂದ ಈ ಸೂತ್ರದಲ್ಲಿ ಹೇಳಿದ ಆಕಾರಾದೇಶ ನಿಯಮ ಎಲ್ಲ ಕಡೆ ಅನ್ವಯಿಸವುದಿಲ್ಲ ಎಂದು ಸೂಚಿತವಾಗುತ್ತದೆ - 'ಮಹತಃ ಆತ್' ಎಂದು ಸ್ಥಾನವನ್ನು ಮೊದಲಿಗೆ ಹೇಳಿ ಬಳಿಕ ಆದೇಶವನ್ನು ಹೇಳಬೇಕಾಗಿತ್ತು. ವ್ಯತ್ಯಾಸ ಮಾಡಿ 'ಆನ್ಮಹತಃ' ಎಂದಿದೆ. ದ್ವಂದ್ವಸಮಾಸದಲ್ಲಿ ಕಡಿಮೆ ಸ್ವರಾಕ್ಷರ ಉಳ್ಳಶಬ್ದ ಮೊದಲಿಗೆ ಬರಬೇಕು. ಆದರೆ ಇಲ್ಲಿ ವ್ಯತ್ಯಾಸ ಮಾಡಿ 'ಸಮಾನಾಧಿಕರಣ ಜಾತೀಯಯೋಃ' ಎಂದಿದೆ. 'ಸಂಜ್ಞಾಛಂದಸೋ- ರ್ಬಹುಲಂ' ಎಂಬ ವಾರ್ತಿಕವೂ ರೂಢಿಯ ಹೆಸರಾದ 'ಮಹತ್ತತ್ವ' ಶಬ್ದದಲ್ಲಿ ಆಕಾರಾದೇಶ ಮಾಡದಿರುವುದನ್ನು ಸಮರ್ಥಿಸುತ್ತದೆ.

## ಯೋಗ್ಯಜಿಜ್ಞಾಸುಗಳ ಲಕ್ಷಣ

ಹರಿಭಕ್ತಿಯನ್ನೂ ಶಮದಮಾದಿಗಳನ್ನೂ ಸಂಪಾದಿಸಿ ವೇದಾಧ್ಯಯನ ಮಾಡಿದರೆ ಅದು ಬ್ರಹ್ಮವಿಚಾರಕ್ಕೆ ಬೇಕಾಗುವ ಕನಿಷ್ಠ ಅರ್ಹತೆ ಎನಿಸುವುದು. ಅಂದರೆ ಒಬ್ಬ ವ್ಯಕ್ತಿಯಲ್ಲಿರುವ ಅಧ್ಯಯನ ಶಮದಮಾದಿ ಮತ್ತು ವಿಷ್ಣುಪಾದಶರಣಾಗತಿ ಇವುಗಳಲ್ಲಿ ಶಮದಮಾದಿ ಮತ್ತು ವಿಷ್ಣುಪಾದ- ಶರಣಾಗತಿಗಳು ಅಧ್ಯಯನಕ್ಕಿಂತ ಕಡಿಮೆ ಪ್ರಮಾಣದಲ್ಲಿದ್ದರೆ ಅದು ಕನಿಷ್ಠ ಅರ್ಹತೆ. ವಿಷ್ಣುಪಾದ- ಶರಣಾಗತಿಯೊಂದೆ ಅಧ್ಯಯನ ಶಮದಮಾದಿಗಳಿಗಿಂತ ಕಡಿಮೆ ಇದ್ದರೆ ಅದು ಮಧ್ಯಮ ಅರ್ಹತೆ. ಅಧ್ಯಯನ ಶಮದಮಾದಿಗಳು ವಿಷ್ಣುಪಾದ ಶರಣಾಗತಿಗಿಂತ ಕಡಿಮೆ ಇದ್ದರೆ ಅದು ಉತ್ತಮ ಅರ್ಹತೆ.

## ಅತಃಶಬ್ದಾರ್ಥ

'ಅತಃ' ಅದರಿಂದ, ಎಂದು ಹೇಳಿದರೆ 'ಯಾವುದರಿಂದ?' ಎಂಬ ಪ್ರಶ್ನೆ ಬರುತ್ತದೆ. ಹಿಂದೆ ಪ್ರಕೃತವಾದುದನ್ನೆ ಮನಸ್ಸಿನಲ್ಲಿಟ್ಟುಕೊಂಡು 'ಅದರಿಂದ' ಎಂದು ಸರ್ವನಾಮ ಶಬ್ದವನ್ನು ಪ್ರಯೋಗಿಸುತ್ತೇವೆ. ಸೂತ್ರದಲ್ಲಿ 'ಅತಃ' ಶಬ್ದಕ್ಕೆ ಭಾಷ್ಯದಲ್ಲಿ 'ನಾರಾಯಣನ ಅನುಗ್ರಹವಿಲ್ಲದೆ ಮೋಕ್ಷವಿಲ್ಲ. ಜ್ಞಾನವಿಲ್ಲದೆ ನಾರಾಯಣನ ಪರಮಾನುಗ್ರಹ ಲಭ್ಯವಿಲ್ಲ. ಆದರಿಂದ ಬ್ರಹ್ಮವಿಚಾರ ಮಾಡಬೇಕು' ಎಂದು ಅರ್ಥ ಉಕ್ತವಾಗಿದೆ. ಇಲ್ಲಿ ಮೋಕ್ಷಕ್ಕೆ ನಾರಾಯಣನ ಅನುಗ್ರಹವು ಕಾರಣ. ಅನುಗ್ರಹಕ್ಕೆ ಜ್ಞಾನ ಕಾರಣ. ಜ್ಞಾನಕ್ಕೆ ವಿಚಾರ ಕಾರಣ - ಇವೆಲ್ಲವೂ ಹಿಂದೆ ಪ್ರಕೃತವೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಏಳು ಬಗೆಯ ಪರಿಹಾರಗಳಿವೆ.

(೧) ಪ್ರಯೋಜವನವಿಲ್ಲದ ಈ ವಿಚಾರಶಾಸ್ತ್ರವೇಕೆ ಎಂಬ ಪೂರ್ವಪಕ್ಷಕ್ಕೆ ಸಮಾಧಾನ ಹೇಳಬಲ್ಲ ಶಬ್ದವು ಸೂತ್ರದಲ್ಲಿ ಬೇರೆ ಯಾವುದೂ ಇಲ್ಲ. ಶ್ರುತಿಗನುಗುಣವಾಗಿ ಭಾಷ್ಯದಲ್ಲಿ ಹೇಳಿದಂತೆ ಮೇಲಿನ ಎಲ್ಲ ಅಂಶಗಳನ್ನೂ ಅಧ್ಯಾಹಾರ ಮಾಡಿಕೊಳ್ಳಬೇಕು. ಆದರಿಂದ ಪ್ರಕೃತವಾದುದನ್ನು ಅತಃಶಬ್ದ ಹೇಳುತ್ತದೆ. 'ಸ್ರುವದಿಂದ ಬೇರ್ಪಡಿಸಿ ತೆಗೆಯಬೇಕು' ಎಂದು ಶ್ರುತಿವಾಕ್ಯವಿದೆ. ಏನನ್ನು? ಎಂದರೆ 'ದ್ರವ ಪದಾರ್ಥವನ್ನು' ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಸೂತ್ರದಲ್ಲಿ 'ಕರ್ತವ್ಯಾ' ಎಂಬ ಪದಾಧ್ಯಾಹಾರಕ್ಕೆ ಪ್ರಮಾಣವಾಗಿ ಭಾಷ್ಯದಲ್ಲಿ 'ಅವಶ್ಯಕವಾದ ಪದವನ್ನೋ ವಾಕ್ಯವನ್ನೋ ಅಧ್ಯಾಹಾರ ಮಾಡಿಕೊಳ್ಳಬೇಕು' ಎಂಬ ವಚನವನ್ನು ಉದಾಹರಿಸಲಾಗಿದೆ. ಇಲ್ಲಿ 'ವಾಕ್ಯವನ್ನೋ' ಎಂಬುದರಿಂದ ಅತಃ ಶಬ್ದಕ್ಕೆ ಅಪೇಕ್ಷಿತವಾದ ಮೇಲೆ ಹೇಳಿದ ವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂಚಿತವಾಗಿದೆ.

(೨) 'ಜನ್ಮಾದ್ಯಸ್ಯಯತಃ' ಎಂಬ ಸೂತ್ರದಲ್ಲಿ 'ಅಸ್ಯ' 'ಇದರ' ಎಂದರೆ. 'ಈ ಅನುಭವ ಸಿದ್ಧವಾದ ಪ್ರಪಂಚದ' ಜನ್ಮಾದಿಕರ್ತ ಎಂದು ಹೇಳಿದೆ. ಹಾಗೇ ಪ್ರಕೃತದಲ್ಲಿ 'ಅತಃ' ಎಂಬುದರಿಂದ 'ಮೋಕ್ಷ ಭಗವದನುಗ್ರಹ ಮುಂತಾದ ಪ್ರಮಾಣಸಿದ್ಧವಾದ ಪ್ರಯೋಜನವಿರುವುದರಿಂದ' ಎಂದು ಉಕ್ತವಾಗಬಹುದು. ಪ್ರಕೃತವಾಗುವುದೆಂದರೇನು? ಬುದ್ಧಿಸ್ಥವಾಗಿರುವುದು. ಪ್ರಮಾಣಸಿದ್ಧವಾದುದು ಆ ಪ್ರಮಾಣದ ಬಲದಿಂದಲೆ ಬುದ್ಧಿಸ್ಥವಾಗಿರುತ್ತದೆ.

ಜನ್ಮಾದಿಸೂತ್ರದಲ್ಲಿ 'ಅಸ್ಯ' ಎಂದಿರುವುದು ಅದರ ವಿಷಯ ವಾಕ್ಯದಲ್ಲಿ 'ಯತೋ ವಾ ಇಮಾನಿ ಭೂತಾನಿ' ಎಂದು ಹೇಳಿದ 'ಇಮಾನಿ' ಪದದ ರೂಪಾಂತರ ಹೊರತು 'ಅನುಭವಸಿದ್ಧವಾದ' ಎಂಬ ಅರ್ಥದಲ್ಲಿ ಅಲ್ಲ ಎಂಬ ಆಕ್ಷೇಪ ಬರಬಹುದು. ಆದರೆ ವಿಷಯ ವಾಕ್ಯದಲ್ಲಿಯೂ 'ಇಮಾನಿ' 'ಈ ಚೇತನಗಳು' ಎಂದುದು ಅನುಭವಸಿದ್ಧವಾದವುಗಳೆಂಬ ಅಭಿಪ್ರಾಯದಿಂದಲೆ.

(೩) ಈ ಸೂತ್ರಕ್ಕೆ ಅನೇಕ ವಿಚಾರವಿಧಾಯಕ ವಾಕ್ಯಗಳು ವಿಷಯವಾಕ್ಯಗಳಾಗಿವೆ. ಅವುಗಳಲ್ಲಿ ಅನೇಕ ಕಡೆ ಮೋಕ್ಷ ಭಗವದನುಗ್ರಹ ಮುಂತಾದುವನ್ನು ಹೇಳಿರುವುದರಿಂದ ಸೂತ್ರ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು 'ಅತಃ' ಎಂದಿದೆ.

(೪) ವಿಚಾರವು ಜ್ಞಾನ ಭಗವದನುಗ್ರಹಗಳಿಗೆ ಕಾರಣವಾಗುವುದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ಬ್ರಹ್ಮತರ್ಕ ಈ ವಿಚಾರಶಾಸ್ತ್ರಕ್ಕೆ ಅಂಗವಾಗಿದೆ. ಅಲ್ಲದೆ ಬ್ರಹ್ಮತರ್ಕವನ್ನು ರಚಿಸಿದವರೂ ಸೂತ್ರಕಾರರಾದ ಬಾದರಾಯಣರೆ. ಆದರಿಂದ ಬ್ರಹ್ಮತರ್ಕದಲ್ಲಿ ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಸೂತ್ರಕಾರರು 'ಅತಃ' ಎಂದಿದ್ದಾರೆ.

(೫) ಮುಂದೆ ಜನ್ಮಾದಿಸೂತ್ರದಲ್ಲಿ ವಿಚಾರದಿಂದ ಜ್ಞಾನ, ಭಗವದನುಗ್ರಹ, ಮೋಕ್ಷಗಳುಂಟಾಗುವುದನ್ನು ಹೇಳುತ್ತಿದೆ. ಅಲ್ಲಿ ಹೇಳಲಿರುವುದನ್ನು ಪ್ರಥಮ ಸೂತ್ರವು ಅತಃ ಎಂದು ನಿರ್ದೇಶಿಸಬಹುದು. ಅಥೈಷ ಜ್ಯೋತಿಃ ಅಥೈಷ ವಿಶ್ವಜ್ಯೋತಿಃ ಎಂಬಲ್ಲಿ ಬರುವ 'ಏಷಃ' 'ಈ ಯಾಗವು' ಮುಂದೆ ಹೇಳುವ ಯಾಗವನ್ನು ನಿರ್ದೇಶಿಸುತ್ತಿದೆ ಎಂದು ಮೀಮಾಂಸಕರು ಒಪ್ಪಿದ್ದಾರೆ.

(೬) ಈ ಸೂತ್ರದಲ್ಲಿಯೆ ಅಥಶಬ್ದವು 'ಮೋಕ್ಷಾಭಿಲಾಷೆಯನ್ನು ಹೊಂದಿದ ಬಳಿಕ' ಬ್ರಹ್ಮವಿಚಾರ ಮಾಡಬೇಕೆಂದು ಹೇಳಿದೆ. ಮೋಕ್ಷವು ಜ್ಞಾನ ಭಗವದನುಗ್ರಹಗಳ ಮೂಲಕವೆ ವಿಚಾರದಿಂದ ಲಭ್ಯವೆಂಬುದು ಪ್ರಮಾಣಸಿದ್ಧ. ಯಾಗಕ್ಕೆ ಸ್ವರ್ಗವೆ ಫಲವೆಂದು ಶ್ರುತಿ ಹೇಳುವಾಗ ಸ್ವರ್ಗವು ಅದೃಷ್ಟದ ಮೂಲಕವೆ ಲಭ್ಯವಾದ್ದರಿಂದ ಅದನ್ನೂ ಶ್ರುತಿಯು ಹೇಳಿದಂತಾಗುವುದು. ಭತ್ತವು ಯಾಗ ಸಾಧನವೆಂದು ಶ್ರುತಿ ಹೇಳುವಾಗ ಪ್ರೋಕ್ಷಣ ಅವಹನನಾದಿಗಳ ಮೂಲಕವೆ ಭತ್ತವು ಯಾಗಸಾಧನವಾಗುವುದರಿಂದ ಅದನ್ನೂ ಶ್ರುತಿ ಹೇಳಿದಂತಾಗುವುದು. ಆದರಿಂದ ವಿಚಾರವು ಜ್ಞಾನ ಭಗವದನುಗ್ರಹಗಳ ಮೂಲಕ ಮೋಕ್ಷಸಾಧನವಾಗುವುದರಿಂದ ಅದನ್ನೂ ಅಥಶಬ್ದ ಹೇಳಿದಂತಾಗುವುದು. ಆಗ ಪ್ರಕೃತವಾದುದನ್ನು ಅತಃ ಶಬ್ದವು ನಿರ್ದೇಶಿಸುತ್ತದೆ.

(೭) ಮನನರೂಪವಾದ ವಿಚಾರಕ್ಕೆ ಶ್ರವಣ ಮೊದಲಿಗೆ ಅವಶ್ಯಕವೆಂದು ಅಥಶಬ್ದ ಹೇಳುತ್ತದೆ. ಶ್ರವಣಕಾಲದಲ್ಲಿ ತಿಳಿದಿದ್ದ ಮೋಕ್ಷ ಭಗವದನುಗ್ರಹಾದಿಗಳ ಕಾರ್ಯಕಾರಣಭಾವ ಮನನ ಪ್ರಾರಂಭದಲ್ಲಿ ಬುದ್ಧಿಸ್ಥವಾಗಿದ್ದು ವಿಚಾರಕರ್ತವ್ಯತ್ವಕ್ಕೆ ಅದು ಹೇತುವಾಗಲು ಯೋಗ್ಯವೂ ಆಗಿರುವುದರಿಂದ ಅದನ್ನು ಹೇತುವೆಂದು ಅತಃ ಶಬ್ದವು ನಿರ್ದೇಶಿಸುತ್ತದೆ.

## ಅಥ ಅತಃ ಬ್ರಹ್ಮ ಶಬ್ದಗಳ ಸಾರ್ಥಕತೆ

ಅತಃಶಬ್ದವು ಹೀಗೆ ಶ್ರವಣಕಾಲದಲ್ಲಿ ತಿಳಿದಿರುವ ಮತ್ತು ಪ್ರಮಾಣಸಿದ್ಧವಾದ ಜಿಜ್ಞಾಸುವಿನ ಅರ್ಹತೆಗಳು, ವಿಷಯ, ಪ್ರಯೋಜನ ಎಲ್ಲವನ್ನೂ ಹೇಳುವುದಾದರೆ ಅಥ ಬ್ರಹ್ಮ ಶಬ್ದಗಳು ಏಕೆ? ಎಂದರೆ, ಅರ್ಹತೆ ವಿಷಯ ಪ್ರಯೋಜನಗಳ ವೈಲಕ್ಷಣ್ಯಸೂಚನೆಗಾಗಿ ಮೂರು ಶಬ್ದಗಳು ಬೇಕು. ಅರ್ಹತೆ ಸಿದ್ಧವಾದುದೆ ಇರಬೇಕು. ಪ್ರಯೋಜನ ಅಸಿದ್ಧವೆ ಇರಬೇಕು. ವಿಷಯ ಧರ್ಮವಿಚಾರದಲ್ಲಿ ಅಸಿದ್ಧವಾದ ಯಾಗಾದಿಧರ್ಮ, ಬ್ರಹ್ಮವಿಚಾರದಲ್ಲಿ ಸಿದ್ಧವಾದ ಬ್ರಹ್ಮ. ಇವು ಮೂರರಲ್ಲಿರುವ ವೈಲಕ್ಷಣ್ಯಗಳು. ಮತ್ತು ಮೂರು ಶಬ್ದಗಳಲ್ಲಿಯೂ ತಮ್ಮದೆ ಆದ ವಿಲಕ್ಷಣಶಕ್ತಿ ಇದೆ, ಮಂಗಳಕರವಾಗಿದೆ. ಸೂತ್ರದಿಂದ ಅರ್ಥನಿರ್ಣಯವಾಗಬೇಕಾಗಿರುವ ಬೇರೆಬೇರೆ ಶ್ರುತಿವಾಕ್ಯಗಳನ್ನು ಜ್ಞಾಪಿಸುತ್ತವೆ. ಬೇರೆಬೇರೆ ಸಂದೇಹಗಳಿಗೆ ತಮ್ಮದೆ ಆದ ಪರಿಹಾರವನ್ನೂ ನೀಡುತ್ತವೆ.

ಸಂಸಾರ ಮಿಥ್ಯೆಯಾದ್ದರಿಂದ ಜ್ಞಾನದಿಂದ ಅದು ನಿವೃತ್ತಿಹೊಂದಲು ನಾರಾಯಣನ ಅನುಗ್ರಹ ಬೇಕಾಗಿಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಜಗತ್ ಸತ್ಯತ್ವವನ್ನೂ ಸತ್ಯವಸ್ತುವಿಗೆ ಮಾತ್ರವೆ ನಾಶಯೋಗ್ಯತ್ವ ಮುಂತಾದ ಯುಕ್ತಿಯನ್ನೂ ಅತಃ ಶಬ್ದ ಹೇಳುತ್ತದೆ. ಕೇವಲ ಪ್ರಯೋಜನವನ್ನಲ್ಲ. ವಿಷಯ ಪ್ರತಿಪಾದನೆಗೆ ಬೇಕಾಗುವ ಗುಣಪೂರ್ಣತ್ವಾದಿ ಯುಕ್ತಿಗಳನ್ನು ಬ್ರಹ್ಮಶಬ್ದ ಹೇಳುತ್ತದೆ. ಆಗಮವು ಪ್ರಮಾಣವಲ್ಲ. ಪ್ರಮಾಣವೆಂದೊಪ್ಪಿದರೂ ಸಿದ್ಧವಾದ ಬ್ರಹ್ಮನ ವಿಷಯದಲ್ಲಿ ಪ್ರಮಾಣವಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ ವೇದಪ್ರಾಮಾಣ್ಯ ಸಿದ್ಧಪರತ್ವ ಮುಂತಾದ ವಿಷಯ ಸಾಧಕಯುಕ್ತಿಗಳನ್ನೂ ಅತಃಶಬ್ದ ಹೇಳುತ್ತದೆ.

## 'ಬ್ರಹ್ಮಜಿಜ್ಞಾಸಾ'-ಯಾವ ಸಮಾಸ?

'ಬ್ರಹ್ಮಜಿಜ್ಞಾಸಾಶಬ್ದ ಷಷ್ಠೀತತ್ಪುರುಷ ಸಮಾಸ. ಕರ್ಮಾರ್ಥಕ ಷಷ್ಠೀವಿಭಕ್ತಿಯನ್ನಿಟ್ಟು ಕೊಳ್ಳಬೇಕು. ಶೇಷ ಷಷ್ಠಿಯನ್ನಲ್ಲ. ಶೇಷ ಷಷ್ಠಿಯಿಂದ ಜಿಜ್ಞಾಸೆಗೆ ಸಂಬಂಧಿಸಿದುದು ಬ್ರಹ್ಮ ಎಂದಷ್ಟೇ ತಿಳಿಯುತ್ತದೆ. ಯಾವ ಸಂಬಂಧ? ಎಂದು ವಿಚಾರ ಬಂದಾಗ ಬೇರಾವುದೂ ಅಲ್ಲ, ಕರ್ಮತ್ವವೆ ಸಂಬಂಧ ಎಂದು ತಿಳಿಯಬೇಕಾಗುತ್ತದೆ. ಇದು ಬಳಸುದಾರಿ. ಶ್ರುತಿಯಲ್ಲಿಯೂ 'ತದ್ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂದು ಬ್ರಹ್ಮನನ್ನು ಜಿಜ್ಞಾಸೆಗೆ ಕರ್ಮ ಎಂದೇ ನಿರ್ದೇಶಿಸಿದೆ' ಎಂದು ಅದ್ವೈತಿಗಳು ಹೇಳುತ್ತಾರೆ. ಆದರೆ ನಿರ್ಗುಣಬ್ರಹ್ಮ ಯಾವ ಕಾರಕವೂ ಆಗಲಾರದು, ಕರ್ಮವೆನಿಸುವುದು ಹೇಗೆ?

ವಿಚಾರದಿಂದ ಬರುವ ಅಪರೋಕ್ಷವೃತ್ತಿಗೆ ವಿಷಯನಾಗುವುದೇ ಕರ್ಮತ್ವವೆನ್ನುವುದೂ ಸರಿಯಲ್ಲ. ಅಪರೋಕ್ಷವೃತ್ತಿಯಲ್ಲಿ ಪ್ರತಿಬಿಂಬಿತವಾಗುವ ಚೈತನ್ಯಕ್ಕೆ ಘಟಾದಿಗಳು ವಿಷಯವಾಗುವುದ- ರಿಂದಲೆ ಘಟಾದಿಗಳು ಕರ್ಮವೆನಿಸುತ್ತವೆ. ವೃತ್ತಿಯಲ್ಲಿ ಪ್ರತಿಬಿಂಬಿಸುವುದೂ ತಾನೆ, ಆ ಪ್ರತಿಬಿಂಬಕ್ಕೆ ವಿಷಯನಾಗುವುದೂ ತಾನೆ ಎಂದರೆ ಕರ್ತೃಕರ್ಮಗಳೆರಡೂ ಒಂದು ಎಂದಂತಾಗುವುದೆಂದು ಹೆದರಿ ಅದ್ವೈತಿಗಳು ಚೈತನ್ಯದಲ್ಲಿ ಕರ್ಮತ್ವವನ್ನು ಒಪ್ಪಿಲ್ಲ. ಆದರಿಂದ ಬ್ರಹ್ಮಕರ್ಮವೆನಿಸುವುದು ಹೇಗೆ?

ನಮ್ಮ ಸಿದ್ಧಾಂತದಲ್ಲಿ ಕರ್ಮಷಷ್ಠೀ ಸಮಾಸವನ್ನೇ ಒಪ್ಪಿದ್ದೇವೆ. ಇದು ಬ್ರಹ್ಮಸ್ವರೂಪ ವಿಚಾರ ಪ್ರಧಾನ ಎಂಬ ಅಭಿಪ್ರಾಯದಿಂದ. ಜೊತೆಗೆ ಬ್ರಹ್ಮಸ್ವರೂಪವಿಚಾರಕ್ಕೆ ಸಂಬಂಧಿಸಿದ ಲಕ್ಷಣ ಪ್ರಮಾಣ ಪ್ರಯೋಜನ ಮುಂತಾದ ಬೇರೆ ವಿಷಯಗಳ ವಿಚಾರವನ್ನೂ ಮಾಡಬೇಕೆಂಬುದು ಶ್ರುತಿಸೂತ್ರಗಳ ಅಭಿಪ್ರಾಯ.

'ಕರ್ಮಾರ್ಥದಲ್ಲಿ' ಎಂದು ವಿಹಿತವಾದ ಷಷ್ಠೀವಿಭಕ್ತಿ ಬಂದಿದ್ದರೆ ಸಮಾಸವಾಗುವುದಿಲ್ಲ ಎಂದು 'ಕರ್ಮಣಿ ಚ' ಎಂಬ ಸೂತ್ರ ಹೇಳುತ್ತದೆ. ಪ್ರಕೃತದಲ್ಲಿ 'ಉಭಯ ಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಲ್ಲಿ 'ಕರ್ಮಣಿ'

'ಕರ್ಮಾರ್ಥದಲ್ಲಿ' ಎಂದು ಷಷ್ಠಿ ವಿಹಿತವಾಗಿದೆ ಎಂಬ ಸಮಸ್ಯೆಗೆ ಹೀಗೆ ಉತ್ತರ - 'ಅಕಾರಯೋಃ ಪ್ರಯೋಗೇ ನೇತಿ ವಕ್ತವ್ಯಂ' ಎಂಬ ವಾರ್ತಿಕದಂತೆ 'ಅಕ' ಮತ್ತು 'ಅ' ಪ್ರತ್ಯಯ ಸ್ಥಳಗಳಲ್ಲಿ 'ಉಭಯಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಂತೆ ಕರ್ಮಷಷ್ಠಿ ಬರುವುದು ನಿಷಿದ್ಧವಾಗಿದೆ. ಪ್ರಕೃತದಲ್ಲಿ 'ಜಿಜ್ಞಾಸಾ' ಶಬ್ದಸನ್ ಪ್ರತ್ಯಯಾಂತವಾದ 'ಜಿಜ್ಞಾಸ' ಶಬ್ದದ ಮೇಲೆ 'ಅ' ಪ್ರತ್ಯಯ ಬಂದು ಸಿದ್ಧವಾಗಿರುವುದರಿಂದ 'ಉಭಯಪ್ರಾಪ್ತೌ ಕರ್ಮಣಿ' ಸೂತ್ರವಿಹಿತವಾದ ಷಷ್ಠಿ ಬರುವುದಿಲ್ಲ. 'ಕರ್ತೃಕರ್ಮಣೋಃ ಕೃತಿ' ಎಂದೇ ಷಷ್ಠಿ ಬಂದಿದೆ. ಆದರಿಂದ 'ಕರ್ಮಣಿ ಚ' ಎಂದು ಷಷ್ಠೀಸಮಾಸ ನಿಷೇಧವಿಲ್ಲ. 'ಕೃದ್ಯೋಗ ಲಕ್ಷಣಾ ಷಷ್ಠೀ ಸಮಸ್ಯತೇ' ಎಂದು ಪ್ರತಿಪ್ರಸವವಿರುವುದರಿಂದ 'ಪ್ರತಿಪದವಿಧಾನ ಷಷ್ಠೀ ನ ಸಮಸ್ಯತೇ' ಎನ್ನುವ ನಿಷೇಧವೂ ಅನ್ವಯಿಸುವುದಿಲ್ಲ.

## 'ಜಿಜ್ಞಾಸಾ' ಶಬ್ದಾರ್ಥ - ಸ್ವಮತದಲ್ಲಿ

ಟೀಕೆಯಲ್ಲಿ ಶ್ರವಣಮನನ ನಿದಿಧ್ಯಾಸನ ಇವು ಮೂರು ಜಿಜ್ಞಾಸೆಯೆ ಎಂದಿದೆ. ಸುಧೆಯಲ್ಲಿ ಮನನವೇ ಜಿಜ್ಞಾಸೆ ಎಂದಿದೆ. ಇವುಗಳ ವಿರೋಧ ಪರಿಹಾರಕ್ಕೆ ಹೀಗೆ ಹೇಳಬೇಕು - 'ಜಿಜ್ಞಾಸೆ' ಎಂದರೆ ಶ್ರವಣ ಮುಂತಾದ ಮೂರರಲ್ಲಿಯೂ ಹಾಸು ಹೊಕ್ಕಾಗಿರುವ ಉಪಾಸನೆ, ಅಂದರೆ ಭಗವಂತನಲ್ಲಿ ಮನಸ್ಸಿನ ಏಕಾಗ್ರತೆ. ಇದು ನಿದಿಧ್ಯಾಸನದಲ್ಲಿ ಸ್ವತಃ ಇದೆ. ಶ್ರವಣ ಮನನಗಳಲ್ಲಿ ಪ್ರಮಾಣಗಳ ಮೂಲಕ ಇದೆ ಎಂಬುದು ಟೀಕೆಯ ಅಭಿಪ್ರಾಯ. ಇದು ಸುಧೆಗೂ ಸಂಮತವೆ. ಆದರೆ ಶಾಸ್ತ್ರದ ಅವಶ್ಯಕತೆಯನ್ನು ಸಮರ್ಥಿಸಲು ಮನನ ರೂಪದ ಉಪಾಸನೆಯ ಅವಶ್ಯಕತೆಯನ್ನು ಸಮರ್ಥಿಸಿದರೆ ಸಾಕು ಎಂದು ಸುಧೆ ಅಭಿಪ್ರಾಯಪಡುತ್ತದೆ.

ಜಿಜ್ಞಾಸಾ ಶಬ್ದವು ಜ್ಞಾಧಾತುವಿಗೆ ಇಚ್ಛೆ ಎಂಬ ಅರ್ಥದ 'ಸನ್' ಪ್ರತ್ಯಯ ಸೇರಿ ನಿಷ್ಪನ್ನವಾಗಿದ್ದರೂ ಆ ಶಬ್ದದಿಂದ ಮೊದಲಿಗೆ ವಿಚಾರ ಎಂಬ ಅರ್ಥವೇ ಹೊಳೆಯುತ್ತದೆ ಹೊರತು ಜ್ಞಾನೇಚ್ಛೆಯಲ್ಲ. ಆದರಿಂದಲೆ ಎಲ್ಲ ಸೂತ್ರಕಾರರೂ ಧರ್ಮಜಿಜ್ಞಾಸಾ ಬ್ರಹ್ಮಜಿಜ್ಞಾಸಾ ಎಂದು 'ಜಿಜ್ಞಾಸಾ' ಶಬ್ದವನ್ನೆ ಬಳಸುತ್ತಾರೆ. ಅದೇ ಅರ್ಥದ 'ಬುಭುತ್ಸಾ' ಶಬ್ದವನ್ನಲ್ಲ. ಏಕೆ? ಎಂಬ ಪ್ರಶ್ನೆಗೆ, ಬುಭುತ್ಸಾ ಶಬ್ದವನ್ನು ಹೇಳಿದರೆ ಮೊದಲಿಗೆ ಜ್ಞಾನೇಚ್ಛೆ ಎಂಬ ಅರ್ಥ ಹೊಳೆಯುತ್ತದೆ ಹೊರತು ವಿಚಾರವೆಂಬ ಅರ್ಥವಲ್ಲ ಎಂದೇ ಉತ್ತರಿಸಬೇಕು. ಆದರಿಂದ ಜಿಜ್ಞಾಸಾಶಬ್ದಕ್ಕೆ ವಿಚಾರ ಎಂಬ ಅರ್ಥದಲ್ಲಿ ರೂಢಿ ಎಂದು ಒಪ್ಪಬೇಕು. ಲಕ್ಷಣೆ ಎಂದಲ್ಲ.

## ಬ್ರಹ್ಮಸೂತ್ರದಲ್ಲಿ ವಿಚಾರಾಂಶ

ಎಲ್ಲ ವೇದಗಳ ವಿಚಾರವೂ ಬ್ರಹ್ಮಸೂತ್ರದಲ್ಲಿ ಬರಬೇಕು. ಕೇವಲ ಜ್ಞಾನಕಾಂಡ ವಿಚಾರವಲ್ಲ, ಆದರೆ ಮುಖ್ಯ ತಾತ್ಪರ್ಯವಾದ ಭಗವಂತನ ವಿಚಾರ ಇಲ್ಲಿ ಹೊಸತು. ಅವಾಂತರ ತಾತ್ಪರ್ಯಗೋಚರವಾದ ಕರ್ಮ ದೇವತಾ ವಿಚಾರಗಳು ಮಾತ್ರ ಕರ್ಮಮೀಮಾಂಸಾ ದೈವೀ ಮೀಮಾಂಸಾಗಳಲ್ಲಿ ಆಗಿರುತ್ತವೆ. ಇಷ್ಟು ಜಿಜ್ಞಾಸಾಧಿಕರಣದ ಸಾರಾಂಶ

- ವಿದಾನ್ ಹಯವದನ ಪುರಾಣಿಕರು

# ಜನ್ಮಾಧಿಕರಣ

## ಗುಣಪೂರ್ಣತ್ವದ ಸಮರ್ಥನೆಗಾಗಿ ಜನ್ಮಾಧಿಕರಣ

ಜನ್ಮಾಧಿಕರಣವು ಪ್ರಾರಂಭವಾಗುತ್ತಿದೆ. ಗುಣಪೂರ್ಣನಾದ್ದರಿಂದ ಬ್ರಹ್ಮನ ಜಿಜ್ಞಾಸೆಯನ್ನು ಅವಶ್ಯ ಆಚರಿಸಬೇಕೆಂದು ಜಿಜ್ಞಾಸಾಧಿಕರಣದಲ್ಲಿ ತೀರ್ಮಾನಿಸಿದ್ದಾಯಿತು. ಆ ಗುಣಪೂರ್ಣತ್ವವನ್ನು ಸಮರ್ಥಿಸಲು ಸೃಷ್ಟ್ಯಾದ್ಯಷ್ಟಕರ್ತೃತ್ವವನ್ನು ಸಮರ್ಥಿಸಬೇಕಾಗಿದೆ. ಅದಕ್ಕಾಗಿಯೇ ಈ ಅಧಿಕರಣ ಹೊರಟಿದೆ. ಇದರಿಂದ ಬ್ರಹ್ಮನು ಜೀವನಿಗಿಂತ ಭಿನ್ನನೂ ಉತ್ತಮನೂ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಜಿಜ್ಞಾಸಾಧಿಕರಣದಿಂದ ಜನ್ಮಾಧಿಕರಣಕ್ಕೆ ಆಕ್ಷೇಪಿಕೀಸಂಗತಿಯನ್ನು ಅಥವಾ ಪ್ರಪಂಚ್ಯಪ್ರಪಂಚಕ- ಭಾವಸಂಗತಿಯನ್ನು ತಿಳಿಯಬೇಕು.

## ಸಂಶಯ ಹಾಗೂ ಪೂರ್ವಪಕ್ಷ

'ಯತೋ ವಾ' ಎಂಬ ವಾಕ್ಯದಲ್ಲಿರುವ ಜಗತ್ಕಾರಣತ್ವವು ಜೀವನಲ್ಲಿ ಸಿದ್ಧವಾದರೆ ಬ್ರಹ್ಮಶಬ್ದವು ಜೀವನಲ್ಲಿ ಸ್ವರಸವಾಗಿ ಉಪಪನ್ನವಾಗುತ್ತದೆ. ಆವಾಗ ಯೋಗಾರ್ಥನಾದ ವಿಷ್ಣುವನ್ನು ವಿವಕ್ಷಿಸಲು ಕಾರಣವಿಲ್ಲ. ರೂಢಿಯಿಂದ ಜೀವನೇ ಬ್ರಹ್ಮನೆನಿಸುತ್ತಾನೆಂಬದು ಪೂರ್ವಪಕ್ಷದ ಗುರಿ.

'ಯತೋ ವಾ' ಎಂಬ ವಾಕ್ಯದಲ್ಲಿರುವ ಜಗತ್ಕಾರಣತ್ವವು ಜೀವನಲ್ಲಿ ಕೂಡುವುದಿಲ್ಲ. ಆದ್ದರಿಂದ ಬ್ರಹ್ಮಶಬ್ದಕ್ಕೆ ಜೀವನೆಂಬ ಅರ್ಥ ಸ್ವರಸವಾಗುವುದಿಲ್ಲ. ಆವಾಗ ರೂಢ್ಯರ್ಥನಾದ ಜೀವನನ್ನು ಬಿಡಲು ಕಾರಣವಿದೆ. ಬ್ರಹ್ಮಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಗುರಿ.

ಪೂರ್ವಪಕ್ಷ - ಕೋಶ ಹೇಳುವಂತೆ ಬ್ರಹ್ಮಶಬ್ದದಿಂದ ಜೀವನೇ ಪ್ರತಿಪಾದ್ಯನು ಯೋಗವು ರೂಢಿಗಿಂತ ದುರ್ಬಲವಾಗಿದೆಯೆಂದು ಪೂರ್ವಮೀಮಾಂಸೆಯ ರಥಕಾರಾಧಿಕರಣದಲ್ಲಿ ಸಿದ್ಧವಾಗಿದೆ. ಯೋಗಾರ್ಥವನ್ನು ಇಟ್ಟುಕೊಂಡು ರೂಢ್ಯರ್ಥವನ್ನು ತಿರಸ್ಕರಿಸಬೇಕಾದರೆ ಪ್ರಮಾಣವಿರಬೇಕು. ಆದರೆ ಅಂತಹ ಪ್ರಮಾಣವೇನು ಇಲ್ಲಿ ಕಾಣುವುದಿಲ್ಲ.

## ಬ್ರಹ್ಮಶಬ್ದಪ್ರತಿಪಾದ್ಯ ಜೀವನೆನ್ನಲು ರೂಢಿಪ್ರಮಾಣ

ಇನ್ನು ವಿಷ್ಣುವಿನಲ್ಲಿ ಬ್ರಹ್ಮಶಬ್ದದ ರೂಢಿಯನ್ನು ಹೇಳಲಾಗದು. ಹಾಗಾದಲ್ಲಿ ಯೋಗದಿಂದ ಲಭಿಸುವ ಗುಣಪೂರ್ಣತ್ವವೇ ಸಿದ್ಧವಾಗುತ್ತಿರಲಿಲ್ಲ. ರೂಢಿಯ ಜೊತೆ ಯೋಗವನ್ನು ಹೇಳಿದಾಗ ಈ ಸಮಸ್ಯೆ ಪರಿಹಾರವಾಗಬಹುದು. ಆದರೆ ಅದಕ್ಕೆ ಆಧಾರವಿಲ್ಲ. ಪಂಕಜಾದಿಶಬ್ದಗಳಲ್ಲಿ ಯೋಗರೂಢಿಯನ್ನೂ ಒಪ್ಪುವುದು ಅನಿವಾರ್ಯ. ಕೇವಲ ಯೋಗವನ್ನು ಒಪ್ಪಿದರೆ ಕಪ್ಪೆ ಮೊದಲಾದವುಗಳಲ್ಲಿ ಅತಿಪ್ರಸಂಗ ಬರುವುದರಿಂದ ರೂಢಿಯನ್ನು ಒಪ್ಪಬೇಕಾಗುತ್ತದೆ. ಆದರೆ ವಿಷ್ಣುವಿನಲ್ಲಿ ಬ್ರಹ್ಮಶಬ್ದ ಯೋಗಾರ್ಥ ಒಪ್ಪಿದಾಗ ಅಂತಹ ಅತಿಪ್ರಸಂಗವೇನು ಬರುವುದಿಲ್ಲ. ಹೀಗಿರುವಾಗ ಸುಮ್ಮನೆ ರೂಢಿಯನ್ನು ಏಕೆ ಒಪ್ಪಬೇಕು?

ಈ ವಿಚಾರವೆಲ್ಲವು 'ತದ್ವಿಜಿಜ್ಞಾಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಮಾತ್ರ. 'ತದೇವ ಬ್ರಹ್ಮ' ಇತ್ಯಾದಿ ಸ್ಥಳದಲ್ಲಿ ರೂಢಿಗೆ ಬಾಧಕವಾದ ಸಮುದ್ರಶಾಯಿತ್ವಾದಿ ಲಿಂಗಗಳಿರುವುದರಿಂದ ವಿಷ್ಣುಪರವೆನ್ನಲು ಪೂರ್ವಪಕ್ಷಿಗಳಿಗೆ ಅಭ್ಯಂತರವಿಲ್ಲ.

'ಕರ್ಮಾರ್ಥದಲ್ಲಿ' ಎಂದು ಷಷ್ಠಿ ವಿಹಿತವಾಗಿದೆ ಎಂಬ ಸಮಸ್ಯೆಗೆ ಹೀಗೆ ಉತ್ತರ - 'ಅಕಾರಯೋಃ ಪ್ರಯೋಗೇ ನೇತಿ ವಕ್ತವ್ಯಂ' ಎಂಬ ವಾರ್ತಿಕದಂತೆ 'ಅಕ' ಮತ್ತು 'ಅ' ಪ್ರತ್ಯಯ ಸ್ಥಳಗಳಲ್ಲಿ 'ಉಭಯಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಂತೆ ಕರ್ಮಷಷ್ಠಿ ಬರುವುದು ನಿಷಿದ್ಧವಾಗಿದೆ. ಪ್ರಕೃತದಲ್ಲಿ 'ಜಿಜ್ಞಾಸಾ' ಶಬ್ದಸನ್ ಪ್ರತ್ಯಯಾಂತವಾದ 'ಜಿಜ್ಞಾಸ' ಶಬ್ದದ ಮೇಲೆ 'ಅ' ಪ್ರತ್ಯಯ ಬಂದು ಸಿದ್ಧವಾಗಿರುವುದರಿಂದ 'ಉಭಯಪ್ರಾಪ್ತೌ ಕರ್ಮಣಿ' ಸೂತ್ರವಿಹಿತವಾದ ಷಷ್ಠಿ ಬರುವುದಿಲ್ಲ. 'ಕರ್ತೃಕರ್ಮಣೋಃ ಕೃತಿ' ಎಂದೇ ಷಷ್ಠಿ ಬಂದಿದೆ. ಆದರಿಂದ 'ಕರ್ಮಣಿ ಚ' ಎಂದು ಷಷ್ಠೀಸಮಾಸ ನಿಷೇಧವಿಲ್ಲ. 'ಕೃದ್ಯೋಗ ಲಕ್ಷಣಾ ಷಷ್ಠೀ ಸಮಸ್ಯತೇ' ಎಂದು ಪ್ರತಿಪ್ರಸವವಿರುವುದರಿಂದ 'ಪ್ರತಿಪದವಿಧಾನ ಷಷ್ಠೀ ನ ಸಮಸ್ಯತೇ' ಎನ್ನುವ ನಿಷೇಧವೂ ಅನ್ವಯಿಸುವುದಿಲ್ಲ.

## 'ಜಿಜ್ಞಾಸಾ' ಶಬ್ದಾರ್ಥ - ಸ್ವಮತದಲ್ಲಿ

ಟೀಕೆಯಲ್ಲಿ ಶ್ರವಣಮನನ ನಿದಿಧ್ಯಾಸನ ಇವು ಮೂರು ಜಿಜ್ಞಾಸೆಯ ಎಂದಿದೆ. ಸುಧೆಯಲ್ಲಿ ಮನನವೇ ಜಿಜ್ಞಾಸೆ ಎಂದಿದೆ. ಇವುಗಳ ವಿರೋಧ ಪರಿಹಾರಕ್ಕೆ ಹೀಗೆ ಹೇಳಬೇಕು - 'ಜಿಜ್ಞಾಸೆ' ಎಂದರೆ ಶ್ರವಣ ಮುಂತಾದ ಮೂರರಲ್ಲಿಯೂ ಹಾಸು ಹೊಕ್ಕಾಗಿರುವ ಉಪಾಸನೆ, ಅಂದರೆ ಭಗವಂತನಲ್ಲಿ ಮನಸ್ಸಿನ ಏಕಾಗ್ರತೆ. ಇದು ನಿದಿಧ್ಯಾಸನದಲ್ಲಿ ಸ್ವತಃ ಇದೆ. ಶ್ರವಣ ಮನನಗಳಲ್ಲಿ ಪ್ರಮಾಣಗಳ ಮೂಲಕ ಇದೆ ಎಂಬುದು ಟೀಕೆಯ ಅಭಿಪ್ರಾಯ. ಇದು ಸುಧೆಗೂ ಸಂಮತವೆ. ಆದರೆ ಶಾಸ್ತ್ರದ ಅವಶ್ಯಕತೆಯನ್ನು ಸಮರ್ಥಿಸಲು ಮನನ ರೂಪದ ಉಪಾಸನೆಯ ಅವಶ್ಯಕತೆಯನ್ನು ಸಮರ್ಥಿಸಿದರೆ ಸಾಕು ಎಂದು ಸುಧೆ ಅಭಿಪ್ರಾಯಪಡುತ್ತದೆ.

ಜಿಜ್ಞಾಸಾ ಶಬ್ದವು ಜ್ಞಾಧಾತುವಿಗೆ ಇಚ್ಛೆ ಎಂಬ ಅರ್ಥದ 'ಸನ್' ಪ್ರತ್ಯಯ ಸೇರಿ ನಿಷ್ಪನ್ನವಾಗಿದ್ದರೂ ಆ ಶಬ್ದದಿಂದ ಮೊದಲಿಗೆ ವಿಚಾರ ಎಂಬ ಅರ್ಥವೇ ಹೊಳೆಯುತ್ತದೆ ಹೊರತು ಜ್ಞಾನೇಚ್ಛೆಯಲ್ಲ. ಆದರಿಂದಲೆ ಎಲ್ಲ ಸೂತ್ರಕಾರರೂ ಧರ್ಮಜಿಜ್ಞಾಸಾ ಬ್ರಹ್ಮಜಿಜ್ಞಾಸಾ ಎಂದು 'ಜಿಜ್ಞಾಸಾ' ಶಬ್ದವನ್ನೆ ಬಳಸುತ್ತಾರೆ. ಅದೇ ಅರ್ಥದ 'ಬುಭುತ್ಸಾ' ಶಬ್ದವನ್ನಲ್ಲ. ಏಕೆ? ಎಂಬ ಪ್ರಶ್ನೆಗೆ, ಬುಭುತ್ಸಾ ಶಬ್ದವನ್ನು ಹೇಳಿದರೆ ಮೊದಲಿಗೆ ಜ್ಞಾನೇಚ್ಛೆ ಎಂಬ ಅರ್ಥ ಹೊಳೆಯುತ್ತದೆ ಹೊರತು ವಿಚಾರವೆಂಬ ಅರ್ಥವಲ್ಲ ಎಂದೇ ಉತ್ತರಿಸಬೇಕು. ಆದರಿಂದ ಜಿಜ್ಞಾಸಾಶಬ್ದಕ್ಕೆ ವಿಚಾರ ಎಂಬ ಅರ್ಥದಲ್ಲಿ ರೂಢಿ ಎಂದು ಒಪ್ಪಬೇಕು. ಲಕ್ಷಣೆ ಎಂದಲ್ಲ.

## ಬ್ರಹ್ಮಸೂತ್ರದಲ್ಲಿ ವಿಚಾರಾಂಶ

ಎಲ್ಲ ವೇದಗಳ ವಿಚಾರವೂ ಬ್ರಹ್ಮಸೂತ್ರದಲ್ಲಿ ಬರಬೇಕು. ಕೇವಲ ಜ್ಞಾನಕಾಂಡ ವಿಚಾರವಲ್ಲ, ಆದರೆ ಮುಖ್ಯ ತಾತ್ಪರ್ಯವಾದ ಭಗವಂತನ ವಿಚಾರ ಇಲ್ಲಿ ಹೊಸತು. ಅವಾಂತರ ತಾತ್ಪರ್ಯಗೋಚರವಾದ ಕರ್ಮ ದೇವತಾ ವಿಚಾರಗಳು ಮಾತ್ರ ಕರ್ಮಮೀಮಾಂಸಾ ದೈವೀ ಮೀಮಾಂಸಾಗಳಲ್ಲಿ ಆಗಿರುತ್ತವೆ. ಇಷ್ಟು ಜಿಜ್ಞಾಸಾಧಿಕರಣದ ಸಾರಾಂಶ

- ವಿದಾನ್ ಹಯವದನ ಪುರಾಣಿಕರು

# ಜನ್ಮಾಧಿಕರಣ

## ಗುಣಪೂರ್ಣತ್ವದ ಸಮರ್ಥನೆಗಾಗಿ ಜನ್ಮಾಧಿಕರಣ

ಜನ್ಮಾಧಿಕರಣವು ಪ್ರಾರಂಭವಾಗುತ್ತಿದೆ. ಗುಣಪೂರ್ಣನಾದ್ದರಿಂದ ಬ್ರಹ್ಮನ ಜಿಜ್ಞಾಸೆಯನ್ನು ಅವಶ್ಯ ಆಚರಿಸಬೇಕೆಂದು ಜಿಜ್ಞಾಸಾಧಿಕರಣದಲ್ಲಿ ತೀರ್ಮಾನಿಸಿದ್ದಾಯಿತು. ಆ ಗುಣಪೂರ್ಣತ್ವವನ್ನು ಸಮರ್ಥಿಸಲು ಸೃಷ್ಟ್ಯಾದ್ಯಷ್ಟಕರ್ತೃತ್ವವನ್ನು ಸಮರ್ಥಿಸಬೇಕಾಗಿದೆ. ಅದಕ್ಕಾಗಿಯೇ ಈ ಅಧಿಕರಣ ಹೊರಟಿದೆ. ಇದರಿಂದ ಬ್ರಹ್ಮನು ಜೀವನಿಗಿಂತ ಭಿನ್ನನೂ ಉತ್ತಮನೂ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಜಿಜ್ಞಾಸಾಧಿಕರಣದಿಂದ ಜನ್ಮಾಧಿಕರಣಕ್ಕೆ ಆಕ್ಷೇಪಿಕೀಸಂಗತಿಯನ್ನು ಅಥವಾ ಪ್ರಪಂಚ್ಯಪ್ರಪಂಚಕ- ಭಾವಸಂಗತಿಯನ್ನು ತಿಳಿಯಬೇಕು.

## ಸಂಶಯ ಹಾಗೂ ಪೂರ್ವಪಕ್ಷ

'ಯತೋ ವಾ' ಎಂಬ ವಾಕ್ಯದಲ್ಲಿರುವ ಜಗತ್ಕಾರಣತ್ವವು ಜೀವನಲ್ಲಿ ಸಿದ್ಧವಾದರೆ ಬ್ರಹ್ಮಶಬ್ದವು ಜೀವನಲ್ಲಿ ಸ್ವರಸವಾಗಿ ಉಪಪನ್ನವಾಗುತ್ತದೆ. ಆವಾಗ ಯೋಗಾರ್ಥನಾದ ವಿಷ್ಣುವನ್ನು ವಿವಕ್ಷಿಸಲು ಕಾರಣವಿಲ್ಲ. ರೂಢಿಯಿಂದ ಜೀವನೇ ಬ್ರಹ್ಮನೆನಿಸುತ್ತಾನೆಂಬದು ಪೂರ್ವಪಕ್ಷದ ಗುರಿ.

'ಯತೋ ವಾ' ಎಂಬ ವಾಕ್ಯದಲ್ಲಿರುವ ಜಗತ್ಕಾರಣತ್ವವು ಜೀವನಲ್ಲಿ ಕೂಡುವುದಿಲ್ಲ. ಆದ್ದರಿಂದ ಬ್ರಹ್ಮಶಬ್ದಕ್ಕೆ ಜೀವನೆಂಬ ಅರ್ಥ ಸ್ವರಸವಾಗುವುದಿಲ್ಲ. ಆವಾಗ ರೂಢ್ಯರ್ಥನಾದ ಜೀವನನ್ನು ಬಿಡಲು ಕಾರಣವಿದೆ. ಬ್ರಹ್ಮಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಗುರಿ.

ಪೂರ್ವಪಕ್ಷ - ಕೋಶ ಹೇಳುವಂತೆ ಬ್ರಹ್ಮಶಬ್ದದಿಂದ ಜೀವನೇ ಪ್ರತಿಪಾದ್ಯನು ಯೋಗವು ರೂಢಿಗಿಂತ ದುರ್ಬಲವಾಗಿದೆಯೆಂದು ಪೂರ್ವಮೀಮಾಂಸೆಯ ರಥಕಾರಾಧಿಕರಣದಲ್ಲಿ ಸಿದ್ಧವಾಗಿದೆ. ಯೋಗಾರ್ಥವನ್ನು ಇಟ್ಟುಕೊಂಡು ರೂಢ್ಯರ್ಥವನ್ನು ತಿರಸ್ಕರಿಸಬೇಕಾದರೆ ಪ್ರಮಾಣವಿರಬೇಕು. ಆದರೆ ಅಂತಹ ಪ್ರಮಾಣವೇನು ಇಲ್ಲಿ ಕಾಣುವುದಿಲ್ಲ.

## ಬ್ರಹ್ಮಶಬ್ದಪ್ರತಿಪಾದ್ಯ ಜೀವನೆನ್ನಲು ರೂಢಿಪ್ರಮಾಣ

ಇನ್ನು ವಿಷ್ಣುವಿನಲ್ಲಿ ಬ್ರಹ್ಮಶಬ್ದದ ರೂಢಿಯನ್ನು ಹೇಳಲಾಗದು. ಹಾಗಾದಲ್ಲಿ ಯೋಗದಿಂದ ಲಭಿಸುವ ಗುಣಪೂರ್ಣತ್ವವೇ ಸಿದ್ಧವಾಗುತ್ತಿರಲಿಲ್ಲ. ರೂಢಿಯ ಜೊತೆ ಯೋಗವನ್ನು ಹೇಳಿದಾಗ ಈ ಸಮಸ್ಯೆ ಪರಿಹಾರವಾಗಬಹುದು. ಆದರೆ ಅದಕ್ಕೆ ಆಧಾರವಿಲ್ಲ. ಪಂಕಜಾದಿಶಬ್ದಗಳಲ್ಲಿ ಯೋಗರೂಢಿಯನ್ನೂ ಒಪ್ಪುವುದು ಅನಿವಾರ್ಯ. ಕೇವಲ ಯೋಗವನ್ನು ಒಪ್ಪಿದರೆ ಕಪ್ಪೆ ಮೊದಲಾದವುಗಳಲ್ಲಿ ಅತಿಪ್ರಸಂಗ ಬರುವುದರಿಂದ ರೂಢಿಯನ್ನು ಒಪ್ಪಬೇಕಾಗುತ್ತದೆ. ಆದರೆ ವಿಷ್ಣುವಿನಲ್ಲಿ ಬ್ರಹ್ಮಶಬ್ದ ಯೋಗಾರ್ಥ ಒಪ್ಪಿದಾಗ ಅಂತಹ ಅತಿಪ್ರಸಂಗವೇನು ಬರುವುದಿಲ್ಲ. ಹೀಗಿರುವಾಗ ಸುಮ್ಮನೆ ರೂಢಿಯನ್ನು ಏಕೆ ಒಪ್ಪಬೇಕು?

ಈ ವಿಚಾರವೆಲ್ಲವು 'ತದ್‌ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಮಾತ್ರ. 'ತದೇವ ಬ್ರಹ್ಮ' ಇತ್ಯಾದಿ ಸ್ಥಳದಲ್ಲಿ ರೂಢಿಗೆ ಬಾಧಕವಾದ ಸಮುದ್ರಶಾಯಿತ್ವಾದಿ ಲಿಂಗಗಳಿರುವುದರಿಂದ ವಿಷ್ಣುಪರವೆನ್ನಲು ಪೂರ್ವಪಕ್ಷಿಗಳಿಗೆ ಅಭ್ಯಂತರವಿಲ್ಲ.

## ಪೂರ್ವಪಕ್ಷ ನಿಜವಾಗಿಯೂ ಬರುತ್ತದೆಯೇ?

'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬಲ್ಲಿ ಬ್ರಹ್ಮಶಬ್ದ ಜೀವನಲ್ಲೇ ರೂಢವಾಗಿದೆ. ವಿಷ್ಣುವಿನಲ್ಲಿ ಕೇವಲ ಯೋಗದಿಂದ ಇದೆ. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ಜೀವನನ್ನೇ ಸ್ವೀಕರಿಸಬೇಕೆಂಬ ಪೂರ್ವಪಕ್ಷ ನಡೆಯುತ್ತಿದೆ.

ಇಲ್ಲಿ ಒಂದು ಸಂದೇಹ - ಬ್ರಹ್ಮಶಬ್ದದ ರೂಢಿಯನ್ನು ಜೀವನಲ್ಲಿ ಹೇಗೆ ಹೇಳುತ್ತಿರಿ? 'ತದ್ ವಿಜಿಜ್ಞಾಸಸ್ವ' ಎಂದು ಜಿಜ್ಞಾಸ್ಯತ್ವವು ಬ್ರಹ್ಮನಲ್ಲಿ ಕೇಳಿಸುತ್ತಿದೆ. ಜೀವನೇ ಬ್ರಹ್ಮನಾದಲ್ಲಿ ಜಿಜ್ಞಾಸ್ಯತ್ವ ಕೂಡುವುದಿಲ್ಲ. ಜೀವನು 'ಅಹಂ' ಎಂದು ನಿತ್ಯಸಿದ್ಧನಾದ್ದರಿಂದ ಸಂದಿಗ್ಧನಾಗಿಲ್ಲ. ಆದ್ದರಿಂದಲೇ ಜಿಜ್ಞಾಸ್ಯನೂ ಆಗಲಾರ. ಹೀಗೆ ರೂಢಿಗೆ ಬಾಧಕವಿರುವುದರಿಂದ ಯೋಗವನ್ನೇ ಆಶ್ರಯಿಸ ಬೇಕಲ್ಲವೇ?

ಈ ಸಂದೇಹಕ್ಕೆ ಅವಕಾಶವಿಲ್ಲ - ಜೀವನು ಸ್ವಪ್ರಕಾಶನಾದ್ದರಿಂದ ನಿತ್ಯಸಿದ್ಧನಾಗಿದ್ದರೂ ದೇಹಕ್ಕಿಂತ ಭಿನ್ನನಾಗಿದ್ದಾನೋ, ಅಭಿನ್ನನಾಗಿದ್ದಾನೋ ನಿತ್ಯನೋ, ಅನಿತ್ಯನೋ? ಅಣುನೋ, ವ್ಯಾಪ್ತನೋ? ಹೀಗೆ ಅನೇಕ ಪ್ರಕಾರಗಳಲ್ಲಿ ಜೀವನ ಬಗ್ಗೆ ಸಂದೇಹವಿರುವುದರಿಂದ ಜೀವನು ಜಿಜ್ಞಾಸ್ಯನೇ ಆಗುತ್ತಾನೆ.

ಹಾಗಾದರೆ ಈ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಆಕ್ಷೇಪ ಮಾಡಿಕೊಂಡೇ ಪೂರ್ವಪಕ್ಷ ಮಾಡಲಾಗಿದೆ - ಹಿಂದಿನ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿದ್ದಿರಿ. ಆದರೆ ಆ ಜಿಜ್ಞಾಸೆಯು ಕೂಡುವುದಿಲ್ಲ. ಏಕೆಂದರೆ 'ತದ್ ಬ್ರಹ್ಮ' ಎಂಬಲ್ಲಿ ಬ್ರಹ್ಮಶಬ್ದಕ್ಕೆ ಜೀವ ಎಂದರ್ಥ. ಜೀವನ ಜಿಜ್ಞಾಸೆಯಂತೂ ಕೂಡುವುದಿಲ್ಲ. ಹೀಗೆ ಜಿಜ್ಞಾಸೆಯ ಆಕ್ಷೇಪವೇ ಈ ಅಧಿಕರಣದ ಪೂರ್ವಪಕ್ಷದ ಫಲ. ಹೀಗಿರುವಾಗ ನೀವು ಜೀವನು ದೇಹಕ್ಕಿಂತ ಭಿನ್ನನೋ? ಅಭಿನ್ನನೋ? ಎಂದು ಜಿಜ್ಞಾಸ್ಯನಾಗಿದ್ದಾನೆಂದು ಹೇಳಿದರೆ ಆವಾಗ ಈ ಅಧಿಕರಣದ ಪೂರ್ವಪಕ್ಷವೇ ಹೊರಡಲು ಸಾಧ್ಯವಿಲ್ಲ. ಹಿಂದಿನ ಅಧಿಕರಣದಲ್ಲಿ ಹೇಳಿದ ಜಿಜ್ಞಾಸೆಯನ್ನು ತಪ್ಪೆಂದು ಆಕ್ಷೇಪಿಸಲು ಸಾಧ್ಯವಿಲ್ಲ.

ಹಿಂದಿನ ಸೂತ್ರದಲ್ಲಿ ಶಮದಮಾದಿಸಂಪನ್ನನಾದ ಅಧಿಕಾರಿಯು ಮೋಕ್ಷವೆಂಬ ಫಲಕ್ಕೋಸ್ಕರ ಜೀವಾತ್ಮನಾದ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದಷ್ಟೇ ಹೇಳಿದರು. ಆದರೆ 'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದಕ್ಕೆ ರೂಢಿಯಿಂದ ಜೀವನೆಂದರ್ಥ. ಜೀವನ ಜಿಜ್ಞಾಸೆಯನ್ನು ಶ್ರುತಿಯು ಹೇಳುತ್ತಿರುವಾಗ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದು ಸರಿಯಿಲ್ಲ. ಹೀಗೆ ಪೂರ್ವಾಧಿಕರಣದಲ್ಲಿ ಹೇಳಿದ ವಿಷ್ಣುಜಿಜ್ಞಾಸೆಯನ್ನು ಈ ಅಧಿಕರಣದಲ್ಲಿ ಆಕ್ಷೇಪ ಮಾಡಲಾಗಿದೆ. ಹೊರತು ಜೀವನ ಜಿಜ್ಞಾಸೆಯನ್ನು ಆಕ್ಷೇಪ ಮಾಡುತ್ತಿಲ್ಲ. ಈ ರೀತಿಯಾಗಿ ಒಂದೇ ಅಭಿಪ್ರಾಯದಿಂದ ಟೀಕೆ ಹಾಗು ಸುಧೆಯ ಮಾತುಗಳು ಹೊರಟವೆ. ಆದ್ದರಿಂದ ಟೀಕಾದ್ವಯಗಳ ಪರಸ್ಪರವಿರೋಧವೂ ಪರಿಹಾರವಾಗುತ್ತದೆ.

## ಎರಡು ಬಗೆಯಲ್ಲಿ ಟೀಕಾದ್ವಯಗಳ ವಿರೋಧ ಪರಿಹಾರ

## ಜೀವನು ಬ್ರಹ್ಮಶಬ್ದಪ್ರತಿಪಾದ್ಯನೆನ್ನಲು ಜಗತ್ಕಾರಣತ್ವ ಬಾಧಕವಲ್ಲ

'ತದ್ ವಿಜಿಜ್ಞಾಸ್ವ ತದ್ ಬ್ರಹ್ಮ' ಎಂಬಲ್ಲಿರುವ ಬ್ರಹ್ಮಪದದಿಂದ ವಾಚ್ಯನಾದವನು ಜೀವನೆಂದು ಹೇಳಿದರೆ ಏನೂ ಬಾಧಕವಿಲ್ಲ. 'ಯತೋ ವಾ' ಎಂಬ ಹಿಂದಿನ ವಾಕ್ಯದಲ್ಲಿ ಜಗತ್ಕಾರಣನ ಬಗ್ಗೆ ಹೇಳಿದ್ದರಿಂದ ಮುಂದಿನ ಈ ವಾಕ್ಯದಲ್ಲಿ ಜೀವನು ಹೇಗೆ ಪ್ರತಿಪಾದ್ಯನಾಗುತ್ತಾನೆ? ಎಂಬ ಗೊಂದಲ ಸಹಜ. ಆದರೆ ಜಗತ್ಕಾರಣನು ಜೀವನೇ ಏಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ಏಕೆಂದರೆ ಜೀವನ ಅದೃಷ್ಟದಿಂದ ಘಟಪಟಾದಿ ಜಗತ್ತು ನಿರ್ಮಾಣವಾಗಿದೆ. ಅಥವಾ ಜೀವನು ಮಿಥ್ಯಾಭೂತವಾದ ಜಗತ್ತನ್ನು ಕಲ್ಪಿಸಿದ್ದರಿಂದಲೂ ಜಗತ್ಕಾರಣತ್ವ ಜೀವನಲ್ಲಿ

ಬರುತ್ತದೆ. ಬಹಳ ವಿಶಾಲವಾದ ಜಗತ್ಕಾರಣತ್ವವನ್ನು ಜೀವನಲ್ಲಿ ಹೇಳಬೇಕಾಗಿಲ್ಲ. ಕಣ್ಣಿಗೆ ಕಾಣಿಸುವ ಘಟಪಟಾದಿಗಳ ಕಾರಣತ್ವ ಹೇಳಿದರೆ ಸಾಕು. ಆವಾಗ ಶ್ರುತಿಯಲ್ಲಿರುವ 'ಇಮಾನಿ' ಎಂಬ ಪದಪ್ರಯೋಗವೂ ಸಾಧುವಾಗುತ್ತದೆ.

ಜೀವನನ್ನೇ ಇಲ್ಲಿ ವಿವಕ್ಷಿಸಲು ಆತ್ಮಾ ದ್ರಷ್ಟವ್ಯಃ ಎಂಬಲ್ಲಿರುವ ಆತ್ಮಪದವು ಸಹಕರಿಸುತ್ತದೆ. ಇಷ್ಟೆಲ್ಲ ಕಾರಣಗಳಿಂದ ಬ್ರಹ್ಮಶಬ್ದಪ್ರತಿಪಾದ್ಯನು ಜೀವನೇ ಆಗುತ್ತಾನೆ. ಮತ್ತೊಂದು ಸ್ವಾರಸ್ಯ-ಪರಬ್ರಹ್ಮನಲ್ಲಿ ಜಗತ್ಕಾರಣತ್ವ ಹೇಳಲು ಬರುವುದೇ ಇಲ್ಲ. ಏಕೆಂದರೆ ಅವನು ನಿಷ್ಕ್ರಿಯನಾದ್ದರಿಂದ ನಿಮಿತ್ತಕಾರಣನಾಗಲಾರ. ನಿರ್ವಿಕಾರನಾದ್ದರಿಂದ ಉಪಾದಾನಕಾರಣನೂ ಆಗಲಾರ.

## ಸಿದ್ಧಾಂತ

ಜನ್ಮಾಧಿಕರಣದ ಸಿದ್ಧಾಂತ - 'ಯ ಉ ತ್ರಿಧಾತು' ಇತ್ಯಾದಿ ಶ್ರುತಿಗಳಿಂದ ಜಗತ್ಕಾರಣತ್ವವು ವಿಷ್ಣುವಿನಲ್ಲಿ ಮಾತ್ರ ಇರುವುದೆಂದು ನಿಶ್ಚಯವಾಗಿದೆ. ಈ ಜಗತ್ಕಾರಣತ್ವವನ್ನೇ 'ಯತೋ ವಾ' ಎಂಬ ಶ್ರುತಿಯು ಜಿಜ್ಞಾಸ್ಯನಲ್ಲಿ ಹೇಳುತ್ತಿದೆ. ಜೀವನು ಜಗತ್ಕಾರಣನಾಗಲಾರದ ಕಾರಣ ಬ್ರಹ್ಮಶಬ್ದ ಪ್ರತಿಪಾದ್ಯನಾಗುವುದಿಲ್ಲ. ಅದೃಷ್ಟದ ಮುಖಾಂತರ ಜಗತ್ಕಾರಣನಾಗಿದ್ದಾನೆಂಬುದು ಅರ್ಥವಿಲ್ಲದ ಮಾತು. ಮತ್ತು ಇತರವ್ಯಪದೇಶಾಧಿಕರಣದಲ್ಲಿ ಜೀವನಿಗೆ ಕರ್ತೃತ್ವವನ್ನೇ ನಿಷೇಧಿಸಿರುವುದರಿಂದ ಜಗತ್ಕಾರಣತ್ವವನ್ನು ಸುತರಾಂ ಹೇಳಲು ಸಾಧ್ಯವಿಲ್ಲ. ವಿಷ್ಣುವಿಗೆ ಜಗತ್ಕಾರಣತ್ವ ಹೇಳಲು ನಿಷ್ಕ್ರಿಯತ್ವಶ್ರುತಿವಿರೋಧವೂ ಬರುವುದಿಲ್ಲ. ಶ್ರಮರಹಿತವಾಗಿ ಕೆಲಸ ಮಾಡುತ್ತಾನೆಂದಷ್ಟೇ ಆದರರ್ಥ. ಅಷ್ಟೇ ಅಲ್ಲದೇ 'ಸಹಿಕರ್ತಾ' 'ಸತ್ಕರ್ಮಾ' ಇತ್ಯಾದಿ ಶ್ರುತಿಗಳು ಸ್ಪಷ್ಟವಾಗಿ ಜಗತ್ಕಾರಣತ್ವವನ್ನು ಅವನಲ್ಲಿ ಹೇಳುತ್ತಿದೆ.

## 'ಯತೋ ವಾ' ಎಂಬ ಶ್ರುತಿ ಸಮಸ್ತಜಗತ್ಕಾರಣತ್ವವನ್ನೇ ಹೇಳುತ್ತಿದೆ

'ಯತೋ ವಾ' ಎಂಬ ಶ್ರುತಿಯು ಅನುವಾದಕವೆಂದು ಒಪ್ಪೋಣ. ಅಂದ ಮಾತ್ರಕ್ಕೆ ಪ್ರತ್ಯಕ್ಷದಿಂದ ತೋರುತ್ತಿರುವ ಕೆಲವು ಪದಾರ್ಥಗಳ ಕಾರಣತ್ವವನ್ನಷ್ಟೇ ಅನುವಾದ ಮಾಡುತ್ತಿದೆಯೆಂದು ಒಪ್ಪಬೇಕಿಲ್ಲ. ಹೊರತಾಗಿ ಬೇರೆಲ್ಲಾ ಶ್ರುತಿಗಳಲ್ಲಿ ಹೇಳುತ್ತಿರುವ ಸಮಸ್ತಜಗತ್ಕಾರಣತ್ವವನ್ನೇ ಅನುವಾದ ಮಾಡುತ್ತಿದೆ ಎನ್ನಬೇಕು. ಶಾಸ್ತ್ರೀಯವಾಕ್ಯಗಳು ಶಾಸ್ತ್ರವ್ಯವಹಾರವನ್ನೇ ಅನುಸರಿಸಬೇಕಲ್ಲವೇ?

## ರೂಢಿಯ ಜೊತೆ ಯೋಗವನ್ನೂ ಒಪ್ಪೋಣ

'ತದೇವ ಪರಮಂ ಬ್ರಹ್ಮ' ಎಂಬ ಶ್ರುತಿಯು ವಿಷ್ಣುವಿನಲ್ಲಿ ಬ್ರಹ್ಮಶಬ್ದದ ರೂಢಿಯನ್ನು ಹೇಳುತ್ತಿದೆ. 'ಬೃಹಂತೋ ಹಿ' ಎಂಬ ಶ್ರುತಿಯು ಯೋಗವನ್ನು ಹೇಳುತ್ತಿದೆ. ಯೋಗ ಹಾಗೂ ರೂಢಿ ಎರಡನ್ನೂ ಒಪ್ಪಿದರೆ ತಪ್ಪೇನಿಲ್ಲ. ಯೋಗವನ್ನು ಒಪ್ಪಿದಾಗ ಅತಿಪ್ರಸಂಗ ಬಂದರೆ ಮಾತ್ರ ರೂಢಿಯನ್ನು ಒಪ್ಪಬೇಕೆಂದೇನು ಶ್ರಾದ್ಧ ನಿಯಮವಿಲ್ಲ. ಪಂಕಜಪದಕ್ಕೆ ರೂಢ್ಯರ್ಥ ಒಪ್ಪಿದಾಗ ಬಾಧಕವಿಲ್ಲದಿದ್ದರೂ ಯೋಗಾರ್ಥವನ್ನು ಒಪ್ಪುವುದು ಕಂಡಿದೆ. ಶ್ರುತಿಯಲ್ಲಿರುವ 'ಆಹುಃ' ಎಂಬ ಪದವು ಪ್ರಯೋಗಬಾಹುಲ್ಯ ರೂಪವಾದ ರೂಢಿಯನ್ನು ಹೇಳುತ್ತಿದೆ. ಸಮುದಾಯಶಕ್ತಿಯನ್ನೇ ರೂಢಿಯೆಂದು ಕರೆದರೂ ನಮಗೇನು ಬಾಧಕವಿಲ್ಲ. ಶ್ರುತಿಸ್ಮೃತಿಗಳು ವಿಷ್ಣುವನ್ನೇ ಬ್ರಹ್ಮನೆಂದು ಕರೆಯುವುದರಿಂದ ಸಮುದಾಯಶಕ್ತಿಯನ್ನು ಹೇಳಬಹುದು.

## ವಿದ್ವದ್ರೂಢಿಯು ಅತ್ಯಂತ ಶ್ರೇಷ್ಠ

ಬ್ರಹ್ಮ ಶಬ್ದಕ್ಕೆ ಜೀವ ಹಾಗು ಬ್ರಹ್ಮ ಇಬ್ಬರಲ್ಲಿಯೂ ರೂಢಿಯಿದೆ. ಆದರೆ ಬ್ರಹ್ಮನಲ್ಲಿ ವಿದ್ವದ್ರೂಢಿಯಿಂದ ಜೀವನಲ್ಲಿ ಅವಿದ್ವದ್ರೂಢಿಯಿಂದ ಇರುತ್ತದೆ. ವಿದ್ವದ್ರೂಢಿಯೇ ಇವರಡಲ್ಲಿ ಶ್ರೇಷ್ಠವೆಂದು ಯವಮಯಾಧಿಕಾರಣದಲ್ಲಿ

ನಿರ್ಣಯಿಸಿದ್ದಾರೆ. ಆದರೆ ವಿದ್ವಾಂಸರ ಪ್ರಸಿದ್ಧವಿರೋಧ ಬಾರದಿದ್ದರೆ ಅವಿದ್ವದ್ರೂಢಿಯನ್ನು ಸ್ವೀಕರಿಸಬಹುದೆನ್ನಲು ಪೂರ್ವಮಿಮಾಂಸೆಯ ಪಿಕನೇಮಾಧಿಕರಣದ ದೃಷ್ಟಾಂತವಿದೆ. ಮತ್ತು ಸ್ಮೃತಿಸಮ್ಮತಿಯಿದ್ದಲ್ಲಿ ಅವಿದ್ವದ್ರೂಢಿಯನ್ನು ಸ್ವೀಕರಿಸಲು ಯಾವ ತೊಂದರೆಯೂ ಇರುವುದಿಲ್ಲ. ಆದರೆ ಇಲ್ಲಿ ಬ್ರಹ್ಮಶಬ್ದವನ್ನು ಜೀವನಲ್ಲಿ ಹೇಳಲು ಯಾವುದೇ ಸ್ಮೃತಿಯ ಅನುಗ್ರಹವೂ ಇರುವುದಿಲ್ಲ. ಹೊರತಾಗಿ 'ತದೇವ' ಎಂಬ ಶ್ರುತಿಯ ವಿರೋಧವೇ ಬರುತ್ತದೆ.

ಇನ್ನು ವಿದ್ವದ್ರೂಢಿ ಅವಿದ್ವದ್ರೂಢಿಗಳಲ್ಲಿ ತಾರತಮ್ಯ ಹೇಳುತ್ತಿರುವುದು ಹೇಗೆ ಸರಿ? ಎಂಬ ಪ್ರಶ್ನೆ ಬರುತ್ತದೆ. ಆದರೆ ಗೌಣೀವೃತ್ತಿ ಲಕ್ಷಣಾವೃತ್ತಿಗಳಲ್ಲಿಯೂ ತಾರತಮ್ಯವನ್ನು ತಾರ್ಕಿಕರೂ ಹೇಳಿದ್ದಾರೆ. ಮಿಮಾಂಸಕರೂ ಸಹ ಲಕ್ಷಣಾ ಒಂದರಲ್ಲೇ ತಾರತಮ್ಯ ಒಪ್ಪಿದ್ದಾರೆ. ಮತ್ತು ಯೋಗಕ್ಕಿಂತ ರೂಢಿಯು ಪ್ರಬಲವೆಂದು ಎಲ್ಲರೂ ಒಪ್ಪಿದ್ದಾರೆ. ಅದರಂತೆ ಕೇವಲ ರೂಢಿಯಲ್ಲಿ ತಾರತಮ್ಯ ಒಪ್ಪಿದರೆ ಏನೂ ಬಾಧಕವಿಲ್ಲ.

## ಸುಧೆಯ ಪ್ರಕಾರ ವಿಷಯ ಪೂರ್ವಪಕ್ಷಗಳು

ಎಲ್ಲಾ ಶ್ರುತಿಗಳಲ್ಲಿರುವ ಬ್ರಹ್ಮಶಬ್ದದ ತಾತ್ಪರ್ಯಾರ್ಥವನ್ನು ಸುಧೆಯಲ್ಲಿ ವಿಚಾರ ಮಾಡಿದ್ದಾರೆ. ಆದರೆ ತತ್ವಪ್ರಕಾಶಿಕೆಯಲ್ಲಿ 'ತದ್ವಿಜಿಜ್ಞಾಸಸ್ವ ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವನ್ನು ಮಾತ್ರ ವಿಚಾರ ಮಾಡಿದ್ದಾರೆ. ವಸ್ತುತಃ ಸುಧೆಯಲ್ಲಿ 'ತದ್ಬ್ರಹ್ಮೇತ್ಯಯಂ ಬ್ರಹ್ಮಶಬ್ದಃ' ಎಂದು ಸಂಶಯಧರ್ಮಿಯನ್ನು ತೋರಿಸಿದ್ದರಿಂದ ಸುಧೆಯ ಪ್ರಕಾರವೂ 'ತದ್ಬ್ರಹ್ಮ' ಎಂಬುದೇ ವಿಷಯವಾಕ್ಯವೆಂಬ ಭ್ರಾಂತಿ ಬರುತ್ತದೆ. ಆದರೆ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪ ಮಾಡಿಕೊಳ್ಳಲಷ್ಟೇ ಆ ವಾಕ್ಯ ಹೊರಟದೆ.

## ಸುಧೆಯ ಪ್ರಕಾರ ಸಿದ್ಧಾಂತ

ಸುಧೆಯಲ್ಲಿ ಮಾಡಿದ ಸಿದ್ಧಾಂತವೂ ಸಹ ವಿಭಿನ್ನವಾಗಿದೆ - ಸ್ವರ್ಗಶಬ್ದಕ್ಕೆ ಪ್ರಸಿದ್ಧಾರ್ಥವನ್ನು ತ್ಯಾಗಮಾಡಿ ಅಪ್ರಸಿದ್ಧಾರ್ಥವಾದ ಸ್ವರ್ಗಲೋಕವೆಂದು ಅರ್ಥೈಸುವಂತೆ ಬ್ರಹ್ಮಶಬ್ದಕ್ಕೂ ಸಹ ಪ್ರಸಿದ್ಧಾರ್ಥವಾದ ಜೀವಪರತ್ವವನ್ನೂ ತ್ಯಾಗ ಮಾಡಿ ಅಪ್ರಸಿದ್ಧಾರ್ಥವಾದ ವಿಷ್ಣುಪರವೆಂದು ಅರ್ಥೈಸಬೇಕು. ಅಷ್ಟೇ ಅಲ್ಲದೇ ಬ್ರಹ್ಮಶಬ್ದಕ್ಕೆ ಜೀವಪರತ್ವವನ್ನು ಹೇಳಿದರೆ 'ಯತೋ ವಾ' ಇತ್ಯಾದಿ ಶ್ರುತಿಯಲ್ಲಿ ಹೇಳಿದ ಜಗತ್‌ಕಾರಣತ್ವವೇ ಬಾಧಕವಾಗುತ್ತದೆ. ಆದ್ದರಿಂದ ವಿಷ್ಣುಪರತ್ವವನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾದ್ದರಿಂದಲೇ ಗೌರವದೋಷವೂ ಸಹ ಬರುವುದಿಲ್ಲ. ಇಲ್ಲದಿದ್ದಲ್ಲಿ ಪ್ರಸಿದ್ಧಾರ್ಥನಾದ ಜೀವಪರತ್ವವನ್ನು ಬಿಟ್ಟು ಅಪ್ರಸಿದ್ಧಾರ್ಥಕವಾದ ವಿಷ್ಣುಪರತ್ವವನ್ನು ಒಪ್ಪಿದರೆ ಗೌರವದೋಷ ಬರುತ್ತಿತ್ತು.

## ಅನುವ್ಯಾಖ್ಯಾನದಲ್ಲಿ ಹೇಳಿದ ಪೂರ್ವಪಕ್ಷಸಿದ್ಧಾಂತಗಳು

ಅನುವ್ಯಾಖ್ಯಾನದಲ್ಲಿ ಈ ಅಧಿಕರಣದ ಪೂರ್ವಪಕ್ಷ ಸಿದ್ಧಾಂತಗಳನ್ನು ಹೀಗೆ ಹೇಳಿದ್ದಾರೆ - ಮೋಕ್ಷವನ್ನು ಕೊಡುತ್ತಾನಾದ್ದರಿಂದ ಬ್ರಹ್ಮನನ್ನು ಜಿಜ್ಞಾಸೆ ಮಾಡಬೇಕೆಂದು ಹೇಳಿದರು. ಹಾಗಾದರೆ ಸಂಸಾರವನ್ನು ಕೊಡುತ್ತಾನಾದ್ದರಿಂದ ಅವನ ಜಿಜ್ಞಾಸೆಯನ್ನು ಮಾಡಬಾರದೆಂದಾದೀತು. ಇನ್ನು ಸಂಸಾರಬಂಧನವು ಈಶ್ವರನಿಂದ ಬಂದಿದ್ದಲ್ಲ, ಬೇರೆಯವರಿಂದ ಬಂದಿದ್ದೆಂದಾಗಲೀ ಅಥವಾ ಜೀವನು ಬದ್ಧನೇ ಆಗಿಲ್ಲವೆಂದಾಗಲೀ ಹೇಳಲಾರದು. ಆದ್ದರಿಂದ ಈಶ್ವರನು ಜಿಜ್ಞಾಸ್ಯನಲ್ಲವೆಂದು ಪೂರ್ವಪಕ್ಷ. ಅಪ್ರಸನ್ನನಾದ ಈಶ್ವರನು ಬಂಧಕನಾಗಿದ್ದಾನೆ. ಅವನ ಪ್ರಸಾದಕ್ಕೋಸ್ಕರ ಜಿಜ್ಞಾಸೆಯನ್ನು ಮಾಡಬೇಕು. ಹಾಗಾಗಿ ಈಶ್ವರನಲ್ಲಿರುವ ಬಂಧಕತ್ವವು ಜಿಜ್ಞಾಸೆಗೆ ಅನುಕೂಲವೇ ಆಗಿದೆ ಹೊರತು ಪ್ರತಿಕೂಲವಾಗಿಲ್ಲ. ಜನ್ಮಾದಿಸೂತ್ರದಲ್ಲಿ ಸೃಷ್ಟ್ಯಾದಿಕರ್ತೃತ್ವವನ್ನು ಈಶ್ವರನಿಗೆ ಏಕೆ ಹೇಳಿದ್ದೆಂದರೆ ಅವನಲ್ಲಿರುವ ಮೋಚಕತ್ವವು ಅಸಂಭಾವಿತವಲ್ಲವೆಂದು ತಿಳಿಸಲು . ಇಷ್ಟು ಸಿದ್ಧಾಂತ.

# ಶಾಸ್ತ್ರಯೋನಿತ್ವಾಧಿಕರಣ

## ಸಂಗತಿ ಫಲನಿರೂಪಣೆ ಸ್ಮೃತ್ಯಧಿಕರಣದಿಂದ ಗತಾರ್ಥತ್ವಶಂಕೆ

ಶಾಸ್ತ್ರಯೋನಿತ್ವಾಧಿಕರಣವು ಪ್ರಾರಂಭವಾಗುತ್ತಿದೆ. ಜನ್ಮಾದಿಕಾರಣತ್ವವನ್ನು ವಿಷ್ಣುವಿನ ಲಕ್ಷಣವೆಂದು ಹಿಂದಿನ ಅಧಿಕರಣದಲ್ಲಿ ಸಮರ್ಥಿಸಿದ್ದಾಯಿತು. ಆ ಲಕ್ಷಣಕ್ಕೆ ರುದ್ರಾದಿಗಳಲ್ಲಿ ಅತಿವ್ಯಾಪ್ತಿದೋಷವು ಬರುವುದಿಲ್ಲವೆಂದು ಸಮರ್ಥಿಸಲು ಈ ಅಧಿಕರಣ ಹೊರಟಿದೆ. ಪಂಚರಾತ್ರಾದ್ಯಾಗಮಗಳಲ್ಲಿ ವಿಷ್ಣುವನ್ನೇ ಜಗತ್‌ಕಾರಣನೆಂದು ಹೇಳಿದ್ದಾರೆ. ಆದರೆ ಪಾಶುಪತಾದ್ಯಾಗಮಗಳಲ್ಲಿ ರುದ್ರಾದಿಗಳಲ್ಲಿಯೂ ಜಗತ್ಕಾರಣತ್ವ ಹೇಳಿರುವುದರಿಂದ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆ. ಪಾಶುಪತಾದ್ಯಾಗಮಗಳು ದುರಾಗಮಗಳಾಗಿವೆ. ಪಂಚರಾತ್ರಾದ್ಯಾಗಮಗಳು ಸದಾಗಮಗಳಾಗಿವೆಯೆಂದು ಸಮರ್ಥಿಸಿದಾಗ ಅತಿವ್ಯಾಪ್ತಿಯು ಪರಿಹಾರವಾಗುತ್ತದೆ.

ದುರಾಗಮಗಳ ನಿರಾಸವೇ ಈ ಅಧಿಕರಣದ ಮುಖ್ಯ ಉದ್ದೇಶವಾದಲ್ಲಿ ಸ್ಮೃತ್ಯಧಿಕರಣದಿಂದ ಪುನರುಕ್ತಿ ಬರುತ್ತದೆಂಬುದು ಒಂದು ದೊಡ್ಡ ಸಮಸ್ಯೆ. ಈ ಸಮಸ್ಯೆಯನ್ನು ಬಹಳ ಸುಂದರವಾಗಿ ಇಲ್ಲಿ ಪರಿಹರಿಸಲಾಗಿದೆ. ಪುನರುಕ್ತಿಯುಹೇಗೆಬರುತ್ತದೆಂದುಮೊದಲುವಿಚಾರಮಾಡೋಣ.ಸ್ಮೃತ್ಯಧಿಕರಣವುಯುಕ್ತಿಪಾದದಲ್ಲಿರುವುದರಿಂದ ಯುಕ್ತಿವಿರೋಧವನ್ನು ಪರಿಹರಿಸುತ್ತಿದೆ. ಆದರೆ ಈ ಅಧಿಕರಣದಲ್ಲಿಯೂ ಅಂತಹ ಯುಕ್ತಿಗಳ ವಿರೋಧ ಪರಿಹಾರವು ಕಾಣಿಸುತ್ತಿದೆ. ಮತ್ತು ಸ್ಮೃತ್ಯಧಿಕರಣದಲ್ಲಿ ಸಮಯವಿಗಾನವು ಸಂದೇಹಬೀಜವಾಗಿರುವಂತೆ ಈ ಅಧಿಕರಣದಲ್ಲಿಯೂ ಅದೇ ಸಂದೇಹಬೀಜವಾಗಿದೆ. ಸ್ಮೃತ್ಯಧಿಕರಣದಲ್ಲಿ ದುರಾಗಮಗಳನ್ನು ಕಂಠತಃ ನಿರಾಸಮಾಡಿದ್ದಾರೆಂದೂ ಸಹ ವೈಲಕ್ಷಣ್ಯ ತೋರಿಸಲಾಗದು. ಹಾಗಾದಲ್ಲಿ ದುಷ್ಟಾನುಮಾನಗಳನ್ನು ಕಂಠತಃ ನಿರಾಸ ಮಾಡಲು ಮತ್ತೊಂದು ಅಧಿಕರಣ ಬೇಕಾದೀತು. ಮತ್ತು ಎರಡೂ ಅಧಿಕರಣಗಳಲ್ಲಿ ದುರಾಗಮ ನಿರಾಕರಣೆಯು ಇದ್ದೇ ಇರುವುದರಿಂದ ಆ ಅಂಶದಲ್ಲಿ ಪುನರುಕ್ತಿ ಪರಿಹಾರವಾಗಲು ಸಾಧ್ಯವೇ ಇಲ್ಲ. ದುರಾಗಮಗಳಲ್ಲಿ ತೋರಿಸಿದ ಪರಸ್ಪರ ವಿಸಂವಾದವೆಂಬ ಸಿದ್ಧಾಂತನ್ಯಾಯವು ಎರಡೂ ಅಧಿಕರಣಗಳಲ್ಲಿ ಸಮಾನವಾಗಿದೆ. ಇನ್ನು ಈ ಅಧಿಕರಣದಲ್ಲಿ ಕೇವಲ ದುಷ್ಟಾನುಮಾನವನ್ನು ಮಾತ್ರ ನಿರಾಕರಿಸುತ್ತೇವೆಂದು ಹೇಳಬಾರದು. ಸೂತ್ರದಲ್ಲಿ ಶಾಸ್ತ್ರಶಬ್ದವನ್ನೂ ಪ್ರಯೋಗಿಸಿದ್ದರಿಂದ ದುರಾಗಮಗಳನ್ನು ಮತ್ತು ದುಷ್ಟಾಗಮಗಳನ್ನು ಎರಡನ್ನೂ ಇಲ್ಲಿ ನಿರಾಸ ಮಾಡುತ್ತಿದ್ದಾರೆಂದು ತಿಳಿಯಬೇಕು.

## ಸ್ಮೃತ್ಯಧಿಕರಣದಿಂದ ಪುನರುಕ್ತಿ ಪರಿಹಾರ

ಪುನರುಕ್ತಿದೋಷಕ್ಕೆ ಸ್ವಲ್ಪವೂ ಅವಕಾಶವಿಲ್ಲ. ಸ್ಮೃತ್ಯಧಿಕರಣದಲ್ಲಿ ಪಾಶುಪತಸ್ಮೃತಿಯ ಆಧಾರದಿಂದ ಪೂರ್ವಪಕ್ಷ ಮಾಡಿಕೊಂಡು ಪಂಚರಾತ್ರಸ್ಮೃತಿಯ ಆಧಾರದಿಂದ ಸಿದ್ಧಾಂತ ಮಾಡಿದ್ದಾರೆ. ಈ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಸ್ಮೃತಿ ಮತ್ತು ಅನುಮಾನಗಳ ಆಧಾರದಿಂದ ಪೂರ್ವಪ್ಷ ಮಾಡಿಕೊಂಡು ಶಾಸ್ತ್ರದ ಆಧಾರದಿಂದ ಸಿದ್ಧಾಂತ ಮಾಡಿದ್ದಾರೆ. ಇಷ್ಟೊಂದು ವೈಲಕ್ಷಣ್ಯವಿರುವಾಗ ಪುನರುಕ್ತಿ ಹೇಗೆ ತಾನೆ ಬರುತ್ತದೆ? ಹಾಗಾದರೆ ಇಲ್ಲಿ ಶ್ರುತಿಯಿಂದ ಸಿದ್ಧಾಂತ ಮಾಡಿದ ಮೇಲೆ ಪುನಃ ಸ್ಮೃತ್ಯಧಿಕರಣದಲ್ಲಿ ಸ್ಮೃತಿಯಿಂದ ಪೂರ್ವಪಕ್ಷ ಮಾಡಲಾಗದೆಂದು ಶಂಕಿಸಬಾರದು. ಆಪ್ತವಾಕ್ಯವು ಪರಮಪ್ರಮಾಣವೆಂದು ಎಲ್ಲರೂ ಒಪ್ಪಿದ್ದಾರೆ. ಶ್ರುತಿಯು ಅಪೌರುಷೇಯವಾದ್ದರಿಂದ ಆಪ್ತೋಕ್ತವಾಗಿಲ್ಲ. ಆದರೆ ಪಾಶುಪತಾದ್ಯಾಗಮಗಳು ಪರಮಾಪ್ತರಾದ ರುದ್ರಾದಿಗಳಿಂದ ಪ್ರಣೀತವಾದ ಕಾರಣ ಪ್ರಮಾಣವಾಗಿದೆಯೆಂದು ಸ್ಮೃತ್ಯಧಿಕರಣದಲ್ಲಿ ಪೂರ್ವಪಕ್ಷ ಮಾಡಬಹುದು.

## ಸ್ಮೃತ್ಯಧಿಕರಣದಿಂದ ಬಹುವೈಲಕ್ಷಣ್ಯವಿದೆ.

ಸ್ಮೃತ್ಯಧಿಕರಣದಿಂದ ಹೀಗೂ ವೈಲಕ್ಷಣ್ಯ ತಿಳಿಯಬಹುದು - ಶಾಸ್ತ್ರಯೋನಿತ್ವಾಧಿಕರಣದಲ್ಲಿ ಅನುಮಾನದಿಂದ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಶಂಕಿಸಿ ಅನುಮಾನಕ್ಕೆ ಅಪ್ರಾಮಾಣ್ಯ ಹೇಳುವ ಮೂಲಕ ಸಿದ್ಧಾಂತ ಮಾಡಲಾಗಿದೆ. ಸ್ಮೃತ್ಯಧಿಕರಣದಲ್ಲಿ ಶೈವಾದ್ಯಾಗಮಗಳಿಂದ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಶಂಕಿಸಿ ಶೈವಾದ್ಯಾಗಮಗಳ ಅಪ್ರಾಮಾಣ್ಯದಿಂದ ಸಿದ್ಧಾಂತ ಮಾಡಲಾಗಿದೆ. ಅಥವಾ ಶಾಸ್ತ್ರಯೋನಿತ್ವಾಧಿಕರಣದಲ್ಲಿ ದೃಷ್ಟಫಲದಲ್ಲಿ ಪಾಶುಪತಾದಿಶಾಸ್ತ್ರಗಳಿಗೆ ಪ್ರಾಮಾಣ್ಯವು ಕೂಡುವುದರಿಂದ ಶಿವಾದಿಗಳೂ ಜಗತ್ಕಾರಣರಾಗುತ್ತಾರೆಂದು ಪೂರ್ವಪಕ್ಷ ಮಾಡಿ 'ನಾವೇದವಿನ್ಮನುತೇ' ಎಂಬ ಶ್ರುತಿಯ ಆಧಾರದಿಂದ ಪಾಶುಪತಾದಿಗಳು ಪ್ರಮಾಣಗಳಾಗಲಾರವೆಂದು ಸಿದ್ಧಾಂತ ಮಾಡಲಾಗಿದೆ. ಅಥವಾ ಜಗತ್ಕಾರಣನು ವಿಷ್ಣುವಿನಂತೆ ರುದ್ರನೂ ಆಗಲಿಯೆಂದು ಅತಿವ್ಯಾಪ್ತಿ ಮೂಲಕ ಪೂರ್ವಪಕ್ಷ ಮಾಡಿ ವಿಷ್ಣುವಿನಲ್ಲಿ ಮಾತ್ರ ಜಗತ್ಕಾರಣತ್ವ ಕೂಡಲು ಸಾಧ್ಯವೆಂದು ಈ ಅಧಿಕರಣದಲ್ಲಿ ಸಿದ್ಧಾಂತ ಮಾಡಿದ್ದಾರೆ. ಸ್ಮೃತ್ಯಧಿಕರಣದಲ್ಲಿ ವಿಷ್ಣುವಿನ ಜಗತ್ಕಾರಣತ್ವಲಕ್ಷಣಕ್ಕೆ ಅಸಂಭವದೋಷ ಹೇಳಿ ನಿರಾಕರಿಸಿದ್ದಾರೆಂದು ತಿಳಿಯಬೇಕು. ಹೀಗೆ ಒಟ್ಟು ನಾಲ್ಕು ಬಗೆಯಲ್ಲಿ ಎರಡೂ ಅಧಿಕರಣಗಳಿಗೆ ವೈಲಕ್ಷಣ್ಯವಿದೆ.

ಸ್ಮೃತ್ಯಧಿಕರಣದಲ್ಲಿ ವಿಷ್ಣುವಿನ ಜಗತ್ಕಾರಣತ್ವಲಕ್ಷಣಕ್ಕೆ ಅಸಂಭವದೋಷವನ್ನು ಹೇಳಿದ್ದಾರೆ. ಆದರೆ ಈ ಅಧಿಕರಣದಲ್ಲಿ ಅತಿವ್ಯಾಪ್ತಿ ಹೇಳಿದ್ದಾರೆ. ಅಲ್ಲಿಯಂತೆ ಇಲ್ಲಿಯೂ ಅಸಂಭವದೋಷವನ್ನೇ ಹೇಳಬಹುದಿತ್ತು. ಆದರೆ ಶ್ರುತಿಗೆ ಸ್ವತಃಪ್ರಾಮಾಣ್ಯವಿರುವುದರಿಂದ ವಿಷ್ಣುವಿನಲ್ಲೂ ಜಗತ್ಕಾರಣತ್ವ ಬಂದೇ ಬರುತ್ತದೆ. ಮತ್ತು ಸಮನ್ವಯಾಧಿಕರಣದಲ್ಲಿ ವಿಷ್ಣುವಿನಲ್ಲಿ ಸಕಲಶಬ್ದಗಳನ್ನೂ ಸಮನ್ವಯ ಮಾಡಿದ್ದರಿಂದ, ಶ್ರುತಿ ಮತ್ತು ಆಗಮಗಳಿಗೆ ಸಮನಬಲವಿರುವುದರಿಂದ, ಪೂರ್ವಪಕ್ಷಿಯು ಶ್ರುತಿಗೆ ಪ್ರಾಮಾಣ್ಯ ಒಪ್ಪಿರುವುದರಿಂದ ದೇಶ ಅಥವಾ ಕಾಲಭೇದದಿಂದ ಇಬ್ಬರೂ ಜಗತ್ಕಾರಣರಾಗುತ್ತಾರೆಂದು ಹೇಳಲೇ ಬೇಕು.

## ಸ್ವಪಕ್ಷಸ್ಥಾಪನೆಗೆ ಶಾಸ್ತ್ರಯೋನಿತ್ವಾಧಿಕರಣ ಪರಪಕ್ಷನಿರಾಕರಣೆಗೆ ಸ್ಮೃತ್ಯಧಿಕರಣ

ಹಿಂದಿನ ಅಧಿಕರಣದಲ್ಲಿ ಹೇಳಿದ ಬ್ರಹ್ಮನ ಲಕ್ಷಣವಿಷಯದಲ್ಲಿ ಪ್ರಮಾಣಗಳ ಪ್ರತಿಜ್ಞೆಯನ್ನು ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. 'ಶಾಸ್ತ್ರಪ್ರಮಾಣಗಳ ಆಧಾರದಿಂದ ಬ್ರಹ್ಮನೇ ಜನ್ಮಾದಿಕಾರಣನಾಗಬೇಕಿಲ್ಲ, ರುದ್ರಾದಿಗಳೂ ಆಗಬಹುದೆಂಬ ಶಂಕೆ ಬಂದರೆ ಮುಂದಿನ ಅಧಿಕರಣದಲ್ಲಿ ಉಪಕ್ರಮಾದಿಗಳ ಆಧಾರದಿಂದ ಶಾಸ್ತ್ರಗಳು ಬ್ರಹ್ಮನಲ್ಲೇ ಸಮನ್ವಯವಾಗುತ್ತವೆಂದು ಸಮನ್ವಯದ ಪ್ರಸ್ತಾಪ ಮಾಡುತ್ತಾರೆ. ಅದರ ಉಪಪಾದನೆಗೋಸ್ಕರವೇ ಮುಂದಿನ ಸಮಗ್ರ ಅಧ್ಯಾಯ ಹೊರಡುತ್ತದೆ. ಹೀಗೆ ಈ ಶಾಸ್ತ್ರಯೋನಿತ್ವಾಧಿಕರಣವು ಮುಂದೆ ಹೇಳುವ ಸಮನ್ವಯದ ಪ್ರಸ್ತಾಪಕ್ಕೂ ಹಿಂದೆ ಹೇಳಿದ ಜಗತ್ಕಾರಣನಾದ ಬ್ರಹ್ಮನಲ್ಲಿ ಪ್ರಮಾಣವನ್ನು ಹೇಳಲೂ ಹೊರಟಿರುವುದರಿಂದ ಸ್ವಪಕ್ಷಸಾಧಕೋಪನ್ಯಾಸ-ಪರವಾಯಿತು.

ಆದರೆ ಸ್ಮೃತ್ಯಧಿಕರಣವು ಬಾಧಕೋದ್ಧಾರಪರವಾಗಿದೆ. ಪ್ರಥಮಾಧ್ಯಾಯದಲ್ಲಿ ಹೇಳಿದ ಸಮನ್ವಯವನ್ನು ಸಮರ್ಥಿಸುವಂತಹದ್ದು ಯುಕ್ತಿಸಮಯಾದಿಗಳ ವಿರೋಧವಿಲ್ಲದಿರುವಿಕೆ. ಆ ಯುಕ್ತ್ಯಾದಿಗಳ ವಿರೋಧವಿಲ್ಲವೆಂದು ಸಮರ್ಥಿಸುವುದಕ್ಕಾಗಿ ಸ್ಮೃತ್ಯಧಿಕರಣ ಹೊರಟಿದ್ದರಿಂದ ಬಾಧಕೋದ್ಧಾರಪರವಾಯಿತು. ಆದ್ದರಿಂದ ಶಾಸ್ತ್ರಯೋನಿತ್ವಾಧಿಕರಣಕ್ಕೆ ಸ್ಮೃತ್ಯಧಿಕರಣದಿಂದ ಗತಾರ್ಥತ್ವವು ಬರುವುದಿಲ್ಲ.

ಸ್ಮೃತ್ಯಾದ್ಯಧಿಕರಣಗಳಿಂದ ಪುನರುಕ್ತಿ ಬಾರದಿದ್ದರೂ ಶಬ್ದಮೂಲತ್ವಾಧಿಕರಣದಿಂದ ಪುನರುಕ್ತಿ ಬರುತ್ತದೆ - ಇತರವ್ಯಪದೇಶಾಧಿಕರಣದಲ್ಲಿ ಜೀವಕರ್ತೃತ್ವವನ್ನು ನಿರಾಕರಿಸಿದ ಮೇಲೆ ಪುನಃ ಸಂಶಯ ಬರುತ್ತದೆ. ಜೀವನಲ್ಲಿ

ಹೇಳಿದ ನಿರವಯವತ್ವಶಬ್ದವ್ಯಾಕೋಪಾದಿ ದೋಷಗಳೆಲ್ಲವೂ ದೇವರಲ್ಲೂ ಬರುತ್ತವೆ, ಎಂಬ ತರ್ಕದ ವಿರೋಧ ಬರುತ್ತದೆಂದರೆ ವಿಷ್ಣುವು ಶಬ್ದೈಕಸಮಧಿಗಮ್ಯನಾಗಿದ್ದಾನೆ. ಅನುಮಾನಕ್ಕೆ ಗೋಚರನೇ ಅಲ್ಲವೆಂದು 'ಶ್ರುತೇಸ್ತು ಶಬ್ದಮೂಲತ್ವಾತ್' ಎಂಬ ಸೂತ್ರದಲ್ಲಿ ತರ್ಕಕ್ಕೆ ಅಪ್ರಾಮಾಣ್ಯವನ್ನು ಹೇಳಿದ್ದಾರೆ. ಪುನಃ ನೀವು ಶಾಸ್ತ್ರಯೋನಿತ್ವಾಧಿಕರಣದಲ್ಲಿ ತರ್ಕದ ಅಪ್ರಾಮಾಣ್ಯವನ್ನು ಸಮರ್ಥಿಸಿದರೆ ಪುನರುಕ್ತಿ ಬರುತ್ತದೆ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ದುರಾಗಮಗಳ ನಿರಾಕರಣೆಯನ್ನು ಅಧಿಕವಾಗಿ ಮಾಡಿರಬಹುದು. ಆದರೆ ಅನುಮಾನ ನಿರಾಕರಣೆಯ ಅಂಶದಲ್ಲಿ ಪುನರುಕ್ತಿ ತಪ್ಪಿದ್ದಲ್ಲ. ಮತ್ತು ಈ ಅಧಿಕರಣದಿಂದ ಶಬ್ದಮೂಲತ್ವಾಧಿಕರಣಕ್ಕೆ ಗತಾರ್ಥತ್ವವೂ ತಪ್ಪಿದ್ದಲ್ಲ.

## ಸಂಶಯ ಹಾಗು ಪೂರ್ವಪಕ್ಷ

ಜಗತ್ಕಾರಣತ್ವವು ಅನುಮಾನ ಹಾಗೂ ಪಾಶುಪತಾದ್ಯಾಗಮಗಳಿಂದ ತಿಳಿಯಲು ಯೋಗ್ಯವಾಗಿ- ರುವುದರಿಂದ ವಿಷ್ಣುವಿನಲ್ಲಿ ಬಂದಂತೆ ಬೇರೆಯವರಲ್ಲಿಯೂ ಬರುತ್ತದೆಂದು ಸಾಧಿಸುವುದು ಪೂರ್ವಪಕ್ಷದ ಗುರಿ. ಜಗತ್ಕಾರಣತ್ವವು ಅನುಮಾನ ಮತ್ತು ಆಗಮಗಳಿಗೆ ವಿಷಯವಾಗಲು ಅಯೋಗ್ಯವಾಗಿರುವುದರಿಂದ ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂದು ಸಾಧಿಸುವುದು ಸಿದ್ಧಾಂತದ ಗುರಿ. ಹಿಂದಿನ ಅಧಿಕರಣದಲ್ಲಿ ಹೇಳಿದ ಜಗತ್ಕಾರಣತ್ವ ಲಕ್ಷಣಕ್ಕೆ ರುದ್ರಾದಿಗಳಲ್ಲಿ ಅನುಮಾನಗಳ ಆಧಾರದಿಂದ ಅತಿವ್ಯಾಪ್ತಿ ಬರುತ್ತದೆ. ಅನುಮಾನವು ಪ್ರಮಾಣವಲ್ಲವೆಂದು ಹೇಳಲು ನಿಯಾಮಕ ಪ್ರಮಾಣವಿಲ್ಲ. ಅನುಮಾನದಿಂದ ಸಾಮಾನ್ಯವಾಗಿ ಕರ್ತೃತ್ವವನ್ನು ಸಾಧಿಸಿ ಪಾಶುಪತಾದ್ಯಾಗಮಗಳ ಸಹಕಾರದಿಂದ ರುದ್ರನಲ್ಲಿ ಪರ್ಯವಸಾನ ಮಾಡುತ್ತೇವೆ. ಪಾಶುಪತಾದ್ಯಾಗಮವು ಅನುಮಾನಕ್ಕೆ ವಿರೋಧಿಯಲ್ಲದ ಕಾರಣ ಸುಲಭವಾಗಿ ಜಗತ್ಕಾರಣತ್ವಲಕ್ಷಣವು ರುದ್ರನಲ್ಲಿ ಬರುತ್ತದೆ. ಆದ್ದರಿಂದ 'ಶಿವಃ ಜಗಜ್ಜನ್ಮಾದಿಕರ್ತಾ ಸರ್ವಜ್ಞತ್ವಾತ್' ಎಂಬ ಅನುಮಾನವು ರುದ್ರನಲ್ಲಿ ಸರ್ವಜ್ಞತ್ವಹೇತುವಿನಿಂದ ಜಗಜ್ಜನ್ಮಾದಿಕರ್ತೃತ್ವವನ್ನು ಸಾಧಿಸುತ್ತದೆಂಬುದು ಈ ಅಧಿಕರಣದ ಪೂರ್ವಪಕ್ಷ.

## ಆಗಮಸಹಾಯವಿಲ್ಲದ ಅನುಮಾನಗಳಿಂದ ಜಗತ್ ಕಾರಣತ್ವಲಕ್ಷಣಕ್ಕೆ ರುದ್ರಾದಿಗಳಲ್ಲಿ ಅತಿವ್ಯಾಪ್ತಿ.

ಶಾಸ್ತ್ರಗಳಿಂದ ವಿಷ್ಣು ಜಗತ್ಕಾರಣನೆಂದು ಸಮರ್ಥಿಸಿದರೆ ಅನುಮಾನಗಳಿಂದ ಶಿವನು ಜಗತ್ಕಾರಣನೆಂದು ಸಮರ್ಥಿಸಬಹುದು. ಪ್ರತಿಯೊಂದು ಮನುಕಲ್ಪಗಳಿಗೂ ಒಬ್ಬೊಬ್ಬ ಕರ್ತೃಗಳಿದ್ದಾರೆಂದು ನಿರ್ಣಯವಾಗಿದೆ. ಆದರಂತೆ ಪ್ರತಿಯೊಂದು ಮಹಾಕಲ್ಪಗಳಿಗೂ ಬೇರೆ ಬೇರೆ ಕರ್ತೃಗಳೇ ಇರಬೇಕು. ಮತ್ತು ಘಟವನ್ನು ನಾಶಮಾಡುವ ಶಕ್ತಿ ಕುಂಬಾರನಲ್ಲೇ ಇರಬೇಕೆಂದೆನೂ ನಿಯಮವಿಲ್ಲ. ಆದರಂತೆ ಜಗತ್ತನ್ನು ಸೃಷ್ಟಿ ಮಾಡಿದವನೇ ಜಗತ್ತನ್ನು ಸಂಹಾರ ಮಾಡಬೇಕೆಂಬ ನಿಯಮವನ್ನು ಒಪ್ಪಬೇಕಾಗಿಲ್ಲ. ಆದ್ದರಿಂದ ವಿಷ್ಣು ಜಗತ್ತನ್ನು ಸೃಷ್ಟಿಸಲಿ, ಶಿವನು ಸಂಹರಿಸಲಿ ಏನು ತಪ್ಪು?

ಮತ್ತು ವಿಚಿತ್ರವಾದ ದೊಡ್ಡ ಕೆಲಸಗಳನ್ನು ಒಬ್ಬನಿಂದಲೇ ಮಾಡಲು ಸಾಧ್ಯವಿಲ್ಲವೆಂದು ಲೋಕದಲ್ಲಿ ಕಂಡಿದೆ. ಆದರಂತೆ ಜಗತ್ತಿನ ನಿರ್ಮಾಣವೂ ಸಹ ಅನೇಕರಿಂದಲೇ ನಡೆದಿರಬೇಕು. ವಿಷ್ಣುವೊಬ್ಬನೇ ಈ ಜಗತ್ತನ್ನು ನಿರ್ಮಿಸಲಾರ. ಮತ್ತು ಕರ್ತೃತ್ವ ಶಕ್ತಿ ವಿಷ್ಣು ಒಬ್ಬನಲ್ಲೇ ಇರಬೇಕಾಗಿಲ್ಲ. ಕುಂಬಾರನಲ್ಲಿಯೂ ಘಟಕರ್ತೃತ್ವ ಶಕ್ತಿ ಇರುವುದು ಕಂಡಿದೆ. ಆದರಂತೆ ಶಿವನಲ್ಲಿಯೂ ಜಗತ್‌ಕರ್ತೃತ್ವ ಶಕ್ತಿ ಏಕೆ ಇರಬಾರದು?

ಈ ಎಲ್ಲಾ ಕಾರಣಗಳಿಂದ ವಿಷ್ಣುವಿನಂತೆ ಶಿವನೂ ಕಾರಣನಾಗಲಿ ಎಂದು ಅತಿವ್ಯಾಪ್ತಿದೋಷ ಬರುತ್ತದೆ.

ಅಷ್ಟೇ ಅಲ್ಲದೇ ರುದ್ರ, ಭವ, ಶಂಕರ ಮೊದಲಾದ ಹೆಸರುಗಳೇ ರುದ್ರನಲ್ಲಿ ಕರ್ತೃತ್ವ ಸಂಹರ್ತೃತ್ವ ಪಾಲಕತ್ವಗಳನ್ನು ಹೇಳುತ್ತಿವೆ. ಇನ್ನು ಶ್ರುತಿಸ್ಮೃತಿಗಳು ವಿಷ್ಣುವನಲ್ಲಿ ಜಗತ್‌ಕರ್ತೃತ್ವಾದಿಗಳನ್ನು ಪ್ರತಿಪಾದಿಸುತ್ತಿರಬಹುದು.

ಆದರೆ ಅವೆಲ್ಲವೂ ಸಹ ರುದ್ರನ ಜಗತ್ಕಾರಣತ್ವಾದಿಗಳನ್ನೇನು ನಿಷೇಧಿಸುತ್ತಿಲ್ಲ. ಇಲ್ಲಿಗೆ ಪೂರ್ವಪಕ್ಷ ಮುಗಿಯಿತು.

### ಸಿದ್ಧಾಂತ ಶುಷ್ಕತರ್ಕವು ಅಪ್ರಮಾಣ

ಅನುಮಾನವು ಅತೀಂದ್ರಿಯ ಪದಾರ್ಥವನ್ನು ಸಾಧಿಸುವುದಾದರೆ ಚಕ್ಷುರಿಂದ್ರಿಯವು ಗಂಧವನ್ನೇಕೆ ಗ್ರಹಿಸಬಾರದು? ಗಂಡನ ನಿಯಂತ್ರಣದಲ್ಲಿದ್ದ ಸ್ತ್ರೀಯು ಕಾಮಜಾರಿಣಿಯಾಗುವಂತೆ ಶ್ರುತಿಯ ನಿಯಂತ್ರಣವಿಲ್ಲದ ಅನುಮಾನವೂ ಸಹ ವ್ಯಭಿಚಾರಿಯಾಗುತ್ತದೆ. ಅಂತಹ ಅನುಮಾನದಿಂದ ಮೊಲಕ್ಕೆ ಕೊಂಬನ್ನೂ, ಆಕಾಶದಲ್ಲಿ ಹೂವನ್ನು ಬಂಜೆಸ್ತ್ರೀಗೆ ಮಕ್ಕಳಿರುವಿಕೆಯನ್ನು ಮತ್ತು ಎಳನೆಯ ರಸವನ್ನೂ ಸಹ ಸಾಧಿಸಬಹುದು.

ಆದ್ದರಿಂದ 'ನಾವೇದವಿತ್' ಎಂಬ ಶ್ರುತಿಯೇ ಹೇಳುವಂತೆ ಜಗತ್ಕಾರಣನ ವಿಷಯದಲ್ಲಿ ಅನುಮಾನವು ಪ್ರಮಾಣವಾಗುವುದಿಲ್ಲ. ಅಂತಹ ಅನುಮಾನಕ್ಕೆ ಜೋತುಬಿದ್ದ ಪೂರ್ವಪಕ್ಷದಲ್ಲಿ ಏನೂ ಬಂದಿಲ್ಲ. ಇಷ್ಟು ಸಿದ್ಧಾಂತ.

### ಶಾಂಕರಭಾಷ್ಯನಿರಾಕರಣೆ ಶಾಸ್ತ್ರಯೋನಿತ್ವಶಬ್ದದಲ್ಲಿ ತತ್ಪುರುಷಸಮಾಸವಲ್ಲ

ಹಿಂದಿನ ಅಧಿಕರಣದಲ್ಲಿ ಸಮಸ್ತಜಗತ್ಕಾರಣತ್ವವನ್ನು ಬ್ರಹ್ಮನಿಗೆ ಹೇಳಿದರು. ಇದರಿಂದ ಬ್ರಹ್ಮನಿಗೆ ಸಾರ್ವಜ್ಞ್ಯ ಗುಣವನ್ನು ಸ್ಪಷ್ಟವಾಗಿ ಹೇಳಿದಂತಾಗಲಿಲ್ಲ. ಆದನ್ನು ಸ್ಪಷ್ಟಪಡಿಸುವುದಕ್ಕೋಸ್ಕರವೇ ಈಅಧಿಕರಣವು ಹೊರಟಿದೆ. ಆದ್ದರಿಂದ ಶಾಸ್ತ್ರಸ್ಯ ಯೋನಿಃ = ಶಾಸ್ತ್ರಗಳಿಗೂ ಕಾರಣನಾಗಿದ್ದಾನೆಂಬ ಷಷ್ಠೀತತ್ಪುರುಷಸಮಾಸವನ್ನು ಮಾಡಬೇಕೆಂಬುದು ಶಂಕರಾಚಾರ್ಯರ ಅಭಿಪ್ರಾಯ.

ಇವರ ಅಭಿಪ್ರಾಯವನ್ನು ಕೂಲಂಕಷವಾಗಿ ವಿಮರ್ಶಿಸಬೇಕು. ಜಗಜ್ಜನ್ಮಾದಿಕಾರಣತ್ವದ ಬಗ್ಗೆ ಪ್ರಮಾಣವನ್ನು ಹೇಳುವುದು ಬಿಟ್ಟು ಸಾರ್ವಜ್ಞ್ಯದ ಸಮರ್ಥನೆಯು ಅಸಂಗತ. ಅದ್ವೈತ ಮತದಲ್ಲಿ ಭ್ರಮೆಕ್ಕೆ ಅಧಿಷ್ಠಾನವಾಗುವಿಕೆಯೇ ಕಾರಣ ಎನಿಸುತ್ತದೆ. ಇಂತಹ ವೇದಕಾರಣತ್ವವನ್ನು ಬ್ರಹ್ಮನಲ್ಲಿ ಹೇಳಿದಾಗ ಸಾರ್ವಜ್ಞ್ಯವು ಹೇಗೆ ಸಿದ್ಧವಾಗುತ್ತದೆ? ಹಿಂದಿನ ಅಧಿಕರಣದಲ್ಲಿ ಹೇಳಿದ ಸತ್ಯಸಂಕಲ್ಪತ್ವಾದಿ ಅನೇಕಗುಣಗಳನ್ನು ಸಮರ್ಥನೆ ಮಾಡದೆ ಸಾರ್ವಜ್ಞ್ಯವನ್ನು ಮಾತ್ರ ಸಮರ್ಥಿಸುವುದರಲ್ಲಿ ಅರ್ಥವಿಲ್ಲ. ಮತ್ತು ಅದ್ವೈತಿಗಳ ಅಧಿಕರಣಶರೀರ ರಚನೆಗೆ ಪೂರ್ವಪಕ್ಷಕಾರರಾದ ಸಾಂಖ್ಯರು ಬ್ರಹ್ಮನನ್ನು ಶಾಸ್ತ್ರಯೋನಿಯೆಂದೇ ಒಪ್ಪಲಾರರು. ಮತ್ತು ಸಾರ್ವಜ್ಞ್ಯವನ್ನು ಸಾಧಿಸಿ ಅದರ ಮೂಲಕ ಪ್ರಕೃತಿಗೆ ಜಗತ್ಕಾರಣತ್ವವನ್ನು ನಿಷೇಧಿಸುವುದಕ್ಕಿಂತ ನೇರವಾಗಿ ಶ್ರುತಿಯಿಂದಲೇ ನಿಷೇಧಮಾಡುವುದು ನೇರಮಾರ್ಗ. ಮತ್ತೊಂದು ದೋಷ ಸಮಸ್ತಜಗತ್ಕಾರಣತ್ವದಿಂದ ಸಿದ್ಧವಾಗದ ಸಾರ್ವಜ್ಞ್ಯವು ಏಕದೇಶವಾದ ಶಾಸ್ತ್ರಗಳ ನಿರ್ಮಾಣದಿಂದ ಹೇಗೆ ತಾನೇ ಸ್ಪಷ್ಟವಾಗುತ್ತದೆ? ಆದ್ದರಿಂದ ಬಹುವ್ರೀಹಿ ಸಮಾಸವನ್ನೇ ಮಾಡಬೇಕು. ತತ್ಪುರುಷಸಮಾಸವನ್ನೇ ಮಾಡಬಾರದು.

## ಸಮನ್ವಯಾಧಿಕರಣ

### ಸಂಗತಿ, ಫಲ, ವಿಷಯ, ಸಂಶಯ, ಪೂರ್ವಪಕ್ಷ

ಶಾಸ್ತ್ರಯೋನಿತ್ವಾಧಿಕರಣದ ಅನಂತರವೇ ಏಕೆ ಸಮನ್ವಯಾಧಿಕರಣವು ಹೇಳಲ್ಪಟ್ಟದೆ? ಎಂಬುದಕ್ಕೆ ಸಂಗತಿಯನ್ನು ತಿಳಿಸುತ್ತಾರೆ. ಶಾಸ್ತ್ರಯೋನಿತ್ವಾಧಿಕರಣದಿಂದ ಸಿದ್ಧವಾಗುವ ವಿಷಯದ ಮೇಲೆ ಪ್ರಶ್ನಿಸಿ ಉತ್ತರವನ್ನು ಕೊಡುವುದು ಈ ಅಧಿಕರಣದ ವಿಷಯ. ಹಾಗಾಗಿ ಶಾಸ್ತ್ರಯೋನಿತ್ವಾಧಿಕರಣದ ಅನಂತರವೇ ಇದನ್ನು ಹೇಳಿರುವುದು ಉಚಿತವಾಗಿದೆ.

ಹಿಂದೆ ಶಾಸ್ತ್ರದಲ್ಲಿ ಯಾರಿಗೆ ಜಗತ್ಕಾರಣತ್ವವನ್ನು ಹೇಳಿದ್ದಾರೋ ಅವನು ಬ್ರಹ್ಮಪದವಾಚ್ಯನೆಂದು ಹೇಳಲಾಗಿತ್ತು. ಆದ್ದರಿಂದಲೇ ಬ್ರಹ್ಮಪದವಾಚ್ಯನಾದವನು ವಿಷ್ಣುವೇ ಎಂದು ಸಮರ್ಥಿಸಲಾಗಿತ್ತು. ಆದರೆ ಶಾಸ್ತ್ರದಲ್ಲಿ ಹೇಳಿರುವ ಜಗತ್ಕಾರಣತ್ವವು ವಿಷ್ಣುವಿನಲ್ಲಿ ಮಾತ್ರವಿದೆ ಶಿವಾದಿ ಬೇರೆ ದೇವತೆಗಳಲ್ಲಿ ಇಲ್ಲವೆಂದು ನಿರ್ಧರಿಸುವುದು ಕಷ್ಟ. ಏಕೆಂದರೆ ಶೈವಾದ್ಯಾಗಮಗಳಲ್ಲಿ ಶಿವನಿಗೆ ಜಗತ್ಕಾರಣತ್ವವನ್ನು ಹೇಳಿದ್ದಾರೆ. ಆ ಆಗಮಗಳು ವೇದವ್ಯಾಖ್ಯಾನರೂಪವಾಗಿ ಇರುವುದರಿಂದ ಪ್ರಮಾಣಗಳಾಗಿವೆ. ಮತ್ತು 'ವ್ಯಾಖ್ಯಾನತೋ ವಿಶೇಷಪ್ರತಿಪತ್ತಿಃ' ಎಂಬ ನ್ಯಾಯಾನುಸಾರ ಶಾಸ್ತ್ರಗಳಲ್ಲಿಯೂ ಕೂಡ ಶಿವನಿಗೆ ಜಗತ್ಕಾರಣತ್ವವನ್ನು ಹೇಳಿದ್ದಾರೆ ಎಂದು ನಿರ್ಧರಿಸಬಹುದು. ಜಗತ್ಕಾರಣತ್ವದಂತೆ ಶಾಸ್ತ್ರಗಳ ತಾತ್ಪರ್ಯವನ್ನೂ ಕೂಡ ಶಾಸ್ತ್ರದಿಂದಲೇ ನಿರ್ಧರಿಸಬೇಕು ಹೊರತು ಶೈವಾಗಮಗಳಿಂದಲ್ಲ ಎನ್ನಬಹುದು. ಆದರೆ ಹಾಗೆ ಹೇಳಿದರೆ ಆತ್ಮಾಶ್ರಯದೋಷವಿದೆ. ಆದಕ್ಕೋಸ್ಕರ ಪಂಚರಾತ್ರಾಗಮಗಳೂ ಕೂಡ ವೇದವ್ಯಾಖ್ಯಾನ ರೂಪವಾಗಿವೆಯಾದ್ದರಿಂದ ಅವುಗಳಲ್ಲಿ ವಿಷ್ಣುವಿಗೇ ಜಗತ್ಕಾರಣತ್ವವನ್ನು ಹೇಳಿದ್ದಾರೆ, ನೀವು ಹೇಳಿದ ನ್ಯಾಯವನ್ನು ಇಟ್ಟುಕೊಂಡರೂ ಶಾಸ್ತ್ರಗಳಲ್ಲಿ ವಿಷ್ಣುವಿಗೇ ಜಗತ್ಕಾರಣತ್ವವನ್ನು ಹೇಳಿದ್ದಾರೆ ಎಂದು ನಿರ್ಧರಿಸಬಹುದಲ್ಲವೆ? ಎಂದು ಹೇಳಬಹುದು. ಹಾಗೆ ಹೇಳಿದರೆ ಪಂಚರಾತ್ರಾಗಮದ ದೆಸೆಯಿಂದ ವಿಷ್ಣುವಿಗೆ ಶೈವಾಗಮದ ದೆಸೆಯಿಂದ ಶಿವನಿಗೆ ಎಂದು ಇಬ್ಬರಿಗೆ ಜಗತ್ಕಾರಣತ್ವವು ಸಿದ್ಧವಾಗುತ್ತದೆ ಹೊರತು ವಿಷ್ಣುವಿಗೆ ಮಾತ್ರ ಎಂಬ ಪಕ್ಷವನ್ನು ಕೈಬಿಟ್ಟಂತಾಗುತ್ತದೆ.

## ತಾತ್ಪರ್ಯನಿಶ್ಚಾಯಕಗಳು ಯಾವುವು?

ಉಪಕ್ರಮಾದಿಗಳು ವೇದದ ತಾತ್ಪರ್ಯನಿಶ್ಚಾಯಕಗಳಲ್ಲವೆಂದು ಇಲ್ಲಿ ವಿವರಿಸುತ್ತಾರೆ, ಹೇಗೆಂದರೆ ಶ್ರುತಿಯಲ್ಲಿ ಅಶ್ವಪ್ರತಿಗ್ರಹೇಷ್ಟಿಯನ್ನು ಹೇಳುವ ಪ್ರಸಂಗದಲ್ಲಿ ಉಪಕ್ರಮವನ್ನು ನೋಡಿದರೆ ದಾನ ಕೊಡುವವನು ಆ ಇಷ್ಟಿಯನ್ನು ಮಾಡಬೇಕು ಎಂದು ಅನ್ನಿಸುತ್ತದೆ. ಉಪಸಂಹಾರವನ್ನು ನೋಡಿದರೆ ದಾನ ತೆಗೆದುಕೊಳ್ಳುವನು ಅದನ್ನು ಮಾಡಬೇಕು ಎಂದು ಅನ್ನಿಸುತ್ತದೆ. ನಿಜವಾಗಿಯೂ ಯಾರಿಗೆ ಎಂದು ತೀರ್ಮಾನವಾಗುವುದಿಲ್ಲ ಉಪಕ್ರಮ, ಉಪಸಂಹಾರಗಳೆರಡೂ ಆ ಶ್ರುತಿಯ ಭಾಗಗಳೇ ಆಗಿರುವುದರಿಂದ ಬೇರೆ ಪ್ರಮಾಣವಿಲ್ಲದೆ. ಒಂದನ್ನು ಮಾತ್ರ ಪ್ರಮಾಣವೆಂದು ತೀರ್ಮಾನಿಸಲು ಬರುವುದಿಲ್ಲ. ಶಾಸ್ತ್ರಕಾರರು ಬೇರೆ ಬೇರೆ ಪ್ರಸಂಗದಲ್ಲಿ ಒಂದೊಂದಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಹೀಗಾಗಿ ಉಪಕ್ರಮ ಉಪಸಂಹಾರ ಎರಡೂ ತಾತ್ಪರ್ಯನಿಶ್ಚಾಯಕಗಳು ಆಲ್ಲ.

ಇನ್ನು 'ಅಭ್ಯಾಸ' ಎಂಬುದೂ ಕೂಡ ನಿಶ್ಚಾಯಕವಲ್ಲ ಏಕೆಂದರೆ ಒಂದು ಸಲ ಹೇಳಿದರೆ ವಿವಕ್ಷಿತಾರ್ಥವು ಸಿದ್ಧವಾಗುತ್ತಿರುವಾಗ ಪುನಃ ಪುನಃ ಹೇಳುವುದು ವ್ಯರ್ಥ. ಅಷ್ಟೇ ಅಲ್ಲ ಎಲ್ಲಿಯೂ ಕೂಡ 'ಪುನರುಕ್ತಿಯು' ದೋಷವಲ್ಲ ಎಂದು ಆಗಬೇಕಾಗುತ್ತದೆ. ಹಾಗೆಯೇ 'ಅಪೂರ್ವತಾ' ಎಂಬುದೂ ಕೂಡ. ಶ್ರುತಿಮೂಲಸ್ಮೃತಿಗಳಲ್ಲಿ ಹಾಗೂ ಕೆಲವೊಂದು ಅನುಮಾನ ಮತ್ತು ಪ್ರತ್ಯಕ್ಷದಿಂದ ಸಿದ್ಧವಾದ ವಿಷಯವನ್ನು ಹೇಳುವ ಶ್ರುತಿಗೆ ಅಪೂರ್ವತ್ವ ಇಲ್ಲವಾದ್ದರಿಂದ ತಾತ್ಪರ್ಯ ಇಲ್ಲವೆಂದು ಹೇಳಬೇಕಾಗುತ್ತದೆ.

ಫಲವನ್ನು ಹೇಳದೆ ಇರುವ ಅನೇಕ ಶ್ರುತಿಗಳು ಇರುವುದರಿಂದ 'ಫಲ' ಎಂಬುದು ತಾತ್ಪರ್ಯಲಿಂಗ ಎಂದು ಒಪ್ಪಿದರೆ, ಆ ಎಲ್ಲ ಶ್ರುತಿಗಳಿಗೆ ತಾತ್ಪರ್ಯವಿಲ್ಲ ಎನ್ನಬೇಕಾಗುತ್ತದೆ. ಹಾಗೆಯೇ 'ಅರ್ಥವಾದವೂ' ಕೂಡ. 'ಉಪಪತ್ತಿ'ಯನ್ನು ತಾತ್ಪರ್ಯನಿಶ್ಚಾಯಕವೆಂದರೆ ಶ್ರುತಿಗೆ 'ಅನಪೇಕ್ಷತ್ವ' ರೂಪವಾದ ಪ್ರಾಮಾಣ್ಯವನ್ನು ಕೈಬಿಟ್ಟಂತಾಗುತ್ತದೆ. ಹೀಗಾಗಿ ಅವುಗಳು ತಾತ್ಪರ್ಯನಿಶ್ಚಾಯಕಗಳು ಆಲ್ಲವೇ ಆಲ್ಲ. ಸರ್ವಜ್ಞರು ರಚಿಸಿದ ಆಗಮಗಳಿಂದಷ್ಟೇ ತಾತ್ಪರ್ಯನಿಶ್ಚಯ ಮಾಡಬಹುದು.

## ಶಾಸ್ತ್ರದಿಂದಲೇ ಶಿವನಿಗೆ ಜಗತ್ಕಾರಣತ್ವ ಸಿದ್ಧವಾಗುತ್ತದೆ

ಹಿಂದೆ ಶೈವಾಗಮಗಳಿಂದ ವೇದಗಳ ತಾತ್ಪರ್ಯ ನಿಶ್ಚಯ ಮಾಡಿದಾಗ ಶಿವನಿಗೆ ಶಾಸ್ತ್ರದಿಂದ ಜಗತ್ಕಾರಣತ್ವವು ಸಿದ್ಧವಾಗುತ್ತದೆ ಎಂದು ಹೇಳಿತ್ತು. ಈಗ ನೇರವಾಗಿ ಶಾಸ್ತ್ರದಿಂದಲೇ ಅದು ಸಿದ್ಧವಾಗುತ್ತದೆ ಎಂದು ತಿಳಿಸುತ್ತಾರೆ.

ತಾತ್ಪರ್ಯನಿಶ್ಚಯಕ್ಕೆ ಅಬಾಧಿತಪ್ರತೀತಿಯೇ ಸಾಕು. ಶೈವಾಗಮಗಳ ಅವಶ್ಯಕತೆ ಇಲ್ಲ. ಶಾಸ್ತ್ರವು ಶಿವನಿಗೆ ಜಗತ್ಕಾರಣತ್ವವನ್ನು ಹೇಳಿದೆ ಎಂದರೆ ಬೇರೆಯಾದ ಪ್ರಮಾಣದ ವಿರೋಧವನ್ನು ಹೇಳಲು ಬರುವುದಿಲ್ಲ ಏಕೆಂದರೆ 'ನೈಷಾ ತರ್ಕೇಣ' ಎಂಬ ಶ್ರುತಿಯಿಂದ, ಶಾಸ್ತ್ರ ಬಿಟ್ಟು ಜಗತ್ಕಾರಣತ್ವವನ್ನು ತಿಳಿಸಲು ಬೇರೆ ಪ್ರಮಾಣಗಳು ಹೇಗೆ ಸಮರ್ಥವಲ್ಲವೋ ಹಾಗೆ ಅದನ್ನು ವಿರೋಧಿಸಲೂ ಕೂಡ ಸಮರ್ಥಗಳಲ್ಲ, ಶಾಸ್ತ್ರದ ವಿರೋಧವನ್ನು ಹೇಳಬೇಕು ಅದು ಸಾಧ್ಯವಿಲ್ಲ. ವಿಷ್ಣುವಿಗೇ ಜಗತ್ಕಾರಣತ್ವವನ್ನು ಹೇಳುವ ಶಿವನಿಗೆ ಜಗತ್ಕಾರಣತ್ವವನ್ನು ನಿಷೇಧಿಸುವ ಶಾಸ್ತ್ರವನ್ನು ಹೇಳಿದರೆ ನಾವೂ ಕೂಡ ಶಿವನಿಗೆ ಜಗತ್ಕಾರಣತ್ವವನ್ನು ಹೇಳುವ ವಿಷ್ಣುವಿಗೆ ಜಗತ್ಕಾರಣತ್ವನ್ನು ನಿಷೇಧಿಸುವ ಶಾಸ್ತ್ರವನ್ನು ಹೇಳುತ್ತೇವೆ. ಆಗ ನಿರ್ಧರಿಸಲು ಬರುವುದಿಲ್ಲ. ಹಾಗಾಗಿ ಎರಡು ವಿಧ ಶಾಸ್ತ್ರಕ್ಕೂ ಪ್ರಾಮಾಣ್ಯ ಸಿದ್ಧಿಯಾಗಬೇಕಾದರೆ ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಜಗತ್ಕಾರಣರು ಮತ್ತೊಬ್ಬರಲ್ಲ ಎನ್ನಬೇಕಾಗುತ್ತದೆ. ಹೀಗಾದಾಗ ಶಿವನ ಜೊತೆಗೆ ವಿಷ್ಣುವಿಗೆ ಜಗತ್ಕಾರಣತ್ವ ಸಿದ್ಧವಾದರೂ ವಿಷ್ಣುವಿಗೆ ಮಾತ್ರ ಜಗತ್ಕಾರಣತ್ವವಿದೆ ಎಂದು ಸಿದ್ಧವಾಗುವುದಿಲ್ಲವಾದ್ದರಿಂದ ನಮ್ಮ ಅಭೀಷ್ಟವು ಸಿದ್ಧಿಸುತ್ತದೆ. ಶಾಸ್ತ್ರದಲ್ಲಿ ಜಗತ್ಕಾರಣತ್ವವನ್ನು ಹೇಳುವ ಎಲ್ಲಾ ವಾಕ್ಯಗಳಲ್ಲಿ ವಿಷ್ಣುವನ್ನೇ ಹೇಳಿದ್ದಾರೆಂದರೆ, ಅಸಿದ್ಧಿ ದೋಷ ಬರುತ್ತದೆ. ಕೆಲವೊಂದು ವಾಕ್ಯಗಳಲ್ಲಿ ಹೇಳಿದ್ದಾರೆಂದರೆ ವ್ಯಭಿಚಾರದೋಷವಿದೆ ಆದ್ದರಿಂದ ಶಾಸ್ತ್ರದಲ್ಲಿ ವಿಷ್ಣುವಿನಲ್ಲಿ ಮಾತ್ರ ಜಗತ್ಕಾರಣತ್ವವನ್ನು ಹೇಳಿದ್ದಾರೆ ಎಂಬುದು ಸರಿಯಲ್ಲ ಇಷ್ಟು ಪೂರ್ವಪಕ್ಷ.

## ಸಿದ್ಧಾಂತ – ಉಪಕ್ರಮಾದಿಗಳೇ ತಾತ್ಪರ್ಯನಿಶ್ಚಾಯಕಗಳು

ಹಿಂದೆ ಹೇಳಿದ ಪೂರ್ವಪಕ್ಷಕ್ಕೆ ವಿಸ್ತಾರವಾಗಿ ಇನ್ನು ಮುಂದೆ ಉತ್ತರ ಕೊಡುತ್ತಾ ಸಿದ್ಧಾಂತವನ್ನು ಹೇಳುತ್ತಾರೆ. ಶೈವಾಗಮಗಳಿಂದ ಶಾಸ್ತ್ರದ ತಾತ್ಪರ್ಯನಿಶ್ಚಯ ಮಾಡುತ್ತವೆಂದು ಹೇಳಿದ್ದು ತಪ್ಪು. ಶೈವಾಗಮಗಳ ತಾತ್ಪರ್ಯವನ್ನು ಹೇಗೆ ನಿಶ್ಚಯ ಮಾಡುತ್ತೀರಿ? ಅವುಗಳ ತಾತ್ಪರ್ಯ ನಿಶ್ಚಯವಾಗಿಲ್ಲವಾದರೆ ಅಂತಹವುಗಳಿಂದ ಶಾಸ್ತ್ರದ ತಾತ್ಪರ್ಯ ನಿಶ್ಚಯ ಮಾಡುವುದಾದರೂ ಹೇಗೆ? ಆದ್ದರಿಂದ ಬೇರೆ ದಾರಿ ಇಲ್ಲದೆ ಉಪಕ್ರಮಾದಿಗಳಿಂದಲೇ ಶೈವಾಗಮಗಳ ತಾತ್ಪರ್ಯನಿಶ್ಚಯ ಮಾಡುತ್ತೇವೆಂದು ಹೇಳಬೇಕು. ಹೀಗೆ ಹೇಳಿದರೆ ಆ ಉಪಕ್ರಮಾದಿಗಳಿಂದಲೇ ಶಾಸ್ತ್ರದ ತಾತ್ಪರ್ಯನಿರ್ಣಯ ಮಾಡಲು ಬರುತ್ತಿರುವಾಗ ಶೈವಾಗಮಗಳಿಂದ ತಾತ್ಪರ್ಯ ನಿಶ್ಚಯ ಮಾಡುತ್ತೇವೆಂಬುದು ಸರಿಯಲ್ಲ. ನಾವು ಉಪಕ್ರಮಾದಿಗಳಿಂದ ಶೈವಾಗಮಗಳ ತಾತ್ಪರ್ಯ ನಿಶ್ಚಯ ಮಾಡುವುದಿಲ್ಲ. ಹೊರತಾಗಿ ಗ್ರಂಥಕಾರರ ಉಪದೇಶದಿಂದ. ಅಥವಾ ವ್ಯಾಖ್ಯಾನದಿಂದ ನಿಶ್ಚಯಿಸುತ್ತೇವೆನ್ನುವುದೂ ಸರಿಯಲ್ಲ ಒಂದು ವೇಳೆ. ಯಾವುದೇ ವ್ಯಾಖ್ಯಾನವಿಲ್ಲದ ಗ್ರಂಥ, ಅಥವಾ ಗ್ರಂಥವನ್ನು ರಚಿಸಿ ತಾತ್ಪರ್ಯವನ್ನು ತಿಳಿಸದೆ ಮೃತನಾದವನ ಗ್ರಂಥವನ್ನು ನೋಡಿದಾಗ ವ್ಯುತ್ಪನ್ನನಿಗೆ ತಾತ್ಪರ್ಯಜ್ಞಾನ ಬರುತ್ತದೆ. ಅಲ್ಲಿ ಬೇರೇನೂ ಹೇಳಲು ಬರುವುದಿಲ್ಲವಾದ್ದರಿಂದ ಉಪಕ್ರಮಾದಿಗಳೇ ಎಂದು ಹೇಳಬೇಕು. ಹಾಗಾಗಿ ಎಲ್ಲಾ ಕಡೆಯಲ್ಲೂ ಅದೇ ಕಾರಣವೆಂದು ಹೇಳಲು ಬರುವಾಗ ಉಪಕ್ರಮಾದಿಗಳು ಕಾರಣಗಳು ಅಲ್ಲ ಎನ್ನುವುದು ಸರಿಯಲ್ಲ.

ಈ ಪ್ರಸಂಗದಲ್ಲಿ ಇನ್ನೊಂದು ವಿಷಯವನ್ನು ಹೇಳಿದ್ದರು - ಶಬ್ದದಿಂದ (ವೇದದಿಂದ) ಆಪಾತತಃ ಪ್ರತೀತವಾದ ಅರ್ಥವನ್ನು ಬಿಟ್ಟರೆ ಶಬ್ದವನ್ನು (ವೇದವನ್ನು) ಅಪ್ರಮಾಣವೆಂದತಾಗುತ್ತದೆ. ಏಕೆಂದರೆ ಅರ್ಥವನ್ನು ತಿಳಿಸುವ ಉದ್ದೇಶದಿಂದಲೆ ಶಬ್ದವು ಹೊರಟಿದೆ. ಅರ್ಥವನ್ನು ಒಪ್ಪುವುದಿಲ್ಲವೆಂದರೆ ಶಬ್ದಕ್ಕೆ ಪ್ರಾಮುಖ್ಯವಿಲ್ಲ ಎಂದು ಹೇಳುವುದು ಸರಿಯಲ್ಲ. ಆಪಾತತಃ ಪ್ರತೀತವಾದ ಅರ್ಥವನ್ನು ಬಿಟ್ಟು ವಿಮರ್ಶಿಸಿ ಸರಿಯಾದ ಅರ್ಥವನ್ನು ಸ್ವೀಕರಿಸಿದಾಗ ಆಪಾತತಃ ಪ್ರತೀಕವಾದ ಭ್ರಾಂತಿಯನ್ನು ಬಿಟ್ಟಂತಾಗುತ್ತದೆ ಹೊರತು ವೇದರ್ಥವನ್ನಲ್ಲ. ಆದ್ದರಿಂದ ಆನಂತವಾದ ಗಹನಾರ್ಥವುಳ್ಳಂತಹ ವೇದವನ್ನು ಉಪಕ್ರಮಾದಿಗಳಿಂದ ತಾತ್ಪರ್ಯ ನಿಶ್ಚಯ ಮಾಡಿ ಸರಿಯಾದ ಅರ್ಥ ತಿಳಿದುಕೊಳ್ಳುವುದು ಉಚಿತವೇ ಆಗಿದೆ.

ಇಲ್ಲಿಗೆ ಸಮನ್ವಯಾಧಿಕರಣದ ಸಾರ ಮುಗಿಯಿತು.

# ಶ್ರೀಮನ್ ಮೂಲರಾಮ ದೇವರು
# ಶ್ರೀ ರಾಘವೇಂದ್ರಸ್ವಾಮಿಗಳ ಮಠ - ಮಂತ್ರಾಲಯ

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

## ಚತುರ್ದಶಲೋಕಗುರುಗಳಾದ ಭಗವಾನ್
## ಶ್ರೀ ವೇದವ್ಯಾಸರು

ವಿಜ್ಞಾನರೋಚೀಃ ಪರಿಪೂರಿತಾಂತರ್ಬಾಹ್ಯಾಂಡಕೋಶಂ ಹರಿತೋಪಲಾಭಮ್ ।
ತರ್ಕಾಭಯೇ ತಂ ವಿಧಿಶರ್ವಪೂರ್ವಗೀರ್ವಾಣವಿಜ್ಞಾನದಮಾನತೋಽಸ್ಮಿ ॥

# ಜಗದ್ಗುರು ಶ್ರೀಮಧ್ವಾಚಾರ್ಯರು

ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ ।
ಆನಂದತೀರ್ಥಮತುಳಂ ಭಜೇ ತಾಪತ್ರಯಾಪಹಮ್ ॥

# ಶ್ರೀ ಜಯತೀರ್ಥರು

ಚಿತ್ರೈಃ ಪದೈಶ್ಚ ಗಂಭೀರೈರ್ವಾಕ್ಯೈರ್ಮಾನ್ಯೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ॥

ಮಂತ್ರಾಲಯ ಪ್ರಭುಗಳಾದ ಕಲಿಯುಗ ಕಾಮಧೇನು ಕಲ್ಪತರುಗಳೆಂದೇ ಪ್ರಸಿದ್ಧರಾದ

## ಶ್ರೀ ರಾಘವೇಂದ್ರಗುರುಸಾರ್ವಭೌಮರು

ದುರ್ವಾದಿಧ್ವಾಂತರವಯೇ ವೈಷ್ಣವೇಂದೀವರೇಂದವೇ ।
ಶ್ರೀ ರಾಘವೇಂದ್ರಗುರವೇ ನಮೋऽತ್ಯಂತದಯಾಲವೇ ॥

ಪರಮಪೂಜ್ಯ।। ಶ್ರೀ ಸುಜಯೀಂದ್ರತೀರ್ಥ ಶ್ರೀಪಾದಂಗಳವರು

ಸುಯಮೀಂದ್ರಕರಾಬ್ಜೋತ್ಥಂ ಸುವಿದ್ಯಾಬೋಧಕಂ ಸದಾ ।
ಸುಮೂಲರಾಮಪೂಜಾಢ್ಯಂ ಸುಜಯೀಂದ್ರಗುರುಂ ಭಜೇ ।।

ಪರಮಪೂಜ್ಯ।। ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರು



ಸುಶಮೀಂದ್ರಕರಾಬ್ಜೋತ್ಥಂ ರಾಘವೇಂದ್ರಗುರುಪ್ರಿಯಂ ।
ಸುಯತೀಂದ್ರಗುರುಂ ವಂದೇ ಮೂಲರಾಮಾರ್ಚನೇ ರತಮ್ ।।

ಹಂಸನಾಮಕ ಪರಮಾತ್ಮನ ಸಾಕ್ಷಾತ್ ಪರಂಪರೆಯ
ಶ್ರೀಮಠದ ಪ್ರಸ್ತುತ ಪೀಠಾಧಿಪತಿಗಳಾಗಿ ವಿರಾಜಮಾನರಾದ
ಪರಮಪೂಜ್ಯ।। ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು

ಆಪಾದಮೌಳಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್ ।
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ।।

ಪ್ರಸ್ತುತ ಭಾವದೀಪ ಪ್ರಕಾಶನ ಯೋಜನೆಯ ಅಧ್ಯಕ್ಷರು

ಶ್ರೀವೇದವ್ಯಾಸಾಯ ನಮಃ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ಗುರುಭ್ಯೋ ನಮಃ

ಶ್ರೀಮದ್ ರಾಘವೇಂದ್ರತೀರ್ಥ ಗುರುಭ್ಯೋ ನಮಃ
ಶ್ರೀಗುರುಭ್ಯೋ ನಮಃ

# ಬ್ರಹ್ಮಸೂತ್ರ

## ಜಿಜ್ಞಾಸಾಧಿಕರಣ

**।। ॐ अथातो ब्रह्मजिज्ञासा ।। (೧/೧/೧)**

ಅನುವಾದ - ವೇದಾಧ್ಯಯನವನ್ನು ಪೂರೈಸಿ ಜಗತ್ತಿನ ವಿಷಯದಲ್ಲಿ ವಿರಕ್ತನಾಗಿ ಗುಣಪರಿಪೂರ್ಣನಾದ ವಿಷ್ಣುವಿನ ವಿಚಾರದಲ್ಲಿ ತೊಡಗಬೇಕು. ಇದರಿಂದ ಮೋಕ್ಷವೆಂಬ ಮಹಾಫಲವು ದೊರೆಯುತ್ತದೆ.

ಅಥ = ವೇದಾಧ್ಯಯನ, ವೈರಾಗ್ಯ, ವಿಷ್ಣುಕನಿಷ್ಠತ್ವ ಮೊದಲಾದ ಅಧಿಕಾರವನ್ನು ಹೊಂದಿದ ಅನಂತರ, ಅತಃ = ಮೋಕ್ಷವೆಂಬ ಪ್ರಯೋಜನವಿರುವುದರಿಂದ, ಅಥವಾ ವಿಷ್ಣುವಿನ ಪ್ರಸಾದದಿಂದ, ಓಂ = ಗುಣಪೂರ್ಣನಾದ, ಬ್ರಹ್ಮಜಿಜ್ಞಾಸಾ = ವಿಷ್ಣುವಿನ ಶ್ರವಣಮನನನಿದಿಧ್ಯಾಸನರೂಪವಾದ ವಿಚಾರವನ್ನು, ಕರ್ತವ್ಯಾ = ಮಾಡತಕ್ಕದ್ದು.

ಇಲ್ಲಿಗೆ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ
ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತವಾಯಿತು

* * * * *

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

# ಬ್ರಹ್ಮಸೂತ್ರಭಾಷ್ಯ

## ಮಂಗಳಾಚರಣೆ

### ನಾರಾಯಣನಿಗೆ ನಮಸ್ಕಾರ

**नारायणं गुणैः सर्वैरुदीर्णं दोषवर्जितम् ।**
**ज्ञेयं गम्यं गुरूंश्चापि नत्वा सूत्रार्थ उच्यते ।।**

ನಾರಾಯಣನು ಸಕಲಗುಣಪರಿಪೂರ್ಣನಾಗಿದ್ದಾನೆ. ಸಕಲದೋಷಗಳಿಂದ ವಿದೂರನಾಗಿದ್ದಾನೆ. ಸಜ್ಜನರಿಂದ ತಿಳಿಯಲು ಅರ್ಹನು ಮತ್ತು ಹೊಂದಲು ಯೋಗ್ಯನೂ ಆಗಿದ್ದಾನೆ. ಇಂತಹ ಲಕ್ಷ್ಮೀಪತಿಯನ್ನು ಭಕ್ತಿಯಿಂದ ನಮಸ್ಕಾರ ಮಾಡಿ, ಮತ್ತು ಗುರುಗಳಾದ ವೇದವ್ಯಾಸದೇವರನ್ನು ನಮಸ್ಕರಿಸಿ ಬ್ರಹ್ಮಸೂತ್ರಗಳಿಗೆ ಅರ್ಥವನ್ನು ಹೇಳುತ್ತೇನೆ.

ಪ್ರತಿಪದಾರ್ಥ -- ಸರ್ವೈಃ = ಸಕಲವಿಧವಾದ, ಗುಣೈಃ = ಕಲ್ಯಾಣಗುಣಗಳಿಂದ, ಉದೀರ್ಣಂ = ಪೂರ್ಣನಾದ (ಉತ್ಕೃಷ್ಟನಾದ), ದೋಷವರ್ಜಿತಮ್ = ಸಕಲದೋಷಗಳಿಂದ ವಿದೂರನಾದ, ಜ್ಞೇಯಂ = ಸಜ್ಜನರ ಪರೋಕ್ಷಜ್ಞಾನ ಹಾಗೂ ಅಪರೋಕ್ಷಜ್ಞಾನಗಳಿಗೆ ವಿಷಯನಾದ, ಗಮ್ಯಂ = ಜ್ಞಾನಿಗಳಿಂದ ಹೊಂದಲು ಯೋಗ್ಯನಾದ, ನಾರಾಯಣಂ = ಲಕ್ಷ್ಮೀಪತಿಯಾದ ನಾರಾಯಣನನ್ನು, ನತ್ವಾ = ನಮಸ್ಕಾರ ಮಾಡಿ, ಅಪಿ = ಮತ್ತು (ಅಪಿ ಪದವು ಗುರುದೇವತೆಗಳ ಭೇದದಲ್ಲಿ ಆರುಚಿಯನ್ನು ತೋರಿಸುತ್ತಿದೆ), ಗುರೂಂಶ್ಚ = ಗುರುಗಳಾದ ವೇದವ್ಯಾಸದೇವರನ್ನೂ ಕೂಡ, ನತ್ವಾ = ನಮಸ್ಕಾರ ಮಾಡಿ, ಸೂತ್ರಾರ್ಥಃ = ಬ್ರಹ್ಮಸೂತ್ರಾರ್ಥವು (ಸಮಸ್ತವೇದ ಇತಿಹಾಸಪುರಾಣ ಮೊದಲಾದ ಸಕಲಶಬ್ದರಾಶಿಗಳಿಂದ ಪ್ರತಿಪಾದ್ಯನಾದ ನಾರಾಯಣನೆಂಬ ಬ್ರಹ್ಮಸೂತ್ರಾರ್ಥವು), (ಮಯಾ = ನನ್ನಿಂದ), ಉಚ್ಯತೇ = ಹೇಳಲ್ಪಡುತ್ತದೆ.

* * * *

## ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ
## ತತ್ತ್ವಪ್ರಕಾಶಿಕಾ

**ಶುದ್ಧಾನನ್ದೋರುಸಂವಿದ್ದ್ಯುತಿಬಲಬಹುಲೌದಾರ್ಯವೀರ್ಯಾದಿದೇಹಂ**
**ಚಿನ್ತಾಸನ್ತಾಪಲೇಪೋದ್ಭವಮೃತಿಮುಖರಾಶೇಷದೋಷಾತಿದೂರಮ್ ।**
**ಸದ್ಭಿರ್ವೈರಾಗ್ಯಭಕ್ತಿಶ್ರುತಿಮತಿನಿಯತಧ್ಯಾನಜಜ್ಞಾನಯೋಗಾದ್ ।**
**ಗಮ್ಯಂ ವನ್ದೇ ಮುಕುನ್ದಾಭಿಧಮಮಲಮಲಂ ಬ್ರಹ್ಮ ವೇದಾನ್ತವೇದ್ಯಮ್ ।।೧।।**

ಅಪರಿಮಿತವೂ ಬೇರೆ ಯಾವುದಕ್ಕೆ ಕಡಿಮೆ ಇಲ್ಲದ್ದೂ ಆದ ಜ್ಞಾನ, ಆನಂದ, ಕಾಂತಿ, ಬಲ, ಬಹಳವಾದ ಔದಾರ್ಯ, ಪರಾಕ್ರಮ ಇತ್ಯಾದಿ ಗುಣಸ್ವರೂಪವೇ ದೇಹವಾಗಿವುಳ್ಳವನು ಭಗವಂತ (ಮೊದಲನೆ ಅಧ್ಯಾಯದ ಸಾರ); ಮತ್ತು ಚಿಂತೆ, ಆಧ್ಯಾತ್ಮಿಕ, ಆಧಿದೈವಿಕ ಆಧಿಭೌತಿಕವೆಂಬ ತಾಪತ್ರಯಗಳೆಂಬ ಸಂತಾಪ, ಪುಣ್ಯಪಾಪಗಳ ಸಂಬಂಧ, ಜನ್ಮ, ಮರಣ ಇತ್ಯಾದಿ ಸಕಲದೋಷಗಳಿಂದ ಅತ್ಯಂತ ದೂರನಾಗಿದ್ದಾನೆ (ಎರಡನೆ ಅಧ್ಯಾಯದ ಸಾರ); ಸಕಲ ಸಜ್ಜನರಿಗೆ ವೈರಾಗ್ಯ, ಭಕ್ತಿ, ಶ್ರವಣ, ಮನನ, ಸ್ವಯೋಗ್ಯತಾನುಸಾರ ಉಪಾಸನೆ ಇವುಗಳಿಂದ ಹುಟ್ಟಿದ ಸಾಕ್ಷಾತ್ಕಾರದಿಂದ ಹೊಂದಲು ಯೋಗ್ಯನಾಗಿದ್ದಾನೆ (ಮೂರನೆಯ ಅಧ್ಯಾಯದ ಸಾರ) ಇಂತಹ ಭಗವಂತನು ಬ್ರಹ್ಮಸೂತ್ರವೇ ಮೊದಲಾದವುಗಳಿಂದ ತಿಳಿಯಲ್ಪಡುವವನಾಗಿದ್ದಾನೆ. ಮೋಕ್ಷದಾತೃ-ವಾಗಿದ್ದಾನೆ (ನಾಲ್ಕನೆಯ ಅಧ್ಯಾಯದ ಸಾರ) ಮಾಯಾರಹಿತನಾದ ಇಂತಹ ಮುಕುಂದನನ್ನು ನಮಸ್ಕರಿಸುತ್ತೇನೆ.

**ಯಾಶ್ಚಾಮನ್ದರಲೋಲಿತಾಯತ ಉದೈದ್ವಿದ್ವೇನ್ದಿರಾ ನಿರ್ಜರೈಃ**
**ಜಾತೋ ಭಾರತಪಾರಿಜಾತಸುತರುಃ ಸದ್ಬ್ರಹ್ಮಸೂತ್ರಾಮೃತಮ್ ।**
**ಆಸೀತ್ತನ್ತ್ರಪುರಾಣಸನ್ಮಣಿಗಣೋ ಜಾತಃ ಶುಕೇನ್ದ್ವಃ ಸದಾ**
**ಸೋऽಯಂ ವ್ಯಾಸಸುಧಾನಿಧಿರ್ಭವತು ಮೇ ಭೂತ್ಯೈ ಸತಾಂ ಭೂತಿದಃ ।। ೨ ।।**

ವೇದವ್ಯಾಸರೆಂಬ ಕ್ಷೀರಸಮುದ್ರವು ದೇವತೆಗಳ ಪ್ರಾರ್ಥನೆಯೆಂಬ ಮಂದರಪರ್ವತದಿಂದ ಚೆನ್ನಾಗಿ ಮಥಿಸಲ್ಪಟ್ಟಿತು. ಆವಾಗ ಸಾತ್ವಿಕವಿದ್ಯೆಯೆಂಬ

ಲಕ್ಷ್ಮೀದೇವಿಯು, ಮಹಾಭಾರತವೆಂಬ ಪಾರಿಜಾತವೃಕ್ಷವು, ಬ್ರಹ್ಮಸೂತ್ರವೆಂಬ ಅಮೃತವು, ಪಂಚರಾತ್ರ ಹಾಗು ಪುರಾಣಗಳೆಂಬ ಉತ್ತಮಮಣಿಗಳು, ಶುಕಾಚಾರ್ಯರೆಂಬ ಚಂದ್ರನು ಹುಟ್ಟಿದವು. ಹೇಗೆ ಕ್ಷೀರಸಮುದ್ರವು ದೇವತೆಗಳಿಗೆಲ್ಲಾ ಬೇಡಿದ ಐಶ್ವರ್ಯಗಳೆನ್ನೆಲ್ಲಾ ನೀಡಿತೋ ಅದರಂತೆ ಶ್ರೀವೇದವ್ಯಾಸರೆಂಬ ಕ್ಷೀರಸಮುದ್ರವೂ ಸಹ ನಮಗೆಲ್ಲಾ ಸದ್ ಬುದ್ಧಿಯೇ ಮೊದಲಾದ ಐಶ್ವರ್ಯಗಳನ್ನು ನೀಡಲಿ.

**स्वान्तध्वान्तनिकृन्तने जितमहावैकर्तनांशुव्रजं**
**निर्दोषं जितचन्द्रचन्द्रिकमलं तापत्रयोन्मूलने ।**
**गाम्भीर्ये जितसिन्धुराजममितं भाष्यं यदास्याम्बुजात्**
**आविर्भूतममन्दबोधभगवत् पादान् प्रपद्येऽथ तान् ।। ३ ।।**

ಸೂರ್ಯನ ಕಿರಣಗಳು ಬಾಹ್ಯವಾದ ಅಂಧಕಾರವನ್ನಷ್ಟೇ ನಾಶಪಡಿಸುತ್ತವೆ. ಆದರೆ ಬ್ರಹ್ಮಸೂತ್ರಭಾಷ್ಯವು ಒಳಗಿನ ಅಜ್ಞಾನಾಂಧಕಾರವನ್ನೂ ನಾಶಪಡಿಸುವ ಮೂಲಕ ಸೂರ್ಯನ ಕಿರಣಗಳನ್ನು ಗೆದ್ದಿದೆ. ಚಂದ್ರನು ಬೆಳದಿಂಗಳ ಮೂಲಕ ಬಾಹ್ಯವಾದ ತಾಪವನ್ನಷ್ಟೇ ಪರಿಹರಿಸಿದರೆ ಭಾಷ್ಯವು ತಾಪತ್ರಯಗಳನ್ನು ಪರಿಹರಿಸುವ ಮೂಲಕ ಚಂದ್ರನ ಚಂದ್ರಿಕೆಯನ್ನೂ ಗೆದ್ದಿದೆ. ಮತ್ತು ಈ ಭಾಷ್ಯವು ದೋಷರಹಿತವಾಗಿದೆ. ಗಾಂಭೀರ್ಯದಲ್ಲಿ ಸಮುದ್ರವನ್ನು ಗೆದ್ದಿದೆ. (ಅನೇಕ ಯೋಜನೆಗಳಷ್ಟು ಸಮುದ್ರವು ಬೃಹತ್ ಆಗಿದ್ದರೂ ಪರಿಮಿತವಾಗಿದೆ. ಆದರೆ ಭಾಷ್ಯವು ಅಪರಿಮಿತವಾದ ಅರ್ಥದಿಂದೊಳಗೂಡಿ ಸಮುದ್ರವನ್ನೂ ಮೀರಿಸಿದೆ). ಹೀಗೆ ಪರಮೋತ್ಕೃಷ್ಟವಾದ ಭಾಷ್ಯವು ಯಾರ ಮುಖಾರವಿಂದದಿಂದ ಪ್ರಕಟವಾಗಿದೆಯೋ; ಅಂತಹ ಶ್ರೀಮದಾನಂದತೀರ್ಥಭಗವತ್ ಪಾದರನ್ನು ಅನನ್ಯವಾಗಿ ಶರಣು ಹೊಂದುತ್ತೇನೆ.

**श्रीमध्वसंसेवनलब्धशुद्धविद्यासुधाम्भोनिधयोऽमला ये ।**
**कृपालवः पद्मनाभतीर्थाः कृपालवः स्यान्मयि नित्यमेषाम् ।। ४ ।।**

ಶ್ರೀಮದಾಚಾರ್ಯರ ಅಖಂಡವಾದ ಸೇವೆಯಿಂದ ಸಮುದ್ರದಷ್ಟು ಅಪಾರವಾದ ಸದ್ ವಿದ್ಯೆಯನ್ನು ಸಂಪಾದಿಸಿದವರು ಶ್ರೀಪದ್ಮನಾಭತೀರ್ಥರು. ನಿರ್ದುಷ್ಟರಾದ ಕೃಪಾಳುಗಳಾದ ಇಂತಹ ಪದ್ಮನಾಭತೀರ್ಥರ ಕೃಪಾಲೇಶವು ನನ್ನ ಮೇಲೆ ನಿರಂತರವಾಗಿ ಇರಲಿ.

**श्रीमद्रमारणसद्गिरिपादसङ्गिव्याख्यानिनाददलिताखिलदुष्टदर्पम् ।**
**दुर्वादिवारणविदारणदक्षदीक्षमक्षोभ्यतीर्थमृगराजमहं नमामि ।। ५ ।।**

ಕಮಲಾಪತಿಯಾದ ನಾರಾಯಣನೆಂಬ ಶ್ರೇಷ್ಠಪರ್ವತದ ಪಾದವನ್ನು ಆಶ್ರಯಿಸಿ ವ್ಯಾಖ್ಯಾನವೆಂಬ ಘರ್ಜನೆಯಿಂದ ಕ್ರೂರಮೃಗಗಳಂತಿರುವ ಎಲ್ಲಾ ದುರ್ವಾದಿಗಳ ದುಷ್ಟದರ್ಪವನ್ನು ಭಂಗಗೊಳಿಸಿ ದುರ್ವಾದಿಗಳೆಂಬ ಮದ್ದಾನೆಗಳನ್ನು ಸೀಳುವುದರಲ್ಲಿ ಬದ್ಧದೀಕ್ಷರಾದ ಅಕ್ಷೋಭ್ಯತೀರ್ಥರೆಂಬ ಮೃಗರಾಜರನ್ನು ನಾನು ನಮಸ್ಕರಿಸುತ್ತೇನೆ.

**अथ तत्कृपया ब्रह्मसूत्रभाष्यं यथामति ।**
**व्याकुर्वे श्रीमदानन्दतीर्थार्यमुखनिःसृतम् ।। ६ ।।**

ಭಾಷ್ಯವು ಅತ್ಯಂತ ಗಂಭೀರವಾದ್ದರಿಂದ ಗುರುಗಳ ಕೃಪಾಪೋಷಿತನಾಗಿ ಶ್ರೀಮದಾನಂದ-ತೀರ್ಥರ ಮುಖಕಮಲದಿಂದ ಹೊರಹೊಮ್ಮಿದ ಬ್ರಹ್ಮಸೂತ್ರಭಾಷ್ಯವನ್ನು ಯಥಾಮತಿ ವ್ಯಾಖ್ಯಾನಿಸುತ್ತೇನೆ.

**गङ्गासङ्गेन नैर्मल्यं रथ्याद्भिर्लभ्यते यथा ।**
**वाचो विशुद्धिसिध्यर्थं सङ्गम्यन्ते गुरोर्गिरः ।। ७ ।।**

ರಸ್ತೆಯ ನೀರು ಅಪವಿತ್ರವಾಗಿದ್ದರೂ ಸಹ ಗಂಗೆಯ ಸಂಪರ್ಕದಿಂದ ಹೇಗೆ ಪವಿತ್ರವಾಗುವುದೋ ಅದರಂತೆ ನನ್ನ ಮಾತುಗಳೂ ಸಹ ಪವಿತ್ರವಾಗಲೆಂದು ಗುರುಗಳ ಮಾತುಗಳ ಜೊತೆಗೆ ಸೇರಿಸಲ್ಪಡುತ್ತವೆ.

* * * * *

## ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಭಾವದೀಪ

ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧಾನ್ ಗುರೂನಪಿ ।
ತತ್ವಪ್ರಕಾಶಿಕಾಭಾವದೀಪಂ ಕುರ್ಯಾಂ ಯಥಾಮತಿ ।।

ಲಕ್ಷ್ಮೀನಾರಾಯಣನನ್ನು ನಮಸ್ಕರಿಸಿ, ಗುರುಗಳಾದ ಪೂರ್ಣಪ್ರಜ್ಞರನ್ನೂ ಸಹ ನಮಿಸಿ, ತತ್ವಪ್ರಕಾಶಿಕಾಗ್ರಂಥಕ್ಕೆ ಬುದ್ಧಿಗೆ ನಿಲುಕಿದಷ್ಟು ''ಭಾವದೀಪ'' ಎಂಬ ವ್ಯಾಖ್ಯಾನವನ್ನು ರಚಿಸುತ್ತಿದ್ದೇವೆ.

ಯದ್ಯಪಿ 'ತತ್ವಪ್ರಕಾಶಿಕಾऽऽಕೂತಂ ಚನ್ದ್ರಿಕಾತಃಪ್ರಕಾಶಿತಮ್ ।
ಅಪಿ ಮನ್ದಕೃತೇ ಸರ್ವವಿಷಯಾ ಚ ಕೃತಿರ್ಮಮ ।।'

ವಸ್ತುತಃ ತತ್ವಪ್ರಕಾಶಿಕೆಯ ಅಭಿಪ್ರಾಯವನ್ನು ಚಂದ್ರಿಕೆಯಲ್ಲೇ ಸ್ಪಷ್ಟಪಡಿಸಿದ್ದಾರೆ. ಆದರೂ ಪ್ರತಿಯೊಂದು ಪಂಕ್ತಿಗಳ ಅರ್ಥವನ್ನು ನಿರೂಪಿಸುವುದಕ್ಕಾಗಿ ಈ ಕೃತಿಯು ಹೊರಟಿದೆ. ಮಂದಜನರಿಗೆ ಉಪಯೋಗವಾಗಬೇಕೆಂಬುದೇ ಇದರ ಉದ್ದೇಶ.

ನೂತನೈರುದಿತಾ ಯೇ ತು ದೋಷಾಸ್ತೇಷಾಮಲಗ್ನತಾಮ್ ।
ಸಮ್ಪ್ರದರ್ಶಯಿತುಂ ಚಾऽತಃ ಪ್ರಸನ್ನಾಃ ಸನ್ತು ಸಜ್ಜನಾಃ ।।

ತತ್ವಪ್ರಕಾಶಿಕಾಗ್ರಂಥದ ಮೇಲೆ ಹೊಸದಾಗಿ ಮಾಡಲ್ಪಟ್ಟ ಎಲ್ಲ ಆಕ್ಷೇಪಗಳನ್ನು ನಿರಾಕರಿಸುವುದು ಈ ಕೃತಿಯ ಮತ್ತೊಂದು ಉದ್ದೇಶ. ಇದರಿಂದ ಸಜ್ಜನರೆಲ್ಲರೂ ಸಂತುಷ್ಟರಾಗಲಿ.

### ಅವತಾರಿಕೆ
### ಮೋಕ್ಷಕ್ಕೋಸ್ಕರ ಈ ಶಾಸ್ತ್ರ ಹೊರಟಿದೆ

**ಭಾವದೀಪಃ** – ಇಹ ಖಲು ವಿವಿಧಸಾಂಸಾರಿಕದುಃಖಪರಿಶ್ರಮಿಣಾಮಧಿಕಾರಿಣಾಮಖಿಲದುಃಖನಿವೃತ್ತಿವಿಶಿಷ್ಟಪರಮಾನನ್ದಾವಾಪ್ತಯೇ ಪ್ರವೃತ್ತಾನಾಮಾಮ್ನಾಯಾನಾಮ್ ಇತಿಕರ್ತವ್ಯತಾಭೂತಬ್ರಹ್ಮಸೂತ್ರಾಣಾಂ ಯಥಾವದರ್ಥವಿವಕ್ಷಯಾ ಪ್ರವೃತ್ತಮತಿಗಹನಾರ್ಥಂ ಭಾಷ್ಯಂ ವ್ಯಾಚಿಕೀರ್ಷುರ್ಗ್ರನ್ಥಾದೌ ಮಙ್ಗಲಮಾಚರತಿ ಜಯತೀರ್ಥಮುನಿಃ – ಶುದ್ಧೇತಿ ।।

ಈ ಜಗತ್ತಿನಲ್ಲಿ ನಾನಾವಿಧವಾದ ದುಃಖಗಳನ್ನು ಅನುಭವಿಸಿ ಸಜ್ಜನರು ಬಳಲಿದ್ದಾರೆ. ಅವರ ದುಃಖದ ಪರಿಹಾರಕ್ಕೋಸ್ಕರ ಮತ್ತು ಪರಮಾನಂದರೂಪವಾದ ಮೋಕ್ಷವನ್ನು ಪಡೆಯುವುದಕ್ಕೋಸ್ಕರ ಸಕಲವೇದಗಳು ಹೊರಟಿವೆ. ಜಟಿಲವಾದ ವೇದಾರ್ಥಗಳನ್ನು ತಿಳಿಯಲು ಸಾಧ್ಯವಿಲ್ಲದ ಕಾರಣ, ಅವುಗಳನ್ನು ವ್ಯಾಖ್ಯಾನಿಸುವುದಕ್ಕಾಗಿ ಬ್ರಹ್ಮಮೀಮಾಂಸಾಶಾಸ್ತ್ರವು ಹೊರಟಿದೆ. ಆ ಬ್ರಹ್ಮಸೂತ್ರಗಳನ್ನೂ ಸಹ ಯಥಾರ್ಥವಾಗಿ ತಿಳಿಯಲು ಸಾಧ್ಯವಾಗದೇ ಇದ್ದಾಗ ಶ್ರೀಮದಾಚಾರ್ಯರ ಭಾಷ್ಯವು ಹೊರಟಿದೆ. ಅತಿಗಹನವಾದ ಅರ್ಥಗಳನ್ನೊಳಗೊಂಡ ಭಾಷ್ಯವೂ ಕೂಡ ಮಂದಜನರಿಗೆ ಸುಲಭವಾಗಿ ಅರ್ಥವಾಗದು. ಅದಕ್ಕೋಸ್ಕರ ಭಾಷ್ಯದ ವ್ಯಾಖ್ಯಾನರೂಪವಾಗಿ ತತ್ವಪ್ರಕಾಶಿಕಾ-ಗ್ರಂಥವನ್ನು ಮಾಡಲು ಇಚ್ಛಿಸುತ್ತಾ ಶ್ರೀಜಯತೀರ್ಥಮುನಿಗಳು ಗ್ರಂಥಪ್ರಾರಂಭದಲ್ಲಿ ಮಂಗಳಾಚರಣೆಯನ್ನು ''ಶುದ್ಧಾನಂದೋರು'' ಇತ್ಯಾದಿಯಾಗಿ ಮಾಡುತ್ತಿದ್ದಾರೆ.

ವಿಶೇಷ ವಿಚಾರ - ಕ್ಷೀರಸಮುದ್ರದಿಂದ ಜನಿಸಿದ ಚಂದ್ರನ ಚಂದ್ರಿಕೆಯು ದೈಹಿಕ ಮಾನಸಿಕ ತಾಪವನ್ನೆಲ್ಲ ಪರಿಹರಿಸುತ್ತದೆ. ನೈದಿಲೆಹೂಗಳನ್ನು ಬಹಳ ಸಂತೋಷಪಡಿಸುತ್ತದೆ. ಕತ್ತಲೆಯನ್ನು ಪರಿಹರಿಸಿ ವಸ್ತುಗಳು ಗೋಚರವಾಗುವಂತೆ ಮಾಡುತ್ತದೆ. ಇದರಂತೆ ಶ್ರೀಜಯತೀರ್ಥರು ರಚಿಸಿರುವ ತತ್ವಪ್ರಕಾಶಿಕೆಯು ಚಂದ್ರನ ಚಂದ್ರಿಕೆಯಂತೆ ಶ್ರೇಷ್ಠತತ್ವಗಳನ್ನು ಪ್ರಕಾಶಪಡಿಸುತ್ತದೆ. ತಾಪತ್ರಯಗಳನ್ನು ಪರಿಹರಿಸುವ ಮೂಲಕ ಸಜ್ಜನರೆಂಬ ಕುಮುದಗಳನ್ನು ಸಂತೋಷಪಡಿಸುತ್ತದೆ. ಶ್ರೀಮದಾನಂದತೀರ್ಥರೆಂಬ ಕ್ಷೀರಸಮುದ್ರದಿಂದ ಜನಿಸಿದ ಭಾಷ್ಯವು ಚಂದ್ರನಂತಿದ್ದರೆ; ಈ ತತ್ವಪ್ರಕಾಶಿಕೆಯು ಬೆಳದಿಂಗಳಿನಂತಿರುತ್ತದೆ. ಇಂತಹ ಶ್ರೇಷ್ಠವಾದ ''ತತ್ವಪ್ರಕಾಶಿಕಾ'' ಎಂಬ ವ್ಯಾಖ್ಯಾನವನ್ನು ಶ್ರೀಜಯತೀರ್ಥಮುನಿಗಳು ಮಾಡಲಿಚ್ಛಿಸಿ ಮಂಗಳಾಚರಣೆಯನ್ನು ಮಾಡುತ್ತಿದ್ದಾರೆ. ಮಂಗಳವನ್ನು ಆಚರಿಸುವುದರಿಂದ ಗ್ರಂಥವು ವಿಘ್ನವಿಲ್ಲದೆ ಪರಿಸಮಾಪ್ತಿಯಾಗುತ್ತದೆ. 'ಸಮಾಪ್ತಿಕಾಮೋ ಮಂಗಲಮಾಚರೇತ' ಎಂಬ ಶ್ರುತಿಪ್ರಮಾಣದಿಂದ ಮಂಗಳಾಚರಣೆಯು ಸಿದ್ಧವಾಗಿದೆ. ಶಿಷ್ಟಾಚಾರ ಅನುಮಿತವಾದ್ದರಿಂದ ಈ ಶ್ರುತಿಯನ್ನು ಅಪ್ರಮಾಣವೆನ್ನಬಾರದು. ಹೀಗೆ ಅವಶ್ಯಕರ್ತವ್ಯವಾದ ಮಂಗಳವನ್ನು ಭಗವಂತನನ್ನು ನಮಿಸುವ ಮೂಲಕ ಆಚರಿಸಿದ್ದಾರೆ. ಶಿಷ್ಯಶಿಕ್ಷಣೆಗಾಗಿ 'ಶುದ್ಧಾನಂದೋರು' ಇತ್ಯಾದಿಯಾಗಿ ಗ್ರಂಥದಲ್ಲಿ ನಿಬಂಧನೆ ಮಾಡುತ್ತಿದ್ದಾರೆ.

## ತತ್ತ್ವಪ್ರಕಾಶಿಕಾ ಮಂಗಳಾಚರಣೆ – ಸಮಗ್ರಶಾಸ್ತ್ರದ ಸಂಕ್ಷೇಪ ವ್ಯಾಖ್ಯಾನ

**ಶುದ್ಧಾನನ್ದೋರುಸಂವಿದ್ದ್ಯುತಿಬಲಬಹುಲೌದಾರ್ಯವೀರ್ಯಾದಿದೇಹಂ**
**ಚಿನ್ತಾಸನ್ತಾಪಲೇಪೋದ್ಭವಮೃತಿಮುಖರಾಶೇಷದೋಷಾತಿದೂರಮ್ ।**
**ಸದ್ಭಿರ್ವೈರಾಗ್ಯಭಕ್ತಿಶ್ರುತಿಮತಿನಿಯತಧ್ಯಾನಜಜ್ಞಾನಯೋಗಾದ್**
**ಗಮ್ಯಂ ವನ್ದೇ ಮುಕುನ್ದಾಭಿಧಮಮಲಮಲಂ ಬ್ರಹ್ಮ ವೇದಾನ್ತವೇದ್ಯಮ್ ।।೧।।**

ಅಪರಿಮಿತವೂ ಬೇರೆ ಯಾವುದಕ್ಕೆ ಕಡಿಮೆ ಇಲ್ಲದ್ದೂ ಆದ ಜ್ಞಾನ, ಆನಂದ, ಕಾಂತಿ, ಬಲ, ಬಹಳವಾದ ಔದಾರ್ಯ, ಪರಾಕ್ರಮ ಇತ್ಯಾದಿ ಗುಣಸ್ವರೂಪವೇ ದೇಹವಾಗಿವುಳ್ಳವನು ಭಗವಂತ (ಇದು ಮೊದಲನೆ ಅಧ್ಯಾಯದ ಸಾರ) ಚಿಂತೆ, ಆಧ್ಯಾತ್ಮಿಕ, ಆಧಿದೈವಿಕ ಆಧಿಭೌತಿಕವೆಂಬ ತಾಪತ್ರಯಗಳೆಂಬ ಸಂತಾಪ, ಪುಣ್ಯಪಾಪಗಳ ಸಂಬಂಧ, ಜನ್ಮ, ಮರಣ ಇತ್ಯಾದಿ ಸಕಲದೋಷಗಳಿಂದ ಅತ್ಯಂತ ದೂರನಾಗಿದ್ದಾನೆ (ಇದು ಎರಡನೆ ಅಧ್ಯಾಯದ ಸಾರ) ಸಕಲ ಸಜ್ಜನರಿಗೆ ವೈರಾಗ್ಯ, ಭಕ್ತಿ, ಶ್ರವಣ, ಮನನ, ಸ್ವಯೋಗ್ಯತಾನುಸಾರ ಉಪಾಸನೆ ಇವುಗಳಿಂದ ಹುಟ್ಟಿದ ಸಾಕ್ಷಾತ್ಕಾರದಿಂದ ಹೊಂದಲು ಯೋಗ್ಯನಾಗಿದ್ದಾನೆ (ಇದು ಮೂರನೆಯ ಅಧ್ಯಾಯದ ಸಾರ) ಇಂತಹ ಭಗವಂತನು ಬ್ರಹ್ಮಸೂತ್ರವೇ ಮೊದಲಾದವುಗಳಿಂದ ತಿಳಿಯಲ್ಪಡುವವನಾಗಿದ್ದಾನೆ. ಮೋಕ್ಷದಾತೃವಾಗಿದ್ದಾನೆ (ಇದು ನಾಲ್ಕನೆಯ ಅಧ್ಯಾಯದ ಸಾರ); ಮಾಯಾರಹಿತನಾದ ಇಂತಹ ಮುಕುಂದನನ್ನು ನಮಸ್ಕರಿಸುತ್ತೇನೆ.[1]

* * *

### ಮಂಗಳಾಚರಣೆಯಲ್ಲಿಯೂ ಗುರುಗಳ ಅನುಕರಣೆ

**ಭಾವದೀಪಃ** – इदं च पद्यं भागवतस्थाद्यपद्यस्य तात्पर्यस्थाद्यपद्यमिव भाष्यस्थाद्यश्लोकविवरणरूपत्वात् तद्वदेव वक्ष्यमाणादिसूचकत्वेन व्याख्येयम् । तथाहि । आद्याध्यायार्थस्य **'गुणैः सर्वैरुदीर्णम्'** इत्यस्य व्याख्या **'शुद्धा'** इत्यादि ।

(1) ಓದುಗರ ಅನುಕೂಲಕ್ಕಾಗಿ ಮಂಗಳಶ್ಲೋಕಗಳನ್ನು ಪುನಃ ಟಿಪ್ಪಣಿಯ ಮಧ್ಯದಲ್ಲಿ ಮುದ್ರಿಸಲಾಗಿದೆ.

ಟೀಕಾಕೃತ್ಪಾದರ ಮೊದಲ ಮಂಗಳಪದ್ಯವು, ಭಾಗವತದಲ್ಲಿರುವ 'ಜನ್ಮಾದ್ಯಸ್ಯ ಯತಃ' ಎಂಬ ಮೊದಲ ಪದ್ಯಕ್ಕೆ ವ್ಯಾಖ್ಯಾನರೂಪವಾದ ಶ್ರೀಮದಾಚಾರ್ಯರ 'ಸೃಷ್ಟಿಸ್ಥಿತ್ಯಪ್ಯಯೇಹಾ' ಎಂಬ ತಾತ್ಪರ್ಯದಲ್ಲಿರುವ ಪದ್ಯದಂತೆ, ಮೂಲವ್ಯಾಖ್ಯಾನ-ರೂಪವಾಗಿದೆ. ಮತ್ತು ಮುಂದಿನ ಸಮಗ್ರಶಾಸ್ತ್ರದಲ್ಲಿ ವಿವರಿಸುವ ಸಕಲಪ್ರಮೇಯ-ಸೂಚಕವೂ ಆಗಿದೆ. ಅದು ಹೀಗೆ -- ಬ್ರಹ್ಮಸೂತ್ರಗಳ ಪ್ರಥಮಾಧ್ಯಾಯದಲ್ಲಿ ಭಗವಂತನಲ್ಲಿ ಎಲ್ಲ ವಿಧವಾದ ಶಬ್ದಸಮನ್ವಯವನ್ನು ಮಾಡುವ ಮೂಲಕ ಆನಂತಗುಣಪರಿಪೂರ್ಣತ್ವವನ್ನು ಸಾಧಿಸಲಾಗಿದೆ. ಇದನ್ನು ಶ್ರೀಮದಾಚಾರ್ಯರು 'ಗುಣೈಃ ಸರ್ವೈರುದೀರ್ಣಮ್' ಎಂಬ ಮಂಗಳಶ್ಲೋಕದ ಪ್ರಥಮಪಾದದಿಂದ ಹೇಳಿದ್ದಾರೆ. ಇದನ್ನೇ ಟೀಕಾಕೃತ್ಪಾದರು 'ಶುದ್ಧಾನಂದೋರು' ಎಂಬ ಮೊದಲ ಪಾದದಿಂದಲೇ ಸಂಗ್ರಹಿಸಿದ್ದಾರೆ. ಟೀಕೆಯ ಮಂಗಳಶ್ಲೋಕದಲ್ಲಿರುವ ಒಂದೊಂದು ಪದಗಳೂ ಆನೇಕ ಅಧಿಕರಣಗಳ ಸಾರರೂಪವಾಗಿವೆ.

## ಪ್ರಥಮಾಧ್ಯಾಯದ ಸಾರ
## ಪ್ರಥಮ ಪಾದ

**ಭಾವದೀಪಃ** – तत्र शुद्धत्वं चन्द्रिकारीत्या सान्तत्वसातिशयत्वराहित्यम् आनन्दादेः सर्वस्य विशेषणम् । दुःखासम्भिन्नत्वादेः 'चिन्ता' इत्यादिना लाभात् । उरुत्वादिकं तु सर्वविषयकत्वादिमात्रम् । व्यक्तमेतत् सर्वमग्रे ।

ಪರಮಾತ್ಮನ ಆನಂದವು ಶುದ್ಧವಾಗಿದೆ ಎಂದರೆ ''ಅವನ ಆನಂದಕ್ಕೆ ಮಿತಿಯಿಲ್ಲ, ಮತ್ತು ಅವನ ಆನಂದಕ್ಕೆ ಸರಿಸಾಟಿಯಾದ ಮತ್ತೊಂದು ಆನಂದವಿಲ್ಲ'' ಎಂದರ್ಥ. ಲಕ್ಷ್ಮೀದೇವಿಯ ಆನಂದಕ್ಕೂ ಸಹ ಪರಮಾತ್ಮನ ದೃಷ್ಟಿಯಿಂದ ಪರಿಮಿತಿ ಇದೆ. ಆದರೆ ಅವಳ ಆನಂದಕ್ಕಿಂತ ಶ್ರೀಹರಿಯ ಆನಂದವು ಅತ್ಯಂತ ಉತ್ಕೃಷ್ಟವಾಗಿದೆ. ಪರಮಾತ್ಮನ ಆನಂದಕ್ಕೆ ಕೊನೆಯೇ ಇಲ್ಲ. ಮತ್ತು ಅದಕ್ಕಿಂತ ಹಿರಿದಾದ ಮತ್ತೊಂದು ಆನಂದವಿಲ್ಲ. ಇಂತಹ ಆನಂದವೇ 'ಶುದ್ಧಾನಂದ'ವೆನಿಸಿದೆ. ಇದನ್ನೇ ಚಂದ್ರಿಕೆಯಲ್ಲಿ 'ಆನಂದಾದೇಃ ಶುದ್ಧತ್ವಂ ಚ ಸಾಂತತ್ವಸಾತಿಶಯತ್ವರಾಹಿತ್ಯಮ್' ಎಂದು ಹೇಳಿದ್ದಾರೆ. ಶುದ್ಧಶಬ್ದಕ್ಕೆ ಹೀಗೆಯೇ ಅರ್ಥ ಹೇಳಬೇಕು ಹೊರತು 'ದುಃಖಾದಿದೋಷವಿಲ್ಲದ್ದು' ಎಂಬರ್ಥವನ್ನು ಹೇಳಬಾರದು.

ಆ ಅರ್ಥವು 'ಚಿಂತಾಸಂತಾಪ' ಇತ್ಯಾದಿವಿಶೇಷಣಗಳಿಂದಲೇ ಸಿದ್ಧವಾಗಿದೆ. ಈ ಶುದ್ಧತ್ವವನ್ನು ಮತ್ತು ಉರುತ್ವವನ್ನು ಆನಂದ, ದ್ಯುತಿ ಮೊದಲಾದ ಎಲ್ಲ ಗುಣಗಳಲ್ಲಿಯೂ ವಿಶೇಷಣವನ್ನಾಗಿ ವಿವಕ್ಷಿಸಬೇಕು.

ಭಗವಂತನಲ್ಲಿ ಇಂತಹ ಶುದ್ಧಾನಂದಾದಿಗುಣಗಳು ಇವೆಯೆಂಬುದು ಮುಂದಿನ ಅಧಿಕರಣಗಳಿಂದ ಸ್ಪಷ್ಟವಾಗುತ್ತದೆ.

## ''ಶುದ್ಧಾನಂದ' 'ಉರುದ್ಯುತಿ' 'ಉರುಬಲ' 'ಬಹುಲೌದಾರ್ಯ' ವಿಶೇಷಣಗಳ ವ್ಯಾಖ್ಯಾನ

**ಭಾವದೀಪಃ – 'आनन्दमयोऽभ्यासात्' ಇತ್ಯಾದೌ ಪರಿಪೂರ್ಣಾನಿನ್ದಸಂವಿದಾದೇಃ, 'अनुकृतेस्तस्य च' ಇತ್ಯಾದಾವುರುದ್ಯುತೇಃ, 'अत्ता' ಇತ್ಯಾದೌ ಸರ್ವಸಂಹಾರಕತ್ವಾದ್ಯುಕ್ತ್ಯಾ ಉರುಬಲಸ್ಯ, 'मुक्तोपसृप्यव्यपदेशात्', 'तन्निष्ठस्य मोक्षोपदेशात्' ಇತ್ಯಾದೌ ಮೋಕ್ಷದಾನಾದಿನಾ ಬಹುಲೌದಾರ್ಯಾದೀನಾಮುಕ್ತೇಃ ।**

'ಆನಂದಮಯೋಽಭ್ಯಾಸಾತ್' (೧/೧/೧೨)

ಅಭ್ಯಾಸಾತ್ = ಬ್ರಹ್ಮಶಬ್ದವನ್ನು ಪುನಃ ಪುನಃ ಹೇಳಿರುವುದರಿಂದ ಆನಂದಮಯಃ = ಆನಂದಮಯಶಬ್ದವಾಚ್ಯನು, ತತ್ತು = ವಿಷ್ಣುವೇ.

ಈ ಸೂತ್ರದಲ್ಲಿ ಪರಮಾತ್ಮನು ನಿತ್ಯನಿರಂತರವಾದ, ಪರಿಪೂರ್ಣವಾದ ಆನಂದಸ್ವರೂಪನು ಮತ್ತು ಜ್ಞಾನವಿಜ್ಞಾನಾದಿಸ್ವರೂಪನಾಗಿರುವನೆಂದು ಪ್ರತಿಪಾದಿಸಲಾಗಿದೆ. ಆನಂದಮಯಾಧಿಕರಣದ ಈ ವಿಷಯವನ್ನು ಟೀಕಾಕೃತ್ಪಾದರು 'ಶುದ್ಧಾನಂದ' ಎಂಬ ಪದದಿಂದ ಹೇಳಿದ್ದಾರೆ.

'ಉರುದ್ಯುತಿಃ' ಎಂಬ ವಿಶೇಷಣದಿಂದ ಅನುಕೃತ್ಯಧಿಕರಣದ ಪ್ರಮೇಯವನ್ನು ಸಂಗ್ರಹಿಸಿದ್ದಾರೆ.

'ಅನುಕೃತೇಸ್ತಸ್ಯ ಚ'(೧/೩/೨೨)

'ಕಥಂ ನು ತದ್ವಿಜಾನೀಯಾಂ' ಎಂಬ ಶ್ರುತಿಯಲ್ಲಿ ಜ್ಞಾನಕ್ಕಾಗಿ ಪ್ರಾರ್ಥಿಸಲ್ಪಟ್ಟವನು

ಬ್ರಹ್ಮ. ಏಕೆಂದರೆ, ಅನುಕೃತೇಃ = ಸೂರ್ಯ ಮುಂತಾದವರ ಪ್ರಕಾಶನಕ್ರಿಯೆಯು ಭಗವಂತನ ಅಧೀನವೆಂದು ಶ್ರುತವಾಗಿರುವುದರಿಂದ, ತಸ್ಯ ಚ = 'ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಭಗವಂತನ ಪ್ರಕಾಶದಿಂದ ಜಗತ್ತು ಪ್ರಕಾಶಿಸುತ್ತದೆ) ಎಂಬ ಶ್ರುತಿಯೂ ಇರುವುದರಿಂದ.

ಈ ಸೂತ್ರದಲ್ಲಿ ಜಗತ್ಪ್ರಕಾಶಕರಾದ ಸೂರ್ಯ, ಚಂದ್ರ ಮೊದಲಾದ ದೇವತೆಗಳಲ್ಲಿರುವ ಶಕ್ತಿಯು ನಾರಾಯಣನಿಂದ ಪ್ರಾಪ್ತವಾಗಿರುತ್ತದೆ ಮತ್ತು ಅವನ ಅಧೀನವಾಗಿರುತ್ತದೆಂಬ ಪ್ರಮೇಯವು ನಿರೂಪಿತವಾಗಿದೆ.

'ಅತ್ತಾ ಚರಾಚರಗ್ರಹಣಾತ್' (೧/೨/೯)

ಅತ್ತಾ = ಸರ್ವಸಂಹಾರಕನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಚರಾಚರಗ್ರಹಣಾತ್ = ಚೇತನಾಚೇತನಾತ್ಮಕಪ್ರಪಂಚವನ್ನು 'ಸರ್ವ' ಎಂದು ಶ್ರುತಿಯು ಗ್ರಹಿಸಿರುವುದರಿಂದ.

ಈ ಸೂತ್ರದಲ್ಲಿ ಶ್ರೀಹರಿಯು ಚರಾಚರಾತ್ಮಕವಾದ ವಿಶ್ವವನ್ನು ಅನಾಯಾಸವಾಗಿ ಸಂಹರಿಸುತ್ತಾನೆಂಬ ಮಹಿಮೆಯು ಹೇಳಲ್ಪಟ್ಟಿದೆ. ಇದನ್ನು 'ಉರುಬಲ' ಎಂಬ ವಿಶೇಷಣವು ಪರಮಾತ್ಮನ ಬಲವು ಅಪರಿಮಿತವಾಗಿದೆ ಮತ್ತು ಅದ್ಭುತವಾಗಿದೆ ಎಂದು ಸಂಗ್ರಹಿಸುತ್ತಿದೆ.

ಇದರಂತೆ ಬಹುಲೌದಾರ್ಯವೇ ಮೊದಲಾದ ಗುಣಗಳು ಭಗವಂತನ ದೇಹಸ್ವರೂಪವಾಗಿದೆ ಎಂದು ವರ್ಣಿಸುವ ಸೂತ್ರಹೀಗಿದೆ -

'ಮುಕ್ತೋಪಸೃಪ್ಯವ್ಯಪದೇಶಾತ್ (೧/೩/೨)

ಮುಕ್ತರಿಂದ (ಪ್ರಾಪ್ಯ) ಹೊಂದಲ್ಪಡುವವನೆಂದು ಹೇಳಿರುವುದರಿಂದ ದ್ಯುಭ್ವಾದ್ಯಾಯತನನು ವಿಷ್ಣುವೇ.

ತನ್ನಿಷ್ಠಸ್ಯ ಮೋಕ್ಷೋಪದೇಶಾತ್' (೧/೧/೭)

ತನ್ನಿಷ್ಠಸ್ಯ = ಆತ್ಮೋಪಾಸಕನಿಗೆ ಮೋಕ್ಷೋಪದೇಶಾತ್ = ಮೋಕ್ಷವನ್ನು ಹೇಳಿರುವುದರಿಂದ ನಿರ್ಗುಣಬ್ರಹ್ಮನನ್ನೇ ಶ್ರುತಿಗಳು ಹೇಳುತ್ತಿವೆ.

ಈ ಸೂತ್ರಗಳಲ್ಲಿ ಪ್ರತಿಪಾದಿಸಿದ ಪ್ರಮೇಯವನ್ನು ಸಂಗ್ರಹಿಸಿದ್ದಾರೆ. ಈ ಸೂತ್ರಗಳಲ್ಲಿ ಭಗವಂತನು ಭಕ್ತರ ಅಪರಾಧಗಳನ್ನು ಮನ್ನಿಸಿ ಭಕ್ತಿಗೆ ಮೆಚ್ಚಿ ನಿತ್ಯಸುಖವನ್ನು ಕರುಣಿಸುತ್ತಾನೆಂಬ ಔದಾರ್ಯಗುಣಗಳನ್ನು ಪ್ರತಿಪಾದಿಸಲಾಗಿದೆ.

## 'ದ್ಯುತಿಬಲ' ವಿಶೇಷಣದ ವ್ಯಾಖ್ಯಾನ

**ಭಾವದೀಪಃ – ಏತೇನ ಭಾಷ್ಯಸ್ಥ 'ಗುಣ'ಪದಸ್ಯ ವೈಶೇಷಿಕಾದಿಪ್ರಸಿದ್ಧ್ಯಾ ದುಃಖಾದಿಕಂ ವೈದಿಕಪ್ರಸಿದ್ಧ್ಯಾ ಸತ್ತ್ವಾದಿಕಂ ವಾ ನಾರ್ಥ ಇತ್ಯುಕ್ತಂ ಭವತಿ । ದ್ಯುತಿಬಲಾದೇರ್ಗುಣತ್ವಂ ತು 'ಗುಣಾದ್ವಾऽಲೋಕವತ್' ಇತ್ಯತ್ರ ದ್ವಿತೀಯೇ ತದನುವಿಧಾನಾದಿನಾ ವಕ್ಷ್ಯತ ಇತಿ ಭಾವಃ ।**

ಹೀಗೆ ಟೀಕಾಕೃತ್ಪಾದರು ಆನಂದ, ಜ್ಞಾನ, ಔದಾರ್ಯ ಮೊದಲಾದ ಗುಣಗಳು ಭಗವಂತನ ದೇಹಸ್ವರೂಪವಾಗಿವೆ ಎಂದು ವರ್ಣಿಸುವ ಮೂಲಕ ಗುಣಪದದಿಂದ ತಾರ್ಕಿಕರು ಹೇಳುವ ಗುಣಗಳನ್ನು ವ್ಯಾವೃತ್ತಿ ಮಾಡಿದ್ದಾರೆ. ತಾರ್ಕಿಕರ ಸಿದ್ಧಾಂತದಲ್ಲಿ ದುಃಖ, ದ್ವೇಷ ಮೊದಲಾದವೂ ಸಹ ಗುಣಗಳೆನಿಸುತ್ತವೆ. ಮತ್ತು ವೇದದ ಪ್ರಸಿದ್ಧಿಯಿಂದ ಸತ್ವರಜಸ್ತಮೋಗುಣಗಳೂ ಸಹ ಗುಣಗಳೆನಿಸುತ್ತವೆ. ಇಂತಹ ಗುಣಗಳನ್ನೆಲ್ಲ ಪ್ರಕೃತ ನಿರಾಕರಿಸಿದ್ದಾರೆ. ಜ್ಞಾನ ಮೊದಲಾದ ಗುಣಗಳು ಭಗವಂತನ ಸ್ವರೂಪವಾಗಿದೆ ಎಂದು ಪ್ರತಿಪಾದಿಸುವ ಸೂತ್ರ ಹೀಗಿದೆ -

'ಗುಣಾದ್ವಾऽಲೋಕವತ್'(೨/೩/೨೬)

ವಾ = ಅಥವಾ ಗುಣಾತ್ = ಪ್ರಕಾಶರೂಪಗುಣದಿಂದ ಆಲೋಕವತ್ = ಬೆಳಕಿನಂತೆ, ಗುಣಾತ್ = ಚಿದ್ರೂಪಗುಣದಿಂದ, ಅಣುವಾಗಿದ್ದರೂ ವ್ಯಾಪ್ತಿಯು ಇದೆ.

ಈ ಎರಡನೆಯ ಅಧ್ಯಾಯದಲ್ಲಿರುವ ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ. ಅದನ್ನು 'ದ್ಯುತಿಬಲ' ಎಂಬ ವಿಶೇಷಣದಿಂದ ಇಲ್ಲಿ ಸಂಗ್ರಹಿಸಿದ್ದಾರೆ.

## 'ವೀರ್ಯಾದಿದೇಹಂ' ವಿಶೇಷಣದ ವ್ಯಾಖ್ಯಾನ

**ಭಾವದೀಪಃ – ನನು ದೇಹಸತ್ತ್ವೇ ದುಃಖಾದಿಭೋಗಪ್ರಸಙ್ಗಾತ್ 'ದೋಷವರ್ಜಿತಮ್' ಇತಿ ಭಾಷ್ಯೋಕ್ತಮಸತ್ । 'ಕರಣವಚ್ಚೇನ್ನ ಭೋಗಾದಿಭ್ಯಃ' 'ಅನ್ತವತ್ತ್ವಮ್' ಇತಿ ವಕ್ಷ್ಯಮಾಣತ್ವಾತ್।**

तदसत्वे ज्ञानादिगुणोदीर्णता भाष्योक्ता न युक्ता । 'असर्वज्ञता वा' इति सूत्रकृतैव वक्ष्यमाणादित्यतः – वीर्यादिदेहम् इति ।। 'अप्राकृतदेहवत्त्वात् न दुःखादिदोषप्रसङ्गः' इति भावः ।

ದೇಹವಿದ್ದಲ್ಲೆಲ್ಲಾ ದುಃಖವಿರುವುದು ಲೋಕದಲ್ಲಿ ಕಂಡಿದೆ. ಭಗವಂತನಿಗೆ ದೇಹವು ಇರುವುದಾದರೆ ದುಃಖವೂ ಬರಬೇಕಾದೀತು. ಹೀಗಿರುವಾಗ 'ದೋಷವರ್ಜಿತಮ್' ಎಂದು ಭಾಷ್ಯದಲ್ಲಿ ಹೇಳಿದ್ದು ತಪ್ಪು.

'करणवच्चेन्न भोगादिभ्यः' (೨-೨-೪೦)

ಸಾಧನಸಮೂಹವು ಕರಣವಚ್ಚೇತ್ = ಶರೀರದಂತೆಯೂ ಅಧಿಷ್ಠಾನದಂತೆಯೂ ಆಗಿದೆ. ಆದ್ದರಿಂದ ಹಿಂದೆ ಹೇಳಿದ ದೋಷವಿಲ್ಲವೆಂದರೆ, ಭೋಗಾದಿಭ್ಯಃ = ಸುಖ-ದುಃಖಾನುಭವರೂಪವಾದ ಭೋಗ ಜನನಮರಣಾದಿ ದೋಷಗಳಿರುವುದರಿಂದ ನ = ಅದು ಯುಕ್ತವಲ್ಲ.

ಈ ಸೂತ್ರದಲ್ಲಿ ಶರೀರ-ಇಂದ್ರಿಯಾದಿಗಳಿರುವ ವ್ಯಕ್ತಿಗೆ ಜನನ-ಮರಣಗಳು ಅನಿವಾರ್ಯವೆಂದು ಹೇಳಲಾಗಿದೆ.

'अन्तवत्त्वमसर्वज्ञता वा' (೨-೨-೪೧)

ದೇಹವಿರುವುದರಾದರೆ ಅಂತವತ್ತ್ವಮ್ = ಸರ್ವತ್ರ ವ್ಯಾಪ್ತಿ ಇಲ್ಲದಿರುವುದು ವಾ = ಅಥವಾ ದೇಹವಿಲ್ಲವಾದರೆ, ಅಸರ್ವಜ್ಞತಾ = ಸರ್ವಜ್ಞತ್ವಾಭಾವ ಸಂಭವಿಸುತ್ತದೆ.

ಶರೀರವು ಇದೆಯೋ ? ಇಲ್ಲವೋ ? ಶರೀರವಿರುವುದಾದರೆ ನಮ್ಮಂತೆಯೇ ಶರೀರದಷ್ಟೇ ಪರಿಮಾಣವಿರುವುದರಿಂದ ಸರ್ವಜಗತ್ಕರ್ತೃತ್ವವೂ ಕೂಡಲಾರದು. ಶರೀರವಿಲ್ಲದವನಿಗೆ ಜ್ಞಾನವೇ ಇಲ್ಲದಿರುವುದರಿಂದ ಸಾರ್ವಜ್ಞವೂ ಇಲ್ಲವಾಗುತ್ತದೆ. ಆದರಿಂದ ಜಗತ್ಕರ್ತೃತ್ವ ಸರ್ವಥಾ ಇಲ್ಲವಾಗುತ್ತದೆ.

ಈ ಸೂತ್ರದಲ್ಲಿ ಶರೀರವಿರುವ ವ್ಯಕ್ತಿಗೆ ಎಲ್ಲೆಡೆ ವ್ಯಾಪ್ತಿ ಕೂಡುವುದಿಲ್ಲ. ಶರೀರವಿಲ್ಲದಿರುವ ವ್ಯಕ್ತಿಗೆ ಸರ್ವಜ್ಞತ್ವವು ಕೂಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ

ಈ ಸೂತ್ರಗಳಲ್ಲಿ ಪ್ರತಿಪಾದಿಸಿದ ಪ್ರಮೇಯವನ್ನು ಸಂಗ್ರಹಿಸಿದ್ದಾರೆ. ಈ ಸೂತ್ರಗಳಲ್ಲಿ ಭಗವಂತನು ಭಕ್ತರ ಅಪರಾಧಗಳನ್ನು ಮನ್ನಿಸಿ ಭಕ್ತಿಗೆ ಮೆಚ್ಚಿ ನಿತ್ಯಸುಖವನ್ನು ಕರುಣಿಸುತ್ತಾನೆಂಬ ಔದಾರ್ಯಗುಣಗಳನ್ನು ಪ್ರತಿಪಾದಿಸಲಾಗಿದೆ.

## 'ದ್ಯುತಿಬಲ' ವಿಶೇಷಣದ ವ್ಯಾಖ್ಯಾನ

**ಭಾವದೀಪಃ – ಏತೇನ ಭಾಷ್ಯಸ್ಥ 'ಗುಣ'ಪದಸ್ಯ ವೈಶೇಷಿಕಾದಿಪ್ರಸಿದ್ಧ್ಯಾ ದುಃಖಾದಿಕಂ ವೈದಿಕಪ್ರಸಿದ್ಧ್ಯಾ ಸತ್ತ್ವಾದಿಕಂ ವಾ ನಾರ್ಥ ಇತ್ಯುಕ್ತಂ ಭವತಿ । ದ್ಯುತಿಬಲಾದೇರ್ಗುಣತ್ವಂ ತು 'ಗುಣಾದ್ವಾऽಲೋಕವತ್' ಇತ್ಯತ್ರ ದ್ವಿತೀಯೇ ತದನುವಿಧಾನಾದಿನಾ ವಕ್ಷ್ಯತ ಇತಿ ಭಾವಃ ।**

ಹೀಗೆ ಟೀಕಾಕೃತ್ಪಾದರು ಆನಂದ, ಜ್ಞಾನ, ಔದಾರ್ಯ ಮೊದಲಾದ ಗುಣಗಳು ಭಗವಂತನ ದೇಹಸ್ವರೂಪವಾಗಿವೆ ಎಂದು ವರ್ಣಿಸುವ ಮೂಲಕ ಗುಣಪದದಿಂದ ತಾರ್ಕಿಕರು ಹೇಳುವ ಗುಣಗಳನ್ನು ವ್ಯಾವೃತ್ತಿ ಮಾಡಿದ್ದಾರೆ. ತಾರ್ಕಿಕರ ಸಿದ್ಧಾಂತದಲ್ಲಿ ದುಃಖ, ದ್ವೇಷ ಮೊದಲಾದವೂ ಸಹ ಗುಣಗಳೆನಿಸುತ್ತವೆ. ಮತ್ತು ವೇದದ ಪ್ರಸಿದ್ಧಿಯಿಂದ ಸತ್ವರಜಸ್ತಮೋಗುಣಗಳೂ ಸಹ ಗುಣಗಳೆನಿಸುತ್ತವೆ. ಇಂತಹ ಗುಣಗಳನ್ನೆಲ್ಲ ಪ್ರಕೃತ ನಿರಾಕರಿಸಿದ್ದಾರೆ. ಜ್ಞಾನ ಮೊದಲಾದ ಗುಣಗಳು ಭಗವಂತನ ಸ್ವರೂಪವಾಗಿದೆ ಎಂದು ಪ್ರತಿಪಾದಿಸುವ ಸೂತ್ರ ಹೀಗಿದೆ -

'ಗುಣಾದ್ವಾऽಲೋಕವತ್'(೨/೩/೨೬)

ವಾ = ಅಥವಾ ಗುಣಾತ್ = ಪ್ರಕಾಶರೂಪಗುಣದಿಂದ ಆಲೋಕವತ್ = ಬೆಳಕಿನಂತೆ, ಗುಣಾತ್ = ಚಿದ್ರೂಪಗುಣದಿಂದ, ಅಣುವಾಗಿದ್ದರೂ ವ್ಯಾಪ್ತಿಯು ಇದೆ.

ಈ ಎರಡನೆಯ ಅಧ್ಯಾಯದಲ್ಲಿರುವ ಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ. ಅದನ್ನು 'ದ್ಯುತಿಬಲ' ಎಂಬ ವಿಶೇಷಣದಿಂದ ಇಲ್ಲಿ ಸಂಗ್ರಹಿಸಿದ್ದಾರೆ.

## 'ವೀರ್ಯಾದಿದೇಹಂ' ವಿಶೇಷಣದ ವ್ಯಾಖ್ಯಾನ

**ಭಾವದೀಪಃ – ನನು ದೇಹಸತ್ತ್ವೇ ದುಃಖಾದಿಭೋಗಪ್ರಸಙ್ಗಾತ್ 'ದೋಷವರ್ಜಿತಮ್' ಇತಿ ಭಾಷ್ಯೋಕ್ತಮಸತ್ । 'ಕರಣವಚ್ಚೇನ್ನ ಭೋಗಾದಿಭ್ಯಃ' 'ಅನ್ತವತ್ತ್ವಮ್' ಇತಿ ವಕ್ಷ್ಯಮಾಣತ್ವಾತ್।**

तदसत्वे ज्ञानादिगुणोदीर्णता भाष्योक्ता न युक्ता । **'असर्वज्ञता वा'** इति सूत्रकृतैव वक्ष्यमाणादित्यतः – **वीर्यादिदेहम्** इति ।। 'अप्राकृतदेहवत्त्वात् न दुःखादिदोषप्रसङ्गः' इति भावः ।

ದೇಹವಿದ್ದಲ್ಲೆಲ್ಲಾ ದುಃಖವಿರುವುದು ಲೋಕದಲ್ಲಿ ಕಂಡಿದೆ. ಭಗವಂತನಿಗೆ ದೇಹವು ಇರುವುದಾದರೆ ದುಃಖವೂ ಬರಬೇಕಾದೀತು. ಹೀಗಿರುವಾಗ 'ದೋಷವರ್ಜಿತಮ್' ಎಂದು ಭಾಷ್ಯದಲ್ಲಿ ಹೇಳಿದ್ದು ತಪ್ಪು.

'ಕರಣವಚ್ಚೇನ್ನ ಭೋಗಾದಿಭ್ಯಃ' (೨-೨-೪೦)

ಸಾಧನಸಮೂಹವು ಕರಣವಚ್ಚೇತ್ = ಶರೀರದಂತೆಯೂ ಅಧಿಷ್ಠಾನದಂತೆಯೂ ಆಗಿದೆ. ಆದ್ದರಿಂದ ಹಿಂದೆ ಹೇಳಿದ ದೋಷವಿಲ್ಲವೆಂದರೆ, ಭೋಗಾದಿಭ್ಯಃ = ಸುಖಾ-ದುಃಖಾನುಭವರೂಪವಾದ ಭೋಗ ಜನನಮರಣಾದಿ ದೋಷಗಳಿರುವುದರಿಂದ ನ = ಅದು ಯುಕ್ತವಲ್ಲ.

ಈ ಸೂತ್ರದಲ್ಲಿ ಶರೀರ-ಇಂದ್ರಿಯಾದಿಗಳಿರುವ ವ್ಯಕ್ತಿಗೆ ಜನನ-ಮರಣಗಳು ಅನಿವಾರ್ಯವೆಂದು ಹೇಳಲಾಗಿದೆ.

'ಅಂತವತ್ತ್ವಮಸರ್ವಜ್ಞತಾ ವಾ' (೨-೨-೪೧)

ದೇಹವಿರುವುದರಾದರೆ ಅಂತವತ್ತ್ವಮ್ = ಸರ್ವತ್ರ ವ್ಯಾಪ್ತಿ ಇಲ್ಲದಿರುವುದು ವಾ = ಅಥವಾ ದೇಹವಿಲ್ಲವಾದರೆ, ಅಸರ್ವಜ್ಞತಾ = ಸರ್ವಜ್ಞತ್ವಾಭಾವ ಸಂಭವಿಸುತ್ತದೆ.

ಶರೀರವು ಇದೆಯೋ ? ಇಲ್ಲವೋ ? ಶರೀರವಿರುವುದಾದರೆ ನಮ್ಮಂತೆಯೇ ಶರೀರದಷ್ಟೇ ಪರಿಮಾಣವಿರುವುದರಿಂದ ಸರ್ವಜಗತ್ಕರ್ತೃತ್ವವೂ ಕೂಡಲಾರದು. ಶರೀರವಿಲ್ಲದವನಿಗೆ ಜ್ಞಾನವೇ ಇಲ್ಲದಿರುವುದರಿಂದ ಸಾರ್ವಜ್ಞವೂ ಇಲ್ಲವಾಗುತ್ತದೆ. ಆದರಿಂದ ಜಗತ್ಕರ್ತೃತ್ವ ಸರ್ವಥಾ ಇಲ್ಲವಾಗುತ್ತದೆ.

ಈ ಸೂತ್ರದಲ್ಲಿ ಶರೀರವಿರುವ ವ್ಯಕ್ತಿಗೆ ಎಲ್ಲೆಡೆ ವ್ಯಾಪ್ತಿ ಕೂಡುವುದಿಲ್ಲ. ಶರೀರವಿಲ್ಲದಿರುವ ವ್ಯಕ್ತಿಗೆ ಸರ್ವಜ್ಞತ್ವವು ಕೂಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ

ಭಗವಂತನಿಗೆ ದೇಹವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಭಗವಂತನಿಗೆ ದೇಹವನ್ನೇ ಒಪ್ಪದಿದ್ದರೆ ಜ್ಞಾನಾದಿಗುಣಪರಿಪೂರ್ಣತ್ವವನ್ನು ಹೇಳಲು ಸಾಧ್ಯವಿಲ್ಲ. ಇದನ್ನು ಸೂತ್ರಕಾರರೇ 'ಅಸರ್ವಜ್ಞತಾ ವಾ' ಎಂಬಲ್ಲಿ ಹೇಳಿದ್ದಾರೆ. ಈ ಶಂಕೆಯ ಪರಿಹಾರಕ್ಕೋಸ್ಕರ 'ವೀರ್ಯಾದಿದೇಹಮ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಭಗವಂತನಿಗೆ ಅಪ್ರಾಕೃತವಾದ ದೇಹವಿರುವುದರಿಂದ ದುಃಖಾದಿದೋಷಗಳಿಗೆ ಪ್ರಸಕ್ತಿ ಇಲ್ಲ. ಮತ್ತು ಜನನ-ಮರಣಗಳ ಇಲ್ಲದಿರುವಿಕೆ, ಸರ್ವತ್ರ ವ್ಯಾಪ್ತಿ, ಸರ್ವಜ್ಞತ್ವ ಇವೆಲ್ಲವೂ ಉಪಪನ್ನವಾಗುತ್ತವೆ.

## ಅನೇಕ ಸೂತ್ರಗಳ ಅಭಿಪ್ರಾಯ ತಾಳಿದೆ

**ಭಾವದೀಪಃ – ಏತಚ್ಚ ಅದೃಶ್ಯತ್ವನಯಗುಣಸೂತ್ರೇ 'ರೂಪೋಪನ್ಯಾಸಾತ್' ಇತ್ಯತ್ರ ಸಿದ್ಧಮ್। ತಥಾ ಅನ್ಯಭಾವವ್ಯಾವೃತ್ತೇಶ್ಚ' ಇತ್ಯಾದಾವಪಿ, ತಸ್ಯೈವ 'ಅರೂಪವದೇವ' ಇತ್ಯತ್ರ ತೃತೀಯೇ ತಪಪಾದಯಿಷ್ಯಮಾಣತ್ವಾತ್ ।**

ಈ ವಿಚಾರವು ಆದೃಶ್ಯತ್ವಾಧಿಕರಣದ 'ರೂಪೋಪನ್ಯಾಸಾಚ್ಚ' (೧/೨/೨೩)

ಈ ಗುಣಸೂತ್ರದಲ್ಲಿ ಸಿದ್ಧವಾಗಿದೆ. 'ಯದಾ ಪಶ್ಯಃ.....' ಎಂಬ ಶ್ರುತಿಯ ಆಧಾರದಿಂದ ಮಹಾವಿಷ್ಣುವಿನಲ್ಲಿ ಅಪ್ರಾಕೃತವಾದ ರುಗ್ಮರೂಪವು ಮತ್ತು 'ಅನ್ಯಭಾವವ್ಯಾವೃತ್ತೇಶ್ಚ' (೧-೩-೧೨) ಎಂಬ ಸೂತ್ರದಲ್ಲಿಯೂ 'ಅಸ್ಥೂಲೋಽನಣುಃ' ಇತ್ಯಾದಿ ಶ್ರುತಿಯ ಆಧಾರದಿಂದ ಬೇರೆ ವಸ್ತುಗಳಲ್ಲಿರುವ ಸ್ಥೂಲತ್ವಾದಿಗಳು ಪರಮಾತ್ಮನಲ್ಲಿ ಇರುವುದಿಲ್ಲವೆಂದು ಸಮರ್ಥಿಸಲಾಗಿದೆ. 'ಅರೂಪವದೇವ ಹಿ ತತ್ ಪ್ರಧಾನತ್ವಾತ್' (೩-೪-೧೪)' ಎಂಬ ಮೂರನೆಯ ಅಧ್ಯಾಯದ ಸೂತ್ರದಲ್ಲಿಯೂ ಪ್ರಕೃತ್ಯಾದಿಗಳಿಗಿಂತ ಉತ್ತಮನಾದ ಕಾರಣ ಪ್ರಾಕೃತದೇಹರಹಿತನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಅಪ್ರಾಕೃತದೇಹವುಳ್ಳ ಭಗವಂತನಲ್ಲಿ ಯಾವುದೇ ದೋಷಗಳಿಗೆ ಅವಕಾಶವಿಲ್ಲ ಮತ್ತು ಸಕಲಗುಣ-ಪರಿಪೂರ್ಣತ್ವಕ್ಕೆ ಅವಕಾಶವಿದೆ ಎಂದು ಸಿದ್ಧವಾಗುತ್ತದೆ. 'ವೀರ್ಯಾದಿದೇಹಂ' ಎಂಬುದು ಇಷ್ಟು ಅರ್ಥಗರ್ಭಿತವಾಗಿದೆ.

## ಎರಡನೆಯ ಅಧ್ಯಾಯದ ಸಾರ

## ಎರಡನೆಯ ಪಾದ

**ಭಾವದೀಪಃ – ದ್ವಿತೀಯಾಧ್ಯಾಯಾರ್ಥಸ್ಯ 'ದೋಷವರ್ಜಿತಮ್' ಇತ್ಯಸ್ಯ ವಿವರಣಂ 'ಚಿನ್ತಾ' ಇತ್ಯಾದಿ ।**

ಎರಡನೆಯ ಅಧ್ಯಾಯದ ಅರ್ಥವನ್ನೇ ಶ್ರೀಮದಾಚಾರ್ಯರು 'ದೋಷವರ್ಜಿತಮ್' ಎಂದು ಸಂಗ್ರಹಿಸಿದ್ದಾರೆ. ಅದನ್ನು 'ಚಿಂತಾಸಂತಾಪ' ಇತ್ಯಾದಿ ಎರಡನೆಯ ಪಾದದಿಂದ ಟೀಕಾಕೃತ್ಪಾದರು ವ್ಯಾಖ್ಯಾನಿಸುತ್ತಿದ್ದಾರೆ.

## ಸಮಾಸ ಹೇಗೆ ?

**ಭಾವದೀಪಃ – लेपः = पुण्यपापसम्बन्धः । चिन्तादयो मुखं प्रधानं येषामस्तीति चिन्तादिमुखराः । ते च ते अशेषदोषा इति विग्रहः । खमुखकुञ्जेभ्यः इति मत्वर्थे रः ।**

ಲೇಪ = ಪುಣ್ಯಪಾಪಗಳ ಸಂಬಂಧ. ಚಿಂತಾದಯಃ ಮುಖಂ ಯೇಷಾಂ ಅಸ್ತೀತಿ ಚಿಂತಾದಿಮುಖಿರಾಃ, ಚಿಂತಾದಿಮುಖಿರಾಶ್ಚ ತೇ ಅಶೇಷದೋಷಾಶ್ಚ ಎಂದು ಸಮಾಸ. ಚಿಂತಾಸಂತಾಪಾದಿಗಳೇ ಪ್ರಧಾನವಾಗಿ ಉಳ್ಳ ಸಕಲದೋಷಗಳನ್ನು ವಿವಕ್ಷಿಸಬೇಕೆಂಬುದು ಇದರ ಅರ್ಥ. 'ಖಮುಖಿಕುಂಜೇಭ್ಯಃ' ಎಂಬುದರಿಂದ ಮತ್ವರ್ಥದಲ್ಲಿ ರಪ್ರತ್ಯಯ ಬಂದು ಮುಖಿರ ಎಂದಾಗಿದೆ.

## ಮುಖಿರ ಶಬ್ದಕ್ಕೆ ಎರಡರ್ಥ

**ಭಾವದೀಪಃ – यद्वा 'सन्मुखरितं सद्भिः प्रधानीकृतम्' इति दशमतात्पर्योक्तेः मुखरशब्द एव प्रधानवाची । चिन्तादिभिर्मुखराः ध्वनन्त इव स्थिता इत्यर्थ इत्यप्याहुः ।**

ಅಥವಾ 'ಮುಖಿರ'ಶಬ್ದಕ್ಕೇನೇ ಪ್ರಧಾನ ಎಂದರ್ಥ. 'ಸನ್ಮುಖರಿತಂ ಸದ್ಭಿಃ ಪ್ರಧಾನೀಕೃತಮ್' ಎಂದು ದಶಮಭಾಗವತತಾತ್ಪರ್ಯದಲ್ಲಿ ಮುಖರಶಬ್ದವನ್ನು ಪ್ರಧಾನ ಎಂಬರ್ಥದಲ್ಲಿ ಬಳಸಿದ್ದಾರೆ. ಮೊದಲನೆಯ ಅರ್ಥ - ಚಿಂತಾಸಂತಾಪಾದಿಗಳೇ ಮುಖ = ಪ್ರಧಾನವಾಗಿ ರ = ಉಳ್ಳ ಉಳಿದ ದೋಷಗಳು. ಎರಡನೆಯ ಅರ್ಥ - ಚಿಂತಾಸಂತಾಪಾದಿಗಳೇ ಮುಖರ = ಪ್ರಧಾನವಾಗಿವುಳ್ಳ ಉಳಿದ ದೋಷಗಳು.

ಹೀಗೆ ಮುಖರ ಶಬ್ದಕ್ಕೆ ಎರಡರ್ಥ ತಿಳಿಯಬೇಕು.

ಚಿಂತಾದಿಗಳು ಜೋರಾಗಿ ಶಬ್ದ ಮಾಡುವಂತೆ ಇವೆ ಉಳಿದ ದೋಷಗಳನ್ನು ಸ್ವೀಕರಿಸಬೇಕೆಂದು ಕೆಲವರು ವ್ಯಾಖ್ಯಾನಿಸುತ್ತಾರೆ.

## ಅನೇಕ ಸೂತ್ರಗಳ ವ್ಯಾಖ್ಯಾನವಿದು

**ಭಾವದೀಪಃ – 'अधिकं तु भेदनिर्देशात्', 'न कर्माविभागादिति चेन्न अनादित्वात्', 'असम्भवस्तु सतोऽनुपपत्तेः' 'नात्माश्रुतेर्नित्यत्वाच्च ताभ्यः', 'सर्वधर्मोपपत्तेश्च'** इत्यादिभिश्चिन्तादिदोषाभावस्य द्वितीये वक्ष्यमाणत्वादिति भावः ।

'ಅಧಿಕಂ ತು ಭೇದನಿರ್ದೇಶಾತ್' (೨/೦/೨೩)

ಭೇದನಿರ್ದೇಶಾತ್ = ಶ್ರೋತೃತ್ವ ಅಂತರ್ಯಾಮಿತ್ವವೇ ಮುಂತಾದ ವಿಶೇಷಗಳನ್ನು ಹೇಳಿರುವುದರಿಂದ, ತು = ಈ ಬ್ರಹ್ಮನು ಜೀವಸಮಾನನಲ್ಲ. ಅಧಿಕಂ = ಜೀವನಿಂದ ಉತ್ಕೃಷ್ಟನಾಗಿದ್ದಾನೆ.

'ನ ಕರ್ಮಾನಿಭಾಗಾದಿತಿ ಚೇನ್ನ ಅನಾದಿತ್ವಾತ್' (೨/೦/೩೬)

ಅವಿಭಾಗಾದಿತಿ ಚೇತ್ = ಕರ್ಮವು ಅಸ್ವತಂತ್ರವಸ್ತುವಿನಿಂದ ಭಿನ್ನವಲ್ಲವಾದ್ದರಿಂದ ಸ್ವಾಧೀನವಾದ ಕರ್ಮಾನುಸಾರಫಲ ನೀಡಿದರೆ ಈಶ್ವರನಿಗೆ ಪಕ್ಷಪಾತಾದಿದೋಷಗಳು ಪರಿಹಾರವಾಗುವುದಿಲ್ಲ ಎಂದರೆ, ನ = ಇದು ಯುಕ್ತವಲ್ಲ. ಅನಾದಿತ್ವಾತ್ = ಕರ್ಮಪರಂಪರೆಯು ಅನಾದಿಯಾದ್ದರಿಂದ.

'ಅಸಂಭವಸ್ತು ಸತೋಽನುಪಪತ್ತೇಃ' (೨/೩/೯)

ಸತಃ = ಬ್ರಹ್ಮನಿಗೆ, ಅಸಂಭವಸ್ತು = ಉತ್ಪತ್ತಿಯು ಇಲ್ಲವೇ ಇಲ್ಲ. ಏಕೆಂದರೆ, ಅನುಪಪತ್ತೇಃ = ಅಸತ್‌ನಿಂದ ಉತ್ಪತ್ತಿ ಕೂಡದಿರುವುದರಿಂದ.

'ನಾತ್ಮಾऽಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ' (೨/೩/೧೭)

ಶ್ರುತೇಃ = 'ತಮಸಿ ವೀಲಿನಃ' ಎಂಬ ಶ್ರುತಿಯಿಂದ ಆತ್ಮಾ = ಪರಮಾತ್ಮನು ಲಯವನ್ನು ಹೊಂದುತ್ತಾನೆ, ಇತಿ ನ = ಹೀಗೆ ಹೇಳಬಾರದು. ಏಕೆಂದರೆ, ಅಶ್ರುತೇಃ = ಅವನ ಲಯವು

ಯಾವ ಶ್ರುತಿಯಿಂದಲೂ ತಿಳಿದಿಲ್ಲ. ಅಷ್ಟಲ್ಲದೇ, ತಾಭ್ಯಃ = 'ಸ ನಿತ್ಯೋ ನಿರ್ಗುಣಃ...' ಇತ್ಯಾದಿ ಶ್ರುತಿಗಳಿಂದ, ನಿತ್ಯತ್ವಾಚ್ಚ = ಪರಮಾತ್ಮನಿಗೆ ನಿತ್ಯತ್ವವೇ ಶ್ರುತವಾಗಿರುವುದರಿಂದ.

ಸರ್ವಧರ್ಮೋಪಪತ್ತೇಶ್ಚ' (೨/೧/೩೮)

ಸರ್ವಧರ್ಮಉಪಪತ್ತೇಶ್ಚ = ಜ್ಞಾನಾನಂದಾದಿಗುಣಗಳು, ದುಃಖಾದಿ ದೋಷಾಭಾವವೂ ಈಶ್ವರನಲ್ಲಿ ಸ್ವಾತಂತ್ರ್ಯಾದಿಪ್ರಯುಕ್ತವಾಗಿ ಉಪಪನ್ನವಾದ್ದರಿಂದ, ಚ = ಈ ವಿಷಯದಲ್ಲಿ ಶ್ರುತಿಯ ಆಧಾರವು ಇರುವುದರಿಂದಲೂ ಸಹ ಯುಕ್ತಿವಿರೋಧವನ್ನು ಶಂಕಿಸಬಾರದು.

ಇವೇ ಮೊದಲಾದ ಎರಡನೆಯ ಅಧ್ಯಾಯದ ಸೂತ್ರಗಳಲ್ಲಿ ಚಿಂತೆ, ಸಂತಾಪ ಮೊದಲಾದ ಯಾವ ದೋಷಗಳೂ ಭಗವಂತನಲ್ಲಿ ಇಲ್ಲವೆಂದು ಸಮರ್ಥಿಸಲಾಗಿದೆ.

## ದೋಷಪದದಿಂದ ಕರ್ಮವೂ ವಿವಕ್ಷಿತ

**ಭಾವದೀಪಃ – 'ನ ಕರ್ಮಾ'** ಇತ್ಯತ್ರ ಕರ್ಮಣೋऽಸ್ವಾತನ್ತ್ರ್ಯೋಕ್ತ್ಯಾ ತಲ್ಲೇಪಾಭಾವಸಿದ್ಧೇಃ। ಉಕ್ತಂ ಚ **ಗೀತಾಭಾಷ್ಯೇ – 'ಯಃ ಕರ್ಮಾಣಿ ನಿಯಮಯತಿ ಕಥಂ ತತ್ ತಂ ಬಧ್ನಾತಿ'** ಇತಿ । ಏತೇನ ತಾರ್ಕಿಕಾದಿರೀತ್ಯಾ ರಾಗಾದಿರೇವ ದೋಷಪದಾರ್ಥ ಇತಿ ಭ್ರಮೋऽಪಾಸ್ತಃ ।

'ನ ಕರ್ಮಾವಿಭಾಗಾದಿತಿ ಚೇನ್ನ ಅನಾದಿತ್ವಾತ್' (೨/೧/೩೬)

ಅವಿಭಾಗಾದಿತಿ ಚೇತ್ = ಕರ್ಮವು ಅಸ್ವತಂತ್ರವಸ್ತುವಿನಿಂದ ಭಿನ್ನವಲ್ಲವಾದ್ದರಿಂದ ಸ್ವಾಧೀನವಾದ ಕರ್ಮಾನುಸಾರಫಲ ನೀಡಿದರೆ ಈಶ್ವರನಿಗೆ ಪಕ್ಷಪಾತಾದಿ ದೋಷಗಳು ಪರಿಹಾರವಾಗುವುದಿಲ್ಲ ಎಂದರೆ, ನ = ಅದು ಯುಕ್ತವಲ್ಲ. ಅನಾದಿತ್ವಾತ್ = ಕರ್ಮಪರಂಪರೆಯು ಅನಾದಿಯಾದ್ದರಿಂದ.

ಹೀಗೆ ಸೂತ್ರದಲ್ಲಿ ಕರ್ಮಕ್ಕೆ ಅಸ್ವಾತಂತ್ರ್ಯ ಹೇಳಿದ್ದರಿಂದ ಕರ್ಮದ ಲೇಪವು ಭಗವಂತನಲ್ಲಿಲ್ಲವೆಂದು ಸಿದ್ಧವಾಗುತ್ತದೆ. ಇದನ್ನೇ ಗೀತಾಭಾಷ್ಯದಲ್ಲಿ 'ಯಃ ಕರ್ಮಾಣಿ ನಿಯಮಯತಿ ಕಥಂ ತತ್ ತಂ ಬಧ್ನಾತಿ' ಕರ್ಮಗಳನ್ನು ಯಾರು ನಿಯಮನ ಮಾಡುತ್ತಾನೋ ಅವನನ್ನೇ ಕರ್ಮವು ಹೇಗೆ ತಾನೇ ಬಂಧಿಸುತ್ತದೆ? ಎಂದು ಹೇಳಿದ್ದಾರೆ.

ಹೀಗೆ ಹೇಳಿದ್ದರಿಂದ ತಾರ್ಕಿಕಾದಿಗಳು ಹೇಳುವಂತೆ ರಾಗಾದಿಗಳಷ್ಟೇ ದೋಷಪದದ ಅರ್ಥವೆಂಬ ಭ್ರಮೆಯನ್ನು ಪರಿಹರಿಸಿದಂತಾಯಿತು.

## ಮೂರನೆಯ ಅಧ್ಯಾಯದ ಸಾರ

## ಮೂರನೆಯ ಪಾದ

**ಭಾವದೀಪಃ – तृतीयाध्यायार्थस्य 'ज्ञेयम्' इत्यस्य ज्ञाने कर्त्तुपाययोर्गत्युपायत्वस्य चोक्त्या विवरणं क्रियते – सद्भिः इति ।। एतच्च 'असार्वत्रिकी' 'सर्वथापि तु त एवोभयलिङ्गात्' इत्यादौ सिद्धम् ।**

ಮೂರನೆಯ ಅಧ್ಯಾಯದ ಸಾರವನ್ನು ಶ್ರೀಮದಾಚಾರ್ಯರು 'ಜ್ಞೇಯಮ್' ಎಂಬ ವಿಶೇಷಣದಿಂದ ಸಂಗ್ರಹಿಸಿದ್ದಾರೆ. ಅದನ್ನೇ ಟೀಕಾಕೃತ್ಪಾದರು ಸಾಧಕನ ಸಾಧನೆಯನ್ನು ವಿವರಿಸುತ್ತಾ 'ಸದ್ಭಿಃ' ಇತ್ಯಾದಿ ಮೂರನೆಯ ಪಾದದಲ್ಲಿ ವ್ಯಾಖ್ಯಾನಿಸಿದ್ದಾರೆ.

'ಅಸಾರ್ವತ್ರಿಕೀ' (೩/೪/೧೦) :

ಭಗವಂತನ ಜ್ಞಾನವನ್ನು ಪಡೆಯುವ ಅಧಿಕಾರವು ಅಸಾರ್ವತ್ರಿಕೀ = ಎಲ್ಲ ಜನರಿಗೂ ಇರುವುದಿಲ್ಲ.

'ಸರ್ವಥಾऽಪಿ ತು ತ ಏವೋಭಯಲಿಂಗಾತ್' (೩/೪/೩೪)

ಸರ್ವಥಾಪಿ = ದೇಶ, ಕಾಲ, ಗುರುಸೇವೆ, ಶ್ರವಣ ಇವೇ ಮುಂತಾದ ಅನೇಕ ರೀತಿಯ ಸಾಧನಗಳಿದ್ದರೂ, ತ ಏವ = ಜ್ಞಾನಯೋಗ್ಯರೇ, ಜ್ಞಾನವನ್ನು ಹೊಂದುವರು. ತು = ಆಯೋಗ್ಯರು ವಿಪರೀತಜ್ಞಾನವ್ನೇ ಹೊಂದುವರು; ಏಕೆಂದರೆ ಉಭಯಲಿಂಗಾತ್ = ಇಂದ್ರ-ವಿರೋಚನರ ಉದಾಹರಣೆಗಳಲ್ಲಿ ಯೋಗ್ಯರಿಗೆ ಜ್ಞಾನಪ್ರಾಪ್ತಿ ಅಯೋಗ್ಯರಿಗೆ ಜ್ಞಾನಾಪ್ರಾಪ್ತಿ. ಈ ಎರಡರ ವಿಷಯದಲ್ಲಿಯೂ ಜ್ಞಾಪಕಗಳು ಕಂಡಿರುವುದರಿಂದ.

ಸೂತ್ರಗಳಲ್ಲಿ ಮೇಲಿನ ಪ್ರಮೇಯವು ನಿರೂಪಿತವಾಗಿದೆ. ಯಾರು ಜ್ಞಾನಯೋಗ್ಯರೋ ಅವರೇ ಜ್ಞಾನವನ್ನು ಪಡೆಯುತ್ತಾರೆಂಬ ಸೂತ್ರಗಳ ಆಶಯವನ್ನು ಟೀಕಾರಾಯರು 'ಸದ್ಭಿಃ' ಎಂಬುದರಿಂದ ಸೂಚಿಸಿದ್ದಾರೆ.

## ವೈರಾಗ್ಯ ಪಾದದ ಸಾರ

**ಭಾವದೀಪಃ – 'ವೈರಾಗ್ಯ'** ಇತಿ ಆದ್ಯಪದಾರ್ಥೋಕ್ತಿಃ । ತತ್ರ ಗತ್ಯಾಗತಿಸ್ವರ್ಗನರಕಗ ರ್ಭವಾಸಾದಿಸ್ವರೂಪೋಕ್ತ್ಯಾऽರ್ಥಾದ್ವೈರಾಗ್ಯಸ್ಯೋಕ್ತೇಃ ।

'ವೈರಾಗ್ಯ' ಎಂಬ ಪದದಿಂದ ಮೂರನೆಯ ಅಧ್ಯಾಯದ ಪ್ರಥಮಪಾದದ ಅರ್ಥವನ್ನು ಸಂಗ್ರಹಿಸಿದ್ದಾರೆ. ವೈರಾಗ್ಯಪಾದದಲ್ಲಿ ಜೀವನ ಗತಿ, ಆಗತಿ, ಸ್ವರ್ಗ, ನರಕ, ಗರ್ಭವಾಸ ಮೊದಲಾದವುಗಳನ್ನು ನಿರೂಪಿಸಿದ್ದರಿಂದ ವೈರಾಗ್ಯವು ಸಹಜವಾಗಿ ಬರುತ್ತದೆ. ಆದ್ದರಿಂದ ಮೂರನೆಯ ಪಾದದ ಸಾರವನ್ನು ವೈರಾಗ್ಯ ಎಂದೇ ಹೇಳಿದ್ದಾರೆ.

## ಭಕ್ತಿ ಪಾದದ ಸಾರ

**ಭಾವದೀಪಃ – 'ಭಕ್ತಿ'** ಇತಿ ದ್ವಿತೀಯಪಾದಸ್ಯ । ತತ್ರ ಭಗವನ್ಮಾಹಾತ್ಮ್ಯೋಕ್ತ್ಯಾ ಭಕ್ತೇರುಕ್ತೇಃ।

'ಭಕ್ತಿ' ಎಂಬ ಪದದಿಂದ ಎರಡನೆಯ ಪಾದದ ಸಾರವನ್ನು ಹೇಳಿದ್ದಾರೆ. ಭಗವಂತನ ಮಹಿಮೆಯನ್ನು ಹೇಳುವ ಮೂಲಕ ಭಕ್ತಿಯು ಭಕ್ತಿಪಾದದಲ್ಲಿ ನಿರೂಪಿತವಾಗಿದೆ.

## ಉಪಾಸನ ಪಾದದ ಸಾರ

**ಭಾವದೀಪಃ – 'ಶ್ರುತಿಮತೀ'** ಶ್ರವಣಮನನೇ । **'ನಿಯತಧ್ಯಾನಮ್'** ಸ್ವಯೋಗ್ಯೋಪಾಸನಮ್ ಇತಿ ತೃತೀಯಪಾದಾರ್ಥಃ।

'ಶ್ರುತಿಮತೀ' ಎಂಬ ಶಬ್ದದಿಂದ ಶ್ರವಣಮನನಗಳನ್ನು ವಿವಕ್ಷಿಸಬೇಕು. 'ನಿಯತಧ್ಯಾನಮ್' ಎಂದರೆ ತಮ್ಮ ಯೋಗ್ಯತೆಗೆ ಅನುಸಾರಿಯಾದ ಉಪಾಸನೆ ಎಂದರ್ಥ. ಇದರಿಂದ ಉಪಾಸನಾಪಾದದ ಸಾರವನ್ನು ಸಂಗ್ರಹಿಸಿದಂತಾಯಿತು.

**ಭಾವದೀಪಃ – ತತ್ರ ಸರ್ವವೇದಾನ್ತನಯೇ ಯಥಾಶಕ್ತಿಕೃತ್ಸ್ನವೇದವಿಷಯಶ್ರವಣಮನನಯೋಃ ಉಪಸಂಹಾರಾದಿನಯೇಷು ಸ್ವಯೋಗ್ಯೋಪಾಸನಸ್ಯ ಚೋಕ್ತೇಃ ।**

ಸರ್ವವೇದಾಂತಪ್ರತ್ಯಯಾಧಿಕರಣದಲ್ಲಿ ಯಥಾಶಕ್ತಿ ಸಮಸ್ತವೇದದ ಶ್ರವಣ ಮನನಗಳನ್ನು ಮಾಡಬೇಕೆಂದು ಹೇಳಲಾಗಿದೆ.

**ಭಾವದೀಪಃ** – ಏತೇನ 'ಜ್ಞಾನಪ್ರಣಾಡ್ಯಾ ಏತಾನ್ಯೇವೋಪಾಯೋ ನಾನ್ಯತ್ ಕರ್ಮಾದಿ' ಇತಿ ಸೂಚಿತಮ್ ।

ಉಪಸಂಹಾರಾಧಿಕರಣಗಳಲ್ಲಿಯೂ ಸ್ವಯೋಗ್ಯೋಪಾಸನೆಯನ್ನು ಹೇಳಲಾಗಿದೆ. ಹೀಗೆ ಹೇಳಿದ್ದರಿಂದ 'ಜ್ಞಾನದ ಮೂಲಕ ಶ್ರವಣ-ಮನನಾದಿಗಳೇ ಕರ್ತವ್ಯ; ಕರ್ಮಾದಿಗಳಲ್ಲ' ಎಂದು ಸೂಚಿಸಿದಂತಾಯಿತು.

**ಭಾವದೀಪಃ** – 'ಜ್ಞಾನಂ ಸಾಕ್ಷಾತ್ಕಾರಃ, ಸ ಏವ ಯೋಗ ಉಪಾಯಃ, ತಸ್ಮಾತ್' ಇತಿ ಚತುರ್ಥಪಾದಾರ್ಥಃ। ತತ್ರ **ಪುರುಷಾರ್ಥನಯಾದೌ ಪುಮರ್ಥೋಪಾಯತ್ವಸಿದ್ಧೇಃ** ।

ಜ್ಞಾನಶಬ್ದಕ್ಕೆ ಸಾಕ್ಷಾತ್ಕಾರ ಎಂದರ್ಥ. ಈ ಸಾಕ್ಷಾತ್ಕಾರ ಯಾವುದಕ್ಕೆ ಕಾರಣವಾಗಿದೆಯೋ ಅಂತಹ ಮೋಕ್ಷ ಎಂದು ಹೇಳಿದ್ದರಿಂದ ನಾಲ್ಕನೆಯ ಪಾದದ ಅರ್ಥವನ್ನು ತಿಳಿಸಿದಂತಾಯಿತು. ಚತುರ್ಥಪಾದದಲ್ಲಿರುವ ಪುರುಷಾರ್ಥಾಧಿಕರಣದಲ್ಲಿ ಮೋಕ್ಷದ ಉಪಾಯವನ್ನು ನಿರೂಪಿಸಿದ್ದಾರೆ.

## ನಾಲ್ಕನೆಯ ಅಧ್ಯಾಯದ ಸಾರ
## ನಾಲ್ಕನೆಯ ಪಾದ

**ಭಾವದೀಪಃ** – ಏತೇನ ಚತುರ್ಥಾರ್ಥೋ **'ಗಮ್ಯಮ್'** ಇತ್ಯೇತದಪಿ ವಿವೃತಮ್ । ಪ್ರಣಾಡ್ಯಾ ವೈರಾಗ್ಯಾದಿಜಾತಜ್ಞಾನಾತ್ ಸದ್ಭಿರ್ಗಮ್ಯಂ ನ ಕರ್ಮಾತ್ ಇತಿ । ಅತ ಏವ ಅಲಂ ಸಮ್ಯಕ್ ಮುಖ್ಯವೃತ್ತ್ಯಾ ಅಸಂಶಯಂ ವಾ ।

'ಗಮ್ಯಮ್' ಎಂಬ ವಿಶೇಷಣದಿಂದ ಶ್ರೀಮದಾಚಾರ್ಯರು ನಾಲ್ಕನೆಯ ಅಧ್ಯಾಯದ ಸಾರವನ್ನು ಸಂಗ್ರಹಿಸಿದ್ದಾರೆ. ಅದನ್ನೇ ಟೀಕಾಕೃತ್ಪಾದರು 'ಗಮ್ಯಮ್' ಎಂಬುದಾಗಿಯೇ ವ್ಯಾಖ್ಯಾನಿಸಿದ್ದಾರೆ. ವೈರಾಗ್ಯಾದಿಗಳಿಂದ ಹುಟ್ಟುವ ಜ್ಞಾನದಿಂದಷ್ಟೇ ಪುರುಷಾರ್ಥವು ದೊರೆಯಲು ಸಾಧ್ಯ; ಕರ್ಮಾದಿಗಳಿಂದಲ್ಲ. ಆದ್ದರಿಂದಲೇ 'ಅಲಮ್' ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಸಂಶಯವಿಲ್ಲವೆಂದು ಇದರ ಅರ್ಥ.

## 'ವೇದಾಂತವೇದ್ಯಮ್' ವಿಶೇಷಣದ ಅರ್ಥ

**ಭಾವದೀಪಃ** – **'ವೇದಾನ್ತವೇದ್ಯಮ್'** ವೇದಾನಾಮನ್ತೋ ನಿರ್ಣಯೋ ಯಸ್ಮಾತ್ ತೇನ ಬ್ರಹ್ಮಮೀಮಾಂಸಾಶಾಸ್ತ್ರೇಣ ವೇದ್ಯಮ್ । **'ಸರ್ವವೇದಾನ್ತಪ್ರತ್ಯಯಮ್'** ಇತ್ಯತ್ರೈವಾನ್ತೋ ನಿರ್ಣಯಃ ।

'ವೇದಾಂತವೇದ್ಯಮ್' ಎಂಬ ಪದಕ್ಕೆ 'ಬ್ರಹ್ಮಮೀಮಾಂಸಾಶಾಸ್ತ್ರದಿಂದ ಪ್ರತಿಪಾದ್ಯನಾದವನು' ಎಂದರ್ಥ. ಯಾವ ಶಾಸ್ತ್ರದಿಂದ ವೇದಗಳ ತಾತ್ಪರ್ಯವು ನಿರ್ಣಯವಾಗುತ್ತದೋ ಅಂತಹ ಬ್ರಹ್ಮಮೀಮಾಂಸಾಶಾಸ್ತ್ರವೇ ವೇದಾಂತ ಎನಿಸುತ್ತದೆ. 'ಸರ್ವವೇದಾಂತಪ್ರತ್ಯಯಂ ಚೋದನಾದ್ಯವಿಶೇಷಾತ್' (೩/೩/೧) ಎಂಬ ಸೂತ್ರದಲ್ಲಿ ಅಂತಶಬ್ದಕ್ಕೆ 'ನಿರ್ಣಯ' ಎಂಬರ್ಥವನ್ನು ನಿರೂಪಿಸಿದ್ದಾರೆ.

## 'ಮುಕುಂದಾಭಿಧಮ್' ವಿಶೇಷಣದ ಸ್ವಾರಸ್ಯ

**ಭಾವದೀಪಃ** – ಏತೇನ ಭಾಷ್ಯೋಕ್ತವಿಶೇಷಣಾನಾಮಧಿಕೃತತ್ವದ್ಯೋತನಮಪಿ ಫಲಂ ಸೂಚಿತಮ್ । **'ನಾರಾಯಣ'**-ಪದಸ್ಯ ಪ್ರತಿಪದಂ **'ಬ್ರಹ್ಮ'** ಇತಿ । ತೇನ **'ಬ್ರಹ್ಮತನ್ತ್ರೇ ನಾರಾಯಣನತಿರನುಚಿತಾ'** ಇತಿ ಶಙ್ಕಾऽಪಾಸ್ತಾ । ಅತ ಏವ **'ಮುಕುನ್ದಾಭಿಧಮ್'** ಇತ್ಯುಕ್ತಿಃ । ನಾರಾಯಣಮುಕುನ್ದಶಬ್ದಯೋಃ ಪರ್ಯಾಯತ್ವಪ್ರಸಿದ್ಧೇಃ । ವಕ್ಷ್ಯತಿ ಚ **'ಬ್ರಹ್ಮಶಬ್ದವ್ಯಾಖ್ಯಾನಂ ನಾರಾಯಣಪದಮ್'** ಇತಿ ।

ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿರುವ ವಿಶೇಷಣಗಳು ನಮಸ್ಕಾರ ಮಾಡುವುದಕ್ಕೆ ಯೋಗ್ಯವಾದ ಅಧಿಕೃತತ್ವವನ್ನು ಸಮರ್ಥಿಸುತ್ತಿವೆ ಎಂಬರ್ಥ ದೊರೆಯುತ್ತದೆ. 'ನಾರಾಯಣ'ಪದವು 'ಬ್ರಹ್ಮ'ಪದದ ವ್ಯಾಖ್ಯಾನವಾಗಿದೆ. ಆದ್ದರಿಂದ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ನಾರಾಯಣನ ನಮಸ್ಕಾರವು ಅನುಚಿತವೆಂಬ ಶಂಕೆಯು ಪರಿಹಾರವಾಯಿತು. ಆದ್ದರಿಂದಲೇ 'ಮುಕುಂದಾಭಿಧಮ್' ಎಂದು ಟೀಕಾರಾಯರು ಹೇಳಿದ್ದಾರೆ. ನಾರಾಯಣ ಹಾಗೂ ಮುಕುಂದಶಬ್ದಗಳು ಪರ್ಯಾಯಶಬ್ದಗಳೆಂದು ಸಿದ್ಧವಾಗಿವೆ. ಈ ವಿಚಾರವನ್ನು ಮುಂದೆ ಸಮರ್ಥಿಸುತ್ತಾರೆ.

## 'ಅಮಲಂ' ಪದದಿಂದ ಅದ್ವೈತ ನಿರಾಕರಣೆ

**ಭಾವದೀಪಃ** – ನನ್ವೇವಮುಕ್ತದಿಶಾ ಸವಿಶೇಷಂ ಮುಕುನ್ದಾಭಿಧಂ ಬ್ರಹ್ಮ ಚೇತ್ ತರ್ಹಿ –

ನಿರ್ವಿಶೇಷಂ ಪರಂ ಬ್ರಹ್ಮ ಸಾಕ್ಷಾತ್ ಕರ್ತುಮನೀಶ್ವರಾಃ ।
ಯೇ ಮನ್ದಾಸ್ತೇऽನುಕಮ್ಪ್ಯನ್ತೇ ಸವಿಶೇಷನಿರೂಪಣೈಃ ।।

ಇತ್ಯದ್ವೈತ್ಯುಕ್ತದಿಶಾ ಮನ್ದೋಪಾಸ್ಯಂ ಕಿಮ್? ನೇತ್ಯಾಹ – **ಅಮಲಮಿತಿ** ।।

ಸವಿಶೇಷನಾದ ಮುಕುಂದನನ್ನೇ ಬ್ರಹ್ಮ ಎಂದು ಹೇಳುತ್ತಿದ್ದೀರಿ. ಅದ್ವೈತಿಗಳೂ ಕೂಡ 'ಮಂದಜನರು ನಿರ್ವಿಶೇಷಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಅಸಮರ್ಥರು. ಸವಿಶೇಷಬ್ರಹ್ಮನ ನಿರೂಪಣೆಯಿಂದ ಆ ಮಂದಜನರು ಅನುಕಂಪಕ್ಕೆ ಅರ್ಹರಾಗಿದ್ದಾರೆ' ಎಂದು ಹೇಳುತ್ತಾರೆ. ನೀವು ಅದ್ವೈತಿಗಳು ಹೇಳುವ ಮಂದಜನರಿಂದ ಉಪಾಸ್ಯನಾದ ಬ್ರಹ್ಮನನ್ನು ಹೇಳುತ್ತಿರುವಿರಾ? ಎಂಬ ಶಂಕೆಯನ್ನು 'ಅಮಲಂ' ಎಂಬುದರಿಂದ ಪರಿಹರಿಸಿದ್ದಾರೆ.

## ಅಮಲ ಪದಕ್ಕೆ ಎರಡರ್ಥ

**ಭಾವದೀಪಃ** – 'ನ ವಿದ್ಯತೇ ಮಲಂ ಸಂಸಾರಾಖ್ಯಂ ಯಸ್ಮಾತ್ ತತ್ ಅಮಲಮ್, ಸಂಸಾರನಿವರ್ತಕಂ ಮುಮುಕ್ಷೂಪಾಸ್ಯಂ ನ ಮನ್ದೋಪಾಸ್ಯಮ್' ಇತಿ ಯಾವತ್ । 'ಮಾಯಾಖ್ಯಮಲರಹಿತಮ್' ಇತಿ ವಾऽರ್ಥಃ । '**ಅಮಲಮ್**' ಇತ್ಯಸ್ಯಾಲಮಮಲಮಿತಿ ವಾऽನ್ವಯಃ । ಏತಚ್ಚ ಭಾಷ್ಯಸ್ಥನಾರಾಯಣಪದಸ್ಯಮುಕ್ತಾಶ್ರಯತ್ವರೂಪಾರ್ಥ ಮಭಿಪ್ರೇತ್ಯೋಕ್ತಮ್।

'ನ ವಿದ್ಯತೇ ಮಲಂ ಯಸ್ಮಾತ್ ತತ್ ಅಮಲಂ', (ಸಂಸಾರವೆಂಬ ಮಲವು ಯಾವ ಬ್ರಹ್ಮನಿಂದ ಪರಿಹಾರವಾಗುತ್ತದೋ ಅಂತಹ ಬ್ರಹ್ಮನನ್ನು) ಎಂದರ್ಥ. ಇಂತಹ ಸಂಸಾರನಿವರ್ತಕನಾದ ಪರಬ್ರಹ್ಮನು ಮುಮುಕ್ಷುಗಳಿಂದ ಉಪಾಸ್ಯನಾಗಿದ್ದಾನೆ ಮಂದರಿಂದ ಉಪಾಸ್ಯನಾಗಿಲ್ಲ ಎಂದರ್ಥ. ಅಥವಾ ಮಾಯಾ ಎಂಬ ಮಲದಿಂದ ರಹಿತನು ಎಂದರ್ಥ. ಅಲಂ ಎಂಬ ಪದಕ್ಕೆ ಅಮಲಂ ಎಂಬಲ್ಲಿ ಅನ್ವಯ. ಭಾಷ್ಯದಲ್ಲಿರುವ ನಾರಾಯಣಪದಕ್ಕೆ ಮುಕ್ತಾಶ್ರಯತ್ವ ಎಂಬರ್ಥವನ್ನು ವಿವಕ್ಷಿಸಿ ಹೀಗೆ ವ್ಯಾಖ್ಯಾನಿಸಲಾಗಿದೆ. ಇದರಿಂದ ಭಾಷ್ಯದಲ್ಲಿರುವ ನಾರಾಯಣಪದಕ್ಕೆ ಮುಕ್ತಾಶ್ರಯತ್ವ ಎಂಬ ಅರ್ಥವು ವಿವಕ್ಷಿತವಾಗಿದೆ ಎಂದು ವ್ಯಾಖ್ಯಾನಿಸಿದಂತಾಯಿತು.

## ಹೀಗೆ ಸಂಕ್ಷೇಪವಾಗಿ ಹೇಳಿರುವುದು ಶ್ರೋತೃಗಳ ಅನುಕೂಲಕ್ಕಾಗಿ

**ಭಾವದೀಪಃ** – एवं वक्ष्यमाणार्थस्यादौ सूचनाच्छ्रोतृशेमुष्यनुकूलिता भवति। तथा वक्ष्यमाणदिशा ब्रह्मशब्दव्याख्यानपरनया तस्यैव नम्यत्वोपपादनपरतया चेदं पद्यं योज्यम् । ग्रन्थगौरवभयात् न प्रपञ्च्यते ।।१।।

ಮುಂದಿನ ಸಮಗ್ರ ಶಾಸ್ತ್ರದಲ್ಲಿರುವ ಪ್ರಮೇಯವನ್ನು ಮೊದಲೇ ಸಂಕ್ಷೇಪವಾಗಿ ಹೇಳುವುದರಿಂದ ಶ್ರೋತೃಗಳ ಬುದ್ಧಿಗೆ ಬಹಳ ಅನುಕೂಲವಾಗುತ್ತದೆ. ಮತ್ತು ಮುಂದೆ ಹೇಳುವಂತೆ ಬ್ರಹ್ಮಶಬ್ದದ ವ್ಯಾಖ್ಯಾನರೂಪವಾಗಿಯೇ ಸಮಗ್ರಶಾಸ್ತ್ರವು ಹೊರಟಿದೆ. ಇಂತಹ ಬ್ರಹ್ಮನೇ ನಮಸ್ಕಾರಕ್ಕೆ ಅರ್ಹನಾಗಿದ್ದಾನೆ. 'ಗುಣೈಃ ಸರ್ವೈರುದೀರ್ಣಮ್' ಇತ್ಯಾದಿ ನಾಲ್ಕು ವಿಶೇಷಣಗಳು ಆ ಬ್ರಹ್ಮಶಬ್ದದ ವ್ಯಾಖ್ಯಾನವನ್ನೇ ಮಾಡುತ್ತಿವೆ ಎಂದು ತಿಳಿಯಬೇಕು. ಗ್ರಂಥಗೌರವದ ಭಯದಿಂದ ಇಲ್ಲಿ ವಿವರಿಸುತ್ತಿಲ್ಲ.

ವಿವರಣೆ -

(೧)'ಬ್ರಹ್ಮ ಅಲಂ ವಂದೇ' 'ಬ್ರಹ್ಮನನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆಂದು ಅನ್ವಯ. ಇಲ್ಲಿ ಕರ್ತೃವಾಚಕಪದವನ್ನೇ ಹೇಳಿಲ್ಲವೆಂಬ ಪ್ರಶ್ನೆ ಬರುತ್ತದೆ. ಆದರೆ 'ಅಸ್ಮದ್ಯುತ್ತಮಃ' ಎಂಬ ಸೂತ್ರ ಏನು ಹೇಳುತ್ತದೆಂದರೆ - ಉತ್ತಮಪುರುಷದಲ್ಲಿ 'ಅಸ್ಮತ್' ಶಬ್ದವೇ ಉಪಪದವಾಗಿರುತ್ತೆ. ಅಸ್ಮತ್ ಶಬ್ದವು ಕೇಳಿಸಲಿ ಅಥವಾ ಬಿಡಲಿ ತದರ್ಥವು ವಿವಕ್ಷಿತವಾದರೆ ಸಾಕು ಉತ್ತಮಪುರುಷದಲ್ಲಿ ಅಸ್ಮತ್ ಶಬ್ದವು ಬರುತ್ತದೆ. ಆದ್ದರಿಂದ 'ಅಹಂ' ಎಂದು ಕರ್ತೃವಾಚಕಪದವನ್ನು ಹೇಳದಿದ್ದರೂ ಇಲ್ಲಿ ಇಟ್ಟುಕೊಳ್ಳಬೇಕು. 'ಶುದ್ಧಾನಂದೋರು' ಇತ್ಯಾದಿ ಪದ್ಯವು ಭಾಷ್ಯದ 'ಗುಣೈಸ್ಸರ್ವೈರುದೀರ್ಣಂ' ಎಂಬ ಮಂಗಳಶ್ಲೋಕವ್ಯಾಖ್ಯಾನ-ರೂಪವಾಗಿದೆ. ಅದು ಹೀಗೆ - 'ಗುಣೈಃ ಸರ್ವೈಃ ಉದೀರ್ಣಂ' ಎಂಬ ವಿಶೇಷಣವು ಮೊದಲನೆಯ ಅಧ್ಯಾಯದ ಅರ್ಥವನ್ನು ವಿವರಿಸುತ್ತದೆ.

(೧) ಶ್ರೀ ರಘೂತ್ತಮತೀರ್ಥಶ್ರೀಪಾದಂಗಳವರ ಭಾವಬೋಧ ಹಾಗೂ ಶರ್ಕರಾ ಶ್ರೀನಿವಾಸಾಚಾರ್ಯರ ವಾಕ್ಯಾರ್ಥಮಂಜರಿಯ ಆಧಾರದಲ್ಲಿ ವಿವರಣೆ ನೀಡಲಾಗಿದೆ.

## 'ಅಮಲಂ' ಪದದಿಂದ ಅದ್ವೈತ ನಿರಾಕರಣೆ

**ಭಾವದೀಪಃ** – ನನ್ವೇವಮುಕ್ತದಿಶಾ ಸವಿಶೇಷಂ ಮುಕುನ್ದಾಭಿಧಂ ಬ್ರಹ್ಮ ಚೇತ್ ತರ್ಹಿ –

ನಿರ್ವಿಶೇಷಂ ಪರಂ ಬ್ರಹ್ಮ ಸಾಕ್ಷಾತ್ ಕರ್ತುಮನೀಶ್ವರಾಃ ।
ಯೇ ಮನ್ದಾಸ್ತೇऽನುಕಮ್ಪ್ಯನ್ತೇ ಸವಿಶೇಷನಿರೂಪಣೈಃ ।।

ಇತ್ಯದ್ವೈತ್ಯುಕ್ತದಿಶಾ ಮನ್ದೋಪಾಸ್ಯಂ ಕಿಮ್? ನೇತ್ಯಾಹ – **ಅಮಲಮಿತಿ** ।।

ಸವಿಶೇಷನಾದ ಮುಕುಂದನನ್ನೇ ಬ್ರಹ್ಮ ಎಂದು ಹೇಳುತ್ತಿದ್ದೀರಿ. ಅದ್ವೈತಿಗಳೂ ಕೂಡ 'ಮಂದಜನರು ನಿರ್ವಿಶೇಷಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಅಸಮರ್ಥರು. ಸವಿಶೇಷಬ್ರಹ್ಮನ ನಿರೂಪಣೆಯಿಂದ ಆ ಮಂದಜನರು ಅನುಕಂಪಕ್ಕೆ ಅರ್ಹರಾಗಿದ್ದಾರೆ' ಎಂದು ಹೇಳುತ್ತಾರೆ. ನೀವು ಅದ್ವೈತಿಗಳು ಹೇಳುವ ಮಂದಜನರಿಂದ ಉಪಾಸ್ಯನಾದ ಬ್ರಹ್ಮನನ್ನು ಹೇಳುತ್ತಿರುವಿರಾ? ಎಂಬ ಶಂಕೆಯನ್ನು 'ಅಮಲಂ' ಎಂಬುದರಿಂದ ಪರಿಹರಿಸಿದ್ದಾರೆ.

## ಅಮಲ ಪದಕ್ಕೆ ಎರಡರ್ಥ

**ಭಾವದೀಪಃ** – **'ನ ವಿದ್ಯತೇ ಮಲಂ ಸಂಸಾರಾಖ್ಯಂ ಯಸ್ಮಾತ್ ತತ್ ಅಮಲಮ್, ಸಂಸಾರನಿವರ್ತಕಂ ಮುಮುಕ್ಷೂಪಾಸ್ಯಂ ನ ಮನ್ದೋಪಾಸ್ಯಮ್'** ಇತಿ ಯಾವತ್ । **'ಮಾಯಾಖ್ಯಮಲರಹಿತಮ್'** ಇತಿ ವಾऽರ್ಥಃ । **'ಅಮಲಮ್'** ಇತ್ಯಸ್ಯಾಲಮಮಲಮಿತಿ ವಾऽನ್ವಯಃ । ಏತಚ್ಚ ಭಾಷ್ಯಸ್ಥನಾರಾಯಣಪದಸ್ಯಮುಕ್ತಾಶ್ರಯತ್ವರೂಪಾರ್ಥ ಮಭಿಪ್ರೇತ್ಯೋಕ್ತಮ್।

'ನ ವಿದ್ಯತೇ ಮಲಂ ಯಸ್ಮಾತ್ ತತ್ ಅಮಲಂ', (ಸಂಸಾರವೆಂಬ ಮಲವು ಯಾವ ಬ್ರಹ್ಮನಿಂದ ಪರಿಹಾರವಾಗುತ್ತದೋ ಅಂತಹ ಬ್ರಹ್ಮನನ್ನು) ಎಂದರ್ಥ. ಇಂತಹ ಸಂಸಾರನಿವರ್ತಕನಾದ ಪರಬ್ರಹ್ಮನು ಮುಮುಕ್ಷುಗಳಿಂದ ಉಪಾಸ್ಯನಾಗಿದ್ದಾನೆ ಮಂದರಿಂದ ಉಪಾಸ್ಯನಾಗಿಲ್ಲ ಎಂದರ್ಥ. ಅಥವಾ ಮಾಯಾ ಎಂಬ ಮಲದಿಂದ ರಹಿತನು ಎಂದರ್ಥ. ಅಲಂ ಎಂಬ ಪದಕ್ಕೆ ಅಮಲಂ ಎಂಬಲ್ಲಿ ಅನ್ವಯ. ಭಾಷ್ಯದಲ್ಲಿರುವ ನಾರಾಯಣಪದಕ್ಕೆ ಮುಕ್ತಾಶ್ರಯತ್ವ ಎಂಬರ್ಥವನ್ನು ವಿವಕ್ಷಿಸಿ ಹೀಗೆ ವ್ಯಾಖ್ಯಾನಿಸಲಾಗಿದೆ. ಇದರಿಂದ ಭಾಷ್ಯದಲ್ಲಿರುವ ನಾರಾಯಣಪದಕ್ಕೆ ಮುಕ್ತಾಶ್ರಯತ್ವ ಎಂಬ ಅರ್ಥವು ವಿವಕ್ಷಿತವಾಗಿದೆ ಎಂದು ವ್ಯಾಖ್ಯಾನಿಸಿದಂತಾಯಿತು.

## ಹೀಗೆ ಸಂಕ್ಷೇಪವಾಗಿ ಹೇಳಿರುವುದು ಶ್ರೋತೃಗಳ ಅನುಕೂಲಕ್ಕಾಗಿ

**भावदीपः – एवं वक्ष्यमाणार्थस्यादौ सूचनाच्छ्रोतृशेमुष्यनुकूलिता भवति। तथा वक्ष्यमाणदिशा ब्रह्मशब्दव्याख्यानपरतया तस्यैव नम्यत्वोपपादनपरतया चेदं पद्यं योज्यम् । ग्रन्थगौरवभयात् न प्रपञ्च्यते ।।१।।**

ಮುಂದಿನ ಸಮಗ್ರ ಶಾಸ್ತ್ರದಲ್ಲಿರುವ ಪ್ರಮೇಯವನ್ನು ಮೊದಲೇ ಸಂಕ್ಷೇಪವಾಗಿ ಹೇಳುವುದರಿಂದ ಶ್ರೋತೃಗಳ ಬುದ್ಧಿಗೆ ಬಹಳ ಅನುಕೂಲವಾಗುತ್ತದೆ. ಮತ್ತು ಮುಂದೆ ಹೇಳುವಂತೆ ಬ್ರಹ್ಮಶಬ್ದದ ವ್ಯಾಖ್ಯಾನರೂಪವಾಗಿಯೇ ಸಮಗ್ರಶಾಸ್ತ್ರವು ಹೊರಟಿದೆ. ಇಂತಹ ಬ್ರಹ್ಮನೇ ನಮಸ್ಕಾರಕ್ಕೆ ಅರ್ಹನಾಗಿದ್ದಾನೆ. 'ಗುಣೈಃ ಸರ್ವೈರುದೀರ್ಣಮ್' ಇತ್ಯಾದಿ ನಾಲ್ಕು ವಿಶೇಷಣಗಳು ಆ ಬ್ರಹ್ಮಶಬ್ದದ ವ್ಯಾಖ್ಯಾನವನ್ನೇ ಮಾಡುತ್ತಿವೆ ಎಂದು ತಿಳಿಯಬೇಕು. ಗ್ರಂಥಗೌರವದ ಭಯದಿಂದ ಇಲ್ಲಿ ವಿವರಿಸುತ್ತಿಲ್ಲ.

ವಿವರಣೆ -

(೧)'ಬ್ರಹ್ಮ ಅಲಂ ವಂದೇ' 'ಬ್ರಹ್ಮನನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆಂದು ಅನ್ವಯ. ಇಲ್ಲಿ ಕರ್ತೃವಾಚಕಪದವನ್ನೇ ಹೇಳಿಲ್ಲವೆಂಬ ಪ್ರಶ್ನೆ ಬರುತ್ತದೆ. ಆದರೆ 'ಅಸ್ಮದ್ಯುತ್ತಮಃ' ಎಂಬ ಸೂತ್ರ ಏನು ಹೇಳುತ್ತದೆಂದರೆ - ಉತ್ತಮಪುರುಷದಲ್ಲಿ 'ಅಸ್ಮತ್' ಶಬ್ದವೇ ಉಪಪದವಾಗಿರುತ್ತೆ. ಅಸ್ಮತ್ ಶಬ್ದವು ಕೇಳಿಸಲಿ ಅಥವಾ ಬಿಡಲಿ ತದರ್ಥವು ವಿವಕ್ಷಿತವಾದರೆ ಸಾಕು ಉತ್ತಮಪುರುಷದಲ್ಲಿ ಅಸ್ಮತ್ ಶಬ್ದವು ಬರುತ್ತದೆ. ಆದ್ದರಿಂದ 'ಅಹಂ' ಎಂದು ಕರ್ತೃವಾಚಕಪದವನ್ನು ಹೇಳದಿದ್ದರೂ ಇಲ್ಲಿ ಇಟ್ಟುಕೊಳ್ಳಬೇಕು. 'ಶುದ್ಧಾನಂದೋರು' ಇತ್ಯಾದಿ ಪದ್ಯವು ಭಾಷ್ಯದ 'ಗುಣೈಸ್ಸರ್ವೈರುದೀರ್ಣಂ' ಎಂಬ ಮಂಗಳಶ್ಲೋಕವ್ಯಾಖ್ಯಾನ-ರೂಪವಾಗಿದೆ. ಅದು ಹೀಗೆ - 'ಗುಣೈಃ ಸರ್ವೈಃ ಉದೀರ್ಣಂ' ಎಂಬ ವಿಶೇಷಣವು ಮೊದಲನೆಯ ಅಧ್ಯಾಯದ ಅರ್ಥವನ್ನು ವಿವರಿಸುತ್ತದೆ.

(೧) ಶ್ರೀ ರಘೂತ್ತಮತೀರ್ಥಶ್ರೀಪಾದಂಗಳವರ ಭಾವಬೋಧ ಹಾಗೂ ಶರ್ಕರಾ ಶ್ರೀನಿವಾಸಾಚಾರ್ಯರ ವಾಕ್ಯಾರ್ಥಮಂಜರಿಯ ಆಧಾರದಲ್ಲಿ ವಿವರಣೆ ನೀಡಲಾಗಿದೆ.

## ಗುಣೈಸ್ಸರ್ವೈರುದೀರ್ಣಂ ಎಂದರೇನು?

ಇಲ್ಲಿರುವ ಗುಣಪದಕ್ಕೆ ಏನರ್ಥ? ತಾರ್ಕಿಕಾದಿಗಳು ಹೇಳುವಂತೆ ದುಃಖಾದಿಗಳನ್ನೂ ಗುಣಪದದಿಂದ ವಾಚ್ಯವೆನ್ನಬಾರದು. 'ನಿರನಿಷ್ಟೋ ನಿರವದ್ಯಃ' ಎಂಬ ಶ್ರುತಿಯು ಭಗವಂತನಲ್ಲಿ ಯಾವ ದೋಷವೂ ಇಲ್ಲವೆನ್ನುತ್ತಿದೆ. ಇದನ್ನೇ 'ದೋಷವರ್ಜಿತಮ್' ಎಂಬ ಮುಂದಿನ ವಿಶೇಷಣವು ಹೇಳುತ್ತದೆ. ಆದ್ದರಿಂದ ಸ್ವವಚನವಿರೋಧ ಬರುತ್ತದೆ. ಇನ್ನು ವೇದಾಂತಗಳು ಹೇಳುವಂತೆ ಸತ್ವರಜಸ್ತಮೋಗುಣಗಳು ಗುಣಪದವಾಚ್ಯವೆನ್ನಬೇಕು. ಆದರೆ 'ಕೇವಲೋ ನಿರ್ಗುಣಶ್ಚ' ಎಂಬ ಶ್ರುತಿಯು ಭಗವಂತನಲ್ಲಿ ಯಾವ ಪ್ರಾಕೃತಗುಣಗಳೂ ಇಲ್ಲವೆಂದು ಹೇಳುತ್ತಿದೆ. ಆದ್ದರಿಂದ ಗುಣಪದದ ಅರ್ಥವು ಜಟಿಲವಾಗಿಯೇ ಉಳಿಯುತ್ತದೆ.

ಮತ್ತು 'ಗುಣೈಃ ಸರ್ವೈರುದೀರ್ಣಮ್' ಗುಣವಿಶಿಷ್ಟನಾಗಿದ್ದಾನೆಂದು ಹೇಳಲಾಗಿದೆ. ಇದರಿಂದ ನಾರಾಯಣನಿಗೂ ಆವನಲ್ಲಿರುವ ಗುಣಗಳಿಗೂ ಭೇದವನ್ನು ಹೇಳಿದಂತಾಗುತ್ತದೆ. ಇದು ಶ್ರುತಿವಿರುದ್ಧ. 'ಗುಣಕ್ರಿಯಾದಯೋ ವಿಷ್ಣೋಃ ಸ್ವರೂಪಂ ನಾನ್ಯದಿಷ್ಯತೇ' ಎಂಬ ಶ್ರುತಿಯು ಭಗವಂತನಲ್ಲಿರುವ ಗುಣಕ್ರಿಯಾದಿಗಳಿಗೂ ಭಗವಂತನಿಗೂ ಅಭೇದವನ್ನು ಹೇಳುತ್ತಿದೆ.

ಮತ್ತೊಂದು ಪ್ರಶ್ನೆ - ಭಗವಂತನಿಗೆ ದೇಹವಿದೆಯೋ? ಇಲ್ಲವೋ? ಇದೆಯೆಂದರೆ ಮರಣಾದಿಗಳು ಬರಬೇಕಾಗುತ್ತದಾದ್ದರಿಂದ ('ಕರಣವಚ್ಚೇನ್ನ ಭೋಗಾದಿಭ್ಯಃ' 'ಅಂತವತ್ವಮ್' ಇತ್ಯಾದಿ ಸೂತ್ರಗಳಲ್ಲಿ ಹೇಳಿದಂತೆ) 'ದೋಷವರ್ಜಿತಮ್' ಎಂಬುದರಿಂದ ವಿರೋಧ ಬರುತ್ತದೆ. ಇಲ್ಲವೆಂದರೆ ದೇಹವಿದೆಯೆನ್ನುವ 'ವಿವೃಣುತೇ ತನೂಂ ಸ್ವಾಂ' ಎಂಬ ಶ್ರುತಿವಿರೋಧ ಬರುತ್ತದೆ. ಮತ್ತು ದೇಹವೇ ಇಲ್ಲವಾದಲ್ಲಿ ಜ್ಞಾನಸುಖಾದಿಗಳನ್ನು ಹೇಳಲು ಬಾರದ ಕಾರಣ ಸರ್ವಗುಣಪರಿಪೂರ್ಣತ್ವವನ್ನು ಹೇಳಲು ಹೇಗೆ ಸಾಧ್ಯ? ಅಂತೂ 'ಗುಣೈಸ್ಸರ್ವೈರುದೀರ್ಣಂ' ಎಂಬ ಆಚಾರ್ಯರ ಮಾತನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವಿದೆ. ಅದಕ್ಕಾಗಿಯೇ ಟೀಕೆಯಲ್ಲಿ 'ಶುದ್ಧಾನಂದೋರುಸಂವಿದ್ದ್ಯುತಿಬಲಬಹುಲೌದಾರ್ಯವೀರ್ಯಾದಿದೇಹವಮ್' ಎಂದು ಆಚಾರ್ಯರು ಹೇಳಿದ 'ಗುಣೈಸ್ಸರ್ವೈರುದೀರ್ಣಂ' ಎಂಬ ಮಾತನ್ನು ವಿವರಿಸುತ್ತಿದ್ದಾರೆ. ಈಗ ಹಿಂದಿನ ಯಾವ ಗೊಂದಲಗಳೂ ಬರುವುದಿಲ್ಲ.

## ನಾರಾಯಣನಲ್ಲಿರುವ ಗುಣಗಳು ಸರ್ವೋತ್ಕೃಷ್ಟವಾಗೂ ಅನಂತ

'ಶುದ್ಧ'ಶಬ್ದಕ್ಕೆ ಅಪ್ರಾಕೃತ ಎಂದರ್ಥ. (ಚಂದ್ರಿಕೆಯಂತೆ ಶುದ್ಧಶಬ್ದಕ್ಕೆ ಕೊನೆಯಿಲ್ಲದ್ದು, ಬೇರೆ ಯಾವುದಕ್ಕೂ ಕಡಿಮೆಯಿಲ್ಲದ್ದು ಎಂದರ್ಥ). ಇದಕ್ಕೆ ಆನಂದ, ಸಂವಿತ್, ದ್ಯುತಿ, ಬಲ, ಬಹುಲ ಎಲ್ಲದರಲ್ಲಿಯು ವಿಶೇಷಣವನ್ನಾಗಿ ಹೇಳಬೇಕು. 'ಉರು' ಶಬ್ದಕ್ಕೆ ಪೂರ್ಣ ಎಂದರ್ಥ. ಇದು ಜ್ಞಾನದಲ್ಲಿ ವಿಶೇಷಣವಾದಂತೆ ಬುದ್ಧಿಯಿಂದ ಬೇರ್ಪಡಿಸಿದ ಆನಂದಾದಿಗಳಲ್ಲಿಯೂ ವಿಶೇಷಣವಾಗುತ್ತದೆ. 'ಬಹುಲ' ಎಂದರೆ ಬಹಳ ಸಂಖ್ಯೆಯಿಂದ ಕೂಡಿದ್ದು ಎಂದರ್ಥ. ಇದು ಔದಾರ್ಯಾದಿಗಳಲ್ಲಿ ವಿಶೇಷಣವಾದಂತೆ ಬುದ್ಧಿಯಿಂದ ಬೇರ್ಪಡಿಸಿದಾಗ ಹಿಂದಿರುವ ಆನಂದಾದಿಗಳಲ್ಲಿಯೂ ವಿಶೇಷಣ-ವಾಗುತ್ತದೆ. ಈ ಎಲ್ಲ ಗುಣಗಳನ್ನು ಭಗವಂತನ ಶರೀರವೆಂದೂ ಭಗವಂತನ ಶರೀರವಾದರೂ ಅಪ್ರಾಕೃತವೆಂದು ಹೇಳಿದ್ದರಿಂದ ಹಿಂದಿನ ಶಂಕೆಗಳೆಲ್ಲ ಪರಿಹಾರವಾದವು.

## ದೋಷವರ್ಜಿತಮ್ ಎಂದರೇನು ?

'ದೋಷವರ್ಜಿತಮ್' ಎಂಬ ವಿಶೇಷಣವು ಎರಡನೆಯ ಅಧ್ಯಾಯದ ಅರ್ಥವನ್ನು ಹೇಳುತ್ತಿದೆ. ಇಲ್ಲಿರುವ ದೋಷಪದಕ್ಕೆ ಏನರ್ಥ? ಒಂದು ವೇಳೆ ಯಾವುದಾದರೂ ಕೆಲವು ದೋಷಗಳೆಂದರೆ ನಮ್ಮಲ್ಲಿಯೂ ದೋಷವರ್ಜಿತತ್ವ ಬರಬೇಕಾದೀತು. ಇನ್ನು 'ವರ್ಜಿತ'ಶಬ್ದಕ್ಕೆ ಏನರ್ಥ? ಪ್ರಾಗಭಾವ ಎಂದಾಗಲೀ ಪ್ರಧ್ವಂಸಾಭಾವ ಎಂದಾಗಲೀ ಹೇಳಿದರೆ ಮೊದಲು ಅಥವಾ ಆಮೇಲೆ ಭಗವಂತನಲ್ಲಿ ದೋಷಗಳು ಬರಬೇಕಾದೀತು. ಮತ್ತು ದೋಷವರ್ಜಿತಮ್ ಎಂಬ ಶಬ್ದಕ್ಕೆ ದೋಷಗಳಿರುವುದರಿಂದ ಹೇಯನಾಗಿದ್ದಾನೆಂಬ ಅರ್ಥವೂ ತೋರುತ್ತದೆ. ಆದ್ದರಿಂದ ಆಚಾರ್ಯರು ಹೇಳಿದ 'ದೋಷವರ್ಜಿತಮ್' ಎಂಬ ಮಾತಿನ ಅರ್ಥವೇನು?

ಈ ಪ್ರಶ್ನೆಗೆ ಉತ್ತರರೂಪವಾಗಿ 'ಚಿಂತಾಸಂತಾಪಲೇಪೋದ್ಭವಮೃತಿಮುಖರಾಶೇಷ ದೋಷಾತಿದೂರಮ್' ಎಂದು ಟೀಕೆಯಲ್ಲಿ ಹೇಳಿದ್ದಾರೆ.

'ಲೇಪ'ಶಬ್ದಕ್ಕೆ 'ಕರ್ಮಸಂಬಂಧ' ಎಂದರ್ಥ. ಚಿಂತಾಸಂತಾಪಗಳೇ ಪ್ರಧಾನವಾದ ಸಕಲದೋಷಗಳಿಂದ ಅತ್ಯಂತದೂರನಾಗಿದ್ದಾನೆಂದರ್ಥ. ಇಲ್ಲಿರುವ 'ಅಶೇಷ' ಮತ್ತು

'ಅತಿ'ಪದಗಳಿಂದ ಎಲ್ಲ ದೋಷಗಳಿಂದ ಅತ್ಯಂತದೂರನಾಗಿದ್ದಾನೆಂದು ತಿಳಿಯುತ್ತದೆ. ಇದರಿಂದ ಹಿಂದಿನ ಎಲ್ಲ ಶಂಕೆಗಳನ್ನೂ ಪರಿಹರಿಸಿದಂತಾಗುತ್ತದೆ.

## ಜ್ಞೇಯಮ್ ಎಂದರೇನು?

'ಜ್ಞೇಯಮ್' -- ಈ ವಿಶೇಷಣದಿಂದ ತೃತೀಯಾಧ್ಯಾಯದ ಅರ್ಥವನ್ನೇ ಸಂಗ್ರಹಿಸಿದ್ದಾರೆ. ಇಲ್ಲಿ ಜ್ಞಾನಸಾಧನವಾದದ್ದು ಯಾವುದು? ಶ್ರವಣವೆಂದು ಹೇಳಲಾಗದು. ವಿರೋಚನಾದಿಗಳು ಶ್ರವಣವನ್ನು ಮಾಡಿ ವಿಪರೀತಜ್ಞಾನವನ್ನೇ ಹೊಂದಿದ್ದಾರೆ. ಧ್ಯಾನವು ಸಹ ಜ್ಞಾನಸಾಧನವಾಗುವುದಿಲ್ಲ. ಮಾಂಡವ್ಯಾದಿ-ಋಷಿಗಳಿಗೆ ಧ್ಯಾನದಿಂದ ಅನರ್ಥವೇ ಆಗಿದೆ. ಹೀಗೆ ಮೋಕ್ಷಕ್ಕೆ ಬೇಕಾದ ಗಮನೋಪಾಯವೇ ಇಲ್ಲದ ಕಾರಣ ಚತುರ್ಥಾಧ್ಯಾಯದ ಅರ್ಥವಾದ ಗಮ್ಯತ್ವವೂ ಕೂಡುವುದಿಲ್ಲ.

ಈ ಪ್ರಶ್ನೆಗೆ ಉತ್ತರರೂಪವಾಗಿ ಟೀಕೆಯಲ್ಲಿ 'ಸದ್ಭಿರ್ವೈರಾಗ್ಯಭಕ್ತಿಶ್ರುತಿಮತಿನಿಯತ-ಧ್ಯಾನಜಜ್ಞಾನಯೋಗಾತ್ ಗಮ್ಯಂ' ಇತ್ಯಾದಿಯಾಗಿ ಹೇಳಿದ್ದಾರೆ. 'ಶ್ರುತಿ = ಶ್ರವಣ, ಮತಿಃ = ಮನನ, ನಿಯತಧ್ಯಾನಂ = ಸ್ವಯೋಗ್ಯೋಪಾಸನೆ (ನಿಯತಧ್ಯಾನಶಬ್ದಕ್ಕೆ ತೃತೀಯಪಾದದಲ್ಲಿ ಹೇಳಿದಂತೆ ಸರ್ವವೇದಾಂತಪ್ರತ್ಯಯಾಧಿಕರಣದಲ್ಲಿ ಯಥಾಶಕ್ತಿ ಸಕಲವೇದಗಳ ಶ್ರವಣಮನನಾದಿಗಳನ್ನು ಮಾಡಬೇಕೆಂದು, ಉಪಸಂಹಾರಾಧಿ-ಕರಣದಲ್ಲಿ ತಮಗೆ ಯೋಗ್ಯವಾದ ಉಪಾಸನೆಯನ್ನು ಮಾಡಬೇಕೆಂದು ಸ್ಪಷ್ಟಪಡಿಸಿದ್ದಾರೆ. ಇದರಿಂದ ಜ್ಞಾನವೇ ಸಾಕ್ಷಾತ್ಕಾರದ ಸಾಧನವೆಂದೂ ಕರ್ಮಾದಿ-ಗಳಲ್ಲವೆಂದೂ ತಿಳಿಯುತ್ತದೆ. ಚತುರ್ಥಪಾದದಲ್ಲಿ ಇದನ್ನೇ ಹೇಳಿದ್ದಾರೆ.), ಜ್ಞಾನಂ = ಸಾಕ್ಷಾತ್ಕಾರ ಇವುಗಳೇ ಉಪಾಯವಾಗಿ ಉಳ್ಳದ್ದು' ಎಂದರ್ಥ.

ವಿರೋಚನಾದಿಗಳು ಅಯೋಗ್ಯರಾಗಿದ್ದರಿಂದ ಜ್ಞಾನವನ್ನು ಪಡೆಯಲಿಲ್ಲ. ಮಾಂಡವ್ಯಾದಿ ಋಷಿಗಳು ಅಯೋಗ್ಯೋಪಾಸನೆ ಮಾಡಿದ್ದರಿಂದ ಜ್ಞಾನವನ್ನು ಪಡೆಯಲಿಲ್ಲ. ಆದ್ದರಿಂದ ಹಿಂದಿನ ಆಕ್ಷೇಪವಿಲ್ಲ. ಮೋಕ್ಷಕ್ಕೆ ಜ್ಞಾನವೆಂಬ ಉಪಾಯ-ವಿರುವುದರಿಂದ ಗಮ್ಯತ್ವವೂ ಉಪಪನ್ನವಾಗುತ್ತದೆ.

## ಬ್ರಹ್ಮನು ಮಾಯಾವಿಶಿಷ್ಟನಲ್ಲ

ಗಮ್ಯನಾದ ಬ್ರಹ್ಮನನ್ನು ಮಾಯಾವಾದಿಗಳು ಮಾಯಾವಿಶಿಷ್ಟನೆಂದು ಹೇಳುತ್ತಾರೆ. ಇವರನ್ನು ಖಂಡಿಸಲು 'ಅಮಲಂ' ಎಂಬ ವಿಶೇಷಣವನ್ನು ಹೇಳಿದರು. ಸಂಸಾರವೆಂಬ ಮಲವನ್ನು ಪರಿಹರಿಸುವವನು ಎಂದು ಇದರರ್ಥ. ಮಾಯಾವಾದಿಗಳು ಹೇಳುವ ಶಬಲಬ್ರಹ್ಮನಾದರೂ ಸಂಸಾರಮೋಚಕನಲ್ಲವೆಂದು ಅವರೇ ಹೇಳಿದ್ದಾರೆ.' ಇದನ್ನು ತಿಳಿಸುವುದಕ್ಕಾಗಿಯೇ 'ಮುಕುಂದಾಭಿಧಮ್' ಎಂದು ಹೇಳಿದರು. ತಾವು ಹೇಳಿದ ಅರ್ಥಗಳಲ್ಲೆಡೆ ಪ್ರಮಾಣವಿದೆ ಎನ್ನುತ್ತಾರೆ 'ವೇದಾಂತವೇದ್ಯಂ' ಎಂಬ ವಿಶೇಷಣದಿಂದ.

### ಟೀಕೆಯ ಪ್ರತಿಯೊಂದು ಪದಗಳಿಗೂ ಶ್ರುತಿ ಹಾಗೂ ಸೂತ್ರಪ್ರಮಾಣವಿದೆ

'ಆನಂದೋ ಬ್ರಹ್ಮ' (ತೈತ್ತಿರೀಯ) (ಬ್ರಹ್ಮನು ಆನಂದಸ್ವರೂಪಿ);

'ಜ್ಞಾನಾತ್ಮಕೋ ಬಲಾತ್ಮಕೋ' 'ಭಾರೂಪಃ ಸತ್ಯಕಾಮಃ' 'ದಾತುಃ ಪರಾಯಣಂ' 'ವೀರ್ಯಮನ್ನಾದ್ಯಂ' (ಜ್ಞಾನ, ಬಲ, ಸತ್ಯಕಾಮ, ಪರಾಕ್ರಮ ಮೊದಲಾದ ಗುಣಗಳಿಂದ ಕೂಡಿದ್ದಾನೆ);

'ಬೃಹಂತೋ ಹ್ಯಸ್ಮಿನ್ ಗುಣಾಃ' (ಎಲ್ಲಾ ಗುಣಗಳಿಂದ ತುಂಬಿರುವವನೇ ಬ್ರಹ್ಮ);

'ಆತ್ಮಾ ವಾऽರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' (ಬೃಹದಾರಣ್ಯಕ)

'ಯಮಪ್ಯೇತಿ ಭುವನಂ ಸಾಂಪರಾಯೇ' (ಎಲ್ಲಾ ಲೋಕಗಳು ಪ್ರಲಯಕಾಲದಲ್ಲಿ ಯಾರನ್ನು ಪ್ರವೇಶಿಸುತ್ತವೋ);

'ತರತಿ ಶೋಕಮಾತ್ಮವಿತ್' (ಆತ್ಮನನ್ನು ತಿಳಿದವನು ದುಃಖದಿಂದ ಪಾರಾಗುತ್ತಾನೆ);

ಇವೇ ಮೊದಲಾದ ಪ್ರಮಾಣಗಳನ್ನು ಇಲ್ಲಿ ತಿಳಿಯಬೇಕು.

ಅಥವಾ 'ವೇದಾಂತವೇದ್ಯಂ' ಎಂಬ ಮಾತಿಗೆ ಮತ್ತೊಂದು ಅರ್ಥ - ''ವೇದಗಳ ಅರ್ಥನಿರ್ಣಯವು ಯಾವ ಶಾಸ್ತ್ರದಿಂದ ಆಗುತ್ತದೋ ಅಂತಹ ಬ್ರಹ್ಮಮೀಮಾಂಸಾಶಾಸ್ತ್ರವೇ ವೇದಾಂತವೆನಿಸಿದೆ. ಇದರಿಂದ ತಿಳಿಯಲ್ಪಡುವ'' ಎಂದು. ಅದು ಹೀಗೆ -

'ಆನಂದಮಯೋಽಭ್ಯಾಸಾತ್' (೧/೧/೧೨) (= ಪೂರ್ಣಾನಂದ, ಪೂರ್ಣಜ್ಞಾನ)

'ಅನುಕೃತೇಸ್ತಸ್ಯ ಚ' (೧/೩/೨೨) = ದ್ಯುತಿ

'ಅತ್ತಾ ಚರಾಚರಗ್ರಹಣಾತ್' (೧/೨/೯) = ವೀರ್ಯ, ಬಲ (ಸರ್ವಸಂಹರ್ತೃತ್ವದಿಂದ ತಿಳಿಯುತ್ತದೆ)

'ಮುಕ್ತೋಪಸೃಪ್ಯ ವ್ಯಪದೇಶಾತ್' (೧/೩/೨) (ಮೋಕ್ಷದಾತೃತ್ವದಿಂದ ತಿಳಿಯುತ್ತದೆ).

'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' (೧/೧/೭) =

'ಗುಣಾದ್ವಾಽಽಲೋಕವತ್' (೨/೩/೨೬) = ದ್ಯುತಿಬಲಾದಿಗುಣ

'ರೂಪೋಪನ್ಯಾಸಾತ್' (೧/೨/೨೩); 'ಅನ್ಯಭಾವವ್ಯಾವೃತ್ತೇಶ್ಚ' (೧/೨/೨) 'ಅರೂಪವದೇವ' (೩/೨/೧೪) = ಅಪ್ರಾಕೃತದೇಹವತ್ವ;

'ಅಧಿಕಂ ತು ಭೇದನಿರ್ದೇಶಾತ್' (೨/೧/೨೩) = ಚಿಂತಾಸಂತಾಪಾದ್ಯಭಾವ

'ನ ಕರ್ಮಾವಿಭಾಗಾದಿತಿ ಚೇನ್ನ ಅನಾದಿತ್ವಾತ್' (೨/೧/೩೬) = ಕರ್ಮಲೇಪಾಭಾವ ಕರ್ಮಗಳಿಗೆ ಅಸ್ವಾತಂತ್ರ್ಯ ಹೇಳಿದ್ದರಿಂದ ತಿಳಿಯುತ್ತದೆ.

'ಅಸಂಭವಸ್ತು ಸತೋಽನುಪಪತ್ತೇಃ' (೨/೩/೯) = ಉತ್ಪತ್ಯಭಾವ

'ನಾತ್ಮಾಽಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ' (೨/೩/೧೭) 'ಸರ್ವಧರ್ಮೋಪಪತ್ತೇಶ್ಚ' (೨/೧/೩೪) (ಅತೋ ದೋಷಾಭಾವಃ) = ಮರಣಾಭಾವ

'ಅಸಾರ್ವತ್ರಿಕೀ' (೩/೪/೧೦) = ಜೀವರ ಯೋಗ್ಯತೆ

ತೃತೀಯಾಧ್ಯಾಯದ ಪ್ರಥಮಪಾದ = ವೈರಾಗ್ಯ, ದ್ವಿತೀಯಪಾದ = ಭಕ್ತಿ; ತೃತೀಯಪಾದ = ಶ್ರವಣ, ಮನನ, ನಿದಿಧ್ಯಾಸನಗಳು; ಚತುರ್ಥಪಾದ = ಜ್ಞಾನ

'ಪುರುಷಾರ್ಥೋಽತಃ ಶಬ್ದಾದಿತಿ ಬಾದರಾಯಣಃ' (೩/೪/೧) = ಜ್ಞಾನಕ್ಕೆ ಪುರುಷಾರ್ಥಪ್ರದತ್ವ

ಹೀಗೆ ಮಂಗಳಶ್ಲೋಕದಲ್ಲಿ ಹೇಳಿದ ಪ್ರತಿಯೊಂದು ವಿಶೇಷಣಗಳಿಗೂ ಶ್ರುತಿಪ್ರಮಾಣವಿದೆ. ಮತ್ತು ಸೂತ್ರಗಳೇ ಪ್ರಮಾಣಗಳಾಗಿವೆ. ಅವುಗಳಲ್ಲಿ ಹೇಳಿದಂತೆ ಬ್ರಹ್ಮನನ್ನು ತಿಳಿಯಬೇಕೆಂದರ್ಥ. ನಾರಾಯಣಶಬ್ದದ ಅರ್ಥವನ್ನೇ ಬ್ರಹ್ಮಶಬ್ದವು ಹೇಳುತ್ತಿದೆ.

## ಮೊದಲು ಸಂಕ್ಷೇಪಶಾಸ್ತ್ರಾರ್ಥ ಹೇಳಬೇಕು

ಹೀಗೆ ಆಚಾರ್ಯರು ಮಾಡಿದ ಮಂಗಳಶ್ಲೋಕವಿವರಣರೂಪವಾಗಿ ಟೀಕೆಯ ಮಂಗಳಶ್ಲೋಕವು ಹೊರಟಿದೆಯೆಂದು ಸಿದ್ಧವಾಯಿತು.

ಅಥವಾ ಮತ್ತೊಂದು ಬಗೆಯಲ್ಲಿ ಟೀಕೆಯ ಮಂಗಳಶ್ಲೋಕವನ್ನು ಚಿಂತಿಸಬಹುದು. 'ಸಂಕ್ಷೇಪವಿಸ್ತಾರಾಭ್ಯಾಂ ಹಿ ಪ್ರವದಂತಿ ಮನೀಷಿಣಃ' ಎಂಬಂತೆ ಜ್ಞಾನಿಗಳು ವಿಷಯವನ್ನು ಮೊದಲು ಸಂಕ್ಷೇಪವಾಗಿ ಅನಂತರ ವಿಶದವಾಗಿ ವಿವರಿಸುತ್ತಾರೆ. ಅದರಂತೆ ಟೀಕಾರಾಯರೂ ಕೂಡ ಆಚಾರ್ಯರ ಮಂಗಳಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳನ್ನು ನಾಲ್ಕು ಪದಗಳಿಂದ ಮೊದಲು ಸಂಕ್ಷೇಪವಾಗಿ ವ್ಯಾಖ್ಯಾನಿಸಿ; ಅನಂತರ 'ಶುದ್ಧಾನಂದೋರು' ಇತ್ಯಾದಿಯಾಗಿ ವಿವರಿಸುತ್ತಾರೆ. ಅದು ಹೀಗೆ - 'ಗುಣೈಃಸರ್ವೈರುದೀರ್ಣಂ' ಎಂಬುದನ್ನು ಸಂಗ್ರಹಿಸಿ 'ಬ್ರಹ್ಮ' ಎಂದಿದ್ದಾರೆ. 'ದೋಷವರ್ಜಿತಮ್' ಎಂಬುದನ್ನು 'ಅಮಲಮ್' ಎಂದು, 'ಜ್ಞೇಯಮ್' ಎಂಬುದನ್ನು 'ವೇದಾಂತವೇದ್ಯಮ್' ಎಂದು, 'ಗಮ್ಯಮ್' ಎಂಬುದನ್ನು 'ಮುಕುಂದಾಭಿಧಮ್' ಎಂದು ಸಂಗ್ರಹಿಸಿದ್ದಾರೆ. ಸಂಗ್ರಹಿಸಿದ ಬ್ರಹ್ಮಶಬ್ದದ ಅರ್ಥವನ್ನೇ 'ಶುದ್ಧಾನಂದೋರು' ಇತ್ಯಾದಿಯಾಗಿ, ಅಮಲಶಬ್ದದ ಅರ್ಥವನ್ನೇ 'ಚಿಂತಾಸಂತಾಪ' ಇತ್ಯಾದಿಯಾಗಿ, 'ವೇದಾಂತವೇದ್ಯಮ್' ಮತ್ತು 'ಮುಕುಂದಾಭಿಧಮ್' ಎಂಬ ಎರಡು ವಿಶೇಷಣಗಳ ಅರ್ಥವನ್ನೇ 'ಸದ್ಭಿರ್ವೈರಾಗ್ಯ' ಇತ್ಯಾದಿ ವಿಶೇಷಣದಿಂದ ವಿವರಿಸುತ್ತಿದ್ದಾರೆ.

ಅಥವಾ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸಬಹುದು. ಆಚಾರ್ಯರು ಹೇಳಿದ ಗುಣಪರಿಪೂರ್ಣತ್ವ, ದೋಷವರ್ಜಿತತ್ವ, ಜ್ಞೇಯತ್ವ, ಗಮ್ಯತ್ವಗಳನ್ನು ಟೀಕೆಯ ಶ್ಲೋಕದಲ್ಲಿ ಮೊದಲು ವ್ಯಾಖ್ಯಾನಿಸಿ ಅನಂತರ ನಾರಾಯಣಶಬ್ದದ ವ್ಯಾಖ್ಯಾನವನ್ನು ಬ್ರಹ್ಮ, ಅಮಲಂ, ಮುಕುಂದಾಭಿದಮ್, ವೇದಾಂತವೇದ್ಯಮ್ ಎಂಬ ನಾಲ್ಕು ಪದಗಳಿಂದ ವ್ಯಾಖ್ಯಾನಿಸಲಾಗಿದೆ. ಮುಂದೆ ಸಮರ್ಥಿಸುವಂತೆ ನಾರಾಯಣಶಬ್ದದಿಂದ ಗುಣಪೂರ್ಣತ್ವ, ನಿರ್ದೋಷತ್ವ, ಜ್ಞೇಯತ್ವ, ಗಮ್ಯತ್ವಗಳು ತಿಳಿಯುತ್ತಿವೆ. ವೇದಾಂತವೇದ್ಯತ್ವವನ್ನೂ ನಾರಾಯಣಪದದಿಂದಲೇ ತಿಳಿಯಬಹುದು - ದೋಷವಿಲ್ಲದ ವೇದಗಳು 'ನಾರಾ' ಎನಿಸಿವೆ. ಅವುಗಳಿಂದ ವೇದ್ಯನಾಗಿ ಆಶ್ರಯನಾದ್ದರಿಂದ ವೇದಾಂತವೇದ್ಯನಾಗಿದ್ದಾನೆ.

ಹೀಗೆ ಟೀಕೆಯ ಮಂಗಳಶ್ಲೋಕವನ್ನು ಮೂರು ಬಗೆಯಲ್ಲಿ ವ್ಯಾಖ್ಯಾನಿಸಬಹುದು. ಹೀಗೆ ಮೂರು ಬಗೆಯ ವ್ಯಾಖ್ಯಾನ ಮಾಡಿದ್ದರಿಂದ ಮತ್ತೊಂದು ಲಾಭವಾಯಿತು. 'ಚಿಂತಾಸಂತಾಪ' ಇತ್ಯಾದಿ ವಿಶೇಷಣದಿಂದ ಹೇಳಿದ್ದನ್ನೇ 'ಅಮಲಮ್' ಎಂಬುದರಿಂದಲೂ ಹೇಳಿದಂತಾಗಿ ಪುನರುಕ್ತಿ ಬರುತ್ತದೆಂಬ ಶಂಕಾಪಿಶಾಚಿಯೂ ಗರ್ಭಸ್ರಾವದಿಂದಲೇ ನಾಶವಾಯಿತು. ಮೂರು ಬಗೆಯ ವ್ಯಾಖ್ಯಾನದಲ್ಲಿಯೂ 'ಅಮಲಮ್'ಎಂಬ ಪದವು ವಿಶಿಷ್ಟವಾದ ಅರ್ಥವನ್ನು ಹೇಳುವುದರಿಂದ ಅತ್ಯಂತ ಸಾರ್ಥಕವಾಯಿತು. ಇಲ್ಲಿಗೆ ಪ್ರಥಮಪದ್ಯದ ವ್ಯಾಖ್ಯಾನ ಮುಗಿಯಿತು.

ವಿಶೇಷ ವಿಚಾರ - ಭಾಷ್ಯದಲ್ಲಿ 'ನಾರಾಯಣಂ ನತ್ವಾ' ಎಂದಿದೆ. ತತ್ವಪ್ರಕಾಶಿಕೆಯಲ್ಲಿ 'ಬ್ರಹ್ಮವಂದೇ' ಎಂದಿದೆ. ಇದರಿಂದ ಏನು ಗೊತ್ತಾಗುತ್ತದೆ? ಎಂದರೆ ಭಾಷ್ಯದ ಮಂಗಳಶ್ಲೋಕವು ನಾರಾಯಣಶಬ್ದಾರ್ಥವನ್ನು ವಿವರಿಸುವಂತೆ ನಾರಾಯಣ ಶಬ್ದಕ್ಕೆ ಸಮಾನವಾದ ಅರ್ಥವುಳ್ಳ ಬ್ರಹ್ಮಶಬ್ದದ ಅರ್ಥವನ್ನೂ ವಿವರಿಸುತ್ತದೆ. ಹೀಗೆ ತತ್ವಪ್ರಕಾಶಿಕೆಯ ಮಂಗಳಪದ್ಯವು ವ್ಯಾಖ್ಯಾನಿಸುತ್ತಿದೆಯೆಂದು ಸ್ಪಷ್ಟವಾಗುತ್ತದೆ.

ಬ್ರಹ್ಮಸೂತ್ರದ ಪ್ರಥಮಾಧ್ಯಾಯದಲ್ಲಿ ಭಗವಂತನಿಗೆ ಸಕಲಗುಣ-ಪರಿಪೂರ್ಣತ್ವವನ್ನು ಸಮರ್ಥಿಸಲಾಗಿದೆ. ಅದನ್ನು ಭಾಷ್ಯದ ಮಂಗಲಶ್ಲೋಕದಲ್ಲಿ 'ಗುಣೈಸ್ಸರ್ವೈರುದೀರ್ಣಂ' ಎಂಬ ವಿಶೇಷಣದಿಂದ ಹೇಳಲಾಗಿದೆ. ಇದರ ವಿವರಣೆಯನ್ನೇ ವ್ಯಾಖ್ಯಾನರೂಪವಾಗಿ 'ಶುದ್ಧಾನಂದೋರುಸಂವಿದ್ಯುತಿಬಲ-ಬಹುಲೌದಾರ್ಯವೀರ್ಯಾದಿದೇಹಂ' ಎಂಬುದಾಗಿ ಹೇಳಲಾಗಿದೆ.[೧] ಇಲ್ಲಿ ಆನಂದವನ್ನು 'ಶುದ್ಧ' ಎಂದಿದ್ದಾರೆ. ಇದರ ಅರ್ಥವೇನು? ಒಂದು ವೇಳೆ ದುಃಖಾದಿಗಳ ಸಂಪರ್ಕವಿಲ್ಲದ್ದೆಂಬ ಅರ್ಥ ಹೇಳಿದರೆ ಮುಂದಿನ 'ಚಿಂತಾದಿದೋಷಗಳಿಂದ ದೂರನಾಗಿದ್ದಾನೆ' ಎಂಬ ವಿಶೇಷಣದಿಂದಲೇ ಈ ಅರ್ಥ ಲಭಿಸುತ್ತದೆ. ಆದ್ದರಿಂದ ಶುದ್ಧಪದಕ್ಕೆ ಯಾವ ರೀತಿಯಾಗಿ ಅರ್ಥ ಮಾಡಬೇಕು? ಎಂದರೆ 'ಕೊನೆಯಿಲ್ಲದ್ದು ಬೇರೆ ಇನ್ನೊಂದಕ್ಕಿಂತ ಕಡಿಮೆಯಲ್ಲದ್ದು' ಎಂಬರ್ಥವನ್ನೇ ಮಾಡಬೇಕು. ಶುದ್ಧ ಎಂಬುದನ್ನು ಆನಂದ, ಸಂವಿತ್, ಬಲ, ಮುಂತಾದ ಗುಣಗಳಿಗೆ ಅನ್ವಯ ಮಾಡಬೇಕು. ಹೊರತು

(೧) ಶುದ್ಧ ಶಬ್ದಾರ್ಥವಿಚಾರ ಬಹಳ ಪ್ರಸಿದ್ಧವಾದದ್ದು. ಅನೇಕ ಟಿಪ್ಪಣಿಗಳ ಆಧಾರದಿಂದ ಹಾಗೂ ಹಿರಿಯ ವಿದ್ವಾಂಸರ ಸಹಕಾರದಿಂದ ಇಲ್ಲಿ ಶುದ್ಧಶಬ್ದಾರ್ಥವನ್ನು ವಿಮರ್ಶಿಸಲಾಗಿದೆ. ಇನ್ನೂ ಹೆಚ್ಚಿನ ವಿಚಾರ ಮಾಡಲು ಕೇವಲ ಇದೊಂದು ದಾರಿ.

ಮುಕುಂದನಿಗಾಗಲೀ ದೇಹಕ್ಕಾಗಲೀ ಅನ್ವಯ ಮಾಡಬಾರದು. ಹಾಗೇನಾದರೂ ಅನ್ವಯ ಮಾಡಿದಲ್ಲಿ 'ದೋಷಾತಿದೂರ' ಇತ್ಯಾದಿ ವಿಶೇಷಣಗಳು ವ್ಯರ್ಥವಾಗುತ್ತವೆ.

'ಆನಂದಾದೇಃ ಶುದ್ಧತ್ವಂ ನಾಮ ಸಾಂತತ್ವಸಾತಿಶಯತ್ವಾದಿರಾಹಿತ್ಯಮ್' ''ಆನಂದವು ಶುದ್ಧವೆಂದರೆ 'ಕೊನೆಯಿಲ್ಲದ್ದು ಇತರ ಯಾವುದೇ ಆನಂದಗಳಿಗೆ ಕಡಿಮೆಯಲ್ಲದ್ದು'' ಎಂದು ಚಂದ್ರಿಕೆಯ ಮಾತು.

ಶುದ್ಧ ಶಬ್ದವನ್ನು ಕೇಳಿದಾಗ ನಮಗೆ ಸಾಮಾನ್ಯವಾಗಿ ದೋಷವಿಲ್ಲದ್ದು ಎಂಬರ್ಥವೇ ತೋರುತ್ತದೆ. ಆದರೆ ಈ ಅರ್ಥಕ್ಕಿಂತ ವಿಭಿನ್ನವಾದ ಸ್ವರಸವಾದ ಅಪೂರ್ವವಾದ ಅರ್ಥವನ್ನು ಗ್ರಂಥಕಾರರು ಇಲ್ಲಿ ಹೇಳುತ್ತಿದ್ದಾರೆ. ಆದರೆ ಕೆಲವು ವ್ಯಾಖ್ಯಾನಕಾರರು 'ದುಃಖಾದಿದೋಷವಿಲ್ಲದ್ದು ಎಂಬರ್ಥವನ್ನೂ ಹೇಳಬಹುದು, ಚಂದ್ರಿಕೆಯಲ್ಲಿ ಹೇಳಿದ ಅರ್ಥವನ್ನೂ ಹೇಳಬಹುದು' ಎನ್ನುತ್ತಾರೆ. ಬೇರೆ ಕೆಲವರು ದುಃಖಾದಿದೋಷವಿಲ್ಲದ್ದು ಎಂಬರ್ಥವನ್ನು ಹೇಳಲು ಸಾಧ್ಯವೇ ಇಲ್ಲವೆನ್ನುತ್ತಾರೆ. ಈ ಎರಡು ಬಗೆಯ ವ್ಯಾಖ್ಯಾನಕಾರರ ಅಭಿಪ್ರಾಯವನ್ನು ಪ್ರಕೃತ ವಿಮರ್ಶಿಸಲಾಗಿದೆ.

'ಶುದ್ಧಾನಂದೋರುಸಂವಿತ್' ಇತ್ಯಾದಿ ಮಂಗಳಶ್ಲೋಕದಲ್ಲಿ ಭಗವಂತನ ಆನಂದವನ್ನು ಶುದ್ಧವೆನ್ನಲಾಗಿದೆ. ಇಲ್ಲಿ ಶುದ್ಧಶಬ್ದಕ್ಕೆ 'ದುಃಖಾದಿದೋಷವಿಲ್ಲದ್ದು' ಎಂದು ಅರ್ಥೈಸಿದರೆ ಮುಂದಿನ 'ಚಿಂತಾಸಂತಾಪ' ಇತ್ಯಾದಿ ವಿಶೇಷಣದಿಂದಲೇ ಇದು ತಿಳಿಯುವಾಗ. ಪುನಃ ಅದನ್ನೇ ಶುದ್ಧಶಬ್ದದಿಂದ ಹೇಳಿದರೆ, ಹೇಳಿದ್ದನ್ನೇ ಹೇಳಿದಂತಾಗಿ ಪುನರುಕ್ತಿದೋಷ ಬರುತ್ತದೆ. ಹಾಗಾಗಿ ಶುದ್ಧಶಬ್ದವೇ ವ್ಯರ್ಥವಾಗಬೇಕಾದೀತು. ಈ ದೋಷದ ಪರಿಹಾರಕ್ಕಾಗಿ ಗ್ರಂಥಕಾರರು 'ಆನಂದಾದೇಃ ಶುದ್ಧತ್ವಂ ನಾಮ ಸಾಂತತ್ವಸಾತಿಶಯತ್ವಾದಿರಾಹಿತ್ಯಮ್' ಎಂದು ಹೇಳುತ್ತಿದ್ದಾರೆ. 'ಚಿಂತಾಸಂತಾಪ' ಇತ್ಯಾದಿ ವಿಶೇಷಣದಿಂದ ಭಗವಂತನ ಆನಂದವು ದುಃಖಾದಿದೋಷಗಳಿಲ್ಲದ್ದೆಂದು ತಿಳಿಯುತ್ತದೆ. 'ಆನಂದಕ್ಕೆ ಕೊನೆಯಿಲ್ಲ ಇತರ ಯಾವುದೇ ಆನಂದಗಳಿಗೂ ಕಡಿಮೆಯಲ್ಲ' ಎಂಬರ್ಥವನ್ನು ಶುದ್ಧಶಬ್ದವು ತಿಳಿಸುತ್ತದೆ. ಹೀಗೆ 'ಚಿಂತಾಸಂತಾಪ' ಇತ್ಯಾದಿ ವಿಶೇಷಣಗಳು ಹೇಳದ ಹೊಸದೊಂದು ದೋಷದ ಅಸಂಪರ್ಕವನ್ನು ಶುದ್ಧಶಬ್ದವು ತಿಳಿಸುತ್ತದೆ. ಈಗ ಪುನರುಕ್ತಿಯು ಬರುವುದಿಲ್ಲ.

ಪುನರುಕ್ತಿಯು ನಮ್ಮ ಸಿದ್ಧಾಂತದಲ್ಲಿ ದೋಷವೇ ಅಲ್ಲ. ಅವನ ಆನಂದವೂ ಶುದ್ಧ . ಭಗವಂತನು ಶುದ್ಧವೆಂದು ಹೇಳಿದರೆ ಅಪೂರ್ವೋತ್ಪತ್ತಿಯೇ ಆಗುತ್ತದೆ, ಹೊರತು ಪುನರುಕ್ತಿಯಿಂದ ಯಾವ ಹಾನಿಯೂ ಆಗುವುದಿಲ್ಲ. ಆದ್ದರಿಂದ ಭಗವಂತನ ಆನಂದವು ದುಃಖಾಸಂಭಿನ್ನ ಎಂದರೆ ಏನು ತಪ್ಪು? ಇನ್ನು ಗ್ರಂಥಕಾರರು 'ಶುದ್ಧತ್ವಂ

ನಾಮ ಸಾಂತತ್ವಸಾತಿಶಯತ್ವಾದಿರಾಹಿತ್ಯಮ್' ಎಂದೇಕೆ ಹೇಳಿದರು? ಎಂದರೆ. 'ದುಃಖಾಸಂಭಿನ್ನ' ಎಂಬುದು ಒಂದು ಅರ್ಥ. 'ಸಾಂತತ್ವಸಾತಿಶಯತ್ವಾದಿರಾಹಿತ್ಯಮ್' ಎಂಬುದು ಇನ್ನೊಂದು ಅರ್ಥ. ಹೀಗೆ ವ್ಯಾಖ್ಯಾನಿಸಿದಾಗ ಯಾವ ಬಾಧಕವೂ ಇಲ್ಲವೆನ್ನುತ್ತಾರೆ ಭಾವಬೋಧಕಾರರು. ಈ ಎರಡೂ ವ್ಯಾಖ್ಯಾನಗಳಲ್ಲಿ ಆಪಾತತಃ ವಿರೋಧ ತೋರುತ್ತದೆ. ಸರಿಯಾಗಿ ವಿಮರ್ಶಿಸಿದರೆ ಇಬ್ಬರ ಅಭಿಪ್ರಾಯವು ಒಂದೇ ಆಗಿದೆ. ಹೇಗೆಂದರೆ ದುಃಖಾಸಂಭಿನ್ನತ್ವ ಶಬ್ದಕ್ಕೆ ದುಃಖವೈಯಧಿಕರಣ್ಯ ಎಂದರ್ಥ. ದುಃಖವೈಯಧಿಕರಣ್ಯವು ಎರಡುವಿಧ. ೧) ದುಃಖಾನಧಿಕರಣವೃತ್ತಿತ್ವಂ, ೨) ದುಃಖಾಧಿಕರಣಾವೃತ್ತಿತ್ವಮ್ ಎಂದು.

ರಾಯರು ದುಃಖಾನಧಿಕರಣಾವೃತ್ತಿತ್ವರೂಪವಾದ ದುಃಖಾಸಂಭಿನ್ನತ್ವವನ್ನು ವಿವಕ್ಷಿಸಿದ್ದಾರೆ. ಆದರೆ ಭಾವಬೋಧಕಾರರು ದುಃಖಾಧಿಕರಣ ಅವೃತ್ತಿತ್ವರೂಪದ ದುಃಖಾಸಂಭಿನ್ನತ್ವವನ್ನು ವಿವಕ್ಷಿಸಿದ್ದಾರೆ. ದುಃಖಕ್ಕೆ ಅಧಿಕರಣರಾದವರು ಬ್ರಹ್ಮರಿದೇವತೆಗಳು. ಅವರಲ್ಲಿ ಭಗವಂತನ ಆನಂದವು ಅವೃತ್ತಿಯಾಗಿದೆ. ಅಂದರೆ ಭಗವಂತನಲ್ಲಿರುವ ಅಪ್ರಾಕೃತ ಆನಂದವು ಉಳಿದ ಯಾವುದೇ ದೇವತೆಗಳಲ್ಲಿಯೂ ಬರಲಾರದು, ಎಂದಭಿಪ್ರಾಯ. ಆದ್ದರಿಂದ ಇಂತಹ ದುಃಖಾಸಂಭಿನ್ನತ್ವವನ್ನು ಹೇಳಿದರೆ ಪುನರುಕ್ತಿಗೆ ಅವಕಾಶವೇ ಇಲ್ಲ. ಇಂತಹ ದುಃಖಾಸಂಭಿನ್ನತ್ವಾರ್ಥವನ್ನು ಶುದ್ಧಶಬ್ದಕ್ಕೆ ಹೇಳಬಹುದು. 'ಸಾಂತತ್ವಸಾತಿಶಯತ್ವಾದಿ-ರಾಹಿತ್ಯಂ' ಎಂಬ ಮತ್ತೊಂದು ಅರ್ಥವನ್ನೂ ಸಹ ಹೇಳಬಹುದು. ಈಗ ಯಾವ ದೋಷವೂ ಬರುವುದಿಲ್ಲವೆನ್ನುತ್ತಾರೆ ಭಾವಬೋಧಕಾರರು. ಹೀಗೆ ಬೇರೆ ಬೇರೆ ಅರ್ಥವನ್ನು ವಿವಕ್ಷಿಸಿದಾಗ ಎರಡೂ ವ್ಯಾಖ್ಯಾನಗಳಲ್ಲಿ ಪರಸ್ಪರವಿರೋಧವು ಬರುವುದಿಲ್ಲ

ಕೆಲವು ಅರ್ವಾಚೀನವಿದ್ವಾಂಸರು ಪ್ರಕಾಶದಲ್ಲಿರುವ ''ತತ್ರ ಯದಿ ಶುದ್ಧತ್ವಂ ದುಃಖಾಸಂಭಿನ್ನತ್ವಮ್ ತದಾ ಚಿಂತಾದಿದೋಷದೂರಮಿತ್ಯನೇನ ಗತಾರ್ಥಮತ ಆಹ ಆನಂದಾದೇರಿತಿ'' ಎಂಬ ವಾಕ್ಯವನ್ನೇ ಪ್ರಕ್ಷಿಪ್ತ ಎನ್ನುತ್ತಾರೆ. ಏಕೆಂದರೆ ನಮ್ಮ ಸಿದ್ಧಾಂತದಲ್ಲಿ ಪುನರುಕ್ತಿಯನ್ನು ದೋಷವೆಂದು ಪರಿಗಣಿಸಿಲ್ಲ. ಭಗವಂತನನ್ನು ಎಷ್ಟು ಬಾರಿ ಪ್ರಶಂಸಿಸಿದರೂ ಅದರಿಂದ ಪುಣ್ಯವೇ ಅಧಿಕವಾಗುತ್ತದೆ. ಮತ್ತು ಪುನರುಕ್ತಿಯನ್ನು ದೋಷವೆಂದು ಅಂಗೀಕರಿಸಿದರೂ ಅದರ ಪರಿಹಾರವು ಅಸಾಧ್ಯ. ಏಕೆಂದರೆ ಸಾಂತತ್ವಸಾತಿಶಯತ್ವವೂ ಸಹ ಒಂದು ದೋಷವೇ ಆಗಿದೆ. ಈ ದೋಷವು 'ಚಿಂತಾಸಂತಾಪ' ಇತ್ಯಾದಿ ವಿಶೇಷಣದಿಂದಲೇ ಭಗವಂತನಲ್ಲಿ ಇಲ್ಲವೆಂದು ತಿಳಿಯುತ್ತದೆ. ಏಕೆಂದರೆ ಯಾವ ದೋಷವೂ ಭಗವಂತನಲ್ಲಿಲ್ಲವೆಂದು ಹೇಳಿದಾಗ ಸಾಂತತ್ವಾದಿದೋಷಗಳು ಇಲ್ಲವೆಂದು ಅರ್ಥಾತ್ ಸಿದ್ಧವಾಗುತ್ತದೆ. ಪುನಃ

ಶುದ್ಧ ಶಬ್ದದಿಂದ ಆದನ್ನೇ ಹೇಳುವ ಅವಶ್ಯಕತೆ ಇಲ್ಲ. ಆದ್ದರಿಂದ ಈ ವಾಕ್ಯವನ್ನು ಪ್ರಕ್ಷಿಪ್ತವೆನ್ನುವರು.

ಆದರೆ ಇವರ ಈ ವಿಚಾರವನ್ನು ವಿಮರ್ಶಿಸಬೇಕು. ಏಕೆಂದರೆ ತತ್ವಪ್ರಕಾಶಿಕೆಯ ಭಾವದೀಪದಲ್ಲಿಯೂ ಸಹ ಇದೇ ಮಾತು ಕಾಣಿಸುತ್ತಿರುವಾಗ ಎರಡನ್ನೂ ಪ್ರಕ್ಷಿಪ್ತವೆಂದು ಹೇಳುವುದು ಸಮಂಜಸವಲ್ಲ. ಹೊರತಾಗಿ ಹಿಂದೆ ಹೇಳಿದ ಸಮಾಧಾನವನ್ನೇ ಅನುಸಂಧಾನ ಮಾಡಿಕೊಳ್ಳಬೇಕು. 'ಚಿಂತಾಸಂತಾಪ' ಇತ್ಯಾದಿ ಮಾತುಗಳಿಂದ ದುಃಖಾದಿದೋಷಗಳಿಲ್ಲವೆಂದು ತಿಳಿಯುತ್ತದೆ. ಆದರೆ 'ಸಾಂತತ್ವಸಾತಿಶಯತ್ವ' ಎಂಬ ದೋಷವನ್ನು ಇಲ್ಲವೆಂದು ಸ್ಪಷ್ಟವಾಗಿ ಹೇಳಿಲ್ಲ. ಆದನ್ನು ಶುದ್ಧಶಬ್ದವು ಸ್ಪಷ್ಟವಾಗಿ ಹೇಳುತ್ತಿದೆ. ಅಥವಾ 'ಭಗವಂತನ ಆನಂದವು ದೋಷವಿಲ್ಲದ್ದು' ಎಂದು ಶುದ್ಧ ಶಬ್ದವು ಹೇಳುತ್ತದೆ. ಭಗವಂತನಲ್ಲಿ ಯಾವುದೇ ದೋಷಗಳಿಲ್ಲ ವೆಂದು 'ಚಿಂತಾಸಂತಾಪ' ಇತ್ಯಾದಿ ವಿಶೇಷಣಗಳು ಹೇಳುತ್ತವೆ. (ವಿಶೇಷವನ್ನು ಅಂಗೀಕರಿಸಿರುವುದರಿಂದ) ಅಥವಾ ಸಂಸಾರಿಗಳಲ್ಲಿ ಯಾವ ಆನಂದವಿದೆಯೋ ಆದು ದುಃಖಾದಿದೋಷಗಳಿಂದ ಕೂಡಿರುತ್ತದೆ. ಆದರೆ ಭಗವಂತನಲ್ಲಿರುವ ಆನಂದವು ಅಂತಹದ್ದಲ್ಲವೆಂದು ಶುದ್ಧಶಬ್ದವು ಹೇಳುತ್ತದೆ. ಸಂಸಾರಿಗಳಿಗೆ ರೋಗರುಜಿನಾದಿ ದುಃಖಗಳಿವೆ. ಇಂತಹ ದುಃಖಗಳು ಭಗವಂತನಲ್ಲಿಲ್ಲವೆಂದು 'ಚಿಂತಾಸಂತಾಪ' ಇತ್ಯಾದಿ ವಿಶೇಷಣಗಳು ಹೇಳುತ್ತವೆ. ಹೀಗೆ ದುಃಖಮಿಶ್ರಿತವಾದ ಆನಂದವು ದೇವರಿಗಿಲ್ಲ, ದುಃಖವೂ ಭಗವಂತನಿಗಿಲ್ಲವೆಂಬ ವ್ಯತ್ಯಾಸವನ್ನು ಎರಡು ಪ್ರತ್ಯೇಕ ವಿಶೇಷಣಗಳಿಂದ ನಾವು ತಿಳಿಯಬಹುದು. ಹೀಗೆ ಹೇಳಿದಾಗ ಯಾವುದೇ ರೀತಿಯಾದ ವೈಯರ್ಥ್ಯದೋಷವು ಬರುವುದಿಲ್ಲ. ರಾಯರ ಮಾತೂ ಸಹ ಈಗ ಪ್ರಕ್ಷಿಪ್ತವಾಗುವುದಿಲ್ಲ. ಭಾವಬೋಧಕ್ಕೂ, ಪ್ರಕಾಶಕ್ಕೂ ವಿರೋಧವೂ ಸಹ ಬರುವುದಿಲ್ಲ. ಇನ್ನೂ ಹೆಚ್ಚಿನ ವಿಚಾರವನ್ನು ಜ್ಞಾನಿಗಳು ವಿಚಾರ ಮಾಡಬೇಕು.(೧)

(೧) ಭಾವರತ್ನಕೋಶಕಾರರು ವಿಮರ್ಶಿಸಿದ ಶುದ್ಧತ್ವ ಪರಿಷ್ಕಾರ ಬಲು ಸ್ವರಸ. ನೇರವಾಗಿ ಇದನ್ನು ಓದಿಯೇ ಸ್ವಾರಸ್ಯ ಅನುಭವಿಸಬೇಕು.

एवं चात्रानन्दस्य संविदो द्युतेर्बलस्यौदार्यस्य वीर्यस्यादिशब्दगृहीतानां शौर्यधैर्यसौन्दर्य-सौकुमार्यमाधुर्यगाम्भीर्यचातुर्यकारुण्यतारुण्यादीनां च शुद्धत्वं विशेषणम् । शुद्धत्वं च शुचित्वम्, केवलत्वं इतरानन्दसंविदादाविव दोषविशेषसम्मिश्नत्वाभावः । दोषाश्च सान्तत्वसातिशयत्वसादित्वसवृद्धिक्षयवत्वोत्पत्स्यमानदुःखाज्ञानादिस्वाम्यनुभवगोचरता-योग्यत्वास्फुटत्वादयः । तत्रानन्दे ह्यसान्तत्वासादित्वविवक्षया प्राकृतवैषयिकानन्दात् उत्पत्स्यामानदुःखस्वाम्यनुभवगोचरत्वाभावविवक्षयाह्यप्राकृतसौषुप्तिकानन्दात् दुःखस्वाम्यनुभव-

गोचरतायोग्यत्वाभावसवृद्धिक्षयत्वाभावविवक्षया मुक्तब्रह्मादिवीवस्वरूपानन्दात् अतिशयत्वाति-स्फुटत्वविवक्षया रमानन्दाच्च वैशिष्ट्यं विभावितम् । उरुशब्दो विपुलार्थस्सन् स्वपरगतशेष-विशेषविषयकत्वरूपवैपुल्यमगाधत्वं संविच्छब्दितज्ञानस्य आह । द्युतेरुरुत्वं सकलप्रकाशकत्व-मन्यनिष्ठद्युतिनियामकत्वं च । बलस्योरुत्वमपरिच्छिन्नत्वं, परबलाभिभावकत्वं, बलदेवतादि-निष्ठबलनियामकत्वं परबलपरिभाव्यत्वाभावश्चेति ज्ञातव्यम् । ऊर्णतेर्भूयोऽवयवत्वेन स्वाधारदेशमाच्छादयति व्याप्नोतीति । 'ऊर्णञ् आच्छादने' इत्यत 'ऊर्णोतेर्नु लोपश्च' इत्यनुवृत्तौ 'महति ह्रस्वश्च' इति कुप्रत्ययः इति वैय्याकरणैर्व्युत्पादितत्वात् । तदिदमुरुत्वं सान्ततत्वसाततिशयत्वसादित्वाज्ञानादिस्वाम्यनुभवगोचरतायोग्यत्वसवृद्धिक्षयत्वादिदोषरहित-रूपात् शुद्धत्वादन्यदेव संविदि द्युतौ बले च विवक्षितम् । औदार्यवीर्यादिविशेषणसमर्पको बहुलशब्दश्च बृंहते वर्धत इति बहु । बहून् लात्यादत्ते 'ला आदाने' 'आतोऽनुपसर्गे कः' इति कप्रत्यये निष्पन्नः प्रभूतार्थः । प्रभूतत्वं च प्रचुरत्वापरपर्यायं सान्तत्वादिदोषरहितत्वलक्षणात् शुद्धत्वात् उक्तोरुत्वाच्चान्यदेव' इति चन्द्रिकाभिप्रायः आनन्दोरु-संवित्युतिबलबहुलौदार्य-वीर्याणि आदयो येषाम् इति विग्रहः । ततः शुद्धाश्च ते आनन्दवीर्यादयश्चेति विग्रहः । वीर्यादीत्यनन्तरं गुणशब्दः संयोजनीयः । वीर्यादिगुणा एव देहो यस्य तत्तथेति व्याख्येयम् । तथा च अनुव्याख्याने 'निखिलपूर्णगुणैकदेहम्' इति । अनेन चेदं निरस्तम् । नारायणस्य देहभावे तस्य बुद्धावनारूढस्य वन्दनकर्मत्वानुपपत्तिः । संविदादिगुणायोगश्च । देहसद्भावे च दुःखाज्ञानादिदोषानुसङ्गतिरिति । अस्त्येव नारायणस्य देहः । तेन वन्दनकर्मत्वसंविदादि-गुणोदीर्णत्वोपपत्तिः । तस्य देहस्यानन्दसंविदादिगुणमात्रत्वेन दुःखाज्ञानाद्यननुषङ्गश्चेति तात्पर्यात् । 'अरूपवदेव हि तत्प्रधानत्वात्' इत्यत्र प्राकृतदेहवत्वं प्रतिषिध्य अप्राकृतदिव्यमङ्गलविग्रहशालित्वम् 'आह च तन्मात्रम्' 'दर्शयति चाथो अपि स्मर्यते' इति सूत्राभ्यां वक्ष्यति च भगवान् सूत्रकारः । यद्यपि 'आनन्दमयोऽभ्यासात्' इति समन्वयाध्यायादिमसूत्रानुसारात् 'पूर्णानन्दः' इति संक्षेपभाष्याद्यानुगुण्याच्च पूर्णानन्दोरुसंविदिति वक्तव्यम् । तथापि रमानन्दे मुक्तानन्दे च पूर्णत्वमस्तीति तद्वैलक्षण्यं भगवदानन्दे न सिद्धचेदित्यतः शुद्धत्वेनानन्दादिर्विशेषितः । रमानन्दादेश्च सातिशयत्वास्फुटत्वादिकलुषितत्वेन शुद्धत्वाभावात् तद्व्यावृत्तिरिति भावेनैवमुक्तम् । अत्र सर्वापेक्षितानन्दप्रदोपासना - गोचरानन्दस्य 'आनन्दमयोऽभ्यासात्' इति समन्वयाध्यायादिमसूत्रे सूत्रकृतोपात्तत्वात् स एवादौ गृहीतः । सोऽप्यनुभवपदवीमनारूढो न पुरुषार्थ इति तदनुभवोऽपि साधकलिप्सागोचरः।

'ಶುದ್ಧಾನಂದೋರುಸಂವಿದ್ ದ್ಯುತಿಬಲಬಹುಲೌರ್ದಾರ್ಯವೀರ್ಯಾದಿದೇಹಮ್' ಎಂಬಲ್ಲಿ ಸಮಾಸ - ಶುದ್ಧತ್ವವನ್ನು ಬ್ರಹ್ಮನಲ್ಲಿ ವಿಶೇಷಣ ಮಾಡಿದರೆ 'ಆನಂದಾದಿಃ ದೇಹಃ ಯಸ್ಯಸಃ ಆನಂದಾದಿದೇಹಃ ಶುದ್ಧಶ್ಚಾಸೌ ಆನಂದಾದಿದೇಹಶ್ಚ ಶುದ್ಧಾನಂದಾದಿದೇಹಃ' ಎಂದು ವಿಗ್ರಹ, ಆದರೆ 'ದೋಷಾತಿದೂರಂ' ಇತ್ಯಾದಿ ವಿಶೇಷಣದಿಂದಲೇ ಬ್ರಹ್ಮನು ಶುದ್ಧನೆಂದು ತಿಳಿಯುವಾಗ ಪುನಃ ಇಲ್ಲಿ ಅದನ್ನೇ ಹೇಳಿದರೆ ವೈಯರ್ಥ್ಯದೋಷ ಬರುತ್ತದೆ.

ಇನ್ನು ಶುದ್ಧತ್ವವನ್ನು ದೇಹದಲ್ಲಿ ವಿಶೇಷಣ ಮಾಡಿದರೆ; 'ಆನಂದಾದಿಃ ದೇಹಃ ಯಸ್ಯ ಸಃ ಆನಂದಾದಿದೇಹಃ; ಶುದ್ಧಃ ಆನಂದಾದಿದೇಹಃ ಯಸ್ಯ ಸಃ' ಎಂದು ವಿಗ್ರಹ. ಆದರೆ ದೇಹವು ಆನಂದರೂಪವೆಂದು ಹೇಳುವುದರಿಂದಲೇ ಶುದ್ಧವೆಂದು ತಿಳಿಯುತ್ತದೆ. ಪುನಃ ಹೇಳಿದ್ದನ್ನೇ ಹೇಳಿದಂತಾಗುತ್ತದೆಂದು ಪುನರುಕ್ತಿ ತಪ್ಪಿದ್ದಲ್ಲ. ಅದಕ್ಕೋಸ್ಕರ ಆನಂದವೇ ಮೊದಲಾದ ಎಲ್ಲ ಗುಣಗಳಲ್ಲಿಯೂ ಶುದ್ಧತ್ವವನ್ನು ವಿಶೇಷಣವನ್ನಾಗಿ ಹೇಳಬೇಕು. 'ಶುದ್ಧಃ ಆನಂದಾದಿಃ ಯಸ್ಯ ಸಃ' ಎಂದು; ಯಾವ ರೀತಿಯಾಗಿ ಜ್ಞಾನಾದಿಗಳಲ್ಲಿ ಉರುತ್ವಾದಿಗಳು ವಿಶೇಷಣವಾಗಿವೆಯೋ ಆದರಂತೆ ಈ ಶುದ್ಧತ್ವವು ದುಃಖಾಸಂಭಿನ್ನತ್ವರೂಪವಲ್ಲ. 'ದೋಷಾತಿದೂರ' ಎಂಬ ವಿಶೇಷಣದಿಂದಲೇ ಆ ವಿಷಯವು ತಿಳಿದಿದೆ. ಆದ್ದರಿಂದ 'ಸಾಂತತ್ವಸಾತಿಶಯತ್ವ-ರಾಹಿತ್ಯರೂಪ'ವಾದದ್ದೆಂದು ಹೇಳಬೇಕು. ಭಗವಂತನ ಜ್ಞಾನವು ಸಕಲವಸ್ತು ವಿಷಯಕವಾಗಿದೆಯೆಂದು ಉರುತ್ವಾದಿ ವಿಶೇಷಣಗಳಿಂದ ತಿಳಿಯುತ್ತದೆ. ಆದರೆ 'ಕೊನೆಯಿಲ್ಲದ್ದು ಇತರ ಯಾವುದೇ ಆನಂದಗಳಿಗೆ ಕಡಿಮೆ ಇಲ್ಲದ್ದು' ಎಂಬುದನ್ನೂ ಶುದ್ಧತ್ವ ವಿಶೇಷಣದಿಂದಲೇ ತಿಳಿಯಬೇಕು. ಇಂತಹ ಶುದ್ಧತ್ವವು ಪ್ರತಿಯೊಂದು ಗುಣಗಳಲ್ಲಿಯೂ ವಿಶೇಷಣವಾಗುತ್ತದೆ. ಹೀಗೆ 'ಶುದ್ಧಾನಂದೋರು' ಎಂಬಲ್ಲಿ ಹೇಳಿರುವ ಶುದ್ಧಶಬ್ದವು ಅನೇಕವಿಧದಲ್ಲಿ ಸಾರ್ಥಕವಾಗುತ್ತದೆ.

ಶುದ್ಧತ್ವವನ್ನು ಬ್ರಹ್ಮನಿಗೆ ವಿಶೇಷಣಮಾಡಿದರೆ ಹೀಗೆ ವಿಗ್ರಹ - 'ಆನಂದಾದಿಃ ದೇಹಃ ಯಸ್ಯಸಃ ಆನಂದಾದಿದೇಹಃ ಶುದ್ಧಶ್ಚಾಸೌ ಆನಂದಾದಿದೇಹಶ್ಚ ಶುದ್ಧಾನಂದಾದಿದೇಹಃ'

---

तल्लिप्सा च ज्ञानवत्त्वोपासनमन्तरा न पूर्यत इति तल्लाभाय संविदोक्तिः । एवमन्योक्ति-प्रयोजनमूह्नीयम् । शुद्धत्वमुरुत्वं बहुलत्वं च पूर्वत्रोत्तरत्र च आकर्षानुकर्षाभ्यामानन्दादि-सर्वगुणविशेषणमित्याहुः । अनेन प्रथमाध्याय - लब्धानन्तनिरतिशयानन्दज्ञानादिगुणमय-विग्रहशालित्वं गुणैस्सर्वैरुदीर्णामिति भाष्याभि-संहितं विवृतम्'' इति ।

जिज्ञासाधिकरण (೧-೧-೧)

ಎಂದು. ಆದರೆ 'ದೋಷಾತಿದೂರಂ' ಇತ್ಯಾದಿ ವಿಶೇಷಣದಿಂದಲೇ ಬ್ರಹ್ಮನು ಶುದ್ಧನೆಂದು ತಿಳಿಯುತ್ತಾನೆ. ಪುನಃ ಇಲ್ಲಿ ಅದನ್ನೇ ಹೇಳಿದರೆ ವೈಯರ್ಥ್ಯದೋಷ ಬರುತ್ತದೆ.

ದ್ವಿತೀಯಾಧ್ಯಾಯದಲ್ಲಿ ಭಗವಂತನಿಗೆ ಸಕಲದೋಷವಿವರ್ಜಿತತತ್ವವನ್ನು ಸಮರ್ಥಿಸಿದ್ದಾರೆ. ಅದನ್ನು ಆಚಾರ್ಯರು 'ದೋಷವರ್ಜಿತಮ್' ಎಂದು ಸಂಗ್ರಹಿಸಿದ್ದಾರೆ. ಇದನ್ನೇ ಟೀಕೆಯಲ್ಲಿ 'ಚಿಂತಾಸಂತಾಪಲೇಪೋದ್ಭವಮ್ಯತಿಮುಖಿರಾಶೇಷದೋಷಾತಿದೂರವಮ್' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. 'ಚಿಂತಾಸಂತಾಪಲೇಪ' ಎಂಬಲ್ಲಿ ಲೇಪ ಪದವು ಬೇಡ. ಏಕೆಂದರೆ ಚಿಂತಾಸಂತಾಪ ಮೊದಲಾದ ದೋಷಗಳಿಂದ ದೂರನಾಗಿದ್ದಾನೆಂದು ಹೇಳುವುದರಿಂದಲೇ ಅವುಗಳ ಸಂಬಂಧವಿಲ್ಲವೆಂದು ತಿಳಿಯುತ್ತದೆ. ಪುನಃ ಲೇಪ ಪದವು ಅನಾಶ್ಯಕ. ಈ ಪ್ರಶ್ನೆಗೆ ಚಂದ್ರಿಕೆಯಲ್ಲಿ ವ್ಯಾಸತೀರ್ಥರು 'ಲೇಪಃ = ಪುಣ್ಯಪಾಪಸಂಬಂಧಃ' ಎಂದು ಉತ್ತರಿಸುತ್ತಿದ್ದಾರೆ. ಒಂದು ವೇಳೆ ಇಲ್ಲಿ ಲೇಪ ಶಬ್ದವು ಚಿಂತಾಸಂತಾಪಗಳ ಸಂಬಂಧವನ್ನು ಹೇಳುತ್ತಿದ್ದರೆ ನಿಮ್ಮ ಆಕ್ಷೇಪಕ್ಕೆ ಅವಕಾಶವಿರುತ್ತಿತ್ತು ಆದರೆ ಪುಣ್ಯ ಪಾಪಗಳ ಸಂಬಂಧವೆಂಬ ಬೇರೆ ದೋಷವನ್ನೇ ಹೇಳುತ್ತದೆ. ಆದ್ದರಿಂದ ಚಿಂತೆ, ಸಂತಾಪ, ಪುಣ್ಯಪಾಪಗಳ ಸಂಬಂಧ, ಇತ್ಯಾದಿ ದೋಷಗಳಿಂದ ದೂರನಾಗಿದ್ದಾನೆಂಬ ಅರ್ಥವನ್ನು ತಿಳಿಯಬೇಕು.

ತೃತೀಯಾಧ್ಯಾಯದಲ್ಲಿ ಸಾಧನೆಯ ವಿಚಾರವನ್ನು ಹೇಳಿದ್ದಾರೆ. ಅದನ್ನು ಭಾಷ್ಯದಲ್ಲಿ 'ಜ್ಞೇಯಂ' ಎಂಬ ವಿಶೇಷಣದಿಂದ ಸಂಗ್ರಹಿಸಿದ್ದಾರೆ. ಅದರ ವ್ಯಾಖ್ಯಾನವನ್ನೇ 'ಸದ್ಭಿರ್ವೈರಾಗ್ಯಭಕ್ತಿ ಶ್ರುತಿಮತಿ ನಿಯತಧ್ಯಾನಜಜ್ಞಾನಯೋಗಾತ್' ಎಂಬುದರಿಂದ ಮಾಡಲಾಗಿದೆ. ಈ ವಿಶೇಷಣವನ್ನು ನೋಡಿದಾಗ ಆಪಾತತಃ ತೋರುವ ಅರ್ಥ ಹೀಗಿದೆ - ಶ್ರುತಿ ಎಂದರೆ ಶ್ರವಣ, ಅದರಿಂದ ಹುಟ್ಟಿದ ಮತಿ = ಜ್ಞಾನ, ಅಂತಹ ಜ್ಞಾನವು ಯಾವ ವಿಷಯದಲ್ಲಿ ನಿಯತವಾಗಿದೆಯೋ, ಅಂತಹ ನಿಯತವಿಷಯಕವಾದದ್ದು ಧ್ಯಾನ, ಧ್ಯಾನ ಎಂದರೆ ಆಲೋಚನಾತ್ಮಕವಾದ ಮನನ. ಆ ಮನನದಿಂದ ಹುಟ್ಟಿರುವಂತಹದ್ದು ಪರೋಕ್ಷಜ್ಞಾನ. ಇಂತಹ ಪರೋಕ್ಷಜ್ಞಾನದಿಂದ ಭಗವಂತನು ಗಮ್ಯನಾಗಿದ್ದಾನೆ ಎಂದು. ಅಥವಾ 'ಶ್ರುತಿ' ಎಂದರೆ ಪ್ರಸಿದ್ಧವಾದ ವೇದ, 'ಮತಿ' ಎಂದರೆ 'ಬುದ್ಧಿ' ಎಂದು ಅಪಾರ್ಥವಾಗುವ ಸಂದರ್ಭವಿದೆ. ಅದಕ್ಕೋಸ್ಕರ ಗ್ರಂಥಕಾರರು 'ಶ್ರುತಿಮತೀ = ಶ್ರವಣಮನನೇ' ಎಂದು ಹೇಳಿದರು. ಈ ಅರ್ಥವನ್ನು ಇಟ್ಟುಕೊಂಡಾಗ ಅಪಾರ್ಥವಾಗುವ ಸಂದರ್ಭವಿಲ್ಲ. ಶ್ರುತಿ = ಶ್ರವಣ, ಮತಿ = ಮನನ,

ನಿಯತಧ್ಯಾನ = ಸ್ವಯೋಗ್ಯೋಪಾಸನೆ, ಜ್ಞಾನಂ = ಸಾಕ್ಷಾತ್‌ಕಾರ, ಹೀಗೆ ಟೀಕೆಯ ವಿಶೇಷಣಪದಗಳ ಅರ್ಥ.

ಪ್ರಶ್ನೆ - 'ನಿಯತಧ್ಯಾನ' ಎಂಬಲ್ಲಿ ನಿಯತ ಪದವನ್ನು ಶ್ರವಣ ಮನನಗಳಲ್ಲಿ ವಿಶೇಷಣವನ್ನಾಗಿ ಹೇಳದೆ ಧ್ಯಾನದಲ್ಲಿ ಮಾತ್ರ ವಿಶೇಷಣವನ್ನಾಗಿ ಹೇಳಲು ಏನು ಕಾರಣ? ಮತ್ತು ಧ್ಯಾನವಷ್ಟೇ ಅವಶ್ಯ ಅನುಷ್ಠೇಯವಾಗಿದ್ದಲ್ಲಿ ನಿಯತಪದವನ್ನು ಧ್ಯಾನದಲ್ಲಿ ಮಾತ್ರ ವಿಶೇಷಣವನ್ನಾಗಿ ಹೇಳಬಹುದಿತ್ತು. ಆದರೆ ಶ್ರವಣ ಮನನಗಳೂ ಸಹ ಅವಶ್ಯ ಅನುಷ್ಠೇಯಗಳಾದ್ದರಿಂದ ನಿಯತಪದವನ್ನು ಧ್ಯಾನದಲ್ಲಿ ಮಾತ್ರ ವಿಶೇಷಣವನ್ನಾಗಿ ಹೇಳಲು ಕಾರಣವಿಲ್ಲ.

ಉತ್ತರ - ನಿಯತಪದಕ್ಕೆ ಅವಶ್ಯ ಅನುಷ್ಠೇಯತ್ವ ಎಂಬರ್ಥವನ್ನು ನಾವು ಹೇಳುತ್ತಲೇ ಇಲ್ಲ. 'ಸ್ವಯೋಗ್ಯತ್ವಂ' ಎಂಬರ್ಥವನ್ನು ಹೇಳುತ್ತೇವೆ. ಇಂತಹ ಸ್ವಯೋಗ್ಯತ್ವವು ಧ್ಯಾನದಲ್ಲಷ್ಟೇ ಇದೆ. ತಮ್ಮ ತಮ್ಮ ಯೋಗ್ಯತೆಯನ್ನು ಅನುಸರಿಸಿ ಧ್ಯಾನದಲ್ಲಿ ತೊಡಗಬೇಕು. ಆದರೆ ಶ್ರವಣ ಮನನಗಳಲ್ಲಿ ಯೋಗ್ಯತೆಯ ಪ್ರಸಕ್ತಿಯೇ ಇಲ್ಲ. ಪ್ರತಿಯೊಬ್ಬರೂ ಯಥಾಶಕ್ತಿ ಶ್ರವಣಮನನಗಳನ್ನು ಮಾಡಬೇಕು. ಋಕ್ ಶಾಖಿಗಳು ಋಗ್ವೇದವನ್ನು ಅಧ್ಯಯನ ಮಾಡಿದ ಮೇಲೆ ಬೇರೆ ವೇದಗಳನ್ನೂ ಓದಬಹುದು. ಓದಬಾರದೆಂಬ ನಿಯಮವಿಲ್ಲ. ಅದರಂತೆ ಯಜುರ್ವೇದಿಗಳೂ ಸಹ ಬೇರೆ ವೇದವನ್ನು ಓದಬಹುದು. ಆದ್ದರಿಂದ ಶ್ರವಣಕ್ಕೆ ತಮ್ಮ ಶಾಖೆಗಿಂತ ಉಳಿದ ನಿಯತತ್ವವು ವಿಧಿಸಿದ್ಧವಾಗಿಲ್ಲ. ಆದರೆ ಧ್ಯಾನಮಾತ್ರ ಒಬ್ಬೊಬ್ಬರಿಗೆ ಒಂದೊಂದು ಪ್ರಕಾರದಲ್ಲಿ ಇರುತ್ತದೆ. ಅವರವರ ಯೋಗ್ಯತೆಗೆ ಅನುಸಾರಿಯಾದ ಧ್ಯಾನವನ್ನಷ್ಟೇ ಅವರವರು ಮಾಡಬೇಕು. ಈ ಸೂಕ್ಷ್ಮವಿಷಯವನ್ನು ತಿಳಿಸುವುದಕ್ಕಾಗಿ ನಿಯತಪದವನ್ನು ಧ್ಯಾನದಲ್ಲೇ ವಿಶೇಷಣವನ್ನಾಗಿ ಹೇಳಿದ್ದಾರೆ.

ಜ್ಞಾನವೆಂದರೆ ಅಪರೋಕ್ಷಜ್ಞಾನವನ್ನೇ ಇಟ್ಟುಕೊಳ್ಳಬೇಕು. ಪರೋಕ್ಷಜ್ಞಾನವು ಧ್ಯಾನಕ್ಕೆ ಜನಕವಾಗಿದೆಯೇ ಹೊರತು ಧ್ಯಾನದಿಂದ ಹುಟ್ಟುವಂತಹದ್ದಲ್ಲ. ಆದ್ದರಿಂದ ಪರೋಕ್ಷಜ್ಞಾನವನ್ನು ಧ್ಯಾನಶಬ್ದದಿಂದ ವಿವಕ್ಷಿಸಲು ಬರುವುದಿಲ್ಲ. 'ಯೋಗಾತ್' ಎಂಬಲ್ಲಿರುವ ಯೋಗಶಬ್ದದಿಂದ 'ಯೋಗಃ ಸನ್ನಹನೋಪಾಯೇ' ಎಂಬ ಕೋಶದಂತೆ ಸನ್ನಹನ ಉಪಾಯ ಎಂಬರ್ಥಗಳಲ್ಲಿ ಯೋಗ ಶಬ್ದವಿರುವುದರಿಂದ. ಪ್ರಕೃತ ಉಪಾಯ ಎಂಬ ಅರ್ಥವನ್ನೇ ಇಲ್ಲಿ ಇಟ್ಟುಕೊಳ್ಳಬೇಕು. 'ಸಂಬಂಧ' ಎಂಬರ್ಥವನ್ನು ಹೇಳಬಾರದು ಈ ಅರ್ಥವನ್ನು ಹೇಳುವುದರಿಂದ 'ಬ್ರಹ್ಮನು ಗಮ್ಯನಾಗಲು ಜ್ಞಾನದ

ಅವಶ್ಯಕತೆಯು ಇರುವುದಿಲ್ಲ. ಕರ್ಮಾಚರಣೆಯಿಂದಲೂ ಗಮ್ಯನಾಗುತ್ತಾನೆ', ಎಂಬ ಶಂಕೆಗೆ ಅವಕಾಶವಿಲ್ಲ. 'ಜ್ಞಾನಯೋಗಾತ್' ಎಂದು ಹೇಳಿದ್ದರಿಂದ ಅವನನ್ನು ಹೊಂದಲು ಜ್ಞಾನವೇ ಉಪಾಯ ಹೊರತು ಮತ್ತೊಂದು ಉಪಾಯವಿಲ್ಲವೆಂದು ಜ್ಞಾನಕ್ಕಿಂತ ಭಿನ್ನವಾದ ಉಪಾಯವನ್ನು ನಿರಾಕರಿಸಿದಂತಾಗುತ್ತದೆ.

'ಅಮಲಂ' ಎಂಬ ಪದಕ್ಕೆ 'ದೋಷವಿಲ್ಲದ್ದು' ಎಂಬರ್ಥವು ಮೇಲ್ನೋಟಕ್ಕೆ ತೋರುತ್ತದೆ. ಹಾಗಾದಲ್ಲಿ 'ದೋಷಾತಿದೂರಂ' ಎಂಬ ಹಿಂದಿನ ವಿಶೇಷಣದಿಂದ ಪುನರುಕ್ತಿಯು ಬರುತ್ತದೆ. ಅದಕ್ಕೋಸ್ಕರ ಗ್ರಂಥಕಾರರು 'ಅಮಲಂ ಮುಮುಕ್ಷೂಪಾಸ್ಯಂ' ಎಂದು ಮುಮುಕ್ಷುಗಳಿಂದ ಉಪಾಸ್ಯನಾದ ಬ್ರಹ್ಮನು ಮಾಯಾ ಎಂಬ ಮಲರಹಿತನಾಗಿದ್ದಾನೆಂದು ಅರ್ಥ. ಮಾಯಾವಾದಿಗಳು ವಿಶಿಷ್ಟಬ್ರಹ್ಮನು ಮಂದರಿಂದ ಉಪಾಸ್ಯನೆಂದು ಹೇಳುತ್ತಾರೆ. 'ಅಮಲಂ' ಎಂಬ ವಿಶೇಷಣದಿಂದ ಮಾಯಾವಿಶಿಷ್ಟ ಬ್ರಹ್ಮನ ಉಪಾಸನೆಯನ್ನೂ ಮಾಡಬೇಕಾಗಿಲ್ಲವೆಂದು ತಿಳಿಯುತ್ತದೆ. ಅಥವಾ 'ನ ವಿದ್ಯತೇ ಮಲಂ ಯಸ್ಮಾತ್ ಸಃ ಅಮಲಃ, ತಂ ಅಮಲಂ' ಎಂದು ಹೇಳಬಹುದು. ಯಾರಿಗೆ ಸಂಸಾರವೆಂಬ ದೋಷವೇ ಇಲ್ಲವೋ, ಅಂತಹವನನ್ನು ಮುಮುಕ್ಷುಗಳು ಉಪಾಸನೆ ಮಾಡಬೇಕೆಂದು ತಾತ್ಪರ್ಯ. ಬಡವನು ಶ್ರೀಮಂತನನ್ನು ಆರಾಧನೆ ಮಾಡುವಂತೆ ಸಂಸಾರದ ಬಿಡುಗಡೆಯನ್ನು ಅಪೇಕ್ಷಿಸುವ ಮುಮುಕ್ಷುಗಳು ಸಂಸಾರ ಇಲ್ಲವನನ್ನೇ ಉಪಾಸನೆ ಮಾಡಬೇಕು.

ಶ್ರೀವಿದ್ಯಾಧೀಶತೀರ್ಥಶ್ರೀಪಾದರು ಮತ್ತೊಂದು ಭಂಗಿಯಲ್ಲಿ ಈ ಶ್ಲೋಕವನ್ನು ವ್ಯಾಖ್ಯಾನಿಸುತ್ತಾರೆ – ಗ್ರಂಥಾರಂಭದಲ್ಲಿ ವಿಶಿಷ್ಟನಾದವನನ್ನು ಇಷ್ಟನಾದವನನ್ನು ಅಧಿಕೃತನಾದವನನ್ನು ಅವಶ್ಯ ನಮಿಸಬೇಕು. ಇವು ಮೂರು ನಮ್ಯತ್ವಕ್ಕೆ ಪ್ರಯೋಜಕವಾದ ಧರ್ಮಗಳು. ಈ ವಿಶಿಷ್ಟತ್ವಾದಿಗಳನ್ನು ಸಮರ್ಥಿಸಲು ೧) ಬ್ರಹ್ಮ ೨) ಅಮಲಂ ೩) ಮುಕುಂದಾಭಿಧಂ ೪) ವೇದಾಂತಾಭಿಧಂ ಎಂಬ ನಾಲ್ಕು ವಿಶೇಷಣಗಳನ್ನು ಹೇಳಲಾಗಿದೆ. ಈ ನಾಲ್ಕು ವಿಶೇಷಣಗಳ ವಿವರಣರೂಪವಾಗಿ ಕಾರಿಕೆಯಲ್ಲಿ ಹೇಳಿದ ವಿಶೇಷಣಗಳು ಇರುತ್ತವೆ. ಯಾವರೀತಿಯಾಗಿ ತತ್ವನಿರ್ಣಯದ ಮಂಗಳಶ್ಲೋಕದಲ್ಲಿ 'ವಿಶ್ವಸ್ಯೋದಯಮಾತನೋತಿ ತದನು ತ್ರಾಣಂ ವಿಧತ್ತೇ ಪುನಃ' ಎಂಬಲ್ಲಿ 'ತಂ ದೇವಂ ಪಿತರಂ ಪತಿಂ ಗುರುತಮಂ ವಂದೇ ರಮಾವಲ್ಲಭಂ' ಎಂದು ಕೊನೆಯಲ್ಲಿರುವ 'ದೇವಂ, ಪತಿಂ ಪಿತರಂ ಗುರುತಮಂ' ಇತ್ಯಾದಿ ವಿಶೇಷಣಗಳನ್ನು ವಿವರಿಸುವರೂಪದಲ್ಲಿಯೇ ಉಳಿದ ವಿಶೇಷಣಗಳು ಇರುತ್ತವೋ ಅದರಂತೆ ಪ್ರಕೃತದಲ್ಲೂ ಸಹ ತಿಳಿಯಬೇಕು. ಬ್ರಹ್ಮ ಎಂದರೆ ಸಕಲಗುಣಪರಿಪೂರ್ಣ ಎಂದರ್ಥ. ಇದರಿಂದ

ನಾರಾಯಣನಲ್ಲಿ ನಮ್ಯತ್ವಪ್ರಯೋಜಕವಾದ ವಿಶಿಷ್ಟತ್ವವನ್ನು ಹೇಳಿದಂತಾಯಿತು. ಇದನ್ನು 'ಶುದ್ಧಾನಂದೋರುಸಂವಿದ್‌ದ್ಯುತಿಬಲಬಹುಲೌದಾರ್ಯವೀರ್ಯಾದಿದೇಹಂ' ಎಂಬ ವಿಶೇಷಣವು ವಿವರಿಸುತ್ತಿದೆ. ಯಾವ ವ್ಯಕ್ತಿಯಲ್ಲಿ ಗುಣಗಳು ಬರುತ್ತವೆಯೋ ಅಂತಹವನಲ್ಲಿ ದೋಷಗಳೂ ಬರುತ್ತವೆ. ಈ ಶಂಕೆಯನ್ನು 'ಅಮಲಂ' ಎಂಬ ವಿಶೇಷಣವು ಪರಿಹರಿಸುತ್ತಿದೆ ಹೀಗೆ ವಂದ್ಯತ್ವಪ್ರಯೋಜಕವಾದ ಬ್ರಹ್ಮಪದೋಕ್ತವಾದ ವಿಶಿಷ್ಟತ್ವವನ್ನು ವಿವರಿಸುವುದಕ್ಕಾಗಿ 'ಅಮಲಂ' ಎಂಬ ವಿಶೇಷಣವು ಹೊರಟಿದೆ. 'ಅಮಲಂ' ಪದದಿಂದ ಹೇಳಿದ ದೋಷವಿದೂರತ್ವವನ್ನೇ 'ಚಿಂತಾಸಂತಾಪಲೇಪೋದ್ಭವಮೃತಿಮುಖರಾSಶೇಷದೋಷಾತಿದೂರಮ್' ಎಂಬ ವಿಶೇಷಣವು ವಿವರಿಸುತ್ತದೆ.

ಮುಖರ ಎಂಬಲ್ಲಿನ 'ರ'ಪ್ರತ್ಯಯಕ್ಕೆ ಎರಡು ಅರ್ಥಗಳನ್ನು ಹೇಳಬಹುದು - ಸ್ವಾರ್ಥದಲ್ಲಿ ಮತ್ತು ಮತ್ವರ್ಥದಲ್ಲಿ 'ರ' ಪ್ರತ್ಯಯವನ್ನು ಮಾಡಿದಾಗ 'ಮೊದಲಾದವು' ಎಂದರ್ಥ. ಮತ್ವರ್ಥದಲ್ಲಿ 'ರ' ಪ್ರತ್ಯಯವನ್ನು ಮಾಡಿದಾಗ 'ವಾಚಾಳಿ' ಎಂದರ್ಥ. 'ವಾಚಾಳಿ' ಎಂಬರ್ಥವು ಪ್ರಕೃತ ಅಸಂಗತವಾದ್ದರಿಂದ ಸ್ವಾರ್ಥದಲ್ಲೇ 'ರ' ಪ್ರತ್ಯಯನ್ನು ಇಟ್ಟುಕೊಂಡು ಮೊದಲಾದವು ಎಂಬರ್ಥವನ್ನು ಹೇಳಬೇಕು.

ನಮ್ಯತ್ವಪ್ರಯೋಜಕವಾದ ಮತ್ತೊಂದು ಧರ್ಮ ಅಧಿಕೃತತ್ವ. ಈ ಅಧಿಕೃತತ್ವವನ್ನು 'ವೇದಾಂತವೇದ್ಯಂ' ಎಂಬ ವಿಶೇಷಣವು ಸಮರ್ಥಿಸುತ್ತಿದೆ. ನಾರಾಯಣನು ಸಮಗ್ರ ವೇದಾಂತಗಳಿಂದ ಪ್ರತಿಪಾದ್ಯನಾಗಿದ್ದಾನಾದ್ದರಿಂದ ಅಧಿಕೃತನಾಗಿದ್ದಾನೆ. ಇದನ್ನೇ 'ಸದ್ಭಿರ್ವೈರಾಗ್ಯಭಕ್ತಿಶ್ರುತಿಮತಿನಿಯತಧ್ಯಾನಜಜ್ಞಾನ-ಯೋಗಾತ್' ಎಂಬ ವಿಶೇಷಣವು ವಿವರಿಸುತ್ತಿದೆ.

ಪ್ರಶ್ನೆ - ವೈರಾಗ್ಯಭಕ್ತಿಪದವು ದ್ವಂದ್ವಸಮಾಸದಲ್ಲಿದೆ. ದ್ವಂದ್ವಸಮಾಸದಲ್ಲಿ 'ವೈರಾಗ್ಯಭಕ್ತಿ' ಎಂದು ಹೇಳುವುದು ತಪ್ಪು. 'ಭಕ್ತಿ ವೈರಾಗ್ಯ' ಎಂದೇ ಹೇಳಬೇಕು. ಏಕೆಂದರೆ ದ್ವಿತೀಯಾಧ್ಯಾಯದ ದ್ವಿತೀಯಪಾದದ ೨೯ನೆಯ ಸೂತ್ರಗಳಿಂದ ಪ್ರಾರಂಭಿಸಿ ಕೆಲವು ಸೂತ್ರಗಳಲ್ಲಿ ದ್ವಂದ್ವಸಮಾಸದಲ್ಲಿ ಇರಲೇಬೇಕಾದ ಕೆಲವು ನಿಯಮಗಳನ್ನು ವಿಧಿಸಲಾಗಿದೆ – 'ಅಲ್ಪಾಚ್' ಉಳ್ಳಂತಹ ಶಬ್ದಗಳು 'ಘ'ಸಂಜ್ಞೆಯನ್ನು ಹೊಂದಿದ ಶಬ್ದಗಳು. ಅಜಾದಿಯಾದ ಶಬ್ದಗಳು, ಅಜಂತವಾದ ಶಬ್ದಗಳು ಸಮಾಸದಲ್ಲಿ ಮೊದಲು ಬರುತ್ತವೆ. ಇತ್ಯಾದಿ ನಿಯಮಗಳನ್ನು ಹೇಳಿದ್ದಾರೆ. ಆದ್ದರಿಂದ ಧವಖದಿರೌ, ಹರಿಹರೌ, ಇಂದ್ವಾಗ್ನೀ, ಹೀಗೆಯೇ ವ್ಯವಹರಿಸಬೇಕು. ಭಕ್ತಿಶಬ್ದವು 'ಅಲ್ಪಾಚ್' ಉಳ್ಳದ್ದಾಗಿದೆ.

'ಫಿ'ಸಂಜ್ಞೆಯನ್ನು ಹೊಂದಿದೆ. ಆದ್ದರಿಂದ ಭಕ್ತಿವೈರಾಗ್ಯ ಎಂದೇ ಹೇಳಬೇಕು. 'ವೈರಾಗ್ಯಭಕ್ತಿ' ಎಂದು ಹೇಳಿದ್ದು ತಪ್ಪು.

ಉತ್ತರ - 'ಧರ್ಮಾದಿಷು ಅನಿಯಮಃ' ಎಂಬ ವಾರ್ತಿಕವನ್ನು ಅನುಸರಿಸಿ 'ವೈರಾಗ್ಯಭಕ್ತಿ' ಎಂದು ಹೇಳಲ್ಪಟ್ಟಿದೆ. ಧರ್ಮಾದಿಶಬ್ದಗಳಲ್ಲಿ (೨.೨.೩೧) ಈ ಸೂತ್ರದಲ್ಲಿ 'ಧರ್ಮಾದಿಷು ಅನಿಯಮಃ' ಎಂಬ ವಾರ್ತಿಕವು ಹೇಳಲ್ಪಟ್ಟಿದೆ. ಧರ್ಮಾದಿಶಬ್ದಗಳಲ್ಲಿ ಇಂತಹ ಪದವೇ ಮೊದಲಿರಬೇಕೆಂಬ ನಿಯಮವಿಲ್ಲ. 'ಧರ್ಮಾರ್ಥೌ' ಎಂದು ಹೇಳಬಹುದು. ಅಥವಾ 'ಅರ್ಥಧರ್ಮೌ', ಎಂದು ಹೇಳಬಹುದು. 'ಗುಣವೃದ್ಧೀ' ಎಂದು ಅಥವಾ 'ವೃದ್ಧಿಗುಣೌ' ಎಂದು ಹೇಳಬಹುದು. ಅದರಂತೆ 'ವೈರಾಗ್ಯಭಕ್ತಿ' ಎಂದೂ ಹೇಳಬಹುದು ತಪ್ಪಿಲ್ಲ.

ನಮ್ಯತ್ವಪ್ರಯೋಜಕವಾದ ಮತ್ತೊಂದು ಧರ್ಮ 'ಇಷ್ಟತ್ವ'. ಇದನ್ನು 'ಮುಕುಂದಾಭಿದಂ' ಎಂದು ವಿಶೇಷಣವು ಸಮಾರ್ಥಿಸುತ್ತಿದೆ. ಮೋಕ್ಷವನ್ನು ದಯಪಾಲಿಸುವಂತಹವನು ಮುಕುಂದನಾದ್ದರಿಂದ ಅವನು ನಮಗೆ ಅತ್ಯಂತ ಇಷ್ಟನಾಗಿದ್ದಾನೆ. 'ಮುಕುಂದಾಭಿದಂ' ಎಂಬ ಪದದಿಂದ ಹೇಳಲ್ಪಟ್ಟ ಈ ಇಷ್ಟತ್ವವನ್ನೇ 'ಗಮ್ಯಂ' ಎಂಬ ವಿಶೇಷಣವು ವಿವರಿಸುತ್ತದೆ. ಹೀಗೆ ಶ್ಲೋಕದಲ್ಲಿರುವ ಎಲ್ಲಾ ವಿಶೇಷಣಗಳು ಸಾರ್ಥಕವು ಅತ್ಯಂತ ಸಮಂಜಸವೂ ಆಗಿವೆ.

ಇಲ್ಲಿಗೆ ಪ್ರಥಮ ಪದ್ಯದ ವ್ಯಾಖ್ಯಾನವು ಮುಗಿಯಿತು.

## ಶ್ರೀವೇದವ್ಯಾಸದೇವರಿಗೆ ನಮಸ್ಕಾರ (ಶಾಸ್ತ್ರಪ್ರಾಮಾಣ್ಯದ ಸಮರ್ಥನೆ)

**तत्वप्रकाशिका –**

**याञ्चामन्दरलोलिताद् यत उदैद्विद्येन्दिरा निर्जरैः**
**जातो भारतपारिजातसुतरुः सद्ब्रह्मसूत्रामृतम् ।**
**आसीत्तन्त्रपुराणसन्मणिगणो जातः शुकेन्दुः सदा**
**सोऽयं व्याससुधानिधिर्भवतु मे भूत्यै सतां भूतिदः ।। २ ।।**

ವೇದವ್ಯಾಸರೆಂಬ ಕ್ಷೀರಸಮುದ್ರವು ದೇವತೆಗಳ ಪ್ರಾರ್ಥನೆಯೆಂಬ ಮಂದರಪರ್ವತದಿಂದ ಚೆನ್ನಾಗಿ ಮಥಿಸಲ್ಪಟ್ಟಿತು. ಆವಾಗ ಸಾತ್ವಿಕವಿದ್ಯೆಯೆಂಬ ಲಕ್ಷ್ಮೀದೇವಿಯು, ಮಹಾಭಾರತವೆಂಬ ಪಾರಿಜಾತವೃಕ್ಷವು, ಬ್ರಹ್ಮಸೂತ್ರವೆಂಬ ಅಮೃತವು,

ಪಂಚರಾತ್ರ ಹಾಗೂ ಪುರಾಣಗಳೆಂಬ ಉತ್ತಮಮಣಿಗಳು, ಶುಕಾಚಾರ್ಯರೆಂಬ ಚಂದ್ರ, ಇವುಗಳ ಪ್ರಾದುರ್ಭಾವವಾಯಿತು. ಇಂಥ ಕ್ಷೀರಸಮುದ್ರವು ಹೇಗೆ ದೇವತೆಗಳಿಗೆಲ್ಲಾ ಬೇಡಿದ ಐಶ್ವರ್ಯಗಳೆನ್ನೆಲ್ಲಾ ನೀಡಿತೋ ಅದರಂತೆ ಶ್ರೀವೇದವ್ಯಾಸರೆಂಬ ಕ್ಷೀರಸಮುದ್ರವೂ ಸಹ ನಮಗೆಲ್ಲಾ ಸದ್‌ಬುದ್ಧಿ ಮೊದಲಾದ ಐಶ್ವರ್ಯಗಳನ್ನು ನೀಡಲಿ.

## ಶ್ರೀಮದಾಚಾರ್ಯರ ಗುರುಗಳು ಯಾರು?

**ಭಾವದೀಪಃ – 'ಗುರೂಂಶ್ಚ' ಇತ್ಯತ್ರ ಕೋ ಗುರುಃ? ಕಥಂ ಚ ತಸ್ಯ ಗುರುತ್ವಮ್? ಇತ್ಯತಸ್ತದ್? ವಿವೃಣ್ವನ್ ವ್ಯಾಚಿಖ್ಯಾಸಿತಭಾಷ್ಯಮೂಲಸೂತ್ರಪ್ರಾಮಾಣ್ಯಂ ಚ ಸೂಚಯನ್ ಮಙ್ಗಲಾನ್ತರಮಾಚರತಿ – ಯಾಶ್ಚಾ ಇತಿ ।। 'ಸದಾ ಭೂತ್ಯೈ ಭವತು' ಇತ್ಯನ್ವಯಃ । ತನ್ತ್ರಮ್ = ಪಞ್ಚರಾತ್ರಮ್ । ಬ್ರಹ್ಮತರ್ಕೋಪೀತ್ಯೇಕೇ ।**

ಗುರುಗಳು ಯಾರು? ಅವರ ಲಕ್ಷಣವೇನು? ಎಂಬುದನ್ನು ವಿವರಿಸುವ ಮೂಲಕ ಎರಡನೆಯ ಶ್ಲೋಕವನ್ನು ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ತಾವು ವ್ಯಾಖ್ಯಾನ ಮಾಡಬೇಕಾಗಿರುವ ಬ್ರಹ್ಮಸೂತ್ರಭಾಷ್ಯಕ್ಕೆ ಮೂಲವಾದ ಸೂತ್ರದ ಪ್ರಾಮಾಣ್ಯವನ್ನು ಸಮರ್ಥಿಸುತ್ತಾ ಮತ್ತೊಂದು ಮಂಗಳಾಚರಣೆಯನ್ನು 'ಯಾಶ್ಚಾ' ಇತ್ಯಾದಿ ಶ್ಲೋಕದಿಂದ ಮಾಡಿದ್ದಾರೆ. 'ಸದಾ ಭೂತ್ಯೈ ಭವತು' (ನಿರಂತರ ಸಂಪತ್ತನ್ನು ನೀಡಲಿ) ಎಂದು ಅನ್ವಯ. ತಂತ್ರಮ್ ಎಂದರೆ ಪಂಚರಾತ್ರ. ಬ್ರಹ್ಮತರ್ಕವೂ ಸಹ ತಂತ್ರವೆಂದು ಕೆಲವರು ಹೇಳುತ್ತಾರೆ.

## ಈ ಶಾಸ್ತ್ರದಲ್ಲಿ ತ್ರಿವಿಧ ಪ್ರಮಾಣ್ಯವಿದೆ

**ಭಾವದೀಪಃ – ಅತ್ರ ಯತ 'ಉದೈದ್ಧಿಧೇನ್ದಿರಾ' ಇತ್ಯನೇನ ವಕ್ತ್ರಾನುಕೂಲ್ಯಮ್, 'ನಿಜರೈಃ' ಇತ್ಯಾದಿನಾ ಶ್ರೋತ್ರಾನುಕೂಲ್ಯಮ್, 'ಯಾಶ್ಚಾ' ಇತ್ಯಾದಿನಾ ಪ್ರಸಙ್ಗಾನುಕೂಲ್ಯಂ ಚ ದರ್ಶಯತಾ, 'ವಕ್ತೃಶ್ರೋತೃಪ್ರಸಕ್ತೀನಾಂ ಯದಾಸ್ಪಿರನುಕೂಲತಾ' ಇತ್ಯನುವ್ಯಾಖ್ಯಾನೋಕ್ತಾಸ್ಪಿಮೂಲತಾ ಸೂತ್ರಾಣಾಂ ಸೂಚಿತಾ। 'ಬ್ರಹ್ಮಸೂತ್ರ'ಪದೇನ ಬ್ರಹ್ಮಪರಶ್ರುತಿವ್ಯಾಖ್ಯಾನರೂಪತ್ವಾತ್ ಶ್ರುತಿಮೂಲತ್ವಂ ನ್ಯಾಯಯುತ್ಪಾದಕತ್ವಾದ್ ಯುಕ್ತಿಮೂಲತ್ವಂ ಚ ಸೂಚಯತಾ –**

आप्तिमूलतया चैव श्रुतिमूलतया तथा ।
युक्तिमूलतया चैव प्रामाण्यं त्रिविधं महत् ।।

इत्यनुव्याख्यानोक्तत्रिविधप्रामाण्यं स्मारितमिति चन्द्रिकायामेव व्यक्तम्।

'उद्यैद्विद्यैंन्दिरा' ಇತ್ಯಾದಿ ವಿಶೇಷಣದಿಂದ ವಿವಕ್ಷಿತಾರ್ಥ- ತತ್ವಜ್ಞಾನವು ಸೂಚಿತವಾಗಿ ವಕ್ತ್ರಾನುಕೂಲ್ಯವನ್ನು ಹೇಳಿದಂತಾಗುತ್ತದೆ. 'निर्जरैः' ಇತ್ಯಾದಿ ವಿಶೇಷಣದಿಂದ ತತ್ವಜ್ಞಾನಯೋಗ್ಯತೆಯನ್ನು ತಿಳಿಸಿದಂತಾಗಿ ಶ್ರೋತ್ರಾನುಕೂಲ್ಯವನ್ನು ತಿಳಿಸಿದಂತಾಗುತ್ತದೆ. 'याच्ञा' ಎಂಬುದರಿಂದ ಪ್ರಸಂಗಾನುಕೂಲ್ಯವನ್ನು ಸೂಚಿಸಿದಂತಾಗುತ್ತದೆ. ಹೀಗೆ ಮೂರು ಬಗೆಯ ಆನುಕೂಲ್ಯಗಳಿರುವುದರಿಂದ 'वक्तृश्रोतृप्रसक्तीनाम् यदाप्तिरनुकूलता' ಎಂಬ ಆನುವ್ಯಾಖ್ಯಾನದ ಮಾತಿನಂತೆ ಆಪ್ತಿಮೂಲತ್ವವನ್ನು ಸೂತ್ರಗಳಿಗೆ ಸಮರ್ಥಿಸಿದಂತಾಯಿತು. ಬ್ರಹ್ಮಸೂತ್ರಪದಕ್ಕೆ ಹಿಂದೆ ಮಾಡಿದ ವ್ಯಾಖ್ಯಾನದಂತೆ ಬ್ರಹ್ಮಪದದಿಂದ ಶ್ರುತಿಮೂಲತ್ವವನ್ನು, ಸೂತ್ರಶಬ್ದದಿಂದ ನ್ಯಾಯವ್ಯುತ್ಪಾದಕವಾಗಿರುವುದರಿಂದ ಯುಕ್ತಿಮೂಲತ್ವವನ್ನೂ ಹೇಳಿದಂತಾಯಿತು. ಆದ್ದರಿಂದ -

ಆಪ್ತವಾಕ್ಯತಯಾ ಚೈವ ಯುಕ್ತಿಮೂಲತಯಾ ತಥಾ ।
ಶ್ರುತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ ।।

೧) ಆಪ್ತಿಮೂಲಕವಾಗಿ ೨) ಯುಕ್ತಿಮೂಲಕವಾಗಿ ೩) ಶ್ರುತಿಮೂಲಕವಾಗಿ ಪ್ರಾಮಾಣ್ಯವು ಮೂರುವಿಧವಾಗಿದೆ ಎಂಬ ಆನುವ್ಯಾಖ್ಯಾನದಲ್ಲಿ ಹೇಳಿದ ಮೂರು ಬಗೆಯ ಪ್ರಾಮಾಣ್ಯವನ್ನು ಬ್ರಹ್ಮಸೂತ್ರಪದವು ಸೂಚಿಸಿದೆ. ಇದನ್ನು ಚಂದ್ರಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

## ಟೀಕಾರಾಯರು ನೀಡಿದ ಹೋಲಿಕೆಗಳು

**भावदीपः – कामिताखिलदातृत्वसाम्यात् विद्येन्दिरात्वेन, नानापर्वोपेतत्वात् नानाशाखोपबृंहितत्वाद्वा भारतं पारिजातत्वेन,**

जरामृतिनिवृत्त्युपायत्वाद् ब्रह्मसूत्रममृतत्वेन, नानातत्वार्थप्रकाशकत्वादिना पुराणानि **मणिगणत्वेन** तत्वोपदेशेनाह्लादकत्वात् **शुक इन्दुत्वेनोक्त** इति यावत् ।

एवं रूपेण **भूतिदः** शास्त्रप्रभवत्वादिना गुरुश्चेति भावः ।

ಈ ಶ್ಲೋಕದಲ್ಲಿ ಕೊಟ್ಟ ಹೋಲಿಕೆಗಳು ಬಹಳ ಅರ್ಥಪೂರ್ಣಗಳಾಗಿವೆ.

ವಿದ್ಯೆ ಲಕ್ಷ್ಮೀ ಎರಡರಲ್ಲಿಯೂ ಸಕಲ ಇಷ್ಟದಾತೃತ್ವವೆಂಬ ಸಮಾನಗುಣವಿದೆ; ಮಹಾಭಾರತ ಹಾಗೂ ಪಾರಿಜಾತವೃಕ್ಷಗಳಲ್ಲಿ ನಾನಾಪರ್ವಗಳಿಂದ (= ಶಾಖೆಗಳಿಂದ) ಕೂಡಿರುವಿಕೆ ಎಂಬ ಸಮಾನಗುಣವಿದೆ; ಬ್ರಹ್ಮಸೂತ್ರ ಹಾಗೂ ಅಮೃತಗಳಲ್ಲಿ ಅಜರಾಮರಣಹೇತುತ್ವವೆಂಬ ಸಮಾನಗುಣವಿದೆ; ಪುರಾಣಗಳು ಹಾಗೂ ಮಣಿಸಮೂಹಗಳಲ್ಲಿ ಅನೇಕ ತತ್ವಪ್ರಕಾಶಕತ್ವವು; ಶುಕಾಚಾರ್ಯರೆಂಬ ಭಾಗವತ ಹಾಗೂ ಚಂದ್ರರಲ್ಲಿ ಆಹ್ಲಾದಕರತ್ವವು; ವೇದವ್ಯಾಸರು ಹಾಗೂ ಕ್ಷೀರಸಮುದ್ರಗಳಲ್ಲಿ ಭೂತಿಪ್ರದತ್ವ ಎಂಬ ಸಮಾನ ಧರ್ಮವಿದೆ.

## 'ಸತಾಂ' ಎಂಬ ಪ್ರಯೋಗ ತಪ್ಪಲ್ಲ

**भावदीपः – 'सम्प्रदानत्वाभावात् सम्बन्धसामान्ये सताम् इति षष्ठी । बहुमानपूर्वकं स्वस्वत्वत्यागेन परस्वत्वापादनस्थल एव सम्प्रदानसञ्ज्ञा' इत्यभियुक्तव्याख्यानात् । अत एव सम्प्रदानमिति गुरुसञ्ज्ञा अन्यथा टि-घु-भादिव-ह्रस्वीमेव तां कुर्यात् ।**

'ಸತಾಂ' ಎಂಬಲ್ಲಿ ಷಷ್ಠೀವಿಭಕ್ತಿಯು ಸಂಬಂಧಸಾಮಾನ್ಯಾರ್ಥದಲ್ಲಿ ಬಂದಿದೆ. ಸಂಪ್ರದಾನ-ಸಂಜ್ಞೆಯು ಬರಲು ಸಾಧ್ಯವಿಲ್ಲದ ಕಾರಣ ಚತುರ್ಥೀವಿಭಕ್ತಿಗೆ ಅವಕಾಶವಿಲ್ಲ. ಆದರದಿಂದ ಎಲ್ಲಿ ತನ್ನ ಸ್ವಾಮಿತ್ವವನ್ನು ಬಿಟ್ಟು ಮತ್ತೊಬ್ಬರ ಸ್ವಾಮಿತ್ವವನ್ನು ಆಪಾದನೆ ಮಾಡುತ್ತಾರೋ ಅಲ್ಲಿ ಮಾತ್ರ ಸಂಪ್ರದಾನಸಂಜ್ಞೆಯನ್ನು ಜ್ಞಾನಿಗಳಿಗೆ ವಿಧಾನ ಮಾಡಿದ್ದಾರೆ. ಆದ್ದರಿಂದಲೇ 'ಟಿ''ಘು' ಇತ್ಯಾದಿಯಂತೆ ಲಘುಸಂಜ್ಞೆಯನ್ನು ಹೇಳದೆ ಸಂಪ್ರದಾನಮ್ ಎಂಬ ಗುರುಸಂಜ್ಞೆಯನ್ನು ಹೇಳಲಾಗಿದೆ.

## ಬ್ರಹ್ಮಸೂತ್ರದಂತೆ ಸ್ಮೃತಿಗಳೂ ಪ್ರಮಾಣ

**ಭಾವದೀಪಃ** – ಇದಂ ಚ ಪದ್ಯಂ 'ದ್ವಾಪರೇ' ಇತ್ಯಾದಿಭಾಷ್ಯಸ್ಯ ತಾತ್ಪರ್ಯತೋ ವ್ಯಾಖ್ಯಾನರೂಪಮ್ । ತತ್ರ ಸೂತ್ರೋಪಲಕ್ಷಿತತನ್ತ್ರಪುರಾಣಾದೇರಪ್ಯಾಸ್ತಿಮೂಲತ್ವಾದಿನಾ ಬ್ರಹ್ಮಸೂತ್ರತೌಲ್ಯೇನ ಪ್ರಾಮಾಣ್ಯೋಕ್ತ್ಯಾ 'ಸ್ಮೃತೇಶ್ಚ' ಇತ್ಯಾದಿಸೂತ್ರೇ ಭಾಷ್ಯೇ ಚ ವಕ್ಷ್ಯಮಾಣಸ್ಮೃತೀನಾಮುದಾಹರಣಮುಪಪಾದಿತಂ ಭವತಿ । ಸ್ಮೃತೀನಾಂ ಶ್ರುತ್ಯಾದಿಮೂಲತ್ವಂ ಚ 'ಇತಿಹಾಸಪುರಾಣಃ ಪಞ್ಚಮೋ ವೇದಾನಾಂ ವೇದಃ' ಇತ್ಯಾದಿ ತತ್ವನಿರ್ಣಯಾದ್ಯುಕ್ತ್ಯಾ ಧ್ಯೇಯಮ್ । ವಿಸ್ತೃತಮೇತತ್ ಸ್ಮೃತಿಪ್ರಾಮಾಣ್ಯಂ ತತ್ವಪ್ರದೀಪೇ, 'ತಚ್ಚೋಕ್ತಮ್' ಇತಿ ಭಾಷ್ಯವ್ಯಾಖ್ಯಾನಾವಸರೇ ।।೨।।

ಈ ಪದ್ಯವು 'ದ್ವಾಪರೇ' ಇತ್ಯಾದಿ ಭಾಷ್ಯದ ತಾತ್ಪರ್ಯವನ್ನು ವಿವರಿಸುತ್ತಿದೆ. ಈ ಶ್ಲೋಕದಿಂದ ಸೂತ್ರಕ್ಕೆ ಪ್ರಾಮಾಣ್ಯವನ್ನು ಸೂಚಿಸಿದ್ದರಿಂದ ಉಪಲಕ್ಷಣಯಾ ಪಂಚರಾತ್ರ ಪುರಾಣ ಮೊದಲಾದವುಗಳಿಗೂ ಪ್ರಾಮಾಣ್ಯವನ್ನು ಸಮರ್ಥಿಸಿದಂತಾಯಿತು. ಬ್ರಹ್ಮಸೂತ್ರಗಳಲ್ಲಿ ಯಾವರೀತಿಯಾಗಿ ಆಪ್ತಿಮೂಲತ್ವವೇ ಮೊದಲಾದ ಯುಕ್ತಿಗಳಿಂದ ಪ್ರಾಮಾಣ್ಯವಿದೆಯೋ ಅದರಂತೆ ಸ್ಮೃತ್ಯಾದಿಗಳಲ್ಲಿಯೂ ಪ್ರಾಮಾಣ್ಯವನ್ನು ತಿಳಿಯಬೇಕೆಂದು 'ಸ್ಮೃತೇಶ್ಚ' ಎಂಬ ಸೂತ್ರದಲ್ಲಿ ಮತ್ತು ಭಾಷ್ಯದಲ್ಲಿ ಸಮರ್ಥಿಸಿದ್ದಾರೆ. ಅದನ್ನು ಇಲ್ಲಿ ಉಪಪಾದಿಸಿದಂತಾಯಿತು. ಸ್ಮೃತಿಗಳಿಗೆ ಶ್ರುತ್ಯಾದಿಮೂಲತ್ವವನ್ನು 'ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ' ಎಂಬ ತತ್ವನಿರ್ಣಯದ ಮಾತಿನಂತೆ ತಿಳಿಯಬೇಕು. ಸ್ಮೃತಿಪ್ರಾಮಾಣ್ಯದ ವಿಸ್ತಾರವನ್ನು ತತ್ವಪ್ರದೀಪದಲ್ಲಿ 'ತಚ್ಚೋಕ್ತಂ' ಎಂಬ ಭಾಷ್ಯವನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಗಮನಿಸಬೇಕು.

ವಿವರಣೆ -

ಆಚಾರ್ಯರ ಮಂಗಳಶ್ಲೋಕದಲ್ಲಿರುವ 'ಗುರೂಂಶ್ಚ ನತ್ವಾ' ಎಂಬುದನ್ನು 'ಯಾಞ್ಚಾ' ಎಂಬ ಎರಡನೆಯ ಶ್ಲೋಕದಿಂದ ಟೀಕಾರಾಯರು ವಿವರಿಸುತ್ತಿದ್ದಾರೆ. ಅಥವಾ

'ದೇವತೆಗಳಿಂದ ಪ್ರಾರ್ಥನಾ ಎಂಬ ಮಂದರಪರ್ವತದಿಂದ ಮಥಿಸಲ್ಪಟ್ಟಾಗ ಯಾವ ವಿದ್ಯಾ ಎಂಬ ಲಕ್ಷ್ಮ್ಯಯೇ ಮೊದಲಾದವುಗಳು ಹುಟ್ಟಿದವೋ ಅಂತಹ' ಎಂದು ಅನ್ವಯ. ವ್ಯಾಖ್ಯೇಯವಾದ ಭಾಷ್ಯಕ್ಕೆ ಮೂಲವಾದ ಸೂತ್ರಗಳ ಪ್ರಾಮಾಣ್ಯವನ್ನು ಸಮರ್ಥಿಸುತ್ತಾ ಸೂತ್ರಕಾರರಾದ ವೇದವ್ಯಾಸದೇವರನ್ನು ಪ್ರಾರ್ಥಿಸುತ್ತಿದ್ದಾರೆ.

## ಉಪಮಾನ – ಉಪಮೇಯ

'ಭೂತ್ಯೈ' ಎಂಬಲ್ಲಿ ಭೂತಿಶಬ್ದಕ್ಕೆ 'ಜ್ಞಾನವೆಂಬ ಸಂಪತ್ತು' ಎಂದರ್ಥ. ಪುರಾಣಾದಿಗಳನ್ನು ಪ್ರತ್ಯೇಕವಾಗಿ ಹೇಳಿರುವುದರಿಂದ 'ವಿದ್ಯಾ' ಶಬ್ದದಿಂದ ಕೇವಲ ವೇದವನ್ನಷ್ಟೇ ವಿವಕ್ಷಿಸಬೇಕು. ಪುರಾಣಗಳನ್ನು ಇಟ್ಟುಕೊಳ್ಳಬಾರದು. ಬ್ರಹ್ಮಸೂತ್ರ ಎಂಬಲ್ಲಿರುವ ಬ್ರಹ್ಮಪದವನ್ನು ಎರಡು ಬಾರಿ ಇಟ್ಟುಕೊಳ್ಳಬೇಕು. ಆವಾಗ ಬ್ರಹ್ಮನಿಗೆ (=ವಿಷ್ಣುವಿಗೆ ಸಂಬಂಧಿಸಿದ) ಯಾವ ಬ್ರಹ್ಮ = ವೇದಸಮೂಹವಿದೆಯೋ ಅದರ ಸೂತ್ರಗಳೆಂದರೆ ವೇದಾರ್ಥವಿಚಾರಕ್ಕೆ ಕಾರಣೀಭೂತವಾದ ನ್ಯಾಯನಿಬಂಧನ-ರೂಪ ವಾಕ್ಯಗಳೆಂದರ್ಥ. ಅಥವಾ ಬ್ರಹ್ಮಶಬ್ದದ ಆವೃತ್ತಿ ಬೇಡ. ಬ್ರಹ್ಮ ಎಂದರೆ ಶ್ರುತಿಸಮೂಹ. ಅವುಗಳ ಸೂತ್ರವೆಂದರೆ ಶ್ರುತ್ಯರ್ಥ ನಿರ್ಣಾಯಕನ್ಯಾಯ-ನಿಬಂಧನರೂಪವಾದ ಶಾಸ್ತ್ರವೆಂದರ್ಥ. ಈ ಶ್ಲೋಕದಲ್ಲಿ ಕೊಟ್ಟ ಹೋಲಿಕೆಗಳು ಬಹಳ ಅರ್ಥಪೂರ್ಣಗಳಾಗಿವೆ.

| ಉಪಮೇಯ | ಉಪಮಾನ | ಸಾಧಾರಣಗುಣ |
|---|---|---|
| ↓ | ↓ | ↓ |
| ವಿದ್ಯೆ | ಲಕ್ಷ್ಮೀ | ಸಂಪತ್‌ಕರತ್ವ |
| ಭಾರತ | ಪಾರಿಜಾತ | ಅಶೇಷಪುರುಷಾರ್ಥಪ್ರದತ್ವ |
| ಬ್ರಹ್ಮಸೂತ್ರ | ಅಮೃತ | ಅಜರಾಮರಣಹೇತುತ್ವ |
| ಪುರಾಣಗಳು | ಮಣಿಸಮೂಹ | ಅನೇಕ ತತ್ವಪ್ರಕಾಶಕತ್ವ |
| ಶುಕಾಚಾರ್ಯರು | ಚಂದ್ರ | ಆಹ್ಲಾದಕರತ್ವ |
| ವೇದವ್ಯಾಸರು | ಕ್ಷೀರಸಮುದ್ರ | ಐಶ್ವರ್ಯಪ್ರದತ್ವ |

ವೇದಕ್ಕೆ ಹುಟ್ಟಿಲ್ಲ. ಅದರಂತೆ ಲಕ್ಷ್ಮೀದೇವಿಯೂ ಸಮುದ್ರದಿಂದ ಹುಟ್ಟದ ಕಾರಣ ಅಭಿವ್ಯಕ್ತಿಯನ್ನು ಹೇಳುವ 'ಉದೈತ್' ಎಂಬ ಪದವನ್ನು ಹೇಳಿದರು. ಕ್ಷೀರಸಮುದ್ರವು ಐಶ್ವರ್ಯವನ್ನು ನೀಡಿದಂತೆ ವ್ಯಾಸರೂ ಸಹ ಸಜ್ಜನರಿಗೆ ಸಂಪತ್ತನ್ನು ನೀಡುತ್ತಾರಾದ್ದರಿಂದ ಕ್ಷೀರಸಮುದ್ರದಂತಿದ್ದಾರೆ. ಇದನ್ನು 'ಸತಾಂ ಭೂತಿದಃ' ಎಂಬುದರಿಂದ ಹೇಳಿದ್ದಾರೆ.

## 'ಸತಾಂ' ಎಂಬ ಪ್ರಯೋಗ ಸಾಧುವಾಗಿದೆ

ಪ್ರಶ್ನೆ - 'ಸತಾಂ' ಎಂದು ಹೇಗಾಗುತ್ತೆ? 'ಸದ್ಭ್ಯಃ' ಎಂದಾಗಬೇಕಲ್ಲವೇ? ಸಂಪ್ರದಾನಸಂಜ್ಞೆ ಬಂದು 'ಚತುರ್ಥೀ ಸಂಪ್ರದಾನೇ' ಎಂಬ ಸೂತ್ರದಿಂದ ಚತುರ್ಥೀ ವಿಭಕ್ತಿ ಬರುತ್ತದೆ. 'ವಿಪ್ರಾಯ ಗಾಂ ದದಾತಿ' ಎಂದಾದಂತೆ 'ಸದ್ಭ್ಯಃ ಭೂತಿದಃ' ಎಂದಾಗಬೇಕು. 'ಸತಾಂ' ಎಂಬ ಷಷ್ಠಿಯು ತಪ್ಪಾಗುತ್ತೆ.

ಉತ್ತರ - ಇಲ್ಲಿ ಷಷ್ಠಿಯೇ ಬರಬೇಕು ಹೊರತು ಚತುರ್ಥೀ ಬರುವುದಿಲ್ಲ. ಪಾಣಿನಿಯು ಸಂಪ್ರದಾನ ಎಂಬ ದೀರ್ಘವಾದ ಸಂಜ್ಞೆಯನ್ನು ಮಾಡಬೇಕಾಗಿರಲಿಲ್ಲ. 'ಟಿ' ಮೊದಲಾದವುಗಳಂತೆ ಲಘುಸಂಜ್ಞೆಯನ್ನೇ ಮಾಡಬಹುದಿತ್ತು. ಆದರೂ ದೀರ್ಘವಾದ ಸಂಜ್ಞೆಯನ್ನು ಮಾಡಿದ್ದರಿಂದ ಏನು ತಿಳಿಸಿದ್ದಾನೆ? ಎಂದರೆ 'ಸ್ವಸ್ವತ್ವತ್ಯಾಗಪೂರ್ವಕವಾದ ಪರಸ್ವತ್ವಾಪಾದಕವೆಂಬ ದಾನವು ಎಲ್ಲಿರುತ್ತದೋ, ಅಲ್ಲಷ್ಟೇ ಸಂಪ್ರದಾನಸಂಜ್ಞೆಯನ್ನು ಹೇಳಬೇಕು; ಬೇರೆ ಕಡೆ ಹೇಳಬಾರದು' ಎಂದು. ಆದ್ದರಿಂದಲೇ 'ರಜಕಸ್ಯ ವಸ್ತ್ರಂ ದದಾತಿ' ಎಂಬಲ್ಲಿ ಸಂಪ್ರದಾನಸಂಜ್ಞೆ ಬರುವುದಿಲ್ಲ. ಸಂಬಂಧಸಾಮಾನ್ಯಾರ್ಥದಲ್ಲಿ ಷಷ್ಠೀವಿಭಕ್ತಿ ಬಂದು 'ರಜಕಸ್ಯ' ಎಂದಾಗುತ್ತದೆ. ಅದರಂತೆ ಇಲ್ಲಿಯೂ ಸ್ವಸ್ವತ್ವತ್ಯಾಗಪೂರ್ವಕ ಪರಸ್ವತ್ವಾಪಾದಕರೂಪವಾದ ಸಂಪ್ರದಾನ ಇಲ್ಲದ ಕಾರಣ ಚತುರ್ಥೀ ವಿಭಕ್ತಿಯು ಬರುವುದಿಲ್ಲ. ಸಂಬಂಧ-ಸಾಮಾನ್ಯಾರ್ಥದಲ್ಲಿ ಷಷ್ಠೀವಿಭಕ್ತಿಯೇ ಬರುತ್ತದೆ.

## ಗುರುನಮಸ್ಕಾರದಿಂದ ಶಾಸ್ತ್ರಪ್ರಾಮಾಣ್ಯಸಮರ್ಥನೆ

'ವ್ಯಾಸ' ಎಂದು ಹೇಳಿ ಅಂತಹ ವ್ಯಾಸರಿಗೆ ಶಾಸ್ತ್ರಪ್ರಭವತ್ವವನ್ನು ಹೇಳಿದ್ದರಿಂದ ಗುರುತ್ವವನ್ನು ಹೇಳಿದಂತಾಯಿತು. 'ಗುರೂಂಶ್ಚ' ಎಂಬ ಆಚಾರ್ಯರ ಮಾತನ್ನು

ವ್ಯಾಖ್ಯಾನಿಸಿದಂತಾಯಿತು.

'ಉದೈದ್ವಿದ್ಯೇಂದಿರಾ' ಇತ್ಯಾದಿ ವಿಶೇಷಣದಿಂದ ವಿವಕ್ಷಿತಾರ್ಥತತ್ವಜ್ಞಾನವು ಸೂಚಿತವಾಗಿ ವಕ್ತ್ರಾನುಕೂಲ್ಯವನ್ನು ಹೇಳಿದಂತಾಗುತ್ತದೆ. 'ನಿರ್ಜರೈಃ' ಇತ್ಯಾದಿ ವಿಶೇಷಣದಿಂದ ತತ್ವಜ್ಞಾನಯೋಗ್ಯತೆಯನ್ನು ತಿಳಿಸಿದಂತಾಗಿ ಶ್ರೋತ್ರಾನುಕೂಲ್ಯವನ್ನು ತಿಳಿಸಿದಂತಾಗುತ್ತದೆ. 'ಯಾಜ್ಞಾ' ಎಂಬುದರಿಂದ ಪ್ರಸಂಗಾನುಕೂಲ್ಯವನ್ನು ಸೂಚಿಸಿದಂತಾಗುತ್ತದೆ. ಇದರಿಂದ 'ವಕ್ತ್ರಶ್ರೋತೃಪ್ರಸಕ್ತೀನಾಂ ಯದಾಪ್ತಿರನುಕೂಲತಾ' ಎಂಬ ಅನುವ್ಯಾಖ್ಯಾನದ ಮಾತಿನಂತೆ ಆಪ್ತಿಮೂಲತ್ವವನ್ನು ಸೂತ್ರಗಳಿಗೆ ಸಮರ್ಥಿಸಿದಂತಾಯಿತು. ಬ್ರಹ್ಮಸೂತ್ರಪದಕ್ಕೆ ಹಿಂದೆ ಮಾಡಿದ ವ್ಯಾಖ್ಯಾನದಂತೆ ಶ್ರುತಿಮೂಲತ್ವವನ್ನು, ಸೂತ್ರಶಬ್ದದಿಂದ ಯುಕ್ತಿಮೂಲತ್ವವನ್ನೂ ಹೇಳಿದಂತಾಯಿತು. ಆದ್ದರಿಂದ

ಆಪ್ತವಾಕ್ಯತಯಾ ತೇನ ಯುಕ್ತಿಮೂಲತಯಾ ತಥಾ।
ಶ್ರುತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ ॥
ದೃಶ್ಯತೇ ಬ್ರಹ್ಮಸೂತ್ರಾಣಾಮ್ ॥

ಎಂಬ ವಾಕ್ಯದ ಪ್ರಕಾರ ಪ್ರಾಮಾಣ್ಯವು ೧) ಆಪ್ತಿಮೂಲಕವಾಗಿ ೨) ಯುಕ್ತಿ-ಮೂಲಕವಾಗಿ ೩) ಶ್ರುತಿಮೂಲಕವಾಗಿ ಮೂರುವಿಧವಾಗಿದೆ. ಬ್ರಹ್ಮಸೂತ್ರಗಳಲ್ಲಿ ಮೂರೂ ವಿಧವಾದ ಪ್ರಾಮಾಣ್ಯವಿದೆ. (ಚಂದ್ರಿಕೆಯಲ್ಲಿ ಇದು ವಿಶದವಾಗಿದೆ). ಉಪಲಕ್ಷಣಯಾ ತಂತ್ರಪುರಾಣಾದಿಗಳಿಗೂ ಸಹ ಆಪ್ತಿಮೂಲತ್ವಾದಿಗಳಿಂದ ಪರಮಪ್ರಾಮಾಣ್ಯವನ್ನು ಸಮರ್ಥಿಸಿದಂತಾಯಿತು. ಬ್ರಹ್ಮಸೂತ್ರಗಳ ಸಮಾನ-ಪ್ರಾಮಾಣ್ಯವನ್ನು ತಂತ್ರಾದಿಗಳಿಗೆ ಹೇಳಿದಂತಾಯಿತು. ಆದ್ದರಿಂದ 'ಸ್ಮೃತೇಶ್ಚ' ಇತ್ಯಾದಿ ಸೂತ್ರದಲ್ಲಿ ಪ್ರತಿಪಾದಿಸುವ ಮತ್ತು ಮುಂದೆ ಭಾಷ್ಯದಲ್ಲಿ ಉದಾಹರಿಸುವ ಸ್ಮೃತಿವಾಕ್ಯಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸಿದಂತಾಯಿತು. ಹೀಗೆ ಆಪ್ತಿ-ಮೂಲತ್ವವನ್ನು ಸ್ಮೃತಿಗಳಿಗೆ ಹೇಳುವುದು ಸುಲಭ. ಆದರೆ ಶ್ರುತಿಮೂಲತ್ವ ಹಾಗೂ ಯುಕ್ತಿಮೂಲತ್ವಗಳು ಹೇಗೆ ಸಾಧ್ಯ? ಎಂಬ ಪ್ರಶ್ನೆ ಬರುತ್ತದೆ. ಇವುಗಳನ್ನೂ ಸಹ ಆಚಾರ್ಯರು ತತ್ವನಿರ್ಣಯದಲ್ಲಿ 'ಇತಿಹಾಸಪುರಾಣಃ ಪಂಚಮೋ ವೇದಾನಾಂ

ವೇದಃ' ಎಂಬಲ್ಲಿ ಸಮರ್ಥಿಸಿದ್ದಾರೆ. ತತ್ತ್ವಪ್ರದೀಪದಲ್ಲಿ 'ತಚ್ಚೋಕ್ತಮ್' (ತಚ್ಚೋಕ್ತಂ ಸ್ಕಾಂದೇ ಎಂಬ ಉಪೋದ್ಘಾತದಲ್ಲಿ) ಎಂಬ ಭಾಷ್ಯವನ್ನು ವ್ಯಾಖ್ಯಾನಿಸುವಾಗ ಈ ಸ್ಮೃತಿಪ್ರಾಮಾಣ್ಯವನ್ನು ವಿಸ್ತಾರವಾಗಿ ಉಪಪಾದಿಸಿದ್ದಾರೆ. ಹೀಗೆ ಪರಮಪ್ರಮಾಣವಾದ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನರೂಪವಾದ್ದರಿಂದ ಭಾಷ್ಯವೂ ಪರಮಪ್ರಮಾಣವಾಗಿದೆ. ಅಂತಹ ಭಾಷ್ಯಕ್ಕೆ ವ್ಯಾಖ್ಯಾನಮಾಡುವುದು ಅತ್ಯಂತಸಮಂಜಸವಾಗಿದೆ.

'ಸ್ತೋಃ ಶ್ಚುನಾಶ್ಚುಃ' ಎಂಬ ಸೂತ್ರದಿಂದ 'ಯಾಚ್ನಾ' ಎಂಬಲ್ಲಿರುವ ನಕಾರಕ್ಕೆ ಞಕಾರವು ಆದೇಶವಾಗಿ ಬಂದರೆ 'ಯಾಞ್ಞಾ' ಎಂದಾಗಬೇಕು. 'ಯಾಚ್ನಾ' ಎಂದು ಹೇಗಾಗುತ್ತದೆ? ಕಾಶಿಕೆಯಲ್ಲಿಯೂ 'ಯಜೇರ್ಯಜ್ಞಃ ಯಾಚೇರ್ಯಾಞ್ಞಾ' ಎಂಬ ಪ್ರಯೋಗವು ಕಾಣಿಸುತ್ತಿದೆಯಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ 'ಯಾಚ್ನಾಮೋಘಾವರಮಧಿಗುಣೇ ನಾಧಮೇ ಲಬ್ಧಕಾಮಾ' ಎಂದು ಕಾಳಿದಾಸನು ಮೇಘದೂತದಲ್ಲಿ ಯಾಚ್ನಾ ಎಂದೇ ಪ್ರಯೋಗಿಸಿದ್ದಾನೆ. ಇನ್ನೂ ಅನೇಕಪ್ರಯೋಗಗಳು ಯಾಚ್ನಾ ಎಂದೇ ಇರುವುದರಿಂದ ಶ್ಚುತ್ವವನ್ನು ಮಾಡಲೇಬೇಕೆಂಬ ನಿಯಮವಿಲ್ಲ.[೧]

ವಿಶೇಷ ವಿಚಾರ - ಗ್ರಂಥದ ಪ್ರಾರಂಭದಲ್ಲಿ ಮಂಗಳಾಚರಣೆಯನ್ನು ಮಾಡಿದ್ದಾಯಿತು. ಪುನಃ ಎರಡನೇ ಶ್ಲೋಕ ಏಕೆ? 'ಶ್ರೇಯಾಂಸಿ ಬಹುವಿಘ್ನಾನಿ' ಎಂಬಂತೆ ಅನೇಕ ಮಂಗಳಾರಣೆ ಅನಿವಾರ್ಯವೆಂದರೆ ''ವ್ಯಾಸೋ ಭವತು ಮೇ ಭೂತ್ಯೈ'' ಎಂದಷ್ಟೇ ಸಾಕು. ದೀರ್ಘವಾದ ಮಂಗಳಾರಣೆ ಏಕೆ? ಮತ್ತು ಪ್ರಾರಂಭದಲ್ಲಿ ಸೂತ್ರಪ್ರಾಮಾಣ್ಯದ ಸಮರ್ಥನೆಯ ಅವಶ್ಯಕತೆ ಏನು? ಎಂದರೆ ತತ್ತ್ವಪ್ರಕಾಶಿಕೆಯು ಬ್ರಹ್ಮಸೂತ್ರಭಾಷ್ಯದ ವ್ಯಾಖ್ಯಾನವಾಗಿದೆ. ಆದ್ದರಿಂದ ಮೊದಲು ತತ್ತ್ವಪ್ರಕಾಶಿಕಾಗ್ರಂಥಕ್ಕೆ ಪ್ರಾಮಾಣ್ಯ ಸಿದ್ಧಿಸಬೇಕು. ಇದಕ್ಕೆ ಪ್ರಾಮಾಣ್ಯವು ಸಿದ್ಧವಾಗಬೇಕಾದರೆ ಅದಕ್ಕೂ ಮೂಲವಾದ ವ್ಯಾಖ್ಯೇಯವಾದ ಭಾಷ್ಯದ ಪ್ರಾಮಾಣ್ಯವು ಸಿದ್ಧವಾಗಬೇಕು. ಭಾಷ್ಯದ ಪ್ರಾಮಾಣ್ಯವು ಯಾವಾಗ ಸಿದ್ಧವಾಗುತ್ತದೆಂದರೆ ಭಾಷ್ಯಕ್ಕೂ ಮೂಲವಾದ ಬ್ರಹ್ಮಸೂತ್ರಗಳ ಪ್ರಾಮಾಣ್ಯವು ಸಿದ್ಧವಾದಾಗ ಮಾತ್ರ . ಆದ್ದರಿಂದ ಎಲ್ಲ ಗ್ರಂಥಗಳಿಗೂ ಮೂಲವಾದ ಬ್ರಹ್ಮಸೂತ್ರಗಳ ಪ್ರಾಮಾಣ್ಯವು ಸಿದ್ಧವಾದರೆ ಮಾತ್ರ ಭಾಷ್ಯಕ್ಕೂ ಟೀಕೆಗೂ ಪ್ರಾಮಾಣ್ಯವು ಸಿದ್ಧಿಸಲು ಸಾಧ್ಯ . ಈ ಅಭಿಪ್ರಾಯದಿಂದ ಸೂತ್ರಗಳ ಪ್ರಾಮಾಣ್ಯವನ್ನು ಟೀಕಾರಾಯರು ಈ ಶ್ಲೋಕದಲ್ಲಿ ಸೂಚಿಸುತ್ತಿದ್ದಾರೆ. ಸೂತ್ರಪ್ರಮಾಣ್ಯದ ಸಿದ್ಧಿಗೋಸ್ಕರ ಶ್ಲೋಕದಲ್ಲಿರುವ ಎಲ್ಲ ವಿಶೇಷಣಗಳೂ ಸಾರ್ಥಕಗಳಾಗುತ್ತವೆ.

(೧) ಇದು ಕೇವಲ ವ್ಯಾಕ್ಯಾರ್ಥಮಂಜರಿಯಲ್ಲಿರುವ ವಿಚಾರ.

ಸೂತ್ರಪ್ರಾಮಾಣ್ಯಕ್ಕೆ ಪೂರಕವಾಗಿರುವ ವಕ್ತ್ರಾದ್ಯಾನುಕೂಲ್ಯವನ್ನು ಅನೇಕ ವಿಶೇಷಣಗಳಿಂದ ಈ ಶ್ಲೋಕದಲ್ಲಿ ಸಮರ್ಥಿಸುತ್ತಿದ್ದಾರೆ. ಪ್ರಾಮಾಣ್ಯದ ಸಮರ್ಥನೆಗೆ ಶ್ರುತಿಮೂಲತ್ವ ಮತ್ತು ಯುಕ್ತಿಮೂಲತ್ವಗಳು ಅನಿವಾರ್ಯ. 'ಸದ್‌ಬ್ರಹ್ಮಸೂತ್ರಾಮೃತಂ' ಎಂಬ ಪದವೇ ಇವೆರಡನ್ನು ಸೂಚಿಸುತ್ತದೆ. ಬ್ರಹ್ಮಸೂತ್ರ ಎಂಬಲ್ಲಿ ಬ್ರಹ್ಮಶಬ್ದಕ್ಕೆ ವಿಷ್ಣು ಎಂದರ್ಥ. ವಿಷ್ಣುವಿಗೆ ಸಂಬಂಧಪಟ್ಟವುಗಳು ಶ್ರುತಿಗಳು. ಬ್ರಹ್ಮಪದವನ್ನು ತಂತ್ರದಿಂದ ಎರಡು ಬಾರಿ ಅನ್ವಯಿಸಬೇಕು. ಬ್ರಹ್ಮ = ಶ್ರುತಿ ಸಮೂಹಗಳು, ಅವುಗಳನ್ನು ನಿಬಂಧನೆ ಮಾಡುವ ಯಾವ ಸೂತ್ರಗಳು ಇವೆಯೋ ಆ ಬ್ರಹ್ಮಸೂತ್ರಗಳು ಎಂದರ್ಥ. ಅಥವಾ ಬ್ರಹ್ಮಶಬ್ದಕ್ಕೇನೆ ಬ್ರಹ್ಮಸೂತ್ರ ಎಂದರ್ಥ. ಈ ಪಕ್ಷದಲ್ಲಿ ಶ್ರುತಿಗಳು ವಿಷ್ಣುವಿಗೆ ಸಂಬಂಧಿಸಿದವು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದನ್ನು ಸಿದ್ಧವತ್ ಕೃತ್ಯ ಅರ್ಥೈಸಬೇಕು. ಈ ವ್ಯುತ್ಪತ್ತಿಯಿಂದ ಬ್ರಹ್ಮಸೂತ್ರಗಳು ಶ್ರುತಿವ್ಯಾಖ್ಯಾನರೂಪವಾಗಿರುವುದರಿಂದ ಶ್ರುತಿಮೂಲತ್ವವು ಸಿದ್ಧವಾಯಿತು. ಸ್ವತಃ ಯುಕ್ತಿರೂಪಗಳಾದ್ದರಿಂದ ಯುಕ್ತಿಮೂಲತ್ವವೂ ಬ್ರಹ್ಮಸೂತ್ರಗಳಿಗೆ ಇದೆ ಎಂದು ತಿಳಿಯಬೇಕು.

ಇಲ್ಲಿಗೆ ದ್ವಿತೀಯಪದ್ಯದ ವ್ಯಾಖ್ಯಾನವು ಮುಗಿಯಿತು.

## ಶ್ರೀಮದಾಚಾರ್ಯರಿಗೆ ನಮಸ್ಕಾರ (ಭಾಷ್ಯಕ್ಕೆ ವ್ಯಾಖ್ಯೇಯತ್ವಸಮರ್ಥನೆ)

**तत्वप्रकाशिका –**
**स्वान्तध्वान्तनिकृन्तने जितमहावैकर्तनांशुव्रजं**
**निर्दोषं जितचन्द्रचन्द्रिकमलं तापत्रयोन्मूलने ।**
**गाम्भीर्ये जितसिन्धुराजममितं भाष्यं यदास्याम्बुजाद्**
**आविर्भूतममन्दबोधभगवत्पादान् प्रपद्येऽथ तान् ।। ३ ।।**

ಸೂರ್ಯನ ಕಿರಣಗಳು ಬಾಹ್ಯವಾದ ಅಂಧಕಾರವನ್ನಷ್ಟೇ ನಾಶಪಡಿಸುತ್ತವೆ. ಆದರೆ ಬ್ರಹ್ಮಸೂತ್ರಭಾಷ್ಯವು ಒಳಗಿನ ಅಜ್ಞಾನಾಂಧಕಾರವನ್ನೂ ನಾಶಪಡಿಸುವ ಮೂಲಕ ಸೂರ್ಯನ ಕಿರಣಗಳನ್ನು ಗೆದ್ದಿದೆ. ಚಂದ್ರನು ಬೆಳದಿಂಗಳ ಮೂಲಕ ಬಾಹ್ಯವಾದ ತಾಪವನ್ನಷ್ಟೇ ಪರಿಹರಿಸಿದರೆ ಭಾಷ್ಯವು ತಾಪತ್ರಯಗಳನ್ನು ಪರಿಹರಿಸುವ ಮೂಲಕ ಚಂದ್ರನ ಚಂದ್ರಿಕೆಯನ್ನೂ ಗೆದ್ದಿದೆ. ಮತ್ತು ಈ ಭಾಷ್ಯವು ದೋಷರಹಿತವಾಗಿದೆ. ಗಾಂಭೀರ್ಯದಲ್ಲಿ ಸಮುದ್ರವನ್ನು ಗೆದ್ದಿದೆ. (ಅನೇಕ ಯೋಜನೆಗಳಷ್ಟು ಸಮುದ್ರವು ಬೃಹತ್ ಆಗಿದ್ದರೂ

ಪರಿಮಿತವಾಗಿದೆ. ಆದರೆ ಭಾಷ್ಯವು ಅಪರಿಮಿತವಾದ ಅರ್ಥದಿಂದೊಳಗೂಡಿ ಸಮುದ್ರವನ್ನೂ ಮೀರಿಸಿದೆ). ಹೀಗೆ ಪರಮೋತ್ಕೃಷ್ಟವಾದ ಭಾಷ್ಯವು ಯಾರ ಮುಖಾರವಿಂದದಿಂದ ಪ್ರಕಟವಾಗಿದೆಯೋ; ಅಂತಹ ಶ್ರೀಮದಾನಂದತೀರ್ಥಭಗವತ್ ಪಾದರನ್ನು ಅನನ್ಯವಾಗಿ ಶರಣು ಹೊಂದುತ್ತೇನೆ.

## ಶ್ರೀಮದಾಚಾರ್ಯರ ಭಾಷ್ಯಕ್ಕೆ ಹೋಲಿಕೆಯೇ ಇಲ್ಲ

**ಭಾವದೀಪಃ – ಭಾಷ್ಯಸ್ಯ ವ್ಯಾಖ್ಯೇಯತ್ವಪ್ರಯೋಜಕಸಫಲತ್ವಗಮ್ಭೀರತ್ವಾದಿ ದರ್ಶಯನ್ ಭಾಷ್ಯಕೃತಂ ಪ್ರಣಮತಿ – ಸ್ವಾನ್ತೇತಿ ।। ಅಲಮ್ = ಸಮರ್ಥಮ್ । 'ನಿಕೃನ್ತನೇ' ಇತ್ಯತ್ರಾಪ್ಯನ್ವೇತಿ ।**

ಶ್ರೀಮದಾಚಾರ್ಯರ ಭಾಷ್ಯವು ಮಹತ್ ಪ್ರಯೋಜನದಾಯಕವಾಗಿದೆ. ಗಂಭೀರವಾಗಿದೆ. ಆದ್ದರಿಂದ ಅದನ್ನು ವ್ಯಾಖ್ಯಾನ ಮಾಡುವ ಅವಶ್ಯಕತೆ ಬಹಳ ಇದೆಯೆಂದು ಸಮರ್ಥಿಸುತ್ತಾ ಭಾಷ್ಯಕಾರರನ್ನು 'ಸ್ವಾನ್ತಧ್ವಾನ್ತ' ಇತ್ಯಾದಿ ಶ್ಲೋಕದಿಂದ ನಮಸ್ಕರಿಸುತ್ತಿದ್ದಾರೆ.

'ಅಲಂ' ಎಂಬ ಪದಕ್ಕೆ ಸಮರ್ಥವಾದದ್ದು ಎಂದರ್ಥ. 'ನಿಕೃಂತನೇ' ಎಂಬಲ್ಲಿಯೂ ಕೂಡ ಇದು ಅನ್ವಯವನ್ನು ಹೊಂದುತ್ತದೆ.

## ಭಾಷ್ಯದ ಮುಂದೆ ಸೂರ್ಯಚಂದ್ರರು ಸೋತರು

**ಭಾವದೀಪಃ – ವೈಕರ್ತನಾಂಶುವ್ರಜಚನ್ದ್ರಚನ್ದ್ರಿಕಯೋಃ ಸ್ವಾನ್ತಧ್ವಾನ್ತಕೃನ್ತನೇ ತಾಪತ್ರಯೋನ್ಮೂಲನೇ ಚಾಶಕ್ತತ್ವಾತ್ ಭಾಷ್ಯೇಣ ಜಿತತ್ವಮ್ । 'ನಿರ್ದೋಷಮ್' ಇತಿ ತಯೋರ್ಜಯೇ ಹೇತ್ವನ್ತರಮ್ । ತಾಪಹ್ರಾಸಾದಿದೋಷಿತ್ವಾತ್ ತಯೋಃ ।**

ಸೂರ್ಯನ ಕಿರಣವು ಅಂತರಂಗದ ಕತ್ತಲನ್ನು ಪರಿಹರಿಸಲು ಅಸಮರ್ಥವಾಗಿದೆ. ಚಂದ್ರನ ಬೆಳದಿಂಗಳೂ ಕೂಡ ತಾಪತ್ರಯದ ಪರಿಹಾರದಲ್ಲಿ ಅಸಮರ್ಥವಾಗಿದೆ. ಆದರೆ ಭಾಷ್ಯವು ಒಳಗಿನ ಕತ್ತಲೆಯನ್ನು ಮತ್ತು ತಾಪತ್ರಯಗಳನ್ನು ಪರಿಹರಿಸುವುದರಿಂದ ಸೂರ್ಯನ ಕಿರಣವನ್ನು ಹಾಗೂ ಚಂದ್ರನ ಬೆಳದಿಂಗಳನ್ನು ಗೆದ್ದಿರುತ್ತವೆ.

'ನಿರ್ದೋಷ್ಯಂ' ಎಂಬುದು ಮತ್ತೊಂದು ಹೇತುವಾಗಿವೆ. ಸೂರ್ಯನ ಕಿರಣ ಹಾಗೂ ಚಂದ್ರನ ಬೆಳದಿಂಗಳನ್ನು ಭಾಷ್ಯವು ಯಾವಕಾರಣಕ್ಕಾಗಿ ಗೆದ್ದಿರುತ್ತದೆನ್ನಲು ಇದು ಮತ್ತೊಂದು ಕಾರಣವೆಂದು ತಿಳಿಯಬೇಕು. ಸೂರ್ಯನ ಕಿರಣದಲ್ಲಿ ತಾಪ ಎಂಬ ದೋಷವಿದೆ. ಚಂದ್ರನ ಕಿರಣದಲ್ಲಿ ಹ್ರಾಸ ಎಂಬ ದೋಷವಿದೆ. ಈ ಎರಡೂ ದೋಷಗಳು ಭಾಷ್ಯದಲ್ಲಿ ಇರುವುದಿಲ್ಲ ಎಂಬುದು ಇದರ ಅಭಿಪ್ರಾಯ.

## ಅಗಾಧ ಸಮುದ್ರವೂ ಸೋತಿತು

**ಭಾವದೀಪಃ – 'अमितम्'** अमितार्थमिति हेतोर्जितसिन्धुराजत्वम् । तदुक्तं 'भाष्यं चात्यर्थविस्तरम्' इत्यनुभाष्ये । अथ तस्मादेवंरूपभाष्या-विर्भावकत्वादवसरप्राप्तान् **'प्रपद्ये'** इति चार्थः ।

'ಅಮಿತಂ' ಎಂಬ ಪದಕ್ಕೆ ಅಪಾರವಾದ ಅರ್ಥವುಳ್ಳದ್ದು ಎಂದರ್ಥ. ಆ ಕಾರಣದಿಂದಲೇ ಸಮುದ್ರವನ್ನು ಗೆದ್ದಿದೆಯೆಂದು ತಿಳಿಯಬೇಕು. ಇದನ್ನು ಭಾಷ್ಯವು 'ಚಾತ್ಯರ್ಥವಿಸ್ತರಮ್' ಎಂದು ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ.

'ಅಥ' ಎಂಬ ಪದಕ್ಕೆ ಇಂತಹ ಭಾಷ್ಯದ ಆವಿರ್ಭಾವಕ್ಕೆ ಕಾರಣಪುರುಷರಾದ್ದರಿಂದ ನಮಸ್ಕಾರ ಮಾಡಲು ಅತ್ಯಂತ ಅರ್ಹರಾಗಿದ್ದಾರೆ. ಮತ್ತು ನಮಸ್ಕಾರ ಮಾಡುವುದು ಅತ್ಯಂತ ಸಂಗತವಾಗಿದೆ. ಇದನ್ನು ತಿಳಿಸಲು 'ಅಥ' ಎಂದಿದ್ದಾರೆ.

'ಪ್ರಪದ್ಯೇ' ಎಂಬುದು ಭಾಷ್ಯದಲ್ಲಿರುವ 'ಚ' ಪದದ ಅರ್ಥವಿದೆ.

## 'ನಿಕರ್ತನೇ' ಎಂದು ಉಚ್ಚರಿಸಿ

**ಭಾವದೀಪಃ –** अत्र **'निकर्तनः'** इति पाठः साधु । 'निकृन्तने' इति पाठे तु 'कृती छेदने' इति धात्वन्तरस्य रूपं ध्येयम् । तथाहि गीतगोविन्दे 'विरहिनिकृन्तनकुन्तमुखाकृतिकेतकदन्तुरिताशम्' इति प्रयोगः । 'एकेन नखनिकृन्तनेन' इति श्रुतौ च ।।३।।

'ನಿಕರ್ತನಃ' ಎಂಬುದು ಸರಿಯಾದ ಪಾಠ. 'ನಿಕೃಂತನೇ' ಎಂಬ ಪಾಠವನ್ನು ವಿವಕ್ಷಿಸಿದರೆ 'ಕೃತೀ ಛೇದನೇ' ಎಂಬ ಮತ್ತೊಂದು ಧಾತುವಿನಿಂದ ನಿಷ್ಪನ್ನವಾದ ಶಬ್ದವೆಂದು ತಿಳಿಯಬೇಕು. ಆದ್ದರಿಂದಲೇ 'ವಿರಹಿನಿಕೃಂತನಕೃಂತಮುಖಾಕೃತಿ-ಕೇತಕದಂತುರಿತಾಶಮ್' ಎಂಬ ಪ್ರಯೋಗವು ಕಾಣಿಸುತ್ತದೆ. 'ಏಕೇನ ನಖನಿಕೃಂತನೇನ' ಎಂಬ ಶ್ರುತಿಯಲ್ಲಿಯೂ 'ನಿಕೃಂತನ' ಎಂಬ ಪ್ರಯೋಗವಿದೆ.

ವಿಶೇಷ ವಿಚಾರ - ಶ್ರೀಮದಾಚಾರ್ಯರ ಭಾಷ್ಯವು ಮಹತ್ ಪ್ರಯೋಜನದಾಯಕವಾಗಿದೆ. ಗಂಭೀರವಾಗಿದೆ. ಆದ್ದರಿಂದ ಅದನ್ನು ವ್ಯಾಖ್ಯಾನ ಮಾಡುವ ಅವಶ್ಯಕತೆ ಬಹಳ ಇದೆಯೆಂದು ಸಮರ್ಥಿಸುತ್ತಾ ಭಾಷ್ಯಕಾರರನ್ನು 'ಸ್ವಾಂತಧ್ವಾಂತ' ಇತ್ಯಾದಿ ಶ್ಲೋಕದಿಂದ ನಮಸ್ಕರಿಸುತ್ತಿದ್ದಾರೆ. 'ಯಾರ ಮುಖಕಮಲದಿಂದ ಭಾಷ್ಯವು ಹೊರಹೊಮ್ಮಿದೆಯೋ ಅಂತಹ ಪೂರ್ಣಪ್ರಜ್ಞರನ್ನು ಶರಣಾಗತನಾಗುತ್ತೇನೆ' ಎಂದು ಅನ್ವಯ. ಭಾಷ್ಯದಲ್ಲಿ ಶ್ರುತಿಸ್ಮೃತಿಗಳೇ ಬಹಳವಾಗಿವೆ. ಆದ್ದರಿಂದ ಹುಟ್ಟಿತು ಎನ್ನದೆ ಆವಿರ್ಭೂತವಾಯಿತು ಎಂದು ಹೇಳಿದ್ದಾರೆ. ಮುಂದೆಯೂ 'ನಿಃಸೃತಮ್' (ಹೊರಹೊಮ್ಮಿತು) ಎಂದು ಹೇಳುತ್ತಾರೆ.

೧. ಶ್ರೀಮದಾಚಾರ್ಯರು ಅಪರಿಮಿತಜ್ಞಾನವುಳ್ಳವರೆಂದು ಸಮರ್ಥಿಸಲು ಭಗವತ್ಪಾದಶಬ್ದವನ್ನು ಪ್ರಯೋಗಿಸಿದ್ದಾರೆ. ಮನಸ್ಸಿನಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ಪರಿಹರಿಸುವುದರಿಂದ ಸೂರ್ಯಕಿರಣವನ್ನು ಭಾಷ್ಯವು ಗೆದ್ದಿದೆ.

೨. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ತಾಪತ್ರಯಗಳನ್ನು ಪರಿಹರಿಸುವುದರಲ್ಲಿ ಚಂದ್ರನ ಬೆಳದಿಂಗಳನ್ನು ಭಾಷ್ಯವು ಗೆದ್ದಿದೆ. ಈ ಎರಡು ಬಗೆಯಲ್ಲಿ ಜಿತತ್ವವನ್ನು ಹೇಳಿದ್ದರಿಂದ ಮಹಾಪ್ರಯೋಜನ (ಅಜ್ಞಾನಪರಿಹಾರ, ತಾಪತ್ರಯಪರಿಹಾರ)ವನ್ನು ಭಾಷ್ಯಕ್ಕೆ ಹೇಳಿದಂತಾಯಿತು.

೩. ಗಾಂಭೀರ್ಯದಲ್ಲಿ ಮಹಾಸಾಗರದಿಂದ ಜಿತತ್ವವನ್ನು ಹೇಳಿದ್ದರಿಂದ ಭಾಷ್ಯಕ್ಕೆ ಗಾಂಭೀರ್ಯಗುಣವನ್ನು ಉಪಪಾದಿಸಿದಂತಾಯಿತು.

''ಸೂರ್ಯನ ಕಿರಣಗಳು ಒಳಗಿನ ಅಜ್ಞಾನವನ್ನು ನಾಶಮಾಡುವುದರಲ್ಲಿ ಅಸಮರ್ಥವಾಗಿವೆ. ಚಂದ್ರನ ಚಂದ್ರಿಕೆಯು ತಾಪತ್ರಯಪರಿಹಾರದಲ್ಲಿ ಅಸಮರ್ಥವಾಗಿದೆ. ಆದರೆ ಭಾಷ್ಯವು ಒಳಗಿನ ಅಜ್ಞಾನವನ್ನು ಮತ್ತು ತಾಪತ್ರಯಗಳನ್ನು ಪರಿಹರಿಸುವುದರಿಂದ ಸೂರ್ಯನ ಕಿರಣಗಳನ್ನು ಮತ್ತು ಚಂದ್ರನ ಚಂದ್ರಿಕೆಯನ್ನು ಗೆದ್ದಿದೆಯೆಂದು ತಿಳಿಯಬೇಕು. ಈ ವಿಷಯದಲ್ಲಿ ನಿರ್ದೋಷತ್ವವು ಮತ್ತೊಂದು ಹೇತು. ಗ್ರಹಣ ಮೊದಲಾದ ಸಂದರ್ಭದಲ್ಲಿ ಸೂರ್ಯಚಂದ್ರರಲ್ಲಿ ದೋಷವು

ಕಾಣಿಸುತ್ತದೆ. ಇಂತಹ ದೋಷವು ಭಾಷ್ಯದಲ್ಲಿ ಇರುವುದಿಲ್ಲ. ಹೀಗೆ ಭಾಷ್ಯವನ್ನು ವರ್ಣಿಸಿದ್ದರಿಂದ ಭಾಷ್ಯದಿಂದ ಶೋಭಿಸುವ ಆಚಾರ್ಯರ ಮುಖಕಮಲವು ಸೂರ್ಯ ಹಾಗೂ ಚಂದ್ರಬಿಂಬಗಳನ್ನು ಮೀರಿಸಿದಂತಾಯಿತು'' ಎಂಬುದು ಇಲ್ಲಿಯ ಧ್ವನಿ.

ಸಮುದ್ರಕ್ಕೆ ಇಷ್ಟೇ ಲಕ್ಷಯೋಜನೆ ಎಂಬ ಪರಿಮಿತಿ ಇದೆ. ಆದರೆ ಆಚಾರ್ಯರ ಭಾಷ್ಯದ ಮಾತುಗಳ ಅರ್ಥಕ್ಕೆ ಪರಿಮಿತಿಯೇ ಇಲ್ಲ. (ಭಾಷ್ಯಂ ಚಾತ್ಯರ್ಥವಿಸ್ತರಮ್ ಎಂಬ ಅನುವ್ಯಾಖ್ಯಾನದ ಮಾತಿನಂತೆ). ಹೀಗೆ ಭಾಷ್ಯವು ಪರಿಮಿತವಾಗಿ ಸಮುದ್ರವನ್ನು ಗೆದ್ದಿದೆ. ಶಬ್ದತಃ ಅಪರಿಮಿತವೆಂದು ಹೇಳಬಾರದು ಅರ್ಥತಃ ಅಪರಿಮಿತತ್ವವನ್ನೇ ಹೇಳಬೇಕು.

ಟೀಕೆಯಲ್ಲಿ 'ಸ್ವಾಂತಧ್ವಾಂತನಿಕೃಂತನೇ' ಎಂದು ಪ್ರಯೋಗಿಸಿದ್ದಾರೆ. ವ್ಯಾಕರಣದ ಪ್ರಕಾರ ನಿಕರ್ತನೇ ಎಂದಾಗಬೇಕು. ಏಕೆಂದರೆ ಇಕಾರವು ಇತ್ ಆದಾಗ 'ಇದಿತೋ ನುಮ್ ಧಾತೋಃ' ಎಂಬ ಸೂತ್ರವು ನುಮಾಗಮವನ್ನು ವಿಧಿಸುತ್ತದೆ. ಆದರೆ 'ಕೃತೀ' ಎಂಬ ಧಾತುವಿನಲ್ಲಿ ಹ್ರಸ್ವ ಇಕಾರವು ಇತ್ ಆಗಿಲ್ಲ. ಈಕಾರವು ಇತ್ ಆಗಿದೆ. ಒಂದು ವೇಳೆ ನುಮಾಗಮ ಬಂದಿದ್ದರೆ ನಿಕೃಂತನೇ ಎಂದಾಗುತ್ತಿತ್ತು. ಹೌದು. ಆದರೆ 'ನಖನಿಕೃಂತನೇನ ಸರ್ವಂ ಕಾರ್ಷ್ಣ್ಯಯಸಂ ವಿಜ್ಞಾತಂ ಸ್ಯಾತ್' ಎಂಬ ಛಾಂದಸಪ್ರಯೋಗವನ್ನು ಕೂಡಿಸಲು ಸೂತ್ರವನ್ನು ವಿಭಾಗ ಮಾಡಬೇಕು. ಆವಾಗ 'ಇದಿತೋ ನುಮ್' ಎಂಬುದೇ ಬೇರೆ ಸೂತ್ರ; 'ಧಾತೋಃ' ಎಂಬುದೇ ಬೇರೆ ಸೂತ್ರ. 'ಕೃತೀ' ಮೊದಲಾದ ಇದಿತ್ ಆಗದ ಧಾತುಗಳಿಗೆ 'ಧಾತೋಃ' ಎಂಬ ಸೂತ್ರದಿಂದ ನುಮಾಗಮ ಬರುತ್ತದೆ. ಆದ್ದರಿಂದ 'ನಿಕೃಂತನೇ' ಎಂಬ ಪ್ರಯೋಗವು ಸಾಧುವಾಗಿದೆ.

ವಸ್ತುತಃ 'ನಿಕರ್ತನೇ' ಎಂಬ ಪಾಠವೇ ಸಾಧು. ನಿಕೃಂತನೇ ಎಂಬ ಪಾಠದಲ್ಲಿ 'ಕೃತೀ ಛೇದನೇ' ಎಂಬ ಧಾತುವನ್ನೇ ವಿವಕ್ಷಿಸಬೇಕು. ಈ ಪಕ್ಷದಲ್ಲಿ ನಿಕೃಂತನೇ ಎಂಬ ಪಾಠವೂ ತಪ್ಪಾಗುವುದಿಲ್ಲ. ಆದ್ದರಿಂದಲೇ ಗೀತಗೋವಿಂದದಲ್ಲಿ 'ವಿರಹಿನಿಕೃಂತನಕುಂತಮುಖಾಕೃತಿಕೇತಕಿದಂತುರಿತಾಶಂ' ಎಂಬ ಪ್ರಯೋಗವು ಕಾಣಿಸುತ್ತದೆ.

'ನಿಕೃಂತನ' ಶಬ್ದಸಾಧುತ್ವಸಮರ್ಥನೆ

ಆಕ್ಷೇಪ – ಟೀಕೆಯಲ್ಲಿ 'ಸ್ವಾಂತಧ್ವಾಂತನಿಕೃಂತನೇ' ಎಂದು ಹೇಳಲಾಗಿದೆ. ವ್ಯಾಕರಣದ ಪ್ರಕಾರ 'ವಿಕರ್ತನೇ' ಎಂದಾಗಬೇಕು. 'ನಿಕೃಂತನೇ' ಎಂಬ ಪ್ರಯೋಗವು ಸಾಧುವಲ್ಲ. ಏಕೆಂದರೆ ಇಕಾರವು 'ಇತ್' ಆದಾಗ 'ಇದಿತೋ ನುಮ್ ಧಾತೋಃ' ಎಂಬ ಸೂತ್ರವು 'ನುಮ್' ಆಗಮವನ್ನು ವಿಧಿಸುತ್ತದೆ. ಉದಾ :- 'ವದಿ' ಧಾತುವು ಇದಿತ್ ಆಗಿದೆ. ಆದ್ದರಿಂದ 'ನುಮ್' ಆಗಮ ಬಂದರೆ 'ವಂದ್' ಎಂದಾಗುತ್ತದೆ. ನುಮಾಗಮವು ಧಾತುವಿನ ಮಧ್ಯದಲ್ಲೇ ಬರುತ್ತದೆಂದು 'ಮಿದಚೋಂತ್ಯಾತ್

ಪರಃ' ಎಂಬ ಸೂತ್ರವು ಹೇಳುತ್ತದೆ. ಆದರೆ 'ಕೃತೀ' ಧಾತುವಿಗೆ ನುಮಾಗಮವು ಬರುವುದಿಲ್ಲ. ಏಕೆಂದರೆ ವದಿ ಧಾತುವಿನಲ್ಲಿ ಹ್ರಸ್ವ ಇಕಾರವು ಇತ್ ಆದಂತೆ 'ಕೃತೀ' ಧಾತುವಿನಲ್ಲಿ ಹ್ರಸ್ವ ಇಕಾರವು ಇತ್ ಆಗಿಲ್ಲ. ಹೊರತಾಗಿ ದೀರ್ಘ ಈಕಾರವು ಇತ್ ಆಗಿದೆ ಹೀಗಿರುವಾಗ 'ಇದಿತೋನುಮ್ ಧಾತೋಃ' ಎಂಬ ಸೂತ್ರದಿಂದ ನುಮಾಗಮ ಬರಲು ಪ್ರಸಕ್ತಿಯೇ ಇಲ್ಲ. ಒಂದು ವೇಳೆ ನುಮಾಗಮ ಬಂದಿದ್ದರೆ 'ನಿಕೃಂತನೇ' ಎಂದಾಗುತ್ತಿತ್ತು. ನುಮಾಗಮವು ಬಾರದ ಕಾರಣ 'ನಿಕೃಂತನೇ' ಎಂದು ಟೀಕೆಯಲ್ಲಿ ಏಕೆ ಪ್ರಯೋಗಿಸಿದರು?

ಇನ್ನು 'ವಿನಿಕೃಂತತಿ' ಎಂದು ಪ್ರಯೋಗಿಸಿದ್ದು ಹೇಗೆ ಕೂಡುತ್ತದೆ? ಎಂದು ಪ್ರಶ್ನಿಸಬಾರದು.

'ಶ' ವಿಕರಣಪ್ರತ್ಯಯವು ಪರದಲ್ಲಿರುವದರಿಂದ ಮುಚಾದಿಗಣದಲ್ಲಿ ಸೇರಿದ 'ಕೃತೀ'ಧಾತುವಿಗೆ 'ಶೇಮುಚಾದೀನಾಮ್' ಎಂಬ ಸೂತ್ರದಿಂದ ನುಮಾಗಮ ಬರುತ್ತದೆ. ಆದ್ದರಿಂದ 'ವಿನಿಕೃಂತತಿ' ಎಂಬ ಪ್ರಯೋಗವು ಸಾಧುವಾಗಿದೆ. ಆದರೆ 'ನಿಕೃಂತನೇ' ಎಂಬಲ್ಲಿ ಹಾಗೆ ಹೇಳಲು ಬರುವುದಿಲ್ಲ ಇಲ್ಲಿ 'ಲ್ಯುಟ್' ಪ್ರತ್ಯಯ ಪರದಲ್ಲಿರುವುದರಿಂದ 'ಶೇಮುಚಾದೀನಾಂ' ಎಂಬ ಸೂತ್ರದಿಂದ ನುಮಾಗಮ ಬರಲು ಸಾಧ್ಯವಿಲ್ಲ. ಆದ್ದರಿಂದ 'ವಿಕರ್ತನೇ' ಎಂದೇ ಆಗಬೇಕು. ನಿಕೃಂತನೇ ಎಂದಾಗುವುದಿಲ್ಲ 'ವಿಕರ್ತನೇ' ಎಂಬ ರೂಪನಿಷ್ಪತ್ತಿಯನ್ನು ಹೀಗೆ ತಿಳಿಯಬೇಕು -

| ಕಾರ್ಯ | ಸೂತ್ರ | ನಿಷ್ಪತ್ತಿ |
|---|---|---|
| ಧಾತು | ..... | ಕೃತೀ (ಛೇದನೇ) |
| ಈಕಾರಕ್ಕೆ ಲೋಪ- | ಉಪದೇಶೇऽಜನುನಾಸಿಕ ಇತ್ | ಕೃತ್ |
| ಲ್ಯುಟ್ ಆಗಮ (ಭಾವಾರ್ಥದಲ್ಲಿ) | ಕೃತ್ಯಲ್ಯುಟೋ ಬಹುಲಮ್ | ಕೃತ್+ ಲ್ಯುಟ್ - |
| 'ಲ್ಯುಟ್'ಎಂಬಲ್ಲಿರುವ ಲಕಾರ ಟಕಾರ ಗಳಿಗೆ ಲೋಪ | 'ಲಶಕ್ವತದ್ಧಿತೇ'; 'ಹಲಂತ್ಯಮ್' | ಕೃತ್+ಯ್ - |
| ಯಕಾರಕ್ಕೆ 'ಅನ' ಆದೇಶ | ಯುವೋರನಾಕೌ( ೭-೧-೧-) | ಕೃತ್+ಅನ - |
| ಆರ್ಧಧಾತುಕಸಂಜ್ಞೆ | ಆರ್ಧಧಾತುಕಂ ಶೇಷಃ) (೩-೪-೧೧೪) | ಕೃತ್+ಅನ - |
| ಗುಣ ರಪರವಾಗಿ ಆಕಾರದೇಶ ಕರ್ತನ | ಪುಗಂತಲಘೂಪಧಸ್ಯ ಚ (೭-೩-೮೬) | ಕ್+ಅರ್+ ತ್+ ಅನ - |

'ವಿ' ಉಪಸರ್ಗ ಸೇರಿದರೆ ವಿ = ಕರ್ತನ = ವಿಕರ್ತನ ಎಂದಾಗುತ್ತದೆ. 'ನಿಕೃಂತನ' ಎಂದಾಗುವುದಿಲ್ಲ.

ಇನ್ನು 'ನಖನಿಕೃಂತನೇನ ಸರ್ವಂ ಕಾರ್ಷ್ಣ್ಯಯಸಂ ವಿಜ್ಞಾತಂ ಸ್ಯಾತ್' ಎಂಬ ಶ್ರುತಿಯಲ್ಲಿ ನಿಕೃಂತನ ಎಂದು ಪ್ರಯೋಗಿಸಲಾಗಿದೆ. ನಿಮ್ಮ ಪ್ರಕಾರ ಇದೂ ತಪ್ಪಾಗಬೇಕಲ್ಲವೇ? ಎಂದು ಪ್ರಶ್ನಿಸಬಾರದು.

ಇದು ಛಾಂದಸಪ್ರಯೋಗವಾದ್ದರಿಂದ ದೋಷವಿಲ್ಲ. ವೇದಗಳಲ್ಲಿನ ಪ್ರಯೋಗವು ಪಾಣಿನೀವ್ಯಾಕರಣವನ್ನು ಅನುಸರಿಸಿರುವುದಿಲ್ಲ. ಆದ್ದರಿಂದ ಟೀಕೆಯಲ್ಲಿ 'ವಿಕರ್ತನೇ' ಎಂದೇ ಹೇಳಬೇಕಿತ್ತು. 'ನಿಕೃಂತನೇ' ಎಂಬ ಅಪಶಬ್ದವನ್ನು ಪ್ರಯೋಗಿಸಬಾರದಿತ್ತು. ಇಷ್ಟು ಆಕ್ಷೇಪದ ಸ್ವರೂಪ.

ಸಮಾಧಾನ- 'ಇದಿತೋ ನುಮ್ ಧಾತೋಃ' ಎಂಬ ಸೂತ್ರವನ್ನು ಯೋಗವಿಭಾಗ ಮಾಡಿಕೊಳ್ಳಬೇಕೆಂಬ ವಿಚಾರವು ವೈಯ್ಯಾಕರಣರಿಗೂ ಸಮ್ಮತವಾಗಿದೆ. ಯೋಗವಿಭಾಗ ಮಾಡಿದಾಗ 'ಇದಿತೋ ನುಮ್' ಎಂಬುದೇ ಬೇರೆ ಸೂತ್ರ. ' ಧಾತೋಃ' ಎಂಬುದೇ ಬೇರೆ ಸೂತ್ರ. 'ಇದಿತೋ ನುಮ್' ಎಂಬ ಸೂತ್ರದಲ್ಲಿ 'ಧಾತೋಃ' ಎಂಬುದು ಅನುವೃತ್ತವಾಗುತ್ತದೆ. ಆದ್ದರಿಂದ 'ವದಿ' ಧಾತುವಿಗೆ 'ಇದಿತೋ ನುಮ್' ಎಂಬ ಸೂತ್ರದಿಂದ ನುಮಾಗಮ ಬಂದು 'ವಂದ್' ಇತ್ಯಾದಿ ರೂಪಗಳು ಸಿದ್ಧವಾಗುತ್ತವೆ.

'ಕೃತೀ' ಮೊದಲಾದ ಕಡೆ 'ಧಾತೋಃ'ಎಂಬ ಸೂತ್ರದಿಂದ ನುಮಾಗಮ ಬರುತ್ತದೆ. ಈಗ 'ಕೃತೀ' ಧಾತುವು ಇದಿತ್ ಆಗದಿದ್ದರೂ 'ನುಮ್' ಬರಲು ತೊಂದರೆ ಇಲ್ಲ. 'ನಿಕೃಂತನೇ' ಶಬ್ದಪ್ರಯೋಗವು ಸಾಧುವಾಗುತ್ತದೆ.

ಪ್ರಶ್ನೆ - ಹೀಗೆ ಯೋಗವಿಭಾಗ ಮಾಡುವುದಾದರೆ ಸಕಲಧಾತುಗಳಿಗೂ ನುಮಾಗಮವು ಬರಬೇಕಾದೀತೆಂಬ ಅತಿಪ್ರಸಂಗ ಬರುತ್ತದೆ. ಇದನ್ನು ಪರಿಹರಿಸಿಕೊಳ್ಳಲು 'ಶೇಮುಚಾದೀನಾಮ್' ಎಂಬ ಸೂತ್ರದಲ್ಲಿರುವ 'ಶೇ' ಎಂಬುದನ್ನು 'ಧಾತೋಃ' ಎಂಬ ಸೂತ್ರದಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕು. ಹಾಗಾದರೆ 'ಕೃತೀ' ಧಾತುವಿನ ಮುಂದೆ 'ಶೇ'ಪರದಲ್ಲಿಲ್ಲದ್ದರಿಂದ 'ನುಮ್' ಬರುವುದಿಲ್ಲ. ಆದ್ದರಿಂದ ಯೋಗವಿಭಾಗ ಮಾಡಿದರೂ ನುಮಾಗಮ ಬರಲು ಸಾಧ್ಯವಿಲ್ಲ.

ಉತ್ತರ - ಯೋಗವಿಭಾಗವನ್ನು ಆಶ್ರಯಿಸುವ ಉದ್ದೇಶವೇ ಇಷ್ಟಸಿದ್ಧಿ. ಆದ್ದರಿಂದ ಇಷ್ಟಸ್ಥಳವಾದ 'ಕೃತೀ' ಎಂಬಲ್ಲಿ ಮಾತ್ರ 'ಧಾತೋಃ' ಸೂತ್ರವು ನುಮಾಗಮವನ್ನು ಹೇಳುತ್ತದೆ. ಉಳಿದ ಧಾತುಗಳಲ್ಲಿ ನುಮಾಗಮವನ್ನು ಸರ್ವಥಾ ಹೇಳುವುದಿಲ್ಲ.

ಆದ್ದರಿಂದಲೇ 'ಶೇಮುಚಾದೀನಾಂ' ಎಂಬ ಸೂತ್ರದಿಂದ 'ಶೇ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕಾಗಿಲ್ಲ. ಗುರುಗಳಾದ ಶ್ರೀವಿದ್ಯಾಧೀಶತೀರ್ಥಶ್ರೀಪಾದರು ಈ ಸಮಾಧಾನ ಹೇಳುತ್ತಾರೆ. ಆದ್ದರಿಂದ 'ನಿಕೃತನೇ' ಎಂಬ ಪ್ರಯೋಗವು ತಪ್ಪಾಗುವುದಿಲ್ಲ. ಇಷ್ಟು ಸಮಾಧಾನ.

ಪ್ರಪದ್ಯೇ ಎಂಬ ಶ್ಲೋಕದಲ್ಲಿ ಪ್ರಪದ್ಯೇ = ಶರಣಾಗತನಾಗುತ್ತೇನೆ ಎಂದು ಹೇಳಿದ್ದಾರೆ. ಇದರಿಂದ ನಮಸ್ಕಾರವನ್ನು ಮಾಡಿದಂತಾಗುತ್ತದೆ. 'ಸ್ವೋತ್ಕೃಷ್ಟತ್ವಪ್ರಕಾರಕಜ್ಞಾನಾನುಕೂಲವ್ಯಾಪಾರವೇ ನಮಸ್ಕಾರವೆನಿಸುತ್ತದೆ. ಯಾರನ್ನು ನಾವು ನಮಸ್ಕಾರ ಮಾಡುತ್ತೇವೋ ಅವರು ನಮಗಿಂತ ಉತ್ತಮರಾಗಿದ್ದಾರೆ. ಅವರಿಗಿಂತ ನಾವು ಅಧಮರಾಗಿದ್ದೇವೆಂಬ ಅನುಸಂಧಾನವೇ ನಮಸ್ಕಾರ. ಈ ಅನುಸಂಧಾನವಿದ್ದರಷ್ಟೇ ಶರಣಾಗತರಾಗಲು ಸಾಧ್ಯ.

ಅಥವಾ 'ಪ್ರಪದ್ಯೇ' ಎಂಬಲ್ಲಿರುವ 'ಪದ್' ಧಾತುವಿಗೆ ಶರಣಾಗತಿ ಎಂಬರ್ಥದಂತೆ ಪ್ರಣಾಮ ಎಂಬರ್ಥವನ್ನೂ ಹೇಳಬಹುದು. ಧಾತುಗಳಿಗೆ ಅನೇಕಾರ್ಥ ಹೇಳುವುದು ತಪ್ಪಲ್ಲ.

ಇಲ್ಲಿಗೆ ಮೂರನೆಯ ಪದ್ಯದ ವ್ಯಾಖ್ಯಾನ ಮುಗಿಯಿತು

## ಶ್ರೀಪದ್ಮನಾಭತೀರ್ಥರ ಕರುಣೆ ಎನಗಿರಲಿ

**तत्वप्रकाशिका –**
**श्रीमध्वसंसेवनलब्धशुद्धविद्यासुधाम्भोनिधयोऽमला ये ।**
**कृपालवः पद्मनाभतीर्थाः कृपालवः स्यान्मयि नित्यमेषाम् ।। ४ ।।**

ಶ್ರೀಮದಾಚಾರ್ಯರ ಅಖಂಡವಾದ ಸೇವೆಯಿಂದ ಸಮುದ್ರದಷ್ಟು ಅಪಾರವಾದ ಸದ್ ವಿದ್ಯೆಯನ್ನು ಸಂಪಾದಿಸಿದವರು ಶ್ರೀಪದ್ಮನಾಭತೀರ್ಥರು. ನಿರ್ದುಷ್ಟರಾದ ಕೃಪಾಳುಗಳಾದ ಇಂತಹ ಪದ್ಮನಾಭತೀರ್ಥರ ಕೃಪಾಲೇಶವು ನನ್ನ ಮೇಲೆ ನಿರಂತರವಾಗಿ ಇರಲಿ.

**भावदीपः** – सन्न्यायरत्नावलिरूपटीकाकर्तृनर्थयते – **श्रीमध्वेति** ।। 'स्पृहिगृहिपतिदयिनिद्रातन्द्राश्रद्धाभ्य आलुच्' इत्यत्र शकारेत्सञ्ज्ञकलुश्-प्रत्ययविधानेनापि तस्य सिद्धत्वेन 'तिङ्शित्सार्वधातुकम्' इति

**सार्वधातुकसञ्ज्ञायां 'कर्तरि शप्' इति शपि सति गुणे अयादेशे च 'अतो दीर्घो यञि' इति दीर्घे च सति ण्यन्तानां 'स्पृहि' इत्यादीनाम् 'स्पृहयालुः' इत्यादिरूपसिद्धावपि आलुच्ग्रहणं 'शयालुः' इत्यादिरूपसिद्ध्यर्थमिति मञ्जर्यास्तृतीयस्य द्वितीयपादे अभिधानात् ।**

'स्पृहि-गृहि-पति-दयि-निद्रा-तंद्रा-श्रद्धाभ्य आलुच्' (೩-೨-೧೫೮) ಎಂಬ ಸೂತ್ರವು 'स्पृहि' ಮೊದಲಾದ ಧಾತುಗಳಿಗೆ 'ಆಲುಚ್' ಪ್ರತ್ಯಯವನ್ನು ವಿಧಾನ ಮಾಡಿದೆ.

ಆದರೆ 'ಲುಷ್' ಪ್ರತ್ಯಯವನ್ನು ವಿಧಾನ ಮಾಡಿದರೂ ಕೂಡ स्पृहयालुः ಮೊದಲಾದ ರೂಪಗಳು ನಿಷ್ಪನ್ನವಾಗುತ್ತವೆ. ಅದು ಹೀಗೆ - 'स्पृहि-गृहि' ಇತ್ಯಾದಿ ಸೂತ್ರದಿಂದ ಲುಷ್ ಪ್ರತ್ಯಯ ಬಂದರೆ स्पृहि + ಲುಷ್ ಎಂದಾಗುತ್ತದೆ. ಆನಂತರ ''तिङ्शित्सार्वधातुकम्'' ಎಂಬ ಸೂತ್ರದಿಂದ ''सार्वधातुक'' ಸಂಜ್ಞೆಯು ಬರುತ್ತದೆ 'कर्तरि शप्' ಎಂಬ ಸೂತ್ರದಿಂದ 'शप्' ಪ್ರತ್ಯಯ ಬಂದರೆ 'स्पृहि + अ + ಲುಷ್' ಎಂದಾಗುತ್ತದೆ. ಆನಂತರ ಚುರಾದಿ ಗಣದಲ್ಲಿ ಸೇರಿರುವ ಕಾರಣ 'चुरादिभ्यो णिच्' ಎಂಬ ಸೂತ್ರದಿಂದ 'णिच್' ಪ್ರತ್ಯಯ ಬಂದು 'सार्वधातुकार्धधातुकयोः' ಎಂಬ ಸೂತ್ರದಿಂದ ಗುಣವು ಪ್ರಾಪ್ತವಾದರೆ स्पृहे + अ + ಲುಷ್ ಎಂದಾಗುತ್ತದೆ. ಆನಂತರ 'एचोऽयवायावः' ಎಂಬ ಸೂತ್ರದಿಂದ ಅಯಾದೇಶವು ಪ್ರಾಪ್ತವಾದರೆ स्पृहय + ಲುಷ್ ಎಂದಾಗುತ್ತದೆ. 'अतो दीर्घो यञि' ಎಂಬ ಸೂತ್ರದಿಂದ ದೀರ್ಘವು ಬಂದರೆ 'स्पृहयालुः' ಎಂಬ ಸೂತ್ರವು ಸಿದ್ಧವಾಯಿತು.

ಹೀಗೆ ಸೂತ್ರದಲ್ಲಿ 'ಆಲುಚ್' ಪ್ರತ್ಯಯವನ್ನು ಗ್ರಹಣ ಮಾಡದಿದ್ದರೂ ರೂಪಗಳು ಸಿದ್ಧವಾಗುತ್ತವೆ.

ಆದರೂ ಕೂಡ 'आलुचि ङीज्ग्रहणं कर्तव्यं' ಎಂಬ ಕಾಶಿಕಾ ವೃತ್ತಿಯ ಮಾತಿನಂತೆ 'शयालुः' ಮೊದಲಾದ ರೂಪಗಳ ಸಿದ್ಧಿಗೋಸ್ಕರ ಸೂತ್ರದಲ್ಲಿ 'ಆಲುಚ್' ಪ್ರತ್ಯಯವನ್ನು ಉಲ್ಲೇಖ ಮಾಡಲಾಗಿದೆ. ಮೂರನೇ ಅಧ್ಯಾಯ ಎರಡನೇ ಪಾದದ ಪದಮಂಜರಿಯಲ್ಲಿಯೂ ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ.

## ಕೆಲವರ ಪ್ರಕಾರ ಆಲುಚ್ ಪ್ರತ್ಯಯ (ಪ್ರಥಮ ಪಕ್ಷ)

**ಭಾವದೀಪಃ – ಕೃಪಿಧಾತೋರಪಿ ಆಲುಚ್ಪ್ರತ್ಯಯೇ ಕೃತೇ 'ಸಂಜ್ಞಾಪೂರ್ವಕೋ ವಿಧಿರನಿತ್ಯಃ' ಇತಿ, 'ಪುಗಂತಲಘೂಪಧಸ್ಯ ಚ' ಇತಿ ಗುಣಾಭಾವೇ ಚ ಸತಿ 'ಕೃಪಾಲುಃ' ಇತಿ ಸಾಧುಃ – ಇತ್ಯೇಕೇ ।**

ಕೆಲವರು 'ಕೃಪಾಲುಃ' ಎಂಬಲ್ಲಿಯೂ 'ಸ್ಪೃಹಿ ಗೃಹಿ' ಸೂತ್ರವೇ 'ಆಲುಚ್' ಪ್ರತ್ಯಯವನ್ನು ವಿಧಿಸುತ್ತಿದೆ ಎನ್ನುತ್ತಾರೆ. 'ಕೃಪಿ' ಎಂಬ ಧಾತುವಿನ ಮೇಲೆ 'ಆಲುಚ್' ಪ್ರತ್ಯಯ ಮಾಡಿದಾಗ 'ಗುಣ' ಮತ್ತು ಆಯಾದೇಶಗಳು ಬರುವುದಿಲ್ಲ. ಏಕೆಂದರೆ 'ಸಂಜ್ಞಾಪೂರ್ವಕೋ ವಿಧಿರನಿತ್ಯಃ' ಎಂಬ ಪರಿಭಾಷೆಯು ಸಂಜ್ಞಾಪೂರ್ವಕವಾಗಿ ಮಾಡಿದ ವಿಧಿಯನ್ನು ಅನಿತ್ಯವೆನ್ನುತ್ತಿದೆ. 'ಪುಗಂತಲಘೂಪಧಸ್ಯ ಚ ಗುಣಃ' ಎಂಬ ಸೂತ್ರದಲ್ಲಿ 'ಗುಣಃ' ಎಂಬ ಪದದಿಂದ ಸಂಜ್ಞಾ ಪೂರ್ವಕವಾಗಿ ವಿಧಾನ ಮಾಡಿರುವುದರಿಂದ ಗುಣವನ್ನು ಮಾಡಲೇಬೇಕೆಂಬ ನಿಯಮವಿಲ್ಲ. ಆದ್ದರಿಂದ 'ಕೃಪಾಲುಃ' ಎಂಬ ಶಬ್ದವು ಸಾಧುವಾಗುತ್ತದೆ.

## ''ಆಲು ಎಂಬುದು ಪ್ರತ್ಯಯವಲ್ಲ ಹೊರತು ಶಬ್ದ'' (ದ್ವಿತೀಯ ಪಕ್ಷ)

**ಭಾವದೀಪಃ – 'ನಷ್ಟಧರ್ಮಜ್ಞಾನಲೋಕಕೃಪಾಲುಭಿಃ' ಇತಿ ಗೀತಾಭಾಷ್ಯಾಯಾಮುಕ್ತದಿಶಾ 'ಕೃಪಾಕಲಶಾಃ' ಇತಿ ಕಲಶಾರ್ಥೋ ವಾ ಆಲುಶಬ್ದಃ । 'ಕರ್ಕರ್ಯಾಲುರ್ಗಲಂತಿಕೇ' ಇತ್ಯಮರಕೋಶೋಕ್ತೇಃ ।**

'ನಷ್ಟಧರ್ಮಜ್ಞಾನಲೋಕಕೃಪಾಲುಭಿಃ' ಅಥವಾ 'ಕೃಪಾಲುಃ' ಎಂಬಲ್ಲಿ 'ಆಲುಚ್' ಪ್ರತ್ಯಯವಿಲ್ಲ ಹೊರತು 'ಆಲು' ಎಂಬುದು ಶಬ್ದವಾಗಿದೆ. ಇದಕ್ಕೆ ಕಲಶ ಎಂದರ್ಥ. ಗೀತಾಭಾಷ್ಯದಲ್ಲಿ 'ನಷ್ಟಧರ್ಮಜ್ಞಾನಲೋಕಕೃಪಾಲುಭಿಃ' ಎಂಬುದಾಗಿ ಈ ಅರ್ಥದಲ್ಲಿಯೇ 'ಕೃಪಾಲು' ಶಬ್ದವನ್ನು ಪ್ರಯೋಗಿಸಿದ್ದಾರೆ. 'ಕರ್ಕರ್ಯಾಲುರ್ಗಲಂತಿಕಾ' ಎಂಬ ಕೋಶದಿಂದ ಕಲಶಾರ್ಥದಲ್ಲಿ 'ಆಲು' ಶಬ್ದವನ್ನು ಪ್ರಯೋಗಿಸಿದ್ದಾರೆ. ಕೃಪಾಪೂರ್ಣವಾದ ಕಲಶದಿಂದ ಎಂದು ಇದರ ಅಭಿಪ್ರಾಯ.

## 'ಲಾ' ಎಂಬುದು ಧಾತು (ಮೂರನೆಯ ಪಕ್ಷ)

**ಭಾವದೀಪಃ** – 'कृपां लाति आदत्ते' इति कृपापदोपपदात् 'ला दाने' इति धातोर्डुप्रत्यये वा 'कृपालुः' इति रूपम् । 'विप्रसम्भ्योड्वसञ्ज्ञायाम्' इत्यत्र 'डप्रत्यय प्रकरणेमितद्रवादिभ्य उपसङ्ख्यानम्' इत्युक्तेः – इत्यन्ये ।

ಅಥವಾ 'ಕೃಪಾ' ಎಂಬ ಉಪಪದದ ಮುಂದೆ 'ಲಾ ದಾನೇ' ಎಂಬ ಧಾತುವಿಗೆ 'ಡು' ಪ್ರತ್ಯಯವು ಪ್ರಾಪ್ತವಾದರೆ ಕೃಪಾಲುಃ ಎಂಬ ರೂಪವು ನಿಷ್ಪನ್ನವಾಗುತ್ತದೆ. ಕೃಪಾಂ ಲಾತಿ = ಆದತ್ತೇ ಎಂದು ಇದರರ್ಥ. 'ವಿಪ್ರಸಂಭ್ಯೋಡ್ವಸಂಜ್ಞಾಯಾಂ' ಎಂಬ ಸೂತ್ರದಲ್ಲಿ 'ವಿ' 'ಪ್ರ' 'ಸಂ' ಇವುಗಳಿಗೆ ಅಸಂಜ್ಞೆಯಲ್ಲಿ ಡು ಪ್ರತ್ಯಯವನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ 'ಡಪ್ರತ್ಯಯಪ್ರಕರಣೇ' 'ಮಿತದ್ರ್ವಾದಿಭ್ಯ ಉಪಸಂಖ್ಯಾನಂ' ಎಂಬ ವಾರ್ತಿಕದಲ್ಲಿ 'ಮಿ' 'ತ' 'ದ್ರು' ಇವುಗಳಿಗೂ ಕೂಡ 'ಡು' ಪ್ರತ್ಯಯವನ್ನು ಹೇಳಲಾಗಿದೆ. ಆದ್ದರಿಂದ ಕೃಪಾಲುಃ ಎಂಬ ರೂಪವು ಸಾಧುವಾಗುತ್ತದೆ. ಹೀಗೆ ಕೆಲವರು ಹೇಳುತ್ತಾರೆ.

## ಮೊದಲನೆಯ ಪಕ್ಷ ಬಲು ಕ್ಲಿಷ್ಟ

**ಭಾವದೀಪಃ** – तत्राद्ये लत्वाभावो दयावत्वरूपलाभश्च क्लिष्टः ।

ಮೇಲಿನ ಮೂರು ಪಕ್ಷಗಳಲ್ಲಿ ಆಲುಚ್ ಪ್ರತ್ಯಯವನ್ನು ವಿಧಿಸುವ ಮೊದಲನೆಯ ಪಕ್ಷ ಬಲು ಕ್ಲಿಷ್ಟ. 'ಕೃಪೋ ರೋ ಲಃ' ಎಂಬ ಸೂತ್ರದಿಂದ ಯಾವ ಕಾರಣಕ್ಕಾಗಿ ರೇಫಕ್ಕೆ ಲಕಾರ ಬರುವುದಿಲ್ಲ ? ಎಂಬುದಕ್ಕೆ ಇವರಲ್ಲಿ ಉತ್ತರವಿಲ್ಲ. ಮತ್ತು ಕೃಪಿ ಧಾತುವಿಗೆ ದಯೆ ಎಂಬ ಅರ್ಥವಿಲ್ಲದ ಕಾರಣ 'ದಯಾಳು' ಎಂಬ ಅರ್ಥವೇ ಯುಕ್ತವಾಗುವುದಿಲ್ಲ.

## ಎರಡನೆಯ ಹಾಗೂ ಮೂರನೆಯ ಪಕ್ಷಗಳು ಸ್ವರಸ

**ಭಾವದೀಪಃ** – अन्त्ययोस्तु तृतीयाध्याये 'षिद्भिदादिभ्योऽङ्' इत्यङि 'क्रपेः सम्प्रसारणं च' इति भिदादिगणसूत्रेण निष्पन्नस्य, 'क्रप कृपायां

**गतौ च' इति धातुरूपस्य कृपेर्लाक्षणिकत्वेन 'कृपो रो लः' इत्यत्राग्रहणम् इत्यष्टमेऽध्याये वृत्तावुक्तत्वेन लत्वाभावोऽर्थानुगमश्च ।**

ಎರಡನೆಯ ಹಾಗೂ ಮೂರನೆಯ ಪಕ್ಷಗಳು ಸ್ವರಸವಾಗಿವೆ. ಏಕೆಂದರೆ ಮೂರನೆಯ ಅಧ್ಯಾಯದಲ್ಲಿ 'ಷಿದ್ಭಿದಾದಿಭ್ಯೋಽಙ್' ಎಂಬ ಸೂತ್ರದಿಂದ 'ಙ್' ಪ್ರತ್ಯಯವು ಪ್ರಾಪ್ತವಾಗುತ್ತದೆ. 'ಕೃಪೇಃ ಸಂಪ್ರಸಾರಣಂ ಚ' ಎಂಬ ಭಿದಾದಿಗಣಸೂತ್ರದಿಂದ 'ಕೃಪಿ' ಎಂಬ ಶಬ್ದವು ನಿಷ್ಪನ್ನವಾಗುತ್ತದೆ. ಆದ್ದರಿಂದ 'ಕೃಪ ಕೃಪಾಯಾಂ ಗತೌ ಚ' ಎಂಬ ಧಾತುವಿನ ಸ್ವರೂಪವಾದ 'ಕೃಪಿ' ಎಂಬುದು ಲಾಕ್ಷಣಿಕವಾಯಿತು. 'ಕೃಪಿ' ಎಂಬುದು ಸೂತ್ರದಿಂದ ನಿಷ್ಪನ್ನವಾಯಿತೇ ಹೊರತು, ಸಹಜವಾಗಿ ಇರುವುದಲ್ಲ. ಆದ್ದರಿಂದ ಇದನ್ನು ಲಾಕ್ಷಣಿಕ ಎಂದು ಪರಿಗಣಿಸಬೇಕು. 'ಕೃಪೋ ರೋ ಲಃ' ಎಂಬ ಸೂತ್ರದಲ್ಲಿ ಲಾಕ್ಷಣಿಕವಲ್ಲದ ಸಹಜಸಿದ್ಧವಾದ ಕೃಪಿ ಧಾತುವನ್ನು ವಿವಿಕ್ಷಿಸಿದ್ದಾರೆ. ''ಲಕ್ಷಣಪ್ರತಿಪದೋಕ್ತಯೋಃ ಪ್ರತಿಪದೋಕ್ತಸ್ಯೈವ ಗ್ರಹಣಮ್'' ಎಂಬ ನಿಯಮದಂತೆ ಲಕ್ಷಣ ಹಾಗೂ ಪ್ರತಿಪದೋಕ್ತಿಗಳ ನಡುವೆ ಪ್ರತಿಪದೋಕ್ತವಾದದ್ದನ್ನೇ ಸ್ವೀಕರಿಸಬೇಕು. ಆದ್ದರಿಂದ 'ಕೃಪೋ ರೋ ಲಃ' ಎಂಬ ಸೂತ್ರದಲ್ಲಿ 'ಕೃಪಿ' ಧಾತುವು ಲಾಕ್ಷಣಿಕವಲ್ಲ. ಪ್ರತಿಪದೋಕ್ತವಾದದ್ದೆಂದು ಸ್ಪಷ್ಟವಾಗುತ್ತದೆ. ಈ ವಿಷಯವನ್ನೆಲ್ಲಾ ಎಂಟನೆಯ ಅಧ್ಯಾಯದ ಕಾಶೀಕಾವೃತ್ತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ ಕೊನೆಯ ಈ ಎರಡು ಪಕ್ಷಗಳಲ್ಲಿ 'ಕೃಪೋ ರೋ ಲಃ' ಎಂಬ ಸೂತ್ರದಿಂದ 'ಲತ್ವ' ಬರಬೇಕಾದೀತೆಂಬ ಸಮಸ್ಯೆ ಇರುವುದಿಲ್ಲ. 'ದಯೆ ಇರುವಿಕೆ' ಎಂಬ ಅರ್ಥವೂ ಕೂಡ ಯುಕ್ತವಾಗುತ್ತದೆ.

**ಭಾವದೀಪಃ – 'स्याद् दयालुः कारुणिकः कृपालुः सूरतः समाः' इत्यमरव्याख्यानबन्दिघटीये दुर्घटवृत्तौ च कृपां लाती(त्ये)त्यस्यैव साधुतोक्तेः – इत्याहुः । 'दयालवः' इत्यपि क्वचित् पाठः ।।४।।**

'ಸ್ಯಾದ್ ದಯಾಲುಃ ಕಾರುಣಿಕಃ ಕೃಪಾಲುಃ ಸೂರತಃ ಸಮಾಃ' ಎಂಬುದಾಗಿ ಅಮರಕೋಶದ ವ್ಯಾಖ್ಯಾನವಾದ ಬಂದಿಘಟೀಯದಲ್ಲಿ ದಯಾಲು ಎಂಬರ್ಥದಲ್ಲಿಯೇ ಕೃಪಾಲು ಶಬ್ದವನ್ನು ಪ್ರಯೋಗಿಸಲಾಗಿದೆ. ದುರ್ಘಟ ವೃತ್ತಿಯಲ್ಲಿಯೂ ಕೂಡ 'ಕೃಪಾಂ

ಲಾತಿ' ಎಂಬುದಾಗಿ ನಿಷ್ಪನ್ನವಾದ ಕೃಪಾಲು ಶಬ್ದವನ್ನೇ ಸಾಧುವೆಂದು ಪರಿಗಣಿಸಲಾಗಿದೆ. ಹೀಗೆ ಜ್ಞಾನಿಜನರು ಹೇಳುತ್ತಾರೆ.

ಕೆಲವು ಪುಸ್ತಕಗಳಲ್ಲಿ 'ದಯಾಲವಃ ಪಂಕಜನಾಭತೀರ್ಥಾಃ' ಎಂಬ ಪಾಠವಿದೆ. ಈ ಪಕ್ಷದಲ್ಲಿ ಯಾವ ಸಮಸ್ಯೆಗಳೇ ಇರುವುದಿಲ್ಲ.(೧)

ಸನ್ನ್ಯಾಯರತ್ನಾವಲಿಕಾರರಾದ ತಮ್ಮ ಪರಮಗುರುಗಳ ಆಶೀರ್ವಾದವನ್ನು ಬೇಡುತ್ತಿದ್ದಾರೆ. ಪದ್ಮನಾಭತೀರ್ಥರು ಕರುಣಾಮೂರ್ತಿಗಳಾದ್ದರಿಂದ ಅವರಲ್ಲಿ ಮಾಡುವ ಕಾರುಣ್ಯಪ್ರಾರ್ಥನೆಯು ಬಹಳ ಅರ್ಥಪೂರ್ಣವಾಗಿದೆ.

(೧) ಭಾವರತ್ನಕೋಶಕಾರರು ಕೃಪಾಲು ಶಬ್ದದ ಬಗ್ಗೆ ಭಾವದೀಪದಲ್ಲಿ ಇರುವಂತೆ ಸುಂದರವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ವ್ಯಾಕರಣ ರಸಿಕರು ಇದರ ಸವಿಯನ್ನು ಅನುಭವಿಸಲು ಭಾವರತ್ನಕೋಶದಲ್ಲಿ ಇರುವಂತೆ ಯಥಾವತ್ತಾಗಿ ಮುದ್ರಿಸಲಾಗಿದೆ.

''कृपालवः' इति यद्यपि 'स्पृहिगृहिपातिदयिनिद्रातन्द्राश्रद्धाभ्य आलुच्' इति सूत्रेण 'आलुचि शीङ्ग्रहणं कर्तव्यम्' इति वार्तिके वा । 'कृपू सामर्थ्ये' इति धातुः न गृहीत इति तस्मादालुच् प्रत्ययो नोत्पत्तुमर्हति तथापि 'स्पृहिगृहि' इति सूत्रमहाभाष्ये लुशेवोच्येत । का रूपसिद्धिः । स्पृहायालुः । शपि कृते 'अतो दीर्घो यञि' इति दीर्घो भविष्यति । एवं तर्हि । यदालुचं शास्ति तद् ज्ञापयत्याचार्यः अन्येभ्योऽप्ययं भवति इति ग्रन्थेन 'आलुचि शीङ्ग्रहणं कर्तव्यम्' इति वार्तिकं प्रत्याचक्षाणेन धात्वन्तरादप्यालुच्प्रसङ्गाभ्यनुज्ञानात् कृपि धातोरालुचि 'सञ्ज्ञापूर्वको विधिरनित्यः' इति गुणाभावे बाहुलकात् 'कृपो रो लः' इति लत्वाभावे वा कृपालव इति शब्दः साधुः । यद्वा 'क्रप कृपायां गतौ च' इति धातोः 'क्रपेः संप्रसारणम्' इति संप्रसारणे अङि च कृपाशब्दनिष्पत्तौ, तदुपपदात् 'ला आदाने' इति धातोः 'मितद्र्वादिभ्य उपसंख्यानम्' इति डुप्रत्यये कृपां लात्यादत्ते इति साधु साधितं चैतत् । एवमेव 'स्यात् दयालुः कारुणिकः कृपालुः सूरतः समाः' इत्यमरे 'हरे कृपालो नः पाहि' इति कौमुद्यां च तद्व्याख्यातृभिः कृपालुपदे । 'नष्टधर्मज्ञानलोककृपालुभिः' इति गीताभाष्यटीकायां कलशवचोऽयमालुशब्दः कृपापूर्णकलाशैरिति प्रकारान्तमप्युक्तम् । दयालव इत्यपि क्वचित्पाठः । तदा न प्रक्रियाप्रयासः । पङ्कजनाभतीर्थाः पद्मनाभतीर्थभट्टारकाः । पङ्कजं पद्मं नाभौ यस्येत्यत्र नाभिशब्दात् 'अच् प्रत्ययपूर्वात् सामलोम्नः' इत्यतोऽजिति योगविभागात् अच्प्रत्ययः । पूर्ववदत्र च बहुवचनं गौरवादेव । ये एषां तेषां कृपालवः दयालवः'' इति ।

ಕಾರುಣ್ಯವಿರಬೇಕಾದರೆ ದ್ವೇಷಾದಿಗಳಿರಬಾರದು. ಇಂತಹ ಯಾವ ದೋಷಗಳೂ ಇಲ್ಲವೆಂದು 'ಅಮಲಾಃ' ಎಂಬುದರಿಂದ ತಿಳಿಸುತ್ತಿದ್ದಾರೆ. ಪ್ರತಿಯೊಬ್ಬನಿಗೂ ಸಂಸಾರದಲ್ಲಿ ಅನೇಕ ಕಷ್ಟಗಳು ಸಹಜವಾಗಿರುತ್ತವೆ. ಅಂತಹ ಕಷ್ಟಗಳ ಪರಿಹಾರವನ್ನು ಗುರುಗಳ ಬಳಿ ಪ್ರಾರ್ಥಿಸುವುದು ದೊಡ್ಡದಲ್ಲ. ಶ್ರೀಮದಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡುವ ಸದ್‌ಭಾಗ್ಯವನ್ನು ಪ್ರಾರ್ಥಿಸಬೇಕು. ಇದಕ್ಕಿಂತ ಕಷ್ಟಪರಿಹಾರಮಾರ್ಗ ಬೇರೆ ಇಲ್ಲ. ಇದನ್ನು 'ಶ್ರೀಮಧ್ವಸಂಸೇವನಲಬ್ಧಶುದ್ಧವಿದ್ಯಾ-ಸುಧಾಂಭೋನಿಧಯಃ' ಎಂಬ ವಿಶೇಷಣದಿಂದ ತಿಳಿಸಿದ್ದಾರೆ. ಶ್ರೀಮದಾಚಾರ್ಯರನ್ನು ಚೆನ್ನಾಗಿ ಸೇವಿಸಿ ಶುದ್ಧವಿದ್ಯೆಯ ಅಮೃತಸಾಗರರಾಗಿದ್ದೀರಿ. ಇಂತಹ ನಿಮ್ಮನ್ನು ಭಕ್ತಿಯಿಂದ ನಮಿಸಿ ಬೇಡುತ್ತೇನೆ. ನಮಗೂ ಸ್ವಲ್ಪ ಆ ಶುದ್ಧವಿದ್ಯೆಯು ಲಭಿಸುವಂತೆ ಕಾರುಣ್ಯ ತೋರಿರಿ ಎಂದು ಅಭಿಪ್ರಾಯ.

## 'ಕೃಪಾಲು' ಶಬ್ದಸಾಧುತ್ವಸಮರ್ಥನೆ

ಆಕ್ಷೇಪ -

'ಕೃಪಾಲವಃ ಪಂಕಜನಾಭತೀರ್ಥಾಃ।
ಕೃಪಾಲವಃ ಸ್ಯಾನ್‌ಮಯಿ ನಿತ್ಯಮೇಷಾಮ್ ॥'

ಎಂದು ಟೀಕೆಯಲ್ಲಿ 'ಕೃಪಾಲು'ಶಬ್ದವನ್ನು ಪ್ರಯೋಗಿಸಿದ್ದಾರೆ. ಶ್ರೀಮದಾಚಾರ್ಯರೂ ಸಹ ಗೀತಾಭಾಷ್ಯದ ಪ್ರಾರಂಭದಲ್ಲಿ 'ನಷ್ಟಧರ್ಮಜ್ಞಾನಲೋಕಕೃಪಾಲುಭಿಃ' ಎಂದು ಕೃಪಾಲುಶಬ್ದವನ್ನು ಬಳಸಿದ್ದರೆ. ಆದರೆ ವ್ಯಾಕರಣದ ಪ್ರಕಾರ ಕೃಪಾಲು ಎಂದಾಗುವುದಿಲ್ಲ ಆದು ಹೀಗೆ - ಸ್ಪೃಹಿಗೃಹಿಪತಿದಯಿನಿದ್ರಾತಂದ್ರಾಭ್ಯಃ ಆಲುಚ್ - (೩-೨-೧೫೮) ಎಂಬ ಸೂತ್ರವು ಸ್ಪೃಹಿ ಮೊದಲಾದ ಧಾತುಗಳಿಗೆ 'ಆಲುಚ್' ಪ್ರತ್ಯಯವನ್ನು ವಿಧಿಸುತ್ತದೆ. 'ಆಲುಚ್'ವಿಧಾಯಕಸೂತ್ರ ಇದನ್ನು ಬಿಟ್ಟು ಬೇರೆ ಇಲ್ಲ. ಈ ಸೂತ್ರದಂತೆ ಪೃಥಯಾಲುಃ, ಗೃಹಯಾಲುಃ, ಪತಯಾಲುಃ, ದಯಾಲುಃ, ನಿದ್ರಾಲುಃ, ತಂದ್ರಾಲುಃ, ಶ್ರದ್ಧಾಲುಃ ಇವೇ ಮೊದಲಾದ ಪ್ರಯೋಗಗಳು ಸಾಧು ಆಗುತ್ತವೆ. ಇವುಗಳ ಮಧ್ಯದಲ್ಲಿ 'ಕೃಪ್'ಧಾತುವು ಕೃಪಾಲುಃ ಎಂದಾಗುವುದಿಲ್ಲ.

ಪ್ರಶ್ನೆ - ಸೂತ್ರಗಳಲ್ಲಿರುವ ಧಾತುಗಳಿಗಷ್ಟೇ ಆಲುಚ್‌ಪ್ರತ್ಯಯ ಬರುತ್ತದೆಂಬ ಅಭಿಪ್ರಾಯ ಪಾಣಿನಿಗಿಲ್ಲ. ಹಾಗಿದ್ದಲ್ಲಿ ಪಾಣಿನಿಯು ಲುಶ್‌ಪ್ರತ್ಯಯವನ್ನೇ ಹೇಳುತ್ತಿದ್ದ. ಸ್ಪೃಹಯಾಲುಃ ಇತ್ಯಾದಿ ರೂಪಗಳು ಲುಶ್‌ಪ್ರತ್ಯಯದಿಂದಲೂ ಸಿದ್ಧವಾಗುತ್ತವೆ. ವೈಯ್ಯಾಕರಣರು ಅರ್ಧಮಾತ್ರಾಕ್ಷರದಿಂದ ಲಾಘವವಿದ್ದರೂ ಪುತ್ರೋತ್ಸವದ ಆನಂದವನ್ನು ಅನುಭವಿಸುತ್ತಾರೆ. ಹೀಗಿದ್ದರೂ ಲುಶ್‌ಪ್ರತ್ಯಯವನ್ನು ಹೇಳದೇ ಆಲುಚ್‌ಪ್ರತ್ಯಯವನ್ನು ಹೇಳಿದ್ದರಿಂದ ಬೇರೆ ಕಡೆಯೂ ಆಲುಚ್‌ಪ್ರತ್ಯಯ ಬರುತ್ತದೆಂದು ತಿಳಿಸಿದ್ದಾನೆ ಆದ್ದರಿಂದ 'ಕೃಪ್'ಧಾತುವು ಸೂತ್ರದಲ್ಲಿ ಪಠಿತವಾಗದಿದ್ದರೂ ತಿಳಿಯುತ್ತದಲ್ಲವೇ?

ಉತ್ತರ - 'ಲುಶ್' ಪ್ರತ್ಯಯದಿಂದಲೇ ಸ್ಪೃಹಯಾಲುಃ ಇತ್ಯಾದಿ ರೂಪಗಳು ನಿಷ್ಪನ್ನಗಳಾಗುತ್ತಿದ್ದರೆ ನೀವು ಹೇಳಿದ್ದನ್ನು ಒಪ್ಪಬಹುದಿತ್ತು. ಆದರೆ ಆಲುಚ್‌ಪ್ರತ್ಯಯವನ್ನು ಹೇಳಿದರೆ ಮಾತ್ರ 'ಸ್ಪೃಹಯಾಲುಃ' ಇತ್ಯಾದಿರೂಪಗಳು ಸಿದ್ಧವಾಗುತ್ತವೆ, ಹೊರತು 'ಲುಶ್' ಪ್ರತ್ಯಯದಿಂದಲ್ಲ. ಆಲುಚ್ ಪ್ರತ್ಯಯಬಂದಾಗ ಸಿದ್ಧವಾಗುವ ರೂಪನಿಷ್ಪತ್ತಿ ಹೀಗಿದೆ -

## ಸ್ಪೃಹ್(ಧಾತು)

| ಸೂತ್ರ | ಕಾರ್ಯ | ನಿಷ್ಪತ್ತಿ |
|---|---|---|
| ಸ್ಪೃಹಿಗೃಹಿಪತಿದಯಿನಿದ್ರಾ-<br>ತಂದ್ರಾಭ್ಯಃ ಆಲುಚ್ (೩-೨-೧೫೮) | 'ಆಲುಚ್' ಪ್ರತ್ಯಯ | ಸ್ಪೃಹಿ+ಆಲು |
| ಚುರಾದಿಭ್ಯೋ ಣಿಚ್<br>(೩-೧-೨೫) | ಚುರಾದಿಗಣದಲ್ಲಿ<br>ಸೇರಿದ್ದರಿಂದ ಸ್ವಾರ್ಥದಲ್ಲಿ 'ಣಿಚ್' | ಸ್ಪೃಹಿ+ಣಿ+ಆಲು |
| ಅಯಾಮಂತಾಲ್ವಾಯ್ಯೇ<br>ತ್ವಿಷ್ಣುಷು-(೬-೪-೫೫) | 'ಣ'ಗೆ -<br>ಅಯಾದೇಶ | ಸ್ಪೃಹಿ+ಅಯ+ಆಲು |
| ಸಾರ್ವಧಾತುಕಾರ್ಧಧಾತುಕಯೋಃ<br>(೭-೩-೮೪) | ಗುಣ | ಸ್ಪೃಹೇ + ಅಯ + ಆಲು |
| ಏಚೋಽಯವಾಯಾವಃ | ಅಯಾದೇಶ | ಸ್ಪೃಹಯ+ಅಯ+ಆಲು<br>ಸ್ಪೃಹಯಾಲುಃ |

ಜಿಜ್ಞಾಸಾಧಿಕರಣ (೧-೧-೧)

ಹೀಗೆ ಆಲುಚ್‌ಪ್ರತ್ಯಯ ಮಾಡಿದರೆ ಮಾತ್ರ ರೂಪನಿಷ್ಪತ್ತಿ ಆಗುತ್ತದೆ. ಇಷ್ಟು ಆಕ್ಷೇಪ.

ಸಮಾಧಾನ - ಹಾಗೇನಿಲ್ಲ 'ಲುಶ್'ಪ್ರತ್ಯಯ ಮಾಡಿದರೂ 'ಸ್ಪೃಹಯಾಲುಃ' ರೂಪವು ನಿಷ್ಪನ್ನವಾಗುತ್ತದೆ. ಅದು ಹೀಗೆ -

| ಸೂತ್ರ | ಕಾರ್ಯ | ರೂಪ |
|---|---|---|
| ಸ್ಪೃಹಿಗೃಹಿ --- | 'ಲುಶ್' ಪ್ರತ್ಯಯ | ಸ್ಪೃಹಿ+ಲುಶ್ |
| ತಿಙ್ಶಿತ್‌ಸಾರ್ವಧಾತುಕಂ | ಸಾರ್ವಧಾತುಕಸಂಜ್ಞೆ | ಸ್ಪೃಹಿ+ಲುಶ್ |
| ಕರ್ತರಿ ಶಪ್ | ಶಪ್‌ಪ್ರತ್ಯಯ | ಸ್ಪೃಹಿ+ಅ+ಲುಶ್ |
| ಚುರಾದಿಭ್ಯೋ ಣಿಚ್ | ಸ್ವಾರ್ಥದಲ್ಲಿ ಣಿಚ್ | ಸ್ಪೃಹಿ+ಇ+ಅ+ ಲುಶ್ |
| ಸಾರ್ವಧಾತುಕಾರ್ಧಧಾತುಕಯೋಃ | ಗುಣ | ಸ್ಪೃಹೇ+ಅ+ಲುಶ್ |
| ಏಚೋऽಯವಾಯಾವಃ | ಅಯಾದೇಶ | ಸ್ಪೃಹಯ + ಲುಶ್ |
| ಅತೋದೀರ್ಘೋ ಯ ಞಿ - | ದೀರ್ಘ | ಸ್ಪೃಹಯಾ+ಲುಶ್ |
| | | ಸ್ಪೃಹಯಾಲುಃ |

ಹೀಗೆ 'ಲುಶ್'ಪ್ರತ್ಯಯವನ್ನು ಹೇಳಿದರೂ ಸಹ ಸ್ಪೃಹಯಾಲುಃ ಎಂಬ ರೂಪವು ಸಿದ್ಧವಾಗುತ್ತದೆ. ಅದಕ್ಕೋಸ್ಕರ 'ಆಲುಚ್'ಪ್ರತ್ಯಯವನ್ನು ಹೇಳಬೇಕಾಗಿಲ್ಲ. ಆದರೂ ಸಹ ಪಾಣಿನಿಯು ಆಲುಚ್ ಪ್ರತ್ಯಯವನ್ನು ಹೇಳಿದ್ದಾನೆ. ಇದರಿಂದ ಏನು ತಿಳಿಯುತ್ತದೆ? ಎಂದರೆ ಸೂತ್ರಗಳಲ್ಲಿಲ್ಲದ ಕೃಪ್ ಮೊದಲಾದ ಧಾತುಗಳಿಗೂ ಆಲುಚ್ ಪ್ರತ್ಯಯವನ್ನು ಹೇಳಬಹುದೆಂದು ಕೌಮುದಿಯಲ್ಲಿಯೂ 'ಹರೇ! ಕೃಪಾಲೋ ನಃ ಪಾಹಿ' ಎಂದು ಕೃಪಾಲು ಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ 'ಕೃಪಾಲು' ಶಬ್ದವು ಅಪಶಬ್ದವಲ್ಲ, ಅಪಾಣಿನೀಯವೂ ಅಲ್ಲ.

ಆಕ್ಷೇಪ - 'ಲುಶ್' ಪ್ರತ್ಯಯವನ್ನು ಹೇಳಿದರೆ ವಿವಕ್ಷಿತವಾದ 'ಸ್ಪೃಹಯಾಲುಃ' ಮೊದಲಾದ ರೂಪಗಳು ನಿಷ್ಪನ್ನವಾಗುವುದಿಲ್ಲ. ಏಕೆಂದರೆ 'ಲಶಕ್ವತದ್ಧಿತೇ' ಎಂಬ ಸೂತ್ರದಿಂದ ಲುಶ್ ಎಂಬಲ್ಲಿರುವ ಲಕಾರಕ್ಕೆ ಲೋಪ ಬರುತ್ತದೆ. ಮತ್ತು 'ಅತೋ ದೀರ್ಘೋ ಯಞಿ' ಎಂಬ ಸೂತ್ರದಿಂದ ದೀರ್ಘವೂ ಬರುವುದಿಲ್ಲ. ಈ ಸೂತ್ರದಲ್ಲಿ 'ತಿಙ್'ಎಂಬುದು ಅನುವೃತ್ತಿಯಾಗುತ್ತದೆ. 'ಲುಶ್' ಎಂಬುದು 'ತಿಙ್' ಪ್ರತ್ಯಯವಲ್ಲದ

ಕಾರಣ ದೀರ್ಘವು ಬರುವುದಿಲ್ಲ ಮತ್ತು 'ಶ್ರದ್ಧಾಲುಃ' ಎಂಬ ರೂಪವೂ ಸಿದ್ಧವಾಗುವುದಿಲ್ಲ. ಆದು ಹೀಗೆ -

## 'ಧಾ' ಧಾತು

| ಸೂತ್ರ | ಕಾರ್ಯ | ರೂಪ |
|---|---|---|
| ಸ್ಪೃಹಿಗೃಹಿಪತಿ | 'ಶ್ರತ್' ಉಪಪದಸೇರಿದಾಗ ಲುಶ್ ಪ್ರತ್ಯಯ | ಶ್ರದ್+ಧಾ+ ಲುಶ್ |
| ಕರ್ತರಿ ಶಪ್ | 'ಶಪ್' ಪ್ರತ್ಯಯ | ಶ್ರದ್ +ಧಾ+ ಅ+ಲುಶ್ |
| ಜುಹೋತ್ಯಾದಿಭ್ಯಃ ಶ್ಲುಃ | 'ಶ್ಲು' | ಶ್ರದ್+ಧಾ+ಅ+ಲುಶ್ |
| ಶ್ಲೌ | ಧಾ ಧಾತುವಿಗೆ ದ್ವಿತ್ವ | ಶ್ರದ್+ಧಾ+ಧಾ+ಅ+ಲುಶ್ |
| ಹ್ರಸ್ವಃ | ಮೊದಲನೆಯ 'ಧಾ' ಗೆ ಹ್ರಸ್ವ - | ಶ್ರದ್+ಧ+ಧಾ+ಅ+ಲುಶ್ |
| ಶ್ನಾಭ್ಯಸ್ತಯೋರಾತಃ (೬-೪-೧೧೨) | ಅಭ್ಯಸ್ತವಾದ 'ಧಾ'- ಎಂಬಲ್ಲಿರುವ ಆಕಾರಕ್ಕೆ ಲೋಪ | ಶ್ರದ್+ಧ+ಧ್+ಅ+ಲುಶ್ |
| | ಶ್ರದ್ಧದಲುಃ | |

ಹೀಗೆ 'ಶ್ರದ್ಧದಲುಃ' ಎಂಬ ರೂಪವಾಗುತ್ತದೆ. ಹೊರತು 'ಶ್ರದ್ಧಾಲುಃ' ಎಂಬ ರೂಪವು ನಿಷ್ಪನ್ನವಾಗುವುದಿಲ್ಲ.

ಆದ್ದರಿಂದ 'ಲುಶ್' ಪ್ರತ್ಯಯವನ್ನು ಹೇಳುವುದರಿಂದ ಯಾವುದೇ ಅನುಕೂಲವಿಲ್ಲ. ಹೊರತಾಗಿ ಬಾಧಕವೇ ಇದೆ. ಇದನ್ನು ತಿಳಿದು ಪಾಣಿನಿಯು 'ಆಲುಚ್' ಪ್ರತ್ಯಯವನ್ನು ಹೇಳಿದ್ದಾನೆ.'ಕೃಪಾಲು' ಶಬ್ದನಿಷ್ಪತ್ತಿಗಾಗಿ ಆಲುಚ್ ಹೇಳಿದ್ದಲ್ಲ. ಆದ್ದರಿಂದ 'ಕೃಪಾಲು' ಶಬ್ದವು ಅಸಾಧುವೇ ಆಗಿದೆ.

ಇದುವರೆಗಿನ ಆಕ್ಷೇಪದಲ್ಲಿ ಗಮನಿಸಬೇಕಾದ ಮೂರು ಅಂಶ-

೧) ಲುಶ್ ಎಂಬಲ್ಲಿನ ಲಕಾರವು ಲೋಪವಾಗುತ್ತದೆ.

೨) 'ಅತೋ ದೀಘೋ೯ ಯಞಿ' ಎಂಬುದರಿಂದ ದೀರ್ಘ ಬರುವುದಿಲ್ಲ.

೩) 'ಶ್ರದ್ಧಾಲುಃ' ಎಂಬ ರೂಪವು ಸಿದ್ಧವಾಗುವುದಿಲ್ಲ.

ಸಮಾಧಾನ - ಮೂರೂ ಆಕ್ಷೇಪಗಳಿಗೆ ಅವಕಾಶವಿಲ್ಲ. 'ಲಶಕ್ವತದ್ಧಿತೇ' ಎಂಬ ಸೂತ್ರವು ಪ್ರತ್ಯಯದ ಆದಿಯಲ್ಲಿರುವ ಲಕಾರಾದಿಗಳಿಗಷ್ಟೇ ಇತ್ ಸಂಜ್ಞೆಯನ್ನು ಹೇಳುತ್ತದೆ. 'ಲುಶ್'

ಎಂಬುದು ಯಾದಿ ಪ್ರತ್ಯಯವೇ ಹೊರತು ಲಾದಿಪ್ರತ್ಯಯವಲ್ಲ. ಯಕಾರ ಕಾಣಿಸುತ್ತಿಲ್ಲ ಎಂದರೆ, ಬೇಡ, ಇದು ಲುಪ್ತನಿರ್ದಿಷ್ಟವಾಗಿದೆ. ಯಕಾರವು ಬರಬೇಕಾದರೆ ಯಕಾರಲೋಪವನ್ನು ಹೊಂದಿಯೇ ಬರುತ್ತದೆ. ಆದ್ದರಿಂದ 'ಲ' ಕಾರವು ಲೋಪ-ವಾಗುವುದಿಲ್ಲ.

ಅಥವಾ ಯಾದಿಪ್ರತ್ಯಯವಲ್ಲದಿದ್ದರೂ ತೊಂದರೆಯಿಲ್ಲ. ಯಕಾರಕ್ಕೆ ಲೋಪ ಬರುವುದಿಲ್ಲ. ಏನಾದರೂ ಪ್ರಯೋಜನವಿದ್ದರೆ ಮಾತ್ರ ಲೋಪ ಹೇಳಬೇಕು. ಯಕಾರವನ್ನು ಲೋಪ ಮಾಡಿದರೆ ಏನೂ ಪ್ರಯೋಜನವಿಲ್ಲ.

ಪ್ರಶ್ನೆ - ಪ್ರಯೋಜನವಿದೆ. 'ಲ'ಕಾರವು ಇತ್ ಆದರೆ ಲಿತ್‌ಸ್ವರವಾಗುತ್ತದೆ. ಇತ್ ಆಗದಿದ್ದರೆ ಪ್ರತ್ಯಯಸ್ವರವಾಗುತ್ತದೆ. ಹೀಗೆ ಲಿತ್‌ಸ್ವರವನ್ನು ಹೇಳುವುದೇ ಪ್ರಯೋಜನ.

ಉತ್ತರ - ಲಿತ್‌ಸ್ವರವಾದರೇನು? ಪ್ರತ್ಯಯಸ್ವರವಾದರೇನು? ಸ್ವರವ್ಯತ್ಯಾಸದಿಂದ ಪ್ರಯೋಗದಲ್ಲೇನು ವ್ಯತ್ಯಾಸವಿಲ್ಲ ತಾನೇ? ಲಿತ್‌ಸ್ವರ, ಪ್ರತ್ಯಯಸ್ವರ ಎರಡೂ ಉದಾತ್ತಸ್ವರವೇ ಆಗುತ್ತದೆ.

ನಿಮ್ಮ ಮತ್ತೊಂದು ಆಕ್ಷೇಪ - 'ಅತೋ ದೀರ್ಘೋ ಯಞಿ' ಎಂಬ ಸೂತ್ರದಿಂದ ದೀರ್ಘ ಬರುವುದಿಲ್ಲವೆಂದು, ಆದರೆ 'ತಿಙ್' ಎಂಬುದು ಈ ಸೂತ್ರದಲ್ಲಿ ಅನುವೃತ್ತಿಯೇ ಆಗುವುದಿಲ್ಲ. ಸಾರ್ವಧಾತುಕವು ಪರದಲ್ಲಿರಬೇಕೆಂದು ಹೇಳಿದರೆ ಸಾಕು. 'ತಿಙ್' ಎಂಬುದೇ ಪರದಲ್ಲಿರಬೇಕೆಂದು ಏಕೆ ಹೇಳಬೇಕು? ಇಷ್ಟರಿಂದಲೇ ಉದ್ದೇಶಸಿದ್ಧಿಯಾಗುತ್ತದೆ. 'ತಿಙ್' ಪ್ರತ್ಯಯದ ಆವಶ್ಯಕತೆಯೇ ಇಲ್ಲವಾದ್ದರಿಂದ ದೀರ್ಘ ಬರಬಾರದೇಕೆ?

ಇನ್ನು 'ಶ್ರದ್ಧಾಲುಃ' ಎಂಬ ರೂಪವೇ ಸಿದ್ಧವಾಗದೆಂಬ ಮೂರನೆಯ ಆಕ್ಷೇಪವೂ ಹುರುಳಿಲ್ಲದ್ದು. ಏಕೆ ಗೊತ್ತೋ? ನಾವಿಲ್ಲಿ ಹೇಳುತ್ತಿರುವುದು 'ಧೇಟ್' ಧಾತು. 'ಧಾ' ಧಾತುವಲ್ಲ. 'ಧೇಟ್' ಧಾತು ಜುಹೋತ್ಯಾದಿ ಗಣದಲ್ಲಿ ಸೇರಿಯೇ ಇಲ್ಲ. ದ್ವಿತ್ವ ಹೇಗೆ ಹೇಳುತ್ತೀರಿ? ಪಾನಾರ್ಥದಲ್ಲಿರುವ 'ಧೇಟ್' ಧಾತು ಇಲ್ಲಿ ಹೇಗೆ? ಎಂದು ಕೇಳಬಹುದು. ಆದರೆ 'ಅನೇಕಾರ್ಥತ್ವಾತ್ ಧಾತೂನಾಮ್' ಎಂಬಂತೆ ಧಾತುಗಳಿಗೆ ಅನೇಕ ಅರ್ಥಗಳಿರುತ್ತವೆ ಎಂಬುದಂತು ಸತ್ಯ ವಿಚಾರ.

ಈಗ ಅನಾಯಸವಾಗಿ ಶ್ರದ್ಧಾಲುಃ ರೂಪವಾಗುತ್ತದೆ - 'ಶ್ರದ್' ಉಪಪದ ಸೇರಿದ 'ಧೇಟ್' ಧಾತುವಿಗೆ 'ಲುಶ್' ಪ್ರತ್ಯಯ ಬಂದರೆ ಶ್ರದ್+ಧೇ+ಲುಶ್ ಎಂದಾಗುತ್ತದೆ. ಆದೇಚೋಽಪದೇಶೋಽಶಿತಿ (೬-೧-೪೫) ಎಂಬ ಸೂತ್ರದಿಂದ ಏಜಂತವಾದ 'ಧೇ' ಎಂಬುದಕ್ಕೆ ಆಕಾರ ಬರುತ್ತದೆ. ಒಟ್ಟಿಗೆ ಸೇರಿಸಿದರೆ 'ಶ್ರದ್ಧಾಲುಃ' ಎಂದಾಗುತ್ತದೆ. ಧಾರಣಾರ್ಥಕವಾದ 'ಧಾ' ಧಾತುವೇ ಬೇಡ.

ಪ್ರಶ್ನೆ - 'ಆದೇಚೋಽಪದೇಶೋಽಶಿತಿ' ಈ ಸೂತ್ರ ಶಿತ್‌ಪ್ರತ್ಯಯ ಪರದಲ್ಲಿಲ್ಲದಾಗ ಮಾತ್ರ ಆಕಾರ ಹೇಳುತ್ತದೆ. 'ಲುಶ್' ಎಂಬುದು ಶಿತ್ ಪ್ರತ್ಯಯವಾದ್ದರಿಂದ ಆಕಾರಾದೇಶಕ್ಕೆ ಪ್ರಸಕ್ತಿಯೇ ಇಲ್ಲವಲ್ಲ?

ಉತ್ತರ - ಹಾಗಾದರೆ 'ಧೇಟ್' ಧಾತುವಿನ 'ಆ' ಎಂಬುದನ್ನು ಸೇರಿಸಿಕೊಂಡರಾಯಿತು. ಈಗ ಏಜಂತ ಧಾತುವಿನ ಮುಂದೆ ಆಕಾರವಿದೆಯೇ ಹೊರತು ಶಿತ್ ಆದ ಲುಶ್ ಪ್ರತ್ಯಯವಿಲ್ಲ 'ಧೇ' ಎಂಬುದು 'ಧಾ' ಆಗಲು ತೊಂದರೆಯಿಲ್ಲ. ಅನಂತರ ಸವರ್ಣದೀರ್ಘದಿಂದ 'ಶ್ರದ್ಧಾಲುಃ' ಎಂದಾಗುತ್ತದೆ.

ಗೊಂದಲವಾದರೆ 'ಧೇಟ್'ಧಾತು ಬೇಡ. 'ಧಾ' ಧಾತುವೇ ಇರಲಿ, ಲುಶ್ ಪ್ರತ್ಯಯವೂ ಇರಲಿ 'ಶ್ರದ್ಧಾಲುಃ' ಎಂದೇ ಆಗುತ್ತದೆ. ಏಕೆಂದರೆ 'ಶ್ಲೌ' ಸೂತ್ರದಿಂದ ದ್ವಿತ್ವ ಬಂದರಷ್ಟೇ ಎಲ್ಲಾ ಸಮಸ್ಯೆಗಳು. ಆದರೆ ದ್ವಿತ್ವವೇ ಬರುವುದಿಲ್ಲ. ವ್ಯಾಕರಣದಲ್ಲಿ ಒಂದು ನಿಯಮವಿದೆ - 'ಸಂಜ್ಞಾಪೂರ್ವಕೋ ವಿಧಿರನಿತ್ಯಃ' 'ಸಂಜ್ಞೆಯನ್ನು ಹೇಳಿ ಮಾಡಿದ ವಿಧಿಯು ಅನಿತ್ಯ' ಎಂದು. 'ಶ್ಲೌ'ಸೂತ್ರವು 'ಧಾತೋಃ' ಎಂದು ಸಂಜ್ಞಾಪೂರ್ವಕವಾಗಿ ದ್ವಿತ್ವವನ್ನು ವಿಧಿಸುತ್ತಿದೆ. ಇಂತಹ ವಿಧಿಗಳನ್ನು ಮಾಡಲೇಬೇಕೆಂದು ಆಗ್ರಹಿಸಬೇಕಿಲ್ಲ. ಬೇಡವಾದರೆ ಬಿಡಬಹುದು. ಈಗ 'ಶ್ರದ್' ಉಪಪದ ಸೇರಿದರೆ ಸಾಕು ರೂಪವಾಗುತ್ತದೆ. ಶ್ರದ್+ಧಾ+ಲುಶ್ ಇದನ್ನು ಸೇರಿಸಿದರೆ ಸಾಕು ಶ್ರದ್ಧಾಲುಃ ಎಂದಾಗುತ್ತದೆ.

ಅಂತೂ ಆಲುಚ್ ಪ್ರತ್ಯಯ ಹೇಳಿದ್ದು ವ್ಯರ್ಥವೆಂದಾಯಿತು. 'ವ್ಯರ್ಥಮಪಿ ಕಂಚಿದರ್ಥಂ ಜ್ಞಾಪಯತಿ' ಎಂಬಂತೆ 'ಕೃಪ್' ಧಾತುವಿಗೂ ಆಲುಚ್ ಪ್ರತ್ಯಯ ವಿಧಿಸುವುದಕ್ಕಾಗಿಯೇ ಆಲುಚ್ ಹೇಳಿದ್ದು. ಈ ನಿಟ್ಟಿನಲ್ಲಿ ಮಾತ್ರ ಆಲುಚ್‌ಪ್ರತ್ಯಯಕ್ಕೆ ಸಾರ್ಥಕ್ಯ ಹೇಳಲು ಸಾಧ್ಯ. ಆದ್ದರಿಂದ 'ಕೃಪಾಲುಃ' ಎಂಬ ರೂಪವು ಸಾಧುವಾಗುತ್ತದೆ.

ಎಂಬುದು ಯಾದಿ ಪ್ರತ್ಯಯವೇ ಹೊರತು ಲಾದಿಪ್ರತ್ಯಯವಲ್ಲ. ಯಕಾರ ಕಾಣಿಸುತ್ತಿಲ್ಲ ಎಂದರೆ, ಬೇಡ, ಇದು ಲುಪ್ತನಿರ್ದಿಷ್ಟವಾಗಿದೆ. ಯಕಾರವು ಬರಬೇಕಾದರೆ ಯಕಾರಲೋಪವನ್ನು ಹೊಂದಿಯೇ ಬರುತ್ತದೆ. ಆದ್ದರಿಂದ 'ಲ' ಕಾರವು ಲೋಪ-ವಾಗುವುದಿಲ್ಲ.

ಅಥವಾ ಯಾದಿಪ್ರತ್ಯಯವಲ್ಲದಿದ್ದರೂ ತೊಂದರೆಯಿಲ್ಲ. ಯಕಾರಕ್ಕೆ ಲೋಪ ಬರುವುದಿಲ್ಲ. ಏನಾದರೂ ಪ್ರಯೋಜನವಿದ್ದರೆ ಮಾತ್ರ ಲೋಪ ಹೇಳಬೇಕು. ಯಕಾರವನ್ನು ಲೋಪ ಮಾಡಿದರೆ ಏನೂ ಪ್ರಯೋಜನವಿಲ್ಲ.

ಪ್ರಶ್ನೆ - ಪ್ರಯೋಜನವಿದೆ. 'ಲ'ಕಾರವು ಇತ್ ಆದರೆ ಲಿತ್ಸ್ವರವಾಗುತ್ತದೆ. ಇತ್ ಆಗದಿದ್ದರೆ ಪ್ರತ್ಯಯಸ್ವರವಾಗುತ್ತದೆ. ಹೀಗೆ ಲಿತ್ಸ್ವರವನ್ನು ಹೇಳುವುದೇ ಪ್ರಯೋಜನ.

ಉತ್ತರ - ಲಿತ್ಸ್ವರವಾದರೇನು? ಪ್ರತ್ಯಯಸ್ವರವಾದರೇನು? ಸ್ವರವ್ಯತ್ಯಾಸದಿಂದ ಪ್ರಯೋಗದಲ್ಲೇನು ವ್ಯತ್ಯಾಸವಿಲ್ಲ ತಾನೇ? ಲಿತ್ಸ್ವರ, ಪ್ರತ್ಯಯಸ್ವರ ಎರಡೂ ಉದಾತ್ತಸ್ವರವೇ ಆಗುತ್ತದೆ.

ನಿಮ್ಮ ಮತ್ತೊಂದು ಆಕ್ಷೇಪ - 'ಆತೋ ದೀರ್ಘೋ ಯಞಿ' ಎಂಬ ಸೂತ್ರದಿಂದ ದೀರ್ಘ ಬರುವುದಿಲ್ಲವೆಂದು, ಆದರೆ 'ತಿಙ್' ಎಂಬುದು ಈ ಸೂತ್ರದಲ್ಲಿ ಅನುವೃತ್ತಿಯೇ ಆಗುವುದಿಲ್ಲ. ಸಾರ್ವಧಾತುಕವು ಪರದಲ್ಲಿರಬೇಕೆಂದು ಹೇಳಿದರೆ ಸಾಕು. 'ತಿಙ್' ಎಂಬುದೇ ಪರದಲ್ಲಿರಬೇಕೆಂದು ಏಕೆ ಹೇಳಬೇಕು? ಇಷ್ಟರಿಂದಲೇ ಉದ್ದೇಶಸಿದ್ಧಿಯಾಗುತ್ತದೆ. 'ತಿಙ್' ಪ್ರತ್ಯಯದ ಅವಶ್ಯಕತೆಯೇ ಇಲ್ಲವಾದ್ದರಿಂದ ದೀರ್ಘ ಬರಬಾರದೇಕೆ?

ಇನ್ನು 'ಶ್ರದ್ಧಾಲುಃ' ಎಂಬ ರೂಪವೇ ಸಿದ್ಧವಾಗದೆಂಬ ಮೂರನೆಯ ಆಕ್ಷೇಪವೂ ಹುರುಳಿಲ್ಲದ್ದು. ಏಕೆ ಗೊತ್ತೋ? ನಾವಿಲ್ಲಿ ಹೇಳುತ್ತಿರುವುದು 'ಧೇಟ್' ಧಾತು. 'ಧಾ' ಧಾತುವಲ್ಲ. 'ಧೇಟ್' ಧಾತು ಜುಹೋತ್ಯಾದಿ ಗಣದಲ್ಲಿ ಸೇರಿಯೇ ಇಲ್ಲ. ದ್ವಿತ್ವ ಹೇಗೆ ಹೇಳುತ್ತೀರಿ? ಪಾನಾರ್ಥದಲ್ಲಿರುವ 'ಧೇಟ್' ಧಾತು ಇಲ್ಲಿ ಹೇಗೆ? ಎಂದು ಕೇಳಬಹುದು. ಆದರೆ 'ಅನೇಕಾರ್ಥತ್ವಾತ್ ಧಾತೂನಾಮ್' ಎಂಬಂತೆ ಧಾತುಗಳಿಗೆ ಅನೇಕ ಅರ್ಥಗಳಿರುತ್ತವೆ ಎಂಬುದಂತು ಸತ್ಯ ವಿಚಾರ.

ಈಗ ಅನಾಯಸವಾಗಿ ಶ್ರದ್ಧಾಲುಃ ರೂಪವಾಗುತ್ತದೆ - 'ಶ್ರದ್' ಉಪಪದ ಸೇರಿದ 'ಧೇಟ್' ಧಾತುವಿಗೆ 'ಲುಶ್' ಪ್ರತ್ಯಯ ಬಂದರೆ ಶ್ರದ್+ಧೇ+ಲುಶ್ ಎಂದಾಗುತ್ತದೆ. ಆದೇಚೋಽಪದೇಶೋಽಶಿತಿ (೬-೧-೪೫) ಎಂಬ ಸೂತ್ರದಿಂದ ಏಜಂತವಾದ 'ಧೇ' ಎಂಬುದಕ್ಕೆ ಆಕಾರ ಬರುತ್ತದೆ. ಒಟ್ಟಿಗೆ ಸೇರಿಸಿದರೆ 'ಶ್ರದ್ಧಾಲುಃ' ಎಂದಾಗುತ್ತದೆ. ಧಾರಣಾರ್ಥಕವಾದ 'ಧಾ' ಧಾತುವೇ ಬೇಡ.

ಪ್ರಶ್ನೆ - 'ಆದೇಚೋಽಪದೇಶೋಽಶಿತಿ' ಈ ಸೂತ್ರ ಶಿತ್‌ಪ್ರತ್ಯಯ ಪರದಲ್ಲಿಲ್ಲದಾಗ ಮಾತ್ರ ಆಕಾರ ಹೇಳುತ್ತದೆ. 'ಲುಶ್' ಎಂಬುದು ಶಿತ್ ಪ್ರತ್ಯಯವಾದ್ದರಿಂದ ಆಕಾರಾದೇಶಕ್ಕೆ ಪ್ರಸಕ್ತಿಯೇ ಇಲ್ಲವಲ್ಲ?

ಉತ್ತರ - ಹಾಗಾದರೆ 'ಧೇಟ್' ಧಾತುವಿನ 'ಆ' ಎಂಬುದನ್ನು ಸೇರಿಸಿಕೊಂಡರಾಯಿತು. ಈಗ ಏಜಂತ ಧಾತುವಿನ ಮುಂದೆ ಆಕಾರವಿದೆಯೇ ಹೊರತು ಶಿತ್ ಆದ ಲುಶ್ ಪ್ರತ್ಯಯವಿಲ್ಲ 'ಧೇ' ಎಂಬುದು 'ಧಾ' ಆಗಲು ತೊಂದರೆಯಿಲ್ಲ. ಆನಂತರ ಸವರ್ಣದೀರ್ಘದಿಂದ 'ಶ್ರದ್ಧಾಲುಃ' ಎಂದಾಗುತ್ತದೆ.

ಗೊಂದಲವಾದರೆ 'ಧೇಟ್'ಧಾತು ಬೇಡ. 'ಧಾ' ಧಾತುವೇ ಇರಲಿ, ಲುಶ್ ಪ್ರತ್ಯಯವೂ ಇರಲಿ 'ಶ್ರದ್ಧಾಲುಃ' ಎಂದೇ ಆಗುತ್ತದೆ. ಏಕೆಂದರೆ 'ಶ್ಲೌ' ಸೂತ್ರದಿಂದ ದ್ವಿತ್ವ ಬಂದರಷ್ಟೇ ಎಲ್ಲಾ ಸಮಸ್ಯೆಗಳು. ಆದರೆ ದ್ವಿತ್ವವೇ ಬರುವುದಿಲ್ಲ. ವ್ಯಾಕರಣದಲ್ಲಿ ಒಂದು ನಿಯಮವಿದೆ - 'ಸಂಜ್ಞಾಪೂರ್ವಕೋ ವಿಧಿರನಿತ್ಯಃ' 'ಸಂಜ್ಞೆಯನ್ನು ಹೇಳಿ ಮಾಡಿದ ವಿಧಿಯು ಅನಿತ್ಯ' ಎಂದು. 'ಶ್ಲೌ'ಸೂತ್ರವು 'ಧಾತೋಃ' ಎಂದು ಸಂಜ್ಞಾಪೂರ್ವಕವಾಗಿ ದ್ವಿತ್ವವನ್ನು ವಿಧಿಸುತ್ತಿದೆ. ಇಂತಹ ವಿಧಿಗಳನ್ನು ಮಾಡಲೇಬೇಕೆಂದು ಆಗ್ರಹಿಸಬೇಕಿಲ್ಲ. ಬೇಡವಾದರೆ ಬಿಡಬಹುದು. ಈಗ 'ಶ್ರದ್' ಉಪಪದ ಸೇರಿದರೆ ಸಾಕು ರೂಪವಾಗುತ್ತದೆ. ಶ್ರದ್ +ಧಾ+ಲುಶ್ ಇದನ್ನು ಸೇರಿಸಿದರೆ ಸಾಕು ಶ್ರದ್ಧಾಲುಃ ಎಂದಾಗುತ್ತದೆ.

ಅಂತೂ ಆಲುಚ್ ಪ್ರತ್ಯಯ ಹೇಳಿದ್ದು ವ್ಯರ್ಥವೆಂದಾಯಿತು. 'ವ್ಯರ್ಥಮಪಿ ಕಂಚಿದರ್ಥಂ ಜ್ಞಾಪಯತಿ' ಎಂಬಂತೆ 'ಕೃಪ್' ಧಾತುವಿಗೂ ಆಲುಚ್ ಪ್ರತ್ಯಯ ವಿಧಿಸುವುದಕ್ಕಾಗಿಯೇ ಆಲುಚ್ ಹೇಳಿದ್ದು. ಈ ನಿಟ್ಟಿನಲ್ಲಿ ಮಾತ್ರ ಆಲುಚ್‌ಪ್ರತ್ಯಯಕ್ಕೆ ಸಾರ್ಥಕ್ಯ ಹೇಳಲು ಸಾಧ್ಯ. ಆದ್ದರಿಂದ 'ಕೃಪಾಲುಃ' ಎಂಬ ರೂಪವು ಸಾಧುವಾಗುತ್ತದೆ.

'ಸಂಜ್ಞಾಪೂರ್ವಕೋ ವಿಧಿರನಿತ್ಯಃ' ಎಂಬ ನಿಯಮವು ಭಾಷ್ಯದಲ್ಲಿ ವಸ್ತುತಃ ಇಲ್ಲ. ಆದರೆ ಪ್ರಯೋಗಬಾಹುಲ್ಯದಿಂದಷ್ಟೇ ಇಲ್ಲಿ ಇಟ್ಟುಕೊಳ್ಳಲಾಗಿದೆ.

ಕೆಲವರು ಟೀಕೆಯಲ್ಲಿ 'ಕೃಪಾಲವಃ' ಎಂಬ ಪಾಠವಿಲ್ಲ 'ದಯಾಲವಃ' ಎಂಬ ಪಾಠವಿದೆ ಎನ್ನುತ್ತಾರೆ. ಈ ಪಕ್ಷದಲ್ಲಿ ಯಾವ ಸಮಸ್ಯೆಯಿಲ್ಲ .

## ಗೀತಾಭಾಷ್ಯದಲ್ಲಿ ಕೃಪಾಲು ಶಬ್ದಾರ್ಥವಿಚಾರ

ಗೀತಾಭಾಷ್ಯ - ಬ್ರಹ್ಮರುದ್ರೇಂದ್ರಾದಿಭಿಃ ಅರ್ಥಿತೋ ಜ್ಞಾನಪ್ರದರ್ಶನಾಯ ಭಗವಾನ್ ನಷ್ಟಧರ್ಮಜ್ಞಾನಲೋಕಕೃಪಾಲುಭಿಃ ವ್ಯಾಸೋ ಅವತಾರ.

ಪ್ರಮೇಯದೀಪಿಕಾ - ಯದ್ಯಪಿ ಸ್ಪೃಹಿಗೃಹೀತ್ಯಾದಿನಾ ಕೃಪೇಃ ಆಲುಚ್ ಪ್ರತ್ಯಯಃ ನ ವಿಹಿತಃ ತಥಾಪಿ ವ್ಯಾಕರಣಾಂತರಬಲಾದವಗಂತವ್ಯಃ ಕಲಶವಾಚೀ ವಾ ಆಲುಶಬ್ದಃ ಕೃಪಾಪೂರ್ಣಕಲಶೈಃ ಇತ್ಯರ್ಥ:

'ಸ್ಪೃಹಿಗೃಹಿ' ಇತ್ಯಾದಿಸೂತ್ರದಿಂದ 'ಸ್ಪೃಹಯಾಲು' ಮೊದಲಾದ ರೂಪಗಳಾಗುತ್ತವೆ. 'ಕೃಪಾಲುಃ' ಎಂಬ ರೂಪವು ಸಿದ್ಧವಾಗುವುದಿಲ್ಲ. ಆದರೆ ಬೇರೆ ಚಾಂದ್ರಾದಿವ್ಯಾಕರಣಗಳ ಪ್ರಕಾರ ಸಿದ್ಧವಾಗುತ್ತದೆ.

ಅಥವಾ 'ಆಲು'ಎಂದರೆ 'ಕಲಶ' ಎಂದರ್ಥ. ಈ ಅರ್ಥವು 'ಗರ್ಗಯಾಲುರ್ಗಲಂತಿಕಾ' ಎಂಬ ಕೋಶದಿಂದ ಸಿದ್ಧವಾಗಿದೆ. 'ಕೃಪಾಪೂರ್ಣವಾದ ಕಲಶದಿಂದ' ಎಂದರ್ಥ. (ಹೆಚ್ಚಿನ ವಿಚಾರವನ್ನು ಸುಧೀಂದ್ರತೀರ್ಥರ ಭಾವರತ್ನಕೋಶವನ್ನು ನೋಡಿ ತಿಳಿಯಬೇಕು)

ಇಲ್ಲಿಗೆ ನಾಲ್ಕನೇ ಪದ್ಯದ ವ್ಯಾಖ್ಯಾನ ಮುಗಿಯಿತು

## ಗುರು ಅಕ್ಷೋಭ್ಯತೀರ್ಥರೇ ! ನಿಮ್ಮ ಚರಣಕಮಲವ ನಂಬಿಹೆನು

**तात्पर्यचन्द्रिका –**

**श्रीमद्रमारमणसद्गिरिपादसङ्गिव्याख्यानिनाददलिताखिलदुष्टदर्पम् ।**
**दुर्वादिवारणविदारणदक्षदीक्षमक्षोभ्यतीर्थमृगराजमहं नमामि ।। ९ ।।**

ಕಮಲಾಪತಿಯಾದ ನಾರಾಯಣನೆಂಬ ಶ್ರೇಷ್ಠಪರ್ವತದ ಪಾದವನ್ನು ಆಶ್ರಯಿಸಿ ವ್ಯಾಖ್ಯಾನವೆಂಬ ಘರ್ಜನೆಯಿಂದ ಕ್ರೂರಮೃಗಗಳಂತಿರುವ ಎಲ್ಲಾ ದುರ್ವಾದಿಗಳ

ದುಷ್ಪದರ್ಪವನ್ನು ಭಂಗಗೊಳಿಸಿ ದುರ್ವಾದಿಗಳೆಂಬ ಮದ್ದಾನೆಗಳನ್ನು ಸೀಳುವುದರಲ್ಲಿ ಬದ್ಧದೀಕ್ಷರಾದ ಅಕ್ಷೋಭ್ಯತೀರ್ಥರೆಂಬ ಮೃಗರಾಜರನ್ನು ನಾನು ನಮಸ್ಕರಿಸುತ್ತೇನೆ.

**ಭಾವದೀಪಃ – ಸ್ವಗುರೂನ್ ಪ್ರಣಮತಿ – ಶ್ರೀಮತ್ ಇತಿ ।।**

ಗುರುಗಳಾದ ಶ್ರೀಅಕ್ಷೋಭ್ಯತೀರ್ಥಪೂಜ್ಯಶ್ರೀಪಾದರನ್ನು 'ಶ್ರೀಮದ್ರಮಾರಮಣ' ಇತ್ಯಾದಿಯಾಗಿ ನಮಸ್ಕರಿಸುತ್ತಿದ್ದಾರೆ.

ವಿವರಣೆ - 'ಶ್ರೀಮದ್ರಮಾರಮಣಸದ್ಧಿರಿಪಾದಸಂಗಿವ್ಯಾಖ್ಯಾನಿನಾದದಲಿತಾऽಖಿಲದುಷ್ಪದರ್ಪಮ್' ಎಂಬ ವಿಶೇಷಣದ ಅಭಿಪ್ರಾಯ ಹೀಗಿದೆ - ಕಮಲಾಪತಿಯಾದ ನಾರಾಯಣನು ಪರ್ವತದಂತಿದ್ದಾನೆ. ಅವನ ಪಾದವು ಪರ್ವತದ ಬುಡದಲ್ಲಿರುವ ಗುಹೆಯಂತಿದೆ. ಶ್ರೀಅಕ್ಷೋಭ್ಯತೀರ್ಥರು ಆ ಗುಹೆಯಲ್ಲಿ ವಾಸಮಾಡುವ ಸಿಂಹದಂತಿದ್ದಾರೆ. ಅವರ ವ್ಯಾಖ್ಯಾನವು ಸಿಂಹಗರ್ಜನೆಯಂತಿದೆ. ಇಂತಹ ಗರ್ಜನೆಯಿಂದ ಮದಭರಿತ ಆನೆಗಳಂತಿರುವ ದುರ್ವಾದಿಗಳು ದಿಕ್ಕಾಪಾಲಾಗಿ ಓಡಿದ್ದಾರೆ. ಅಷ್ಟೇ ಅಲ್ಲದೆ, ಅಂತಹ ಆನೆಗಳ ಮೇಲೆ ಹಾರಿ ಅವುಗಳ ಗಂಡಸ್ಥಳವನ್ನು ಸೀಳುವುದರಲ್ಲಿ ಬಹುಕುಶಲಿಗಳಾಗಿ ಸಿಂಹರಾಗಿದ್ದಾರೆ. ಇಂತಹ ಅಕ್ಷೋಭ್ಯತೀರ್ಥ-ಸಿಂಹರನ್ನು ಭಕ್ತಿಯಿಂದ ನಮಿಸೋಣ.

ಇಲ್ಲಿಗೆ ಐದನೇ ಪದ್ಯದ ವ್ಯಾಖ್ಯಾನ ಮುಗಿಯಿತು

## ಗ್ರಂಥಪ್ರತಿಜ್ಞೆ

**ತತ್ತ್ವಪ್ರಕಾಶಿಕಾ –**
**ಅಥ ತತ್ಕೃಪಯಾ ಬ್ರಹ್ಮಸೂತ್ರಭಾಷ್ಯಂ ಯಥಾಮತಿ ।**
**ವ್ಯಾಕುರ್ವೇ ಶ್ರೀಮದಾನನ್ದತೀರ್ಥಾರ್ಯಮುಖನಿಃಸೃತಮ್ ।। ೬ ।।**

ಭಾಷ್ಯವು ಅತ್ಯಂತ ಗಂಭೀರವಾದ್ದರಿಂದ ಗುರುಗಳ ಕೃಪಾಪೋಷಿತನಾಗಿ ಶ್ರೀಮದಾನಂದತೀರ್ಥರ ಮುಖಕಮಲದಿಂದ ಹೊರಹೊಮ್ಮಿದ ಬ್ರಹ್ಮಸೂತ್ರಭಾಷ್ಯವನ್ನು ಯಥಾಮತಿ ವ್ಯಾಖ್ಯಾನಿಸುತ್ತೇನೆ.

## ಟೀಕಾರಾಯರಲ್ಲಿರುವ ವಿನಯ ಗುಣಭೂಷಣ

ವಿವರಣೆ - ಶಿಷ್ಯರ ಮನಸ್ಸಿಗೆ ಆನಂದವಾಗಲು ತಮ್ಮ ವ್ಯಾಖ್ಯಾನದ ಪ್ರತಿಜ್ಞೆ ಮಾಡುತ್ತಿದ್ದಾರೆ. ಗುರುಗಳ ಕೃಪೆಯಿಂದ ಯಥಾಮತಿ ವ್ಯಾಖ್ಯಾನಿಸಲು ಇಚ್ಛಿಸುತ್ತೇನೆ. 'ಯಥಾಮತಿ' ಎಂಬ ವಿಶೇಷಣದಿಂದ ಟೀಕಾರಾಯರಿಗಿರುವ ವಿನಯಪರಾಕಾಷ್ಠತೆ ಅರ್ಥವಾಗುತ್ತದೆ.

'ವ್ಯಾಕುರ್ವೇ' ಎಂಬುದರಿಂದ ವ್ಯಾಖ್ಯಾನದ ಪ್ರಯೋಜನ ತಮಗೂ ಇದೆ ಎಂದು ಸೂಚಿಸಿ ಮತ್ತಷ್ಟು ವಿನಯಪ್ರದರ್ಶನ ಮಾಡಿದ್ದಾರೆ.

ಇಲ್ಲಿಗೆ ಆರನೇ ಪದ್ಯದ ವ್ಯಾಖ್ಯಾನ ಮುಗಿಯಿತು

## ಅಹಂಕಾರ ಎಂದೂ ಬಾರದಿರಲಿ

**गङ्गासङ्गेन नैर्मल्यं रथ्याद्भिर्लभ्यते यथा ।**
**वाचो विशुद्धिसिध्यर्थं सङ्गम्यन्ते गुरोर्गिरः ।। ७ ।।**

ರಸ್ತೆಯ ನೀರು ಅಪವಿತ್ರವಾಗಿದ್ದರೂ ಸಹ ಗಂಗೆಯ ಸಂಪರ್ಕದಿಂದ ಹೇಗೆ ಪವಿತ್ರವಾಗುವುದೋ ಅದರಂತೆ ನನ್ನ ಮಾತುಗಳೂ ಸಹ ಪವಿತ್ರವಾಗಲೆಂದು ಗುರುಗಳ ಮಾತುಗಳ ಜೊತೆಗೆ ಸೇರಿಸಲ್ಪಡುತ್ತವೆ.

## ಟೀಕಾರಾಯರಿಗೇನು ಪ್ರಯೋಜನ ?

**ಭಾವದೀಪಃ – 'व्याकुर्वे' इत्यात्मनेपदेन प्राप्तमात्मगामिफलं दर्शयति – गङ्गासङ्गेन इति ।।**

ವ್ಯಾಕುರ್ವೇ ಎಂಬುದು ಆತ್ಮನೇಪದಪ್ರಯೋಗ. ಇದರಿಂದ ಕ್ರಿಯಾಫಲವು ಆತ್ಮಗಾಮಿ ಎಂದು ತಿಳಿಯುತ್ತದೆ. ತಮಗಿರುವ ಆ ಪ್ರಯೋಜನವಾದರೂ ಏನೆಂಬುದನ್ನು 'ಗಂಗಾಸಂಗೇನ' ಇತ್ಯಾದಿ ಶ್ಲೋಕದಿಂದ ತೋರಿಸುತ್ತಿದ್ದಾರೆ.

## ಹರಿಪ್ರೀತಿಯೇ ಮುಖ್ಯಪ್ರಯೋಜನ

**ಭಾವದೀಪಃ – 'ಭಾಷ್ಯಕರ್ತೃತತ್ಪ್ರತಿಪಾದ್ಯಯೋಃ ಪ್ರೀತೇಃ ಪ್ರಧಾನಫಲತ್ವೇऽಪಿ ಇದಮವಾನ್ತರಫಲಮ್' ಇತಿ ಭಾವಃ ।**

ವಸ್ತುತಃ ಭಾಷ್ಯಕಾರರ ಹಾಗೂ ಗ್ರಂಥಪ್ರತಿಪಾದ್ಯ ಭಗವಂತನ ಪ್ರೀತಿಯೇ ಟೀಕಾರಾಯರಿಗೆ ಪ್ರಧಾನಫಲ; ಇವು ಕೇವಲ ಅವಾಂತರಫಲವೆಂದು ತಿಳಿಯಬೇಕು.

## ಆಚಾರ್ಯರ ಮಾತುಗಳೆಂಬ ಗಂಗಾಜಲದಲ್ಲಿ ನನ್ನ ಮಾತು ಸೇರಲಿ

**ಭಾವದೀಪಃ – 'गङ्गासङ्गेन रथ्याद्भिर्नैर्मल्यं यथा लभ्यते तथा मदीयायाः वाचो विशुद्धिसिद्ध्यर्थं मदीयया वाचा गुरोर्गिरः सङ्गम्यन्ते व्याख्यानव्याख्येयभावेन सम्बध्यन्ते' इत्यर्थः ।**

ಗಂಗಾನೀರಿನ ಸಂಪರ್ಕವಾದಾಗ ರಸ್ತೆಯ ನೀರು ಹೇಗೆ ಪವಿತ್ರವಾಗುತ್ತದೋ, ಅದರಂತೆ ನನ್ನ ಮಾತಿನ ಶುದ್ಧಿಗಾಗಿ ಶ್ರೀಮದಾಚಾರ್ಯರ ಮಾತುಗಳು ನನ್ನ ಮಾತುಗಳಿಂದ ವ್ಯಾಖ್ಯಾನವ್ಯಾಖ್ಯೇಯಭಾವದ ಮೂಲಕ ಸಂಬಂಧ ಹೊಂದುತ್ತವೆ ಎಂದು ಅಭಿಪ್ರಾಯ.

**ಭಾವದೀಪಃ – यद्वा, 'भाष्यं व्याकुर्वे' इति प्राधान्येन भाष्यव्याख्याप्रतिज्ञानेऽपि न तावदेव किन्तु यत् न्यायविवरणोक्तम्, यच्च अनुव्याख्यानादिस्थानान्तरोक्तमवश्यमत्र भाष्ये संयोज्य व्याख्यानार्हं तदप्यत्र संयोज्य व्याक्रियते' इति स्ववाक्शुद्धिरूपान्तरीयकफलं वदन्नेवाह – गङ्गा इति ।।**

ಅಥವಾ ಗುರುಗಳ ಮಾತುಗಳಲ್ಲೇ ಸಂಗತಿಯು ಸ್ಪಷ್ಟವಾಗಿ ತೋರುವುದಿಲ್ಲ. ಅಂದರೆ ನ್ಯಾಯವಿವರಣ, ಭಾಷ್ಯ, ಅನುವ್ಯಾಖ್ಯಾನ, ಇತ್ಯಾದಿ ಬೇರೆ ಬೇರೆ ಗ್ರಂಥಗಳಲ್ಲಿ ಇರುವ ಗುರುಗಳ ಮಾತುಗಳಿಗೆ ಪರಸ್ಪರ ಸಂಬಂಧವು ಮಂದರಿಗೆ ತೋರುತ್ತಿಲ್ಲ. ಅಂತಹ ಗುರುಗಳ ಮಾತುಗಳಲ್ಲಿ ಪರಸ್ಪರ ಸಂಬಂಧವನ್ನು ಮಂದರಿಗೂ ಅರ್ಥ ಮಾಡಿಸುವಂತೆ

ನನ್ನ ಮಾತುಗಳನ್ನು ಸೇರಿಸುತ್ತೇನೆ. ಹೀಗೆ ಎರಡು ರೀತಿ ಅರ್ಥವನ್ನು ತಿಳಿಯಬೇಕು. ಗುರುಗಳ ಮಾತುಗಳನ್ನು ಪರಸ್ಪರ ಸೇರಿಸುವುದಷ್ಟೇ ನನ್ನ ಕೆಲಸವೆಂದು ಅಭಿಪ್ರಾಯ.

### ಆಚಾರ್ಯರ ಮಾತುಗಳನ್ನು ಪರಸ್ಪರ ಹೊಂದಿಸುವುದಷ್ಟೇ ನನ್ನ ಕೆಲಸ

**ಭಾವದೀಪಃ** – **'मदीयवाचो विशुद्ध्यर्थं मदीयया वाचा गुरोर्गिरः भाष्यादिस्थाः परस्परं सङ्गम्यन्ते सम्बद्धतया प्रकाश्यन्ते' इत्यर्थः । अस्मिन् पक्षे 'वाचो गिरां सङ्ग आर्थिकः' इति दृष्टान्तानानुगुण्यं ध्येयम् ।**

ಎರಡನೇ ವ್ಯಾಖ್ಯಾನದಿಂದ ತತ್ವಪ್ರದೀಪ ಗ್ರಂಥವೇ ಸಾಕು. ಟೀಕಾರಾಯರ ಟೀಕೆಯು ವ್ಯರ್ಥವೆಂಬ ಶಂಕೆಯು ಪರಿಹಾರವಾಯಿತು. ತತ್ವಪ್ರದೀಪವು ಕೇವಲ ಭಾಷ್ಯದ ವ್ಯಾಖ್ಯಾನವಾಗಿದೆ. ಆದರೆ ಟೀಕಾರಾಯರ ಟೀಕೆಯು ನ್ಯಾಯವಿವರಣ ಅನುವ್ಯಾಖ್ಯಾನಾದಿಗಳ ವ್ಯಾಖ್ಯಾನವೂ ಆಗಿದೆಯೆಂದು. ಆದ್ದರಿಂದಲೇ ಮುಂದೆ ಮಾಡಿರುವ ನ್ಯಾಯವಿವರಣದ ವ್ಯಾಖ್ಯಾನವು ಅಸಂಗತವಲ್ಲ. ಮತ್ತು ಶಾಸ್ತ್ರಯೋನಿತ್ವಾದಿ ಸೂತ್ರಾದಿಗಳಲ್ಲಿ ಗೀತಾಭಾಷ್ಯಾದಿಗಳನ್ನು ಯೋಜಿಸಿ ವ್ಯಾಖ್ಯಾನಿಸಿದ್ದೂ ತಪ್ಪಲ್ಲ. ದ್ಯುಭ್ವಾದ್ಯಧಿಕರಣದಲ್ಲಿ ಆಚಾರ್ಯರು ಹೇಳಿದ ಪ್ರಧಾನವನ್ನೇಕೆ ಸ್ವೀಕರಿಸಿದ್ದೀರಿ? ಎಂಬ ಪ್ರಶ್ನೆಗೆ ತತ್ವನಿರ್ಣಯದ ಮಾತನ್ನು ಉಲ್ಲೇಖಿಸಿದ್ದಾರೆ. ಆದ್ದರಿಂದ ಆಚಾರ್ಯರ ಬೇರೆ ಬೇರೆ ಗ್ರಂಥಗಳ ವ್ಯಾಖ್ಯಾನವೂ ತತ್ವಪ್ರಕಾಶಿಕೆಯಲ್ಲಿ ಮಾಡಿದ್ದಾರೆ.

### 'ತತ್ವಪ್ರದೀಪ' ಗ್ರಂಥವಿದ್ದರೂ ತತ್ವಪ್ರಕಾಶಿಕೆ ವ್ಯರ್ಥವಲ್ಲ

**ಭಾವದೀಪಃ** – **एतेन 'तत्वप्रदीपेनैवालं किमनेन?' इति प्रत्युक्तम् । तत्र केवलं भाष्यस्यैव व्याख्यानात् । अत एवाग्रे न्यायविवरणाद्युक्तविवरणं नाप्रतिज्ञातकीर्तनम् । अत एव च गीताभाष्याद्युक्तं शास्त्रयोनित्वादिसूत्रादौ तत्र तत्र संयोज्य व्याक्रियते । द्युभ्वाद्यधिकरणे चाभाषितं प्रधानं किं संयोज्यते? इति चेन्न, 'प्रकृतिजीवावाभिधीयेते इत्यन्यत्रोक्तत्वात्' इति तत्वनिर्णयोक्तमपि संयोज्य व्याक्रियते ।**

**ಭಾವದೀಪಃ – 'ऋक्पूरब्धूः पथामानक्षे' इति समासान्तस्तु पथाम्'** इति निर्देशेन तस्यानित्यत्वावगतेर्नाश्रितः । तेन 'रथ्याब्भिः' इति साधु ।

ವಿವರಣೆ - ರಸ್ತೆಯ ನೀರು ಅಪವಿತ್ರವಾಗಿದ್ದರೂ ಗಂಗಾಜಲದ ಸಂಪರ್ಕದಿಂದ ಹೇಗೆ ಪವಿತ್ರವಾಗುತ್ತದೋ, ಅದರಂತೆ ನನ್ನ ಮಾತುಗಳೂ ಸಹ ಸ್ವತಃ ಅಪವಿತ್ರವಾಗಿವೆ. ಗಂಗೆಯ ನೀರಿನಂತೆ ಗುರುಗಳ ಮಾತುಗಳು ಪವಿತ್ರವಾಗಿವೆ. ಪವಿತ್ರವಾದ ಗುರುಗಳ ಮಾತುಗಳಲ್ಲಿ ನನ್ನ ಮಾತುಗಳನ್ನು ವ್ಯಾಖ್ಯಾನವ್ಯಾಖ್ಯೇಯ ಭಾವದಿಂದ ಸೇರಿಸುತ್ತೇನೆ. ಆವಾಗ ನನ್ನ ಮಾತುಗಳೂ ಪವಿತ್ರವಾಗುತ್ತವೆ. ಅಥವಾ, 'ಭಾಷ್ಯವನ್ನು ವ್ಯಾಖ್ಯಾನಿಸುತ್ತೇನೆ' ಎಂದು ಪ್ರತಿಜ್ಞೆ ಮಾಡಿದ್ದರೂ ಕೇವಲ ಭಾಷ್ಯವ್ಯಾಖ್ಯಾನವೇ ಟೀಕಾರಾಯರ ಉದ್ದೇಶವಲ್ಲ. ಹೊರತಾಗಿ ನ್ಯಾಯವಿವರಣ ಅನುವ್ಯಾಖ್ಯಾನ ಮೊದಲಾದ ಬೇರೆ ಬೇರೆ ಗ್ರಂಥಗಳಲ್ಲಿರುವ ಗುರುಗಳ ಮಾತುಗಳಿಗೆ ಪರಸ್ಪರ ಸಂಬಂಧವು ಮಂದಜನರಿಗೆ ಕಾಣುವುದಿಲ್ಲ. ಅಂತಹ ಗುರುಗಳ ಮಾತುಗಳಲ್ಲಿ ಪರಸ್ಪರ ಸಂಬಂಧವನ್ನು ಮಂದರಿಗೂ ಅರ್ಥಮಾಡಿಸುವಂತೆ ನನ್ನ ಮಾತುಗಳನ್ನು ಸೇರಿಸುತ್ತೇನೆ. ಹೀಗೆ ಎರಡು ರೀತಿ ಅರ್ಥವನ್ನು ತಿಳಿಯಬೇಕು.

ಪ್ರಶ್ನೆ - 'ಗಂಗಾಸಂಗೇನ' ಇತ್ಯಾದಿ ಪದ್ಯದಲ್ಲಿ 'ವಾಚೋ ವಿಶುದ್ಧಿಸಿದ್ಧ್ಯರ್ಥಂ ಸಂಗಮ್ಯಂತೇ ಗುರೋರ್ಗಿರಃ' ಎಂದಿದೆ. ಇದರ ಅರ್ಥವೇನು? 'ಮಾತಿನ ಶುದ್ಧಿಗಾಗಿ ಗುರುಗಳ ಮಾತುಗಳನ್ನು ಸೇರಿಸುತ್ತೇನೆ' ಎಂಬುದು ಸಾಮಾನ್ಯ ಅರ್ಥ. ಇಲ್ಲಿ ಕರ್ತೃವಾಚಕಪದವೇ ಕಾಣಿಸುತ್ತಿಲ್ಲ. ಯಾರ ಮಾತಿನ ಶುದ್ಧಿಗಾಗಿ? ಎಂಬ ಪ್ರಶ್ನೆಗೆ 'ಗುರುಗಳ ಮಾತಿನ ಶುದ್ಧಿಗಾಗಿ' ಎಂಬ ಉತ್ತರ ಸರಿ ಆಗುವುದಿಲ್ಲ. ಗುರುಗಳ ಮಾತು ಸ್ವತಃ ಶುದ್ಧವಾಗಿರುವಾಗ ಪುನಃ ಗುರುಗಳ ಮಾತಿನ ಶುದ್ಧಿಗಾಗಿ ಗುರುಗಳ ಮಾತನ್ನು ಸೇರಿಸುತ್ತೇನೆಂಬುದು ಅತ್ಯಂತ ಅಸಂಗತ. ಆದ್ದರಿಂದ ಈ ಮಾತಿನ ಅರ್ಥವೇನು?

ಉತ್ತರ - ಈ ಪ್ರಶ್ನೆಗೆ ಗ್ರಂಥಕಾರರೇ 'ಗಂಗಾಸಂಗೇನ' ಇತ್ಯಾದಿ ಮಾತಿನಿಂದ ಉತ್ತರಿಸುತ್ತಿದ್ದಾರೆ. 'ಮದೀಯಯಾ ವಾಚಾ' ಎಂಬ ಕರ್ತೃವಾಚಕಪದವನ್ನು ಇಟ್ಟುಕೊಳ್ಳಬೇಕು.

ರಸ್ತೆಯ ನೀರು ಅಪವಿತ್ರವಾಗಿದ್ದರೂ ಗಂಗಾಜಲದ ಸಂಪರ್ಕದಿಂದ ಹೇಗೆ ಪವಿತ್ರವಾಗುತ್ತದೋ, ಅದರಂತೆ ನನ್ನ ಮಾತುಗಳೂ ಸಹ ಸ್ವತಃ ಅಪವಿತ್ರವಾಗಿವೆ. ಗಂಗೆಯ ನೀರಿನಂತೆ ಗುರುಗಳ ಮಾತುಗಳು ಪವಿತ್ರವಾಗಿವೆ. ಪವಿತ್ರವಾದ ಗುರುಗಳ ಮಾತುಗಳಲ್ಲಿ ನನ್ನ ಮಾತುಗಳನ್ನು ಸೇರಿಸುತ್ತೇನೆ. ಆವಾಗ ನನ್ನ ಮಾತುಗಳೂ ಪವಿತ್ರವಾಗುತ್ತವೆ.

## ಭಾಷ್ಯದ ಮಂಗಳಾಚರಣಶ್ಲೋಕದ ಅವತಾರಿಕೆ

**तत्वप्रकाशिका – अथाविद्यापटलपिहितनयनैरन्यैरन्यथाव्याख्यातानि ब्रह्मसूत्राणि यथावद् व्याचिख्यासुर्भगवानाचार्यवर्यः प्रारिप्सितभाष्यस्य कैवल्याद्यखिलफलसाधनतासिद्ध्यर्थं निरन्तरायपरिसमाप्त्यर्थं च नारायणनमस्कारं ग्रथयति, ग्रन्थारम्भं च प्रतिजानीते – नारायणमिति।।**

ಶಂಕರಾಚಾರ್ಯರೇ ಮೊದಲಾದ ಭಾಷ್ಯಕಾರರು ಅಜ್ಞಾನವೆಂಬ ಪರದೆಯಿಂದ ಮುಚ್ಚಲ್ಪಟ್ಟ ಅಂತಶ್ಚಕ್ಷುಸ್ಸುಳ್ಳವರಾಗಿದ್ದಾರೆ. ಹಾಗಾಗಿ ಇಂತಹವರು ಸ್ವಕಪೋಲಕಲ್ಪಿತವಾಗಿ ಬ್ರಹ್ಮಸೂತ್ರಗಳಿಗೆ ತಪ್ಪು ತಪ್ಪಾಗಿ ವ್ಯಾಖ್ಯಾನಮಾಡಿ ಸಾತ್ವಿಕರ ಬುದ್ಧಿಯನ್ನು ಹಾಳುಮಾಡಿದ್ದಾರೆ. ಇದನ್ನೆಲ್ಲಾ ತಿಳಿದ ಶ್ರೀಮದಾಚಾರ್ಯರು ಸಾತ್ವಿಕರ ಉದ್ಧಾರಕ್ಕಾಗಿ ಬ್ರಹ್ಮಸೂತ್ರಗಳಿಗೆ ನಿಜವಾದ ಅರ್ಥವನ್ನು ತಿಳಿಸುವ ಉದ್ದೇಶದಿಂದ 'ಬ್ರಹ್ಮಸೂತ್ರಭಾಷ್ಯ'ವನ್ನು ರಚಿಸಲು ಹೊರಟಿದ್ದಾರೆ. ಈ ಬ್ರಹ್ಮಸೂತ್ರಭಾಷ್ಯವನ್ನು ಅಧ್ಯಯನ ಮಾಡುವವರಿಗೆ ಮೋಕ್ಷಾದಿಸಕಲ ಪುರುಷಾರ್ಥಗಳೂ ಲಭಿಸಬೇಕೆಂಬ ಹಾಗೂ ನಿರ್ವಿಘ್ನವಾಗಿ ಗ್ರಂಥಪರಿಸಮಾಪ್ತಿ ಆಗಬೇಕೆಂಬ ಅಪೇಕ್ಷೆಯಿಂದ ಶ್ರೀಮದಾಚಾರ್ಯರು ನಾರಾಯಣನನ್ನು ನಮಸ್ಕಾರ ಮಾಡುವ ಮೂಲಕ ಗ್ರಂಥಾರಂಭದ ಪ್ರತಿಜ್ಞೆಯನ್ನು ಮಾಡುತ್ತಿದ್ದಾರೆ 'ನಾರಾಯಣಂ' ಎಂಬುದರಿಂದ.

## ಅಥಶಬ್ದದಿಂದಲೇ ಟೀಕೆಯ ಪ್ರಾರಂಭ

**भावदीपः – 'अथाविद्या' इत्यथशब्दः 'प्रतिग्रन्थव्याख्या प्रारभ्यते' इति प्रारम्भार्थः । 'अविद्या पटलमिव तेन पिहितं नयनमिव नयनं मनस्तत्वज्ञानं वा येषां तैः' इत्यर्थः । 'पटलपिहितनयनवत् अविद्यातिरस्कृततत्व-**

ज्ञानैरन्यथाव्याख्यातानि' इत्यर्थः । **फलसाधनतासिद्ध्यर्थं** = फलसाधनता-सिद्धये । 'समङ्गलस्यैव सफलत्वात्' इति भावः । **परिसमाप्त्यर्थं** = 'परि समाप्तिप्रचयादिप्रयोजनाय च अवश्यकर्तव्यम्' इति शेषः । तदुक्तं सुधायाम् – 'नारायणप्रणामादिकं प्रारिप्सितस्यानन्तरायपरिसमाप्तेः प्रचयस्य च हेतुतया अविगीतशिष्टाचारादिनाऽवगतमवश्यकरणीयं शिष्यान् ग्राहयितुं ग्रन्थादौ निबध्नाति' इति ।

ಅಥ ಅವಿದ್ಯಾ ಎಂಬಲ್ಲಿರುವ ಅಥಶಬ್ದಕ್ಕೆ ಪ್ರತಿಗ್ರಂಥವ್ಯಾಖ್ಯಾನವು ಪ್ರಾರಂಭವಾಗುತ್ತಿದೆ ಎಂದರ್ಥ. 'ಅವಿದ್ಯಾಪಟಲಪಿಹಿತನಯನೈಃ' ಎಂಬುದಕ್ಕೆ ಹೀಗೆ ಅರ್ಥ -- ''ಯಾವರೀತಿಯಾಗಿ ಕಣ್ಣಿಗೆ ಪೊರೆಯು ಮುಚ್ಚಿರುತ್ತದೆಯೋ ಅದರಂತೆ ಮನಸ್ಸನ್ನು ಅಥವಾ ತತ್ವಜ್ಞಾನವನ್ನು ಅಜ್ಞಾನವೆಂಬ ಪೊರೆಯು ಮುಚ್ಚಿರುತ್ತದೆ. ಅಂತಹ ಸಿದ್ಧಾಂತಿಗಳಿಂದ'' ಎಂದು. ''ಪೊರೆಯಿಂದ ಮುಚ್ಚಿದ ಕಣ್ಣಿನಂತೆ ಅವಿದ್ಯೆಯಿಂದ ಮುಚ್ಚಲ್ಪಟ್ಟ ತತ್ವಜ್ಞಾನವುಳ್ಳವರಿಂದ ಬ್ರಹ್ಮಸೂತ್ರವು ಅನ್ಯಥಾವ್ಯಾಖ್ಯಾತವಾಗಿದೆ'' ಎಂದು ಮುಂದಿನ ಶಬ್ದಗಳ ಅರ್ಥ. 'ಫಲಸಾಧನತಾಸಿದ್ಧ್ಯರ್ಥಂ' = 'ಫಲಸಾಧನೆಯ ಸಿದ್ಧಿಗೋಸ್ಕರ'. ಮಂಗಲಸಹಿತಗ್ರಂಥವಷ್ಟೇ ಸಫಲವಾಗಿರುತ್ತದೆಂದು ಇದರ ಅಭಿಪ್ರಾಯ. ಪರಿಸಮಾಪ್ತ್ಯರ್ಥಂ = ಪರಿಸಮಾಪ್ತಿ ಹಾಗೂ ಕೀರ್ತಿ ಮೊದಲಾದ ಪ್ರಯೋಜನಗಳಿಗೋಸ್ಕರ. **'ಅವಶ್ಯಕರ್ತವ್ಯಂ'** ಎಂಬುದನ್ನು ಶೇಷಪೂರಣೆ ಮಾಡಬೇಕು. ಇದನ್ನೇ ಸುಧೆಯಲ್ಲಿ ಹೀಗೆ ಹೇಳಿದ್ದಾರೆ. ''ನಾರಾಯಣಪ್ರಣಾಮಾದಿಕಂ ಪ್ರಾರಿಪ್ಸಿತಸ್ಯಾನಂತರಾಯಪರಿಸಮಾಪ್ತೇಃ ಪ್ರಚಯಸ್ಯ ಹೇತುತಯಾऽವಿಗೀತ-ಶಿಷ್ಟಾಚಾರಾದಿನಾ ಅವಗತಮವಶ್ಯಕರಣೀಯಂ ಶಿಷ್ಯಾನ್ ಗ್ರಾಹಯಿತುಂ ಗ್ರಂಥಾದೌ ನಿಬಧ್ನಾತಿ'' (ಗ್ರಂಥದ ಪ್ರಾರಂಭದಲ್ಲಿ ಮಾಡುವ ನಾರಾಯಣನ ಪ್ರಣಾಮಾದಿಗಳು ಪ್ರಾರಿಪ್ಸಿತಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿ ಎಂಬ ಮತ್ತು ಕೀರ್ತಿಯೆಂಬ ಪ್ರಯೋಜನವುಳ್ಳದ್ದಾಗಿದೆ. ಇಂತಹ ಮಂಗಳಾಚರಣೆಯು ಅವಿಗೀತಶಿಷ್ಟಾಚಾರ-ಪರಂಪರೆಯಿಂದ ಪ್ರಾಪ್ತವಾದ್ದರಿಂದ ಅವಶ್ಯಕರ್ತವ್ಯವಾಗಿದೆ. ಇದನ್ನು ಶಿಷ್ಯರಿಗೆ ತಿಳಿಸುವುದಕ್ಕಾಗಿ ಗ್ರಂಥದ ಪ್ರಾರಂಭದಲ್ಲಿ ನಿಬಂಧನೆ ಮಾಡುತ್ತಿದ್ದಾರೆ) ಎಂದು.

## ಶ್ರೀಮದಾಚಾರ್ಯರ ಭಾಷ್ಯವು ಅನಾರಂಭಣೀಯವೇ?

ವಿವರಣೆ - ಆಕ್ಷೇಪ : - ೧) ಬ್ರಹ್ಮಸೂತ್ರಭಾಷ್ಯವನ್ನು ಶ್ರೀಮದಾಚಾರ್ಯರು ರಚಿಸಬೇಕಾಗಿಲ್ಲ. ಭಾಷ್ಯವಿಲ್ಲದೆ ಸೂತ್ರವು ಅರ್ಥವಾಗದೆಂದರೆ ಬೇರೆಯವರ ಭಾಷ್ಯದಿಂದಲೇ ಸೂತ್ರಾರ್ಥವು ತಿಳಿಯುತ್ತದೆ. ಆದಕ್ಕೋಸ್ಕರ ಆಚಾರ್ಯರ ಭಾಷ್ಯವು ಬೇಕಿಲ್ಲ.

೨) ಅಥವಾ ಭಾಷ್ಯವು ಆರಂಭಣೀಯವಾಗಲಿ. ಆದರೆ ಮಂಗಳಶ್ಲೋಕವು ಅನಾವಶ್ಯಕ. ಮಂಗಳನಿಬಂಧನೆಗೋಸ್ಕರ ಆದ್ಯಪದ್ಯವು ಸಾರ್ಥಕ, ಎನ್ನಬಹುದು. ಆದರೆ ಯಾವ ಫಲವೂ ಇಲ್ಲದ ಕಾರಣ ಮಂಗಳವನ್ನೇ ಮಾಡಬೇಕಿಲ್ಲ.

೩) ಅಥವಾ ಮಂಗಳವನ್ನು ಮಾಡಬೇಕೆಂದು ಒಪ್ಪಿಕೊಳ್ಳೋಣ. ಆದರೆ ಮಾಡಿದ ಮಂಗಳವನ್ನು ಗ್ರಂಥದಲ್ಲಿ ಉಲ್ಲೇಖಿಸಬೇಕಿಲ್ಲ. ಅಥವಾ ಮಂಗಳವನ್ನು ಉಲ್ಲೇಖಿಸಬೇಕೆಂದು ಒಪ್ಪಿಕೊಳ್ಳೋಣ. ಆದರೆ 'ಸೂತ್ರಾರ್ಥ ಉಚ್ಯತೇ' ಎಂಬ ಅಂಶವು ವ್ಯರ್ಥ.

ಸಮಾಧಾನ - ಈ ಮೂರು ಆಕ್ಷೇಪಗಳನ್ನು ಪರಿಹರಿಸುವ ಮೂಲಕ ಮಂಗಳಶ್ಲೋಕಕ್ಕೆ ಅವತಾರಿಕೆಯನ್ನು 'ಅಥಾವಿದ್ಯಾ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಸೂತ್ರಾರ್ಥಪರಿಜ್ಞಾನಕ್ಕೋಸ್ಕರ ಭಾಷ್ಯವನ್ನು ರಚಿಸಲೇಬೇಕು. ಬೇರೆಯವರು ಭಾಷ್ಯವನ್ನು ರಚಿಸಿರಬಹುದು. ಆದರೆ ಅಜ್ಞಾನವೆಂಬ ಪೊರೆಯಿಂದ ತತ್ವಜ್ಞಾನವೆಂಬ ಕಣ್ಣು ಅವರಿಗೆ ಮುಚ್ಚಿಹೋಗಿದೆ. ಆದ್ದರಿಂದ ಅವರೆಲ್ಲರೂ ತಪ್ಪು ತಪ್ಪಾಗಿ ಸೂತ್ರಾರ್ಥ ಬರೆದಿದ್ದಾರೆ. ಆದರೆ ಶ್ರೀಮದಾಚಾರ್ಯರು ಸೂತ್ರಗಳಿಗೆ ಯಥಾವತ್ತಾದ ಅರ್ಥವನ್ನು ಬರೆಯುತ್ತಿದ್ದಾರೆ. ಇದರಿಂದ ಮೊದಲನೆಯ ಆಕ್ಷೇಪವು ಪರಿಹಾರವಾಯಿತು.

'ಇಂತಹ ಭಾಷ್ಯವನ್ನು ರಚಿಸುವ ಮೊದಲು ಮಂಗಳಾಚರಣೆ ಮಾಡಲೇಬೇಕು. ಆವಾಗ ಮಂಗಳಮಯವಾದ ಭಾಷ್ಯದ ಅಧ್ಯಯನದಿಂದ ಮೋಕ್ಷಾದಿ-ಸಕಲಪುರುಷಾರ್ಥಗಳು ದೊರೆಯುತ್ತವೆ. ಮತ್ತು ನಿರ್ವಿಘ್ನವಾಗಿ ಗ್ರಂಥವೂ

ಪರಿಸಮಾಪ್ತವಾಗುತ್ತದೆ. ಆದಕ್ಕೋಸ್ಕರ ನಾರಾಯಣನ ನಮಸ್ಕಾರವನ್ನು ಗ್ರಂಥದಲ್ಲಿ ಉಲ್ಲೇಖಿಸುತ್ತಿದ್ದಾರೆ'. ಹೀಗೆ ಹೇಳಿದ್ದರಿಂದ ಎರಡನೆಯ ಆಕ್ಷೇಪವು ನಿರಸ್ತವಾಯಿತು.

ತಾವು ಮಾಡುತ್ತಿರುವ ಗ್ರಂಥದ ಪ್ರತಿಜ್ಞೆಯನ್ನು 'ಸೂತ್ರಾರ್ಥ ಉಚ್ಯತೇ' ಎಂಬುದರಿಂದ ಮಾಡುತ್ತಿದ್ದಾರೆ. ಇದರಿಂದ ಮೂರನೆಯ ಆಕ್ಷೇಪವೂ ನಿರಸ್ತವಾಯಿತು.

## ಟೀಕೆಯ 'ಅಥ'ಶಬ್ದಕ್ಕೆ ಏನರ್ಥ?

ಆಕ್ಷೇಪ - 'ಅಥ' ಶಬ್ದದಿಂದಲೇ ಟೀಕೆಯನ್ನೇಕೆ ಪ್ರಾರಂಭಿಸುತ್ತಿದ್ದಾರೆ? 'ಮಂಗಲಾನಂತರಾರಂಭಪ್ರಶ್ನಕಾತ್ಸ್ನ್ನ್ಯರ್ಥಾಷ್ವಥೋ ಅಥ' ಎಂಬ ವಚನದಂತೆ ಅಥ ಶಬ್ದಕ್ಕೆ ಮಂಗಳ ಎಂದರ್ಥವೋ? ಆನಂತರ್ಯ ಎಂದರ್ಥವೋ? ಪ್ರಾರಂಭ ಎಂದರ್ಥವೋ? ಪ್ರಶ್ನಾದ್ಯರ್ಥವೋ?

ಮಂಗಳವನ್ನು ಈಗಾಗಲೇ ಮಾಡಿರುವುದರಿಂದ ಮಂಗಳವೆಂಬರ್ಥವನ್ನು ಹೇಳಲಾಗದು. ಭಾಷ್ಯವು ಈಗಲೇ ಪ್ರಾರಂಭವಾಗುತ್ತಿದೆ. ಇಲ್ಲಿಯ ತನಕ ಯಾವ ವಿಷಯವೂ ಪ್ರಸಕ್ತವೇ ಆಗಿಲ್ಲ. ಆದ್ದರಿಂದ ಆನಂತರ್ಯ ಎಂಬರ್ಥವನ್ನು ಹೇಳಲಾಗದು. ಟೀಕೆಯ ಮಂಗಳಶ್ಲೋಕದ ಅನಂತರ ಭಾಷ್ಯದ ಮಂಗಳಶ್ಲೋಕವು ಪ್ರಾರಂಭವಾಗುತ್ತಿದೆಯೆಂಬರ್ಥವಂತೂ ಅತ್ಯಂತ ಅಸಂಗತ.

ಇನ್ನು ಪ್ರಾರಂಭ ಎಂಬರ್ಥವೂ ಕೂಡುವುದಿಲ್ಲ. 'ವ್ಯಾಕುರ್ವೇ' ಎಂಬುದರಿಂದಲೇ ವ್ಯಾಖ್ಯಾನವು ಪ್ರಾರಂಭವಾಗಿದೆಯೆಂದು ತಿಳಿಯುತ್ತದೆ. ಉತ್ತರವನ್ನು ಹೇಳದ 'ಪ್ರಶ್ನೆ' ಮೊದಲಾದ ಅರ್ಥಗಳನ್ನೂ ಅಥಶಬ್ದಕ್ಕೆ ಹೇಳಲಾಗದು. ಹೀಗೆ ಯಾವ ಅರ್ಥವೂ ಇಲ್ಲದ ಅಥ ಶಬ್ದವನ್ನು ಹೇಳಬೇಕಿತ್ತೇಕೆ?

## 'ಅಥ'ಶಬ್ದಕ್ಕೆ ಅನೇಕಾರ್ಥಗಳಿವೆ

ಸಮಾಧಾನ - 'ಶ್ರೀಮದಾಚಾರ್ಯರು ಬ್ರಹ್ಮಸೂತ್ರಗಳನ್ನು ಯಥಾವತ್ತಾಗಿ ವ್ಯಾಖ್ಯಾನ ಮಾಡಲು ಬಯಸಿದವರಾಗಿ ನಮಸ್ಕಾರವನ್ನು ಉಲ್ಲೇಖಿಸುತ್ತಾ ಗ್ರಂಥಾರಂಭದ ಪ್ರತಿಜ್ಞೆಯನ್ನು ಮಾಡುತ್ತಿದ್ದಾರೆ' ಎಂದು ಟೀಕೆಯು ಹೇಳಿದಾಗ ನಮಗೆ ಶಂಕೆ ಬರುತ್ತದೆ - ''ಸೂತ್ರವ್ಯಾಖ್ಯಾನದಲ್ಲಿ ತೊಡಗಿದ ಆಚಾರ್ಯರು ಸೂತ್ರ-

ವ್ಯಾಖ್ಯಾನವನ್ನೇ ಮಾಡಬೇಕು. ಅಸಂಗತವಾದ ನಮಸ್ಕಾರಾದಿಗ್ರಥನಗಳೇಕೆ?'' ಎಂದು.

ಈ ಶಂಕೆಗಳ ಪರಿಹಾರಕ್ಕಾಗಿ 'ಅಥ' ಎಂದು ಹೇಳಿದರು. **'ಅಥ ವ್ಯಾಚಿಖ್ಯಾಸುಃ'** ಎಂಬ ಮಾತಿಗೆ 'ದೇವತಾನಮನ ಮತ್ತು ಅದರ ಉಲ್ಲೇಖವನ್ನು ಮಾಡಿದ ಅನಂತರ ವ್ಯಾಖ್ಯಾನ ಮಾಡಲು ಬಯಸಿದವರಾಗಿ' ಎಂದರ್ಥ. ಯಾವರೀತಿಯಾಗಿ 'ಊಟಮಾಡಲು ಬಯಸಿ ಸ್ನಾನ ಮಾಡುತ್ತಾನೆ' ಎಂದು ಹೇಳಿದರೆ ಸ್ನಾನವು ಊಟಮಾಡಲು ಅಂಗವೆಂದು ತಿಳಿಯುತ್ತದೋ, ಅದರಂತೆ ವ್ಯಾಖ್ಯಾನ ಮಾಡಲು ದೇವತಾನಮನ, ಮತ್ತು ಪ್ರತಿಜ್ಞೆಗಳು ಅಂಗವೆಂದು ತಿಳಿಯುತ್ತದೆ.

ಅಥವಾ 'ಬುದ್ಧಿಯಲ್ಲಿ ಉಪಸ್ಥಿತವಾದ ಬುದ್ಧ, ಚಾರ್ವಾಕ, ತಾರ್ಕಿಕ, ಕಾಣಾದ, ಕಾಪಿಲವೆಂಬ ಐದು ಮತಗಳ ಪ್ರವೃತ್ತ್ಯನಂತರ' ಎಂದು 'ಅಥ' ಶಬ್ದಕ್ಕೆ ಅರ್ಥ. 'ಅನ್ಯೈಃ ಅನ್ಯಥಾವ್ಯಾಖ್ಯಾತಾನಿ' ಎಂಬುದರ ಜೊತೆಗೆ ಅಥಶಬ್ದಕ್ಕೆ ಅನ್ವಯ. ಏಕೆಂದರೆ ಐದುಮತಗಳ ಪ್ರವೃತ್ತ್ಯನಂತರವೇ ಉಳಿದ ಮತದವರು ಅನ್ಯಥಾ (ಸಮುಚಿತವಲ್ಲದಂತೆ) ವ್ಯಾಖ್ಯಾನಿಸಿದ್ದರಿಂದ.

ಅಥವಾ 'ಶುದ್ಧಾನಂದೋರು ಇತ್ಯಾದಿಯಾಗಿ ಸಮಗ್ರಗ್ರಂಥಕ್ಕೆ ಸಾಮಾನ್ಯವಾಗಿ ವ್ಯಾಖ್ಯಾನಮಾಡಿದ್ದಾಗಿದೆ. ಈಗ ಭಾಷ್ಯದ ಪ್ರತಿಯೊಂದು ವಾಕ್ಯಗಳನ್ನು ವ್ಯಾಖ್ಯಾನಿಸುತ್ತಿದ್ದೇವೆ' ಎಂದು ಅಥಶಬ್ದಕ್ಕೆ ಅರ್ಥ. ಇಷ್ಟು ಅಥಶಬ್ದವಿಚಾರ.

ವಿಶೇಷ ವಿಚಾರ - ಪ್ರಶ್ನೆ - ಟೀಕೆಯು 'ಅಥ' ಶಬ್ದದಿಂದ ಪ್ರಾರಂಭವಾಗುತ್ತದೆ. ಗ್ರಂಥವು ಅಥಶಬ್ದದಿಂದ ಪ್ರಾರಂಭವಾದರೆ ಮಂಗಳವಾಗುತ್ತದೆ. ಅದಕ್ಕಾಗಿ ಟೀಕಾರಾಯರು 'ಅಥ' ಶಬ್ದದಿಂದ ವ್ಯಾಖ್ಯಾನವನ್ನು ಪ್ರಾರಂಭ ಮಾಡುತ್ತಿದ್ದಾರೆ. ಆದರೆ ಟೀಕಾರಾಯರು ಈಗಾಗಲೇ ಅನೇಕ ಶ್ಲೋಕಗಳಿಂದ ಮಂಗಳವನ್ನು ಹಾಡಿದ್ದಾಗಿದೆ. ಪುನಃ ಅಥಶಬ್ದದಿಂದ ಮಂಗಳ ಹೇಳುವ ಆವಶ್ಯಕತೆ ಏನಿತ್ತು?

ಉತ್ತರ - ಮಂಗಳಾರ್ಥದಲ್ಲಿ ಅಥ ಶಬ್ದವನ್ನು ಹೇಳಿದ್ದೇ ಅಲ್ಲ. 'ಅನಂತರ' ಎಂಬರ್ಥದಲ್ಲಿ ಹೇಳಿದ್ದಾರೆ.

ಪ್ರಶ್ನೆ - ಇದು ಹೇಗೆ ಸರಿ? ಭಾಷ್ಯವು ಈಗಲೇ ಪ್ರಾರಂಭವಾಗುತ್ತಿದೆ. ಈ ಮೊದಲು ಪ್ರಾರಂಭವಾಗಿಲ್ಲ. ಆದ್ದರಿಂದ ಯಾವುದರ ಆನಂತರ? ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದಲ್ಲವೇ?

ಉತ್ತರ- 'ವ್ಯಾಖ್ಯಾನದ ಪ್ರತಿಜ್ಞೆ'ಯ ಆನಂತರ ಭಾಷ್ಯಕಾರರ ಮಂಗಳಾಚರಣೆಯು ಪ್ರಸಕ್ತವಾಗಿದೆ. ಹೀಗೆ ಆನಂತರ್ಯಶಬ್ದದ ಅರ್ಥ.

ಪ್ರಶ್ನೆ - ಹಾಗಾದರೆ ನೀವು 'ಆರಂಭ' ಎಂಬರ್ಥವನ್ನು ಹೇಳಿದಂತಾಯಿತು. ಆದರೆ 'ಆರಂಭ ಮಾಡುತ್ತಿದ್ದೇವೆ' ಎಂದು ಹೇಳದಿದ್ದರೂ ಪ್ರತ್ಯಕ್ಷದಿಂದಲೇ ಆರಂಭ ಮಾಡಿರುವುದು ತಿಳಿಯುತ್ತದೆ. ಮತ್ತು ಭಾಷ್ಯವ್ಯಾಖ್ಯಾನವನ್ನು ಪ್ರಾರಂಭಿಸುತ್ತಿದ್ದೇನೆ ಎನ್ನಬೇಕು. ಆದರೆ 'ಭಾಷ್ಯಸ್ಯ ಆದ್ಯಶ್ಲೋಕವಿವರಣರೂಪತ್ವಾತ್' ಎಂದು ಹಿಂದೆ ಹೇಳಿದಂತೆ ಭಾಷ್ಯವ್ಯಾಖ್ಯಾನವನ್ನು ಮಂಗಳಪದ್ಯಗಳಿಂದಲೇ ಪ್ರಾರಂಭಿಸಿದ್ದಾಗಿದೆಯಲ್ಲವೇ?

ಉತ್ತರ - ಪ್ರತೀಕಗಳನ್ನು ಹಿಡಿದು ವ್ಯಾಖ್ಯಾನವನ್ನು ಪ್ರಾರಂಭಿಸುತ್ತಿದ್ದೇವೆ ಎಂದರ್ಥ.

ಪ್ರಶ್ನೆ - ಇದನ್ನು ಹಿಂದೆಯೇ 'ವ್ಯಾಕುರ್ವೇ' ಎಂಬ ಪದದಿಂದ ಹೇಳಿದ್ದಾಗಿದೆಯಲ್ಲವೇ?

ಉತ್ತರ - 'ಗಂಗಾಸಂಗೇನ' ಎಂಬ ಪದ್ಯದಿಂದ ವ್ಯವಹಿತವಾಗಿದೆ. ಹಾಗಾಗಿ ಸ್ಮರಣೆಗೋಸ್ಕರ ಪುನಃ ಹೇಳಲಾಗಿದೆ.

ಪ್ರಶ್ನೆ - ಆ ಪದ್ಯವು ಪ್ರತಿಜ್ಞೆಯನ್ನೇ ವಿವರಿಸುತ್ತಿದೆ. ಅದು ಪ್ರತಿಜ್ಞೆಗೆ ಪೂರಕವಾಗುತ್ತದಲ್ಲವೇ? ಆದ್ದರಿಂದ 'ವ್ಯಾಕುರ್ವೇ' ಎಂಬ ಪದವೇ ಸಾಕಾಗಿರುವಾಗ ಪುನಃ ಟೀಕೆಯಲ್ಲಿ 'ಅಥ' ಎಂದು ಏಕೆ ಹೇಳಿದರು?

ಉತ್ತರ - ಈ ಪ್ರಶ್ನೆಗೆ ಉತ್ತರರೂಪವಾಗಿ ಗ್ರಂಥಕಾರರು 'ಪ್ರತಿಗ್ರಂಥವ್ಯಾಖ್ಯಾ-ಪ್ರಾರಂಭಾರ್ಥೋ೭ಥಶಬ್ದಃ' ಎಂದು ಹೇಳಿದರು. ''ಸಮಗ್ರಭಾಷ್ಯವ್ಯಾಖ್ಯಾನವನ್ನು ಮಂಗಳಾಚರಣೆಯಲ್ಲೇ ಸಂಕ್ಷೇಪವಾಗಿ ಮಾಡಿದ್ದಾಯಿತು. ಇನ್ನು ಮುಂದೆ ಭಾಷ್ಯದ ಪ್ರತಿಯೊಂದು ವಾಕ್ಯಗಳನ್ನು ಪದಗಳನ್ನು ವಿವರವಾಗಿ ವ್ಯಾಖ್ಯಾನಿಸುತ್ತೇವೆ'' ಎಂದು ಇದರರ್ಥ.

ಪ್ರಶ್ನೆ - ಇದನ್ನು ಏಕೆ ಹೇಳಬೇಕು? ಪ್ರತಿಗ್ರಂಥವ್ಯಾಖ್ಯಾನವು ಪ್ರಾರಂಭವಾದದ್ದನ್ನು ಪ್ರತ್ಯಕ್ಷವಾಗಿ ನೋಡಿಯೇ ತಿಳಿಯಬಹುದಲ್ಲವೇ?

ಉತ್ತರ - ಆದರೂ ಸಹ ಶಿಷ್ಯರಿಗೆ ಮನಃಸಮಾಧಾನವಾಗಲಿದೆಯೆಂದು ಹೀಗೆ ಹೇಳಿದ್ದಾರೆ. 'ಆಚಾರ್ಯರ ಮಾತುಗಳು ಗಂಭೀರವಾಗಿವೆಯೆಂದು ಹೆದರಬೇಡಿರಿ. ಆಚಾರ್ಯರ ಪ್ರತಿಯೊಂದು ವಾಕ್ಯಗಳಿಗೆ ಪದಗಳಿಗೆ ವ್ಯಾಖ್ಯಾನಿಸುತ್ತೇವೆ' ಎಂದು ಹೇಳಿದಾಗ ಶಿಷ್ಯರಿಗೆ ಓದಲು ಉತ್ಸಾಹ ಶ್ರದ್ಧೆಗಳು ಬರುತ್ತದೆ. ಮನಸ್ಸಿಗೆ ಸಮಾಧಾನವಾಗುತ್ತದೆ.

ಲೋಕದಲ್ಲೂ ಈ ರೀತಿ ಕಂಡಿದೆ. ದುಃಖದಲ್ಲಿರುವ ವ್ಯಕ್ತಿಗೆ 'ನಾನು ನಿನಗೆ ಹಿತವನ್ನು ಹೇಳುತ್ತೇನೆ ಕೇಳಪ್ಪ!' ಎಂದು ಪ್ರತಿಜ್ಞೆ ಮಾಡಿ ಅನಂತರ ಹಿತೋಪದೇಶ ಮಾಡುತ್ತಾರೆ. ಪ್ರಾರಂಭದಲ್ಲಿ ಮಾಡಿದ ಪ್ರತಿಜ್ಞೆಮಾತಿನಿಂದಲೇ ಕೇಳುವಂತಹವನಿಗೆ ಬಹಳಷ್ಟು ಸಮಾಧಾನವಾಗುತ್ತದೆ. ಕೇಳುವಂತಹ ಮಾತುಗಳಲ್ಲಿಯೂ ಶ್ರದ್ಧೆಯು ಹೆಚ್ಚುತ್ತದೆ.

ಗ್ರಂಥಾರಂಭದಲ್ಲಿ ಮಾಡುವ ನಮಸ್ಕಾರವು ಶಿಷ್ಯಶಿಕ್ಷಣೆಗೋಸ್ಕರವೆಂದು ಗ್ರಂಥಕಾರರೇ ಮುಂದೆ ಹೇಳುತ್ತಾರೆ. ಆದರೆ ಟೀಕೆಯಲ್ಲಿ ಕೈವಲ್ಯಾದಿ ಸಕಲಪುರುಷಾರ್ಥ-ಸಿದ್ಧಿಗೋಸ್ಕರ ನಮಸ್ಕಾರವನ್ನು ನಿಬಂಧನೆ ಮಾಡಲಾಗಿದೆ.

ಪ್ರಶ್ನೆ - ಟೀಕೆಯು 'ಅಥ' ಶಬ್ದದಿಂದ ಪ್ರಾರಂಭವಾಗುತ್ತದೆ. ಗ್ರಂಥವು ಅಥಶಬ್ದದಿಂದ ಪ್ರಾರಂಭವಾದರೆ ಮಂಗಳವಾಗುತ್ತದೆ. ಆದಕ್ಕಾಗಿ ಟೀಕಾರಾಯರು 'ಅಥ' ಶಬ್ದದಿಂದ ವ್ಯಾಖ್ಯಾನವನ್ನು ಪ್ರಾರಂಭ ಮಾಡುತ್ತಿದ್ದಾರೆ ಎಂದೆನಿಸುತ್ತದೆ. ಆದರೆ ಟೀಕಾರಾಯರು ಈಗಾಗಲೇ ಅನೇಕ ಶ್ಲೋಕಗಳಿಂದ ಮಂಗಳವನ್ನು ಹಾಡಿದ್ದಾಗಿದೆ. ಪುನಃ ಅಥಶಬ್ದದಿಂದ ಮಂಗಳ ಹೇಳುವ ಅವಶ್ಯಕತೆ ಏನಿತ್ತು?

ಉತ್ತರ - ಮಂಗಳಾರ್ಥದಲ್ಲಿ ಅಥ ಶಬ್ದವನ್ನು ಹೇಳಿದ್ದೇ ಅಲ್ಲ. 'ಅನಂತರ' ಎಂಬರ್ಥದಲ್ಲಿ ಹೇಳಿದ್ದಾರೆ.

ಪ್ರಶ್ನೆ - ಇದು ಹೇಗೆ ಸರಿ? ಭಾಷ್ಯವು ಈಗಲೇ ಪ್ರಾರಂಭವಾಗುತ್ತಿದೆ. ಈ ಮೊದಲು ಪ್ರಾರಂಭವಾಗಿಲ್ಲ. ಆದ್ದರಿಂದ ಯಾವುದರ ಅನಂತರ? ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದಲ್ಲವೇ?

ಉತ್ತರ- 'ವ್ಯಾಖ್ಯಾನದ ಪ್ರತಿಜ್ಞೆ'ಯ ಅನಂತರ ಭಾಷ್ಯಕಾರರ ಮಂಗಳಾಚರಣೆಯು ಪ್ರಸಕ್ತವಾಗಿದೆ. ಹೀಗೆ ಅನಂತರ್ಯಶಬ್ದದ ಅರ್ಥ.

ಪ್ರಶ್ನೆ - ಹಾಗಾದರೆ ನೀವು 'ಆರಂಭ' ಎಂಬರ್ಥವನ್ನು ಹೇಳಿದಂತಾಯಿತು. ಆದರೆ 'ಆರಂಭ ಮಾಡುತ್ತಿದ್ದೇವೆ' ಎಂದು ಹೇಳದಿದ್ದರೂ ಪ್ರತ್ಯಕ್ಷದಿಂದಲೇ ಆರಂಭ ಮಾಡಿರುವುದು ತಿಳಿಯುತ್ತದೆ. ಮತ್ತು ಭಾಷ್ಯವ್ಯಾಖ್ಯಾನವನ್ನು ಪ್ರಾರಂಭಿಸುತ್ತಿದ್ದೇನೆ ಎನ್ನಬೇಕು. ಆದರೆ 'ಭಾಷ್ಯಸ್ಯ ಆದ್ಯಶ್ಲೋಕವಿವರಣರೂಪತ್ವಾತ್' ಎಂದು ಹಿಂದೆ ಹೇಳಿದಂತೆ ಭಾಷ್ಯವ್ಯಾಖ್ಯಾನವನ್ನು ಮಂಗಳಪದ್ಯಗಳಿಂದಲೇ ಪ್ರಾರಂಭಿಸಿದ್ದಾಗಿದೆ-ಯಲ್ಲವೇ?

ಉತ್ತರ - ಪ್ರತೀಕಗಳನ್ನು ಹಿಡಿದು ವ್ಯಾಖ್ಯಾನವನ್ನು ಪ್ರಾರಂಭಿಸುತ್ತಿದ್ದೇವೆ ಎಂದರ್ಥ.

ಪ್ರಶ್ನೆ - ಇದನ್ನು ಹಿಂದೆಯೇ 'ವ್ಯಾಕುರ್ವೇ' ಎಂಬ ಪದದಿಂದ ಹೇಳಿದ್ದಾಗಿದೆಯಲ್ಲವೇ?

ಉತ್ತರ - 'ಗಂಗಾಸಂಗೇನ' ಎಂಬ ಪದ್ಯದಿಂದ ವ್ಯವಹಿತವಾಗಿದೆ. ಹಾಗಾಗಿ ಸ್ಮರಣೆಗೋಸ್ಕರ ಪುನಃ ಹೇಳಲಾಗಿದೆ.

ಪ್ರಶ್ನೆ - ಆ ಪದ್ಯವು ಪ್ರತಿಜ್ಞೆಯನ್ನೇ ವಿವರಿಸುತ್ತಿದೆ. ಅದು ಪ್ರತಿಜ್ಞೆಗೆ ಪೂರಕವಾಗುತ್ತದಲ್ಲವೇ? ಆದ್ದರಿಂದ 'ವ್ಯಾಕುರ್ವೇ' ಎಂಬ ಪದವೇ ಸಾಕಾಗಿರುವಾಗ ಪುನಃ ಟೀಕೆಯಲ್ಲಿ 'ಅಥ' ಎಂದು ಏಕೆ ಹೇಳಿದರು?

ಉತ್ತರ - ಈ ಪ್ರಶ್ನೆಗೆ ಉತ್ತರರೂಪವಾಗಿ ಗ್ರಂಥಕಾರರು 'ಪ್ರತಿಗ್ರಂಥವ್ಯಾಖ್ಯಾ-ಪ್ರಾರಂಭಾರ್ಥೋಽಥಶಬ್ದಃ' ಎಂದು ಹೇಳಿದರು. ''ಸಮಗ್ರಭಾಷ್ಯವ್ಯಾಖ್ಯಾನವನ್ನು ಮಂಗಳಾಚರಣೆ- ಯಲ್ಲೇ ಸಂಕ್ಷೇಪವಾಗಿ ಮಾಡಿದ್ದಾಯಿತು. ಇನ್ನು ಮುಂದೆ ಭಾಷ್ಯದ ಪ್ರತಿಯೊಂದು ವಾಕ್ಯಗಳನ್ನು ಪದಗಳನ್ನು ವಿವರವಾಗಿ ವ್ಯಾಖ್ಯಾನಿಸುತ್ತೇವೆ'' ಎಂದು ಇದರರ್ಥ.

ಪ್ರಶ್ನೆ- ಇದನ್ನು ಏಕೆ ಹೇಳಬೇಕು? ಪ್ರತಿಗ್ರಂಥವ್ಯಾಖ್ಯಾನವು ಪ್ರಾರಂಭವಾದದ್ದನ್ನು ಪ್ರತ್ಯಕ್ಷವಾಗಿ ನೋಡಿಯೇ ತಿಳಿಯಬಹುದಲ್ಲವೇ?

ಉತ್ತರ - ಆದರೂ ಸಹ ಶಿಷ್ಯರಿಗೆ ಮನಃಸಮಾಧಾನವಾಗಲಿದೆಯೆಂದು ಹೀಗೆ ಹೇಳಿದ್ದಾರೆ. 'ಆಚಾರ್ಯರ ಮಾತುಗಳು ಗಂಭೀರವಾಗಿವೆಯೆಂದು ಹೆದರಬೇಡಿರಿ. ಆಚಾರ್ಯರ ಪ್ರತಿಯೊಂದು ವಾಕ್ಯಗಳಿಗೆ ಪದಗಳಿಗೆ ವ್ಯಾಖ್ಯಾನಿಸುತ್ತೇವೆ'

ಎಂದು ಹೇಳಿದಾಗ ಶಿಷ್ಯರಿಗೆ ಓದಲು ಉತ್ಸಾಹ ಶ್ರದ್ಧೆಗಳು ಬರುತ್ತದೆ. ಮನಸ್ಸಿಗೆ ಸಮಾಧಾನವಾಗುತ್ತದೆ.

ಲೋಕದಲ್ಲೂ ಈ ರೀತಿ ಕಂಡಿದೆ. ದುಃಖದಲ್ಲಿರುವ ವ್ಯಕ್ತಿಗೆ 'ನಾನು ನಿನಗೆ ಹಿತವನ್ನು ಹೇಳುತ್ತೇನೆ ಕೇಳಪ್ಪ!' ಎಂದು ಪ್ರತಿಜ್ಞೆ ಮಾಡಿ ಅನಂತರ ಹಿತೋಪದೇಶ ಮಾಡುತ್ತಾರೆ. ಪ್ರಾರಂಭದಲ್ಲಿ ಮಾಡಿದ ಪ್ರತಿಜ್ಞೆಮಾತಿನಿಂದಲೇ ಕೇಳುವಂತಹವನಿಗೆ ಬಹಳಷ್ಟು ಸಮಾಧಾನವಾಗುತ್ತದೆ. ಕೇಳುವಂತಹ ಮಾತುಗಳಲ್ಲಿಯೂ ಶ್ರದ್ಧೆಯು ಹೆಚ್ಚುತ್ತದೆ.

ಈ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಟೀಕೆಯಲ್ಲಿ ಹೇಳಿದ 'ಅಥ'ಶಬ್ದ ಎಷ್ಟು ಅರ್ಥಪೂರ್ಣ? ಮತ್ತು ಸ್ವರಸ? ಅಲ್ಲವೇ!

ಗ್ರಂಥಾರಂಭದಲ್ಲಿ ಮಾಡುವ ನಮಸ್ಕಾರವು ಶಿಷ್ಯಶಿಕ್ಷಣೆಗೋಸ್ಕರವೆಂದು ಗ್ರಂಥಕಾರರೇ ಮುಂದೆ ಹೇಳುತ್ತಾರೆ. ಆದರೆ ಟೀಕೆಯಲ್ಲಿ ಕೈವಲ್ಯಾದಿ ಸಕಲಪುರುಷಾರ್ಥಸಿದ್ಧಿಗೋಸ್ಕರ ನಮಸ್ಕಾರವನ್ನು ನಿಬಂಧನೆ ಮಾಡಲಾಗಿದೆ

## ೨೧ ಕುಭಾಷ್ಯಗಳು

'ಅವಿದ್ಯಾಪಟಲಪಿಹಿತನಯನೈಃ' ಎಂಬ ಶಬ್ದಕ್ಕೆ ಹೀಗೆ ಅರ್ಥ. ಯೋಗ್ಯತೆಯಿಲ್ಲದ ಕಾರಣ ಸೂತ್ರತಾತ್ಪರ್ಯದ ಪರಿಜ್ಞಾನ ಹೊಂದಿಲ್ಲ. ಅಜ್ಞಾನವಿರುವ ಕಾರಣದಿಂದ ಮತ್ತು ಯೋಗ್ಯತೆಯಿಲ್ಲದ ಕಾರಣದಿಂದ ಸೂತ್ರತಾತ್ಪರ್ಯಪರಿಜ್ಞಾನವನ್ನು ಇತರರು ಹೊಂದಿಲ್ಲ. ಕಣ್ಣಿಗೆ ಪಟ್ಟಿಕಟ್ಟಿಕೊಂಡ ಪುರುಷನಂತೆ ಅಂತಶ್ಚಕ್ಷುಸ್ಸನ್ನು ಕಳೆದುಕೊಂಡಿದ್ದಾರೆ.

ಬ್ರಹ್ಮಸೂತ್ರಗಳಿಗೆ ಅನ್ಯಥಾವ್ಯಾಖ್ಯಾನಮಾಡಿದವರಲ್ಲಿ ಇಪ್ಪತ್ತೊಂದು ಮಂದಿ ಪ್ರಸಿದ್ಧರಾಗಿದ್ದಾರೆ. ೧) ಭಾರತೀವಿಜಯ ೨) ಸಚ್ಚಿದಾನಂದ ೩) ಬ್ರಹ್ಮಘೋಷ ೪) ಶತಾನಂದ ೫) ಉದ್‌ವರ್ತ ೬) ವಿಜಯ ೭) ರುದ್ರಭಟ್ಟ ೮) ವಾಮನ ೯) ಯಾದವಪ್ರಕಾಶ ೧೦) ರಾಮಾನುಜ ೧೧) ಭರ್ತೃಪ್ರಪಂಚ ೧೨) ದ್ರವಿಡ ೧೩) ಬ್ರಹ್ಮದತ್ತ ೧೪) ಭಾಸ್ಕರ ೧೫) ವಿಶಾಖ ೧೬) ವೃತ್ತಿಕಾರಕ ೧೭) ವಿಜಯಭಟ್ಟ ೧೮) ವಿಷ್ಣುಕ್ರಾಂತ ೧೯) ವಾದೀಂದ್ರ ೨೦) ಮಾಧವದಾಸ ೨೧) ಸಂಕರ.

ಯಥಾರ್ಥವಾಗಿ ವ್ಯಾಖ್ಯಾನಮಾಡಲು ಆಚಾರ್ಯರೊಬ್ಬರೇ ಸಮರ್ಥರು. ಇದಕ್ಕೆ ಮುಖ್ಯ ಕಾರಣ ಆಚಾರ್ಯರಲ್ಲಿರುವ ಸಾರ್ವಜ್ಞ್ಯ. 'ಭಗವಾನ್' ಎಂಬ ಶಬ್ದ ಸರ್ವಜ್ಞತ್ವವನ್ನು ತಿಳಿಸುತ್ತಿದೆ.

## ಗ್ರಂಥಾರಂಭದಲ್ಲಿ ಮಂಗಳದ ಉಲ್ಲೇಖ

'ಕೈವಲ್ಯಾದಿ' ಎಂಬ ವಾಕ್ಯದ ಅರ್ಥ ಹೀಗೆ --

ಬಾಯಿಯಿಂದ ಗಟ್ಟಿಯಾಗಿ ಭಗವಂತನನ್ನು ಹೊಗಳಿ ನಮಿಸಬೇಕು. ಇಂತಹ ಮಂಗಳವನ್ನು ಆಚರಿಸಿ ಭಾಷ್ಯವನ್ನು ಪಠಿಸಿದಾಗ ನಿರ್ವಿಘ್ನವಾಗಿ ಗ್ರಂಥಾಧ್ಯಯನ ಪೂರ್ಣವಾಗುತ್ತದೆ. ಅಷ್ಟೆ ಅಲ್ಲದೆ ಮೋಕ್ಷಾದಿಪುರುಷಾರ್ಥವೂ ದೊರೆಯುತ್ತದೆ. ಈ ಫಲ ನಮಗಷ್ಟೇ ಹೊರತು ಆಚಾರ್ಯರಿಗಲ್ಲ. ವಿಘ್ನವೇ ಇಲ್ಲದ ಏಕಾಂತಭಕ್ತರಿಗೆ ಪ್ರತಿಯೊಂದರಿಂದ ಕೇವಲ ಭಗವತ್‌ಪ್ರೀತಿಯೇ ಮುಖ್ಯಫಲ. 'ಸಮಾಪ್ಯರ್ಥಂ ಚ' ಎಂಬ ಪದದ ಮುಂದೆ 'ಕೃತಮ್(ಮಾಡಲ್ಪಟ್ಟಿದೆ)' ಎಂಬುದನ್ನು ಸೇರಿಸಿಕೊಳ್ಳಬೇಕು.

ಅಥವಾ ಈ ಅನ್ವಯದಲ್ಲಿ 'ಕೈವಲ್ಯಾದ್ಯಖಿಲಫಲಸಾಧನತಾಸಿದ್ಧ್ಯರ್ಥಂ' ಎಂಬ ಪದಕ್ಕೆ ನಮಸ್ಕಾರದಲ್ಲಿ ಅನ್ವಯ. ಮೋಕ್ಷಾದಿಪುರುಷಾರ್ಥವೇ ಪ್ರಯೋಜನವಾಗಿ ಉಳ್ಳದ್ದು ನಮಸ್ಕಾರ ಎಂದರ್ಥವಾಗುತ್ತದೆ. 'ನಿರಂತರಾಯ ಪರಿಸಮಾಪ್ತ್ಯರ್ಥಂ' ಎಂಬ ಪದಕ್ಕೂ ಸಹ ನಮಸ್ಕಾರದಲ್ಲಿ ಅನ್ವಯ. ಆದ್ದರಿಂದ ಗ್ರಂಥಾರಂಭದಲ್ಲಿ ಮಾಡುವ ನಾರಾಯಣನ ನಮಸ್ಕಾರಕ್ಕೆ ಮೋಕ್ಷಾದಿಪುರುಷಾರ್ಥವು ಪ್ರಯೋಜನವಾಗಿದೆ ಮತ್ತು ನಿರ್ವಿಘ್ನ ಪರಿಸಮಾಪ್ತಿಯು ಪ್ರಯೋಜನವಾಗುತ್ತದೆ ಎಂದರ್ಥವಾಗುತ್ತದೆ. ಹೀಗೆ ಹೇಳಿದಾಗ ಈ ಎರಡೂ ಪದಗಳು ಚತುರ್ಥಿವಿಭಕ್ಯಂತವಾದ ಅರ್ಥವನ್ನು ನೀಡುತ್ತವೆ. ಈ ಎರಡು ಪ್ರಯೋಜನವುಳ್ಳ ನಮಸ್ಕಾರಕ್ಕೆ ಗ್ರಥಯತಿ ಎಂಬುದಕ್ಕೆ ಅನ್ವಯಮಾಡಿದಾಗ ಗ್ರಂಥದಲ್ಲಿ ಮಾಡುವ ನಮಸ್ಕಾರದ ಉಲ್ಲೇಖಕ್ಕೂ ಕೈವಲ್ಯಾದಿಪ್ರಯೋಜನಗಳಿವೆ ಎಂದು ಸಿದ್ಧವಾಗುತ್ತದೆ. ಆದ್ದರಿಂದ ಮುಂದೆ 'ಶಿಷ್ಯಶಿಕ್ಷಣೆಗೋಸ್ಕರ ನಮಸ್ಕಾರ ಹಾಗೂ ಅನುಬಂಧಚತುಷ್ಟಯದ ಉಲ್ಲೇಖ'ವೆಂದು ಹೇಳುತ್ತಾರೆ. ಇದರ ವಿರೋಧಕ್ಕೆ ಈಗ ಅವಕಾಶವಿಲ್ಲ.

## ನಾರಾಯಣನಿಗೆ ನಮಸ್ಕಾರ

**ಬ್ರಹ್ಮಸೂತ್ರಭಾಷ್ಯಮ್ –**

**नारायणं गुणैः सर्वैरुदीर्णं दोषवर्जितम् ।**
**ज्ञेयं गम्यं गुरूंश्चापि नत्वा सूत्रार्थ उच्यते ।।**

ಅನುವಾದ - ನಾರಾಯಣನು ಸಕಲಗುಣಪರಿಪೂರ್ಣನಾಗಿದ್ದಾನೆ. ಸಕಲದೋಷಗಳಿಂದ ವಿದೂರನಾಗಿದ್ದಾನೆ. ಸಜ್ಜನರಿಂದ ತಿಳಿಯಲು ಅರ್ಹನು ಮತ್ತು ಹೊಂದಲು ಯೋಗ್ಯನೂ ಆಗಿದ್ದಾನೆ. ಇಂತಹ ಲಕ್ಷ್ಮೀಪತಿಯನ್ನು ಭಕ್ತಿಯಿಂದ ನಮಸ್ಕಾರ ಮಾಡಿ, ಮತ್ತು ಗುರುಗಳಾದ ವೇದವ್ಯಾಸದೇವರನ್ನು ನಮಸ್ಕರಿಸಿ ಬ್ರಹ್ಮಸೂತ್ರಗಳಿಗೆ ಅರ್ಥವನ್ನು ಹೇಳುತ್ತೇನೆ.

ಪ್ರತಿಪದಾರ್ಥ - ಸರ್ವೈಃ = ಸಕಲವಿಧವಾದ, ಗುಣೈಃ = ಕಲ್ಯಾಣಗುಣಗಳಿಂದ, ಉದೀರ್ಣಂ = ಪೂರ್ಣನಾದ (ಉತ್ಕೃಷ್ಟನಾದ), ದೋಷವರ್ಜಿತಮ್ = ಸಕಲದೋಷಗಳಿಂದ ವಿದೂರನಾದ, ಜ್ಞೇಯಂ = ಸಜ್ಜನರ ಪರೋಕ್ಷಜ್ಞಾನ ಹಾಗೂ ಅಪರೋಕ್ಷಜ್ಞಾನಗಳಿಗೆ ವಿಷಯನಾದ, ಗಮ್ಯಂ = ಜ್ಞಾನಿಗಳಿಂದ ಹೊಂದಲು ಯೋಗ್ಯನಾದ, ನಾರಾಯಣಂ = ಲಕ್ಷ್ಮೀಪತಿಯಾದ ನಾರಾಯಣನನ್ನು, ನತ್ವಾ = ನಮಸ್ಕಾರಮಾಡಿ, ಅಪಿ = ಮತ್ತು (ಅಪಿ ಪದವು ಗುರುದೇವತೆಗಳ ಭೇದದಲ್ಲಿ ಅರುಚಿಯನ್ನು ತೋರಿಸುತ್ತಿದೆ), ಗುರೂಂಶ್ಚ = ಗುರುಗಳಾದ ವೇದವ್ಯಾಸದೇವರನ್ನೂ ಕೂಡ, ನತ್ವಾ = ನಮಸ್ಕಾರ ಮಾಡಿ, ಸೂತ್ರಾರ್ಥಃ = ಬ್ರಹ್ಮಸೂತ್ರಾರ್ಥವು (ಸಮಸ್ತವೇದೇತಿಹಾಸಪುರಾಣ ಮೊದಲಾದ ಸಕಲಶಬ್ದರಾಶಿಗಳಿಂದ ಪ್ರತಿಪಾದ್ಯನಾದ ನಾರಾಯಣನೆಂಬ ಬ್ರಹ್ಮಸೂತ್ರಾರ್ಥವು), (ಮಯಾ = ನನ್ನಿಂದ), ಉಚ್ಯತೇ = ಹೇಳಲ್ಪಡುತ್ತದೆ.

## ಮಂಗಳಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳ ವೈಶಿಷ್ಟ್ಯ

**तत्वप्रकाशिका – अत्र निरुपपद'सूत्र'शब्देन ब्रह्मसूत्रमुच्यते । तस्य मुख्यार्थाभिधायकत्वात् । तेषां च तादृशत्वात् । वक्ष्यमाणमेव सूत्रार्थं श्रोतृशेमुषी मनुकूलयिष्यन्नादौ प्रस्तावयितुं विशेषणचतुष्टयेनेष्टदेवतां विशिनष्टि । तथा हि । आदिसूत्रे भगवतः प्रसक्त्या पुरुषार्थो भवतीति सूचितेऽधिकारिणः शङ्कोन्मिषति 'पुरुषान्तरेऽनुपलभ्यमानं पुरुषार्थप्रदत्वं तस्य चेत् कीदृशोऽसौ?' इति । तां**

**निवारयदाद्याध्यायस्यार्थो – गुणैः सर्वैरुदीर्णम् इति ।।**

ಶ್ಲೋಕದಲ್ಲಿ 'ಸೂತ್ರಾರ್ಥಃ ಉಚ್ಯತೇ' ಎಂದು ಹೇಳಿದ್ದಾರೆ. ಇಲ್ಲಿ ಯಾವ ಸೂತ್ರವೆಂದು ಹೇಳದೆ ಕೇವಲ (ವಿಶೇಷಣವಿಲ್ಲದೆ) ಸೂತ್ರವೆಂದು ಹೇಳಿದ್ದರಿಂದ ಯಾವ ಸೂತ್ರವನ್ನು ತೆಗೆದುಕೊಳ್ಳಬೇಕು? ಎಂಬ ಪ್ರಶ್ನೆ ಬರುತ್ತದೆ. ಆದರೆ 'ಉಪಪದವಿಲ್ಲದ್ದು ಮುಖ್ಯಾರ್ಥವನ್ನೇ ಹೇಳುತ್ತದೆ' ಎಂಬ ನಿಯಮ ಪ್ರಸಿದ್ಧವಾಗಿದೆ. ಹಾಗಾಗಿ ವಿವಿಧಸೂತ್ರಗಳಲ್ಲಿ ಬ್ರಹ್ಮಸೂತ್ರವೇ ಮುಖ್ಯವಾದ್ದರಿಂದ ಪ್ರಕೃತ ನಿರುಪಪದಸೂತ್ರಶಬ್ದದಿಂದ ಬ್ರಹ್ಮಸೂತ್ರವನ್ನೇ ಇಟ್ಟುಕೊಳ್ಳಬೇಕು.

ಮುಂದೆ ಹೇಳುವ ಸೂತ್ರಾರ್ಥಗಳಲ್ಲಿ ಶ್ರೋತೃಗಳ ಬುದ್ಧಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಮೊದಲು ಪ್ರಸ್ತಾವನೆ ಮಾಡಲು ನಾಲ್ಕು ವಿಶೇಷಣಗಳ ಮೂಲಕ ಇಷ್ಟದೇವತೆಯನ್ನು ವರ್ಣನೆ ಮಾಡುತ್ತಿದ್ದಾರೆ. ಹೇಗೆಂದರೆ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮಸೂತ್ರದಲ್ಲಿ 'ಅತಃ' ಎಂಬ ಪದದಿಂದ 'ಭಗವಂತನ ಪ್ರಸಾದದಿಂದ ಪುರುಷಾರ್ಥವು ಪ್ರಾಪ್ತವಾಗುತ್ತದೆ' ಎಂದು ಸಂಕ್ಷೇಪವಾಗಿ ಹೇಳಲಾಗಿದೆ. ಇದನ್ನು ಕೇಳಿದ ಅಧಿಕಾರಿಗೆ ಸಹಜವಾಗಿ ಆಕಾಂಕ್ಷೆ ಬರುತ್ತದೆ. ಬೇರೆ ಯಾವ ಪುರುಷನಲ್ಲಿಯೂ ದೊರೆಯಲಾರದ ಮೋಕ್ಷದಾತೃತ್ವಗುಣವು ಬ್ರಹ್ಮನಲ್ಲಿ ಇದೆಯೆಂದರೆ ಅಂತಹ ಬ್ರಹ್ಮನು ಹೇಗಿದ್ದಾನೆ? ಎಂದು. ಈ ಶಂಕೆಗೆ ಪರಿಹಾರಕವಾಗಿ ಮೊದಲನೆಯ ಅಧ್ಯಾಯದ ಅರ್ಥವನ್ನು 'ಗುಣೈಃ ಸರ್ವೈರುದೀರ್ಣಂ' ಎಂಬುದರಿಂದ ಹೇಳಿದ್ದಾರೆ.

**तत्वप्रकाशिका – तत्र ह्यपर्यायानन्तशब्दानां महायोगवृत्त्या हरौ समन्वयसमर्थनद्वारा सर्वगुणोदीर्णतैव वर्ण्यते । स च युक्त्यादिभिरुक्तसमन्वये निरोधिते दोषवानपि स्यात्, इत्याशङ्कां परिहरतो द्वितीयाध्यायस्यार्थो – दोषवर्जितमिति ।। तत्र युक्त्यादीनामाभासत्ववर्णनेन निर्दोषत्वस्यैव भाषितत्वात्। एवंविधस्य च प्रसादः कया विधया भविष्यति? इत्याकाङ्क्षां पूरयतस्तृतीयस्यार्थो – ज्ञेयमिति ।। तत्र निरुक्त्यादिभिस्तत्प्रसत्त्यर्थं तस्य ज्ञेयतायाः कथितत्वात् । प्रसन्नश्च कीदृशं पुमर्थं प्रयच्छति? इत्याकाङ्क्षां पूरयतस्तुरीयस्यार्थो – गम्यमिति।। तत्र ज्ञानिनो भगवत्प्राप्तिलक्षणमोक्षस्योदितत्वात् ।।**

ಮೊದಲನೆಯ ಅಧ್ಯಾಯದಲ್ಲಿ ಪರ್ಯಾಯಶಬ್ದಗಳಲ್ಲದ ಅನಂತಶಬ್ದಗಳನ್ನು ಮಹಾಯೋಗವೃತ್ತಿಯಿಂದ ಹರಿಯಲ್ಲಿ ಸಮನ್ವಯಮಾಡುವ ಮೂಲಕ ಸಕಲ-ಗುಣಪರಿಪೂರ್ಣತ್ವವನ್ನು ವರ್ಣಿಸಿದ್ದಾರೆ. 'ಸಕಲಶ್ರುತಿಗಳಿಗೆ ಭಗವಂತನಲ್ಲಿ ಸಮನ್ವಯ ಹೇಳುವುದಾದರೆ ಶ್ರುತಿಗಳಿಗೆ ಯುಕ್ತಿವಿರೋಧ ಬರುವುದರಿಂದ ಭಗವಂತನು ದೋಷವುಳ್ಳವನೂ ಆಗಬೇಕಾದೀತು' ಎಂಬ ಶಂಕೆಯನ್ನು ಪರಿಹರಿಸಲು ಎರಡನೆಯ ಅಧ್ಯಾಯದ ಅರ್ಥವನ್ನು 'ದೋಷವರ್ಜಿತಮ್' ಎಂಬುದರಿಂದ ಹೇಳುತ್ತಿದ್ದಾರೆ. ಅಂತಹ ಯುಕ್ತಿಗಳಿಗೆ ಆಭಾಸತ್ವವನ್ನು ವರ್ಣಿಸುವ ಮೂಲಕ ನಿರ್ದೋಷತ್ವವನ್ನೇ ಈ ಅಧ್ಯಾಯದಲ್ಲಿ ಸಮರ್ಥಿಸಿದ್ದಾರೆ.

ಸಕಲಗುಣಪರಿಪೂರ್ಣನೂ ನಿರ್ದೋಷಿಯೂ ಆದ ಇಂತಹ ಭಗವಂತನ ಪ್ರಸಾದವು ಯಾವುದರಿಂದ ಪ್ರಾಪ್ತವಾಗುತ್ತದೆ? ಎಂಬ ಶಂಕೆಯನ್ನು ಪರಿಹರಿಸಲು ಮೂರನೆ ಅಧ್ಯಾಯದ ಅರ್ಥವನ್ನು 'ಜ್ಞೇಯಮ್' ಎಂಬುದರಿಂದ ಹೇಳಿದ್ದಾರೆ. ಈ ಅಧ್ಯಾಯದಲ್ಲಿ ಭಗವಂತನ ಪ್ರಸಾದಕ್ಕಾಗಿ ಭಕ್ತಿ, ವಿರಕ್ತಿಗಳಿಂದ ಅವನನ್ನು ತಿಳಿಯಬೇಕೆಂದು ಸಾಧನೆಯ ಮಾರ್ಗವನ್ನು ತಿಳಿಸಿದ್ದಾರೆ. ಪ್ರಸನ್ನನಾದ ಭಗವಂತನು ಎಂತಹ ಪುರುಷಾರ್ಥವನ್ನು ಕೊಡುತ್ತಾನೆ? ಎಂಬ ಆಕಾಂಕ್ಷೆಯನ್ನು ಪೂರಣೆಗೊಳಿಸಲು ನಾಲ್ಕನೇ ಅಧ್ಯಾಯದ ಅರ್ಥವನ್ನು 'ಗಮ್ಯಂ' ಎಂಬುದರಿಂದ ಹೇಳುತ್ತಿದ್ದಾರೆ. ಈ ಅಧ್ಯಾಯದಲ್ಲಿ ಜ್ಞಾನಿಗಳಿಂದ ಹೊಂದಲು ಯೋಗ್ಯವಾದ ಭಗವತ್‌ಪ್ರಾಪ್ತಿರೂಪವಾದ ಮೋಕ್ಷವನ್ನು ವರ್ಣಿಸಿದ್ದಾರೆ. ಹೀಗೆ ಮಂಗಳಶ್ಲೋಕದಲ್ಲಿ ನಾಲ್ಕುವಿಶೇಷಣಗಳಿಂದ ನಾಲ್ಕು ಅಧ್ಯಾಯದ ಅರ್ಥವನ್ನು ತಿಳಿಸಿದರು.

## ನಿರುಪಪದ ಸೂತ್ರ ಶಬ್ದವು ಮುಖ್ಯಾರ್ಥವಾಚಕ

**ಭಾವದೀಪಃ – 'सूत्रम्' इति समुदाया(शयम्)र्थम् । अत एव 'तेषाम्' इत्यग्रे बहुवचनम् । तस्य निरुपपदस्य । व्यक्तमेतदग्रे 'मुख्यस्य निर्विशेषणत्वात्' इति भावः ।**

'ಸೂತ್ರಮ್' ಎಂಬಲ್ಲಿರುವ ಏಕವಚನವು ಸಮುದಾಯಾರ್ಥದಲ್ಲಿದೆ. ಆದ್ದರಿಂದಲೇ ಮುಂದೆ 'ತೇಷಾಂ' ಎಂದು ಬಹುವಚನವನ್ನು ಪ್ರಯೋಗಿಸಿದ್ದಾರೆ. 'ತಸ್ಯ' ಎಂದರೆ

ನಿರುಪಪದವಾದ ಎಂದರ್ಥ. 'ಮುಖ್ಯಸ್ಯ ನಿರ್ವಿಶೇಷಣತ್ವಾತ್' ಎಂಬಲ್ಲಿ ನಿರುಪಪದಕ್ಕೆ ಮುಖ್ಯತ್ವವನ್ನು ಸ್ಪಷ್ಟಪಡಿಸುತ್ತಾರೆ.

## ಗುಣೈ ಸರ್ವೈರುದೀರ್ಣಂ

**ಭಾವದೀಪಃ – ಅತ್ರ ಗುಣದೋಷಾದಿಸ್ವರೂಪೋಕ್ತಿಃ ಶುದ್ಧೇತ್ಯಾದ್ಯಪದ್ಯ ಏವ ವ್ಯಕ್ತಾ ಇತಿ ವಿಶೇಷಣಾನಾಂ ಕೃತ್ಯಮೇವ ತ್ರೇಧಾ ವ್ಯನಕ್ತಿ – ವಕ್ಷ್ಯಮಾಣಮಿತ್ಯಾದಿನಾ ।। ಪ್ರಸ್ತಾವಯಿತುಂ = ಸಙ್ಕ್ಷಿಪ್ಯಾದೌ ವಕ್ತುಮ್ । ತಸ್ಯ ಚ ಪ್ರಪಞ್ಚಜಿಜ್ಞಾಸಾಜನನಂ ಫಲಮಿತಿ ಭಾವಃ । ಪ್ರಸತ್ತ್ಯಾ = ಪ್ರಸಾದೇನ । ಸೂಚಿತ ಇತಿ ।। ಅತಃಶಬ್ದೇನ ಸಙ್ಕ್ಷಿಪ್ತೋಕ್ತ ಇತ್ಯರ್ಥಃ ।**

ಮಂಗಳಶ್ಲೋಕದಲ್ಲಿ ನಿರೂಪಿಸಿದ ಗುಣದೋಷಗಳ ಸ್ವರೂಪವು 'ಶುದ್ಧಾನಂದೋರು' ಎಂಬ ಪ್ರಥಮಮಂಗಳಶ್ಲೋಕದಿಂದಲೇ ಸ್ಪಷ್ಟಪಡಿಸಿದ್ದಾಗಿದೆ. ಆ ವಿಶೇಷಣಗಳ ಕೃತ್ಯವನ್ನು ಮೂರು ಬಗೆಯಲ್ಲಿ "ವಕ್ಷ್ಯಮಾಣಂ" ಎಂಬ ಮಾತಿನಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಪ್ರಸ್ತಾವಯಿತುಂ' ಸಂಕ್ಷೇಪವಾಗಿ ಮೊದಲು ಹೇಳಲು. ವಿಸ್ತಾರವಾದ ಜಿಜ್ಞಾಸೆಗೆ ಇಂತಹ ಸಂಕ್ಷೇಪಕಥನವು ಕಾರಣವಾಗಿದೆ ಎಂದರ್ಥ. ಪ್ರಸತ್ತ್ಯಾ = ಪ್ರಸಾದದಿಂದ. ಸೂಚಿತಃ = ಅತಃಶಬ್ದದಿಂದ ಸಂಕ್ಷೇಪವಾಗಿ ಹೇಳಲ್ಪಟ್ಟಿದೆ.

## ದೋಷವರ್ಜಿತಮ್

**ಭಾವದೀಪಃ – ಮಹಾಯೋಗೇತಿ ।। 'ಶಬ್ದೈರತೋऽನನ್ತಗುಣೋ ಯಚ್ಛಬ್ದಾ ಯೋಗವೃತ್ತಯಃ' ಇತ್ಯಣುಭಾಷ್ಯೋಕ್ತಿರಿತಿ ಭಾವಃ । ದೋಷವಾನಪೀತಿ ।। 'ಸಮನ್ವಯನಿರೋಧೇ ಸರ್ವಕರ್ತೃತ್ವ-ಸಾರ್ವಜ್ಞ ಸರ್ವೈಶ್ವರ್ಯಾದೇರಸಿದ್ಧ್ಯಾ ತತ್ತನ್ನಯಪೂರ್ವಪಕ್ಷೋಕ್ತಯುಕ್ತ್ಯಾದಿಭಿರ್ಜೀವವತ್ ಜನಿಮೃತ್ಯಾದಿದೋಷವಾನಪಿ ಸ್ಯಾತ್' ಇತ್ಯರ್ಥಃ । 'ನ ಕೇವಲಂ ಸರ್ವಕರ್ತೃತ್ವಾದಿ-ಗುಣಾಭಾವವಾನ್' ಇತಿ 'ಅಪೇಃ' ಅರ್ಥಃ । ತಸ್ಯ ಚ ಶ್ರುತ್ಯೈವ ನಿರಸ್ತತ್ವಾತ್ ತತ್ಸಮನ್ವಯಸ್ಯ ಯುಕ್ತಿಸಮಯಾದಿಭಿರ್ನಿರುದ್ಧತ್ವಾದಿತಿ ಭಾವಃ ।**

'ಇತ್ಯಾದ್ಯನ್ಯತ್ರ ನಿಯತೈರಪಿ ಮುಖ್ಯತಯೋದಿತಃ।
ಶಬ್ದೈರತೋऽನಂತಗುಣೋ ಯಚ್ಛಬ್ದಾ ಯೋಗವೃತ್ತಯಃ॥'

ಎಂದು ಅಣುಭಾಷ್ಯದಲ್ಲಿ ಎಲ್ಲಾ ಶಬ್ದಗಳ ಮಹಾಯೋಗವೃತ್ತಿಯನ್ನು ನಾರಾಯಣನಲ್ಲಿ ಹೇಳಿದ್ದಾರೆ.

'ದೋಷವಾನಪಿ' ಎಂಬ ಶಬ್ದಕ್ಕೆ ಹೀಗೆ ಅರ್ಥ -- 'ಸಮನ್ವಯವನ್ನು ವಿರೋಧಿಸಿದಾಗ ಸರ್ವಕರ್ತೃತ್ವ, ಸರ್ವಜ್ಞತ್ವ, ಸರ್ವೈಶ್ವರ್ಯ' ಮೊದಲಾದ ಗುಣಗಳು ಭಗವಂತನಲ್ಲಿ ಸಿದ್ಧವಾಗುವುದಿಲ್ಲ. ಆಗ ಆಯಾ ಅಧಿಕರಣಗಳ ಪೂರ್ವಪಕ್ಷದ ಯುಕ್ತಿಗಳಿಂದ ಜೀವನಲ್ಲಿರುವ ಜನನಮರಣಾದಿದೋಷಗಳು ಭಗವಂತನಲ್ಲಿಯೂ ಬರಬೇಕಾದೀತು' ಎಂದು. 'ಕೇವಲ ಸರ್ವಕರ್ತೃತ್ವಾದಿಗುಣಗಳಿಲ್ಲ ಎಂದಷ್ಟೇ ಅಲ್ಲ' ಎಂದು ಅಪಿಪದದ ಅರ್ಥ. ಅಂತಹ ದೋಷಗಳು ಭಗವಂತನಲ್ಲಿ ಬರಬೇಕಾದೀತು ಎಂಬುದನ್ನೂ ವಿವಕ್ಷಿಸಬೇಕು. ಶ್ರೀಹರಿಯಲ್ಲಿ ಮಾಡುವ ಸಮನ್ವಯಕ್ಕೆ ಯುಕ್ತಿ ಹಾಗೂ ಸಮಯಗಳ ವಿರೋಧ ಬರುತ್ತದೆ.

## 'ಜ್ಞೇಯಂ' 'ಗಮ್ಯಂ'

**ಭಾವದೀಪಃ – ನಿರ್ದೋಷತ್ವಸ್ಯೈವೇತಿ ।। 'ಸರ್ವದೋಶೋಜ್ಝಿತಸ್ತಸ್ಮಾತ್' ಇತ್ಯಾದ್ಯುಕ್ತೇರಿತಿ ಭಾವಃ । ವಿರಕ್ತ್ಯಾದಿಭಿರಿತಿ ।। ತಸ್ಮಾತ್ 'ವಿರಕ್ತಃ ಸನ್ ಜ್ಞಾನಮೇವ ಸಮಾಶ್ರಯೇತ್' ಇತ್ಯುಕ್ತೇರಿತಿ ಭಾವಃ । 'ಪ್ರವಿಶ್ಯ ಭುಂಜತೇ ಭೋಗಾನ್' ಇತ್ಯಾದ್ಯುಕ್ತೇರಾಹ – ಭಗವತ್ಪ್ರಾಪ್ತಿರಿತಿ।।**

''ನಿರ್ದೋಷತ್ವಸ್ಯೈವ ಇತಿ'' - 'ಸರ್ವದೋಷೋಜ್ಝಿತಸ್ತಸ್ಮಾತ್' ಎಂದು ಅಣುಭಾಷ್ಯದಲ್ಲಿ ಹೇಳಿದಂತೆ ನಿರ್ದೋಷತ್ವವು ಸಿದ್ಧವಾಗಿದೆ ಎಂದು ಅಭಿಪ್ರಾಯ. ''ವಿರಕ್ತ್ಯಾದಿಭಿರಿತಿ'' - 'ಯಾತಿ ತಸ್ಮಾತ್ ವಿರಕ್ತಃಸನ್ ಜ್ಞಾನಮೇವ ಸಮಾಶ್ರಯೇತ್' ಎಂದು ಅಣುಭಾಷ್ಯದಲ್ಲಿ ಹೇಳಿದಂತೆ ಭಕ್ತಿ, ವಿರಕ್ತಿಗಳಿಂದ ಭಗವಂತನನ್ನು ತಿಳಿಯಬೇಕೆಂದು ಅಭಿಪ್ರಾಯ. 'ಪ್ರವಿಶ್ಯ ಭುಂಜತೇ ಭೋಗಾನ್' ಎಂಬಂತೆ ಭಗವಂತನನ್ನು ಹೊಂದಬೇಕೆಂದು ''ಭಗವತ್ಪ್ರಾಪ್ತಿಃ'' ಎಂಬ ಟೀಕೆಯಲ್ಲಿ ಹೇಳಿದ್ದಾರೆ.

## ಭಾಷ್ಯದ ಮಂಗಳಶ್ಲೋಕದಲ್ಲಿರುವ ವಿಶೇಷಣಗಳ ಸಾರ್ಥಕ್ಯಚಿಂತನೆ

ವಿವರಣೆ - ಭಾಷ್ಯದ ಮಂಗಳಪದ್ಯದಲ್ಲಿ 'ಸೂತ್ರಾರ್ಥ ಉಚ್ಯತೇ' 'ಸೂತ್ರಗಳ ಅರ್ಥಗಳನ್ನು ಹೇಳುತ್ತೇನೆ' ಎಂದಷ್ಟೇ ಹೇಳಿದರೆ. ಯಾವ ಸೂತ್ರಗಳೆಂದು ಹೇಳದ ಕಾರಣ ಪಾಣಿನ್ಯಾದಿಸೂತ್ರಗಳೆಂಬ ಭ್ರಾಂತಿ ಬರುತ್ತದೆ. ಅದರ ಪರಿಹಾರಕ್ಕೋಸ್ಕರ ಟೀಕೆಯಲ್ಲಿ 'ಅತ್ರ ನಿರುಪಪದ' ಇತ್ಯಾದಿ ಮಾತು ಹೊರಟಿದೆ. ವಿಶೇಷಣವಿಲ್ಲದ ಸೂತ್ರಶಬ್ದವು ಪ್ರಧಾನವಾದ ಬ್ರಹ್ಮಸೂತ್ರವನ್ನೇ ಹೇಳುತ್ತದೆ. ಬೇರೆ ಅಪ್ರಧಾನ-ಸೂತ್ರಗಳನ್ನು ಹೇಳುವುದಿಲ್ಲ. ಇಲ್ಲಿ 'ಬ್ರಹ್ಮಸೂತ್ರಂ' ಎಂದು ಏಕವಚನಪ್ರಯೋಗ ತಪ್ಪಲ್ಲ. ಬ್ರಹ್ಮನೆಂಬ ಒಂದೇ ಅರ್ಥವನ್ನು ಸಕಲಸೂತ್ರಗಳು ಪ್ರತಿಪಾದಿಸುವುದರಿಂದ ಸಮುದಾಯಾರ್ಥದಲ್ಲಿ ಏಕವಚನವು ಯುಕ್ತವಾಗುತ್ತದೆ.

ಟೀಕೆಯಲ್ಲಿ 'ಉಚ್ಯತೇ' ಎಂದಿದ್ದಾರೆ. 'ಬ್ರಹ್ಮಸೂತ್ರಗಳೇ ಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆ' ಎಂದರ್ಥ. ಏಕೆಂದರೆ ಮುಂದೆ 'ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋऽನ್ಯೇಷಾಂ ವಿಶೇಷಣಾತ್' ಎಂದು ವಿವರಿಸುತ್ತಾರೆ.

'ತೇಷಾಂ ಚ ತಾದೃಶತ್ವಾತ್' ಎಂಬ ಟೀಕೆಗೆ ಬ್ರಹ್ಮಸೂತ್ರಗಳೇ ಪ್ರಧಾನಗಳಾಗಿವೆ ಎಂದರ್ಥ. ಇಲ್ಲಿ 'ತೇಷಾಂ' ಎಂದು ಬಹುವಚನಪ್ರಯೋಗ ಮಾಡಿದ್ದಾರಲ್ಲ? ಎಂದರೆ ಒಂದೊಂದು ಸೂತ್ರಗಳೂ ಪ್ರತ್ಯೇಕ ಬ್ರಹ್ಮವಿದ್ಯೆ ಎನಿಸುವುದರಿಂದ ಬಹುವಚನ-ಪ್ರಯೋಗ ಮಾಡಿದ್ದಾರೆ. ಹಿಂದೆ ಸಕಲಸೂತ್ರಗಳ ಮಹಾತಾತ್ಪರ್ಯ ಒಂದೇ ಎಂಬ ವಿವಕ್ಷೆಯಿಂದ ಏಕವಚನ ಹೇಳಿದ್ದರು. ಈಗ ಅವಾಂತರವಾಕ್ಯಾರ್ಥದಲ್ಲಿ ಭೇದವಿರುವುದರಿಂದ ಬಹುವಚನ ಹೇಳಿದ್ದಾರೆ. ಎರಡೂ ತಪ್ಪಲ್ಲ.

ಮಂಗಳಶ್ಲೋಕದಲ್ಲಿ 'ನಾರಾಯಣಂ ನತ್ವಾ' ಎಂದಷ್ಟೇ ಸಾಕಿತ್ತು. ಇಷ್ಟರಿಂದಲೇ ನಮಸ್ಕಾರ ಮಾಡಿದಂತಾಗುತ್ತದೆ. ಪುನಃ ನಾಲ್ಕು ವಿಶೇಷಣಗಳು ಏಕೆ? ಎಂಬ ಪ್ರಶ್ನೆಗೆ ಟೀಕೆಯಲ್ಲಿ 'ವಕ್ಷ್ಯಮಾಣ' ಇತ್ಯಾದಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಮುಂದಿನ ಗ್ರಂಥದಲ್ಲಿರುವುದನ್ನೇ ನಾಲ್ಕು ವಿಶೇಷಣಗಳಿಂದ ಸಂಗ್ರಹಿಸುತ್ತಿದ್ದಾರೆ. ಸಂಗ್ರಹವಾಗಿ ಹೇಳಿದಾಗ ಹೆಚ್ಚಿನ ವಿಚಾರದಲ್ಲಿ ಜಿಜ್ಞಾಸೆ ಬರುತ್ತದೆ. ಇದೇ ಇದರ ಪ್ರಯೋಜನ.

ನಾಲ್ಕು ಅಧ್ಯಾಯಗಳ ಅರ್ಥವೇನು? ಆ ನಾಲ್ಕು ಅಧ್ಯಾಯಗಳು ಆ ಅರ್ಥಗಳನ್ನೇ ಏಕೆ ಪ್ರತಿಪಾದಿಸುತ್ತವೆ? ಮಂಗಳಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳು ನಾಲ್ಕು ಅಧ್ಯಾಯಗಳ ಅರ್ಥವನ್ನೇ ಏಕೆ ಹೇಳುತ್ತಿವೆ? ಹೀಗೆ ಆಕಾಂಕ್ಷೆಯನ್ನು ಅನುಸರಿಸಿ ಟೀಕೆಯಲ್ಲಿ 'ತಥಾಹಿ' ಎಂಬಲ್ಲಿಂದ 'ಉದಿತತ್ವಾತ್' ಎಂಬಲ್ಲಿಯ ತನಕ ವಿವರಿಸುತ್ತಿದ್ದಾರೆ.

ಟೀಕೆಯಲ್ಲಿ 'ಭವತೀತಿ ಸೂಚಿತೇ' ಎಂದಿದೆ. ಇದಕ್ಕೆ ಸಂಕ್ಷೇಪವಾಗಿ ಹೇಳುತ್ತಿರಲು ಎಂದು ಅರ್ಥೈಸಬೇಕು. ಏಕೆಂದರೆ 'ಪರಸ್ಯ ಬ್ರಹ್ಮಣೋ ವಿಷ್ಣೋಃ ಪ್ರಸಾದಾದಿತಿ ವಾ ಭವೇತ್' ಎಂಬ ಪ್ರಮಾಣದಂತೆ ಭಗವಂತನ ಪ್ರಸಾದದಿಂದ ಮೋಕ್ಷವಾಗುತ್ತದೆಂಬುದು ಅಥಶಬ್ದದ ಅರ್ಥವೆನ್ನಲಾಗಿದೆ.

ಪ್ರಥಮಾಧ್ಯಾಯದಲ್ಲಿ ಸರ್ವಶಬ್ದಗಳ ಸಮನ್ವಯವನ್ನಷ್ಟೇ ಮಾಡುತ್ತಾರೆ. ನೀವು ಗುಣಪೂರ್ಣತ್ವವು ಪ್ರಥಮಾಧ್ಯಾಯದ ಅರ್ಥವೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ 'ತತ್ರ ಹಿ' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ. ಆನಂದಮಯಾದಿಸಕಲಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯಮಾಡಿದಾಗ ಆ ಶಬ್ದಗಳ ಪ್ರವೃತ್ತಿನಿಮಿತ್ತವಾದ ಪ್ರಚುರ ಆನಂದತ್ವಾದಿಸಕಲಗುಣಪರಿಪೂರ್ಣತ್ವವು ಸಿದ್ಧವಾಗುತ್ತದೆಂದು ಅಭಿಪ್ರಾಯ.

ಅನೇಕಶಬ್ದಗಳ ಸಮನ್ವಯ ಎಂದರೆ ಪರ್ಯಾಯಶಬ್ದಗಳ ಸಮನ್ವಯವೆಂದೂ ಅರ್ಥವಾಗುತ್ತದೆ. ಇಂತಹ ಪರ್ಯಾಯಶಬ್ದಗಳ ಸಮನ್ವಯದಿಂದ ಒಂದೊಂದು ಗುಣಗಳಷ್ಟೇ ಸಿದ್ಧವಾಗುತ್ತವೆ. ಸಕಲಗುಣಗಳ ಸಮನ್ವಯವು ಸಿದ್ಧವಾಗುವುದಿಲ್ಲವೆಂಬ ಅಭಿಪ್ರಾಯದಿಂದ 'ಅಪರ್ಯಾಯಾನಂತಶಬ್ದಾನಾಂ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಪರ್ಯಾಯಶಬ್ದಗಳಲ್ಲದ ಬೇರೆಬೇರೆ ಶಬ್ದಗಳ ಸಮನ್ವಯವನ್ನೇ ಮಾಡಲಾಗಿದೆ. ಹಾಗಾದರೂ ಪರ್ಯಾಯಶಬ್ದಗಳಲ್ಲದ ಕೆಲವು ಶಬ್ದಗಳ ಸಮನ್ವಯದಿಂದ ಅನಂತಗುಣಪೂರ್ಣತ್ವವು ಸಿದ್ಧವಾಗುವುದಿಲ್ಲ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ 'ಅನಂತ' ಎಂದು ಹೇಳಿದರು. ಅನಂತಶಬ್ದಗಳ ಸಮನ್ವಯವನ್ನೇ ಪ್ರಥಮಾಧ್ಯಾಯ ಮಾಡುತ್ತಿರುವುದರಿಂದ ಭಗವಂತನಲ್ಲಿ ಅನಂತಗುಣಪರಿಪೂರ್ಣತ್ವವು ಸಿದ್ಧವಾಗುತ್ತದೆ. ಇಷ್ಟಾದರೂ ಅಪರ್ಯಾಯ-ಅನಂತಶಬ್ದಗಳನ್ನು ರೂಢಿಯಿಂದ ಸಮನ್ವಯ ಮಾಡಿದರೆ ವಿಷ್ಣುವಿನಲ್ಲಿ ಯಾವ ಗುಣಗಳೂ ಸಿದ್ಧವಾಗುವುದಿಲ್ಲವೆಂಬ ಸಮಸ್ಯೆ

ಬರುತ್ತದೆ. ಅದಕ್ಕೋಸ್ಕರ 'ಮಹಾಯೋಗವೃತ್ತ್ಯಾ' ಎಂದು ಹೇಳಿದರು. ಬೇರೆಲ್ಲೂ ಕಾಣದ ಅವಯವಾರ್ಥವನ್ನು ಅಪೇಕ್ಷಿಸಿ ಹೊರಟ ವೃತ್ತಿಯು ವಿಷ್ಣುವಿನಲ್ಲಿ ಮಾತ್ರವಿದೆ. ಆದ್ದರಿಂದ ಅನಂತಗುಣಪರಿಪೂರ್ಣತ್ವವು ನಿಶ್ಚಯವಾಗಿ ಸಿದ್ಧವಾಗುತ್ತದೆ. ಆದ್ದರಿಂದ 'ಅಪರ್ಯಾಯಾನಂತಶಬ್ದಾನಾಂ ಮಹಾಯೋಗವೃತ್ತ್ಯಾ ಹರೌ ಸಮನ್ವಯಸಮರ್ಥನ-ದ್ವಾರಾ ಸರ್ವಗುಣೋದೀರ್ಣತೈವ ವರ್ಣ್ಯತೇ' ಎಂಬ ಟೀಕೆಯ ಮಾತು ಬಹಳ ಅರ್ಥಪೂರ್ಣವಾಗಿದೆ. ಇಲ್ಲಿ ಸಮನ್ವಯಶಬ್ದಕ್ಕೆ ''ಉಪಕ್ರಮಾದಿಲಿಂಗಗಳೇ ಪ್ರಮಾಣವಾಗಿ ಉಳ್ಳ ಶಕ್ತಿತಾತ್ಪರ್ಯ ಎಂಬ ಸಂಬಂಧ'' ಎಂದರ್ಥ.

ಮುಂದಿನ ವಾಕ್ಯದಲ್ಲಿರುವ 'ಸ ಚ' ಎಂಬುದಕ್ಕೆ 'ದೋಷವಾನಪಿ' ಎಂಬಲ್ಲಿ ಅನ್ವಯ. 'ಯುಕ್ತ್ಯಾದಿಭಿಃ' ಎಂಬಲ್ಲಿ ಆದಿ ಶಬ್ದದಿಂದ ಸಮಯವಿರೋಧ, ಶ್ರುತಿವಿರೋಧ, ನ್ಯಾಯೋಪೇತಶ್ರುತಿವಿರೋಧವನ್ನು ಇಟ್ಟುಕೊಳ್ಳಬೇಕು. ಇವುಗಳ ವಿರೋಧ ಬಂದಾಗ ವಿಷ್ಣುವಿನಲ್ಲಿ ದೋಷಶಂಕೆ ಬರುತ್ತದೆ. ಜಿಜ್ಞಾಸ್ಯತ್ವವು ಬ್ರಹ್ಮನಲ್ಲಷ್ಟೇ ಕೂಡುತ್ತದೆ. ಜೀವನಲ್ಲಿ ಕೂಡುವುದಿಲ್ಲವೆಂದು ಸಮರ್ಥಿಸಲು ಪ್ರಥಮಸೂತ್ರದಲ್ಲಿ ಗುಣಪೂರ್ಣತ್ವವನ್ನು ಬ್ರಹ್ಮನಲ್ಲಿ ಹೇಳಿದರು. ಆ ಗುಣಪೂರ್ಣತ್ವದ ಸಮರ್ಥನೆ-ಗಾಗಿಯೇ ಪ್ರಥಮಾಧ್ಯಾಯದಲ್ಲಿ ಸಕಲಶ್ರುತಿಸಮನ್ವಯವನ್ನು ನಿರೂಪಿಸಲಾಗಿದೆ. ಇದರ ಮೇಲೆ ಸಂಶಯ ಬರುತ್ತದೆ. ಯುಕ್ತ್ಯಾದಿವಿರೋಧದಿಂದ ಶ್ರುತಿಗಳು ಅಪ್ರಮಾಣಗಳಾಗಿವೆ. ಆದ್ದರಿಂದ ಸಮನ್ವಯವು ಸಿದ್ಧವಾಗುವುದಿಲ್ಲ. ಗುಣಪೂರ್ಣತ್ವವೂ ಸಿದ್ಧವಾಗುವುದಿಲ್ಲ. ಯಾವಾಗ ಗುಣಪರಿಪೂರ್ಣತ್ವವು ಸಿದ್ಧವಾಗುವುದಿಲ್ಲವೋ ಆವಾಗ ವಿರುದ್ಧಧರ್ಮಾಧಿಕರಣತ್ವವನ್ನು ಹೇಳಲಾಗದ ಕಾರಣ ಜೀವಾಭೇದವು ಸಿದ್ಧವಾಗುತ್ತದೆ. ಜೀವನಿಂದ ಅಭಿನ್ನನಾದ ಬ್ರಹ್ಮನಲ್ಲಿ ಜೀವನಂತೆ ದೋಷವೂ ಬರುತ್ತದೆಂದರ್ಥ.

ಅಥವಾ ಯುಕ್ತ್ಯಾದಿವಿರೋಧವಿರುವುದರಿಂದ ಶ್ರುತಿಗಳು ಅಪ್ರಮಾಣಗಳಾಗುತ್ತವೆ. ಆದ್ದರಿಂದ ಸರ್ವಕರ್ತೃತ್ವಸಾರ್ವಜ್ಞ್ಯಸರ್ವೈಶ್ವರ್ಯಾದಿಗಳು ಅಸಿದ್ಧವಾಗುತ್ತವೆ. ಆಗ ಎಲ್ಲಾ ಅಧಿಕರಣಗಳ ಪೂರ್ವಪಕ್ಷವೇ ಸರಿಯೆಂದಂತಾಗಿ ಜೀವನಂತೆ ಬ್ರಹ್ಮನೂ ಜನನ ಮರಣಾದಿದೋಷವುಳ್ಳವನಾಗುತ್ತಾನೆ. 'ಕೇವಲ ಗುಣಗಳಿಲ್ಲವೆಂದಷ್ಟೇ ಅಲ್ಲ ದೋಷವಿರುವುದರಿಂದಲೂ' ಎಂದು ಅಪಿ ಶಬ್ದ ಹೇಳುತ್ತದೆ.

ಈ ಶಂಕೆಯನ್ನು ಎರಡನೆಯ ಅಧ್ಯಾಯವು ಪರಿಹರಿಸುತ್ತದೆ. ಯುಕ್ತಿಗಳೆಲ್ಲವೂ ಅಯಥಾರ್ಥಗಳಾದ್ದರಿಂದ ಅವುಗಳ ವಿರೋಧ ಬರುವುದಿಲ್ಲ. ಆದ್ದರಿಂದ ಶ್ರುತಿಗಳೆಲ್ಲವೂ ಪ್ರಮಾಣಗಳಾಗುತ್ತವೆ. ಅಂತಹ ಶ್ರುತಿಗಳ ಸಮನ್ವಯದಿಂದ ಗುಣಪೂರ್ಣತ್ವವು ಸಿದ್ಧವಾಗುತ್ತದೆ. ಹೀಗಿರುವಾಗ ಜೀವನಿಂದ ಅಭೇದವನ್ನೂ ಹೇಳಲಾಗದು. ಜೀವನಲ್ಲಿರುವ ದೋಷಗಳೂ ಬ್ರಹ್ಮನಲ್ಲಿ ಬರುವುದಿಲ್ಲ.

ಅಥವಾ ಶ್ರುತಿಗಳಿಗೆ ಅಪ್ರಾಮಾಣ್ಯ ಹೇಳಲು ಶ್ರುತಿಯುಕ್ತಿಗಳಿಗೆ ಸಾಮರ್ಥ್ಯ-ವಿಲ್ಲವೆಂದು ಎರಡನೆಯ ಅಧ್ಯಾಯದಲ್ಲಿ ಸಮರ್ಥಿಸುತ್ತಾರೆ. ಆದ್ದರಿಂದಲೂ ದೋಷಶಂಕೆಯು ಬರುವುದಿಲ್ಲ. ಈ ವಿಚಾರವನ್ನು 'ತತ್ರ' ಇತ್ಯಾದಿ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ.

ಇಂತಹ ಭಗವಂತನ ಪ್ರಸಾದವು ಯಾವುದರಿಂದ ದೊರೆಯುತ್ತದೆಂಬ ಪ್ರಶ್ನೆಗೆ ಉತ್ತರರೂಪವಾಗಿ ಮೂರನೆಯ ಅಧ್ಯಾಯ ಹೊರಟಿದೆ. ವೈರಾಗ್ಯ, ಭಕ್ತಿ, ಉಪಾಸನಾದಿಗಳಿಂದ ಭಗವಂತನ ಜ್ಞಾನ ಬರುತ್ತದೆಂದು ಹೇಳುವುದರಿಂದ ಜ್ಞೇಯತ್ವವನ್ನೇ ಹೇಳಿದಂತಾಗುತ್ತದೆ. ಆದ್ದರಿಂದ ಜ್ಞೇಯತ್ವವನ್ನು ತೃತೀಯಾಧ್ಯಾಯದಲ್ಲಿ ಹೇಳಿಲ್ಲವೆಂಬ ಶಂಕೆಗೆ ಆಸ್ಪದವಿಲ್ಲ.

ಅಂತಹ ಭಗವಂತನು ಯಾವ ಫಲವನ್ನು ನೀಡುತ್ತಾನೆ? ಎಂಬ ಪ್ರಶ್ನೆಗೆ ನಾಲ್ಕನೆಯ ಅಧ್ಯಾಯ ಹೊರಟಿದೆ. ನಾಲ್ಕನೆಯ ಅಧ್ಯಾಯದಲ್ಲಿ ಗಮ್ಯತ್ವವನ್ನು ಹೇಳೇ ಇಲ್ಲ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಕರ್ಮಕ್ಷಯ, ಉತ್‌ಕ್ರಾಂತಿ, ಮಾರ್ಗಗಳನ್ನು ಭಗವತ್ ಪ್ರಾಪ್ತಿಗೋಸ್ಕರವೇ ಹೇಳಿದ್ದು. ಮತ್ತು ಚತುರ್ಥಪಾದದಲ್ಲಿ ಹೇಳಿದ ಭೋಗವು ಭಗವಂತನನ್ನು ಹೊಂದದೆ ಲಭಿಸುವುದಿಲ್ಲ. ಇದರಿಂದ ಗಮ್ಯತ್ವವೇ ನಾಲ್ಕನೆಯ ಅಧ್ಯಾಯದ ತಾತ್ಪರ್ಯವೆಂದು ನಿರ್ಣಯವಾಗುತ್ತದೆ.(೧)

(೧) **ಭಾವರತ್ನಕೋಶಃ** -

''ದೋಷಾರಚ್ಛಿದ್ರಶಬ್ದಾನಾಂ ಪರ್ಯಾಯತ್ವಂ ಯತಸ್ತತಃ ।
ಗುಣಾಃ ನಾರಾಃ ಇತಿ ಜ್ಞೇಯಾಃ .....।।''

ಇತ್ಯನುವ್ಯಾಖ್ಯಾನಮನುರುನ್ಧಾನ ಆಹ - **ದೋಷಾರೇತಿ** ।। ಅಭಿನ್ನ ಏಕೋऽರ್ಥೋ ಯಯೋಃ ತತ್ತ್ವಾತ್ ಅಭಿನ್ನಾರ್ಥಕತ್ವಾತ್ ಪರ್ಯಾಯತ್ವಾದಿತ್ಯರ್ಥಃ । ತದನ್ಯತದ್ವಿರುದ್ಧತದಭಾವೇಷು ನಞೌ ವ್ಯುತ್ಪತ್ತೇರಾಹ - **ನಞಶ್ಚೇತಿ** ।। ತದಾಶ್ರಯ ಇತ್ಯನೇನ ತೇಷಾಂ ಗುಣಾನಮಯನ ಇತಿ ವಿಗ್ರಹಮಭಿಪ್ರೈತಿ । ಅತ್ರ ಗುಣವಿಶೇಷಾನುಕ್ತೇಃ

## ನಾರಾಯಣಪದದ ವ್ಯಾಖ್ಯಾನ

**तत्वप्रकाशिका – अथवा 'नैतत् नारायणपदं देवदत्तादिपदवत् साङ्केतिकं भवति; किन्तु विशिष्टगुणानप्याचष्टे' इत्याशयवान् पदचतुष्टयेन तन्निर्वक्ति । तथा हि । दोषारशब्दयोरभिन्नार्थत्वात्, नञश्च विरुद्धार्थवाचित्वाद् दोषविरुद्धा गुणा नारास्तदाश्रयो नासयणः ।**

ಅಥವಾ ಮಂಗಳಶ್ಲೋಕದಲ್ಲಿರುವ 'ನಾರಾಯಣ' ಪದವೇ ನಾಲ್ಕು ಅಧ್ಯಾಯಗಳ ಅರ್ಥವನ್ನು ಹೇಳುತ್ತಿದೆ. ದೇವದತ್ತಾದಿಪದಗಳಂತೆ ನಾರಾಯಣಪದವು ಕೇವಲ ಸಾಂಕೇತಿಕವಲ್ಲ, (ರೂಢಮಾತ್ರಪದವಲ್ಲ) ಹೊರತಾಗಿ ವಿಶಿಷ್ಟಗುಣಗಳನ್ನು

सर्वगुणोदीर्णत्वं नारायणशब्दार्थ इत्युक्तं भवति । दोषवर्जितमित्यपि नारायणशब्दनिर्वचन लभ्यमिति भावेनाह - **नञोऽभावार्थत्वादिति ।।** अरशब्दः पूर्ववद् दोषवचनः । तदभावो नारः तदयनो दोषाभावाश्रयो नारायणः । नञोऽन्योन्याभावार्थत्वं तत्वप्रदीपिकोक्तमभिप्रेत्य हेत्वन्तरमाह - **अराश्रयो न भवतीति वेति ।।** इति शब्दो हेत्वर्थः । अराश्रयो दोषायनो न भवतीति हेतोरित्यस्य दोष्यन्यत्वादित्यर्थे सति नारायण इति साध्ये दोषाभावाश्रयत्वाद् दोष्यन्यत्वादिति च हेतुद्वयमभिसंहितम् । अत्र द्वितीयो हेतुः अरणामयनं न भवतीति वा' इति सुधायां स्पष्टः । नरसम्बन्धित्वात् इत्येतत् चेतनविशेषसज्जनसम्बन्धित्वादिति तत्त्वप्रदीपिकारीत्या व्याख्येयम् । नरशब्दात् तस्येदमित्यणि नारमिति रूपमिति भावः । न रीयत इति नञुपपदात् 'रीङ् क्षये' इति धातोः करणे ह्प्रत्यये प्रज्ञादित्वात् स्वार्थिकेऽणि प्रत्यये च नारमिति रूपमिति भावः । अरमणं दुःखं येन तन्नारमिति वदन्, रमेर्भावे ह्प्रत्यये निष्पन्नः शब्दोऽरशब्दः अरमणार्थः । नञो विरुद्धार्थत्वात् रमणशब्दितसुखविरुद्धदुःखं अरं तद् येन ज्ञानेन तज्ज्ञानं नारमित्यभिप्रैति - **निर्दोषवेदोत्पन्नत्वादिति ।।** न विद्यते अरं दोषो यस्य वेदस्येति विग्रहे 'निर्दोषवेदवाचकात् नारशब्दात् तस्येदमित्यणि कृते नारशब्दो वेदजन्यज्ञानवाची' इति चन्द्रिका । यद्यप्यत्र नारशब्दात् 'वृद्धाच्छः' इति छप्रत्ययेन भाव्यम् । तथाप्यत्र नारशब्दस्य नामधेयत्वाभ्युपगमेन 'वा नामधेयस्य वृद्धसञ्ज्ञा वक्तव्या' इति वृद्धसञ्ज्ञायाः विकल्पितत्वात्, 'ओर्गुणः' इत्यत्र गुणग्रहणेन 'सञ्ज्ञापूर्वको विधिरनित्यः' इति ज्ञापनाद्वा नारमिति साधु इति समाहितवन्तः ।

केचित्तु न विद्यते अरः दोषो यस्य स नारो वेदः सोऽस्यास्ति जनकत्वेनेत्यत्र 'अर्श आद्यच्' इति मत्वर्थीये अच्प्रत्यये नारं ज्ञानमिति रूपं, तेन च नारशब्दात् 'वृद्धाच्छः' इति च्छप्रत्यये नारीयमिति स्यात्, न तु नारमितीति चोद्यानवकाश इत्याहुः ।

ಪ್ರತಿಪಾದಿಸುತ್ತಿದೆ. ಈ ಅಭಿಪ್ರಾಯದಿಂದ ಶ್ಲೋಕದಲ್ಲಿರುವ ನಾಲ್ಕು ಪದಗಳಿಂದ ನಾರಾಯಣಶಬ್ದದ ಅರ್ಥವನ್ನೇ ವ್ಯಾಖ್ಯಾನಿಸಿದ್ದಾರೆ. ಹೇಗೆಂದರೆ - 'ಅರ' ಎಂದರೆ ದೋಷ ಎಂದರ್ಥ. 'ನಞ್' ಎಂಬ ಅವ್ಯಯ 'ವಿರುದ್ಧ' ಎಂಬ ಅರ್ಥವುಳ್ಳದ್ದು. ಆದ್ದರಿಂದ 'ನಾರಾಃ' ದೋಷವಿರುದ್ಧವಾದ ಗುಣಗಳು. ಅವುಗಳಿಗೆ ಅಯನ ಎಂದರೆ ಆಶ್ರಯನಾಗಿದ್ದಾನೆ. ಆದ್ದರಿಂದ 'ಗುಣೈಸ್ಸರ್ವೈರುದೀರ್ಣಂ' ಎಂಬುದರ ಅರ್ಥವನ್ನು ನಾರಾಯಣ ಎಂಬ ಪದವೇ ಹೇಳಿ ಮೊದಲನೇ ಅಧ್ಯಾಯದ ಅರ್ಥವನ್ನು ಸಂಗ್ರಹಿಸಿದೆ.

**ತತ್ವಪ್ರಕಾಶಿಕಾ – ನತ್ರೋऽಭಾವಾರ್ಥತ್ವಾದಾಶ್ರಯೋ ನ ಭವತೀತಿ ವಾ ನಾರಾಯಣಃ।**

ನಞ್‌ಗೆ ಅಭಾವವೆಂಬ ಅರ್ಥವಿದೆ. ಆಗ ದೋಷವುಳ್ಳವನಲ್ಲವೆಂದು ಹೇಳುವ 'ದೋಷವರ್ಜಿತತ್ವಂ'ವೆಂಬ ಪದದ ಅರ್ಥವನ್ನು ಹೇಳುತ್ತದೆ. ಈಗ ನ + ಅರಾಯನ ಎಂದು ಪದಚ್ಛೇದ ಮಾಡಬೇಕು. ಅರಾಯನ ಎಂದರೆ ದೋಷಾಶ್ರಯ ಎಂದರ್ಥ. 'ನ' ಅರಾಯನ ಎಂದರೆ ದೋಷಾಶ್ರಯನಲ್ಲ ಎಂಬ ಅರ್ಥದಿಂದ ಎರಡನೇ ಅಧ್ಯಾಯದ ಅರ್ಥವನ್ನು ಸಂಗ್ರಹಿಸಿದಂತಾಯಿತು.

**ತತ್ವಪ್ರಕಾಶಿಕಾ – ನರಸಮ್ಬನ್ಧಿತ್ವಾತ್, ನ ರೀಯತೇऽನೇನೇತಿ ವಾ, ನಾರಮಣಂ ಯೇನೇತಿ ವಾ, ನಿರ್ದೋಷವೇದೋತ್ಪನ್ನತ್ವಾದ್ವಾ ನಾರಂ = ಜ್ಞಾನಂ, ವಿಷಯತಯಾ ತದಾಶ್ರಯತ್ವಾಚ್ಚ ನಾರಾಯಣಃ ।**

ಅಥವಾ ನರ = ಸಜ್ಜನರಿಗೆ, ಸಂಬಂಧವಾದದ್ದರಿಂದ ನಾರ = ಜ್ಞಾನ, ೨. ಯಾವುದರ ಸಂಬಂಧದಿಂದ ದೇಹ ನಾಶವಾಗುವುದಿಲ್ಲವೋ, ಅದು ನಾರ = ಜ್ಞಾನ, ೩. ಯಾವುದರಿಂದ ದುಃಖವಾಗುವುದಿಲ್ಲವೋ ಅದು 'ನಾರ' = ಜ್ಞಾನ. ೪. ನಿರ್ದೋಷವಾದ ವೇದದಿಂದ ಉತ್ಪನ್ನವಾದ್ದರಿಂದ 'ನಾರ' = ಜ್ಞಾನ. ಇಂತಹ ಜ್ಞಾನಕ್ಕೆ ಭಗವಂತನು ವಿಷಯನೂ, ಆಶ್ರಯನೂ ಆಗಿರುವುದರಿಂದ ನಾರಾಯಣನೆಂದು ಕರೆಸಿಕೊಳ್ಳುತ್ತಾನೆ. ಹೀಗೆ ಮೂರನೇ ಅಧ್ಯಾಯದ ಅರ್ಥವನ್ನೂ 'ನಾರಾಯಣ' ಪದವು ಹೇಳಿದಂತಾಯಿತು.

**ತತ್ವಪ್ರಕಾಶಿಕಾ – ಅರವಿಧುರತ್ವಾತ್, ಅತಿರಹಿತತ್ವಾತ್, ಕ್ಷಯರಹಿತತ್ವಾದ್ವಾ ನಾರಾಃ = ಮುಕ್ತಾಃ, ತದಾಶ್ರಯೋ ನಾರಾಯಣಃ ।**

ಹಾಗೆಯೇ ಗಮ್ಯವೆಂಬ ಅರ್ಥವನ್ನೂ 'ನಾರಾಯಣ' ಪದವು ಹೇಳುತ್ತದೆ. 'ನಾರಾಃ' ಎಂಬ ಪದಕ್ಕೆ ಮುಕ್ತರು ಎಂದರ್ಥ. ೧. ಅರ ವಿಧುರತ್ವಾತ್ = ದೋಷ, ರಹಿತರಾದ್ದರಿಂದ

ಮುಕ್ತರು, ೨. ಆರತಿ ರಹಿತತ್ವಾತ್ = ದುಃಖರಹಿತರಾದ್ದರಿಂದ, ೩. ಕ್ಷಯ ರಹಿತತ್ವಾತ್= ನಾಶವಿಲ್ಲದಿರುವುದರಿಂದ 'ನಾರಾಃ' ಎಂದರೆ ಮುಕ್ತರು. ಆ ಮುಕ್ತರಿಗೆ ಆಶ್ರಯನಾದ್ದರಿಂದ 'ನಾರಾಯಣ' ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ನಾಲ್ಕನೇ ಅಧ್ಯಾಯದ ಅರ್ಥವನ್ನೂ ಹೇಳುತ್ತಿದೆ.

**ತತ್ವಪ್ರಕಾಶಿಕಾ – ನಗನಾಕಾದಿಶಬ್ದವದಯಂ ಶಬ್ದೋ ಜ್ಞಾತವ್ಯಃ ।**

'ನಾರಾಯಣ' ಶಬ್ದದಲ್ಲಿ 'ನ'ಕಾರಲೋಪವಾಗಿ 'ನುಟ್'ಪ್ರತ್ಯಯ ಬಂದು 'ಅನರಾಯಣ' ಎಂದು ರೂಪವಾಗಬೇಕು. ಆದರೆ 'ನಗ' 'ನಾಕ' ಮೊದಲಾದ ಶಬ್ದಗಳಲ್ಲಿ ಹೇಗೆ 'ನ'ಕಾರ ಲೋಪಾದಿಗಳಿಲ್ಲವೋ ಹಾಗೆಯೇ ಇಲ್ಲಿಯೂ ಎಂದು ತಿಳಿಯಬೇಕು. ಆದ್ದರಿಂದ 'ನಾರಾಯಣ' ಎಂಬ ರೂಪವು ಸಮೀಚೀನವೇ ಆಗಿದೆ.

**ತತ್ವಪ್ರಕಾಶಿಕಾ – ಅಥ ವಾ ನಾರಾಯಣಸ್ಯೈವ ನಮ್ಯತ್ವೋಪಪಾದಕಮೇತತ್ । ಯೋ ಹಿ ಬಹ್ವಗುಣೋ ನಿರ್ದೋಷಃ ಶಾಸ್ತ್ರಜ್ಞೇಯೋऽಧೀತಶಾಸ್ತ್ರಗಮ್ಯಃ ಸ ಹಿ ವನ್ಧ್ಯೋ ಭವತಿ ।**

ಅಥವಾ ಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳು ನಾರಾಯಣನೇ ನಮಸ್ಕಾರಾರ್ಹನಾಗಿದ್ದಾನೆಂದು ತಿಳಿಸಲು ಹೊರಟಿವೆ. ಯಾರನ್ನು ನಮಸ್ಕರಿಸಬೇಕೆಂದು ನಮಗೆ ಅಪೇಕ್ಷೆಯಾಗುತ್ತದೆಂದರೆ ಯಾರು ಬಹುಗುಣವುಳ್ಳವನೋ, ನಿರ್ದೋಷಿಯೋ, ಶಾಸ್ತ್ರಗಳಿಂದ ಜ್ಞೇಯನೂ, ಶಾಸ್ತ್ರಗಳನ್ನು ಅಧ್ಯಯನ ಮಾಡಿ ಹೊಂದಲು ಅರ್ಹನೋ ಅಂತಹವನೇ ವಂದ್ಯನಾಗುತ್ತಾನೆ. ಹೀಗೆ ವಂದ್ಯತ್ವಪ್ರಯೋಜಕಧರ್ಮಗಳೆಲ್ಲ ನಾರಾಯಣನಲ್ಲಿ ಇರುವುದರಿಂದ ಅವನನ್ನು ನಮಸ್ಕರಿಸುವುದು ಅತ್ಯಂತ ಯುಕ್ತವಾಗಿದೆ.

**ತತ್ವಪ್ರಕಾಶಿಕಾ – ದೇವತಾನತಿಸಮನನ್ತರಂ ಗುರೂನಪಿ ನಮತಿ – ಗುರೂಂಶ್ಚೇತಿ ।। 'ಗುರೋರ್ನಾಮ ನ ಗೃಹ್ಣೀಯಾಚ್ಛಿಷ್ಯೋ ಭಾರ್ಯಾ ಪತೇರಪಿ' ಇತ್ಯತೋ ನ ತನ್ನಾಮ ಜಗ್ರಾಹ । ಸ್ವಸ್ಯ ಗುರುದೇವತಾಭೇದೇऽರುಚಿಂ ಸೂಚಯತಿ 'ಅಪಿ'ಪದೇನ । ಯದ್ಯಪಿ ಗುರುರ್ನ ದೇವತಾಭಿನ್ನಃ, ತಥಾಪಿ ವಿಶೇಷಾನುಗ್ರಹಾರ್ಥಂ ಪೃಥಙ್ನತಿರಿತಿ ।**

ದೇವತಾನಮಸ್ಕಾರದ ನಂತರ ಗುರುಗಳ ನಮಸ್ಕಾರವನ್ನೂ ಮಾಡುತ್ತಿದ್ದಾರೆ. 'ಗುರೂಂಶ್ಚಾಪಿ' ಎಂದು. 'ಗುರೋರ್ನಾಮ ನ ಗೃಹ್ಣೀಯಾತ್ ಶಿಷ್ಯೋ ಭಾರ್ಯಾ ಪತೇರಪಿ' (ಶಿಷ್ಯನಾದವನು 'ಗುರುಗಳ ಹೆಸರನ್ನು ಉಚ್ಚಾರ ಮಾಡಬಾರದು,

ಹೆಂಡತಿಯಾದವಳು ಗಂಡನ ಹೆಸರನ್ನು ಉಚ್ಚಾರ ಮಾಡಬಾರದು) ಎಂಬ ಪ್ರಮಾಣವಿರುವುದರಿಂದ ಪ್ರಕೃತ ಶ್ರೀಮದಾಚಾರ್ಯರು ತಮ್ಮ ಗುರುಗಳ ಹೆಸರನ್ನು ಉಲ್ಲೇಖಿಸಿಲ್ಲ.

'ಗುರೂಂಶ್ಚಾಪಿ' ಎಂಬಲ್ಲಿ 'ಅಪಿ' ಶಬ್ದದಿಂದ ತಮ್ಮ ಗುರುಗಳು ಹಾಗು ದೇವತೆ ಇಬ್ಬರೂ ಒಬ್ಬರೇ ಆಗಿದ್ದಾರೆ ಬೇರೆ ಅಲ್ಲ ಎಂದು ಸೂಚಿಸಿದ್ದಾರೆ. ವಾಸ್ತವಿಕವಾಗಿ ದೇವತೆ ಹಾಗು ಗುರುಗಳು ಒಬ್ಬರೇ ಆಗಿರುವುದರಿಂದ ಗುರುಗಳಿಗೆ ಪ್ರತ್ಯೇಕವಾಗಿ ನಮಸ್ಕಾರ ಮಾಡಬೇಕಾಗಿರಲಿಲ್ಲ. ಆದರೂ ಸಹ ಗುರುತ್ವೇನ ವಿಶೇಷಾನುಗ್ರಹಲಾಭಕ್ಕಾಗಿ ಪ್ರತ್ಯೇಕವಾಗಿ ನಮಸ್ಕರಿಸಿದ್ದಾರೆ.

**तत्वप्रकाशिका – अनेनैव शास्त्रस्याधिकारिविषयप्रयोजनसम्बन्धाश्च श्रोतृप्रवृत्त्यङ्गभूताः सूचिता ज्ञातव्याः । तत्स्मरणस्य महाफलहेतुत्वाच्च । तदुक्तम्–**

**'अधिकारं फलं चैव प्रतिपाद्यं च वस्तु यत् ।**
**स्मृत्वा प्रारभतो ग्रन्थं करोतीशो महत् फलम् ।।**

**इति ।। (भाग - १-१-१२)**

ಶ್ರೋತೃಗಳ ಪ್ರವೃತ್ತಿಗೆ ಅಂಗಭೂತವಾದ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧಗಳನ್ನು ಈ ವಿಶೇಷಣಗಳಿಂದಲೇ ಸೂಚಿಸಿದ್ದಾರೆಂದು ತಿಳಿಯಬೇಕು. ಗ್ರಂಥದ ಪ್ರಾರಂಭದಲ್ಲಿ ಈ ಅನುಬಂಧಚತುಷ್ಟಯವನ್ನು ಸ್ಮರಣೆ ಮಾಡಿದ್ದಲ್ಲಿ ಮಹಾಫಲವು ದೊರೆಯುವುದೆಂದು ಹೇಳಿದ್ದಾರೆ.

ಅಧಿಕಾರಂ ಫಲಂ ಚೈವ ಪ್ರತಿಪಾದ್ಯಂ ಚ ವಸ್ತು ಯತ್ ।
ಸ್ಮೃತ್ವಾ ಪ್ರಾರಭತೋ ಗ್ರಂಥಂ ಕರೋತೀಶೋ ಮಹತ್ ಫಲಮ್ ।।

'ಅಧಿಕಾರ, ಪ್ರಯೋಜನ, ಪ್ರತಿಪಾದ್ಯ ವಿಷಯ, ಸಂಬಂಧ - ಇವುಗಳ ಸ್ಮರಣೆ ಮಾಡಿ ಗ್ರಂಥವನ್ನು ಪ್ರಾರಂಭ ಮಾಡುವವನಿಗೆ ಪ್ರಭುವು ಮಹಾಫಲವನ್ನು ದಯಪಾಲಿಸುತ್ತಾನೆ' ಹೀಗೆ ಭಾಗವತ ಪ್ರಥಮಸ್ಕಂಧದ ತಾತ್ಪರ್ಯದಲ್ಲಿ ಹೇಳಿರುತ್ತಾರೆ.

**तत्वप्रकाशिका – नमस्काराधिकार्यादिग्रथनसूचने शिष्यशिक्षार्थम् । तथाहि । ज्ञेयत्वगम्यत्वयोः ज्ञातृगन्तृसापेक्षत्वात् तद्योग्यस्तदिच्छुरेव अधिकारी**

**सूचितः । नारायण एव विषयः । तज्ज्ञानगमने प्रयोजनम् । यथायोग्यं सम्बन्ध इति ।**

ಶ್ರೀಮದಾಚಾರ್ಯರು ನಿರಂತರವಾಗಿ ಭಗವಂತನನ್ನು ನಮಸ್ಕಾರ ಮಾಡುತ್ತಲೇ ಇರುತ್ತಾರೆ. ಹಾಗಾಗಿ ಗ್ರಂಥಾರಂಭದಲ್ಲಿ ನಮಸ್ಕಾರವನ್ನು ಉಲ್ಲೇಖಿಸುವ ಅವಶ್ಯಕತೆ ಇಲ್ಲ. ಹಾಗೆಯೇ ಅನುಬಂಧಚತುಷ್ಟಯ ಉಲ್ಲೇಖದ ಅವಶ್ಯಕತೆಯಿಲ್ಲ. ಉಲ್ಲೇಖಿಸದಿದ್ದರೂ ಸ್ಮರಣೆ ಬರುತ್ತದೆ. ಈ ಪ್ರಶ್ನೆಗೆ ಇಷ್ಟು ಉತ್ತರ. 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ' ಎಂಬಂತೆ ಶಿಷ್ಯಶಿಕ್ಷಣಕ್ಕೋಸ್ಕರವಷ್ಟೇ ಇಲ್ಲಿ ಉಲ್ಲೇಖಿಸಿದ್ದಾರೆ.

'ಜ್ಞೇಯಂ ಗಮ್ಯಂ' ಎಂದು ಹೇಳಿದ್ದರಿಂದ ಅಧಿಕಾರಿಯನ್ನು ಸೂಚಿಸಿದಂತಾಯಿತು. ಹೇಗೆಂದರೆ ಜ್ಞೇಯತ್ವ ಹಾಗೂ ಗಮ್ಯತ್ವಗಳು ಜ್ಞಾತೃ ಹಾಗು ಗಂತೃಗಳನ್ನು ಅಪೇಕ್ಷಿಸಿದೆ. ಆದ್ದರಿಂದ ಜ್ಞಾನಕ್ಕೆ ಹಾಗೂ ಗಮನಕ್ಕೆ ಯೋಗ್ಯನಾದವನು, ಅವುಗಳನ್ನು ಅಪೇಕ್ಷಿಸುವವನು 'ಅಧಿಕಾರಿ' ಎಂದು ಸೂಚಿತವಾಯಿತು. ನಾರಾಯಣನೇ ವಿಷಯ. ನಾರಾಯಣನ ಜ್ಞಾನ, ಗಮನಗಳೇ ಪ್ರಯೋಜನ. ಯಥಾಯೋಗ್ಯವಾಗಿ ಇವು ಮೂರಕ್ಕೆ ಸಂಬಂಧವನ್ನು ತಿಳಿಯಬೇಕು.

## ಬ್ರಹ್ಮಶಬ್ದಾರ್ಥವೇ ನಾರಾಯಣಶಬ್ದದ ಅರ್ಥ

**भावदीपः – 'ननु ब्रह्मतन्त्रोक्तगुणवैशिष्ट्यं कथं नारायणस्योच्यते । किन्तु ब्रह्मण एव वाच्यम्?' इत्याशङ्कां निरसितुं योजनान्तरमाह – अथवा इति ।।**

ಪ್ರಶ್ನೆ - ಬ್ರಹ್ಮಮೀಮಾಂಸಾಶಾಸ್ತ್ರದಿಂದ ಪ್ರತಿಪಾದ್ಯವಾದ ಸಕಲಧರ್ಮಗಳನ್ನು ಬ್ರಹ್ಮನಲ್ಲೇ ಹೇಳಬೇಕು. ನೀವು ನಾರಾಯಣನಲ್ಲಿ ಹೇಳುತ್ತಿರುವುದು ತಪ್ಪಲ್ಲವೇ?

ಉತ್ತರ - ಬ್ರಹ್ಮ ಬೇರೆಯಲ್ಲ. ನಾರಾಯಣ ಬೇರೆಯಲ್ಲ. ಬ್ರಹ್ಮಶಬ್ದಕ್ಕೆ ಏನು ಅರ್ಥವೋ, ಅದೇ ಅರ್ಥವನ್ನು ನಾರಾಯಣಶಬ್ದವೂ ಹೇಳುತ್ತಿದೆ. ಆದ್ದರಿಂದ ಈ ಶಾಸ್ತ್ರದಿಂದ ಪ್ರತಿಪಾದ್ಯನಾದವನು ನಾರಾಯಣ ಎಂಬುದರಲ್ಲಿ ಸಂಶಯವಿಲ್ಲ.

ನಾರಾಯಣಶಬ್ದದಿಂದಲೇ ನಾಲ್ಕು ಅಧ್ಯಾಯಗಳ ಅರ್ಥವು ತಿಳಿಯುತ್ತದೆ. ಇದನ್ನು 'ಅಥವಾ' ಇತ್ಯಾದಿವಾಕ್ಯದಿಂದ ವಿವರಿಸುತ್ತಿದ್ದಾರೆ.

ವಿವರಣೆ - ಇಲ್ಲಿಯತನಕ ಸಮಗ್ರ ಬ್ರಹ್ಮಮೀಮಾಂಸಾಶಾಸ್ತ್ರದ ನಾಲ್ಕು ಅಧ್ಯಾಯಗಳ ಅಭಿಪ್ರಾಯವನ್ನು ಸಂಕ್ಷೇಪವಾಗಿ ಭಾಷ್ಯದ ಮಂಗಳ ಶ್ಲೋಕದಲ್ಲಿ ತಿಳಿಸಿದರೆಂದು ಸಮರ್ಥಿಸಿದ್ದಾಯಿತು. ಗುಣಪೂರ್ಣತ್ವ, ದೋಷದೂರತ್ವ, ಜ್ಞೇಯತ್ವ ಮತ್ತು ಗಮ್ಯತ್ವಗಳೆಂಬ ವಿಶಿಷ್ಟಗುಣಗಳು ನಾರಾಯಣನಲ್ಲಿವೆ ಎಂದು ಹೇಳಿದಿರಿ. ಆದರೆ ಈ ನಾಲ್ಕು ವಿಶಿಷ್ಟಗುಣಗಳು ಬ್ರಹ್ಮನಗುಣಗಳಾಗಿವೆ. ಬ್ರಹ್ಮಸೂತ್ರದಿಂದ ಮುಖ್ಯವಾಗಿ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆ ಹೊರತು, ನಾರಾಯಣನಲ್ಲ. ಹೀಗಿರುವಾಗ ಈ ವಿಶಿಷ್ಟಗುಣಗಳನ್ನು ನಾರಾಯಣನಲ್ಲಿ ಹೇಳಿದ್ದು ಹೇಗೆ ಯುಕ್ತವಾಗುತ್ತದೆ?

ಈ ಆಶಂಕೆಗೆ ಉತ್ತರ ಹೀಗಿದೆ - ಬ್ರಹ್ಮಶಬ್ದದಿಂದ ಯಾರು ಪ್ರತಿಪಾದ್ಯನೋ, ಅವನೇ ನಾರಾಯಣ ಎಂಬ ಶಬ್ದದಿಂದಲೂ ಕೂಡ ಪ್ರತಿಪಾದ್ಯನಾಗಿದ್ದಾನೆ. ಬ್ರಹ್ಮಶಬ್ದದಿಂದ ಪ್ರತಿಪಾದ್ಯವಾದ ಸಕಲ ಶಾಸ್ತ್ರಾರ್ಥವು ನಾರಾಯಣಶಬ್ದದಿಂದಲೂ ಕೂಡ ಪ್ರತಿಪಾದ್ಯವಾಗುತ್ತದೆ. ಹೀಗೆ ಬ್ರಹ್ಮನೇ ನಾರಾಯಣನಾಗಿರುವುದರಿಂದ ನಾರಾಯಣ ಶಬ್ದದಿಂದ ನಾಲ್ಕು ಅಧ್ಯಾಯಗಳ ಅಭಿಪ್ರಾಯವನ್ನು ಹೇಳಿದ್ದು ಅಸಾಧುವಲ್ಲ.

## ನಾರಾಯಣ ಶಬ್ದಕ್ಕೆ ಬಹುಬಗೆಯ ನಿಷ್ಪತ್ತಿ

**ಭಾವದೀಪಃ – ವಿಶಿಷ್ಟಗುಣಾನ್ ಇತಿ ।। 'ವಿಶಿಷ್ಟಾನಿತರಾಸಾಧಾರಣಾನ್ ಗುಣೋದೀರ್ಣತ್ವದೋಷವರ್ಜಿತತ್ವಜ್ಞೇಯತ್ವಗಮ್ಯತ್ವರೂಪಗುಣಾನ್' ಇತ್ಯರ್ಥಃ । ನಿರ್ವಕ್ತಿ = ನಿರುಚ್ಯ ದರ್ಶಯತಿ; 'ವಿಶೇಷಣಚತುಷ್ಟಯೇನ' ಇತ್ಯರ್ಥಃ । 'ಭಾಷ್ಯಕಾರೀಯಂ ನಾರಾಯಣಪದಸ್ಯ ವಿಶೇಷಣಚತುಷ್ಟಯೇನ ವಿಶಿಷ್ಟಗುಣವಾಚಕತ್ವಪ್ರದರ್ಶನಂ ಚ ತಸ್ಯ ಬ್ರಹ್ಮಶಬ್ದಸಮಾನಾರ್ಥತ್ವಾತ್ ಶಾಸ್ತ್ರಾರ್ಥವಾಚಕತ್ವಾಚ್ಚ ನಾರಾಯಣ ಏವ ಶಾಸ್ತ್ರಾರ್ಥಃ ಇತಿ ದರ್ಶಯಿತುಮ್ ಇತಿ ನೋಕ್ತಶಙ್ಕಾವಕಾಶಃ' ಇತಿ ಭಾವಃ । ಏತದಪಿ 'ಸ್ತುತ್ಯರ್ಥಮ್' ಇತಿ ಸುಧೋಕ್ತೇರುಪಲಕ್ಷಣತ್ವಾದವಿರೋಧಃ ।**

**दोषारशब्दयोः इति ।। 'दोषारच्छिद्रशब्दानां पर्यायत्वं यतस्ततः' इत्यनु-भाष्योक्तेरिति भावः । नरेति ।। सज्जनेत्यर्थः ।**

'ವಿಶಿಷ್ಟಗುಣಾನಪಿ ಆಚಷ್ಟೇ' ಎಂಬ ಟೀಕೆಗೆ ಹೀಗರ್ಥ. ವಿಶಿಷ್ಟಾನ್ = ಇತರ ಅಸಾಧಾರಣವಾದ ಗುಣೋದೀರ್ಣತ್ವ, ದೋಷವರ್ಜಿತತ್ವ, ಜ್ಞೇಯತ್ವ, ಗಮ್ಯತ್ವ ಗುಣಗಳನ್ನು, ಆಚಷ್ಟೇ = ಹೇಳುತ್ತಿದೆ. ನಿರ್ವಕ್ತಿ = ನಾಲ್ಕು ವಿಶೇಷಣಗಳಿಂದ ನಿರ್ವಚನ ಮಾಡಿ ತೋರಿಸುತ್ತಿದ್ದಾರೆ.

ಭಾಷ್ಯದಲ್ಲಿ ನಾರಾಯಣ ಪದವನ್ನು ಉಲ್ಲೇಖ ಮಾಡುವುದರ ಮೂಲಕ 'ಗುಣೈ ಸರ್ವೈರುದೀರ್ಣಂ', 'ದೋಷವಿವರ್ಜಿತಂ', 'ಜ್ಞೇಯಂ', 'ಗಮ್ಯಂ' ಎಂಬ ನಾಲ್ಕು-ವಿಶೇಷಣಗಳನ್ನು ನೀಡಿದ್ದಾರೆ. ಇವುಗಳಿಂದ ಗುಣೋದೀರ್ಣತ್ವ, ದೋಷವರ್ಜಿತತ್ವ, ಜ್ಞೇಯತ್ವ, ಗಮ್ಯತ್ವ ಎಂಬ ಗುಣಗಳು ನಾರಾಯಣನಲ್ಲಿ ತೋರಿಸಿದಂತಾಗುತ್ತದೆ. ನಾರಾಯಣ ಪದವು ಬ್ರಹ್ಮಶಬ್ದಕ್ಕೆ ಸಮಾನವಾದ ಅರ್ಥವುಳ್ಳದ್ದಾಗಿದೆ. ಮತ್ತು ಸಕಲ ಶಾಸ್ತ್ರದ ಅರ್ಥಕ್ಕೆ ಪ್ರತಿಪಾದಕವಾಗಿದೆ. ಆದ್ದರಿಂದ ನಾರಾಯಣನೇ ಸಕಲಶಾಸ್ತ್ರ ಪ್ರತಿಪಾದ್ಯನೆಂದು ಪ್ರತಿಪಾದನೆ ಮಾಡುವ ಉದ್ದೇಶಕ್ಕಾಗಿ ಭಾಷ್ಯಕಾರರು ನಾರಾಯಣ ಪದವನ್ನು ಪ್ರಯೋಗಿಸಿದ್ದಾರೆ. ಆದ್ದರಿಂದ ಬ್ರಹ್ಮ ಬೇರೆ, ನಾರಾಯಣ ಬೇರೆ ಎಂಬ ಹಿಂದಿನ ಆಶಂಕೆಗೆ ಅವಕಾಶವಿಲ್ಲ. ಇಷ್ಟು ಅಭಿಪ್ರಾಯವನ್ನು ಟೀಕಾ ಮಾತುಗಳಲ್ಲಿ ತಿಳಿಯಬೇಕು.

''ನಾರಾಯಣಶಬ್ದದ ನಿರ್ವಚನದಿಂದಲೂ ಹಿಂದಿನ ಎಲ್ಲಾ ಶಂಕೆಗಳು ಪರಿಹಾರವಾಗುತ್ತವೆ. ಹಾಗಾದರೆ ಸುಧೆಯಲ್ಲಿ ನಾರಾಯಣಶಬ್ದವು ಸ್ತುತಿಪರವೆಂದು ಹೇಳಿದ್ದು ತಪ್ಪಾಗುತ್ತದಲ್ಲವೇ?'' ಎಂದರೆ ಸುಧೆಯಲ್ಲಿ ಹೇಳಿದ್ದನ್ನು ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕಾದ್ದರಿಂದ ಸುಧಾವಿರೋಧ ಬರುವುದಿಲ್ಲ.

'ದೋಷ', 'ಅರ', 'ಛಿದ್ರ' ಶಬ್ದಗಳು ಪರ್ಯಾಯಶಬ್ದಗಳಾಗಿವೆ. ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿರುವುದರಿಂದ 'ಅರ' ಶಬ್ದಕ್ಕೆ ದೋಷವೆಂಬರ್ಥವನ್ನು ವಿವಕ್ಷಿಸಬೇಕು. ದೋಷಕ್ಕೆ ವಿರುದ್ಧವಾದ ಗುಣಗಳನ್ನು 'ನಾರ' ಎಂಬ ಶಬ್ದವು ಹೇಳುತ್ತದೆ. ಆವಾಗ ನಾರಾಯಣ ಶಬ್ದಕ್ಕೆ ಗುಣಗಳಿಗೆ ಆಶ್ರಯನೆಂಬರ್ಥವು ದೊರೆಯುತ್ತದೆ.

'ನರಸಂಬಂಧಿತ್ವಾತ್' ಎಂಬ ಟೀಕೆಯಲ್ಲಿರುವ 'ನರ' ಶಬ್ದಕ್ಕೆ ಸಜ್ಜನರು ಎಂದರ್ಥ. ಸಜ್ಜನರಿಗೆ ಸಂಬಂಧಪಟ್ಟಿರುವುದರಿಂದ 'ನಾರ'ಶಬ್ದಕ್ಕೆ ಜ್ಞಾನವೆಂಬರ್ಥವು ದೊರೆಯುತ್ತದೆ.

ವಿವರಣೆ - ನಾರಾಯಣಶಬ್ದವು ಸಾಂಕೇತಿಕವಲ್ಲ. ದೇವದತ್ತನು 'ದೇವದತ್ತಪದದಿಂದ ವಾಚ್ಯನಾಗಲಿ' ಎಂಬ ಇಚ್ಛೆಯಿಂದಷ್ಟೇ ದೇವದತ್ತ ಎನಿಸಿದ್ದಾನೆ. ಆದರೆ ನಾರಾಯಣನು ಹೀಗಲ್ಲ; ನಾರಾಯಣಶಬ್ದವನ್ನು ಬಿಡಿಸಿದಾಗ ಯಾವ ಅರ್ಥವು ತಿಳಿಯುತ್ತದೋ, ಅಂತಹ ವಿಶಿಷ್ಟಗುಣಗಳನ್ನು ಹೊಂದಿರುವವನಾದ್ದರಿಂದ 'ನಾರಾಯಣ' ಎನಿಸಿದ್ದಾನೆ.

ಅದು ಹೀಗೆ - 'ನಾರ' ಎಂದರೆ ಗುಣಗಳು. ಏಕೆಂದರೆ ದೋಷ, ಅರ, ಛಿದ್ರ ಶಬ್ದಗಳು ಪರ್ಯಾಯಶಬ್ದಗಳಾಗಿವೆಯೆಂದು ಅನುವ್ಯಾಖ್ಯಾನ ಹೇಳಿದೆ. ಆದ್ದರಿಂದ ಅರ ಎಂದರೆ ದೋಷ, ದೋಷವಿರುದ್ಧವಾದ ಗುಣಗಳನ್ನು ನಾರ ಶಬ್ದವು ಹೇಳುತ್ತದೆ. ನಞ್‌ಗೆ ವಿರೋಧ ಎಂಬರ್ಥವು ಪ್ರಸಿದ್ಧವಾಗಿದೆ -

ಸಾದೃಶ್ಯಂ ತದಭಾವಶ್ಚ ತದನ್ಯತ್ವಂ ತದಲ್ಪತಾ।
ಅಪ್ರಾಶಸ್ತ್ಯಂ ವಿರೋಧಶ್ಚ ನಞರ್ಥಾಃ ಷಟ್ ಪ್ರಕೀರ್ತಿತಾಃ॥

ಸಾದೃಶ್ಯ, ವಸ್ತುವಿನ ಅಭಾವ, ವಸ್ತುವಿನ ಭೇದ, ಅಲ್ಪತ್ವ, ಅಪ್ರಾಶಸ್ತ್ಯ, ವಿರೋಧ ಹೀಗೆ ನಞ್‌ಗೆ ಆರು ಅರ್ಥಗಳಿವೆ. ಆದ್ದರಿಂದ 'ನಾರಾಯಣ' ಎಂಬ ಶಬ್ದಕ್ಕೆ ಗುಣಗಳಿಗೆ ಆಶ್ರಯನೆಂಬ ಅರ್ಥವನ್ನು ಸುಲಭವಾಗಿ ಹೇಳಬಹುದು.

## 'ನಾರಾಯಣ' ಎಂದರೆ ಜ್ಞಾನಕ್ಕೆ ಆಶ್ರಯ

**ಭಾವದೀಪಃ – ನ ರೀಯತ ಇತಿ ।। ನञುಪಪದಾತ್ 'ರೀङ् क्षये' ಇತಿ ಧಾತೋಃ ಕರಣೇ ಽಪ್ರತ್ಯಯೇ 'प्रज्ञादिभ्यश्च' ಇತಿ ಸ್ವಾರ್ಥಿಕೇऽಣ್‌ಪ್ರತ್ಯಯೇ 'यस्येति चेति लोपे च आदिवृद्धौ वक्ष्यमाणदिशा न लोपाभावे च नारमिति रूपमिति भावः । अरमणं दुःखम् । निर्दोषवेदवाचकान्नारशब्दात् 'तस्येदम्' ಇತ್ಯಣಿಕೃತೇ ನಾರಶಬ್ದೋ ವೇದಜನ್ಯಜ್ಞಾನವಾಚೀ ಇತಿ ಭಾವಃ ।**

'ನಾರಾಯಣ' ಎಂಬಲ್ಲಿ 'ನಾರ' ಎಂಬ ರೂಪ ಹೇಗೆ ಸಿದ್ಧವಾಯಿತು? ಎಂದರೆ 'ರೀಙ್ ಕ್ಷಯೇ' ಎಂಬ ಧಾತುವಿಗೆ 'ನಞ್' ಉಪಪದ ಸೇರಿದರೆ 'ನ ರೀ' ಎಂದಾಯಿತು. 'ರೀ' ಧಾತುವಿಗೆ ಕರಣಾರ್ಥದಲ್ಲಿ 'ಡ'ಪ್ರತ್ಯಯ ಮಾಡಿದರೆ 'ನಾರ' ಎಂದಾಯಿತು. ಪ್ರಜ್ಞಾದಿಶಬ್ದಗಳಂತೆ ಸ್ವಾರ್ಥದಲ್ಲಿ 'ಅಣ್' ಪ್ರತ್ಯಯ ಮಾಡಿದರೆ ಆದಿವೃದ್ಧಿ ಬಂದು 'ನಾರಂ' ಎಂಬ ರೂಪ ಸಿದ್ಧವಾಗಿದೆ. ಇನ್ನು 'ಅರಮಣಂ' ಎಂದರೆ ದುಃಖವೆಂದರ್ಥ. ಟೀಕೆಯಲ್ಲಿ 'ನಿರ್ದೋಷವೇದೋತ್ಪನ್ನವಾದ್ದರಿಂದ 'ನಾರಂ' ಎಂದರೆ ಜ್ಞಾನ' ಎಂಬ ಅರ್ಥ ಹೇಳಲಾಗಿದೆ. ಇಲ್ಲಿ 'ನಾರ' ಎಂದರೆ ನಿರ್ದುಷ್ಟವಾದ ವೇದ ಎಂದರ್ಥ. 'ತಸ್ಯ ಇದಂ' ಎಂಬರ್ಥದಲ್ಲಿ 'ಅಣ್' ಪ್ರತ್ಯಯ ಮಾಡಿದರೆ 'ನಾರ' ಶಬ್ದಕ್ಕೆ 'ವೇದಜನ್ಯಜ್ಞಾನ' ಎಂಬರ್ಥವನ್ನು ಹೇಳಿದಂತಾಗುತ್ತದೆ.

## 'ನಾರೀಯ' ಎಂದಾಗುವುದಿಲ್ಲ

**ಭಾವದೀಪಃ – ननु नारशब्दात् 'वृद्धिर्यस्याचाम्' इति वृद्धसञ्ज्ञायां 'वृद्धाच्छः' इति छप्रत्यये ईयादेशे नारीयम् इति स्यात्, कथं नारम्? इति। मैवम् । 'वा नामधेयस्य' इति वृद्धसञ्ज्ञाया एवाऽभावात् । 'ओर्गुणः' इत्यत्र गुणग्रहणेन 'सञ्ज्ञापूर्वको विधिरनित्यः' इति ज्ञापनाद्वा । सञ्ज्ञाया विधीयमानस्यैव सञ्ज्ञापूर्वकविधित्वात् । अत एव तृतीयस्य द्वितीयपादे 'स्पृहिगृहि' इत्यादिसूत्रे 'श्रद्धालुः' इत्यत्र श्लाविति द्विर्वचनमाशङ्क्य सञ्ज्ञापूर्वको विधिरनित्य इति द्विर्वचनं न' इत्युक्तं मञ्जर्याम् ।**

ಇಲ್ಲಿ ಒಂದು ಪ್ರಶ್ನೆ ಬರುತ್ತದೆ - 'ವೃದ್ಧಿರ್ಯಸ್ಯಾಚಾಮಾದೇಸ್ತದ್ವೃದ್ಧಮ್' ಎಂಬ ಸೂತ್ರದಿಂದ 'ನಾರ' ಶಬ್ದಕ್ಕೆ 'ವೃದ್ಧ' ಎಂಬ ಸಂಜ್ಞೆ ಬರುತ್ತದೆ. ಏಕೆಂದರೆ 'ನಾರ' ಶಬ್ದದ ಮೊದಲನೆಯ ಸ್ವರಾಕ್ಷರವು 'ಆ' ಎಂಬುದು. ಇದಕ್ಕೆ ಈ ಸೂತ್ರ 'ವೃದ್ಧ' ಎಂಬ ಸಂಜ್ಞೆಯನ್ನು ಹೇಳುತ್ತದೆ. ಆನಂತರ 'ವೃದ್ಧಾಚ್ಛಃ' ಎಂಬ ಮತ್ತೊಂದು ಸೂತ್ರವು 'ಛ' ಪ್ರತ್ಯಯವನ್ನು ವಿಧಿಸುತ್ತದೆ. 'ಛ' ಪ್ರತ್ಯಯ ಬಂದರೆ 'ಈಯ' ಪ್ರತ್ಯಯ ಬಂದು 'ನಾರೀಯ' ಎಂದು ರೂಪವಾಗುತ್ತದೆ. ಹಾಗಾಗಿ ನೀವು 'ನಾರ' ಎಂದು ಹೇಗೆ ಹೇಳಿದಿರಿ? ಎಂದರೆ ಎರಡು ರೀತಿಯ ಸಮಾಧಾನವನ್ನು ಇಲ್ಲಿ ತಿಳಿಯಬೇಕು.

'ವಾ ನಾಮಧೇಯಸ್ಯ ವೃದ್ಧಸಂಜ್ಞಾ' ಎಂಬ ಸೂತ್ರವು ರೂಢಶಬ್ದಗಳಲ್ಲಿ ಮೊದಲನೆಯ ಸ್ವರಾಕ್ಷರವು ವೃದ್ಧ್ಯಕ್ಷರವಾಗಿದ್ದರೂ (ದೀರ್ಘವಾಗಿದ್ದರೂ) ಆ ಸಂಜ್ಞೆಯನ್ನು ವಿಕಲ್ಪ ಮಾಡಿದೆ. ಆದ್ದರಿಂದ 'ನಾರೀಯ' ಎಂಬ ಅನಿಷ್ಟರೂಪದ ಹೆದರಿಕೆಯಿಲ್ಲ.

ಅಥವಾ ನಾರಶಬ್ದದ ಸಾಧುತ್ವವನ್ನು ಮತ್ತೊಂದು ಬಗೆಯಲ್ಲಿ ಚಿಂತಿಸಬಹುದು. ಹೇಗೆಂದರೆ ಓರ್ಗುಣಃ (೩-೪-೧೪೩) ಎಂಬ ಸೂತ್ರದಲ್ಲಿ 'ಭ' ಸಂಜ್ಞೆ ಇರುವ 'ಉ'ವರ್ಣಾಂತವಾದ ಶಬ್ದಕ್ಕೆ ತದ್ಧಿತಪ್ರತ್ಯಯ ಪರದಲ್ಲಿದ್ದಾಗ ಗುಣವು ಬರುತ್ತದೆ ಎಂದು ಹೇಳಲಾಗಿದೆ. ಉಕಾರವು ಗುಣಾಕ್ಷರವೆಂದರೆ 'ಓ'ಕಾರ ಬರುತ್ತದೆ ಎಂದು ಅರ್ಥ. ವಾಸ್ತವಿಕವಾಗಿ ಇಲ್ಲಿ 'ಓರೋತ್' 'ಉ'ಕಾರಕ್ಕೆ 'ಓ'ಕಾರ ಬರುತ್ತದೆ ಎಂದೇ ಲಘುವಾಗಿ ಹೇಳಿದ್ದರೂ ಸಾಕಾಗಿತ್ತು. ಆದರೂ ಸಹ 'ಗುಣ' ಎಂಬ ಹೆಸರಿನಿಂದ ವಿಧಿಸಿದ್ದರಿಂದ 'ಸಂಜ್ಞಾಪೂರ್ವಕೋ ವಿಧಿರನಿತ್ಯಃ' ಸಂಜ್ಞಾಪೂರ್ವಕ ಕಾರ್ಯಗಳನ್ನು ಮಾಡಲೇಬೇಕೆಂಬ ನಿಯಮವಿಲ್ಲವೆಂಬ ಪರಿಭಾಷೆಯು ಸೂಚಿತವಾಗುತ್ತದೆ. ಆದ್ದರಿಂದ ನಾರಂ ಎಂಬಲ್ಲಿ ಛ ಪ್ರತ್ಯಯ ಬರುತ್ತದೆ. ಈ ವಿಷಯವನ್ನು ತಿಳಿಸುವುದಕ್ಕಾಗಿಯೇ ಕಾಶಿಕಾವ್ಯಾಖ್ಯಾನಕಾರನಾದ ಪದಮಂಜರಿಕಾರನು ಮೂರನೆಯ ಅಧ್ಯಾಯದ ದ್ವಿತೀಯಪಾದದಲ್ಲಿ ಹೀಗೆ ಹೇಳಿದ್ದಾನೆ. 'ಸ್ಪೃಹಿಗೃಹಿಪತಿದಯಿನಿದ್ರಾತಂದ್ರಾಶ್ರದ್ಧಾಭ್ಯ ಆಲುಚ್' ಎಂಬ ಸೂತ್ರದಲ್ಲಿ 'ಆಲುಚ್' ಪ್ರತ್ಯಯದ ಬದಲು 'ಲುಶ್' ಪ್ರತ್ಯಯವನ್ನೇ ಹೇಳಬಹುದಿತ್ತಲ್ಲವೇ? ಎಂದರೆ ಹಾಗೆ ಹೇಳಿದರೆ 'ಶ್ರದ್ಧಾಲುಃ' ಎಂಬ ರೂಪವು ಸಿದ್ಧಿಸುತ್ತಿರಲಿಲ್ಲ. ಏಕೆಂದರೆ 'ಲುಶ್' ಪ್ರತ್ಯಯದಲ್ಲಿರುವ ಶ ಕಾರವು 'ಇತ್' ಆಗುವುದರಿಂದ ಸಾರ್ವಧಾತುಕ ಸಂಜ್ಞೆ ಬರುತ್ತದೆ. ಆವಾಗ ಶ್ನು ಪ್ರತ್ಯಯ ಬಂದು ಧಾತುವಿಗೆ ದ್ವಿರುಕ್ತಿಯು ಬಂದು 'ಶ್ರದ್ದಧಾಲು' ಎಂದು ಅನಿಷ್ಟರೂಪವಾಗಬೇಕಾದೀತು. ಆದರೆ ಇಲ್ಲಿ 'ಧಾತು' ಎಂಬ ಸಂಜ್ಞೆಯಿಂದ ಕಾರ್ಯವನ್ನು ವಿಧಿಸಿದ್ದರಿಂದ ಇಂತಹ ಸಂಜ್ಞಾಪೂರ್ವಕವಾದ ವಿಧಿಗಳು ಅನಿತ್ಯವಾಗಿವೆ. ಹಾಗಾಗಿ 'ಶ್ರದ್ಧಾಲುಃ' ಎಂಬ ರೂಪ ಸಿದ್ಧಿಸಲು ಏನೂ ಬಾಧಕವಿಲ್ಲ. ಆದರೂ ಸೂತ್ರದಲ್ಲಿ 'ಲುಶ್' ಪ್ರತ್ಯಯವನ್ನು ಬಿಟ್ಟು 'ಆಲುಚ್' ಪ್ರತ್ಯಯವನ್ನು ಏಕೆ ವಿಧಿಸಿದ್ದೆಂದರೆ 'ಕೃಪಾಲು' ಎಂಬ ರೂಪ ಸಿದ್ಧಿಯಾಗುವುದಕ್ಕೋಸ್ಕರ.

ಪ್ರಕೃತದಲ್ಲಿ 'ನಾರ' ಎಂಬುದಕ್ಕೆ 'ವೃದ್ಧಿ' ಸಂಜ್ಞೆ ಬಂದರೂ ಸಂಜ್ಞಾಪೂರ್ವಕವಾದ 'ಛ' ಪ್ರತ್ಯಯದ ಕಾರ್ಯವನ್ನು ಮಾಡಬೇಕಾಗಿಲ್ಲ. ಹೊರತಾಗಿ 'ಅಣ್' ಪ್ರತ್ಯಯವಷ್ಟೇ ಬಂದು ಸಾಧುರೂಪವು ಸಿದ್ಧಿಸುತ್ತದೆ.

## ಅನರಾಯಣ ಎಂದಾಗಬೇಕಲ್ಲವೇ?

**ಭಾವದೀಪಃ – ननु 'अरायणो न' इति व्युत्पत्तौ 'नलोपो नञः' इति नलोपे, 'तस्मान्नुडचि' इति नुटि सति अनरायणेति भाव्यम्, इत्यत आह – नगनाकादिशब्दवत् इति ।।**

ಪ್ರಶ್ನೆ - 'ಅರಾಶ್ರಯೋ ನ ಭವತೀತಿ' ಎಂದು ನಾರಾಯಣ ಶಬ್ದದ ನಿಷ್ಪತ್ತಿ. ಹೀಗೆ ಮಾಡಿದಾಗ 'ಅನರಾಯಣ' ಎಂದೇ ಆಗುತ್ತದೆ. ಹೊರತು 'ನಾರಾಯಣ' ಎಂದಾಗುವುದಿಲ್ಲ. ಏಕೆಂದರೆ 'ನಲೋಪೋ ನಞಃ' ಎಂಬ ಸೂತ್ರವು ನಾರ ಎಂಬಲ್ಲಿರುವ ನಞ್ ಗೆ ಲೋಪವನ್ನು ಹೇಳುತ್ತದೆ. ಆವಾಗ 'ಅ' ಎಂದಷ್ಟೇ ಉಳಿಯುತ್ತದೆ. ಆಕಾರಕ್ಕೆ ನುಟಾಗಮ ಬಂದರೆ. ಅನರಾಯಣ, ಎಂದಾಗಬೇಕಲ್ಲವೆ.

## ನಿಪಾತವಾದ್ದರಿಂದ ನಾರಾಯಣ ಎಂದಾಗುತ್ತದೆ

**ಭಾವದೀಪಃ – 'नभ्राण्नपान्नवेदानासत्यानमुचिनकुलनखनपुंसक-नक्षत्रनक्रनाकेषु प्रकृत्या', 'न गो प्राणिष्वन्यतरस्याम्' इत्याभ्यां नाकादिशब्दस्य निपातितत्वेन तत्र यथा सौत्रत्वेन समाधानं तथाऽत्रापि सौत्रत्वेन समाधानमूह्यम्, इति भावः।**

ಉತ್ತರ - ನಗ ಮತ್ತು ನಾಕ ಇತ್ಯಾದಿ ಶಬ್ದಗಳಲ್ಲಿರುವ ನಕಾರಕ್ಕೆ ಲೊಪ ಬರುವುದಿಲ್ಲ. ನುಟ್ ಪ್ರತ್ಯಯವು ಸಹ ಬಂದಿಲ್ಲ. ಆದರಂತೆ 'ನಾರಾ' ಎಂಬಲ್ಲಿಯೂ ಸಹ ನಕಾರಕ್ಕೆ ಲೋಪ ಮತ್ತು 'ನುಟ್' ಪ್ರತ್ಯಯ ಬರುವುದಿಲ್ಲ. ಒಂದು ವೇಳೆ ಇಲ್ಲಿ 'ನ' ಕಾರವು ಲೊಪವಾಗಿ 'ನುಟ್' ಬಂದು ಅನರಾಯಣ ಎಂದಾಗುವುದಾದರೆ ಅಲ್ಲಿಯೂ ಸಹ 'ಅನಗ' 'ಅನಾಕ' ಎಂದಾಗಲಿ.

## 'ನಾರಾಯಣ' ಎಂಬಲ್ಲಿ ನಕಾರಕ್ಕೆ ಲೋಪವಿಲ್ಲ

**ಭಾವದೀಪಃ – तथाहि 'नलोप' इति सूत्रे 'रात्रेः कृति विभाषा' इति पूर्वसूत्रादनुवृत्त्या विभाषाया व्यवस्थितविभाषत्वस्य न्यास एवोक्तत्वात् 'नारायणः' इत्यत्रापि नलोपाभावाद्युपपत्तिः ।**

ಲೋಕರೂಢಿಯನ್ನು ಅನುಸರಿಸಿ ನಲೋಪವು ಎಲ್ಲಾ ಕಡೆ ಬರುತ್ತದೆ. ಆದರೆ ಕೆಲವು ಕಡೆ ಬರುವುದೇ ಇಲ್ಲವೆಂದು, ವ್ಯವಸ್ಥಿತವಿಕಲ್ಪಾರ್ಥದಲ್ಲಿ ವಿಭಾಷಾಶಬ್ದವು ಇದೆಯೆಂದು ನ್ಯಾಸಕಾರನೇ ಹೇಳಿದ್ದಾನೆ. ಹೀಗೆ 'ನಲೋಪೋ ನಞಃ' ಎಂಬ ಸೂತ್ರದಲ್ಲಿ 'ವಿಭಾಷಾ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಆದ್ದರಿಂದ ನಾರಾಯಣಶಬ್ದದಲ್ಲೂ 'ನ' ಲೋಪವಾಗುವುದಿಲ್ಲ. ವ್ಯವಸ್ಥಿತವಿಭಾಷಾವಾದ್ದರಿಂದ ನಿತ್ಯವಾಗಿ ನಲೋಪವಾಗುವುದಿಲ್ಲ. ನಾರಾಯಣ ಎಂಬ ಪ್ರಯೋಗವು ವ್ಯಾಕರಣವಿರುದ್ಧವಾಗುವುದಿಲ್ಲ.

## 'ನಾರಾಯಣ' ಎಂಬಲ್ಲಿ ನಸಮಾಸ

**ಭಾವದೀಪಃ – यद्वा, 'दोषारः' इत्याद्यनुभाष्यसुधोक्तदिशा नसमासोऽस्त्विति। 'लघ्वक्षरं पूर्वम्' इत्युक्तेः 'नगनाके'ति निर्देशः । नलोपाभावमात्रस्स्याद्यम् । नलोपाभावनुडभावयोर्द्वितीयमित्येवं निर्देश इत्यप्याहुः । नारायणशब्दे 'पूर्वपदात् सञ्ज्ञायामगः' इति णत्वं ल्युटष्टित्वसामर्थ्येनायनशब्दोऽधिकरणे त्रिलिङ्ग इति पुल्लिङ्गत्वं च सुधोक्तमेव ध्येयम् । व्यक्तमेतत् सर्वं चन्द्रिकायाम्।**

ಅಥವಾ 'ದೋಷಾರಃ' ಎಂಬ ಅನುವ್ಯಾಖ್ಯಾನ ಹಾಗೂ ನ್ಯಾಯಸುಧೆಯಲ್ಲಿ ಹೇಳಿದ ಪ್ರಕಾರ ನಾರಾಯಣಶಬ್ದವು ನಞ್ ಸಮಾಸದಿಂದ ಗರ್ಭಿತವಾಗಿಲ್ಲ ಹೊರತು, ನಿಷೇಧ ಎಂಬ ಅರ್ಥದ ನ ಎಂಬ ಶಬ್ದದ ಜೊತೆಗೆ ಸಮಾಸವನ್ನು ಹೊಂದಿದೆ. ಆದ್ದರಿಂದ ನಲೋಪಕ್ಕೆ ಪ್ರವೃತ್ತಿಯೇ ಇರುವುದಿಲ್ಲ. 'ನಲೋಪೋ ನಞಃ' ಎಂಬ ಸೂತ್ರದಲ್ಲಿ ನಞ್ ಎಂಬುದರ ನಕಾರಕ್ಕೆ ಮಾತ್ರ ಲೋಪವನ್ನು ಹೇಳಲಾಗಿದೆ ಹೊರತು, 'ನ' ಎಂಬ ಶಬ್ದಕ್ಕೆ ಲೋಪವನ್ನು ಹೇಳಿರುವುದಿಲ್ಲ.

'ಲಘ್ವಕ್ಷರಂ ಪೂರ್ವಮ್' ಎಂಬ ನಿಯದಂತೆ 'ನಗನಾಕ' ಎಂಬ ಸೂತ್ರದಲ್ಲಿ 'ನಗ' ಶಬ್ದವನ್ನು ಮೊದಲು ಪ್ರಯೋಗಿಸಲಾಗಿದೆ.

ಅಥವಾ 'ನಗ' ಎಂಬುದು ಕೇವಲ ನಞ್ ಎಂಬುದಕ್ಕೆ ಲೋಪಮಾಡಿರುವುದಿಲ್ಲ ಎನ್ನಲು ಉದಾಹರಣೆಯಾಗಿದೆ. 'ನಾಕ' ಎಂಬುದು ನಲೋಪವಾಗದಿರಲು, ಮತ್ತು ಲ್ಯುಟ್ ಮಾಡದೇ ಇರಲು ಉದಾಹರಣೆಯಾಗಿದೆ. ಆದ್ದರಿಂದ 'ನಗನಾಕ' ಎಂಬ ನಿರ್ದೇಶವು ಸಾಧುವಾಗಿದೆ ಎಂದು ಕೆಲವರ ಅಭಿಪ್ರಾಯ.

'ನಾರಾ + ಅಯಣ' ಈ ಶಬ್ದಗಳಿಗೆ ಸಮಾಸವಾದರೆ 'ನಾರಾಯಣ' ಎಂದು ಆಗಬೇಕು. ನಾರಾಯಣ ಎಂಬ ರೂಪವು ಹೇಗೆ ಸಿದ್ಧವಾಯಿತು ?

ಹೀಗೆ ಪ್ರಶ್ನೆ ಮಾಡಬಾರದು. ಏಕೆಂದರೆ 'ಪೂರ್ವಪದಾತ್ ಸಂಜ್ಞಾಯಾಮಗಃ' ಣತ್ವದ ನಿಮಿತ್ತವಾಗಿರುವ ರೇಫ ಮತ್ತು ಷಕಾರಗಳು ಪೂರ್ವಪದದಲ್ಲಿ ಇದ್ದಾಗಿ ಆದರ ಮುಂದೆ ಉತ್ತರ ಪದದಲ್ಲಿ ರುವ 'ನ' ಎಂಬ ಅಕ್ಷರಕ್ಕೆ ಣತ್ವವು ಬರುತ್ತದೆ. ಈ ಸಮಸ್ತಪದವು ಒಬ್ಬರ ಹೆಸರಾಗಿರಬೇಕು. ಮತ್ತು ರೇಫ ಹಾಗು ಣಕಾರಗಳ ನಡುವೆ 'ಗ' ಎಂಬ ವರ್ಣ ಇರಬಾರದು. ಹೀಗೆ ಸೂತ್ರ ಹೇಳುತ್ತಿದೆ. ಈ ಸೂತ್ರದಿಂದ 'ನಾರ' ಎಂಬ ಪೂರ್ವಪದಲ್ಲಿ ರೇಫದ ಮುಂದೆ ಅಯನ ಎಂಬ ಉತ್ತರಪದದಲ್ಲಿರುವ ಣಕಾರಕ್ಕೆ ನಕಾರವು ಪ್ರಾಪ್ತವಾದರೆ ನಾರಾಯಣ ಎಂಬ ರೂಪವು ಸಿದ್ಧವಾಗುತ್ತದೆ. ಇದು ಭಗವಂತನ ಹೆಸರಾಗಿದೆ.

'ಅಯನ' ಎಂಬ ಶಬ್ದವು ಅಯುಧಾತುವಿಗೆ ಲ್ಯುಟ್ ಪ್ರತ್ಯಯ ಬಂದು 'ಲುಟ್' ಎಂಬ ಅಕ್ಷರಗಳು ಲೋಪವಾದಾಗ 'ಯು' ಎಂದಷ್ಟೇ ಬರುತ್ತದೆ. ಅಂತಹ 'ಯು' ಎಂಬುದಕ್ಕೆ 'ಅನ' ಎಂಬ ಆದೇಶ ಬಂದು 'ಅಯು + ಅನ = ಅಯನ' ಎಂದಾಗಿದೆ. ಲುಟ್ ಪ್ರತ್ಯಯಾಂತ ಶಬ್ದಗಳು ನಪುಂಸಕಲಿಂಗಗಳಾಗಿರುತ್ತವೆಂಬ ನಿಯಮದಂತೆ 'ನಾರ + ಅಯನಮ್ = ನಾರಾಯಣಮ್' ಎಂದಾಗುತ್ತದೆ. ಹೀಗಿರುವಾಗ 'ನಾರಾಯಣಃ' ಎಂಬ ಪುಲ್ಲಿಂಗ ಪ್ರಯೋಗವು ಹೇಗೆ ಯುಕ್ತವಾಗುತ್ತದೆ ?

ಈ ಆಶಂಕೆಯು ತಪ್ಪು. ಏಕೆಂದರೆ 'ಲ್ಯುಟ್' ಎಂಬ ಪ್ರತ್ಯಯದಲ್ಲಿ ಕೇವಲ ಲ್ಯು ಎಂದಷ್ಟೇ ಸೂತ್ರದಲ್ಲಿ ಹೇಳಿದ್ದರೆ ಸಾಕಾಗಿತ್ತು. ಆದರೂ ಕೂಡ 'ಟ್' ಎಂಬ ವರ್ಣವನ್ನು ಹೇಳಿ ಲೋಪಮಾಡಲಾಗಿದೆ. 'ಟಿಡ್ಢಾಣಞ್' ಎಂಬ ಸೂತ್ರದಿಂದ

ಸ್ತ್ರೀಲಿಂಗದಲ್ಲಿ 'ಟ್' ಎಂಬುದು ಲೋಪವಾಗಿರುವ ಪ್ರತ್ಯಯವನ್ನು ಹೊಂದಿರುವ ಶಬ್ದದ ಮುಂದೆ 'ಙೀಪ್' ಎಂಬ ಪ್ರತ್ಯಯವನ್ನು ವಿಧಿಸಲಾಗಿದೆ. ಆದ್ದರಿಂದ ನಪುಂಸಕಲಿಂಗದಲ್ಲಿಯೇ ಇರಬೇಕೆಂಬ ನಿಯಮವಿಲ್ಲವೆಂದು ತಿಳಿಯುತ್ತದೆ. ಪುಲ್ಲಿಂಗಲಿಂಗದಲ್ಲಿಯೂ ಕೂಡ ಪ್ರಯೋಗ ಮಾಡಬಹುದು ವ್ಯಾಕರಣದ ಮಹಾಭಾಷ್ಯದಲ್ಲಿಯೂ 'ಅನುಮಾನಃ' ಎಂದು ಪ್ರಯೋಗಿಸಲಾಗಿದೆ. ಆದ್ದರಿಂದ 'ನಾರಾಯಣಃ' ಎಂದು ಪ್ರಯೋಗ ಮಾಡುವುದು ತಪ್ಪಲ್ಲ. 'ಅಯನ' ಶಬ್ದವು ಅಧಿಕರಣಾರ್ಥದಲ್ಲಿ ವಿವಕ್ಷಿತವಾದ್ದರಿಂದ ಮೂರುಲಿಂಗಗಳಲ್ಲಿಯೂ ಪ್ರಯೋಗ ಮಾಡಬಹುದು ಹೀಗೆ ನ್ಯಾಯಸುಧೆಯಲ್ಲಿ ಸಮಾಧಾನವನ್ನು ಹೇಳಿದ್ದಾರೆ. ಇನ್ನು ಹೆಚ್ಚಿನ ವಿಚಾರವನ್ನು ತಾತ್ಪರ್ಯಚಂದ್ರಿಕೆಯನ್ನು ಅಧ್ಯಯನ ಮಾಡಿ ತಿಳಿದುಕೊಳ್ಳಬೇಕು.

**ಭಾವದೀಪಃ – नन्वथापि नारायणशब्दार्थनिरुक्तसम्भवे किमेवमेव निरुक्तौ बीजमिति चेन्न । ब्रह्मशब्दासमानार्थत्वादिद्योतकत्वेन प्रागेव समाधानात् । किञ्च नारायणनमनस्यावश्यकत्वोपपादनार्थतया च सार्थक्यं विशेषणानाम् इति भावेनाह – अथवा इति ।।**

ಪ್ರಶ್ನೆ - ಬೇರೆ ರೀತಿಯಾಗಿಯೂ ನಾರಾಯಣ ಶಬ್ದದ ನಿಷ್ಪತ್ತಿಯನ್ನು ಮಾಡಲು ಬರುವಾಗ ಮೇಲೆ ಹೇಳಿದಂತೆಯೇ ನಿಷ್ಪತ್ತಿ ಮಾಡಲು ಏನು ಕಾರಣ ?

ಉತ್ತರ - ಬ್ರಹ್ಮಶಬ್ದಕ್ಕೆ ಸಮಾನವಾದ ಅರ್ಥವನ್ನೇ ನಾರಾಯಣ ಶಬ್ದವು ಹೊಂದಿದೆ ಎಂದು ತಿಳಿಸಬೇಕು. ಆದ್ದರಿಂದ ಮೇಲೆ ಹೇಳಿದಂತೆ ನಾರಾಯಣ ಶಬ್ದವನ್ನು ನಿಷ್ಪತ್ತಿ ಮಾಡಲಾಗಿದೆ. ಈ ಸಮಾಧಾನವನ್ನು ಈ ಹಿಂದೆಯೇ ಹೇಳಿದ್ದಾಗಿದೆ. ಮತ್ತು ನಾರಾಯಣನೇ ನಮಸ್ಕಾರಕ್ಕೆ ಅರ್ಹನಾಗಿದ್ದಾನೆಂದು ಉಪಪಾದನೆ ಮಾಡಲು ಸಕಲಗುಣಪರಿಪೂರ್ಣನು, ದೋಷರಹಿತನೂ, ಶಾಸ್ತ್ರಪ್ರತಿಪಾದ್ಯನು, ಜ್ಞಾನಿಗಳಿಂದ ಗಮ್ಯನು ಎಂಬುದಾಗಿ ವಿಶೇಷಣಗಳನ್ನು ನೀಡಲಾಗಿದೆ. ಯಾರು ಇಂತಹ ಗುಣಗಳಿಂದ ಕೂಡಿರುತ್ತಾನೋ, ಅವನಷ್ಟೇ ನಮಸ್ಕಾರಕ್ಕೆ ಅರ್ಹನಾಗುತ್ತಾನೆ. ಈ ಅಭಿಪ್ರಾಯವನ್ನು ತಿಳಿಸಲು 'ಅಥವಾ' ಇತ್ಯಾದಿ ಟೀಕಾಮಾತುಗಳು ಹೊರಟಿವೆ.

ಪ್ರಶ್ನೆ - 'ನಭ್ರಾಣ್‌ನಪಾನ್‌ನವೇದಾನಾಸತ್ಯಾನಮುಚಿನಕುಲನಖನಪುಂಸಕನಕ್ಷತ್ರ-ನಕ್ರನಾಕೇಷು ಪ್ರಕೃತ್ಯಾ' ಎಂಬ ಸೂತ್ರದಲ್ಲಿ ನಾಕ ಶಬ್ದದ ನಕಾರಕ್ಕೆ ಲೋಪವಾಗುವುದಿಲ್ಲವೆಂದು ನಿಪಾತ ಮಾಡಿದ್ದಾರೆ. ಅದರಂತೆ 'ನಗೋಪ್ರಾಣಿಷ್ವನ್ಯತರಸ್ಯಾಮ್' ಎಂಬ ಸೂತ್ರದಲ್ಲಿ ನಗ ಶಬ್ದದಲ್ಲಿರುವ ನಕಾರವು ಲೋಪವಾಗುವುದಿಲ್ಲವೆಂದು ನಿಪಾತ ಮಾಡಿದ್ದಾರೆ. ಆ ರೀತಿಯಾಗಿ ನಾರ ಶಬ್ದದಲ್ಲಿರುವ ನಕಾರಕ್ಕೆ ಲೋಪಾಭಾವವನ್ನು ಹೇಳಿಲ್ಲ. ಹೇಳದ ಕಾರಣ ನ ಕಾರವು ಲೋಪವಾಗಿ ನುಟಾಗಮವು ಬಂದು ಅನರಾಯಣ ಎಂದೇ ಆಗಬೇಕು.

ಉತ್ತರ - 'ನಭ್ರಾಣ್‌ನಪಾತ್' ಇತ್ಯಾದಿ ಸೂತ್ರದಲ್ಲಿ 'ನಾಸತ್ಯಾ' ಇತ್ಯಾದಿ ಶಬ್ದಗಳನ್ನು ನಿಪಾತ ಮಾಡಿದ್ದಾರೆ. ಅವುಗಳ ಜೊತೆಗೆ ನಾರಾಯಣ ಶಬ್ದವನ್ನು ಸಹ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಆದ್ದರಿಂದ ನಾಕಾದಿ ಶಬ್ದಗಳು ಹೇಗೆ ಸಾಧುವಾಗುತ್ತವೊ, ಆದರಂತೆ ನಾರಾಯಣ ಶಬ್ದವು ಸಹ ಸಾಧುವಾಗುತ್ತದೆ. (ಸುಧೆಯಲ್ಲಿ ಹೇಳಿದ ಸಮಾಧಾನ)

ವಿಶೇಷ ವಿಚಾರ - 'ನಾರಾಯಣ' ಶಬ್ದದಲ್ಲಿ ಣತ್ವಕ್ಕೆ ಪ್ರಸಕ್ತಿಯೇ ಇಲ್ಲ. ಏಕೆಂದರೆ ನಾರ ಎಂಬುದೇ ಬೇರೆ ಪದ. ಅಯನ ಎಂಬುದೇ ಬೇರೆ ಪದ. ಣತ್ವ ಬರಬೇಕಾದರೆ 'ರಷಾಭ್ಯಾಂ ನೋ ಣಃ ಸಮಾನಪದೇ' ಎಂಬ ಸೂತ್ರವು ಒಂದೇ ಪದವಾಗಿರಬೇಕೆಂದು ಹೇಳುತ್ತದೆ. ಆದರೆ ನಿಮಿತ್ತವಾದ ರೇಫವೇ ಬೇರೆ ಪದದಲ್ಲಿದೆ. ನಿಮಿತ್ತಿಯಾದ ನಕಾರವು ಮತ್ತೊಂದು ಪದದಲ್ಲಿದೆ. ಹಾಗಾಗಿ ಣತ್ವವು ಹೇಗೆ ತಾನೆ ಬರುತ್ತದೆ? ಎಂದರೆ ಸುಧಾದಲ್ಲಿ ಹೇಳಿದ ಸಮಾಧಾನವನ್ನೇ 'ಅತ್ರ' ಎಂಬುದರಿಂದ ಹೇಳುತ್ತಿದ್ದಾರೆ. ವಾಸ್ತವಿಕವಾಗಿ ರಾಮ+ನಾಮ ಇತ್ಯಾದಿಗಳಲ್ಲಿ ಭಿನ್ನಪದಗಳಾಗಿರುವುದರಿಂದ ಣತ್ವವು ಬರುವುದಿಲ್ಲ. ಆದರೆ ಶೂರ್ಪ+ನಖಾ ಮೊದಲಾದ ಕಡೆ ಭಿನ್ನಪದವಾಗಿದ್ದರೂ ಣತ್ವ ಬರುತ್ತದೆ. ಕಾರಣವೇನೆಂದರೆ ಶೂರ್ಪಣಖಾ ಎಂಬುದು ರೂಢಪದವಾಗಿದೆ. ಆದರೆ 'ರಾಮನಾಮಾ' ಎಂಬುದು ರೂಢಪದವಲ್ಲ, ಯೋಗಪದವಾಗಿದೆ. ಹಾಗಾಗಿ ಅಲ್ಲಿ ಣತ್ವ ಬರುವುದಿಲ್ಲ. ಪ್ರಕೃತ 'ನಾರಾಯಣ' ಶಬ್ದವೂ ರೂಢಪದವಾದ್ದರಿಂದ ಣತ್ವವು ಬರುತ್ತದೆಂದು ತಿಳಿಯಬೇಕು. ಈ ವಿಷಯವನ್ನು 'ಪೂರ್ವಪದಾತ್‌ಸಂಜ್ಞಾಯಾಮಗಃ' ಎಂಬ ಸೂತ್ರವು ಹೇಳುತ್ತಿದೆ.

'ನಾರಾಯಣ' ಎಂಬಲ್ಲಿರುವ ಗಮನಾರ್ಥಕವಾದ 'ಅಯ' ಧಾತುವಿಗೆ 'ಕರಣಾಧಿಕರಣಯೋಶ್ಚ' ಎಂಬ ಸೂತ್ರದ ಪ್ರಕಾರ ಅಧಿಕರಣಾರ್ಥದಲ್ಲಿ 'ಲ್ಯುಟ್' ಪ್ರತ್ಯಯ ಬಂದಿದೆ. ಈ ಸೂತ್ರದಲ್ಲಿ 'ನಪುಂಸಕೇ ಭಾವೇ ಕ್ತಃ' ಎಂಬ

ಸೂತ್ರದಿಂದ 'ನಪುಂಸಕೇ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಹಾಗಾಗಿ 'ಲ್ಯುಟ್' ಪ್ರತ್ಯಯವು ನಪುಂಸಕಲಿಂಗದಲ್ಲಷ್ಟೇ ವಿಧಿಸಿದಂತಾಯಿತು. ಆದ್ದರಿಂದ ನಾರಾಯಣಶಬ್ದವು ನಪುಂಸಕಲಿಂಗವಾಗಬೇಕು ಪುಲ್ಲಿಂಗ ಹೇಗಾಯಿತು? ಎಂದರೆ 'ಲ್ಯುಟಃ ಟಿತ್‌ಕರಣ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಲ್ಯುಟ್‌ಪ್ರತ್ಯಯದಲ್ಲಿ ಲಕಾರ ಟಕಾರಗಳು ಇತ್ ಆದರೆ 'ಯು' ಮಾತ್ರ ಉಳಿಯುತ್ತದೆ. ಹಾಗಾಗಿ 'ಯು' ಎಂದಿಷ್ಟೇ ವಿಧಿಸಿದ್ದರೂ ಸಾಕಾಗಿತ್ತು. ಲ್ಯುಟ್ ಎಂದು ಟಿತ್ ಮಾಡಿದ್ದು ಏಕೆ? ಎಂದರೆ 'ಟಿಡ್ಢಾಣಞ್' ಎಂಬ ಸೂತ್ರದಿಂದ 'ಙೀಪ್' ಪ್ರತ್ಯಯವನ್ನು ವಿಧಿಸುವುದಕ್ಕಾಗಿ. ಒಂದು ವೇಳೆ ಲ್ಯುಡಂತವಾದದ್ದೆಲ್ಲಾ ನಪುಂಸಕಲಿಂಗವೆಂದೇ ಹೇಳುವುದಾದರೆ ಸ್ತ್ರೀತ್ವಕ್ಕೆ ನಿಮಿತ್ತಕವಾದ ಙೀಪ್‌ಪ್ರತ್ಯಯದ ವಿಧಾನ ವ್ಯರ್ಥವಾಗುತ್ತಿತ್ತು. ಇದರಿಂದ ಲ್ಯಡಂತವಾದ ಶಬ್ದಗಳು ಮೂರು ಲಿಂಗಗಳಲ್ಲಿಯೂ ಇವೆಯೆಂದು ತಿಳಿಯುತ್ತದೆ. ಆದ್ದರಿಂದ ನಾರಾಯಣಶಬ್ದವು ಪುಲ್ಲಿಂಗವಾಗಲು ಏನೂ ಬಾಧಕವಿಲ್ಲ.

'ಟಿಡ್ಢಾಣಞ್' ಸೂತ್ರದಲ್ಲಿ 'ಟಿತ್' ಶಬ್ದವೆಂದರೆ ಲ್ಯುಟ್ ಮಾತ್ರ ಏಕೆ ಆಗಬೇಕು? ಲಟ್ ಏಕೆ ಆಗುವುದಿಲ್ಲ? ಎಂದರೆ 'ಲಟ್' ಎಂಬುದನ್ನು ಟಿತ್ ಮಾಡಿದರ ಫಲವು ಆತ್ಮನೇ ಪದದಲ್ಲಿ 'ಏತ್ವ' ಮಾಡುವಿಕೆ ಎಂದು ತೀರ್ಮಾನವಾಗಿದೆ. ಆದರೆ ಲ್ಯುಟ್ ಎಂಬಲ್ಲಿ ಅಂತಹ ಏನೂ ಪ್ರಯೋಜನ ಕಂಡಿಲ್ಲವಾದ್ದರಿಂದ ಲ್ಯುಟ್ ಪ್ರತ್ಯಯವನ್ನೇ ಇಟ್ಟುಕೊಳ್ಳಬೇಕು. ಲಟ್ ಮೊದಲಾದವುಗಳನ್ನು ಅಲ್ಲ. ಇಷ್ಟು ಪಾಣಿನಿಯ ಅಭಿಪ್ರಾಯ. ಭಾಷ್ಯಕಾರನಾದ ಪತಂಜಲಿಯೂ ಇದನ್ನು ಸಮ್ಮತಿಸುತ್ತಾನೆ - 'ಭೂವಾದಯೋ ಧಾತವಃ' ಎಂಬ ಸೂತ್ರಭಾಷ್ಯದಲ್ಲಿ 'ಕೋಸಾವನುಮಾನೋ ನಾಮ' ಎಂದು ಹೇಳಿದ್ದಾನೆ. ಇಲ್ಲಿ ಅನುಮಾನ ಶಬ್ದವು ಕರಣಾರ್ಥಕವಾದ ಲ್ಯುಡಂತವಾದ ಪುಲ್ಲಿಂಗಶಬ್ದವಾಗಿದೆ.

, ವಾಸ್ತವಿಕವಾಗಿ 'ನಪುಂಸಕ' ಶಬ್ದವನ್ನು ಅನುವೃತ್ತಿ ಮಾಡಿಕೊಳ್ಳಬಾರದು ಎನ್ನಲು ಲ್ಯುಟ್ ಎಂಬುದನ್ನು 'ಟಿತ್' ಮಾಡಿದ್ದಾರೆಂಬ ಸಮಾಧಾನಕ್ಕಿಂತ ಸುಲಭವಾಗಿ ಹೀಗೆ ಹೇಳಬಹುದಿತ್ತು - ಕಾಶಿಕಾವೃತ್ತಿಯಲ್ಲಿ 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಲ್ಲಿ 'ನಪುಂಸಕ' ಶಬ್ದವನ್ನು ಅನುವೃತ್ತಿ ಮಾಡಿಕೊಂಡಿಲ್ಲ. ಮತ್ತು '-ಇಧ್ಭ್ರವ್ಯಶ್ಚನಃ' (ಸೌದೆ ಕಡಿಯುವ ಸಾಧನ) ಎಂದು ಪುಲ್ಲಿಂಗದ ಉದಾಹರಣೆಯನ್ನೇ ಈ ಸೂತ್ರಕ್ಕೆ ಕೊಟ್ಟಿದ್ದಾನೆ, ಈ ಎರಡು ಕಾರಣಗಳಿಂದ ಸುಲಭವಾಗಿ ಉತ್ತರಿಸಬಹುದಿತ್ತು. ಆದರೂ ಸಹ ಅನುವೃತ್ತಿ ಮಾಡಿಕೊಳ್ಳಬಾರದೆಂಬ ಈ ವಿಚಾರವನ್ನೇ ಟಿತ್‌ಕರಣದಿಂದಲೂ ತಿಳಿಸಿದ್ದರಿಂದ ದೋಷವಿಲ್ಲ. ಕಾಶಿಕಾಕಾರನಿಗೂ ಇದೇ ಮೂಲವಾಗಿದೆ.

ಅಥವಾ 'ಲ್ಯುಟ್' ಪ್ರತ್ಯಯಾಂತಶಬ್ದಗಳನ್ನು ಲೋಕರೂಢಿಗನುಸಾರಿಯಾಗಿ ಮೂರು ಲಿಂಗದಲ್ಲಿಯೂ ಉಪಯೋಗಿಸಬಹುದೆಂದು 'ಕೃತ್ಯಲ್ಯುಟೋ ಬಹುಲಮ್' ಎಂಬ ಸೂತ್ರವು ಹೇಳುತ್ತದೆ.

ಇಲ್ಲಿಯತನಕ ನಾರಾಯಣ ಶಬ್ದದ ಸಮಾಸವಿಚಾರ ಮಾಡಿದ್ದಾಯಿತು. ಪ್ರಕೃತ ನಾರಾಯಣ ಎಂಬಲ್ಲಿ ಣತ್ವ ಹೇಗೆ ಬಂತು? ಎಂಬುದನ್ನು ವಿಚಾರ ಮಾಡಬೇಕಾಗಿದೆ.

ಪ್ರಶ್ನೆ - ಭಾಷ್ಯದ ಮಂಗಳಶ್ಲೋಕದಲ್ಲಿ 'ನಾರಾಯಣಮ್' ಎಂದು ಹೇಳಿದ್ದಾರೆ. ಆದರೆ ವ್ಯಾಕರಣಸೂತ್ರಗಳು ಹೇಳುವಂತೆ 'ನಾರಾಯನಮ್' ಎಂದಾಗಬೇಕಲ್ಲವೆ?

ಉತ್ತರ - 'ರಷಾಭ್ಯಾಂ ನೋಣಃ ಸಮಾನಪದೇ' ಎಂಬ ಸೂತ್ರದಿಂದ ನಕಾರಕ್ಕೆ ಣತ್ವ ಬರುತ್ತದೆ. ರೇಫ ಅಥವಾ ಷ ಕಾರದ ಪರದಲ್ಲಿ ನಕಾರವಿರುವುದರಿಂದ ಣತ್ವ ಬರಲು ಯಾವ ತೊಂದರೆಯಿಲ್ಲ. ಆದ್ದರಿಂದ ನಾರಾಯಣ ಶಬ್ದಪ್ರಯೋಗವು ಸಾಧುವೇ ಆಗಿದೆ.

ಪ್ರಶ್ನೆ - ಣತ್ವ ಬರಲು ಪ್ರಸಕ್ತಿಯಿಲ್ಲ. ಆದೇ ಸೂತ್ರ 'ಸಮಾನಪದೇ' 'ಒಂದೇ ಪದವಾಗಿರಬೇಕು' ಎಂದು ನಿಯಮ ಮಾಡುತ್ತಿದೆ. 'ನಾರಾಯಣ' ಎಂಬಲ್ಲಿ ನಾರ ಮತ್ತು ಅಯನ ಎಂಬ ಎರಡು ಪದಗಳಿರುವುದರಿಂದ ಸಮಾನಪದವಾಗಿಲ್ಲ. ಣತ್ವಕ್ಕೆ ನಿಮಿತ್ತವಾದ ನಿಮಿತ್ತನಿಮಿತ್ತಿಗಳಿಗೆ ಸಾಮಾನಾಧಿಕರಣ್ಯವಿಲ್ಲ. ಆದ್ದರಿಂದ 'ರಷಾಭ್ಯಾಂ ನೋಣಃ ಸಮಾನಪದೇ' ಎಂಬ ಸೂತ್ರದಿಂದ ಣತ್ವವನ್ನು ಹೇಗೆ ಹೇಳುತ್ತೀರಿ?

ಉತ್ತರ - ನಾರಾಯಣಶಬ್ದವು ಸಮಾಸ ಹೊಂದಿದ ಒಂದೇ ಪದ ಹೊರತು ಎರಡು ಪದವಾಗಿಲ್ಲ. ನಾರ ಮತ್ತು ಅಯನ ಎಂಬ ಎರಡು ಪದಗಳು ಸಮಾಸ ಹೊಂದಿದ ಮೇಲೆ ಒಂದೇ ಪದವಾಗುತ್ತದೆ. ಏಕೆಂದರೆ 'ಏಕಪದ್ಯಮೈಕಸ್ವರ್ಯಮೇಕವಿಭಕ್ತಿತ್ವಮ್ ಸಮಾಸಪ್ರಯೋಜನಮ್' ಎಂದು ವ್ಯಾಕರಣ ನಿಯಮ. ಈ ನಿಯಮದಿಂದ ಸಮಾಸವು ಭಿನ್ನಪದಗಳನ್ನು ಏಕಪದವನ್ನಾಗಿ ಭಿನ್ನಸ್ವರಗಳನ್ನು ಏಕವಿಭಕ್ತಿಯನ್ನಾಗಿ ಮಾಡುತ್ತದೆಂದು ತಿಳಿಯುತ್ತದೆ. ಆದ್ದರಿಂದ ನಾರಾಯಣಶಬ್ದವು ಸಮಾಸ ಹೊಂದಿದ ಒಂದೇ ಪದವಾಗಿದೆ. 'ರಷಾಭ್ಯಾಂ ನೋ ಣಃ ಸಮಾನಪದೇ' ಎಂಬ ಸೂತ್ರದಿಂದ ಣತ್ವ ಬರಲು ಯಾವ ಬಾಧಕವಿಲ್ಲ.

ಪ್ರಶ್ನೆ - ಅಖಂಡವಾದ ಒಂದೇ ಪದವು ಸಮಾನಪದ ಎನಿಸುತ್ತದೆ. ಅಖಂಡಪದವಲ್ಲದ ಸಮಸ್ತಪದವನ್ನು ವ್ಯಾವೃತ್ತಿಗೊಳಿಸುವುದಕ್ಕಾಗಿಯೇ 'ಸಮಾನ'

ಎಂಬ ವಿಶೇಷಣವನ್ನು ಸೂತ್ರದಲ್ಲಿ ನೀಡಲಾಗಿದೆ. ಏಕೆಂದರೆ 'ಪದೇ' ಎಂದಷ್ಟೇ ಹೇಳಿದರೂ ಏಕಪದವೆಂದು ತಿಳಿಯುತ್ತದೆ. ಆದರೂ ಸಮಾನ ಎಂಬ ವಿಶೇಷಣವನ್ನು ಕೊಟ್ಟಿದ್ದರಿಂದ ಅಖಂಡಪದವೇ ಆಗಿರಬೇಕು, ಯಾವ ಕಾಲದಲ್ಲಿಯೂ ಭಿನ್ನಪದವಾಗಿರಬಾರದೆಂದು ತಿಳಿಯುತ್ತದೆ.

'ನಾರಾಯಣ' ಪದವು ಸಮಾಸ ಹೊಂದಿದ ಪದವಾದ್ದರಿಂದ ಅಖಂಡಪದವಾಗಿಲ್ಲ. ಸಮಾಸ ಹೊಂದಿದ ಇಂತಹ ಪದಗಳಲ್ಲಿರುವ ನಕಾರಕ್ಕೆ 'ರಷಾಭ್ಯಾಂ ನೋಣಃ ಸಮಾನಪದೇ' ಎಂಬ ಸೂತ್ರವು ಣತ್ವವನ್ನು ಹೇಳುವುದಿಲ್ಲ.

ಒಂದುವೇಳೆ ಸಮಾಸಹೊಂದಿದ ಪದಗಳಲ್ಲಿರುವ ನಕಾರಕ್ಕೂ ಣತ್ವ ಬರುವುದಾದರೆ 'ದುರ್ಣಾಮ' 'ರಾಮಣಾಮ' ಇತ್ಯಾದಿ ಸ್ಥಳಗಳಲ್ಲಿಯೂ ಣತ್ವವು ಬರಬೇಕಾದೀತು. ಆದರೆ 'ದುರ್ಣಾಮ' 'ರಾಮಣಾಮ' ಇತ್ಯಾದಿ ಪ್ರಯೋಗಗಳು ಎಲ್ಲಿಯೂ ಕಂಡಿಲ್ಲ. ಅದರಂತೆ 'ನಾರಾಯಣ' ಪದದಲ್ಲಿಯೂ ಣತ್ವ ಬರುವುದಿಲ್ಲ.

ಉತ್ತರ - 'ಪೂರ್ವಪದಾತ್‌ಸಂಜ್ಞಾಯಾಮಗಃ' ಎಂಬ ಸೂತ್ರದಿಂದ ಣತ್ವ ಬರುತ್ತದೆ. ಈ ಪೂರ್ವಪದದಲ್ಲಿರುವ ನಿಮಿತ್ತದ ದೆಸೆಯಿಂದ ಗಕಾರದ ತಡಯಿಲ್ಲದ ನಕಾರಕ್ಕೆ ಣತ್ವ ಬರುತ್ತದೆ. ಸಂಜ್ಞಾವಿಷಯದಲ್ಲಿ ಮಾತ್ರವೆಂದು ಈ ಸೂತ್ರದ ಅರ್ಥ. ಉದಾಹರಣೆ : - 'ಶೂರ್ಪಣಖಾ' ಎಂಬಲ್ಲಿ ನಿಮಿತ್ತವಾದ ರೇಫವು 'ಶೂರ್ಪ' ಎಂಬ ಪೂರ್ವಪದದಲ್ಲಿದೆ; ಆದ್ದರಿಂದ 'ಗ' ಕಾರದ ತಡೆಯಿಲ್ಲದ ಉತ್ತರಪದವಾದ 'ನಖಾ' ಎಂಬಲ್ಲಿನ ನಕಾರಕ್ಕೆ ಣತ್ವ ಬಂದರೆ 'ಶೂರ್ಪಣಖಾ' ಎಂದಾಗುತ್ತದೆ. ಅದರಂತೆ 'ನಾರಾಯಣ' ಎಂಬಲ್ಲಿಯೂ ಯಾವ ವಿಘ್ನವಿಲ್ಲದೆ ಣತ್ವ ಬಂದೇ ಬರುತ್ತದೆ.

ವಸ್ತುತಸ್ತು 'ರಾಮನಾಮ' ಎಂಬಲ್ಲಿ ಭಿನ್ನಪದವಿರುವುದರಿಂದ ಣತ್ವವು ಬರುತ್ತಿಲ್ಲ. ಆದರೆ 'ಶೂರ್ಪಣಖಾ' ಎಂಬಲ್ಲಿ ಭಿನ್ನಪದವಿದ್ದರೂ ಣತ್ವವು ಬರುತ್ತದೆ. ಈ ವ್ಯತ್ಯಾಸಕ್ಕೆ ಕಾರಣವೇನೆಂಬುದನ್ನು ವಿಮರ್ಶಿಸಬೇಕು. 'ಶೂರ್ಪಣಖಾ' ಎಂಬುದು ರೂಢಪದ. ರಾಮನಾಮ ಎಂಬುದು ಯೋಗಪದವಾದ್ದರಿಂದ ಣತ್ವವು ಬರುವುದಿಲ್ಲ ಪ್ರಕೃತ ನಾರಾಯಣಶಬ್ದವು ರೂಢಪದವಾದ್ದರಿಂದ ಣತ್ವವು ಬರುತ್ತದೆಂದು ತಿಳಿಯಬೇಕು. ಈ ಸೂಕ್ಷ್ಮವಿಷಯವನ್ನು 'ಪೂರ್ವಪದಾತ್‌ಸಂಜ್ಞಾಯಾಮಗಃ' ಎಂಬ ಸೂತ್ರವು ಹೇಳುತ್ತದೆ.

ಪ್ರಾಸಂಗಿಕ ವಿಚಾರ - ನಾರಾಯಣ ಶಬ್ದವು ರೂಢಪದವೆಂದು ಒಪ್ಪಿದಲ್ಲಿ ಮಾತ್ರ ಣತ್ವವನ್ನು ಹೇಳಲು ಸಾಧ್ಯ. ಆದ್ದರಿಂದಲೇ ಅಪ್ಪಯ್ಯದೀಕ್ಷಿತರು 'ಣತ್ವಂ ಪರಂ ಬಾಧತೇ'

ಎಂದು ಹೇಳುತ್ತಾರೆ. ವಿಷ್ಣುಸಹಸ್ರನಾಮದಲ್ಲಿನ ಎಲ್ಲ ನಾಮಗಳನ್ನು ಶಿವಪರವಾಗಿಯೇ ಅಪ್ಪಯ್ಯದೀಕ್ಷಿತರು ಸಮನ್ವಯಮಾಡುತ್ತಾರೆ. ಆದರೆ ನಾರಾಯಣ ಶಬ್ದದ ಸಮನ್ವಯವನ್ನು ಯೋಗವೃತ್ತಿಯಿಂದ ಮಾಡಲು ಸೋತಿದ್ದಾರೆ. ಸೋತು ಅವರೇ ಹೇಳಿದ ಮಾತು - 'ಣತ್ವಂ ಪರಂ ಬಾಧತೇ' ಎಂದು ಶಿವನಲ್ಲಿ ನಾರಾಯಣಶಬ್ದದ ರೂಢಿಯಂತೂ ಇಲ್ಲ. ಇನ್ನು ಯೋಗವನ್ನು ಹೇಳಬೇಕು. ಆದರೆ ಯೋಗಾರ್ಥವನ್ನು ವಿವಕ್ಷಿಸಿದಾಗ ಣತ್ವವು ಬಾಧಿಸುತ್ತದೆ. ಆದ್ದರಿಂದ ನನ್ನಿಂದ ನಾರಾಯಣ ಶಬ್ದದ ಸಮನ್ವಯವನ್ನು ಮಾಡಲಾಗುತ್ತಿಲ್ಲ ಎನ್ನುತ್ತಾರೆ ದೀಕ್ಷಿತರು.

'ನಾರಾಯಣಃ' ಇದು ಪುಲ್ಲಿಂಗವೇ?

ಪ್ರಶ್ನೆ - ನಾರಾಯಣಶಬ್ದವು ಪುಲ್ಲಿಂಗವಲ್ಲ. ಕೋಶ ಮತ್ತು ವ್ಯಾಕರಣದ ಪ್ರಕಾರ ನಪುಂಸಕಲಿಂಗವಾಗಬೇಕು. ಏಕೆಂದರೆ ಗಮನಾರ್ಥದಲ್ಲಿ 'ಅಯ' ಧಾತುವಿದೆ. ಇದಕ್ಕೆ 'ಕರಣಾಧಿಕರಣಯೋಶ್ಚ' ಎಂಬ ಸೂತ್ರವು ಅಧಿಕರಣಾರ್ಥದಲ್ಲಿ 'ಲ್ಯುಟ್' ಪ್ರತ್ಯಯವನ್ನು ವಿಧಿಸುತ್ತಿದೆ. ಈ ಸೂತ್ರದಲ್ಲಿ 'ನಪುಂಸಕೇ ಭಾವೇ ಕ್ತಃ' ಎಂಬ ಸೂತ್ರದಿಂದ 'ನಪುಂಸಕೇ' ಎಂಬುದನ್ನು ಅನುವೃತ್ತಿ ಮಾಡಬೇಕು. 'ಲ್ಯುಟ್' ಪ್ರತ್ಯಯವಾದರೂ ನಪುಂಸಕಲಿಂಗದಲ್ಲಷ್ಟೇ ಬರುವುದರಂದ ನಾರಾಯಣಶಬ್ದವು ನಪುಂಸಕಲಿಂಗವಾಗಬೇಕಲ್ಲವೇ?

ಮತ್ತು ಅಮರಕೋಶದಲ್ಲಿ 'ಯದಾನಂತರ್ಯಮಕರ್ತರಿ' 'ಕರ್ತೃ' ಎಂಬ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ 'ಅನ' ಪ್ರತ್ಯಯ ಬರುತ್ತದೆ. ತದಂತವಾದ ಶಬ್ದವು ತೃತೀಯಾವಿಭಕ್ತಿಯನ್ನು ಮತ್ತು ನಪುಂಸಕಲಿಂಗವನ್ನು ಹೊಂದುತ್ತದೆಂದು ಹೇಳಲಾಗಿದೆ. ಆದ್ದರಿಂದ 'ಸಾಧ್ಯತೇಽನೇನ ಇತಿ ಸಾಧನಮ್' ಇತ್ಯಾದಿ ಸ್ಥಳದಲ್ಲಿ ನಪುಂಸಕಲಿಂಗವೇ ಬಂದದ್ದು ಕಂಡಿದೆ. ಹೇಗೆ ಸಾಧನಶಬ್ದವು ನಿತ್ಯನಪುಂಸಕಶಬ್ದವೋ ಅದರಂತೆ ನಾರಾಯಣಶಬ್ದವೂ ನಿತ್ಯನಪುಂಸಕಲಿಂಗವಾಗಬೇಕು. 'ಅಯನ' ಶಬ್ದಕ್ಕೆ ಅಧಿಕರಣಸಾಧನವೆಂಬರ್ಥವು ಪ್ರಸಿದ್ಧವೇ ಆಗಿದೆ. ಹೀಗಿರುವಾಗ 'ನಾರಾಯಣಃ' ಎಂದು ಪುಲ್ಲಿಂಗಪ್ರಯೋಗವನ್ನು ಹೇಗೆ ಮಾಡಿದಿರಿ? 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಲ್ಲಿ 'ನಪುಂಸಕೇ' ಎಂಬುದು ಅನುವೃತ್ತಿಯಾಗುವುದಿಲ್ಲ. ಏಕೆಂದರೆ 'ಸನ್ನಿಯೋಗವಿಶಿಷ್ಟಾನಾಂ ಸಹ ವಾ ಪ್ರವೃತ್ತಿಃ ಸಹ ವಾ ನಿವೃತ್ತಿಃ' ಜೊತೆ ಜೊತೆಯಾಗಿರುವ ಪದಗಳು ಮತ್ತೊಂದೆಡೆ ಅನುವೃತ್ತವಾಗುವಾಗ ಜೊತೆಯಾಗಿಯೇ ಅನುವೃತ್ತವಾಗುತ್ತವೆ. ಆ ಎರಡು ಪದಗಳಲ್ಲಿ ಒಂದನ್ನು ಅನುವೃತ್ತವಾಗುವುದು

ಬೇಡವೆಂದರೆ ಜೊತೆಯಾಗಿಯೇ ಅನುವೃತ್ತವಾಗುವುದಿಲ್ಲ. ಪ್ರಕೃತ ಸೂತ್ರದಲ್ಲಿ 'ನಪುಂಸಕೇ ಭಾವೇ' ಎಂಬೆರಡು ಪದಗಳಿವೆ. ಇವೆರಡರಲ್ಲಿ ಯಾವ ಒಂದು ಪದವನ್ನೂ ಅನುವೃತ್ತವಾಗುವುದು ಬೇಡವೆಂದರೆ ಜೊತೆಯಾಗಿಯೇ ಅನುವೃತ್ತವಾಗುವುದಿಲ್ಲ. ನೀವು 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಲ್ಲಿ 'ಭಾವೇ' ಎಂಬುದನ್ನು ಅನುವೃತ್ತಿ ಮಾಡುವುದಿಲ್ಲವೆಂದರೆ ಅದರ ಜೊತೆಗಿರುವ 'ನಪುಂಸಕೇ' ಎಂಬುದೂ ಸಹ ಅನುವೃತ್ತವಾಗುವುದಿಲ್ಲ.

ಉತ್ತರ - ಹಾಗಾದರೆ ಸಾಧನಾದಿಶಬ್ದಗಳಲ್ಲಿಯೂ 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಿಂದ ನಿತ್ಯನಪುಂಸಕತ್ವವು ಬಾರದಿರಬೇಕಾದೀತು. ನಿಯತಲಿಂಗವಿಲ್ಲದೇ ಪುಲ್ಲಿಂಗಾದಿಗಳಲ್ಲಿಯೂ ಸಾಧನಾದಿಶಬ್ದಗಳ ಪ್ರಯೋಗವನ್ನು ಮಾಡಬೇಕಾದೀತು. ಆದ್ದರಿಂದ ನಿಮ್ಮ ಸಮರ್ಥನೆ ಅಸಾಧುವಾಗಿದೆ.

ಅಷ್ಟೇ ಅಲ್ಲದೇ, 'ಯದಾನಂತರ್ಯಮಕರ್ತರಿ' ಎಂಬ ಕೋಶವಚನವೂ ವಿಶೇಷ ಪರಿಭಾಷೆಯನ್ನಾದರೂ ಕಡ್ಡಾಯವಾಗಿ ಅನುಸರಿಸಬೇಕಾಗಿಲ್ಲವೆಂದು ವ್ಯಾಕರಣದಲ್ಲೇ ಹೇಳಿದೆ. ಈ ಎಲ್ಲ ಆಧಾರಗಳಿಂದ 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಲ್ಲಿ 'ನಪುಂಸಕೇ' ಎಂಬುದನ್ನು ಅನುವೃತ್ತಿ ಮಾಡಬೇಕೆಂದು ತಿಳಿಯುತ್ತದೆ. ಆದ್ದರಿಂದ ನಾರಾಯಣ ಶಬ್ದವು ಪುಲ್ಲಿಂಗವಾಗಲು ಸಾಧ್ಯವಿಲ್ಲ. ಇಷ್ಟು ಆಕ್ಷೇಪ.

ಸಮಾಧಾನ - ಈ ಆಕ್ಷೇಪಕ್ಕೆ ಹೀಗೆ ಉತ್ತರ - 'ಲ್ಯುಟ್' ಪ್ರತ್ಯಯದಲ್ಲಿ ಲಕಾರ ಟಕಾರಗಳು ಇತ್ ಆದರೆ 'ಯು' ಎಂದಷ್ಟೇ ಉಳಿಯುತ್ತದೆ. ಪಾಣಿನಿಯು 'ಯು' ಎಂದಷ್ಟೇ ಹೇಳಿದ್ದರೂ ಸಾಕಾಗಿತ್ತು. ಆದರೂ 'ಲ್ಯುಟ್' ಎಂದು ಏಕೆ ಹೇಳಿದ? ಎಂದರೆ 'ಟಿಡ್ಢಾಣಞ್ದ್ವಯಸಚ್ದಘ್ನಚ್ಮಾತ್ರಚ್ತಯಪ್ಠಕ್ಠಞ್-ಕಞ್ಕ್ವರಪಃ' ಎಂಬ ಸೂತ್ರವು ಟಿತ್ತಾದ ಪ್ರತ್ಯಯಗಳಿಗೆ 'ಙೀಪ್' ಪ್ರತ್ಯಯವನ್ನು ಹೇಳುತ್ತದೆ. ಒಂದು ವೇಳೆ ಲ್ಯುಡಂತಶಬ್ದಗಳೆಲ್ಲವೂ ನಪುಂಸಕಲಿಂಗವೇ ಆದರೆ ಸ್ತ್ರೀತ್ವಕ್ಕೆ ನಿಮಿತ್ತವಾದ ಙೀಪ್ಪ್ರತ್ಯಯವನ್ನು ಈ ಸೂತ್ರದಲ್ಲಿ ವಿಧಿಸಬೇಕಾಗಿರಲಿಲ್ಲ. ಇದರಿಂದ ಲ್ಯುಡಂತವಾದ ಶಬ್ದಗಳು ಮೂರು ಲಿಂಗಗಳಲ್ಲಿಯೂ ಇರುತ್ತವೆಂದು ತಿಳಿಯುತ್ತದೆ. ಆದ್ದರಿಂದ ನಾರಾಯಣಶಬ್ದ ಪುಲ್ಲಿಂಗವಾಗಲು ಏನೂ ತೊಂದರೆ ಇಲ್ಲ.

ಪ್ರಶ್ನೆ - 'ಟಿಡ್ಢಾಣಞ್' ಇತ್ಯಾದಿ ಸೂತ್ರದಲ್ಲಿ ಟಿತ್ ಪ್ರತ್ಯಯವೆಂದರೆ 'ಲ್ಯುಟ್' ಪ್ರತ್ಯಯವೇ ಏಕೆ? 'ಲಟ್' ಎಂಬುದನ್ನು ಟಿತ್ ಮಾಡಿದ್ದರಿಂದ ಪ್ರತ್ಯಯದ ಅಂತಿಮಸ್ವರಾಕ್ಷರವು ಏಕಾರವಾಗಿ ಪರಿಣಾಮವಾಗುತ್ತದೆಂಬ ಪ್ರಯೋಜನವು

ಈಗಾಗಲೇ ಸಿದ್ಧವಾಗಿದೆ. ಆದರೆ 'ಲ್ಯುಟ್' ಎಂಬಲ್ಲಿ ಅಂತಹ ಬೇರೆ ಪ್ರಯೋಜನಗಳು ಕಂಡಿಲ್ಲ. ಆದ್ದರಿಂದ 'ಲ್ಯುಟ್' ಪ್ರತ್ಯಯವನ್ನೇ ಇಟ್ಟುಕೊಳ್ಳಬೇಕು. ಹೊರತು ಲಟ್ ಮೊದಲಾದ ಪ್ರತ್ಯಯಗಳನ್ನು ಇಟ್ಟುಕೊಳ್ಳಬಾರದೆಂದು ಪಾಣಿನಿಯ ಅಭಿಪ್ರಾಯ. ಭಾಷ್ಯಕಾರನಾದ ಪತಂಜಲಿಯೂ ಸಹ ಇದನ್ನು ಸಮ್ಮತಿಸುತ್ತಾನೆ. 'ಭೂವಾದಯೋ ಧಾತವಃ' ಎಂಬ ಸೂತ್ರದ ಭಾಷ್ಯದಲ್ಲಿ 'ಕೋಸಾವನುಮಾನೋ ನಾಮ' ಎಂದು ಹೇಳಿದ್ದಾನೆ. ಅನುಮಾನಶಬ್ದವು ಕರಣಾರ್ಥದಲ್ಲಿರುವ ಲ್ಯುಡಂತಶಬ್ದ. ಆದರೂ 'ಅನುಮಾನಃ' ಎಂದು ಪುಲ್ಲಿಂಗದಲ್ಲಿ ಬಳಸಿದ್ದಾನೆ.

ಇಲ್ಲಿ ಸುಲಭ ಸಮಾಧಾನವನ್ನು ಹೀಗೆ ಹೇಳಬಹುದಿತ್ತು. - ಕಾಶಿಕಾವೃತ್ತಿಯಲ್ಲಿ 'ನಪುಂಸಕೇ' ಎಂಬುದನ್ನು ಅನುವೃತ್ತಿ ಮಾಡಿಕೊಂಡಿಲ್ಲ. ಅಷ್ಟೇ ಅಲ್ಲದೇ, 'ಇಧ್ಮಪ್ರವ್ರಶ್ಚನಃ' (ಸೌದೆ ಕಡಿಯುವ ಸಾಧನ) ಎಂಬ ಪುಲ್ಲಿಂಗ ಶಬ್ದದ ಉದಾಹರಣೆಯನ್ನೂ 'ಕರಣಾಧಿಕರಣಯೋಶ್ಚ' ಎಂಬ ಸೂತ್ರದಲ್ಲಿ ನೀಡಿದ್ದಾನೆ. ಈ ಎರಡು ಕಾರಣಗಳನ್ನು ನೀಡಿ ಸುಲಭವಾಗಿ ಉತ್ತರಿಸಬಹುದಿತ್ತು. ಆದರೂ ಅನುವೃತ್ತಿ ಮಾಡಿಕೊಳ್ಳಬಾರದೆಂಬ ವಿಷಯದಲ್ಲಿ ಟಿತ್‌ಕರಣವೂ ಕಾರಣವಾಗಿದೆಯೆಂದು ತಿಳಿಯುತ್ತದೆ. ಸೂತ್ರಕಾರನ ಸಮ್ಮತಿಯನ್ನೂ ಇದರಿಂದ ಸೂಚಿಸಿದಂತಾಗಿದೆ. ಮತ್ತು ಕಾಶಿಕಾಕಾರನ ಸಮ್ಮತಿಯನ್ನು ತಿಳಿಸಿದಂತಾಗಿದೆ.

ಅಥವಾ ಲೋಕರೂಢಿಗೆ ಅನುಸಾರಿಯಾಗಿ ಲ್ಯುಡಂತಶಬ್ದಗಳನ್ನು ಮೂರು ಲಿಂಗಗಳಲ್ಲಿಯೂ ಬಳಸಬಹುದೆಂದು 'ಕೃತ್ಯಲ್ಯುಟೋ ಬಹುಲಮ್' ಎಂಬ ಸೂತ್ರವು ಹೇಳಿದೆ. ಈ ಸೂತ್ರವನ್ನು ಆಶ್ರಯಿಸಿದರೆ ಸುಲಭವಾಗಿ ತ್ರಿಲಿಂಗತ್ವವು ಸಿದ್ಧವಾಗುತ್ತದೆ. ಆದ್ದರಿಂದಲೇ 'ಕರಣಮ್' 'ಕರಣೇ' 'ಪ್ರಮಾಣೇ' ಇವೇ ಮೊದಲಾದ ವಿದ್ವತ್ ಪ್ರಯೋಗಗಳನ್ನು ಅನೇಕ ಕಡೆ ನಾವು ಕಾಣುತ್ತೇವೆ.

ಇಲ್ಲಿಗೆ 'ನಾರಾಯಣ' ಶಬ್ದದ ಪುಲ್ಲಿಂಗಪ್ರಯೋಗದ ಸಮರ್ಥನೆ ಮುಗಿಯಿತು. ಮತ್ತು 'ಅನರಾಯಣ' ಎಂದೂ ನಾರಾಯನಮ್ ಎಂದೂ ಆಗುವುದಿಲ್ಲ 'ನಾರಾಯಣಃ' ಎಂದೇ ಆಗುತ್ತದೆಂದು ನಿರ್ಣಯವಾಯಿತು.

ಚಂದ್ರಿಕೆಯಲ್ಲಿ 'ನಗನಾಕಾದಿವತ್' ಎಂಬ ದೃಷ್ಟಾಂತವನ್ನು ಟೀಕೆಯಲ್ಲಿ ನೀಡಿದ್ದು ತಪ್ಪು ಎಂದಿದೆ. ಆದರೆ ಟೀಕೆಯಲ್ಲಿ ನೀಡಿದ ದೃಷ್ಟಾಂತ ಸಮಂಜಸವೇ ಆಗಿದೆ. ಹೇಗೆಂದು ವಿಚಾರ ಮಾಡೋಣ - 'ನಗೋಪ್ರಾಣಷ್ವನ್ಯತರಸ್ಯಾಮ್' ಎಂಬ ಸೂತ್ರದಲ್ಲಿ ಮತ್ತು 'ನಭ್ರಾಣ್' ಇತ್ಯಾದಿ ಸೂತ್ರದಲ್ಲಿ 'ನಾರ'ಶಬ್ದದಲ್ಲಿರುವ

ನ ಕಾರಕ್ಕೆ ಲೋಪ ಆಗುವುದಿಲ್ಲವೆಂದು ಹೇಳಿಲ್ಲ. ಆದ್ದರಿಂದಲೇ ನಗ ನಾಕಾದಿ ಶಬ್ದಗಳು ದೃಷ್ಟಾಂತಗಳಾಗುತ್ತವೆ. ಒಂದು ವೇಳೆ ಈ ಎರಡು ಸೂತ್ರಗಳಲ್ಲಿ ಲೋಪ ಆಗುವುದಿಲ್ಲವೆಂದು ಹೇಳಿದ್ದರೆ 'ನಗನಾಕಾದಿವತ್' ಎಂಬ ದೃಷ್ಟಾಂತದ ಮಾತು ತಪ್ಪಾಗುತ್ತಿತ್ತು. 'ನಾರ' ಎಂಬಲ್ಲಿ ಮೇಲಿನ ಎರಡು ಸೂತ್ರಗಳಿಂದ ನಕಾರಕ್ಕೆ ಲೋಪ ಬರುವುದಿಲ್ಲವೆಂದು ಹೇಳಬೇಕಿತ್ತು. ಆದರೆ 'ನಾರ' ಎಂಬಲ್ಲಿನ ನಕಾರಕ್ಕೆ ಲೋಪ ಬರುವುದಿಲ್ಲವೆಂದು ಹೇಳದ ಕಾರಣ 'ನಗನಾಕಾದಿವತ್' ಎಂದು ದೃಷ್ಟಾಂತ ನೀಡಿದ್ದು ಸಮಂಜಸವೇ ಆಗಿದೆ. ಹೀಗಿರುವಾಗ ದೃಷ್ಟಾಂತ ನೀಡಿದ್ದು ಸರಿಯಲ್ಲವೆಂದು ಚಂದ್ರಿಕೆಯಲ್ಲಿ ಹೇಗೆ ಆಕ್ಷೇಪಿಸಿದರು?

ಗಮನಿಸಬೇಕಾದ ಮತ್ತೊಂದು ಅಂಶ - 'ನಗೋಪ್ರಾಣಿಷ್ವನ್ಯತರಸ್ಯಾಮ್' ಎಂಬ ಸೂತ್ರದಲ್ಲಾಗಲೀ 'ನಾಭ್ರಾಟ್' ಇತ್ಯಾದಿ ಸೂತ್ರದಲ್ಲಾಗಲೀ ನೀವು ಹೇಳುವಂತೆ ನಾರ ಎಂಬಲ್ಲಿರುವ ನಕಾರಕ್ಕೂ ಲೋಪಾಭಾವ ಹೇಳಿದ್ದರೆ, ಆ ಒಂದು ಸೂತ್ರವನ್ನು ಮಾತ್ರ ಟೀಕೆಯಲ್ಲಿ ಉಲ್ಲೇಖಿಸಬೇಕಿತ್ತಲ್ಲವೇ? 'ನಗನಾಕಾದಿವತ್' ಎಂದು ಎರಡು ಸೂತ್ರಗಳನ್ನು ಉಲ್ಲೇಖಿಸುವ ಅವಶ್ಯಕತೆ ಏನಿತ್ತು?

ಆದ್ದರಿಂದ ನಗನಾಕಾದಿವತ್ ಎಂಬ ವಚನದಿಂದ ಮತ್ತು ಎರಡು ಸೂತ್ರಗಳನ್ನು ಉಲ್ಲೇಖಿಸಿರುವುದೆಂಬ ಎರಡು ಕಾರಣಗಳಿಂದ 'ನಾರ' ಎಂಬಲ್ಲಿ ನಲೋಪಾಭಾವವನ್ನು ಸೂತ್ರದಲ್ಲಿ ಹೇಳಿಲ್ಲವೆಂದು ನಿರ್ಣಯವಾಗುತ್ತದೆ. ಆದ್ದರಿಂದಲೇ ದೃಷ್ಟಾಂತವಚನವೂ ಸಮಂಜಸವಾಗುತ್ತದೆ.

ಮತ್ತು 'ನಗೋಪ್ರಾಣಿಷ್ವನ್ಯತರಸ್ಯಾಮ್' ಎಂಬ ಸೂತ್ರದಲ್ಲಿ ಮತ್ತು 'ನಭ್ರಾಟ್' ಇತ್ಯಾದಿ ಸೂತ್ರದಲ್ಲಿ ನಗ ಮತ್ತು ನಾಕಶಬ್ದಗಳ ನಕಾರ ಮಾತ್ರ ಲೋಪವಾಗುವುದಿಲ್ಲವೆಂದು ಹೇಳಲಾಗಿದೆ. ಹೊರತು 'ನಾರ' ಎಂಬಲ್ಲಿನ ನಕಾರಕ್ಕೆ ಲೋಪವಾಗುವುದಿಲ್ಲವೆಂದು ಹೇಳುತ್ತಿಲ್ಲ. ಆದ್ದರಿಂದ ಟೀಕೆಯಲ್ಲಿ 'ನಗನಾಕಾದಿವತ್' ಎಂದು ದೃಷ್ಟಾಂತ ನೀಡಿದ್ದು ಹೇಗೆ ಸರಿ? ಎಂದು ಚಂದ್ರಿಕೆಯಲ್ಲಿ ಆಕ್ಷೇಪ ಮಾಡಲಾಗಿದೆ. ಇದರಿಂದ ನಲೋಪಾಭಾವ ವಿಷಯದಲ್ಲಿ ಮಾತ್ರ ದೃಷ್ಟಾಂತ ನೀಡಬೇಕೆಂದು ಚಂದ್ರಿಕಾಚಾರ್ಯರು ಆಗ್ರಹಿಸಿದಂತಾಯಿತು. ಇಲ್ಲಿ ನಿಮಗೆ ಎರಡು ಪ್ರಶ್ನೆ ಕೇಳುತ್ತೇವೆ-

೧)'ನಾಕಾದಿಶಬ್ದವತ್' ಎಂದಷ್ಟೇ ಟೀಕೆಯಲ್ಲಿ ಹೇಳಿದ್ದರೆ ಸಾಕಾಗಿತ್ತು. ವಿಕಲ್ಪವಾಗಿ ನಲೋಪ ಹೊಂದುವ ನಗ ಶಬ್ದದ ಉದಾಹರಣೆ ಏಕೆ ಬೇಕಿತ್ತು ?

೨)'ನಭ್ರಾಟ್' ಇತ್ಯಾದಿ ಸೂತ್ರದಲ್ಲಿ ಮೊದಲು ಉಪಸ್ಥಿತವಾಗುವ 'ನಭ್ರಾಟ್' ಎಂಬ ಶಬ್ದವನ್ನೇ ದೃಷ್ಟಾಂತವನ್ನಾಗಿ ಹೇಳಬಹುದಿತ್ತು. ಅದನ್ನು ಬಿಟ್ಟುಕೊನೆಯಲ್ಲಿರುವ ನಾಕಶಬ್ದದ ಉದಾಹರಣೆಯನ್ನೇ ಏಕೆ ನೀಡಿದರು?

ಈ ಎರಡು ಪ್ರಶ್ನೆಗಳಿಗೆ ನೀವು ಹೀಗೆ ಉತ್ತರಿಸಬೇಕು - ಸೂತ್ರದಲ್ಲಿ 'ಡ' ಪ್ರತ್ಯಯವನ್ನು ಹೇಳಿಲ್ಲ. ಆದರೂ ನಿಪಾತ ಮಾಡಿ ಅದನ್ನು ಇಟ್ಟುಕೊಳ್ಳಬೇಕೆಂದು ತಿಳಿಸಲು ನಗ ಶಬ್ದವನ್ನು ಟೀಕೆಯಲ್ಲಿ ಉದಾಹರಿಸಿದ್ದಾರೆ. ಆದ್ದರಿಂದ ಸೂತ್ರದಲ್ಲಿ ಹೇಳದಿದ್ದರೂ 'ಡ'ಪ್ರತ್ಯಯವನ್ನು ನಗ ಶಬ್ದದಲ್ಲಿ ಹೇಗೆ ಹೇಳಬೇಕೋ, ಆದರಂತೆ 'ನಾರ' ಎಂಬಲ್ಲಿಯೂ 'ಡ'ಪ್ರತ್ಯಯವನ್ನು ಹೇಳಬೇಕೆಂದು ನಗ ಶಬ್ದದ ಉದಾಹರಣೆ ಸಾರ್ಥಕವಾಗಿದೆ. ಆದರಂತೆ ನಾಕಶಬ್ದದ ಉದಾಹರಣೆಯೂ ಸಾರ್ಥಕವಾಗಿದೆ. ಹೇಗಂದರೆ 'ನಾಕ' ಎಂಬಲ್ಲಿ ನಲೋಪವು ನಿತ್ಯವಾಗಿ ಬರುತ್ತದೆಂದು ಸೂತ್ರದಲ್ಲಿ ಕಂಠತಃ ಹೇಳದಿದ್ದರೂ ನಿಪಾತ ಮಾಡಿದ್ದರಿಂದ ಇಟ್ಟುಕೊಳ್ಳಬೇಕು. ತತ್‌ಪ್ರಯುಕ್ತವಾದ 'ನುಟ್' ಆಗಮವೂ ಬರುವುದಿಲ್ಲ. ಆದರಂತೆ 'ನಾರ' ಎಂಬಲ್ಲಿಯೂ ನಕಾರಕ್ಕೆ ನಿತ್ಯಲೋಪ ಬರುವುದಿಲ್ಲ. ತತ್‌ಪ್ರಯುಕ್ತವಾದ 'ನುಟ್' ಆಗಮವೂ ಬರುವುದಿಲ್ಲ. ಆದ್ದರಿಂದ 'ನ ಅರಮಣಂ ಯೇನ' ಎಂಬ ವ್ಯುತ್ಪತ್ತಿ ಮಾಡಿದಾಗಲೂ 'ನಾರಾಯಣ' ಎಂದೇ ಆಗುತ್ತದೆ 'ಅನರಾಯಣ' ಎಂದಾಗುವುದಿಲ್ಲವೆಂದು 'ನಾರ' ಶಬ್ದದ ಉದಾಹರಣೆ ಸಾರ್ಥಕವಾಗಿದೆ. ಇನ್ನು ಆದಿಶಬ್ದವನ್ನು ಏಕೆ ಹೇಳಿದ್ದೆಂದರೆ 'ಅಸತ್ಯಂ ನ ಭವತೀತಿ ನಾಸತ್ಯಮ್' ಎಂಬಂತೆ 'ಅರಾಯನೋ ನ ಭವತೀತಿ ನಾರಾಯಣಃ' ಎಂದಾಗುತ್ತದೆಂಬ ಮತ್ತೊಂದು ವ್ಯುತ್ಪತ್ತಿಯನ್ನು ತೋರಿಸುವುದಕ್ಕೋಸ್ಕರ ಹೇಳಲಾಗಿದೆ.

ಆದ್ದರಿಂದ ಉದಾಹರಿಸಿದ ಎರಡು ಸೂತ್ರಗಳಲ್ಲಿ 'ಡ'ಪ್ರತ್ಯಯ ನಲೋಪಾಭಾವಗಳನ್ನು ನಗನಾಕಶಬ್ದಗಳಲ್ಲಿ ಕಂಠತಃ ಹೇಳದಿದ್ದರೂ ನಿಪಾತದಿಂದ ಕಥಂಚಿತ್ ಹೇಗೆ ಇಟ್ಟುಕೊಳ್ಳುತ್ತೇವೋ, ಆದರಂತೆ ನಾರಾಯಣ ಎಂಬಲ್ಲಿಯ ಡ ಪ್ರತ್ಯಯ ನಲೋಪಾಭಾವಗಳನ್ನು ಸೂತ್ರದಲ್ಲಿ ಹೇಳದಿದ್ದರೂ ಇಟ್ಟುಕೊಳ್ಳಬೇಕು. ಅವಾಗ 'ನಗನಾಕಾದಿವತ್' ಎಂಬ ದೃಷ್ಟಾಂತ ಅತ್ಯಂತ ಸಮಂಜಸವಾಗುತ್ತದೆ.

ಇದಕ್ಕೆ ಸಂವಾದಿಮಾತು ಕಾಶಿಕಾವ್ಯಾಖ್ಯಾನವಾದ ನ್ಯಾಸದಲ್ಲಿದೆ - 'ರೂಢಿಶಬ್ದಾಃ ಏತೇ ಕಥಂಚಿತ್ ವ್ಯುತ್ಪಾದ್ಯಾಃ' ರೂಢಿ ಶಬ್ದಗಳ ವ್ಯುತ್ಪತ್ತಿಯನ್ನು ಸೂತ್ರದಲ್ಲಿ ಸ್ಪಷ್ಟವಾಗಿ ಹೇಳದಿದ್ದರೂ ಹೇಗಾದರೂ ಉಪಪಾದಿಸಬೇಕು? ಎಂದು.

ನಮ್ಮ ಪ್ರಶ್ನೆಗಳಿಗೆ ಈ ರೀತಿಯಾದ ಉತ್ತರವನ್ನು ಬಿಟ್ಟು ಬೇರೆ ಉತ್ತರವನ್ನು ನಿಮ್ಮಿಂದ ಹೇಳಲಾಗದು. ಹಾಗಾದರೆ ಟೀಕೆಯಲ್ಲಿ 'ನಗನಾಕಾದಿವತ್' ಎಂದು ದೃಷ್ಟಾಂತ ನೀಡಿದ್ದು ಸಮಂಜಸವೆಂದು ನೀವು ಒಪ್ಪಿಕೊಂಡಂತಾಯಿತು. ಹೀಗಿರುವಾಗ ಟೀಕೆಯಲ್ಲಿ ದೃಷ್ಟಾಂತ ನೀಡಿದ್ದು ಸರಿಯಲ್ಲವೆಂದು ಚಂದ್ರಿಕೆಯಲ್ಲಿ ಮಾಡಿದ ಆಕ್ಷೇಪ ಹೇಗೆ ತಾನೆ ಸರಿಯಾಗುತ್ತದೆ?

ಸಮಾಧಾನ - ಹೌದು, ನೀವು ಹೇಳಿದಂತೆ 'ಡ'ಪ್ರತ್ಯಯವಿಷಯದಲ್ಲಿ ದೃಷ್ಟಾಂತ ಕೂಡಬಹುದು. ಏಕೆಂದರೆ 'ನಗೋಪ್ಯಾಣಷ್ಟನ್ಯತರಸ್ಯಾಮ್' ಮತ್ತು 'ನಭ್ರಾಟ್' ಈ ಎರಡು ಸೂತ್ರಗಳು ಸಮಾನನ್ಯಾಯವಾದ್ದರಿಂದ 'ನಾರ' ಎಂಬಲ್ಲಿಯೂ 'ಡ' ಪ್ರತ್ಯಯವನ್ನು ಹೇಳುತ್ತವೆ. ಆದ್ದರಿಂದ ಈ ಅಂಶದಲ್ಲಿ ದೃಷ್ಟಾಂತ ನೀಡುವುದು ಏನೂ ತಪ್ಪಿಲ್ಲ. ಆದರೆ ನಲೋಪಾಭಾವವಿಷಯದಲ್ಲಿ ಮಾತ್ರ ದೃಷ್ಟಾಂತವಾಗುವುದಿಲ್ಲ. ಈ ಎರಡು ಸೂತ್ರ ಬಿಟ್ಟರೆ ನಲೋಪಾಭಾವವಿಷಯದಲ್ಲಿ ಬೇರೆ ಸೂತ್ರವಿಲ್ಲ. ಆದ್ದರಿಂದ ಯಾವ ರೀತಿಯಿಂದಲೂ ನಲೋಪಾಭಾವವನ್ನು ಉಪಪಾದಿಸುವುದು ಅಶಕ್ಯವಾಗಿದೆ. ಈ ಅಂಶದಲ್ಲಿ 'ನಗನಾಕಾದಿವತ್' ಎಂಬ ದೃಷ್ಟಾಂತ ಸರಿಯಾಗುವುದಿಲ್ಲ. ಆದ್ದರಿಂದ ಟೀಕೆಯ ಮೇಲೆ ಆಕ್ಷೇಪಿಸಿದ 'ಕಥಂ ತದ್ ದೃಷ್ಟಾಂತೀಕರಣಮ್' ಎಂಬ ಚಂದ್ರಿಕೆಯ ಮಾತು ಬಹಳ ಅರ್ಥಪೂರ್ಣವಾಗಿದೆ.

ಪ್ರಶ್ನೆ - 'ಅರಾಶ್ರಯೋ ನ ಭವತೀತಿ' ಎಂದು ನಾರಾಯಣ ಶಬ್ದದ ನಿಷ್ಪತ್ತಿ. ಹೀಗೆ ಮಾಡಿದಾಗ 'ಅನರಾಯಣ' ಎಂದೇ ಆಗುತ್ತದೆ. ಹೊರತು 'ನಾರಾಯಣ' ಎಂದಾಗುವುದಿಲ್ಲ. ಏಕೆಂದರೆ 'ನಲೋಪೋ ನಞಃ' ಎಂಬ ಸೂತ್ರವು ನಾರ ಎಂಬಲ್ಲಿರುವ ನಞ್ ಗೆ ಲೋಪವನ್ನು ಹೇಳುತ್ತದೆ. ಆವಾಗ 'ಅ' ಎಂದಷ್ಟೇ ಉಳಿಯುತ್ತದೆ. ಅಕಾರಕ್ಕೆ ನುಟಾಗಮ ಬಂದರೆ. ಅನರಾಯಣ, ಎಂದಾಗಬೇಕಲ್ಲವೆ.

ಉತ್ತರ - ನಗ ಮತ್ತು ನಾಕ ಇತ್ಯಾದಿ ಶಬ್ದಗಳಲ್ಲಿರುವ ನಕಾರಕ್ಕೆ ಲೊಪ ಬರುವುದಿಲ್ಲ. ನುಟ್ ಪ್ರತ್ಯಯವು ಸಹ ಬಂದಿಲ್ಲ. ಆದರಂತೆ 'ನಾರಾ' ಎಂಬಲ್ಲಿಯೂ ಸಹ ನಕಾರಕ್ಕೆ ಲೋಪ ಮತ್ತು 'ನುಟ್' ಪ್ರತ್ಯಯ ಬರುವುದಿಲ್ಲ. ಒಂದು ವೇಳೆ ಇಲ್ಲಿ 'ನ' ಕಾರವು ಲೊಪವಾಗಿ 'ನುಟ್' ಬಂದು ಅನರಾಯಣ ಎಂದಾಗುವುದಾದರೆ ಅಲ್ಲಿಯೂ ಸಹ 'ಅನಗ' 'ಅನಾಕ' ಎಂದಾಗಲಿ.

ಪ್ರಶ್ನೆ - 'ನಭ್ರಾಣ್ನಪಾನ್ನವೇದಾನಾಸತ್ಯಾನಮುಚಿನಕುಲನಖ-ನಪುಂಸಕನಕ್ಷತ್ರನಕ್ರನಾಕೇಷು ಪ್ರಕೃತ್ಯಾ' ಎಂಬ ಸೂತ್ರದಲ್ಲಿ ನಾಕ ಶಬ್ದದ ನಕಾರಕ್ಕೆ ಲೋಪವಾಗುವುದಿಲ್ಲವೆಂದು ನಿಪಾತ ಮಾಡಿದ್ದಾರೆ. ಆದರಂತೆ

'ನಗೋಪ್ರಾಣಿಷ್ವನ್ಯತರಸ್ಯಾಮ್' ಎಂಬ ಸೂತ್ರದಲ್ಲಿ ನಗ ಶಬ್ದದಲ್ಲಿರುವ ನಕಾರವು ಲೋಪವಾಗುವುದಿಲ್ಲವೆಂದು ನಿಪಾತ ಮಾಡಿದ್ದಾರೆ. ಆ ರೀತಿಯಾಗಿ ನಾರ ಶಬ್ದದಲ್ಲಿರುವ ನಕಾರಕ್ಕೆ ಲೋಪಾಭಾವವನ್ನು ಹೇಳಿಲ್ಲ. ಹೇಳದ ಕಾರಣ ನ ಕಾರವು ಲೋಪವಾಗಿ ನುಟಾಗಮವು ಬಂದು ಅನರಾಯಣ ಎಂದೇ ಆಗಬೇಕು.

ಉತ್ತರ - 'ನಭ್ರಾನ್ನಪಾತ್' ಇತ್ಯಾದಿ ಸೂತ್ರದಲ್ಲಿ 'ನಾಸತ್ಯಾ' ಇತ್ಯಾದಿ ಶಬ್ದಗಳನ್ನು ನಿಪಾತ ಮಾಡಿದ್ದಾರೆ. ಅವುಗಳ ಜೊತೆಗೆ ನಾರಾಯಣ ಶಬ್ದವನ್ನು ಸಹ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಆದ್ದರಿಂದ ನಾಕಾದಿ ಶಬ್ದಗಳು ಹೇಗೆ ಸಾಧುವಾಗುತ್ತವೊ, ಅದರಂತೆ ನಾರಾಯಣ ಶಬ್ದವು ಸಹ ಸಾಧುವಾಗುತ್ತದೆ. (ಸುಧೆಯಲ್ಲಿ ಹೇಳಿದ ಸಮಾಧಾನ)

ಅಥವಾ ನಗ ನಾಕ ಶಬ್ದಗಳಲ್ಲಿ ನಲೋಪವು ಆಗುವುದಿಲ್ಲವೆಂದು ಸೂತ್ರದಿಂದಲೇ ನೀವು ಸಮರ್ಥಿಸಿದಿರಿ, ಹಾಗೆಯೇ ನಾರಾಯಣ ಶಬ್ದದಲ್ಲೂ ನಲೋಪವಾಗುವುದಿಲ್ಲವೆಂದು ಸೂತ್ರದಿಂದಲೇ ಸಮರ್ಥಿಸುತ್ತೇವೆ. ಅದು ಹೀಗೆ -

'ಸ್ತ್ರೀಪುಂಸಾಭ್ಯಾಂ ನಞ್ಸ್ನಞೌ ಭವನಾತ್' 'ಸ್ತ್ರೀ' ಮತ್ತು 'ಪುಂ' ಶಬ್ದಗಳಿಗೆ ಕ್ರಮವಾಗಿ 'ನಞ್' ಮತ್ತು 'ಸ್ನಞ್' ಪ್ರತ್ಯಯಗಳು 'ಧಾನ್ಯಾನಾಂ ಭವನಕ್ಷೇತ್ರೇ ಖಞ್' ಎಂಬ ಸೂತ್ರದ ತನಕ ಬರುತ್ತವೆ. ಆದ್ದರಿಂದ 'ಸ್ತ್ರೈಣಃ' 'ಪೌಂಸ್ನಃ' ಎಂಬ ರೂಪಗಳು ಸಿದ್ಧವಾಗುತ್ತವೆ. ಸ್ತ್ರೀ ಶಬ್ದಗಳಿಗೆ ಹಿತಾದ್ಯರ್ಥದಲ್ಲಿ 'ನಞ್' ಎಂಬ ತದ್ಧಿತ ಪ್ರತ್ಯಯ ಬರುತ್ತದೆ. ಅನಂತರ ಞಿತ್ ಪ್ರತ್ಯಯವು ಪರದಲ್ಲಿರುವುದರಿಂದ 'ಆಚೋ ಞ್ಣಿತಿ' ಎಂಬ ಸೂತ್ರವು ಆದಿವೃದ್ಧಿಯನ್ನು ಹೇಳುತ್ತದೆ. 'ರಷಾಭ್ಯಾಂ ನೋ ಣಃ ಸಮಾನಪದೇ' ಎಂಬ ಸೂತ್ರದಿಂದ ಣತ್ವ ಬಂದರೆ 'ಸ್ತ್ರೈಣಃ' ಎಂದಾಗುತ್ತದೆ. ಇದಕ್ಕೆ 'ಅರ್ಥ' ಶಬ್ದದ ಜೊತೆಗೆ ಸಮಾಸ ಮಾಡಿದಾಗ 'ಸ್ತ್ರೈಣಾರ್ಥಃ ' (ಸ್ತ್ರೀಗೆ ಸಂಬಂಧಿಸಿದ ಸಂಪತ್ತು) ಎಂದಾಗುತ್ತದೆ.

'ಸ್ತ್ರೈಣಾರ್ಥಃ' ಎಂಬಲ್ಲಿರುವ ನಕಾರವು 'ನಞ್' ಪ್ರತ್ಯಯದ ವಿಕೃತಿಯಾಗಿದೆ. ಹಾಗಾಗಿ 'ನಲೋಪೋ ನಞಃ' ಎಂಬ ಸೂತ್ರದಿಂದ ನಕಾರವು ಲೋಪವಾಗುತ್ತದೆ. 'ತಸ್ಮಾನ್ನುಡಚಿ' ಎಂಬ ಸೂತ್ರದಿಂದ ನುಡಾಗಮ ಬಂದರೆ ಸ್ತ್ರ್ಯಯನರ್ಥಃ ಎಂದಾಗುತ್ತದೆ ಹೊರತು 'ಸ್ತ್ರೈಣಾರ್ಥಃ' ಎಂಬ ರೂಪವು ನಿಷ್ಪನ್ನವಾಗುವುದಿಲ್ಲ. ಆದಕ್ಕೋಸ್ಕರ ನ್ಯಾಸಕಾರನು 'ನಲೋಪೋ ನಞಃ' ಎಂಬ ಸೂತ್ರಕ್ಕೆ ವ್ಯಾಖ್ಯಾನಿಸುತ್ತಾ ಹೀಗೆ ಹೇಳುತ್ತಾನೆ. - 'ನಲೋಪೋ ನಞಃ' ಎಂಬ ಸೂತ್ರದಲ್ಲಿ 'ರಾತ್ರೇಃ ಕೃತಿ ವಿಭಾಷಾ' ಎಂಬ ಹಿಂದಿನ ಸೂತ್ರದಿಂದ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು.

ಆವಾಗ 'ನಲೋಪೋ ನಞಃ' ಎಂಬ ಸೂತ್ರವು ವಿಕಲ್ಪವಾಗಿ 'ನಞ್' ಲೋಪವನ್ನು ಹೇಳುತ್ತದೆ. ಆದ್ದರಿಂದ 'ಸ್ತ್ರೈಣಾರ್ಥಃ' ಎಂಬ ರೂಪನಿಷ್ಪತ್ತಿಗೆ ಯಾವ ವಿಘ್ನವಿಲ್ಲ.

'ಸ್ತ್ರೈಣಃ' ಎಂಬುದನ್ನಷ್ಟೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ 'ನಲೋಪೋ ನಞಃ' ಎಂಬ ಸೂತ್ರದಿಂದ ನಲೋಪದ ಪ್ರಸಕ್ತಿಯೇ ಬರುವುದಿಲ್ಲ. ಏಕೆಂದರೆ 'ಅಲಗುತ್ತರಪದೇ' ಎಂಬ ಸೂತ್ರದಿಂದ 'ಉತ್ತರಪದೇ' ಎಂಬ ಶಬ್ದದ ಅನುವೃತ್ತಿಯನ್ನು 'ನಲೋಪೋ ನಞಃ' ಎಂಬ ಸೂತ್ರದಲ್ಲಿ ಮಾಡಬೇಕು. ಆವಾಗ 'ಸ್ತ್ರೈಣಃ' ಎಂಬಲ್ಲಿ ಉತ್ತರಪದವು ಪರದಲ್ಲಿಲ್ಲದ ಕಾರಣ ನಲೋಪಕ್ಕೆ ಪ್ರಸಕ್ತಿಯೇ ಇಲ್ಲ. ಈ ಅಭಿಪ್ರಾಯದಿಂದ ಅರ್ಥಶಬ್ದದ ಜೊತೆಗೆ ಸಮಾಸವನ್ನು ಮಾಡಿ 'ಸ್ತ್ರೈಣಾರ್ಥಃ' ಎಂಬ ಉದಾಹರಣೆಯನ್ನು ಸ್ವೀಕರಿಸಲಾಗಿದೆ.

ಪ್ರಶ್ನೆ - 'ಅನಶ್ವಃ' ಎಂಬಲ್ಲಿ 'ನಲೋಪೋ ನಞಃ' ಎಂಬ ಸೂತ್ರದಿಂದ ನಕಾರವು ಲೋಪವಾಗಿ ನುಡಾಗಮ ಬಂದು ರೂಪವಾಗಿದೆ. ಒಂದು ವೇಳೆ 'ರಾತ್ರೇಃ ಕೃತಿ ವಿಭಾಷಾ' ಎಂಬ ಸೂತ್ರದಿಂದ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕೆಂದು ನೀವು ಹೇಳಿದರೆ 'ಅನಶ್ವಃ' ಎಂಬಲ್ಲಿಯೂ ನುಡಾಗಮ ಬರದೇ 'ನ' ಲೋಪವೂ ಆಗದೆ ಎರಡು ರೂಪಗಳಾಗಬೇಕಾದೀತು.

ಉತ್ತರ - ಆದ್ದರಿಂದಲೇ 'ವಿಭಾಷಾ' ಎಂಬುದನ್ನು ಅನುವೃತ್ತಿಮಾಡಿಕೊಳ್ಳಲಾಗಿದೆ. 'ವಿಭಾಷಾ' ಪದಕ್ಕೆ ವಿಕಲ್ಪವೆಂದು ಅರ್ಥವಲ್ಲ. ಲೋಕರೂಢಿಯನ್ನು ಅನುಸರಿಸಿ ನಲೋಪವು ಎಲ್ಲಾ ಕಡೆ ಬರುತ್ತದೆ. ಆದರೆ ಕೆಲವು ಕಡೆ ಬರುವುದೇ ಇಲ್ಲವೆಂದು, ವ್ಯವಸ್ಥಿತವಿಕಲ್ಪಾರ್ಥದಲ್ಲಿ ವಿಭಾಷಾಶಬ್ದವು ಇದೆಯೆಂದು ನ್ಯಾಸಕಾರನೇ ಹೇಳಿದ್ದಾನೆ. ಹೀಗೆ 'ನಲೋಪೋ ನಞಃ' ಎಂಬ ಸೂತ್ರದಲ್ಲಿ 'ವಿಭಾಷಾ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಆದ್ದರಿಂದ ನಾರಾಯಣಶಬ್ದದಲ್ಲೂ 'ನ' ಲೋಪವಾಗುವುದಿಲ್ಲ. ವ್ಯವಸ್ಥಿತವಿಭಾಷಾವಾದ್ದರಿಂದ ನಿತ್ಯವಾಗಿ ನಲೋಪವಾಗುವುದಿಲ್ಲ. ನಾರಾಯಣ ಎಂಬ ಪ್ರಯೋಗವು ವ್ಯಾಕರಣವಿರುದ್ಧವಾಗುವುದಿಲ್ಲ.

'ನಲೋಪೋ ನಞಃ' ಎಂಬ ಸೂತ್ರದಲ್ಲಿ 'ರಾತ್ರೇಃ ಕೃತಿ ವಿಭಾಷಾ' ಎಂಬ ಸೂತ್ರದಿಂದ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕೆಂದು ಗ್ರಂಥಕಾರರ ಅಭಿಪ್ರಾಯವಾಗಿದೆ. ಆದರೆ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಂಡಲ್ಲಿ 'ನಲೋಪೋ ನಞಃ?' ಎಂಬ ಸೂತ್ರದಲ್ಲಿನ ಸಾನುಬಂಧ- ಗ್ರಹಣವು ವ್ಯರ್ಥವಾಗುತ್ತದೆ.

ಪ್ರಶ್ನೆ - ಸಾನುಬಂಧಗ್ರಹಣವು ವ್ಯರ್ಥವಲ್ಲ. 'ಪಾಮನಪುತ್ರಃ' ಇತ್ಯಾದಿ ಪದಗಳಲ್ಲಿರುವ ನಕಾರವು ಲೋಪವಾಗಬಾರದು. ಆದಕಾರಣ ಸಾನುಬಂಧಗ್ರಹಣವು ಸಾರ್ಥಕ. 'ಅನುಬಂಧ' ಎಂದರೆ 'ಇತ್' ಎಂದರ್ಥ. ಅನುಬಂಧದಿಂದ ಕೂಡಿರುವ ಪ್ರತ್ಯಯವು ಸಾನುಬಂಧವೆನಿಸುತ್ತದೆ. 'ನ್ಇತ್' ಎಂಬಲ್ಲಿ 'ಇತ್' ಕಾರವು ಇತ್ ಆಗಿದೆ. ಇಂತಹ ಇತ್‌ಅಕ್ಷರದಿಂದ ಕೂಡಿರುವ 'ನ್ಇತ್'ಎಂಬ ಸಾನುಬಂಧವನ್ನು ಏಕೆ ಗ್ರಹಣ ಮಾಡಿದರು? ಎಂದರೆ 'ಪಾಮನಪುತ್ರಃ' ಎಂಬಲ್ಲಿರುವ ನಕಾರವು ಲೋಪವಾಗಬಾರದೆಂದು.

ಒಂದು ವೇಳೆ 'ನಲೋಪೋ ನ' ಎಂದಷ್ಟೇ ಸೂತ್ರ ಹೇಳಿದ್ದಲ್ಲಿ 'ಪಾಮನ ಪುತ್ರಃ' ಎಂಬಲ್ಲಿರುವ 'ನ'ಕಾರವೂ ಲೋಪವಾಗುತ್ತಿತ್ತು. ಇದನ್ನು ಪರಿಹರಿಸಲು 'ನ್ಇತ್' ಎಂದು ಹೇಳಿದ್ದಾರೆ. 'ಪಾಮನ ಪುತ್ರಃ' ಎಂಬಲ್ಲಿರುವ ನಕಾರವು 'ನ' ಪ್ರತ್ಯಯವಾಗಿದೆ. ಹೊರತು 'ನ್ಇತ್' ಪ್ರತ್ಯಯವಲ್ಲ. ಆದ್ದರಿಂದ 'ನಲೋಪೋ ನ್ಇತಃ' ಎಂಬ ಸೂತ್ರದಿಂದ ನಕಾರವು ಲೋಪವಾಗದ ಕಾರಣ ರೂಪವು ಸಾಧುವಾಗಿದೆ. ಸಾನುಬಂಧಗ್ರಹಣವು ಸಾರ್ಥಕವಾಗಿದೆ.

ಉತ್ತರ - 'ಪಾಮಾ ಅಸ್ಯ ಅಸ್ತೀತಿ ಪಾಮನಃ' (ಚರ್ಮರೋಗವುಳ್ಳವನು) 'ಲೋಮಾದಿಪಾಮಾದಿಪಿಚ್ಛಾದಿಭ್ಯಃ ಶನೇಲಚಃ' ಎಂಬ ಸೂತ್ರದಿಂದ 'ಪಾಮ'ಶಬ್ದದ ಮೇಲೆ ಮತ್ವರ್ಥದಲ್ಲಿ 'ನ' ಎಂಬ ಪ್ರತ್ಯಯವು ಬರುತ್ತದೆ. ಈ 'ಪಾಮನ' ಶಬ್ದಕ್ಕೆ ಪುತ್ರಶಬ್ದದಿಂದ 'ಪಾಮನಸ್ಯ ಪುತ್ರಃ' ಎಂದು ಷಷ್ಠೀಸಮಾಸವನ್ನು ಮಾಡಬೇಕು. ಪ್ರಕೃತ 'ನಲೋಪೋ ನ್ಇತಃ' ಎಂಬ ಸೂತ್ರದಲ್ಲಿ 'ರಾತ್ರೇಃ ಕೃತಿ ವಿಭಾಷಾ' ಎಂಬ ಸೂತ್ರದಲ್ಲಿರುವ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಳ್ಳುವುದಾದರೆ ನಕಾರವು ಲೋಪವಾಗುವುದಿಲ್ಲ. ಏಕೆಂದರೆ 'ವಿಭಾಷಾ' ಪದವು 'ವ್ಯವಸ್ಥಿತವಿಕಲ್ಪ' ಎಂಬರ್ಥದಲ್ಲಿದೆ. ಕೆಲವೊಂದೆಡೆ ನಕಾರವು ಲೋಪವೇ ಆಗುವುದಿಲ್ಲ. ಕೆಲವೆಡೆ ಲೋಪವಾಗುತ್ತದೆ. ಪಾಮನಪುತ್ರಃ ಎಂಬಲ್ಲಿರುವ 'ನ' ಕಾರವು ಲೋಪವೇ ಆಗುವುದಿಲ್ಲ. ಹೀಗೆ ನಲೋಪಾಭಾವವನ್ನು ಕೂಡಿಸಲು ಬರುವಾಗ ಸಾನುಬಂಧಗ್ರಹಣವನ್ನು ಮಾಡಿದ್ದು ವ್ಯರ್ಥವೆನಿಸುತ್ತದೆ. ಆದರೂ ಸಹ ಪಾಣಿನಿಯು ಸಾನುಬಂಧಗ್ರಹಣವನ್ನು ಮಾಡಿದ್ದಾನೆ. ಇದರಿಂದ ಏನು ತಿಳಿಯುತ್ತದೆ? ಎಂದರೆ 'ವಿಭಾಷಾ' ಪದದ ಅನುವೃತ್ತಿಯನ್ನು ಮಾಡಿಕೊಳ್ಳಬೇಕಿಲ್ಲವೆಂದು.

ಪ್ರಶ್ನೆ - 'ವಿಭಾಷಾ' ಪದವನ್ನು ಅನುವೃತ್ತಿ ಮಾಡಿಕೊಳ್ಳದಿದ್ದಲ್ಲಿ 'ಸ್ತ್ರೈಣಪುತ್ರಃ' 'ಸ್ತ್ರೈಣಾರ್ಥಃ' ಇತ್ಯಾದಿ ಶಬ್ದಗಳು ಸಾಧುವಾಗದಿರಬೇಕಾದೀತು. ಇಲ್ಲಿರುವ ನಕಾರವು 'ನಞ್' ಪ್ರತ್ಯಯವಾಗಿದೆ. ಸೂತ್ರದಲ್ಲಿ 'ನಞ್' ಪ್ರತ್ಯಯದ ನಕಾರಕ್ಕೆ ಲೋಪವನ್ನು ಹೇಳಿದ್ದರಿಂದ 'ಸ್ತ್ರೈಣಪುತ್ರಃ' ಎಂಬಲ್ಲಿರುವ ನಕಾರವೂ ಲೋಪವಾಗಬೇಕಾದೀತು. ಆದ್ದರಿಂದ ವಿಭಾಷಾ ಪದವನ್ನು ಅನುವೃತ್ತಿ ಮಾಡಬೇಕು.

ವ್ಯವಸ್ಥಿತವಿಕಲ್ಪಾರ್ಥದಲ್ಲಿ ವಿಭಾಷಾಪದವು ಇರುವುದರಿಂದ 'ಸ್ತ್ರೈಣಪುತ್ರಃ' ಇತ್ಯಾದಿ ಸ್ಥಳದಲ್ಲಿ ನಿತ್ಯವಾಗಿ ನಕಾರವು ಲೋಪವಾಗುವುದಿಲ್ಲ. ಹೀಗೆ ವಿಭಾಷಾಪದದ ಅನುವೃತ್ತಿಯು ಆವಶ್ಯಕವಾಗಿದೆ.

ಉತ್ತರ - 'ವಿಭಾಷಾ' ಪದದ ಅನುವೃತ್ತಿಯನ್ನು ಮಾಡಿಕೊಳ್ಳದಿದ್ದರೂ 'ಸ್ತ್ರೈಣಪುತ್ರಃ' ಇತ್ಯಾದಿ ಶಬ್ದಸಾಧುತ್ವವನ್ನು ಉಪಪಾದಿಸಬಹುದು. ಹೇಗಂದರೆ 'ನಞ್' ಪ್ರತ್ಯಯವು ಎರಡು ವಿಧದಲ್ಲಿದೆ. ೧) ನಿಪಾತ = ಅವ್ಯಯ ೨) ಪ್ರತ್ಯಯ ಎಂದು. 'ನಲೋಪೋ ನಞಃ' ಎಂಬ ಸೂತ್ರದಲ್ಲಿ ಪ್ರತ್ಯಯರೂಪವಾದ 'ನಞ್' ಎಂಬುದನ್ನು ಹೇಳಿದ್ದಾರೋ? ಅಥವಾ ಅವ್ಯಯರೂಪವಾದ 'ನಞ್' ಅನ್ನು ಹೇಳಿದ್ದಾರೋ? ಎಂದು ಸಂಶಯ ಬರುತ್ತದೆ. ಪ್ರತ್ಯಯರೂಪವಾದ 'ಞ' ಕಾರಕ್ಕೆ ಬೇರೆ ಪ್ರಯೋಜನವಿದೆ. ಪ್ರತ್ಯಯದ 'ಞ' ಕಾರವು ಞಿತ್ ಆದರೆ 'ಆಚೋ ಞ್ಣಿತಿ' ಎಂಬ ಸೂತ್ರವು ಆದಿವೃದ್ಧಿಯನ್ನು ಹೇಳುತ್ತದೆ. 'ಞ್ನಿತ್ಯಾದೇರ್ನಿತ್ಯಂ' ಎಂಬ ಸೂತ್ರವು ಆದ್ಯುದಾತ್ತತ್ವವನ್ನು ಹೇಳುತ್ತದೆ. ಹೀಗೆ ಅನೇಕ ಪ್ರಯೋಜನಗಳಿರುವುದರಿಂದ ಪ್ರತ್ಯಯ ಞ್ತ್ವವು ಚರಿತಾರ್ಥವಾಗಿದೆ. ಆದರೆ ನಿಪಾತಞ್ತ್ಗೆ ಇಂತಹ ಯಾವುದೇ ಪ್ರಯೋಜನಗಳೂ ಇರುವುದಿಲ್ಲ. ಚರಿತಾರ್ಥ ಮತ್ತು ಅಚರಿತಾರ್ಥಗಳಲ್ಲಿ ಅಚರಿತಾರ್ಥವನ್ನೇ ಸ್ವೀಕರಿಸಬೇಕು. ಆದಕಾರಣ 'ನಲೋಪೋ ನಞಃ' ಎಂಬ ಸೂತ್ರದಲ್ಲಿ ಅವ್ಯಯರೂಪವಾದ 'ನಞ್' ಎಂಬುದನ್ನೇ ಸ್ವೀಕಾರ ಮಾಡಬೇಕು. ಹಾಗಾದಲ್ಲಿ 'ಸ್ತ್ರೈಣಪುತ್ರಃ' ಎಂಬಲ್ಲಿರುವ 'ನಞ್' ಎಂಬುದು ಪ್ರತ್ಯಯರೂಪವಾಗಿದೆ. ಹೊರತು ನಿಪಾತರೂಪವಲ್ಲ. ಸೂತ್ರವು ನಿಪಾತ 'ಞ್ತ್' ಆದ ನಞ್ಗೆ ಲೋಪವನ್ನು ಹೇಳುತ್ತಿದೆ. ಆದರೆ ಅಂತಹ ಪ್ರತ್ಯಯವು 'ಸ್ತ್ರೈಣಪುತ್ರಃ' ಎಂಬಲ್ಲಿಲ್ಲ. ಹೀಗಿರುವಾಗ ಸೂತ್ರದಿಂದ ನಕಾರದ ಲೋಪಪ್ರಸಕ್ತಿಯೇ ಇಲ್ಲ. ಹೀಗೆ ವಿಭಾಷಾಪದವನ್ನು ಅನುವೃತ್ತಿ ಮಾಡಿಕೊಳ್ಳದಿದ್ದರೂ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಬರುವಾಗ ವ್ಯರ್ಥವಾಗಿ ವಿಭಾಷಾಪದದ ಅನುವೃತ್ತಿಯನ್ನು ಹೇಳುವುದು ಅನಾವಶ್ಯಕ.

ಮತ್ತೊಂದು ಸಮಾಧಾನ - ಹಿಂದಿನ ಸೂತ್ರ 'ಅಲಗುತ್ತರಪದೇ' ಎಂದು. ಈ ಸೂತ್ರದಲ್ಲಿರುವ 'ಉತ್ತರಪದೇ' ಎಂಬುದನ್ನು 'ನಲೋಪೋ ನಞಃ' ಎಂಬ ಸೂತ್ರದಲ್ಲಿ ಇಟ್ಟುಕೊಳ್ಳಬಹುದು. ಉತ್ತರ ಶಬ್ದವು ಸಸಂಬಂಧಿಯಾದ ಶಬ್ದವಾಗಿದೆ. ಉತ್ತರಪದವು ಪರದಲ್ಲಿದ್ದಾಗ ಎಂದು ಹೇಳಿದರೆ 'ನಞ್' ಎಂಬುದು ಪೂರ್ವಪದವಾಗಿರಬೇಕು ಎಂದಂತಾಯಿತು. ಯಾವ ಒಂದು ಶಬ್ದಸ್ವರೂಪದಲ್ಲಿ 'ನಞ್' ಎಂಬ ಪ್ರತ್ಯಯವು ಪೂರ್ವಪದವಾಗಿರುತ್ತದೋ ಅಂತಹ ಸ್ಥಳದಲ್ಲಿ ನಕಾರವು ಲೋಪವಾಗುತ್ತದೆ ಎಂದು 'ನಲೋಪೋ ನಞಃ' ಸೂತ್ರದ ಅರ್ಥವಾಯಿತು.

'ಸ್ತ್ರೈಣಪುತ್ರಃ' ಇತ್ಯಾದಿಸ್ಥಳದಲ್ಲಿ 'ನಞ್' ಎಂಬುದು ಪೂರ್ವಪದವಾಗಿಲ್ಲ. 'ಸ್ತ್ರೈಣ' ಎಂಬುದು ಪೂರ್ವಪದವಾಗಿದೆ. ಒಂದು ವೇಳೆ 'ನಞ್' ಎಂಬುದಷ್ಟೇ ಪೂರ್ವಪದವಾಗಿದ್ದಲ್ಲಿ ನಕಾರಲೋಪದ ಪ್ರಸಕ್ತಿಯು ಇರುತ್ತಿತ್ತು. ಅದರ ಪರಿಹಾರಕ್ಕಾಗಿ ವಿಭಾಷಾಪದದ ಅನುವೃತ್ತಿಯು ಬೇಕಾಗುತ್ತಿತ್ತು. ಆದರೆ 'ಸ್ತ್ರೈಣ' ಎಂಬುದೇ ಪೂರ್ವಪದವಾಗಿರುವುದರಿಂದ 'ನಲೋಪೋ ನಞಃ' ಎಂಬ ಸೂತ್ರವು 'ನಞ್' ಗೆ ಲೋಪವನ್ನು ಹೇಳುವುದೇ ಇಲ್ಲ. ಆದ್ದರಿಂದ 'ಸ್ತ್ರೈಣಪುತ್ರಃ' ಎಂಬಲ್ಲಿ ಯಾವ ಬಾಧಕವೂ ಇಲ್ಲ.

ಪ್ರಶ್ನೆ - ಹಾಗಾದರೆ ಸಾನುಬಂಧಗ್ರಹಣವು ವ್ಯರ್ಥವಾಗುತ್ತದೆ. 'ಪಾಮನಪುತ್ರಃ' ಎಂಬಲ್ಲಿಯೂ ಹೀಗೆಯೇ ಸಮಾಧಾನವನ್ನು ಹೇಳಬಹುದು. 'ಪಾಮನ' ಎಂಬುದು ಪೂರ್ವಪದವೇ ಹೊರತು ಪಾಮನಪದದಲ್ಲಿ ಗರ್ಭಿತವಾದ 'ನ'ಪ್ರತ್ಯಯವು ಪೂರ್ವಪದವಾಗಿಲ್ಲ. ಆದ್ದರಿಂದ 'ನಲೋಪೋ ನಞಃ' ಎಂಬ ಸೂತ್ರದಿಂದ ನಕಾರಲೋಪಕ್ಕೆ ಆಸ್ಪದವೇ ಇಲ್ಲ. ಆದ್ದರಿಂದ ಸಾನುಬಂಧಗ್ರಹಣವನ್ನು ಮಾಡುವುದೂ ಸಹ ವ್ಯರ್ಥ.

ಉತ್ತರ - 'ಪಾಮನಪುತ್ರಃ' ಎಂಬಲ್ಲಿ ಸಾನುಬಂಧಗ್ರಹಣವು ವ್ಯರ್ಥವಾದರೂ 'ನೈಕಧಾ' ಇತ್ಯಾದಿ ಸ್ಥಳದಲ್ಲಿ ಸಾರ್ಥಕವಾಗಿದೆ. ಇಲ್ಲಿ ಪೂರ್ವಪದವು 'ನಞ್ 'ಪ್ರತ್ಯಯ ಸ್ವರೂಪವಾಗಿದೆ. ಆದ್ದರಿಂದ 'ನಲೋಪೋ ನಞಃ' ಎಂಬ ಸೂತ್ರವು ನಕಾರಕ್ಕೆ ಲೋಪವನ್ನು ವಿಧಿಸುತ್ತದೆ. ಇದನ್ನು ನಿವಾರಿಸಲು 'ರಾತ್ರೇಃ ಕೃತಿ ವಿಭಾಷಾ' ಎಂಬ ಸೂತ್ರದಿಂದ ವಿಭಾಷಾಪದವನ್ನು ಅನುವೃತ್ತಿ ಮಾಡಿಕೊಳ್ಳಲೇಬೇಕು. ಹಾಗೆ ಅನುವೃತ್ತಿಯನ್ನು ಮಾಡಿದಾಗ ನಿತ್ಯವಾಗಿ ನೈಕಧಾ ಎಂಬಲ್ಲಿ ನಕಾರವು

ಲೋಪವಾಗುವುದಿಲ್ಲ. ಆದ್ದರಿಂದ ಸಾನುಬಂಧಗ್ರಹಣವು ವ್ಯರ್ಥವೇ ಆಗಿದೆ. 'ಪಾಮನಪುತ್ರಃ' ಎಂಬಲ್ಲಿಯೂ ಅದಕ್ಕೆ ಸಾರ್ಥಕ್ಯವಿಲ್ಲ. 'ನೈಕಧಾ' ಎಂಬಲ್ಲಿಯೂ ವಿಭಾಷಾಪದದ ಅನುವೃತ್ತಿಯಿಂದಲೇ ಕಾರ್ಯವು ಆಗುವಾಗ ಸಾನುಬಂಧಗ್ರಹಣಕ್ಕೆ ಕೃತ್ಯವಿಲ್ಲ. ಆದರೂ ಪಾಣಿನಿಯು ಸಾನುಬಂಧಗ್ರಹಣವನ್ನು ಮಾಡಿದ್ದಾನೆ. ಇದರಿಂದ ಸೂತ್ರಕಾರನಿಗೆ ವ್ಯವಸ್ಥಿತವಿಭಾಷಾವನ್ನು ಆಶ್ರಯಿಸುವುದು ಸಮ್ಮತಿಯಿಲ್ಲವೆಂದು ತಿಳಿಯುತ್ತದೆ. ಹೀಗಿರುವಾಗ ಪಾಣಿನಿಯ ಮತಕ್ಕೆ ವಿರುದ್ಧವಾಗಿ ಗ್ರಂಥಕಾರರು ವ್ಯವಸ್ಥಿತವಿಭಾಷಾವನ್ನು ಆಶ್ರಯಿಸಿ ಸಮಾಧಾನವನ್ನು ಹೇಳಿದ್ದು ಹೇಗೆ ಸೂಕ್ತವಾಗುತ್ತದೆ?

ನಾರಾಯಣಶಬ್ದದಲ್ಲಿರುವ 'ನಞ್' ಎಂಬುದು ಪೂರ್ವಪದವಾಗಿದೆ. ಇದಕ್ಕೆ 'ನಲೋಪೋ ನಞಃ' ಎಂಬ ಸೂತ್ರವು ಲೋಪವನ್ನು ವಿಧಿಸುತ್ತದೆ. ವಿಭಾಷಾಪದದ ಅನುವೃತ್ತಿಯಿಂದ ಸಮಾಧಾನವನ್ನು ಹೇಳಲಾಗದು. ಮೇಲೆ ಹೇಳಿದ ಈ ಪ್ರಬಲ ಪ್ರಶ್ನೆಯು ಯಥಾರ್ಥವೇ ಆಗಿದೆ. ಆದ್ದರಿಂದಲೇ ಪದಮಂಜರಿಕಾರನು ವಿಭಾಷಾಪದದ ಅನುವೃತ್ತಿಯನ್ನು ಒಪ್ಪಿಕೊಂಡಿಲ್ಲ. ಆದರೆ ಕಾಶಿಕಾವೃತ್ತಿಯ ಮತ್ತೊಬ್ಬ ವ್ಯಾಖ್ಯಾನಕಾರನಾದ ನ್ಯಾಸಕಾರನು ವಿಭಾಷಾಪದದ ಅನುವೃತ್ತಿಯನ್ನು ಆಶ್ರಯಿಸಿದ್ದಾನೆ. ನ್ಯಾಸಕಾರನ ಮತವನ್ನು ಇಟ್ಟುಕೊಂಡಾಗಲೂ ನಾರಾಯಣಪದದ ಶಬ್ದಸಾಧುತ್ವವನ್ನು ಉಪಪಾದಿಸಲು ಬರುತ್ತದೆಂದು ಗ್ರಂಥಕಾರರ ಅಭಿಪ್ರಾಯ. ಆದ್ದರಿಂದ ಇಲ್ಲಿ ಗುಣದೋಷಗಳ ವಿಮರ್ಶೆಯ ಅವಶ್ಯಕತೆಯು ಇರುವುದಿಲ್ಲ. ನ್ಯಾಸಕಾರನ ಅಭಿಪ್ರಾಯವು ತಪ್ಪೋ ಒಪ್ಪೋ? ಅಂತೂ ಅವನ ಅಭಿಪ್ರಾಯದಿಂದಲೂ ನಮ್ಮ ಅಭಿಲಾಷೆಯು ಸಿದ್ಧಿಸುತ್ತದೆ ಎಂದು ಅರಿಯಬೇಕು. ಈ ವಿಷಯವು ಗ್ರಂಥಕಾರರಿಗೂ ಸಮ್ಮತವಾಗಿದೆ. ಆದ್ದರಿಂದಲೇ 'ನ್ಯಾಸೇ ಏವ ಉಕ್ತತ್ವಾತ್' ಎಂದು ಹೇಳಿದ್ದಾರೆ. ಇಲ್ಲವಾದಲ್ಲಿ 'ವ್ಯವಸ್ಥಿತವಿಭಾಷಾऽಶ್ರಯಣಾತ್ ನಲೋಪಾಭಾವೋಪಪತ್ತೇಃ' 'ವ್ಯವಸ್ಥಿತವಿಭಾಷಾವನ್ನು ಆಶ್ರಯಿಸಿದ್ದರಿಂದ ನಲೋಪಾಭಾವವು ಉಪಪನ್ನವಾಗುತ್ತದೆ' ಎಂದಷ್ಟೇ ಹೇಳುತ್ತಿದ್ದರು. 'ನ್ಯಾಸೇ ಏವ ಉಕ್ತತ್ವಾತ್' ಎಂದು ಹೇಳುವ ಅವಶ್ಯಕತೆಯು ಇರಲಿಲ್ಲ. ಇದರಿಂದ ನಾರಾಯಣ ಶಬ್ದಸಾಧುತ್ವವು ನ್ಯಾಸಕಾರನ ಮತದಂತೆಯೂ ಸರಿಹೊಂದುತ್ತದೆಂದು ತಿಳಿಯುತ್ತದೆ.

ಪದಮಂಜರಿಕಾರನ ಅಭಿಪ್ರಾಯವನ್ನು ಇಟ್ಟುಕೊಂಡಾಗ ನಾರಾಯಣಶಬ್ದವು ಹೇಗೆ ಸಾಧುವಾಗುತ್ತದೆ? ಎಂಬ ಪ್ರಶ್ನೆ ಬಂದರೆ 'ಯದ್ವಾ' ಎಂದು ಮತ್ತೊಂದು ಪಕ್ಷವನ್ನು ಹೇಳುತ್ತಿದ್ದಾರೆ. ಮತ್ತು ನ್ಯಾಸಕಾರನ ಮತದಲ್ಲಿಯೂ ಅಸ್ವಾರಸ್ಯವಿದೆ.

ವಿಭಾಷಾಪದವನ್ನು ಅನುವೃತ್ತಿಮಾಡಿಕೊಳ್ಳದೆಯೂ 'ನೈಕಧಾ' ಇತ್ಯಾದಿ ಅನೇಕಶಬ್ದಗಳ ಸಾಧುತ್ವವನ್ನು ಉಪಪಾದಿಸಲು ಬರುತ್ತದೆ. ಆದರೂ ಬಲವಂತವಾಗಿ ವಿಭಾಷಾಪದದ ಅನುವೃತ್ತಿಯನ್ನು ಅವನು ಹೇಳಿದ್ದಾನೆ. ಈ ಅಸ್ವಾರಸ್ಯದಿಂದಲೂ 'ಯದ್ವಾ' ಎಂಬ ಮತ್ತೊಂದು ಪಕ್ಷವನ್ನು ಗ್ರಂಥಕಾರರು ಹೇಳುತ್ತಿದ್ದಾರೆ.

ಅಥವಾ 'ಅಮಾನೋನಾಃ ಪ್ರತಿಷೇಧೇ' ಎಂಬ ಸೂತ್ರದಲ್ಲಿ ಹೇಳಿದಂತೆ 'ನ' ಸಮಾಸವನ್ನು ಮಾಡಬಹುದು. ನಿಷೇಧಾರ್ಥಕವಾದ ನಕಾರವು ಆರಾಯಣ ಎಂಬ ಪದದ ಜೊತೆಗೆ 'ಸುಪ್ ಸುಪಾ' ಎಂಬ ಸೂತ್ರದ ಪ್ರಕಾರ ಸಮಾಸವಾಗುತ್ತದೆ. ಇದಕ್ಕೆ ಸಿದ್ಧಾಂತಕೌಮುದಿಯಲ್ಲಿ 'ನೈಕಧಾ' ಎಂಬುದನ್ನು ದೃಷ್ಟಾಂತವನ್ನಾಗಿ ಹೇಳಿದ್ದಾರೆ. ಹೀಗೆ ಹೇಳಿದಾಗ ಹಿಂದಿನ ಯಾವ ಸಮಸ್ಯೆಗಳೂ ಬರಲಾರವು.

ಕೆಲವರ ಆಕ್ಷೇಪ - ನಿಷೇಧಾರ್ಥಕವಾದ 'ನ' ಪದದ ಜೊತೆಗೆ ಸಮಾಸವನ್ನು ಗ್ರಂಥಕಾರರು ಹೇಳುತ್ತಿದ್ದಾರೆ. ಆದರೆ ಈ ಪಕ್ಷವು ಗ್ರಂಥಕಾರರಿಗೆ ಸಮ್ಮತವಾಗಿಲ್ಲ. ಹಾಗಾದಲ್ಲಿ 'ನಞೋ ವಿರುದ್ಧಾರ್ಥವಾಚಿತ್ವಾತ್ ನಞೋ ಭಾವಾರ್ಥತ್ವಾತ್' 'ನಞ್' ಎಂಬುದು 'ವಿರುದ್ಧಾರ್ಥವಾಚಿಯಾದ್ದರಿಂದ ಭಾವಾರ್ಥಕವಾಗಿದೆ' ಇತ್ಯಾದಿ ಟೀಕೆವಾಕ್ಯಗಳ ವಿರೋಧ ಬರುತ್ತದೆ. ಆದ್ದರಿಂದ ನಿಷೇಧಾರ್ಥಕವಾದ 'ನ'ಸಮಾಸವನ್ನು ಹೇಳಿರುವುದು ಕೇವಲ ಪ್ರೌಢಿವಾದ. ಈ ವಿವಕ್ಷೆಯಿಂದಲೇ ಗ್ರಂಥಕಾರರು 'ಅಸ್ತು' ಎಂಬ ಪದವನ್ನು ಹೇಳಿದರು. ಇದರಿಂದ ತಮಗೆ ಈ ಪಕ್ಷದಲ್ಲಿ ಸಮ್ಮತಿಯಿಲ್ಲವೆಂದು ಸೂಚಿಸಿದ್ದಾರೆ. ಮತ್ತು 'ನಗನಾಕಾದಿಶಬ್ದವತ್' ಎಂಬ ದೃಷ್ಟಾಂತವು ಈ ಪಕ್ಷದಲ್ಲಿ ಸಮಂಜಸವಾಗದು. ಏಕೆಂದರೆ 'ನ' ಸಮಾಸವನ್ನು ಆಶ್ರಯಿಸಿದಾಗ ನಕಾರಲೋಪಕ್ಕೆ ಪ್ರಸಕ್ತಿಯಿಲ್ಲ. ಹೀಗಿರುವಾಗ ನಗನಾಕಾದಿ ಶಬ್ದಗಳಂತೆ ಸಾಧುತ್ವವನ್ನು ಏಕೆ ಸಮರ್ಥಿಸಬೇಕು?

ಸಮಾಧಾನ - ಈ ವಾದವು ಅತ್ಯಂತ ವಿಮರ್ಶಣೀಯ. ಏಕೆಂದರೆ 'ನಞೋ ವಿರುದ್ಧಾರ್ಥವಾಚಿತ್ವಾತ್' ಇತ್ಯಾದಿ ಟೀಕಾಮಾತುಗಳು 'ಯದ್ವಾ' ಎಂಬ ಎರಡನೆಯ ಪಕ್ಷವನ್ನು ಆಶ್ರಯಿಸಿ ಹೊರಟಿದ್ದೇ ಅಲ್ಲ. ಮೊದಲನೆಯ ಪಕ್ಷಕ್ಕೆ ಅನುಸಾರಿಯಾದ ಮಾತುಗಳನ್ನೂ ಆ ವಾಕ್ಯಗಳು ಹೇಳುತ್ತಿವೆ. ಹೀಗಿರುವಾಗ ಎರಡನೆಯ ಪಕ್ಷದ ಸಮರ್ಥನೆಯಲ್ಲಿ ಆ ಮಾತುಗಳ ವಿರೋಧಕ್ಕೆ ಆಸ್ಪದವಿಲ್ಲ. ಮತ್ತು ನಗನಾಕಾದಿಶಬ್ದವತ್ ಎಂಬ ದೃಷ್ಟಾಂತಮಾತನ್ನು ತಪ್ಪೆಂದರು. ಆದರೆ ಸೂತ್ರದಲ್ಲಿ ಹೇಳದ 'ಡ' ಪ್ರತ್ಯಯದ ಪ್ರದರ್ಶನಕ್ಕೋಸ್ಕರ ಈ ದೃಷ್ಟಾಂತವು ಉಪಪನ್ನವಾಗಿದೆಯೆಂದು ಈ ಹಿಂದೆ ಸಮರ್ಥಿಸಿದ್ದೇವೆ. ಸಂಕ್ಷೇಪವಾದ ವಿಮರ್ಶೆ ಇಲ್ಲಿಗೆ ಸಾಕು.

ಹೀಗೆ ನೀವು ವಿಭಾಷಾಪದವನ್ನು 'ನಲೋಪೋ ನಞಃ' ಎಂಬ ಸೂತ್ರದಲ್ಲಿ ಅನುವೃತ್ತಿ ಮಾಡಿಕೊಳ್ಳುತ್ತೀರಾದರೆ ಅದರಿಂದಲೇ 'ನಭ್ರಾಟ್' ಮೊದಲಾದ ನಲೋಪ ಸಿದ್ಧವಾಗುವುದರಿಂದ 'ನಭ್ರಾಟ್' ಇತ್ಯಾದಿ ಸೂತ್ರ ಹೊರಟಿದ್ದೇ ವ್ಯರ್ಥ. ಇನ್ನು ವಿಭಾಷಾ ಪದದ ಅರ್ಥವನ್ನೇ ವಿವರಿಸಲು ಈ ಸೂತ್ರ ಹೊರಟಿದೆ ಎಂಬ ಸಮಾಧಾನವು ಬೇರೆ ಯಾವುದೇ ರೀತಿಯ ಗತಿ ಇಲ್ಲದಾಗ ಮಾತ್ರ ಹೇಳಬೇಕು. 'ನಭ್ರಾಟ್' ಇತ್ಯಾದಿ ಪದಗಳಲ್ಲಿ ಮಾತ್ರ ನಲೋಪವು ಬರುವುದಿಲ್ಲವೆಂದು ವಿಭಾಷಾಪದವು ಹೇಳುತ್ತಿದೆಯೆಂದರೆ 'ಸ್ವೈಣಾರ್ಥಃ' ಎಂಬಲ್ಲಿ ನಲೋಪ ಆಗಬೇಕಾದೀತೆಂಬ ಪ್ರಶ್ನೆ ಪುನಃ ಬರುತ್ತದೆ. ಆದ್ದರಿಂದ 'ವಿಭಾಷಾ' ಪದವನ್ನು ಅನುವೃತ್ತಿ ಮಾಡಬಾರದು ಎಂದರೆ ಗ್ರಂಥಕಾರರು 'ಯದ್ವಾ' ಎಂದು ಮತ್ತೊಂದು ಸಮಾಧಾನ ಹೇಳುತ್ತಿದ್ದಾರೆ.

ಪದಮಂಜರಿಕಾರನು 'ವಿಭಾಷಾ' ಪದದ ಅನುವೃತ್ತಿ ಬೇಡವೆನ್ನುತ್ತಾನೆ. ಅವನ ಪ್ರಕಾರ 'ಯದ್ವಾ' ಎಂದು ಹೇಳಿದ್ದಾರೆಂದೂ ಸಹ ಇಟ್ಟುಕೊಳ್ಳಬಹುದು. ಅವನ ಅಭಿಪ್ರಾಯ ಹೀಗಿದೆ – 'ನಲೋಪೋ ನಞಃ' ಎಂಬ ಸೂತ್ರದಲ್ಲಿ 'ನಞ್' ಎಂಬ ಅವ್ಯಯವನ್ನೇ ಇಟ್ಟುಕೊಳ್ಳಬೇಕು. ಹೊರತು ಪ್ರತ್ಯಯವನ್ನಲ್ಲ. ಏಕೆಂದರೆ ಪ್ರತ್ಯಯದ 'ಇತ್' ಆದ ಇ ಕಾರಕ್ಕೆ ವೃದ್ಧಿಸ್ವರಾದಿಗಳಂತಹ ಇತರ ಪ್ರಯೋಜನಗಳಿವೆ. ಆದರೆ ಅವ್ಯಯದ 'ಞ್ತ್'ಗೆ ಬೇರೆ ಪ್ರಯೋಜನವಿಲ್ಲ. ಪ್ರಕೃತದಲ್ಲಿ 'ಸ್ವೈಣಾರ್ಥಃ' ಎಂಬಲ್ಲಿ ನಞ್ ಪ್ರತ್ಯಯವೇ ಇದೆ ಹೊರತು ಅವ್ಯಯವಲ್ಲ. ಆದ್ದರಿಂದ 'ನಲೋಪೋ ನಞಃ' ಎಂಬುದರಿಂದ ನಲೋಪಪ್ರಸಕ್ತಿಯೂ ಇಲ್ಲ. ಹಾಗಾಗಿ ಸೂತ್ರದಲ್ಲಿ ವಿಭಾಷಾ ಪದದ ಅನುವೃತ್ತಿ ಬೇಡ.

ಅಥವಾ 'ನಲೋಪೋ ನಞಃ' ಎಂಬ ಸೂತ್ರಕ್ಕೆ ನ್ಯಾಸಕಾರನ ವ್ಯಾಖ್ಯಾನ ಇಟ್ಟುಕೊಂಡರೂ ಸಹ ವಿಭಾಷಾ ಪದದ ಅನುವೃತ್ತಿ ಬೇಕಾಗಿಲ್ಲ. ಏಕೆಂದರೆ 'ಅಲಗುತ್ತರಪದೇ' ಎಂಬ ಹಿಂದಿನ ಸೂತ್ರದಿಂದ 'ಉತ್ತರಪದೇ' ಎಂಬುದನ್ನು ಈ ಸೂತ್ರದಲ್ಲಿಯೂ ಇಟ್ಟುಕೊಳ್ಳಬೇಕು. ಈಗ ಸೂತ್ರಕ್ಕೆ ಹೀಗೆ ಅರ್ಥ - ನಞ್‌ಪದದ ನಕಾರವು ಲೋಪವಾಗುತ್ತದೆ. ಮುಂದೆ ಒಂದು ಪದವಿದ್ದಾಗ 'ಸ್ವೈಣಾರ್ಥಃ' ಎಂಬಲ್ಲಿ ನಞ್ ಪ್ರತ್ಯಯದ ಮುಂದೆ 'ಅರ್ಥ' ಎಂಬ ಪದವಿದೆ. ಆದರೆ 'ನಞ್' ಎಂಬುದು ಪದವಾಗಿಲ್ಲ ಪ್ರತ್ಯಯವಾಗಿದೆ. ಆದ್ದರಿಂದ ನಲೋಪಕ್ಕೆ ಅವಕಾಶವೇ ಇಲ್ಲ.

ನಕಾರವು 'ಅಮಾನೋನಾಃ ಪ್ರತಿಷೇಧೇ' ಎಂಬಲ್ಲಿ ಹೇಳಿದ ನಿಷೇಧಾರ್ಥಕವಾದ ಶಬ್ದವಾಗಿದೆ, ಇದಕ್ಕೆ 'ಸುಪ್‌ಸುಪಾ' ಎಂಬುದರಿಂದ ಸಮಾಸವಾಗಿದೆ. ಇದಕ್ಕೆ ದೃಷ್ಟಾಂತ

– 'ನೈಕಧಾ' ಎಂಬುದು. ಇಲ್ಲಿಯೂ 'ನ'ಸಮಾಸವೆಂದು ಸಿದ್ಧಾಂತಕೌಮುದಿಯಲ್ಲಿ ಹೇಳಲಾಗಿದೆ.

**ಭಾವದೀಪಃ – ಸ ಹಿ ವನ್ದ್ಯ ಇತಿ ।।** ತ್ರಿವಿಧಾ ಹಿ ದೇವತಾ ವನ್ದ್ಯಾ ಭವತಿ, ವಿಶಿಷ್ಟಾ ಅಧಿಕೃತಾ ಇಷ್ಟಾ ಚ । ಭಕ್ತಿಪೂರ್ವಕದೇವತಾನತೇರ್ವಿಘ್ನವಿಘಾತಾರ್ಥತ್ವಾದ್ ವಿಶಿಷ್ಟೈವ ದೇವತಾ ತಸ್ಯೇಷ್ಟೇ। ಅಧಿಕೃತಾ ಚ ಸ್ವವಿಷಯಗ್ರನ್ಥಪ್ರಬೋಧಾದಿಕಂ ಸಮ್ಪಾದಯತಿ। ಇಷ್ಟಾಯಾಮೇವ ದೇವತಾಯಾಂ ಭಕ್ತ್ಯಾದಿಪೂರ್ವಂ ನಮನಂ ಭವತೀತಿ, '' 'ಗುಣೋದೀರ್ಣಂ ದೋಷವರ್ಜಿತಮ್' ಇತ್ಯಾಭ್ಯಾಂ ವೈಶಿಷ್ಟ್ಯಸ್ಯ, 'ಜ್ಞೇಯಮ್' ಇತ್ಯನೇನಾಧಿಕೃತತ್ವಸ್ಯ, 'ಗಮ್ಯಮ್' ಇತ್ಯನೇನೇಷ್ಟತ್ವಸ್ಯ ಚೋಕ್ತ್ಯಾ ನಮ್ಯತ್ವಮುಪಪಾದಿತಂ ಭವತಿ'' ಇತಿ ಭಾವಃ । ತೇನ **'ಭಾಷ್ಯಂ ಚಾತ್ಯರ್ಥವಿಸ್ತರಮ್' ಇತ್ಯನುವ್ಯಾಖ್ಯಾನೋಕ್ತಂ** ಲೇಶತೋ ದರ್ಶಿತಂ ಭವತಿ । **ತತ್ವಪ್ರದೀಪೇ** ತು **ಅರ್ಥಾನ್ತರಮಪ್ಯುಕ್ತಮ್ – ಗುರೂನಪೀತಿ ।।**

'ಸ ಹಿ ವಂದ್ಯೋ ಭವತಿ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯವನ್ನು ಹೀಗೆ ತಿಳಿಯಬೇಕು -

ದೇವತೆಯು ಮೂರು ಬಗೆಯಲ್ಲಿ ನಮಸ್ಕಾರಕ್ಕೆ ಅರ್ಹನಾಗುತ್ತಾನೆ.

೧. ವಿಶಿಷ್ಟನಾದಾಗ, ೨. ಅಧಿಕೃತನಾದಾಗ, ೩. ಇಷ್ಟನಾದಾಗ. ಯಾವುದೇ ಗ್ರಂಥವನ್ನು ಪ್ರಾರಂಭ ಮಾಡುವಾಗ ಭಕ್ತಿ ಪೂರ್ವಕವಾಗಿ ಮಾಡುವ ನಮಸ್ಕಾರಕ್ಕೆ ವಿಘ್ನಪರಿಹಾರವೇ ಮುಖ್ಯಪ್ರಯೋಜನವಾಗಿರುತ್ತದೆ. ವಿಶಿಷ್ಟವಾದ ಸಮಾರ್ಥ್ಯವನ್ನು ಹೊಂದಿರುವ ದೇವತೆಯಷ್ಟೇ ವಿಘ್ನಗಳನ್ನೆಲ್ಲಾ ಪರಿಹರಿಸಲು ಸಮರ್ಥನಾಗುತ್ತಾನೆ.

'ಅಧಿಕೃತ' ದೇವತೆಯೆಂದರೆ ಯಾವ ಗ್ರಂಥವನ್ನು ನಾವು ಅಧ್ಯಯನ ಮಾಡುತ್ತೇವೋ, ಆ ಗ್ರಂಥದಿಂದ ಪ್ರತಿಪಾದ್ಯನಾದ ದೇವತೆಯೆಂದರ್ಥ. ಈ ದೇವತೆಯು ಅಧ್ಯಯನ ಮಾಡುವ ಗ್ರಂಥದ ಯಥಾರ್ಥಜ್ಞಾನ ಬರುವಂತೆ ಅನುಗ್ರಹಿಸುತ್ತಾನೆ. ಆದ್ದರಿಂದ ಅಧಿಕೃತ ದೇವತೆಯನ್ನು ನಮಿಸುವುದು ಅತ್ಯಂತ ಆವಶ್ಯಕ.

ದೇವತೆಯು ನಮಗೆ ಇಷ್ಟವಾಗಿದ್ದರೆ ಮಾತ್ರ ಅವನಲ್ಲಿ ಮಾಡುವ ನಮಸ್ಕಾರವು ಭಕ್ತ್ಯತಿಶಯದಿಂದ ಯುಕ್ತವಾಗುತ್ತದೆ.

ಪ್ರಕೃತ ಗುಣಪರಿಪೂರ್ಣ ಹಾಗೂ ದೋಷವಿದೂರ ಎಂಬೆರಡು ವಿಶೇಷಣಗಳಿಂದ ನಾರಾಯಣನು ವಿಶಿಷ್ಟದೇವತೆಯಾಗಿದ್ದಾನೆಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ. 'ಜ್ಞೇಯಂ' ಎಂಬ ವಿಶೇಷಣದಿಂದ ಶಾಸ್ತ್ರದಿಂದ ಪ್ರತಿಪಾದ್ಯನಾಗಿದ್ದಾನೆಂದು ನಾರಾಯಣನು ಅಧಿಕೃತದೇವತೆಯಾಗಿದ್ದಾನೆಂದು ತಿಳಿಸಿರುತ್ತಾರೆ.

'ಗಮ್ಯಂ' ಎಂಬ ವಿಶೇಷಣಗಳಿಂದ ಮುಮುಕ್ಷುಗಳಿಂದ ಪ್ರಾಪ್ತನಾಗಿರುವ ಕಾರಣ, ನಾರಾಯಣನು ಇಷ್ಟದೇವತೆಯಾಗಿದ್ದಾನೆಂದು ತಿಳಿಸಿರುತ್ತಾರೆ. ಹೀಗೆ ಮಂಗಳಶ್ಲೋಕದಲ್ಲಿ ನಾಲ್ಕು ವಿಶೇಷಣಗಳನ್ನು ಉಲ್ಲೇಖ ಮಾಡುವ ಮೂಲಕ ನಾರಾಯಣನೇ ನಮಸ್ಕಾರಕ್ಕೆ ಅರ್ಹನಾಗಿದ್ದಾನೆಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

ಹೀಗೆ ಮಂಗಳಶ್ಲೋಕವನ್ನು ವ್ಯಾಖ್ಯಾನಮಾಡಿದ್ದರಿಂದ 'ಭಾಷ್ಯಂ ಚಾತ್ಯರ್ಥವಿಸ್ತರಮ್' ಎಂಬ ಅನುವ್ಯಾಖ್ಯಾನದ ಮಾತನ್ನು ಲೇಶತಃ ಅರ್ಥಮಾಡಿದಂತಾಯಿತು. ತತ್ವಪ್ರದೀಪದಲ್ಲಿ ಮಂಗಳಶ್ಲೋಕಕ್ಕೆ ಬೇರೆ ಬಗೆಯಲ್ಲಿ ವ್ಯಾಖ್ಯಾನಮಾಡಿದ್ದಾರೆ.

## ನಾರಾಯಣಶಬ್ದದಲ್ಲಿ ನಮ್ಯತ್ವಪ್ರಯೋಜಕವಾದ ಗುಣಗಳು

ಹೀಗೆ ಮಂಗಳಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳು ಸಮಗ್ರ-ಬ್ರಹ್ಮಮೀಮಾಂಸಾಶಾಸ್ತ್ರದ ಅರ್ಥವನ್ನು ಸಂಗ್ರಹಿಸುತ್ತಿವೆ. ಅದು ನಾರಾಯಣಶಬ್ದದ ನಿಷ್ಪತ್ತಿಯಿಂದಲೂ ತಿಳಿಯುತ್ತದೆಯೆಂದು ಇಲ್ಲಿಯ ತನಕ ಉಪಪಾದಿಸಿದ್ದಾಯಿತು. ಇದರಿಂದ ನಮ್ಯತ್ವಪ್ರಯೋಜಕವಾದ ಅಧಿಕೃತತ್ವವನ್ನೂ ನಾರಾಯಣನಿಗೆ ತೋರಿಸಿದಂತಾಯಿತು.

ಈಗ ನಮ್ಯತ್ವಪ್ರಯೋಜಕವಾದ ವಿಶಿಷ್ಟತ್ವ, ಅಧಿಕೃತತ್ವ, ಇಷ್ಟತ್ವ ಮೂರನ್ನೂ ನಾರಾಯಣನಲ್ಲಿ 'ಅಥವಾ ನಾರಾಯಣಸ್ಯೈವ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ೧) ಬಹುಗುಣತ್ವ ನಿರ್ದೋಷತ್ವಗಳಿಂದ ವಿಶಿಷ್ಟತ್ವವನ್ನು ೨) ಶಾಸ್ತ್ರಜ್ಞೇಯತ್ವದಿಂದ ಅಧಿಕೃತತ್ವವನ್ನು ೩) ಅಧೀತಶಾಸ್ತ್ರಗಮ್ಯನಾದ್ದರಿಂದ ಇಷ್ಟತ್ವವನ್ನು ತೋರಿಸಿದಂತಾಯಿತು. ಏಕೆಂದರೆ ಬೇರೆಲ್ಲೂ ಇರದ ಅಸಾಧಾರಣಗುಣವಿದ್ದರಷ್ಟೇ ವಿಶಿಷ್ಟನಾಗುತ್ತಾನೆ.

ಶಾಸ್ತ್ರಪ್ರತಿಪಾದ್ಯನಾದವನೇ ಅಧಿಕೃತನಾಗುತ್ತಾನೆ. ಅಪೇಕ್ಷಿತವಾದ ಫಲ ನೀಡುವವನೇ ಇಷ್ಟನಾಗುತ್ತಾನೆ.

ಭಕ್ತಿಪೂರ್ವಕದೇವತಾನಮಸ್ಕಾರದಿಂದ ವಿಘ್ನವಿಘಾತವು ಉಂಟಾಗುತ್ತದೆ. ವಿಘ್ನವಿಘಾತವನ್ನು ಸರ್ವೋತ್ತಮದೇವತೆಯಷ್ಟೇ ಮಾಡಲು ಸಮರ್ಥನಾಗುತ್ತಾನೆ. ಆದ್ದರಿಂದ ವಿಶಿಷ್ಟದೇವತೆಯು ನಮಸ್ಕಾರಕ್ಕೆ ಅರ್ಹನಾಗಿದ್ದಾನೆ. ಅಧಿಕೃತದೇವತೆಯು ತನ್ನನ್ನು ಪ್ರತಿಪಾದಿಸುವ ಗ್ರಂಥಜ್ಞಾನವನ್ನು ಜಿಜ್ಞಾಸುಗಳಿಗೆ ನೀಡುತ್ತಾನೆ. ಆದ್ದರಿಂದ ಅಧಿಕೃತದೇವತೆಯೂ ನಮಸ್ಕಾರಕ್ಕೆ ಅರ್ಹ. ಇಷ್ಟದೇವತೆಯಲ್ಲಷ್ಟೇ ಭಕ್ತಾದಿಗಳು ಹುಟ್ಟುತ್ತವೆ. ಆದ್ದರಿಂದ ಇಷ್ಟದೇವತೆಯೂ ನಮಸ್ಕಾರಕ್ಕೆ ಅರ್ಹನಾಗಿದ್ದಾನೆ. 'ಭಾಷ್ಯಂ ಚಾತ್ಯರ್ಥವಿಸ್ತರಮ್' ಎಂಬ ಅನುವ್ಯಾಖ್ಯಾನದಲ್ಲಿ ಹೇಳಿದ್ದನ್ನು ಇಲ್ಲಿ ಲೇಶತಃ ತೋರಿಸಿದಂತಾಯಿತು. ತತ್ತ್ವಪ್ರದೀಪದಲ್ಲಿ ಮತ್ತೊಂದು ಬಗೆಯ ವ್ಯಾಖ್ಯಾನವಿದೆ. ಅದನ್ನು ಶಿಷ್ಯರು ಗಮನಿಸಿ ತಿಳಿಯಬೇಕು.

''ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ'' ಎಂಬ ಪ್ರಮಾಣದಂತೆ ಭಗವಂತನಲ್ಲಿ ಭಕ್ತಿ ಮಾಡುವಂತೆ ಗುರುಗಳಲ್ಲಿಯೂ ಮಾಡಬೇಕು ಎಂಬುದನ್ನು ತಿಳಿಸಲು ಶ್ರೀಮದಾಚಾರ್ಯರು ಗುರುಗಳನ್ನು ನಮಿಸಿದ್ದಾರೆ. ಗುರುಗಳನ್ನು ಹೆಸರಿಸದಿರಲು ಕಾರಣವನ್ನು 'ಗುರೋಃ' ಎಂಬ ವಾಕ್ಯದಿಂದ ತಿಳಿಸಿದ್ದಾರೆ.

## ಗುರುಗಳ ಹೆಸರನ್ನೇಕೆ ಉಚ್ಚರಿಸಬಾರದು

ಶಂಕೆ –

ಯಸ್ಮಾದ್ ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥

(ಬ್ರಹ್ಮ ಇಂದ್ರ ರುದ್ರ ಮೊದಲಾದ ದೇವತೆಗಳು, ಲಕ್ಷ್ಮಿಯೂ ಕೂಡ ಯಾರಿಂದ ಜ್ಞಾನದ ಸ್ಫೂರ್ತಿಯನ್ನು ಪಡೆದಿದ್ದಾರೋ, ಅಂತಹ ಹರಿಯೆಂಬ ಗುರುವಿಗೆ ನಮಸ್ಕಾರವು) ಹೀಗೆ ಈಶಾವಾಸ್ಯೋಪನಿಷದ್ಭಾಷ್ಯದಲ್ಲಿ ಹರಯೇ ಎಂದು ಗುರುಗಳ

ಹೆಸರನ್ನು ಉಲ್ಲೇಖಿಸಿದ್ದಾರೆ. ಆದರೆ ಈ ಭಾಷ್ಯದ ಮಂಗಳಶ್ಲೋಕದಲ್ಲಿ ಗುರುಗಳನ್ನು ಹೆಸರಿಸದಿರಲು ಏನು ಕಾರಣ?

ಸಮಾಧಾನ - ಗುರುಗಳು ಪ್ರತ್ಯಕ್ಷವಾಗಿದ್ದಾಗ ಹೆಸರನ್ನು ಉಚ್ಚರಿಸಬಾರದು. ಪರೋಕ್ಷವಾಗಿದ್ದಾಗ ಗುರುಗಳ ಹೆಸರನ್ನು ಉಚ್ಚರಿಸಿದರೆ ತಪ್ಪಲ್ಲ. ವಸ್ತುತಃ ಶ್ರೀಮದಾಚಾರ್ಯರು ನಿತ್ಯಾಪರೋಕ್ಷಿಗಳು. ಆದರೂ ಸಹ ಶಾಸ್ತ್ರದ ಮರ್ಯಾದೆಯ ರಕ್ಷಣೆಗಾಗಿ ಪರೋಕ್ಷವಾಚಕವಾದ ''ತಸ್ಮೈ''- ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. ಅಂತಹ ಪರೋಕ್ಷವಾಚಕವಾದ ಶಬ್ದಗಳನ್ನು ಇಲ್ಲಿ ಪ್ರಯೋಗಿಸದ ಕಾರಣ ಗುರುಗಳಾದ ವೇದವ್ಯಾಸದೇವರು ಪ್ರತ್ಯಕ್ಷವಾಗಿ ಕುಳಿತಿದ್ದಾರೆಂದು ತಿಳಿಯಬೇಕು. ''ಗುರೋರ್ನಾಮ ನ ಗೃಹ್ಣೀಯಾತ್'' ಎಂದಿಷ್ಟೇ ಹೇಳಿದ್ದಾರೆ ಸಾಕಿತ್ತು. ಭಾರ್ಯಾಪತೇರಪಿ ಎಂದು ಹೇಳಬೇಕಾಗಿರಲಿಲ್ಲ. ಆದರೆ 'ಮಮ ಯೋನಿಃ' ಎಂಬ ಲಕ್ಷ್ಮೀಸೂಕ್ತದಲ್ಲಿ ಪತಿಯಾದ ಪರಮಾತ್ಮನ ಹೆಸರನ್ನು ಹೇಳದಿರಲು ಕಾರಣವನ್ನು ಇದರಿಂದ ಸೂಚಿಸಿದ್ದಾರೆ.

## 'ಗುರೂನ್' ಎಂದು ಬಹುವಚನವೇಕೆ ?

**भावदीपः – भाष्ये बहुवचनं 'बहुवचनं गौरवादेव' इति गीताभाष्यटीकोक्ताशयं वा । 'तमेव शास्त्रे'त्यादिभिर्बहुभिः प्रकारैः यद् गौरवत्वोपपादनं तेन 'गुरूंश्च' इति बहुवचनान्तं पदं विवृतमिति सुधोक्ताभिप्रायं वेति भावः । पतेः = पत्युः । शेषोक्तेर्वक्ष्यमाणलक्ष्मीवाक्ये 'मम योनिः' इत्यत्रोपयोगः।**

ಭಾಷ್ಯದಲ್ಲಿ ಗುರೂನ್ ಎಂಬ ಬಹುವಚನವು ಗುರುಗಳಲ್ಲಿರುವ ಗೌರವವನ್ನು ತಿಳಿಸುತ್ತದೆ ಅಥವಾ ಗೀತಾಭಾಷ್ಯದ ಟೀಕೆಯಲ್ಲಿ ಹೇಳಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಗುರೂನ್ ಎಂಬ ಬಹುವಚನಪ್ರಯೋಗಕ್ಕೆ ಸುಧೆಯಲ್ಲಿ ಹೇಳಿದ ''ಗುರುತ್ವಕ್ಕೆ ಉಪಪಾದಕವಾದ ಗುರುತ್ವ, ಶಾಸ್ತ್ರಪ್ರಭವತ್ವ ಮೊದಲಾದ ಅನೇಕ ಧರ್ಮಗಳು ಗುರುಗಳಾದ ವೇದವ್ಯಾಸದೇವರಲ್ಲಿ ಇವೆ ಎಂದು ಸೂಚಿಸಲು ಬಹುವಚನವನ್ನು ಪ್ರಯೋಗಿಸಿದ್ದಾರೆ'' ಎಂಬ ಕಾರಣವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

'ಪತೇಃ' ಎಂದರೆ 'ಗಂಡನ' ಎಂದರ್ಥ. ಹೆಂಡತಿಯಾದವಳು ಗಂಡನ ಹೆಸರನ್ನು ಉಚ್ಚರಿಸಬಾರದೆಂಬ ವಾಕ್ಯಾರ್ಥವನ್ನು ಉಲ್ಲೇಖಿಸಿದ್ದೇಕೆಂದರೆ 'ಮಮಯೋನಿಃ' ಎಂಬ ಲಕ್ಷ್ಮೀವಾಕ್ಯದಲ್ಲಿ ಉಪಯೋಗವಾಗಲು.

## 'ಚ' 'ಅಪಿ'ಶಬ್ದಗಳ ಸ್ವಾರಸ್ಯ

**ಭಾವದೀಪಃ** – 'चकारेणैव गुरुदेवतानतिसमुच्चयलाभात् अपीति व्यर्थम्?' ಇತ್ಯತ ಆಹ – **स्वस्य इति** ।। कथम्? ಇತ್ಯತ ಆಹ – **'यद्यपि'** ಇತ್ಯಾದಿನಾ **'नतिः'** ಇತ್ಯನ್ತೇನ । **अनेनैव** ಇತಿ ।। 'विशेषणचतुष्टयेनैव' ಇತ್ಯರ್ಥಃ । अन्यार्थमुपात्तेनापि इति 'एव'कारार्थः । सम्बन्धाश्चेति न केवलं प्रागुक्तार्थ इति चार्थः । अधिकार्यादिसूचनं व्यर्थमित्यतः प्रवृत्त्यङ्गत्वमेकं हेतुमुक्त्वाऽन्यं चाह – **तत्स्मरणस्य इति** ।। 'सूचिता' ಇತ್ಯನ್ವಯಃ । तेषां श्रोतृप्रवृत्त्यङ्गत्वं निर्विषये निष्फलेऽन्यविषयफलोद्देशेनान्यत्र चाप्रवृत्तेस्तद्विषयफले ज्ञात्वैव तत्र प्रवृत्तेर्दर्शनादिति ज्ञेयम् ।। **तदुक्तम् इति** ।। 'प्रथमस्कन्धतात्पर्ये' ಇति योज्यम् । **प्रारभतः** = प्रारभमाणस्य । 'चन्द्रादयस्तु मन्यन्ते सर्वस्मादुभयं पदम्' ಇತ್ಯುಕ್ತೇಃ । **'महत्'** ಇति भिन्नं पदम् ।

ಪ್ರಶ್ನೆ - ಮಂಗಳಶ್ಲೋಕದಲ್ಲಿ 'ಗುರೂಂಶ್ಚಾಪಿ' ಎಂದು ಒಂದೇ ಅರ್ಥವುಳ್ಳ 'ಚ' ಮತ್ತು 'ಅಪಿ' ಎಂಬ ಎರಡು ಪದಗಳನ್ನು ಏಕೆ ಹೇಳಿದರು? ದೇವತೆಯನ್ನು ಸಮುಚ್ಚಯ ಮಾಡಲು ಚ ಶಬ್ದವೇ ಸಾಕು. 'ಅಪಿ' ಶಬ್ದವು ಬೇಡವಲ್ಲವೆ?

ಉತ್ತರ - ಇದಕ್ಕೆ ಉತ್ತರರೂಪವಾಗಿ ಟೀಕೆಯಲ್ಲಿ 'स्वस्य गुरुदेवताभेदे अरुचिं सूचयति अपिपदेन' ಎಂದಿದ್ದಾರೆ. ದೇವತೆಯನ್ನು ಪ್ರತ್ಯೇಕವಾಗಿ ನಮಸ್ಕಾರ ಮಾಡಿದಾಗ ಗುರು ಬೇರೆ ದೇವತೆ ಬೇರೆಯೆಂಬ ಸಂಶಯ ಬರುತ್ತದೆ. ಈ ಸಂಶಯವನ್ನು 'ಅಪಿ' ಪದವು ನಿಂದಿಸುತ್ತಿದೆ. ಶ್ರೀಮದಾಚಾರ್ಯರಿಗೆ ದೇವತೆಯೆನಿಸಿದ ನಾರಾಯಣನೇ ವೇದವ್ಯಾಸರೂಪದಿಂದ ಗುರು ಎನಿಸಿದ್ದಾನೆ.

'ಯದ್ಯಪಿ' 'ತಥಾಪಿ' ಇತ್ಯಾದಿಗ್ರಂಥದಿಂದ ಈ ಪ್ರಶ್ನೆ ಮತ್ತು ಉತ್ತರಗಳನ್ನು ಟೀಕಾರಾಯರು ನಿರೂಪಿಸಿದ್ದಾರೆ. ''ಪೃಥಜ್ಞಿತಿರಿತಿ'' ಎಂಬಲ್ಲಿರುವ ಇತಿಶಬ್ದವು ಶ್ಲೋಕವ್ಯಾಖ್ಯಾನವು ಮುಗಿಯಿತು ಎಂಬರ್ಥವನ್ನು ಹೇಳುತ್ತಿದೆ. ಅಥವಾ 'ಯದ್ಯಪಿ' ಎಂಬ ಗ್ರಂಥಕ್ಕೆ ಮತ್ತೊಂದು ಬಗೆಯಲ್ಲಿ ಅವತಾರಿಕೆಯನ್ನು ನೀಡಬಹುದು. ಗುರು ಹಾಗೂ ದೇವತೆಗಳು ಭಿನ್ನರಾಗಿದ್ದಾರೆಂಬ ವಿಷಯದಲ್ಲಿ ಅರುಚಿಯನ್ನು ತೋರಿಸಿದ್ದಾರೆಂದು 'ಅಪಿ'ಪದದಿಂದ ಸೂಚಿಸಿದ್ದಾರೆಂದು ಹೇಳಿದಿರಿ. ಇದು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ 'ಯದ್ಯಪಿ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ವಿಶೇಷ ಅನುಗ್ರಹಕ್ಕೋಸ್ಕರ ಗುರುಗಳನ್ನು ಪ್ರತ್ಯೇಕ ನಮಸ್ಕರಿಸಿದ್ದಾರೆಂದು ಇದರಿಂದ ತಿಳಿಯುತ್ತದೆ. ಈ ಪಕ್ಷದಲ್ಲಿ 'ಇತಿ'ಶಬ್ದಕ್ಕೆ 'ಪ್ರಕಾರ' ಎಂದರ್ಥ. 'ಅರುಚಿಂ ಸೂಚಯತಿ' ಎಂಬಲ್ಲಿ 'ಇತಿ'ಶಬ್ದಕ್ಕೆ ಅನ್ವಯ ಮಾಡಬೇಕು.

ಉಪಲಕ್ಷಣಯಾ ಇದನ್ನು ತಿಳಿಯಬೇಕು - ಅನುವ್ಯಾಖ್ಯಾನದ ಮಂಗಳ-ಪದ್ಯದಲ್ಲಿರುವ 'ಅಸ್ಯೋದ್ಭವಾದಿದಮ್' ಇತ್ಯಾದಿಯಾದ ಜಗಜ್ಜನ್ಮಾದಿಕಾರಣತ್ವವನ್ನೂ ಇಲ್ಲಿ ಸಮುಚ್ಚಯ ಮಾಡಿ, ಇಟ್ಟುಕೊಳ್ಳಬೇಕೆಂದು 'ಅಪಿ' ಪದ ಹೇಳುತ್ತಿದೆ.

## ಅನುಬಂಧಚತುಷ್ಟಯವಿರುವುದರಿಂದ ಶಾಸ್ತ್ರವು ಅನಾರಂಭಣೀಯವಲ್ಲ

ಭಾಷ್ಯದ ಮಂಗಳಪದ್ಯವು ಮಂಗಳಾಚರಣೆಗೋಸ್ಕರ ಹೇಳಲ್ಪಟ್ಟಿದ್ದರೂ ಅನುಬಂಧಚತುಷ್ಟಯವನ್ನು ತಿಳಿಸುತ್ತದೆ. ಆದ್ದರಿಂದ ಅನುಬಂಧಚತುಷ್ಟಯವಿಲ್ಲದ ಈ ಗ್ರಂಥವು ಅನಾರಂಭಣೀಯವೆಂಬ ಶಂಕೆಗೆ 'ಅನೇನೈವ' ಎಂಬ ಗ್ರಂಥವು ಪರಿಹಾರ ನೀಡುತ್ತಿದೆ. ಪ್ರಥಮಮಂಗಳಶ್ಲೋಕದಿಂದಲೇ ಅನುಬಂಧಚತುಷ್ಟಯವನ್ನು ತಿಳಿಸಿದ್ದಾರೆಂದು ಅರ್ಥ. ಅಂದರೆ 'ಮಂಗಳಾಚರಣೆಗೋಸ್ಕರ ಈ ಶ್ಲೋಕವು ಹೊರಟಿದ್ದರೂ ಅನುಬಂಧಚತುಷ್ಟಯವನ್ನೂ ಸಹ ತಿಳಿಸುತ್ತಿದೆ' ಎಂದು ಅಭಿಪ್ರಾಯ.

ಗ್ರಂಥಕ್ಕೆ ಅನುಬಂಧಚತುಷ್ಟಯವಿದ್ದರೆ ಸಾಕು. ಅದನ್ನು ತಿಳಿಯಬೇಕಾಗಿಲ್ಲ, ತಿಳಿಸುವುದಕ್ಕೋಸ್ಕರ ಸೂಚಿಸಲೂ ಬೇಕಿಲ್ಲ ಎಂಬ ಶಂಕೆಗೆ ಉತ್ತರರೂಪವಾಗಿ 'ಶ್ರೋತೃಪ್ರವೃತ್ತ್ಯಂಗಭೂತಾಃ' ಎಂದಿದ್ದಾರೆ. ಜ್ಞಾತವಾದ ಅನುಬಂಧಚತುಷ್ಟಯವೇ ಪ್ರವೃತ್ತಿಗೆ

ಕಾರಣವಾಗಿದೆ. ಆದಕ್ಕೋಸ್ಕರ ಆದರ ಸೂಚನೆಯು ಅತ್ಯಾವಶ್ಯಕ. ಹೀಗೆ ಪ್ರವೃತ್ತಿಗೋಸ್ಕರ ಅಧಿಕಾರ್ಯಾದಿಗಳ ಸೂಚನೆ ಸಾರ್ಥಕ ಎಂದಷ್ಟೇ ಅಲ್ಲ. ಅಧಿಕಾರ್ಯಾದಿಗಳನ್ನು ಸ್ಮರಣೆ ಮಾಡುವುದರಿಂದ ಮಹಾಫಲವೇ ದೊರೆಯುತ್ತದೆ. ಇದನ್ನು 'ತತ್ಸ್ಮರಣಸ್ಯ' ಎಂಬ ವಾಕ್ಯವು ಪ್ರತಿಪಾದಿಸುತ್ತಿದೆ.

'ಅಧಿಕಾರಂ ಫಲಂ' ಎಂಬ ಶ್ಲೋಕವನ್ನು ಭಾಗವತದ ಪ್ರಥಮಸ್ಕಂಧದ ತಾತ್ಪರ್ಯದಲ್ಲಿ ಆಚಾರ್ಯರು ಉಲ್ಲೇಖಿಸಿದ್ದಾರೆ. 'ಪ್ರಾರಭತಃ' ಎಂಬ ಪದಕ್ಕೆ ಪ್ರಾರಂಭಮಾಡುತ್ತಿರುವ ಎಂದರ್ಥ. ('ಚಂದ್ರಾದಯಸ್ತು ಮನ್ಯಂತೇ ಸರ್ವಸ್ಮಾದುಭಯಂ ಪದಮ್' - ಚಾಂದ್ರವ್ಯಾಕರಣದ ಪ್ರಕಾರ ಎಲ್ಲ ಧಾತುಗಳು ಉಭಯಪದಿ ಎನಿಸುತ್ತವೆ.) ಪ್ರಮಾಣಶ್ಲೋಕದಲ್ಲಿ 'ಮಹತ್ಫಲಮ್' ಎಂದಿದೆ. ವಸ್ತುತಃ 'ಆನ್ಮಹತಃ ಸಮಾನಾಧಿಕರಣೇ' ಇತ್ಯಾದಿ ಸೂತ್ರದಂತೆ ಮಹಾಫಲಮ್ ಎಂದಾಗಬೇಕು. ಆದರೆ ಮಹತ್ ಎಂಬ ಬೇರೆ ಪದವಾದ್ದರಿಂದ ದೋಷವಿಲ್ಲ.

ಅನುಬಂಧಚತುಷ್ಟಯವನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು - ಗ್ರಂಥದ ಅಧ್ಯಯನದಲ್ಲಿ ಯಾವ ಬುಭುತ್ಸುವು ಅರ್ಹತೆಯನ್ನು ಪಡೆದಿರುತ್ತಾನೋ, ಅವನಿಗೆ ಅಧಿಕಾರಿಯೆನ್ನುತ್ತಾರೆ. ಗ್ರಂಥಾಧ್ಯಯನವನ್ನು ಮಾಡುವುದರಿಂದ ದೊರೆಯುವ ಫಲವು ಪ್ರಯೋಜನ ಎಂದು ಕರೆಸಿಕೊಳ್ಳುತ್ತದೆ. ಗ್ರಂಥದಿಂದ ಪ್ರತಿಪಾದ್ಯವಾದ ವಸ್ತುವೇ ವಿಷಯ ಎಂದು ಕರೆಸಿಕೊಳ್ಳುತ್ತದೆ. ಇವುಗಳಿಗಿರುವ ಪರಸ್ಪರ ಸಂಬಂಧವು, ಸಂಬಂಧ ಎಂದು ಕರೆಸಿಕೊಳ್ಳುತ್ತದೆ. ಅಧಿಕಾರಿ, ಪ್ರಯೋಜನ, ವಿಷಯ, ಸಂಬಂಧಗಳನ್ನು ತಿಳಿಯಬೇಕು. ಅಧಿಕಾರಿ ಹಾಗೂ ವಿಷಯಗಳಿಗೆ ಜ್ಞಾತೃ, ಜ್ಞೇಯ, ಭಾವಸಂಬಂಧವಿದೆ. ಪ್ರಯೋಜನ ಮತ್ತು ಅಧಿಕಾರಿಗೆ ಗಮ್ಯಗಂತೃಭಾವ ಸಂಬಂಧವಿದೆ. ಪ್ರಯೋಜನ ಮತ್ತು ವಿಷಯಕ್ಕೆ ಪ್ರಾಪ್ಯಪ್ರಾಪಕಭಾವ ಸಂಬಂಧವಿದೆ. ವಿಷಯ ಹಾಗೂ ಗ್ರಂಥಗಳಿಗೆ ಪ್ರತಿಪಾದ್ಯಪ್ರತಿಪಾದಕಭಾವ ಸಂಬಂಧವಿದೆ. ಹೀಗೆ ಪ್ರತಿಯೊಂದು ಪರಸ್ಪರ ಸಂಬಂಧವನ್ನು ತಿಳಿದುಕೊಳ್ಳಬೇಕು.

ಗ್ರಂಥವನ್ನು ಅಧ್ಯಯನ ಮಾಡುವ ಮೊದಲು ಪ್ರತಿಯೊಬ್ಬರಿಗೂ ಈ ಗ್ರಂಥವು ಯಾವ ವಿಷಯವನ್ನು ಹೇಳಲು ಹೊರಟಿದೆ ಎಂಬ ಕುತೂಹಲ ಮೂಡುತ್ತದೆ.

ಅನಂತರ ಈ ಅಧ್ಯಯನ ಮಾಡುವುದರಿಂದ ನನಗೇನು ಪ್ರಯೋಜನ ಎಂಬ ಪ್ರಶ್ನೆ ಬರುತ್ತದೆ. ಅನಂತರ ಈ ಗ್ರಂಥವನ್ನು ನಾನು ಓದಬಹುದೇ ? ಜಿಜ್ಞಾಸೆಯು ಹುಟ್ಟಿ, ಇವುಗಳಿಗಿರುವ ಪರಸ್ಪರ ಸಂಬಂಧದ ಬಗ್ಗೆಯೂ ಪ್ರಶ್ನೆ ಬರುತ್ತದೆ. ಆದ್ದರಿಂದ ಗ್ರಂಥದ ಪ್ರಾರಂಭದಲ್ಲಿ ಅಧಿಕಾರಿ ವಿಷಯ ಪ್ರಯೋಜನ ಹಾಗೂ ಸಂಬಂಧಗಳ ಬಗ್ಗೆ ಅವಶ್ಯವಾಗಿ ತಿಳಿದುಕೊಳ್ಳಲೇ ಬೇಕು. ಇವುಗಳನ್ನು ತಿಳಿಯದೇ ಗ್ರಂಥವನ್ನು ಅಧ್ಯಯನ ಮಾಡಬಾರದು. ಮತ್ತು ಹೀಗೆ ತಿಳಿದು ಓದುವುದರಿಂದ ಪುಣ್ಯದ ಲಾಭವೂ ಕೂಡ ಇರುತ್ತದೆ. ಆದ್ದರಿಂದ ಗ್ರಂಥದ ಪ್ರಾರಂಭದಲ್ಲಿ ಅನುಬಂಧಚತುಷ್ಟಯಗಳನ್ನು ತಿಳಿಯುವುದು ಅತ್ಯಂತ ಅನಿವಾರ್ಯವೆಂದು ಭಾಗವತತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

**भावदीपः – ननु विघ्नाभावस्य नमस्कारेणैव सिद्धेर्ग्रथनं व्यर्थमेव । यद्यपि 'तत्स्मरणस्य' इत्यादि तदप्यसाध्वेव । अधिकार्यादिसूचनस्य श्रोतृप्रवृत्त्यङ्गतया कार्यत्वेऽपि न महाफलार्थं तत्कार्यं तेन विनापि तत्स्मरणसम्भवेन तेनैव फलसिद्धिरित्यत आह – नमस्कार इति ।। यथा क्रममन्वयः । 'यद्यदाचरति श्रेष्ठः' इत्यादेः शिष्या अप्येवं कुर्युरिति बोधनार्थम् इत्यर्थः । सूचिता इत्युक्तमेव व्यनक्ति – तथाहि इति ।। विषय इति ।। 'सूचित' इति सर्वत्रान्वेति । प्रयोजनम् इति ।। 'यथाक्रममवान्तर-प्रधानप्रयोजने सूचिता' इत्यर्थः । यथायोग्यम् इति ।। नारायणस्य विषयस्य शास्त्रप्रतिपाद्यत्वं ज्ञानस्य, तद्विषयकत्वं गमनाख्यफलस्य, तज्जन्यत्वं सम्बन्ध इति भावः ।।**

## ಮಂಗಳಾಚರಣೆಯ ಉಲ್ಲೇಖ ಬಹಳ ಮುಖ್ಯ.

ಪ್ರಶ್ನೆ - ಗ್ರಂಥದ ನಿರ್ವಿಘ್ನಪರಿಸಮಾಪ್ತಿಗೆ ನಮಸ್ಕಾರಮಾಡಿದರೆ ಸಾಕು. ಮಂಗಳಾಚರಣೆಯನ್ನು ಗ್ರಂಥದಲ್ಲಿ ನಿಬಂಧನೆ ಮಾಡಬೇಕಿಲ್ಲ. ಅದರಂತೆ ಅಧಿಕಾರ್ಯಾದಿಗಳ ಸೂಚನೆಯು ಪ್ರವೃತ್ತ್ಯಂಗವಾದ್ದರಿಂದ ಕರ್ತವ್ಯವಾಗಿರಬಹುದು.

ಆದರೆ ಮಹಾಫಲಕ್ಕೋಸ್ಕರ ಮಾಡಬೇಕಿಲ್ಲ. ಅಧಿಕಾರ್ಯಾದಿಗಳ ಸ್ಮರಣೆಯಿಂದಲೇ ಮಹಾಫಲವು ದೊರೆಯುವಾಗ ಅದರ ಸೂಚನೆಯು ಅನಾವಶ್ಯಕವಲ್ಲವೇ?

ಉತ್ತರ - ಈ ಪ್ರಶ್ನೆಗೆ ಉತ್ತರರೂಪವಾಗಿ 'ನಮಸ್ಕಾರಾಧಿಕಾರ್ಯಾದಿಗ್ರಥನಸೂಚನೇ' ಎಂದು ಉತ್ತರಿಸುತ್ತಿದ್ದಾರೆ. ನಮಸ್ಕಾರಾಧಿಕಾರ್ಯಾದಿ ಎಂಬಲ್ಲಿರುವ ನಮಸ್ಕಾರಪದಕ್ಕೆ ಗ್ರಥನ ಎಂಬಲ್ಲಿ ಅನ್ವಯ. ಅಧಿಕಾರಿಪದಕ್ಕೆ ಸೂಚನೆ ಎಂಬಲ್ಲಿ ಅನ್ವಯ. ಭಕ್ತಿಯಿಂದ ನಮಸ್ಕಾರಮಾಡಿದರೆ ಸಾಕು. ನಿರ್ವಿಘ್ನವಾಗಿ ಗ್ರಂಥವು ಪರಿಸಮಾಪ್ತಿ ಆಗುತ್ತದೆ. ಆದರೆ ತಾವು ಮಾಡಿದ ಮಂಗಳವನ್ನು ಗ್ರಂಥದಲ್ಲಿ ನಿಬಂಧನೆ ಮಾಡದಿದ್ದರೆ ಶಿಷ್ಯರಿಗೆ ತಿಳಿಯುವುದಿಲ್ಲ. ಹಿರಿಯರು ಮಂಗಳವನ್ನು ಮಾಡಿಲ್ಲವೆಂದು ತಿಳಿದು ತಾವೂ ಸಹ ಮಂಗಳವನ್ನು ಮಾಡಲಾರರು. (ಭಾ- 'ಯದ್ಯದಾಚರತಿ ಶ್ರೇಷ್ಠಃ' ಎಂಬ ಪ್ರಮಾಣದಂತೆ.) ಆದಕ್ಕೋಸ್ಕರ ನಮಸ್ಕಾರದ ಗ್ರಥನವು ಶಿಷ್ಯಶಿಕ್ಷಣೆಗೋಸ್ಕರ ಸಾರ್ಥಕವಾಗಿದೆ. ಆದರಂತೆ ಅಧಿಕಾರ್ಯಾದಿಗಳ ಸ್ಮರಣೆಯು ಬೇರೆಯದರಿಂದ ಬರಬಹುದು. ಆದರೆ ಗ್ರಂಥಾರಂಭದಲ್ಲಿ ಅದನ್ನು ಸೂಚಿಸದಿದ್ದರೆ ಅಧಿಕಾರ್ಯಾದಿಗಳು ಬೇಕಾಗಿಲ್ಲವೆಂದು ಶಿಷ್ಯರು ಅದರ ಸ್ಮರಣೆಯನ್ನು ಮಾಡಲಾರರು. ಆದ್ದರಿಂದ ಮಹಾಫಲಕ್ಕೋಸ್ಕರ ಅಧಿಕಾರ್ಯಾದಿಗಳ ಸ್ಮರಣೆಯು ಆವಶ್ಯಕವೆಂದು ಶಿಷ್ಯರಿಗೆ ಶಿಕ್ಷಣ ಮಾಡುವುದಕ್ಕೋಸ್ಕರ ಸೂಚನೆಯು ಸಾರ್ಥಕವಾಗಿದೆ. ಅಧಿಕಾರ್ಯಾದಿಗಳ ಸೂಚನೆಗೆ ಫಲವನ್ನು 'ತಥಾಹಿ' ಎಂಬ ಗ್ರಂಥದಿಂದ ನಿರೂಪಿಸಿದ್ದಾರೆ. 'ಸೂಚಿತಃ' ಎಂಬ ಪದಕ್ಕೆ ವಿಷಯ, ಪ್ರಯೋಜನ, ಅಧಿಕಾರಿ, ಸಂಬಂಧ ಎಂದು ಎಲ್ಲೆಡೆ ಅನ್ವಯಿಸಬೇಕು. 'ತಜ್ಜ್ಞಾನಗಮನೇ ಪ್ರಯೋಜನಮ್' ಎಂಬ ಟೀಕೆಯಲ್ಲಿ ಭಗವಂತನ ಜ್ಞಾನವು ಅವಾಂತರಪ್ರಯೋಜನ, ಭಗವಂತನ ಪ್ರಾಪ್ತಿಯು ಮುಖ್ಯಪ್ರಯೋಜನವೆಂದು ಹೇಳಿದ್ದಾರೆ. 'ಯಥಾಸಂಭವಮ್(ಯಥಾಯೋಗ್ಯಂ-ಪಾ)' ನಾರಾಯಣನೆಂಬ ವಿಷಯದಲ್ಲಿ ಪ್ರತಿಪಾದ್ಯತ್ವವು, ಜ್ಞಾನದಲ್ಲಿ ವಿಷಯಕತ್ವವು, ಗಮನದಲ್ಲಿ ಜ್ಞಾನಜನ್ಯತ್ವವು ಸಂಬಂಧವೆಂದು ತಿಳಿಯಬೇಕು. ನಮಸ್ಕಾರಗ್ರಥನದ ಪ್ರಯೋಜನವನ್ನು ಹಿಂದೆಯೂ ಹೇಳಬಹುದಿತ್ತು. ಇಲ್ಲಿಯೇ ಹೇಳಿದ್ದರಿಂದ ಎರಡು ಶಂಕೆಯನ್ನು ಒಟ್ಟಿಗೆ ಪರಿಹರಿಸಿದಂತಾಯಿತು.

## ಬ್ರಹ್ಮಮೀಮಾಂಸಾಶಾಸ್ತ್ರ ರಚನೆಯ ಹಿನ್ನೆಲೆ

**ಬ್ರಹ್ಮಸೂತ್ರಭಾಷ್ಯಮ್ –**

**೧) द्वापरे सर्वत्र ज्ञान आकुलीभूते तन्निर्णयाय ब्रह्मरुद्रेन्द्रादिभिरर्थितो भगवान्नारायणो व्यासत्वेनावततार ।**

**೨) अथेष्टानिष्टप्राप्तिपरिहारेच्छूनां तयोगमविजानतां तज्ज्ञापनार्थं वेदमुत्सन्नं व्यञ्जयंश्चतुर्धा व्यभजत् । चतुर्विंशतिधैकशतधा सहस्रधा द्वादशधा च ।**

**೩) तदर्थनिर्णयाय ब्रह्मसूत्राणि चकार ।**

(೧) ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯಲ್ಲಿ ಸಕಲಸಜ್ಜನರ ತತ್ವಜ್ಞಾನವು ಸಂಶಯಾಸ್ಪದವಾದಾಗ ತತ್ವಜ್ಞಾನದ ನಿರ್ಣಯಕ್ಕೋಸ್ಕರ ಬ್ರಹ್ಮರುದ್ರ ಇಂದ್ರ ಮೊದಲಾದ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಷಡ್ಗುಣೈಶ್ವರ್ಯಸಂಪನ್ನನಾದ ನಾರಾಯಣನು ವೇದ-ವ್ಯಾಸರೂಪದಿಂದ ಅವತರಿಸಿದನು.

(೨) ಅವತಾರ ಮಾಡಿದ ಕೂಡಲೇ, ಇಷ್ಟಪ್ರಾಪ್ತಿ ಹಾಗೂ ಅನಿಷ್ಟಪರಿಹಾರದ ಅಪೇಕ್ಷೆ ಇದ್ದರೂ ಅದರ ಉಪಾಯವನ್ನು ತಿಳಿಯದೆ ದುಃಖಪಡುತ್ತಿರುವ ಸಜ್ಜನರಿಗೆ, ಇಷ್ಟಪ್ರಾಪ್ತಿ ಹಾಗೂ ಅನಿಷ್ಟಪರಿಹಾರದ ಉಪಾಯವನ್ನು ತಿಳಿಸುವುದಕ್ಕಾಗಿ; ಅಪಪಾಠಾದಿಗಳಿಂದ ತಿರೋಹಿತವಾದ ವೇದವನ್ನು ಶುದ್ಧವಾಗಿ ಉಪದೇಶಿಸುತ್ತಾ, ನಾಲ್ಕು ಭಾಗಗಳಾಗಿ ವಿಂಗಡಿಸಿದನು. ಋಗ್ವೇದವನ್ನು ಇಪ್ಪತ್ತನಾಲ್ಕುಶಾಖೆಗಳನ್ನಾಗಿ, ಯಜುರ್ವೇದವನ್ನು ನೂರೊಂದು ಶಾಖೆಗಳನ್ನಾಗಿ, ಸಾಮವೇದವನ್ನು ಸಾವಿರಶಾಖೆಗಳನ್ನಾಗಿ, ಅಥರ್ವವೇದವನ್ನು ಹನ್ನೆರಡು ಶಾಖೆಗಳನ್ನಾಗಿ ವಿಂಗಡಿಸಿದನು.

(೩) ಈ ವೇದಗಳ ಅರ್ಥವನ್ನು ನಿರ್ಣಯಿಸುವುದಕ್ಕಾಗಿಯೇ ಬ್ರಹ್ಮಸೂತ್ರಗಳನ್ನು ರಚಿಸಿದನು.

ಪ್ರತಿಪದಾರ್ಥ -- ೧. ದ್ವಾಪರೇ = ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯ ಭಾಗದಲ್ಲಿ (ಎರಡೇ ಧರ್ಮಪಾದಗಳು ಉಳಿದಿರುವ ಯುಗದಲ್ಲಿ ಅಥವಾ ಕೃತ, ತ್ರೇತಾಯುಗಗಳ ಅನಂತರದ ಯುಗದಲ್ಲಿ), ಸರ್ವತ್ರ = ಭೂಲೋಕದಲ್ಲಿರುವ ದೇವತೆಗಳು, ಋಷಿಗಳು ಹಾಗೂ ಮನುಷ್ಯರೇ ಮೊದಲಾದ ಸಜ್ಜನರಲ್ಲಿ, ಜ್ಞಾನೇ = ತತ್ವಜ್ಞಾನವು, ಆಕುಲೀಭೂತೇ = 'ಬ್ರಹ್ಮನು ಸಗುಣ ಮತ್ತು ಜಗತ್ತು ಸತ್ಯ' ಎಂಬುದು ತತ್ವಜ್ಞಾನವೋ ? ಅಥವಾ 'ಬ್ರಹ್ಮನು ನಿರ್ಗುಣ ಮತ್ತು ಜಗತ್ತು ಮಿಥ್ಯಾ' ಎಂಬುದು ತತ್ವಜ್ಞಾನವೋ ? ಎಂಬ ಸಂಶಯದಿಂದ ಮತ್ತು ಬ್ರಹ್ಮನು ನಿರ್ಗುಣನೇ ಆಗಿದ್ದಾನೆ ಜಗತ್ತು ಮಿಥ್ಯಾಭೂತವೇ ಆಗಿದೆ ಎಂಬ ವಿಪರೀತಜ್ಞಾನದಿಂದ

ಕೆಟ್ಟುಹೋಗುತ್ತಿರಲು, ತನ್ನಿರ್ಣಯಾಯ = ಬ್ರಹ್ಮನು ಸಗುಣನಾಗಿದ್ದಾನೆ, ಜಗತ್ತು ಸತ್ಯವಾಗಿದೆ ಎಂಬುದೇ ತತ್ವಜ್ಞಾನ ಹೊರತು ಬೇರೆಯಲ್ಲ ಎಂಬುದರ ದಾರ್ಢ್ಯಕ್ಕೋಸ್ಕರ, ಬ್ರಹ್ಮರುದ್ರೇಂದ್ರಾದಿಭಿಃ = ಚತುರ್ಮುಖಬ್ರಹ್ಮ, ರುದ್ರ ಇಂದ್ರ ಇವರೇ ಮೊದಲಾದ ದೇವತೆಗಳಿಂದ, ಅರ್ಥಿತಃ = ಪ್ರಾರ್ಥಿತನಾದ, ಭಗವಾನ್ = ಸಮಗ್ರ ಷಡ್ಗುಣೈಶ್ವರ್ಯಸಂಪನ್ನನಾದ, ನಾರಾಯಣಃ = ಶ್ರೀಮನ್ನಾರಾಯಣನು, ವ್ಯಾಸತ್ವೇನ = ಶುಭಮರಕತವರ್ಣ ಎಂಬಲ್ಲಿ ವರ್ಣಿಸಿದ ವೇದವ್ಯಾಸರೂಪದಿಂದ, ಅವತತಾರ = ಆವಿರ್ಭವಿಸಿದನು.

೨. ಅಥ = ಅವತಾರ ಮಾಡಿದ ಕೂಡಲೇ (ತತ್ವಜ್ಞಾನಕ್ಕೆ ಅನುಕೂಲವಲ್ಲದ ವಿಜಾತೀಯವ್ಯಾಪಾರದಿಂದ ತಡಮಾಡದೆ ಅಥವಾ ಪರೋಪದೇಶಾದಿಗಳನ್ನು ಅಪೇಕ್ಷಿಸದೆ), [೧]ಇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಮ್ = ಇಷ್ಟಪ್ರಾಪ್ತಿ ಹಾಗೂ ಅನಿಷ್ಟಪರಿಹಾರಗಳನ್ನು ಬಯಸುವವರು, ತದ್ಯೋಗಂ = ಅವುಗಳ ಉಪಾಯವನ್ನು (ನಿವೃತ್ತಧರ್ಮರೂಪವಾದ ಪರಾಪರತತ್ವಜ್ಞಾನವನ್ನು), ಅವಿಜಾನತಾಂ = ತಿಳಿಯದ ಸಜ್ಜನರಿಗೆ, ತಜ್ಜ್ಞಾಪನಾರ್ಥಂ = ಇಷ್ಟಾನಿಷ್ಟಪ್ರಾಪ್ತಿಪರಿಹಾರರೂಪ ಉಪಾಯವನ್ನು ತಿಳಿಸಲು, ಉತ್ಸನ್ನಂ = ಅಪಪಾಠಾದಿಗಳಿಂದ, ತಿರೋಹಿತವಾದ = ಮುಚ್ಚಿರುವ, ವೇದಂ = ಮೂಲವೇದದಿಂದ ಋಕ್-ನಿಗದಾದಿರೂಪವಾಗಿ ನಾಲ್ಕು ಬಗೆಯಲ್ಲಿ ಮೊದಲೇ ವಿಭಕ್ತವಾದ ಉಪವೇದವನ್ನು, ಚತುರ್ಧಾ = ಪುನಃ ಋಗ್ವೇದ ಯಜುರ್ವೇದ ಸಾಮವೇದ ಅಥರ್ವವೇದವೆಂದು ನಾಲ್ಕು ಬಗೆಯಾಗಿ, ವ್ಯಭಜತ್ = ವಿಭಾಗಮಾಡಿದನು. ಈ ನಾಲ್ಕು ವೇದಗಳನ್ನು ಅನೇಕ ರೀತಿಯಾಗಿ ವಿಭಾಗ ಮಾಡಿದನು. ಚತುರ್ವಿಂಶತಿಧಾ = ಋಗ್ವೇದವನ್ನು ಇಪ್ಪತ್ತನಾಲ್ಕುಶಾಖೆಗಳನ್ನಾಗಿ, ಏಕಶತಧಾ = ಯಜುರ್ವೇದವನ್ನು ನೂರೊಂದು ಶಾಖೆಯನ್ನಾಗಿ, ಸಹಸ್ರಧಾ = ಸಾಮವೇದವನ್ನು ಸಾವಿರ ಶಾಖೆಯನ್ನಾಗಿ, ದ್ವಾದಶಧಾ = ಅಥರ್ವವೇದವನ್ನು ಹನ್ನೆರಡು ಶಾಖೆಗಳನ್ನಾಗಿ ವಿಭಾಗ ಮಾಡಿದನು.

(೩) ತತ್ = ಆ ವಿಭಕ್ತವಾದ ವೇದಗಳ, ಅರ್ಥ = ಯಥಾವಸ್ಥಿತವಾದ ಅರ್ಥದ, ನಿರ್ಣಯಾಯ = ನಿರ್ಣಯಕ್ಕೋಸ್ಕರ, ಬ್ರಹ್ಮಸೂತ್ರಾಣಿ = ಬ್ರಹ್ಮಸೂತ್ರಗಳನ್ನು, ಚಕಾರ = ಮಾಡಿದನು.

---

(೧) ಅಪ್ರಾಪ್ತವಾದ ಸುಖದಪ್ರಾಪ್ತಿ ಮತ್ತು ದುಃಖದ ಪರಿಹಾರವನ್ನು ಇಚ್ಛಿಸುವವರು - ತತ್ವಪ್ರದೀಪ. ಮೋಕ್ಷವು ಪುರುಷಾರ್ಥರೂಪವೆಂದು ಇತರ ದಾರ್ಶನಿಕರು ಒಪ್ಪಲಾರರು. ಅವರನ್ನು ನಿರಾಕರಿಸಿ ಮೋಕ್ಷಸ್ವರೂಪವನ್ನು ನಿರ್ಣಯಿಸುವುದಕ್ಕಾಗಿ ಇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಂ ಎಂದು ಹೇಳಿದ್ದಾರೆ. ಇಲ್ಲದಿದ್ದಲ್ಲಿ ಮುಮುಕ್ಷೂಣಾಂ ಎಂದೇ ಸಾಕಿತ್ತು.

''ಗುಣೋತ್ಕರ್ಷಜ್ಞಾನವು ತತ್ವಜ್ಞಾನವೋ? ಅಥವಾ ಏಕ್ಯಜ್ಞಾನವು ತತ್ವಜ್ಞಾನವೋ? ಎಂದು ಕೆಲವರಿಗೆ ಗೊಂದಲ; ಕೆಲವರಿಗೆ ಏಕ್ಯಜ್ಞಾನವೇ ತತ್ವಜ್ಞಾನವೆಂಬ ವಿಪರೀತ ತಿಳುವಳಿಕೆ; ಇವುಗಳು ಉಂಟಾದಾಗ''- ಎಂದಭಿಪ್ರಾಯ. ಗೊಂದಲಕ್ಕೆ ಕಾರಣವನ್ನು 'ದ್ವಾಪರೇ' ಎಂಬ ಪದದಿಂದ ತಿಳಿಸಿದ್ದಾರೆ. ಧರ್ಮದ ಎರಡೇ ಪಾದಗಳು ಉಳಿದದ್ದರಿಂದ ಇಂತಹ ಅನರ್ಥಗಳು ಸಹಜ.

**तत्वप्रकाशिका – तद्योगम् = इष्टप्राप्त्यनिष्टपरिहारोपायम् । 'वेदमुत्सन्नम्' इत्यादेः अपपाठादिना तिरोहितम् । प्रागेव चतुर्धा विभक्तं वेदं ऋङ्निगदादिरूपं व्यक्तीकृत्यैकैकस्माद् एकैको भाग इति चतुर्धा व्यभजत् एकैकं चावान्तरमृगादिवेदं चतुर्विंशत्यादिशाखाभेदेन व्यभजदित्यर्थः।**

'ಅಥ' ಎಂದರೆ ಗುರೂಪದೇಶಾದಿಗಳ ಅವಶ್ಯಕತೆ ಇಲ್ಲದೆ ಅವತಾರ ಮಾಡಿದ ಕೂಡಲೆ ಎಂದರ್ಥ. 'ತದ್ಯೋಗಮ್' - ಎಂದರೆ ಇಷ್ಟಪ್ರಾಪ್ತಿ ಅನಿಷ್ಟಪರಿಹಾರದ ಕಾರಣವನ್ನು ಎಂದರ್ಥ. ('ವೇದಮುತ್ಸನ್ನಮಿತ್ಯಾದೇಃ' ಎಂಬುದಕ್ಕೆ 'ಇತ್ಯರ್ಥಃ' ಎಂಬಲ್ಲಿ ಅನ್ವಯ.) ಉತ್ಸನ್ನಂ = ಅಪಪಾಠದಿಂದ ಮರೆಮಾಚಿದ.

ಮೊದಲೇ ಮೂಲವೇದದಿಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬುದಾಗಿ ಉಪವೇದಗಳು ವಿಭಕ್ತವಾಗಿದ್ದವು. ಈ ಒಂದೊಂದು ಉಪವೇದದಿಂದಲೂ ಒಂದೊಂದು ಅವಾಂತರವೇದಗಳು ಉದ್ಧರಿಸಲ್ಪಟ್ಟವು. ಈ ಅವಾಂತರವೇದಗಳಿಂದ ಪುನಃ ಶಾಖೆಗಳು ವಿಭಕ್ತವಾದವು. ಋಗ್ವೇದ ಇಪ್ಪತ್ತನಾಲ್ಕುಶಾಖೆ, ಯಜುರ್ವೇದ ನೂರೊಂದು, ಸಾಮವೇದ ಸಾವಿರ, ಅಥರ್ವವೇದ ಹನ್ನೆರಡು ಶಾಖೆಗಳಾಗಿ ವಿಭಾಗ ಮಾಡಲ್ಪಟ್ಟವು.

## ಉಪಾದೇಯಗ್ರಂಥವಷ್ಟೇ ವ್ಯಾಖ್ಯಾನಮಾಡಲು ಅರ್ಹ

**भावदीपः – भाष्ये सूत्रार्थोक्तिं प्रतिज्ञाय तदुत्पत्तिक्रमोक्तिरयुक्ता? इत्यत आह – नन्विति ।। अनन्यार्थतयेति ।। प्रातीतिकार्थपरं न भवतीत्यनेन प्रकारेण' इत्यर्थः ।**

'ಸೂತ್ರಾರ್ಥಃ ಉಚ್ಯತೇ' ಎಂದು ಪ್ರತಿಜ್ಞೆ ಮಾಡಿ 'ದ್ವಾಪರೇ ಸರ್ವತ್ರ' ಇತ್ಯಾದಿಯಾಗಿ ಸೂತ್ರಾಗಮನದ ಕಥೆಯನ್ನು ನಿರೂಪಿಸಿದ್ದಾರೆ. ಇದು ಅಸಂಗತವೆಂದು

## ಎಂತಹ ಗ್ರಂಥವನ್ನು ಅಧ್ಯಯನ ಮಾಡಬೇಕು? ವ್ಯಾಖ್ಯೇಯಗ್ರಂಥದ ಲಕ್ಷಣವೇನು?

**ತತ್ವಪ್ರಕಾಶಿಕಾ –**

**ನನು ಯದುಪಾದೇಯಂ ತದೇವಾನನ್ಯಾರ್ಥತಯಾ ವ್ಯಾಖ್ಯೇಯಮ್ । ಯಚ್ಚ ಪ್ರಮಾಣತ್ವೇ ಸತೀಷ್ಟಸಾಧನತಾऽವಬೋಧಕಮ್, ಪ್ರಾಯಃ ತದೇವೋಪಾದೇಯಮ್, ಅತಃ ಕಥಂ ಬ್ರಹ್ಮಸೂತ್ರಾಣಾಂ ವ್ಯಾಖ್ಯೇಯತ್ವೋಪಯೋಗ್ಯುಪಾದೇಯತಾಯೈ ಪ್ರಾಮಾಣ್ಯಾದಿಃ? ಇತ್ಯಾಶಙ್ಕಾಂ ಪರಿಹರ್ತುಂ ಸೂತ್ರಾಗತಿಕ್ರಮಮಾಹ – ದ್ವಾಪರೇ ಇತಿ ।।**

ಅನುವಾದ -- ಯಾವ ಗ್ರಂಥವು ಅಧ್ಯಯನಾದಿಗಳಿಗೆ ಸ್ವೀಕಾರಾರ್ಹವಾಗಿರುತ್ತದೋ ಅಂಥ ಗ್ರಂಥವನ್ನು ಮಾತ್ರ ಮೇಲುನೋಟಕ್ಕೆ ತೋರುವ ಅಪಾರ್ಥದ ಗ್ರಹಣವಾಗದಂತೆ (ಅನನ್ಯಾರ್ಥತಯಾ) ಸರಿಯಾದ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕು. ಸ್ವೀಕಾರಾರ್ಹವಾದ ಆ ಗ್ರಂಥವು ಯಾವುದು? ಎಂದರೆ ''ಯಾವುದು ಪ್ರಮಾಣವಾಗಿದ್ದು ಇಷ್ಟಸಾಧನೆಯನ್ನು ತಿಳಿಸಿಕೊಡುತ್ತದೋ'' ಆ ಗ್ರಂಥವೇ ಪ್ರಾಯಃ ಸ್ವೀಕಾರಾರ್ಹವಾಗುತ್ತದೆ. (ಅಪ್ರಮಾಣಗ್ರಂಥವನ್ನೂ ಕೆಲವರು ಕೀರ್ತಿಕಾಮುಕರಾಗಿ ವ್ಯಾಖ್ಯಾನಿಸಬಹುದು; ಅದಕ್ಕಾಗಿ ಪ್ರಾಯಃ ಎಂದಿದ್ದಾರೆ). ಹಾಗಾಗಿ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನ ಮಾಡಲು ಉಪಯುಕ್ತವಾದ ಉಪಾದೇಯತ್ವವನ್ನು ಸಮರ್ಥಿಸಬೇಕು. ಆ ಉಪಾದೇಯತ್ವಕ್ಕೆ ಉಪಯುಕ್ತವಾದ ಪ್ರಾಮಾಣ್ಯ, ಇಷ್ಟಸಾಧನತಾವಬೋಧಕತ್ವಗಳನ್ನು ಸಾಧಿಸಬೇಕು. ಇವೆಲ್ಲವೂ ಬ್ರಹ್ಮಸೂತ್ರಗಳಿಗೆ ಹೇಗೆ ಇವೆ? ಎಂಬ ಶಂಕೆಯನ್ನು ಪರಿಹರಿಸಲು ಸೂತ್ರಪ್ರವೃತ್ತಿಯ ಹಿನ್ನೆಲೆಯನ್ನು 'ದ್ವಾಪರೇ' ಇತ್ಯಾದಿ ಭಾಷ್ಯದಿಂದ ವಿವರಿಸುತ್ತಿದ್ದಾರೆ.

**ತತ್ವಪ್ರಕಾಶಿಕಾ – 'सर्वत्र' इति सार्वत्रिकपुरुषोक्तिः । ज्ञाने = सम्यग्ज्ञाने। आकुलीभूते = 'किमिदमदो वा' इति सन्दिग्धे, 'अन्यदेव' इति मिथ्यादृष्टिदुष्टे च । आकुलीभावसमर्थनाय द्वापरग्रहणम् ।**

ಭಾಷ್ಯದಲ್ಲಿ 'ಸರ್ವತ್ರ' ಎಂಬ ಪದಕ್ಕೆ 'ಸರ್ವಪುರುಷರಲ್ಲಿ' ಎಂದು ಅರ್ಥ. ನಿರುಪಪದವಾದ 'ಜ್ಞಾನೇ' ಎಂಬ ಶಬ್ದಕ್ಕೆ 'ಯಥಾರ್ಥಜ್ಞಾನ' ಎಂಬ ಮುಖ್ಯಾರ್ಥವನ್ನೇ ಇಟ್ಟುಕೊಳ್ಳಬೇಕು. 'ಆಕುಲೀಭೂತೇ' ಎಂದರೆ 'ಗೊಂದಲಗೊಂಡಾಗ' ಎಂದರ್ಥ.

''ಗುಣೋತ್ಕರ್ಷಜ್ಞಾನವು ತತ್ವಜ್ಞಾನವೋ? ಅಥವಾ ಐಕ್ಯಜ್ಞಾನವು ತತ್ವಜ್ಞಾನವೋ? ಎಂದು ಕೆಲವರಿಗೆ ಗೊಂದಲ; ಕೆಲವರಿಗೆ ಐಕ್ಯಜ್ಞಾನವೇ ತತ್ವಜ್ಞಾನವೆಂಬ ವಿಪರೀತ ತಿಳುವಳಿಕೆ; ಇವುಗಳು ಉಂಟಾದಾಗ''- ಎಂದಭಿಪ್ರಾಯ. ಗೊಂದಲಕ್ಕೆ ಕಾರಣವನ್ನು 'ದ್ವಾಪರೇ' ಎಂಬ ಪದದಿಂದ ತಿಳಿಸಿದ್ದಾರೆ. ಧರ್ಮದ ಎರಡೇ ಪಾದಗಳು ಉಳಿದದ್ದರಿಂದ ಇಂತಹ ಅನರ್ಥಗಳು ಸಹಜ.

**तत्वप्रकाशिका – तद्योगम् = इष्टप्राप्त्यनिष्टपरिहारोपायम् । 'वेदमुत्सन्नम्' इत्यादेः अपपाठादिना तिरोहितम् । प्रागेव चतुर्धा विभक्तं वेदं ऋङ्निगदादिरूपं व्यक्तीकृत्यैकैकस्माद् एकैको भाग इति चतुर्धा व्यभजत् एकैकं चावान्तरमृगादिवेदं चतुर्विंशत्यादिशाखाभेदेन व्यभजदित्यर्थः।**

'ಅಥ' ಎಂದರೆ ಗುರೂಪದೇಶಾದಿಗಳ ಅವಶ್ಯಕತೆ ಇಲ್ಲದೆ ಅವತಾರ ಮಾಡಿದ ಕೂಡಲೆ ಎಂದರ್ಥ. 'ತದ್ಯೋಗಮ್' - ಎಂದರೆ ಇಷ್ಟಪ್ರಾಪ್ತಿ ಅನಿಷ್ಟಪರಿಹಾರದ ಕಾರಣವನ್ನು ಎಂದರ್ಥ. ('ವೇದಮುತ್ಸನ್ನಮಿತ್ಯಾದೇಃ' ಎಂಬುದಕ್ಕೆ 'ಇತ್ಯರ್ಥಃ' ಎಂಬಲ್ಲಿ ಅನ್ವಯ.) ಉತ್ಸನ್ನಂ = ಅಪಪಾಠದಿಂದ ಮರೆಮಾಚಿದ.

ಮೊದಲೇ ಮೂಲವೇದದಿಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬುದಾಗಿ ಉಪವೇದಗಳು ವಿಭಕ್ತವಾಗಿದ್ದವು. ಈ ಒಂದೊಂದು ಉಪವೇದದಿಂದಲೂ ಒಂದೊಂದು ಅವಾಂತರವೇದಗಳು ಉದ್ಧರಿಸಲ್ಪಟ್ಟವು. ಈ ಅವಾಂತರವೇದಗಳಿಂದ ಪುನಃ ಶಾಖೆಗಳು ವಿಭಕ್ತವಾದವು. ಋಗ್ವೇದ ಇಪ್ಪತ್ತನಾಲ್ಕುಶಾಖೆ, ಯಜುರ್ವೇದ ನೂರೊಂದು, ಸಾಮವೇದ ಸಾವಿರ, ಅಥರ್ವವೇದ ಹನ್ನೆರಡು ಶಾಖೆಗಳಾಗಿ ವಿಭಾಗ ಮಾಡಲ್ಪಟ್ಟವು.

### ಉಪಾದೇಯಗ್ರಂಥವಷ್ಟೇ ವ್ಯಾಖ್ಯಾನಮಾಡಲು ಅರ್ಹ

**भावदीपः – भाष्ये सूत्रार्थोक्तिं प्रतिज्ञाय तदुत्पत्तिक्रमोक्तिरयुक्ता? इत्यत आह – नन्विति ।। अनन्यार्थतयेति ।। प्रातीतिकार्थपरं न भवतीत्यनेन प्रकारेण' इत्यर्थः ।**

'ಸೂತ್ರಾರ್ಥಃ ಉಚ್ಯತೇ' ಎಂದು ಪ್ರತಿಜ್ಞೆ ಮಾಡಿ 'ದ್ವಾಪರೇ ಸರ್ವತ್ರ' ಇತ್ಯಾದಿಯಾಗಿ ಸೂತ್ರಾಗಮನದ ಕಥೆಯನ್ನು ನಿರೂಪಿಸಿದ್ದಾರೆ. ಇದು ಅಸಂಗತವೆಂದು

## ಎಂತಹ ಗ್ರಂಥವನ್ನು ಅಧ್ಯಯನ ಮಾಡಬೇಕು? ವ್ಯಾಖ್ಯೇಯಗ್ರಂಥದ ಲಕ್ಷಣವೇನು?

**तत्वप्रकाशिका –**

**ननु यदुपादेयं तदेवानन्यार्थतया व्याख्येयम् । यच्च प्रमाणत्वे सतीष्टसाधनताऽवबोधकम्, प्रायः तदेवोपादेयम्, अतः कयं ब्रह्मसूत्राणां व्याख्येयत्वोपयोग्युपादेयतायै प्रामाण्यादिः? इत्याशङ्कां परिहर्तुं सूत्रागतिक्रममाह – द्वापरे इति ।।**

ಅನುವಾದ -- ಯಾವ ಗ್ರಂಥವು ಅಧ್ಯಯನಾದಿಗಳಿಗೆ ಸ್ವೀಕಾರಾರ್ಹವಾಗಿರುತ್ತದೋ ಅಂಥ ಗ್ರಂಥವನ್ನು ಮಾತ್ರ ಮೇಲುನೋಟಕ್ಕೆ ತೋರುವ ಅಪಾರ್ಥದ ಗ್ರಹಣವಾಗದಂತೆ (ಅನನ್ಯಾರ್ಥತಯಾ) ಸರಿಯಾದ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕು. ಸ್ವೀಕಾರಾರ್ಹವಾದ ಆ ಗ್ರಂಥವು ಯಾವುದು? ಎಂದರೆ ''ಯಾವುದು ಪ್ರಮಾಣವಾಗಿದ್ದು ಇಷ್ಟಸಾಧನೆಯನ್ನು ತಿಳಿಸಿಕೊಡುತ್ತದೋ'' ಆ ಗ್ರಂಥವೇ ಪ್ರಾಯಃ ಸ್ವೀಕಾರಾರ್ಹವಾಗುತ್ತದೆ. (ಅಪ್ರಮಾಣಗ್ರಂಥವನ್ನೂ ಕೆಲವರು ಕೀರ್ತಿಕಾಮುಕರಾಗಿ ವ್ಯಾಖ್ಯಾನಿಸಬಹುದು; ಅದಕ್ಕಾಗಿ ಪ್ರಾಯಃ ಎಂದಿದ್ದಾರೆ). ಹಾಗಾಗಿ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನ ಮಾಡಲು ಉಪಯುಕ್ತವಾದ ಉಪಾದೇಯತ್ವವನ್ನು ಸಮರ್ಥಿಸಬೇಕು. ಆ ಉಪಾದೇಯತ್ವಕ್ಕೆ ಉಪಯುಕ್ತವಾದ ಪ್ರಾಮಾಣ್ಯ, ಇಷ್ಟಸಾಧನತಾವಬೋಧಕತ್ವಗಳನ್ನು ಸಾಧಿಸಬೇಕು. ಇವೆಲ್ಲವೂ ಬ್ರಹ್ಮಸೂತ್ರಗಳಿಗೆ ಹೇಗೆ ಇವೆ? ಎಂಬ ಶಂಕೆಯನ್ನು ಪರಿಹರಿಸಲು ಸೂತ್ರಪ್ರವೃತ್ತಿಯ ಹಿನ್ನೆಲೆಯನ್ನು 'ದ್ವಾಪರೇ' ಇತ್ಯಾದಿ ಭಾಷ್ಯದಿಂದ ವಿವರಿಸುತ್ತಿದ್ದಾರೆ.

**तत्वप्रकाशिका – 'सर्वत्र' इति सार्वत्रिकपुरुषोक्तिः । ज्ञाने = सम्यग्ज्ञाने। आकुलीभूते = 'किमिदमदो वा' इति सन्दिग्धे, 'अन्यदेव' इति मिथ्यादृष्टिदुष्टे च । आकुलीभावसमर्थनाय द्वापरग्रहणम् ।**

ಭಾಷ್ಯದಲ್ಲಿ 'ಸರ್ವತ್ರ' ಎಂಬ ಪದಕ್ಕೆ 'ಸರ್ವಪುರುಷರಲ್ಲಿ' ಎಂದು ಅರ್ಥ. ನಿರುಪಪದವಾದ 'ಜ್ಞಾನೇ' ಎಂಬ ಶಬ್ದಕ್ಕೆ 'ಯಥಾರ್ಥಜ್ಞಾನ' ಎಂಬ ಮುಖ್ಯಾರ್ಥವನ್ನೇ ಇಟ್ಟುಕೊಳ್ಳಬೇಕು. 'ಆಕುಲೀಭೂತೇ' ಎಂದರೆ 'ಗೊಂದಲಗೊಂಡಾಗ' ಎಂದರ್ಥ.

ಪ್ರಶ್ನೆಗೆ ಬಂದರೆ ಅದರ ಉಪಯೋಗವನ್ನು ತೋರಿಸಲು ''ನನು'' ಇತ್ಯಾದಿಯಾಗಿ ಆಕ್ಷೇಪ ಮಾಡಿಕೊಳ್ಳುತ್ತಿದ್ದಾರೆ. 'ಅನನ್ಯಾರ್ಥತಯಾ' ಎಂಬ ಪದಕ್ಕೆ 'ಪ್ರಾತೀತಿಕವಾದ ಅರ್ಥಗ್ರಹಣವಾಗದಂತೆ' ಎಂದರ್ಥ.

ವಿವರಣೆ - ಸೂತ್ರಗಳನ್ನು ವ್ಯಾಖ್ಯಾನ ಮಾಡಬೇಕಾದರೆ ಸೂತ್ರಗಳಲ್ಲಿ ವ್ಯಾಖ್ಯೇಯತ್ವ- ಪ್ರಯೋಜಕವಾದ ಧರ್ಮ ಇರಬೇಕು. ಅದನ್ನು 'ಯದುಪಾದೇಯಮ್' ಇತ್ಯಾದಿಯಾಗಿ ಸಮರ್ಥಿಸುತ್ತಿದ್ದಾರೆ.

ಉಪಾದೇಯವಾದ ಗ್ರಂಥವಷ್ಟೇ ವಾಖ್ಯಾನ ಮಾಡಲು ಅರ್ಹವಾಗಿರುತ್ತದೆ. ಹಾಗಾದರೆ ಅನುಪಾದೇಯವಾದ ಪೂರ್ವಪಕ್ಷಗ್ರಂಥವನ್ನು ವ್ಯಾಖ್ಯಾನಿಸುವುದು ತಪ್ಪಾದೀತು? ಎಂದರೆ ಅನುಪಾದೇಯಗ್ರಂಥವನ್ನು ಪ್ರಧಾನವಾಗಿ ವ್ಯಾಖ್ಯಾನಿಸ-ಬಾರದೆಂದಷ್ಟೇ ಅಭಿಪ್ರಾಯ. ಪೂರ್ವಪಕ್ಷಗ್ರಂಥವು ಮಹಾವಾಕ್ಯಾರ್ಥಜ್ಞಾನಕ್ಕೆ ಉಪಯೋಗಿಯಾದ್ದರಿಂದ ವ್ಯಾಖ್ಯೇಯವಾಗಿದ್ದರೂ ಪ್ರಧಾನವಾಗಿ ವ್ಯಾಖ್ಯೇಯ-ವಲ್ಲದ್ದರಿಂದ ದೋಷವಿಲ್ಲ.

ಆದ್ದರಿಂದ ಉಪಾದೇಯವಾದ ಗ್ರಂಥವಷ್ಟೇ ವ್ಯಾಖ್ಯೇಯವಾಗುತ್ತದೆ. ಬ್ರಹ್ಮಮೀಮಾಂಸಾಶಾಸ್ತ್ರವು ಉಪಾದೇಯವಲ್ಲದ್ದರಿಂದ ವ್ಯಾಖ್ಯೇಯವಾಗಿಲ್ಲವೆಂದು ಆಕ್ಷೇಪ. ಒಂದು ವೇಳೆ ಈ ಶಾಸ್ತ್ರವು ಅವಾಂತರವಾಕ್ಯವೆನಿಸಿದ್ದರೆ ಅನುಪಾದೇಯ-ವಾಗಿದ್ದರೂ ಮಹಾವಾಕ್ಯಾರ್ಥಜ್ಞಾನಕ್ಕೆ ಉಪಯೋಗಿಯಾದ್ದರಿಂದ ವ್ಯಾಖ್ಯೇಯ-ವಾಗುತ್ತಿತ್ತು. ಆದರೆ ಈ ಶಾಸ್ತ್ರವು ಅವಾಂತರವಾಕ್ಯವಾಗಿಲ್ಲ. ಉಪಾದೇಯತ್ವ ಏಕಿಲ್ಲ? ಎಂಬುದನ್ನು 'ಯಚ್ಚ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ.

ವಿಶೇಷ ವಿಚಾರ - ಪ್ರಶ್ನೆ - 'ನನು ಯದುಪಾದೇಯಂ ತದೇವ ಅನನ್ಯಾರ್ಥತಯಾ ವ್ಯಾಖ್ಯೇಯಮ್' 'ಯಾವುದು ಸ್ವೀಕಾರಾರ್ಹವಾದ ಗ್ರಂಥವೋ ಅದೇ ವ್ಯಾಖ್ಯಾನಕ್ಕೆ ಅರ್ಹವಾಗುತ್ತದೆ' ಎಂದು ಟೀಕೆಯಲ್ಲಿ ಹೇಳಿದೆ. ಇಲ್ಲಿರುವ 'ಅನನ್ಯಾರ್ಥತಯಾ' ಎಂಬ ಶಬ್ದವನ್ನು ನೋಡಿದಾಗ ಬೇರೆಯವರ ಪ್ರಯೋಜನಕ್ಕಾಗಿ ಅಲ್ಲದೇ ತಮ್ಮ ಪ್ರಯೋಜನಕ್ಕೋಸ್ಕರ ವ್ಯಾಖ್ಯಾನ ಮಾಡಬೇಕು' ಎಂಬರ್ಥವು ತೋರುತ್ತದೆ. ಆದರೆ 'ಪರಪ್ರತ್ಯಯನಾಂಗಂ ಹಿ ವಾಕ್ಯಮ್' ಎಂಬಂತೆ ಪರರ ಪ್ರಯೋಜನಕ್ಕೋಸ್ಕರವೇ ವ್ಯಾಖ್ಯಾನ ಮಾಡುತ್ತಾರೆ. ಏಕೆಂದರೆ ಅನುಮಾನದಲ್ಲಿ ಸ್ವಾರ್ಥ, ಪರಾರ್ಥವೆಂಬ

ಭೇದವಿದ್ದಂತೆ ವಾಕ್ಯದಲ್ಲಿ ಭೇದವಿಲ್ಲ. ಸ್ವಾರ್ಥಕ್ಕೋಸ್ಕರ ವಾಕ್ಯಪ್ರಯೋಗ ಎಲ್ಲಿಯೂ ಕಂಡಿಲ್ಲ. ಆದ್ದರಿಂದ 'ಅನನ್ಯಾರ್ಥತಯಾ' ಎಂಬ ಮಾತಿಗೆ ಏನರ್ಥ?

ಉತ್ತರ - 'ಅನ್ಯಾರ್ಥ' ಶಬ್ದಕ್ಕೆ 'ಬೇರೆಯವರಿಗೋಸ್ಕರ' ಎಂಬರ್ಥ ಹೇಳಿದ್ದೇ ತಪ್ಪು. 'ಅಪಾರ್ಥ' ಎಂಬರ್ಥವನ್ನು ಹೇಳಬೇಕು. ಆದ್ದರಿಂದ 'ಅನನ್ಯಾರ್ಥತಯಾ' ಎಂಬ ಶಬ್ದಕ್ಕೆ 'ಅಪಾರ್ಥಗಳ ಗ್ರಹಿಕೆಯಾಗದಂತೆ' ಎಂದರ್ಥ. 'ಈ ಪ್ರಕಾರದಿಂದ' ಎಂದು ಪ್ರಕಾರಾರ್ಥದಲ್ಲಿ ತೃತೀಯಾವಿಭಕ್ತಿ ಇದೆ. ಗ್ರಂಥಕಾರರು 'ಪ್ರಾತೀತಿಕಾರ್ಥಾಂತರಪರಂ ನ ಭವತಿ ಇತ್ಯನೇನ ಪ್ರಕಾರೇಣ' ಎಂದು ಹೇಳಿದ್ದಾರೆ.

ಟೀಕೆಯಲ್ಲಿರುವ 'ಪ್ರಾಯಃ' ಶಬ್ದದ ಸ್ವಾರಸ್ಯ ಹೀಗಿದೆ - ಯಾವ ಗ್ರಂಥವು ಪ್ರಮಾಣವಾಗಿದ್ದುಇಷ್ಟವಾದ ವಿಷಯಗಳನ್ನುವರ್ಣಿಸುತ್ತದೋ, ಆ ಗ್ರಂಥವೇ ವ್ಯಾಖ್ಯಾನ ಮಾಡಲು ಅರ್ಹವಾಗಿರುತ್ತದೆ. ಬ್ರಹ್ಮಸೂತ್ರಗ್ರಂಥವು ಸ್ವತಃ ಪ್ರಮಾಣವಾಗಿದ್ದು ಮೋಕ್ಷಾದಿ ಪುರುಷಾರ್ಥದಾಯಕವಾದ್ದರಿಂದ ಅತ್ಯುಪಾದೇಯವಾಗಿದೆ. ಆದ್ದರಿಂದಲೇ ವ್ಯಾಖ್ಯಾನ ಮಾಡಲು ಅರ್ಹವಾಗಿದೆ.

ಕೆಲವು ಗ್ರಂಥಗಳು ಅಪ್ರಮಾಣಗಳೆಂದು ನಿಶ್ಚಯವಾಗಿರುತ್ತವೆ. ಆದರೂ ಕೀರ್ತಿ ಹಣ ಮೊದಲಾದ ಆಸೆಗಳಿಂದ ಆ ಗ್ರಂಥಗಳನ್ನೂ ವ್ಯಾಖ್ಯಾನ ಮಾಡುವುದು ಕಂಡಿದೆ. ಅಂತಹ ಅಪ್ರಾಮಾಣಿಕಗ್ರಂಥಗಳಲ್ಲಿಯೂ ವ್ಯಾಖ್ಯೇಯತ್ವ ಬರುತ್ತದೆಂಬ ಆಕ್ಷೇಪಕ್ಕೆ ಟೀಕೆಯಲ್ಲಿ 'ಪ್ರಾಯಃ' ಎಂಬಪದವನ್ನುಹೇಳಿದ್ದಾರೆ. 'ಪ್ರಾಯಃ' ಎಂದರೆ 'ಅತ್ಯುಪಾದೇಯ' ಎಂದರ್ಥ. ಅಪ್ರಾಮಾಣಿಕಗ್ರಂಥಗಳು ಮೋಕ್ಷಾದಿಪುರುಷಾರ್ಥಗಳನ್ನು ನೀಡುವುದಿಲ್ಲ. ಆದ್ದರಿಂದ ಯಾದೃಶತಾದೃಶಉಪಾದೇಯತ್ವವು ಅವುಗಳಲ್ಲಿ ಬಂದರೂ ಅತ್ಯುಪಾದೇಯತ್ವವು ಬರುವುದಿಲ್ಲ. ಆದರೆ ಬ್ರಹ್ಮಮೀಮಾಂಸಾಶಾಸ್ತ್ರವು ಮೋಕ್ಷಾದಿಮಹಾಫಲದಾಯಕವಾದ್ದರಿಂದ ಅತ್ಯುಪಾದೇಯವಾಗಿದೆ.

'ನತ್ವಾ ಸೂತ್ರಾರ್ಥ ಉಚ್ಯತೇ' ಎಂಬ ಮಾತಿನಿಂದ ಬ್ರಹ್ಮಸೂತ್ರಗಳು ವ್ಯಾಖ್ಯೇಯಗಳೆಂದು ತಿಳಿಯುತ್ತದೆ. ಆದರೆ ಉಪಾದೇಯವಾದ ಗ್ರಂಥವಷ್ಟೇ ವ್ಯಾಖ್ಯೇಯವಾಗುತ್ತದೆ. ಉಪಾದೇಯವಾಗಬೇಕಾದರೆ ಪ್ರಮಾಣವಾಗಿರಬೇಕು. ಈ ವಿಷಯದಲ್ಲಿ ಎರಡು ವ್ಯಾಪ್ತಿಗಳನ್ನು ಹೇಳಬಹುದು - 'ಯತ್ ಪ್ರಮಾಣಂ ತತ್ ಉಪಾದೇಯಮ್' 'ಯತ್ ಉಪಾದೇಯಂ ತತ್ ವ್ಯಾಖ್ಯೇಯಮ್' ಎಂದು ಬ್ರಹ್ಮಸೂತ್ರಗಳು ವ್ಯಾಖ್ಯೇಯವಾಗಬೇಕಾದರೆ ಉಪಾದೇಯವಾಗಿರಬೇಕು. ಉಪಾದೇಯವಾಗಬೇಕಾದರೆ ಪ್ರಮಾಣವಾಗಿರಬೇಕು. ಇದನ್ನು 'ನನು ಉಪಾದೇಯಮ್' ಇತ್ಯಾದಿ ಟೀಕಾಮಾತುಗಳು ವಿವರಿಸುತ್ತಿವೆ.

ಈ ಟೀಕಾಮಾತುಗಳ ಮಧ್ಯದಲ್ಲಿರುವ 'ಅನನ್ಯಾರ್ಥತಯಾ' ಎಂಬ ಪದದ ಅರ್ಥವನ್ನು ಚಂದ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ - 'ಬ್ರಹ್ಮಸೂತ್ರಾಣಿ ನ ವ್ಯಾಖ್ಯೇಯಾನಿ ಉಪಾದೇಯತ್ವಾಭಾವಾತ್' ಈ ಅನುಮಾನದಿಂದ ಬ್ರಹ್ಮಸೂತ್ರಗಳು ವ್ಯಾಖ್ಯೇಯವಲ್ಲವೆಂಬ ಆಕ್ಷೇಪ ಬರುತ್ತದೆ. ಹೇತುವಿದ್ದರೂ ವ್ಯಾಖ್ಯೇಯತ್ವಾಭಾವವೆಂಬ ಸಾಧ್ಯವು ಬೇಡವೆಂಬ ಅಪ್ರಯೋಜಕಶಂಕೆಯನ್ನು ಹೇಳಬಹುದು. ಆದರೆ ''ಎಲ್ಲಿ ವ್ಯಾಪ್ಯವ್ಯಾಪಕಭಾವದ ನಿಶ್ಚಯವಿರುತ್ತದೋ ಅಲ್ಲಿ ವ್ಯಾಪಕಾಭಾವದಿಂದ ವ್ಯಾಪ್ಯಾಭಾವವನ್ನು ಸಾಧಿಸಬಹುದು. ಮತ್ತು ಅಪ್ರಯೋಜಕ ಶಂಕೆಯನ್ನು ಮಾಡಬಾರದು'' ಈ ನಿಯಮವನ್ನು ಎಲ್ಲರೂ ಒಪ್ಪಿದ್ದಾರೆ. ಇಂತಹ ವ್ಯಾಪ್ಯವ್ಯಾಪಕಭಾವವನ್ನು ನಿರ್ಣಯಿಸಿ ಪೂರ್ವಪಕ್ಷಾನುಮಾನವನ್ನು ದೃಢಗೊಳಿಸಲು ಟೀಕೆಯಲ್ಲಿ 'ನನು ಯದುಪಾದೇಯಮ್' ಇತ್ಯಾದಿ ಮಾತುಗಳು ಹೊರಟಿವೆ. ಪ್ರಕೃತ ಉಪಾದೇಯತ್ವವು ವ್ಯಾಪಕ. ವ್ಯಾಖ್ಯೇಯತ್ವವು ವ್ಯಾಪ್ಯ. ಆದ್ದರಿಂದ 'ಯತ್ರ ಯತ್ರ ವ್ಯಾಖ್ಯೇಯತ್ವಮ್ ತತ್ರ ತತ್ರ ಉಪಾದೇಯತ್ವಮ್' ಎಂಬ ವ್ಯಾಪ್ತಿಯನ್ನು ಹೇಳಿದಂತಾಯಿತು. ವಸ್ತುತಸ್ತು 'ವ್ಯಾಪ್ಯಸ್ಯ ವಚನಂ ಪೂರ್ವಂ ವ್ಯಾಪಕಸ್ಯ ತತಃ ಪರಮ್' ಎಂಬ ನಿಯಮದಂತೆ ವ್ಯಾಪ್ಯದ ಮಾತು ಮೊದಲಿರಬೇಕು. ಆದರೆ ಏವಕಾರವಿದ್ದ ವಾಕ್ಯದಲ್ಲಿ ಇದು ವ್ಯತ್ಯಾಸವಾಗುತ್ತದೆ. 'ಯೋ ಅಗ್ನಿಮಾನ್ ಸ ಏವ ಧೂಮವಾನ್' ಎಂಬಲ್ಲಿ ಏವಕಾರವು ಧೂಮಶಬ್ದದ ಜೊತೆಗಿದೆ. ಆದ್ದರಿಂದ ಇಲ್ಲಿ ಧೂಮವೇ ವ್ಯಾಪ್ಯವಾಗುತ್ತದೆ. ಆದರಂತೆ 'ಯದುಪಾದೇಯಮ್ ತದೇವ ಅನನ್ಯಾರ್ಥತಯಾ ವ್ಯಾಖ್ಯೇಯಮ್' ಎಂಬಲ್ಲಿಯೂ ಅನನ್ಯಾರ್ಥತ್ವವನ್ನು ವ್ಯಾಪ್ಯವನ್ನಾಗಿ ಉಪಾದೇಯತ್ವವನ್ನು ವ್ಯಾಪಕವನ್ನಾಗಿ ತಿಳಿಯಬೇಕು. ಆದ್ದರಿಂದ ಉಪಾದೇಯತ್ವಾಭಾವದಿಂದ ವ್ಯಾಖ್ಯೇಯತ್ವಾಭಾವವನ್ನು ಸುಲಭವಾಗಿ ಸಾಧಿಸ-ಬಹುದು. ಅಪ್ರಯೋಜಕಶಂಕೆಗೆ ಆಸ್ಪದವಿಲ್ಲ. ಇಲ್ಲಿ ಅನ್ವಯವ್ಯಾಪ್ತಿ ಹೀಗಿದೆ - 'ಯತ್ ವ್ಯಾಖ್ಯೇಯಂ ತದೇವ ಉಪಾದೇಯಮ್' ಹೀಗೆ ಹೇಳಿದರೆ ಉಪಾದೇಯವಲ್ಲದ ಗ್ರಂಥಗಳೂ ವ್ಯಾಖ್ಯೇಯವಾದದ್ದು ಕಂಡಿದ್ದರಿಂದ ವ್ಯಭಿಚಾರ ಬರುತ್ತದೆ. ಇದರ ಪರಿಹಾರಕ್ಕಾಗಿ ವ್ಯಾಪ್ಯಕೋಟಿಯಲ್ಲಿ 'ಅನನ್ಯಾರ್ಥತ್ವ' ಎಂಬ ವಿಶೇಷಣವನ್ನು ಕೊಡಬೇಕು.'ಯತ್ ಅನನ್ಯಾರ್ಥತಯಾ ವಾಖ್ಯೇಯಂ ತತ್ ಉಪಾದೇಯಮ್' ಎಂದು ಹೇಳಿದಾಗ ಇಲ್ಲಿಯೂ ವ್ಯಭಿಚಾರ ಬರುವುದಿಲ್ಲ. ಆದ್ದರಿಂದಲೇ ವ್ಯಾಪಕಾಭಾವದಿಂದ ವ್ಯಾಪ್ಯಾಭಾವವನ್ನು ಸಾಧನೆ ಮಾಡುವಂತಹ ಅನುಮಾನದಲ್ಲಿಯೂ ಸಾಧ್ಯದಲ್ಲಿರುವ ಅನನ್ಯಾರ್ಥತ್ವವೆಂಬ ವಿಶೇಷಣವು ಸಾರ್ಥಕವಾಗಿದೆ. 'ಯತ್ ಉಪಾದೇಯಂ ನ ಭವತಿ ತತ್ ಅನನ್ಯಾರ್ಥತಯಾ ವ್ಯಾಖ್ಯೇಯಮ್ ನ ಭವತಿ' ಇಲ್ಲಿರುವ ಸಾಧ್ಯವಿಶೇಷಣವು ವ್ಯಭಿಚಾರವನ್ನು ಪರಿಹರಿಸುವುದರಿಂದ ಸಾರ್ಥಕವಾಗಿದೆ ಎಂದರ್ಥ.

'ಯಚ್ಚ ಪ್ರಮಾಣತ್ವೇ ಸತಿ ಇಷ್ಟಸಾಧನತಾವಬೋಧಕಂ ಪ್ರಾಯಃ ತದೇವೋಪಾದೇಯಮ್' ಎಂಬ ಟೀಕೆಯ ಮಾತಿನಿಂದ ತಿಳಿಯುವ ಅನುಮಾನದ ಆಕಾರ ಹೀಗಿದೆ - 'ಬ್ರಹ್ಮಸೂತ್ರಂ ನ ಪ್ರಾಯಃ ಉಪಾದೇಯಮ್ ಪ್ರಮಾಣತ್ವೇ ಸತಿ ಇಷ್ಟಸಾಧನತಾವಬೋಧಕತ್ವಾಭಾವಾತ್' ಎಂದು. ಸಾಧ್ಯದಲ್ಲಿ 'ಪ್ರಾಯಃ' ಎಂದು ಹೇಳಿದ್ದರಿಂದ ಅಪ್ರಮಾಣಗ್ರಂಥಗಳಲ್ಲಿ ವ್ಯಭಿಚಾರ ಬರುವುದಿಲ್ಲ.

ಭಾಷ್ಯದ ಅಥ ಶಬ್ದಾರ್ಥವಿಚಾರ

'ಅಥೇಷ್ಟಾನಿಷ್ಟ' ಎಂಬಭಾಷ್ಯದಲ್ಲಿ 'ಅಥ' ಶಬ್ದಕ್ಕೆ ಮಂಗಳಾದ್ಯರ್ಥಗಳನ್ನು ಹೇಳಲು ಬರುವುದಿಲ್ಲ. ಮತ್ತು ಯಾವುದೇ ಅತಿಶಯವಿಲ್ಲದ್ದರಿಂದ ಆನಂತರ್ಯಾರ್ಥವೂ ಕೂಡುವುದಿಲ್ಲ. ಹಾಗಾಗಿ 'ಅಥ' ಶಬ್ದವನ್ನು ಹೇಳಿದ್ದೇ ವ್ಯರ್ಥವಲ್ಲವೆ? ಎಂಬ ಪ್ರಶ್ನೆಗೆ 'ಅಥೇತ್ಯಸ್ಯ' ಎಂದು ಉತ್ತರಿಸುತ್ತಿದ್ದಾರೆ. ಇಲ್ಲಿ 'ಅಥ' ಶಬ್ದಕ್ಕೆ 'ಆನಂತರ' ಎಂದೇ ಅರ್ಥ. ಬೇರೆ ಅರ್ಥ ಅಸಂಗತವಾಗುತ್ತದೆ. ಆನಂತರ ಎಂದರೆ (ವ್ಯಾಸರು) 'ಅವತರಿಸಿದ ಕೂಡಲೇ'; ಅಂದರೆ 'ಗುರೂಪದೇಶಾದಿಗಳ ಅವಶ್ಯಕತೆ ಇಲ್ಲದೆ' ಎಂದರ್ಥ. ಸಾಮಾನ್ಯವಾಗಿ ಎಲ್ಲರೂ ಹುಟ್ಟಿದ ಮೇಲೆ ಗುರೂಪದೇಶ ಪಡೆದು ಅನಂತರ ಗ್ರಂಥರಚನೆಯಲ್ಲಿ ತೊಡಗುತ್ತಾರೆ. ಆದರೆ ವ್ಯಾಸರು ವೇದವಿಭಾಗ ಮಾಡುವ ಮೊದಲು ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುವ ಅವಶ್ಯಕತೆಯೇ ಇಲ್ಲವೆಂಬ ಸ್ವಾರಸ್ಯವನ್ನು ಅಥ ಶಬ್ದವು ತಿಳಿಸುತ್ತಿದೆ. ಈ ಅಭಿಪ್ರಾಯವನ್ನು ಸ್ವತಃ ಟೀಕಾರಾಯರೇ ಪ್ರಮೇಯದೀಪಿಕಾದಲ್ಲಿ ತಿಳಿಸಿದ್ದಾರೆ. ಗೀತಾಭಾಷ್ಯದಲ್ಲಿ 'ವ್ಯಾಸೋऽವತತಾರ' 'ತತಶ್ಚೇಷ್ಟಾನಿಷ್ಟಪ್ರಾಪ್ತಿಪರಿಹಾರೇಚ್ಛೂನಾಂ' ಎಂದು ಹೇಳಿದ್ದಾರೆ. ಈ ವಾಕ್ಯಕ್ಕೆ ವ್ಯಾಖ್ಯಾನಿಸುತ್ತಾ ಪ್ರಮೇಯದೀಪಿಕಾದಲ್ಲಿ ಟೀಕಾರಾಯರು 'ತತಶ್ಚ' ಎಂದರೆ 'ಅವತರಿಸಿದ ಕೂಡಲೇ' ಎಂಬರ್ಥವನ್ನು ಬರೆದಿದ್ದಾರೆ. ಆ ಅರ್ಥದ ವಿವಕ್ಷೆ ಪ್ರಕೃತ ಅಥಶಬ್ದಕ್ಕೂ ಟೀಕಾರಾಯರಿಗೆ ಇದೆಯೆಂದು ಭಾವಿಸಬೇಕು. ತ್ರಿವಿಕ್ರಮಪಂಡಿತಾಚಾರ್ಯರಂತೂ ತತ್ವಪ್ರದೀಪದಲ್ಲಿ 'ಅಥ ಅನಂತರಮೇವ' ಎಂದು ಸ್ಪಷ್ಟವಾಗಿ ಬರೆದಿದ್ದಾರೆ.

ಪ್ರಶ್ನೆ - 'ಗುರೂಪದೇಶಾದಿಗಳ ಅವಶ್ಯಕತೆ ಇಲ್ಲದೆ' ಎಂಬರ್ಥವು ಅಥಶಬ್ದದಿಂದ ಹೇಗೆ ತಿಳಿಯುತ್ತದೆ. ಎಲ್ಲಾದರೂ ದೃಷ್ಟಾಂತವಿದೆಯೇ?

ಉತ್ತರ - ದೃಷ್ಟಾಂತವಿದೆ - 'ಅಥ' ಶಬ್ದಕ್ಕೆ ಸಮಾನಾರ್ಥವಾದ 'ಲ್ಯಪ್' ಪ್ರತ್ಯಯದ ದೃಷ್ಟಾಂತವಿದೆ. 'ವೇದಮಧೀತ್ಯ ಸ್ನಾಯಾತ್' 'ವೇದಾಧ್ಯಯನ ಮಾಡಿದ ಮೇಲೆ ಸ್ನಾತಕವ್ರತವನ್ನು ಆಚರಿಸಬೇಕು' ಎಂದು ವಿಧಿಯಿದೆ.

ಗುರುಕುಲವಾಸ ಮುಗಿಸಿ ಗುರುಗಳ ಅಪ್ಪಣೆ ಪಡೆದು ಸ್ನಾತಕನಾಗಬೇಕು - 'ನ ಜೀರ್ಣಮಲವದ್ವಾಸಃ ಸ್ನಾತಕಃ ಸ್ಯಾತ್' ಇತ್ಯಾದಿ ವಚನಗಳಂತೆ ಜೀರ್ಣವಾದ ಮಲಿನವಾದ ವಸ್ತ್ರಗಳನ್ನು ಧರಿಸದೆ ಶುಭ್ರವಾದ ವಸ್ತ್ರಗಳನ್ನು ಧರಿಸಿ ಅಲಂಕೃತನಾಗಬೇಕು. ಅನಂತರ ಕಾಶಿಯಾತ್ರೆಗೆ ಹೊರಡಬೇಕು. ಇದನ್ನು 'ಸಮಾವರ್ತನಸಂಸ್ಕಾರ' ಎಂದು ಕರೆಯುತ್ತಾರೆ. ಇದು ಷೋಡಶ ಸಂಸ್ಕಾರಗಳಲ್ಲಿ ಒಂದು ಸಂಸ್ಕಾರವಾಗಿದೆ. ಈ ಸಂಸ್ಕಾರವನ್ನು ವಿಧಿಸುವ 'ವೇದಮಧೀತ್ಯ ಸ್ನಾಯಾತ್' ಎಂಬ ವಾಕ್ಯದಲ್ಲಿ 'ಲ್ಯಪ್' ಪ್ರತ್ಯಯವಿದೆ. ಆನಂತರ್ಯಾರ್ಥವನ್ನು ಇದು ಹೇಳುತ್ತದೆ.

ಪ್ರಶ್ನೆ - ಆನಂತರ್ಯವನ್ನು ಏಕೆ ಹೇಳಬೇಕು? 'ವೇದಾಧ್ಯಯನ ಮಾಡಬೇಕು; ಸ್ನಾತಕನಾಗಬೇಕು' ಎಂದಷ್ಟೇ ಸಾಕಾಗಿರುವಾಗ ಲ್ಯಪ್ ಪ್ರತ್ಯಯವು ವ್ಯರ್ಥವಲ್ಲವೇ?

ಉತ್ತರ - ನಿಯಮಕ್ಕೋಸ್ಕರ ಲ್ಯಪ್ ಪ್ರತ್ಯಯವು ಸಾರ್ಥಕ. 'ಸಿದ್ಧೇ ಸತಿ ಆರಂಭೋ ನಿಯಮಾರ್ಥಃ' ಸಿದ್ಧವಾದದ್ದನ್ನೇ ಪುನಃ ಹೇಳಿದರೆ ನಿಯಮವು ಪ್ರಾಪ್ತವಾಗುತ್ತದೆ. ಆದ್ದರಿಂದ ಸ್ನಾತಕನಾಗಬೇಕೆಂದಷ್ಟೇ ಹೇಳಿದರೂ ವೇದಾಧ್ಯಯನದ ಅನಂತರ ಸ್ನಾತಕನಾಗಬೇಕೆಂದು ತಿಳಿಯುತ್ತದೆ. ಆದರೆ ಪುನಃ ಲ್ಯಪ್ ಪ್ರತ್ಯಯವನ್ನು ಹೇಳಿದ್ದರಿಂದ ತಡಮಾಡದೆ ಕೂಡಲೇ ಸ್ನಾತಕವ್ರತವನ್ನು ಕೈಗೊಳ್ಳಬೇಕೆಂಬ ನಿಯಮವು ಪ್ರಾಪ್ತವಾಗುತ್ತದೆ.

ಈ ದೃಷ್ಟಾಂತದಂತೆ ಪ್ರಕೃತ 'ವ್ಯಾಸೋऽವತತಾರ' ಎಂದಷ್ಟೇ ಹೇಳಿದ್ದರೂ ಸಾಕಾಗಿತ್ತು. ಆನಂತರ್ಯಾರ್ಥಕವಾದ 'ಅಥ' ಶಬ್ದವನ್ನು ಹೇಳಬೇಕಾಗಿರಲಿಲ್ಲ. ಆದರೂ ನಿಯಮಕೋಸ್ಕರ ಅಥ ಶಬ್ದವನ್ನು ಹೇಳಿದ್ದೆಂದು ತಿಳಿಯುತ್ತದೆ. - ವ್ಯಾಸರು ಅವತರಿಸಿದ ಕೂಡಲೆ ಅಂದರೆ ಗುರೂಪದೇಶಾದಿಗಳು ಇಲ್ಲದೆ ವೇದವಿಭಾಗವನ್ನು ಮಾಡಿದರೆಂಬ ನಿಯಮವನ್ನು ಅಥ ಶಬ್ದದಿಂದ ತಿಳಿಸುತ್ತದೆ.

ಟೀಕೆ - ವೇದಮುತ್ಸನ್ನಮಿತ್ಯಾದೇರಪಪಾಠಾದಿನಾ ತಿರೋಹಿತಂ ಪ್ರಾಗೇವ ಚತುರ್ಧಾ ವಿಭಕ್ತಂ ವೇದಂ ಋಙ್ನಿಗದಾದಿರೂಪಂ ವ್ಯಕ್ತೀಕೃತ್ಯೈಕೈಕಸ್ಯಾತ್ ವಿಕೈಕೋ ಭಾಗಃ ಇತಿ ಚತುರ್ಧಾ ವ್ಯಭಜದೇಕೈಕಂ ಚಾವಾಂತರಮೃಗಾದಿವೇದಂ ಚತುರ್ವಿಂಶತಿಶಾಖಾಭೇದೇನ ವ್ಯಭಜದಿತ್ಯರ್ಥಃ ಇಲ್ಲಿರುವ 'ವೇದಮುತ್ಸನ್ನಮಿತ್ಯಾದೇಃ' ಎಂಬುದಕ್ಕೆ 'ಅಪಪಾಠಾದಿನಾ' ಎಂಬ ಪದದ ಜೊತೆಗೆ ಅನ್ವಯಭ್ರಾಂತಿ ಬರುತ್ತದೆ. ಅದಕ್ಕೋಸ್ಕರ ಗ್ರಂಥಕಾರರು 'ಇತ್ಯರ್ಥಃ' ಎಂಬಲ್ಲಿ ಅನ್ವಯ ಮಾಡಬೇಕೆಂದು ಹೇಳುತ್ತಿದ್ದಾರೆ.

'ವೇದಮುತ್ಸನ್ನಂ ವ್ಯಂಜಯಂಶ್ಚತುರ್ಧಾ ವ್ಯಭಜತ್' ಎಂಬ ಸಂಪೂರ್ಣ ಭಾಷ್ಯವಾಕ್ಯಕ್ಕೆ ಟೀಕೆಯಲ್ಲಿ 'ಅಪಪಾಠಾದಿನಾ' ಎಂಬಲ್ಲಿಂದ 'ಇತ್ಯರ್ಥಃ' ಎಂಬಲ್ಲಿಯ ತನಕ ಅರ್ಥ ಬರೆಯುತ್ತಿದ್ದಾರೆ. 'ಅವಾಂತರವೇದಾದಿವಿಭಾಗಕಥನಂ ಚ ಜ್ಞಾನಾಕೂಲೀಭಾವಸಮರ್ಥನಾರ್ಥಮ್' 'ಅವಾಂತರ ವೇದಾದಿವಿಭಾಗ ಹೇಳಿದ್ದು ಜ್ಞಾನದಲ್ಲಿರುವ ವ್ಯಾಕುಲತ್ವವನ್ನು ಸಮರ್ಥಿಸುವುದಕ್ಕೋಸ್ಕರ' ಎಂದು ಟೀಕೆಯಲ್ಲಿ ಹೇಳಿದೆ. ಇಲ್ಲಿ ಅವಾಂತರವೇದಾದಿವಿಭಾಗಕಥನಶಬ್ದಕ್ಕೆ ಎರಡರ್ಥ.

೧) ಅವಾಂತರವೇದಾದಿಗಳ ವಿಭಾಗ = ಶಾಖಾವಿಭಾಗ ೨) ಅವಾಂತರ-ವೇದಾದಿತ್ವೇನ ವಿಭಾಗ = ಅವಾಂತರವೇದಾದಿರೂಪದಿಂದ ವಿಭಾಗ.

ಶಾಖೆಗಳನ್ನು ಉಪಶಾಖೆಗಳನ್ನಾಗಿ ವಿಭಾಗ ಮಾಡಲಾಗಿದೆಯೆಂಬುದು ಮೊದಲನೆಯ ಪಕ್ಷದ ಅಭಿಪ್ರಾಯ. ಇದಕ್ಕೆ ಆಧಾರವಿಲ್ಲವೆಂಬ ಪ್ರಶ್ನೆ ಬರುತ್ತದೆ. ಶಾಖಾವಿಭಾಗವನ್ನು ಆದಿಪದದಿಂದ ಉಪಶಾಖಾವಿಭಾಗವನ್ನು ಮತ್ತು ಅವಾಂತರವಿಭಾಗವನ್ನು ನೀವು ಹೇಳಿದಿರಿ. ಆದರೆ ಭಾಷ್ಯಕಾರರು ಅವಾಂತರವಿಭಾಗವನ್ನು ಶಾಖಾವಿಭಾಗವನ್ನಷ್ಟೇ ಹೇಳಿದ್ದಾರಲ್ಲ? ಈ ಪ್ರಶ್ನೆಗೆ ಉತ್ತರ-ರೂಪವಾಗಿ ಎರಡನೆಯ ಪಕ್ಷವನ್ನು ಹೇಳಿದ್ದಾರೆ. ಈ ಪಕ್ಷದಲ್ಲಿ ಉಪಶಾಖಾವಿಭಾಗವನ್ನು ಇಟ್ಟುಕೊಳ್ಳಬೇಕಾಗಿಲ್ಲ.

## ಉಪಾದೇಯತ್ವಲಕ್ಷಣದಲ್ಲಿ ಕೃತ್ಯವಿಚಾರ

**ಭಾವದೀಪಃ** – ಇಷ್ಟಸಾಧನತಾವಗಮೇऽಪಿ ಅನಾಪ್ತವಾಕ್ಯೇ ಉಪಾದೇಯತ್ವಾಭಾವಾತ್ ಪ್ರಮಾಣತ್ವೇ ಸತೀತಿ । ಅಪ್ರಮಾಣತ್ವಾದಿನಾ ನಿಶ್ಚಿತಸ್ಯಾಪಿ ಖ್ಯಾತ್ಯಾದ್ಯರ್ಥಂ ವ್ಯಾಖ್ಯಾನದರ್ಶನಾದಾಹ – **ಪ್ರಾಯಃ ಇತಿ** ।। ಬಹುಶಃ ಇತ್ಯರ್ಥಃ । ದೇಶೇ ಜ್ಞಾನಾಪ್ರಸಕ್ತೇರಾಹ – **ಸಾರ್ವತ್ರಿಕೇತಿ ।। ಸಮ್ಯಗ್ಜ್ಞಾನ ಇತಿ** ।। 'ನಿರುಪಪದಜ್ಞಾನಪದಸ್ಯ ಮುಖ್ಯಾರ್ಥತ್ವಾತ್' ಇತಿ ಭಾವಃ । **ಇದಮಿತಿ** ।। ಗುಣೋತ್ಕರ್ಷಾದಿಜ್ಞಾನಮೇವ ತತ್ವಜ್ಞಾನಮ್ ಉತ ಐಕ್ಯಾದಿಜ್ಞಾನಂ ವಾ? ಇತಿ ಕೇಷಾಞ್ಚಿತ್ । ಕೇಷಾಞ್ಚಿತ್ 'ಅನ್ಯದೇವ ಐಕ್ಯಾದಿಜ್ಞಾನಮೇವ ತತ್ವಜ್ಞಾನಮುತ್ಕರ್ಷಾದಿಜ್ಞಾನಂ ತತ್ವಜ್ಞಾನಾದನ್ಯದೇವ' ಇತಿ ವಿಪರೀತಜ್ಞಾನವಿಷಯೀಭೂತೇ ಚೇತ್ಯರ್ಥಃ ।

ಪ್ರಮಾಣತ್ವೇ ಸತಿ ಇಷ್ಟಸಾಧನತಾಧಿವಬೋಧಕತ್ವಂ ಉಪಾದೇಯತ್ವಸ್ಯ ಲಕ್ಷಣಮ್ ಎಂದಂತಾಯಿತು. ಇಲ್ಲಿ 'ಇಷ್ಟಸಾಧನತಾऽವಬೋಧಕತ್ವಂ' ಎಂದಿಷ್ಟೇ ಹೇಳಿದರೆ ವಿಪ್ರಲಂಭಕವಾಕ್ಯದಲ್ಲಿ ಅತಿವ್ಯಾಪ್ತಿ ಬರುತ್ತದೆ. ಅದರ ಪರಿಹಾರಕ್ಕೋಸ್ಕರ ಪ್ರಮಾಣತ್ವವೆಂಬ ವಿಶೇಷಣವನ್ನು ಕೊಡಬೇಕು. ವಿಪ್ರಲಂಭಕವಾಕ್ಯವು ಅಪ್ರಮಾಣವಾದ್ದರಿಂದ ಅತಿವ್ಯಾಪ್ತಿ ಇಲ್ಲ. ಇನ್ನು ಪ್ರಮಾಣತ್ವವೆಂದಷ್ಟೇ ಹೇಳಿದರೆ ವಿರಕ್ತನಿಗೆ ಮಾಡುವ ವಾಣಿಜ್ಯೋಪದೇಶದಲ್ಲಿ ಅತಿವ್ಯಾಪ್ತಿ ಬರುತ್ತದೆ. ಅದರ ಪರಿಹಾರಕ್ಕೋಸ್ಕರ 'ಇಷ್ಟಸಾಧನತಾऽವಬೋಧಕಂ' ಎಂದು ಹೇಳಬೇಕು. ವಿರಕ್ತನಿಗೆ ಅದು ಅನಿಷ್ಟವಾದ್ದರಿಂದ ಅತಿವ್ಯಾಪ್ತಿ ಬರುವುದಿಲ್ಲ.

ದುಃಶಾಸ್ತ್ರಗಳಲ್ಲಿ ಅಪ್ರಾಮಾಣ್ಯನಿಶ್ಚಯ ಮತ್ತು ಇಷ್ಟಸಾಧನಗಳಿಲ್ಲವೆಂಬ ನಿಶ್ಚಯವಿದ್ದರೂ ವ್ಯಾಖ್ಯಾನ ಮಾಡುವುದು ಲೋಕದಲ್ಲಿ ಕಂಡಿದೆ. ಅದರ ಪರಿಹಾರಕ್ಕೋಸ್ಕರ ಟೀಕೆಯಲ್ಲಿ 'ಪ್ರಾಯಃ' ಎಂದು ಹೇಳಿದ್ದಾರೆ. 'ಪ್ರಾಯಃ ಉಪಾದೇಯ'ವೆಂದರೆ ಅತ್ಯುಪಾದೇಯ ಎಂದರ್ಥ. ಅತ್ಯುಪಾದೇಯತ್ವವು ಬ್ರಹ್ಮಮೀಮಾಂಸಾಶಾಸ್ತ್ರದಲ್ಲಷ್ಟೇ ಇದೆ ಹೊರತು ದುಃಶಾಸ್ತ್ರಗಳಲ್ಲಿಲ್ಲದ ಕಾರಣ ಅತಿವ್ಯಾಪ್ತಿ ಬರುವುದಿಲ್ಲ.

ಇಲ್ಲಿಯ ತನಕ ನಿರೂಪಿಸಿದ ವಿಚಾರದ ಸಾರ್ಥಕ್ಯವನ್ನು ಅಥವಾ ಎಂಬುದಾಗಿ ವಿವರಿಸುತ್ತಿದ್ದಾರೆ. ಶಬ್ದಪ್ರಾಮಾಣ್ಯಕ್ಕೆ ಪ್ರಯೋಜಕವಾದ ಅಪೌರುಷೇಯತ್ವವಾಗಲೀ, ಆಪ್ತಿಮೂಲತ್ವವಾಗಲಿ ಇಲ್ಲದ ಕಾರಣ ಮತ್ತು ಇಷ್ಟಪ್ರಾಪ್ತಿಯನ್ನು ನಿರೂಪಿಸಿದ ಕಾರಣ ಅಪ್ರಮಾಣವಾಗಿದೆ ಎಂದು ಈ ವಾಕ್ಯದ ಅಭಿಪ್ರಾಯ. ಭಾಷ್ಯದಲ್ಲಿರುವ 'ಸರ್ವತ್ರ' ಎಂಬ ಪದಕ್ಕೆ ಎಲ್ಲ ದೇಶದಲ್ಲಿ ಎಂಬರ್ಥವು ಅಪಾತತಃ ತೋರುತ್ತದೆ. ಅದರ ನಿವಾರಣೆಗಾಗಿ 'ಸಾರ್ವತ್ರಿಕಪುರುಷ' ಎಂದು ಹೇಳಿದ್ದಾರೆ. ಜ್ಞಾನ ಎಂಬ ಶಬ್ದಕ್ಕೆ ಯಥಾರ್ಥ ಜ್ಞಾನವೆಂದು ಅರ್ಥವನ್ನು ಹೇಳಿದ್ದಾರೆ: 'ಕಿಂ ಇದಂ ಅದೋ ವಾ' ವಿಷ್ಣುವು ಗುಣಪೂರ್ಣನಾಗಿದ್ದಾನೆ ಎಂಬ ಜ್ಞಾನದಲ್ಲಿ ಪ್ರಮಾಣವೋ ಅಪ್ರಮಾಣವೋ? ಅಥವಾ ಇದು ಮೋಕ್ಷಸಾಧನವೋ? ಅಲ್ಲವೋ? ಎಂಬ ಸಂಶಯವು ಕೆಲವರಲ್ಲಿ ಉಂಟಾಗಿವೆ. ಇನ್ನು ಕೆಲವರಲ್ಲಿ ಇದು ಅಪ್ರಮಾಣ ಮತ್ತು ಮೋಕ್ಷಸಾಧನವಲ್ಲ ಎಂಬ ವಿಪರೀತಜ್ಞಾನವೇ ಉಂಟಾಗಿದೆ. ಜ್ಞಾನದ ಆಕುಲೀಭಾವಕ್ಕೆ ನಿಮಿತ್ತವನ್ನು ಆ

ಆಕುಲಿಭಾವ ಎಂಬ ಭಾವದಿಂದ ನಿರೂಪಿಸುತ್ತಿದ್ದಾರೆ. ಆಕುಲಿಭಾವ ಪ್ರಯೋಜಕತ್ವವನ್ನು ''ದ್ವಾಪರೇ ಅಖಿಲಂ'' ಎಂಬ ಮುಂದೆ ಹೇಳುವ ಪ್ರಮಾಣದಲ್ಲಿ ಸ್ಪಷ್ಟವಾಗುತ್ತದೆ.

## ತತ್ತ್ವಪ್ರದೀಪದಲ್ಲಿ ದ್ವಾಪರ ಪದದ ಸ್ವಾರಸ್ಯ

**ಭಾವದೀಪಃ – ದ್ವಾಪರಗ್ರಹಣಮಿತಿ ।। 'ದ್ವಾವೇವ ಧರ್ಮಪಾದೌ ಯಸ್ಮಿನ್ ಯುಗೇ ಪ್ರಾಪ್ತೇ ತತಃ ಕ್ರಮಾದಪಚಯೋऽನ್ತೇ ಏಕोऽವಶಿಷ್ಯತೇ' ಇತಿ ತತ್ತ್ವಪ್ರದೀಪोक्तव್ಯುತ್ಪತ್ತ್ಯಾ ಪಾದದ್ವಯಹ್ರಾಸಸ್ಯಾಪಿ ಸೂಚನಾದಿತಿ ಭಾವಃ ।**

'ದ್ವಾಪರೇ ಸರ್ವತ್ರ ಜ್ಞಾನಆಕೂಲಿಭೂತೇ' ಎಂಬುದೇ ಭಾಷ್ಯದಲ್ಲಿ 'ದ್ವಾಪರೇ' ಎಂಬ ಪದಪ್ರಯೋಗದ ಸ್ವಾರಸ್ಯವನ್ನು ತ್ರಿವಿಕ್ರಮಪಂಡಿತಾಚಾರ್ಯರು ತತ್ತ್ವಪ್ರದೀಪದಲ್ಲಿ ಬಲುಸುಂದರವಾಗಿ ವ್ಯಾಖ್ಯಾನ ಮಾಡಿದ್ದಾರೆ. ಅದು ಹೀಗೆ -

'ದ್ವಾವೇವ ಧರ್ಮಪಾದೌ ಯಸ್ಮಿನ್ ಯುಗೇ ಪ್ರಾಪ್ತೇ ತತಃ ಕ್ರಮಾದಪಚಯೋऽಂತೇ ಏಕೋऽವಶಿಷ್ಯತೇ' ''ಯಾವ ಯುಗದಲ್ಲಿ ಎರಡೇ ಧರ್ಮಪಾದಗಳು ಉಳಿದು ಅನಂತರ ಕ್ರಮವಾಗಿ ಇನ್ನೆರಡು ಪಾದಗಳು ಕಳಚಿಕೊಂಡು ಕೊನೆಯಲ್ಲಿ ಒಂದೇ ಪಾದ ಉಳಿಯುತ್ತದೋ ಆ ಯುಗವೇ ದ್ವಾಪರಯುಗ'' ಎಂದು ಕರೆಸಿಕೊಳ್ಳುತ್ತದೆ. ಆದ್ದರಿಂದ ಭಾಷ್ಯಕಾರರು 'ದ್ವಾಪರ' ಎಂಬ ಶಬ್ದದಿಂದಲೇ ಧರ್ಮದ ಎರಡು ಪಾಠಗಳು ಕಳಚಿಹೋಗಿವೆ ಎಂದು ಸೂಚನೆ ಮಾಡಿದ್ದಾರೆ. ಆದ್ದರಿಂದ ದ್ವಾಪರದ ಕೊನೆಯಲ್ಲಿ ಜ್ಞಾನಹ್ರಾಸವನ್ನು ತತ್ತ್ವಜ್ಞಾನದ ಬಗ್ಗೆ ಇರುವ ಸಂಶಯವನ್ನು ಈ ಪದವು ಸ್ಪಷ್ಟಪಡಿಸುತ್ತದೆ.

## ತತ್ತ್ವಪ್ರದೀಪದಲ್ಲಿ 'ಅಥ' ಪದದ ವ್ಯಾಖ್ಯಾನ

**ಭಾವದೀಪಃ – ಅಥ 'ಇಷ್ಟಾನಿಷ್ಟ' ಇತಿ ಭಾಷ್ಯೇ 'ಅಥ' ಇತ್ಯಸ್ಯಾವತಾರಾನನ್ತರಮೇವ ನ ತು ಪರೋಪದೇಶಮಪೇಕ್ಷ್ಯ ಯೇನ ಸಾರ್ವಜ್ಞಾದಿ ನ ಸ್ಯಾದಿತ್ಯರ್ಥಸ್ಯ ತತ್ತ್ವಪ್ರದೀಪೇ ವ್ಯಕ್ತತ್ವಾತ್ ನಾತ್ರಾಥಶಬ್ದೋ ವ್ಯಾಖ್ಯಾತಃ ।**

ಟೀಕೆಯಲ್ಲಿ ಅಥ ಶಬ್ದದ ಅರ್ಥವನ್ನು ವ್ಯಾಖ್ಯಾನ ಮಾಡಿಲ್ಲ. ಕಾರಣವೇನೆಂದರೆ ತತ್ವಪ್ರದೀಪದಲ್ಲಿಯೇ ಇದಕ್ಕೆ ಸ್ವರಸವಾದ ಅರ್ಥವನ್ನು ಬರೆದಿದ್ದಾರೆ. ಅದು ಹೀಗೆ - ''ಅಥ ಇಷ್ಟಾನಿಷ್ಟ ಇತಿ ಭಾಷ್ಯೇ ಅಥ ಇತ್ಯಸ್ಯಾವತಾರಾನಂತರಮೇವ ನ ತು ಪರೋಪದೇಶಮಪೇಕ್ಷ್ಯಯೇನ ಸಾರ್ವಜ್ಞಾದಿ ನ ಸಾತ್ಯ', 'ಅಥಇಷ್ಟಾನಿಷ್ಟ ಇತ್ಯಾದಿ ಭಾಷ್ಯದಲ್ಲಿ 'ಅಥ' ಎಂಬ ಪದಕ್ಕೆ ಅವತಾರವಾದ ಕೂಡಲೇ ಎಂದರ್ಥ. ಆದ್ದರಿಂದ ಅವತಾರದ ಅನಂತರದಲ್ಲಿ ಇನ್ನೊಬ್ಬರ ಉಪದೇಶದ ಅಪೇಕ್ಷೆಯಿಲ್ಲದೇ ವೇದವನ್ನು ವಿಭಾಗ ಮಾಡಿದರೆಂದು ತಿಳಿಯುತ್ತದೆ. ಆದ್ದರಿಂದ ವೇದವ್ಯಾಸದೇವರಲ್ಲಿ ಸಾರ್ವಜ್ಞ ಇಲ್ಲದಿರಬೇಕಾದೀತು ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ' ಹೀಗೆ ತತ್ವಪ್ರದೀಪದಲ್ಲಿ ಅಥಶಬ್ದದ ವ್ಯಾಖ್ಯಾನವಿರುವುದರಿಂದ ಟೀಕೆಯಲ್ಲಿ ಪ್ರತ್ಯೇಕವಾಗಿ ಅದರ ವ್ಯಾಖ್ಯಾನವಿರುವುದಿಲ್ಲ.

## ತತ್ವಪ್ರದೀಪದ ವ್ಯಾಖ್ಯಾನ ಟೀಕೆಗೆ ಬಲು ಸಮ್ಮತ

**ಭಾವದೀಪಃ** – ಅತ ಏವ **ಪ್ರಮೇಯದೀಪಿಕಾಯಾಮ್** 'ವ್ಯಾಸೋऽವತತಾರ' । ತತಶ್ಚೇಷ್ಟಾನಿಷ್ಟಪ್ರಾಪ್ತಿಪರಿಹಾರೇ'ತಿ **ಭಾಷ್ಯಗತಸ್ಯ 'ತತಶ್ಚ' ಇತ್ಯಸ್ಯ 'ಅವತಾರಾನನ್ತರಮೇವ'** ಇತ್ಯರ್ಥ ಉಕ್ತಃ ।

ತತ್ವಪ್ರದೀಪದ ಈ ವ್ಯಾಖ್ಯಾನವು ಟೀಕಾರಾಯರಿಗೆ ಸಮ್ಮತವಾಗಿರುವುದರಿಂದಲೇ ಗೀತಾಭಾಷ್ಯದ ಪ್ರಮೇಯದೀಪಿಕಾ ಗ್ರಂಥದಲ್ಲಿ 'ವ್ಯಾಸೋऽವತತಾರ' ತತಶ್ಚೇಷ್ಟಾನಿಷ್ಟಪ್ರಾಪ್ತಿಪರಿಹಾರ'' 'ವೇದವ್ಯಾಸದೇವರು ಅವತಾರ ಮಾಡಿದರು. ಅನಂತರ ಇಷ್ಟಾನಿಷ್ಟಪ್ರಾಪ್ತಿ ಪರಿಹಾರವನ್ನು ಬಯಸುವವರ' ಎಂಬ ಭಾಷದಲ್ಲಿರುವ 'ತತಶ್ಚ' ಎಂಬ ಪದಕ್ಕೆ ಅವತಾರವಾದ ಕೂಡಲೇ ಎಂಬರ್ಥವನ್ನು ಬರೆದಿರುತ್ತಾರೆ.

## ಟೀಕೆಯ ಕಠಿಣಪದಾರ್ಥ

**ಭಾವದೀಪಃ** – 'ವೇದಮುತ್ಸನ್ನಮ್' ಇತ್ಯಾದೇರಿತ್ಯಸ್ಯ **'ಇತ್ಯರ್ಥಃ'** ಇತಿ ವಕ್ಷ್ಯಮಾಣೇನಾನ್ವಯಃ । **'ಉತ್ಸನ್ನಮ್'** ಇತ್ಯಸ್ಯಾರ್ಥಃ – **ಅಪಪಾಠೇತಿ** । ವೇದಮಿತ್ಯಸ್ಯ ಮೂಲವೇದಮ್ ಇತಿ ಪ್ರತೀತಿಂ ನಿರಸ್ಯನ್ ವ್ಯಾಚಷ್ಟೇ – **ಪ್ರಾಗೇವೇತಿ** ।।

'अवान्तरवेदादिविभागात् पूर्वम्' इत्यर्थः । वेदम् – 'मूलवेदादुद्धृतमुपवेदम्' इत्यर्थः ।

'ವೇದಮುತ್ಸನ್ನಂ' ಎಂಬ ಮಾತಿಗೆ 'इत्यर्थः' ಎಂಬಲ್ಲಿ ಅನ್ವಯವನ್ನು ಮಾಡಬೇಕು. 'ಉತ್ಸನ್ನಮ್' ಎಂಬ ಪದಕ್ಕೆ 'अपपाठादिना तिरोहितम्' ಎಂಬುದಾಗಿ ಅರ್ಥವನ್ನು ಹೇಳಿರುತ್ತಾರೆ. ಭಾಷ್ಯದಲ್ಲಿರುವ 'ವೇದಮ್' ಎಂಬ ಪದದಿಂದ ಮೂಲವೇದವನ್ನು ವಿವಕ್ಷಿಸಬೇಕೆಂಬ ಭ್ರಾಂತಿ ಬರುತ್ತದೆ. ಅದಕ್ಕಾಗಿ ಟೀಕೆಯಲ್ಲಿ 'प्रागेव चतुर्धा विभक्तम्' ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ. 'ಅವಾಂತರವೇದ' ಮೊದಲಾದ ವೇದಗಳ ವಿಭಾಗಕ್ಕಿಂತ ಮೊದಲೇ ಋಕ್, ನಿಗದ ಇತ್ಯಾದಿಯಾಗಿ ವೇದವು ವಿಭಕ್ತವಾಗಿತ್ತು ಎಂದರ್ಥ. 'ವೇದಮ್' ಎಂಬ ಪದಕ್ಕೆ ಮೂಲವೇದದಿಂದ ವಿಭಾಗ ಮಾಡಲ್ಪಟ್ಟ ಉಪವೇದ ಎಂದರ್ಥ.

## ಭಾಷ್ಯದಲ್ಲಿ ವ್ಯಾಕ್ಯ ಯೋಜನೆ

**ಭಾವದೀಪಃ** – भाष्ये 'व्यञयन्' इत्यनन्तरम् एकैकस्मादिति, 'वेदम्' इत्यतः प्राक् प्रागेव चतुर्धा विभक्तमिति, 'व्यभजत्' इत्यनन्तरम् एकैकं चेति च योज्यमिति भावः ।

ಭಾಷ್ಯದಲ್ಲಿ 'व्यंजयन्' ಎಂಬ ಪದದ ಅನಂತರ 'एकैकस्मात्' ಎಂಬ ಪದವನ್ನು 'ವೇದಮ್' ಎಂಬ ಪದಕ್ಕಿಂತ ಮೊದಲು 'प्रागेव चतुर्धा विभक्तम्' ಎಂಬುದನ್ನು व्यभजत् ಎಂಬ ಪದದ ಅನಂತರ ಏಕೈಕಂ ಚ' ಎಂಬ ಪದವನ್ನು ಯೋಜನೆ ಮಾಡಿಕೊಳ್ಳಬೇಕೆಂದು ಟೀಕೆಯಿಂದ ಸ್ಪಷ್ಟವಾಗುತ್ತದೆ. ಆವಾಗ ಸಮಸ್ತ ವಾಕ್ಯ ಹೀಗಾಗುತ್ತದೆ - 'प्रागेव चतुर्धा विभक्तं वेदम् उत्सन्नं व्यंजयन् एकैकस्मात् चतुर्धा व्यभजत् एकैकं च' ಎಂದು.

ವಿಶೇಷ ವಿಚಾರ - 'ವೇದಮುತ್ಸನ್ನಂ' ಇತ್ಯಾದಿ ಭಾಷ್ಯದ ಮಾತಿನ ಅಭಿಪ್ರಾಯ ಹೀಗಿದೆ - ಮೊಟ್ಟಮೊದಲು ಮೂಲವೇದವು ಋಗ್, ನಿಗದ, ಸಾಮ, ಅಥರ್ವ

ಎಂಬುದಾಗಿ ಸಹಜವಾಗಿಯೇ ನಾಲ್ಕು ಭಾಗವಾಗಿ ವಿಭಾಗವನ್ನು ಹೊಂದಿದ್ದವು. ಅನಂತರ ಅಪಪಾಠದಿಂದ ಮರೆಯಾದಾಗ ಅಧ್ಯಯನ ಅಧ್ಯಾಪನದ ಮೂಲಕವಾಗಿ ಅದನ್ನೇ ಅಭಿವ್ಯಕ್ತಿಗೊಳಿಸಲಾಯಿತು. ಮಹಾವೇದದಿಂದ ಹೀಗೆ ಅಪಪಾಠವನ್ನು ತೆಗೆದು ಪ್ರತ್ಯೇಕ ಮಾಡಿದ ವೇದವೇ ಉಪವೇದ ಎಂದು ಕರೆಯಲ್ಪಡುತ್ತದೆ. ಈ ಉಪವೇದದಿಂದ ಪುನಃ ನಾಲ್ಕು ಭಾಗಗಳನ್ನಾಗಿ ಮಾಡಲಾಯಿತು. ಇವುಗಳೇ ಅವಾಂತರವೇದವೆಂದು ಕರೆಸಿಕೊಳ್ಳುತ್ತವೆ. ಋಗ್ವೇದವನ್ನು ೨೪ ಶಾಖೆಗಳಾಗಿ, ಯಜುರ್ವೇದವನ್ನು ೧೦೧ ಶಾಖೆಗಳನ್ನಾಗಿ ಸಾಮದೇವನ್ನು ೧೦೦೦ ಶಾಖೆಯನ್ನಾಗಿ ಅಥರ್ವವೇದವನ್ನು ಹನ್ನೆರಡು ಶಾಖೆಗಳನ್ನಾಗಿ ವಿಭಾಗ ಮಾಡಲಾಯಿತು. ಇಷ್ಟು ಭಾಷ್ಯದ ಅಭಿಪ್ರಾಯ.

**तत्वप्रकाशिका – तदुक्तम् –**

**'ऋचः स ऋच उद्धृत्य ऋग्वेदं कृतवान् प्रभुः ।**
**यजूंषि निगदाच्चैव तथा सामानि सामतः' । (ऋग् भाष्ये)**

**इति । अवान्तरवेदादिविभागकथनं च ज्ञानाकुलीभावसमर्थनार्थम्। 'चक्रे वेदतरोः शाखा दृष्ट्वा पुंसोऽल्पमेधसः ।' (भाग - १-३-२१) इत्यादेः ।**

ಇದನ್ನೇ ಋಗ್‌ಭಾಷ್ಯದಲ್ಲಿ ಉದಾಹರಿಸಿದ ಈ ಸ್ಮೃತಿ ಹೇಳುತ್ತಿದೆ -

ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ಪ್ರಭುಃ।
ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ॥

ಎಂದು. ಹೀಗೆ ಅವಾಂತರವೇದ ವಿಭಾಗಮಾಡಬೇಕಾದರೆ ಜ್ಞಾನದಲ್ಲಿ ಎಲ್ಲರಿಗೂ ಎಷ್ಟು ಗೊಂದಲವಾಗಿತ್ತು ಎಂದು ತಿಳಿಯಬಹುದು. ಜ್ಞಾನದಲ್ಲಿರುವ ಆಕುಲೀಭಾವವನ್ನು ಸಮರ್ಥಿಸಲು 'ಅವಾಂತರವೇದವಿಭಾಗ' ಎಂದು ಹೇಳಲಾಗಿದೆ. ಇದನ್ನೇ ಭಾಗವತ-ಪ್ರಥಮಸ್ಕಂಧದಲ್ಲಿ ಹೀಗೆ ಹೇಳಲಾಗಿದೆ -

ಚಕ್ರೇ ವೇದತರೋಃ ಶಾಖಾ ದೃಷ್ಟ್ವಾ ಪುಂಸೋऽಲ್ಪಮೇಧಸಃ

(ಪುರುಷರ ಮಂದಬುದ್ಧಿಯನ್ನು ಗಮನಿಸಿ ವೇದಗಳು ಶಾಖೆಗಳಾಗಿ ವಿಭಾಗಿಸಲ್ಪಟ್ಟವು) ಇತ್ಯಾದಿಯಾಗಿ.

**तत्वप्रकाशिका – अयं भावः । "वाक्यप्रामाण्यं तावन्निर्दोषतया सम्भवति । निर्दोषता चापौरुषेयतया आप्तिमूलतया च । आप्तिश्च वक्तृनिर्दोषतैव। आप्तिमूलत्वाद् ब्रह्मसूत्राणां प्रामाण्यसिद्धिः ।**

ಬ್ರಹ್ಮಸೂತ್ರಪ್ರಾಮಾಣ್ಯವನ್ನು ಹೀಗೆ ತಿಳಿಯಬೇಕು - ನಿರ್ದುಷ್ಟವಾಗಿದ್ದರಷ್ಟೇ ವಾಕ್ಯಪ್ರಾಮಾಣ್ಯ ಸಿದ್ಧವಾಗುತ್ತದೆ. ಈ ನಿರ್ದುಷ್ಟತ್ವವು ಅಪೌರುಷೇಯತ್ವದಿಂದ ಅಥವಾ ಆಪ್ತಿಮೂಲತ್ವದಿಂದ ಸಿದ್ಧವಾಗುತ್ತದೆ. ಪ್ರಕೃತ ಬ್ರಹ್ಮಸೂತ್ರಗಳು ಆಪ್ತಿಮೂಲಗಳಾಗಿವೆ. ಬ್ರಹ್ಮಸೂತ್ರಗಳನ್ನು ರಚಿಸಿದವರು ಯಥಾರ್ಥಭಾಷಿಗಳಾಗಿದ್ದಾರೆ. ಆಪ್ತಿಮೂಲವಾದ್ದರಿಂದ ಬ್ರಹ್ಮಸೂತ್ರಕ್ಕೆ ಪ್ರಾಮಾಣ್ಯವು ಸಿದ್ಧವಾಗುತ್ತದೆ.

**तत्वप्रकाशिका – प्रमाद-अज्ञान-संशय-विपर्ययाणां नारायणावतारे व्यासेऽसम्भवात्, भगवत्वादेव ।**

ವೇದವ್ಯಾಸರಲ್ಲಿ ಪ್ರಮಾದ, ಅಜ್ಞಾನ, ಸಂಶಯ, ವಿಪರ್ಯಯ ಇವೇ ಮೊದಲಾದ ದೋಷಗಳ ಸಂಪರ್ಕವು ಬರಲು ಸಾಧ್ಯವಿಲ್ಲ. ಆದ್ದರಿಂದ ಅವರು ನಿರ್ದುಷ್ಟರಾಗಿದ್ದಾರೆ. ಈ ನಿರ್ದುಷ್ಟತ್ವವು ಭಗವತ್ವದಿಂದ ಲಭ್ಯವಾಗುತ್ತದೆ.

(ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ।
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ॥

ಎಂದು ವಿಷ್ಣುಪುರಾಣದಲ್ಲಿ ನಿರತಿಶಯವಾದ ಜ್ಞಾನಶಕ್ತ್ಯಾದಿಗಳು ಇದ್ದು, ಹೇಯದೋಷಗಳಿಂದ ದೂರನಾದವನನ್ನೇ 'ಭಗವತ್' ಎಂದಿದ್ದಾರೆ).

**तत्वप्रकाशिका – विप्रलम्भकत्वस्य च श्रोतृदोषनिबन्धनस्य तदभावेनाभावनिर्णयात् । ज्ञानायोग्यताया ब्रह्मादिश्रोतृष्वभावात् । अपहासस्य च प्रसङ्गदोषनिबन्धनस्य तदभावेनाभावनिर्णयात् । अज्ञाननिर्हरणस्य च प्रसक्तत्वेन प्रसङ्गदोषाभावात्**

ಇದರಂತೆಯೇ ಪ್ರಾಮಾಣ್ಯ ಸಿದ್ಧಿಸಲು ಶ್ರೋತೃದೋಷ, ವಕ್ತೃದೋಷ, ಪ್ರಸಂಗದೋಷಗಳು ಇರಬಾರದು. ಆವಾಗ ಸೂತ್ರಗಳು ಆಪ್ತಿಮೂಲವಾಗುತ್ತವೆ. ಮತ್ತು ಇದರ ಜೊತೆಗೆ ಶ್ರುತಿಮೂಲತ್ವ ಹಾಗೂ ಯುಕ್ತಿಮೂಲತ್ವಗಳೂ ಇದ್ದರೆ

ಪರಮಪ್ರಮಾಣವಾಗುತ್ತವೆ. ಅಷ್ಟೆ ಅಲ್ಲದೆ ಇಷ್ಟಸಾಧಕ ಅನಿಷ್ಟಪರಿಹಾರಕವಾಗಿದ್ದರೆ ಅತ್ಯಂತವಾಗಿ ಉಪಾದೇಯವಾಗುತ್ತವೆ. ಇವೆಲ್ಲವೂ ಬ್ರಹ್ಮಸೂತ್ರಗಳಿಗೆ ಇರುತ್ತವೆ.

ಈಗಾಗಲೇ ವಕ್ತೃದೋಷವಿಲ್ಲವೆಂದು ಸಮರ್ಥಿಸಿದ್ದಾಗಿದೆ. ಆದರೆ ವಕ್ತೃದೋಷ-ವಿಲ್ಲದಿದ್ದರೂ ಸಹ ಶ್ರೋತೃದೋಷವಿದ್ದಾಗ ಅಪಾತ್ರರಿಗೆ ಜ್ಞಾನದಾನ ಮಾಡಿದಂತಾಗುವುದರಿಂದ ವಂಚಕತ್ವ-ದೋಷವು ಬರುತ್ತದೆ. ಆದರೆ ಪ್ರಕೃತದಲ್ಲಿ ಬ್ರಹ್ಮಾದಿಗಳೇ ಶ್ರೋತೃಗಳಾಗಿರುವುದರಿಂದ ಅವರಲ್ಲಿ ಅಪಾತೃತ್ವಾದಿದೋಷಗಳಿಗೆ ಅವಕಾಶವಿಲ್ಲವಾದ್ದರಿಂದ ಶ್ರೋತೃದೋಷಪ್ರಯುಕ್ತವಾಗಿ ವಕ್ತೃದೋಷವನ್ನು ಹೇಳಲಾಗದು. ಹಾಗೆಯೇ ಪ್ರಸಂಗದೋಷವೂ ಇಲ್ಲ. ಏಕೆಂದರೆ ಪ್ರಸಂಗದೋಷಕ್ಕೆ ನಿಬಂಧನವಾದದ್ದು ಅಪಹಾಸ, ಆದರೆ ಅಜ್ಞಾನದ ಪರಿಹಾರಕ್ಕಾಗಿ ಬ್ರಹ್ಮಾದಿಗಳು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿರುವಾಗ ಅಪಹಾಸಾದಿಗಳಿಗೆ ಪ್ರಸಕ್ತಿಯೇ ಇಲ್ಲ.

**तत्वप्रकाशिका – आप्तिमूलत्वेनैव प्रामाण्यसिद्धौ सुतरां श्रुतिनिर्णायकत्वेन, श्रुतियुक्तिमूलत्वात् । इष्टानिष्टप्राप्तिपरिहारसाधनवेदनहेतुवेदनिर्णायकत्वेन इष्टसाधनावबोधकत्वं च सिध्यति । अतो ब्रह्मसूत्राणामत्युपादेयत्वाद् व्याख्येयता'' इति ।**

ಹೀಗೆ ಆಪ್ತಿಮೂಲತ್ವದಿಂದಲೇ ಬ್ರಹ್ಮಸೂತ್ರಗಳಿಗೆ ಪ್ರಾಮಾಣ್ಯವು ಸಿದ್ಧವಾಗಿದೆ. ಇದರ ಮೇಲೆ ಪುನಃ ಶ್ರುತಿನಿರ್ಣಾಯಕತ್ವವಿರುವುದರಿಂದ ಶ್ರುತಿಮೂಲತ್ವವು ಸ್ವತಃ ಯುಕ್ತ್ಯಾತ್ಮಕವಾಗಿದ್ದರಿಂದ ಯುಕ್ತಿಮೂಲತ್ವವೂ ಇರುವುದರಿಂದ ಪರಮಪ್ರಾಮಾಣ್ಯವು ಸಿದ್ಧವಾಗುತ್ತದೆ. ಇಷ್ಟಪ್ರಾಪಕ, ಅನಿಷ್ಟಪರಿಹಾರಕವಾದದ್ದು ವೇದಾರ್ಥಜ್ಞಾನ. ಅಂತಹ ಯಥಾರ್ಥವೇದಾರ್ಥ ತತ್ವಜ್ಞಾನವನ್ನು ತಂದುಕೊಡುವಂತಹದ್ದು ಈ ಸೂತ್ರಗಳು. ಹಾಗಾಗಿ ಇಷ್ಟಸಾಧನಜ್ಞಾನಜನಕತ್ವವು ಸಿದ್ಧವಾಗುತ್ತದೆ. ಪರಮಪ್ರಮಾಣವಾದ್ದರಿಂದ ಬ್ರಹ್ಮಸೂತ್ರಗಳು ಅತ್ಯಂತ ಉಪಾದೇಯವಾಗಿವೆ. ಆದ್ದರಿಂದಲೇ ವ್ಯಾಖ್ಯಾನ ಮಾಡಲು ಅರ್ಹವಾಗಿವೆ.

## ವೇದವಿಭಾಗ ಹೇಗಾಯಿತು ?

**ಭಾವದೀಪಃ – 'ಮೂಲವೇದಾದ್ಧೃತಋಙ್ನಿಗದಾದಿರೂಪಾದುಪವೇದಾದವಾನ್ತರವೇದಃ ಕೃತಃ' ಇತಿ ಭಾಷ್ಯೇऽಸ್ಪಷ್ಟಮಪಿ ಕುತಃ ಕಲ್ಪ್ಯಃ? ಇತ್ಯತ ಆಹ – ತದುಕ್ತಮಿತಿ ।।**

ಮೂಲವೇದವು ಮೊದಲು ಋಗ್ವೇದ ಮೊದಲಾದ ಹೆಸರುಗಳನ್ನು ಪಡೆದು ನಾಲ್ಕು ಬಗೆಯಲ್ಲಿತ್ತು. ಇದರಿಂದ ಉಪವೇದವು, ಉಪವೇದದಿಂದ ಅವಾಂತರವೇದವು ವಿಭಕ್ತವಾಯಿತು ಎಂಬ ವಿಚಾರವು ಭಾಷ್ಯದ ಮಾತಿನಿಂದ ಸ್ಪಷ್ಟವಾಗುವುದಿಲ್ಲ. ಆದರೆ ಟೀಕೆಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಟೀಕೆಯಲ್ಲಿ ಹೀಗೆ ವ್ಯಾಖ್ಯಾನಿಸಲು ಏನು ಆಧಾರ ? ಎಂಬ ಪ್ರಶ್ನೆಗೆ 'ತದುಕ್ತಮ್' ಎಂಬುದರಿಂದ ಉತ್ತರಿಸಿದ್ದಾರೆ.

## ಋಗ್ಭಾಷ್ಯದ ಸಮ್ಮತಿ

**ಭಾವದೀಪಃ – ತತ್ = ಋಙ್ನಿಗದಾದಿರೂಪಾದುಪವೇದಾದವಾನ್ತರವೇದಕರಣಮ್ ಋಗ್ಭಾಷ್ಯೋಕ್ತಸ್ಮೃತಾವುಕ್ತಮ್ ಇತ್ಯರ್ಥಃ । 'ಋಚೋ ನಿಗದಾತ್ ಸಾಮತಃ' ಇತಿ ಮೂಲವೇದಾದ್ಧೃತೋಪವೇದಾ ಉಚ್ಯನ್ತೇ ।**

ಮಹಾವೇದದಿಂದ ಯಾವ ಉಪವೇದವು ವಿಭಕ್ತವಾಗಿದೆಯೋ, ಅಂತಹ ಉಪವೇದದಿಂದ ಅವಾಂತರವೇದವು ವಿಭಕ್ತವಾಗಿದೆ ಎಂಬ ವಿಚಾರವು ಋಗ್ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಲ್ಲಿ ಸ್ಪಷ್ಟವಾಗಿ ಹೇಳಿದೆ ಎಂಬುದು ಇದರ ಅರ್ಥ. 'ಋಚೋ ನಿಗದಾತ್ ಸಾಮತಃ' ಋಗ್ವೇದದಿಂದ, ಯಜುರ್ವೇದದಿಂದ ಹಾಗೂ ಸಾಮವೇದದಿಂದ' ಎಂಬ ಮಾತಿನಿಂದ ಮೂಲವೇದದಿಂದ ಉಪವೇದಗಳು ಉದಿತವಾಗಿವೆ ಎಂದು ಹೇಳಿದಂತಾಯಿತು.

ವಿಶೇಷ ವಿಚಾರ - ಮೇಲೆ ಹೇಳಿದಂತೆ ವೇದವಿಭಾಗ ಮಾಡಿದ ವಿಷಯವನ್ನು ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ಶ್ರುತಿಯನ್ನು ಉದಾಹರಿಸುವ ಮೂಲಕ ಸ್ಪಷ್ಟಪಡಿಸಿದ್ದಾರೆ -

'ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ಪ್ರಭುಃ।
ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ ॥'

ಮೂಲ ಋಗ್ವೇದದಿಂದ ಕೆಲವು ಭಾಗ ಸ್ವೀಕರಿಸಿ, ಋಗ್ವೇದವನ್ನು ನಿಗದದಿಂದ ಯಜುರ್ವೇದವನ್ನು, ಸಾಮವೇದದಿಂದ ಸಾಮವೇದವನ್ನು ಸ್ವಾಮಿಯಾದ ಪರಮಾತ್ಮನು ವಿಭಾಗ ಮಾಡಿದನು.

## ನಾಲ್ಕುವೇದಗಳ ಲಕ್ಷಣ

**ಭಾವದೀಪಃ – 'ತಥಾ'ಇತಿ ಯಜುರ್ವೇದಂ ಸಾಮವೇದಂ ಸಮುಚ್ಚಿನೋತಿ। ಋಗ್ವೇದಂ ಯಜುರ್ವೇದಂ ಸಾಮವೇದಮ್ ಇತ್ಯವಾನ್ತರವೇದಾ ಉಚ್ಯನ್ತೇ । ತೇಷಾಮ್ ಋಗ್ಯತ್ರಾರ್ಥವಶೇನ ಪಾದವ್ಯವಸ್ಥಾ । 'ಅರ್ಥೈಕತ್ವಾದೇಕಂ ವಾಕ್ಯಂ ಸಾಕಾಙ್ಕ್ಷಂ ಚೇದ್ ವಿಭಾಗೇ ಸ್ಯಾತ್' 'ಗೀತಿಷು ಸಮಾಖ್ಯಾ' ಇತ್ಯಾದಿ ಜೈಮಿನಿಸೂತ್ರೋಕ್ತಲಕ್ಷಣಕಾನಿ ಋಗ್ಯಜುಃಸಾಮಾನ್ಯುದ್ಧೃತ್ಯೇತ್ಯರ್ಥಃ ।**

'ತಥಾ' ಎಂಬ ಪದದಿಂದ ಯಜುರ್ವೇದವನ್ನು ಹಾಗೂ ಸಾಮವೇದವನ್ನು ಸಮುಚ್ಚಯ ಮಾಡಿದ್ದಾರೆ. ಋಗ್ವೇದ, ಯಜುರ್ವೇದ, ಸಾಮವೇದಗಳು ಅವಾಂತರವೇದ ಎಂದು ಕರೆಸಿಕೊಳ್ಳುತ್ತವೆ. ಋಗ್ವೇದ, ಯಜುರ್ವೇದ ಸಾಮವೇದಗಳು ಅವಾಂತರವೇದಗಳೆನಿಸಿವೆ. ಈ ಮೂರು ವೇದಗಳ ಲಕ್ಷಣವು ಜೈಮಿನಿಸೂತ್ರದಲ್ಲಿ ಹೀಗೆ ಹೇಳಲ್ಪಟ್ಟಿದೆ - 'ತೇಷಾಂ ಋಗ್ಯತ್ರಾರ್ಥವಶೇನ ಪಾದವ್ಯವಸ್ಥಾ' ಇಷ್ಟೇ ಅಕ್ಷರಗಳೆಂಬ ವ್ಯವಸ್ಥೆಯಿಂದ ಋಕ್ ಎನಿಸುತ್ತದೆ ಅರ್ಥವ್ಯವಸ್ಥೆಯಿಂದ ಪಾದವ್ಯವಸ್ಥೆಯು ಇರುತ್ತದೆ. ಇದು ಋಗ್ವೇದದ ಲಕ್ಷಣ. 'ಅರ್ಥೈಕತ್ವಾದೇಕಂ ವಾಕ್ಯಂ ಸಾಕಾಂಕ್ಷಂ ಚೇದ್ ವಿಭಾಗೇ ಸ್ಯಾತ್' ಒಂದೇ ಅರ್ಥವನ್ನು ಪ್ರತಿಪಾದಿಸುವ ವಾಕ್ಯದಲ್ಲಿ ಯಾವ ಪದವನ್ನು ತೆಗೆದರೆ ವಾಕ್ಯವು ಅಪೂರ್ಣವಾಗುತ್ತದೋ ಯಾವ ಪದವನ್ನು ಹಾಕಿದರೆ ವಾಕ್ಯವು ಪರಿಪೂರ್ಣವಾಗುತ್ತದೋ ಅದು ಸಂಪೂರ್ಣವಾಕ್ಯ ಎನಿಸುತ್ತದೆ. ಇದು ಯಜುರ್ವೇದದ ಲಕ್ಷಣ. 'ಗೀತಿಷು ಸಾಮಾಖ್ಯಾ' ಗಾನರೂಪವಾದದ್ದು ಸಾಮವೇದ. ಇದು ಸಾಮವೇದದ ಲಕ್ಷಣ. ಇಂತಹ ಲಕ್ಷಣವುಳ್ಳ ಮೂರು ವೇದಗಳನ್ನು ವಿಭಾಗ ಮಾಡಿದರೆಂದು ತಿಳಿಯಬೇಕು.

ವಿಶೇಷ ವಿಚಾರ - ಮೂಲವೇದದಿಂದ ಉಪವೇದ. ಉಪವೇದದಿಂದ ಅವಾಂತರವೇದ. ಅವಾಂತರ ವೇದಗಳಲ್ಲಿಯೂ ಇಪ್ಪತ್ತನ್ನಾಲ್ಕು ಶಾಖೆ ಇತ್ಯಾದಿಯಾದ ವಿಭಾಗವನ್ನು ಇಲ್ಲಿಯ ತನಕ ಹೇಳಿರುವುದು ಕಾಲಕ್ರಮದಲ್ಲಿ ತತ್ವಜ್ಞಾನದ ವಿಷಯದಲ್ಲಿ ಸಂಶಯ ಉಂಟಾಯಿತೆಂಬ ಸಮರ್ಥನೆಗೋಸ್ಕರ ಎಂದು ತಿಳಿಯಬೇಕು. ಭಾಗವತದ ಪ್ರಥಮಸ್ಕಂಧದಲ್ಲಿ ಹೀಗೆ ಹೇಳಿದ್ದಾರೆ -

ಚಕ್ರೇ ವೇದತರೋಃ ಶಾಖಾ ದೃಷ್ಟ್ವಾ ಪುಂಸೋऽಲ್ಪಮೇಧಸಃ

ಪುರುಷರ ಮಂದಬುದ್ಧಿಯನ್ನು ಗಮನಿಸಿ ವೇದವ್ಯಾಸದೇವರು ವೇದವೃಕ್ಷಗಳಿಂದ ನಾನಾ ಶಾಖೆಗಳನ್ನು ಮಾಡಿದರು ಎಂದು.

## ಋಗ್ಭಾಷ್ಯದಲ್ಲಿರುವ ಶ್ರುತಿಯ ವ್ಯಾಖ್ಯಾನ

**ಭಾವದೀಪಃ – ವ್ಯಕ್ತಮೇತತ್ ಸರ್ವಂ -**

‘ ..... ತಥಾ ಸಾಮಾನಿ ಸಾಮತಃ ।
ಏವಂ ಪುರಾಣವಚನಾದುದ್ಧೃತಾ ಹಿ ತತಸ್ತತಃ ।
ಋಚಃ ಶಾಖಾತ್ವಮಾಪನ್ನಾಃ ಶಿಷ್ಯತಚ್ಛಿಷ್ಯಕೈರಿಮಾಃ ।।’
ಇತಿ ಶ್ಲೋಕದ್ವಯವ್ಯಾಖ್ಯಾನಾವಸರ ಏವ ಋಗ್ಭಾಷ್ಯಟೀಕಾಯಾಮ್ ।

ಈ ಎಲ್ಲ ವಿಚಾರವು ಋಗ್ಭಾಷ್ಯದ ಈ ಮಾತಿನಿಂದ ತಿಳಿಯುತ್ತದೆ -

‘ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ಪ್ರಭುಃ।
ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ ।।’
‘ಏವಂ ಪುರಾಣವಚನಾದುದ್ಧೃತಾ ಹಿ ತತಸ್ತತಃ।
ಋಚಃ ಶಾಖಾತ್ವಮಾಪನ್ನಾಃ ಶಿಷ್ಯತಚ್ಛಿಷ್ಯಕೈರಿಮಾಃ ।।’

ಋಕ್‌ಗಳಿಂದ ಕೆಲವು ಭಾಗ ಸ್ವೀಕರಿಸಿ ಋಗ್ವೇದವನ್ನು, ನಿಗದದಿಂದ ಯಜುರ್ವೇದವನ್ನು, ಸಾಮದಿಂದ ಸಾಮವೇದವನ್ನು ಸ್ವಾಮಿಯಾದ ಭಗವಂತನು ಉದ್ಧಾರ ಮಾಡಿದನು. ಹೀಗೆ ಪುರಾಣದ ಮಾತು ಆಧಾರವಾಗಿರುವುದರಿಂದ

ಆಯಾವೇದಗಳಿಂದಲೇ ಅವಾಂತರವೇದ ಉಪವೇದಗಳು ಹೊರಹೊಮ್ಮಿದವು. ಅನಂತರ ಶಿಷ್ಯಪ್ರಶಿಷ್ಯ ಕ್ರಮಕ್ಕಿಂತ ಶಾಖೆಗಳಾಗಿ ಬೆಳೆದುಬಂದವು.

ಈ ಎರಡು ಶ್ಲೋಕಗಳನ್ನು ವ್ಯಾಖ್ಯಾನಿಸುವ ಋಗ್ಭಾಷ್ಯಟೀಕೆಯಲ್ಲಿ ಮುಂದೆ ಹೇಳುವಂತಿದೆ -

## ಟೀಕೋಕ್ತ ವೇದವಿಭಾಗವು ಪ್ರಾಮಾಣಿಕವೇ ?

**ಭಾವದೀಪಃ – ತಥಾಹಿ ತತ್ರ ಟೀಕಾ – 'ಭವೇದೇತದ್ ಯದಿ ಮೂಲವೇದಾದುಪವೇದಾನಾಂ ತತೋऽವಾನ್ತರವೇದಾನಾಂ ಚೋದ್ಧಾರೇಣ ಪ್ರಬನ್ಧನಿರ್ಮಾಣಂ ಪ್ರಾಮಾಣಿಕಂ ಸ್ಯಾತ್ ತದೇವ ಕುತಃ? ಇತ್ಯತ ಆಹ – ಋಚ ಇತಿ ।।**

ಋಗ್ಭಾಷ್ಯದ ಟೀಕೆಯ ಮಾತು ಹೀಗಿದೆ - ಒಂದು ವೇಳೆ ಮೂಲವೇದದಿಂದ ಉಪವೇದಗಳು, ಉಪವೇದಗಳಿಂದ ಅವಾಂತರವೇದಗಳೆಂಬ ಪ್ರಬಂಧನಿರ್ಮಾಣವು ಪ್ರಾಮಾಣಿಕವಾಗಿದ್ದಲ್ಲಿ ಹಿಂದೆ ಹೇಳಿದ್ದು ಉಪಪನ್ನವಾಗುತ್ತಿತ್ತು. ಆದರೆ ಇದು ಹೇಗೆ ಪ್ರಾಮಾಣಿಕ ? ಎಂಬ ಪ್ರಶ್ನೆಗೆ ಆಚಾರ್ಯರು 'ಋಚಃ ಸ ಋಚಃ' ಎಂಬ ಮಾತಿನಿಂದ ಉತ್ತರಿಸಿದ್ದಾರೆ.

## ವೇದವಿಭಾಗಕ್ಕೆ ಪುರಾಣದ ಆಧಾರ

**ಭಾವದೀಪಃ – ಋಙ್ನಿಗದಸಾಮಾನೀತಿ ಮೂಲವೇದಾದುದ್ಧೃತಾ ಉಪವೇದಾ ಉಚ್ಯನ್ತೇ, ತತೋ ಮೂಲವೇದಾದುಪವೇದಾಸ್ತತಶ್ಚಾವಾನ್ತರವೇದಾ ಉದ್ಧೃತಾ ಇತ್ಯೇವಂ ಪುರಾಣವಚನಾದವಗಮ್ಯತ ಇತ್ಯರ್ಥಃ ।**

ಋಚ್-ನಿಗದ-ಸಾಮ ಎಂಬ ಮೂಲವೇದದಿಂದ ಉಪವೇದಗಳು ಉದ್ಧೃತವಾಗಿವೆ. ಈ ಉಪವೇದಗಳಿಂದ ಋಗ್ವೇದ ಮೊದಲಾದ ಉಪವೇದಗಳು, ಈ ಉಪವೇದಗಳಿಂದ ಅವಾಂತರವೇದಗಳು ಉದ್ಧರಿಸಲ್ಪಟ್ಟಿವೆ. ಈ ವಿಷಯವು ಪುರಾಣದ ಮಾತಿನಿಂದ ಸ್ಪಷ್ಟವಾಗುತ್ತದೆ. ಇಷ್ಟು ಭಾಷ್ಯದ ಅಭಿಪ್ರಾಯ.

## ಶಾಖಾಭೇದವೂ ಕೂಡ ವಿಭಕ್ತವಾಯಿತು

**ಭಾವದೀಪಃ – यथोपवेदादिः प्रबन्धः कृत्रिमः एवं शाखाभेदोऽपि इत्येतत् प्रसङ्गादाह – ऋच इति ।। ऋच इति प्रस्तुतत्वादुक्तं यजुरादिकं चैवमित्यादि ज्ञातव्यम्'** ಇತ್ಯಾದಿ ।

ಯಾವರೀತಿಯಾಗಿ ಉಪವೇದಗಳೆಂಬ ಪ್ರಬಂಧವು ಕೃತ್ರಿಮವೋ ಅದರಂತೆ ಶಾಖಾಭೇದಗಳೂ ಕೂಡ ಕೃತ್ರಿಮವಾಗಿವೆ (ಕೃತ್ರಿಮವೆಂದರೆ ಒಟ್ಟಾಗಿ ಇರುವುದನ್ನು ಸಂಗ್ರಹಿಸಿ ವಿಭಾಗಮಾಡಿದ್ದು ಎಂದರ್ಥ) ಇದನ್ನು ಪ್ರಸಂಗವಶಾತ್ 'ಋಚಃ ಶಾಖಾತ್ವಮಾಪನ್ನಾಃ' ಎಂಬುದರಿಂದ ಹೇಳಿದ್ದಾರೆ. 'ಋಚಃ' ಎಂಬುದಾಗಿ ಹೇಳಿರುವುದು ಪ್ರಸ್ತುತವಾದ್ದರಿಂದಷ್ಟೇ ಹೊರತು, ಬೇರೆ ಕಾರಣದಿಂದಲ್ಲ. ಆದ್ದರಿಂದ ಯಜುರಾದಿಗಳನ್ನು ಕೂಡ ಉಪಲಕ್ಷಿಸಬೇಕು.

## ವೇದವಿಭಾಗಕಥನಕ್ಕೆ ಸಂಗತಿ

**ಭಾವದೀಪಃ – इह टीकायाम् 'वेदमुत्सन्नम्'** इत्येतस्य मूलवेदादुद्धृतमुपवेदम् इति कण्ठतोऽनुक्तिः **'उत्सन्नान् भगवान्'** इति वक्ष्यमाणस्मृतौ, **'ऋचः'** इति ऋग्भाष्योक्तस्मृतौ मूलवेदादुद्धृतत्वांशस्य अस्पष्टत्वात् ऋङ्निगदादिरूपाद् वेदादृगाद्युद्धारेण ऋग्यजुरादिवेदकरणमात्र-प्रतीतेस्तदनुरोधेनेति ध्येयम् । **'वेदमुत्सन्नं व्यञ्जयंस्तदर्थनिर्णयाय'** इत्यादिनैव पूर्तौ किमनेकविभागोक्त्या? इत्यत आह – **अवान्तरवेदादीति।।**

ಪ್ರಕೃತ ಟೀಕೆಯಲ್ಲಿ 'ವೇದಮುತ್ಸನ್ನಂ' ಎಂಬ ಶಬ್ದಕ್ಕೆ ವ್ಯಾಖ್ಯಾನಿಸುತ್ತಾ, ಮೂಲವೇದದಿಂದ ಉಪವೇದಗಳು ಉದ್ಧರಿಸಲ್ಪಟ್ಟವೆ ಎಂಬುದನ್ನು ಕಂಠತಃ ಸ್ಪಷ್ಟವಾಗಿ ಹೇಳಿಲ್ಲ. ಇದಕ್ಕೆ ಕಾರಣವೇನೆಂದರೆ ಮುಂದೆ ಉದಾಹರಿಸುವ 'ಉತ್ಸನ್ನಾನ್ ಭಗವಾನ್' ಎಂಬ ಸ್ಮೃತಿಯಲ್ಲಿ ಮತ್ತು ಋಗ್ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಲ್ಲಿ ಉಪವೇದವು ಮೂಲವೇದದಿಂದ ಉದ್ಧೃತವಾಗಿದೆಯೆಂಬುದು ಅಸ್ಪಷ್ಟವಾಗಿದೆ. ಅದನ್ನು ಅನುಸರಿಸಿ ಇಲ್ಲಿನ ಟೀಕೆಯು ಈ ವಿಚಾರವು ಗೂಢಪ್ರಮೇಯವೆಂದು

ಸ್ಪಷ್ಟವಾಗಿ ಹೇಳಿಲ್ಲ. ವೇದದಲ್ಲಿ ಅನೇಕ ವಿಭಾಗದ ಪ್ರಯೋಜನವನ್ನು 'ಅವಾಂತರವೇದಾದಿ' ಎಂಬ ವಾಕ್ಯವು ಸ್ಪಷ್ಟಪಡಿಸುತ್ತಿದೆ.

## ನಾಲ್ಕು ಎಂಬ ವಿಭಾಗ ಮೊದಲೇ ಇತ್ತು

**ಭಾವದೀಪಃ – स्वत एव ऋङ्निगदादिरूपादेकैकस्मात् महावेदादुद्धृतस्यावान्तरस्य ऋगादिवेदस्य चतुर्विंशत्यादिशाखाभेदेन । 'आदि'पदेन शाखानां चोपशाखाभेदेन कथनम् इत्यर्थः ।**

ಸ್ವಾಭಾವಿಕವಾಗಿಯೇ ಮೂಲವೇದವು 'ಋಕ್', 'ನಿಗದ', 'ಸಾಮ', 'ಅಥರ್ವ' ಎಂಬುದಾಗಿ ನಾಲ್ಕು ವಿಭಾಗವನ್ನು ಮೊದಲೇ ಹೊಂದಿತ್ತು. ಇಂಥ ಮೂಲ ವೇದದಿಂದ ಋಗ್ವೇದ ಮೊದಲಾದ ಅವಾಂತರವೇದವು ಇಪ್ಪತ್ತನ್ನಾಲ್ಕು ಶಾಖೆ ಮೊದಲಾದ ರೂಪದಿಂದ ವಿಭಕ್ತವಾಯಿತು. 'ಆದಿಪದದಿಂದ ಶಾಖೆಗಳು ಉಪಶಾಖೆ ಇತ್ಯಾದಿ ಪ್ರಭೇದದಿಂದ ವಿಭಾಗ ಹೊಂದಿದವು ಎಂದು ಹೇಳಿರುವುದು' ಎಂದರ್ಥ.

## ಆದಿಪದಕ್ಕೆ ಮತ್ತೊಂದು ಅರ್ಥ

**ಭಾವದೀಪಃ – यद्वा, महावेदस्यावान्तरत्वेन च आदिपदेन चतुर्विंशत्यादित्वेन कथनम् इत्यर्थः ।। ज्ञानेति ।। एतच्च तन्निर्णयप्रसञ्जनार्थम् इति भावः ।**

ಅಥವಾ ಹೀಗೂ ವ್ಯಾಖ್ಯಾನ ಮಾಡಬಹುದು - ಅವಾಂತರ ಪದದಿಂದಲೇ ಮಹಾವೇದವನ್ನು ವಿವಕ್ಷಿಸಿ ಆದಿಪದದಿಂದ ಇಪ್ಪತ್ತನ್ನಾಲ್ಕು ಶಾಖೆ ಮೊದಲಾದವನ್ನು ಹೇಳಿರುವುದು ಎಂದೂ ಕೂಡ 'ಅವಾಂತರವೇದಾದಿ ವಿಭಾಗಕಥನಂ' ಎಂದು ಹೇಳಿರುತ್ತಾರೆ. ಹಿಂದಿನ ವ್ಯಾಖ್ಯಾನದಲ್ಲಿ ಮಹಾವೇದದಿಂದ ಉದ್ಧಾರಮಾಡಲ್ಪಟ್ಟ ಅವಾಂತರವೇದ ಎಂಬ ಪದದಿಂದ ವಿವಕ್ಷಿಸಲಾಗಿತ್ತು. ಆದಿಪದದಿಂದ ಶಾಖೆಗಳು ಪುನಃ ಉಪಶಾಖೆಯಾಗಿದ್ದನ್ನು ವಿವಕ್ಷಿಸಲಾಗಿತ್ತು. ಆದರೆ ಈ ವ್ಯಾಖ್ಯಾನದಲ್ಲಿ ಅವಾಂತರವೇದ ಎಂಬ ಪದದಿಂದ ಮಹಾವೇದವನ್ನು ವಿವಕ್ಷಿಸಿ, ಆದಿಪದದಿಂದ ಶಾಖೆಗಳನ್ನೇ ವಿವಕ್ಷಿಸಲಾಗಿದೆ.

## ಜ್ಞಾನದಲ್ಲಿ ಗೊಂದಲವಾಗಿತ್ತೆನ್ನಲು ಭಾಗವತದ ಆಧಾರ

**ಭಾವದೀಪಃ – ಇತ್ಯಾದೇರಿತಿ ।। 'ಪ್ರಥಮಸ್ಕನ್ಧೇ' ಇತಿ ಜ್ಞೇಯಮ್ । ಏತಚ್ಚ ಶಾಖಾಭೇದಕೃತೇರ್ಜ್ಞಾನಾಕುಲೀಭಾವಾನುಮಾಪಕತ್ವೇ ಮಾನಮ್ ।**

'ಚಕ್ರೇ ವೇದತರೋಃ' ಎಂಬ ವಾಕ್ಯವು ಪ್ರಥಮಸ್ಕಂಧದ ಭಾಗವತದಲ್ಲಿ ಹೇಳಲ್ಪಟ್ಟಿದೆ. ವೇದವ್ಯಾಸದೇವರು ಶಾಖೆಗಳನ್ನಾಗಿ ವಿಭಾಗ ಮಾಡಿದರು ಎಂದು ಹೇಳಿರುವುದರಿಂದಲೇ ಜ್ಞಾನವು ಗೊಂದಲಮಯವಾಗಿತ್ತು ಎಂಬುದಕ್ಕೆ ಅನುಮಾಪಕವಾಗಿದೆ. ಈ ವಿಷಯದಲ್ಲಿ ಭಾಗವದ ಮಾತು ಪ್ರಮಾಣವಾಗಿದೆ.

## ಟೀಕೆಯಲ್ಲಿ ವಾಕ್ಯಪ್ರಾಮಾಣ್ಯದ ಸಮರ್ಥನೆ ಬಲು ಸ್ಪಷ್ಟ

**ಭಾವದೀಪಃ – ನನು 'ಯದುಪಾದೇಯಮ್' ಇತ್ಯಾದಿನಾ ಕೃತಚೋದ್ಯಸ್ಯ ಕಥಮನೇನ ನಿರಾಸಃ? ಕಿಞ್ಚ 'ನಾರಾಯಣೋ ವ್ಯಾಸತ್ವೇನಾವತೀರ್ಯ ಬ್ರಹ್ಮಸೂತ್ರಾಣಿ ಚಕಾರ' ಇತ್ಯೇತಾವತೈವಾಸ್ಮಿನ್ಮೂಲತ್ವೇನ ಪ್ರಾಮಾಣ್ಯಲಾಭಾದವಶಿಷ್ಟಂ ವ್ಯರ್ಥಮ್ । 'ಪ್ರಾಮಾಣ್ಯಸ್ಯ ಸ್ವತಸ್ತ್ವೇನ ಆಪ್ತೇರನುಪಯೋಗಶ್ಚ' ಇತ್ಯತ ಆಹ – ಅಯಂ ಭಾವ ಇತಿ ।।**

'ಯದುಪಾದೇಯಂ ತದೇವ ಅನನ್ಯಾರ್ಥತಯಾ ವ್ಯಾಖ್ಯೇಯಮ್' ಎಂದು ಪ್ರಾರಂಭದಲ್ಲಿ ಸೂತ್ರವ್ಯಾಖ್ಯಾನವು ವ್ಯರ್ಥವೆಂದು ಆಕ್ಷೇಪಿಸಲಾಗಿತ್ತು. ಇಲ್ಲಿಯ ತನಕ ಹೇಳಿದ ವಿಚಾರದಿಂದ ಅದಕ್ಕೆ ಉತ್ತರವನ್ನು ನೀಡಿದಂತಾಗಲಿಲ್ಲ. ಮತ್ತು ನಾರಾಯಣನು ವ್ಯಾಸರೂಪದಿಂದ ಅವತರಿಸಿ ಬ್ರಹ್ಮಸೂತ್ರವನ್ನು ರಚಿಸಿದನು ಎಂದಷ್ಟೇ ಹೇಳಿದರೆ ಸಾಕು. ಆಪ್ತಿಮೂಲಕವಾದ ಪ್ರಾಮಾಣ್ಯವು ಸಿದ್ಧಿಸುವಾಗ ಉಳಿದ ವಿಚಾರಗಳೆಲ್ಲ ವ್ಯರ್ಥ. ಮತ್ತು ಪ್ರಾಮಾಣ್ಯಸ್ವತಸ್ತ್ವವನ್ನು ಸಿದ್ಧಾಂತದಲ್ಲಿ ಒಪ್ಪಿರುವುದರಿಂದ ಆಪ್ತಿಮೂಲತ್ವವನ್ನು ಸಮರ್ಥಿಸಿದ್ದೂ ಸಹ ವ್ಯರ್ಥ ಎಂಬ ಪ್ರಶ್ನೆಗೆ 'ಅಯಂ ಭಾವಃ' ಎಂಬುದರಿಂದ ಉತ್ತರಿಸಿದ್ದಾರೆ.

'ಯದುಪಾದೇಯಮ್' ಇತ್ಯಾದಿ ವಾಕ್ಯದಿಂದ ಮಾಡಿದ ಆಕ್ಷೇಪಕ್ಕೆ ಈಗ 'ಅಯಂ ಭಾವಃ' ಎಂಬಲ್ಲಿಂದ ಪ್ರಾರಂಭಿಸಿ 'ವ್ಯಾಖ್ಯೇಯತಾ ಇತಿ' ಎಂಬಲ್ಲಿಯ ತನಕ ಉತ್ತರಿಸುತ್ತಿದ್ದಾರೆ.

'ವಾಕ್ಯಪ್ರಾಮಾಣ್ಯಂ ತಾವತ್' ಎಂಬಲ್ಲಿರುವ 'ತಾವತ್' ಶಬ್ದವು ಮುಂದೆ ಹೇಳುವ ಶ್ರುತಿಮೂಲಕವಾದ ಪ್ರಾಮಾಣ್ಯವನ್ನು ಸೂಚಿಸುತ್ತಿದೆ.

ವಿವರಣೆ - ಸೂತ್ರಾಗತಿಕ್ರಮವನ್ನು ಹೇಳಲು ಹೊರಟಾಗ ವೇದವಿಭಾಗಕಥನವು ಅನುಚಿತ. ಆದ್ದರಿಂದ 'ವೇದಮುತ್ಸನ್ನಂ ವ್ಯಂಜಯನ್ ತದರ್ಥನಿರ್ಣಯಾಯ ಬ್ರಹ್ಮಸೂತ್ರಾಣಿ ಚಕಾರ' ಇಷ್ಟೇ ಸಾಕಿತ್ತು. ಈ ಪ್ರಶ್ನೆಗೆ 'ಅವಾಂತರವೇದಾದಿವಿಭಾಗಕಥನಂ ಚ' ಎಂದು ಉತ್ತರಿಸುತ್ತಿದ್ದಾರೆ. ಜ್ಞಾನದ ಸ್ಥಿತಿ ಎಷ್ಟು ಅಧೋಗತಿಗೆ ಹೋಗಿತ್ತೆಂದು ತಿಳಿಸಲು ವೇದವಿಭಾಗದ ಬಗ್ಗೆ ಹೇಳಿದ್ದಾರೆ. ಇದು ಅನುಚಿತವಲ್ಲ.

'ಅವಾಂತರವೇದಾದಿವಿಭಾಗಕಥನಂ ಚ' ಎಂಬ ಶಬ್ದಕ್ಕೆ 'ಮಹಾವೇದದಿಂದ ಉಪವೇದಗಳು; ಉಪವೇದಗಳಿಂದ ಅವಾಂತರವೇದಗಳು ವಿಭಾಗವಾಗಿವೆ. ಇದರ ಕಥನವು' ಎಂದರ್ಥ. 'ಆದಿ'ಪದಕ್ಕೆ 'ಚತುರ್ವಿಂಶತ್ಯಾದಿವಿಭಾಗಗಳ ಕಥನ' ಎಂದರ್ಥ. ಜ್ಞಾನದ ತಿರೋಧಾನಕ್ಕೆ ದ್ವಾಪರಪದದ ಗ್ರಹಣವಷ್ಟೇ ಕಾರಣವಲ್ಲ. ವೇದವಿಭಾಗ-ಕಥನವೂ ಕಾರಣವೆಂದು 'ಚ' ಶಬ್ದ ತಿಳಿಸುತ್ತಿದೆ.

## ಹಿನ್ನೆಲೆ ನಿರೂಪಣೆಯ ಪ್ರಯೋಜನ

**भावदीपः – वक्तृनिर्दोषता केन लब्धा? इत्यत आह – प्रमादेति ।। 'भगवान्' इत्यस्योपयोगमाह – भगवत्त्वादेवेति ।।**

ವಕ್ತೃಗಳಾದ ವೇದವ್ಯಾಸದೇವರಲ್ಲಿ ಯಾವುದೇ ದೋಷವಿಲ್ಲವೆಂದು ಹೇಗೆ ನಿರ್ಣಯವಾಗುತ್ತದೆ ? ಎಂಬ ಪ್ರಶ್ನೆಗೆ· 'ಪ್ರಮಾದ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪ್ರಮಾದ, ಅಜ್ಞಾನ, ಸಂಶಯ, ವಿಪರೀತಜ್ಞಾನ ಇವುಗಳು ನಾರಾಯಣನ ಅವತಾರರಾದ ವೇದವ್ಯಾಸದೇವರಲ್ಲಿ ಸರ್ವಥಾ ಬರುವುದಿಲ್ಲ. ಏಕೆಂದರೆ ಅವರು 'ಭಗವತ್' ಶಬ್ದದಿಂದ ಪ್ರತಿಪಾದ್ಯರಾಗಿದ್ದಾರೆ. ಈ ವಿಷಯವನ್ನು ತಿಳಿಸಲು ಭಾಷ್ಯದಲ್ಲಿ 'ಭಗವಾನ್' ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ.

## 'ಭಗವಾನ್' ಎಂದರೆ ವೇದವ್ಯಾಸರು

**ಭಾವದೀಪಃ –**

ज्ञानशक्तिबलैश्वर्यवीर्यतेजांस्यशेषतः ।
भगवच्छब्दवाच्यानि विना हेयैर्गुणादिभिः ।।

इत्यादौ 'अशेषतः' इति विशेषणात् निरतिशयज्ञानादिगुणवान् भगवच्छब्दार्थ उक्तः स्यात् ।

ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಈ ಆರುಗುಣಗಳು ಸಂಪೂರ್ಣವಾಗಿ ಯಾವ ವ್ಯಕ್ತಿಯಲ್ಲಿರುತ್ತದೋ, ಅವರೇ 'ಭಗವತ್' ಎಂಬ ಶಬ್ದದಿಂದ ಪ್ರತಿಪಾದ್ಯರು. ಹೇಯವಾದ ದೋಷಗಳಿಂದ ವಿದೂರರಾಗಿ ಗುಣಭರಿತರಾದವರು ಕೂಡ ಆಗಿರುತ್ತಾರೆ.

ಈ ಪ್ರಮಾಣಶ್ಲೋಕದಲ್ಲಿ 'ಅಶೇಷತಃ' ಎಂಬುದಾಗಿ ವಿಶೇಷಣವನ್ನು ನೀಡಿರುವುದರಿಂದ ನಿರತಿಶಯವಾದ ಜ್ಞಾನಶಕ್ತಿ ಮೊದಲಾದ ಗುಣಗಳುಳ್ಳ ವ್ಯಕ್ತಿಯೇ ಭಗವತ್ ಎಂಬ ಶಬ್ದದಿಂದ ಪ್ರತಿಪಾದ್ಯನಾಗಲು ಅರ್ಹನಾಗಿರುತ್ತಾನೆ. ಎಂಬ ಪ್ರಮೇಯವನ್ನು ತಿಳಿಸಿದಂತಾಯಿತು.

## ತತ್ತ್ವಪ್ರದೀಪದಲ್ಲಿ 'ಭಗವಾನ್' ಎಂಬ ಪದದ ವ್ಯಾಖ್ಯಾನ

**ಭಾವದೀಪಃ – 'गुणगुण्यादिभेदाभिप्रायात्'** इत्यादितत्त्वप्रदीपोक्तदिशा वा । **'ऐश्वर्यस्य समग्रस्य'** इत्यादेर्वा सम्पूर्णसार्वज्ञादिमत्त्वादेव इत्यर्थः ।

ತತ್ತ್ವಪ್ರದೀಪದಲ್ಲಿ ಗುಣ ಹಾಗೂ ಗುಣಿಗಳಿಗೆ ಅಭೇದದ ಅಭಿಪ್ರಾಯದಿಂದ ಭಾಷ್ಯಕಾರರು 'ಭಗವಾನ್' ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆಂದು ವ್ಯಾಖ್ಯಾನ ಮಾಡಿದ್ದಾರೆ.

'ಐಶ್ವರ್ಯಸ್ಯ ಸಮಗ್ರಸ್ಯ' ಎಂಬ ಶ್ಲೋಕವನ್ನು ಕೂಡ ಇಲ್ಲಿ ಪ್ರಮಾಣವನ್ನಾಗಿ ವಿವಕ್ಷಿಸಬೇಕು. ಈ ಶ್ಲೋಕವೂ ಕೂಡ ಸಂಪೂರ್ಣವಾದ ಸಾರ್ವಜ್ಞಾನಿಕ ಗುಣಗಳುಳ್ಳವನನ್ನು 'ಭಗವತ್' ಎಂದು ಹೆಸರಿಸಿದೆ.

## ಮೂರು ಬಗೆಯ ಆನುಕೂಲ್ಯಗಳು ಸ್ಪಷ್ಟವಾಗಿವೆ

**भावदीपः – 'ब्रह्मरुद्र' इत्यादेर्भावमाह – विप्रलम्भेति ।। 'तन्निर्णयाय' इत्येतदुपयोगमाह – अपहासस्येति ।। 'तदर्थनिर्णयाय' इत्येतद्भावमाह – आप्तीति ।।**

ಭಾಷ್ಯದಲ್ಲಿ 'ಬ್ರಹ್ಮರುದ್ರೇಂದ್ರಾದಿಭಿಃ' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯವನ್ನು ಟೀಕೆಯಲ್ಲಿ 'ವಿಪ್ರಲಂಭಕತ್ವಸ್ಯ ಚ' ಎಂಬ ವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ. ಭಾಷ್ಯದಲ್ಲಿ 'ತನ್ನಿರ್ಣಯಾಯ' ಎಂಬ ಪದದ ಪ್ರಯೋಗದ ಉಪಯೋಗವನ್ನು ಟೀಕೆಯಲ್ಲಿ 'ಅಪಹಾಸಸ್ಯಚ' ಎಂಬ ವಾಕ್ಯದಿಂದ ತೋರಿಸಿದ್ದಾರೆ. 'ತದರ್ಥನಿರ್ಣಯಾಯ' ಎಂಬ ಭಾಷ್ಯದ ಮಾತನ್ನು ಟೀಕೆಯಲ್ಲಿ 'ಆಪ್ತಿಮೂಲತ್ವೇನೈವ' ಎಂಬ ಮಾತಿನಿಂದ ಸ್ಪಷ್ಟಪಡಿಸಿದ್ದಾರೆ.

## ಶ್ರುತಿ ಹಾಗೂ ಯುಕ್ತಿಮೂಲಕವೂ ಆಗಿದೆ

**भावदीपः – युक्तीति ।। 'सूत्राणां न्यायैरेव निर्णायकत्वात् निर्णाय इत्युक्त्यैव युक्तिमूलत्वं प्राप्तम्' इति भावः।**

ಸೂತ್ರಗಳಲ್ಲಿರುವ ನ್ಯಾಯಗಳೇ ನಿರ್ಣಾಯಕವಾಗಿವೆ. ಆದ್ದರಿಂದ 'ನಿರ್ಣಯಾಯ' ಎಂಬ ಭಾಷ್ಯದಲ್ಲಿರುವ ಪದದಿಂದಲೇ ಈ ಶಾಸ್ತ್ರಕ್ಕೆ ಯುಕ್ತಿಮೂಲತ್ವವು ಪ್ರಾಪ್ತವಾಗುತ್ತದೆಂದು ಟೀಕೆಯಲ್ಲಿ ಯುಕ್ತಿಮೂಲತ್ವಾತ್' ಎಂಬ ಪದದಿಂದ ಸ್ಪಷ್ಟಪಡಿಸಿದ್ದಾರೆ.

## ತ್ರಿವಿಧ ಪ್ರಾಮಾಣ್ಯವು ಸಮರ್ಥಿತವಾಯಿತು

**ಭಾವದೀಪಃ – ಏತೇನ 'ವಕ್ತೃಶ್ರೋತೃಪ್ರಸಕ್ತೀನಾಮ್' ಇತ್ಯಾದ್ಯನುಭಾಷ್ಯೋಕ್ತದಿಶಾ ಪ್ರಾಮಾಣ್ಯಮುಪಪಾದಿತಂ ಧ್ಯೇಯಮ್ । 'ಅಥೇಷ್ಟಾನಿಷ್ಟ' ಇತ್ಯಾದೇರುಪಯೋಗಮಾಹ – ಇಷ್ಟೇತಿ ।। 'ಇತ್ಯಯಂ ಭಾವಃ' ಇತಿ ಇತಿಶಬ್ದಾನ್ವಯಃ ।।**

ಹೀಗೆ ವ್ಯಾಖ್ಯಾನ ಮಾಡಿದ್ದರಿಂದ 'ವಕ್ತೃಶ್ರೋತೃಪ್ರಸಕ್ತೀನಾಮ್' ಎಂಬ ಅನುವ್ಯಾಖ್ಯಾನ ಮಾತಿನಂತೆ ತ್ರಿವಿಧ ಪ್ರಾಮಾಣ್ಯವನ್ನು ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಉಪಪಾದನೆ ಮಾಡಿದಂತಾಯಿತು. 'ಅಥೇಷ್ಟಾನಿಷ್ಟ' ಇತ್ಯಾದಿ ಭಾಷ್ಯದ ಮಾತಿನ ಉಪಯೋಗವನ್ನು 'ಇಷ್ಟಸಾಧನತಾವಬೋಧಕತ್ವಮ್' ಎಂಬ ಟೀಕೆಯಲ್ಲಿ ತಿಳಿಸಿರುತ್ತಾರೆ. 'ಇತಿ' ಎಂಬ ಪದಕ್ಕೆ 'ಅಯಂ ಭಾವಃ' ಎಂಬಲ್ಲಿ ಅನ್ವಯ. ಆವಾಗ 'ಇತ್ಯಯಂ ಭಾವಃ' ಎಂಬುದಾಗಿ ಹೇಳಿದಂತಾಗುತ್ತದೆ.

ವಿವರಣೆ - ಯಾವ ಕಾರಣಕ್ಕೋಸ್ಕರ ಇಲ್ಲಿಯ ತನಕ ಉಪೋದ್ಘಾತವನ್ನು ಹೇಳಿದರೋ, ಅದನ್ನು ಈಗ 'ಆಪ್ತಿಮೂಲತ್ವಾದ್ ಬ್ರಹ್ಮಸೂತ್ರಾಣಾಮ್' ಎಂದು ಹೇಳುತ್ತಿದ್ದಾರೆ. ಆದ್ದರಿಂದ ಬ್ರಹ್ಮಸೂತ್ರಗಳಿಗೆ ವಕ್ತೃವಿನ ನಿರ್ದೋಷತ್ವದಿಂದ ಆಪ್ತಿಮೂಲಕವಾದ ಪ್ರಾಮಾಣ್ಯವನ್ನು ಸಮರ್ಥಿಸಿದಂತಾಯಿತು. ವಕ್ತೃಗಳಾದ ವ್ಯಾಸರಲ್ಲಿರುವ ನಿರ್ದೋಷತ್ವವನ್ನೇ 'ಪ್ರಮಾದಾಜ್ಞಾನಸಂಶಯ' ಎಂಬಲ್ಲಿಂದ 'ಪ್ರಸಂಗದೋಷಾಭಾವಾತ್' ಎಂಬಲ್ಲಿಯ ತನಕ ಸಮರ್ಥಿಸುತ್ತಿದ್ದಾರೆ. 'ನಾರಾಯಣಾವತಾರೇ ವ್ಯಾಸೇऽಸಂಭವಾತ್' ಎಂಬುದು ಹೇತುಗರ್ಭವಿಶೇಷಣ. ವ್ಯಾಸರು ನಾರಾಯಣನ ಅವತಾರರಾದ್ದರಿಂದ ಅಜ್ಞಾನಸಂಶಯಾದಿಗಳು ಅವರಲ್ಲಿಲ್ಲವೆಂದು ಅರ್ಥ. ನಾರಾಯಣನ ಅವತಾರರಾದರೂ ಕೂಡ ಪ್ರಮಾದಾದಿಗಳು ಇರಲಿ ಎಂಬ ಅಪ್ರಯೋಜಕಶಂಕೆಯನ್ನು 'ಭಗವತ್ವಾದೇವ' ಎಂದು ಪರಿಹರಿಸುತ್ತಿದ್ದಾರೆ. . ವೇದವ್ಯಾಸದೇವರು ಷಡ್ಗುಣೈಶ್ವರ್ಯ ಸಂಪನ್ನರಾದ್ದರಿಂದ 'ಭಗವಾನ್' ಎನಿಸಿದ್ದಾರೆ. ಆದ್ದರಿಂದ ಅವರಲ್ಲಿ ಅಜ್ಞಾನಾದಿಗಳು ಬರಲು ಸಾಧ್ಯವೇ ಇಲ್ಲ. ಹಾಗಾದಲ್ಲಿ ಅವರು 'ಭಗವಾನ್' ಎಂದೇ ಆನಿಸುವುದಿಲ್ಲ. ತತ್ವಪ್ರದೀಪಿಕಾಕಾರರು ಗುಣಗುಣಿಗಳ ಅಭೇದ ಅಭಿಪ್ರಾಯದಿಂದ ಭಗವಚ್ಛಬ್ದವನ್ನು ಹೇಳಲಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ.

ಶ್ರೋತೃದೋಷ ಯಾವುದು? ಆದು ಏಕಿಲ್ಲ? ಎಂಬುದನ್ನು ಜ್ಞಾನಾಯೋಗ್ಯತಾಯಾಃ ಇತ್ಯಾದಿ - ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಭಾಷ್ಯದಲ್ಲಿ 'ಬ್ರಹ್ಮರುದ್ರೇಂದ್ರಾಭರರ್ಥಿತೋ' ಎಂಬುದರಿಂದ ಈ ಶ್ರೋತ್ರಾನುಕೂಲ್ಯವನ್ನು ತೋರಿಸಿದ್ದಾರೆ. ಹೀಗೆ ಆಪ್ತಿಮೂಲತ್ವೇನ ಪ್ರಾಮಾಣ್ಯ ಸಿದ್ಧವಾದ ಮೇಲೆ ಶ್ರುತಿನಿರ್ಣಾಯಕತ್ವೇನ ಸುತರಾಂ ಪ್ರಾಮಾಣ್ಯ ಸಿದ್ಧವಾಗುತ್ತದೆ. ಶ್ರುತಿಯಿಂದ ನಿರ್ಣಯಮಾಡಲು ಯುಕ್ತಿಗಳು ಬೇಕಾದ್ದರಿಂದ ಶ್ರುತಿನಿರ್ಣಾಯಕತ್ವದಿಂದಲೇ ಶ್ರುತಿಮೂಲತ್ವ ಯುಕ್ತಿಮೂಲತ್ವ ಎರಡನ್ನೂ ಹೇಳಿದಂತಾಗುತ್ತದೆ.

ಇಲ್ಲಿ ಶ್ರುತಿಮೂಲತ್ವ, ಯುಕ್ತಿಮೂಲತ್ವ ಎಂದರೆ 'ಶ್ರುತಿ ಮತ್ತು ಯುಕ್ತಿಗಳಿಂದ ಅರ್ಥವನ್ನು ತಿಳಿದು ರಚಿಸಿದರು' ಎಂದರ್ಥವಲ್ಲ. ಸರ್ವಜ್ಞರಾದ ವ್ಯಾಸರು ಶ್ರುತ್ಯಾದಿಗಳಿಂದ ಅರ್ಥವನ್ನು ತಿಳಿಯಬೇಕಿಲ್ಲ. ಆದ್ದರಿಂದ ಶ್ರುತಿ ಯುಕ್ತಿಗಳಿಗೆ ಸಮಾನ ಅರ್ಥವುಳ್ಳದ್ದನ್ನು ರಚಿಸಿದರು ಎಂದಷ್ಟೇ ಅರ್ಥೈಸಬೇಕು. ಹಾಗಾದರೆ 'ಶ್ರುತಿಯುಕ್ತಿಸಂವಾದಿತ್ವಾತ್' ಎಂದೇ ಹೇಳಬಹುದಿತ್ತಲ್ಲ? ಎಂದರೆ ಯಾದೃಚ್ಛಿಕ-ಸಂವಾದಿಸ್ಥಳದಲ್ಲೂ ಶ್ರುತಿಯುಕ್ತಿಸಂವಾದವಿರುವುದರಿಂದ ನಮಗೆ ಸಂಶಯ ಬರುತ್ತಿತ್ತು. ಹಾಗಾಗಿ 'ಶ್ರುತಿಮೂಲತ್ವಾತ್' ಎಂದು ಹೇಳಿದ್ದೇ ಸಮಂಜಸವಾಗಿದೆ.

## ಸೂತ್ರಾಗತಿವಿಚಾರಕ್ಕೆ ಸ್ಕಾಂದದ ಸಮ್ಮತಿ

**ಬ್ರಹ್ಮಸೂತ್ರಭಾಷ್ಯಮ್ – ತಚ್ಚೋಕ್ತಂ ಸ್ಕಾನ್ದೇ**[೧]**—**

(೧) ''ಕೇವಲ ನಾವಷ್ಟೇ ಹೇಳಿದ್ದಲ್ಲ. ಸ್ಕಾಂದಪುರಾಣವೂ ಇದನ್ನು ಹೇಳುತ್ತಿದೆ ಎಂಬ ಸಮುಚ್ಚಯಾರ್ಥದಲ್ಲಿ ಚಶಬ್ದವಿದೆ. ಪ್ರತಿಯೊಂದು ಸಂದರ್ಭದಲ್ಲಿ ಶ್ರೀಮದಾಚಾರ್ಯರು ಪುರಾಣಗಳ ಆಧಾರವನ್ನು ನೀಡುತ್ತಾರೆ. ಹೀಗೇಕೆ? ಎಂಬ ಪ್ರಶ್ನೆಗೆ ತತ್ವಪ್ರದೀಪದಲ್ಲಿ ಬಲುಸಂದರವಾಗಿ ಅಭಿಪ್ರಾಯ ನೀಡಿದ್ದಾರೆ. ವಾಸ್ತವಿಕವಾಗಿ ಸರ್ವಜ್ಞಶಿಖಾಮಣಿಗಳು ವಂಚನೆ ಮೊದಲಾದ ದೋಷಗಳ ಲವಲೇಶವೂ ಇಲ್ಲದವರು. ಆದ್ದರಿಂದ ಶ್ರೀಮದಾಚಾರ್ಯರು ತಮ್ಮ ಮಾತಿನಲ್ಲಿ ಸ್ವತಃ ಪ್ರಮಾಣವಾಗಿದ್ದಾರೆ. ಆವರ ಮಾತುಗಳೇ ನಮಗೆಲ್ಲರಿಗೂ ಪರಮಪ್ರಮಾಣ. ಪುನಃ ಪುರಾಣಗಳ ಉಲ್ಲೇಖ ಮಾಡುವ ಆವಶ್ಯಕತೆಯಿರುವುದಿಲ್ಲ; ಆದರೂ ಕೂಡ ಅಲ್ಲಲ್ಲಿ ಪುರಾಣ ಹಾಗೂ ವೇದಗಳ ಮಾತುಗಳನ್ನು ಉಲ್ಲೇಖಿಸುವುದು ಕೇವಲ ಪ್ರೌಢೀವಾದ. ಶ್ರೀಮದಾಚಾರ್ಯರು ಸರ್ವಜ್ಞಶಿಖಾಮಣಿಗಳಾಗಿದ್ದಾರೆಂದು ಬಳತ್ಥಾಸೂಕ್ತವು ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದೆ. ಮತ್ತೊಬ್ಬರಿಂದ ಪಾಠ ಕೇಳದೇ ಶ್ರುತಿ-ಸ್ಮೃತಿಗಳಿಗೆ ಅವಿರುದ್ಧವಾಗಿ ಪ್ರತಿಭೆಯು ಯಾವ ಮನುಷ್ಯರಲ್ಲಿ ಸಹಜವಾಗಿರುತ್ತದೋ, ಅವರನ್ನು ದೇವಶ್ರೇಷ್ಠರೆಂದು ನಾರಾಯಣಶ್ರುತಿ ಹೇಳುತ್ತಿದೆ. ಈ ಲಕ್ಷಣವು ಶ್ರೀಮದಾಚಾರ್ಯರಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ.

**ನಾರಾಯಣಾದ್ ವಿನಿಷ್ಪನ್ನಂ ಜ್ಞಾನಂ ಕೃತಯುಗೇ ಸ್ಥಿತಮ್ ।**
**ಕಿಞ್ಚಿತ್ ತದನ್ಯಥಾ ಜಾತಂ ತ್ರೇತಾಯಾಂ ದ್ವಾಪರೇऽಖಿಲಮ್ ।।**
**ಗೌತಮಸ್ಯ ಋಷೇಃ ಶಾಪಾಜ್ಜ್ಞಾನೇ ತ್ವಜ್ಞಾನತಾಂ ಗತೇ ।**
**ಸಙ್ಕೀರ್ಣಬುದ್ಧಯೋ ದೇವಾ ಬ್ರಹ್ಮರುದ್ರಪುರಸ್ಸರಾಃ ।।**
**ಶರಣ್ಯಂ ಶರಣಂ ಜಗ್ಮುರ್ನಾರಾಯಣಮನಾಮಯಮ್ ।**
**ತೈರ್ವಿಜ್ಞಾಪಿತಕಾರ್ಯಸ್ತು ಭಗವಾನ್ ಪುರುಷೋತ್ತಮಃ ।।**
**ಅವತೀರ್ಣೋ ಮಹಾಯೋಗೀ ಸತ್ಯವತ್ಯಾಂ ಪರಾಶರಾತ್ ।**
**ಉತ್ಸನ್ನಾನ್ ಭಗವಾನ್ ವೇದಾನುज्जहार ಹರಿಃ ಸ್ವಯಮ್ ।।**
**ಚತುರ್ಧಾ ವ್ಯಭಜತ್ ತಾಂಶ್ಚ ಚತುರ್ವಿಂಶತಿಧಾ ಪುನಃ ।**
**ಶತಧಾ ಚೈಕಧಾ ಚೈವ ತಥೈವ ಚ ಸಹಸ್ರಧಾ ।।**
**ಕೃಷ್ಣೋ ದ್ವಾದಶಧಾ ಚೈವ ಪುನಸ್ತಸ್ಯಾರ್ಥವಿತ್ತಯೇ ।**
**ಚಕಾರ ಬ್ರಹ್ಮಸೂತ್ರಾಣಿ ಯೇಷಾಂ ಸೂತ್ರತ್ವಮಞ್ಜಸಾ ।।**

ಅನುವಾದ - ಇಲ್ಲಿಯ ತನಕ ನಿರೂಪಿಸಿದ ಪ್ರಮೇಯವು ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

"ಶ್ರೀಮನ್ನಾರಾಯಣನ ದೆಸೆಯಿಂದ ಪ್ರಸಾರವಾದ ತತ್ವಜ್ಞಾನವು ಕೃತಯುಗದಲ್ಲಿ ಯಥಾಸ್ಥಿತವಾಗಿ ಇತ್ತು. ತ್ರೇತಾಯುಗದಲ್ಲಿ ಕೆಲವರ ಸಂದೇಹ ಮತ್ತು ಭ್ರಾಂತಿಗಳಿಗೆ ವಿಷಯವಾಯಿತು. ದ್ವಾಪರಯುಗದಲ್ಲಿ ಗೌತಮಋಷಿಗಳ ಶಾಪದಿಂದ ಅದೇ ತತ್ವಜ್ಞಾನವು ಸಂಪೂರ್ಣವಾಗಿ ನಷ್ಟವಾಯಿತು. ಹೀಗೆ ಸಕಲಸಜ್ಜನರ ತತ್ವಜ್ಞಾನವು ನಷ್ಟವಾದಾಗ ಸಜ್ಜನರಲ್ಲಿ ಅನುಕಂಪಗೊಂಡ ಬ್ರಹ್ಮರುದ್ರಾದಿದೇವತೆಗಳು ನಿರ್ದುಷ್ಟನಾದ ನಾರಾಯಣನನ್ನು ಮೊರೆಹೊಂದಿದರು. ಅವರ ಪ್ರಾರ್ಥನೆಯಂತೆ ನಾರಾಯಣನು ಪರಾಶರಋಷಿಗಳಿಂದ ಸತ್ಯವತಿದೇವಿಯಲ್ಲಿ ಮಹಾಮುನಿಗಳಾಗಿ ಅವತರಿಸಿದನು. ಮಹಾಮುನಿಗಳಾದ ಈ ವೇದವ್ಯಾಸದೇವರು ಅಪಪಾಠಾದಿಗಳಿಂದ ತಿರೋಹಿತವಾದ ವೇದಗಳನ್ನು ಮತ್ತೊಬ್ಬರ ಅಪೇಕ್ಷೆ ಇಲ್ಲದೆ ಪರಿಶುದ್ಧವಾಗಿ ಉಪದೇಶಿಸಿದರು. ಮತ್ತು ವೇದಗಳನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿದರು.

---

ಶ್ರೀಮದಾಚಾರ್ಯರಲ್ಲಿ ಯಾವುದೇ ದೋಷವಿಲ್ಲ ಎಂಬ ವಿಚಾರವೂ ಕೂಡ ವೇದದಿಂದಲೇ ತಿಳಿಯಲ್ಪಟ್ಟಿದೆ. ಬ್ರಹ್ಮದೇವರು ಹಾಗೂ ಮಹಾವಿಷ್ಣು ಸಕಲ ಸಜ್ಜನರಿಗೆ ಆಪ್ತತಮರು. ಉಳಿದ ದೇವತೆಗಳು ಹಾಗೂ ಋಷಿಮುನಿಗಳು ಆಪ್ತರು. ಹೀಗೆ ವಿಷ್ಣುಸಂಹಿತೆ ಹೇಳುತ್ತಿದೆ. ವಾಯುವೇ ಬ್ರಹ್ಮನಾಗಿದ್ದಾನೆ ಎಂದು ಶ್ರುತಿಯೇ ಹೇಳುತ್ತಿದೆ. ವಾಯುದೇವರ ಅವತಾರರಾದ ಮಧ್ವಾಚಾರ್ಯರೂ ಕೂಡ ನಮಗೆ ಪರಮ ಆಪ್ತತಮರು. ಆದ್ದರಿಂದಲೇ ಅವರ ಮಾತುಗಳು ನಮಗೆ ಸ್ವತಃ ಪ್ರಮಾಣವಾಗಿವೆ. - ತತ್ವಪ್ರದೀಪ

ಆ ನಾಲ್ಕು ವೇದಗಳನ್ನು ಪುನಃ ಕ್ರಮವಾಗಿ ಇಪ್ಪತ್ತನಾಲ್ಕು, ನೂರೊಂದು, ಸಾವಿರ, ಹನ್ನೆರಡು ಶಾಖೆಗಳನ್ನಾಗಿ ವಿಭಾಗ ಮಾಡಿದರು. ಈ ವೇದಗಳ ಅರ್ಥನಿರ್ಣಯಕ್ಕೋಸ್ಕರವೇ ಬ್ರಹ್ಮಸೂತ್ರಗಳನ್ನು ರಚಿಸಿದರು. ಈ ಸೂತ್ರಗಳೇ ನಿಜವಾದ ಸೂತ್ರಗಳು.

ಪ್ರತಿಪದಾರ್ಥ -- ತಚ್ಚ = ಹಿಂದೆ ಹೇಳಿದ ಪ್ರಮೇಯವೇ, ಸ್ಕಾಂದೇ = ಸ್ಕಾಂದಪುರಾಣದಲ್ಲಿ, ಉಕ್ತಮ್ = ಹೇಳಲ್ಪಟ್ಟಿದೆ.

ನಾರಾಯಣಾತ್ = ಶ್ರೀಮನ್ನಾರಾಯಣನ ಉಪದೇಶದಿಂದ, ವಿನಿಷ್ಪನ್ನಂ = ಬ್ರಹ್ಮಾದಿಗಳ ಮೂಲಕವಾಗಿ ಪ್ರಸಾರವಾದ, ಜ್ಞಾನಂ = ತತ್ವಜ್ಞಾನವು, ಕೃತಯುಗೇ = ಕೃತಯುಗದಲ್ಲಿ, ಸ್ಥಿತಮ್ = ಅವನು ಉಪದೇಶ ಮಾಡಿದಂತೆ ಇತ್ತು (ಸಂಶಯಾದಿಗಳಿಗೆ ವಿಷಯವಾಗಿರಲಿಲ್ಲ), ತ್ರೇತಾಯಾಂ = ತ್ರೇತಾಯುಗದಲ್ಲಿ, ಕಿಂಚಿತ್ = ಕೆಲವೇ ಕೆಲವರಲ್ಲಿ, ಅನ್ಯಥಾ ಜಾತಂ = ಸಂದೇಹ ಹಾಗೂ ವಿಪರೀತಜ್ಞಾನಗಳಿಗೆ ವಿಷಯವಾಯಿತು. ದ್ವಾಪರೇ = ದ್ವಾಪರಯುಗದಲ್ಲಿ, ಅಖಿಲಮ್ = ಸರ್ವನಾಶವಾಯಿತು.

ಸರ್ವನಾಶಕ್ಕೆ ಕಾರಣ -- ಗೌತಮಸ್ಯ = ಗೌತಮ ಋಷಿಗಳ, ಶಾಪಾತ್ = ಶಾಪದಿಂದ, ಜ್ಞಾನೇ = ತತ್ವಜ್ಞಾನವು, ಅಜ್ಞಾನತಾಂ = ತತ್ವಜ್ಞಾನ ಅಲ್ಲವೆಂಬ ವಿಪರೀತಜ್ಞಾನಕ್ಕೆ ಅಥವಾ ಸಂದೇಹಕ್ಕೆ ವಿಷಯವಾಗುವಿಕೆಯನ್ನು, ಗತೇ ಸತಿ = ಹೊಂದುತ್ತಿರಲು,

ಸಂಕೀರ್ಣಬುದ್ಧಯಃ = ದಯಾಬುದ್ಧಿಯುಳ್ಳ, ಬ್ರಹ್ಮರುದ್ರಪುರಸ್ಸರಃ = ಚತುರ್ಮುಖಬ್ರಹ್ಮ ರುದ್ರ ಮೊದಲಾದ, ದೇವಾಃ = ಇಂದ್ರಾದಿದೇವತೆಗಳು, ಶರಣ್ಯಂ = ಸರ್ವರಕ್ಷಕನಾದ, ಅನಾಮಯಂ = ಸರ್ವದೋಷದೂರನಾದ, ನಾರಾಯಣಂ = ನಾರಾಯಣನನ್ನು ಕುರಿತು, ಶರಣಂ = ಮೊರೆಯನ್ನು, ಜಗ್ಮುಃ = ಹೊಂದಿದರು.

ತೈಃ = ಆ ದೇವತೆಗಳಿಂದ, ವಿಜ್ಞಾಪಿತಕಾರ್ಯಸ್ತು = ಪ್ರಾರ್ಥಿತವಾದ ಅವತಾರಾದಿಕಾರ್ಯವುಳ್ಳ, ಭಗವಾನ್ = ಷಡ್ಗುಣೈಶ್ವರ್ಯಸಂಪನ್ನನಾದ, ಪುರುಷೋತ್ತಮಃ = ಕ್ಷರಾಕ್ಷರಪುರುಷರಿಗಿಂತ ಉತ್ತಮನಾದ ನಾರಾಯಣನು, ಸತ್ಯವತ್ಯಾಂ = ಸತ್ಯವತಿದೇವಿಯಲ್ಲಿ, ಪರಾಶರಾತ್ = ಪರಾಶರ ಋಷಿಗಳ ದೆಸೆಯಿಂದ, ಅವತೀರ್ಣಃ = ಅವತರಿಸಿದವನಾಗಿ, ಮಹಾಯೋಗಿ = ಮುನಿರೂಪನಾದ್ದರಿಂದ (ಜ್ಞಾನರೂಪನಾದ್ದರಿಂದ),

ಉತ್ಸನ್ನಾನ್ = ಅಪಪಾಠಾದಿಗಳಿಂದ ತಿರೋಹಿತವಾದ, ವೇದಾನ್ = ಋಗಾದಿವೇದಗಳನ್ನು, ಸ್ವಯಂ = ತಾನೇ (ಮತ್ತೊಬ್ಬರ ಉಪದೇಶವನ್ನು ಅಪೇಕ್ಷಿಸದೆ), ಉಜ್ಜಹಾರ = ಉಪದೇಶದಿಂದ ಉದ್ಧರಿಸಿದನು, ತಾಂಶ್ಚ = ಮೊದಲೇ ವಿಭಕ್ತವಾದ ಆ ನಾಲ್ಕು ವೇದಗಳನ್ನು, ಚತುರ್ಧಾ = ಋಗಾದಿನಾಲ್ಕು ಭಾಗವಾಗಿ, ವ್ಯಭಜತ್ = ವಿಭಾಗಿಸಿದನು. ಪುನಃ = ಮತ್ತು, ವಿಭಕ್ತವಾದ ವೇದಗಳನ್ನು, ಚತುರ್ವಿಂಶತಿಧಾ = ಋಗ್ವೇದವನ್ನು ಇಪ್ಪತ್ತನಾಲ್ಕುಶಾಖೆಗಳನ್ನಾಗಿ, ಏಕಶತಧಾ = ಯಜುರ್ವೇದವನ್ನು ನೂರೊಂದು ಶಾಖೆಗಳನ್ನಾಗಿ, ಸಹಸ್ರಧಾ = ಸಾಮವೇದವನ್ನು ಸಾವಿರಶಾಖೆಗಳನ್ನಾಗಿ, ತಥೈವ = ಹಾಗೆಯೇ, ದ್ವಾದಶಧಾ ಚ = ಅಥರ್ವವೇದವನ್ನು ಹನ್ನೆರಡು ಶಾಖೆಗಳನ್ನಾಗಿ ವಿಭಾಗ ಮಾಡಿದನು.

ಕೃಷ್ಣಃ = ವೇದವ್ಯಾಸದೇವರು, ಪುನಃ = ಮತ್ತೆ, ತಸ್ಯ = ಆ ವಿಭಕ್ತವಾದ ವೇದಗಳ, ಅರ್ಥವಿತ್ತಯೇ = ಅರ್ಥದ ನಿರ್ಣಯಕ್ಕೋಸ್ಕರ, ಬ್ರಹ್ಮಸೂತ್ರಾಣ = ಬ್ರಹ್ಮಸೂತ್ರಗಳನ್ನು, ಚಕಾರ = ರಚಿಸಿದರು. ಯೇಷಾಂ = ಈ ಸೂತ್ರಗಳಿಗೆ, ಸೂತ್ರತ್ವಂ = ಸೂತ್ರಶಬ್ದದ ಪ್ರವೃತ್ತಿನಿಮಿತ್ತವು, ಅಂಜಸಾ = ಮುಖ್ಯವಾಗಿ ಇರುತ್ತದೆ.

## ತಾವು ನಿರೂಪಿಸಿದ ಪ್ರಮೇಯಕ್ಕೆ ಪುರಾಣದ ಉಲ್ಲೇಖ

**तत्वप्रकाशिका –**

**उक्तमेवार्थं प्रमाणेन स्थापयति – तच्चेति ।।**

ಹೇಳಿದ ಈ ಎಲ್ಲ ಬಗೆಯ ವಿಚಾರಗಳನ್ನೂ ಸ್ಕಾಂದಪುರಾಣದ ಪ್ರಮಾಣವಾಕ್ಯದಿಂದ ಶ್ರೀಮದಾಚಾರ್ಯರು ಸ್ಥಾಪಿಸುತ್ತಿದ್ದಾರೆ - 'ತಚ್ಚೋಕ್ತಂ' ಎಂಬುದಾಗಿ.

**तत्वप्रकाशिका – स्थितं = यथोत्पन्नं तथैव। अन्यथाजातम् = 'इदमदो वा' इति सन्दिग्धम्, 'अन्यदेव' इति मिथ्यादृष्टिदुष्टं च । अखिलम् = अन्यथाजातम् ।**

ನಾರಾಯಣನಿಂದ ಹುಟ್ಟಿದ ಜ್ಞಾನವು ಕೃತಯುಗದಲ್ಲಿ ಸಂಪೂರ್ಣವಾಗಿ ಯಥಾರ್ಥವಾಗಿತ್ತು. ತ್ರೇತಾಯುಗದಲ್ಲಿ ಸ್ವಲ್ಪ ಅಯಥಾರ್ಥವಾಯಿತು. ಅಂದರೆ ಇದೋ? ಅದೋ? ಎಂಬ ಸಂದೇಹವು ಕೆಲವರಿಗೆ ಉಂಟಾಯಿತು. ದ್ವಾಪರಯುಗದಲ್ಲಾದರೂ ಜ್ಞಾನವು ಸಂಪೂರ್ಣವಾಗಿ ವಿಪರೀತಜ್ಞಾನವಾಯಿತು.

**तत्वप्रकाशिका – 'कालतो भागद्वयस्यान्यथात्वं युक्तं न सर्वस्य?' इत्यतः, विशेषकारणं चाह – गौतमस्येति ।।**

ಇಲ್ಲಿ ಒಂದು ಪ್ರಶ್ನೆ - ತ್ರೇತಾಯುಗದಲ್ಲಿ ಜ್ಞಾನವು ಒಂದು ಭಾಗ ನಷ್ಟವಾದರೆ ದ್ವಾಪರಯುಗದಲ್ಲಿ ಎರಡು ಭಾಗ ನಷ್ಟವಾಗಬೇಕು. ಆದರೆ ಸಂಪೂರ್ಣ ನಷ್ಟವಾಯಿತೆಂದು ನೀವು ಹೇಳುತ್ತಿದ್ದೀರಿ. ಇದು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು ಗೌತಮಸ್ಯ ಎಂಬುದರಿಂದ ಉತ್ತರಿಸುತ್ತಿದ್ದಾರೆ. (ಅಥವಾ ಜ್ಞಾನವು ಸಂಪೂರ್ಣವಾಗಿ ನಾಶವಾಗಿದ್ದರೂ ಸಹ ಬ್ರಹ್ಮಾದಿಗಳ ಪ್ರಾರ್ಥನೆಯು ವ್ಯರ್ಥ. ಏಕೆಂದರೆ ಬ್ರಹ್ಮಾದಿಗಳಿಗೆ ಜ್ಞಾನಹಾನಿ ಆಗಿಲ್ಲ. ಕಾಲಶಾಪವು ಅವರಿಗೆ ಸಂಬಂಧಿಸಿಲ್ಲ. ಮತ್ತು ವೇದಾರ್ಥನಿರ್ಣಯಕ್ಕೆ ಜೈಮಿನಿಸೂತ್ರಾದಿಗಳೇ ಇರಬೇಕಾದರೆ ಹೊಸದಾದ ಸೂತ್ರರಚನೆಗೆ ಸಾರ್ಥಕ್ಯವಿಲ್ಲ. ಜೈಮಿನ್ಯಾದಿಸೂತ್ರಗಳಿಗಿಂತ ಇವುಗಳಲ್ಲಿ ಯಾವುದೇ ವಿಶೇಷವಿಲ್ಲ. ಈ ಆಕ್ಷೇಪಕ್ಕೆ 'ಗೌತಮಸ್ಯ' ಎಂದು ಉತ್ತರಿಸುತ್ತಿದ್ದಾರೆ.)

**तत्वप्रकाशिका – अज्ञानताम् 'अज्ञानम्' इति प्रतीतिविषयतां, सन्देहगोचरतां च । ब्रह्मादिबुद्धिसङ्कीर्णता नाम सज्जनानुक्रोशयुक्ततैव, नाज्ञानादिमिश्रत्वम् ।**

'ಜ್ಞಾನವು ಅಜ್ಞಾನವಾಯಿತು' ಎಂದು ಮೂಲದಲ್ಲಿ ಇದೆ. ಅದಕ್ಕೆ 'ಅಜ್ಞಾನವೆಂಬ ಪ್ರತೀತಿಗೆ ವಿಷಯವಾಯಿತು' ಎಂದು ಅಥವಾ ಸಂಶಯವಿಷಯವಾಯಿತು ಎಂದು ಅರ್ಥ ಮಾಡಬೇಕು. 'ಸಂಕೀರ್ಣಬುದ್ಧಿಯುಳ್ಳ ದೇವತೆಗಳು' ಎಂಬಲ್ಲಿ ಸಂಕೀರ್ಣ ಎಂದರೆ ಅಜ್ಞಾನಿಗಳಾದ ಎಂದರ್ಥವಲ್ಲ, ಜ್ಞಾನವನ್ನು ಕಳೆದುಕೊಂಡ ಸಜ್ಜನರ ವಿಷಯದಲ್ಲಿ ಕೃಪೆಯುಳ್ಳವರಾದ ಎಂದು ಅರ್ಥ.

**तत्वप्रकाशिका – गौतमशापस्य स्वहतगोनिर्मातृमात्रविषयत्वात् । कालाभिभवशून्यत्वाच्च तेषाम् । लोकस्य सम्प्रदायप्रवर्तकाभावेन, कालतश्चाज्ञानप्राप्तिः । तदुक्तमन्यत्र – 'नष्टधर्मज्ञानलोककृपालुभिर्ब्रह्मरुद्रेन्द्रादिभिः' इत्यादि ।**

ಏಕೆಂದರೆ ತಾವು ಕೊಂದ ಗೋವನ್ನು ನಿರ್ಮಾಣಮಾಡಿದವರ ವಿಷಯದಲ್ಲಿ ಮಾತ್ರ ಗೌತಮರ ಶಾಪವು ಇತ್ತು. ಮತ್ತು ಬ್ರಹ್ಮಾದಿಗಳು ಕಾಲಾಭಿಭವಶೂನ್ಯರೂ ಆಗಿದ್ದಾರೆ.

ಅಂದರೆ ಅಜ್ಞಾನಪ್ರಾಪ್ತವಾದದ್ದಕ್ಕೆ ಗೌತಮರ ಶಾಪ ಮಾತ್ರ ಕಾರಣವಲ್ಲ ಕಾಲವೂ ಕಾರಣವಾಗಿದೆ. ಲೋಕದಲ್ಲಿ ಸಂಪ್ರದಾಯಪ್ರವರ್ತಕರು ಇಲ್ಲದ ಕಾರಣ ಕಾಲತಃ ಅಜ್ಞಾನವು ಪ್ರಾಪ್ತವಾಗಿದೆ. ಇದನ್ನೇ ಗೀತಾಭಾಷ್ಯದಲ್ಲಿ ನಷ್ಟಧರ್ಮಜ್ಞಾನಲೋಕಕೃಪಾಲುಭಃ ಬ್ರಹ್ಮರುದ್ರೇಂದ್ರಾದಿಭಃ ಇತ್ಯಾದಿಯಾಗಿ ಹೇಳಲಾಗಿದೆ.

**तत्वप्रकाशिका – तस्य वेदस्य । बहुवचनप्रयोगेऽपि नार्थभेदः शङ्कनीय इति भावेनैकवचनम् । वेदनिर्णयाय सूत्रान्तरैरलं किमेभिः? इत्यत आह – येषामिति ।।**

ಭಾಷ್ಯದಲ್ಲಿನ 'तस्यार्थवित्तये' ಎಂಬಲ್ಲಿ ತಸ್ಯ ಎಂದರೆ ವೇದದ ಎಂದರ್ಥ. ವಾಸ್ತವಿಕವಾಗಿ ಹಿಂದೆ 'ವೇದಾನ್' ಎಂದು ಬಹುವಚನಪ್ರಯೋಗವಿರುವುದರಿಂದ ಇಲ್ಲಿಯೂ ಬಹುವಚನವನ್ನೇ ಹೇಳಬೇಕಿತ್ತು. ಆದರೆ ಎಲ್ಲಾ ವೇದಗಳ ಅರ್ಥ ಒಂದೇ ಎಂದು ತಿಳಿಸಲು ಏಕವಚನವನ್ನು ಪ್ರಯೋಗಿಸಲಾಗಿದೆ. ವೇದಾರ್ಥನಿರ್ಣಯಕ್ಕಾಗಿ ಉಳಿದ ಜೈಮಿನ್ಯಾದಿ ಸೂತ್ರಗಳೇ ಇರಲಾಗಿ ಈ ಬ್ರಹ್ಮಸೂತ್ರದ ಅವಶ್ಯಕತೆ ಏನು? ಎಂಬ ಪ್ರಶ್ನೆಗೆ 'येषां सूत्रत्वमंजसा' ಎಂದು ಬ್ರಹ್ಮಸೂತ್ರಗಳಿಗೆ ಅಂಜಸಾ ಎಂದು ವಿಶೇಷಣ ಕೊಡಲಾಗಿದೆ.

## ಯುಗಕ್ಕೆ ತಕ್ಕಂತೆ ಮೇಧಾಶಕ್ತಿ

**भावदीपः – उक्तमेवेति ।। द्वापरमात्रस्य कथं सार्वत्रिकपुङ्गतज्ञानाकुलीभावहेतुता? किञ्च तथापि ब्रह्मादीनां प्रार्थनं निर्बीजम् । न हि ते ज्ञानहानिं प्राप्ताः । कालशापानभिभूतत्वात् ।**

'ಉಕ್ತಮೇವ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - ದ್ವಾಪರಯುಗದಲ್ಲಿ ಪ್ರತಿಯೊಬ್ಬ ಪುರುಷರ ಜ್ಞಾನವು ಕಲುಷಿತವಾಯಿತೆಂದು ಟೀಕೆಯಲ್ಲಿ ಹೇಳಿರುವರು. ಪ್ರತಿಯೊಬ್ಬ ಪುರುಷರ ಜ್ಞಾನದ ಕಾಲುಶಕ್ಕೆ ದ್ವಾಪರಯುಗವು ಹೇಗೆ ತಾನೇ ಕಾರಣವಾಗುತ್ತದೆ ? ಒಂದು ವೇಳೆ ಕಾಲಪ್ರಭಾವದಿಂದ ಮನುಷ್ಯಲೋಕದಲ್ಲಿರುವ ಪುರುಷರ ಜ್ಞಾನವು ನಾಶವಾದರೂ ಕೂಡ ಬ್ರಹ್ಮಾದಿಗಳೇಕೆ ಭಗವಂತನನ್ನು

ಪ್ರಾರ್ಥಿಸಬೇಕು. ಅವರಿಗಂತೂ ಜ್ಞಾನಹಾನಿ ಇಲ್ಲವಷ್ಟೇ ? ಏಕೆಂದರೆ ಕಾಲಪ್ರಭಾವದ ಶಾಪ ಅವರಿಗೆ ತಟ್ಟುವುದಿಲ್ಲ.

## ಬ್ರಹ್ಮಸೂತ್ರಗಳೇಕೆ ?

**ಭಾವದೀಪಃ – अपि च वेदार्थनिर्णयाय जैमिनिसूत्रादिभिरेव पूर्तौ किमभिनवसूत्ररचनेन? 'न ह्येतेषु तेभ्यः कोऽप्यतिशयोऽस्ति इत्याशङ्क्य' इति आदौ योज्यम् । गौतमस्येति ।।**

ಮತ್ತು ವೇದಾರ್ಥನಿರ್ಣಯಕ್ಕೊಸ್ಕರ ಈ ಬ್ರಹ್ಮಸೂತ್ರಗಳು ಹೊರಟಿರುತ್ತವ ಎಂದು ಹೇಳಲಾಯಿತು. ಆದರೆ ಜೈಮಿನಿ ಸೂತ್ರವೇ ಮೊದಲಾದವೂ ಕೂಡ ವೇದಾರ್ಥವನ್ನು ನಿರ್ಣಯಿಸುತ್ತವೆ. ಅವುಗಳಿಂದಲೇ ವೇದಗಳ ಅರ್ಥವು ಪರಿಪೂರ್ಣವಾಗಿ ತಿಳಿಯುವಾಗ ಪುನಃ ಹೊಸದಾದ ಈ ಬ್ರಹ್ಮಮೀಮಾಂಸಾಶಾಸ್ತ್ರದ ಅವಶ್ಯಕತೆಯೇನು? ಈ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಜೈಮಿನ್ಯಾದಿಸೂತ್ರಗಳಿಗಿಂತ ಹೆಚ್ಚುಗಾರಿಕೆ ಯಾವುದೂ ಇಲ್ಲವಷ್ಟೇ. ಈ ಆಶಂಕೆಗಳಿಗೆ 'ಗೌತಮಸ್ಯ ಇತ್ಯಾದಿ ವಾಕ್ಯದ ಟೀಕೆಯಿಂದ ಉತ್ತರವನ್ನು ನೀಡುತ್ತಿದ್ದಾರೆ.

## 'ಸೂತ್ರ' ಎಂದರೇನು ?

**ಭಾವದೀಪಃ – तत्समाधिस्तु – सङ्कीर्णबुद्ध्य इति ।। 'येषां सूत्रत्वमञ्जसा इत्यादिना' इति विवेक्तव्यम् । एतेन –**

**'सूत्रार्थो वर्ण्यते यत्र पदैः सूत्रानुकारिभिः ।**
**स्वपदानि च वर्ण्यन्ते भाष्यं भाष्यविदो विदुः ।।'**

**इत्युक्तेः स्वपदवर्णनाभावान्नेदं भाष्यमिति कस्यचिदुक्तिरपास्ता ।**

'ಸಂಕೀರ್ಣ ಬುದ್ಧಯ' ಎಂಬುದಕ್ಕೆ 'ಯೇಷಾಂ ಸೂತ್ರತ್ವಮಂಜಸಾ' ಎಂಬುದರ ಜೊತೆ ಅನ್ವಯವನ್ನು ತಿಳಿಯಬೇಕು.

ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ ।
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ।।

ಸೂತ್ರದ ಅರ್ಥವನ್ನು ವರ್ಣಿಸುತ್ತಿರಬೇಕು. ಸೂತ್ರಗಳಲ್ಲಿರುವ ಪದವನ್ನು ಅನುಕರಣೆ ಮಾಡಬೇಕು. ತನ್ನ ಪದಗಳಿಗೆ ತಾನೇ ವ್ಯಾಖ್ಯಾನ ಮಾಡಬೇಕು. ಇದನ್ನು ಭಾಷ್ಯದ ಲಕ್ಷಣವೆಂದು ಜ್ಞಾನಿಗಳು ಹೇಳುತ್ತಾರೆ.

ಶ್ರೀಮದಾಚಾರ್ಯರು ರಚಿಸಿರುವ ಬ್ರಹ್ಮಸೂತ್ರಭಾಷ್ಯದಲ್ಲಿ ಸ್ವಪದವರ್ಣನೆ ಎಂಬುದು ಇರುವುದಿಲ್ಲ. ಆದ್ದರಿಂದ ಇದು ಹೇಗೆ ತಾನೇ ಭಾಷ್ಯವೆಂದು ಕರೆಸಿಕೊಳ್ಳುತ್ತದೆ?

## ಶ್ರೀಮದಾಚಾರ್ಯರ ಭಾಷ್ಯ ಮಹಿಮೆ

**ಭಾವದೀಪಃ** – ಪ್ರಮಾಣೇನ ಸ್ವಪದವಾಕ್ಯಾನಾಂ ವಿಶದೀಕರಣಾತ್ । ಏವಂ ಸರ್ವತ್ರ ಧ್ಯೇಯಮ್ । ತದುಕ್ತಮ್ –

'ಉಕ್ತಮುಕ್ತಮಭಿಧೇಯಮುತ್ತಮಂ ವೇದವಾಕ್ಯಮನುವಾದಯನ್ ಮುಹುಃ ।
ವ್ಯಞ್ಜಯತ್ ಸ್ಮೃತಿವಚೋಭಿರಞ್ಜಸಾ ತಸ್ಯ ಚಾರ್ಥಮತಿಯುಕ್ತಯುಕ್ತಿಮತ್ ।।'

ಇತಿ ।

ಈ ಆಶಂಕೆಯನ್ನು ಈಗ ಪರಿಹರಿಸಿದಂತಾಯಿತು. ಶ್ರೀಮದಾಚಾರ್ಯರು ತಮ್ಮ ಭಾಷ್ಯದಲ್ಲಿರುವ ಪದಗಳಿಗೆ ತಾವೇ ಪ್ರಮಾಣ ಪುರಸ್ಸರವಾಗಿ ತಾವೇ ವ್ಯಾಖ್ಯಾನ ಮಾಡುತ್ತಾರೆ. ಮಧ್ವವಿಜಯಗ್ರಂಥದಲ್ಲಿ ನಾರಾಯಣಪಂಡಿತಾಚಾರ್ಯರು ಭಾಷ್ಯವನ್ನು ಹೀಗೆ ವರ್ಣಿಸಿದ್ದಾರೆ.

ಉಕ್ತಮುಕ್ತಮಭಿಧೇಯಮುತ್ತಮಂ ವೇದವಾಕ್ಯಮನುವಾದಯನ್ ಮುಹುಃ ।
ವ್ಯಂಜಯತ್ ಸ್ಮೃತಿವಾಚೋರಭಿರಂಜಸಾ ತಸ್ಯ ಚಾರ್ಥಮತಿಯುಕ್ತಯುಕ್ತಿಮತ್ ।।

ತಾವು ಹೇಳುವುದನ್ನು ಸ್ಪಷ್ಟವಾಗಿ ವ್ಯಾಖ್ಯಾನ ಮಾಡುತ್ತಾರೆ. ವೇದವಾಕ್ಯಗಳನ್ನು ಅನುವಾದ ಮಾಡುತ್ತಾ ಸೂತ್ರದಲ್ಲಿ ಹೇಳಿದ ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. ಶ್ರುತಿಗಳ ಮಾತುಗಳಿಂದ ಪುನಃ ಅದನ್ನು ನಿರ್ಧಾರ ಮಾಡುತ್ತಾರೆ. ಶ್ರೀಮದಾಚಾರ್ಯರ ಭಾಷ್ಯದಲ್ಲಿರುವ ಸೂತ್ರದಲ್ಲಿರುವ ಅರ್ಥವು ಅತ್ಯಂತ ಯುಕ್ತಿಬದ್ಧವಾಗಿದೆ.

## ಭಾಷ್ಯದ 'ಸ್ಥಿತಂ' ಪದದ ಅರ್ಥ

**ಭಾವದೀಪಃ – स्मृतिप्रामाण्यं तु द्वितीयपद्य एव समर्थितम् । स्थितौ प्रकारानुक्तेराह – यथेति ।। 'अन्यथा' इत्युत्तरत्रोक्तेरेतल्लाभः ।**

ಸ್ಮೃತಿಪ್ರಾಮಾಣ್ಯವನ್ನು ಎರಡನೆಯ ಪದ್ಯದಲ್ಲಿ ಸಮರ್ಥನೆ ಮಾಡಿದ್ದಾಗಿದೆ. ವೇದವು ಹೇಗಿತ್ತೆಂಬುದನ್ನು 'ಯಥಾ' ಎಂಬುದರಿಂದ ಸ್ಪಷ್ಟಪಡಿಸಿದ್ದಾರೆ.

## 'ಅನ್ಯಥಾಜಾತಂ' ಪದದ ಅರ್ಥ

**ಭಾವದೀಪಃ – 'ज्ञानमन्यथाजातम्' इत्ययुक्तम् । 'नहि प्रमा केनापि हेतुना भ्रान्तिर्भवति' इत्यत आह – इदमिति ।। दृष्टं = विषयीकृतम् ।**

ಜ್ಞಾನವು ಅನ್ಯಥಾಭೂತವಾಯಿತು ಎಂದು ಹೇಳಿದ್ದು ತಪ್ಪು. ಏಕೆಂದರೆ ಯಥಾರ್ಥಜ್ಞಾನವು ಯಾವುದೇ ಕಾರಣದಿಂದ ಎಂದೂ ಕೂಡ ಭ್ರಾಂತಿರೂಪವಾಗಲು ಸಾಧ್ಯವಿಲ್ಲ. ಈ ಪ್ರಶ್ನೆಗೆ 'ಇದಂ' ಎಂಬುದರಿಂದ ಉತ್ತರಿಸಿದ್ದಾರೆ. 'ದೃಷ್ಟಂ' ಎಂಬ ಪದಕ್ಕೆ ವಿಷಯೀಕರಿಸಲ್ಪಟ್ಟದ್ದು ಎಂದರ್ಥ.

## ಅಜ್ಞಾನಕ್ಕೆ ಕಾಲ ಹಾಗೂ ಶಾಪ, ಎರಡೂ ಕಾರಣಗಳು

**ಭಾವದೀಪಃ – एतेन 'अज्ञानताम्' इत्येतद्व्याख्यानमुक्तबीजम् । विशेषकारणं चेति ।। भाष्ये 'ज्ञाने तु' इति तुशब्दः शापाच्चेति समुच्चायक इत्युक्तं भवति । भाष्ये प्राग्द्वापर इत्युपलक्षणमिति भावः ।**

ಹೀಗೆ ಹೇಳಿದ್ದರಿಂದ 'ಅಜ್ಞಾನತಾಮ್' ಎಂಬ ಮಾತಿಗೂ ವ್ಯಾಖ್ಯಾನ ಮಾಡಿದಂತಾಯಿತು.

ಭಾಷ್ಯದಲ್ಲಿ 'ಜ್ಞಾನೇ ತು' ಎಂಬಲ್ಲಿರುವ ತುಶಬ್ದವು, ಶಾಪಾಚ್ಚ ಎಂಬುದರ ಸಮುಚ್ಚಾಯಕವಾಗಿದೆ. ಭಾಷ್ಯದಲ್ಲಿ ದ್ವಾಪರೇ ಎಂದು ಹೇಳಿದ್ದು ಉಪಲಕ್ಷಣವೆಂದು ಇದರಿಂದ ಸ್ಪಷ್ಟಪಡಿಸಿದಂತಾಯಿತು. ಕೇವಲ ಕಾಲವಷ್ಟೇ ಕಾರಣವಲ್ಲ. ಗೌತಮರ ಶಾಪವೂ ಕೂಡ ಕಾರಣವೆಂದು ತಿಳಿಯಬೇಕು.

ವಿವರಣೆ - ಕೃತಯುಗದಲ್ಲಿ ಧರ್ಮವು ನಾಲ್ಕು ಪಾದಗಳಲ್ಲಿ, ತ್ರೇತಾಯುಗದಲ್ಲಿ ಧರ್ಮವು ಮೂರುಪಾದಗಳಲ್ಲಿ, ದ್ವಾಪರ ಯುಗದಲ್ಲಿ ಎರಡುಪಾದಗಳಲ್ಲಿ, ಕಲಿಯುಗದಲ್ಲಿ ಒಂದು ಪಾದದಲ್ಲಿ ಧರ್ಮವು ನಿಂತಿರುತ್ತದೆ. ಆದ್ದರಿಂದ ಕೃತಯುಗದಲ್ಲಿ ಯಥಾರ್ಥವಾಗಿದ್ದ ತತ್ವಜ್ಞಾನವು ತ್ರೇತಾಯುಗದಲ್ಲಿ ಒಂದು ಭಾಗ ಕಳಚಿತು. ದ್ವಾಪರಯುಗದಲ್ಲಿ ಎರಡು ಭಾಗವು ಕಳಚಿತು. ಯುಗಪ್ರಭಾವದಿಂದ ಕಳಚುವ ತತ್ವಜ್ಞಾನಕ್ಕೆ ಗೌತಮರ ಶಾಪ ಸೇರಿತು. ಆದ್ದರಿಂದ ತತ್ವಜ್ಞಾನವು ಸಂಪೂರ್ಣವಾಯಿತು ಆಕುಲವಾಯಿತು.

ಜ್ಞಾನವು ಆಕುಲವಾಗುವುದೆಂದರೆ ಹೀಗರ್ಥ - ''ಮಹಾವಿಷ್ಣುವೇ ಸರ್ವೋತ್ತಮ'' ಎಂಬ ಜ್ಞಾನವು ಯಥಾರ್ಥವೋ? ಅಯಥಾರ್ಥವೋ ಎಂಬ ಸಂಶಯವು ಸಜ್ಜನರಿಗೂ ಕೂಡ ಮೂಡುತ್ತದೆ. ಇನ್ನು ಕೆಲವರಿಗೆ ಅಪ್ರಮಾಣವೇ ಆಗಿದೆ ಎಂಬ ಭ್ರಾಂತಿ ಬರುತ್ತದೆ. ಇಂಥ ಸಮಸ್ಯೆ ಕೇವಲ ಭೂಲೋಕದಲ್ಲಿರುವ ಸಜ್ಜನರಲ್ಲಿ ಮಾತ್ರ ಉಂಟಾಯಿತು ಹೊರತು, ದೇವಲೋಕದಲ್ಲಿರುವ ಬ್ರಹ್ಮ, ರುದ್ರ, ಇಂದ್ರಾದಿಗಳಿಗೆ ಬರಲಿಲ್ಲ. ಏಕೆಂದರೆ ಅವರಲ್ಲಿ ಯುಗದ ಪ್ರಭಾವವು ಕೆಲಸ ಮಾಡುವುದಿಲ್ಲ. ಗೌತಮರ ಶಾಪವೂ ಕೂಡ ತಟ್ಟುವುದಿಲ್ಲ. ಆದ್ದರಿಂದಲೇ ದೇವತೆಗಳಲ್ಲಿರುವ ತತ್ವಜ್ಞಾನ ಆಕುಲವಾಗಲಿಲ್ಲ. ಆದ್ದರಿಂದ ಭೂಲೋಕದಲ್ಲಿರುವ ಸಜ್ಜನರ ಉದ್ಧಾರಕ್ಕಾಗಿ ಬ್ರಹ್ಮಾದಿ ದೇವತೆಗಳು ಭಗವಂತನನ್ನು ಮೊರೆಹೊಕ್ಕರು ಎಂದು ತಿಳಿಯಬೇಕು.

ಮತ್ತೊಂದು ಗಮನಿಸಬೇಕಾದ ವಿಚಾರ - ಯಾವ ಬ್ರಾಹ್ಮಣರು ಗೋವನ್ನು ಸೃಷ್ಟಿ ಮಾಡಿ, ಗೌತಮರ ಕರಸ್ಪರ್ಶದಿಂದ ಮರಣವನ್ನಪ್ಪುವಂತೆ ಮಾಡಿ ಮೋಸವನ್ನು ಮಾಡಿದರೋ, ಆ ಬ್ರಾಹ್ಮಣರಿಗೆ ಮಾತ್ರ ಗೌತಮರ ಶಾಪ ತಗುಲಿತು. ಆದರೆ ಅವರಿಂದಲೇ ಮುಂದಿನ ತತ್ವಜ್ಞಾನದ ಪರಂಪರೆ ಬೆಳೆಯಬೇಕಾಗಿತ್ತಾದ್ದರಿಂದ ಲೋಕದ ಉಳಿದ ಜನರಲ್ಲಿಯೂ ತತ್ವಜ್ಞಾನವು ಮರೆಯಾಯಿತು. ಸಂಪ್ರದಾಯ ಪ್ರವರ್ತಕರೇ ಇಲ್ಲದ ಕಾರಣ ಎಲ್ಲಾ ಸಜ್ಜನರು ಅಜ್ಞಾನಿಗಳು, ವಿಪರೀತಜ್ಞಾನಿಗಳು, ಸಂಶಯಜ್ಞಾನಿಗಳು ಆದರು. ಸಜ್ಜನರ ಈ ಸಂಕಷ್ಟ ಸ್ಥಿತಿಯನ್ನು ಕಂಡ ಬ್ರಹ್ಮ, ರುದ್ರ, ಇಂದ್ರ, ಚಂದ್ರ ಮೊದಲಾದ ದೇವತೆಗಳು ಅನುಕಂಪವುಳ್ಳವರಾದರು. ಅದಕ್ಕಾಗಿ ಭಗವಂತನನ್ನು ಮೊರೆಹೋದರು.

ಕರುಣಾಮಯಿಯಾದ ಮಹಾವಿಷ್ಣುವು ಬ್ರಹ್ಮಾದಿದೇವತೆಗಳ ಪ್ರಾರ್ಥನೆಯಂತೆ ಪರಾಷರರಿಂದ ಸತ್ಯವತಿಯಲ್ಲಿ 'ವೇದವ್ಯಾಸ' ಎಂಬ ರೂಪದಿಂದ ಅವತಾರ ಮಾಡಿ, ಪುನಃ ತತ್ವಜ್ಞಾನದ ಪರಂಪರೆಯನ್ನು ಬೆಳೆಸಿದರು. ಅದಕ್ಕಾಗಿ ನಾಲ್ಕು ವೇದಗಳನ್ನು ವಿಭಾಗ ಮಾಡಿದರು.

ವೇದವಿಭಾಗ ವಿಚಾರದಲ್ಲಿ ಗೊಂದಲ ಪಡಬಾರದು - ಹಿಂದೆ ತ್ರೇತಾಯುಗದಲ್ಲಿ ಹಯಗ್ರೀವದೇವರು ಮೂಲವೇದದಿಂದ ನಾಲ್ಕು ಉಪವೇದಗಳನ್ನು ಸಂಗ್ರಹಿಸಿದ್ದರು. ಪ್ರಕೃತ ವೇದವ್ಯಾಸದೇವರು ಆ ಉಪವೇದಗಳಿಂದ ಅವಾಂತರವೇದಗಳ ವಿಭಾಗ ಮಾಡಿ, ನಾನಾಶಾಖೆಗಳನ್ನಾಗಿ ವಿಭಾಗ ಮಾಡಿದರು. ಆ ವೇದಗಳ ಅರ್ಥನಿರ್ಣಯ ಮಾಡುವುದಕ್ಕಾಗಿ ಬ್ರಹ್ಮಸೂತ್ರಗಳನ್ನೂ ಕೂಡ ರಚನೆ ಮಾಡಿದರು.

## ಬರಗಾಲದಿಂದ ಪೀಡಿತರಾದ ಬ್ರಾಹ್ಮಣರು ಗೌತಮರ ಆಶ್ರಮ ಸೇರಿದರು

**ಭಾವದೀಪಃ – दुर्भिक्षयोपप्लुता ऋषयो गौतमतपःप्रभावसमृद्धं तदाश्रममाप्य चिरकालं तेन सम्मानितास्तत्र सुखमुषित्वा, कालेन सुभिक्षं स्वदेशं यियासवः, तदनुज्ञां याचमाना अपि गौतमेनालब्धानुज्ञाः शिवशिरस्थां सुरसरितं सपत्नीं निष्कासयन्त्या भवान्या चोदितेन विघ्नेश्वरेणोपदिष्टोपायाः ज्ञानादितपोबलेन काञ्चन गां तदाश्रमस्थसस्यग्रासिनीं विदधुः ।**

ದ್ವಾಪರಯುಗದ ಕೊನೆಯಲ್ಲಿ ಎಲ್ಲೆಡೆಯೂ ಬರಗಾಲ ಹಬ್ಬಿತು. ಋಷಿಗಳೆಲ್ಲರೂ ಗೌತಮರ ತಪೋಭೂಮಿಯನ್ನು ಆಶ್ರಯಸಿದ್ದರು. ಗೌತಮರ ತಪಃ ಪ್ರಭಾವದಿಂದ ಅವರ ಆಶ್ರಮವು ಸುಭಿಕ್ಷೆಯಿಂದ ಕಂಗೊಳಿಸುತ್ತಿತ್ತು. ಬಹುಕಾಲ ಗೌತಮರಿಂದ ಸನ್ಮಾನಿತರಾಗಿ ಅವರ ಆಶ್ರಮದಲ್ಲಿಯೇ ಸುಖವಾಗಿ ವಾಸಿಸಿದರು. ಕಾಲಕ್ರಮದಲ್ಲಿ ಲೋಕದಲ್ಲಿರುವ ದುರ್ಭಿಕ್ಷೆಯು ಪರಿಹಾರವಾಗಿ ಸುಭಿಕ್ಷೆಯು ಪ್ರಾಪ್ತವಾಯಿತು. ಆ ಸಂದರ್ಭದಲ್ಲಿ ತಮ್ಮ ಸ್ಥಳಕ್ಕೆ ಮರಳಿ ಬರಲು ಎಲ್ಲ ಋಷಿಗಳು ಇಚ್ಛಿಸಿದರು. ಗೌತಮರ ಅನುಜ್ಞೆಯನ್ನು ಅದಕ್ಕಾಗಿ ಪ್ರಾರ್ಥಿಸಿದರು. ಆದರೆ ತೆರಳಲು ಗೌತಮರ ಅನುಮತಿ ಸಿಗಲಿಲ್ಲ.

ಇದೇ ಸಂದರ್ಭದಲ್ಲಿ ಶಿವನ ತಲೆಯಲ್ಲಿರುವ ಸವತಿಯಾದ ದೇವಗಂಗೆಯನ್ನು ಪಾರ್ವತಿಯು ಕಳುಹಿಸಲು ಇಚ್ಛಿಸಿದಳು. ಅದಕ್ಕಾಗಿ ವಿಘ್ನೇಶ್ವರನ ಬಳಿ ತನ್ನ ಅಭಿಪ್ರಾಯವನ್ನು ಹೇಳಿ ಗಂಗೆಯನ್ನು ಕಳುಹಿಸಲು ಪ್ರೇರಣೆ ನೀಡಿದಳು. ಪಾರ್ವತಿಯಿಂದ ಉಪದಿಷ್ಟನಾದ ವಿಘ್ನೇಶ್ವರನು ನೇರವಾಗಿ ಗೌತಮರ ಆಶ್ರಮಕ್ಕೆ ಬಂದು ಅಲ್ಲಿರುವ ಋಷಿಮುನಿಗಳಿಗೆ ಜ್ಞಾನ ಹಾಗೂ ತಪಸ್ಸುಗಳ ಬಲದಿಂದ ಒಂದು ಹಸುವನ್ನು ನಿರ್ಮಾಣ ಮಾಡಲು ಉಪಾಯ ಹೂಡಿದರು. ಗಣಪತಿಯ ಅನುಮತಿಯಂತೆ ಋಷಿಗಳಿಂದ ನಿರ್ಮಾಣವಾದ ಹಸು ಗೌತಮರ ತಪೋಭೂಮಿಯಲ್ಲಿ ಬೆಳೆದಿರುವ ಸಸ್ಯವನ್ನು ತಿನ್ನಲು ಪ್ರಾರಂಭಿಸಿತು.

### ಗೋಹತ್ಯಾ ಅಪವಾದ ಹೊರಿಸಿ ಮರಳಿ ಬಂದರು

**ಭಾವದೀಪಃ** – गौतमस्तामपक्रामयितुं स्वप्रयत्नमात्रेण सहसा निपतितां गामवलोक्य परितप्तमना बभूव । तदैव लब्धान्तरा विप्रा नायं गौतमो भोज्यान्न इत्युक्त्वा प्रतस्थिरे ।

ಗೌತಮ ಋಷಿಗಳು ಆ ಹಸುವನ್ನು ಓಡಿಸಲು ಬಯಸಿ, ಪ್ರಯತ್ನ ಪಟ್ಟರು. ಕೂಡಲೇ ಹಸು ನೆಲಕ್ಕೆ ಬಿದ್ದು, ಅಸುನೀಗಿತು. ಇದನ್ನು ನೋಡಿದ ಗೌತಮರಿಗೆ ಎಲ್ಲಿಲ್ಲದ ದುಃಖ ಆವರಿಸಿತು. ಇದೇ ಸಂದರ್ಭವೆಂದು ಅರಿತು ಅವರ ಆಶ್ರಮದಲ್ಲಿರುವ ಬ್ರಾಹ್ಮಣರೆಲ್ಲರೂ ಗೋ-ಹತ್ಯಾ ಪಾಪವು ಬಂದಿದೆಯೆಂದು ಗೌತಮರ ಮೇಲೆ ಅಪವಾದ ಹಾಕಿ, ಆಶ್ರಮವನ್ನು ಬಿಟ್ಟು ತೆರಳಿದರು.

### ಗಂಗೆ ಗೋ-ದ-ವಾರಿ ಆಗಿ ಗೋದಾವರಿ ಆದಳು

**ಭಾವದೀಪಃ** – ततो गौतमश्चिरकालचीर्णतपःप्रभावेन परितोषित-हरशिरसोऽवतारितया सुरसरिता गां परिषिच्योज्जीवयामास ।

ಹಸುವನ್ನು ಬದುಕಿಸಲು ಗೌತಮರು ಬಹುಕಾಲ ತಪಸ್ಸನ್ನು ಮಾಡಿ, ಹರನ ತಲೆಯಲ್ಲಿರುವ ಗಂಗೆಯನ್ನು ಧರೆಗಿಳಿಸಿದರು. ಆ ಗಂಗೆಯಿಂದ ತರ್ಪಣವನ್ನು ನೀಡಿ, ಹಸುವನ್ನು ಬದುಕಿಸಿದರು.

## 'ಜ್ಞಾನವು ನಾಶವಾಗಲಿ' ಎಂದು ಗೌತಮರು ಶಪಿಸಿದರು

**ಭಾವದೀಪಃ – ತತಃ ಕಿಮೇತತ್? ಇತಿ ವಿಚಿನ್ತ್ಯ ವಿಪ್ರಕೃತಮಕ್ರಮಾದಿಸರ್ವಂ ನಿಶ್ಚಿತ್ಯ ತಾನ್ 'ಜ್ಞಾನಹೀನಾ ಭವೇಯುರೇತೇ' ಇತಿ ಶಶಾಪ – ಇತಿ ತತ್ವಪ್ರದೀಪೇ ಉಕ್ತತ್ವಾನ್ನಾತ್ರ ತದುಕ್ತಿಃ ।**

ಈ ಎಲ್ಲಾ ಘಟನೆಗಳು ಏಕೆ ನಡೆದವು ? ಎಂದು ಗೌತಮರು ಆಲೋಚನೆ ಮಾಡಿದಾಗ ಬ್ರಾಹ್ಮಣರು ಮಾಡಿರುವ ಅಪರಾಧವನ್ನು ಮನಗಂಡರು. ಕ್ಷಣ ಮಾತ್ರದಲ್ಲಿ ಕುಪಿತರಾಗಿ, 'ಲೋಕದಲ್ಲಿರುವ ಎಲ್ಲಾ ಜ್ಞಾನವೆಲ್ಲವೂ ನಾಶವಾಗಲಿ' ಎಂದು ಶಪಿಸಿ ಬಿಟ್ಟರು.

ಈ ಕಥೆಯನ್ನು ತತ್ವಪ್ರದೀಪಕಾರರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಟೀಕಾಕೃತ್ಪಾದರು ಪುನಃ ಈ ಕಥೆಯನ್ನು ಉಲ್ಲೇಖ ಮಾಡಿರುವುದಿಲ್ಲ.

**ಭಾವದೀಪಃ – ಅನ್ಯತ್ರ ।। 'ಗೀತಾಭಾಷ್ಯೇ' ಇತ್ಯರ್ಥಃ । ಭಾಷ್ಯೇ 'ಮಹಾಯೋಗೀ'ತ್ಯಸ್ಯ 'ಮಹಾಶಕ್ತಿಃ' ಇತ್ಯರ್ಥಃ ।**

'ಅನ್ಯತ್ರ' ಎಂಬ ಪದಕ್ಕೆ 'ಗೀತಾಭಾಷ್ಯ'ದಲ್ಲಿ ಎಂದರ್ಥ. ಭಾಷ್ಯದಲ್ಲಿರುವ 'ಮಹಾಯೋಗಿ' ಎಂಬ ಪದಕ್ಕೆ 'ಮಹಾಶಕ್ತಿ' ಎಂದರ್ಥ.

## 'ಉತ್ಸನ್ನಾನ್' ಎಂಬ ಪದದ ಅರ್ಥ

**ಭಾವದೀಪಃ – 'ಉತ್ಸನ್ನಾನ್' ಇತ್ಯಾದಿ ತು 'ಅಪಪಾಠಾದಿನಾ ತಿರೋಹಿತಾನ್ ಪ್ರಾಗೇವ ಋಙ್ನಿಗದಾದಿರೂಪೇಣ ವಿಭಕ್ತಾನ್ ವೇದಾನ್ ಉಜ್ಜಹಾರ । ತಾಂಶ್ಚ ಮಹಾವೇದಾನ್ ತದಂಶಾನ್' ಇತ್ಯರ್ಥಃ ।**

'ಉತ್ಸನ್ನಾನ್' ಇತ್ಯಾದಿ ಭಾಷ್ಯದ ಮಾತಿಗೆ ಹೀಗರ್ಥ - ಅಪಪಾಠಾದಿಗಳಿಂದ ತಿರೋಹಿತವಾದ ಪೂರ್ವದಲ್ಲಿ ಋಗ್, ನಿಗಾದದ ಹೆಸರುಗಳನ್ನು ಪಡೆದು ವಿಭಕ್ತವಾಗಿರುವ ವೇದವನ್ನು ಉದ್ಧಾರ ಮಾಡಿದರು. ಅಂತಹ ಮಹಾವೇದವನ್ನು ಎಂದರ್ಥ.

## ವೇದವಿಭಾಗ ಕಥನ

**ಭಾವದೀಪಃ – तेभ्य उद्धृत्य ऋगादिरूपेण चतुर्धा व्यभजत् । एकैकं चावान्तरभेदं चतुर्विंशत्यादिभेदेन व्यभजदिति पूर्वोक्तदिशा व्याख्येयमिति भावः ।**

ಮಹಾವೇದದಿಂದ ಋಗ್ವೇದ ಮೊದಲಾದ ನಾಲ್ಕು ಉಪವೇದಗಳನ್ನಾಗಿ ವಿಭಾಗ ಮಾಡಲಾಯಿತು. ಆ ಉಪವೇದಗಳಿಂದ ಪುನಃ ಅವಾಂತರವೇದವನ್ನು ಅವುಗಳ ೨೪ ಮೊದಲಾದ ಶಾಖೆಗಳನ್ನು ವಿಭಾಗ ಮಾಡಲಾಯಿತು. ಹೀಗೆ ಹಿಂದೆ ಹೇಳಿದಂತೆ ತಿಳಿದುಕೊಳ್ಳಬೇಕು.

## 'तस्य' ಎಂಬ ಭಾಷ್ಯದ ಏಕವಚನ ಪ್ರಯೋಗದ ಸ್ವಾರಸ್ಯ

**ಭಾವದೀಪಃ – बहुवचनेति ।। 'पूर्वश्लोके' इति योज्यम् । किमेभिः? इत्यत आहेति ।। 'सूत्रेषु येषु इत्यनेन परिहारं वक्तुमुपोद्घातमाह' इत्यर्थः ।**

ಟೀಕೆಯಲ್ಲಿ 'ಬಹುವಚನ ಪ್ರಯೋಗೇತಿ' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ - ಹಿಂದಿನ ಶ್ಲೋಕದಲ್ಲಿ 'ವೇದಾಂ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಲಾಗಿದೆ. ಆದರೆ ಇಲ್ಲಿ 'ತಸ್ಯ' ಎಂಬುದಾಗಿ ಏಕವಚನವನ್ನು ಪ್ರಯೋಗಿಸಿದ್ದು ಎಲ್ಲಾ ವೇದಗಳ ಅಭಿಪ್ರಾಯಗಳು ಒಂದೇ ಎಂದು ತಿಳಿಸುವುದಕ್ಕೋಸ್ಕರ ಎಂದು.

ಟೀಕೆಯಲ್ಲಿ 'ಕಿಮೇಭಿಃ ? ಇತ್ಯತ ಆಹ' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ಮುಂದೆ 'ಸೂತ್ರೇಷು ಯೇಷು' ಇತ್ಯಾದಿಯಾಗಿ ಬ್ರಹ್ಮಸೂತ್ರಗಳಿಂದ ದೊರೆಯುವ ಪ್ರಯೋಜವನ್ನು ವಿವರಿಸಿದ್ದಾರೆ. ಅದಕ್ಕೆ ಇದು ಉಪೋದ್ಘಾತ-ರೂಪವಾಗಿದೆಯೆಂದು ತಿಳಿಯಬೇಕು.

ವಿವರಣೆ - ಕೃತಯುಗದಲ್ಲಷ್ಟೇ ಜ್ಞಾನದ ಸಂಪೂರ್ಣಸ್ಥಿತಿಯನ್ನು ಭಾಷ್ಯದಲ್ಲಿ ಹೇಳಿದ್ದಾರೆ. ಆದರೆ ತ್ರೇತಾಯುಗದಲ್ಲೂ ಜ್ಞಾನದ ಸ್ಥಿತಿಯಿರುವುದರಿಂದ ಕೃತಯುಗವನ್ನಷ್ಟೇ ಏಕೆ ಗ್ರಹಣ ಮಾಡಿದರು? ಎಂಬ ಪ್ರಶ್ನೆಗೆ 'स्थितं यथोत्तन्नम्' .

ಎಂದು ಉತ್ತರಿಸಿದ್ದಾರೆ. ಜ್ಞಾನ ಹೇಗಿರಬೇಕೋ ಅದರಂತೆ ಕೃತಯುಗದಲ್ಲಿ ಸಂಪೂರ್ಣವಾಗಿ ಹಾಗೆಯೇ ಇತ್ತು. ಆದರೆ ತ್ರೇತಾಯುಗದಲ್ಲಿ ಜ್ಞಾನದ ನಾಲ್ಕು ಭಾಗದಲ್ಲಿ ಒಂದು ಭಾಗವು ನಷ್ಟವಾಗಿದೆ. ದ್ವಾಪರದಲ್ಲಿ ಎರಡು ಭಾಗ ಮಾತ್ರ ಉಳಿಯಿತು. ದ್ವಾಪರಶಬ್ದದಿಂದಲೇ ಇದು ತಿಳಿಯುತ್ತದೆ. ಧರ್ಮ ಹಾಗೂ ಜ್ಞಾನ ಎರಡು ಪಾದಗಳಷ್ಟೇ ಯಾವ ಯುಗದಲ್ಲಿ ಉಳಿದಿದೆಯೋ ಅದು ದ್ವಾಪರ. (ದ್ವೌ ಪರೌ ಯಸ್ಮಿನ್ನಿತಿ ದ್ವಾಪರಃ - ತತ್ವಪ್ರದೀಪ)

ದ್ವಾಪರದಲ್ಲಿ ಜ್ಞಾನವು ಅಜ್ಞಾನವಾಯಿತೆಂದು ಹೇಳಿದೆ. ಆದರೆ ಜ್ಞಾನವು ಅಜ್ಞಾನವಾಗುವುದು ಹೇಗೆ? ಎಂದರೆ 'ಅಯಥಾರ್ಥವಾಗಿದೆಯೆಂಬ ಜ್ಞಾನಕ್ಕೆ ವಿಷಯವಾಗಿದೆ' ಎಂದರ್ಥ ಹೇಳಬೇಕು. ಅಜ್ಞಾನವೆಂಬಲ್ಲಿನ ನಞ್ ಎಂಬುದು ವಿರುದ್ಧಾರ್ಥದಲ್ಲಿದೆ. ಜ್ಞಾನಕ್ಕೆ ವಿರುದ್ಧವಾದದ್ದು ಅಜ್ಞಾನ. ಸಂದೇಹ ಎಂದರೆ 'ಪ್ರಮಾಣವೋ? ಅಪ್ರಮಾಣವೋ?' ಎಂದರ್ಥ. ಅನುಕ್ರೋಶಃ ಶಬ್ದಕ್ಕೆ ಕರುಣೆ ಎಂದರ್ಥ. 'ನಾಜ್ಞಾನಾದಿಮಿಶ್ರತ್ವಮ್' ಎಂಬ ಶಬ್ದಕ್ಕೆ 'ವಿಪರೀತಜ್ಞಾನ ಹಾಗೂ ಸಂದೇಹಗಳಿಗೆ ವಿಷಯವಾಗದಿರುವುದು' ಎಂದರ್ಥ. 'ಸ್ವಹತಗೋನಿರ್ಮಾತೃ-ವಿಷಯತ್ವಾತ್' = ತಮ್ಮಿಂದ (ಗೌತಮರಿಂದ) ಕೊಲ್ಲಲ್ಪಟ್ಟ ಯಾವ ಗೋವಿದೆಯೋ, ಅಂತಹ ಗೋವನ್ನು ಸೃಷ್ಟಿಸಿದವರ ವಿಷಯದಲ್ಲಿ ಮಾತ್ರ. ಬ್ರಹ್ಮಾದಿದೇವತೆಗಳು ಗೋವನ್ನು ಸೃಷ್ಟಿಸಿದವರಲ್ಲ ಎಂದು.

## ಗೌತಮರ ಶಾಪದ ಕಥೆ

ಸಕಲಸಜ್ಜನರಿಗೆ ಹೀಗೆ ವಿಪರೀತಜ್ಞಾನ ಮತ್ತು ಸಂದೇಹ ಬರಲು ಕಾರಣ ಹೇಳುತ್ತಿದ್ದಾರೆ -

ಒಮ್ಮೆ ದುರ್ಭಿಕ್ಷೆಯಿಂದ ಲೋಕದಲ್ಲಿ ಬ್ರಾಹ್ಮಣರೆಲ್ಲರೂ ಸಂತ್ರಸ್ತರಾದರು. ಆವಾಗ ಗೌತಮರ ತಪಃಶಕ್ತಿಯನ್ನು ತಿಳಿದು ಅವರೆಲ್ಲರೂ ಗೌತಮರ ಆಶ್ರಮವನ್ನು ಕುರಿತು ಹೋದರು. ಗೌತಮರ ತಪಃಶಕ್ತಿಯಿಂದ ಅವರ ಆಶ್ರಮದಲ್ಲಿ ಸಸ್ಯಗಳೆಲ್ಲವೂ

ಸಮೃದ್ಧವಾಗಿ ಬೆಳೆಯುತ್ತಿದ್ದವು. ಆ ಬ್ರಾಹ್ಮಣರು ಗೌತಮರ ಆತಿಥ್ಯಸುಖದಲ್ಲಿಯೇ ಬಹಳ ಕಾಲ ಕಳೆದರು. ಕಾಲಾಂತರದಲ್ಲಿ ತಮ್ಮ ದೇಶವು ಸುಭಿಕ್ಷವಾದಾಗ ಅವರೆಲ್ಲರಿಗೂ ತಮ್ಮ ದೇಶಕ್ಕೆ ಹೋಗಲು ಬಯಕೆ ಉಂಟಾಯಿತು. ಆದರೆ ಗೌತಮರು ಅವರೆಲ್ಲರನ್ನು ಕಳುಹಿಸಲು ಇಚ್ಛಿಸದೆ ಅನುಜ್ಞೆ ಕೊಡುವುದಿಲ್ಲ. ಅವರ ಸ್ನೇಹಪಾಶದಿಂದ ವಶರಾದ ಬ್ರಾಹ್ಮಣರೆಲ್ಲರೂ ಅಲ್ಲಿಯೇ ಕಾಲ ಕಳೆಯಬೇಕಾಯಿತು. ಇದೇ ಸಂದರ್ಭದಲ್ಲಿ ರುದ್ರದೇವರ ತಲೆಯಲ್ಲಿರುವ ಭಾಗೀರಥಿಯನ್ನು ಹೊರಕಳುಹಿಸಬೇಕೆಂಬ ಅಪೇಕ್ಷೆಯಿಂದ ಪಾರ್ವತೀದೇವಿಯು ಗಣೇಶನಿಗೆ ಜವಾಬ್ದಾರಿಯನ್ನು ವಹಿಸಿದಳು. ಗಣೇಶನು ನೇರವಾಗಿ ಗೌತಮರ ಆಶ್ರಮಕ್ಕೆ ಬಂದು ಎಲ್ಲ ಬ್ರಾಹ್ಮಣರಿಗೆ ಉಪಾಯವೊಂದನ್ನು ಹೇಳಿದನು.

''ನೀವೆಲ್ಲರೂ ಸೇರಿ ಒಂದು ಮಾಯಾ ಗೋವನ್ನು ನಿರ್ಮಾಣ ಮಾಡಿರಿ. ಧಾನ್ಯದಿಂದ ಸಮೃದ್ಧವಾದ ಗದ್ದೆಗೆ ಕಳುಹಿಸಿರಿ ಪೈರನ್ನು ತಿನ್ನುತ್ತಿರುವ ಹಸುವನ್ನು ಗೌತಮರು ಓಡಿಸುವಾಗ ಸ್ಪರ್ಶ ಮಾಡಿದ ಕೂಡಲೇ ಅದು ಸತ್ತು ಹೋಗಬೇಕು. ಅನಂತರ ನೀವು ಗೌತಮರಿಗೆ ಗೋಹತ್ಯಾ ಶಾಪವು ಬಂದಿರುತ್ತದೆಂದು ಹೇಳಿರಿ. ಅದರ ಪರಿಹಾರಕ್ಕಾಗಿ ಗಂಗಾಜಲದಿಂದ ಪ್ರೋಕ್ಷಣೆ ಮಾಡಬೇಕು. ಅನಂತರ ಹಸು ಬದುಕುತ್ತದೆ. ಗೋಹತ್ಯೆ ಮಾಡಿ ಅಪವಿತ್ರರಾದ ನಿಮ್ಮ ಮನೆಯಲ್ಲಿ ನಾವು ಅನ್ನವನ್ನು ತಿನ್ನುವಂತಿಲ್ಲ. ಹೀಗೆ ಹೇಳಿ ನಿಮ್ಮ ಆಶ್ರಮಕ್ಕೆ ತೆರಳಿರಿ. ಅತ್ಯಂತ ತಪಸ್ವಿಗಳಾದ ನೀವು ಗೌತಮರ ಆಶ್ರಮದಲ್ಲಿ ನೆಲೆಸಿ ಅವರು ನೀಡಿದ ಅನ್ನವನ್ನು ಭುಂಜಿಸುತ್ತಾ ನಿಮ್ಮ ತಪಸ್ಸನ್ನು ಕ್ಷಯ ಮಾಡಿಕೊಳ್ಳುತ್ತಿರುವಿರಿ. ಹೀಗೆ ನೀವು ಮತ್ತೊಬ್ಬರ ಆಶ್ರಯದಲ್ಲಿರುವುದು ಸಮಂಜಸವಲ್ಲ'' ಹೀಗೆ ಗಣಪತಿಯು ಋಷಿಮುನಿಗಳಿಗೆ ಹೇಳಿದನು.

ಅದರಂತೆ ಸಕಲಬ್ರಾಹ್ಮಣರು ಸೇರಿ ತಮ್ಮ ತಪಃಶಕ್ತಿಯಿಂದ ಹಸುವೊಂದನ್ನು ನಿರ್ಮಾಣ ಮಾಡಿದರು. ಹಸಿವಿನಿಂದ ಕಂಗೆಟ್ಟ ಆ ಹಸುವು ಗೌತಮರ ಬೆಳೆದ ಗದ್ದೆಯಲ್ಲಿ ಭತ್ತವನ್ನೆಲ್ಲಾ ತಿನ್ನುತ್ತಿತ್ತು. ಆ ಹಸುವನ್ನು ನೋಡಿದ ಗೌತಮರು ಹುಲ್ಲುಕಡ್ಡಿಯಿಂದ ಅದನ್ನು ಮುಟ್ಟಿ ಓಡಿಸಿದರು. ಯಾವಾಗ ಹುಲ್ಲುಕಡ್ಡಿಯಿಂದ ಹಸುವನ್ನು ಗೌತಮರು ಮುಟ್ಟಿದರೋ ಆದೇ ಕ್ಷಣದಲ್ಲಿ ಹಸುವು ಸತ್ತುಹೋಯಿತು.

ಅನಂತರ ಬ್ರಾಹ್ಮಣರೆಲ್ಲರೂ ಗೌತಮರಿಗೆ ಗೋಹತ್ಯಾಪಾಪ ಬಂತೆಂದು ಅಪವಾದ ಹಾಕಿ ಹೊರಟುಬಿಟ್ಟರು. ಅನಂತರ ಗೋಹತ್ಯಾಪಾಪಪರಿಹಾರಕ್ಕಾಗಿ ಗೌತಮರು ಬಹುಕಾಲ ತಪಸ್ಸು ಮಾಡಿ ರುದ್ರದೇವರ ತಲೆಯಲ್ಲಿರುವ ಗಂಗೆಯನ್ನು ಕೆಳಗಿಳಿಸಿದರು. ಗೋವನ್ನು ಬದುಕಿಸಿದ ಗಂಗೆ ಗೋ-ದ-ವಾರಿ ಆದಳು. 'ಗೋದವಾರಿ' ಎಂಬ ಶಬ್ದವೇ ಗೋದಾವರಿ ಎಂದಾಯಿತು. ಆ ಗಂಗೆಯಿಂದ ತರ್ಪಣ ಕೊಟ್ಟು ಪುನಃ ಹಸುವನ್ನು ಬದುಕಿಸಿದರು. ಆದ್ದರಿಂದ ಗಂಗೆಗೆ 'ಗೋದಾವರಿ' ಎಂಬ ಹೆಸರು ಬಂದಿತು. ಅನಂತರ ಗೌತಮರು ಏಕೆ ಹೀಗೆಲ್ಲ ಅನರ್ಥ ನಡೆಯಿತೆಂದು ದಿವ್ಯತಪಃ ಶಕ್ತಿಯಿಂದ ಆಲೋಚನೆ ಮಾಡಿದರು. ಆವಾಗ ನಡೆದ ಎಲ್ಲ ಘಟನೆಗಳನ್ನು ಯಥಾವತ್ತಾಗಿ ತಿಳಿದು ಸಿಟ್ಟು ಬಂದು ಶಾಪಕೊಟ್ಟರು.

''ಹನ್ನೆರಡು ವರ್ಷಗಳ ಕಾಲ ನನ್ನಲ್ಲಿ ಆಶ್ರಯಪಡೆದು ಎಲ್ಲಾ ರೀತಿಯಲ್ಲಿಯೂ ಸಾಧನೆಯನ್ನು ಮಾಡಿಕೊಂಡು ಜ್ಞಾನವನ್ನೂ ಕೂಡ ಪಡೆದು ನನಗೆ ದ್ರೋಹವನ್ನು ಬ್ರಾಹ್ಮಣರು ಮಾಡಿರುವರು. ಇವರೆಲ್ಲರೂ ಬಹಳ ಕೃತಘ್ನರು. ಇಷ್ಟು ವರ್ಷಗಳ ಕಾಲ ನನ್ನ ಆಶ್ರಮದಲ್ಲಿ ನೆಮ್ಮದಿಯಿಂದ ಇದ್ದು ಪಡೆದಿರುವ ಈ ಎಲ್ಲಾ ಬ್ರಾಹ್ಮಣರ ಜ್ಞಾನವು ನಾಶವಾಗಲಿ'' - ಹೀಗೆ ಶಪಿಸಿದರು.

ಅನಂತರ ಲೋಕದಲ್ಲೆಲ್ಲೆಡೆ ಅಜ್ಞಾನ ತುಂಬಿತು. ಅಜ್ಞಾನ ತುಂಬಲು ಮತ್ತೊಂದು ಕಾರಣ ಕಾಲದ ಪ್ರಭಾವ. ದ್ವಾಪರಯುಗದ ಪ್ರಭಾವದಿಂದ ಜ್ಞಾನವು ತಿರೋಹಿತವಾಗಿದೆ. ಏಕೆಂದರೆ ಲೋಕದಲ್ಲಿರುವವರೆಲ್ಲರೂ ಗೌತಮಹತಗೋವಿನ ನಿರ್ಮಾತೃಗಳಾಗಿಲ್ಲ. ಆದರೂ ಅವರ ಜ್ಞಾನವು ಕಾಲಪ್ರಭಾವದಿಂದ ವಿಪರೀತವಾಗಿದೆ.

ಹಾಗಾದರೆ ಬ್ರಹ್ಮಾದಿಗಳ ಜ್ಞಾನ ಏಕೆ ಆಯಥಾರ್ಥವಾಗಲಿಲ್ಲ? ಎಂದರೆ ಲೋಕದಲ್ಲಿ ಸಂಪ್ರದಾಯಪ್ರವರ್ತಕರಿಲ್ಲದೆ ಜ್ಞಾನವು ಅಜ್ಞಾನಮಿಶ್ರವಾಯಿತು. ಆದರೆ ಬ್ರಹ್ಮಾದಿಲೋಕದಲ್ಲಿ ಈ ಸಮಸ್ಯೆ ಇಲ್ಲ. ಮತ್ತು ಕಾಲಪ್ರಭಾವವೂ ಅಲ್ಲಿ ಇಲ್ಲ. ಆದ್ದರಿಂದ ಬ್ರಹ್ಮಾದಿಗಳು ಲೋಕದಲ್ಲಿರುವ ಸಜ್ಜನರ ವಿಷಯದಲ್ಲಿ ಕರುಣೆಯುಳ್ಳವರಾದರು ಎಂದಷ್ಟೇ ಹೇಳಬೇಕು.

# 'ಸೂತ್ರ' ಎಂದರೆ ಬ್ರಹ್ಮಸೂತ್ರವೇ

**ಬ್ರಹ್ಮಸೂತ್ರಭಾಷ್ಯಮ್ –**
**ಅಲ್ಪಾಕ್ಷರಮಸನ್ದಿಗ್ಧಂ ಸಾರವದ್ ವಿಶ್ವತೋಮುಖಮ್ ।**
**ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ।।**

ಅನುವಾದ - ಅನಿವಾರ್ಯಶಬ್ದಗಳಿಂದ ಸಂದೇಹವಿಲ್ಲದಂತೆ ವಿಶಿಷ್ಟವಾದ ಅರ್ಥವನ್ನು ಪ್ರತಿಪಾದಿಸುವ ವೇದದ ಎಲ್ಲಾ ಶಾಖೆಗಳ ಅರ್ಥವನ್ನು ನಿರ್ಣಯಿಸುವ ವ್ಯರ್ಥಾಕ್ಷರಗಳಿಲ್ಲದ, ಶಬ್ದ ಹಾಗೂ ಅರ್ಥಗಳಲ್ಲಿ ದೋಷವಿಲ್ಲದ್ದನ್ನೇ ಸೂತ್ರವೆಂದು ಸೂತ್ರಸ್ವರೂಪವನ್ನು ತಿಳಿದ ಪಂಡಿತರು ಹೇಳುತ್ತಾರೆ.

**ಭಾಷ್ಯಮ್ – ನಿರ್ವಿಶೇಷಿತಸೂತ್ರತ್ವಂ ಬ್ರಹ್ಮಸೂತ್ರಸ್ಯ ಚಾಪ್ಯತಃ ।**
**ಯಥಾ ವ್ಯಾಸತ್ವಮೇಕಸ್ಯ ಕೃಷ್ಣಸ್ಯಾನ್ಯೇ ವಿಶೇಷಣಾತ್ ।।**

ಯಾವುದೇ ವಿಶೇಷಣವಿಲ್ಲದ ' ಸೂತ್ರ' ಎಂಬ ಹೆಸರು ಬ್ರಹ್ಮಸೂತ್ರಗಳಿಗಷ್ಟೇ ಸಮ್ಮತಪಡುತ್ತದೆ. ಏಕೆಂದರೆ ಉಪಪದವಿಲ್ಲದ ವ್ಯಾಸ ಎಂಬ ಹೆಸರು ಹೇಗೆ ಕೃಷ್ಣದ್ವೈಪಾಯನರನ್ನೇ ಹೇಳುತ್ತದೆ. ಅಶ್ವತ್ಥಾಮ ಮೊದಲಾದವರು ವೇದವಿಭಾಗವನ್ನು ಮಾಡುವವರಾದ್ದರಿಂದ ವ್ಯಾಸರೆಂದು ಕರೆಸಿಕೊಳ್ಳುವವರಾದರೂ ಅವರನ್ನು 'ದ್ರೌಣಿವ್ಯಾಸ' ಎಂದೇ ಕರೆಯುತ್ತಾರೆ.

**ಭಾಷ್ಯಮ್ – ಸವಿಶೇಷಣಸೂತ್ರಾಣಿ ಹ್ಯಪರಾಣಿ ವಿದೋ ವಿದುಃ ।**
**ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋऽನ್ಯೇಷಾಂ ವಿಶೇಷತಃ ।।**

ಇದರಂತೆ ಬ್ರಹ್ಮಸೂತ್ರಗಳಿಂದ ಭಿನ್ನವಾದ ಸೂತ್ರಗಳಿಗೆ ಧರ್ಮಸೂತ್ರ, ಗೌತಮಸೂತ್ರ, ಜೈಮಿನಿಸೂತ್ರ ಇತ್ಯಾದಿಯಾಗಿ ವಿಶೇಷಣಸಹಿತವಾಗಿ ಸೂತ್ರಪದವನ್ನು ಪ್ರಯೋಗಿಸಬೇಕು. ಆದ್ದರಿಂದ ಮುಖ್ಯವಾದದ್ದುನಿರುಪಪದನಾಮದಿಂದ ಪ್ರತಿಪಾದಿತವಾಗುತ್ತದೆ. ಅಮುಖ್ಯವಾದದ್ದು ವಿಶೇಷಣಸಹಿತವಾದ ನಾಮದಿಂದ ಪ್ರತಿಪಾದ್ಯವಾಗುತ್ತದೆ.

**ಭಾಷ್ಯಮ್ – ಇತಿ ವೇದವಿದಃ ಪ್ರಾಹುಃ ಶಬ್ದತತ್ವಾರ್ಥವೇದಿನಃ ।**
**ಸೂತ್ರೇಷು ಯೇಷು ಸರ್ವೇऽಪಿ ನಿರ್ಣಯಾಸ್ಸಮುದೀರಿತಾಃ ।।**

ಹೀಗೆ ಶಬ್ದತತ್ವವನ್ನು ತಿಳಿದ ವೇದಜ್ಞಾನಿಗಳು ಹೇಳುತ್ತಾರೆ. ಆದ್ದರಿಂದ ಉಪಪದವಿಲ್ಲದ ಸೂತ್ರಪದದಿಂದ ಬ್ರಹ್ಮಸೂತ್ರಗಳು ಪ್ರತಿಪಾದ್ಯವಾಗಿ ಪ್ರಧಾನ ಎನ್ನಿಸಿವೆ.

**ಭಾಷ್ಯಮ್ – ಶಬ್ದಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ ।**

ಇಂತಹ ಬ್ರಹ್ಮಸೂತ್ರಗಳು ಸಕಲಶಬ್ದಗಳ ಅರ್ಥವನ್ನು ನಿರ್ಣಯ ಮಾಡುತ್ತವೆ.

**ಭಾಷ್ಯಮ್ – ಏವಂ ವಿಧಾನಿ ಸೂತ್ರಾಣಿ ಕೃತ್ವಾ ವ್ಯಾಸೋ ಮಹಾಯಶಾಃ ।**
**ಬ್ರಹ್ಮರುದ್ರಾದಿದೇವೇಷು ಮನುಷ್ಯಪಿತೃಪಕ್ಷಿಷು ।**
**ಜ್ಞಾನಂ ಸಂಸ್ಥಾಪ್ಯ ಭಗವಾನ್ ಕ್ರೀಡತೇ ಪುರುಷೋತ್ತಮಃ ।' ಇತ್ಯಾದಿ ।।**

ಈ ಸೂತ್ರಗಳನ್ನು ಅಗಾಧಕೀರ್ತಿಪೂರ್ಣರಾದ ಬಾದರಾಯಣರು ರಚಿಸಿ ಬ್ರಹ್ಮರುದ್ರಾದಿ-ದೇವತೆಗಳಿಗೆ ತತ್ವನಿಶ್ಚಯವನ್ನು ಸ್ಥಿರಪಡಿಸಿದರು. ಮನುಷ್ಯೋತ್ತಮರು ಪಿತೃಗಂಧರ್ವರು ಜರಿತಾರ್ಯಾದಿಗಳಲ್ಲಿ ನಷ್ಟವಾದ ಜ್ಞಾನವನ್ನು ತಂದುಕೊಟ್ಟರು. ಹೀಗೆ ಜಗತ್ಪ್ರಭುವಾದ ನಾರಾಯಣನು ಅನೇಕ ಅವತಾರಲೀಲೆಗಳನ್ನು ತೋರಿಸುತ್ತಾ ವಿಹರಿಸುತ್ತಾನೆ. ಹೀಗೆ ಸ್ಕಾಂದಪುರಾಣದಲ್ಲಿ ಹೇಳಿದೆ.

ಪ್ರತಿಪದಾರ್ಥ - ಅಲ್ಪಾಕ್ಷರಂ = ಎಷ್ಟು ಅಕ್ಷರಗಳಿಲ್ಲದೆ ವಿವಕ್ಷಿತವಾದ ಅರ್ಥವು ಸಿಕ್ಕುವುದಿಲ್ಲವೋ ಕೇವಲ ಅಷ್ಟೇ ಅಕ್ಷರಗಳು ಇರುವಿಕೆ, ಅಸಂದಿಗ್ಧಂ = ಸಂಶಯವಿಲ್ಲದಂತೆ ಹೇಳುವಿಕೆ, ಸಾರವತ್ = ಇತರಪ್ರಮಾಣಗಳಿಂದ ಅಲಬ್ಧವಾದ ಅರ್ಥವನ್ನು ಹೇಳುವಿಕೆ, ವಿಶ್ವತೋಮುಖಮ್ = ಎಲ್ಲಾ ಶಾಖೆಗಳಲ್ಲಿರುವ ಪದಹಾಗೂ ವಾಕ್ಯಗಳ ಅರ್ಥವನ್ನು ನಿರ್ಣಯಿಸುವಿಕೆ (ಒಂದು ಪ್ರಯೋಜನದ ಸಿದ್ಧಿಗೋಸ್ಕರ ಅಪೇಕ್ಷಿತವಾದದ್ದನ್ನೆಲ್ಲ ಪ್ರತಿಪಾದಿಸುವಿಕೆ - ತತ್ವಪ್ರದೀಪ), ಅಸ್ತೋಭಂ = ವ್ಯರ್ಥಾಕ್ಷರಗಳಿಲ್ಲದಿರುವಿಕೆ (ಅರ್ಥಜ್ಞಾನವಿಲ್ಲದೆ ಗಾನವನ್ನು ಪೂರ್ತಿಮಾಡುವುದಕ್ಕಾಗಿ ಬಳಸುವ ಅಕ್ಷರಗಳಿಲ್ಲದಿರುವಿಕೆ), ಅನವದ್ಯಂ = ಶಬ್ದಹಾಗೂ ಅರ್ಥದೋಷಗಳಿಲ್ಲದಿರುವಿಕೆ, ಈ ಆರು ಲಕ್ಷಣಗಳುಳ್ಳದ್ದನ್ನು, ಸೂತ್ರವಿದಃ = ಸೂತ್ರಜ್ಞರಾದ ಪಂಡಿತರು, ಸೂತ್ರಂ = ಸೂತ್ರವೆಂದು, ವಿದುಃ = ತಿಳಿಯುತ್ತಾರೆ.

ನಿರ್ವಿಶೇಷಿತಸೂತ್ರತ್ವಂ = ವಿಶೇಷಣವಿಲ್ಲದ ಸೂತ್ರಪದ ಪ್ರತಿಪಾದ್ಯತ್ವವು, ಬ್ರಹ್ಮಸೂತ್ರಸ್ಯ ಚ = ಬ್ರಹ್ಮಸೂತ್ರಗಳಿಗಷ್ಟೇ, ಆಪತಃ = ಹೊಂದುತ್ತದೆ. ಯಥಾ ಹೇಗೆಂದರೆ, ವ್ಯಾಸತ್ವಂ = ವ್ಯಾಸ (ವೇದವಿಭಾಗಕರ್ತಾ) ಎಂಬ ಹೆಸರು, ಕೃಷ್ಣಸ್ಯ ವಿಕಸ್ಯ = ಒಬ್ಬನೇ ಪರಮಾತ್ಮನಿಗೆ ಮುಖ್ಯವಾಗಿ ಬರುತ್ತದೆ. ಅನ್ಯೇ = ಉಳಿದ ಅಶ್ವತ್ಥಾಮ ಮೊದಲಾದವರಿಗೆ, ವಿಶೇಷಣಾತ್ = ದ್ರೌಣಿ ಎಂಬ ವಿಶೇಷಣವನ್ನು ಅಪೇಕ್ಷಿಸಿಯೇ ಬರುತ್ತದೆ.

ಅಪರಾಣಿ = ಬ್ರಹ್ಮಸೂತ್ರಗಳಿಗಿಂತ ಭಿನ್ನವಾದ, ಸೂತ್ರಾಣಿ = ಸೂತ್ರಗಳು, ಸವಿಶೇಷಣಸೂತ್ರಾಣಿ = ಗೌತಮ, ಜೈಮಿನಿ, ಮೊದಲಾದ ವಿಶೇಷಣಗಳಿಂದ ಕೂಡಿದ ಸೂತ್ರಗಳನ್ನಾಗಿ, ವಿದಃ = ಜ್ಞಾನಿಗಳು, ವಿದುಃ = ತಿಳಿಯುತ್ತಾರೆ.

ಮುಖ್ಯಸ್ಯ = ಮುಖ್ಯವಾದದ್ದನ್ನು, ನಿರ್ವಿಶೇಷೇಣ = ವಿಶೇಷಣವಿಲ್ಲದ, ಶಬ್ದಃ = ಶಬ್ದವು ಪ್ರತಿಪಾದಿಸುತ್ತದೆ. ಅನ್ಯೇಷಾಂ = ಅಮುಖ್ಯವಾದದ್ದನ್ನು, ವಿಶೇಷತಃ = ಉಪಪದಸಹಿತವಾದ, ಶಬ್ದಃ = ಶಬ್ದವು ಪ್ರತಿಪಾದಿಸುತ್ತದೆ. ಇತಿ = ಹೀಗೆ, ವೇದವಿದಃ = ವೇದರಹಸ್ಯವನ್ನು ತಿಳಿದ, ಶಬ್ದತತ್ವಾರ್ಥವೇದಿನಃ = ಸಕಲಶಬ್ದಾರ್ಥಗಳ ತಿರುಳನ್ನು ಬಲ್ಲ ಜ್ಞಾನಿಗಳು, ಪ್ರಾಹುಃ = ಹೇಳುತ್ತಾರೆ.

ಯೇಷು ಸೂತ್ರೇಷು = ಯಾವ ಬ್ರಹ್ಮಸೂತ್ರಗಳಲ್ಲೇ, ಸರ್ವೇಽಪಿ ನಿರ್ಣಯಾಃ = ಎಲ್ಲದರ ದೃಢೀಕರಣವು, ಸಮುದೀರಿತಾಃ = ಚೆನ್ನಾಗಿ ಹೇಳಲ್ಪಟ್ಟಿದೆ. ಏಕೆಂದರೆ, ಸರ್ವಸ್ಯ = ಎಲ್ಲಾ, ಶಬ್ದಜಾತಸ್ಯ[೧] = ಪೂರ್ವಮೀಮಾಂಸಾ ಮೊದಲಾದ ಶಬ್ದಪ್ರಪಂಚದ, ನಿರ್ಣಯಃ = ಅರ್ಥನಿರ್ಣಯವು, ಯತ್‌ಪ್ರಮಾಣಃ = ಯಾವ ಬ್ರಹ್ಮಸೂತ್ರಗಳೆಂಬ ಪ್ರಮಾಣವನ್ನೇ ಆಶ್ರಯಿಸಿವೆ, ಇತಿ = ಹೀಗೆ, ಸಮುದೀರಿತಃ = ಹೇಳಲ್ಪಟ್ಟಿದೆ.

ಏವಂವಿಧಾನಿ = ಇಂತಹ, ಸೂತ್ರಾಣಿ = ಬ್ರಹ್ಮಸೂತ್ರಗಳನ್ನು, ಮಹಾಯಶಾಃ = ಅಗಾಧಕೀರ್ತಿ- ಶಾಲಿಗಳಾದ, ವ್ಯಾಸಃ = ಬಾದರಾಯಣರು, ಕೃತ್ವಾ = ರಚಿಸಿ,

ಬ್ರಹ್ಮರುದ್ರಾದಿದೇವೇಷು = ಚತುರ್ಮುಖಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳಲ್ಲಿ, ಮತ್ತು ಮನುಷ್ಯಪಿತೃಪಕ್ಷೇಷು = ಮನುಷ್ಯೋತ್ತಮರು ಪಿತೃಗಂಧರ್ವರು ಜರಿತಾರ್ಯಾದಿ ಪಕ್ಷಿಗಳಲ್ಲಿ, ಜ್ಞಾನಂ = ಭಗವದ್ವಿಷಯಕವಾದ ತತ್ವಜ್ಞಾನವನ್ನು, ಸಂಸ್ಥಾಪ್ಯ = ಸ್ಥಿರವಾಗಿ ಇಟ್ಟು, ಬ್ರಹ್ಮಾದಿದೇವತೆಗಳಲ್ಲಿ ಹೆಚ್ಚಿನ ಜ್ಞಾನವನ್ನು ತಂದುಕೊಟ್ಟು, ಭಗವಾನ್ = ಷಡ್ಗುಣೈಶ್ವರ್ಯಸಂಪನ್ನನಾದ, ಪುರುಷೋತ್ತಮಃ = ಜಗತ್ಪ್ರಭುವಾದ ನಾರಾಯಣನು, ಕ್ರೀಡತೇ = ಅವತಾರಲೀಲೆಗಳಿಂದ ವಿಹರಿಸುತ್ತಾನೆ. ಇತ್ಯಾದಿ = ಇವೇ ಮೊದಲಾದ ಸ್ಕಾಂದಪುರಾಣದ ಮಾತುಗಳಲ್ಲಿ ಹೇಳಲ್ಪಟ್ಟಿದೆ.

---

(೧) ಅತ ಏವೋಕ್ತಂ ಸುಧಾಯಾಮ್ - ಏತನ್ಮೀಮಾಂಸೋಪಜೀವಿನೀ ಖಲು ಸೇತಿ ಪುರಾಣೇ ಪಠ್ಯತೇ ಶಬ್ದಜಾತಸ್ಯ' ಇತಿ.

## ಸೂತ್ರಲಕ್ಷಣ

**तत्वप्रकाशिका – किन्तत् सूत्रत्वं, यदाज्ञस्यं ब्रह्मसूत्राणाम् ? इत्यत आह – अल्पेति ।। 'यावदक्षरतां विना विवक्षितार्थासिद्धिः' तदल्पाक्षरत्वम् । 'एवं च भवितुमर्हति' इत्यवचनमसन्दिग्धत्वम् ।**

ಹಾಗಾದರೆ ಸೂತ್ರದ ಲಕ್ಷಣವಾದರೂ ಏನು? ಅದು ಇದರಲ್ಲಿ ಹೇಗಿದೆ? ಎಂಬ ಪ್ರಶ್ನೆಗೆ 'ಅಲ್ಪಾಕ್ಷರಮ್' ಎಂಬುದರಿಂದ ಸೂತ್ರದ ಲಕ್ಷಣವನ್ನು ಹೇಳುತ್ತಿದ್ದಾರೆ. ಎಷ್ಟು ಅಕ್ಷರಗಳಿಲ್ಲದೆ ವಿವಕ್ಷಿತವಾದ ಅರ್ಥವು ಸಿದ್ಧಿಸುವುದಿಲ್ಲವೊ ಅಷ್ಟು ಅಕ್ಷರಗಳಿಂತ ಹೆಚ್ಚಿನ ಅಕ್ಷರಗಳನ್ನು ಹೇಳದಿರುವಿಕೆಯೇ 'ಅಲ್ಪಾಕ್ಷರ' ಎನಿಸುತ್ತದೆ. 'ಪ್ರಮೇಯವನ್ನು ಈ ರೀತಿಯಾಗಿಯೂ ಅರ್ಥಮಾಡಬಹುದು ಎಂಬ ಸಂದೇಹಕ್ಕೆ ಅವಕಾಶವಿಲ್ಲದಂತೆ ನಿಶ್ಚಯವಾಗಿ ಹೇಳುವಿಕೆ'ಯೇ ಅಸಂದಿಗ್ಧವೆನಿಸುತ್ತದೆ.

**तत्वप्रकाशिका – विशिष्टार्थता सारवत्त्वम् । बहुशाखानिर्णायकत्वं विश्वतोमुखत्वम् । व्यर्थाक्षरादिराहित्यम् अस्तोभत्त्वम् । अपशब्दादिवैधुर्यम् अनवद्यत्वम् ।**

ಮತ್ತೊಂದರಿಂದ ಲಭ್ಯವಾಗದ ವಿಶಿಷ್ಟವಾದ ಅರ್ಥವುಳ್ಳದ್ದನ್ನು 'ಸಾರವತ್' ಎನ್ನಲಾಗಿದೆ. ವೇದದ ಅನೇಕ ಶಾಖೆಗಳ ನಿರ್ಣಯ ಮಾಡುವಂತಹದ್ದನ್ನೇ 'ವಿಶ್ವತೋಮುಖ' ಎನ್ನುತ್ತಾರೆ. ವ್ಯರ್ಥಾಕ್ಷರ ಹಾಗೂ ಪದವಿಲ್ಲದ್ದನ್ನು 'ಅಸ್ತೋಭಂ' ಎಂದು, ಅಪಶಬ್ದಗಳಿಲ್ಲದ್ದನ್ನು 'ಅನವದ್ಯಮ್' ಎಂದು ಕರೆಯಲಾಗಿದೆ.

**तत्वप्रकाशिका – एतच्च सूत्रत्वं कुतो ब्रह्मसूत्राणामाज्ञस्येन? इत्यत आह – निर्विशेषितेति ।। यतो ब्रह्मसूत्राणां मुख्यसूत्रत्वम्, अत एव हि निर्विशेषितसूत्रत्वमप्यस्ति पुराणादौ अन्यथा तन्न स्यादित्यर्थः ।**

**यद्यत्र निर्विशेषितं तत्तत्र मुख्यं; यदमुख्यं तद्विशेषितम्; इत्येतत्कुत्र दृष्टम्? इत्यत आह – यथेति ।।**

ಇಂತಹ ಲಕ್ಷಣವು ಬ್ರಹ್ಮಸೂತ್ರಗಳಿಗೆ ಮುಖ್ಯವಾಗಿ ಬರಲು ಹೇಗೆ ಸಾಧ್ಯ? ಎಂದರೆ 'ನಿರ್ವಿಶೇಷಿತಸೂತ್ರತ್ವಂ' ಎಂಬುದಾಗಿ ಉತ್ತರಿಸುತ್ತಿದ್ದಾರೆ. ಯಾವ ಕಾರಣದಿಂದ ಬ್ರಹ್ಮಸೂತ್ರಗಳಿಗೆ ಮುಖ್ಯಸೂತ್ರತ್ವವಿದೆಯೋ ಆ ಕಾರಣದಿಂದಲೇ ಪುರಾಣಾದಿಗಳಲ್ಲಿ ಬ್ರಹ್ಮಸೂತ್ರಗಳಿಗೆ ವಿಶೇಷಣವಿಲ್ಲದೆ ಕೇವಲ 'ಸೂತ್ರ' ಎಂಬುದಾಗಿ ಉಲ್ಲೇಖಿಸಲಾಗಿದೆ. ಮುಖ್ಯಸೂತ್ರತ್ವವು ಇಲ್ಲದಿದ್ದಲ್ಲಿ ಹಾಗೆ ಉಲ್ಲೇಖಿಸುತ್ತಿರಲಿಲ್ಲ. ಏಕೆಂದರೆ ಒಂದು ನಿಯಮವಿದೆ - ಯಾವುದು ಎಲ್ಲಿ ವಿಶೇಷಣವಿಲ್ಲದೆ ಹೇಳಲ್ಪಡುತ್ತದೋ ಅದು ಅಲ್ಲಿ ಮುಖ್ಯವೆನಿಸುತ್ತದೆ. ಯಾವುದು ಅಮುಖ್ಯವೋ ಅದು ವಿಶೇಷಣಸಹಿತವಾಗಿ ಹೇಳಲ್ಪಡುತ್ತದೆ (ಯದ್ ಯತ್ರ ನಿರ್ವಿಶೇಷಿತಂ ತತ್ ತತ್ರ ಮುಖ್ಯಂ ಯದಮುಖ್ಯಂ ತದ್ ವಿಶೇಷಿತಮ್). ಇದಕ್ಕೆ 'ಯಥಾ ವ್ಯಾಸತ್ವಂ' ಎಂಬುದರಿಂದ ಉದಾಹರಣೆಯನ್ನೂ ಕೊಡುತ್ತಿದ್ದಾರೆ.

**तत्वप्रकाशिका – यथा कृष्णस्य निर्विशेषितव्यासत्वम् अत एव तन्मुख्यम् अन्ये द्वैप्यादयोऽमुख्याः, ततश्च विशेषणाद् व्यासाः तथा निर्विशेषितत्वात् मुख्यसूत्रत्वं ब्रह्मसूत्राणामित्यर्थः । अन्यसूत्राणामपि मुख्यसूत्रत्वात्, किं विशिष्याभिधीयते ब्रह्मसूत्राणामेव ? इत्यत आह – सविशेषणेति ।।**

ಯಾವ ರೀತಿಯಾಗಿ 'ವ್ಯಾಸ' ಎಂಬ ವಿಶೇಷಣವಿಲ್ಲದ ಪದವು ಕೃಷ್ಣದ್ವೈಪಾಯನರನ್ನೇ ಕರೆಯುತ್ತದೆ. ಅದರಂತೆ. ವೇದವಿಭಾಗ ಮಾಡುವುದರಿಂದ ಅಶ್ವತ್ಥಾಮಾದಿಗಳು ವ್ಯಾಸರಾದರೂ ಸಹ ಅವರನ್ನು 'ದ್ರೌಣವ್ಯಾಸ' ಎಂದೇ ಕರೆಯಲಾಗಿದೆ. ಹಾಗೆಯೇ ವಿಶೇಷಣವಿಲ್ಲದ ಸೂತ್ರಪದವು ಬ್ರಹ್ಮ-ಸೂತ್ರಗಳನ್ನೇ ಕರೆಯುತ್ತದೆ. ಉಳಿದ ಸೂತ್ರಗಳನ್ನು 'ಜೈಮಿನಿಸೂತ್ರ' ಇತ್ಯಾದಿಯಾಗಿಯೇ ಕರೆಯಬೇಕು. ಉಳಿದ ಸೂತ್ರಗಳು ಏಕೆ ಅಮುಖ್ಯ? ಬ್ರಹ್ಮಸೂತ್ರಗಳು ಮಾತ್ರ ಏಕೆ ಮುಖ್ಯ? ಎಂಬ ಪ್ರಶ್ನೆಗೆ सविशेषणसूत्राणि ಎಂದು ಉತ್ತರಿಸುತ್ತಿದ್ದಾರೆ.

**तत्वप्रकाशिका – अन्यसूत्राणां सविशेषणत्वान्न मुख्यत्वमिति भावः । एतदुपपादनायैव 'अन्ये विशेषणात्' इति प्रागेव दृष्टान्त उक्तः । निर्विशेषणसविशेषणत्वाभ्यां कुतो मुख्यामुख्यत्वे ? दृष्टान्ते कारणान्तरसम्भवात्, इत्यत आह – मुख्यस्येति ।। मुख्यस्य मुख्यस्यैव।**

ಬೇರೆ ಸೂತ್ರಗಳು ವಿಶೇಷಣಸಹಿತವಾಗಿರುವುದರಿಂದಲೇ ಅಮುಖ್ಯವೆಂದು ಅಭಿಪ್ರಾಯ. ವಿಶೇಷಣಸಹಿತವಾದದ್ದು ಅಮುಖ್ಯವಾದದ್ದು ಎಂಬುದನ್ನು ದೃಷ್ಟಾಂತದಲ್ಲಿ ತೋರಿಸುವುದಕ್ಕಾಗಿಯೇ 'ಅನ್ಯೇ ವಿಶೇಷಣಾತ್' ಎನ್ನಲಾಗಿದೆ. ಇಲ್ಲವಾಗಿದ್ದರೆ ಮುಖ್ಯತ್ವೋಪಪಾದನೆಯೇ ಪ್ರಸಕ್ತವಾದ್ದರಿಂದ 'ಯಥಾ ವ್ಯಾಸತ್ವಮೇಕಸ್ಯ ಕೃಷ್ಣಸ್ಯ' ಎಂದಷ್ಟೇ ಹೇಳುತ್ತಿದ್ದರು. ಇನ್ನು ವಿಶೇಷಣವಿಲ್ಲದ್ದು ಮುಖ್ಯ, ವಿಶೇಷಣವಿರುವುದು ಅಮುಖ್ಯ ಎಂಬುದನ್ನು ಹೇಗೆ ತೀರ್ಮಾನಿಸುತ್ತೀರಿ? ಏಕೆಂದರೆ ವ್ಯಾಸರ ದೃಷ್ಟಾಂತಕ್ಕೆ ಇದೇ ಕಾರಣವಿರಬೇಕಿಲ್ಲ ಬೇರೆ ಕಾರಣಗಳೂ ಇರಬಹುದು ? ಎಂಬ ಪ್ರಶ್ನೆಗೆ 'ಮುಖ್ಯಸ್ಯ' ಎಂದು ಉತ್ತರಿಸುತ್ತಿದ್ದಾರೆ. ಇಲ್ಲಿ 'ಮುಖ್ಯ' ಶಬ್ದಕ್ಕೆ ಮಾತ್ರ ಎಂದು ಅರ್ಥ.

**तत्वप्रकाशिका – अस्त्वेतत्सूत्रत्वमञ्जसा ब्रह्मसूत्राणां । तथापि 'वेदार्थनिर्णयाय सूत्रान्तरैरलं, किमेभिः' इत्यस्य कथमनेन परिहारः? इत्यत आह – सूत्रेष्विति ।। यत् सूत्रधर्मतयोक्तं विश्वतोमुखत्वं तद् यदा ब्रह्मसूत्राणामेवाञ्जसा भवति, तदा तेषामेव सर्वशाखानिर्णायकत्वं भवेत् अतोऽन्यसूत्रेभ्योऽतिशयेन निर्णायकत्वात् तद्वचनं युक्तमिति भावः। अन्येषामपि द्वित्रशाखानिर्णायकत्वात् कथमेषां सर्वनिर्णायकत्वम् अन्यथा तद्वैयर्थ्यम्? इत्यत आह – शब्देति ।। सर्वस्य शब्दजातस्य = निर्णय इति।। सर्वैः शब्दसमूहैः क्रियमाणो निर्णयो यत्प्रमाणो = यन्मूलकः ।**

ಸೂತ್ರ ಎಂದರೆ ಮುಖ್ಯವಾಗಿ ಬ್ರಹ್ಮಸೂತ್ರ ಎಂದೇ ಇಟ್ಟುಕೊಳ್ಳೋಣ. ಆದರೂ ಸಹ ವೇದಾರ್ಥನಿರ್ಣಯಕ್ಕೆ ಬೇರೆ ಸೂತ್ರಗಳಿರಬೇಕಾದರೆ ಬ್ರಹ್ಮಸೂತ್ರಗಳೇ ಏಕೆ ಬೇಕು? ಎಂಬ ಹಿಂದಿನ ಪ್ರಶ್ನೆಗೆ ಏನು ಉತ್ತರಿಸಿದಂತಾಯಿತು? ಎಂಬ ಪ್ರಶ್ನೆಗೆ 'ಸೂತ್ರೇಷು ಯೇಷು' ಎಂದು ಉತ್ತರಿಸುತ್ತಿದ್ದಾರೆ. ಸೂತ್ರದ ಲಕ್ಷಣವೆಂದು ಹೇಳಲಾದ ಯಾವ 'ವಿಶ್ವತೋಮುಖತ್ವ' ಇದೆಯೋ ಅದು ಒಂದು ವೇಳೆ ಬ್ರಹ್ಮಸೂತ್ರಗಳಿಗೆ ಮುಖ್ಯವಾಗಿ ಬರುವುದಾದರೆ ಆವಾಗ ಆ ಬ್ರಹ್ಮಸೂತ್ರಗಳಿಗೇ ಸರ್ವಶಾಖಾನಿರ್ಣಾಯಕತ್ವವು ಬರುತ್ತದೆ. ಆದ್ದರಿಂದ ಉಳಿದ ಇತರ ಸೂತ್ರಗಳಿಗಿಂತ ಅತಿಶಯವಾದ ನಿರ್ಣಾಯಕತ್ವವು ಬ್ರಹ್ಮಸೂತ್ರಗಳಿಗೆ ಇದೆ ಎಂದು ಅಭಿಪ್ರಾಯ.

**तत्वप्रकाशिका – अन्येषां निर्णायकत्वेऽपि ब्रह्मसूत्राणामस्त्येव सर्वशाखानिर्णायकत्वम् । तन्निर्णयस्य ब्रह्मसूत्रमूलत्वेन व्याख्यानरूपत्वात् । श्रुति मूलकस्मृतिवदवैयर्थ्योपपत्तेरितिभावः।**

ಬೇರೆ ಸೂತ್ರಗಳೂ ಸಹ ಎರಡು, ಮೂರು, ಶಾಖೆಗಳ ಅರ್ಥಗಳನ್ನು ನಿರ್ಣಯಿಸುತ್ತಿವೆ. ಹಾಗಿರಬೇಕಾದರೆ ಈ ಬ್ರಹ್ಮಸೂತ್ರಗಳಿಗಷ್ಟೇ ಸರ್ವಶಾಖಾನಿರ್ಣಾಯಕತ್ವ ಹೇಗೆ ತಾನೆ ಸಾಧ್ಯ; ಇಲ್ಲವಾದಲ್ಲಿ ಉಳಿದ ಸೂತ್ರಗಳೆಲ್ಲಾ ವ್ಯರ್ಥವಾಗಲಿ ? ಎಂಬ ಪ್ರಶ್ನೆಗೆ 'ಶಬ್ದಜಾತಸ್ಯ' ಎಂದು ಉತ್ತರಿಸುತ್ತಿದ್ದಾರೆ. 'ಸರ್ವಸ್ಯ ಶಬ್ದಜಾತಸ್ಯ ನಿರ್ಣಯಃ' ಎಂದರೆ ಎಲ್ಲಾ ಶಬ್ದರಾಶಿಗಳಿಂದ ಮಾಡಲ್ಪಟ್ಟ ನಿರ್ಣಯ ಎಂದರ್ಥ. 'ಯತ್ರಮಾಣಃ' ಎಂದರೆ ಬ್ರಹ್ಮಸೂತ್ರವೇ ಮೂಲವಾಗಿ ಉಳ್ಳವುಗಳು. ಜೈಮಿನ್ಯಾದಿಸೂತ್ರಗಳು ಕೆಲವು ಶಾಖಾನಿರ್ಣಾಯಕಗಳಾಗಿದ್ದರೂ ಸಹ ಬ್ರಹ್ಮಸೂತ್ರಗಳಿಗೆ ಸರ್ವಶಾಖಾನಿರ್ಣಾಯಕತ್ವವು ಬಂದೇ ಬರುತ್ತದೆ. ಏಕೆಂದರೆ ಉಳಿದ ಸೂತ್ರಗಳು ಮಾಡುವ ನಿರ್ಣಯಕ್ಕೆ ಬ್ರಹ್ಮಸೂತ್ರವೇ ಮೂಲವಾದ್ದರಿಂದ ಉಳಿದ ಸೂತ್ರಗಳು ವ್ಯಾಖ್ಯಾನರೂಪವಾಗಿದೆ. ಆದ್ದರಿಂದ ಶ್ರುತಿಮೂಲವಾದ ಸ್ಮೃತಿಗಳು ಯಾವ ರೀತಿಯಾಗಿ ವ್ಯರ್ಥವಲ್ಲವೋ ಹಾಗೆಯೇ ಉಳಿದ ಸೂತ್ರಗಳು ವ್ಯರ್ಥವಾಗುವುದಿಲ್ಲ.

**तत्वप्रकाशिका – एवंविधानि इत्युपसंहारः । सूत्रेषु इत्यादेः 'एवंविधानि' इत्यनेनान्वयः । 'ब्रह्मरुद्रादिदेवेषु ज्ञानं संस्थाप्य' इत्यनेन पूर्वस्थितस्यैव विशेषयु क्त्यादिभिर्दृढीकरणं किञ्चिदप्राप्तलाभश्चोच्यते ।**

**'जानन्तोऽपि विशेषार्थज्ञानाय स्थापनाय वा ।**
**पृच्छन्ति साधवः'**

**इत्यादेः । 'एवं ज्ञानं पुनः प्रापुः' इत्यादेश्चायमेवार्थः। विरिञ्चेतरेषां तिरोहितलाभो वा । यत आहुः – 'ब्रह्मणस्तु प्रायो नाऽप्रतिभासितम्' इत्यादि । तदेवमत्युपादेयत्वाद् व्याख्येयानि ब्रह्मसूत्राणीति स्थितम् ।**

''ಏವಂವಿಧಾನಿ'' ಎಂಬುದರಿಂದ ಉಪಸಂಹಾರ ಮಾಡುತ್ತಿದ್ದಾರೆ. 'ಸೂತ್ರೇಷು' ಎಂಬುದನ್ನು 'ಏವಂವಿಧಾನಿ' ಎಂಬಲ್ಲಿ ಅನ್ವಯಮಾಡಬೇಕು.

'ಬ್ರಹ್ಮರುದ್ರಾದಿದೇವತೆಗಳಲ್ಲಿ ಜ್ಞಾನವನ್ನು ಸ್ಥಾಪನೆ ಮಾಡಿ' ಎಂದು ಹೇಳಿದ್ದರಿಂದ ಮೊದಲೇ ಇದ್ದ ಜ್ಞಾನವು ವಿಶೇಷಯುಕ್ತಾದಿಗಳ ಸಹಕಾರದಿಂದ ಧೃಢ ಮಾಡಲ್ಪಟ್ಟಿತು. ಹಾಗೂ ಸ್ವಲ್ಪ ಹೊಸದಾದ ಜ್ಞಾನವೂ ಪ್ರಾಪ್ತವಾಯಿತು. ಇದನ್ನೇ ''ಜಾನಂತೋऽಪಿ ವಿಶೇಷಾರ್ಥಜ್ಞಾನಾಯ ಸ್ಥಾಪನಾಯ ಚ । ಪೃಚ್ಛಂತಿ ಸಾಧವಃ'' ಇತ್ಯಾದಿಯಾಗಿ ಗೀತಾತಾತ್ಪರ್ಯದಲ್ಲಿ ಹೇಳಿದ್ದಾರೆ. ಇದೇ ಅರ್ಥದಿಂದಲೇ ಮಹಾಭಾರತ-ತಾತ್ಪರ್ಯನಿರ್ಣಯದ ಹತ್ತನೆಯ ಅಧ್ಯಾಯದಲ್ಲಿ ಆಚಾರ್ಯರು ಏವಂ ಜ್ಞಾನಂ ಪುನಃ ಪ್ರಾಪುಃ ಇತ್ಯಾದಿಯಾಗಿ ಹೇಳಿದ್ದಾರೆ. ಮತ್ತು ಬ್ರಹ್ಮದೇವರನ್ನು ಬಿಟ್ಟು ಉಳಿದ ದೇವತೆಗಳಿಗೆ ತಿರೋಹಿತವಾಗಿದ್ದ ಜ್ಞಾನವೇ ಲಾಭವಾಯಿತು ಎಂದೂ ಅರ್ಥೈಸಬಹುದು. ಗೀತಾತಾತ್ಪರ್ಯದ ಹದಿಮೂರನೇ ಅಧ್ಯಾಯದಲ್ಲಿ 'ಬ್ರಹ್ಮಣಸ್ತು ಪ್ರಾಯೋ ನ ಅಪ್ರತಿಭಾಸಮ್' ಇತ್ಯಾದಿಯಾಗಿ ಬ್ರಹ್ಮದೇವರಿಗೆ ಅಜ್ಞಾನವೇ ಇಲ್ಲವೆಂದು ಆಚಾರ್ಯರು ಹೇಳಿದ್ದಾರೆ ಈ ರೀತಿಯಾಗಿ ಬ್ರಹ್ಮಸೂತ್ರಗಳಿಗೆ ಅತ್ಯಂತ ಉಪಾದೇಯತ್ವವೂ ವ್ಯಾಖ್ಯೇಯತ್ವವೂ ಸಿದ್ಧವಾಗುತ್ತದೆ.

## ''ಅಲ್ಪಾಕ್ಷರ'' ಎಂದರೆ ?

**ಭಾವದೀಪಃ – तदल्पाक्षरत्वमिति ।। 'यावदक्षरतां विना विवक्षितार्थासिद्धि-स्तदर्थप्रतिपादनाय ततोऽधिकाक्षरानुपादानमल्पाक्षरत्वम्' इत्यर्थः ।**

ಅಲ್ಪಾಕ್ಷರತ್ವದ ಲಕ್ಷಣ - 'ಯಾವದಕ್ಷರತಾಂ ವಿನಾ ವಿವಕ್ಷಿತಾರ್ಥಸಿದ್ಧಸ್ತತದರ್ಥಪ್ರತಿಪಾದನಾಯ ತತೋऽಧಿಕಾಕ್ಷರಾನುಪಾದಾನಮಲ್ಪಾಕ್ಷರತ್ವಮ್' 'ಎಷ್ಟು ಅಕ್ಷರಗಳಿಲ್ಲದೆ ಹೇಳಬೇಕಾದ ವಿಷಯದ ಜ್ಞಾನವು ಉಂಟಾಗುವುದಿಲ್ಲವೋ, ಅಷ್ಟೇ ಅಕ್ಷರಗಳನ್ನು ಹೇಳಬೇಕು. ಅದಕ್ಕಿಂತ ಹೆಚ್ಚು ಅಕ್ಷರಗಳನ್ನು ಉಪಯೋಗಿಸಬಾರದು'' ಇದುವೇ ಅಲ್ಪಾಕ್ಷರತ್ವದ ಲಕ್ಷಣ.

## ''ಸಾರವತ್'' ಎಂದರೆ ?

## ''ವಿಶ್ವತೋಮುಖ'' ಎಂದರೆ ?

**ಭಾವದೀಪಃ – विशिष्टार्थता = अनन्यलभ्यार्थता । बहुशाखेति ।। सद्व्याकरण सूत्रादेरपि बहुशाखागतपदार्थनिर्णायकत्वान्नातिव्याप्तिरिति भावः ।**

ಮತ್ತೊಂದರಿಂದ ತಿಳಿಯದ ವಿಶಿಷ್ಟವಾದ ವಿಷಯವನ್ನು ತಿಳಿಸುವುದು 'ಸಾರವತ್' ಎಂದು ಕರೆಸಿಕೊಳ್ಳುತ್ತದೆ. ಟೀಕೆಯಲ್ಲಿರುವ 'ವಿಶಿಷ್ಟಾರ್ಥತಾ' ಎಂಬ ಪದಕ್ಕೆ 'ಮತ್ತೊಂದರಿಂದ ಲಭ್ಯವಾಗದ' ಎಂದರ್ಥ.

ಅನೇಕ ವೇದ ಶಾಖೆಗಳ ಅರ್ಥವನ್ನು ನಿರ್ಣಯಿಸುವುದೇ 'ವಿಶ್ವತೋಮುಖ' ಎಂದು ಕರೆಸಿಕೊಳ್ಳುತ್ತದೆ. ಸದ್ವ್ಯಾಕರಣದ ಸೂತ್ರಗಳು (ದೈವೀಮೀಮಾಂಸಾಸೂತ್ರ) ಅನೇಕ ಶಾಖೆಗಳಲ್ಲಿರುವ ಪದಾರ್ಥ ನಿರ್ಣಾಯಕವಾಗುವುದರಿಂದ ಸದ್ವ್ಯಾಕರಣದ ಸೂತ್ರದಲ್ಲಿ ಬಹುಶಾಖಾ ನಿರ್ಣಾಯಕತ್ವ ಎಂಬ ಸೂತ್ರಲಕ್ಷಣ ಬರಲಿಲ್ಲ ಎಂಬ ಅತಿವ್ಯಾಪ್ತಿಗೆ ಅವಕಾಶವಿಲ್ಲ.

## ''ಅಸ್ತೋಭ'' ಎಂದರೆ ?

**ಭಾವದೀಪಃ – व्यर्थेति ।। अर्थाप्रतिपादकत्वेऽपि साग्नि स्तोभाक्षरणां ऋगक्षरव्याप्तगानभागपूरणायेव प्रयोजनान्तरायाक्षराप्रयोग इत्यर्थः । तेन नाल्पाक्षरत्वे साङ्कर्यम् ।**

ವ್ಯರ್ಥವಾದ ಅಕ್ಷರ ಹಾಗೂ ಪದಗಳ ಇಲ್ಲದಿರುವಿಕೆಯೇ 'ಅಸ್ತೋಭ' ಎಂದು ಕರೆಸಿಕೊಳ್ಳುತ್ತದೆ. 'ಅಸ್ತೋಭ' ಶಬ್ದಕ್ಕೆ ವ್ಯರ್ಥಾಕ್ಷರವು ಇರಬಾರದೆಂದು ಹೇಳಲಾಗಿದೆ. ವಾಸ್ತವಿಕವಾಗಿ ಅಲ್ಪಾಕ್ಷರ ಶಬ್ದದಿಂದಲೇ ಈ ಅರ್ಥವು ಲಭಿಸುತ್ತದೆ. ಆದರೂ ಕೂಡ 'ಅಸ್ತೋಭಂ' ಎಂದೇಕೆ ಹೇಳಿದರು ಎಂದರೆ ಸಾಮವೇದದಲ್ಲಿ ಗಾನಕ್ಕಾಗಿ ಕೆಲವು ಅರ್ಥವಿಲ್ಲದ ಅಕ್ಷರಗಳನ್ನು ಹಾಡುತ್ತಾನೆ. 'ಅಸ್ತೋಭ' ಎಂದರೆ ಗಾನಾದಿ ಪ್ರಯೋಜನವೂ ಇಲ್ಲದೇ ವ್ಯರ್ಥವಾಗಿ ಅಧಿಕಾಕ್ಷರಗಳನ್ನು ಹೇಳಬಾರದು ಎಂದು ಅರ್ಥ. ಆದ್ದರಿಂದ ಅಲ್ಪಾಕ್ಷರತ್ವದಿಂದ ಸಾಂಕರ್ಯದೋಷವು ಬರುವುದಿಲ್ಲ.

## ಸೂತ್ರಲಕ್ಷಣದಲ್ಲಿ ಎಲ್ಲಾ ವಿಶೇಷಣಗಳು ಸಾರ್ಥಕ

**ಭಾವದೀಪಃ – अत्र च भाष्यस्य निर्णयहेतुरहितवाक्यस्य कुशलपुरुषोक्तलोकवार्तादिवाक्यस्य भगवन्नाममन्त्रादेव्यर्थाक्षरोपेततादृशवाक्यविशेषस्य अपशब्दोपेततादृशवाक्य विशेषस्य च सूत्रत्वव्यावृत्त्यर्थं क्रमेण षड्विशेषणानि इति तत्वप्रदीपे व्यक्तम् ।**

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ಒಟ್ಟು ಸೂತ್ರಕ್ಕೆ ಆರು ವಿಶೇಷಣಗಳು. ಅಲ್ಪಾಕ್ಷರತ್ವವನ್ನು ಹೇಳದಿದ್ದರೆ ಭಾಷ್ಯದಲ್ಲಿ ಅತಿವ್ಯಾಪ್ತಿ. ಅಸಂದಿಗ್ಧತ್ವವನ್ನು ಹೇಳದಿದ್ದರೆ ನಿರ್ಣಾಯಕವಲ್ಲದ ವಾಕ್ಯದಲ್ಲಿ ಅತಿವ್ಯಾಪ್ತಿ. ಸಾರವತ್ವವನ್ನು ಹೇಳದಿದ್ದರೆ ಚತುರನಾದ ಪುರುಷನಿಂದ ಹೇಳಲ್ಪಟ್ಟ ಲೋಕವಾರ್ತಾದಿವಾಕ್ಯದಲ್ಲಿ ಅತಿವ್ಯಾಪ್ತಿ. ವಿಶ್ವತೋಮುಖತ್ವವನ್ನು ಹೇಳದಿದ್ದರೆ ನಾರಾಯಣ ಮೊದಲಾದ ಭಗವನ್ನಾಮಾದಿಗಳಲ್ಲಿ ಅತಿವ್ಯಾಪ್ತಿ. ಅಸ್ತೋಭತ್ವವನ್ನು ಹೇಳದಿದ್ದರೆ ವ್ಯರ್ಥಾಕ್ಷರಗಳಿಂದ ಕೂಡಿದ ವಾಕ್ಯದಲ್ಲಿ ಅತಿವ್ಯಾಪ್ತಿ. ಅನವದ್ಯತ್ವವನ್ನು ಹೇಳದಿದ್ದರೆ ಅಪಶಬ್ದದಿಂದ ಕೂಡಿದ ವಾಕ್ಯದಲ್ಲಿ ಅತಿವ್ಯಾಪ್ತಿ ಬರುತ್ತದೆ. ಇವುಗಳನ್ನು ಪರಿಹರಿಸಲು ಆರು ವಿಶೇಷಣಗಳನ್ನು ಸೂತ್ರದಲ್ಲಿ ಹೇಳಬೇಕು. ಈ ವಿಚಾರವು ತತ್ವಪ್ರದೀಪದಲ್ಲಿ ಹೇಳಲ್ಪಟ್ಟಿದೆ.

ವಿವರಣೆ - ಅಲ್ಪಾಕ್ಷರತ್ವಮ್ = ಪ್ರಕೃತವಾದ ಅರ್ಥವನ್ನು ಹೇಳುವ ಅಲ್ಪಾಕ್ಷರ ಬಹ್ವಕ್ಷರವುಳ್ಳ ಪರ್ಯಾಯಪದಗಳ ಮಧ್ಯದಲ್ಲಿ ಅಲ್ಪಾಕ್ಷರವುಳ್ಳ ಪದವನ್ನೇ ಹೇಳಬೇಕು. ಪ್ರತಿಯೊಂದೆಡೆ ಇದನ್ನು ಇಟ್ಟುಕೊಳ್ಳಲಾಗದು. ಹಾಗಾದಲ್ಲಿ 'ಆಕಾಶಸ್ತಲ್ಲಿಂಗಾತ್' ಎಂಬುದರ ಬದಲು 'ಖಂ ತಲ್ಲಿಂಗಾತ್' ಎಂದೇ ಹೇಳಬಹುದಿತ್ತೆಂಬ ಆಕ್ಷೇಪ ಬರುತ್ತದೆ. ಹಾಗಾಗಿ ಎಲ್ಲಿ ಶ್ರುತ್ಯನುಗಮವೆಂಬ ಪ್ರಯೋಜನವಿರುತ್ತದೋ, ಅಲ್ಲಿ ಬಹ್ವಕ್ಷರವುಳ್ಳ ಪದಪ್ರಯೋಗ ಮಾಡಿದರೂ ತಪ್ಪಲ್ಲ. ಎಲ್ಲಿ ಶ್ರುತ್ಯನುಗಮಪ್ರಯೋಜನವಿರುವುದಿಲ್ಲವೋ ಅಲ್ಲಿ ಅಲ್ಪಾಕ್ಷರಪದವನ್ನೇ ಹೇಳಬೇಕು. 'ಆಕಾಶಸ್ತಲ್ಲಿಂಗಾತ್' ಎಂಬಲ್ಲಿ 'ಆಕಾಶ ಇತಿ ಹೋವಾಚ' ಎಂಬ ಶ್ರುತ್ಯನುಗಮಪ್ರಯೋಜನವಿರುವುದರಿಂದ ಆಕಾಶಪದವನ್ನು ಹೇಳಿದ್ದು ತಪ್ಪಲ್ಲ. ಬೇರೆಡೆಯೂ ಹೀಗೆಯೇ ತಿಳಿಯಬೇಕು.

ಗಮನಿಸ ಬೇಕಾದ ವಿಚಾರ - ಪ್ರಶ್ನೆ - ಕಿಂ ತತ್ ಸೂತ್ರತ್ವಮ್? ಎಂದು ಸೂತ್ರಲಕ್ಷಣದ ಬಗ್ಗೆ ಪ್ರಶ್ನೆ ಮಾಡಿದ್ದರಿಂದ 'ಅಲ್ಪಾಕ್ಷರಮ್' ಇತ್ಯಾದಿಯಾಗಿ ಸೂತ್ರಲಕ್ಷಣವನ್ನು ಹೇಳಿದರು. ಇಲ್ಲಿ ಪ್ರತಿಯೊಂದೂ ಪ್ರತ್ಯೇಕವಾಗಿ ಸೂತ್ರದ

ಲಕ್ಷಣವೋ? ಅಥವಾ ಮಿಲಿತವಾಗಿ ಸೂತ್ರಲಕ್ಷಣವೋ? ಪ್ರತ್ಯೇಕವಾಗಿ ಲಕ್ಷಣವಾಗುವುದಿಲ್ಲ. ಏಕೆಂದರೆ ಅಲ್ಪಾಕ್ಷರತ್ವ ಮತ್ತು ವಿಶ್ವತೋಮುಖತ್ವ ಬಿಟ್ಟು ಉಳಿದೆಲ್ಲ ಲಕ್ಷಣಗಳು ಪುರಾಣಾದಿಗಳಲ್ಲಿಯೂ ಬರುವುದರಿಂದ ಅತಿವ್ಯಾಪ್ತಿ ಬರುತ್ತದೆ. ಮಿಲಿತವಾಗಿ ಲಕ್ಷಣವೆಂದರೆ 'ಅಲ್ಪಾಕ್ಷರತ್ವೇ ಸತಿ ವಿಶ್ವತೋಮುಖತ್ವಮ್' ಇಷ್ಟೇ ಸಾಕು. ಉಳಿದ ವಿಶೇಷಣಗಳು ವ್ಯರ್ಥವಲ್ಲವೇ?

ಉತ್ತರ - ಹೌದು. ಇಲ್ಲಿ 'ಅಲ್ಪಾಕ್ಷರತ್ವೇ ಸತಿ ವಿಶ್ವತೋಮುಖತ್ವಮ್' ಎಂದಿಷ್ಟೇ ಸೂತ್ರಲಕ್ಷಣವನ್ನು ತಿಳಿಯಬೇಕು. ಉಳಿದೆಲ್ಲ ವಿಶೇಷಣಗಳು ಕೇವಲ ಸ್ವರೂಪಕಥನಪರವಾಗಿವೆ.

ವಿಶೇಷ ವಿಚಾರ - 'ಯಾವದಕ್ಷರತಾಂ ವಿನಾ ವಿವಕ್ಷಿತಾರ್ಥಾಸಿದ್ಧಿಃ ತತ್ ಅಲ್ಪಾಕ್ಷರತ್ವಮ್' 'ಎಷ್ಟು ಅಕ್ಷರವಿಲ್ಲದೆ ವಿವಕ್ಷಿತವಾದ ಅರ್ಥವು ಸಿದ್ಧಿಸುವುದಿಲ್ಲವೋ; ಅದು ಅಲ್ಪಾಕ್ಷರ' ಎನ್ನಲಾಗಿದೆ. ಇಲ್ಲಿರುವ 'ತತ್' ಪದದಿಂದ ಯಾವುದನ್ನು ಪರಾಮರ್ಶಿಸಬೇಕು? ವಿವಕ್ಷಿತಾರ್ಥಾಸಿದ್ಧಿಯನ್ನು ಪರಾಮರ್ಶಿಸಿದರೆ ವಿವಕ್ಷಿತಾರ್ಥಾಸಿದ್ಧಿಯನ್ನೇ ಅಲ್ಪಾಕ್ಷರ ಎಂದಂತಾಯಿತು. ಈ ಅರ್ಥವು ಅನುಪಪನ್ನವಾದ್ದರಿಂದ ಹೀಗೆ ಹೇಳುತ್ತಿದ್ದಾರೆ- 'ಯಾವದಕ್ಷರತಾಂ ವಿನಾ ವಿವಕ್ಷಿತಾರ್ಥಾಸಿದ್ಧಿಃ ತದರ್ಥಪ್ರತಿಪಾದನಾಯ ತತೋಽಧಿಕಾಕ್ಷರಾನುಪಾದಾನಮ್ ಅಲ್ಪಾಕ್ಷರತ್ವಮಿತ್ಯರ್ಥಃ' ಎಂದು. ಅಭಿಪ್ರಾಯ ಹೀಗಿದೆ - ತತ್ ಪದದಿಂದ ಬುದ್ಧಿಸ್ಥವಾದ್ದನ್ನೇ ಪರಾಮರ್ಶಿಸಬೇಕು, ಹೊರತು ಕಂಠೋಕ್ತವಾದದ್ದನ್ನಲ್ಲ. ಆದ್ದರಿಂದ ಎಷ್ಟು ಅಕ್ಷರಗಳಿಲ್ಲದೆ ವಿವಕ್ಷಿತವಾದ ಅರ್ಥವು ಸಿದ್ಧಿಸುವುದಿಲ್ಲವೋ ಅಂತಹ ಅರ್ಥವನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಹೆಚ್ಚಿನ ಅಕ್ಷರಗಳನ್ನು ಹೇಳದಿರುವಿಕೆಯೇ ಅಲ್ಪಾಕ್ಷರವೆಂದು.

ಸುಧೆಯಲ್ಲಿ ಅಲ್ಪಾಕ್ಷರತ್ವದ ಲಕ್ಷಣ ಹೀಗಿದೆ - 'ಶ್ರುತ್ಯಾ ಅರ್ಥಾದ್ವಾ ಯೋ ಅರ್ಥಃ ಪ್ರತೀಯತೇ ತದಪ್ರತಿಪಾದನಂ ಅಲ್ಪಾಕ್ಷರತ್ವಂ' 'ಶಬ್ದದಿಂದ ಅಥವಾ ಅರ್ಥಾಂತರದಿಂದ ಯಾವ ಅರ್ಥವು ತೋರುತ್ತದೋ, ಅದನ್ನು ಪ್ರತಿಪಾದನೆ ಮಾಡದಿರುವಿಕೆಯೇ ಅಲ್ಪಾಕ್ಷರವೆನಿಸುತ್ತದೆ' ಎಂದು

ಅಲ್ಪಾಕ್ಷರತ್ವದ ಲಕ್ಷಣವು ನಿಖರವಾಗಬೇಕೆಂದರೆ ಸುಧೆಯ ಮೂತನ್ನು ಟೀಕೆಯ ಮಾತಿನ ಜೊತೆಗೆ ಸೇರಿಸಬೇಕು. ಟೀಕೆಯಲ್ಲಿ ವಿವಕ್ಷಿತಾರ್ಥಾಸಿದ್ಧಿಃ ಎಂದಿದೆ. ಇದರ ಜೊತೆಗೆ ಸುಧೆಯಲ್ಲಿನ 'ಶ್ರುತ್ಯಾ ಅರ್ಥಾದ್ವಾ' ಎಂಬುದನ್ನು ಜೋಡಿಸಬೇಕು. ಅದರಂತೆ ಸುಧೆಯಲ್ಲಿರುವ 'ತದಪ್ರತಿಪಾದನಮ್' ಎಂಬುದರ ಜೊತೆಗೆ ಟೀಕೆಯಲ್ಲಿರುವ 'ತದರ್ಥಪ್ರತಿಪಾದನಾಯ ತತೋऽಧಿಕಾಕ್ಷರಾನುಪಾದಾನಮ್' ಎಂಬುದನ್ನು ಸೇರಿಸಬೇಕು. ಒಟ್ಟು ಹೀಗೆ ಹೇಳಿದಂತಾಯಿತು - 'ಯಾವದಕ್ಷರತಾಂ ವಿನಾ ಶ್ರುತ್ಯಾ ಅರ್ಥಾದ್ವಾ ವಿವಕ್ಷಿತಾರ್ಥಾಸಿದ್ಧಿಃ ತತ್‌ಪ್ರತಿಪಾದನಾಯ ತತೋऽಧಿಕಾಕ್ಷರಾನುಪಾದಾನಮ್ ಅಲ್ಪಾಕ್ಷರತ್ವಮ್' ಎಷ್ಟು ಅಕ್ಷರಗಳಿಲ್ಲದೆ ಶ್ರುತಿಯಿಂದ ಅಥವಾ ಅರ್ಥಾಂತರದಿಂದ ವಿವಕ್ಷಿತವಾದ ಅರ್ಥವು ಸಿದ್ಧಿಸುವುದಿಲ್ಲವೋ; ಅಂತಹ ಅರ್ಥವನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಹೆಚ್ಚಿನ ಅಕ್ಷರಗಳನ್ನು ಹೇಳದಿರುವಿಕೆಯೇ ಅಲ್ಪಾಕ್ಷರತ್ವ ಎಂದು. ಹೀಗೆ ಹೇಳಿದ್ದರಿಂದ ಸುಧೆಯ ಲಕ್ಷಣಕ್ಕೆ ವ್ಯಾಹತಿದೋಷವನ್ನು ಪರಿಹರಿಸಿದಂತಾಯಿತು. ಶ್ರುತಿಯಿಂದ ಅಥವಾ ಅರ್ಥಾಂತರದಿಂದ ತೋರುವ ಅರ್ಥವನ್ನು ಪ್ರತಿಪಾದಿಸಬಾರದು ಎಂದು ಹೇಳಿದರೆ ವ್ಯಾಹತಿ ಸ್ಪಷ್ಟ. ಅರ್ಥವು ತೋರಿದಲ್ಲಿ ತೋರಬಾರದೆಂಬುದು ಹೇಗೆ ಕೂಡುತ್ತದೆ? ಅದಕ್ಕೋಸ್ಕರ 'ಯಾವ ಅರ್ಥವು ಶ್ರುತಿಯಿಂದ ಅಥವಾ ಅರ್ಥಾಂತರದಿಂದ ತಿಳಿದಿರುತ್ತದೋ ಅದನ್ನು ಅದಕ್ಕಿಂತ ಹೆಚ್ಚಿನ ಅಕ್ಷರಗಳಿಂದ ವಿವಕ್ಷಿಸಬಾರದೆಂದು ಹೇಳಬೇಕು. ಈಗ ವ್ಯಾಹತಿ ಬರುವುದಿಲ್ಲ.

ಅಲ್ಪಾಕ್ಷರತ್ವಲಕ್ಷಣದಲ್ಲಿ ಮತ್ತೊಂದು ಗಮನೀಯ ಅಂಶ - ಪರ್ಯಾಯಶಬ್ದಗಳಲ್ಲಿ ಲಾಘವ- ಗೌರವವನ್ನು ವಿಚಾರ ಮಾಡಬಾರದು. ಆದ್ದರಿಂದಲೇ 'ಆನಂದಮಯೋऽಭ್ಯಾಸಾತ್' ಎಂಬಲ್ಲಿ ಸುಖಮಯವೆಂದೂ ಕಮಯವೆಂದೋ ಹೇಳಬೇಕಾಗಿತ್ತು. ಅದರಂತೆ 'ಆಕಾಶಸ್ತಲ್ಲಿಂಗಾತ್' ಎಂದು ಹೇಳುವುದಕ್ಕಿಂತ 'ಖಂ ತಲ್ಲಿಂಗಾತ್' ಎಂದೇ ಹೇಳಬೇಕಿತ್ತು. ಇವೆಲ್ಲ ಆಕ್ಷೇಪಗಳು ಈಗ ಪರಿಹಾರವಾದವು.

'ಬಹುಶಾಖಾನಿರ್ಣಾಯಕತ್ವಮ್ ವಿಶ್ವತೋಮುಖತ್ವಮ್' ಈ ಬಹುಶಾಖಾ-ನಿರ್ಣಾಯಕತ್ವವೆಂಬ ವಿಶ್ವತೋಮುಖತ್ವದ ಲಕ್ಷಣಕ್ಕೆ ದೈವೀಮೀಮಾಂಸಾ ಸೂತ್ರದಲ್ಲಿ ಅವ್ಯಾಪ್ತಿ ಬರುತ್ತದೆ. ಇದರ ಪರಿಹಾರಕ್ಕಾಗಿ 'ಬಹುಶಾಖಾಗತಪದಾರ್ಥ-ನಿರ್ಣಾಯಕತ್ವಮ್' ಎಂದು ಪರಿಷ್ಕರಿಸಬೇಕು.

## ವಿಶೇಷಣವಿಲ್ಲದ್ದರಿಂದಲೇ ಬ್ರಹ್ಮಸೂತ್ರಗಳು ಮುಖ್ಯ

**ಭಾವದೀಪಃ – 'चाप्यतः' इत्यत्र चोऽवधारणार्थ इत्युपेत्य तस्यापिशब्दस्य चान्वयमाह – अत एव हि निर्विशेषितसूत्रत्वमपीति ।। 'केवलसूत्रपदेनोक्तिः' इत्यर्थः ।**

'ಬ್ರಹ್ಮಸೂತ್ರಸ್ಯ ಚಾಪ್ಯತಃ' ಎಂಬ ಭಾಷ್ಯದಲ್ಲಿರುವ ಚಶಬ್ದವು ಅವಧಾರಣಾರ್ಥದಲ್ಲಿದೆ. ಇದಕ್ಕೆ ಅಪಿಶಬ್ದದ ಜೊತೆಗೆ ಅನ್ವಯವನ್ನು ತಿಳಿಯಬೇಕು. ಇದನ್ನು 'अत एव हि निर्विशेषितसूत्रत्वमप्यस्ति' ಎಂದು ವ್ಯಾಖ್ಯಾನ ಮಾಡಿದ್ದಾರೆ. ಬ್ರಹ್ಮಸೂತ್ರಗಳಿಗೆ ಮುಖ್ಯ ಸೂತ್ರತ್ವ ಇರುವುದರಿಂದಲೇ ಅವು ವಿಶೇಷಣರಹಿತವಾದ 'ಸೂತ್ರ' ಎಂಬ ಶಬ್ದದಿಂದ ಪ್ರತಿಪಾದ್ಯವಾಗಿವೆ ಎಂದಭಿಪ್ರಾಯ.

## ವ್ಯಾಪ್ತಿಯಿಂದ ಮುಖ್ಯತ್ವ ಪ್ರತಿಪಾದನೆ

**ಭಾವದೀಪಃ – निर्विशेषितम् = निरुपपदम् । विशेषितम् = सोपपदम् । विशेषणाद् व्यासा इति ।। द्रौणिव्यास इत्यादिसोपपदव्यासशब्दवाच्य इत्यर्थः।**

ಟೀಕೆಯಲ್ಲಿ 'यत् यत्र निर्विशेषितम् तत् तत्र मुख्यं' ಎಂಬ ವ್ಯಾಪ್ತಿಯನ್ನು ಹೇಳಿದ್ದಾರೆ. ಇಲ್ಲಿರುವ 'ನಿರ್ವಿಶೇಷಿತಮ್' ಎಂಬ ಪದಕ್ಕೆ ವಿಶೇಷಣವಿಲ್ಲದ್ದು ಎಂದರ್ಥ. ಯಾವ ಶಬ್ದವು ಯಾವ ವಸ್ತುವಿನಲ್ಲಿ ವಿಶೇಷಣರಹಿತವಾಗಿ ಪ್ರವೃತ್ತವಾಗುತ್ತದೋ, ಆ ಶಬ್ದವು ಆ ವಸ್ತುವಿನಲ್ಲಿ ಮುಖ್ಯವಾಗಿರುತ್ತದೆಂದು ಇದರ ಅಭಿಪ್ರಾಯ. 'यत् अमुख्यम् तत् विशेषितं' ಎಂಬ ವ್ಯಾಪ್ತಿಯನ್ನು ಟೀಕೆಯಲ್ಲಿ ಹೇಳಿದ್ದಾರೆ. ಇಲ್ಲಿರುವ 'ವಿಶೇಷಿತಂ' ಎಂಬ ಪದಕ್ಕೆ 'ವಿಶೇಷಣ ಸಹಿತವಾದದ್ದು' ಎಂದರ್ಥ. ಯಾವುದು ಅಮುಖ್ಯವೋ ಅದು ವಿಶೇಷಣ ಸಹಿತವಾಗಿರುತ್ತದೆ.

'ತತಶ್ಚ ವಿಶೇಷಣಾತ್ ವ್ಯಾಸಾಃ' ಅಶ್ವತ್ಥಾಮ ಮೊದಲಾದವರು ಅಮುಖ್ಯವ್ಯಾಸ-ರಾಗಿರುವುದರಿಂದಲೇ 'ದ್ರೌಣಿವ್ಯಾಸ' ಇತ್ಯಾದಿಯಾಗಿ ವಿಶೇಷಣಸಹಿತ ಶಬ್ದದಿಂದ ಪ್ರತಿಪಾದ್ಯರಾಗಿದ್ದಾರೆಂದು ಟೀಕೆಯಲ್ಲಿ ಹೇಳಿದ್ದಾರೆ. ಇಲ್ಲಿರುವ 'ವಿಶೇಷಣಾತ್

ವ್ಯಾಸಾಃ' ಎಂಬ ಪದಕ್ಕೆ 'ದ್ರೌಣಿವ್ಯಾಸಃ' ಎಂಬಲ್ಲಿ 'ದ್ರೌಣಿ' ಎಂಬ ವಿಶೇಷಣದಿಂದ ಸಹಿತವಾದ ವ್ಯಾಸಶಬ್ದದಿಂದ ಪ್ರತಿಪಾದ್ಯರು ಎಂದರ್ಥ.

## ಉಳಿದೆಲ್ಲ ಸೂತ್ರಗಳು ವಿಶೇಷಣಸಹಿತವಾಗಿದೆ

**ಭಾವದೀಪಃ – 'सविशेषेण' इति भाष्ये हिशब्दो हेत्वर्थः । 'अपराणि' इत्यस्यान्यानि सूत्राणि अमुख्यानीति चार्थः - इति भावः ।**

'ಸವಿಶೇಷಣ ಸೂತ್ರಾಣಿ ಹ್ಯಪರಾಣಿ ವಿದೋ ವಿದುಃ' ಇಲ್ಲಿರುವ ಈ ಶಬ್ದವು ಹೇತ್ವರ್ಥದಲ್ಲಿದೆ. 'ಅಪರಾಣಿ' ಎಂಬ ಪದಕ್ಕೆ ಬೇರೆ ಸೂತ್ರಗಳೆಂದರ್ಥ. ಅದನ್ನು ಟೀಕೆಯಲ್ಲಿ 'ಅನ್ಯಸೂತ್ರಾಣಾಂ' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. ಅಮುಖ್ಯಸೂತ್ರಗಳು ಎಂದೂ ಕೂಡ ಅರ್ಥೈಸಬಹುದು.

## 'ಅನ್ಯೇ ವಿಶೇಷಣಾತ್' ಎಂಬ ಭಾಷ್ಯದ ಮಾತಿಗೆ ಸಾರ್ಥಕ್ಯ ಚಿಂತನೆ

**ಭಾವದೀಪಃ – एतदिति ।। 'विशेषितशब्दवाच्यानाममुख्यत्वम् इत्येतत् दृष्टान्तनिष्ठतया दर्शनायैव' इत्यर्थः । अन्यथा मुख्यतोपपादनस्यैव प्रकृतत्वेन तथा व्यासत्वमेकस्य कृष्णस्येत्येव वाच्यं स्यादित्यर्थः ।**

'ಏತದುಪಪಾದನಾಯೈವ ಅನ್ಯೇ ವಿಶೇಷಣಾತ್ ಇತಿ ಪ್ರಾಗೇವ ದೃಷ್ಟಾಂತ ಉಕ್ತಃ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ವಿಶೇಷಣವಿಲ್ಲದ ಸೂತ್ರಶಬ್ದವಾಚ್ಯವಾದ್ದರಿಂದ ಬ್ರಹ್ಮಸೂತ್ರಗಳೇ ಏಕೆ ಮುಖ್ಯಸೂತ್ರವಾಗಬೇಕು ? ಎಂಬ ಪ್ರಶ್ನೆಗೆ 'ಸವಿಶೇಷಣ' ಎಂಬುದಾಗಿ ಉತ್ತರಿಸಿದ್ದಾರೆ. ಬೇರೆ ಸೂತ್ರಗಳು 'ವಿಶೇಷಣಸಹಿತ' ಸೂತ್ರಶಬ್ದದಿಂದ ವಾಚ್ಯವಾಗಿವೆ ಎಂಬುದನ್ನು ವ್ಯಾಸಶಬ್ದದ ಉದಾಹರಣೆಯಿಂದ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಅವುಗಳಿಗೆ ಮುಖ್ಯಸೂತ್ರತ್ವವಿರುವುದಿಲ್ಲ ಎಂದು. ಹೀಗೆ ವಿಶೇಷಣಸಹಿತವಾದದ್ದು ಅಮುಖ್ಯವಾಗಿವೆ ಎಂಬುದನ್ನು ತೋರಿಸುವ ಉದ್ದೇಶವಿಲ್ಲದಿದ್ದಲ್ಲಿ ಮುಖ್ಯತ್ವದ ಉಪಪಾದನೆಯಷ್ಟೇ ಪ್ರಕೃತವಾದ್ದರಿಂದ 'ತಥಾ ವ್ಯಾಸತ್ವಮೇಕಸ್ಯ ಕೃಷ್ಣಸ್ಯ' ಎಂದೇ ಹೇಳುತ್ತಿದ್ದರು.

ಎರಡು ಬಗೆಯ ವ್ಯಾಪ್ತಿಯನ್ನು ಟೀಕೆಯಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು

**ಭಾವದೀಪಃ – ಮುಖ್ಯಸ್ಯೈವೇತಿ ।। 'ಅನ್ಯೇಷಾಮೇವ' 'ಅಮುಖ್ಯಾನಾಮೇವ' ಇತ್ಯಪಿ ಯೋಜ್ಯಮ್ । ಅನ್ಯಥಾ ಮುಖ್ಯಾಮುಖ್ಯತ್ವಯೋರ್ನಿರ್ವಿಶೇಷಣತ್ವಸವಿಶೇಷಣತ್ವೇ ಪ್ರಯೋಜಕೇ ನ ಸ್ಯಾತಾಮಿತಿ ಭಾವಃ ।**

'ಮುಖ್ಯಸ್ಯ' ಎಂಬ ಭಾಷ್ಯದಲ್ಲಿರುವ ಪದಕ್ಕೆ 'ಮುಖ್ಯಸ್ಯೈವ' ಎಂಬರ್ಥವನ್ನು ಟೀಕೆಯಲ್ಲಿ ಹೇಳಿರುತ್ತಾರೆ. ಆದ್ದರಿಂದ ಮುಖ್ಯವಾದದ್ದಕ್ಕೆ ಮಾತ್ರ ನಿರ್ವಿಶೇಷ ಪದಪ್ರಯೋಗವು ಯುಕ್ತವಾಗುತ್ತದೆ. ಇಲ್ಲಿ 'ಅನ್ಯೇಷಾಮೇವ' 'ಅಮುಖ್ಯಾನಾಮೇವ' ಎಂಬುದನ್ನೂ ಕೂಡ ಯೋಜನೆ ಮಾಡಿಕೊಳ್ಳಬೇಕು. ಅಮುಖ್ಯಕ್ಕೆ ಸವಿಶೇಷಿತವಾದ ಪದವನ್ನು ಪ್ರಯೋಗ ಮಾಡುತ್ತಾರೆ ಎಂದು. ಹೀಗೊಪ್ಪದಿದ್ದರೆ ಮುಖ್ಯತ್ವಕ್ಕೆ ನಿರ್ವಿಶೇಷಿತತ್ವವು ಅಮುಖ್ಯತ್ವಕ್ಕೆ ಸವಿಶೇಷಣತ್ವವು ಪ್ರಯೋಜಕವೆಂದು ಸ್ಪಷ್ಟವಾಗುವುದಿಲ್ಲ.

## ಸೂತ್ರಲಕ್ಷಣ ಹೇಳಿದ್ದರ ಸಾರ್ಥಕ್ಯ

**ಭಾವದೀಪಃ – ಮುಖ್ಯಾಮುಖ್ಯಯೋರ್ನಿರ್ವಿಶೇಷಣಸವಿಶೇಷಣಶಬ್ದವಾಚ್ಯತ್ವ ರೂಪೇऽರ್ಥೇ ಇತಿ ವೇದವಿದಃ ಪ್ರಾಹುಃ ಇತ್ಯನೇನ ವೇದಸ್ಯ ವೃದ್ಧವ್ಯವಹಾರಸ್ಯ ಚ ಪ್ರಮಾಣೀಕರಣಾತ್ ನಿರ್ವಿಶೇಷಿತತ್ವಾದ್ಯೇವ ಮುಖ್ಯತ್ವಾದೌ ಪ್ರಯೋಜಕಂ ನ ತು ಕಾರಣಾನ್ತರಂ ಶಙ್ಕ್ಯಮಿತಿ ಭಾವಃ ।**

ಮುಖ್ಯವಾದದ್ದು ನಿರ್ವಿಶೇಷಣಶಬ್ದದಿಂದ ಪ್ರತಿಪಾದ್ಯವಾಗುತ್ತದೆ, ಅಮುಖ್ಯವಾದದ್ದು ಸವಿಶೇಷಣ ಶಬ್ದದಿಂದ ಪ್ರತಿಪಾದ್ಯವಾಗುತ್ತದೆಂಬ ಎಂಬ ವ್ಯಾಪ್ತಿ ವಿಷಯದಲ್ಲಿ ವೇದಜ್ಞರೇ ಪ್ರಮಾಣರಾಗಿದ್ದಾರೆ ಎಂಬುದಾಗಿ 'ಇತಿ ವೇದವಿದಃ ಪ್ರಾಹುಃ' ಎಂಬ ಭಾಷ್ಯದಿಂದ ಸ್ಪಷ್ಟವಾಗುತ್ತದೆ. ಹೀಗೆ ವೇದ ಹಾಗೂ ವೃದ್ಧವ್ಯವಹಾರವನ್ನು ಪ್ರಮಾಣವನ್ನಾಗಿ ಹೇಳಿದ್ದರಿಂದ ಮುಖ್ಯತ್ವಕ್ಕೆ ನಿರ್ವಿಶೇಷಿತತ್ವವೇ ಮುಖ್ಯಪ್ರಯೋಜಕ, ಬೇರೆ ಕಾರಣವನ್ನು ಆಶಂಕಿಸಬಾರದು.

ವಿವರಣೆ - 'ಮುಖ್ಯಸ್ಯೇತಿ ಮೂಲಗ್ರಂಥೇ' ಇತ್ಯಾದಿ ವಾಕ್ಯಗಳ ಅಭಿಪ್ರಾಯ ಹೀಗಿದೆ - ಬ್ರಹ್ಮಸೂತ್ರಾಣಿ, ಮುಖ್ಯಸೂತ್ರಾಣಿ, ನಿರುಪಪದಸೂತ್ರಶಬ್ದವಾಚ್ಯತ್ವಾತ್, ಯತ್ ನಿರುಪಪದ ಸೂತ್ರಶಬ್ದವಾಚ್ಯಂ ತತ್ ತಜ್ಜಾತೀಯೇ ಮುಖ್ಯಂ ಯಥಾ ವೇದವ್ಯಾಸಃ, ವೇದವ್ಯಾಸರು ನಿರುಪಪದವ್ಯಾಸಶಬ್ದದಿಂದ ವಾಚ್ಯರಾಗಿದ್ದಾರೆ. ಆದ್ದರಿಂದ ವ್ಯಾಸಜಾತಿಯಲ್ಲಿ ಅವರೇ ಪ್ರಧಾನರು. ಆದರಂತೆ ಬ್ರಹ್ಮಸೂತ್ರಗಳು ನಿರುಪಪದ ಸೂತ್ರಗಳಿಂದ ವಾಚ್ಯವಾದ್ದರಿಂದ ಜೈಮಿನ್ಯಾದಿಸೂತ್ರಗಳಿಗಿಂತಲೂ ಮುಖ್ಯವೆಂದು ಸಾಧಿಸಲಾಗುತ್ತದೆ.

ಈ ಅನುಮಾನದಲ್ಲಿ ಅಪ್ರಯೋಜಕಶಂಕೆಯನ್ನು ಟೀಕೆ ಹೇಳುತ್ತದೆ. ''ನಿರ್ವಿಶೇಷಣ-ಸವಿಶೇಷಣತ್ವಾಭ್ಯಾಂ ಕುತೋ ಮುಖ್ಯಾಮುಖ್ಯತ್ವೇ ದೃಷ್ಟಾಂತೇ ಕಾರಣಾಂತರಸಂಭವಾತ್'' ಎಂದು. ವೇದವ್ಯಾಸರು ನಿರುಪಪದವ್ಯಾಸ ಶಬ್ದದಿಂದ ವಾಚ್ಯರಾಗಲಿ ಆದರೆ ಮುಖ್ಯವ್ಯಾಸರು ಏಕಾಗಬೇಕು?

ಈ ಅಪ್ರಯೋಜಕಶಂಕೆಯನ್ನು ಪರಿಹರಿಸಲು 'ಮುಖ್ಯಸ್ಯ ನಿರ್ವಿಶೇಷೇಣ' ಇತ್ಯಾದಿ ಭಾಷ್ಯದ ಮಾತುಗಳು ಹೊರಟಿವೆಯೆಂದು ಟೀಕೆಯಲ್ಲಿ ವ್ಯಾಖ್ಯಾನಿಸಲಾಗಿದೆ.

''ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋऽನ್ಯೇಷಾಂ ವಿಶೇಷತಃ।
ಇತಿ ವೇದವಿದಃ ಪ್ರಾಹುಃ ಶಬ್ದತತ್ವಾರ್ಥವೇದಿನಃ॥''

ಭಾಷ್ಯದ ಈ ಮಾತುಗಳಲ್ಲಿ ಮುಖ್ಯವಾದದ್ದು ನಿರ್ವಿಶೇಷಿತಶಬ್ದದಿಂದ ವಾಚ್ಯವೆಂದು. ಮುಖ್ಯವಲ್ಲದ್ದು ವಿಶೇಷಣಸಹಿತವಾದ ಶಬ್ದದಿಂದ ಹೇಳಲ್ಪಡುತ್ತದೆಂದು ತಿಳಿಯುತ್ತದೆ. ಆದರೆ ಇದರಿಂದ ಅಪ್ರಯೋಜಕಶಂಕೆಗೆ ನೇರ ಉತ್ತರ ಹೇಗೆ ಬರುತ್ತದೆ. ಎಂಬ ಪ್ರಶ್ನೆಗೆ ಗ್ರಂಥಕಾರರು 'ಮುಖ್ಯಸ್ಯೇತಿ ಮೂಲಗ್ರಂಥೇ' ಇತ್ಯಾದಿ ಮಾತುಗಳಿಂದ ಉತ್ತರಿಸುತ್ತಿದ್ದಾರೆ. 'ಯತ್ ನಿರುಪಪದಶಬ್ದವಾಚ್ಯಂ ತತ್ ತಜ್ಜಾತೀಯೇ ಮುಖ್ಯಮ್' ಎಂಬ ವ್ಯಾಪ್ತಿಗೆ ಆಗಮವೇ ಪ್ರಮಾಣ. 'ಇತಿ ವೇದವಿದಃ ಪ್ರಾಹುಃ' ಎಂಬ ಭಾಷ್ಯದ ಮಾತಿನಿಂದ ಇದು ತಿಳಿಯುತ್ತದೆ. ವೇದಜ್ಞರು ಈ ವ್ಯಾಪ್ತಿಯನ್ನು ನಿಶ್ಚಯಿಸಿದ್ದಾರೆಂದರೆ ವೇದದಲ್ಲಿ ಹೇಳಿದೆ ಎಂದೇ ಅರ್ಥ. ಹೀಗೆ ವೇದದ ಆಧಾರವಿರುವುದರಿಂದ ಅಪ್ರಯೋಜಕಶಂಕೆಯನ್ನು ಮಾಡಬಾರದು. ಆದ್ದರಿಂದ 'ಯತ್ ನಿರುಪಪದಶಬ್ದವಾಚ್ಯಂ ತತ್ ತಜ್ಜಾತೀಯೇ ಮುಖ್ಯಮ್' ಎಂಬ ವ್ಯಾಪ್ತಿಯು ನಿರ್ದುಷ್ಟವಾಗಿದೆ.

**ಭಾವದೀಪಃ – ಅನೇನೇತಿ ।। 'ಯೇಷಾಂ ಸೂತ್ರತ್ವಮಞ್ಜಸಾ' ಇತ್ಯಾದಿನಾ 'ಅಞ್ಜಸಾ ಸೂತ್ರತ್ವಕಥನೇನ' ಇತ್ಯರ್ಥಃ । ಪ್ರಾಕ್ ಕಥಿತಸ್ಯೋಪಯೋಗಂ ವದನ್ನೇವ ತಾತ್ಪರ್ಯಮಾಹ – ಯತ್ಸೂತ್ರೇತಿ ।।**

ಟೀಕೆಯಲ್ಲಿ 'ಕಥಂ ಅನೇನ ಪರಿಹಾರಃ' ಎಂದು ಹೇಳಿದ್ದಾರೆ - ಇದರ ಅಭಿಪ್ರಾಯ ಹೀಗಿದೆ - 'ಯೇಷಾಂ ಸೂತ್ರತ್ವಮಂಜಸಾ' ಇತ್ಯಾದಿ ಭಾಷ್ಯದ ಮಾತಿನಿಂದ ಸೂತ್ರದ ಲಕ್ಷಣವನ್ನು ಸ್ಪಷ್ಟವಾಗಿ ಹೇಳಿರುವುದರಿಂದ ಯಾವ ಪರಿಹಾರ ದೊರೆಯಿತು? ಎಂದು.

ಇಲ್ಲಿಯ ತನಕ ಹೇಳಲ್ಪಟ್ಟ ಸೂತ್ರದ ಲಕ್ಷಣದ ಉಪಯೋಗವನ್ನು ಸ್ಪಷ್ಟಪಡಿಸುತ್ತಾ ಅದರ ತಾತ್ಪರ್ಯವನ್ನು 'ಯತ್ ಸೂತ್ರಧರ್ಮತಯಾ' ಇತ್ಯಾದಿ ಟೀಕಾವಾಕ್ಯದಿಂದ ನಿರೂಪಣೆ ಮಾಡುತ್ತಿದ್ದಾರೆ. ಯಾವ 'ವಿಶ್ವತೋಮುಖತ್ವ' ಎಂಬ ಧರ್ಮವು ಸೂತ್ರದ ಲಕ್ಷಣವನ್ನಾಗಿ ಹೇಳಲ್ಪಟ್ಟಿತೋ ಅದು ಬ್ರಹ್ಮಸೂತ್ರಗಳಿಗೆ ಮುಖ್ಯವಾಗಿ ಯುಕ್ತವಾಗುವುದರಿಂದ ಸರ್ವಶಾಖಾನಿರ್ಣಾಯಕತ್ವವು ಸಿದ್ಧವಾಗುತ್ತದೆ ಎಂದಭಿಪ್ರಾಯ.

## 'ಶಬ್ದಜಾತಸ್ಯ' ಎಂಬಲ್ಲಿರುವ ಷಷ್ಠೀವಿಭಕ್ತಿಯು ಕರ್ತೃರ್ಥದಲ್ಲಿದೆ

**ಭಾವದೀಪಃ – ಕಥಮೇಷಾಮಿತಿ ।। ದ್ವಿತ್ರಶಾಖಾಭಿನ್ನಶಾಖಾನಿರ್ಣಾಯಕತ್ವಸ್ಯ ವಾಚ್ಯತ್ವಾದಿತಿ ಭಾವಃ । ಶಬ್ದಸಮೂಹೈರಿತಿ ।। 'ಶಬ್ದಜಾತಸ್ಯ ಇತಿ ಷಷ್ಠೀ ಕರ್ತರಿ ನ ಕರ್ಮಣಿ' ಇತಿ ಭಾವಃ ।**

ಟೀಕೆಯಲ್ಲಿ 'ಕಥಮೇಷಾಮ್ ಸರ್ವನಿರ್ಣಾಯಕತ್ವಮ್' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ಬೇರೆ ಸೂತ್ರಗಳು ಕೆಲವು ಶಾಖೆಗಳನ್ನು ನಿರ್ಣಯ ಮಾಡುವುದರಿಂದ ಬ್ರಹ್ಮಸೂತ್ರಗಳಿಗೆ ಸರ್ವನಿರ್ಣಾಯಕತ್ವವು ಹೇಗೆ ಬರುತ್ತದೆ ? ಆವಾಗ ಬೇರೆ ಸೂತ್ರಗಳು ನಿರ್ಣಯ ಮಾಡುವ ಎರಡು ಅಥವಾ ಮೂರು ಶಾಖೆಗಳಿಗಿಂತ ಭಿನ್ನವಾದ ಶಾಖೆಗಳನ್ನು ಮಾತ್ರ ಬ್ರಹ್ಮಸೂತ್ರವು ನಿರ್ಣಯ ಮಾಡುತ್ತದೆಂದೇ ಹೇಳಬೇಕಾಗುತ್ತದೆ ಎಂದು.

ಟೀಕೆಯಲ್ಲಿ 'ಸರ್ವೈಃ ಶಬ್ದಸಮೂಹೈಃ' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - 'ಶಬ್ದಜಾತಸ್ಯ ಸರ್ವಸ್ಯ' ಎಂಬ ಭಾಷ್ಯದಲ್ಲಿರುವ ಷಷ್ಠೀವಿಭಕ್ತಿಯು ಕರ್ತೃರ್ಥದಲ್ಲಿದೆ ಹೊರತು ಕರ್ಮಾರ್ಥದಲ್ಲಿ ಅಲ್ಲ. ಇದನ್ನು ತಿಳಿಸಲೋಸುಗ ಟೀಕೆಯಲ್ಲಿ ಕರ್ತೃರ್ಥದಲ್ಲಿರುವ ತೃತೀಯಾ ವಿಭಕ್ತಿಯನ್ನು ಪ್ರಯೋಗಿಸಿದ್ದಾರೆ. ಎಲ್ಲಾ ಶಬ್ದಗಳ ಸಮೂಹಗಳಿಂದ ಮಾಡಲ್ಪಡುವ ನಿರ್ಣಾಯವು ಯಾವುದರ ಮೂಲಕವಾಗಿದೆಯೋ ಎಂದು ಟೀಕೆಗೆ ಅರ್ಥವನ್ನು ಹೇಳಿದಂತಾಯಿತು.

## ಪೂರ್ವಮೀಮಾಂಸೆಯು ಬ್ರಹ್ಮಮೀಮಾಂಸೆಯ ವ್ಯಾಖ್ಯಾನ

**ಭಾವದೀಪಃ – ಏತೇನ ಪೂರ್ವತನ್ತ್ರೇಣ ಗತಾರ್ಥತಾಮಾಶಙ್ಕ್ಯ ಕರ್ಮಕಾಣ್ಡಬ್ರಹ್ಮಕಾಣ್ಡಭೇದೇನ ಪರಿಹಾರಂ ವದನ್ತೋ ನಿರಸ್ತಾಃ । ಅನ್ಯಾರ್ಥೋ ತು ಜೈಮಿನಿರಿತ್ಯಾದಿನೋಕ್ತಸ್ಯೈವ ಕರ್ಮತನ್ತ್ರೇ ಪ್ರಪಞ್ಚನಾತ್ ।**

ಬೇರೆ ಸೂತ್ರಗಳು ಕೆಲವು ಶಾಖೆಗಳ ನಿರ್ಣಯವನ್ನು ಮಾಡುವುದಾದರೂ ಬ್ರಹ್ಮಸೂತ್ರಗಳ ಸರ್ವಶಾಖಾನಿರ್ಣಾಯಕತ್ವಕ್ಕೆ ಭಂಗ ಬರುವುದಿಲ್ಲ. ಏಕೆಂದರೆ ಬೇರೆ ಸೂತ್ರಗಳಿಂದ ತಿಳಿಯಲ್ಪಡುವ ಶಾಖಾನಿರ್ಣಯವೂ ಕೂಡ ಬ್ರಹ್ಮಸೂತ್ರಗಳ ಮೂಲಕವಾಗಿಯೇ ಆಗಿರುತ್ತದೆ. ಏಕೆಂದರೆ ಉಳಿದೆಲ್ಲಾ ಬ್ರಹ್ಮಸೂತ್ರಗಳ ವ್ಯಾಖ್ಯಾನ ರೂಪವಾಗಿವೆ. ಹೀಗೆ ಹೇಳಿದ್ದರಿಂದ ಪೂರ್ವಮೀಮಾಂಸಾಶಾಸ್ತ್ರದಿಂದ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಗತಾರ್ಥತ್ವ ಬರುತ್ತದೆಂದು ಆಶಂಕಿಸಿ ಕರ್ಮಕಾಂಡ ಹಾಗೂ ಬ್ರಹ್ಮಕಾಂಡಭೇದದಿಂದ ಈ ಸಮಗ್ರಶಾಸ್ತ್ರವು ಒಂದೇ ಆಗಿರುತ್ತದೆಂಬ ಪರಿಹಾರವನ್ನು ಕೆಲವರು ಹೇಳುತ್ತಾರೆ. ಅವರನ್ನು ಈಗ ನಿರಾಕರಣೆ ಮಾಡಿದಂತಾಯಿತು. 'ಅನ್ಯಾರ್ಥಂ ತು ಜೈಮಿನಿಃ' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದ ವಿಚಾರವನ್ನೇ ಪೂರ್ಣಮೀಮಾಂಸೆಯಲ್ಲಿ ವಿವರಣೆ ಮಾಡಿದ್ದಾರೆಂದು ಸ್ಪಷ್ಟವಾಗಿ ತಿಳಿಯಬೇಕು.

## ಭಾಷ್ಯದಲ್ಲಿ ಪುನರುಕ್ತಿ ಇಲ್ಲ

**ಭಾವದೀಪಃ – ಉಪಸಂಹಾರ ಇತಿ ।। ತೇನ 'ಚಕಾರ' ಇತ್ಯನೇನಾಪುನರುಕ್ತಿರಿತಿ ಭಾವಃ । ಯೇಷು ಯತ್ ಇತಿ ಯಚ್ಛಬ್ದಾನ್ವಯಪ್ರತೀತೇರಾಹ – ಸೂತ್ರೇಷ್ವಿತ್ಯಾದೇರಿತಿ ।।**

ಟೀಕೆಯಲ್ಲಿ 'ಏವಂ ವಿಧಾನಿ ಇತಿ ಉಪಸಂಹಾರಃ' ಎಂದು ಹೇಳಿರುತ್ತಾರೆ. ಭಾಷ್ಯದಲ್ಲಿ 'ಏವಂ ವಿಧಾನಿ ಸೂತ್ರಾಣಿ ಕೃತ್ವಾ' ಎಂಬುದು ಹಿಂದೆ ಪ್ರಾರಂಭವಾದ ವಿಷಯವನ್ನು ಉಪಸಂಹಾರ ಮಾಡುತ್ತಿದೆ. ಹೀಗೆ ಹೇಳಿದ್ದರಿಂದ 'ಚಕಾರ ಬ್ರಹ್ಮಸೂತ್ರಾಣಿ' 'ಬ್ರಹ್ಮಸೂತ್ರಗಳನ್ನು ಮಾಡಿದರು' ಎಂಬಲ್ಲಿ ಹೇಳಿದ್ದನ್ನೇ ಇಲ್ಲಿಯೂ ಕೂಡ 'ಏವಂ ವಿಧಾನಿ ಸೂತ್ರಾಣಿ ಕೃತ್ವಾ' 'ಇಂಥ ಬ್ರಹ್ಮಸೂತ್ರಗಳನ್ನು ರಚನೆ ಮಾಡಿ' ಎಂದು ಹೇಳುತ್ತಿರುವುದರಿಂದ ಪುನರುಕ್ತಿದೋಷ ಬರುತ್ತದಲ್ಲವೇ? ಎಂಬ ಶಂಕೆಗೆ ಅವಕಾಶವಿಲ್ಲ.

'ಸೂತ್ರೇಷು ಏಷು ಯತ್ ಪ್ರಮಾಣತಶ್ಚ' ಎಂಬುದಕ್ಕೆ 'ಏವಂ ವಿಧಾನಿ' ಎಂಬ ಪದದ ಜೊತೆ ಅನ್ವಯ ಮಾಡಬೇಕು. ಯಾವ ಸೂತ್ರಗಳಿಂದ ಸಕಲ ವೇದಗಳ ಶಾಖಾರ್ಥವು ನಿರ್ಣಯವಾಗುತ್ತದೋ ಬೇರೆ ಸೂತ್ರಗಳಿಂದ ಮಾಡಲ್ಪಟ್ಟ ನಿರ್ಣಯವೂ ಕೂಡ ಯಾವ ಸೂತ್ರಗಳ ಮೂಲಕವೇ ಆಗುತ್ತವೋ, ಅಂತಹ ಬ್ರಹ್ಮಸೂತ್ರಗಳನ್ನು ರಚನೆ ಮಾಡಿ ಎಂದು ಟೀಕಾವಾಕ್ಯದ ಅಭಿಪ್ರಾಯ. ಅದನ್ನು ಸೂತ್ರೇಷು ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ.

## ಜ್ಞಾನಸಂಪಾದನೆಯಲ್ಲಿ ಸಜ್ಜನರ ತವಕ

**ಭಾವದೀಪಃ – जानन्तोपीति ।। चतुर्थगीतातात्पर्योक्तमाग्नेय वचनम् । 'पृच्छन्ति साधवो लोके तेन पृच्छसि पार्थिव' इति वाक्यशेषः ।**

ಟೀಕೆಯಲ್ಲಿ 'ಜಾನಂತೋಽಪಿ ವಿಶೇಷಾರ್ಥಜ್ಞಾನಾಯ ಸ್ಥಾಪನಾಯ ವಾ ಪೃಚ್ಛಂತಿ ಸಾಧವಃ' ಎಂಬ ಮಾತನ್ನು ಉಲ್ಲೇಖಿಸಿದ್ದಾರೆ. ಇದು ನಾಲ್ಕನೆಯ ಅಧ್ಯಾಯದ ಗೀತಾತಾತ್ಪರ್ಯದಲ್ಲಿ ಉಲ್ಲೇಖಿಸಿದ ಅಗ್ನಿ ಪುರಾಣದ ವಚನವೆಂದು ತಿಳಿಯಬೇಕು. 'ಪೃಚ್ಛಂತಿ ಸಾಧವೋ ಲೋಕೇ ತೇನ ಪೃಚ್ಛಸಿ ಪಾರ್ಥಿವ' ಎಂಬ ವಾಕ್ಯಶೇಷವನ್ನು ಪೂರಣೆ ಮಾಡಿಕೊಳ್ಳಬೇಕು. ಸಜ್ಜನರು ತಮಗೆ ತಿಳಿದ ವಿಷಯದಲ್ಲಿಯೂ ಕೂಡ ಪುನಃ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಲು ಮತ್ತು ತಮಗಿದ್ದ ಜ್ಞಾನವನ್ನು ಸ್ಪಷ್ಟಪಡಿಸಿಕೊಳ್ಳಲು ತಮ್ಮ ಹಿರಿಯರಲ್ಲಿ ಪ್ರಶ್ನೆಯನ್ನು ಕೇಳುತ್ತಾರೆ ಎಂದು ಇದರ ಅಭಿಪ್ರಾಯ.

## ಋಷಿಮುನಿಗಳು ವೇದವ್ಯಾಸರ ಬಳಿ ಜ್ಞಾನ ಪಡೆದರು

**ಭಾವದೀಪಃ – एवमिति ।। 'एवं ज्ञानं पुनः प्रापुर्देवाश्च ऋषयस्तथा'** इति तात्पर्यनिर्णयदशमाध्यायस्थवाक्य इत्यर्थः ।

'ಏವಂ ಜ್ಞಾನಂ ಪುನಃ ಪ್ರಾಪುಃ' ಎಂದಷ್ಟೇ ಹೇಳಿದ್ದಾರೆ. 'ದೇವಾಶ್ಚ ಋಷಯಸ್ತಥಾ' ಎಂಬ ವಾಕ್ಯಶೇಷವನ್ನು ಪೂರಣೆ ಮಾಡಿಕೊಳ್ಳಬೇಕು. ಇದು ಮಹಾಭಾರತ ತಾತ್ಪರ್ಯನಿರ್ಣಯದ ಹತ್ತನೆಯ ಅಧ್ಯಾಯದಲ್ಲಿರುವ ವಾಕ್ಯವಾಗಿದೆ. ವೇದವ್ಯಾಸದೇವರಿಂದ ದೇವತೆಗಳು ಹಾಗೂ ಋಷಿಗಳು ಪುನಃ ಜ್ಞಾನವನ್ನು ಪಡೆದು ಧನ್ಯರಾದರು ಎಂದು ಇದರ ಅಭಿಪ್ರಾಯ.

## ಬ್ರಹ್ಮದೇವರಿಗೆ ಅಜ್ಞಾನ, ವಿಪರೀತಜ್ಞಾನ ಸರ್ವಥಾ ಇರುವುದಿಲ್ಲ

**ಭಾವದೀಪಃ – यतः आहुरिति।।**

''उपास्यैव तु पश्यन्ति नान्यथा तु कथञ्चन ।
ऋषीन् राज्ञस्तथारभ्य प्रतिभाऽभ्यधिका क्रमात् ।
यावद् ब्रह्मा ब्रह्मणस्तु प्रायो नाप्रतिभासितम् ।
विष्णोः प्रीत्यर्थमेवास्य श्रोतव्यं प्रायशो भवेत् ।।'

इति गीतातात्पर्यत्रयोदशाध्याये आहुराचार्या इत्यर्थः ।।

ಟೀಕೆಯಲ್ಲಿ 'यथा आहुः' ಇತ್ಯಾದಿಯಾಗಿ ಗೀತಾತಾತ್ಪರ್ಯದ ಮಾತನ್ನು ಉಲ್ಲೇಖಿಸಿದ್ದಾರೆ. ಅದರ ಸಂಪೂರ್ಣ ಪ್ರಕರಣವನ್ನು ಹೀಗೆ ತಿಳಿಯಬೇಕು.

'ಉಪಾಸ್ಯೈವ ತು ಪಶ್ಯಂತಿ ನಾನ್ಯಥಾ ತು ಕಥಂಚನ।
ಋಷೀನ್ ರಾಜ್ಞಸ್ತಥಾರಭ್ಯ ಪ್ರತಿಭಾऽಭ್ಯಧಿಕಾ ಕ್ರಮಾತ್।
ಯಾವದ್ ಬ್ರಹ್ಮಾ ಬ್ರಹ್ಮಣಸ್ತು ಪ್ರಾಯೋ ನಾಪ್ರತಿಭಾಸಿತಮ್।
ವಿಷ್ಣೋಃ ಪ್ರೀತ್ಯರ್ಥಮೇವಾಸ್ಯ ಶ್ರೋತವ್ಯಂ ಪ್ರಾಯಶೋ ಭವೇತ್ ॥

ಉಳಿದವರು ತಮ್ಮ ಗುರುಗಳನ್ನು, ಋಷಿಮುನಿಗಳನ್ನು ಉಪಾಸನೆ ಮಾಡಿ ಜ್ಞಾನವನ್ನು ಪಡೆಯುತ್ತಾರೆ. ಆದರೆ ಚತುರ್ಮುಖಬ್ರಹ್ಮದೇವರಿಗೆ ವೇದಾದಿಗಳಲ್ಲಿ ಹೇಳಿದ್ದರಲ್ಲಿ ಪ್ರತಿಭಾಸವಾಗದೇ ಇರುವ ವಿಷಯ ಪ್ರಾಶಯಃ ಯಾವುದೂ ಇರುವುದಿಲ್ಲ. ಆದರೂ ಹೆಚ್ಚಿನ ವಿಷಯಗಳನ್ನು ಪರಮಾತ್ಮನ ಪ್ರೀತಿ ಸಂಪಾದನೆಗಾಗಿ ಅವನಿಂದ ಶ್ರವಣ ಮಾಡುತ್ತಾರೆ. ಈ ಪ್ರಮಾಣ ಶ್ಲೋಕವನ್ನು ಗೀತಾ ತಾತ್ಪರ್ಯದ ತ್ರಯೋದಶಾಧ್ಯಾಯದಲ್ಲಿ ಶ್ರೀಮದಾಚಾರ್ಯರು ಉಲ್ಲೇಖಿಸಿದ್ದಾರೆ.

ವಿವರಣೆ - ಟೀಕೆ - 'ಯತೋ ಬ್ರಹ್ಮಸೂತ್ರಾಣಾಂ ಮುಖ್ಯಸೂತ್ರತ್ವಮತ ಏವ ಹಿ ನಿರ್ವಿಶೇಷಿತಸೂತ್ರತ್ವಮಪ್ಯಸ್ತಿ'

ಪ್ರಶ್ನೆ - ಇಲ್ಲಿ 'ಅತಃ' ಶಬ್ದದಿಂದ ಮುಖ್ಯಸೂತ್ರತ್ವವನ್ನು ಪರಾಮರ್ಶಿಸುವುದರಿಂದ ಈ ಹೇತುವಿನಿಂದ ನಿರ್ವಿಶೇಷಿತತ್ವವನ್ನು ಸಾಧಿಸುತ್ತಿದ್ದಾರೆ ಎಂದು ತೋರುತ್ತದೆ. ಆದರೆ ಬ್ರಹ್ಮಸೂತ್ರಗಳಿಗೆ ಮುಖ್ಯಸೂತ್ರತ್ವವೇ ಇನ್ನೂ ಸಿದ್ಧವಾಗದ ಕಾರಣ ಮುಖ್ಯಸೂತ್ರತ್ವವೆಂಬ ಹೇತುವೇ ಸಂದಿಗ್ಧವಾಗಿದೆ. ಮತ್ತು ನಿರ್ವಿಶೇಷಿತತ್ವವನ್ನು ಸಾಧಿಸಲು ಹೊರಟೇ ಇಲ್ಲ.

ಅಷ್ಟೇ ಅಲ್ಲದೇ 'ಬ್ರಹ್ಮಸೂತ್ರಸ್ಯ ಚಾಪ್ಯತಃ' ಎಂಬಲ್ಲಿರುವ ಅಪಿಶಬ್ದಕ್ಕೆ 'ಬ್ರಹ್ಮಸೂತ್ರಸ್ಯಾಪಿ' ಎಂದು ಅನ್ವಯ ಮಾಡಿದರೆ ಇತರ ಸೂತ್ರಗಳಿಗೂ ನಿರ್ವಿಶೇಷಿತತ್ವವನ್ನು ಹೇಳಿದಂತಾಗುತ್ತದೆ. ಮತ್ತು ಇಲ್ಲಿರುವ ಚಶಬ್ದವೂ ವ್ಯರ್ಥವಾಗುತ್ತದೆ.

ಉತ್ತರ - ಈ ಪ್ರಶ್ನೆಗೆ ಉತ್ತರವಾಗಿ 'ಯತಃ ಬ್ರಹ್ಮಸೂತ್ರಾಣಾಂ' ಇತ್ಯಾದಿ ವಾಕ್ಯವು ಹೊರಟಿದೆ. ಈ ವಾಕ್ಯದಲ್ಲಿ ವ್ಯಾಪ್ಯವ್ಯಾಪಕಭಾವವನ್ನು ಹೀಗೆ ತಿಳಿಯಬೇಕು - ಪರ್ವತದಲ್ಲಿ ವಹ್ನಿಯು ಏಕೆ ಇದೆ? ಎಂದು ಪ್ರಶ್ನಿಸಿದರೆ ವ್ಯಾಪಕವಾದ ವಹ್ನಿಯಿದ್ದರಷ್ಟೇ ಪ್ರತ್ಯಕ್ಷಪ್ರಮಾಣಸಿದ್ಧವಾದ ಧೂಮವು ಕೂಡುತ್ತದೆ. ಈ ಅಭಿಪ್ರಾಯದಿಂದ 'ಅಗ್ನಿಮತ್ವಾದೇವ ಧೂಮವತ್ತ್ವಮ್' (ವಹ್ನಿಯಿರುವುದರಿಂದಲೇ ಧೂಮವು ಕಾಣಿಸುತ್ತದೆ) ಎಂದು ಹೇಳುತ್ತಾರೆ. ಇದರಿಂದ ವಹ್ನಿಯು ಪರ್ವತದಲ್ಲಿ ಇರಲು ಧೂಮವು ಹೇತುವೆಂದು ತಿಳಿಯುತ್ತದೆ. ಅದರಂತೆ ಪ್ರಕೃತದಲ್ಲಿಯೂ ಮುಖ್ಯಸೂತ್ರತ್ವ ಇರುವುದರಿಂದಷ್ಟೇ ನಿರ್ವಿಶೇಷಿತಸೂತ್ರತ್ವ ಬರುತ್ತದೆಂದು ಹೇಳಿದಾಗ ಮುಖ್ಯಸೂತ್ರಕ್ಕೆ

ನಿರ್ವಿಶೇಷಿತಸೂತ್ರತ್ವವು ಹೇತುವೆಂದು ತಿಳಿಯುತ್ತದೆ. ಇದರಿಂದ ಹೇತುವಿಗೆ ಅನ್ಯಥಾಸಿದ್ಧಿಯನ್ನು ಪರಿಹರಿಸಿದಂತಾಗುತ್ತದೆ. ಇದನ್ನೇ ಅವಧಾರಣಾರ್ಥಕವಾದ 'ಚ' ಶಬ್ದ ತಿಳಿಸುತ್ತಿದೆ. 'ಅಪಿ' ಶಬ್ದವು 'ನಿರ್ವಿಶೇಷಿತಸೂತ್ರತ್ವ' ಎಂಬ ಹೇತುವಿಗೆ ಅಸಿದ್ಧಿದೋಷವನ್ನು ಪರಿಹರಿಸಲು ಪ್ರಮಾಣಪ್ರಸಿದ್ಧಿಯನ್ನು ಹೇಳುತ್ತಿದೆ. ಪುರಾಣದಲ್ಲಿರುವ ಪ್ರಮಾಣವಚನ ಹೀಗಿದೆ -

**ನಿರ್ವಿಶೇಷಿತಶಬ್ದಾದ್ ವೈ ಬ್ರಹ್ಮೇತಿ ಹರಿರುಚ್ಯತೇ।**
**ಯಥಾ ಸೂತ್ರೇತಿಶಬ್ದೇನ ಬ್ರಹ್ಮಸೂತ್ರಂ ನಿಗದ್ಯತೇ॥**

ವಿಶೇಷಣವಿಲ್ಲದ ಬ್ರಹ್ಮಶಬ್ದದಿಂದ ಶ್ರೀಹರಿಯೇ ವಾಚ್ಯನಾಗುವಂತೆ ವಿಶೇಷಣವಿಲ್ಲದ ಸೂತ್ರಶಬ್ದದಿಂದ ಬ್ರಹ್ಮಸೂತ್ರವೇ ವಾಚ್ಯವಾಗುತ್ತದೆ.

ಈ ವಿಷಯದಲ್ಲಿ ವಿಶೇಷವ್ಯಾಪ್ತಿ ಇಲ್ಲದ ಕಾರಣ ಸಾಮಾನ್ಯಮುಖವ್ಯಾಪ್ತಿಯನ್ನೂ ಹೇಳುತ್ತಿದ್ದಾರೆ - 'ಯದ್ಯತ್ರ' ಇತ್ಯಾದಿ ವಾಕ್ಯದಿಂದ.

ನಿರ್ವಿಶೇಷಿತತ್ವ ಎಂಬ ಹೇತುವಿಗೆ ಅಪ್ರಯೋಜಕತ್ವಶಂಕೆಯನ್ನು ಮತ್ತು ವ್ಯಭಿಚಾರಶಂಕೆಯನ್ನು 'ಮುಖ್ಯಸ್ಯ ನಿರ್ವಿಶೇಷೇಣ' ಇತ್ಯಾದಿಯಾಗಿ ಪರಿಹರಿಸುತ್ತಾರೆ. ನಿರ್ವಿಶೇಷಿತವಾದದ್ದು ಮುಖ್ಯಸೂತ್ರವೆನ್ನಲು ವೇದ ಹಾಗೂ ವೃದ್ಧವ್ಯವಹಾರಗಳು ಪ್ರಮಾಣವಾಗಿವೆ. ಬೇರೆ ಕಾರಣಗಳನ್ನು ಶಂಕಿಸಬಾರದೆಂದು ಅಭಿಪ್ರಾಯ. 'ಮುಖ್ಯವಾದದ್ದು ನಿರ್ವಿಶೇಷಶಬ್ದದಿಂದ ವಾಚ್ಯ' ಎಂಬ ವಿಷಯದಲ್ಲಿ 'ಇತಿ ವೇದವಿದಃ ಪ್ರಾಹುಃ' ಎಂದು ವೇದವನ್ನು ಮತ್ತು ವೃದ್ಧ ವ್ಯವಹಾರವನ್ನು ಪ್ರಮಾಣವನ್ನಾಗಿ ಹೇಳಿದ್ದರಿಂದ ವಿಪಕ್ಷಪ್ರಾಮಾಣಿಕಪರಿತ್ಯಾಗವೆಂಬ ಅನಿಷ್ಟಪ್ರಸಂಗವನ್ನು ಸೂಚಿಸಿದಂತಾಯಿತು.

## ಉಳಿದೆಲ್ಲ ಸೂತ್ರಗಳು ಬ್ರಹ್ಮಸೂತ್ರಗಳ ವ್ಯಾಖ್ಯಾನ

ಪ್ರಶ್ನೆ - ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ ನಿರ್ವಿಶೇಷಣಶಬ್ದವಾಚ್ಯತ್ವವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಬ್ರಹ್ಮಸೂತ್ರ, ವೇದವ್ಯಾಸ ಎಂದು ಉಪಪದಸಹಿತವಾಗಿಯೇ ಎಲ್ಲರೂ ಹೇಳುತ್ತಾರಲ್ಲವೆ?

ಉತ್ತರ - ಇಲ್ಲಿ ನಿರ್ವಿಶೇಷಣವಾಚ್ಯತ್ವವೆಂದರೆ ಶಾಸ್ತ್ರರಚಿಸಿದ ವ್ಯಕ್ತಿಯ ಹೆಸರನ್ನು ವಿಶೇಷಣವನ್ನಾಗಿ ಹೇಳಿರಬಾರದೆಂದಷ್ಟೇ ಅರ್ಥ. ಹಿಂದೆ ಹೇಳಿದ ವ್ಯಾಖ್ಯಾನದಂತೆ ಬ್ರಹ್ಮಸೂತ್ರ ಎಂಬಲ್ಲಿರುವ ಬ್ರಹ್ಮಶಬ್ದವು ವಿಚಾರವೆಂಬರ್ಥದಲ್ಲಿದೆ. 'ವ್ಯಾಸೀಯಸೂತ್ರ' ಎಂದು 'ಪಾರಾಶರ್ಯವ್ಯಾಸ' ಎಂದು ಯಾರೂ ಹೇಳುವುದಿಲ್ಲ. ಆದರೆ ಬೇರೆ ಕಡೆ 'ಜೈಮಿನೀಯಸೂತ್ರ' 'ದ್ರೌಣೀವ್ಯಾಸ' ಎಂದು ಕರ್ತೃನಾಮಪೂರ್ವಕವಾಗಿಯೇ ನಿರ್ದೇಶಮಾಡುತ್ತಾರೆ. ಈ ಸೂಕ್ಷ್ಮವನ್ನು ಗಮನಿಸಬೇಕು.

(ಟೀಕಾ) 'ಬ್ರಹ್ಮಸೂತ್ರಮೂಲತ್ವೇನ ವ್ಯಾಖ್ಯಾನರೂಪತ್ವಾತ್' ಎಂದು ಪೂರ್ವಮೀಮಾಂಸೆಯನ್ನು, ದೈವೀಮೀಮಾಂಸೆಯನ್ನು ಮತ್ತು ಉಳಿದ ಎಲ್ಲ ಸೂತ್ರಗಳನ್ನು ಬ್ರಹ್ಮಸೂತ್ರಗಳ ವ್ಯಾಖ್ಯಾನವೆಂದು ಹೇಳಿದ್ದಾರೆ. ಸಮಾಕರ್ಷಾಧಿಕರಣದಲ್ಲಿ ಜ್ಯೋತಿರಾದಿಶಬ್ದಗಳು ಪರಮಮುಖ್ಯವೃತ್ತಿಯಿಂದ ಭಗವದ್ವಾಚಕವಾಗಿದ್ದರೂ ಅವಾಂತರಮುಖ್ಯವೃತ್ತಿಯಿಂದ ಕರ್ಮಾದಿವಾಚಕಗಳೂ ಆಗಿವೆಯೆಂದು ಸಮರ್ಥಿಸುತ್ತಾರೆ. ಈ ಅಧಿಕರಣದಲ್ಲಿ ಹೇಳಿದ್ದನ್ನೇ ಸಮಗ್ರಪೂರ್ವಮೀಮಾಂಸೆಯು ಪ್ರತಿಪಾದಿಸುತ್ತಿದೆಯೆಂದು ತಿಳಿಯಬೇಕು. ಅವಾಗ ಪೂರ್ವಮೀಮಾಂಸೆಯು ಬ್ರಹ್ಮಸೂತ್ರಗಳ ವ್ಯಾಖ್ಯಾನವಾಗುತ್ತದೆ. ಅದರಂತೆ 'ಇಯದಾಮನನಾತ್' ಎಂಬ ಸೂತ್ರದಲ್ಲಿ ದೇವತೆಗಳ ವಿಚಾರಮಾಡಿದ್ದಾರೆ. ಇದರ ವಿವರಣೆಯನ್ನೇ ದೈವೀಮೀಮಾಂಸೆಯು ಮಾಡುತ್ತಿದೆ. ಇನ್ನು ಜ್ಯೋತಿರುಪಕ್ರಮಾಧಿಕರಣದಲ್ಲಿ ಸ್ವರ, ವರ್ಣ, ಪದಾದಿಗಳ ಸಮನ್ವಯವನ್ನು ಮಾಡಲಾಗಿದೆ. ಅದರ ವಿವರಣೆಯನ್ನೇ ವ್ಯಾಕರಣಸೂತ್ರಗಳು ಮಾಡುತ್ತಿವೆ. ಹೀಗೆ ಸಕಲಸೂತ್ರಗಳೂ ಬ್ರಹ್ಮಸೂತ್ರಗಳ ವ್ಯಾಖ್ಯಾನಗಳೇ ಆಗಿವೆ. ಶಬ್ದಜಾತಸ್ಯ ಎಂಬಲ್ಲಿರುವ ಷಷ್ಠಿಯು ಕರ್ತೃರ್ಥದಲ್ಲಿದೆ ಹೊರತು ಕರ್ಮಾರ್ಥದಲ್ಲಲ್ಲ. ಸಕಲಶಬ್ದಜಾತಗಳೇ ಮಾಡುವ ನಿರ್ಣಯ ಎಂದರ್ಥವನ್ನು ತಿಳಿಯಬೇಕು ಹೊರತು. ಶಬ್ದಜಾತಗಳಿಗೆ ಮಾಡುವ ನಿರ್ಣಯ ಎಂದು ತಿಳಿಯಬಾರದು. ಹೀಗೆ ಹೇಳಿದ್ದರಿಂದ ಪೂರ್ವಮೀಮಾಂಸೆಯಿಂದ ಗತಾರ್ಥತ್ವವನ್ನು ಶಂಕಿಸಿ ಕರ್ಮಕಾಂಡ ಹಾಗೂ ಬ್ರಹ್ಮಕಾಂಡ ಎಂಬ ಭೇದದಿಂದ ಪರಿಹಾರ ನೀಡುವ ಕೆಲವರ ವಾದವು ನಿರಸ್ತವಾಯಿತು.

ನಿರ್ವಿಶೇಷಿತಸೂತ್ರತ್ವವು ಹೇತುವೆಂದು ತಿಳಿಯುತ್ತದೆ. ಇದರಿಂದ ಹೇತುವಿಗೆ ಅನ್ಯಥಾಸಿದ್ಧಿಯನ್ನು ಪರಿಹರಿಸಿದಂತಾಗುತ್ತದೆ. ಇದನ್ನೇ ಅವಧಾರಣಾರ್ಥಕವಾದ 'ಚ' ಶಬ್ದ ತಿಳಿಸುತ್ತಿದೆ. 'ಅಪಿ' ಶಬ್ದವು 'ನಿರ್ವಿಶೇಷಿತಸೂತ್ರತ್ವ' ಎಂಬ ಹೇತುವಿಗೆ ಅಸಿದ್ಧಿದೋಷವನ್ನು ಪರಿಹರಿಸಲು ಪ್ರಮಾಣಪ್ರಸಿದ್ಧಿಯನ್ನು ಹೇಳುತ್ತಿದೆ. ಪುರಾಣದಲ್ಲಿರುವ ಪ್ರಮಾಣವಚನ ಹೀಗಿದೆ -

ನಿರ್ವಿಶೇಷಿತಶಬ್ದಾದ್ ವೈ ಬ್ರಹ್ಮೇತಿ ಹರಿರುಚ್ಯತೇ।
ಯಥಾ ಸೂತ್ರೇತಿಶಬ್ದೇನ ಬ್ರಹ್ಮಸೂತ್ರಂ ನಿಗದ್ಯತೇ॥

ವಿಶೇಷಣವಿಲ್ಲದ ಬ್ರಹ್ಮಶಬ್ದದಿಂದ ಶ್ರೀಹರಿಯೇ ವಾಚ್ಯನಾಗುವಂತೆ ವಿಶೇಷಣವಿಲ್ಲದ ಸೂತ್ರಶಬ್ದದಿಂದ ಬ್ರಹ್ಮಸೂತ್ರವೇ ವಾಚ್ಯವಾಗುತ್ತದೆ.

ಈ ವಿಷಯದಲ್ಲಿ ವಿಶೇಷವ್ಯಾಪ್ತಿ ಇಲ್ಲದ ಕಾರಣ ಸಾಮಾನ್ಯಮುಖವ್ಯಾಪ್ತಿಯನ್ನೂ ಹೇಳುತ್ತಿದ್ದಾರೆ - 'ಯದ್ಯತ್ರ' ಇತ್ಯಾದಿ ವಾಕ್ಯದಿಂದ.

ನಿರ್ವಿಶೇಷಿತತ್ವ ಎಂಬ ಹೇತುವಿಗೆ ಅಪ್ರಯೋಜಕತ್ವಶಂಕೆಯನ್ನು ಮತ್ತು ವ್ಯಭಿಚಾರಶಂಕೆಯನ್ನು 'ಮುಖ್ಯಸ್ಯ ನಿರ್ವಿಶೇಷೇಣ' ಇತ್ಯಾದಿಯಾಗಿ ಪರಿಹರಿಸುತ್ತಾರೆ. ನಿರ್ವಿಶೇಷಿತವಾದದ್ದು ಮುಖ್ಯಸೂತ್ರವೆನ್ನಲು ವೇದ ಹಾಗೂ ವೃದ್ಧವ್ಯವಹಾರಗಳು ಪ್ರಮಾಣವಾಗಿವೆ. ಬೇರೆ ಕಾರಣಗಳನ್ನು ಶಂಕಿಸಬಾರದೆಂದು ಅಭಿಪ್ರಾಯ. 'ಮುಖ್ಯವಾದದ್ದು ನಿರ್ವಿಶೇಷಶಬ್ದದಿಂದ ವಾಚ್ಯ' ಎಂಬ ವಿಷಯದಲ್ಲಿ 'ಇತಿ ವೇದವಿದಃ ಪ್ರಾಹುಃ' ಎಂದು ವೇದವನ್ನು ಮತ್ತು ವೃದ್ಧ ವ್ಯವಹಾರವನ್ನು ಪ್ರಮಾಣವನ್ನಾಗಿ ಹೇಳಿದ್ದರಿಂದ ವಿಪಕ್ಷಪ್ರಾಮಾಣಿಕಪರಿತ್ಯಾಗವೆಂಬ ಅನಿಷ್ಟಪ್ರಸಂಗವನ್ನು ಸೂಚಿಸಿದಂತಾಯಿತು.

## ಉಳಿದೆಲ್ಲ ಸೂತ್ರಗಳು ಬ್ರಹ್ಮಸೂತ್ರಗಳ ವ್ಯಾಖ್ಯಾನ

ಪ್ರಶ್ನೆ - ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ ನಿರ್ವಿಶೇಷಣಶಬ್ದವಾಚ್ಯತ್ವವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಬ್ರಹ್ಮಸೂತ್ರ, ವೇದವ್ಯಾಸ ಎಂದು ಉಪಪದಸಹಿತವಾಗಿಯೇ ಎಲ್ಲರೂ ಹೇಳುತ್ತಾರಲ್ಲವೆ?

ಉತ್ತರ - ಇಲ್ಲಿ ನಿರ್ವಿಶೇಷಣವಾಚ್ಯತ್ವವೆಂದರೆ ಶಾಸ್ತ್ರರಚಿಸಿದ ವ್ಯಕ್ತಿಯ ಹೆಸರನ್ನು ವಿಶೇಷಣವನ್ನಾಗಿ ಹೇಳಿರಬಾರದೆಂದಷ್ಟೇ ಅರ್ಥ. ಹಿಂದೆ ಹೇಳಿದ ವ್ಯಾಖ್ಯಾನದಂತೆ ಬ್ರಹ್ಮಸೂತ್ರ ಎಂಬಲ್ಲಿರುವ ಬ್ರಹ್ಮಶಬ್ದವು ವಿಚಾರವೆಂಬರ್ಥದಲ್ಲಿದೆ. 'ವ್ಯಾಸೀಯಸೂತ್ರ' ಎಂದು 'ಪಾರಾಶರ್ಯವ್ಯಾಸ' ಎಂದು ಯಾರೂ ಹೇಳುವುದಿಲ್ಲ. ಆದರೆ ಬೇರೆ ಕಡೆ 'ಜೈಮಿನೀಯಸೂತ್ರ' 'ದ್ರೌಣೀವ್ಯಾಸ' ಎಂದು ಕರ್ತೃನಾಮಪೂರ್ವಕವಾಗಿಯೇ ನಿರ್ದೇಶಮಾಡುತ್ತಾರೆ. ಈ ಸೂಕ್ಷ್ಮವನ್ನು ಗಮನಿಸಬೇಕು.

(ಟೀಕಾ) 'ಬ್ರಹ್ಮಸೂತ್ರಮೂಲತ್ವೇನ ವ್ಯಾಖ್ಯಾನರೂಪತ್ವಾತ್' ಎಂದು ಪೂರ್ವಮೀಮಾಂಸೆಯನ್ನು, ದೈವೀಮೀಮಾಂಸೆಯನ್ನು ಮತ್ತು ಉಳಿದ ಎಲ್ಲ ಸೂತ್ರಗಳನ್ನು ಬ್ರಹ್ಮಸೂತ್ರಗಳ ವ್ಯಾಖ್ಯಾನವೆಂದು ಹೇಳಿದ್ದಾರೆ. ಸಮಾಕರ್ಷಾಧಿಕರಣದಲ್ಲಿ ಜ್ಯೋತಿರಾದಿಶಬ್ದಗಳು ಪರಮಮುಖ್ಯವೃತ್ತಿಯಿಂದ ಭಗವದ್ವಾಚಕವಾಗಿದ್ದರೂ ಅವಾಂತರಮುಖ್ಯವೃತ್ತಿಯಿಂದ ಕರ್ಮಾದಿವಾಚಕಗಳೂ ಆಗಿವೆಯೆಂದು ಸಮರ್ಥಿಸುತ್ತಾರೆ. ಈ ಅಧಿಕರಣದಲ್ಲಿ ಹೇಳಿದ್ದನ್ನೇ ಸಮಗ್ರಪೂರ್ವಮೀಮಾಂಸೆಯು ಪ್ರತಿಪಾದಿಸುತ್ತಿದೆಯೆಂದು ತಿಳಿಯಬೇಕು. ಅವಾಗ ಪೂರ್ವಮೀಮಾಂಸೆಯು ಬ್ರಹ್ಮಸೂತ್ರಗಳ ವ್ಯಾಖ್ಯಾನವಾಗುತ್ತದೆ. ಅದರಂತೆ 'ಇಯದಾಮನನಾತ್' ಎಂಬ ಸೂತ್ರದಲ್ಲಿ ದೇವತೆಗಳ ವಿಚಾರಮಾಡಿದ್ದಾರೆ. ಇದರ ವಿವರಣೆಯನ್ನೇ ದೈವೀಮೀಮಾಂಸೆಯು ಮಾಡುತ್ತಿದೆ. ಇನ್ನು ಜ್ಯೋತಿರುಪಕ್ರಮಾಧಿಕರಣದಲ್ಲಿ ಸ್ವರ, ವರ್ಣ, ಪದಾದಿಗಳ ಸಮನ್ವಯವನ್ನು ಮಾಡಲಾಗಿದೆ. ಅದರ ವಿವರಣೆಯನ್ನೇ ವ್ಯಾಕರಣಸೂತ್ರಗಳು ಮಾಡುತ್ತಿವೆ. ಹೀಗೆ ಸಕಲಸೂತ್ರಗಳೂ ಬ್ರಹ್ಮಸೂತ್ರಗಳ ವ್ಯಾಖ್ಯಾನಗಳೇ ಆಗಿವೆ. ಶಬ್ದಜಾತಸ್ಯ ಎಂಬಲ್ಲಿರುವ ಷಷ್ಠಿಯು ಕರ್ತೃರ್ಥದಲ್ಲಿದೆ ಹೊರತು ಕರ್ಮಾರ್ಥದಲ್ಲಲ್ಲ. ಸಕಲಶಬ್ದಜಾತಗಳೇ ಮಾಡುವ ನಿರ್ಣಯ ಎಂದರ್ಥವನ್ನು ತಿಳಿಯಬೇಕು ಹೊರತು. ಶಬ್ದಜಾತಗಳಿಗೆ ಮಾಡುವ ನಿರ್ಣಯ ಎಂದು ತಿಳಿಯಬಾರದು. ಹೀಗೆ ಹೇಳಿದ್ದರಿಂದ ಪೂರ್ವಮೀಮಾಂಸೆಯಿಂದ ಗತಾರ್ಥತ್ವವನ್ನು ಶಂಕಿಸಿ ಕರ್ಮಕಾಂಡ ಹಾಗೂ ಬ್ರಹ್ಮಕಾಂಡ ಎಂಬ ಭೇದದಿಂದ ಪರಿಹಾರ ನೀಡುವ ಕೆಲವರ ವಾದವು ನಿರಸ್ತವಾಯಿತು.

## ಬ್ರಹ್ಮದೇವರ ಜ್ಞಾನ ಎಂದೂ ತಿರೋಹಿತವಾಗುವುದಿಲ್ಲ

(ಟೀಕೆ -ಬ್ರಹ್ಮರುದ್ರಾದಿದೇವೇಷು ಜ್ಞಾನಂ ಸಂಸ್ಥಾಪ್ಯ---------)

ಬ್ರಹ್ಮಾದಿಗಳಲ್ಲಿರುವ ಜ್ಞಾನವು ತಿರೋಹಿತವೇ ಆಗಿಲ್ಲ. ಹೀಗಿರುವಾಗ ಬ್ರಹ್ಮಾದಿಗಳಲ್ಲಿಯೂ ಜ್ಞಾನದ ಸ್ಥಾಪನೆ ಏಕೆ? ಎಂಬ ಪ್ರಶ್ನೆ ಬಂದರೆ, ಬ್ರಹ್ಮಾದಿಗಳಿಗೆ ಮೊದಲೇ ಯಥಾರ್ಥಜ್ಞಾನವಿತ್ತು. ಆದನ್ನು ಮತ್ತಷ್ಟು ದೃಢಗೊಳಿಸಿದ ಎಂದರ್ಥ.

ಇಲ್ಲಿ ಕೆಲವರು ಹೀಗೆ ಹೇಳುತ್ತಾರೆ - ಬ್ರಹ್ಮದೇವರ ಜ್ಞಾನವನ್ನಷ್ಟೇ ದೃಢಗೊಳಿಸಿದ. ರುದ್ರಾದಿಗಳಿಗೆಲ್ಲ ಮೊದಲಿಲ್ಲದ ಹೊಸ ಜ್ಞಾನವನ್ನೇ ನೀಡಿದ ಎಂದು. ಆದರೆ ವಸ್ತುತಃ ಬ್ರಹ್ಮದೇವರಿಗೂ ಅಪ್ರಾಪ್ತಜ್ಞಾನವನ್ನು ನೀಡಿದನೆಂದು ಹೇಳಬಹುದು. ಏಕೆಂದರೆ 'ಬ್ರಹ್ಮಾದೀನಾಮಪ್ಯಪ್ರಾಪ್ತಜ್ಞಾನಮುತ್ಪದ್ಯತೇ' 'ಬ್ರಹ್ಮಾದಿಗಳಿಗೂ ಅಪ್ರಾಪ್ತಜ್ಞಾನ ಹುಟ್ಟುತ್ತದೆ'ಂದು ಈಶಾವಾಸ್ಯೋಪನಿಷತ್ತಿನ ಭಾಷ್ಯ-ಟೀಕೆಯಲ್ಲಿ ಹೇಳಿದ್ದಾರೆ. ಭಗವಂತನ ವಿಷಯದಲ್ಲಿ ಹೊಸಹೊಸಜ್ಞಾನವನ್ನು ಬ್ರಹ್ಮದೇವರು ನಿರಂತರವಾಗಿ ಪಡೆಯುತ್ತಲೇ ಇರುತ್ತಾರೆ.

ಪ್ರಶ್ನೆ - 'ಏವಂ ಜ್ಞಾನಂ ಪುನಃ ಪ್ರಾಪುರ್ದೇವಾಶ್ಚ ಋಷಯಸ್ತಥಾ' ಎಂದು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪುನಃಪದವನ್ನು ಹೇಳಿದ್ದರಿಂದ ದೇವತೆಗಳಿಗೂ ತಿರೋಹಿತವಾದ ಜ್ಞಾನವು ಲಭಿಸಿತ್ತೆಂದು ತಿಳಿಯುತ್ತದೆ. ಆದ್ದರಿಂದ ಬ್ರಹ್ಮದೇವರಿಗೂ ಸಹ ತಿರೋಹಿತಜ್ಞಾನದ ಪ್ರಾಪ್ತಿಯನ್ನು ಹೇಳಬೇಕಲ್ಲವೇ?

ಉತ್ತರ - 'ಏವಂ ಜ್ಞಾನಂ ಪುನಃ' ಎಂಬ ಮಾತಿಗೆ ಬ್ರಹ್ಮದೇವರ ವಿಷಯದಲ್ಲಿ ಮೊದಲೇ ಇರುವ ಜ್ಞಾನದಲ್ಲಿ ವಿಶೇಷದಾರ್ಢ್ಯ ತಂದುಕೊಟ್ಟರೆಂದು ಅರ್ಥೈಸಬೇಕು. ಉಳಿದ ದೇವತೆಗಳ ವಿಷಯದಲ್ಲಿ ತಿರೋಹಿತವಾದ ಜ್ಞಾನದ ಪ್ರಾಪ್ತಿಯಾಯಿತೆಂದು ಅರ್ಥೈಸಬೇಕು. ಏಕೆಂದರೆ ಆಚಾರ್ಯರು ಗೀತಾತಾತ್ಪರ್ಯದಲ್ಲಿ ಬ್ರಹ್ಮದೇವರನ್ನು ಬಿಟ್ಟು ಉಳಿದ ದೇವತೆಗಳಿಗಷ್ಟೇ ತಿರೋಹಿತ ಜ್ಞಾನದ ಪ್ರಾಪ್ತಿಯನ್ನು ಹೇಳಿದ್ದಾರೆ.

'ಉಪಾಸ್ಯೈವ ತು ಪಶ್ಯಂತಿ ನಾನ್ಯಥಾ ತು ಕಥಂಚನ।
ಋಷೀನ್ ರಾಜ್ಞಸ್ತಥಾರಭ್ಯ ಪ್ರತಿಭಾऽಭ್ಯಧಿಕಾಃ ಕ್ರಮಾತ್।
ಯಾವದ್ ಬ್ರಹ್ಮಾ ಬ್ರಹ್ಮಣಸ್ತು ಪ್ರಾಯೋ ನಾಪ್ರತಿಭಾಸಿತಮ್॥''

ಶ್ರೀ ಮಂತ್ರಾಲಯಪ್ರಭುವಿರಚಿತ - ಭಾವದೀಪ

ಗೀತಾತಾತ್ಪರ್ಯದಲ್ಲಿ ಉದಾಹರಿಸಿದ ಇದೇ ಶ್ಲೋಕದಲ್ಲಿ 'ಪ್ರಾಯಃ' ಎಂಬ ಶಬ್ದವಿದೆ. ಇದರಿಂದ ಬ್ರಹ್ಮದೇವರಿಗೂ ಸಹ ಕೆಲವೊಮ್ಮೆ ಜ್ಞಾನದ ತಿರೋಧಾನವಿದೆಯೆಂದು ತಿಳಿಯುತ್ತದೆ. ಮತ್ತು ಭಾಗವತ ದ್ವಿತೀಯಸ್ಕಂಧದಲ್ಲಿ 'ಏವಂ ಪುರಾ ಧಾರಣಯಾತ್ಮಯೋನಿಃ ನಷ್ಟಾಂ ಸ್ಮೃತಿಂ ಪ್ರತ್ಯವರುಹ್ಯ ತುಷ್ಯನ್' ಎಂದು ನಷ್ಟವಾದ ಸ್ಮೃತಿಯನ್ನು ಹೊಂದಿದರೆಂದು ಹೇಳಲಾಗಿದೆ. ಮತ್ತು 'ಅಪಾಶ್ರಿತಃ ಕಂಜಮು ಲೋಕತಂತ್ರಂ ನಾತ್ಮಾನಮದ್ಧಾವಿಧದಾದಿದೇವಃ' ಎಂದು ತೃತೀಯಸ್ಕಂಧದಲ್ಲಿ ಪರಮಾತ್ಮನನ್ನು ತಿಳಿಯಲಿಲ್ಲವೆಂದು ಅಜ್ಞಾನವನ್ನು ಹೇಳಿದ್ದಾರೆ. ಇದರಿಂದ ಬ್ರಹ್ಮದೇವರಿಗೂ ಜ್ಞಾನದ ತಿರೋಧಾನವಿದೆಯೆಂದು ತಿಳಿಯುವಾಗ ಬ್ರಹ್ಮದೇವರನ್ನು ಬಿಟ್ಟು ಉಳಿದ ದೇವತೆಗಳಲ್ಲಷ್ಟೇ ಜ್ಞಾನದ ತಿರೋಧಾನವೆಂದು ಹೇಗೆ ಹೇಳಿದಿರಿ.

ಉತ್ತರ - ಬ್ರಹ್ಮದೇವರಿಗೆ ಯಾವುದೇ ಕಾಲದಲ್ಲಿಯೂ ಜ್ಞಾನದ ತಿರೋಧಾನವಿಲ್ಲ. ಏಕೆಂದರೆ 'ಸೂರ್ಯಕ್ಷೋಽಭವತ್ ಕ್ಷೋಭಮಾತ್ರಕಂ ನೈವಾಜ್ಞಾನಂ ಯಥಾ ಸೂರ್ಯೇ ತಮೋ ನಾಸ್ತಿ ಕಥಂಚನ' ಎಂದು ಏಕಾದಶತಾತ್ಪರ್ಯದಲ್ಲಿ ಹೇಳಿದಂತೆ ಮಧ್ಯಾಹ್ನಕಾಲದ ಸೂರ್ಯನಲ್ಲಿ ಅಲ್ಪವಾದ ಚಲನೆಯಿದ್ದರೂ ತಮಸ್ಸು ಬರಲು ಹೇಗೆ ಸಾಧ್ಯವೇ ಇಲ್ಲವೋ ಆದರಂತೆ ಬ್ರಹ್ಮದೇವರಿಗೆ ಅಲ್ಪವಿಧವಾದ ಕ್ಷೋಭೆಯಿದ್ದರೂ ಅಜ್ಞಾನ ಬರಲು ಸಾಧ್ಯವೇ ಇಲ್ಲ. ಆ ಕ್ಷೋಭೆಯಾದರೂ ಸಹ ಕೇವಲ ವಿಷ್ಣುಪ್ರೀತಿಗಾಗಿ. ಅಂದರೆ ವಸ್ತುತಃ ಬ್ರಹ್ಮದೇವರಿಗೆ ಅಜ್ಞಾನವಿಲ್ಲ. ಆದರೆ ಕೆಲವು ಕ್ಷಣಗಳ ಕಾಲ ಅಜ್ಞಾನವಿರುವಂತೆ ನಟನೆ ಮಾಡುತ್ತಾರೆ. ಈ ನಟನೆಯು ವಿಷ್ಣುಪ್ರೀತಿಗಾಗಷ್ಟೇ ಹೊರತು ಅಸಾಮರ್ಥ್ಯದಿಂದಲ್ಲ.

''ಅಜ್ಞಾನಂ ಚ ಚತುರ್ವಾರಂ ದ್ವಿವಾರಂ ಭಯಮೇವ ಚ।
ಶೋಕೋಪಿ ತಾವನ್ನಾನ್ಯತ್ರ ಕದಾಚಿತ್ ಬ್ರಹ್ಮಣೋ ಭವೇತ್ ॥''

ಕೆಲವು ಕ್ಷಣದಲ್ಲಷ್ಟೇ ಇರುವ ಅಜ್ಞಾನ ಭಯ ಶೋಕ ಮೊದಲಾದವುಗಳು ಭಗವತ್ಪ್ರೀತಿಯ ಔನ್ನತ್ಯಕ್ಕಾಗಿ ಎಂದು ಷಷ್ಠಸ್ಕಂಧದ ತಾತ್ಪರ್ಯದಲ್ಲಿ ನಿರ್ಣಯಿಸಿದ್ದಾರೆ. (ಅಜ್ಞಾನಾದಿಗಳಿಗೆ ಅಭಿಮಾನಿ ದೇವತೆ ದುರ್ಗಾರೂಪಿಯಾದ ಲಕ್ಷ್ಮಿ. ಅವಳಿಗೂ ಗೌರವ ನೀಡುವುದಕ್ಕಾಗಿ ಅಜ್ಞಾನಾದಿಗಳನ್ನು ಕೆಲವು ಕ್ಷಣಗಳ ಕಾಲ ತಮ್ಮಲ್ಲಿರುವಂತೆ

ನಟಿಸುತ್ತಾರೆ.) ಶ್ರವಣಾದಿಗಳನ್ನೂ ಸಹ ವಿಷ್ಣುಪ್ರೀತಿಗಾಗಿಯೇ ನಡೆಸುತ್ತಾರೆ. 'ವಿಷ್ಣುಪ್ರೀತ್ಯರ್ಥಮೇವಾಸ್ಯ ಶ್ರೋತವ್ಯಂ ಪ್ರಾಯಶೋ ಭವೇತ್' (ಗೀತಾತಾತ್ಪರ್ಯ).

ವಸ್ತುತಃ ಬ್ರಹ್ಮದೇವರನ್ನು ಬಿಟ್ಟು ಉಳಿದದೇವತೆಗಳಿಗೂ ಹಿಂದೆ ಹೇಳಿದ ಪ್ರಕಾರ ಜ್ಞಾನತಿರೋಧಾನವನ್ನು ಹೇಳಲಾಗದು. ಗೌತಮರ ಶಾಪವಾಗಲೀ ಕಾಲಪ್ರಭಾವವಾಗಲೀ ದೇವಲೋಕದಲ್ಲಿ ಬರಲು ಸಾಧ್ಯವಿಲ್ಲ. ಆದರೆ ಬ್ರಹ್ಮವರದಿಂದ ದೃಪ್ತರಾದ ಕಲಿ ಮೊದಲಾದ ದೈತ್ಯರ ಆವೇಶದಿಂದ ಜ್ಞಾನವು ತಿರೋಧಾನವಾಗಬಹುದು. ದೈತ್ಯಾವೇಶವು ಹೋದಾಗ ಪುನಃ ಜ್ಞಾನದ ಪ್ರಾಪ್ತಿಯಾಗಬಹುದು. ಇದನ್ನೇ ತಾತ್ಪರ್ಯನಿರ್ಣಯದಲ್ಲಿ ಆಚಾರ್ಯರು ಹೇಳಿದ್ದಾರೆ.

''ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ ನಿಬಾಧತೇಽಸ್ಮಾನ್ ಸಕಲಾ ಪ್ರಜಾಶ್ಚ।
ಅಜ್ಞಾನಮಿಥ್ಯಾಮತಿರೂಪತೋಧಿಸೌ ಪ್ರವಿಶ್ಯ ಸಜ್ಜ್ಞಾನವಿರುದ್ಧರೂಪಃ ॥'

(೧೦/೩೬)

(ಯಥಾರ್ಥಜ್ಞಾನಕ್ಕೆ ವಿರುದ್ಧರೂಪನಾದ ಕಲಿಯು ಬ್ರಹ್ಮವರದಿಂದ ದೃಪ್ತನಾಗಿ ಅಜ್ಞಾನ ಹಾಗೂ ಮಿಥ್ಯಾಜ್ಞಾನಗಳಿಂದ ನಮ್ಮೆಲ್ಲ ಪ್ರಜೆಗಳನ್ನು ಈಗ ಪ್ರವೇಶಮಾಡಿ ಪೀಡಿಸುತ್ತಿದ್ದಾನೆ.

''ಅಸೌ ಗಿರೀಶಾದಿಮನೋನುಶಾಯೀ ಕಲಿರ್ಮಮಾರಾಶು ಸುವಾಙ್ಮಯೈಃ ಶರೈಃ।
ನಿಕೃಂತಶೀರ್ಷೋ ಭಗವನ್ಮುಖೇರಿತೈಃ ಸುರಾಶ್ಚ ಸಜ್ಜ್ಞಾನಸುಧಾರಸಂ ಪಪುಃ''

(೧೦/೬೦)

(ರುದ್ರಾದಿಗಳ ಮನಸ್ಸಿನಲ್ಲಿ ಕಲಿಯು ಮನೆಮಾಡಿದ್ದ. ಭಗವಂತನ ಮುಖದಿಂದ ಹೊರಹೊಮ್ಮಿದ ವಾಙ್ಮಯಬಾಣಗಳಿಂದ ಇವನ ತಲೆಯು ಛಿನ್ನವಾಗಿ ಮರಣಹೊಂದಿದ. ಆವಾಗ ದೇವತೆಗಳು ಒಳ್ಳೆಯ ಜ್ಞಾನಾಮೃತರಸವನ್ನು ಪಾನಮಾಡಿದರು.) ಈ ಪ್ರಮಾಣದ ಆಧಾರೆದಿಂದ ದೇವತೆಗಳಿಗೆ ಜ್ಞಾನದ ತಿರೋಧಾನವು ಕಲ್ಯಾವೇಶದಿಂದ ಉಂಟಾಗಬಹುದೆಂದು ತಿಳಿಯುತ್ತದೆ. ಇದಕ್ಕನುಸಾರಿಯಾಗಿಯೇ ಹಿಂದಿನ ಮಾತುಗಳನ್ನು ವ್ಯಾಖ್ಯಾನಿಸಬೇಕು. ದ್ವಾಪರಕಾಲದ ಪ್ರಭಾವ ಹಾಗೂ ಗೌತಮರ ಶಾಪದ ಪ್ರಭಾವವು ಭೂಲೋಕದಲ್ಲಿರುವ ಸಜ್ಜನರ ವಿಷಯದಲ್ಲಷ್ಟೇ ಎಂದು ಭಾವಿಸಬೇಕು.

# ಪ್ರಥಮಸೂತ್ರ ವ್ಯಾಖ್ಯಾನ

**ಬ್ರಹ್ಮಸೂತ್ರಭಾಷ್ಯಮ್ –**

**।। ॐ अथातो ब्रह्मजिज्ञासा ।।१।।**

**'अथ'शब्दो मङ्गलार्थोऽधिकारानन्तर्यार्थश्च । अतःशब्दो हेत्वर्थः ।**

ಅನುವಾದ - ಅತಃಶಬ್ದದ ಶ್ರವಣದಿಂದ ಮತ್ತು ಉಚ್ಚಾರಣೆಯಿಂದ ಮಂಗಲವು ಉಂಟಾಗುತ್ತದೆ. ಆದ್ದರಿಂದ ಸೂತ್ರಗಳ ಪ್ರಾರಂಭದಲ್ಲಿ ಅಥಶಬ್ದವನ್ನು ಪ್ರಯೋಗಿಸಲಾಗಿದೆ. ಇದಕ್ಕೆ ಅನಂತರ ಎಂದರ್ಥ. 'ಅತಃ' ಎಂಬ ಶಬ್ದವು ಪ್ರಯೋಜನ ಎಂಬರ್ಥವನ್ನು ತಿಳಿಸುತ್ತಿದೆ.

ಪ್ರತಿಪದಾರ್ಥ - ಯಾವುದೇ ಗ್ರಂಥದ ಪ್ರಾರಂಭದಲ್ಲಿ ಮಂಗಲವನ್ನು ಅವಶ್ಯ ಆಚರಿಸಬೇಕು. ಅದಕ್ಕೋಸ್ಕರ ಸೂತ್ರಕಾರರು ಮಂಗಲವನ್ನುಂಟು-ಮಾಡುವ ಅಥಶಬ್ದವನ್ನು ಮೊದಲು ಉಚ್ಚರಿಸುತ್ತಿದ್ದಾರೆ. ಅಥಶಬ್ದಃ = 'ಅಥ' ಎಂಬ ಶಬ್ದವು ಮಂಗಲಾರ್ಥಃ = ಮಂಗಲ ಎಂಬ ಅರ್ಥವುಳ್ಳದ್ದು, ಹಾಗೂ ಅಧಿಕಾರಾನಂತರ್ಯಾರ್ಥಶ್ಚ = ಅಧಿಕಾರವನ್ನು ಪಡೆದ ಮೇಲೆ ಎಂಬರ್ಥವುಳ್ಳದ್ದು. ಅತಃಶಬ್ದಃ = ಅತ ಎಂಬ ಪದವು, ಹೇತ್ವರ್ಥಃ = ಮೋಕ್ಷವೆಂಬ ಪ್ರಯೋಜನವಿರುವುದರಿಂದ ಎಂಬರ್ಥ.

## ಅನುಬಂಧಚತುಷ್ಟಯವಿಲ್ಲದ ಕಾರಣ ಬ್ರಹ್ಮಜಿಜ್ಞಾಸೆ ಮಾಡಬೇಕಿಲ್ಲ!!

**तत्वप्रकाशिका – तत्रादिसूत्रस्येदं सङ्गत्यादि । अत्र ब्रह्मजिज्ञासायाः कर्तव्यत्वसमर्थनादस्ति शास्त्रसङ्गतिः ।**

ಪ್ರಥಮಸೂತ್ರಕ್ಕೆ ಸಂಬಂಧಪಟ್ಟ ಸಂಗತಿ ಮೊದಲಾದವು ಹೀಗಿವೆ - ಈ ಸೂತ್ರದಲ್ಲಿ ಬ್ರಹ್ಮಜಿಜ್ಞಾಸೆಯು ಅವಶ್ಯವಾಗಿ ಕರ್ತವ್ಯವಾಗಿದೆ ಎಂದು ಸಮರ್ಥಿಸಲಾಗಿದೆ. ಆದ್ದರಿಂದ ಈ ಸೂತ್ರಕ್ಕೆ ಶಾಸ್ತ್ರಸಂಗತಿಯಿರುತ್ತದೆ.

**तत्वप्रकाशिका – अन्यथा शास्त्रस्यानारम्भणीयत्वप्रसङ्गादेतत् समर्थनीयम् ।**

ಒಂದು ವೇಳೆ ಬ್ರಹ್ಮಜಿಜ್ಞಾಸೆಯು ಕರ್ತವ್ಯವಾಗಿದೆ ಎಂದು ಈ ಸೂತ್ರದಲ್ಲಿ ಸಮರ್ಥನೆ ಮಾಡದಿದ್ದರೆ, ಶಾಸ್ತ್ರವು ಆನಾರಂಭಣೀಯವಾಗುವ ಪ್ರಸಂಗ ಬರುತ್ತದೆ. ಅದಕ್ಕೋಸ್ಕರ ಬ್ರಹ್ಮಜಿಜ್ಞಾಸೆಗೆ ಕರ್ತವ್ಯತ್ವವನ್ನು ಸಮರ್ಥನೆ ಮಾಡಲೇ ಬೇಕು.

**तत्वप्रकाशिका – अध्यायापादसङ्गतिस्त्वानन्दमयाधिकरणमारभ्यैव गवेषणीया । ततोऽर्वाक्तनानामधिकरणानामध्यायपादपीठत्वात् ।**

ಅಧ್ಯಾಯಸಂಗತಿ ಪಾದಸಂಗತಿಯನ್ನು ಈ ಸೂತ್ರಕ್ಕೆ ತೋರಿಸುವ ಆವಶ್ಯಕತೆಯಿಲ್ಲ. ಆನಂದಮಯಾಧಿಕರಣದಿಂದ ಆರಂಭಿಸಿ ಮುಂದಿನ ಅಧಿಕರಣಗಳಲ್ಲಿ ಮಾತ್ರ ಅವುಗಳನ್ನು ತೋರಿಸಬೇಕು. ಪ್ರಾರಂಭದ ಐದು ಅಧಿಕರಣಗಳು ಅಧ್ಯಾಯ ಹಾಗೂ ಪಾದಕ್ಕೆ ಪೀಠದ ರೂಪದಲ್ಲಿರುತ್ತವೆ. ಆದ್ದರಿಂದ ಅಧ್ಯಾಯಾಂತರ್ಭಾವಸಂಗತಿ ಮತ್ತು ಪಾದಾಂತರ್ಭಾವ-ಸಂಗತಿಗಳನ್ನು ತೋರಿಸಬೇಕಾಗಿಲ್ಲ.

**तत्वप्रकाशिका – प्रथमाधिकरणत्वात्, श्रुतिविचारस्याद्याप्यनारब्धत्वात् नाधिकरणश्रुतिसङ्गती च ।**

ಇದು ಮೊದಲನೆಯ ಅಧಿಕರಣವಾದ್ದರಿಂದ ಶ್ರುತಿವಿಚಾರವು ಇಲ್ಲಿಯ ತನಕ ಪ್ರಾರಂಭವೇ ಆಗಿಲ್ಲ. ಆದ್ದರಿಂದ ಹಿಂದಿನ ಅಧಿಕರಣದ ಸಂಗತಿಯನ್ನಾಗಲೀ, ಹಿಂದಿನ ಅಧಿಕರಣದ ಸಂಬಂಧಪಟ್ಟ ಶ್ರುತಿಯ ಸಂಗತಿಯಾಗಲೀ, ಇದಕ್ಕೆ ಇರುವುದಿಲ್ಲ. ಆದ್ದರಿಂದ ಕೇವಲ ಶಾಸ್ತ್ರಸಂಗತಿಯನ್ನಷ್ಟೇ ತೋರಿಸಿದರೆ ಸಾಕು.

**तत्वप्रकाशिका – प्रारिप्सिततया चित्तसङ्गतशास्त्रे प्रवर्तनीया ब्रह्मजिज्ञासा विषयः । 'कर्तव्या न वा' इति सन्देहः । उभयविधव्यापारदर्शनं सन्देहबीजम् ।**

ಈ ಅಧಿಕರಣದ ಅನುಬಂಧಚತುಷ್ಟಯ ಹೀಗಿದೆ - ಪ್ರಾರಂಭ ಮಾಡಲು ಇಚ್ಛಿಸಿರುವ ಚಿತ್ತದಲ್ಲಿ ಸಂಗತವಾದ ಶಾಸ್ತ್ರದಲ್ಲಿ ಪ್ರವೃತ್ತಿಮಾಡುವ ಬ್ರಹ್ಮಜಿಜ್ಞಾಸೆಯೇ ವಿಷಯವಾಗಿದೆ. ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೋ ಬೇಡವೋ ? ಎಂಬುದು ಸಂದೇಹ. ಎರಡು ಬಗೆಯ ವ್ಯಾಪಾರಗಳು ಕಾಣಿಸುತ್ತಿರುವುದು ಸಂದೇಹಕ್ಕೆ ಕಾರಣವಾಗಿದೆ.

### ಅಧಿಕರಣಸಂಗತಿ

**ಭಾವದೀಪಃ – ತತ್ರೇತಿ ।।** 'ಸೂತ್ರೇಷು' ಇತಿ ವಾ, 'ಅತ್ಯುಪಾದೇಯತ್ವೇ ಸತಿ' ಇತಿ ವಾऽರ್ಥಃ । 'ಇದಮ್' ಇತ್ಯುಕ್ತ್ಯಾ 'ಪರೋಕ್ತಂ ಹೇಯಮ್' ಇತಿ ಸೂಚಿತಮ್ । ತದ್ ವಿವೃತಂ ಚನ್ದ್ರಿಕಾಯಾಮ್ ।

ತತ್ರ = ಎಂಬುದಕ್ಕೆ ಎರಡು ಅರ್ಥಗಳು; ೧. ೫೬೪ (೫೬೨) ಸೂತ್ರಗಳ ಮಧ್ಯದಲ್ಲಿ; ೨. ಗ್ರಂಥಕ್ಕೆ ಅತ್ಯುಪಾದೇಯವು ಸಿದ್ಧವಾದ ಮೇಲೆ. 'ಇದಮ್' ಎಂದು ಹೇಳಿದ್ದರಿಂದ ಪರರು ನಿರೂಪಿಸಿದ ಸಂಗತ್ಯಾದಿಗಳು ಹೇಯವೆಂದು ಸೂಚಿಸಿದ್ದಾರೆ. ಚಂದ್ರಿಕೆಯಲ್ಲಿ ಇದರ ವಿವರಣೆ ಇದೆ.

### ಪ್ರಧಾನವಾಗಿ ಸಂಗತಿಗಳು ಎರಡು

**ಭಾವದೀಪಃ –** ಅಧಿಕರಣಾನಾಂ ಹಿ ಸಙ್ಗತಿಸ್ತಾವದ್ ದ್ವೇಧಾ । ಅನ್ತರ್ಭಾವರೂಪಾ ಆನನ್ತರ್ಯರೂಪಾ ಚೇತಿ । ತತ್ರಾऽऽದ್ಯಾ ಶಾಸ್ತ್ರಾನ್ತರ್ಭಾವ-ಅಧ್ಯಾಯಾನ್ತರ್ಭಾವ-ಪಾದಾನ್ತರ್ಭಾವಭೇದೇನ ತ್ರೇಧಾ ।

ಅಧಿಕರಣಸಂಗತಿಯು ಒಟ್ಟು ಎರಡು ವಿಧ. ೧. ಅಂತರ್ಭಾವಲಕ್ಷಣ ೨. ಆನಂತರ್ಯಲಕ್ಷಣ ಎಂದು. ಅಂತರ್ಭಾವಲಕ್ಷಣಸಂಗತಿಯು ಪುನಃ ಮೂರುವಿಧ. ಶಾಸ್ತ್ರಸಂಗತಿ ಅಧ್ಯಾಯಸಂಗತಿ, ಪಾದಸಂಗತಿ ಎಂದು. ಇವುಗಳನ್ನು ಶಾಸ್ತ್ರಾಂತರ್ಭಾವಸಂಗತಿ, ಅಧ್ಯಾಯಾಂತರ್ಭಾವಸಂಗತಿ, ಪಾದಾಂತರ್ಭಾವಸಂಗತಿ ಎಂದು ಕರೆಯುತ್ತಾರೆ.

### ಅಧಿಕರಣ ಎನಿಸಲು ಐದು ಬೇಕು

**ಭಾವದೀಪಃ –** ದ್ವಿತೀಯಾऽಪಿ ಆಕ್ಷೇಪಿಕೀ ಆತಿದೇಶಿಕೀ ಔಪೋದ್ಘಾತಿಕೀ ಆಪವಾದಿಕೀತ್ಯಾದಿರೂಪೇಣ ಅನೇಕವಿಧಾ । ಏವಮನೇಕವಿಧಾऽऽನನ್ತರ್ಯರೂಪಾ ಸಙ್ಗತಿಃ। ಪೂರ್ವಾಧಿಕರಣೇನೋತ್ತರಾಧಿಕರಣಸ್ಯೈವ ಪೂರ್ವಾಧಿಕರಣವಿಷಯವಾಕ್ಯೇನೋತ್ತರಾಧಿಕರಣ-ವಿಷಯವಾಕ್ಯಸ್ಯಾಪ್ಯಸ್ತಿ ಸಾ ಶ್ರುತಿಸಙ್ಗತಿರಿತ್ಯುಚ್ಯತೇ । ಉಕ್ತಂ ಹಿ ಚನ್ದ್ರಿಕಾಯಾಮ್ –

> ಶಾಸ್ತ್ರೇऽಧ್ಯಾಯೇ ತಥಾ ಪಾದೇ ಶ್ರುತ್ಯಾऽಧಿಕರಣೇನ ಚ ।
> ಸಙ್ಗತಿಃ ಪಞ್ಚಧಾ ಪ್ರೋಕ್ತಾ ಸರ್ವಾಧಿಕರಣೇಷ್ವಪಿ ।।' ಇತ್ಯಾದಿ ।

तथा –

विषयो विशयश्चैव पूर्वपक्षस्तथोत्तरः ।
प्रयोजनं च पञ्चैतांस्तन्त्रे(प्राञ्चो)ऽधिकरणं विदुः ।।

इत्युक्तेर्विषयादिकं च वाच्यम् ।

ಆನಂತರ್ಯಸಂಗತಿಯು ಆಕ್ಷೇಪಿಕೀ, ಆತಿದೇಶಿಕೀ, ಔಪೋದ್ಘಾತಕೀ, ಆಪವಾದಿಕೀ ಇತ್ಯಾದಿಯಾಗಿ ಅನೇಕವಿಧವಾಗಿದೆ. ಹಿಂದಿನ ಅಧಿಕರಣದಿಂದ ಮುಂದಿನ ಅಧಿಕರಣಕ್ಕೆ ಹೇಗೆ ಸಂಗತಿ ಇರುತ್ತದೋ ಅದರಂತೆ ಹಿಂದಿನ ಅಧಿಕರಣದ ವಿಷಯವಾಕ್ಯದಿಂದ ಮುಂದಿನ ಅಧಿಕರಣದ ವಿಷಯವಾಕ್ಯಕ್ಕಿರುವ ಸಂಗತಿಯು ಶ್ರುತಿಸಂಗತಿ ಎನಿಸುತ್ತದೆ. ಇದುವರೆಗೆ ನಿರೂಪಿಸಿದ ವಿಷಯದ ಬಗ್ಗೆ ಚಂದ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ --

शास्त्रेऽध्यायेऽथ पादे श्रुत्याऽधिकरणेन च ।
संगतिः पंचधा प्रोक्ता सर्वाधिकरणेष्वपि ।।

'ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿ, ಶ್ರುತಿಸಂಗತಿ, ಅಧಿಕರಣಸಂಗತಿ ಈ ಐದು ಸಂಗತಿಗಳನ್ನು ಎಲ್ಲಾ ಅಧಿಕರಣಗಳಲ್ಲಿಯೂ ತಿಳಿಯಬೇಕು' ಎಂದು.

ಮತ್ತು

विषयो विशयश्चैव पूर्वपक्षस्तथोत्तरः ।
प्रयोजनं च पंचैतान् तंत्रे(प्राञ्चो)ऽधिकरणं विदुः ।।

'ಒಂದು ಅಧಿಕರಣ ಎನಿಸಬೇಕಾದರೆ ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ ಮತ್ತು ಪ್ರಯೋಜನ; ಈ ಐದೂ ಇರಬೇಕು' ಎಂದು.

ವಿಶೇಷ ವಿಚಾರ - ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿರುವ ಪ್ರತಿಯೊಂದು ಅಧಿಕರಣಗಳಿಗೂ ಪರಸ್ಪರ ಸಂಬಂಧವಿರುತ್ತದೆ. ಇದನ್ನೇ ಸಂಗತಿಯೆಂದು ಕರೆಯುತ್ತಾರೆ. ಒಂದು ಅಧಿಕರಣ ಆಗಬೇಕಾದರೆ ಸಮಗ್ರಶಾಸ್ತ್ರದಿಂದ ಅಧ್ಯಾಯದಿಂದ ಹಾಗೂ ಪಾದದಿಂದ ಸಂಗತಿಯಿರಬೇಕು. ಮತ್ತು ಹಿಂದಿನ-ಮುಂದಿನ ಅಧಿಕರಣಗಳ ಜೊತೆಗೂ ಸಂಬಂಧವನ್ನು ಹೊಂದಿರಬೇಕು. ಅಷ್ಟೇ ಅಲ್ಲದೇ ಯಾವ ವೇದವಾಕ್ಯವನ್ನು ವಿಚಾರ ಮಾಡಲಾಗುತ್ತದೋ, ಅದಕ್ಕೆ ಮುಂದಿನ ಅಧಿಕರಣದಲ್ಲಿ ವಿಚಾರ ಮಾಡುವ ವೇದವಾಕ್ಯದಿಂದ ಸಂಬಂಧವಿರಬೇಕು. ಇವುಗಳು ಇಲ್ಲದಿದ್ದರೆ ಆ ಅಧಿಕರಣಕ್ಕೆ

ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಪ್ರವೇಶವೇ ಕೂಡುವುದಿಲ್ಲ. ಇದನ್ನೇ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿ ಎಂದು ಹೆಸರಿಸುತ್ತಾರೆ. ಈ ಸಂಗತಿಗಳನ್ನು ಸೇರಿಸಿ, ಅಂತರ್ಭಾವಸಂಗತಿ ಎಂಬ ಒಂದೇ ಪದದಿಂದ ಕರೆಯಬಹುದು. ಅಧಿಕರಣಗಳಿಗಿರುವ ಪರಸ್ಪರ ಸಂಗತಿಯನ್ನು ಆನಂತರ್ಯಸಂಗತಿ ಎಂದು ಕರೆಯಬಹುದು. ಇದು 'ಆಕ್ಷೇಪಿಕೆ', 'ಅತಿದೇಶಿಕೀ', 'ಔಪೋದ್ಘಾತಕೀ', 'ಆಪವಾದಿಕೆ' ಇತ್ಯಾದಿಯಾಗಿ ಬಹು ಬಗೆಯನ್ನು ತಾಳಿದೆ.

## ಶಾಸ್ತ್ರಸಂಗತಿ

**भावदीपः – तत् परैरन्यथा वर्णितमिति तद्व्युदासायेदं सङ्गत्यादीति प्रतिज्ञातं विवृण्वन् सङ्गतिं तावद् व्यनक्ति – अत्रेति ।। 'आद्याधिकरणे' इत्यर्थः । 'तद्विजिज्ञासस्व' इति श्रुत्युक्तायाः जिज्ञासायाः सविषयत्वादिन्यायबलेन कर्तव्यतासमर्थनेन ब्रह्मविचारपरे शास्त्रेऽन्तर्भावरूपा सङ्गतिरित्यर्थः ।**

ಪ್ರಕೃತ ಜಿಜ್ಞಾಸಾಧಿಕರಣಕ್ಕೆ ಸಂಗತಿವಿಷಯಾದಿಗಳನ್ನು ನಿರೂಪಿಸಬೇಕು. ಆದರೆ 'ಪರಮತದವರು ಈ ಸಂಗತ್ಯಾದಿಗಳನ್ನು ತೋರಿಸುವುದರಲ್ಲಿ ಎಡವಿದ್ದಾರೆ' ಎಂಬುದನ್ನು ಸೂಚಿಸಲು 'ಇದಂ ಸಂಗತ್ಯಾದಿ' ಎಂದು ಪ್ರತ್ಯಕ್ಷನಿರ್ದೇಶದಿಂದ ಸಂಗತಿಯನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. 'ಅತ್ರ' ಎಂದರೆ ಜಿಜ್ಞಾಸಾಧಿಕರಣದಲ್ಲಿ ಎಂದರ್ಥ. 'ತದ್ ವಿಜಿಜ್ಞಾಸಸ್ವ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಜಿಜ್ಞಾಸೆಗೆ ವಿಷಯಾದಿಗಳಿರುವುದರಿಂದ ಜಿಜ್ಞಾಸೆಯು ಕರ್ತವ್ಯವಾಗಿದೆ ಎಂದು ಈ ಅಧಿಕರಣದಲ್ಲಿ ಸಮರ್ಥಿಸುತ್ತಾರೆ. ಆದ್ದರಿಂದ ಬ್ರಹ್ಮವಿಚಾರಪರವಾದ ಶಾಸ್ತ್ರದಲ್ಲಿ ಅಂತರ್ಭಾವಸಂಗತಿಯು ಈ ಅಧಿಕರಣಕ್ಕೆ ಸಿದ್ಧವಾಗುತ್ತದೆ.

ವಿಶೇಷ ವಿಚಾರ - ಸಂಗತಿಯು ಒಟ್ಟು ಎರಡುವಿಧ : ೧) ಅಂತರ್ಭಾವ ಲಕ್ಷಣಾ ೨) ಆನಂತರ್ಯಲಕ್ಷಣಾ ಎಂದು.

ಅಧಿಕರಣಗಳ ಅಂತರ್ಭಾವಲಕ್ಷಣಸಂಗತಿಯು ಮೂರುವಿಧ - ೧) ಶಾಸ್ತ್ರಸಂಗತಿ ೨) ಅಧ್ಯಾಯಸಂಗತಿ ೩) ಪಾದಸಂಗತಿ ಎಂದು. ಇವುಗಳನ್ನೇ ಶಾಸ್ತ್ರಾಂತರ್ಭಾವಸಂಗತಿ, ಅಧ್ಯಾಯಾಂತರ್ಭಾವಸಂಗತಿ, ಪಾದಾಂತರ್ಭಾವಸಂಗತಿ ಎನ್ನುತ್ತಾರೆ.

ಇವುಗಳ ಲಕ್ಷಣ ಹೀಗಿದೆ -

೧) ಶಾಸ್ತ್ರಾಂತರ್ಭಾವಸಂಗತಿಃವೇದಾರ್ಥನಿರ್ಣಾಯಕನ್ಯಾಯಗ್ರಥನಾತ್ಮಕತ್ವಮ್ (ವ್ಯುತ್ಪಾದಕತ್ವಮ್)

೨) ಅಧ್ಯಾಯಾಂತರ್ಭಾವಸಂಗತಿಃ - ತತ್ತದಧ್ಯಾಯಾರ್ಥಬೋಧಕತ್ವಮ್

೩) ಪಾದಾಂತರ್ಭಾವಸಂಗತಿಃ - ತತ್ತತ್ಪಾದಾರ್ಥಬೋಧಕತ್ವಮ್ ಎಂದು.

ಅಧಿಕರಣಗಳ ಆನಂತರ್ಯಸಂಗತಿಯು ಆರು ಅಥವಾ ಏಳುವಿಧ.

೧) ಆಕ್ಷೇಪಿಕೀ- ಪೂರ್ವಮಾಕ್ಷಿಪ್ಯತೇ ಯತ್ರ ತತ್ರ ಆಕ್ಷೇಪಿಕೀ (ಮತಾ)

ಪೂರ್ವಾಧಿಕರಣದಿಂದ ಆಕ್ಷೇಪ ಮಾಡಿಕೊಂಡು ಉತ್ತರಾಧಿಕರಣವು ಹೊರಡಬೇಕು.

೨) ಅತಿದೇಶಿಕೀ - ಯತ್ರ ಪೂರ್ವಮೇವಾತಿದಿಶ್ಯತೇ ಕೃತ್ವಾ ಯತ್ರಾಧಿಕಾಂ ಶಂಕಾಂ ತತ್ರ ಅತಿದೇಶಿಕೀ

ಪೂರ್ವಾಧಿಕರಣದಿಂದ ಸಿದ್ಧವಾದ ವಿಷಯದಲ್ಲಿಯೇ ಅಧಿಕಾಶಂಕೆ ಮಾಡಿ ಪೂರ್ವಾಧಿಕರಣದಲ್ಲಿ ಹೇಳಿದ ಸಿದ್ಧಾಂತವನ್ನೇ ಅತಿದೇಶ ಮಾಡಿದರೆ ಅತಿದೇಶಿಕೀಸಂಗತಿ.

೩) ಔಪೋದ್ಘಾತಕೀ - ಚಿಂತಾಂ ಪ್ರಕೃತಿಸಿದ್ಧ್ಯರ್ಥಂ ಉಪೋದ್ಘಾತಂ ಪ್ರಚಕ್ಷತೇ।

(ಪ್ರಕೃತಿ = ಶಾಸ್ತ್ರ) ಶಾಸ್ತ್ರಾರ್ಥಸಿದ್ಧಿಗಾಗಿ ಮೊದಲು ವಿಚಾರ ಮಾಡುವುದನ್ನೇ ಔಪೋದ್ಘಾತಕೀಸಂಗತಿ ಎನ್ನುತ್ತಾರೆ.

೪) ಪ್ರಾಸಂಗಿಕೀ - ಪ್ರಸಂಗಾತ್ ಚಿಂತ್ಯತೇ ಯತ್ರ ತತ್ರ ಪ್ರಾಸಂಗಿಕೀ ಮತಾ।

ಪ್ರಸಂಗವಶಾತ್ ಸ್ಮರಣೆ ಬಂದದ್ದನ್ನು ವಿಚಾರ ಮಾಡಿದರೆ ಪ್ರಾಸಂಗಿಕೀ ಸಂಗತಿ.

೫) ಆಪವಾದಿಕೀ (ಪ್ರತ್ಯುದಾಹರಣ) ಪೂರ್ವನ್ಯಾಯಾತ್ಯಯೋ ಯತ್ರ ಪ್ರತ್ಯುದಾಹರಣಾ ತು ಸಾ

ಪೂರ್ವನ್ಯಾಯವನ್ನು ಬಿಟ್ಟು ಆದಕ್ಕೆ ಅಪವಾದ ಉದಾಹರಣೆ, ಹೇಳಿದರೆ ಪ್ರತ್ಯುದಾಹರಣ ಸಂಗತಿ, ಇದನ್ನು ಆಪವಾದಿಕೀಸಂಗತಿಯೆಂದು ಕರೆಯುತ್ತಾರೆ.

೬) ಬುದ್ಧಿಸ್ಥಾನಾ - ಬುದ್ಧಿಸ್ಥಾ ಚಿಂತ್ಯತೇ ಯತ್ರ ಬುದ್ಧಿಸ್ಥಾನಾತ್ಮಿಕಾ ತು ಸಾ।

ಬುದ್ಧಿಯಲ್ಲಿರುವದನ್ನೇ ವಿಚಾರ ಮಾಡಿದರೆ ಬುದ್ಧಿಸ್ಥಾನಸಂಗತಿಯೆಂದು ತಿಳಿಯಬೇಕು.

(ಮೊದಲನೆಯ ಅಧ್ಯಾಯದ ಮೂರನೇ ಪಾದದ ಪರಿಮಳದಲ್ಲಿಯೂ ಈ ವಿಷಯ ವಿವರಿಸಲಾಗಿದೆ.) ಪ್ರಕೃತ ಆರುವಿಧವಾದ ಸಂಗತಿಗಳಲ್ಲಿ ಮೊದಲನೆಯ ಸೂತ್ರಕ್ಕೆ ಔಪೋದ್ಘಾತಕೀಸಂಗತಿ ಮತ್ತು ಶಾಸ್ತ್ರಾಂತರ್ಭಾವಸಂಗತಿಯು ಇದೆ. ಉಳಿದ ಸಂಗತಿಗಳು ಇಲ್ಲವೆಂದು ಹೇಳುತ್ತಿದ್ದಾರೆ.

ಶಂಕೆ - ಈ ಸೂತ್ರಕ್ಕೆ ಶಾಸ್ತ್ರಸಂಗತಿ ಇರುವಂತೆ ಅಧ್ಯಾಯಸಂಗತಿ, ಪಾದಸಂಗತಿಯೂ ಇದೆ. ಶಾಸ್ತ್ರದ ಆವಶ್ಯಕತೆಯನ್ನು ಸಮರ್ಥಿಸಿದ್ದರಿಂದ ಶಾಸ್ತ್ರಸಂಗತಿ ಇದೆಯೆಂದು ನೀವು ಹೇಗೆ ಹೇಳಿದಿರೋ, ಹಾಗೆಯೇ ಸಮನ್ವಯಾಧ್ಯಾಯದ ಆವಶ್ಯಕತೆಯನ್ನೂ ಸಮರ್ಥಿಸುತ್ತಿರುವುದರಿಂದ ಈ ಸೂತ್ರಕ್ಕೆ ಅಧ್ಯಾಯಸಂಗತಿ ಮತ್ತು ಪಾದಸಂಗತಿಯು ಇದೆ. ಹೇಗೆಂದರೆ 'ಜೀವನಿಗಿಂತ ಬ್ರಹ್ಮನು ಭಿನ್ನನಾಗಿದ್ದಾನೆ' ಎಂಬುದನ್ನು ಸಮರ್ಥನೆ ಮಾಡಲು ಬ್ರಹ್ಮಶಬ್ದವು ಗುಣಪರಿಪೂರ್ಣತ್ವವನ್ನು ಹೇಳುತ್ತಿದೆ. ಇದನ್ನು ಸಮರ್ಥನೆ ಮಾಡುವುದಕ್ಕಾಗಿಯೇ ಸಮನ್ವಯಾಧ್ಯಾಯವು ಹೊರಟಿದೆ. ಒಂದು ವೇಳೆ ಪ್ರಥಮಸೂತ್ರ ಹೊರಡದಿದ್ದಲ್ಲಿ ಸಮನ್ವಯಾಧ್ಯಾಯವೇ ಅನಾರಂಭಣೀಯವಾಗುತ್ತಿತ್ತು. ಇದರಂತೆ ಪಾದಸಂಗತಿಯನ್ನೂ ತಿಳಿಯಬೇಕು. ಹೀಗೆ ಅಧ್ಯಾಯಸಂಗತಿ ಮತ್ತು ಪಾದಸಂಗತಿಯು ಪ್ರತ್ಯೇಕವಾಗಿ ಇರಬೇಕಾದರೆ ಇಲ್ಲವೆಂದು ಹೇಗೆ ಹೇಳಿದಿರಿ?

ಸಮಾಧಾನ - ಹೀಗೆ ಪ್ರಥಮಾಧ್ಯಾಯಕ್ಕೆ ಸಂಗತಿ ಹೇಳುವುದಾದರೆ ಇದರಂತೆ ದ್ವಿತೀಯಾದಿ ಅಧ್ಯಾಯಾಗಳಿಗೂ ಸಂಗತಿಗಳನ್ನು ಈ ಸೂತ್ರಕ್ಕೆ ಹೇಳಬೇಕಾದೀತು. ದ್ವಿತೀಯಾದಿ ಅಧ್ಯಾಯಗಳಿಂದ ಈ ಸೂತ್ರಕ್ಕೆ ಯಾವ ರೀತಿಯಾದ ಸಂಗತಿಯಿದೆಯೋ ಅದಕ್ಕಿಂತ ಹೊರತಾದ ಸಂಗತಿಯು ಮೊದಲನೆಯ ಅಧ್ಯಾಯದಿಂದ ಇಲ್ಲವೆಂದಷ್ಟೇ ಅದರ ಅಭಿಪ್ರಾಯ. ಈ ಸೂತ್ರವೇ ಹೊರಡದಿದ್ದರೆ ಪ್ರಥಮಾದಿ ನಾಲ್ಕು ಪಾದಗಳು, ನಾಲ್ಕುಪಾದಗಳ ಆಧಾರದಲ್ಲಿ ನಾಲ್ಕು ಅಧ್ಯಾಯಗಳು ಹೊರಡಲು ಸಾಧ್ಯವಿರಲಿಲ್ಲ. ಹೀಗೆ ಸಮಗ್ರ ಶಾಸ್ತ್ರದ ಪ್ರವೃತ್ತಿಗೆ ಈ ಸೂತ್ರವು ಕಾರಣವಾಗಿದೆ. ಒಟ್ಟಾರೆ ಶಾಸ್ತ್ರದ ಗತಿಯಲ್ಲೇ ಅಧ್ಯಾಯದಪಾದಸಂಗತಿಗಳು ಪರ್ಯವಸಾನ ಹೊಂದುತ್ತವೆ.

ಪ್ರಶ್ನೆ - ಪ್ರಥಮಸೂತ್ರದಲ್ಲಿ ಗುಣಪೂರ್ತಿವಾಚಕವಾದ ಬ್ರಹ್ಮಶಬ್ದವನ್ನು ಪ್ರಯೋಗಿಸಿದ್ದಾರೆ. ಗುಣಪೂರ್ತಿಯ ಸಿದ್ಧಿಗೋಸ್ಕರವೇ ಸಮನ್ವಯಾಧ್ಯಾಯವು ಹೊರಟಿದೆ. ಆದ್ದರಿಂದ ಪ್ರಥಮಸೂತ್ರವಿಲ್ಲದಿದ್ದರೆ ಸಮನ್ವಯಾಧ್ಯಾಯವೂ

ಹೊರಡಲಾರದು. ಈ ರೀತಿಯಾಗಿ ಔಪೋದ್ಘಾತಕೀಸಂಗತಿಯನ್ನು ಪ್ರಥಮಾಧ್ಯಾಯಕ್ಕೆ ಹೇಳಬಹುದು. ಇಲ್ಲವೆಂದು ಹೇಗೆ ಹೇಳಿದಿರಿ?

ಈ ಪ್ರಶ್ನೆಗೆ ಮೊದಲನೆಯ ಪರಿಹಾರ - ಬ್ರಹ್ಮಶಬ್ದವು ಗುಣಪೂರ್ಣತ್ವ-ವಾಚಕವಾಗಿದೆ. ಅದನ್ನು ಪ್ರಥಮಾಧ್ಯಾಯವು ಸಮರ್ಥಿಸುತ್ತಿದೆ. ಇಷ್ಟು ಮಾತ್ರದಿಂದ ಪ್ರಥಮಾಧ್ಯಾಯದಿಂದ ಸಂಗತಿಯಿದೆಯೆಂದು ಹೇಳುವುದಾದರೆ, ಅದೇ ಬ್ರಹ್ಮಶಬ್ದವು ನಿರ್ದೋಷತ್ವವನ್ನೂ ಹೇಳುತ್ತಿದೆ. ಅದನ್ನೇ ಎರಡನೆಯ ಅಧ್ಯಾಯವು ವಿವರಿಸುತ್ತದೆ. ಆದ್ದರಿಂದ ಔಪೋದ್ಘಾತಕೀಸಂಗತಿಯನ್ನು ದ್ವಿತೀಯಾಧ್ಯಾಯದಿಂದ ಈ ಸೂತ್ರಕ್ಕೆ ಹೇಳಬೇಕಾದೀತು. ಹಾಗೆ ಹೇಳಿದರೆ ದ್ವಿತೀಯಾಧ್ಯಾಯಕ್ಕೂ ಪ್ರಥಮಾಧ್ಯಾಯಕ್ಕೂ ಒಂದೇ ಸಂಗತಿಯನ್ನು ಹೇಳಿದಂತಾಯಿತು. ಪ್ರಥಮಾಧ್ಯಾಯದಲ್ಲಷ್ಟೇ ಇರುವ ಅಸಾಧಾರಣಸಂಗತಿಯನ್ನು ಹೇಳಿದಂತಾಗಲಿಲ್ಲ.

ಎರಡನೆಯ ಪರಿಹಾರ - ಪ್ರಥಮಸೂತ್ರದಲ್ಲಿ ನಾಲ್ಕು ಪದಗಳಿವೆ. ನಾಲ್ಕು ಪದಗಳ ಮುಖಾಂತರ ನಾಲ್ಕು ಅಧ್ಯಾಯಗಳಿಗೂ ಈ ಸೂತ್ರವು ಪ್ರಯೋಜಕವಾಗಿದೆ. 'ಅಥ' ಮತ್ತು 'ಜಿಜ್ಞಾಸಾ' ಪದಗಳು ತೃತೀಯಾಧ್ಯಾಯಕ್ಕೆ ಪ್ರಯೋಜಕವಾಗಿವೆ. 'ಅತಃ' ಎಂಬ ಶಬ್ದವು ನಾಲ್ಕನೆಯ ಅಧ್ಯಾಯಕ್ಕೆ, ಬ್ರಹ್ಮಪದವು ಪ್ರಥಮ ಮತ್ತು ದ್ವಿತೀಯ ಅಧ್ಯಾಯಗಳಿಗೆ ಈ ಸೂತ್ರವು ಪ್ರಯೋಜಕವಾಗಿದೆ. ಹೀಗೆ ಅಧ್ಯಾಯಚತುಷ್ಟಯಗಳಿಗೆ ಪ್ರಯೋಜಕವಾಗುವ ಮೂಲಕ ಸಮಸ್ತಶಾಸ್ತ್ರಕ್ಕೆ ಪ್ರಯೋಜಕವಾಗಿದೆ. ನಾಲ್ಕು ಅಧ್ಯಾಯವೆಂದರೆ ಸಮಸ್ತಶಾಸ್ತ್ರವೆಂದೇ ಆಯಿತು. ಆದ್ದರಿಂದ ಶಾಸ್ತ್ರಸಂಗತ್ಯತಿರಿಕ್ತವಾದ ಅಧ್ಯಾಯಸಂಗತಿಯನ್ನು ಪ್ರಥಮಸೂತ್ರಕ್ಕೆ ಹೇಳಲು ಸಾಧ್ಯವಿಲ್ಲ.

**ಭಾವದೀಪಃ** – उक्तं च सुधायाम् – अत एवाऽस्य न शास्त्रबहिर्भावः - इति । व्यर्थमेतत् समर्थनम् अत्र, इत्यत आह – **अन्यथेति** ।। 'न्यायानुसन्धानादि-रूपजिज्ञासाया अकर्तव्यत्वे न्यायग्रथनात्मकसूत्रसन्दर्भ रूपशास्त्रस्यानारम्भणीयत्वं स्यात् । न्यायानुसन्धानार्थत्वात् तस्य । तदारम्भणीयं चावश्यम् । अन्यथा परमपुरुषार्थहेतुश्रुत्यर्थनिर्णयानापत्तेः' इति भावः । चन्द्रिकायां तु – ब्रह्मविचारपरशास्त्रकर्तव्यतोपयोगितया जिज्ञासा कर्तव्यतासाधनात् अस्ति शास्त्रादिना औपोद्घातिकीसङ्गतिः ।

**अन्यथा शास्त्रानारम्भापत्तेः' इत्यर्थ उक्तः । एतदिति ।। 'जिज्ञासाकर्तव्यत्वम्' इत्यर्थः।**

ಇದನ್ನೇ ಸುಧೆಯಲ್ಲಿ 'अत एवाऽस्य न शास्त्रबहिर्भावः' ಎಂದಿದ್ದಾರೆ. ಸಂಗತಿಯನ್ನು ಏಕೆ ತೋರಿಸಬೇಕೆಂಬ ಪ್ರಶ್ನೆಗೆ 'अन्यथा' ಎಂಬುದಾಗಿ ಉತ್ತರಿಸುತ್ತಿದ್ದಾರೆ. ನ್ಯಾಯಾನುಸಂಧಾನರೂಪವಾದ ಜಿಜ್ಞಾಸೆಯು ಕರ್ತವ್ಯವಾಗದಿದ್ದರೆ ನ್ಯಾಯಗ್ರಥನಾತ್ಮಕವಾದ ಸಮಗ್ರಶಾಸ್ತ್ರವು ಅನಾರಂಭಣೀಯವಾಗಬೇಕಾದೀತು. ಏಕೆಂದರೆ ಸಕಲಸೂತ್ರಗಳು ನ್ಯಾಯಾನುಸಂಧಾನರೂಪವಾಗಿಯೇ ಇರುತ್ತವೆ. ಶಾಸ್ತ್ರವಾದರೂ ಆರಂಭಣೀಯವಾಗಲೇ ಬೇಕು. ಇಲ್ಲದಿದ್ದರೆ ಪರಮಪುರುಷಾರ್ಥಕ್ಕೆ ಹೇತುವಾದ ಶ್ರುತ್ಯರ್ಥನಿರ್ಣಯವು ಸಾಧ್ಯವಾಗುವುದಿಲ್ಲವೆಂಬುದು 'अन्यथा' ಇತ್ಯಾದಿ ವಾಕ್ಯದ ಅಭಿಪ್ರಾಯ. ಚಂದ್ರಿಕೆಯಲ್ಲಿ ಈ ವಾಕ್ಯವನ್ನು ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸಿದ್ದಾರೆ. -- ''ಬ್ರಹ್ಮವಿಚಾರಪರವಾದ ಶಾಸ್ತ್ರಕ್ಕೆ ಕರ್ತವ್ಯತ್ವವನ್ನು ಸಮರ್ಥಿಸಬೇಕೆಂದರೆ ಬ್ರಹ್ಮಜಿಜ್ಞಾಸೆಯ ಕರ್ತವ್ಯತ್ವವನ್ನು ಮೊದಲು ಸಮರ್ಥಿಸಬೇಕು. ಆದ್ದರಿಂದ ಶಾಸ್ತ್ರಾದಿಗಳಿಂದ ಔಪೋದ್ಘಾತಕೀಸಂಗತಿ ಇರುತ್ತದೆ. ಈ ಅಧಿಕರಣವೇ ಹೊರಡದಿದ್ದರೆ ಶಾಸ್ತ್ರವು ಅನಾರಂಭಣೀಯವಾಗುತ್ತದೆ'' ಎಂದು. 'अतत्' ಎಂಬ ಪದಕ್ಕೆ 'ಜಿಜ್ಞಾಸಾಕರ್ತವ್ಯತ್ವವನ್ನು' ಎಂದರ್ಥ.

> ವಿಶೇಷ ವಿಚಾರ - ಮೊದಲನೆಯ ಸೂತ್ರವು ಬ್ರಹ್ಮವಿಚಾರದ ಕರ್ತವ್ಯತ್ವವನ್ನು ಸಮರ್ಥಿಸುತ್ತಿದೆ. ಆದ್ದರಿಂದಲೇ ಇದಕ್ಕೆ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಅಂತರ್ಭಾವಸಂಗತಿಯು ಉಪಪನ್ನವಾಗುತ್ತದೆ. ಮೊದಲನೆಯ ಸೂತ್ರವು ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ವಿಧಾನ ಮಾಡದಿದ್ದರೆ ಸಮಗ್ರ ಶಾಸ್ತ್ರವೇ ಅನಾರಂಭ ಮಾಡುವ ಪರಿಸ್ಥಿತಿ ಬರುತ್ತದೆ.

> ಮೋಕ್ಷವೇ ನಿಜವಾದ ಪುರುಷಾರ್ಥ. ಇದು ದೊರೆಯಲು ಶ್ರೀಹರಿಯ ಪ್ರಸಾದವು ಅತ್ಯಂತ ಆವಶ್ಯಕ. ಶ್ರೀಹರಿಯ ಸಾಕ್ಷಾತ್ಕಾರವಾಗದೇ ಪ್ರಸಾದವು ಸಾಧ್ಯವಿಲ್ಲ. ಸಾಕ್ಷಾತ್ಕಾರಕ್ಕಾಗಿ ಅವರಲ್ಲಿ ದೃಢವಾದ ಭಕ್ತಿಯನ್ನು ಮಾಡಬೇಕು. ಭಕ್ತಿಯು ಉಂಟಾಗಲು ಮಹಾತ್ಮ್ಯಜ್ಞಾನವನ್ನು ಪಡೆಯಬೇಕು. ಮಹಾತ್ಮ್ಯಜ್ಞಾನವನ್ನು ಪಡೆಯಲು ಅವರ ಬಗ್ಗೆ ವಿಚಾರವನ್ನು ಮಾಡಬೇಕು. ಅದಕ್ಕಾಗಿಯೇ ಬ್ರಹ್ಮಸೂತ್ರಗಳು ಹೊರಟಿವೆ. ಬ್ರಹ್ಮಸೂತ್ರಗಳು ಹೊರಡದಿದ್ದರೆ ಬ್ರಹ್ಮನ ಬಗ್ಗೆ ವಿಚಾರವನ್ನೇ ಮಾಡಲು

ಸಾಧ್ಯವಾಗುವುದಿಲ್ಲ. ಹೀಗೆ ಬ್ರಹ್ಮವಿಚಾರವು ಅವಶ್ಯ ಕರ್ತವ್ಯವಾಗಿದೆ ಎಂದು ಮೊದಲನೆ ಸೂತ್ರವು ಪ್ರತಿಪಾದನೆ ಮಾಡುತ್ತಿದೆ.

**भावदीपः – अध्यायेति ।। 'अध्यायपादयोरन्तर्भावः' इत्यर्थः । पञ्चाधिकरण्याः पदानां हरौ शक्तितात्पर्यावधारणरूपसमन्वया-प्रतिपादकत्वात् इति भावः । 'सङ्गती' इति वक्तव्ये 'सङ्गतिस्तु' इत्येकवचनकृत्यं चन्द्रिकायां व्यक्तम् । तर्हि पञ्चाधिकरण्याः पूर्वं निवेशे किं बीजम्? इत्यत आह – तत इति ।। पञ्चाधिकरण्याः समन्वयविशेषाप्रतिपा दकत्वेनाध्यायान्तर्भावासम्भवेऽपि जिज्ञासाकर्तव्यतायाः प्रथमप्रतिपाद्यत्वात् तत् प्रतिपादनायाद्यसूत्रे ब्रह्मशब्देन जीवादिव्यावर्तकगुणपूर्तिलक्षणत्वेन सूचयित्वा,**

'ಅಧ್ಯಾಯಪಾದಸಂಗತಿಸ್ತು' ಎಂಬುದಕ್ಕೆ ಅಧ್ಯಾಯಾಂತರ್ಭಾವಸಂಗತಿ, ಪಾದಾಂತರ್ಭಾವ ಸಂಗತಿಗಳನ್ನು ಎಂದರ್ಥ. ಮೊದಲಿರುವ ಐದು ಅಧಿಕರಣಗಳಲ್ಲಿ ಯಾವುದೇ ಪದಗಳನ್ನು ಭಗವಂತನಲ್ಲಿ ಸಮನ್ವಯ ಮಾಡದ ಕಾರಣ ಅಧ್ಯಾಯಪಾದಸಂಗತಿಗಳು ಇರುವುದಿಲ್ಲವೆಂದು ಅಭಿಪ್ರಾಯ. ವಸ್ತುತಃ ಇಲ್ಲಿ 'ಅಧ್ಯಾಯಪಾದಸಂಗತೀ' ಎಂದು ದ್ವಿವಚನವನ್ನು ಪ್ರಯೋಗಿಸಬೇಕಿತ್ತು. ಆದರೆ 'ಅಧ್ಯಾಯಪಾದಸಂಗತಿಃ' ಎಂದು ಏಕವಚನವನ್ನು ಪ್ರಯೋಗಿಸಲು ವಿಶೇಷಕಾರಣವಿದೆಯೆಂದು ಚಂದ್ರಿಕೆಯಲ್ಲಿ ಹೇಳಿದ್ದಾರೆ (ಚಂ - ಸಮನ್ವಯ ಮತ್ತು ಈಕ್ಷತ್ಯಧಿಕರಣಗಳಿಗೆ ಅಧ್ಯಾಯಸಂಗತಿ ಇದೆ, ಪಾದಸಂಗತಿ ಇಲ್ಲ. ಉಳಿದ ಮೂರು ಅಧಿಕರಣಗಳಿಗೆ ಅಧ್ಯಾಯಪಾದಸಂಗತಿ ಎರಡೂ ಇಲ್ಲ. ಒಟ್ಟು ಈ ಸಂಗತಿದ್ವಯಗಳ ಅಭಾವವು ಪಂಚಾಧಿಕರಣಸಾಧಾರಣವಾಗಿದೆ. ಆದ್ದರಿಂದ ಅಧ್ಯಾಯಪಾದಸಂಗತಿಃ ಎಂಬಲ್ಲಿ ಸಮುದಾಯೈಕವಚನವನ್ನು ಪ್ರಯೋಗಿಸಿದ್ದಾರೆ.).

ಅಧ್ಯಾಯಪಾದಸಂಗತಿಗಳಿಲ್ಲದ ಮೇಲೆ ಈ ಐದು ಅಧಿಕರಣಗಳನ್ನು ಮೊದಲೇ ಏಕೆ ಉಲ್ಲೇಖಿಸಬೇಕು? ಶಾಸ್ತ್ರದ ಮಧ್ಯದಲ್ಲೋ ಕೊನೆಯಲ್ಲೋ ಉಲ್ಲೇಖಿಸಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ತತಃ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಈ ಐದು ಅಧಿಕರಣಗಳನ್ನು

ಅಧ್ಯಾಯಪಾದಪೀಠವಾದ್ದರಿಂದ ಮೊದಲೇ ಹೇಳಬೇಕು. ವಸ್ತುತಃ ಸಮನ್ವಯ-ವಿಶೇಷವನ್ನು ಪ್ರತಿಪಾದಿಸದಿದ್ದರೂ ಶಾಸ್ತ್ರದ ಪ್ರವೃತ್ತಿಗಾಗಿ ಜಿಜ್ಞಾಸಾಧಿಕರಣದಲ್ಲಿ ಜಿಜ್ಞಾಸಾಕರ್ತವ್ಯತ್ವವನ್ನು ಮೊದಲು ಪ್ರತಿಪಾದಿಸಲೇ ಬೇಕು. ಇದರ ಸಮರ್ಥನೆಗೋಸ್ಕರ ಪ್ರಥಮಸೂತ್ರದಲ್ಲಿರುವ ಬ್ರಹ್ಮಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಆ ಬ್ರಹ್ಮನು ವಿಷ್ಣುವೇ ಹೊರತು ಅಲ್ಪಗುಣನಾದ ಜೀವನಲ್ಲ. ಇತ್ಯಾದಿ ವಿಚಾರಗಳನ್ನು ಸಮರ್ಥಿಸಲು ಎರಡನೆಯ ಸೂತ್ರ ಹೊರಡಲೇ ಬೇಕು.

**ಭಾವದೀಪಃ –**

'जन्माद्यस्य' इति सूत्रेण गुणसर्वस्वसिद्धये ।
ब्रह्मणो लक्षणं प्रोक्तं शास्त्रमूलं यतस्ततः ।।

इत्यनुव्याख्यानोक्तदिशा 'द्वितीये तस्य गुणपूर्तिवाचितासिद्धये जीवपरतानिरासाय विश्वकारणतां जिज्ञास्यब्रह्मलक्षणत्वेनोक्त्वा, तृतीये पूर्तिकारणतयोरतिव्याप्तिनिरासाय तत्र शास्त्रं प्रमाणीकृत्य, चतुर्थे तयोर्विष्वेकनिष्ठत्वाय शास्त्रस्यान्यपरतां निषिद्ध्य, सर्वशास्त्रस्थसर्वशब्द-प्रवृत्तिनिमित्तसर्वगुणपूर्तिसिद्धये वचनवृत्त्या सर्वशास्त्रतात्पर्यविषयतायां चोक्तायां संशब्दार्थस्य वाच्यत्वस्य कात्स्न्र्यस्य च समर्थनार्थं पञ्चमम् इति पञ्चाधिकरण्या बद्धक्रमत्वात् तदनन्तरमेव समन्वये आकाङ्क्षोदयात् तदाकाङ्क्षोत्थापकतया समन्वयाध्यायस्य तदादिनामपादस्य चादौ निवेशो युक्तः' इत्यर्थः ।

ಜನ್ಮಾದ್ಯಸ್ಯೇತಿ ಸೂತ್ರೇಣ ಗುಣಸರ್ವಸ್ವಸಿದ್ಧಯೇ।
ಬ್ರಹ್ಮಣೋ ಲಕ್ಷಣಂ ಪ್ರೋಕ್ತಂ ಶಾಸ್ತ್ರಮೂಲಂ ಯತಸ್ತತಃ॥

ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಗುಣಪೂರ್ಣತ್ವಲಕ್ಷಣವು ಬ್ರಹ್ಮನಲ್ಲಿ ಸಿದ್ಧಿಸಬೇಕಾದರೆ ಜಿಜ್ಞಾಸ್ಯಬ್ರಹ್ಮನಲ್ಲಿ ಜೀವನಲ್ಲಿಲ್ಲದ ಜಗತ್ಕಾರಣತ್ವವನ್ನು ಸಮರ್ಥಿಸಬೇಕು. ಆದ್ದರಿಂದ ಜಗತ್ಕಾರಣತ್ವಲಕ್ಷಣವನ್ನು ಬ್ರಹ್ಮನಲ್ಲಿ ಹೇಳಿದ್ದಾರೆ. ಈ ಬ್ರಹ್ಮನ ಲಕ್ಷಣಕ್ಕೆ ರುದ್ರಾದಿಗಳಲ್ಲಿ ಅತಿವ್ಯಾಪ್ತಿ ಬರುವುದಿಲ್ಲವೆಂದು ಸಮರ್ಥಿಸಲು ಶಾಸ್ತ್ರವನ್ನು ಪ್ರಮಾಣವನ್ನಾಗಿ

ನೀಡಲು ಮೂರನೆಯ ಸೂತ್ರವು ಹೊರಟಿದೆ. ನಾಲ್ಕನೆಯ ಸೂತ್ರದಲ್ಲಿ ಜಗತ್ಕಾರಣತ್ವ ಹಾಗೂ ಶಾಸ್ತ್ರಯೋನಿತ್ವಗಳು ಕೇವಲ ವಿಷ್ಣುನಿಷ್ಠವಾಗಿವೆಯೆಂದು ಸಮರ್ಥಿಸಲಾಗಿದೆ. ಸಕಲಶಾಸ್ತ್ರಪ್ರತಿಪಾದ್ಯತ್ವವನ್ನು ಲಕ್ಷಣಾವೃತ್ತಿಗಳಿಂದ ಹೇಳದೇ ಶಕ್ತಿವೃತ್ತಿಯಿಂದಲೇ ಹೇಳಬೇಕು. ಆವಾಗಷ್ಟೇ ಸಕಲಗುಣಪರಿಪೂರ್ಣತ್ವವು ಸಿದ್ಧಿಸಲು ಸಾಧ್ಯವೆಂಬ ವಿಚಾರವನ್ನು ಸಮರ್ಥಿಸಲು ಈಕ್ಷತ್ಯಧಿಕರಣವು ಹೊರಟಿದೆ. ಹೀಗೆ ಆಕಾಂಕ್ಷಾಕ್ರಮದಂತೆ ಐದು ಅಧಿಕರಣಗಳನ್ನು ಪ್ರಾರಂಭದಲ್ಲಿ ಹೇಳಿದರೆ ಮಾತ್ರ ಉಳಿದ ಪಾದ, ಅಧ್ಯಾಯಗಳು ಹೊರಡಲು ಸಾಧ್ಯ.

ವಿವರಣೆ - ಮೊದಲನೆಯ ಜಿಜ್ಞಾಸಾಧಿಕರಣದಲ್ಲಿ ಬ್ರಹ್ಮವಿಚಾರ ಮಾಡಬೇಕೆಂದು ಸಮರ್ಥನೆ ಮಾಡಲಾಗಿದೆ. ಬ್ರಹ್ಮವಿಚಾರವು ಉಪಪನ್ನವಾಗಬೇಕಾದರೆ ಬ್ರಹ್ಮನು ಜೀವನಿಂದ ಭಿನ್ನನಾಗಿದ್ದಾನೆ ಎಂದು ಸಮರ್ಥನೆ ಮಾಡಬೇಕು. ಜೀವಭೇದದ ಸಮರ್ಥನೆಗಾಗಿ ಬ್ರಹ್ಮನಲ್ಲಿ ಗುಣಪೂರ್ಣತ್ವವನ್ನು ಪ್ರತಿಪಾದನೆ ಮಾಡಬೇಕು. ಅದಕ್ಕಾಗಿ ಎರಡನೆಯ ಅಧಿಕರಣ ಹೊರಟಿದೆ. ಜಗಜ್ಜನ್ಮಾದಿಕಾರಣತ್ವ ಎಂಬುದು ಬ್ರಹ್ಮನ ಲಕ್ಷಣ. ಇದು ಜೀವನಲ್ಲಿ ಸರ್ವಥಾ ಬರುವುದಿಲ್ಲ ಎಂಬುದು ಎರಡನೆಯ ಅಧಿಕರಣದ ಅಭಿಪ್ರಾಯ. ಗುಣಪೂರ್ಣತ್ವ ಹಾಗೂ ಜಗಜ್ಜನ್ಮಾದಿಕಾರಣತ್ವವೆಂಬ ಬ್ರಹ್ಮನ ಲಕ್ಷಣಕ್ಕೆ ರುದ್ರಾದಿಗಳಲ್ಲಿಯೂ ಅತಿವ್ಯಾಪ್ತಿ ಬರುತ್ತದಲ್ಲವೇ? ಎಂಬ ಪ್ರಶ್ನೆಯ ಪರಿಹಾರಕ್ಕಾಗಿ ಶಾಸ್ತ್ರಯೋನಿತ್ವಾಧಿಕರಣವು ಹೊರಟಿದೆ. ಸಚ್ಛಾಸ್ತ್ರಗಳೆಲ್ಲವೂ ವಿಷ್ಣುವಿನಲ್ಲಿಯೇ ಗುಣಪೂರ್ಣತ್ವಾದಿಗಳನ್ನು ಹೇಳುತ್ತಿವೆ ಎಂಬುದು ಇದರ ಅಭಿಪ್ರಾಯ. ಮಹಾವಿಷ್ಣುವೊಬ್ಬನೇ ಶಾಸ್ತ್ರಗಳಿಂದ ಪ್ರತಿಪಾದ್ಯನೆಂದು ಹೇಗೆ ನಿರ್ಣಯಿಸುತ್ತೀರಿ ? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಿನ ಸಮನ್ವಯಾಧಿಕರಣ ಹೊರಟಿದೆ. ವಚನವೃತ್ತಿಯಿಂದ ಸರ್ವಶಾಸ್ತ್ರಗಳ ಮುಖ್ಯವಿಷಯ ವಿಷ್ಣುವೇ ಆಗಿದ್ದಾನೆ ಎಂದು ಸಮರ್ಥಿಸಬೇಕಾದರೆ ಅವನಲ್ಲಿ ವಾಚ್ಯತ್ವವು ಇರಬೇಕು. ಇದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಲು ಐದನೆಯ ಈಕ್ಷತ್ಯಧಿಕರಣ ಹೊರಟಿದೆ. ಹೀಗೆ ಮಹಾವಿಷ್ಣುವಿನಲ್ಲಿ ಸಕಲ ಶಬ್ದಗಳ ಸಮನ್ವಯವು ಸಿದ್ಧವಾಗಬೇಕಾದರೆ ಅದಕ್ಕೆ ಪೀಠಿಕಾರೂಪದಲ್ಲಿ ಮೊದಲ ಐದು ಅಧಿಕರಣಗಳು ವಿಷಯವನ್ನು ನಿರೂಪಣೆ ಮಾಡಿವೆ. ಸಕಲ ಶಬ್ದಗಳ ಸಮನ್ವಯವನ್ನು ಮಹಾವಿಷ್ಣುವಿನಲ್ಲಿ ಮಾಡಲು ಯಾವ ಸಮಸ್ಯೆಯೂ ಇಲ್ಲವೆಂದು ಈ ಐದು ಅಧಿಕರಣಗಳಿಂದ ಸಿದ್ಧವಾದ ಮೇಲೆ ಸಮಗ್ರ ವೇದದಲ್ಲಿರುವ ಶಬ್ದಗಳೆಲ್ಲವೂ ಅವನಲ್ಲಿ

ಹೇಗೆ ಸಮನ್ವಯವಾಗುತ್ತವೆ ಎಂಬ ಆಕಾಂಕ್ಷೆಯು ಸಹಜವಾಗಿ ಬರುತ್ತದೆ. ಆಕಾಂಕ್ಷಾ ಕ್ರಮದಂತೆ ಉತ್ತರ ನೀಡಲು ಸಮಗ್ರ ಪ್ರಥಮಾಧ್ಯಾಯವು ಹೊರಟಿದೆ.

ಪ್ರಾರಂಭದ ಈ ಐದು ಅಧಿಕರಣಗಳು ಯಾವುದೇ ಶಬ್ದಗಳನ್ನು ಸಮನ್ವಯ ಮಾಡುತ್ತಿಲ್ಲ. ಆದ್ದರಿಂದ ಅಧ್ಯಾಯಸಂಗತಿ ಹಾಗೂ ಪಾದಸಂಗತಿಯನ್ನು ಹೇಳುವ ಅವಶ್ಯಕತೆ ಇರುವುದಿಲ್ಲ. ಆನಂದಮಯಾಧಿಕರಣದಿಂದ ಪ್ರಾರಂಭಿಸಿ ಮುಂದಿನ ಅಧಿಕರಣಗಳಲ್ಲಿಯೇ ಅಧ್ಯಾಯಸಂಗತಿ, ಪಾದಸಂಗತಿ ಹಾಗೂ ಅಧಿಕರಣಸಂಗತಿಗಳನ್ನು ತಿಳಿಯಬೇಕು.

**भावदीपः – नाधिकरणेति ।। 'पूर्वाधिकरणतद्विषयवाक्याभ्यां सङ्गतिर्न' इत्यर्थः । उत्तराधिकरणस्य पूर्वाधिकरणेन सङ्गतेः पूर्वाधिकरणतद्विषय-वाक्यभूतश्रुतिसङ्गत्या अविनाभाव एव नत्वभेद इति सा पृथक् इति सूचनाय द्विवचनप्रयोगः ।**

'न ಅಧಿಕರಣಶ್ರುತಿಸಂಗತೀ' = ಹಿಂದಿನ ಅಧಿಕರಣ ಮತ್ತು ಹಿಂದಿನ ಅಧಿಕರಣವಿಷಯವಾಕ್ಯಗಳಿಂದ ಸಂಗತಿ ಇರುವುದಿಲ್ಲ. ಪೂರ್ವಾಧಿಕರಣದಿಂದ ಉತ್ತರಾಧಿಕರಣಕ್ಕೆ ಇರುವ ಸಂಗತಿಯು ಪೂರ್ವಾಧಿಕರಣವಿಷಯವಾಕ್ಯದಿಂದಿರುವ ಸಂಗತಿಯನ್ನು ಬಿಟ್ಟಿರುವುದಿಲ್ಲ. ಆದ್ದರಿಂದ ಅಧಿಕರಣಸಂಗತಿ ಮತ್ತು ಶ್ರುತಿಸಂಗತಿಗಳಿಗೆ ಅವಿನಾಭಾವ ಇದೆ ಹೊರತು ಅಭೇದ ಇರುವುದಿಲ್ಲ. ಅಭೇದವನ್ನು ತಿಳಿಯಬಾರದೆಂಬ ಅಭಿಪ್ರಾಯದಿಂದ 'ಸಂಗತೀ' ಎಂದು ದ್ವಿವಚನವನ್ನು ಪ್ರಯೋಗಿಸಿದ್ದಾರೆ.

ವಿಶೇಷ ವಿಚಾರ - ಪ್ರಥಮಾಧಿಕರಣವಾದ ಜಿಜ್ಞಾಸಾಧಿಕರಣಕ್ಕೆ ಅಧ್ಯಾಯಪಾದಸಂಗತಿಗಳು ಇಲ್ಲವೆಂದು ಅಂಗೀಕರಿಸೋಣ. ಆದರೆ ಪ್ರಾರಂಭದ ಐದೂ ಅಧಿಕರಣಗಳಿಗೆ ಅಧ್ಯಾಯಸಂಗತಿ ಮತ್ತು ಪಾದಸಂಗತಿ ಎರಡೂ ಸಂಗತಿಗಳಿಲ್ಲವೆಂದು ಹೇಳುವುದು ಸುಧಾಕ್ಕೆ ವಿರುದ್ಧವಾಗಿದೆ. ಏಕೆಂದರೆ ಸಮನ್ವಯಾಧಿಕರಣಕ್ಕೆ ಮತ್ತು ಈಕ್ಷತ್ಯಧಿಕರಣಕ್ಕೆ ಅಧ್ಯಾಯಸಂಗತಿಯನ್ನು ಅನುವ್ಯಾಖ್ಯಾನದಲ್ಲಿ ಮತ್ತು ಸುಧಾದಲ್ಲಿ ಸ್ಪಷ್ಟವಾಗಿ ಒಪ್ಪಿಕೊಳ್ಳಲಾಗಿದೆ.

ಈಕ್ಷತ್ಯಧಿಕರಣದಲ್ಲಿ ಬ್ರಹ್ಮನು ಅವಾಚ್ಯನಾದರೆ ಅವನು ಹೇಗೆ ಶಾಸ್ತ್ರಯೋನಿ ಆಗುತ್ತಾನೆ? ಎಂಬ ಆಕ್ಷೇಪವನ್ನಷ್ಟೇ ನಿರಾಕರಿಸಿದ್ದಾರೆ. ಹೊರತು ವಾಚ್ಯತ್ವವನ್ನು

ಸಮರ್ಥಿಸಿಲ್ಲ. ಆದ್ದರಿಂದಲೇ ಸೂತ್ರದಲ್ಲಿ 'ನ ಅಶಬ್ದಂ' 'ಅವಾಚ್ಯನಲ್ಲ' ಎಂದಷ್ಟೇ ಹೇಳಲಾಗಿದೆಯೆಂದು ಆಶಂಕಿಸಿ ನಿರಾಕರಿಸುತ್ತಿದ್ದಾರೆ 'ನಚ' ಇತ್ಯಾದಿ ವಾಕ್ಯಗಳಿಂದ.

'ಜಗತ್ಕಾರಣತ್ವಾದಿನಾ' ಎಂಬಲ್ಲಿ ತೃತೀಯಾವಿಭಕ್ತಿಯು ಪ್ರಕಾರವೆಂಬ ಅರ್ಥದಲ್ಲಿದೆ. ಶಾಸ್ತ್ರಜನ್ಯಪ್ರಮಾವಿಷಯತ್ವವೇ ಪ್ರಕಾರವಾಗಿದೆ. 'ತದಭಾವೇ' ಎಂದರೆ 'ಶಬ್ದಗೋಚರತ್ವಾಭಾವೇ' ಎಂದರ್ಥ. ಶಾಸ್ತ್ರಜನ್ಯಪ್ರಮಾವಿಷಯತ್ವವೇ ಸಾಧ್ಯವಾಗಿದೆ. 'ಸಮನ್ವಯಾತ್' ಎಂಬುದು ಹೇತು. ಉಪಕ್ರಮಾದಿ ಪ್ರಮಾಣಗಳಿಂದ ಶಕ್ತಿ ಹಾಗೂ ತಾತ್ಪರ್ಯವೆಂಬ ಸಂಬಂಧವಿದೆಯೆಂಬುದು ಸಿದ್ಧವಾಗಿದೆ ಎಂದರ್ಥ. ನ್ಯಾಯಸುಧಾದ ಪ್ರಕಾರ ಸಮನ್ವಯಾಧಿಕರಣ ಮತ್ತು ಈಕ್ಷತ್ಯಧಿಕರಣಗಳಿಗೆ ಅಧ್ಯಾಯಸಂಗತಿಯು ಇದೆಯೆಂದು ತೋರುತ್ತದೆ. ಆದರೆ ಟೀಕೆಯಲ್ಲಿ ಸ್ಪಷ್ಟವಾಗಿ ಈ ಸಂಗತಿಯನ್ನು ಇಲ್ಲವೆಂದು ಹೇಳಿದ್ದಾರೆ. ಟೀಕಾರಾಯರ ಈ ಎರಡು ಗ್ರಂಥಗಳ ವಾಕ್ಯಗಳ ವಿರೋಧ ಪರಿಹಾರವನ್ನು ಚಂದ್ರಿಕೆಯಲ್ಲಿ ಮಾಡಿದ್ದಾರೆ. ಹೇಗೆಂದರೆ ಟೀಕೆಯಲ್ಲಿ ಹೇಳಿದಂತೆ ಈ ಎರಡೂ ಅಧಿಕರಣಗಳಿಗೆ ಅಧ್ಯಾಯಸಂಗತಿ ಇಲ್ಲವೆಂಬುದೇ ಸತ್ಯ. ಹಾಗಾದರೆ ಸುಧಾದಲ್ಲಿ ಹೇಳಿದರ ಅರ್ಥವೇನು? ಎಂದರೆ ಸುಧಾದ ಅಭಿಪ್ರಾಯ ಆನಂದಮಯಾಧಿಕರಣಗಳಲ್ಲಿ ಯಾವ ರೀತಿಯಾಗಿ ಉಪಕ್ರಮಾದಿಗಳಿಂದ ಶಬ್ದಗಳ ಶಕ್ತಿವೃತ್ತಿಯನ್ನು ಭಗವಂತನಲ್ಲಿ ಸಮನ್ವಯಗೊಳಿಸುತ್ತಾರೋ ಹಾಗೆಯೇ ಈ ಅಧಿಕರಣದಲ್ಲಿ ಸಮನ್ವಯ ಮಾಡಲು ಹೊರಟಿಲ್ಲ. ಸ್ಪಷ್ಟವಾಗಿ ಹೀಗೆ ತಿಳಿಯಬೇಕು. ಈಕ್ಷತ್ಯಧಿಕರಣದಲ್ಲಿ ವಿಷ್ಣುವು ಅವಾಚ್ಯನಲ್ಲವೆಂದು ಸಮನ್ವಯ ಸಾಧಕವಾದ ವಾಚ್ಯತ್ವನ್ನೇ ಸಮರ್ಥಿಸಿರುವುದರಿಂದ ಸಮನ್ವಯಾಧ್ಯಾಯದ ಉಪೋದ್ಘಾತ ಸಂಗತಿ ಇರುವುದರಲ್ಲಿ ಏನೂ ಬಾಧಕವಿಲ್ಲ. ಅಂತರ್ಭಾವ ಸಂಗತಿ ಇಲ್ಲವೆಂದ ಮಾತ್ರಕ್ಕೆ ಸಂಗತಿಯೆ ಇಲ್ಲವೆಂದು ಹೇಳಲಾಗದು. ವಸ್ತುತಃ ಸಮನ್ವಯಾಧಿಕರಣ, ಈಕ್ಷತ್ಯಧಿಕರಣಗಳೆರಡಕ್ಕೂ ಸಮನ್ವಯಾಧ್ಯಾಯದ ಅಂತರ್ಭಾವ ಸಂಗತಿಯೂ ಇದೆ. ಸಮನ್ವಯ ಸೂತ್ರದಲ್ಲಿ ಸಮನ್ವಯದ ಸಮರ್ಥನೆ ಇಲ್ಲದಿದ್ದರೂ ಅದರ ಪ್ರಸ್ತಾವವಂತೂ ಇದೆ. ಈಕ್ಷತ್ಯಧಿಕರಣದಲ್ಲಿ ಅದಕ್ಕೆ ಬಾಧಕ ಪರಿಹಾರ ಮಾಡಿದೆ. ಈ ಪ್ರಸ್ತಾವ ಮತ್ತು ಬಾಧಕ ಪರಿಹಾರಗಳು ಸಾರ್ಥಕವಾಗುವುದು ಸಾಧಕ ಹೇತುಗಳನ್ನು ಹೇಳಿದರೆ ಮಾತ್ರ ಎಂಬುದೇನೋ ನಿಜವೆ. ಆದರೆ ಅಷ್ಟು ಮಾತ್ರಕ್ಕೆ ಈ ಅಧಿಕರಣಗಳಿಗೆ ಅಧ್ಯಾಯ ಸಂಗತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಹಾಗೆ ಮಾಡಿದರೆ ಮುಂದೆ ಹೇಳುವ ಸಾಧಕ ಹೇತುಗಳೂ ಪ್ರಸ್ತಾವ ಬಾಧಕಪರಿಹಾರಗಳ ಬಲದಿಂದಲೇ ಸಾಫಲ್ಯ ಪಡೆಯಬೇಕಾಗಿರುವುದರಿಂದ ಮುಂದಿನ ಎಲ್ಲ ಸೂತ್ರಗಳಿಗೂ ಅಧ್ಯಾಯ ಸಂಗತಿ ಇಲ್ಲವೆನ್ನಬೇಕಾದೀತು.

ಈ ಆಕ್ಷೇಪಗಳಿಗೆ ಅವಕಾಶವಿಲ್ಲದಂತೆ ಅನುವ್ಯಾಖ್ಯಾನ ಸುಧೆಗಳಿಗನುಸಾರವಾಗಿ ಟೀಕೆಗೆ ಬೇರೆ ಅಭಿಪ್ರಾಯನ್ನಿಟ್ಟುಕೊಳ್ಳಲು ಶಕ್ಯವಿದೆ. ಆನಂದಮಯಾಧಿಕರಣದಿಂದಾರಂಭಿಸಿ ಮುಂದೆ ಅಧ್ಯಾಯ ಪಾದ ಸಂಗತಿಗಳೆರಡೂ ಇವೆ. ಹಿಂದಿನ ಅಧಿಕರಣಗಳಲ್ಲಿ 'ಎರಡೂ ಇವೆ' ಎನ್ನಲಾಗುವುದಿಲ್ಲ. ಒಂದು ಇಲ್ಲದಿರಬಹುದು, ಎರಡೂ ಇಲ್ಲದಿರಬಹುದು. ಏಕೆಂದರೆ ಸಮನ್ವಯ ಈಕ್ಷತ್ಯಧಿಕರಣಗಳಲ್ಲಿ ಅಧ್ಯಾಯಸಂಗತಿ ಇದೆ. ಪಾದಸಂಗತಿ ಒಂದು ಮಾತ್ರವಿಲ್ಲ. ಉಳಿದ ಅಧಿಕರಣಗಳಲ್ಲಿ ಅಧ್ಯಾಯ ಪಾದಸಂಗತಿಗಳೆರಡೂ ಇಲ್ಲ. ಈ ಅಭಿಪ್ರಾಯದಿಂದಲೇ ಟೀಕೆಯಲ್ಲಿ 'ಅಧ್ಯಾಯಪಾದಸಂಗತಿಯ ವಿಚಾರವು ಆನಂದಮಯಾಧಿಕರಣದಿಂದ ತೊಡಗಿ ಮುಂದಿನ ಅಧಿಕರಣಗಳಲ್ಲಿ ಮಾತ್ರ,' ಎನ್ನುವಾಗ 'ಸಂಗತಿ' ಶಬ್ದವನ್ನು ಏಕವಚನದಲ್ಲಿ ಪ್ರಯೋಗಿಸಿದ್ದಾರೆ. ಇದು ಸಮುದಾಯೈಕವಚನ. 'ಅಧ್ಯಾಯ ಸಂಗತಿಯೂ ಇಲ್ಲ ಪಾದಸಂಗತಿಯೂ ಇಲ್ಲ' ಎನ್ನುವ ಅಭಿಪ್ರಾಯವಿರುತ್ತಿದ್ದರೆ ಜಿಜ್ಞಾಸಾಧಿಕರಣಕ್ಕೆ ಅಧಿಕರಣಶ್ರುತಿಸಂಗತಿಗಳಿಲ್ಲ ಎನ್ನುವಂತೆ ಸ್ಪಷ್ಟವಾಗಿ ದ್ವಿವಚನದಲ್ಲಿಯೇ ಪ್ರಯೋಗಿಸಬಹುದಿತ್ತು.

### ಈ ಐದು ಅಧಿಕರಣಗಳನ್ನು ಮೊದಲೇ ಉಲ್ಲೇಖಿಸಲು ಏನು ಕಾರಣ?

**ಭಾವದೀಪಃ – एवं सङ्गतिमुक्त्वा विषयाद्याह प्रारिप्सिततयेत्यादिना ।। ब्रह्मजिज्ञासेति ।। ब्रह्मजिज्ञासा नाम 'ब्रह्मज्ञानाय सर्ववेदादिविषया वक्ष्यमाणदिशा श्रवणमननिदिध्यासनरूपा वा, सुधारीत्या वेदाद्यर्थनिर्णाय कन्यायानुसन्धानापरपर्यायमननमात्ररूपा वा चित्तवृत्तिः' इत्यर्थः । 'अन्यथा' इत्यादिपूर्ववाक्योक्तजिज्ञासाविषयकचिन्तासाफल्यद्योतनाय 'शास्त्रे प्रवर्तनीया' इत्युक्तम् । 'जन्माद्यस्येत्यादौ शास्त्रे' इत्यर्थः । कास्ति शास्त्रम्? इत्यत उक्तम् – प्रारिप्सिततया चित्तसङ्गता इति ।।**

ಟೀಕಾ = 'प्रारिप्सितया चित्तसंगतशास्त्रे प्रवर्तनीया ब्रह्मजिज्ञासा विषयः । कर्तव्या न वेति संदेहः । उभयविधव्यापारदर्शनं संदेहबीजम् । न कर्तव्येति पूर्वः पक्षः'

ಬ್ರಹ್ಮಜಿಜ್ಞಾಸಾಶಬ್ದಕ್ಕೆ 'ಸಕಲವೇದವಿಷಯಕವಾದ ಶ್ರವಣಮನನನಿದಿಧ್ಯಾಸನರೂಪವಾದ ಜಿಜ್ಞಾಸೆ' ಎಂದರ್ಥ. ವೇದಾರ್ಥನಿರ್ಣಾಯಕವಾದ ನ್ಯಾಯಾನುಸಂಧಾನ

ಎನಿಸಿದ ಮನನ ಎಂಬ ಮನೋವ್ಯಾಪಾರವೇ ಬ್ರಹ್ಮಜಿಜ್ಞಾಸೆ. (ನ್ಯಾಯಸುಧಾ) 'ಅನ್ಯಥಾ' ಇತ್ಯಾದಿ ಹಿಂದಿನ ವಾಕ್ಯದಲ್ಲಿ ಹೇಳಿದ ಜಿಜ್ಞಾಸಾ ವಿಷಯಕವಾದ ಚಿಂತೆಯ ಸಾಫಲ್ಯವನ್ನು ತೋರಿಸುವುದಕ್ಕಾಗಿ 'ಶಾಸ್ತ್ರೇ ಪ್ರವರ್ತನೀಯಾ' ಎಂದಿದ್ದಾರೆ. ''ಜನ್ಮಾದ್ಯಸ್ಯ ಇತ್ಯಾದಿ ಸಂಪೂರ್ಣಮೀಮಾಂಸಾಶಾಸ್ತ್ರದಲ್ಲಿ ಪ್ರವೃತ್ತಿ ಮಾಡಲ್ಪಟ್ಟ'' ಎಂದು ಇದರ ಅರ್ಥ. ಬ್ರಹ್ಮಮೀಮಾಂಸಾಶಾಸ್ತ್ರವು ಇನ್ನೂ ಪ್ರಾರಂಭವೇ ಆಗಿಲ್ಲವಲ್ಲ ? ಎಂಬ ಪ್ರಶ್ನೆಗೆ 'ಪ್ರಾರಿಪ್ಸಿತಯಾ ಚಿತ್ತಸಂಗತಾ' ಎಂದು ಉತ್ತರಿಸಿದ್ದಾರೆ. ಪ್ರಾರಂಭ ಮಾಡಬೇಕೆಂಬ ಇಚ್ಛೆಗೆ ವಿಷಯವಾದ ಬ್ರಹ್ಮಮೀಮಾಂಸಾಶಾಸ್ತ್ರವು ಮನಸ್ಸಿನಲ್ಲೇ ಇದೆ ಎಂದರ್ಥ.

## ಅಧಿಕರಣದ ಸಂಶಯ ಹಾಗೂ ಸಂಶಯಬೀಜ

**ಭಾವದೀಪಃ – ಏತೇನ 'ಶಾಸ್ತ್ರಮಾರಭ್ಯಂ ವಾ ನವಾ' ಇತಿ ಪ್ರಧಾನಸನ್ದೇಹಃ । ತದರ್ಥಂ 'ಬ್ರಹ್ಮಜಿಜ್ಞಾಸಾ ಕರ್ತವ್ಯಾ ನವಾ, ಇತಿ ಸನ್ದೇಹಃ' ಇತಿ ಸೂಚಿತಮ್ ।**

**ಯದ್ಯಪ್ಯಯಮತ್ರ ಸನ್ದೇಹೋ ನ ಗ್ರನ್ಥಕರ್ತುಃ ಸರ್ವಜ್ಞತ್ವಾತ್ ತಸ್ಯ । ನಾಪಿ ಪರಸ್ಯ ಶಾಸ್ತ್ರಸ್ಯೈವಾನುಪಲಬ್ಧ್ಯಾ ಜಿಜ್ಞಾಸಾಯಾ ಅನುಪಸ್ಥಿತೇಃ । ತಥಾಪಿ 'ಶಾಸ್ತ್ರಪ್ರಣಯನಾನನ್ತರಂ ಏತತ್ ಸೂತ್ರಾಭಾವ ಏತದ್ ದೃಷ್ಟಾ ಪರಃಸಂವಿಹಿತಾ ಇತಿ ತದೀಯಸನ್ದೇಹಪ್ರದರ್ಶನಮೇತತ್' ಇತಿ ಸುಧಾಯಾಮೇವ ವ್ಯಕ್ತಮ್ । ವಾದಿವಿಪ್ರತಿಪತ್ತಿರೇವ ವಿಚಾರಾಙ್ಗಸನ್ದೇಹಬೀಜಮ್ ಇತ್ಯತ್ರ ಹೇತ್ವಭಾವಾದ್ವಿಪ್ರತಿಪತ್ತೇರಪಿ ಸಾಧಾರಣಧರ್ಮ ಏವಾನ್ತರ್ಭಾವಸ್ಯ ಪದ್ಧತ್ಯಾದಾವುಕ್ತತ್ವಾತ್ ಸಾಧಾರಣಧರ್ಮಮೇವ ಸನ್ದೇಹಬೀಜಮಾಹ – ಉಭಯೇತಿ ।।**

ಹೀಗೆ ಹೇಳಿದ್ದರಿಂದ ಶಾಸ್ತ್ರವನ್ನು ಆರಂಭ ಮಾಡಬೇಕೋ ಬೇಡವೋ ಎಂಬ ಪ್ರಧಾನಸಂದೇಹವನ್ನು, ಇದರ ಪರಿಹಾರಕ್ಕಾಗಿ ಬ್ರಹ್ಮಜಿಜ್ಞಾಸೆಯು ಕರ್ತವ್ಯವೋ ಅಲ್ಲವೋ? ಎಂಬ ಸಂದೇಹವನ್ನೂ ಸಹ ತೋರಿಸಿದಂತಾಯಿತು. ವಸ್ತುತಃ ಈ ಸಂದೇಹವು ಸರ್ವಜ್ಞರಾದ ಗ್ರಂಥಕಾರರಿಗೆ ಬರಲು ಸಾಧ್ಯವಿಲ್ಲ. ಬೇರೆಯವರಿಗಂತೂ ಶಾಸ್ತ್ರವೇ ಅನುಪಲಬ್ಧವಾದ್ದರಿಂದ ಸಂಶಯವು ಬರುವುದಿಲ್ಲ. ಆದರೂ ಸಹ ಶಾಸ್ತ್ರವನ್ನು ರಚಿಸಿದ ಅನಂತರ ಈ ಸೂತ್ರವು ಇಲ್ಲದಿದ್ದರೆ ಮತ್ತೊಬ್ಬರಿಗೆ ಸಂದೇಹವು ಬಂದೇ ಬರುತ್ತದೆಂಬ ಅಭಿಪ್ರಾಯದಿಂದ ಹೀಗೆ ಹೇಳಿದ್ದಾರೆ. ಈ ಸಮಾಧಾನವನ್ನು ನ್ಯಾಯಸುಧೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ವಾದಿವಿಪ್ರತಿಪತ್ತಿಯು ಸಂದೇಹಬೀಜವಾಗದು. ಪ್ರಮಾಣಪದ್ಧತಿಯಲ್ಲಿ

ವಿಪ್ರತಿಪತ್ತಿಯನ್ನು ಸಾಧಾರಣಧರ್ಮದಲ್ಲಿ ಅಂತರ್ಭಾವ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಸಾಧಾರಣಧರ್ಮವೇ ಸಂದೇಹಬೀಜವಾಗಿದೆಯೆಂದು 'ಉಭಯವಿಧವ್ಯಾಪಾರದರ್ಶನಮ್' ಎಂದಿದ್ದಾರೆ.

## ಹೆಚ್ಚಿನ ಸಂಶಯಕ್ಕಾಗಿ ತಾತ್ಪರ್ಯಚಂದ್ರಿಕಾ

**भावदीपः – 'लोके निर्विषयादिक्रियाया आकाशरोमन्थनादेरकर्तव्यत्वदृष्टिः, सविषयादिक्रियाया अन्नभोजनादेः कर्तव्यत्वदृष्टिः' इत्यर्थः । अत्र तदर्थचिन्ता सूत्रक्रमविशेषचर्चादिकं चन्द्रिकातोऽवसेयम् ।।**

ಆಕಾಶರೋಮಂಥನವೆಂಬ ನಿರ್ವಿಷಯಕಕ್ರಿಯೆಯು ಅಕರ್ತವ್ಯವೆಂದು ಲೋಕದಲ್ಲಿ ಕಂಡಿದೆ. ಸವಿಷಯಕಕ್ರಿಯೆಯಾದ ಅನ್ನಭೋಜನಾದಿಗಳು ಕರ್ತವ್ಯವೆಂದು ಲೋಕದಲ್ಲಿ ಕಂಡಿದೆ. ಹೀಗೆ ಉಭಯವಿಧವ್ಯಾಪಾರದರ್ಶನವು ಸಾಧಾರಣಧರ್ಮವಾಗಿದೆಯೆಂದು ತಿಳಿಯಬೇಕು. ಇನ್ನು ಹೆಚ್ಚಿನ ಸಂಶಯಕೋಟಿಗಳನ್ನು ಚಂದ್ರಿಕೆಯಿಂದ ತಿಳಿಯಬೇಕು.

ವಿಶೇಷ ವಿಚಾರ - ತತ್ವಪ್ರಕಾಶಿಕಾದಲ್ಲಿ 'ಅಧ್ಯಾಯಪಾದಪೀಠತ್ವಾತ್' ಈ ಐದು ಅಧಿಕರಣಗಳು ಪ್ರಥಮಾಧ್ಯಾಯಕ್ಕೆ ಹಾಗೂ ಪ್ರಥಮಪಾದಕ್ಕೆ ಪೀಠಿಕೆಗಳಾಗಿವೆ. ಎಂದು ಹೇಳಲಾಗಿದೆ. ಪ್ರಾರಂಭದ ಈ ಐದು ಅಧಿಕರಣಗಳು ಸಮನ್ವಯವನ್ನು ಮತ್ತು ಸಮನ್ವಯದ ವಿಶೇಷವನ್ನು ಪ್ರತಿಪಾದಿಸದಿರುವುದರಿಂದ ಪ್ರಥಮಾಧ್ಯಾಯದಲ್ಲಾಗಲೀ ಪ್ರಥಮಪಾದದಲ್ಲಾಗಲೀ ಸೇರಲು ಸಾಧ್ಯವಿಲ್ಲ. ಹೀಗಾದಲ್ಲಿ ಈ ಐದು ಅಧಿಕರಣಗಳು ಪ್ರಾರಂಭದಲ್ಲೇ ಏಕೆ ಸೇರಬೇಕು? ಗ್ರಂಥದ ಮಧ್ಯದಲ್ಲೋ ಕೊನೆಯಲ್ಲೋ ಸೇರಿಸಬಹುದಿತ್ತು? ಎಂಬ ಪ್ರಶ್ನೆ ಬಂದರೆ ಜಿಜ್ಞಾಸಾಧಿಕರಣವು ವಿಚಾರಕರ್ತವ್ಯತ್ವ-ವನ್ನು ಸಮರ್ಥಿಸುತ್ತಿರುವುದರಿಂದ ಪ್ರಾರಂಭದಲ್ಲೇ ಅದನ್ನು ಹೇಳಬೇಕು. ಇನ್ನು ಉಳಿದ ನಾಲ್ಕು ಅಧಿಕರಣಗಳು ಪರಸ್ಪರ ಸಂಬಂಧ ಹೊಂದಿ ಕ್ರಮಬದ್ಧವಾಗಿ ಒಂದರ ನಂತರ ಮತ್ತೊಂದು ಹೊರಟಿವೆ. ಈ ವಿಷಯವನ್ನು ನಾವು ಆಯಾ ಅಧಿಕರಣಗಳ ಪ್ರಾರಂಭದಲ್ಲಿ ಉಪಪಾದಿಸುತ್ತೇವೆ. ಹೀಗೆ ಈ ಅಧಿಕರಣಗಳು ಪೀಠಿಕಾರೂಪವಾಗಿ ಹೊರಟ ಮೇಲೆ ಸಮನ್ವಯದ ಬಗ್ಗೆ ಆಕಾಂಕ್ಷೆ ಉಂಟಾಗುತ್ತದೆ. ಆಕಾಂಕ್ಷಾನುಸಾರಿಯಾಗಿ ಸಮನ್ವಯಾಧ್ಯಾಯವು ಹೊರಟಿದೆ. ಹಾಗೆಯೇ ಸಮನ್ವಯಾಧ್ಯಾಯದ ಪ್ರಾರಂಭದ ನಾಮಪಾದವೂ ಸಹ ಆಕಾಂಕ್ಷಾನುಸಾರಿಯಾಗಿ ಪ್ರಾರಂಭದಲ್ಲಿ ನಿರ್ದಿಷ್ಟವಾಗಿದೆ.

ಜಿಜ್ಞಾಸಾಧಿಕರಣ (೧-೧-೧)

ತತ್ವಪ್ರಕಾಶಿಕಾದಲ್ಲಿ 'ನಾಧಿಕರಣಶ್ರುತಿಸಂಗತೀ' ಅಧಿಕರಣಸಂಗತಿ ಹಾಗೂ ಶ್ರುತಿಸಂಗತಿಯೂ ಸಹ ಜಿಜ್ಞಾಸಾಧಿಕರಣಕ್ಕೆ ಇಲ್ಲವೆಂದು ಹೇಳಲಾಗಿದೆ. ಏಕೆಂದರೆ ಇದೇ ಪ್ರಾರಂಭದ ಅಧಿಕರಣವಾದ್ದರಿಂದ ಇದಕ್ಕಿಂತ ಮೊದಲು ಯಾವ ಅಧಿಕರಣಗಳೂ ಇಲ್ಲವಾದ್ದರಿಂದ ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹೇಳಲು ಬರುವುದಿಲ್ಲ. ಮತ್ತು ಹಿಂದಿನ ಅಧಿಕರಣದ ವಿಷಯವಾಕ್ಯದಿಂದಲೂ ಈ ಸೂತ್ರಕ್ಕೆ ಸಂಗತಿಯನ್ನು ಹೇಳಲಾಗದು ಆದ್ದರಿಂದ ಶ್ರುತಿಸಂಗತಿಯೂ ಇಲ್ಲವೆಂದರ್ಥ.

ಈ ಅಧಿಕರಣದಲ್ಲಿ ವೇದಾರ್ಥನಿರ್ಣಾಯಕವಾದ ನ್ಯಾಯಗ್ರಥನಾತ್ಮಕವಾದ ಈ ಶಾಸ್ತ್ರವು ಅನಾರಂಭಣೀಯವೋ, ಅಥವಾ ಆರಂಭಣೀಯವೋ? ಎಂಬುದೇ ಪ್ರಧಾನವಾದ ಸಂಶಯ. ಈ ಸಂಶಯವು ಪರಿಹಾರವಾಗಬೇಕೆಂದರೆ ನ್ಯಾಯಾನುಸಂಧಾನರೂಪವಾದ ವಿಚಾರವನ್ನು ಮಾಡಬೇಕೊ, ಬೇಡವೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕೆಂದರೆ 'ತದ್ವಿಜಿಜ್ಞಾಸಸ್ವ' ಇತ್ಯಾದಿ ವಿಧಿಗೆ ವಿಷಯ ಪ್ರಯೋಜನಾದಿಗಳು ಇವೆಯೋ? ಇಲ್ಲವೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕೆಂದರೆ ವಿಷಯನಾದ ಬ್ರಹ್ಮನು ಶಾರೀರಕನಾದ ಜೀವನೋ? ಅಥವಾ ಜೀವನಿಗಿಂತ ಭಿನ್ನನೋ? ಎಂಬ ಸಂಶಯವು ಪರಿಹಾರವಾಗಬೇಕು. ಒಂದು ವೇಳೆ ಬ್ರಹ್ಮನು ಜೀವನೇ ಆದಲ್ಲಿ ಜೀವನು ನಿಶ್ಚಿತನಾದ್ದರಿಂದ ಸಂಶಯ ವಿಷಯಗಳು ಕೂಡದ ಕಾರಣ ಶಾಸ್ತ್ರವು ಅನಾರಂಭಣೀಯವೆಂದು ಪೂರ್ವಪಕ್ಷದ ಉದ್ದೇಶ.

ಒಂದು ವೇಳೆ ಬ್ರಹ್ಮನು ಜೀವನಿಗಿಂತ ಭಿನ್ನನಾದಲ್ಲಿ ಆವಾಗ ಶಾರೀರಿಕನಾದ ಜೀವನು ನಿಶ್ಚಿತನಾಗಿದ್ದರೂ, ಅಶರೀರಿಯಾದ್ದರಿಂದ ಬ್ರಹ್ಮನು ವಿಷಯನಾಗಬಹುದು. ಆವಾಗ ಶಾಸ್ತ್ರವು ಆರಂಭಣೀಯವಾಗುತ್ತದೆ ಎಂದು ಸಿದ್ಧಾಂತದ ಉದ್ದೇಶ.

## ಅಧಿಕರಣದ ಪೂರ್ವಪಕ್ಷ

**तत्वप्रकाशिका – 'न कर्तव्या' इति पूर्वःपक्षः । अधिकारिविषयप्रयोजन-सम्बन्धशून्यत्वात् ।**

ಅನುವಾದ - ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕಿಲ್ಲವೆಂದು ಪೂರ್ವಪಕ್ಷ. ಏಕೆಂದರೆ ಅಧಿಕಾರಿ, ವಿಷಯ, ಪ್ರಯೋಜನ, ಸಂಬಂಧಗಳು ಇರುವುದಿಲ್ಲ.

**तत्वप्रकाशिका – न तावद् ब्रह्म विषयः । असन्दिग्धत्वात्, प्रमाणाभावेन जीवव्यतिरिक्तस्य ब्रह्मणोऽभावात् । जीवस्य च स्वप्रकाशत्वात् । नहि कश्चित् प्रकाशमानेऽर्थे सन्दिग्धे । न चात्मनः स्वप्रकाशत्वे विवदितव्यम् । 'अहम्' इत्यनुभवात् ।**

ಅದು ಹೀಗೆ -- ಈ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಬ್ರಹ್ಮನು ವಿಷಯನಲ್ಲ. ಸಂದೇಹಕ್ಕೆ ವಿಷಯವಾದರೆ ಮಾತ್ರ ಶಾಸ್ತ್ರಕ್ಕೆ ವಿಷಯನಾಗುತ್ತಾನೆ. ಆದರೆ ಜೀವನಿಂದ ಭಿನ್ನನಾದ ಬ್ರಹ್ಮನ ಇರುವಿಕೆಯಲ್ಲಿ ಪ್ರಮಾಣವಿಲ್ಲ. ಜೀವನಾದರೂ ಸ್ವಪ್ರಕಾಶತ್ವೇನ ನಿತ್ಯಸಿದ್ಧನಾಗಿದ್ದಾನೆ. ನಿತ್ಯಸಿದ್ಧವಾದ ವಸ್ತುವಿನಲ್ಲಿ ಸಂದೇಹವು ಕೂಡುವುದಿಲ್ಲ. ಇನ್ನು ಜೀವನು ಸ್ವಪ್ರಕಾಶನೆಂಬ ವಿಷಯದಲ್ಲಿ ವಿವಾದವನ್ನು ಮಾಡಬಾರದು. ಏಕೆಂದರೆ 'ಅಹಂ' ಎಂಬ ಅನುಭವವಿರುವುದಿಂದ.

**तत्वप्रकाशिका – नचायं मानसोऽनुभवः । तस्यापि ज्ञायमानत्वे-नानुभवान्तरान्वेषणेऽनवस्थानात् । कस्यचिदनुभवस्य स्वप्रकाशत्वेऽस्त्वात्मन एव तत् ।**

ಈ ಅನುಭವವನ್ನು ಮನೋಜನ್ಯವೆಂದು ಹೇಳಬಾರದು. ಏಕೆಂದರೆ, ಆ ಅನುಭವವನ್ನು ತಿಳಿಯಬೇಕೆಂದರೆ ಮತ್ತೊಂದು ಅನುಭವವನ್ನು ಹುಡುಕಬೇಕಾದ್ದರಿಂದ ಅನವಸ್ಥಾ ದೋಷ ಬರುತ್ತದೆ. ಅನವಸ್ಥಾದೋಷವನ್ನು ಪರಿಹರಿಸಲು ಯಾವುದೋ ಒಂದು ಅನುಭವವನ್ನು ಸ್ವಪ್ರಕಾಶವೆಂದು ಒಪ್ಪುವುದಾದರೆ ಆತ್ಮನನ್ನೇ ಸ್ವಪ್ರಕಾಶನೆನ್ನಬಹುದು.

**तत्वप्रकाशिका – जिज्ञासायामेवानुभवोऽनुभूयत इति न वाच्यम् । अनुभवविरोधात् । नह्यज्ञायमानज्ञानसद्भावे किञ्चिन्मानम् ।**

ಅನುಭವವನ್ನು ತಿಳಿಯಬೇಕೆಂಬ ಇಚ್ಛೆಯಿದ್ದರೆ ಮಾತ್ರ ಅನುಭವವು ಜ್ಞಾತವಾಗುತ್ತದೆ. ಇಲ್ಲದಿದ್ದರೆ ಅನುಭವದ ಜ್ಞಾನವೇ ಬರುವುದಿಲ್ಲ. ಆದ್ದರಿಂದ ಅನವಸ್ಥಾದೋಷವು ಹೇಗೆ ಬರುತ್ತದೆ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಹಾಗಾದಲ್ಲಿ ಅನುಭವವಿರೋಧವು ತಪ್ಪಿದ್ದಲ್ಲ. ಅನುಭವ ಬಂತೆಂದರೆ ಇಚ್ಛೆಯಿಲ್ಲದಿದ್ದರೂ ಅದರ ಜ್ಞಾನವು ಪ್ರತಿಯೊಬ್ಬರಿಗೂ ಬಂದೇ ಬರುತ್ತದೆ. ತಿಳಿಯದ ಅನುಭವವು ನೆನಪಿನಲ್ಲೇ ಇರುವುದಿಲ್ಲ.

**तत्वप्रकाशिका – नच 'स्वप्रकाशसंविदाश्रयतयाऽऽत्माऽवभासते' इति युक्तम् । औत्तरिकानुस्मृतिसिद्धसौषुप्तिकानुभवाभावप्रसङ्गात् । न हि 'सुषुप्तावात्मातिरिक्ता संविदस्ति' इति सम्भवति । संविदात्मकत्वाच्चात्मनो न संविद इव संविदाश्रयतया प्रतीतिः । अतः स्वप्रकाशात्मानतिरिक्तस्य ब्रह्मणोऽसंदिग्धत्वान्न विषयत्वं सम्भवति ।**

ಜ್ಞಾನವು ಸ್ವಪ್ರಕಾಶವಾಗಿದೆ. ಅಂತಹ ಜ್ಞಾನಕ್ಕೆ ಆತ್ಮನು ಆಶ್ರಯನಾಗಿದ್ದಾನೆ ಹೊರತು ಸ್ವತಃ ಸ್ವಪ್ರಕಾಶನಾಗಿಲ್ಲ. ಇದೇ ರೀತಿಯಲ್ಲಿ ಆತ್ಮನು ಎಲ್ಲರಿಗೂ ತೋರುತ್ತಾನೆ ಎಂದು ಪ್ರಶ್ನಿಸಬಹುದು. ಆದರೆ ಸುಷುಪ್ತಿಯ ಅನಂತರಕಾಲದಲ್ಲಿ ಬರುವ ಸ್ಮೃತಿಯಿಂದ ಆತ್ಮನೇ ಸ್ವಪ್ರಕಾಶನೆಂದು ಸಿದ್ಧನಾಗುತ್ತಾನೆ. ಹೀಗೊಪ್ಪದಿದ್ದರೆ ಸುಷುಪ್ತಿಯಲ್ಲಿ ಬರುವ ಅನುಭವವನ್ನೇ ಅಪಲಾಪ ಮಾಡಬೇಕಾದೀತು. ಏಕೆಂದರೆ ಸುಷುಪ್ತಿಯಲ್ಲಿ ಆತ್ಮನಿಗಿಂತ ಭಿನ್ನವಾದ ಯಾವುದೇ ವಸ್ತುವು ಇರುವುದಿಲ್ಲವೆಂದು ಎಲ್ಲರೂ ಒಪ್ಪಿದ್ದಾರೆ. ಆತ್ಮನು ಜ್ಞಾನಸ್ವರೂಪನಾದ್ದರಿಂದ ಜ್ಞಾನವು ಸ್ವತಃ ತನಗೆ ಹೇಗೆ ಆಶ್ರಯವಾಗುವುದಿಲ್ಲವೋ ಅದರಂತೆ ಆತ್ಮನೂ ಸಹ ಜ್ಞಾನಾಶ್ರಯನಾಗಿದ್ದಾನೆಂಬ ಪ್ರತೀತಿ ಯಾರಿಗೂ ಬರುವುದಿಲ್ಲ. ಆದ್ದರಿಂದ ಸ್ವಪ್ರಕಾಶನಾದ ಆತ್ಮನಿಗಿಂತ ಭಿನ್ನನಾದ ಬ್ರಹ್ಮನು ಇರುವುದಿಲ್ಲ. ಅಂತಹ ಆತ್ಮನು ಅಸಂದಿಗ್ಧನಾದ್ದರಿಂದ ಶಾಸ್ತ್ರಕ್ಕೆ ವಿಷಯವೇ ಇಲ್ಲ.

**तत्वप्रकाशिका – नच जिज्ञासायाः प्रयोजनमस्ति । ज्ञायमानेऽपि ब्रह्मणि तदनुपलम्भात् । विषयप्रयोजनाभावान्न ब्रह्मजिज्ञासायामधिकारी विद्यते । अत एव न सम्बन्धः । अतो 'न ब्रह्मजिज्ञासा कर्तव्या' इति 'नैतच्छास्त्रमारम्भणीयम्' इति ।**

ಬ್ರಹ್ಮಜಿಜ್ಞಾಸೆಗೆ ಪ್ರಯೋಜನವು ಇಲ್ಲ. ಏಕೆಂದರೆ ಜೀವರಿಗಿಂತ ಭಿನ್ನನೆಂದು ಬ್ರಹ್ಮನನ್ನು ತಿಳಿದರೂ ಯಾರಿಗೂ ಮೋಕ್ಷವು ದೊರೆತಿಲ್ಲ.

ಹೀಗೆ ವಿಷಯಪ್ರಯೋಜನಗಳಿಲ್ಲದ ಕಾರಣ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಯೂ ಇಲ್ಲ. ವಿಷಯ, ಪ್ರಯೋಜನ, ಅಧಿಕಾರಿಗಳಿಲ್ಲದ ಕಾರಣ ಸಂಬಂಧವೂ ಇರುವುದಿಲ್ಲ. ಆದ್ದರಿಂದ

ಬ್ರಹ್ಮಜಿಜ್ಞಾಸೆಯನ್ನು ಮಾಡಬಾರದು. ಈ ಶಾಸ್ತ್ರವನ್ನು ಸಹ ರಚಿಸಬಾರದು. ಇಷ್ಟು ಪೂರ್ವಪಕ್ಷ.

## ನ್ಯಾಯವಿವರಣದಲ್ಲಿ ಹೇಳಿದ ಪೂರ್ವಪಕ್ಷ

**ಭಾವದೀಪಃ – 'सङ्गम्यन्ते गुरोर्गिरः' इति स्वप्रतिज्ञामनुरुध्य सौत्रब्रह्मपद-व्यावर्त्योक्तिपरं जीवव्यतिरिक्तेश्वराभावात्, तस्य च स्वप्रकाशत्वात् न जिज्ञास्यता इति न्यायविवरणं विवृण्वन् पूर्वपक्षमाह – न कर्तव्येति ।। अधिकारि इति ।।**

'ಸಂಗಮ್ಯಂತೇ ಗುರೋರ್ಗಿರಃ' ಎಂಬ ತಮ್ಮ ಪ್ರತಿಜ್ಞಾ ವಚನವನ್ನು ಅನುಸರಿಸಿ ಸೂತ್ರದಲ್ಲಿರುವ ಬ್ರಹ್ಮಪದದಿಂದ ಪರಿಹಾರವಾಗುವ ನ್ಯಾಯವಿವರಣೆಯಲ್ಲಿ ಹೇಳಿದ ಪೂರ್ವಪಕ್ಷವನ್ನು 'ನ ಕರ್ತವ್ಯಾ' ಎಂಬ ಗ್ರಂಥದಿಂದ ವಿವರಿಸುತ್ತಿದ್ದಾರೆ. ''ಜೀವವ್ಯತಿರಿಕ್ತನಾದ ಈಶ್ವರನೇ ಇಲ್ಲ. ಜೀವನಾದರೂ ಸ್ವಪ್ರಕಾಶನಾದ್ದರಿಂದ ಜಿಜ್ಞಾಸ್ಯನಲ್ಲ'' ಎಂಬುದು ಈ ಅಧಿಕರಣದ ಪೂರ್ವಪಕ್ಷ.(೧)

## ನ್ಯಾಯವಿವರಣದಲ್ಲಿ ವಿಷಯಶೂನ್ಯತ್ವ ಹೇತುವಿನಿಂದಲೇ ಎಲ್ಲವೂ ಸೂಚಿತ

**ಭಾವದೀಪಃ – यद्यपि न्यायविवरणे 'जीवव्यतिरिक्ता' इत्यादिना विषयशून्यत्वमेको हेतुरुक्तो भाति, नतु हेतुचतुष्टयमपि । तथापि विषयशून्यत्वोक्त्यैव तदन्यत्रितयशून्यत्वमपि लभ्यत इति भावेन विषयशून्यत्वं तावद् वक्ति – न तावद् ब्रह्मविषय इति ।।**

(೧) ಟೀಕೆಯಲ್ಲಿ ಮಾಡಿದ ನ್ಯಾಯವಿವರಣ ಗ್ರಂಥದ ವ್ಯಾಖ್ಯಾನ ವೈಖರಿಯ ಬಗ್ಗೆ ಭಾವದೀಪಕಾರರು ಎಲ್ಲೆಡೆಯೂ ಸುಂದರವಾಗಿ ಎತ್ತಿತೋರಿಸಿದ್ದಾರೆ. ನ್ಯಾಯವಿವರಣೆ ಹಾಗೂ ನ್ಯಾಯವಿವರಣಟೀಕೆಗಳನ್ನು ಮನದಟ್ಟು ಮಾಡಿಕೊಳ್ಳದಿದ್ದರೆ ಟೀಕೆಯ ಚಮತ್ಕಾರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಆದ್ದರಿಂದ ಜಿಜ್ಞಾಸುಗಳಿಗೆ ಅನುಕೂಲವಾಗಲು ಅಧಿಕರಣದ ಕೊನೆಯಲ್ಲಿ ನ್ಯಾಯವಿವರಣವನ್ನು ನ್ಯಾಯವಿವರಣೆ ಟೀಕೆಯ ಸಹಿತವಾಗಿ ಕನ್ನಡಾನುವಾದದೊಂದಿಗೆ ನೀಡಲಾಗಿದೆ.

ವಸ್ತುತಃ ನ್ಯಾಯವಿವರಣದಲ್ಲಿ 'ಜೀವವ್ಯತಿರಿಕ್ತ' ಇತ್ಯಾದಿ ವಾಕ್ಯದಿಂದ 'ವಿಷಯಶೂನ್ಯತ್ವಾತ್' ಎಂಬ ಒಂದೇ ಹೇತುವನ್ನು ಹೇಳಿದಂತೆ ತೋರುತ್ತದೆ. ಹೊರತು ಪ್ರಯೋಜನಾದ್ಯಭಾವಗಳೆಂಬ ನಾಲ್ಕು ಹೇತುಗಳನ್ನು ಹೇಳಿದಂತೆ ಕಾಣುವುದಿಲ್ಲ. ಆದರೂ ಸಹ ವಿಷಯಶೂನ್ಯತ್ವವೆಂಬ ಹೇತುವಿನಿಂದಲೇ ಪ್ರಯೋಜನಾದ್ಯಭಾವಗಳೆಂಬ ಹೇತುಗಳನ್ನೂ ಹೇಳಿದಂತಾಗುತ್ತದೆಂಬುದು ನ್ಯಾಯವಿವರಣೆಯ ಅಭಿಪ್ರಾಯ. ಈ ವಿಚಾರವನ್ನು 'ನ ತಾವದ್ ಬ್ರಹ್ಮವಿಷಯಃ' ಎಂಬ ವಾಕ್ಯವು ಪ್ರತಿಪಾದಿಸುತ್ತಿದೆ.

## ಬ್ರಹ್ಮನೇಕೆ ಅಸಂದಿಗ್ಧ ?

**ಭಾವದೀಪಃ – 'ब्रह्मरूपो विषयस्तावन्नास्ति । प्रयोजनादि च नास्तीति वक्ष्यामः' इति तावच्छब्दः । श्रुतौ 'ब्रह्म' इति श्रवणात् निष्कृष्योक्तिः । 'असन्दिग्धत्वात्' इत्येतदेव व्यनक्ति – प्रमाणाभावेन इत्यादिना स्वप्रकाशत्वात् इत्यन्तेन ।।**

ಬ್ರಹ್ಮರೂಪವಾದ ವಿಷಯವಾದರೂ ಇಲ್ಲ. ಪ್ರಯೋಜನಾದಿಗಳೂ ಸಹ ಇಲ್ಲವೆಂದು ಮುಂದೆ ಸಮರ್ಥಿಸುತ್ತೇವೆಂದು ''ತಾವತ್'' ಶಬ್ದವು ಸೂಚಿಸುತ್ತಿದೆ. ಶ್ರುತಿಯಲ್ಲಿ ಬ್ರಹ್ಮಪದವಿರುವುದರಿಂದ ಸ್ಪಷ್ಟವಾಗಿ ಬ್ರಹ್ಮನು ವಿಷಯನಲ್ಲವೆಂದು ಇಲ್ಲಿ ತಿಳಿಸಿದ್ದಾರೆ. 'ಅಸಂದಿಗ್ಧತ್ವಾತ್' ಇತ್ಯಾದಿ ವಾಕ್ಯದಲ್ಲಿ ಅಸಂದಿಗ್ಧತ್ವಹೇತುವನ್ನೇ 'ಪ್ರಮಾಣಾಭಾವೇನ' ಎಂಬಲ್ಲಿಂದ ಪ್ರಾರಂಭಿಸಿ 'ಸ್ವಪ್ರಕಾಶತ್ವಾತ್' ಎಂಬಲ್ಲಿಯ ತನಕ ಸಮರ್ಥಿಸುತ್ತಿದ್ದಾರೆ.

## ಬ್ರಹ್ಮನ ಬಗ್ಗೆ ಪ್ರಮಾಣಗಳಿಲ್ಲ

**ಭಾವದೀಪಃ – कर्मकाण्डस्य कर्मपरत्वात् वेदान्तानां च जीवचैतन्यपरत्वात् प्रत्यक्षानुमानयोश्चाप्रसक्तेरिति भावः ।**

ಕರ್ಮಕಾಂಡವು ಕರ್ಮಪರವಾಗಿದೆ, ವೇದಾಂತಗಳೆಲ್ಲವೂ ಜೀವಚೈತನ್ಯಪರವಾಗಿವೆ. ಪ್ರತ್ಯಕ್ಷಾನುಮಾನಗಳಂತೂ ಬ್ರಹ್ಮನನ್ನು ಸಾಧಿಸಲು ಸಮರ್ಥವಲ್ಲ. ಆದ್ದರಿಂದ ಬ್ರಹ್ಮನ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ ಎಂದಂತಾಯಿತು.

## ಬ್ರಹ್ಮಪ್ರತಿಪಾದಕ ಶಬ್ದಗಳಿಂದ ಜೀವನೇ ಪ್ರತಿಪಾದ್ಯ

**ಭಾವದೀಪಃ – 'ब्रह्मणोऽभावात्' इत्येव पूर्तौ 'जीव' इत्याद्युक्तिः वेदान्तानां निर्विषयत्वशङ्काव्युदासाय । उक्तं च सुधायाम् – 'ईश्वरविषया जिज्ञासा भविष्यतीति चेत् तस्यैवाभावात् । न चैवम् ईश्वरादिपदानामानर्थक्येनापदत्वप्रसङ्ग इति वाच्यम् । तेषां कथञ्चित् जीवविषयत्वात्' इत्यादि ।**

'ಅಸಂದಿಗ್ಧತ್ವಾತ್' ಎಂಬ ಟೀಕೆಯಲ್ಲಿ 'ಪ್ರಮಾಣಾಭಾವೇನ ಬ್ರಹ್ಮಣೋऽಭಾವಾತ್' ಎಂದಿಷ್ಟೇ ಸಾಕಿತ್ತು; ಆದರೂ 'ಜೀವವ್ಯತಿರಿಕ್ತಸ್ಯ' ಎಂದು ಹೇಳಿದ್ದರಿಂದ ವೇದಾಂತಗಳಿಗೆ ಜೀವನು ವಿಷಯನಾದ್ದರಿಂದ ನಿರ್ವಿಷಯತ್ವಶಂಕೆಯು ಬರುವುದಿಲ್ಲವೆಂದು ಸೂಚಿಸಿದಂತಾಯಿತು. ಇದನ್ನೇ ಸುಧೆಯಲ್ಲಿ "ಈಶ್ವರವಿಷಯಾ ಜಿಜ್ಞಾಸಾ ಭವಿಷ್ಯತೀತಿ ಚೇತ್ ತಸ್ಯೈವಾಭಾವಾತ್ । ನ ಚೈವಂ ಈಶ್ವರಾದಿಪದಾನಾಮಾನರ್ಥಕ್ಯೇನ ಅಪದತ್ವಪ್ರಸಂಗ ಇತಿ ವಾಚ್ಯಮ್ । ತೇಷಾಂ ಕಥಂಚಿತ್ ಜೀವವಿಷಯತ್ವಾತ್" (ಈಶ್ವರವಿಷಯಕವಾದ ಜಿಜ್ಞಾಸೆಯು ಬರುತ್ತದಲ್ಲವೇ ? ಎಂದರೆ ಈಶ್ವರನೇ ಇಲ್ಲ. ಹಾಗಾದರೆ ಈಶ್ವರಪ್ರತಿಪಾದಕ ಪದಗಳಿಗೆ ವ್ಯರ್ಥವಾಗಿ ಅಪದತ್ವದೋಷ ಬರುತ್ತದಲ್ಲ ಎಂದು ಶಂಕಿಸಬಾರದು. ಈಶ್ವರಪ್ರತಿಪಾದಕಶಬ್ದಗಳು ಜೀವವಿಷಯಕಗಳಾಗಿವೆ. ಎಂದು ಹೇಳಿದ್ದಾರೆ.

## ಜೀವ ಜಡಗಳ ಜಿಜ್ಞಾಸೆ ಅನಾವಶ್ಯಕ

**ಭಾವದೀಪಃ – तर्हि 'जीव एवास्तु जिज्ञासाविषयः' इत्यत आह – जीवस्य चेति ।। 'जडं तु न सत्यम्' इति भावः ।**

ಈಶ್ವರನು ಜಿಜ್ಞಾಸೆಗೆ ವಿಷಯನಾಗದಿದ್ದರೆ ಜೀವನು ವಿಷಯನಾಗಬಹುದಲ್ಲವೇ? ಎಂಬ ಪ್ರಶ್ನೆಗೆ 'ಜೀವಸ್ಯ ಚ' ಎಂದು ಉತ್ತರಿಸಿದ್ದಾರೆ. ಜಡಪದಾರ್ಥವು ಸತ್ಯವಲ್ಲದ ಕಾರಣ ಜಿಜ್ಞಾಸೆಗೆ ವಿಷಯವಾಗಲಾರದು ಎಂದು ಅಭಿಪ್ರಾಯ.

## ಜೀವಜಿಜ್ಞಾಸೆ ಮಾಡಬಹುದೇ ?

**ಭಾವದೀಪಃ** – अत एव जीवस्य स्वप्रकाशत्वेपि देहादिभिन्नताणुत्वमहत्व ज्ञानानन्दात्मकत्वकर्तृत्वादिना सन्दिग्धत्वात् तेन रूपेणास्तु जिज्ञासाविषयत्वम् । अन्यथा सिद्धान्तेऽपि 'ज्ञोऽत एव' इत्यारभ्य आपादसमाप्ति द्वितीये जीवविचारो न स्यादिति प्रत्युक्तम् । अभेदवादिनः पूर्वपक्षिणो मते जीवचैतन्यादन्यस्य सर्वस्यासत्वेन विषयत्वायोगात् । न चेति ।।

ಜೀವನು ಸ್ವಪ್ರಕಾಶನಾಗಿದ್ದರೂ ದೇಹಾದಿಭೇದ, ಅಣುತ್ವ, ಮಹತ್ವ, ಜ್ಞಾನಾನಂದಾತ್ಮಕತ್ವ, ಕರ್ತೃತ್ವ ಮೊದಲಾದ ಧರ್ಮಗಳಿಂದ ಸಂದಿಗ್ಧನಾಗಿದ್ದಾನೆ. ಈ ರೂಪದಿಂದ ಜೀವನು ಜಿಜ್ಞಾಸೆಗೆ ವಿಷಯನಾಗುತ್ತಾನೆ. ಇಲ್ಲದಿದ್ದರೆ ಸಿದ್ಧಾಂತದಲ್ಲಿಯೂ ಎರಡನೆಯ ಅಧ್ಯಾಯದಲ್ಲಿ 'ಜ್ಞೋऽತ ಏವ' ಎಂಬ ಸೂತ್ರದಿಂದ ಆರಂಭಿಸಿ ಪಾದ ಮುಗಿಯುವ ತನಕ ಜೀವವಿಚಾರ ಮಾಡಿದ್ದು ತಪ್ಪಾದೀತು - ಎಂಬ ಆಕ್ಷೇಪಕ್ಕೆ ಈಗ ಅವಕಾಶವಿಲ್ಲ. ಏಕೆಂದರೆ ಜೀವನು ಸ್ವಪ್ರಕಾಶನಾಗಿ ನಿತ್ಯಸಿದ್ಧನಾಗಿದ್ದಾನೆಂದು ಹೇಳಿದ್ದರಿಂದ ಮತ್ತು ಜೀವಚೈತನ್ಯಕ್ಕಿಂತ ಅತಿರಿಕ್ತವಾದ ದೇಹಾದಿಭೇದಗಳೆಲ್ಲವೂ ಮಿಥ್ಯಾಭೂತಗಳೆಂದು ಅದ್ವೈತಿಗಳು ಒಪ್ಪಿದ್ದಾರೆ.

## ಭಾಷ್ಯ ಹಾಗೂ ನ್ಯಾಯವಿವರಣೆಗಳ ಸಂಗಮ

**ಭಾವದೀಪಃ** – यद्यपि स्वप्रकाशत्वासमर्थनेऽपि मानसानुभवादिना सिद्धत्वेऽपि प्रकृतसिद्धिरस्ति, 'स्वप्रकाशतया वा स्वप्रकाशज्ञानाश्रयतया वा मानसप्रत्यक्षवेद्यतया वा सिद्धत्वेन' इति सुधोक्तेः । तथापि न्यायविवरणोक्तवास्तवप्रमेयसमर्थनमेतत् । 'सङ्गम्यन्ते गुरोर्गिरः' इति तद्विवरणस्यापि प्रतिज्ञानात् ।

ವಸ್ತುತಃ ಸ್ವಪ್ರಕಾಶಕತ್ವವನ್ನು ಅಂಗೀಕರಿಸಿ ಪೂರ್ವಪಕ್ಷವನ್ನು ರಚಿಸಬೇಕಾಗಿಲ್ಲ. ಮಾನಸಾದ್ಯನುಭವಗಳಿಂದಲೂ ಜೀವನು ಸಿದ್ಧನಾಗುವ ಕಾರಣ ಪೂರ್ವಪಕ್ಷ

ಮಾಡಬಹುದು. ಆದ್ದರಿಂದಲೇ ಸುಧೆಯಲ್ಲಿ 'ಸ್ವಪ್ರಕಾಶತಯಾ ವಾ ಸ್ವಪ್ರಕಾಶ-ಜ್ಞಾನಾಶ್ರಯತಯಾ ವಾ ಮಾನಸಪ್ರತ್ಯಕ್ಷವೇದ್ಯತಯಾ ವಾ ಸಿದ್ಧತ್ವೇನ' ಎಂದಿದ್ದಾರೆ. ನ್ಯಾಯವಿವರಣದಲ್ಲಿ ಹೇಳಿದ್ದು ವಸ್ತುಸ್ಥಿತಿಯೆಂಬ ಅಭಿಪ್ರಾಯದಿಂದ ಸ್ವಪ್ರಕಾಶತ್ವವನ್ನು ಅಂಗೀಕರಿಸಿ ಪೂರ್ವಪಕ್ಷ ಮಾಡಿದ್ದಾರೆ. ಮತ್ತು 'ಸಂಗಮ್ಯಂತೇ ಗುರೋರ್ಗಿರಃ' ಎಂಬ ಪ್ರತಿಜ್ಞೆಯನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ.

## ನ್ಯಾಯಸುಧೆ ಹಾಗೂ ನ್ಯಾಯವಿವರಣೆಗಳ ಸಂಗಮ

**ಭಾವದೀಪಃ – ಅಹಮಿತ್ಯನುಭವಃ ಸ್ವಪ್ರಕಾಶರೂಪೋ ನ ಚೇತ್ ತತ್ಪ್ರಕಾಶಃ ಕಿಂ ತಾರ್ಕಿಕರೀತ್ಯಾ ಮಾನಸಾನುಭವೇನ, ಕಿಂವಾ ಪ್ರಾಭಾಕರರೀತ್ಯಾ ಸ್ವಪ್ರಕಾಶಜ್ಞಾನಾಶ್ರಯತಯಾ। ಆದ್ಯಮಾಶಙ್ಕ್ಯಾಹ – ನಚಾಯಮಿತಿ ।। ಆ(ಸ್ವಾ)ತ್ಮನ ಇತಿ ।। 'ಲಾಘವಾತ್ ಆ(ಸ್ವಾ)ತ್ಮನ ಏವ ತದಸ್ತು' ಇತ್ಯರ್ಥಃ ।**

ಸುಧೆಯಲ್ಲಿ ಹೇಳಿದಂತೆ ಆತ್ಮನು ತಾರ್ಕಿಕರ ಪ್ರಕಾರ ಮಾನಸಾನುಭವದಿಂದ, ಪ್ರಾಭಾಕರರ ಪ್ರಕಾರ ಸ್ವಪ್ರಕಾಶಜ್ಞಾನಾಶ್ರಯತ್ವದಿಂದ ಸಿದ್ಧನಾಗಬಹುದು. ಮೊದಲನೆಯ ಪಕ್ಷವನ್ನು 'ನಚಾಯಂ' ಎಂಬುದರಿಂದ ಶಂಕಿಸುತ್ತಿದ್ದಾರೆ. 'ಅಸ್ತು ಆತ್ಮನಃ' ಎಂಬ ಟೀಕೆಗೆ ಹೀಗೆ ಅರ್ಥ. ಅನುಭವವನ್ನು ಸ್ವಪ್ರಕಾಶವೆಂದು ಹೇಳುವುದಕ್ಕಿಂತ 'ಆತ್ಮನು ಸ್ವಪ್ರಕಾಶ' ಎನ್ನುವುದು ಲಾಘವ.

> ಒಟ್ಟು ಅಭಿಪ್ರಾಯ – ಸೂತ್ರದ ಬ್ರಹ್ಮಶಬ್ದಕ್ಕೆ ಬ್ರಹ್ಮನು ಗುಣಪೂರ್ಣನಾದ್ದರಿಂದ ಜೀವನಿಗಿಂತ ವಿಲಕ್ಷಣ ಎಂದು ತಿಳಿಸುವ ಅಭಿಪ್ರಾಯವಿರುವುದರಿಂದ ಆ ಶಬ್ದದಿಂದ ನಿವಾರಣೆಯಾಗುವ ಪೂರ್ವಪಕ್ಷವನ್ನು ಹೇಳಬೇಕು -
>
> ವೇದದಲ್ಲಿ ಕರ್ಮಕಾಂಡ ಕರ್ಮವನ್ನು ಹೇಳಲು ಹೊರಟಿದೆ. ವೇದಾಂತಕ್ಕೆ ಆದ್ವೈತಿಗಳು ಹೇಳಿದಂತೆ ಉಪಕ್ರಮಾದಿ ಲಿಂಗಗಳಿಂದ ನಿರ್ಧರ್ಮಕ ಚೈತನ್ಯವನ್ನು ಹೇಳುವ ಅಭಿಪ್ರಾಯ ಮೇಲುನೋಟಕ್ಕೆ ಕಾಣುತ್ತದೆ. ಹೀಗಾಗಿ ಜೀವನಿಗಿಂತ ಬೇರೆ ಗುಣಪೂರ್ಣ ಬ್ರಹ್ಮನಿಲ್ಲ. ಜೀವ ಸ್ವಪ್ರಕಾಶನಾಗಿ ಸಿದ್ಧನಾಗಿದ್ದಾನೆ. ಆತ್ಮನಿಗಿಂತ ಬೇರೆ ಯಾವುದೂ ಸತ್ಯವಲ್ಲ. ಶಾಸ್ತ್ರವೇದ್ಯವೂ ಅಲ್ಲ. ಸತ್ಯವಲ್ಲದ್ದು ಶಾಸ್ತ್ರವೇದ್ಯವಾದರೆ ಶಾಸ್ತ್ರ ಅಪ್ರಮಾಣವಾದೀತು. ವೇದಾಂತವೇದ್ಯವಾದ ಶುದ್ಧಚೈತನ್ಯ ಅನುಭವದಲ್ಲಿ

ಅವೇದ್ಯ ಎನ್ನುವ ವಾದವನ್ನು ಹಿಂದೆಯೆ ನಿರಾಕರಿಸಲಾಗಿದೆ. ವೇದ್ಯವೆ ಆದರೂ ಅವಿದ್ಯೆಯ ಪ್ರಭಾವದಿಂದ ಅವೇದ್ಯವೂ ಹೌದೆನ್ನುವುದನ್ನೂ ಹಿಂದೆ ನಿರಾಕರಿಸಲಾಗಿದೆ. ಪ್ರತ್ಯಕ್ಷವಿರೋಧವಿರುವಾಗ ವೇದಾಂತವು ಶುದ್ಧಚೈತನ್ಯವನ್ನು ಹೇಗೆ ಹೇಳುತ್ತದೆ ಎಂದರೆ ಅದ್ವೈತಿ ರೀತಿಯಿಂದ ಪ್ರತ್ಯಕ್ಷ ದುರ್ಬಲವಾಗಿದೆ..

ಯಾವ ರೀತಿಯಿಂದ ನೋಡಿದರೂ ವಿಚಾರ ಅನಾವಶ್ಯಕ ಪ್ರತ್ಯಕ್ಷ ವಿರುದ್ಧವಾಗಿ ಶ್ರುತಿ ಏನು ಹೇಳಿದರೂ ಅದು ನಿರರ್ಥಕ, ಮತ್ತು ವಿಚಾರಕ್ಕೇ ಅಯೋಗ್ಯವೆಂದು ಸುಧೆಯಲ್ಲಿ ಪೂರ್ವಪಕ್ಷವಿದೆ.

## ಅನವಸ್ಥಾ ದೋಷವಿಲ್ಲ

**ಭಾವದೀಪಃ – ಜಿಜ್ಞಾಸಾಯಾಮಿತಿ ।।** ಜಿಜ್ಞಾಸಾ ಚ ನ ಸರ್ವತ್ರೇತಿ ನಾನವಸ್ಥಾ ಇತಿ ಭಾವಃ । **ಅನುಭವೇತಿ ।।** ಜ್ಞಾನಸ್ಯ ಸುಖದುಃಖಾದಿವತ್ ಜಿಜ್ಞಾಸಾಭಾವೇಪ್ಯನುಭವೇನ ತದ್ವಿರೋಧಾತ್ । ಅನ್ಯಥಾ ಜಿಜ್ಞಾಸಾಯಾ ಜ್ಞಾನಾಖ್ಯಧರ್ಮಿಜ್ಞಾನಸಾಧ್ಯತ್ವಾನುಭವಾದನವಸ್ಥಾ ಸ್ಯಾತ್ । ಅನ್ಯಥಾऽನುಭವವಿರೋಧಾದಿತ್ಯರ್ಥಃ ।

'ಜಿಜ್ಞಾಸಾಯಾಮ್' ಎಂದರೆ ಜಿಜ್ಞಾಸೆಯು ಎಲ್ಲೆಡೆ ಬಾರದ ಕಾರಣ ಅನವಸ್ಥಾ ಇಲ್ಲ ಎಂದು ಅಭಿಪ್ರಾಯ. ಜ್ಞಾನವು ಸುಖದುಃಖಾದಿಗಳಂತೆ ಜಿಜ್ಞಾಸೆ ಇಲ್ಲದಿದ್ದರೂ ಹುಟ್ಟುತ್ತದೆಂದು ಅನುಭವವಿದೆ. ಇದರ ವಿರೋಧ ಬರುತ್ತದೆಂದು 'ಅನುಭವವಿರೋಧಾತ್' ಎಂಬ ಮಾತಿನ ಅರ್ಥ. ಹೀಗೆ ಹೇಳದಿದ್ದರೆ ಜಿಜ್ಞಾಸೆಯು ಜ್ಞಾನವೆಂಬ ಧರ್ಮಿಜ್ಞಾನಸಾಧ್ಯವಾದ್ದರಿಂದ ಅನವಸ್ಥಾದೋಷ ಬರುತ್ತದೆ. ಹೀಗೆ ಒಪ್ಪದಿದ್ದರೆ ಅನುಭವವಿರೋಧ ಬರುತ್ತದೆಂದು ಅಭಿಪ್ರಾಯ.

## ಜೀವ ಸ್ವಪ್ರಕಾಶ -

**ಭಾವದೀಪಃ –** ನನು ನ ಜ್ಞಾನಮಾತ್ರಮಜಿಜ್ಞಾಸಿತಗ್ರಾಹ್ಯಮ್ । ಯೇನಾನವಸ್ಥಾ ನಾಪಿ ಜಿಜ್ಞಾಸಿತಗ್ರಾಹ್ಯಮ್ । ಯೇನಾನುಭವವಿರೋಧಃ । ಕಿನ್ತು ಕಿಞ್ಚಿಜ್ಞಾನಂ ಕದಾಪಿ ನ ಜ್ಞಾಯತ ಏವೇತಿ ನ ಕೋऽಪಿ ದೋಷಃ? ಇತ್ಯತ ಆಹ – **ನಹೀತಿ ।।** ನಚೇಷ್ಟಾಪತ್ತಿಃ । ಅಸತ್ವಾಪಾತಾದಿತಿ ಭಾವಃ ।

''ಶುದ್ಧಜ್ಞಾನವು ಅಜಿಜ್ಞಾಸಿತಗ್ರಾಹ್ಯವಲ್ಲ. ಹಾಗಾದಲ್ಲಿ ಅನವಸ್ಥಾ ಬರುತ್ತಿತ್ತು. ಜಿಜ್ಞಾಸಿತಗ್ರಾಹ್ಯವೂ ಅಲ್ಲ. ಆದ್ದರಿಂದ ಅನುಭವವಿರೋಧವು ಬರುವುದಿಲ್ಲ ಹೊರತಾಗಿ 'ಯಾವುದೋ ಒಂದು ಜ್ಞಾನವು ಯಾವಕಾಲದಲ್ಲಿಯೂ ತಿಳಿಯುವುದೇ ಇಲ್ಲವೆಂದು ಉತ್ತರಿಸುತ್ತೇವೆ. ಈ ಪಕ್ಷದಲ್ಲಿ ಅನವಸ್ಥಾದೋಷಕ್ಕಾಗಲೀ ಅನುಭವವಿರೋಧಕ್ಕಾಗಲೀ ಆಸ್ಪದವಿಲ್ಲ'' - ಎಂಬ ಪ್ರಶ್ನೆಗೆ 'ನಹಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಯಾವುದೇ ಕಾಲದಲ್ಲಿಯೂ ತಿಳಿಯದ ಜ್ಞಾನವನ್ನು ಒಪ್ಪಿದರೆ ಜ್ಞಾನವೇ ಇಲ್ಲವೆಂದು ಒಪ್ಪಿದಂತಾಯಿತು.

## ಪ್ರಾಭಾಕರರ ಪಕ್ಷ ತಪ್ಪು

**ಭಾವದೀಪಃ – ದ್ವಿತೀಯಂ ಶಙ್ಕತೇ – ನಚೇತಿ ।। ಔತ್ತರಿಕೇತಿ ।।** ಸುಪ್ತೋತ್ಥಿತಸ್ಯ 'ಏತಾವನ್ತಂ ಕಾಲಂ ಸುಖಮಹಮಸ್ವಾಪ್ಸಮ್' ಇತಿ ಔತ್ತರಿಕೀ ಉತ್ತರಕಾಲೀನಾ ಅನುಸ್ಮೃತಿಸ್ತಾವದಸ್ತಿ। ಸಾ ಚ ಪೂರ್ವಾನುಭವಜನ್ಯೇತಿ ಸುಪ್ತಾವಪ್ಯನುಭವಃ ಕಶ್ಚನ ಸಿಧ್ಯತಿ । ಸ ಚ ಸ್ವಪ್ರಕಾಶಾತ್ಮರೂಪಪಕ್ಷ ಏವೋಪಪದ್ಯತೇ । ನ ಸಂವಿದಾಶ್ರಯತಯಾ ಆತ್ಮಪ್ರಕಾಶೇ ।

ಪ್ರಾಭಾಕರರ ಪ್ರಕಾರ ಸ್ವಪ್ರಕಾಶಜ್ಞಾನಕ್ಕೆ ಆತ್ಮನು ಆಶ್ರಯನಾಗಿದ್ದಾನೆಂಬ ಎರಡನೆಯ ಪಕ್ಷವನ್ನು 'ನಚ' ಎಂಬ ಗ್ರಂಥದಿಂದ ಶಂಕಿಸಿದ್ದಾರೆ. ವಸ್ತುತಃ ಜ್ಞಾನವು ಸ್ವಪ್ರಕಾಶವಾಗಿದೆ. ಇಂತಹ ಜ್ಞಾನಕ್ಕೆ ಆಶ್ರಯನಾಗಿ ಆತ್ಮನು ಸಿದ್ಧನಾಗುತ್ತಾನೆಂದು ಹೇಳಬೇಕು. ಆದರೆ ಸುಷುಪ್ತಿಯ ಉತ್ತರಕಾಲದಿಂದ ಉಂಟಾಗುವ ಪರಾಮರ್ಶದಿಂದ ವಿರೋಧವು ಬರುತ್ತದೆ. ಆದು ಹೀಗೆ -- ಸುಷುಪ್ತಿಯಿಂದ ಎದ್ದ ಪುರುಷನಿಗೆ 'ಏತಾವಂತಂ ಕಾಲಂ ಸುಖಮಹಮಪ್ಸ್ವಾಪ್ಸಮ್' (ಇಷ್ಟುಕಾಲ ಸುಖವಾಗಿ ಮಲಗಿದ್ದೆ) ಎಂದು ಸ್ಮರಣೆ ಬರುತ್ತದೆ. ಸ್ಮರಣೆಯು ಪೂರ್ವಾನುಭವದಿಂದಷ್ಟೇ ಹುಟ್ಟಲು ಸಾಧ್ಯ. ಆದ್ದರಿಂದ ಸುಷುಪ್ತಿಯಲ್ಲಿ ಯಾವುದೋ ಒಂದು ಅನುಭವವು ಸಿದ್ಧವಾಗುತ್ತದೆ. ಆ ಅನುಭವವಾದರೂ ಸ್ವಪ್ರಕಾಶನಾದ ಆತ್ಮನಲ್ಲಿಯೇ ಹೇಳಬೇಕು. ಹೊರತು ಸ್ವಪ್ರಕಾಶವಾದ ಸಂವಿತ್‌ಪದಾರ್ಥಕ್ಕೆ ಆಶ್ರಯನಾದ ಆತ್ಮನೆಂದು ಹೇಳಬಾರದು''.

## ಸುಷುಪ್ತಿಯಲ್ಲಿ ಎಲ್ಲವೂ ಉಪರತವಾಗುತ್ತವೆ

**ಭಾವದೀಪಃ** – ಕುತಃ? ಇತ್ಯತ ಆಹ – ನಹೀತಿ ।। 'ಗೃಹೀತ ಏವ ಪ್ರಾಣೋ ಭವತಿ, ಗೃಹೀತಾ ವಾಕ್ ಗೃಹೀತಂ ಚಕ್ಷುಃ- ಇತ್ಯಾದಿಕಾಣ್ವಶ್ರುತ್ಯಾ ಸರ್ವೇಂದ್ರಿಯಾಣಾಮುಪರಮಾತ್' ಇತಿ ಭಾವಃ । **'ಆತ್ಮಾತಿರಿಕ್ತಾ'** ಇತ್ಯುಕ್ತ್ಯಾ 'ಆತ್ಮಸ್ವರೂಪತ್ವೇನೈವ ಸೌಷುಪ್ತಿಕಾನುಭವಃ ಸಮಾಧೇಯಃ' ಇತಿ ಸೂಚಯತಿ । 'ಸಂವಿತ್' ಇತ್ಯುಪಲಕ್ಷಣಮ್ । ಸುಖಮಪಿ ಧ್ಯೇಯಮ್ । 'ಪುಂಸ್ತ್ವಾದಿವತ್ತ್ವಸ್ಯ ಸತೋऽಭಿವ್ಯಕ್ತಿಯೋಗಾತ್' ಇತ್ಯತ್ರ ದ್ವಿತೀಯೇ ।

ಈ ವಿಷಯದಲ್ಲಿ ಕಾರಣವನ್ನು 'ನಹಿ' ಎಂಬ ವಾಕ್ಯವು ಸಮರ್ಥಿಸುತ್ತಿದೆ. ಸುಷುಪ್ತಿಯಲ್ಲಿ ಆತ್ಮಾತಿರಿಕ್ತವಾದ ಸಂವಿತ್‌ಪದಾರ್ಥಗಳು ಇರಲು ಸಾಧ್ಯವೇ ಇಲ್ಲ. 'ಗೃಹೀತ ಏವ ಪ್ರಾಣೋ ಭವತಿ' ಎಂಬ ಕಾಣ್ವಶ್ರುತಿಯಂತೆ ಸಕಲ ಇಂದ್ರಿಯಗಳು ಸುಷುಪ್ತಿಯಲ್ಲಿ ಉಪರತವಾಗಿರುತ್ತವೆ. ಟೀಕೆಯಲ್ಲಿ 'ಆತ್ಮಾತಿರಿಕ್ತ' ಎಂಬ ಪದದಿಂದ ಸೌಷುಪ್ತಿಕ ಅನುಭವವು ಆತ್ಮಸ್ವರೂಪವೆಂದು ತಿಳಿಸಿದ್ದಾರೆ. ಸಂವಿತ್‌ಪದವು ಕೇವಲ ಉಪಲಕ್ಷಣವಾಗಿದೆ. ಸುಖವೂ ಆತ್ಮಸ್ವರೂಪವೆಂದು ತಿಳಿಯಬೇಕು.

## ಸ್ವಪ್ರಕಾಶತ್ವ ಸಮರ್ಥನೆ ಪ್ರಾಸಂಗಿಕ

**ಭಾವದೀಪಃ** –

'ಬಲಮಾನನ್ದಮೋಜಶ್ಚ ಸಹೋ ಜ್ಞಾನಮನಾಕುಲಮ್ ।
ಸ್ವರೂಪಾಣ್ಯೇವ ಜೀವಸ್ಯ .....'

ಇತ್ಯಾದಿವಚನಾದಿನಾ ಆನನ್ದಜ್ಞಾನಾದಿಸ್ವರೂಪತ್ವಸ್ಯಾತ್ಮನ ಉಪಪಾದಯಿಷ್ಯಮಾಣತ್ವಾತ್। ವಕ್ಷ್ಯಮಾಣೋಪಯೋಗಿತ್ವಾದಪಿ ಸ್ವಪ್ರಕಾಶತ್ವಸ್ಯಾತ್ರ ಪ್ರಪಞ್ಚನಮಿತಿ ಭಾವಃ ।

'ಪುಂಸ್ತ್ವಾದಿವತ್ತ್ವಸ್ಯ ಸತೋऽಭಿವ್ಯಕ್ತಿಯೋಗಾತ್' ಎಂದು ಎರಡನೆ ಅಧ್ಯಾಯದ ಮತ್ತು 'ಬಲಮಾನಂದ ಓಜಶ್ಚ ಸಹೋ ಜ್ಞಾನಮನಾಕುಲಮ್ । ಸ್ವರೂಪಾಣ್ಯೇವ ಜೀವಸ್ಯ' ಎಂಬಿತ್ಯಾದಿ ಸ್ಥಳದಲ್ಲಿ ಜೀವನು ಆನಂದಸ್ವರೂಪನು ಹಾಗೂ ಜ್ಞಾನಸ್ವರೂಪನು

ಆಗಿದ್ದಾನೆಂದು ಮುಂದೆ ಸಮರ್ಥಿಸುತ್ತಾರೆ. ಮುಂದೆ ಹೇಳುವುದಕ್ಕೆ ಉಪಯೋಗಿಯಾಗಿ ಸ್ವಪ್ರಕಾಶತ್ವವನ್ನು ಪ್ರಾಸಂಗಿಕವಾಗಿ ಇಲ್ಲಿ ಸಮರ್ಥಿಸಿದ್ದಾರೆಂದು ತಿಳಿಯಬೇಕು.

## ಸುಷುಪ್ತಿಯಲ್ಲಿನ ಅನುಭವ ಸಾಕ್ಷಿರೂಪ

**ಭಾವದೀಪಃ** – नायं सुप्तावनुभूतस्य परामर्शः । किन्तु तदैवातीतं सुप्तिकालमनुमानेनानुभूय (तदा तेन दुः) तद्द्वारेण दुःखानुभावोऽनुमीयत इति चेन्न । अस्यार्थस्य अतीतानागतौ कालौ इत्यादौ आनुमानिकपादीयानुव्याख्यानसुधयोर्निरासात् ।

ಸುಷುಪ್ತಿಕಾಲದಲ್ಲಿ ಅನುಭೂತವಾದ ಸುಖದ ಪರಾಮರ್ಶೆಯು ಬರುತ್ತದೆಂದು ಹೇಳಿದ್ದು ತಪ್ಪು. ಹೊರತಾಗಿ ಎಚ್ಚರಗೊಂಡ ಪುರುಷನಿಗೆ ಎಚ್ಚರವಾದ ಕ್ಷಣದಲ್ಲಿಯೇ ಅತೀತವಾದ ಸುಷುಪ್ತಿಕಾಲವನ್ನು ಅನುಮಾನದಿಂದ ಸಾಧಿಸಿ, ಅಂತಹ ಸುಷುಪ್ತಿಕಾಲದಲ್ಲಿ ದುಃಖಾಭಾವವನ್ನು ಅನುಮಾನ ಮಾಡುತ್ತಾನೆ. ಅಂದರೆ ಮೊದಲು ಸುಷುಪ್ತಿಕಾಲವನ್ನು ಸಾಧಿಸಿ ಅದೇ ಸುಷುಪ್ತಿಕಾಲವನ್ನು ಪಕ್ಷವನ್ನಾಗಿ ಮಾಡಿ ದುಃಖಾಭಾವವನ್ನು ಸಾಧಿಸುತ್ತಾನೆಂದು ಅಭಿಪ್ರಾಯ. ಹೀಗಿರುವಾಗ ಸುಷುಪ್ತಿಕಾಲದಲ್ಲಿ ಅನುಭವವು ಹೇಗೆ ತಾನೆ ಸಿದ್ಧವಾಗುತ್ತದೆ? ಈ ವಿಚಾರವನ್ನು ಆನುಮಾನಿಕಪಾದದಲ್ಲಿ 'अतीतानागतौ कालौ' ಎಂಬ ಅನುವ್ಯಾಖ್ಯಾನವನ್ನು ವ್ಯಾಖ್ಯಾನಿಸುವಾಗ ಸುಧೆಯಲ್ಲಿ ನಿರಾಕರಿಸಿದ್ದಾರೆ.

## ಸಾಕ್ಷಿಜ್ಞಾನ ಸ್ಮರಣೆ ಆಗಲು ಸಾಧ್ಯವಿಲ್ಲ

**ಭಾವದೀಪಃ** – अत्रैके 'साक्षिज्ञानमेवातीतविषयकत्वमात्रेणानुस्मृतिरुच्यते। आजन्ममरणं स्मृत्वा मुक्ता हर्षमवाप्नुयुः' इति छान्दोग्यभाष्योक्तस्मृतौ मुक्तस्वरूपज्ञाने स्मृतिशब्दप्रयोगात् । नित्ये स्वरूपानुभवरूपे ज्ञाने सत्येव तज्जन्यसंस्कारजन्यस्मृतिकल्पनायोगाच्च । मनोनुत्पन्नानुभवजनितसंस्कारसहकृतस्य मनसः तद्विषयस्मृतिजनकत्वेऽतिप्रसङ्गाच्च ।

ಕೆಲವರು ಸಾಕ್ಷಿಜ್ಞಾನವೇ ಅತೀತವಿಷಯಕವಾಗುವ ಮಾತ್ರದಿಂದ 'ಸ್ಮರಣೆ' ಎನಿಸುತ್ತದೆ. ಸ್ವರೂಪಜ್ಞಾನದಲ್ಲಿ ಸ್ಮೃತಿ ಎಂಬ ಶಬ್ದದ ಪ್ರಯೋಗವಿದೆ. 'ಆಜನ್ಮಮರಣಂ ಸ್ಮೃತ್ವಾ ಮುಕ್ತಾ ಹರ್ಷಮವಾಪ್ನುಯುಃ' (ಮುಕ್ತರು ಸಂಸಾರಕಾಲದ ಜನ್ಮದಿಂದಾರಂಭಿಸಿ ಮರಣದ ತನಕ ಎಲ್ಲವನ್ನೂ ಸ್ಮರಿಸಿಕೊಂಡು ಸಂತೋಷಪಟ್ಟರು) ಎಂದು ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯು ಸಾಕ್ಷಿಜ್ಞಾನವನ್ನೇ ಸ್ಮೃತಿ ಎನ್ನುತ್ತಿದೆ. ಸಾಕ್ಷಿಜ್ಞಾನವಾದರೋ ನಿತ್ಯವಾದ ಸ್ವರೂಪಾನುಭವರೂಪವಾಗಿದೆ. ಈ ಸ್ವರೂಪಾನುಭವಕ್ಕೆ ನಾಶವೇ ಇಲ್ಲದ ಕಾರಣ ಇದರಿಂದ ಸಂಸ್ಕಾರ, ಸಂಸ್ಕಾರದಿಂದ ಸ್ಮರಣೆಯು ಹುಟ್ಟಲು ಸಾಧ್ಯವೇ ಇಲ್ಲ. ಮನಸ್ಸಿನಿಂದ ಅನುಭವವು ಹುಟ್ಟಿ ಆದರಿಂದ ಸಂಸ್ಕಾರವು ಹುಟ್ಟಿ ಅನಂತರ ಬರುವುದೇ ಸ್ಮರಣೆ ಎಂದು ಲೋಕಪ್ರಸಿದ್ಧವಾಗಿದೆ. ಆದರೆ ಸಾಕ್ಷಿಯ ಅನುಭವವು ನಿತ್ಯವಾಗಿರುವುದರಿಂದ ಇದರಿಂದ ಸಂಸ್ಕಾರಾದಿಗಳು ಹುಟ್ಟಲು ಸಾಧ್ಯವಿಲ್ಲದ ಕಾರಣ ಇದನ್ನು ಸ್ಮರಣೆ ಎಂದು ಹೇಳಿದರೆ ಅತಿಪ್ರಸಂಗದೋಷ ಬರುತ್ತದೆ.

### 'ದೇವರು ಭಕ್ತರನ್ನು ಸ್ಮರಿಸುತ್ತಾನೆ' ಎಂಬುದಕ್ಕೆ ಏನರ್ಥ ?

**ಭಾವದೀಪಃ** – ಅತ ಏವ –

ಭಕ್ತಾನಾಂ ಸ್ಮರಣಂ ವಿಷ್ಣೋರ್ನಿತ್ಯಜ್ಞಪ್ತಿಸ್ವರೂಪತಃ ।
ಅನುಗ್ರಹೋನ್ಮುಖತ್ವಂ ತು ನೈವಾನ್ಯತ್ ಕ್ವಚಿದಿಷ್ಯತೇ ।।

ಇತಿ ಈಶಾವಾಸ್ಯಭಾಷ್ಯಟೀಕಾಯಾಂ 'ಸ್ಮರಣಂ ಹ್ಯನುಭವಜನ್ಯಸಂಸ್ಕಾರಸಹಕೃತೇನ ಮನಸಾ ಜ್ಞಾಯತೇ । ಈಶ್ವರಸ್ಯ ನಿತ್ಯಜ್ಞಾನಸ್ವರೂಪಃ' ಇತಿ ತಸ್ಯ ಸ್ಮರಣಾಸಮ್ಭವಾತ್ ಲಕ್ಷಣಾಶ್ರಯಣಮಿತಿ ಭಾವಃ ಇತ್ಯುಕ್ತಮ್' - ಇತ್ಯಾಹುಃ ।

ಆದ್ದರಿಂದಲೇ

ಭಕ್ತಾನಾಂ ಸ್ಮರಣಂ ವಿಷ್ಣೋಃ ನಿತ್ಯಜ್ಞಪ್ತಿಸ್ವರೂಪತಃ।
ಅನುಗ್ರಹೋನ್ಮುಖತ್ವಂ ತು ನೈವಾನ್ಯತ್ ಕ್ವಚಿದಿಷ್ಯತೇ ।।

(ಭಕ್ತರನ್ನು ಭಗವಂತನು ಸ್ಮರಿಸುತ್ತಾನೆಂದರೆ ಮೊದಲು ಭಕ್ತರನ್ನು ಮರೆತಿದ್ದ; ಈಗ ಸ್ಮರಿಸಿಕೊಳ್ಳುತ್ತಿದ್ದಾನೆ ಎಂದರ್ಥವಲ್ಲ. ಹೊರತಾಗಿ ಭಕ್ತರ ವಿಷಯದಲ್ಲಿ

ಅನುಗ್ರಹೋನ್ಮುಖನಾದ ಎಂದರ್ಥ) ಎಂದು ಈಶಾವಾಸ್ಯಭಾಷ್ಯದ ಟೀಕೆಯಲ್ಲಿ (ಕ್ರತೋ ಸ್ಮರ; ಕ್ರತಗ್ಂ ಸ್ಮರ ಎಂಬ ಮಂತ್ರದ ವ್ಯಾಖ್ಯಾನಸಂದರ್ಭದಲ್ಲಿ) ಹೇಳಿದ್ದಾರೆ. ಅನುಭವಜನ್ಯಸಹಕೃತವಾದ ಮನಸ್ಸಿನಿಂದ ಸ್ಮರಣೆಯು ಹುಟ್ಟಬೇಕು. ನಿತ್ಯಜ್ಞಾನಸ್ವರೂಪನಾದ ಈಶ್ವರನಿಗೆ ಇಂತಹ ಸ್ಮರಣೆಯನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ 'ಸ್ಮರಣೆ' ಶಬ್ದಕ್ಕೆ ಅನುಗ್ರಹೋನ್ಮುಖತ್ವದಲ್ಲಿ ಲಕ್ಷಣಾವನ್ನು ಮಾಡಬೇಕು ಎಂದು ಅಭಿಪ್ರಾಯ. ಆದ್ದರಿಂದ ಸುಷುಪ್ತಿಕಾಲದಲ್ಲಿರುವ ಸುಖಾನುಭವವು ಸಾಕ್ಷಿರೂಪವಾಗಿದೆ. ಅದರ ಸ್ಮರಣೆಯೂ ಸಹ ಸಾಕ್ಷಿರೂಪವೇ ಆಗಿದೆ.

## ಸುಷುಪ್ತಿಸುಖದ ಅನುಭವ ಮನೋವೇದ್ಯ

**ಭಾವದೀಪಃ** – ಅನ್ಯೇ ತು 'ಸೌಷುಪ್ತಿಕಸ್ವರೂಪಜ್ಞಾನಾಹಿತಸಂಸ್ಕಾರಸಹಕೃತೇನ ಸ್ವರೂಪೇನ್ದ್ರಿಯೇಣಾನುಭೂತವಿಷಯಕತಯಾ ಸ್ವರೂಪಜ್ಞಾನಸ್ಯ ವ್ಯಜ್ಯಮಾನತ್ವಾದನುಸ್ಮೃತಿತ್ವಮ್' ಇತ್ಯಾಹುಃ । ಅಪರೇ ತು –

चिन्मात्राणीन्द्रियाण्याहुः मुक्तानामन्यदैव तु ।
तान्येव जडयुक्तानि ह्यभिन्नानि स्वरूपतः ।।

ಇತಿ ದ್ವಿತೀಯಸ್ಕನ್ಧತಾತ್ಪರ್ಯೋಕ್ತ್ಯಾ ಸ್ವರೂಪೇನ್ದ್ರಿಯಾಭಿವ್ಯಕ್ತಸಾಕ್ಷ್ಯನುಭವ-ಜನ್ಯಸಂಸ್ಕಾರ ಸಹಕೃತಂ ಸ್ವರೂಪೇನ್ದ್ರಿಯಮಿಶ್ರಂ ಬಾಹ್ಯಂ ಮನ ಏವೇಮಾಂ ಸ್ಮೃತಿಂ ಜನಯತಿ' ಇತ್ಯಾಹುಃ ।

ಇನ್ನು ಕೆಲವರು ''ಸಂಸ್ಕಾರವು ಸೌಷುಪ್ತಿಕಸ್ವರೂಪಜ್ಞಾನದಿಂದ ಕೂಡಿದೆ. ಇಂತಹ ಸಂಸ್ಕಾರದಿಂದ ಸ್ವರೂಪೇಂದ್ರಿಯವು ಸಹಕೃತವಾಗಿದೆ. ಈ ಸ್ವರೂಪೇಂದ್ರಿಯವು ಅನುಭೂತವಿಷಯಕವಾದ್ದರಿಂದ ಸ್ವರೂಪಜ್ಞಾನವು ಅಭಿವ್ಯಕ್ತವಾಗುತ್ತದೆ. ಇದನ್ನು ಅನುಸ್ಮೃತಿ ಎನ್ನುತ್ತಾರೆ'' ಎಂದು.

ಇನ್ನು ಕೆಲವರು

ಚಿನ್ಮಾತ್ರಾಣೀಂದ್ರಿಯಾಣ್ಯಾಹುಃ ಮುಕ್ತಾನಾಮನ್ಯದೈವ ತು।
ತಾನ್ಯೇವ ಜಡಯುಕ್ತಾನಿ ಹ್ಯಭಿನ್ನಾನಿ ಸ್ವರೂಪತಃ ॥

(ಮುಕ್ತರ ಇಂದ್ರಿಯಗಳು ಚಿನ್ಮಾತ್ರರೂಪವಾಗಿವೆ. ಅವೇ ಇಂದ್ರಿಯಗಳು ಸಂಸ್ಕಾರಕಾಲದಲ್ಲಿ ಜಡವಾದ ಇಂದ್ರಿಯಗಳಿಂದ ಸೇರಿಕೊಂಡಿರುತ್ತವೆ) ಎಂಬ ದ್ವಿತೀಯಸ್ಕಂಧತಾತ್ಪರ್ಯದ ಮಾತಿನಂತೆ ಬಾಹ್ಯವಾದ ಮನಸ್ಸೇ ಸ್ಮರಣೆಯನ್ನು ಹುಟ್ಟಿಸುತ್ತದೆ. ಈ ಬಾಹ್ಯಮನಸ್ಸಾದರೂ ಸ್ವರೂಪೇಂದ್ರಿಯದಿಂದ ಮಿಶ್ರವಾಗಿದೆ. ಸ್ವರೂಪೇಂದ್ರಿಯದಿಂದ ಅಭಿವ್ಯಕ್ತವಾದ ಸಾಕ್ಷ್ಯನುಭವದಿಂದ ಹುಟ್ಟಿದ ಸಂಸ್ಕಾರದ ಸಹಕಾರವು ಸಹ ಈ ಬಾಹ್ಯಮನಸ್ಸಿಗೆ ಇದೆ. ಆದ್ದರಿಂದ ಸುಷುಪ್ತಿಸುಖದ ಅನುಭವವು ಮನಸ್ಸಿನಿಂದಲೇ ಬಂದಿದೆ ಎನ್ನುತ್ತಾರೆ.

ಒಟ್ಟು ಅಭಿಪ್ರಾಯ - ಆತ್ಮಸ್ವಪ್ರಕಾಶ 'ನಾನು' ಎಂಬುದು ತಾರ್ಕಿಕರು ಹೇಳುವಂತೆ ಮಾನಸಾನುಭವವೆಂದರೆ ಅದು ಇನ್ನೊಂದು ಮಾನಸಾನುಭವಕ್ಕೆ ವೇದ್ಯ ಅದೂ ಮತ್ತೊಂದಕ್ಕೆ ಎಂದು ಅನವಸ್ಥೆ. ಜಿಜ್ಞಾಸೆ ಬಂದರೆ ಮಾತ್ರ ಜ್ಞಾನಗೋಚರವಾಗಬೇಕು. ಇಲ್ಲದಿದ್ದರೆ ಇಲ್ಲ, ಅನವಸ್ಥೆ ಇಲ್ಲ ಎನ್ನಕೂಡದು. ಜ್ಞಾನಗೋಚರವಾಗದ ಜ್ಞಾನ ಒಂದರ ಅಸ್ತಿತ್ವದಲ್ಲಿ ಏನು ಪ್ರಮಾಣ? ಅದರಿಂದ 'ನಾನು' ಎಂಬುದು ಸ್ವಪ್ರಕಾಶಾತ್ಮಾನುಭವವೆನ್ನಬೇಕು. ಪ್ರಾಭಾಕರರ ಪ್ರಕಾರ ಜ್ಞಾನ ಸ್ವಪ್ರಕಾಶ. ಆತ್ಮನಲ್ಲ. ಜ್ಞಾನ ತನ್ನನ್ನು ತಾನು ಕಾಣುವಾಗ ತನಗೆ ಆಶ್ರಯನಾದ ಆತ್ಮನನ್ನೂ ಕಾಣುತ್ತದೆ ಎನ್ನುತ್ತಾರೆ. ಆದರೆ ನಿದ್ದೆಯಲ್ಲಿಯೂ 'ನಾನು' ಎಂಬ ಜ್ಞಾನವಿದೆ. ಅದು ಮಾನಸಜ್ಞಾನವಲ್ಲ. ಆಗಲೂ ಮಾನಸಜ್ಞಾನವಿದ್ದರೆ ಅದು ನಿದ್ದೆಯೆ ಆಲ್ಲ. ನಿದ್ದೆಯಿಂದ ಎದ್ದಾಗ ನಾನು ಇಷ್ಟು ಹೊತ್ತು ಸುಖವಾಗಿ ನಿದ್ದೆ ಮಾಡಿದ್ದೇನೆ ಎಂದು ನಮ್ಮ ನಿದ್ದೆಯನ್ನು ನಾವು ನೆನೆಯುವುದರಿಂದ ನಿದ್ದೆಯಲ್ಲಿ ಆತ್ಮಾನುಭವವಿದೆ. ಅದು ಸ್ವಪ್ರಕಾಶ. ಆತ್ಮನ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲವೆನ್ನಲು ಯಾವುದಾದರೊಂದು ಬಗೆಯಿಂದ ಆತ್ಮನು ಪ್ರಕಾಶನೆಂದಾದರೆ ಸಾಕು. ವಸ್ತುಸ್ಥಿತಿ ಆತ ಸ್ವಪ್ರಕಾಶನೆಂದು.

'ಸ್ವಪ್ರಕಾಶ ಶುದ್ಧ ಆತ್ಮಸ್ವರೂಪ ಸಿದ್ಧವಾಗಿರುವುದರಿಂದ ಅದನ್ನು ವರ್ಣಿಸುವ ವೇದಾಂತ ಅನುವಾದಕ'ವೆನ್ನುವುದು ಅದ್ವೈತಿಗಳ ಪ್ರಕಾರ ಸರಿಯಲ್ಲ. ಅದ್ವೈತಿಗಳು ಅದನ್ನು ಒಪ್ಪಿದರೆ ಅವರ ಜಿಜ್ಞಾಸಾಧಿಕರಣ - ಸಿದ್ಧಾಂತ ಹೊರಡಲಾರದು. ಸ್ವಪ್ರಕಾಶ ಎಂದರೆ ಅದ್ವೈತದಲ್ಲಿ ಕರ್ತೃಕರ್ಮವಿರೋಧಭಯದಿಂದ ಅವೇದ್ಯ ಎಂದು ಅರ್ಥ ಹೇಳುತ್ತಾರೆ. ಆದರಿಂದ ವೇದಾಂತವು ಅಖಂಡ ಆತ್ಮಸ್ವರೂಪಮಾತ್ರಪರ ಎಂಬ ವಿಷಯದಲ್ಲಿ ಮಾತ್ರ ಅದ್ವೈತರೀತಿ. ಆತ್ಮನಿಗೆ ಸ್ವಪ್ರಕಾಶಾನುಭವಸಿದ್ಧತ್ವವು ಸಿದ್ಧಾಂತ ರೀತಿಯಿಂದ.

ಅಥವಾ ಆತ್ಮ ಸ್ವಪ್ರಕಾಶಾನುಭವಕ್ಕೆ ವಿಷಯನೂ ಆಗುತ್ತಾನೆ. ಇಲ್ಲಿ 'ವಿಷಯ'ವೆಂದರೆ ಅನುಭವವನ್ನು ಮಾತಿನಲ್ಲಿ ವ್ಯಕ್ತಗೊಳಿಸಲು ನಿಮಿತ್ತವೆಂದರ್ಥ. ಆತ್ಮನೂ ಇಂಥ ವಿಷಯನೆಂದು ಅದ್ವೈತಿಗಳು ಒಪ್ಪಿದ್ದಾರೆ. ಆತ್ಮ ತನ್ನ ಸ್ವರೂಪವೆ ಆದ ಪ್ರಕಾಶಕ್ಕೆ ತಾನು ಕರ್ಮ ಎನಿಸದಿದ್ದರೂ ತನ್ನಿಂದ ಉಂಟಾಗುವ ಶಬ್ದಪ್ರಯೋಗಕ್ಕೆ ತಾನು ವಿಷಯನಾಗಲು ಯೋಗ್ಯ. ಈ ಅರ್ಥದಲ್ಲಿ ಅವನು ಸ್ವತಃಸಿದ್ಧ. ಅಂಥ ಆತ್ಮನ ಸ್ವರೂಪಭೂತವಾದ ಐಕ್ಯವನ್ನು ವೇದಾಂತವು ಬೋಧಿಸಿದರೆ ಅದು ಅನುವಾದಕವೆಂದು ಅದ್ವೈತರೀತಿಯಿಂದಲೆ ಹೇಳಲು ಬರುತ್ತದೆ.

## ಶಾಸ್ತ್ರಕ್ಕೆ ವಿಷಯವಿಲ್ಲ

**भावदीपः** – अत्र सुषुप्तावात्मातिरिक्तज्ञानाभावेनौत्तरिकानुस्मृतिर्न स्यात् इत्यापादनीये औत्तरिकेत्यादि विपरीतापादनं तु संविदात्मकत्वात् इति वक्ष्यमाणहेतोरसिद्धिनिरासार्थम् ।

**न संविदाश्रयतयेति** ।। 'यथा संविदः' इति दृष्टान्तो योज्यः । उक्तं पूर्वपक्षं न्यायविवरणारूढं दर्शयन् अर्थतः तदनुवादपूर्वमुक्तम-विषयत्वमुपसंहरति – **अत इति** ।। 'जीवस्य स्वप्रकाशत्वे औत्तरिकानुस्मृत्यादिरूपसाधकमानाभावेन जीवान्य ब्रह्मणोऽभावाच्च' इत्यर्थः । एतेन 'न्यायविवरणस्थस्वप्रकाशत्वहेतुरसन्दिग्धहेतूपपादनद्वारा जिज्ञास्यत्वाभावे हेतुर्न साक्षात्' इत्युक्तं भवति । **न विषयत्वमिति** ।। 'ब्रह्मणो जिज्ञासाविषयत्वं न सम्भवति' इत्यर्थः । 'सन्दिग्धे न्यायः प्रवर्तते' इत्युक्तेर्जिज्ञासायाश्च न्यायानुसन्धानात्मकत्वात्' इति भावः । यत्तु 'अहमिति बुद्धाववेद्यं निर्विशेषं जीवचैतन्यं वेदान्तविषयोऽस्तु' इति, तत्तु परमतनिरासप्रस्तावे चन्द्रिकायां निरस्तम्।

'औत्तरिकानुस्मृतिसिद्धसौषुप्तिकानुभवाभावप्रसंगात्' ಎಂಬುದು ಟೀಕಾವಾಕ್ಯ. ಉತ್ತರಕಾಲದಲ್ಲಿ ಬರುವ ಸ್ಮರಣೆಯಿಂದ ಸೌಷುಪ್ತಿಕಅನುಭವವು ಸಿದ್ಧವಾಗಿದೆ. ಇದು ಅಸಿದ್ಧವಾಗಬೇಕಾದೀತು ಎಂದು ಇದರ ಅಭಿಪ್ರಾಯ. ವಸ್ತುತಃ ಇಲ್ಲಿ 'सुषुप्तावात्मेति-

ರಿಕ್ತಜ್ಞಾನಾಭಾವೇನ ಔತ್ತರಿಕಾನುಸ್ಮೃತಿರ್ನ ಸ್ಯಾತ್' (ಸುಷುಪ್ತಿಯಲ್ಲಿ ಆತ್ಮಾತಿರಿಕ್ತಜ್ಞಾನವಿಲ್ಲದ ಕಾರಣ ಉತ್ತರಕಾಲದಲ್ಲಿ ಸ್ಮರಣೆಯು ಬಾರದಿರಬೇಕಾದೀತು) ಎಂದು ಆಪಾದಿಸಬೇಕಿತ್ತು. ಆದರೆ ಇದಕ್ಕೆ ವಿಪರೀತವಾಗಿ ಟೀಕಾ ಮಾತು ಹೇಳಿದೆ. ಇದಕ್ಕೆ ಕಾರಣವೇನೆಂದರೆ ಮುಂದಿನ ಟೀಕಾವಾಕ್ಯದಲ್ಲಿ 'ಆತ್ಮನು ಸಂವಿದಾಶ್ರಯನಾಗಿ ಪ್ರತೀತನಾಗಲಾರ' ಎಂದು ಸಂವಿದಾತ್ಮಕತ್ವವನ್ನು ಹೇತುವನ್ನಾಗಿ ಮಾಡಿದ್ದಾರೆ. ಆ ಹೇತುವಿಗೆ ಆಸಿದ್ಧಿದೋಷವನ್ನು ಪರಿಹರಿಸಲು ಇಲ್ಲಿ ವಿಪರೀತವಾಗಿ ಔತ್ತರಿಕಾನುಸ್ಮೃತಿ ಇತ್ಯಾದಿಯಾಗಿ ಹೇಳಿದ್ದಾರೆ. ಇದರಿಂದ ಆಸಿದ್ಧಿದೋಷವನ್ನು ಸಂವಿದಾತ್ಮಕತ್ವಹೇತುವಿಗೆ ಪರಿಹರಿಸಿದಂತಾಗುತ್ತದೆ.

'ಸಂವಿದಾತ್ಮಕತ್ವಾಚ್ಚ' ಎಂಬ ವಾಕ್ಯದಲ್ಲಿ 'ಸಂವಿದಃ ಇವ' ಎಂಬುದು ದೃಷ್ಟಾಂತವಾಗಿದೆ. ಅನುಮಾನಸ್ವರೂಪವನ್ನು ಹೀಗೆ ತಿಳಿಯಬೇಕು. 'ಆತ್ಮಾ ನ ಸಂವಿದಾಶ್ರಯಃ ಸಂವಿದಾತ್ಮಕತ್ವಾತ್, ಯಥಾ ಸಂವಿದಃ' ಎಂದು. ಇದುವರೆಗೂ ಹೇಳಿದ ಪೂರ್ವಪಕ್ಷವನ್ನು ನ್ಯಾಯವಿವರಣೆಯಲ್ಲಿ ಸಮನ್ವಯ ಮಾಡುತ್ತಾ 'ಅತಃ' ಎಂಬ ವಾಕ್ಯದಿಂದ ಉಪಸಂಹಾರ ಮಾಡುತ್ತಿದ್ದಾರೆ. 'ಜೀವನು ಸ್ವಪ್ರಕಾಶನೆಂಬ ವಿಷಯದಲ್ಲಿ ಸುಷುಪ್ತಿಯ ಉತ್ತರಕಾಲದ ಪರಾಮರ್ಶವು ಪ್ರಮಾಣವಾಗಿದೆ. ಮತ್ತು ಜೀವನಿಗಿಂತ ಭಿನ್ನನಾದ ಬ್ರಹ್ಮನು ಇರುವುದಿಲ್ಲ' ಎಂದು 'ಅತಃ' ಎಂಬ ಪದದ ಅರ್ಥ. ಹೀಗೆ ಹೇಳಿದ್ದರಿಂದ ನ್ಯಾಯವಿವರಣದಲ್ಲಿರುವ ಸ್ವಪ್ರಕಾಶತ್ವಹೇತುವು ಬ್ರಹ್ಮನು ಜಿಜ್ಞಾಸ್ಯನಾಗಿಲ್ಲ ಎಂಬ ವಿಷಯದಲ್ಲಿ ನೇರವಾದ ಹೇತುವಾಗಿಲ್ಲ, ಹೊರತು ಅಸಂದಿಗ್ಧತ್ವ ಎಂಬ ಹೇತುವನ್ನು ಸಮರ್ಥಿಸುವ ಮೂಲಕ (ಪರಂಪರಯಾ) ಹೇತುವಾಗಿದೆ ಎಂದು ತಿಳಿಯುತ್ತದೆ. 'ನ ವಿಷಯತ್ವಂ' ಎಂಬ ಟೀಕೆಗೆ ಬ್ರಹ್ಮನು ಜಿಜ್ಞಾಸೆಗೆ ವಿಷಯನಾಗಲಾರ ಎಂದರ್ಥ. ಸಂದಿಗ್ಧವಾದ ವಿಷಯದಲ್ಲಷ್ಟೇ ನ್ಯಾಯದ ಪ್ರವೃತ್ತಿ. ಜಿಜ್ಞಾಸೆಯು ನ್ಯಾಯಾನುಸಂಧಾನರೂಪವಾಗಿದೆ. ಬ್ರಹ್ಮನು ಸಂದಿಗ್ಧನಲ್ಲದ ಕಾರಣ ಅವನ ವಿಷಯದಲ್ಲಿ ನ್ಯಾಯವು ಪ್ರವೃತ್ತಿ ಮಾಡುವುದಿಲ್ಲ. ಜಿಜ್ಞಾಸೆಯೂ ಸಹ ಕೂಡುವುದಿಲ್ಲ. ಇನ್ನು 'ಅಹಂ ಎಂಬ ಬುದ್ಧಿಯಲ್ಲಿ ನಿರ್ವಿಶೇಷಜೀವಚೈತನ್ಯವು ವಿಷಯವಾಗಿಲ್ಲ. ಕೇವಲ ವೇದಾಂತಕ್ಯಷ್ಟೇ ವಿಷಯವಾಗಿದೆ. ಆದ್ದರಿಂದ ಶಾಸ್ತ್ರಕ್ಕೆ ನಿರ್ವಿಶೇಷಚೈತನ್ಯವು ವಿಷಯವಾಗಲಿ' ಎಂಬ ಶಂಕೆಯನ್ನು ಚಂದ್ರಿಕೆಯಲ್ಲಿ ಪರಮತವನ್ನು ನಿರಾಸಮಾಡುವಾಗ ನಿರಾಕರಿಸಿದ್ದಾರೆ.

## ಪ್ರಯೋಜನ, ಅಧಿಕಾರಿ, ಸಂಬಂಧಗಳೂ ಇಲ್ಲ

**ಭಾವದೀಪಃ – ನ ಚೇತಿ ।।** 'ಪ್ರಯೋಜನಂ ಚ' ಇತಿ ಚಾನ್ವಯಃ । 'ಸಾ ಹಿ ಮೋಕ್ಷಾಖ್ಯಂ ಪ್ರಯೋಜನಂ ಜನಯನ್ತೀ ಜ್ಞಾನದ್ವಾರೇಣೈವ' ಇತಿ ವಾಚ್ಯಮ್ । 'ಅಹಮಿತಿ ಜೀವರೂಪ-ಬ್ರಹ್ಮಜ್ಞಾನೇ ಸತ್ಯಪಿ ಫಲಾನುಭವಾನುಪಲಮ್ಭಾನ್ನ ಮೋಕ್ಷಾಖ್ಯಂ ಮುಖ್ಯಪ್ರಯೋಜನಂ ಜ್ಞಾನರೂಪಮವಾನ್ತರಪ್ರಯೋಜನಂ ಚ ನಾಸ್ತಿ । ಜೀವರೂಪಬ್ರಹ್ಮಜ್ಞಾನಸ್ಯ ಸಿದ್ಧತ್ವಾತ್' ಇತಿ ಭಾವಃ ।। **ವಿಷಯೇತಿ ।।** 'ಫಲೋದ್ದೇಶೇನ ವಿಷಯಂ ಜಿಜ್ಞಾಸಮಾನಸ್ಯೈವಾಧಿಕಾರಿತ್ವಾತ್' ಇತಿ ಭಾವಃ । **ಅತ ಏವೇತಿ ।।** 'ತ್ರಿತಯಾಭಾವಾದೇವ' ಇತ್ಯರ್ಥಃ । **ಅತ ಇತಿ ।।** ವಿಷಯಾದ್ಯಭಾವಾತ್ ಇತ್ಯರ್ಥಃ । 'ತದ್ ವಿಜಿಜ್ಞಾಸಸ್ವ' ಇತ್ಯಾದಿವಿಧಯಸ್ತು ಅಪ್ರಮಾಣಮ್ ಇತಿ ಭಾವಃ ।

'ನ ಚ' ಇತ್ಯಾದಿವಾಕ್ಯದಲ್ಲಿ ಪ್ರಯೋಜನವನ್ನು ನಿರಾಕರಿಸಿದ್ದಾರೆ. ಬ್ರಹ್ಮಜಿಜ್ಞಾಸೆಯು ಜ್ಞಾನವನ್ನು ಹುಟ್ಟಿಸುವ ಮೂಲಕ ಮೋಕ್ಷವೆಂಬ ಪ್ರಯೋಜನವನ್ನು ತಂದು-ಕೊಡುತ್ತದೆಂದು ಹೇಳಬೇಕು. ಆದರೆ ಜೀವನೆಂಬ ಬ್ರಹ್ಮನು 'ಅಹಂ' ಎಂಬ ಪ್ರತೀತಿಯಿಂದ ನಿತ್ಯಸಿದ್ಧನಾಗಿದ್ದರೂ ಮೋಕ್ಷವು ಲಭಿಸುತ್ತಿಲ್ಲ. ಆದ್ದರಿಂದ ಬ್ರಹ್ಮಜಿಜ್ಞಾಸೆಗೆ ಮೋಕ್ಷವೆಂಬ ಮುಖ್ಯಪ್ರಯೋಜನವೂ ಇಲ್ಲ. ಬ್ರಹ್ಮಜ್ಞಾನವೆಂಬ ಅವಾಂತರ ಪ್ರಯೋಜನವೂ ಇಲ್ಲವೆಂದು ತಿಳಿಯಬೇಕು. ವಿಷಯಪ್ರಯೋಜನಗಳಿಲ್ಲದ ಕಾರಣ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಯಿಲ್ಲವೆಂದು 'ವಿಷಯ' ಇತ್ಯಾದಿ ವಾಕ್ಯದಿಂದ ಟೀಕೆಯಲ್ಲಿ ಹೇಳಿದ್ದಾರೆ. ಏಕೆಂದರೆ ಫಲದ ಉದ್ದೇಶದಿಂದಷ್ಟೇ ವಿಷಯಜಿಜ್ಞಾಸೆಯನ್ನು ಮಾಡುತ್ತಾರೆ. ಅಂತಹವರೇ ಅಧಿಕಾರಿ-ಗಳಾಗುತ್ತಾರೆ. ಆದರೆ ಗ್ರಂಥಕ್ಕೆ ವಿಷಯವೇ ಇಲ್ಲದ ಕಾರಣ ಅಧಿಕಾರ್ಯಾದಿಗಳನ್ನು ಇಲ್ಲವೆಂದು ತಿಳಿಯಬೇಕು. 'ಅತ ಏವ' ಎಂದರೆ ವಿಷಯ, ಪ್ರಯೋಜನ, ಅಧಿಕಾರಿಗಳು ಇಲ್ಲದ್ದರಿಂದಲೇ ಎಂದರ್ಥ. 'ಅತಃ' ಎಂಬ ಪದಕ್ಕೆ ವಿಷಯಾದಿಗಳು ಇಲ್ಲದ ಕಾರಣ ಎಂದರ್ಥ. 'ತದ್ ವಿಜಿಜ್ಞಾಸಸ್ವ' ಇತ್ಯಾದಿ ವಿಧಿಗಳಾದರೋ ಅಪ್ರಮಾಣ ಎಂದು ತಿಳಿಯಬೇಕು.

ವಿಶೇಷ ವಿಚಾರ – 'ವಿಷಯ ಪ್ರಯೋಜನ ಅಧಿಕಾರಿ ಸಂಬಂಧಗಳೆಂಬ ಅನುಬಂಧಚತುಷ್ಟಯ ಇಲ್ಲದ ಕಾರಣ ವಿಚಾರಶಾಸ್ತ್ರವು ಅನಾರಂಭಣೀಯವಾಗಿದೆ'.
ಜಿಜ್ಞಾಸಾಧಿಕರಣ (೧-೧-೧)

ವಿಷಯಾಭಾವವೆಂಬ ಹೇತುವಿನಿಂದ ಅನಾರಂಭಣೀಯತ್ವವು ಸಿದ್ಧವಾಗುತ್ತದೆ. ಮತ್ತು ಪ್ರಯೋಜನಾಭಾವ ಎಂಬ ಹೇತುವಿನಿಂದ ಸಿದ್ಧವಾಗುತ್ತದೆ. ಅದು ಹೀಗೆ - ಇಲ್ಲಿಯತನಕ ಸಮರ್ಥಿಸಿದರು. ಪ್ರಕೃತ ಶಾಸ್ತ್ರಗಳ ಅಧ್ಯಯನಕ್ಕೆ ಪ್ರಯೋಜನವೂ ಇಲ್ಲವೆಂದು ಸಮರ್ಥಿಸುತ್ತಾ ಶಾಸ್ತ್ರದ ಅನಾರಂಭಣೀಯತ್ವವನ್ನು ಸಮರ್ಥಿಸುತ್ತಿದ್ದಾರೆ. ಸುಲಭವಾದ ಕರ್ಮಾಚರಣೆಯಿಂದಲೇ ಸ್ವರ್ಗಾದಿಗಳು ಲಭ್ಯವಾಗುವಾಗ ಸ್ವರ್ಗಾದಿಗಳನ್ನು ಪ್ರಯೋಜನವೆನ್ನಲಾಗದು. ಆದ್ದರಿಂದ ಜಿಜ್ಞಾಸೆಗೆ ಮೋಕ್ಷವನ್ನೇ ಪ್ರಯೋಜನವೆಂದು ಹೇಳಬೇಕು. ಆದರೆ ಜಿಜ್ಞಾಸೆಯಿಂದ ಸಾಕ್ಷಾತ್ತಾಗಿ ಮೋಕ್ಷವು ಸಿಗುವುದಿಲ್ಲ. ಒಂದು ವೇಳೆ ಸಾಕ್ಷಾತ್ತಾಗಿ ಸಿಗುತ್ತದೆಂದು ಹೇಳಿದರೆ 'ಜ್ಞಾನದಿಂದಲೇ ಮೋಕ್ಷ ಸಿಗುತ್ತದೆ' ಎಂದು ಹೇಳುವ ಶ್ರುತ್ಯರ್ಥತ್ಯಾಗ ಮಾಡಿದಂತಾಗುತ್ತದೆ. ಹಾಗೂ ಶ್ರುತಿಯಲ್ಲಿ ಎಲ್ಲೂ ಹೇಳದಿರುವ ಮೋಕ್ಷಫಲಕತ್ವವನ್ನು ಜಿಜ್ಞಾಸೆಗೆ ಕಲ್ಪಿಸುವುದರಿಂದ ಅಶ್ರುತಕಲ್ಪನಾದೋಷವೂ ಬರುತ್ತದೆ. ಹಾಗಾಗಿ ಜಿಜ್ಞಾಸೆಯಿಂದ ಬ್ರಹ್ಮಜ್ಞಾನ ಬರುತ್ತದೆ. ಆ ಬ್ರಹ್ಮಜ್ಞಾನದಿಂದ ಮೋಕ್ಷ ದೊರಕುತ್ತದೆಂದೇ ಹೇಳಬೇಕು. ಹೀಗೆ ಹೇಳಿದರೆ ಶಾರೀರಿಕನಾದ ಬ್ರಹ್ಮನು 'ಅಹಂ' ಎಂದು ನಿರಂತರವಾಗಿ ತಿಳಿಯುತ್ತಿದ್ದಾನೆ. ಆದರೂ ಮೋಕ್ಷವು ಸಿಗುತ್ತಿಲ್ಲ. ಆದ್ದರಿಂದ ಮೋಕ್ಷವು ಜಿಜ್ಞಾಸೆಯ ಫಲವಾಗಲಾರದು. ಹೀಗೆ ಹೇಳಿದ್ದರಿಂದ ತತ್ವಪ್ರಕಾಶಿಕಾದಲ್ಲಿರುವ 'ನಚ ಜಿಜ್ಞಾಸಾಯಾಃ ಪ್ರಯೋಜನಮಸ್ತಿ' ಎಂಬ ವಾಕ್ಯವನ್ನೂ ವಿವರಿಸಿದಂತಾಯಿತು. ಯಾವ ಶಾಸ್ತ್ರದಲ್ಲಿ ವಿಷಯವೇ ಇಲ್ಲವೋ, ಮತ್ತು ಯಾವ ಶಾಸ್ತ್ರದ ಅಧ್ಯಯನದಿಂದ ಮೋಕ್ಷಪ್ರಯೋಜನವೂ ದೊರೆಯಲಾರದೋ ಆ ಶಾಸ್ತ್ರವನ್ನು ಯಾರೂ ಸಹ ಅಧ್ಯಯನ ಮಾಡುವುದಿಲ್ಲ. ಹೀಗೆ ವಿಷಯ ಪ್ರಯೋಜನಗಳಿಲ್ಲದಿರುವುದರಿಂದಲೇ ಅಧಿಕಾರಿ ಇಲ್ಲವೆಂದು ನಿರ್ಣಯವಾಯಿತು. ಅಧಿಕಾರಿಯು ಇಲ್ಲದಿರುವುದರಿಂದ ಈ ವಿಚಾರಶಾಸ್ತ್ರವು ಅನಾರಂಭಣೀಯವಾಗಿದೆ.

ಆದರಂತೆ ಸಂಬಂಧವೂ ಇಲ್ಲ. ವಿಷಯ ಪ್ರಯೋಜನಾದಿಗಳೆಂಬ ಸಂಬಂಧಿಗಳು ಇದ್ದರಷ್ಟೇ ಸಂಬಂಧವು ಕೂಡುತ್ತದೆ. ಆದರೆ ಸಂಬಂಧಿಗಳೇ ಇಲ್ಲವೆಂದು ಇದುವರೆಗೂ ಸಮರ್ಥಿಸಿದ್ದರಿಂದ ಸಂಬಂಧವೂ ಇಲ್ಲ. ಸಂಬಂಧವು ಇರದ ಕಾರಣ ಈ ವಿಚಾರಶಾಸ್ತ್ರವು ಅನಾರಂಭಣೀಯವಾಗಿದೆ.

## ಪೂರ್ವಪಕ್ಷದ ಫಲ

**भावदीपः** – पूर्वपक्षफलमाह – नैतदिति ।। अत्राद्य इतिशब्दो हेतौ अन्त्यः समाप्तौ । अयं च सौत्रब्रह्मपदव्याख्यार्त्यपूर्वपक्षो न्यायविवरणोक्तः

प्रपञ्चितः । नतु सौत्राथातःपदव्यावर्त्यावपि तौ तु यथाक्रमं अथशब्दोऽधिकारानन्तर्यार्थोऽतः शब्दो हेत्वर्थः इति सङ्गृह्यावर्त्योक्तिप्रस्तावे 'भक्तिमान् परमे विष्णौ' 'कर्मणा त्वधमः प्रोक्तः' इति विस्तरव्यावर्त्योक्तिप्रस्तावे च वक्ष्येते ।

ಇಲ್ಲಿಯ ತನಕ ನಿರೂಪಿಸಿದ ಪೂರ್ವಪಕ್ಷದ ಪ್ರಯೋಜನವನ್ನು 'ನೈತತ್' ಎಂಬ ವಾಕ್ಯವು ಸಮರ್ಥಿಸುತ್ತಿದೆ. ಈ ವಾಕ್ಯದಲ್ಲಿರುವ ಮೊದಲನೆಯ ಇತಿಶಬ್ದವು ಹೇತ್ವರ್ಥದಲ್ಲಿ ಕೊನೆಯಲ್ಲಿರುವ ಇತಿಶಬ್ದವು ಪೂರ್ವಪಕ್ಷದ ಸಮಾಪ್ತಿ ಎಂಬರ್ಥದಲ್ಲಿರುತ್ತದೆ. ಇಲ್ಲಿ ನಿರೂಪಿಸಿದ ಪೂರ್ವಪಕ್ಷವು ಸೂತ್ರದಲ್ಲಿರುವ ಬ್ರಹ್ಮಪದದಿಂದ ವ್ಯಾವರ್ತ್ಯವಾದದ್ದು ಹೊರತು 'ಅಥ' ಮತ್ತು 'ಅತಃ' ಪದಗಳಿಂದ ವ್ಯಾವರ್ತ್ಯವಾದದ್ದಲ್ಲ. 'ಅಥ' ಮತ್ತು 'ಅತಃ' ಎಂಬ ಪದಗಳಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಮುಂದೆ 'अथशब्दोऽधिकारानंतर्यार्थः । अतःशब्दो हेत्वर्थः' ಎಂದು ಸಂಕ್ಷೇಪವಾಗಿ ಹೇಳಿದ್ದಾರೆ. 'ಭಕ್ತಿಮಾನ್ ಪರಮೇ ವಿಷ್ಣೌ' 'ಕರ್ಮಣಾ ತ್ವಧಮಃ ಪ್ರೋಕ್ತಃ' ಎಂದು ವ್ಯಾವರ್ತ್ಯವನ್ನು ವಿಸ್ತಾರವಾಗಿ ಹೇಳುವಾಗ ನಿರೂಪಿಸುತ್ತಾರೆ.

## ಬ್ರಹ್ಮಶಬ್ದದ ಬಲದಿಂದ ಅನುಬಂಧಚತುಷ್ಟಯ

**भावदीपः** – 'उक्तप्रयोजनाधिकारिसम्बन्धाभावाश्च विषयाभावेनैव प्राप्ताः' इति जीवान्यविषयसमर्थनपरेण ब्रह्मशब्देनैव निरसिष्यन्ते । अत एव वक्ष्यति ग्रन्थकारः सिद्धान्तोत्त्यवसरे 'जीवस्य स्वप्रकाशत्वेपि तद्भिन्न ब्रह्मणः सन्दिग्धत्वात् विषयत्वसिद्धेः मोक्षाख्यप्रयोजनसद्भावात् तत एवाधिकार्यादिसम्भवात्' इति ।

ವಿಷಯಾಭಾವವನ್ನು ನಿರಾಕರಿಸುವ ಬ್ರಹ್ಮಶಬ್ದವೇ ಪ್ರಯೋಜನಾಭಾವ ಅಧಿಕಾರಾಭಾವ, ಸಂಬಂಧಾಭಾವಗಳನ್ನು ನಿರಾಕರಿಸುತ್ತದೆ. ಏಕೆಂದರೆ ವಿಷಯಾಭಾವದಿಂದಲೇ ಪ್ರಯೋಜನಾದ್ಯಭಾವಗಳನ್ನು ಸಾಧಿಸಿದ್ದರಿಂದ. ಆದ್ದರಿಂದಲೇ ಗ್ರಂಥಕಾರರು ಮುಂದೆ ಸಿದ್ಧಾಂತವನ್ನು ಸಮರ್ಥಿಸುವಾಗ 'ಜೀವನು ಸ್ವಪ್ರಕಾಶನಾಗಿದ್ದರೂ ಜೀವಭಿನ್ನನಾದ ಬ್ರಹ್ಮನು

ಸಂದಿಗ್ಧನಾದ್ದರಿಂದ ವಿಷಯನಾಗುತ್ತಾನೆ. ಆದ್ದರಿಂದಲೇ ಮೋಕ್ಷವೆಂಬ ಪ್ರಯೋಜನ, ಮತ್ತು ಅಧಿಕಾರಿ, ಸಂಬಂಧಗಳೂ ಸಹ ಸಿದ್ಧವಾಗುತ್ತವೆ' ಎಂದು ಹೇಳಿದ್ದಾರೆ.

**ಭಾವದೀಪಃ – उक्तं चन्द्रिकायाम् – 'अहमिति ब्रह्मणि ज्ञायमानेपि मोक्षा नुपलम्भान्निष्प्रयोजनत्वमिति शङ्का तु विषयसूचकेन ब्रह्मपदेनैव निरस्ता' इति । अतः 'ब्रह्मपदव्यावर्त्य एवायं पूर्वपक्षो नत्वथातःशब्दव्यावर्त्योऽपि' इति ज्ञेयम् ।।**

ಚಂದ್ರಿಕೆಯಲ್ಲೂ ಇದನ್ನೇ 'ಅಹಮಿತಿ ಬ್ರಹ್ಮಣಿ ಜ್ಞಾಯಮಾನೇऽಪಿ ಮೋಕ್ಷಾನುಪಲಂಭಾತ್ ನಿಷ್ಪ್ರಯೋಜನತ್ವಮಿತಿ ಶಂಕಾ ತು ವಿಷಯಸೂಚಕೇನ ಬ್ರಹ್ಮಪದೇನೈವ ನಿರಸ್ತಾ' (ಬ್ರಹ್ಮನು ಅಹಂ ಎಂದು ಸಿದ್ಧನಾಗಿದ್ದರೂ ಮೋಕ್ಷವು ದೊರೆಯದ ಕಾರಣ ಬ್ರಹ್ಮಜಿಜ್ಞಾಸೆ ನಿಷ್ಪ್ರಯೋಜನವಾಗಿದೆ ಎಂಬ ಶಂಕೆಯು ವಿಷಯಸೂಚಕವಾದ ಬ್ರಹ್ಮಪದದಿಂದಲೇ ನಿರಸ್ತವಾಗಿದೆ) ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿಯ ತನಕ ಮಾಡಿದ ಪೂರ್ವಪಕ್ಷವು ಬ್ರಹ್ಮಪದವ್ಯಾವರ್ತ್ಯವಾದದ್ದೇ ಹೊರತು 'ಅಥ', 'ಅತಃ' ಶಬ್ದಗಳಿಂದ ವ್ಯಾವರ್ತ್ಯವಾದದ್ದಲ್ಲ.

## ವಿಷಯಾದಿಗಳ ನಿರೂಪಣಕ್ರಮದಲ್ಲಿ ಸ್ವಾರಸ್ಯ

ವಿವರಣೆ - ಪ್ರಶ್ನೆ - ಇಲ್ಲಿ ಅಧಿಕಾರಿ ಇಲ್ಲವೆಂಬ ಹೇತುವನ್ನು ಮೊದಲು ಹೇಳಿದ್ದಾರೆ. ಆದರೆ ಮುಂದೆ ಪೂರ್ವಪಕ್ಷವನ್ನು ಖಂಡನೆ ಮಾಡುವ ಸಂದರ್ಭದಲ್ಲಿ ವಿಷಯವಿಲ್ಲವೆಂಬ ಹೇತುವನ್ನು ಮೊದಲು ಹೇಳುತ್ತಾರೆ. ಆದಕ್ಕನುಗುಣವಾಗಿ ಇಲ್ಲಿಯೂ ವಿಷಯವಿಲ್ಲವೆಂಬ ಹೇತುವನ್ನೇ ಮೊದಲು ಹೇಳಬೇಕಿತ್ತು. ಸೂತ್ರದಲ್ಲಿ 'ಅಥ' ಶಬ್ದದಿಂದ ಅಧಿಕಾರಿಯನ್ನು ಮೊದಲು ಹೇಳಿದ್ದರಿಂದ ಇಲ್ಲಿ ಅದನ್ನೇ ಮೊದಲು ಹೇಳಿದ್ದೇವೆಂದು ಹೇಳಬಾರದು. ಹಾಗಾದಲ್ಲಿ ಖಂಡನೆ ಮಾಡುವಾಗಲೂ ಅಧಿಕಾರಿಯನ್ನೇ ಮೊದಲು ಹೇಳಬೇಕಾಗಿತ್ತು. ಅಷ್ಟೇ ಅಲ್ಲದೆ, 'ಅತಃ' ಶಬ್ದದಿಂದ ಸೂಚಿತವಾದ ಪ್ರಯೋಜನವನ್ನು ಎರಡನೆಯದಾಗಿ ಬ್ರಹ್ಮಶಬ್ದಸೂಚಿತವಾದ ವಿಷಯವನ್ನು ಮೂರನೆಯದಾಗಿ ಸೂಚಿಸಬೇಕಿತ್ತು?

ಉತ್ತರ - ಸೂತ್ರಕ್ರಮವನ್ನು ಅನುಸರಿಸಿಯೇ ಪೂರ್ವಪಕ್ಷದಲ್ಲಿ ಅಧಿಕಾರಿಯನ್ನು ಮೊದಲು ನಿರ್ದೇಶಿಸಿದ್ದಾರೆ. ಪೂರ್ವಪಕ್ಷವನ್ನು ಖಂಡನೆ ಮಾಡುವಾಗ ವಿಷಯಪ್ರಯೋಜನಗಳ ನಿರಾಕರಣೆಯನ್ನು ಹೇತುವನ್ನಾಗಿ ಮೊದಲು ಹೇಳಿದ್ದಾರೆ. ವಿಷಯಪ್ರಯೋಜನಗಳ ನಿರಾಕರಣೆಯಿಂದ ಅಧಿಕಾರಿಯ ನಿರಾಕರಣೆಯನ್ನು ಸುಲಭವಾಗಿ ಮಾಡಬಹುದಾದ್ದರಿಂದ ವ್ಯತ್ಯಾಸ ಮಾಡಿ ಹೇಳಿದ್ದು ತಪ್ಪಲ್ಲ.

(ಟೀಕೆ - 'ಅಸಂದಿಗ್ಧತ್ವಾತ್ ಪ್ರಮಾಣಾಭಾವೇನ ಜೀವವ್ಯತಿರಿಕ್ತಸ್ಯ ಬ್ರಹ್ಮಣೋऽಭಾವಾತ್')

ಸಂದೇಹವಿದ್ದರಷ್ಟೇ ವಿಚಾರ ಕೂಡುತ್ತದೆ. ಬ್ರಹ್ಮನ ವಿಷಯದಲ್ಲಿ ಸಂದೇಹವೇ ಇಲ್ಲ. ಬ್ರಹ್ಮನು ಜೀವನಿಗಿಂತ ಭಿನ್ನನೋ? ಅಲ್ಲವೋ? ಜೀವನಿಗಿಂತ ಭಿನ್ನನೆನ್ನಲು ಪ್ರಮಾಣವಿಲ್ಲ. ಪ್ರತ್ಯಕ್ಷ ಮತ್ತು ಅನುಮಾನಗಳಿಗೆ ಭೇದ ಹೇಳಲು ಸಾಮರ್ಥ್ಯವಿಲ್ಲ. ಇನ್ನು ಕರ್ಮಕಾಂಡವು ಕರ್ಮಪರವಾಗಿದೆ. ವೇದಾಂತವು ಜೀವನನ್ನೇ ಹೇಳುವುದರಿಂದ ಜೀವಭಿನ್ನನಾದ ಬ್ರಹ್ಮವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲ. ಇನ್ನು ಜೀಜನನ್ನೇ ಬ್ರಹ್ಮನೆಂದು ಹೇಳಿದರೆ ಜೀವನು ಸ್ವಪ್ರಕಾಶನಾಗಿ ನಿತ್ಯಸಿದ್ಧನಾದ್ದರಿಂದ ಬ್ರಹ್ಮವಿಚಾರವು ಕೂಡುವುದಿಲ್ಲ.

(ಟೀಕೆ - 'ಜಿಜ್ಞಾಸಾಯಾಮೇವಾನುಭವೋಧಿನುಭೂಯತೇ ಇತಿ ನ ವಾಚ್ಯಮ್ ಅನುಭವವಿರೋಧಾತ್। ನಹ್ಯಜ್ಞಾಯಮಾನಜ್ಞಾನಸದ್ಭಾವೇ ಕಂಚಿನ್ಮಾನಮ್')

'ಅನುಭವಂ ಜ್ಞಾಸ್ಯಾಮಿ' ಎಂಬ ಜಿಜ್ಞಾಸೆ ಯಾವಾಗ ಬರುತ್ತದೋ ಆವಾಗ ಮಾತ್ರ ಮನೋಜನ್ಯಜ್ಞಾನವು ಮತ್ತೊಂದು ಜ್ಞಾನಕ್ಕೆ ವಿಷಯವಾಗಬೇಕು. ಹೀಗೆ ಮತ್ತೊಂದು ಜ್ಞಾನವನ್ನು ಹುಡುಕಬೇಕಾದ್ದರಿಂದ ಅನವಸ್ಥಾ ಬರುತ್ತದೆ. ಆದರೆ ಜಿಜ್ಞಾಸೆಯು ಯಾವಾಗಲೂ ಬರುವುದಿಲ್ಲ. ಸಂದೇಹ ಇರುವಾಗಷ್ಟೇ ಬರುತ್ತದೆ. ಸಂದೇಹವಾದರೂ ಕೋಟಿಸ್ಮರಣಾದಿಗಳು ಇದ್ದಾಗಷ್ಟೇ ಬರುತ್ತದೆ. ಕೋಟಿಸ್ಮರಣಾದಿಗಳು ಯಾವಾಗ ಇರುವುದಿಲ್ಲವೋ ಆವಾಗ ಸಂದೇಹ ಬರುವುದಿಲ್ಲ. ಸಂದೇಹ ಯಾವಾಗ ಇರುವುದಿಲ್ಲವೋ, ಆವಾಗ ಜಿಜ್ಞಾಸೆಯೂ ಬರುವುದಿಲ್ಲ. ಜಿಜ್ಞಾಸೆಯು ಬಾರದ ಕಾರಣ ಅನುಭವಾಂತರದ ಅನ್ವೇಷಣೆಯನ್ನು ಮಾಡಬೇಕಾಗಿಲ್ಲ. ಆದ್ದರಿಂದ ಅನವಸ್ಥಾ ಬರುವುದಿಲ್ಲ.

ಇದು ತಪ್ಪು - 'ಸುಖಂ ಜ್ಞಾಸ್ಯಾಮಿ' ಎಂಬ ಜಿಜ್ಞಾಸೆ ನಮಗೆ ಇಲ್ಲದಿದ್ದರೂ ಸುಖದ ಅನುಭವ ನಮಗೆ ಹೇಗೆ ಬರುತ್ತದೋ, ಆದರಂತೆ ಘಟದ ಅನುಭವ ಬಂದ ಮೇಲೆ

'ಅನುಭವಂ ಜ್ಞಾಸ್ಯಾಮಿ' ಎಂಬ ಜಿಜ್ಞಾಸೆ ಇಲ್ಲದಿದ್ದರೂ 'ಘಟಜ್ಞಾನವಾನಹಮ್' ಎಂಬ ಅನುಭವ ಬಂದೇ ಬರುತ್ತದೆ. ಹೀಗಿರುವಾಗ ನೀವು ಜಿಜ್ಞಾಸೆ ಬಂದ ಮೇಲೆ ಮಾತ್ರ ಅನುಭವವು ತಿಳಿಯುತ್ತದೆಂದು ಅಂಗೀಕರಿಸಿದರೆ, 'ಜ್ಞಾನವು ಅಜಿಜ್ಞಾಸಿತಗ್ರಾಹ್ಯವಾಗಿದೆ' ಎಂಬ ಅನುಭವದ ವಿರೋಧ ಬರುತ್ತದೆ.

## ತಾರ್ಕಿಕರ ಮತ್ತು ಪ್ರಾಭಾಕರರ ನಿರಾಕರಣೆ

ವಿವರಣೆ - ವೇದ್ಯವೇ ಆಗದ ಒಂದು ಮಾನಸಾನುಭವವಿದೆ. ಆದ್ದರಿಂದ ಅನವಸ್ಥಾ ಇದೆಯೆಂದರೆ 'ನಹಿ' ಎಂಬ ವಾಕ್ಯದಿಂದ ಖಂಡಿಸುತ್ತಿದ್ದಾರೆ. ಯಾವುದಾದರೂ ಒಂದು ಪ್ರಮಾಣದಿಂದ ಜ್ಞೇಯವಾದರೆ ಮಾತ್ರ ಆ ವಸ್ತು ಸತ್ಯವಾಗುತ್ತದೆ. ಯಾವ ಪ್ರಮಾಣದಿಂದಲೂ ಜ್ಞೇಯವೇ ಆಗಲಿಲ್ಲವೆಂದರೆ ಸತ್ಯವಾಗುವುದಿಲ್ಲ.

(ಟೀಕೆ - ಔತ್ತರಿಕಾನುಸ್ಮೃತಿಸಿದ್ಧ -- )

'ನಾನು ಇಷ್ಟು ಹೊತ್ತು ಸುಖವಾಗಿ ಮಲಗಿದ್ದೆ' ಎಂಬ ಅನುಭವವು ಆತ್ಮವಿಷಯಕವಾದ್ದರಿಂದ ಸಾಕ್ಷಿರೂಪವೆಂದು ಹೇಳಬೇಕು. ಹೀಗಿರುವಾಗ ನೀವು ಸ್ಮೃತಿಯೆಂದು ಹೇಗೆ ಹೇಳಿದಿರಿ? ಮನೋಜನ್ಯಜ್ಞಾನವೇ ಸ್ಮೃತಿಯೆನಿಸುತ್ತದಲ್ಲವೇ?

ಹೌದು. ಆದರೂ ಸಾಕ್ಷಿಜ್ಞಾನದಲ್ಲಿ ಸ್ಮೃತಿಶಬ್ದವನ್ನು ಪ್ರಯೋಗಿಸಲಾಗಿದೆ. ಅತೀತಕಾಲದಲ್ಲಿ ಉಂಟಾದ ಅನುಭೂತವಿಷಯಕತ್ವದ ಸಾಮ್ಯ ಸಾಕ್ಷಿಜ್ಞಾನದಲ್ಲಿ ತೋರುತ್ತಿದೆ. ''ಅಜನ್ಮಮರಣಂ ಸ್ಮೃತ್ವಾ ಮುಕ್ತಾ ಹರ್ಷಮವಾಪ್ನುಯುಃ (ಹುಟ್ಟಿದಾಗಿನಿಂದ ಮರಣದ ತನಕ ಎಲ್ಲಾ ಘಟನೆಗಳನ್ನು ಸ್ಮರಿಸಿಕೊಂಡು ಮುಕ್ತರು ಸಂತೋಷಪಟ್ಟರು) ಎಂದು ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಲ್ಲಿ ಸ್ಪಷ್ಟವಾಗಿ ಮುಕ್ತರ ಸ್ವರೂಪಜ್ಞಾನವನ್ನೇ ಸ್ಮೃತಿ ಎಂದಿದ್ದಾರೆ. ಆದ್ದರಿಂದ ಸಾಕ್ಷಿಜ್ಞಾನವನ್ನೇ ಸ್ಮರಣೆ ಎಂದು ಹೇಳಿದ್ದು ತಪ್ಪಲ್ಲ.

(ಟೀಕೆ - ನಹಿ ಸುಷುಪ್ತೌ ಆತ್ಮಾತಿರಿಕ್ತಾ ಸಂವಿದಸ್ತೀತಿ ಸಂಭವತಿ) ಸುಷುಪ್ತಿಕಾಲದಲ್ಲಿ ಆತ್ಮಾತಿರಿಕ್ತವಾದ ಜ್ಞಾನವು ಇರುವುದಿಲ್ಲ. 'ಗೃಹೀತ ಏವ ಪ್ರಾಣೋ ಭವತಿ, ಗೃಹೀತಾ ವಾಕ್ ಗೃಹೀತಂ ಚಕ್ಷುಃ' ಎಂಬ ಶ್ರುತಿಯಿಂದ ಸರ್ವೇಂದ್ರಿಯಗಳು ಸುಷುಪ್ತಿಯಲ್ಲಿ

ಉಪರತವಾಗಿರುತ್ತವೆಂದು ತಿಳಿಯುತ್ತದೆ. ಆದ್ದರಿಂದ ಆತ್ಮಾತಿರಿಕ್ತವಾದ ಜ್ಞಾನಕ್ಕೆ ಆತ್ಮನು ಆಶ್ರಯನಾಗಿದ್ದಾನೆಂದು ಸುಷುಪ್ತಿಕಾಲದಲ್ಲಿ ಸಮರ್ಥಿಸಲಾಗದು.

(ಟೀಕೆ - 'ಸಂವಿದಾತ್ಮಕತ್ವಾಚ್ಚಾತ್ಮನೋ' )

ಪ್ರಾಭಾಕರನಿಗೆ ಈ ವಾಕ್ಯದಿಂದ ಮತ್ತೊಂದು ದೋಷ ಹೇಳುತ್ತಿದ್ದಾರೆ. 'ಆತ್ಮಾ ನ ಸಂವಿದಾಶ್ರಯತಯಾ ಭಾಸತೇ ಸಂವಿದ್ರೂಪತ್ವಾತ್ ಸಂವಿದ್ವತ್' ಜ್ಞಾನವು ಹೇಗೆ ಜ್ಞಾನರೂಪವಾದ್ದರಿಂದ ಜ್ಞಾನಕ್ಕೆ ಆಶ್ರಯವಾಗುವುದಿಲ್ಲವೋ ಅದರಂತೆ ಆತ್ಮನೂ ಜ್ಞಾನರೂಪನಾದ್ದರಿಂದ ಮತ್ತೊಂದು ಜ್ಞಾನಕ್ಕೆ ಆಶ್ರಯನಾಗಲಾರ ಎಂದು.

ಪ್ರಶ್ನೆ - ಆತ್ಮನು ವಿಷಯನಾಗಲಾರ ಎಂದು ಪೂರ್ವಪಕ್ಷ ಮಾಡಬೇಕಾಗಿದೆ. ಅದನ್ನು ಉಪಪಾದಿಸಲು ಆತ್ಮನು ಸಿದ್ಧನೇ ಆಗಿದ್ದಾನೆಂದು ಹೇಳಬೇಕು. ಆತ್ಮನು ಸಿದ್ಧನಾಗಿದ್ದಾನೆಂದು ಸಮರ್ಥಿಸಲು ಸ್ವಪ್ರಕಾಶತ್ವ ಹೇಗೆ ಕಾರಣವಾಗುತ್ತದೋ, ಅದರಂತೆ ಮಾನಸಾನುಭವವೇದ್ಯತ್ವ ಮತ್ತು ಸ್ವಪ್ರಕಾಶಸಂವಿದಾಶ್ರಯತಯಾ ಭಾನ ಇವೆರಡೂ ಕಾರಣಗಳಾಗುತ್ತವೆ. ಹೀಗಿರುವಾಗ ಆ ಎರಡು ಮತಗಳನ್ನೇಕೆ ನಿರಾಕರಣೆ ಮಾಡಬೇಕು? ಈ ಮತಗಳನ್ನು ನಿರಾಕರಿಸದಿದ್ದರೂ ಪೂರ್ವಪಕ್ಷ ಉಪಪನ್ನವಾಗುತ್ತದೆ.

ಉತ್ತರ :- ಹೌದು. ಆದರೆ ನ್ಯಾಯವಿವರಣೆಯಲ್ಲಿ ಹೇಳಿದ್ದನ್ನು ಸಮರ್ಥಿಸಲು ಈ ಎರಡು ಮತಗಳನ್ನು ನಿರಾಕರಿಸಲಾಗಿದೆ. ನ್ಯಾಯವಿವರಣೆಯಲ್ಲಿ 'ಜೀವವ್ಯತಿರಿಕ್ತೇಶ್ವರಾಭಾವಾತ್ ತಸ್ಯ ಚ ಸ್ವಪ್ರಕಾಶತ್ವೇನ ನಿತ್ಯಸಿದ್ಧತ್ವಾತ್' ಜೀವನನ್ನು ಸ್ವಪ್ರಕಾಶತ್ವೇನ ನಿತ್ಯಸಿದ್ಧನೆಂದು ಹೇಳಿದ್ದಾರೆ. ಇದನ್ನು ಸಮರ್ಥಿಸಲು ಆತ್ಮನು ಮಾನಸಾನುಭವದಿಂದ ವೇದ್ಯನಲ್ಲವೆಂದು ಸ್ವಪ್ರಕಾಶಸಂವಿದಾಶ್ರಯತಯಾ ತೋರುವುದಿಲ್ಲವೆಂದು ಹೇಳಿದ್ದು ಸೂಕ್ತವೇ ಆಗಿದೆ.

## 'ಅಥ' 'ಅತಃ' ಶಬ್ದಗಳ ಪ್ರಾಥಮ್ಯವಿಚಾರ

**ಬ್ರಹ್ಮಸೂತ್ರಭಾಷ್ಯಮ್ –**

**ಉಕ್ತಂ ಚ ಗಾರುಡೇ—**

**अथातःशब्दपूर्वाणि सूत्राणि निखिलान्यपि ।**
**प्रारभन्ते नियत्यैव तत् किमत्र नियामकम् ।।**

ಜಿಜ್ಞಾಸಾಧಿಕರಣ (೧-೧-೧)

'ಅನುಭವಂ ಜ್ಞಾಸ್ಯಾಮಿ' ಎಂಬ ಜಿಜ್ಞಾಸೆ ಇಲ್ಲದಿದ್ದರೂ 'ಘಟಜ್ಞಾನವಾನಹಮ್' ಎಂಬ ಅನುಭವ ಬಂದೇ ಬರುತ್ತದೆ. ಹೀಗಿರುವಾಗ ನೀವು ಜಿಜ್ಞಾಸೆ ಬಂದ ಮೇಲೆ ಮಾತ್ರ ಅನುಭವವು ತಿಳಿಯುತ್ತದೆಂದು ಅಂಗೀಕರಿಸಿದರೆ, 'ಜ್ಞಾನವು ಅಜಿಜ್ಞಾಸಿತಗ್ರಾಹ್ಯವಾಗಿದೆ' ಎಂಬ ಅನುಭವದ ವಿರೋಧ ಬರುತ್ತದೆ.

## ತಾರ್ಕಿಕರ ಮತ್ತು ಪ್ರಾಭಾಕರರ ನಿರಾಕರಣೆ

ವಿವರಣೆ - ವೇದ್ಯವೇ ಆಗದ ಒಂದು ಮಾನಸಾನುಭವವಿದೆ. ಆದ್ದರಿಂದ ಅನವಸ್ಥಾ ಇದೆಯೆಂದರೆ 'ನಹಿ' ಎಂಬ ವಾಕ್ಯದಿಂದ ಖಂಡಿಸುತ್ತಿದ್ದಾರೆ. ಯಾವುದಾದರೂ ಒಂದು ಪ್ರಮಾಣದಿಂದ ಜ್ಞೇಯವಾದರೆ ಮಾತ್ರ ಆ ವಸ್ತು ಸತ್ಯವಾಗುತ್ತದೆ. ಯಾವ ಪ್ರಮಾಣದಿಂದಲೂ ಜ್ಞೇಯವೇ ಆಗಲಿಲ್ಲವೆಂದರೆ ಸತ್ಯವಾಗುವುದಿಲ್ಲ.

(ಟೀಕೆ - ತೈತ್ತರಿಕಾನುಸ್ಮೃತಿಸಿದ್ಧ -- )

'ನಾನು ಇಷ್ಟು ಹೊತ್ತು ಸುಖವಾಗಿ ಮಲಗಿದ್ದೆ' ಎಂಬ ಅನುಭವವು ಆತ್ಮವಿಷಯಕವಾದ್ದರಿಂದ ಸಾಕ್ಷಿರೂಪವೆಂದು ಹೇಳಬೇಕು. ಹೀಗಿರುವಾಗ ನೀವು ಸ್ಮೃತಿಯೆಂದು ಹೇಗೆ ಹೇಳಿದಿರಿ? ಮನೋಜನ್ಯಜ್ಞಾನವೇ ಸ್ಮೃತಿಯೆನಿಸುತ್ತದಲ್ಲವೇ?

ಹೌದು. ಆದರೂ ಸಾಕ್ಷಿಜ್ಞಾನದಲ್ಲಿ ಸ್ಮೃತಿಶಬ್ದವನ್ನು ಪ್ರಯೋಗಿಸಲಾಗಿದೆ. ಅತೀತಕಾಲದಲ್ಲಿ ಉಂಟಾದ ಅನುಭೂತವಿಷಯಕತ್ವದ ಸಾಮ್ಯ ಸಾಕ್ಷಿಜ್ಞಾನದಲ್ಲಿ ತೋರುತ್ತಿದೆ. ''ಆಜನ್ಮಮರಣಂ ಸ್ಮೃತ್ವಾ ಮುಕ್ತಾ ಹರ್ಷಮವಾಪ್ನುಯುಃ (ಹುಟ್ಟಿದಾಗಿನಿಂದ ಮರಣದ ತನಕ ಎಲ್ಲಾ ಘಟನೆಗಳನ್ನು ಸ್ಮರಿಸಿಕೊಂಡು ಮುಕ್ತರು ಸಂತೋಷಪಟ್ಟರು) ಎಂದು ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಲ್ಲಿ ಸ್ಪಷ್ಟವಾಗಿ ಮುಕ್ತರ ಸ್ವರೂಪಜ್ಞಾನವನ್ನೇ ಸ್ಮೃತಿ ಎಂದಿದ್ದಾರೆ. ಆದ್ದರಿಂದ ಸಾಕ್ಷಿಜ್ಞಾನವನ್ನೇ ಸ್ಮರಣೆ ಎಂದು ಹೇಳಿದ್ದು ತಪ್ಪಲ್ಲ.

(ಟೀಕೆ - ನಹಿ ಸುಷುಪ್ತೌ ಆತ್ಮಾತಿರಿಕ್ತಾ ಸಂವಿದಸ್ತೀತಿ ಸಂಭವತಿ) ಸುಷುಪ್ತಿಕಾಲದಲ್ಲಿ ಆತ್ಮಾತಿರಿಕ್ತವಾದ ಜ್ಞಾನವು ಇರುವುದಿಲ್ಲ. 'ಗೃಹೀತ ಏವ ಪ್ರಾಣೋ ಭವತಿ, ಗೃಹೀತಾ ವಾಕ್ ಗೃಹೀತಂ ಚಕ್ಷುಃ' ಎಂಬ ಶ್ರುತಿಯಿಂದ ಸರ್ವೇಂದ್ರಿಯಗಳು ಸುಷುಪ್ತಿಯಲ್ಲಿ

ಉಪರತವಾಗಿರುತ್ತವೆಂದು ತಿಳಿಯುತ್ತದೆ. ಆದ್ದರಿಂದ ಆತ್ಮಾತಿರಿಕ್ತವಾದ ಜ್ಞಾನಕ್ಕೆ ಆತ್ಮನು ಆಶ್ರಯನಾಗಿದ್ದಾನೆಂದು ಸುಷುಪ್ತಿಕಾಲದಲ್ಲಿ ಸಮರ್ಥಿಸಲಾಗದು.

(ಟೀಕೆ - 'ಸಂವಿದಾತ್ಮಕತ್ವಾಚ್ಚಾತ್ಮನೋ' )

ಪ್ರಾಭಾಕರನಿಗೆ ಈ ವಾಕ್ಯದಿಂದ ಮತ್ತೊಂದು ದೋಷ ಹೇಳುತ್ತಿದ್ದಾರೆ. 'ಆತ್ಮಾ ನ ಸಂವಿದಾಶ್ರಯತಯಾ ಭಾಸತೇ ಸಂವಿದ್ರೂಪತ್ವಾತ್ ಸಂವಿದ್ವತ್' ಜ್ಞಾನವು ಹೇಗೆ ಜ್ಞಾನರೂಪವಾದ್ದರಿಂದ ಜ್ಞಾನಕ್ಕೆ ಆಶ್ರಯವಾಗುವುದಿಲ್ಲವೋ ಅದರಂತೆ ಆತ್ಮನೂ ಜ್ಞಾನರೂಪನಾದ್ದರಿಂದ ಮತ್ತೊಂದು ಜ್ಞಾನಕ್ಕೆ ಆಶ್ರಯನಾಗಲಾರ ಎಂದು.

ಪ್ರಶ್ನೆ - ಆತ್ಮನು ವಿಷಯನಾಗಲಾರ ಎಂದು ಪೂರ್ವಪಕ್ಷ ಮಾಡಬೇಕಾಗಿದೆ. ಅದನ್ನು ಉಪಪಾದಿಸಲು ಆತ್ಮನು ಸಿದ್ಧನೇ ಆಗಿದ್ದಾನೆಂದು ಹೇಳಬೇಕು. ಆತ್ಮನು ಸಿದ್ಧನಾಗಿದ್ದಾನೆಂದು ಸಮರ್ಥಿಸಲು ಸ್ವಪ್ರಕಾಶತ್ವ ಹೇಗೆ ಕಾರಣವಾಗುತ್ತದೋ, ಅದರಂತೆ ಮಾನಸಾನುಭವವೇದ್ಯತ್ವ ಮತ್ತು ಸ್ವಪ್ರಕಾಶಸಂವಿದಾಶ್ರಯತಯಾ ಭಾನ ಇವೆರಡೂ ಕಾರಣಗಳಾಗುತ್ತವೆ. ಹೀಗಿರುವಾಗ ಆ ಎರಡು ಮತಗಳನ್ನೇಕೆ ನಿರಾಕರಣೆ ಮಾಡಬೇಕು? ಈ ಮತಗಳನ್ನು ನಿರಾಕರಿಸದಿದ್ದರೂ ಪೂರ್ವಪಕ್ಷ ಉಪಪನ್ನವಾಗುತ್ತದೆ.

ಉತ್ತರ :- ಹೌದು. ಆದರೆ ನ್ಯಾಯವಿವರಣೆಯಲ್ಲಿ ಹೇಳಿದ್ದನ್ನು ಸಮರ್ಥಿಸಲು ಈ ಎರಡು ಮತಗಳನ್ನು ನಿರಾಕರಿಸಲಾಗಿದೆ. ನ್ಯಾಯವಿವರಣೆಯಲ್ಲಿ 'ಜೀವವ್ಯತಿರಿಕ್ತೇಶ್ವರಾಭಾವಾತ್ ತಸ್ಯ ಚ ಸ್ವಪ್ರಕಾಶತ್ವೇನ ನಿತ್ಯಸಿದ್ಧತ್ವಾತ್' ಜೀವನನ್ನು ಸ್ವಪ್ರಕಾಶತ್ವೇನ ನಿತ್ಯಸಿದ್ಧನೆಂದು ಹೇಳಿದ್ದಾರೆ. ಇದನ್ನು ಸಮರ್ಥಿಸಲು ಆತ್ಮನು ಮಾನಸಾನುಭವದಿಂದ ವೇದ್ಯನಲ್ಲವೆಂದು ಸ್ವಪ್ರಕಾಶಸಂವಿದಾಶ್ರಯತಯಾ ತೋರುವುದಿಲ್ಲವೆಂದು ಹೇಳಿದ್ದು ಸೂಕ್ತವೇ ಆಗಿದೆ.

## 'ಅಥ' 'ಅತಃ' ಶಬ್ದಗಳ ಪ್ರಾಥಮ್ಯವಿಚಾರ

**ಬ್ರಹ್ಮಸೂತ್ರಭಾಷ್ಯಮ್ –**

**ಉಕ್ತಂ ಚ ಗಾರುಡೇ—**

**अथातःशब्दपूर्वाणि सूत्राणि निखिलान्यपि ।**
**प्रारभन्ते नियत्यैव तत् किमत्र नियामकम् ।।**

ಜಿಜ್ಞಾಸಾಧಿಕರಣ (೧-೧-೧)

**कश्चार्थश्च तयोर्विद्वन् कथमुक्तमता तयोः ।**
**एतदाख्याहि मे ब्रह्मन् यथा ज्ञास्यामि तत्वतः ।।**

**एवमुक्तो नारदेन ब्रह्मा प्रोवाच सत्तमः ।**
**आनन्तर्येऽधिकारस्य मङ्गलार्थे तथैव च ।।**

**अथशब्दस्त्वतश्शब्दो हेत्वर्थे समुदीरितः ।**
**परस्य ब्रह्मणो विष्णोः प्रसादादिति वा भवेत् ।**
**स हि सर्वमनोवृत्तिप्रेरकः समुदाहृतः ।।**

ಅನುವಾದ - ಗರುಡಪುರಾಣದಲ್ಲಿ ಹೀಗೆ ಹೇಳಲಾಗಿದೆ -

''ಪ್ರತಿಯೊಂದು ಸೂತ್ರಗ್ರಂಥಗಳ ಪ್ರಾರಂಭದಲ್ಲಿ ನಿಯಮೇನ 'ಅಥ' ಮತ್ತು 'ಅತಃ' ಶಬ್ದಗಳನ್ನು ಉಚ್ಚರಿಸುತ್ತಾರೆ. ಈ ಶಬ್ದಗಳನ್ನೇ ಉಚ್ಚರಿಸಲು ಏನು ಕಾರಣ? ಇವುಗಳ ಅರ್ಥವೇನು? ಇವುಗಳ ಪ್ರಾಶಸ್ತ್ಯವೇನು? ಈ ವಿಷಯದ ಬಗ್ಗೆ ನನಗೆ ತಿಳಿಸಿ. ತತ್ವಜ್ಞಾನವನ್ನು ದಯಪಾಲಿಸಿರಿ'' ಎಂದು ಬ್ರಹ್ಮದೇವರನ್ನು ಕುರಿತು ನಾರದರು ಪ್ರಾರ್ಥಿಸಿದರು. ಅಂತಹ ನಾರದರಿಗೆ ಬ್ರಹ್ಮದೇವರು ಹೀಗೆ ಉತ್ತರಿಸುತ್ತಾರೆ.

ಅಥಶಬ್ದಕ್ಕೆ 'ಅಧಿಕಾರವನ್ನು ಹೊಂದಿದ ಮೇಲೆ' ಎಂದರ್ಥ. ಇದು ಮಂಗಳಸೂಚಕವೂ ಆಗಿದೆ. ಅತಃ ಎಂಬ ಶಬ್ದವು ಕಾರಣ ಎಂಬರ್ಥದಲ್ಲಿ ಹೇಳಲ್ಪಟ್ಟಿದೆ. ಅಥವಾ 'ಅಕಾರ-ವಾಚ್ಯನಾದ ಗುಣಪೂರ್ಣನಾದ ಪರಮಾತ್ಮನ ಅನುಗ್ರಹದಿಂದ' ಎಂದರ್ಥ. ಅಂತಹ ವಿಷ್ಣುವೇ ಎಲ್ಲ ವಿಧವಾದ ಚೇತನರ ಮನೋವ್ಯಾಪಾರಕ್ಕೆ ನಿಯಾಮಕನಾಗಿದ್ದಾನೆ. ಆದ್ದರಿಂದ ವಿಷ್ಣುವಿನ ಅನುಗ್ರಹವಿದ್ದರೆ ಮಾತ್ರ ಶ್ರವಣಮನನಾದಿಗಳನ್ನು ಮಾಡಲು ಸಾಧ್ಯ. ಹೀಗೆ ಗ್ರಂಥಾರಂಭದಲ್ಲಿ ಅವಶ್ಯ ತಿಳಿಯಬೇಕಾದ ವಿಚಾರಗಳನ್ನು ಅಥ ಮತ್ತು ಅತಃಶಬ್ದಗಳು ತಿಳಿಸುತ್ತಿವೆ.

ಪ್ರತಿಪದಾರ್ಥ -- ಗಾರುಡೇ = ಗರುಡಸಂಬಂಧಿಯಾದ ಪುರಾಣದಲ್ಲಿ, ಉಕ್ತಂ ಚ = ಹೇಳಲ್ಪಟ್ಟಿದೆ (ಇದುವರೆಗೂ ನಿರೂಪಿಸಿದ ಅಥಶಬ್ದದ ಅರ್ಥವು ನಾವಷ್ಟೇ ಹೇಳಿದ್ದಲ್ಲ ಗಾರುಡದಲ್ಲಿಯೂ ಹೇಳಲ್ಪಟ್ಟಿದೆ ಎಂದು ಚಶಬ್ದದ ಅರ್ಥ). ಹೇ ವಿದ್ವನ್ = ಎಲೈ ಬ್ರಹ್ಮದೇವರೇ!, ನಿಖಿಲಾನಿ = ವೇದವ್ಯಾಸ, ಜೈಮಿನಿ, ಗೌತಮ ಮೊದಲಾದವರಿಂದ ರಚಿಸಲ್ಪಟ್ಟ, ಸೂತ್ರಾಣಿ = ಸೂತ್ರಗ್ರಂಥಗಳು, ಅಥಾತಃಶಬ್ದಪೂರ್ವಾಣಿ = 'ಅಥ' ಮತ್ತು 'ಅತಃ' ಶಬ್ದಗಳೇ ಪ್ರಾರಂಭದಲ್ಲಿ ಮೊದಲಾದವುಗಳಾಗಿ, ನಿಯತ್ಯೈವ = ನಿಯಮೇನ (ಬೇರೆ ಕಲ್ಪಗಳಲ್ಲಿಯೂ),

ಪ್ರಾರಭಂತೇ = ಪ್ರಾರಂಭಿಸಲ್ಪಟ್ಟಿವೆ. ಅತ್ರ = ಹೀಗೆಯೇ ಪ್ರಾರಂಭಿಸಬೇಕು ಎಂಬ ವಿಷಯದಲ್ಲಿ, ಕಂ ನಿಯಾಮಕಂ = ಏನು ಆಧಾರ?, ತಯೋಃ = ಅಥ ಮತ್ತು ಅತಃಶಬ್ದಗಳಿಗೆ, ಕಶ್ಚ- (ಕಸ್ತು) = ಯಾವ (ಪ್ರಶ್ನೆಯ ಸಮುಚ್ಚಯವನ್ನು ಅಥವಾ ಅವಧಾರಣೆಯನ್ನು ಚಶಬ್ದವು ತೋರಿಸುತ್ತಿದೆ), ಅರ್ಥಃ = ಅರ್ಥವು?, ತಯೋಃ = ಆ ಪದಗಳಿಗೆ, ಉತ್ತಮತಾ = ಸ್ವರೂಪತಃ ಪ್ರಾಧಾನ್ಯವು, ಕಥಮ್ = ಹೇಗೆ?, ಹೇ ಬ್ರಹ್ಮನ್ = ಎಲೈ ಬ್ರಹ್ಮದೇವರೇ!, ಏತತ್ = ಈ ವಿಷಯವನ್ನು, ತತ್ತ್ವತಃ = ಯಥೋಕ್ತವಾಗಿ, ಯಥಾ = ಹೇಗೆ, ಜ್ಞಾಸ್ಯಾಮಿ = ತಿಳಿಯುತ್ತೇನೋ, ತಥಾ = ಹಾಗೆ, ಆಖ್ಯಾಹಿ = ಹೇಳಿರಿ.

ಏವಂ = ಹೀಗೆ, ನಾರದೇನ = ನಾರದರಿಂದ, ಉಕ್ತಃ = ಪ್ರಶ್ನಿಸಲ್ಪಟ್ಟ, ಸತ್ತಮಃ = ಜೀವರಲ್ಲಿ ಉತ್ತಮರಾದ, ಬ್ರಹ್ಮಾ = ಚತುರ್ಮುಖಬ್ರಹ್ಮದೇವರು, ಪ್ರೋವಾಚ = ಉತ್ತರಿಸಿದರು. ಅಥಶಬ್ದಃ = ಅಥ ಎಂಬ ಶಬ್ದವು, ಆನಂತರ್ಯೇಽಧಿಕಾರಸ್ಯ = ಅಧಿಕಾರಿಯಾದ ಅನಂತರ ಎಂಬರ್ಥದಲ್ಲಿ, ತಥೈವ ಚ = ಅದರಂತೆಯೇ, ಮಂಗಲಾರ್ಥೇ = ಮಂಗಲವನ್ನುಂಟುಮಾಡುವ ಅರ್ಥದಲ್ಲಿಯೂ, ಸಮುದೀರಿತಃ = ಹೇಳಲ್ಪಟ್ಟಿದೆ. ಅತಃಶಬ್ದ = 'ಅತಃ' ಎಂಬ ಶಬ್ದವು, ಹೇತ್ವರ್ಥೇ = ಪ್ರಯೋಜನ ಎಂಬ ಅರ್ಥದಲ್ಲಿಯೂ, ಸಮುದೀರಿತಃ = ಹೇಳಲ್ಪಟ್ಟಿದೆ. ('ಅತಃ'ಶಬ್ದಕ್ಕೆ ಮತ್ತೊಂದು ಬಗೆಯ ಅರ್ಥ) ಪರಸ್ಯ = ಶ್ರೇಷ್ಠನಾದ, ಬ್ರಹ್ಮಣಃ = ಗುಣಪೂರ್ಣನಾದ, ವಿಷ್ಣೋಃ = ಪರಮಾತ್ಮನ, ಪ್ರಸಾದಾತ್ = ಪ್ರಸಾದದಿಂದಲೂ, ಇತಿ ವಾ = ಹೀಗೂ ಸಹ, ಭವೇತ್ = ಅತಃಶಬ್ದವು ಆಗುತ್ತದೆ.

ಜಿಜ್ಞಾಸೆಗೋಸ್ಕರ ಭಗವತ್ಪ್ರಸಾದವೇಕೆ? ಎಂಬ ಪ್ರಶ್ನೆಗೆ 'ಸ ಹಿ' = ಆ ಪರಮಾತ್ಮನೇ, ಸರ್ವ = ಸಕಲವಿಧವಾದ ಚೇತನಪ್ರಪಂಚದ, ಮನೋವೃತ್ತಿ = ಮನಸ್ಸಿನ ಪ್ರವೃತ್ತಿಗೆ, ಪ್ರೇರಕಃ = ನಿಯಾಮಕನು - (ಎಂದು), ಸಮುದಾಹೃತಃ = ಜ್ಞಾನಿಗಳಿಂದ ಹೇಳಲ್ಪಟ್ಟಿದೆ.

## ಅಧಿಕರಣದ ಸಿದ್ಧಾಂತ

**तत्वप्रकाशिका – एवं प्राप्ते सिद्धान्तयत् सूत्रमुपन्यस्यति – अथेति।। ग्रन्थादौ मङ्गलाचरणस्यावश्यकर्तव्यत्वात् तत्परतया 'अथ'शब्दं व्याचष्टे – अथेति ।।**

ಗ್ರಂಥದ ಪ್ರಾರಂಭದಲ್ಲಿ ಅವಶ್ಯವಾಗಿ ಮಂಗಳವನ್ನು ಆಚರಿಸಬೇಕು. ಆದ್ದರಿಂದ ಮಂಗಳವೇ ಫಲವಾಗಿವುಳ್ಳ ಅಥ ಶಬ್ದದಿಂದ ಬ್ರಹ್ಮಸೂತ್ರವು ಪ್ರಾರಂಭವಾಗುತ್ತಿದೆಯೆಂದು 'ಅಥ' ಶಬ್ದವನ್ನು ವ್ಯಾಖ್ಯಾನಿಸುತ್ತಿದ್ದಾರೆ.

**तत्वप्रकाशिका – मुक्त्यर्थिमात्रस्य ब्रह्मजिज्ञासायां प्रवृत्तिनिरसनपरतयापि तं व्याचक्षाणः तस्याभिधेयमर्थमाह – अधिकारेति ।।**

ಯಾರು ಕೇವಲ ಮೋಕ್ಷವನ್ನೇ ಬಯಸುತ್ತಾನೋ ಅಂದರೆ ಮೋಕ್ಷ ಯೋಗ್ಯತೆ ಇಲ್ಲದಿದ್ದರೂ ಮೋಕ್ಷವನ್ನು ಬಯಸಿ ಬ್ರಹ್ಮಜಿಜ್ಞಾಸೆಯಲ್ಲಿ ಪ್ರವೃತ್ತಿ ಮಾಡಿದರೆ ಅವನನ್ನು ನಿರಾಸೆ ಮಾಡಲು 'ಅಥ' ಶಬ್ದವನ್ನು ವ್ಯಾಖ್ಯಾನ ಮಾಡುತ್ತಾ ಅದರ ಅರ್ಥವನ್ನು ಅಧಿಕಾರ ಎಂಬ ಭಾಷ್ಯದಿಂದ ಹೇಳುತ್ತಿದ್ದಾರೆ.

**तत्वप्रकाशिका – अथ शब्दस्यानन्तर्यमात्रार्थत्वप्यधिकारस्य योग्यतया सम्बन्धः । ब्रह्मजिज्ञासायाः प्रयोजनशून्यताशङ्कानिवर्तकतयाऽतःशब्दं व्याचष्टे – अत इति ।।**

'ಅಥ' ಶಬ್ದಕ್ಕೆ ಅನಂತರ ಎಂದಷ್ಟೇ ಅರ್ಥ. ಆದರೆ ಯೋಗ್ಯತೆಯನ್ನು ನೋಡಿಕೊಂಡು ಅದರ ಹಿಂದಿನ ಅಧಿಕಾರ ಎಂಬ ಶಬ್ದದ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು. ಬ್ರಹ್ಮಜಿಜ್ಞಾಸೆಗೆ ಪ್ರಯೋಜನವಿಲ್ಲವೆಂಬ ಶಂಕೆಯನ್ನು ಪರಿಹರಿಸಲು 'ಅತಃ' ಎಂಬುದಾಗಿ 'ಅತಃ' ಶಬ್ದವನ್ನು ವ್ಯಾಖ್ಯಾನಿಸುತ್ತಿದ್ದಾರೆ.

**तत्वप्रकाशिका – ननु 'अथातःशब्दपूर्वकत्वं सूत्राणां किं निमित्तम्? मङ्गलाचरणादेः शब्दान्तरेणापि संभवात्' इत्याशङ्कां पुराणवचनेनैव परिहरति – उक्तं चेति ।।**

ಸೂತ್ರದ ಪ್ರಾರಂಭದಲ್ಲಿ 'ಅಥ' ಮತ್ತು 'ಅತಃ' ಎಂಬೆರಡು ಶಬ್ದಗಳನ್ನು ನಿಯಮೇನ ವಿವಕ್ಷಿಸಲು ಏನು ಕಾರಣ? ಬೇರೆ ಶಬ್ದಗಳಿಂದಲೂ ಮಂಗಳಾಚರಣೆಯನ್ನು ಮಾಡಬಹುದಲ್ಲವೇ? ಎಂಬ ಶಂಕೆಯನ್ನು ನಿವಾರಣೆ ಮಾಡುವುದಾಕ್ಕಾಗಿ ಗರುಡ ಪುರಾಣದ ಮಾತನ್ನು ಉಲ್ಲೇಖಿಸುತ್ತಿದ್ದಾರೆ. 'ಉಕ್ತಂ ಚ' ಇತ್ಯಾದಿಯಾಗಿ

**तत्वप्रकाशिका – अत्र प्रथमप्रयोज्यत्वे नियामकेन भाव्यं, तत् किं नियामकम् ? न चैतत् प्राथम्यं यादृच्छिकम् । यतोऽखिलान्यपि नियत्यैव तत्पूर्वकाणीत्यर्थः ।**

ಈ ಎರಡು ಶಬ್ದಗಳನ್ನು ಮೊದಲೇ ವಿವಕ್ಷಿಸಲು ಯಾವುದಾದರೂ ನಿಯಾಮಕವಿರಬೇಕು. ಆ ನಿಯಾಮಕ ಯಾವುದು? ಯಾದೃಚ್ಛಿಕವಾಗಿ ಮೊದಲು ಹೇಳಿದ್ದಾರೆ ಎನ್ನಬಾರದು. ಏಕೆಂದರೆ ಎಲ್ಲಾ ಸೂತ್ರಗಳ ಪ್ರಾರಂಭದಲ್ಲಿ ಈ ಎರಡೇ ಶಬ್ದಗಳನ್ನು ನಿಯಮೇನ ಪ್ರಯೋಗಿಸಿದ್ದಾರೆ.

**तत्वप्रकाशिका – नियामकं च भवत् द्विविधं भवेत् । अवश्यवक्तव्यार्थत्वम् आधिक्यं चेति । आधिक्यं च स्वरूपतोऽर्थतश्चेति द्वेधा भवति । तत्रादिपक्षे पृच्छति – कश्चेति ।। 'कोऽसावावश्यवक्तव्योऽर्थो येन प्राथम्यम्' इत्यर्थः ।**

ನಿಯಾಮಕವನ್ನು ಎರಡು ಪ್ರಕಾರದಿಂದ ಹೇಳಬಹುದು. ಒಂದು ಆವಶ್ಯವಾಗಿ ಹೇಳುವಿಕೆ. ಮತ್ತೊಂದು ಆಧಿಕ್ಯವಿರುವಿಕೆ. ಈ ಆಧಿಕ್ಯವು ಪುನಃ ಎರಡು ವಿಧ. ೧) ಸ್ವರೂಪತಃ ೨) ಅರ್ಥತಃ ಎಂದು. ಕಶ್ಚಾರ್ಥಶ್ಚ ಎಂಬುದರಿಂದ ಮೊದಲನೇ ಪಕ್ಷವನ್ನು ವಿಚಾರ ಮಾಡಿದ್ದಾರೆ. ಆವಶ್ಯವಾಗಿ ಹೇಳಬೇಕಾದ ಅರ್ಥ ಯಾವುದು? ಯಾವುದರಿಂದ ಇದಕ್ಕೆ ಪ್ರಾಧಾನ್ಯ ಬಂದಿದೆ ಎಂದು.

**तत्वप्रकाशिका – द्वितीयमाक्षिपति – कथम् इति ।। 'शब्दान्तरस्य स्वरूपोत्तमत्वादर्शनात् कथमनयोः तत्' इति भावः ।**

ಎರಡನೇ ಪ್ರಕಾರವನ್ನು 'ಕಥಂ' ಎಂಬುದಾಗಿ ಅಪೇಕ್ಷಿಸುತ್ತಿದ್ದಾರೆ. ಬೇರೆ ಯಾವುದೇ ಶಬ್ದಗಳಿಗೂ ಸ್ವರೂಪತಃ ಉತ್ತಮತ್ವವಿರುವುದು ಕಂಡಿಲ್ಲ. ಹಾಗಾದರೆ ಈ ಎರಡು ಶಬ್ದಗಳಿಗೆ ಮಾತ್ರ ಅಂತಹ ಉತ್ತಮತ್ವವು ಹೇಗೆ ಬರುತ್ತದೆ ? ಎಂದು ಆಕ್ಷೇಪದ ಅಭಿಪ್ರಾಯ.

**तत्वप्रकाशिका – तृतीये पृच्छति – कथम् इति ।। अवश्यवक्तव्यार्थत्वात् प्रथमप्रयोग इति परिहारमभिप्रेत्यावश्यवक्तव्यार्थत्वं तयोर्दर्शयति – आनन्तर्य इति ।।**

ಮೂರನೆಯ ಪಕ್ಷದಲ್ಲಿ 'ಕಥಂ' ಎಂದು ಪ್ರಶ್ನಿಸುತ್ತಿದ್ದಾರೆ. ಈ ಎರಡು ಶಬ್ದಗಳಿಗೆ ಅವಶ್ಯವಕ್ತವ್ಯಾರ್ಥವು ಇರುವುದರಿಂದ ಪ್ರಥಮ ಪ್ರಯೋಗವು ಇರುತ್ತದೆ ಎಂಬ ಸಮಾಧಾನವನ್ನು ಹೇಳುವ ಉದ್ದೇಶದಿಂದ 'ಆನಂತರ್ಯೇ' ಎಂಬ ವಾಕ್ಯವು ಹೊರಟಿದೆ.

**ತತ್ವಪ್ರಕಾಶಿಕಾ – ಅತ್ರಾತಃಶಬ್ದಸ್ಯಾऽವಶ್ಯವಕ್ತವ್ಯಮರ್ಥಾನ್ತರಂ ಚಾಹ – ಪರಸ್ಯೇತಿ ।।**

'ಅತಃ' ಶಬ್ದವು ಮಂಗಲಾರ್ಥಕವಾದ್ದರಿಂದ ಮತ್ತು ಅಧಿಕಾರಿ ಪ್ರಾಪ್ತಿಯ ಅನಂತರ ಎಂಬರ್ಥವನ್ನು ಹೇಳುವುದರಿಂದಲೂ ಅವಶ್ಯ ವಕ್ತವ್ಯವಾಗಿದೆ. 'ಅತಃ' ಎಂಬ ಶಬ್ದಕ್ಕೆ ಅವಶ್ಯವಕ್ತವ್ಯತ್ವವನ್ನು 'ಪರಸ್ಯ' ಎಂಬುದಾಗಿ ಹೇಳುತ್ತಿದ್ದಾರೆ.

**ತತ್ವಪ್ರಕಾಶಿಕಾ – 'ಅಕಾರವಾಚ್ಯಾತ್ ವಿಷ್ಣೋಃ ತತ್ಪ್ರಸಾದಾತ್ ತಜ್ಜಿಜ್ಞಾಸಾದಿ ಕಾರ್ಯಮ್ ಇತಿ ವಾತಃಶಬ್ದಾರ್ಥೋ ಭವೇತ್' ಇತ್ಯರ್ಥಃ ।**

ಅಕಾರ ವಾಚ್ಯನಾದ ವಿಷ್ಣುವಿಗೋಸ್ಕರ ಅವನ ಪ್ರಸಾದಕ್ಕೋಸ್ಕರ ಅವನ ಜಿಜ್ಞಾಸೆಯನ್ನು ಮಾಡಬೇಕು. ಹೀಗೂ 'ಅತಃ' ಶಬ್ದಕ್ಕೆ ಅರ್ಥವನ್ನು ಹೇಳಬಹುದು.

**ತತ್ವಪ್ರಕಾಶಿಕಾ – 'ಅ ಇತಿ ಬ್ರಹ್ಮ'(೧) ಇತ್ಯಾದಿ ಶ್ರುತಿಂ ಸೂಚಯತಿ ಪರಬ್ರಹ್ಮಗ್ರಹಣೇನ । ಕಿಂ ಜಿಜ್ಞಾಸಾಯಾಂ ಭಗವತ್ಪ್ರಸಾದೇನ? ಇತ್ಯತ ಆಹ – ಸ ಹೀತಿ ।।**

ಪರಬ್ರಹ್ಮ ಎಂಬ ಶಬ್ದವನ್ನು ಸ್ವೀಕರಿಸಿದ್ದರಿಂದ 'ಅ ಇತಿಬ್ರಹ್ಮ' ಎಂಬ ಶ್ರುತಿಯನ್ನು ಸೂಚಿಸಿದಂತಾಯಿತು. ಇನ್ನು ಜಿಜ್ಞಾಸೆಗೋಸ್ಕರ ಪರಮಾತ್ಮನ ಪ್ರಸಾದವೇಕೆ ? ಎಂಬ ಶಂಕೆಯನ್ನು 'ಸ ಹಿ' ಎಂಬುದರಿಂದ ಪರಿಹರಿಸುತ್ತಿದ್ದಾರೆ.

## ಸೂತ್ರಕಾರರ ಮಂಗಳಾಚರಣೆ

**ಭಾವದೀಪಃ – ಗ್ರನ್ಥಾದೌ ಮಙ್ಗಲಾಚರಣಸ್ಯೇತಿ ।। 'ತದಾವಶ್ಯಕತ್ವಂ ಚಾವಿಘ್ನಪರಿಸಮಾಪ್ತ್ಯಾದಿಹೇತುತ್ವಾತ್' ಇತಿ ಬೋಧ್ಯಮ್ । ವಿಸ್ತೃತಮೇತತ್ ಸುಧಾಯಾಮ್ ।**

ನಿರ್ವಿಘ್ನಪರಿಸಮಾಪ್ತಿಗೋಸ್ಕರ ಗ್ರಂಥದ ಪ್ರಾರಂಭದಲ್ಲಿ ಮಂಗಳವನ್ನು ಅವಶ್ಯ ಆಚರಿಸಬೇಕು. ಆದ್ದರಿಂದ ಸೂತ್ರಕಾರರು ಮೊದಲು ಅಥಶಬ್ದದಿಂದ ಮಂಗಳವನ್ನು

(೧) (ಐ, ಆರ ೨-೩-೮-೭)

ಆಚರಿಸುತ್ತಿದ್ದಾರೆಂದು 'ಗ್ರಂಥಾದೌ ಮಂಗಳಾಚರಣಸ್ಯ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. ಹೆಚ್ಚಿನ ವಿಚಾರವನ್ನು ಸುಧೆಯಲ್ಲಿ ತಿಳಿಯಬೇಕು.

## 'ಅಥ' ಶಬ್ದವು ಹೇಗೆ ಮಂಗಳಮಯ ?

**ಭಾವದೀಪಃ – तत् परतयेति ।। 'तत्फलतया' इत्यर्थः । 'अथशब्दोच्चारणादेर्मङ्गलस्याशब्दार्थत्वेन तत्परत्वायोगात् । मङ्गलप्रयोजनकः' इति सुधाग्रन्थाच्च । तत्वप्रदीपे तु – 'अथशब्दः श्रवणकीर्तनाभ्यां मङ्गलफलकः, विष्णोः परममङ्गलस्य वाचकत्वेनातिप्रियत्वात्' इति मङ्गलफलकत्वं मङ्गलरूपविष्ण्वर्थकत्वं चोक्तम् । 'तत्फलतया' इत्यपि पाठः ।**

ಟೀಕೆಯಲ್ಲಿರುವ 'ತತ್ಪರತಯಾ' ಎಂಬುದಕ್ಕೆ ಮಂಗಳವೇ ಪ್ರಯೋಜನವಾಗಿ ಉಳ್ಳದ್ದು ಎಂದು ಅರ್ಥ. ಆದ್ದರಿಂದಲೇ ಸುಧೆಯಲ್ಲಿ ಮಂಗಲಪ್ರಯೋಜನಕಃ ಎಂದಿದ್ದಾರೆ. ತತ್ವಪ್ರದೀಪದಲ್ಲಿಯೂ ಇದನ್ನೇ ಹೇಳಿದ್ದಾರೆ. 'ಅಥಶಬ್ದಃ ಶ್ರವಣಕೀರ್ತನಾಭ್ಯಾಂ ಮಂಗಲಫಲಕಃ ವಿಷ್ಣೋಃ ಪರಮಮಂಗಲಸ್ಯ ವಾಚಕತ್ವೇನಾತಿಪ್ರಿಯತ್ವಾತ್' (ಕೇಳುವುದರಿಂದ ಹಾಗೂ ಹೇಳುವುದರಿಂದ ಅಥಶಬ್ದವು ಮಂಗಳವನ್ನು ಉಂಟುಮಾಡುತ್ತದೆ. ಮತ್ತು ಪರಮಮಂಗಳಸ್ವರೂಪನಾದ ವಿಷ್ಣುವನ್ನು ಪ್ರತಿಪಾದಿಸುತ್ತದೆ) ಎಂದು ಮಂಗಳಫಲಕತ್ವವನ್ನು ಮಂಗಳರೂಪನಾದ ವಿಷ್ಣು ಎಂಬರ್ಥವನ್ನು ಹೇಳಿದ್ದಾರೆ.

ವಿವರಣೆ - (ಟೀಕೆ - ''ಗ್ರಂಥಾದೌ ಮಂಗಳಾಚರಣಸ್ಯಾವಶ್ಯಕರ್ತವ್ಯತ್ವಾತ್ ತತ್ಪರತಯಾ ಅಥಶಬ್ದಂ ವ್ಯಾಚಷ್ಟೇ'')

ವಿಘ್ನಗಳನ್ನು ಪರಿಹರಿಸುವ ಮೂಲಕ ಪರಿಸಮಾಪ್ತಿ ಎಂಬ ಪ್ರಯೋಜನವಿರುವುದರಿಂದ ಗ್ರಂಥದ ಮೊದಲು ಮಂಗಳಾಚರಣೆಯನ್ನು ಅವಶ್ಯ ಆಚರಿಸಬೇಕು.

ಸೂತ್ರಕಾರರಿಗೆ ಯಾವ ವಿಘ್ನವೂ ಇಲ್ಲದ ಕಾರಣ ಸೂತ್ರಕಾರರು ಮಂಗಳಾಚರಣೆಯನ್ನೇ ಮಾಡಬೇಕಾಗಿಲ್ಲ. ಆದರೂ ಶಿಷ್ಯಶಿಕ್ಷಣೆಗೋಸ್ಕರ ಆಚರಿಸಿದ್ದಾರೆ. ಇಲ್ಲವಾದಲ್ಲಿ ಭಾರತ, ಭಾಗವತಾದಿಗಳಲ್ಲಿ ಮಾಡಿದ ಮಂಗಳಾಚರಣೆಯೂ ವ್ಯರ್ಥವಾಗುತ್ತದೆ.

ತತ್ಪರತಯಾ = 'ಮಂಗಲಫಲತಯಾ' ಎಂದೇ ಅರ್ಥೈಸಬೇಕು. 'ಮಂಗಲಾಭಿಧಾಯಕತಯಾ' ಎಂದಲ್ಲ. ಏಕೆಂದರೆ ಅಥ ಶಬ್ದವನ್ನು ಹೇಳುವುದರಿಂದ ಮಂಗಳವೆಂಬ ಪ್ರಯೋಜನವಿದೆ, ಹೊರತು ಮಂಗಳ ಎಂಬರ್ಥವನ್ನು ಆದು ಹೇಳುವುದಿಲ್ಲ. ಸುಧೆಯಲ್ಲಿಯೂ 'ಅಥಶಬ್ದಃ ಶ್ರುತ್ಯಾ ಮಂಗಲಪ್ರಯೋಜನಕ:'' ಎಂದಿದ್ದಾರೆ. ಒಂದು ವೇಳೆ ಮಂಗಳ ಎಂಬರ್ಥವನ್ನು ಅಥಶಬ್ದಕ್ಕೆ ಹೇಳಿದರೆ ವಾಕ್ಯಾರ್ಥದಲ್ಲಿ ಅನ್ವಯವನ್ನು ಮಾಡಲಾಗದು. ಅಷ್ಟೇ ಅಲ್ಲದೇ ಅಥಶಬ್ದಕ್ಕೆ ಬೇರೆ ಅರ್ಥವನ್ನು ಹೇಳುವ 'ತಸ್ಯಾಭಿಧೇಯಮಾಹ' ಎಂಬ ಮುಂದಿನ ವಾಕ್ಯದ ವಿರೋಧವೂ ಬರುತ್ತದೆ. ಕೆಲವು ಪುಸ್ತಕಗಳಲ್ಲಿ 'ತತ್ ಫಲತಯಾ' ಎಂಬ ಪಾಠವಿದೆ. ಈ ಪಾಠದಲ್ಲಿ ಯಾವ ಸಮಸ್ಯೆ ಇಲ್ಲ.

ವಿಶೇಷ ವಿಚಾರ - ಟೀಕೆಯಲ್ಲಿ 'ತತ್ಫಲತಯಾ' ಎಂಬ ಪಾಠವೇ ಸಾಧುವಾಗಿದೆ. 'ತತ್ಪರತಯಾ' ಎಂಬ ಪಾಠವು ಲೇಖಕರ ಪ್ರಮಾದದಿಂದ ಸೇರಿರಬಹುದು. 'ಅಥ' ಶಬ್ದವನ್ನು ಉಚ್ಚಾರಣೆ ಮಾಡುವುದರಿಂದ ಮಂಗಳವಾಗುತ್ತದೆ. ಆದ್ದರಿಂದ 'ತತ್ಫಲತಯಾ' ಮಂಗಳವನ್ನುಂಟುಮಾಡುವುದರಿಂದ ಎಂಬ ಅರ್ಥವು ಸರಿಹೊಂದುತ್ತದೆ. ಆದರೆ 'ಅಥ' ಶಬ್ದಕ್ಕೆ ಮಂಗಳವೆಂಬರ್ಥವಾಗಲಿ ತಾತ್ಪರ್ಯವಾಗಲಿ ಕೂಡುವುದಿಲ್ಲ. ಆದ್ದರಿಂದ 'ತತ್ಪರತಯಾ' 'ಮಂಗಳವೆಂಬರ್ಥದಲ್ಲಿ ತಾತ್ಪರ್ಯವಿರುವುದರಿಂದ' ಎಂಬರ್ಥವನ್ನು ಇಟ್ಟುಕೊಂಡರೆ ಅನುಚಿತವಾಗುತ್ತದೆ. 'ಮಂಗಳ' ಎಂಬರ್ಥವು ಅಥ ಶಬ್ದಕ್ಕೆ ಏಕೆ ಕೂಡವುದಿಲ್ಲ? ಎಂದರೆ ಶಬ್ದದಲ್ಲಿ ಯೋಗ ರೂಢಿಗಳೆಂದು ಮುಖ್ಯವೃತ್ತಿಗಳು ಎರಡು ವಿಧ. ರೂಢಿ - ಲಕ್ಷಣಾ ಅಮುಖ್ಯವೃತ್ತಿಗಳು. ಇಷ್ಟು ವೃತ್ತಿಗಳನ್ನು ಬಿಟ್ಟು ಬೇರೆ ವೃತ್ತಿಗಳು ಶಬ್ದಗಳಲ್ಲಿ ಇರಲಾರವೆಂದು ಕರ್ಮನಿರ್ಣಯಾದಿ ಗ್ರಂಥಗಳಲ್ಲಿ ಸಮರ್ಥಿಸಿದ್ದಾರೆ. ಯಾವುದು ಶಬ್ದವೃತ್ತಿಗೆ ವಿಷಯವಾಗಿರುತ್ತದೊ, ಅದಷ್ಟೇ ತಾತ್ಪರ್ಯವೃತ್ತಿಗೆ ವಿಷಯವಾಗುತ್ತದೆ. ಪ್ರಕೃತ ಅಥಶಬ್ದಕ್ಕೆ 'ಮಂಗಳ' ಎಂಬರ್ಥವು ಯಾವ ವೃತ್ತಿಯಿಂದಲೂ ಕೂಡುವುದಿಲ್ಲ. ಆದ್ದರಿಂದ ಅಥಶಬ್ದಕ್ಕೆ ಮಂಗಳಾರ್ಥದಲ್ಲಿ ತಾತ್ಪರ್ಯವೂ ಇರಲು ಸಾಧ್ಯವಿಲ್ಲ..

ಶಂಕೆ - 'ಅಕಾರಃ ಸರ್ವವಾಗಾತ್ಮಾ ಪರಬ್ರಹ್ಮಾಭಿಧಾಯಕಃ' 'ಎಲ್ಲಾ ಅಕ್ಷರಗಳಿಗೂ ಅಕಾರವೇ ಮೂಲ. ಇದು ಪರಬ್ರಹ್ಮವಾಚಕವಾಗಿದೆ' ಎಂದು ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯು ಅಕಾರವನ್ನು ವಿಷ್ಣುವಾಚಿಯೆನ್ನುತ್ತಿದೆ. ಅಕಾರವಾಚ್ಯನಾದ ವಿಷ್ಣುವಾದರೂ 'ಮಂಗಳಾನಾಂ ಚ ಮಂಗಳಂ' 'ಮಂಗಳವಸ್ತುಗಳಿಗೂ ಮಂಗಳನಾಗಿದ್ದಾನೆ' ಎಂಬ ಸ್ಮೃತಿ ಹೇಳುವಂತೆ ಪರಮಮಂಗಳಸ್ವರೂಪನಾಗಿದ್ದಾನೆ. ಹೀಗೆ ಅಥ ಶಬ್ದದಲ್ಲಿ

ಅಕಾರ ವಿಷ್ಣುವಾಚಕ, ವಿಷ್ಣುವು ಮಂಗಳಸ್ವರೂಪನಾಗಿದ್ದಾನೆ. ಆದ್ದರಿಂದ ಮಂಗಲ-ಪರತ್ವವನ್ನು ಅಥ ಶಬ್ದಕ್ಕೆ ಏಕೆ ಹೇಳಬಾರದು?

ಸಮಾಧಾನ - ಅಕಾರವಾಚ್ಯನಾದ ವಿಷ್ಣುವು ಮಂಗಳಸ್ವರೂಪನೆಂದು ಪ್ರಸಿದ್ಧನಾಗಿರುವುದು ಪ್ರಶಸ್ತ ಎಂಬರ್ಥದಲ್ಲಿ. ಇಂತಹ ಪ್ರಶಸ್ತಾರ್ಥಕ ಮಂಗಳವು ಗ್ರಂಥಾರಂಭದಲ್ಲಿ ಅಪ್ರಸ್ತುತವಾಗಿದೆ. ಪ್ರಕೃತದಲ್ಲಿ ಬೇಕಾದುದು ವಿಘ್ನನಿವಾರಕವಾದ ವಿಷ್ಣುಸ್ಮರಣೆ, ಅಥಶಬ್ದೋಚ್ಚಾರಣೆ ಮೊದಲಾದುದು. ಇಂತಹ ಮಂಗಳವು ಅಥ ಶಬ್ದದ ಅರ್ಥವಲ್ಲ. ಆದ್ದರಿಂದ ಅಥ ಶಬ್ದವು ಯಾವ ಮಂಗಳವನ್ನು ಹೇಳುತ್ತದೋ ಅದು ಅಪ್ರಸ್ತುತವಾದ್ದರಿಂದ ನಮಗೆ ಬೇಡ. ಯಾವ ರೂಪವಾದ ಮಂಗಳವು ನಮಗೆ ಬೇಕೋ ಅದನ್ನು ಅಥಶಬ್ದವು ಹೇಳುತ್ತಿಲ್ಲ. ಆದ್ದರಿಂದ ಅಥ ಶಬ್ದವು ಮಂಗಳಾರ್ಥಕವಲ್ಲ ಎಂಬ ಮಾತು ಸರಿಯೇ ಆಗಿದೆ.

ಶಂಕೆ - 'ಸಿಸೃಕ್ಷೋಃ ಪರಮಾದ್ವಿಷ್ಣೋಃ' 'ಸೃಷ್ಟಿ ಮಾಡಲು ಬಯಸಿದ ಮಹಾವಿಷ್ಣುವಿನಿಂದ' ಎಂಬ ಭಾಷ್ಯದ ಅವತಾರಿಕೆಯ ಸಂದರ್ಭದಲ್ಲಿ ಟೀಕೆಯಲ್ಲಿ ಹೀಗೆ ಹೇಳಲಾಗಿದೆ. - 'ಮಂಗಳೋಕ್ಯಾದೇಃ ಶಬ್ದಾಂತರೇಣಾಪಿ ಸಂಭವಾತ್' 'ಮಂಗಳವನ್ನು ಬೇರೆ ಶಬ್ದದಿಂದಲೂ ಹೇಳಲು ಸಂಭವವಿರುವುದರಿಂದ' ಎಂದು ಹೇಳಲಾಗಿದೆ. ಮಂಗಳವು ಅಥ ಶಬ್ದದ ಅರ್ಥವಲ್ಲವೆಂದು ನೀವು ಹೇಳಿದರೆ ಟೀಕೆಯ ಈ ಮಾತು ತಪ್ಪಾಗುತ್ತದೆ. ಏಕೆಂದರೆ ಟೀಕಾಮಾತಿನ ಅಭಿಪ್ರಾಯ ಹೀಗಿದೆ - ಮಂಗಳವನ್ನು ಅಥ ಶಬ್ದ ಬಿಟ್ಟು ಬೇರೆ ಶಬ್ದದಿಂದಲೂ ಹೇಳಲು ಬರುವಾಗ ಅಥ ಶಬ್ದದಿಂದಲೇ ಏಕೆ ಹೇಳುತ್ತೀರಿ? ಎಂದು. ಈ ರೀತಿಯಾಗಿ ಪ್ರಶ್ನೆ ಮಾಡಿಕೊಳ್ಳಬೇಕಾದರೆ ಮಂಗಳವು ಅಥ ಶಬ್ದದ ಅರ್ಥವೆಂದು ಒಪ್ಪಿಕೊಂಡಿದ್ದಾರೆಂದೇ ಹೇಳಬೇಕು. ಒಂದು ವೇಳೆ ಮಂಗಳವು ಅಥ ಶಬ್ದದ ಅರ್ಥವೆಂದು ಒಪ್ಪಿಕೊಳ್ಳದಿದರೆ 'ಶಬ್ದಾಂತರೇಣಾಪಿ ಸಂಭವಾತ್' ಎಂಬ ಆಕ್ಷೇಪವಾದರೂ ಹೇಗೆ ಕೊಡಲು ಸಾಧ್ಯ?

ಸಮಾಧಾನ - 'ಮಂಗಳೋಕ್ಯಾದೇಃ ಶಬ್ದಾಂತರೇಣಾಪಿ ಸಂಭವಾತ್' ಎಂಬ ಟೀಕೆಯಲ್ಲಿರುವ 'ಮಂಗಳೋಕ್ತಿ' ಎಂಬ ಮಾತಿಗೆ ಮಂಗಳಸ್ವರೂಪವಾಗಿದ್ದು ವಿಘ್ನನಿವಾರಣೆ ಮಾಡಬಲ್ಲ ಶಬ್ದದ ಉಚ್ಚಾರಣೆ ಎಂದಷ್ಟೇ ಅರ್ಥ, ಹೊರತು ಮಂಗಳ ಎಂಬರ್ಥವುಳ್ಳ ಶಬ್ದದ ಉಕ್ತಿ ಎಂದರ್ಥವಲ್ಲ. ಈ ರೀತಿಯಾದ ಅರ್ಥವು ಟೀಕಾರಾಯರಿಗೆ ಸಮ್ಮತವೆಂದು ಒಪ್ಪಿಕೊಳ್ಳಲೇಬೇಕು. ಇಲ್ಲವಾದಲ್ಲಿ 'ಶಂಖ, ವೀಣೆ, ವೇಣುಗಳ ಧ್ವನಿಯು ಕೇಳಿದ ಮಾತ್ರದಿಂದ ಹೇಗೆ ಮಂಗಳವಾಗುತ್ತದೆ?' ಎಂದು

ಸುಧಾದಲ್ಲಿ ಹೇಳಿದ ಮಾತಿಗೆ ವಿರೋಧ ಬರುತ್ತದೆ. ಆದ್ದರಿಂದ ಮಂಗಳವು ಅಥ ಶಬ್ದದ ಅರ್ಥವಾಗಲಾರದು. ಇದರಿಂದ 'ತತ್ಪರತಯಾ' ಎಂಬ ಪಾಠವು ಅಸಾಧುವೆಂದು ತಿಳಿಯುತ್ತದೆ. ಅಥವಾ ಕೆಲವು ಪ್ರತಿಗಳಲ್ಲಿರುವಂತೆ 'ತತ್ಪರತಯಾ' ಎಂಬ ಪಾಠವನ್ನೂ ಇಟ್ಟುಕೊಳ್ಳಬಹುದು. ಈ ಪಾಠವನ್ನಿಟ್ಟುಕೊಂಡಾಗ ಮೇಲೆ ಹೇಳಿದ ಅರ್ಥವನ್ನೇ ವಿವಕ್ಷಿಸಿಕೊಳ್ಳಬೇಕು. ಪರ ಎಂದರೆ 'ಮುಖ್ಯ ಪ್ರಯೋಜನ' ಎಂದರ್ಥ. ಆವಾಗ ತತ್ = ಮಂಗಳವೇ, ಪರಂ = ಮುಖ್ಯವಾದ ಪ್ರಯೋಜನವು ಯಾವುದಕ್ಕೆ ಇದೆಯೊ ಅದರಿಂದ ಎಂದು. ಅಂದರೆ ಮಂಗಳವೇ ಅಥಶಬ್ದಕ್ಕೆ ಮುಖ್ಯ ಪ್ರಯೋಜನವಾಗಿರುವುದರಿಂದ ಎಂಬರ್ಥವನ್ನು ಇಟ್ಟುಕೊಳ್ಳಬೇಕು.

'ಅಥಶಬ್ದೋ ಮಂಗಳಾರ್ಥಃ' ಎಂಬ ಭಾಷ್ಯವಾಕ್ಯಕ್ಕೆ ಮುಂದೆ ಉದಾಹರಿಸುವ ಪ್ರಮಾಣಗಳಿಗೆ ಅನುಸಾರವಾಗಿ ಎರಡು ಅರ್ಥಗಳನ್ನು ವಿವಕ್ಷಿಸಿಕೊಳ್ಳಬೇಕೆಂದು 'ಏವಂ ಚ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ವಿಘ್ನನಿವಾರಣೆಗೆ ಅಸಾಧಾರಣಕಾರಣವಾಗಿದ್ದು ನಮ್ಮಿಂದ ಅನುಷ್ಠೇಯವಾದದ್ದು ವಿಷ್ಣುಸ್ಮರಣೆ ಮತ್ತು ಅಥ ಶಬ್ದದ ಉಚ್ಚಾರಣೆ. ಈ ಅರ್ಥದಲ್ಲಿ 'ಅಥ' ಶಬ್ದಕ್ಕೆ ಪ್ರಯೋಜನ ಎಂದರ್ಥ. ಇನ್ನು ಪ್ರಶಸ್ತರೂಪನಾದ ಅನನುಷ್ಠೇಯನಾದ ವಿಷ್ಣುವನ್ನು ಅಥ ಶಬ್ದದ ಅರ್ಥವೆಂದಿಟ್ಟುಕೊಂಡಾಗ 'ಅರ್ಥ' ಶಬ್ದಕ್ಕೆ ವಾಚ್ಯ ಎಂದರ್ಥ. ಹೀಗೆ ಭಾಷ್ಯದ ಮಾತಿಗೆ ಎರಡು ರೀತಿಯಾದ ಅರ್ಥವನ್ನು ತಿಳಿಯಬೇಕು.

ವಿಷ್ಣುವು ಪ್ರಯತ್ನಸಾಧ್ಯವಲ್ಲವಾದ್ದರಿಂದ ಅನನುಷ್ಠೇಯನೆಂದು ತಿಳಿಯಬೇಕು. ವಿಷ್ಣುವಾಚಕತ್ವವು ಅಥಶಬ್ದಕ್ಕಿರುವುದರಿಂದ ಮಂಗಲಫಲಕವೆಂದು ತಿಳಿಯಬೇಕು. ವಿಷ್ಣುವಾಚಕವಾದ ಅಥಶಬ್ದವು ವಿಷ್ಣುಸ್ಮರಣೆಗೆ ಕಾರಣವಾಗುವುದು ಯುಕ್ತವೆಂದು ತತ್ತ್ವಪ್ರದೀಪದ ಮಾತಿನಿಂದ ಸ್ಪಷ್ಟವಾಗುತ್ತದೆ. 'ಅಥಶಬ್ದಃ ಶ್ರವಣಕೀರ್ತನಾಭ್ಯಾಂ ಮಂಗಲಫಲಕಃ ವಿಷ್ಣೋಃ ಪರಮಮಂಗಲಸ್ಯ ವಾಚಕತ್ವೇನಾತಿಪ್ರಿಯತ್ವಾತ್' ಎಂದು. 'ಅಥ' ಶಬ್ದವು ಪರಮ ಮಂಗಳನಾದ ವಿಷ್ಣುವಾಚಕವಾಗಿದೆ. ಅವನಿಗೆ ಅತಿಪ್ರಿಯವಾಗಿದೆ. ಇಂತಹ 'ಅತಃ' ಶಬ್ದವನ್ನು ಉಚ್ಚಾರಣೆ ಮಾಡುವುದರಿಂದ, ಶ್ರವಣಮಾಡುವುದರಿಂದ ಮಂಗಳವಾಗುತ್ತದೆ.

ಇದನ್ನು ಗಮನಿಸಿ ಕೆಲವರು ಟೀಕೆಯಲ್ಲಿರುವ ತತ್‌ಫಲತಯಾ ಮತ್ತು ತತ್‌ಪರತಯಾ ಎಂಬೆರಡು ಪಾಠಗಳನ್ನು ಸರಿಯೆನ್ನುತ್ತಾರೆ. ''ತತ್‌ಫಲತಯಾ'' ಎಂಬ ಪಾಠವನ್ನು ಇಟ್ಟುಕೊಂಡಾಗ ಅಥಶಬ್ದವು ''ವಿಷ್ಣುಸ್ಮರಣೆ'' ಮತ್ತು

ಅಥಶಬ್ದೋಚ್ಚಾರಣೆರೂಪ ಮಂಗಲವೆಂಬ ಅರ್ಥವನ್ನು ಹೇಳುತ್ತದೆ. ತತ್‌ಫರತಯಾ ಎಂಬ ಪಾಠವನ್ನು ಇಟ್ಟುಕೊಂಡಾಗ ಮಂಗಲಸ್ವರೂಪನಾದ ವಿಷ್ಣುವು ಅಥಶಬ್ದದ ಅರ್ಥವೆನಿಸುತ್ತಾನೆ. ವಿಷ್ಣುವಾಚಕವಾದ್ದರಿಂದ ಅಥಶಬ್ದವು ವಿಷ್ಣುಸ್ಮರಣೆಯನ್ನು ಉಂಟುಮಾಡುತ್ತಾ ಮಂಗಲ ಪ್ರಯೋಜನಕವಾಗುತ್ತದೆಂದು ಇವರ ಅಭಿಪ್ರಾಯ.

ಟೀಕೆ - 'ಸರ್ವವಾಗರ್ಥಪೂರ್ಣತಾऽಭಿಧಾಯಕತಯಾ ಪರಬ್ರಹ್ಮಾಭಿಧಾಯಕ ಇತ್ಯರ್ಥಃ।'

ಸಕಲ ಶಬ್ದಗಳ ಅರ್ಥವೇ ಗುಣಪೂರ್ಣತ್ವ; ಈ ಗುಣಪೂರ್ಣತ್ವವೆಂಬ ಅರ್ಥವನ್ನು ಅಕಾರವು ಹೇಳುತ್ತಿದೆ. 'ಅಕಾರೋ ವೈ ಸರ್ವಾ ವಾಕ್' ಎಂಬ ಐತರೇಯವಾಕ್ಯದ ಭಾಷ್ಯದಲ್ಲಿ ಹೀಗೆ ಹೇಳಿದೆ -

'ಅನ್ಯೇऽಪಿ ಶಬ್ದಾಃ ಸರ್ವೇऽಪಿ ಹ್ಯಕಾರಾರ್ಥಾಭಿಧಾಯಿನಃ।
ತಸ್ಮಾದಕಾರ ಏವಾಯಂ ಸರ್ವವಾಗಾತ್ಮಕಃ ಶ್ರುತಃ।
ತಸ್ಮಾತ್ ಸರ್ವಗುಣಾನ್ ವಿಷ್ಣೋರಕಾರೋ ವಕ್ತಿ ಯತ್ ಪ್ರಭೋಃ॥'

ಉಳಿದೆಲ್ಲ ಶಬ್ದಗಳು ಅಕಾರದ ಅರ್ಥವನ್ನೇ ಹೇಳುತ್ತಿವೆ. ಆದ್ದರಿಂದ ಅಕಾರವು ಸರ್ವವಾಗಾತ್ಮಕವಾಗಿದೆ. ಆದ್ದರಿಂದಲೇ ವಿಷ್ಣುವಿನ ಸಕಲಗುಣಗಳನ್ನು ಅಕಾರವು ಪ್ರತಿಪಾದಿಸುತ್ತದೆ.

ಇಲ್ಲಿ ಆರ್ಥೈಕ್ಯದ ಅಭಿಪ್ರಾಯದಿಂದಷ್ಟೇ ಸರ್ವವಾಗಾತ್ಮಕತ್ವವನ್ನು ಹೇಳಿದ್ದಾರೆಂದು ತಿಳಿಯಬೇಕು.

## 'ಅಥ' ಶಬ್ದಾರ್ಥ ವಿಚಾರ

**ಭಾವದೀಪಃ – ಅಥಪದವ್ಯಾವರ್ತ್ಯಂ ದರ್ಶಯನ್ನೇವ ಭಾಷ್ಯಮವತಾರಯತಿ – ಮುಕ್ತ್ಯರ್ಥಿಮಾತ್ರಸ್ಯೇತಿ ।। 'ಮುಕ್ತಿಯೋಗ್ಯತ್ವಶಾನ್ತ್ಯಾದಿಮತ್ವಸ್ಯಾಪಿ ಅಧಿಕಾರತ್ವೇನ ವಕ್ಷ್ಯಮಾಣತ್ವಾತ್, ಮುಕ್ತಿಯೋಗ್ಯತ್ವಶಾನ್ತ್ಯಾದಿಮತ್ವರೂಪಾಧಿಕಾರಾನನ್ತರ್ಯವಾಚಿನಾ ಸೌತ್ರಾಥಶಬ್ದೇನ ಮುಕ್ತ್ಯರ್ಥಿಮಾತ್ರಸ್ಯಾಧಿಕಾರನಿರಾಸಃ' ಇತಿ ಭಾವಃ ।**

ಅಥ ಪದದಿಂದ ವ್ಯಾವರ್ತ್ಯವನ್ನು ತೋರಿಸುತ್ತಾ 'ಮುಕ್ತ್ಯರ್ಥಿಮಾತ್ರಸ್ಯ' ಎಂಬ ಗ್ರಂಥದಿಂದ ಭಾಷ್ಯಕ್ಕೆ ಅವತಾರಿಕೆಯನ್ನು ನೀಡುತ್ತಿದ್ದಾರೆ. ಮುಕ್ತಿಯೋಗ್ಯತ್ವ ಹಾಗೂ ಶಾಂತ್ಯಾದಿಮತ್ವಗಳು ಇದ್ದರೆ ಮಾತ್ರ ಬ್ರಹ್ಮಮೀಮಾಂಸಾಶಾಸ್ತ್ರದ ಅಧ್ಯಯನಕ್ಕೆ

ಅಧಿಕಾರಿಯಾಗುತ್ತಾನೆ. ಇಂತಹ ಅಧಿಕಾರದ ಸಂಪತ್ತನ್ನು ಹೊಂದಿದ ಅನಂತರ ಎಂಬರ್ಥವನ್ನು ಸೂತ್ರದಲ್ಲಿರುವ ಅಥಶಬ್ದವು ಹೇಳುತ್ತಿದೆ. ಆದ್ದರಿಂದ ಕೇವಲ ಮುಕ್ಯರ್ಥಿತ್ವವು ಅಧಿಕಾರವಲ್ಲವೆಂದು ತಿಳಿಯುತ್ತದೆ.

## 'ಅಥ' ಶಬ್ದ ವ್ಯರ್ಥವೇ ?

**ಭಾವದೀಪಃ** – ನನು 'मुक्त्यर्थिमात्रस्य ब्रह्मजिज्ञासायां प्रवृत्तिनिरासेति साधिकारित्वेन ब्रह्मजिज्ञासार्पकेणापि अथपदेन कथं जिज्ञासा-कर्तव्यत्वोपपादनम्? तदुपपादकत्वेनैव सूत्र अथातो ब्रह्मपदानामुपादानात्' इति चेत्,

ಶಂಕೆ - ಬ್ರಹ್ಮಜಿಜ್ಞಾಸೆಯಲ್ಲಿ ಪ್ರವೃತ್ತಿ ಮಾಡಲು ಕೇವಲ ಮೋಕ್ಷದ ಬಯಕೆಯು ಕಾರಣವಲ್ಲವೆಂದು ಹೇಳಿದಿರಿ. ಆದರೂ ಸಹ ಇದರಿಂದ ಜಿಜ್ಞಾಸಾಕರ್ತವ್ಯತ್ವವನ್ನು ಅಥಶಬ್ದದಿಂದ ಸಮರ್ಥಿಸಿದಂತಾಗುವುದಿಲ್ಲ. ಕೇವಲ ಸಾಧಿಕಾರತ್ವವನ್ನಷ್ಟೇ ಬ್ರಹ್ಮಜಿಜ್ಞಾಸೆಗೆ ಹೇಳಿದಂತಾಗುತ್ತದೆ. ಜಿಜ್ಞಾಸಾಕರ್ತವ್ಯತ್ವವನ್ನು ಸೂತ್ರದಲ್ಲಿರುವ ಅಥ, ಅತಃ ಬ್ರಹ್ಮಪದಗಳು ಸಮರ್ಥಿಸುತ್ತಿವೆ. ಅದನ್ನೇ ಅಥಪದವು ಸಮರ್ಥಿಸುವುದರಲ್ಲಿ ಅರ್ಥವಿಲ್ಲ?

## ಅಧಿಕಾರಿಯಲ್ಲಿ ಗುರುತಿಸಲು ಅಥಶಬ್ದ ಸಾರ್ಥಕ

**ಭಾವದೀಪಃ** – सत्यम् । अथपदाभावेऽपि विषयार्पकब्रह्मपदेन जीवान्यविषयसिद्धचैव मुमुक्षुमात्रस्याधिकारप्राप्तौ शूद्रादेरपि प्राप्त्या अपशूद्रनये वक्ष्यमाणश्रवणाध्ययनादिप्रतिषेधकप्रमाणविरोधेन मुमुक्षुमात्रम-धिकारिणमुपाददाना जिज्ञासा न कर्तव्यैव स्यात् । अध्ययनादिमत्त्व-रूपाधिकारार्थकाथशब्दे तु सति अपशूद्रादिकमधिकारी सिद्ध इति विरोधाभावात् जिज्ञासा कर्तव्यैव स्यात्' इति भावः ।

ಸಮಾಧಾನ - ಜಿಜ್ಞಾಸಾಕರ್ತವ್ಯತ್ವದ ಉಪಪಾದನೆಯಿಂದಲೇ ಸಾಧಿಕಾರಿತ್ವದ ಸಮರ್ಥನೆಯನ್ನು ಮಾಡಿದಂತಾಗುತ್ತದೆ. ಅದು ಹೀಗೆ -- ಸೂತ್ರದಲ್ಲಿ ಅಥಪದ ಇಲ್ಲದಿದ್ದರೆ

ಬ್ರಹ್ಮಪದದಿಂದ ಜೀವಭಿನ್ನನಾದ ಬ್ರಹ್ಮನು ವಿಷಯನೆಂದು ಸಿದ್ಧನಾಗುತ್ತಾನೆ. ಅಂತಹವನನ್ನು ತಿಳಿಯಲು ಮುಮುಕ್ಷುವು ಅಧಿಕಾರಿಯಾಗಿದ್ದಾನೆಂದು ತಿಳಿಯುತ್ತದೆ. ಹೀಗಿರುವಾಗ ಶೂದ್ರಾದಿಗಳೂ ಸಹ ಬ್ರಹ್ಮಮೀಮಾಂಸಾಶಾಸ್ತ್ರವನ್ನು ಅಧ್ಯಯನ ಮಾಡಬಹುದೆಂಬ ಪ್ರಸಕ್ತಿ ಬಂದಾಗ ಅಪಶೂದ್ರನಯದಲ್ಲಿ ಹೇಳುವಂತೆ ಶೂದ್ರಾದಿಗಳಿಗೆ ಶ್ರವಣ ಮತ್ತು ಅಧ್ಯಯನಾದಿಗಳು ನಿಷಿದ್ಧವಾಗಿವೆಯೆಂದು ತಿಳಿಯುತ್ತವೆ. ಆದ್ದರಿಂದ ಕೇವಲ ಮುಮುಕ್ಷುವು ಅಧಿಕಾರಿಯಾದಲ್ಲಿ ಬ್ರಹ್ಮಜಿಜ್ಞಾಸೆಯು ಕರ್ತವ್ಯವಾಗಲು ಸಾಧ್ಯವೇ ಇಲ್ಲ. ಈ ಶಂಕೆಯನ್ನು ಪರಿಹರಿಸಲು ಸೂತ್ರದಲ್ಲಿ ಅಥಶಬ್ದವನ್ನು ಹೇಳಲೇಬೇಕು. ಆವಾಗ ಶಮದಮಾದಿಗುಣಗಳು, ವೇದಾಧ್ಯಯನ ಮೊದಲಾದ ಗುಣಗಳಿರುವ ಮುಮುಕ್ಷುಮಾತ್ರನು ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ಅಧಿಕಾರಿಯಾಗುತ್ತಾನೆಂದು ಸಿದ್ಧವಾಗುತ್ತದೆ. ಆದ್ದರಿಂದ ಬ್ರಹ್ಮಜಿಜ್ಞಾಸೆಯು ಕರ್ತವ್ಯವಾಗುತ್ತದೆ.

## ಆನಂತರ್ಯಕ್ಕೆ ಯಾವುದು ಪ್ರತಿಯೋಗಿ ?

**भावदीपः – योग्यतयेति ।। 'आनन्तर्यप्रतियोगित्वसामर्थ्येन' इत्यर्थः । सा च योग्यताधिकारस्यैव नान्यस्य इत्येतद् विवृतं 'न तावदध्ययनमात्रात्' इत्यादिना चन्द्रिकायाम् । प्रपञ्चितं च गुरुपादैः न्यायमौक्तिकमालायाम् ।**

ವಸ್ತುತಃ ಅಥಶಬ್ದವು ಆನಂತರ ಎಂದಷ್ಟೇ ಅರ್ಥವನ್ನು ಹೇಳುತ್ತದೆ. ಆದರೆ ಯಾವುದರ ಆನಂತರ ಎಂಬುದರ ಜಿಜ್ಞಾಸೆ ಬಂದರೆ 'ಶಮದಮಾದಿಗುಣಗಳು ಅಧ್ಯಯನ ಮೊದಲಾದವುಗಳ ಆನಂತರ' ಎಂದು ತಿಳಿಯುತ್ತದೆ. ಇಲ್ಲಿ ಆನಂತರ್ಯಕ್ಕೆ ಪ್ರತಿಯೋಗಿಯಾದದ್ದು ಶಮದಮಾದಿಗುಣಗಳು. ಈ ಆನಂತರ್ಯಪ್ರತಿಯೋಗಿತ್ವ-ಸಾಮರ್ಥ್ಯದಿಂದ ಶಮದಮಾದಿಗುಣಗಳೇ ಅಧಿಕಾರವೆಂದು ತಿಳಿಯುತ್ತದೆ. ಈ ವಿಷಯವನ್ನು ಚಂದ್ರಿಕೆಯಲ್ಲಿ ಪ್ರತಿಪಾದಿಸಿದ್ದಾರೆ. ಗುರುಗಳೂ (ಶ್ರೀವಿಜಯೀಂದ್ರತೀರ್ಥರು) ಸಹ ನ್ಯಾಯಮೌಕ್ತಿಕಮಾಲಾದಲ್ಲಿ ಇದನ್ನು ವಿವರಿಸಿದ್ದಾರೆ.

## 'ಅತಃ' ಶಬ್ದಾರ್ಥ ವಿಚಾರ

**ಭಾವದೀಪಃ – ಪ್ರಯೋಜನೇತಿ ।।** ಮೋಕ್ಷಹೇತೋರ್ಜ್ಞಾನಸ್ಯ ವಿಷ್ಣುಪ್ರಸಾದಸ್ಯ ವಾ 'ಕರ್ಮಣಾ ಜ್ಞಾನಮಾತನೋತಿ' 'ತತ್ಕರ್ಮ ಹರಿತೋಷಂ ಯತ್' ಇತ್ಯುಕ್ತ್ಯಾ ಕರ್ಮಜನ್ಯತ್ವಪ್ರಯುಕ್ತ-ನಿಷ್ಪ್ರಯೋಜನತ್ವಶಙ್ಕಾ ಇತ್ಯರ್ಥಃ । ನ ತು 'ಜ್ಞಾಯಮಾನೇऽಪಿ ಬ್ರಹ್ಮಣಿ' ಇತ್ಯುಕ್ತ-ನಿಷ್ಪ್ರಯೋಜನತ್ವಶಙ್ಕಾನಿವರ್ತಕತಯಾ ಇತಿ ಭ್ರಮಿತವ್ಯಮ್ । ತಸ್ಯ ವಿಷಯಾರ್ಪಕಬ್ರಹ್ಮಪದೇನೈವ ನಿರಾಸಾತ್ ।

ಬ್ರಹ್ಮಜಿಜ್ಞಾಸೆಗೆ ಪ್ರಯೋಜನ ಇಲ್ಲವೆಂಬ ಶಂಕೆಯನ್ನು ಸೂತ್ರದಲ್ಲಿರುವ 'ಅತಃ' ಎಂಬ ಶಬ್ದವು ನಿರಾಕರಿಸುತ್ತಿದೆ. ಹೇಗೆಂದರೆ ಸಜ್ಞಾನ ಅಥವಾ ವಿಷ್ಣುಪ್ರಸಾದವು ಮೋಕ್ಷಕ್ಕೆ ಕಾರಣವಾಗಿದೆ. ಈ ಸಜ್ಞಾನವು 'ತತ್ಕರ್ಮ ಹರಿತೋಷಂ ಯತ್' ಎಂಬಂತೆ ಕರ್ಮದಿಂದ ಪ್ರಾಪ್ತವಾಗುತ್ತದೆ. ಪುನಃ ಬ್ರಹ್ಮಜಿಜ್ಞಾಸೆಯ ಅವಶ್ಯಕತೆ ಇಲ್ಲ' ಎಂಬುದು ನಿಷ್ಪ್ರಯೋಜನತ್ವಶಂಕೆ ಹೊರತು ಬ್ರಹ್ಮನು ಜ್ಞಾತನಾಗಿದ್ದರೂ ಪ್ರಯೋಜನ ದೊರೆಯುತ್ತಿಲ್ಲ ಎಂಬುದು ನಿಷ್ಪ್ರಯೋಜನತ್ವಶಂಕೆಯಲ್ಲ. ಈ ನಿಷ್ಪ್ರಯೋಜನತ್ವಶಂಕೆಯು ಬ್ರಹ್ಮಪದದಿಂದ ಪರಿಹರಿಸಲ್ಪಡುತ್ತದೆ ಹೊರತು 'ಅತಃ' ಶಬ್ದದಿಂದಲ್ಲ.

## ಟೀಕೆಯಲ್ಲಿ ವಾಕ್ಯಯೋಜನೆ

**ಭಾವದೀಪಃ – ನನ್ವಿತಿ ।।** 'ವಿಷಯಾಧಿಕಾರಿಜಿಜ್ಞಾಸಾಫಲಾನಾಮಧ್ಯಾಯಚತುಷ್ಟಯೇ ನಿರೂಪಯಿಷ್ಯಮಾಣಕ್ರಮೇಣಾದ್ಯಸೂತ್ರೇ ನಿರ್ದೇಶೇ ಕರ್ತವ್ಯೇऽಪಿ' ಇತ್ಯೇತಾವದ್ವಾಕ್ಯಂ 'ನನು' ಇತ್ಯನನ್ತರಂ ಯೋಜ್ಯಮ್ । **ಮಙ್ಗಲೋಕ್ತ್ಯಾದೇರಿತಿ ।।**

ನನ್ವಥಾತಃ ಎಂಬ ಟೀಕಾಪಂಕ್ತಿಯಲ್ಲಿ ಇದನ್ನು ಸೇರಿಸಿಕೊಳ್ಳಬೇಕು - 'ವಿಷಯಾಧಿಕಾರಿ ಜಿಜ್ಞಾಸಾಫಲಾನಾಮಧ್ಯಾಯಚತುಷ್ಟಯೇ ನಿರೂಪಯಿಷ್ಯಮಾಣಕ್ರಮೇಣಾದ್ಯಸೂತ್ರೇ ನಿರ್ದೇಶೇ ಕರ್ತವ್ಯೇಪಿ' (ವಿಷಯ, ಅಧಿಕಾರಿ, ಜಿಜ್ಞಾಸಾ, ಪ್ರಯೋಜನಗಳು ನಾಲ್ಕು ಅಧ್ಯಾಯಗಳಲ್ಲಿ ನಿರೂಪಿತವಾದ್ದರಿಂದ ಅವೆಲ್ಲವನ್ನೂ ಮೊದಲನೆಯ ಸೂತ್ರದಲ್ಲಿ ನಿರ್ದೇಶಿಸಬೇಕೆನ್ನುವುದು ಸರಿ) ಎಂದು. ಆದರೆ 'ಅಥ' ಮತ್ತು 'ಅತಃ' ಪದಗಳಿಂದಲೇ ಏಕೆ ಅದನ್ನು ನಿರ್ದೇಶಿಸಬೇಕು.

## ಪಾಠಾಂತರದ ಬಗ್ಗೆ

**ಭಾವದೀಪಃ – 'ವಿಘ್ನನಿವರ್ತಕಶಬ್ದೋಚ್ಚಾರಣಾದೇಃ' ಇತ್ಯರ್ಥಃ । ಕಚಿತ್ 'ಮಙ್ಗಲಾಚರಣಾದೇಃ' ಇತಿ ಪಾಠಃ । 'ಅತ್ರ' ಇತ್ಯನುವಾದೇನ ಪ್ರಥಮಪ್ರಯೋಜ್ಯತ್ವ ಇತಿ ವ್ಯಾಖ್ಯಾನಮ್ । ತದಿತ್ಯಸ್ಯ ಪರಾಮರ್ಶಃ ಕಿಮ್? ಇತ್ಯತಃ ತತ್ ಪ್ರಸ್ತಾವಯತಿ – ನಿಯಾಮಕೇನೇತಿ ।।**

'ಮಂಗಲೋಕ್ಯಾದೇಃ' ಎಂಬ ಪದಕ್ಕೆ ವಿಘ್ನನಿವರ್ತಕವಾದ ಶಬ್ದದ ಉಚ್ಚಾರಣೆಯು ಎಂದರ್ಥ. ಕೆಲವು ಪುಸ್ತಕಗಳಲ್ಲಿ 'ಮಂಗಲಾಚರಣಾದೇಃ' ಎಂಬ ಪಾಠವಿದೆ. 'ಅತ್ರ ಪ್ರಥಮಪ್ರಯೋಜ್ಯತ್ವೇ' ಎಂಬಲ್ಲಿ ಅತ್ರ ಎಂಬುದು ಅನುವಾದ; ಪ್ರಥಮಪ್ರಯೋಜ್ಯತ್ವ ಎಂಬುದು ವ್ಯಾಖ್ಯಾನ ಎಂದು ತಿಳಿಯಬೇಕು. ತತ್‌ಪದದಿಂದ ಯಾವುದನ್ನು ಪರಾಮರ್ಶಿಸಬೇಕು ಎಂಬುದನ್ನು 'ನಿಯಾಮಕೇನ' ಎಂಬುದರಿಂದ ಪ್ರಸ್ತಾಪಿಸಿದ್ದಾರೆ.

## ಪಾಣಿನೀಸೂತ್ರದ ಪ್ರಾರಂಭದಲ್ಲಿ 'ಅಥಾತಃ' ಎಂದು ಹೇಳದಿದ್ದರೂ ವ್ಯಭಿಚಾರವಿಲ್ಲ

**ಭಾವದೀಪಃ – (ನಿ)ಅಖಿಲಾನ್ಯಪೀತಿ ।। 'ಅಥಾತೋ ಧರ್ಮಜಿಜ್ಞಾಸಾ' 'ಅಥಾತೋ ದೈವೀಮೀಮಾಂಸಾ' 'ಅಥಾತೋ ದರ್ಶಪೂರ್ಣಮಾಸೌ' ಇತ್ಯಾದಿಸಮ್ಭಾವಿತಾಖಿ(ತನಿಖಿ)ಲಾನಿ - ಇತ್ಯರ್ಥಃ । ತೇನ ನ ಪಾಣಿನೀಯಾದೌ ವ್ಯಭಿಚಾರಃ ಶಙ್ಕ್ಯಃ । ಅವಶ್ಯವಕ್ತವ್ಯಾರ್ಥತ್ವಸ್ಯ ತದಭಾವಸ್ಯ ಚ ಲೋಕೇ ಶಬ್ದಾನ್ತರೇಷು ದರ್ಶನಾತ್, ಅಥಶಬ್ದೇ ತತ್ಸನ್ದೇಹೇನ ಪೃಚ್ಛತಿ ಇತ್ಯಾದ್ಯುಕ್ತಮ್।**

'ಅಖಿಲಾನ್ಯಪಿ' ಎಂದರೆ ''ಅಥಾತಃ ಧರ್ಮಜಿಜ್ಞಾಸಾ'', ''ಅಥಾತಃ ದೈವೀಮೀಮಾಂಸಾ'', ''ಅಥಾತಃ ದರ್ಶಪೂರ್ಣಮಾಸೌ ವ್ಯಾಖ್ಯಾಸ್ಯಾಮಃ'' ಎಂಬಿತ್ಯಾದಿಯಾಗಿ ಸಂಭಾವಿತವಾದ ಸೂತ್ರಗ್ರಂಥಗಳು ಎಂದರ್ಥ. ಹೊರತು ಪಾಣಿನಿಸೂತ್ರಾದಿಗಳನ್ನು ತೆಗೆದುಕೊಳ್ಳಬಾರದು. ಅವಶ್ಯವಕ್ತವ್ಯಾರ್ಥತ್ವ ಮತ್ತು ತದಭಾವಗಳು ಬೇರೆ ಶಬ್ದಗಳಲ್ಲಿರುವುದು ಲೋಕದಲ್ಲಿ ಕಂಡಿದೆ. ಆದ್ದರಿಂದ ಅಥಶಬ್ದದಲ್ಲಿ ಸಂದೇಹ ಬರುತ್ತದೆ.

## ಟೀಕೆಯಲ್ಲಿ ಮಜಲಿನ ಅರ್ಥ

**ಭಾವದೀಪಃ –** **द्वितीये कथमाक्षेपः? इत्यत आह – शब्दान्तरस्येति ।। कथंशब्दमाक्षेपपरतया व्याख्याय, पुनः प्रश्नपरतयापि व्याचष्टे – तृतीयेऽपीति ।। पूर्ववत् प्रश्नहेतुः संशय उपपाद्यः । पर्यवसितमाह – तत्प्रसादादिति ।। 'जिज्ञासादिकार्यम्' इति शेषोक्तिः ।**

ಟೀಕೆಯಲ್ಲಿ 'ಆದಿಪಕ್ಷೇ ಪೃಚ್ಛತಿ, ದ್ವಿತೀಯಂ ಆಕ್ಷಿಪತಿ, ತೃತೀಯೇ ಪೃಚ್ಛತಿ' ಎಂದು ವಾಕ್ಯವಿನ್ಯಾಸವಿದೆ. ಪ್ರಥಮ ಹಾಗೂ ತೃತೀಯಪಕ್ಷಗಳಲ್ಲಿ ಪೃಚ್ಛತಿ ಎಂದು ಹೇಳಿ ಎರಡನೆಯ ಪಕ್ಷದಲ್ಲಿ ಮಾತ್ರ ಆಕ್ಷಿಪತಿ ಎಂದಿದ್ದಾರೆ. ಇದಕ್ಕೆ ಕಾರಣವನ್ನು 'ಶಬ್ದಾಂತರಸ್ಯ' ಎಂಬ ಟೀಕೆಯು ನೀಡುತ್ತಿದೆ. 'ಕಥಂ' ಎಂಬ ಶಬ್ದಕ್ಕೆ ಎರಡನೆಯ ಪಕ್ಷದಲ್ಲಿ ಆಕ್ಷೇಪ ಎಂಬರ್ಥವನ್ನು ಹೇಳಿ ಮೂರನೆಯ ಪಕ್ಷದಲ್ಲಿ ಪ್ರಶ್ನೆ ಎಂಬರ್ಥವನ್ನು ಇಟ್ಟುಕೊಂಡು 'तृतीयेऽपि' ಇತ್ಯಾದಿವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಪ್ರಥಮಪಕ್ಷದಂತೆ ಇಲ್ಲಿಯೂ ಸಂದೇಹ-ಬೀಜವನ್ನು ಊಹಿಸಿಕೊಳ್ಳಬೇಕು. ಅತಃಶಬ್ದದಿಂದ ಪರ್ಯವಸಿತವಾದ ಅರ್ಥವನ್ನು 'तत्प्रसादात्' ಇತ್ಯಾದಿಯಾಗಿ ನಿರೂಪಿಸಿದ್ದಾರೆ. ಸೂತ್ರದಲ್ಲಿ ''जिज्ञासादिकार्यम्'' ಎಂಬುದನ್ನು ಶೇಷಪೂರಣೆ ಮಾಡಬೇಕು.

## ಓಂ, ಅಥ, ಅತಃ ಶಬ್ದಗಳ ವೈಶಿಷ್ಟ್ಯ

**ब्रह्मसूत्रभाष्यम् –**

**सिसृक्षोः परमाद् विष्णोः प्रथमं द्वौ विनिःसृतौ ।।**
**ओङ्कारश्चाथशब्दश्च तस्मात् प्राथमिकौ क्रमात् ।**
**तद्धेतुत्वं वदंश्चापि तृतीयोऽत उदाहृतः ।।**
**अकारस्सर्ववागात्मा परब्रह्माभिधायकः ।**
**तथौ प्राणात्मकौ प्रोक्तौ व्याप्तिस्थितिविधायकौ ।।**
**अतश्च पूर्वमुच्चार्यास्सर्व एते सतां मताः ।**
**अथातश्शब्दयोरेवं वीर्यमाज्ञाय तत्वतः ।**
**सूत्रेषु तु महाप्राज्ञास्तावेवादौ प्रयुञ्जते' इति ।।**

ಅನುವಾದ - ಸೃಷ್ಟಿಯನ್ನು ಮಾಡಲು ಬಯಸಿದ ಪರಮಾತ್ಮನ ಮುಖಕಮಲದಿಂದ 'ಓಂ ಮತ್ತು ಅಥ' ಎಂಬ ಎರಡು ಶಬ್ದಗಳು ಪ್ರಥಮವಾಗಿ ಹೊರಹೊಮ್ಮಿದವು. ಆದ್ದರಿಂದ ಸಕಲಶಬ್ದಪ್ರಪಂಚದಲ್ಲಿ ಈ ಎರಡು ಶಬ್ದಗಳು ಬಹಳ ಪ್ರಧಾನವಾಗಿವೆ. ಆದ್ದರಿಂದಲೇ ಸೂತ್ರದ ಮೊದಲು ಓಂಕಾರದ ನಂತರ ಅಥಶಬ್ದವನ್ನು ಪ್ರಯೋಗಿಸಿದ್ದಾರೆ. ಪರಮಾತ್ಮನ ಜಿಜ್ಞಾಸೆಯ ಕಾರಣವನ್ನು ಹೇಳುವ ಅತಃ ಎಂಬ ಶಬ್ದವು ಮೂರನೆಯದಾಗಿ ಪ್ರಯೋಗಿಸಲ್ಪಟ್ಟಿದೆ. ಆದ್ದರಿಂದ ಓಂಕಾರ ಮತ್ತು ಅಥಶಬ್ದಗಳ ಅನಂತರ ಅತಃ ಎಂಬ ಶಬ್ದವನ್ನೇ ಪ್ರಯೋಗಿಸಿದ್ದಾರೆ.

ಅಷ್ಟೇ ಅಲ್ಲದೆ ಸಕಲಶಬ್ದಪ್ರಪಂಚದ ಅರ್ಥವೆನಿಸಿದ ಗುಣಪೂರ್ಣತ್ವವನ್ನು ಅಕಾರವು ಪ್ರತಿಪಾದಿಸುತ್ತಿದೆ. ಅತಃ ಎಂಬಲ್ಲಿರುವ 'ತ'ಕಾರಕ್ಕೆ, ಅಥ ಎಂಬಲ್ಲಿರುವ 'ಥ'ಕಾರಕ್ಕೆ ಪ್ರಾಣನು ಹಾಗೂ ವಿಷ್ಣುವು ದೇವತೆಗಳು. ಪರಮಾತ್ಮನ ವ್ಯಾಪ್ತಿಯನ್ನು ಮತ್ತು ಸ್ಥಿತಿಕರ್ತೃತ್ವವನ್ನು ಈ ಎರಡು ಅಕ್ಷರಗಳು ಹೇಳುತ್ತವೆ. ಆದ್ದರಿಂದ ಅಥ ಮತ್ತು ಅತಃಶಬ್ದಗಳನ್ನು ಎಲ್ಲಾ ಸೂತ್ರಗ್ರಂಥಗಳ ಪ್ರಾರಂಭದಲ್ಲಿ ಮೊದಲು ಉಚ್ಚರಿಸಬೇಕೆಂದು ಸಜ್ಜನರಿಗೆ ಸಮ್ಮತವಾಗಿದೆ.

ಹೀಗೆ ಅತಃ, ಅಥ ಎಂಬೆರೆಡು ಶಬ್ದಗಳು ಶಬ್ದಸ್ವರೂಪದಿಂದ ಮತ್ತು ವಿಶಿಷ್ಟಾರ್ಥ-ಪ್ರತಿಪಾದಕವೆಂದು ನಿಶ್ಚಯವಾಗಿ ತಿಳಿದು ಸೂತ್ರಕಾರರಾದ ಎಲ್ಲಾ ಪ್ರಾಜ್ಞರು ತಮ್ಮ ಸೂತ್ರಗ್ರಂಥಗಳ ಪ್ರಾರಂಭದಲ್ಲಿ ಈ ಎರಡು ಶಬ್ದಗಳನ್ನೇ ಪ್ರಯೋಗಿಸುತ್ತಾರೆ.

ಪ್ರತಿಪದಾರ್ಥ -- ಮಂಗಳಾಚರಣೆಯನ್ನು ಈ ಎರಡು ಶಬ್ದಗಳಿಂದಲೇ ಏಕೆ ಮಾಡಬೇಕು? ಎಂಬ ಪ್ರಶ್ನೆಗೆ ಉತ್ತರ.

ಸಿಸೃಕ್ಷೋಃ = ಸೃಷ್ಟಿಮಾಡಲು ಬಯಸಿದ, ಪರಮಾತ್ = ಪರಮಾತ್ಮನಾದ, ವಿಷ್ಣೋಃ = ವಿಷ್ಣುವಿನ ದೆಸೆಯಿಂದ, ಪ್ರಥಮಂ = ಸೃಷ್ಟಿಯ ಪ್ರಾರಂಭದಲ್ಲಿ (ಸಮಾನಜಾತೀಯವಾದ ಉಳಿದ ಶಬ್ದಗಳು ಹುಟ್ಟುವ ಮೊದಲು), ದ್ವೌ = ಎರಡು, ವಿನಿಸೃತೌ = ಹೊರಹೊಮ್ಮಿದವು, ಓಂಕಾರಶ್ಚ = ಓಂಕಾರವೂ, ಅಥಶಬ್ದಶ್ಚ = ಅಥ ಎಂಬ ಪದವೂ, (ವಿನಿಸೃತೌ = ಹೊರಹೊಮ್ಮಿದವು); ತಸ್ಮಾತ್ = ಹೀಗೆ ಸ್ವರೂಪತಃ ಉತ್ತಮಗಳಾದ್ದರಿಂದಲೇ, ಕ್ರಮಾತ್ = ಅದೇ ಕ್ರಮದಲ್ಲಿ, ಪ್ರಾಥಮಿಕೌ = ಮೊದಲು ಉಚ್ಚರಿಸಲು ಯೋಗ್ಯವಾಗಿವೆ. ಆದ್ದರಿಂದಲೇ ಎಲ್ಲ ಸೂತ್ರಗ್ರಂಥಗಳಲ್ಲಿ ಮೊದಲು ಇವುಗಳನ್ನೇ ಉಚ್ಚರಿಸುತ್ತಾರೆ.

ಅಥಶಬ್ದಕ್ಕೆ ಓಂಕಾರದ ಜೊತೆಗೆ ಸ್ವರೂಪಾಧಿಕ್ಯವಿರುವಂತೆ ಅತಃಶಬ್ದದ ಜೊತೆಗೂ ಇದೆ -- ಚ = ಯಾವಕಾರಣದಿಂದ, ತದ್ಧೇತುತ್ವಂ = ಪರಮಾತ್ಮನ ಜಿಜ್ಞಾಸಾಕಾರಣತ್ವವನ್ನು, ವದನ್ ಚ = ಹೇಳುವುದರಿಂದಲೂ, ಅತಃ = ಅತಃ ಎಂಬ ಪದವು, ತೃತೀಯಃ = ಮೂರನೆಯದಾಗಿ, ಉದಾಹೃತಃ = ಹೇಳಲ್ಪಟ್ಟಿದೆ.

ಜಿಜ್ಞಾಸಾಧಿಕರಣ (೧-೧-೧)

ಅವಶ್ಯವಕ್ತವ್ಯವಾದ ಅರ್ಥವನ್ನು ಈ ಶಬ್ದಗಳು ಹೇಳುತ್ತಿವೆ, ಅಷ್ಟೇ ಅಲ್ಲದೆ ಸ್ವರೂಪತಃ ಅಧಿಕ್ಯವನ್ನೂ ಹೊಂದಿವೆ. ಮತ್ತು ಇವುಗಳ ಅವಯವಾರ್ಥವು ಪ್ರಥಮಪ್ರಯೋಗಕ್ಕೆ ಕಾರಣವಾಗಿದೆ. ಯತಃ = ಯಾವ ಕಾರಣದಿಂದ, ಸರ್ವವಾಗಾತ್ಮಾ = ಸಕಲಶಬ್ದಗಳ ಅರ್ಥವಾದ ಗುಣಪೂರ್ಣತ್ವವನ್ನು ಪ್ರತಿಪಾದಿಸುತ್ತವೋ, (ಆದ್ದರಿಂದಲೇ) ಪರಬ್ರಹ್ಮಾಭಿಧಾಯಕಃ = ಗುಣಪೂರ್ಣನಾದ ವಿಷ್ಣುವನ್ನು ಪ್ರತಿಪಾದಿಸುತ್ತದೆ, ತಥೌ = 'ತ ಮತ್ತು ಥ' ಎಂಬೆರಡು ಅಕ್ಷರಗಳು ಪ್ರಾಣಾತ್ಮಕೌ ವಾಯು ಹಾಗೂ ವಿಷ್ಣುವನ್ನೇ ದೇವತೆಯಾಗಿ ಉಳ್ಳವುಗಳು, ವ್ಯಾಪ್ತಿಸ್ಥಿತಿವಿಧಾಯಕೌ = ಪರಮಾತ್ಮನ ದೇಶಕಾಲವ್ಯಾಪ್ತಿಯನ್ನು ಮತ್ತು ಸ್ಥಿತಿಕರ್ತೃತ್ವವನ್ನು (ತಕಾರವು ವ್ಯಾಪ್ತಿಯನ್ನು, ಥಕಾರವು ಸ್ಥಿತಿಕರ್ತೃತ್ವವನ್ನು) ವಿಧಾನ ಮಾಡುತ್ತಿವೆ.

ಈ ಮೂರುಶಬ್ದಗಳು ಮಹತ್ವಪೂರ್ಣವಾಗಿವೆ. ಇದರಿಂದೇನು? ಎಂಬ ಪ್ರಶ್ನೆಗೆ ಉತ್ತರ - ಆತಶ್ಚ = ಆದ್ದರಿಂದಲೇ, ಏತೇ = ಓಂ, ಅಥ, ಅತಃ ಎಂಬ ಮೂರು ಪದಗಳು, ಪೂರ್ವಂ = ಸಕಲಸೂತ್ರಗ್ರಂಥಗಳ ಪ್ರಾರಂಭದಲ್ಲಿ, ಉಚ್ಚಾರ್ಯಾಃ = ಉಚ್ಚರಿಸಲು ಅರ್ಹವಾಗಿವೆ ಎಂದು, ಸತಾಂ = ಸಜ್ಜನರಿಗೆ, ಮತಾಃ = ಮಾನ್ಯವಾಗಿವೆ.

'ತತ್ ಕಿಮತ್ರ ನಿಯಾಮಕಮ್?' ಎಂಬಲ್ಲಿ ಕೇಳಿದ ಪ್ರಶ್ನೆಗೆ ಉತ್ತರವನ್ನು ಉಪಸಂಹಾರ ಮಾಡುತ್ತಿದ್ದಾರೆ. ಏವಂ = ಹಿಂದೆ ಹೇಳಿದ ಪ್ರಕಾರ, ಅಥಾತಃ ಶಬ್ದಯೋಃ = ಅಥ ಅತಃಶಬ್ದಗಳ, ಏಯರ್ಯಂ = ಸ್ವರೂಪತಃ ಆಧಿಕ್ಯ ಹೊಂದಿದ ಸಾಮರ್ಥ್ಯವನ್ನು, ತತ್ವತಃ = ನಿಶ್ಚಯವಾಗಿ, ಆಜ್ಞಾಯ = ತಿಳಿದು, ಮಹಾಪ್ರಾಜ್ಞಾಃ = ಸೂತ್ರಕಾರರಾದ ಎಲ್ಲಾ ಪ್ರಾಜ್ಞರು, ಸೂತ್ರೇಷು = ತಮ್ಮ ಸೂತ್ರಗ್ರಂಥಗಳಲ್ಲಿ, ತಾವೇವ = ಈ ಶಬ್ದಗಳನ್ನೇ, ಆದೌ = ಪ್ರಾರಂಭದಲ್ಲಿ, ಪ್ರಯುಂಜಂತೇ = ಉಚ್ಚರಿಸುತ್ತಾರೆ; ಇತಿ = ಹೀಗೆ ಗರುಡಪುರಾಣದಲ್ಲಿ ಹೇಳಿದೆ.

## 'ಓಂ' 'ಅಥ' 'ಅತಃ' ಶಬ್ದಗಳು ಮೊದಲು ಹೊರಹೊಮ್ಮಿದವು

**ತತ್ವಪ್ರಕಾಶಿಕಾ –**

**ನನು ಮಙ್ಗಲೋಕ್ತ್ಯಾದೇಃ ಶಬ್ದಾನ್ತರೇಣಾಪಿ ಸಮ್ಭವಾತ್ ಕಿಮೇತತ್ ಪ್ರಯೋಗನಿಯತ್ಯಾ? ಇತ್ಯತಃ ಸ್ವರೂಪಾಧಿಕ್ಯಂ ಚಾಸ್ತೀತ್ಯಾಹ – ಸಿಸೃಕ್ಷೋರಿತಿ ।।**

ಪ್ರಶ್ನೆ - ಮಂಗಳಾಚರಣೆಯನ್ನು ಬೇರೆಶಬ್ದಗಳಿಂದಲೂ ಮಾಡಲು ಬರುವಾಗ ಈ ಶಬ್ದಗಳಿಂದಲೇ ಏಕೆ ಮಾಡಬೇಕು?

ಉತ್ತರ - ಈ ಪ್ರಶ್ನೆಗೆ ಶಬ್ದಗಳಿಗೆ ಸ್ವರೂಪಾಧಿಕ್ಯ ಸಹ ಇದೆ ಎಂಬುದಾಗಿ 'ಸಿಸೃಕ್ಷೋಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

**ತತ್ವಪ್ರಕಾಶಿಕಾ – 'ಪ್ರಥಮಂ ವಿನಿಃಸೃತೌ, ಅತಃ ಸ್ವರೂಪೋತ್ತಮೌ ತಸ್ಮಾತ್ ಪ್ರಾಥಮಿಕೌ' ಇತ್ಯರ್ಥಃ । 'ಯತ್ ಸ್ವಜಾತೌ ಪ್ರಥಮಂ ಹರೇಃ ನಿಸ್ಸರತಿ ತತ್ ತತ್ರೋತ್ತಮಮ್' ಇತಿ ನ್ಯಾಯೋऽನುಧೇಯಃ।**

ಓಂ ಮತ್ತು ಅಥಶಬ್ದಗಳು ಸೃಷ್ಟಿಯ ಪ್ರಾರಂಭದಲ್ಲಿ ಮೊದಲು ಹೊರಹೊಮ್ಮಿವೆ. ಆದ್ದರಿಂದ ಸ್ವರೂಪತಃ ಉತ್ತಮಗಳಾಗಿವೆ; ಹಾಗಾಗಿ ಪ್ರಾಥಮಿಕ ಎನಿಸಿವೆ. 'ಯಾವುದು ತನ್ನ ಜಾತಿಯಲ್ಲಿ ಮೊದಲು ಹರಿಯಿಂದ ಹೊರಹೊಮ್ಮಿದೆಯೋ ಅದು ಆ ಜಾತಿಯಲ್ಲಿ ಉತ್ತಮ ಎನಿಸುತ್ತವೆ' ಎಂಬ ನ್ಯಾಯವನ್ನು ತಿಳಿಯಬೇಕು.

**ತತ್ವಪ್ರಕಾಶಿಕಾ – ಅತಶ್ಚ ತೃತೀಯತಯಾ ಪ್ರಾಥಮಿಕ ಉದಾಹೃತಃ । ಯತಸ್ತೃತೀಯತಯೋದಾಹೃತೋ ವಿಷ್ಣುನೇತ್ಯತ ಉತ್ತಮ, ಇತ್ಯರ್ಥಃ ।**

ಅದರಂತೆ 'ಅತಃ' ಎಂಬ ಶಬ್ದವೂ ಸಹ ಪ್ರಥಮೋಚ್ಚಾರಿತಶಬ್ದಗಳಲ್ಲಿ ಹೊರಹೊಮ್ಮಿದ್ದರಿಂದ ಪ್ರಾಥಮಿಕ ಎನಿಸಿದೆ. ಆ ಕಾರಣದಿಂದ ಮೂರನೆಯದಾಗಿ ಸೂತ್ರದಲ್ಲಿ ಉದಾಹರಿಸಲಾಗಿದೆ. ಇದೂ ಸಹ ಉತ್ತಮವೆಂದು ತಿಳಿಯಬೇಕು.

**ತತ್ವಪ್ರಕಾಶಿಕಾ – ತದ್ಧೇತುತ್ವಂ ತಸ್ಯ ವಿಷ್ಣೋರ್ಜಿಜ್ಞಾಸಾದೌ ಹೇತುತ್ವಂ, ತಸ್ಯ = ಜಿಜ್ಞಾಸಾದೇರ್ಮೋಕ್ಷಹೇತುತ್ವಂ ವಾ ವದನ್ ಇತ್ಯನುವಾದಃ ।**

ತದ್ಧೇತುತ್ವಮ್ - 'ಜಿಜ್ಞಾಸಾದಿಗಳಿಗೆ ವಿಷ್ಣುವೇ ಕಾರಣನಾಗಿದ್ದಾನೆ; ಅಥವಾ ವಿಷ್ಣುವಿನ ಜಿಜ್ಞಾಸೆಯು ಮೋಕ್ಷಕ್ಕೆ ಕಾರಣವಾಗಿದೆ' ಎಂಬುದು 'ಹೇತ್ವರ್ಥೇ ಸಮುದೀರಿತಃ' ಎಂಬುದರ ಅನುವಾದವಾಗಿದೆ.

**ತತ್ವಪ್ರಕಾಶಿಕಾ – 'ನ ಕೇವಲಮಾಧಿಕ್ಯಂ ಸ್ವರೂಪತ ಏವ, ಕಿಂತ್ವರ್ಥತಶ್ಚ ಇತ್ಯತೋऽಪಿ ಪ್ರಥಮಯೋಗಃ' ಇತ್ಯಾಹ – ಅಕಾರ ಇತಿ ।।**

'ಸ್ವರೂಪತಃ ಆಧಿಕ್ಯವೆಂದಷ್ಟೇ ತಿಳಿಯಬಾರದು; ಅರ್ಥದಿಂದಲೂ ಅಧಿಕವಾಗಿರುವುದರಿಂದ ಸೂತ್ರದ ಮೊದಲು ಅಥ, ಅತಃ ಎಂದು ಪ್ರಯೋಗಿಸಿದ್ದಾರೆ' ಇದನ್ನು 'ಅಕಾರಃ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಅವಶ್ಯವಕ್ತವ್ಯವಾದ ಅರ್ಥವನ್ನು ಈ ಶಬ್ದಗಳು ಹೇಳುತ್ತಿವೆ, ಅಷ್ಟೇ ಅಲ್ಲದೆ ಸ್ವರೂಪತಃ ಆಧಿಕ್ಯವನ್ನೂ ಹೊಂದಿವೆ. ಮತ್ತು ಇವುಗಳ ಅವಯವಾರ್ಥವು ಪ್ರಥಮಪ್ರಯೋಗಕ್ಕೆ ಕಾರಣವಾಗಿದೆ. ಯತಃ = ಯಾವ ಕಾರಣದಿಂದ, ಸರ್ವವಾಗಾತ್ಮಾ = ಸಕಲಶಬ್ದಗಳ ಅರ್ಥವಾದ ಗುಣಪೂರ್ಣತ್ವವನ್ನು ಪ್ರತಿಪಾದಿಸುತ್ತವೋ, (ಆದ್ದರಿಂದಲೇ) ಪರಬ್ರಹ್ಮಾಭಿಧಾಯಕಃ = ಗುಣಪೂರ್ಣನಾದ ವಿಷ್ಣುವನ್ನು ಪ್ರತಿಪಾದಿಸುತ್ತದೆ, ತಥೌ = 'ತ ಮತ್ತು ಥ' ಎಂಬೆರಡು ಅಕ್ಷರಗಳು ಪ್ರಾಣಾತ್ಮಕೌ ವಾಯು ಹಾಗೂ ವಿಷ್ಣುವನ್ನೇ ದೇವತೆಯಾಗಿ ಉಳ್ಳವುಗಳು, ವ್ಯಾಪ್ತಿಸ್ಥಿತಿವಿಧಾಯಕೌ = ಪರಮಾತ್ಮನ ದೇಶಕಾಲವ್ಯಾಪ್ತಿಯನ್ನು ಮತ್ತು ಸ್ಥಿತಿಕರ್ತೃತ್ವವನ್ನು (ತಕಾರವು ವ್ಯಾಪ್ತಿಯನ್ನು, ಥಕಾರವು ಸ್ಥಿತಿಕರ್ತೃತ್ವವನ್ನು) ವಿಧಾನ ಮಾಡುತ್ತಿವೆ.

ಈ ಮೂರುಶಬ್ದಗಳು ಮಹತ್ವಪೂರ್ಣವಾಗಿವೆ. ಇದರಿಂದೇನು? ಎಂಬ ಪ್ರಶ್ನೆಗೆ ಉತ್ತರ - ಅತಶ್ಚ = ಆದ್ದರಿಂದಲೇ, ಏತೇ = ಓಂ, ಅಥ, ಅತಃ ಎಂಬ ಮೂರು ಪದಗಳು, ಪೂರ್ವಂ = ಸಕಲಸೂತ್ರಗ್ರಂಥಗಳ ಪ್ರಾರಂಭದಲ್ಲಿ, ಉಚ್ಚಾರ್ಯಾಃ = ಉಚ್ಚರಿಸಲು ಅರ್ಹವಾಗಿವೆ ಎಂದು, ಸತಾಂ = ಸಜ್ಜನರಿಗೆ, ಮತಾಃ = ಮಾನ್ಯವಾಗಿವೆ.

'ತತ್ ಕಿಮತ್ರ ನಿಯಾಮಕಮ್?' ಎಂಬಲ್ಲಿ ಕೇಳಿದ ಪ್ರಶ್ನೆಗೆ ಉತ್ತರವನ್ನು ಉಪಸಂಹಾರ ಮಾಡುತ್ತಿದ್ದಾರೆ. ಏವಂ = ಹಿಂದೆ ಹೇಳಿದ ಪ್ರಕಾರ, ಅಥಾತಃ ಶಬ್ದಯೋಃ = ಅಥ ಅತಃಶಬ್ದಗಳ, ವೀರ್ಯಂ = ಸ್ವರೂಪತಃ ಆಧಿಕ್ಯ ಹೊಂದಿದ ಸಾಮರ್ಥ್ಯವನ್ನು, ತತ್ವತಃ = ನಿಶ್ಚಯವಾಗಿ, ಆಜ್ಞಾಯ = ತಿಳಿದು, ಮಹಾಪ್ರಾಜ್ಞಾಃ = ಸೂತ್ರಕಾರರಾದ ಎಲ್ಲಾ ಪ್ರಾಜ್ಞರು, ಸೂತ್ರೇಷು = ತಮ್ಮ ಸೂತ್ರಗ್ರಂಥಗಳಲ್ಲಿ, ತಾವೇವ = ಈ ಶಬ್ದಗಳನ್ನೇ, ಆದೌ = ಪ್ರಾರಂಭದಲ್ಲಿ, ಪ್ರಯುಂಜಂತೇ = ಉಚ್ಚರಿಸುತ್ತಾರೆ; ಇತಿ = ಹೀಗೆ ಗರುಡಪುರಾಣದಲ್ಲಿ ಹೇಳಿದೆ.

## 'ಓಂ' 'ಅಥ' 'ಅತಃ' ಶಬ್ದಗಳು ಮೊದಲು ಹೊರಹೊಮ್ಮಿದವು

**ತತ್ವಪ್ರಕಾಶಿಕಾ –**

**ನನು ಮಙ್ಗಲೋಕ್ತ್ಯಾದೇಃ ಶಬ್ದಾನ್ತರೇಣಾಪಿ ಸಮ್ಭವಾತ್ ಕಿಮೇತತ್ ಪ್ರಯೋಗನಿಯತ್ಯಾ? ಇತ್ಯತಃ ಸ್ವರೂಪಾಧಿಕ್ಯಂ ಚಾಸ್ತೀತ್ಯಾಹ – ಸಿಸೃಕ್ಷೋರಿತಿ ।।**

ಪ್ರಶ್ನೆ - ಮಂಗಳಾಚರಣೆಯನ್ನು ಬೇರೆಶಬ್ದಗಳಿಂದಲೂ ಮಾಡಲು ಬರುವಾಗ ಈ ಶಬ್ದಗಳಿಂದಲೇ ಏಕೆ ಮಾಡಬೇಕು?

ಉತ್ತರ - ಈ ಪ್ರಶ್ನೆಗೆ ಶಬ್ದಗಳಿಗೆ ಸ್ವರೂಪಾಧಿಕ್ಯ ಸಹ ಇದೆ ಎಂಬುದಾಗಿ 'ಸಿಸೃಕ್ಷೋಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

**तत्वप्रकाशिका – 'प्रथमं विनिःसृतौ, अतः स्वरूपोत्तमौ तस्मात् प्राथमिकौ' इत्यर्थः । 'यत् स्वजातौ प्रथमं हरेः निस्सरति तत् तत्रोत्तमम्' इति न्यायोऽनुधेयः।**

ಓಂ ಮತ್ತು ಅಥಶಬ್ದಗಳು ಸೃಷ್ಟಿಯ ಪ್ರಾರಂಭದಲ್ಲಿ ಮೊದಲು ಹೊರಹೊಮ್ಮಿವೆ. ಆದ್ದರಿಂದ ಸ್ವರೂಪತಃ ಉತ್ತಮಗಳಾಗಿವೆ; ಹಾಗಾಗಿ ಪ್ರಾಥಮಿಕ ಎನಿಸಿವೆ. 'ಯಾವುದು ತನ್ನ ಜಾತಿಯಲ್ಲಿ ಮೊದಲು ಹರಿಯಿಂದ ಹೊರಹೊಮ್ಮಿದೆಯೋ ಅದು ಆ ಜಾತಿಯಲ್ಲಿ ಉತ್ತಮ ಎನಿಸುತ್ತವೆ' ಎಂಬ ನ್ಯಾಯವನ್ನು ತಿಳಿಯಬೇಕು.

**तत्वप्रकाशिका – अतश्च तृतीयतया प्राथमिक उदाहृतः । यतस्तृतीयतयोदाहृतो विष्णुनेत्यत उत्तम, इत्यर्थः ।**

ಅದರಂತೆ 'ಅತಃ' ಎಂಬ ಶಬ್ದವೂ ಸಹ ಪ್ರಥಮೋಚ್ಚಾರಿತಶಬ್ದಗಳಲ್ಲಿ ಹೊರಹೊಮ್ಮಿದ್ದರಿಂದ ಪ್ರಾಥಮಿಕ ಎನಿಸಿದೆ. ಆ ಕಾರಣದಿಂದ ಮೂರನೆಯದಾಗಿ ಸೂತ್ರದಲ್ಲಿ ಉದಾಹರಿಸಲಾಗಿದೆ. ಇದೂ ಸಹ ಉತ್ತಮವೆಂದು ತಿಳಿಯಬೇಕು.

**तत्वप्रकाशिका – तद्धेतुत्वं तस्य विष्णोर्जिज्ञासादौ हेतुत्वं, तस्य = जिज्ञासादेर्मोक्षहेतुत्वं वा वदन् इत्यनुवादः ।**

ತದ್ಧೇತುತ್ವಮ್ - 'ಜಿಜ್ಞಾಸಾದಿಗಳಿಗೆ ವಿಷ್ಣುವೇ ಕಾರಣನಾಗಿದ್ದಾನೆ; ಅಥವಾ ವಿಷ್ಣುವಿನ ಜಿಜ್ಞಾಸೆಯು ಮೋಕ್ಷಕ್ಕೆ ಕಾರಣವಾಗಿದೆ' ಎಂಬುದು 'ಹೇತ್ವರ್ಥೇ ಸಮುದೀರಿತಃ' ಎಂಬುದರ ಅನುವಾದವಾಗಿದೆ.

**तत्वप्रकाशिका – 'न केवलमाधिक्यं स्वरूपत एव, किंत्वर्थतश्च इत्यतोऽपि प्रथमयोगः' इत्याह – अकार इति ।।**

'ಸ್ವರೂಪತಃ ಆಧಿಕ್ಯವೆಂದಷ್ಟೇ ತಿಳಿಯಬಾರದು; ಅರ್ಥದಿಂದಲೂ ಆಧಿಕವಾಗಿರುವುದರಿಂದ ಸೂತ್ರದ ಮೊದಲು ಅಥ, ಅತಃ ಎಂದು ಪ್ರಯೋಗಿಸಿದ್ದಾರೆ' ಇದನ್ನು 'ಅಕಾರಃ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

**तत्वप्रकाशिका – 'सर्ववागर्थपूर्णताऽभिधायकतया परब्रह्माभिधायकः' इत्यर्थः। प्राणात्मकाविति ।। प्राणदैवत्यौ, भगवद्वाचकौ ।**

ಸಕಲಶಬ್ದಗಳಿಂದ ಪ್ರತಿಪಾದ್ಯವಾದ ಪೂರ್ಣತ್ವವನ್ನು ಅಕಾರವು ಹೇಳುತ್ತಿದೆ. ಆದ್ದರಿಂದಲೇ ಪರಬ್ರಹ್ಮನನ್ನು ಪ್ರತಿಪಾದನೆ ಮಾಡುತ್ತಿದೆಯೆಂದರ್ಥ. 'ಪ್ರಾಣಾತ್ಮಕೌ' ಎಂದರೆ ಮುಖ್ಯಪ್ರಾಣ ಹಾಗೂ ಭಗವಂತನ ವಾಚಕಗಳು.

**तत्वप्रकाशिका – अभिमान्यभिमन्यमानयोरैक्यव्यपदेशो 'महतश्चतुर्मुखात्' इत्यादौ प्रसिद्धः ।**

ಅಭಿಮಾನಿ ದೇವತೆಗೂ ಮತ್ತು ಅಭಿಮನ್ಯವಾದ 'ತ' 'ಥ' ಶಬ್ದಗಳಿಗೂ ಐಕ್ಯವನ್ನು ಹೇಳಬಹುದು. 'ಮಹತಶ್ಚತುರ್ಮುಖಃ' ಇತ್ಯಾದಿ ಸ್ಥಳಗಳಲ್ಲಿ ಇಂತಹ ಪ್ರಯೋಗವು ಕಂಡಿದೆ. (ಮಹತ್ತತ್ವದ ಅಭಿಮಾನಿಯಾದ ಚತುರ್ಮುಖನನ್ನೇ ಅಭಿಮನ್ಯವಾದ ಮಹತ್ತತ್ವದ ಸ್ವರೂಪವೆಂದು ಹೇಳಲಾಗಿದೆ).

**तत्वप्रकाशिका – वाच्यवाचकयोरैक्यव्यपदेशो 'अयं वै लोकः प्रथमा महानाम्नी' इत्यादौ दृष्टः । अतः इत्युपसंहारः । वीर्यं = स्वरूपाधिक्यादि-माहात्म्यम् ।**

ವಾಚ್ಯ ಮತ್ತು ವಾಚಕಗಳಿಗೆ ಐಕ್ಯನಿರ್ದೇಶವು 'ಅಯಂ ವೈ ಲೋಕಃ ಪ್ರಥಮಾ ಮಹಾನಾಮ್ನೀ' ಇತ್ಯಾದಿ ಸ್ಥಳಗಳಲ್ಲಿ ಹೇಳಿದೆ. ಈ ಶ್ರುತಿಯನ್ನು ನೋಡಿದಾಗ ಮಹಾನಾಮ್ನೀ ಎಂಬ ಹೆಸರುಳ್ಳ ಶ್ರುತಿವಾಕ್ಯವೇ ಈ ಲೋಕವೆಂದು ಆಪಾತತಃ ತಿಳಿಯುತ್ತದೆ. ಆದರೆ ಹೀಗರ್ಥವಲ್ಲ. ಅದರ ನಿಜವಾದ ಅಭಿಪ್ರಾಯ - ''ಪ್ರಥಮದಲ್ಲಿರುವ ಮಹಾನಾಮ್ನೀ' ಎಂದು ಪ್ರಸಿದ್ಧವಾದ ಋಕ್‌ನಿಂದ ವಾಚ್ಯನಾದವನು ಭೂಲೋಕದಲ್ಲಿರುವ ಮಹಾವಿಷ್ಣು ಎಂದು.

'ಅತಃ' ಎಂಬುದಾಗಿ ಉಪಸಂಹಾರ ಮಾಡಿದ್ದಾರೆ. 'ವೀರ್ಯಂ' ಎಂಬ ಶಬ್ದಕ್ಕೆ 'ಸ್ವರೂಪತಃ ಅಧಿಕವಾಗಿರುವಿಕೆ ಮೊದಲಾದ ಮಹಿಮೆಗಳು' ಎಂದರ್ಥ.

## 'ಓಂ' 'ಅಥ' ಶಬ್ದಗಳಿಗೆ ಸ್ವರೂಪಾಧಿಕ್ಯ ಸಮರ್ಥನೆ

**ಭಾವದೀಪಃ – ಪ್ರಥಮಂ ನಿಃಸೃತತ್ವೇ ಪ್ರಾಥಮ್ಯಂ ಕುತಃ? ಇತ್ಯತೋ ಮಧ್ಯೇ ಶೇಷಮಾಹ – ಅತಃ ಸ್ವರೂಪೋತ್ತಮಾವಿತಿ ।।**

ಓಂಕಾರ ಮತ್ತು ಅಥಶಬ್ದಗಳು ಭಗವಂತನಿಂದ ಆದಿಯಲ್ಲಿ ಪ್ರಥಮವಾಗಿ ಹೊರಹೊಮ್ಮಿವೆ. ಈ ವಿಚಾರವನ್ನು 'ಸಿಸೃಕ್ಷೋಃ ಪರಮಾದ್' ಎಂಬ ಶ್ಲೋಕವು ಪ್ರತಿಪಾದಿಸುತ್ತಿದೆ. ಈ ಎರಡು ಶಬ್ದಗಳು ಮೊದಲು ಹೊರಬಂದ ಮಾತ್ರಕ್ಕೆ ಮೊದಲು ಏಕೆ ಉಚ್ಚರಿಸಬೇಕು? ಎಂಬ ಪ್ರಶ್ನೆಗೆ ಟೀಕೆಯಲ್ಲಿ 'ಸ್ವರೂಪೋತ್ತಮೌ' ಎಂದು ಉತ್ತರಿಸಿದ್ದಾರೆ.

### 'ಓಂ' ಶ್ರೀಹರಿಯಿಂದ ಮೊದಲು ಹೊರಹೊಮ್ಮಿದ್ದರಿಂದ ಸ್ವರೂಪತಃ ಉತ್ತಮವಾಗಿವೆ

**ಭಾವದೀಪಃ – ನನು ಓಂಅಥಶಬ್ದೌ ಸ್ವರೂಪೋತ್ತಮೌ ಹರೇಃ ಪ್ರಥಮಂ ನಿಃಸೃತತ್ವಾತ್ । 'ಯಃ ಶಬ್ದಃ ಪ್ರಥಮಂ ಹರೇಃ ನಿಃಸೃತಃ ಸ ಉತ್ತಮಃ' ಇತಿ ವ್ಯಾಪ್ತೌ ದೃಷ್ಟಾನ್ತ ಇತಿ ನ, ಇತ್ಯತ ಆಹ – ಯತ್ ಸ್ವಜಾತೌ ಇತಿ ।।**

'ಓಂ ಮತ್ತು ಅಥಶಬ್ದಗಳು ಭಗವಂತನಿಂದ ಪ್ರಥಮವಾಗಿ ಹೊರಬಂದಿದ್ದರಿಂದ ಸ್ವರೂಪತಃ ಉತ್ತಮಗಳಾಗಿವೆ' ಎಂದು ಅಭಿಪ್ರಾಯ.'ಯಃ ಶಬ್ದಃ ಪ್ರಥಮಂ ಹರೇಃ ನಿಃಸೃತಃ ಸ ಉತ್ತಮಃ' (ಯಾವ ಶಬ್ದವು ಮೊದಲು ಶ್ರೀಹರಿಯಿಂದ ಹೊರ ಬಂದಿದೆಯೋ ಆದು ಉತ್ತಮ) ಎಂಬ ವ್ಯಾಪ್ತಿಯನ್ನು ಹೇಳಿದಂತಾಯಿತು. ಈ ವ್ಯಾಪ್ತಿಗೆ ದೃಷ್ಟಾಂತವೇ ಇಲ್ಲವೆಂಬ ಪ್ರಶ್ನೆಗೆ 'ಯತ್ ಸ್ವಜಾತೌ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

### ಈ ವಿಷಯದಲ್ಲಿ ಸಾಮಾನ್ಯ ವ್ಯಾಪ್ತಿಯಿದೆ

**ಭಾವದೀಪಃ – ಇತಿ ನ್ಯಾಯ ಇತಿ ।। 'ಸಾಮಾನ್ಯನ್ಯಾಯಃ' ಇತ್ಯರ್ಥಃ । 'ಯಥಾ ದೇವೇಷು ಚತುರ್ಮುಖಃ' ಇತ ದೃಷ್ಟಾನ್ತಸಮ್ಭವಾತ್ ನ ತು ವಿಶಿಷ್ಯೇತಿ ಭಾವಃ ।**

ವಿಶೇಷವ್ಯಾಪ್ತಿಗೆ ದೃಷ್ಟಾಂತ ಇಲ್ಲದಿರಬಹುದು. ಆದರೆ ಸಾಮಾನ್ಯವ್ಯಾಪ್ತಿಗೆ ದೃಷ್ಟಾಂತವನ್ನು ಹೇಳಬಹುದೆಂಬ ಕಾರಣಕ್ಕಾಗಿ 'ಯತ್ ಸ್ವಜಾತೌ ಪ್ರಥಮಂ ಹರೇಃ

ನಿಃಸರತಿ, ತತ್ ತತ್ರ ಉತ್ತಮಮ್' ('ಯಾವುದು ಸ್ವಜಾತಿಯಲ್ಲಿ ಹರಿಯಿಂದ ಮೊದಲು ಹೊರ ಬರುತ್ತದೋ ಅದು ಸ್ವಜಾತಿಯಲ್ಲಿ ಶ್ರೇಷ್ಠ' ಎಂಬ ಸಾಮಾನ್ಯವ್ಯಾಪ್ತಿಗೆ ದೃಷ್ಟಾಂತವನ್ನು ಹೇಳಬಹುದು. 'ದೇವತೆಗಳ ಜಾತಿಯಲ್ಲಿ ಚತುರ್ಮುಖದೇವರು ದೇವತೆಗಳಿಗಿಂತ ಮೊದಲು ಭಗವಂತನಿಂದ ಸೃಷ್ಟರಾದ ಕಾರಣ ಚತುರ್ಮುಖದೇವರು ದೇವೋತ್ತಮ-ರಾಗಿದ್ದಾರೆ'. ಅದರಂತೆ ಸಕಲ ಶಬ್ದಗಳ ನಡುವೆ 'ಓಂ' ಮತ್ತು 'ಅಥ'ಶಬ್ದಗಳು ಮೊದಲು ಹೊರ ಬಂದಿದ್ದರಿಂದ ಎಲ್ಲ ಶಬ್ದಗಳಿಗಿಂತಲೂ ಉತ್ತಮವಾಗಿವೆ ಎಂದು ತಿಳಿಯಬೇಕು.

## 'ತೃತೀಯೋಽತ ಉದಾಹೃತಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

**ಭಾವದೀಪಃ – अत इत्यस्य अतःशब्दपरत्वं, हेतुपरत्वं, तृतीय उदाहृत इत्यनयोरावृत्तिं 'प्राथमिकौ' इत्यस्य वचनव्यत्ययेनानुषङ्गं चोपेत्याह – अतश्चेति ।। अनुवाद इति ।। तेन 'हेत्वर्थः' इत्यनेन न पुनरुक्तिरिति भावः ।**

'ತೃತೀಯೋಽತ ಉದಾಹೃತಃ' ಎಂಬಲ್ಲಿರುವ 'ಅತಃ' ಎಂಬ ಶಬ್ದವನ್ನು ಪ್ರತಿಪಾದನೆ ಮಾಡುತ್ತಿದೆ. ಅಥವಾ ಹೇತುಪರವಾಗಿದೆ ಎಂದು ವಿವಕ್ಷಿಸಬಹುದು. 'ತೃತೀಯ ಉದಾಹೃತ' ಎಂಬೆರಡು ಪದಗಳನ್ನು ಎರಡು ಬಾರಿ ವಿವಕ್ಷಿಸಬೇಕು. 'ಪ್ರಾಥಮಿಕೌ' ಎಂಬ ಪದವನ್ನು ಏಕವಚನಾಂತವಾಗಿ ವ್ಯತ್ಯಾಸ ಮಾಡಿಕೊಂಡು ಅನುಷಂಗ ಮಾಡಿಕೊಳ್ಳಬೇಕು. ಈಗ ಭಾಷ್ಯದ ಮಾತಿಗೆ ಹೀಗರ್ಥ - 'ಅತಃ' ಎಂಬ ಶಬ್ದವು ಮೂರನೆಯದಾಗಿ ಪ್ರಾಥಮಿಕವಾಗಿ ಉದಾಹರಿಸಲ್ಪಟ್ಟಿದೆ. ಯಾವಕಾರಣದಿಂದ ಮೂರನೆಯದನ್ನಾಗಿ ವಿಷ್ಣುವಿನಿಂದ ಹೇಳಲ್ಪಟ್ಟಿತೋ, ಆದ್ದರಿಂದ ಉತ್ತಮವಾಗಿದೆ ಎಂದರ್ಥ.

## 'ತದ್ಧೇತುತ್ವಮ್' ಎಂಬ ಭಾಷ್ಯದ ಪದಕ್ಕೆ ವ್ಯಾಖ್ಯಾನ

**ಭಾವದೀಪಃ – अनुवाद इति ।। तेन 'हेत्वर्थः' इत्यनेन न पुनरुक्तिरिति भावः ।**

'ತದ್ಧೇತುತ್ವಮ್' ಎಂಬ ಪದದಿಂದ ಎರಡು ಅರ್ಥವನ್ನು ವಿವಕ್ಷಿಸಬೇಕು. 'ತತ್' ವಿಷ್ಣುವಿನ ಜಿಜ್ಞಾಸಾದಿಗಳ ವಿಷಯದಲ್ಲಿರುವ ಹೇತುತ್ವವನ್ನು ಅಥವಾ 'ತತ್' ಆ

ಜಿಜ್ಞಾಸಾದಿಗಳ 'ಹೇತುತ್ವಮ್' ಮೋಕ್ಷಹೇತುತ್ವವನ್ನು ಹೇಳುವ ಎಂಬುದಾಗಿ ಹಿಂದೆ ಹೇಳಿದ್ದರ ಅನುವಾದವಾಗಿದೆ ಎಂದು. ಹೀಗೆ ಅನುವಾದವೆಂದು ಹೇಳಿದ್ದರಿಂದ 'ಅತಃ' ಎಂಬ ಶಬ್ದವು ಹೇತ್ವರ್ಥದಲ್ಲಿದೆ ಎಂಬುದಾಗಿ ಹಿಂದೆ ಹೇಳಿದ್ದರ ಜೊತೆ ಪುನರುಕ್ತಿ ದೋಷವು ಬರುವುದಿಲ್ಲ.

## ಓಂಕಾರವನ್ನು ಏಕೆ ಬಿಟ್ಟಿರಿ ?

**भावदीपः – नन्वतःशब्दस्य तृतीयत्वे पूर्वमुच्चार्या इति त्रयाणां पूर्वोच्चार्यत्वे च सति 'अथातःशब्दपूर्वाणि' इत्युपक्रमे 'अथातःशब्दयोः' इत्युपसंहारे च कथं द्वयोरेवोक्तिः । 'तावेवादौ' इत्यवधारणं च ।**

ಅತಃಶಬ್ದವನ್ನು ಮೂರನೆಯದನ್ನಾಗಿ ಉಚ್ಚಾರಿಸಬೇಕೆಂದು ಹೇಳಿದಿರಿ. ಹಾಗಾದರೆ ಓಂ, ಅಥ, ಅತಃ ಮೂರೂ ಶಬ್ದಗಳನ್ನು ಪ್ರಾರಂಭದಲ್ಲಿ ಹೇಳಲೇಬೇಕೆಂದು ಹೇಳಿದಂತಾಯಿತು. ಆದರೆ 'ಅಥಾತಃಶಬ್ದಪೂರ್ವಾಣಿ' ಎಂದು ಪ್ರಾರಂಭದಲ್ಲಿ ಮತ್ತು 'ಅಥಾತಃಶಬ್ದಯೋಃ' ಎಂದು ಉಪಸಂಹಾರದಲ್ಲಿ ಕೇವಲ ಎರಡು ಶಬ್ದಗಳನ್ನಷ್ಟೇ ಪ್ರಾರಂಭದಲ್ಲಿ ಉಚ್ಚರಿಸಬೇಕೆಂದು ಹೇಳಲಾಗಿದೆ. ಅಷ್ಟೇ ಅಲ್ಲದೆ 'ತಾವೇವ' ಎಂದು ಅವಧಾರಣ ಮಾಡಿ ಉಳಿದದ್ದನ್ನು ವ್ಯಾವೃತ್ತಿ ಮಾಡಲಾಗಿದೆ. ವಸ್ತುತಃ ಓಂಕಾರವನ್ನೂ ಸೇರಿಸಿ ಹೇಳಬೇಕಿತ್ತಲ್ಲವೇ?

## ಭಾಷ್ಯದಲ್ಲಿ ಓಂಕಾರವನ್ನು ವ್ಯಾಖ್ಯಾನಿಸದಿರಲು ಕಾರಣ

**भावदीपः – सत्यम् । अध्यायसमाप्तिप्रतिसूत्रमादावनुषङ्गायासंहिततयोच्चार्यमाणत्वेन वैलक्षण्यात् । 'सर्वत्रानुगतत्वेन पृथगोङ्क्रियतेऽखिलैः' इत्यनुभाष्योक्तिः । अथातःशब्दवदवश्यवक्तव्यार्थत्वाभावात् विशेषविवक्षया तयोः प्रश्नादीत्यदोषः । अत एव भाष्ये अथादेरेव व्याख्यानम् ।**

ಹೌದು. ಆದರೆ ಪ್ರತಿಯೊಂದು ಸೂತ್ರಗಳ ಪ್ರಾರಂಭದಲ್ಲಿ ಓಂಕಾರವನ್ನು ಉಚ್ಚರಿಸಬೇಕೆಂದು ತಿಳಿಸಲು ಪ್ರಥಮಸೂತ್ರದಲ್ಲಿ ಓಂಕಾರವನ್ನು ಬಿಡಿಸಿ ಹೇಳಿದ್ದಾರೆ.

'ಸರ್ವತ್ರಾನುಗತತ್ವೇನ ಪೃಥಗೋಂಕ್ರಿಯತೇऽಖಿಲೈಃ' ಎಂಬ ಅನುವ್ಯಾಖ್ಯಾನದಲ್ಲಿಯೂ ಇದನ್ನೆ ಹೇಳಿದ್ದಾರೆ. ಆದ್ದರಿಂದ ಅಥ ಮತ್ತು ಅತಃ ಶಬ್ದಗಳು ಸೂತ್ರದಲ್ಲಿ ಹೇಗೆ ಸೇರಿಕೊಂಡಿವೆಯೋ ಅದರಂತೆ ಓಂಕಾರವು ಸೇರದ ಕಾರಣ ಗರುಡಪುರಾಣದ 'ಅಥಾತಃ ಶಬ್ದಪೂರ್ವಾಣಿ' ಎಂಬ ಉಪಕ್ರಮ ಮತ್ತು ಉಪಸಂಹಾರದಲ್ಲಿ ಓಂಕಾರವನ್ನು ಪರಿಗಣಿಸಿಲ್ಲ. ಮತ್ತು ಯಾವುದೇ ಶಾಸ್ತ್ರದ ಪ್ರಾರಂಭದಲ್ಲಿ ಓಂಕಾರವನ್ನು ಮೊದಲು ಉಚ್ಚರಿಸಲೇ ಬೇಕೆಂಬುದು ಎಲ್ಲರಿಗೂ ಸಿದ್ಧವಾಗಿದೆ. ಆದರೆ ಅಥ ಮತ್ತು ಅತಃಶಬ್ದಗಳನ್ನು ಅವಶ್ಯ ಉಚ್ಚರಿಸಬೇಕೆಂದು ಅನೇಕರಿಗೆ ತಿಳಿದಿಲ್ಲ. ಈ ವಿವಕ್ಷೆಯಿಂದ ಗರುಡಪುರಾಣವು ಅಥ ಮತ್ತು ಅತಃಶಬ್ದಗಳನ್ನೇ ವಿಶೇಷವಾಗಿ ಉಲ್ಲೇಖಿಸಿದೆ. ಆದ್ದರಿಂದಲೇ ಭಾಷ್ಯದಲ್ಲಿಯೂ ಓಂಕಾರವನ್ನು ವ್ಯಾಖ್ಯಾನಿಸದೆ ಅಥ ಮತ್ತು ಅತಃಶಬ್ದಗಳನ್ನಷ್ಟೆ ವ್ಯಾಖ್ಯಾನಿಸಿದ್ದಾರೆ.

ವಿಶೇಷ ವಿಚಾರ - ಸೂತ್ರದಲ್ಲಿರುವ 'ಅಥ' ಎಂಬ ಶಬ್ದವು ಶ್ರವಣಮಾತ್ರದಿಂದಲೇ ಮಂಗಳವನ್ನು ಉಂಟುಮಾಡುತ್ತದೆ. ಆದ್ದರಿಂದ ಶಾಸ್ತ್ರದ ಪ್ರಾರಂಭದಲ್ಲಿ ಉಚ್ಚರಿಸಲ್ಪಟ್ಟ ಈ ಶಬ್ದವು ಪರಮಮಂಗಳಕರವಾಗಿದೆ. ಅಷ್ಟೇ ಅಲ್ಲದೇ ಅಧಿಕಾರದ ಅನಂತರ ಎಂಬ ಮತ್ತೊಂದು ಅರ್ಥವನ್ನೂ ಕೂಡ ಹೇಳುತ್ತಿದೆ. ಶಮದಮಾದಿ ಗುಣಗಳಿಂದ ಸಂಪದ್ಭರಿತನಾಗಿ ಯಾರು ಅಧಿಕಾರಿಯಾಗಿದ್ದಾನೋ, ಅವನು ಮೋಕ್ಷವನ್ನು ಬಯಸುವ ಇಚ್ಛೆಯುಳ್ಳವನಾದಾಗ ಬ್ರಹ್ಮಜಿಜ್ಞಾಸೆಯಲ್ಲಿ ತೊಡಗಬೇಕು ಎಂಬರ್ಥವನ್ನು 'ಅಥ'ಶಬ್ದವು ಸೂಚಿಸುತ್ತಿದೆ. ಆದ್ದರಿಂದ ಮುಕ್ತಿಯನ್ನು ಬಯಸುವವರೆಲ್ಲರೂ ಬ್ರಹ್ಮಜಿಜ್ಞಾಸೆಗೆ ಪ್ರವೃತ್ತ ಮಾಡಬಹುದೇ ಎಂಬ ಪ್ರಶ್ನೆಗೆ ಉತ್ತರ ನೀಡಿದಂತಾಗುತ್ತದೆ.

'ಅತಃ' ಎಂಬ ಶಬ್ದವು ಮೋಕ್ಷರೂಪ ಪ್ರಯೋಜನವನ್ನು ಹೇಳುತ್ತಿದೆ. ಬ್ರಹ್ಮನ ಸಾಕ್ಷಾತ್ಕಾರದಿಂದ ಯಾವ ಪ್ರಸಾದ ದೊರೆಯುತ್ತದೋ, ಅದರಿಂದ ಮೋಕ್ಷವು ದೊರೆಯುವುದರಿಂದ ಬ್ರಹ್ಮಜಿಜ್ಞಾಸೆಯಲ್ಲಿ ತೊಡಗಬೇಕು ಎಂಬರ್ಥವನ್ನು 'ಅಥ' ಎಂಬ ಶಬ್ದವು ಹೇಳುತ್ತಿದೆ. ಆದ್ದರಿಂದ ಕರ್ಮದಿಂದ ಮೋಕ್ಷವು ದೊರೆಯುವುದಿಲ್ಲ. ಜ್ಞಾನದಿಂದಷ್ಟೇ ಮೋಕ್ಷವು ದೊರೆಯುತ್ತದೆ. ಹಾಗಾಗಿ ಬ್ರಹ್ಮಜಿಜ್ಞಾಸೆಯು ವ್ಯರ್ಥವಲ್ಲವೆಂದು ಹೇಳಿದಂತಾಯಿತು.

## ಸಕಲ ಶಬ್ದಗಳು 'ಅ'ಕಾರದ ವ್ಯಾಖ್ಯಾನ

**ಭಾವದೀಪಃ – ಸರ್ವವಾಗಿತಿ ।।** 'ಅಕಾರೋ ವೈ ಸರ್ವವಾಕ್' ಇತ್ಯತ್ರ 'ಅನ್ಯೇಪಿ ಶಬ್ದಾಃ ಸರ್ವೇऽಪಿ ಹ್ಯಕಾರಾರ್ಥಾಭಿಧಾಯಿನಃ' ಇತಿ । ತಸ್ಮಾತ್ 'ಅಕಾರ ಏವಾಯಂ ಸರ್ವವಾಗಾತ್ಮಕಃ ಶ್ರುತಃ' ಇತಿ;

'ಸಕಲಶಬ್ದಗಳು ಅಕಾರವನ್ನೇ ವ್ಯಾಖ್ಯಾನ ಮಾಡುತ್ತಿವೆ' ಎಂಬ ಅಭಿಪ್ರಾಯದಲ್ಲಿ 'ಅಕಾರಃ ಸರ್ವವಾಗಾತ್ಮಾ' ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಅನೇಕ ಪ್ರಮಾಣಗಳನ್ನು ತಿಳಿಯಬೇಕು. 'ಅಕಾರೋ ವೈ ಸರ್ವಾ ವಾಕ್' ಎಂಬ ಶ್ರುತಿಯನ್ನು ವ್ಯಾಖ್ಯಾನಿಸುವಾಗ 'ಅನ್ಯೇऽಪಿ ಶಬ್ದಾಃ ಸರ್ವೇऽಪಿ ಹ್ಯಕಾರಾರ್ಥಾಭಿಧಾಯಿನಃ' ಎಂದು ವ್ಯಾಖ್ಯಾನಿಸಿದ್ದಾರೆ. ಮತ್ತು 'ಅಕಾರ ಏವಾಯಂ ಸರ್ವವಾಗಾತ್ಮಕಃ ಶ್ರುತಃ' ಎಂದು;

**ಭಾವದೀಪಃ –**

> ತಸ್ಮಾತ್ ಸರ್ವಗುಣಾನ್ ವಿಷ್ಣೋರಕಾರೋ ವಕ್ತಿ ಯತ್ ಪ್ರಭೋಃ ।
> ತದ್ವ್ಯಕ್ತಯೋऽಪಿ ಶಬ್ದಾ ಯೇ ಸರ್ವೇ ವಿಷ್ಣುಗುಣಬ್ರುವಾಃ ।।

ಇತ್ಯಾದ್ಯೈತರೇಯಭಾಷ್ಯೋಕ್ತದಿಶಾ ಸರ್ವವಾಚಾಂ ಗುಣಪೂರ್ಣತ್ವರೂಪೋ ಯೋರ್ಥಸ್ತದಭಿಧಾಯಕತಯೇತಿ ವಾ; 'ಸರ್ವಂ ಪೂರ್ಣಮಿಹೋಚ್ಯತೇ' ಇತ್ಯಾದೇಃ, 'ಸರ್ವೇತಿ ಯಾ ವಾಕ್ ತದರ್ಥಪೂರ್ಣತಾಭಿಧಾಯಕತಯಾ' ಇತಿ ವಾ ವ್ಯಾಖ್ಯಾನತ್ವಾತ್ ಸರ್ವವಾಚಾಂ ಸರ್ವವಾಗಾತ್ಮನಾ ಭವೇತ್ ಇತಿ ತತ್ವಪ್ರದೀಪೋಕ್ತಸ್ಮೃತ್ಯಾ ವಾ,

> 'ತಸ್ಮಾತ್ ಸರ್ವಗುಣಾನ್ ವಿಷ್ಣೋಃ ಅಕಾರೋ ವಕ್ತಿ ಯತ್ ಪ್ರಭೋಃ।
> ತದ್ ವ್ಯಕ್ತಯೋऽಪಿ ಶಬ್ದಾ ಯೇ ಸರ್ವೇ ವಿಷ್ಣುಗುಣಬ್ರುವಾಃ।।'

ಅಕಾರವು ಪ್ರಭುವಾದ ವಿಷ್ಣುವಿನ ಸಕಲಗುಣಗಳನ್ನು ಪ್ರತಿಪಾದಿಸುತ್ತದೆ. ಅಕಾರದಿಂದ ಅಭಿವ್ಯಕ್ತವಾದ ಸಕಲಶಬ್ದಗಳೂ ಸಹ ವಿಷ್ಣುವಿನ ಸಕಲಗುಣಗಳನ್ನು ಪ್ರತಿಪಾದಿಸುತ್ತವೆ. ಹೀಗೆ 'ಸರ್ವವಾಗರ್ಥ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಶ್ರೀಮದಾಚಾರ್ಯರು ಐತರೇಯಭಾಷ್ಯದಲ್ಲಿ ಹೇಳಿದಂತೆ ಸಕಲಮಾತುಗಳು ಗುಣಪೂರ್ಣತ್ವವನ್ನು ಪ್ರತಿಪಾದಿಸುತ್ತಿರುವುದರಿಂದ, ಅದೇ ಗುಣಪೂರ್ಣತ್ವವನ್ನು ಅಕಾರವು

ಪ್ರತಿಪಾದಿಸುತ್ತಿರುವುದರಿಂದ ಅಥವಾ 'ಸರ್ವಂ ಪೂರ್ಣಮಿಹೋಚ್ಯತೇ' ಎಂಬ ಮಾತಿಗೆ 'ಸಕಲಶಬ್ದಗಳು ಪ್ರತಿಪಾದಿಸುವ ಅರ್ಥವನ್ನೇ ಆಕಾರವು ಪ್ರತಿಪಾದಿಸುತ್ತದೆಂದು ಮಾಡಿದ್ದರಿಂದ ಅಥವಾ 'ಸರ್ವವಾಚಾಂ ಸರ್ವವಾಗಾತ್ಮನಾ ಭವೇತ್' ಎಂಬ ತತ್ವಪ್ರದೀಪದಲ್ಲಿ ಉದಾಹರಿಸಿದ ಸ್ಮೃತಿಯಿಂದ -

**ಭಾವದೀಪಃ – ವ್ಯಾಖ್ಯಾನವ್ಯಾಖ್ಯೇಯಭಾವೇನ ಸರ್ವವಾಗಾತ್ಮಕತ್ವಮುಪೇತ್ಯ 'ಸರ್ವವಾಗರ್ಥೇ'ತ್ಯುಕ್ತಮ್ । ಭಾಷ್ಯೇ 'ಸರ್ವವಾಗಾತ್ಮಾ' ಇತಿ ಹೇತುಗರ್ಭಮ್ । 'ಅರ್ಥೈಕ್ಯಾದೈಕ್ಯೋಕ್ತಿಃ' ಇತಿ ಭಾವಃ ।**

ಸಕಲಶಬ್ದಗಳಿಗೂ, ಆಕಾರಕ್ಕೂ ವ್ಯಾಖ್ಯಾನವ್ಯಾಖ್ಯೇಯಭಾವ ಇರುವುದರಿಂದ ಆ ಎಂಬ ಅಕ್ಷರಕ್ಕೆ ಸರ್ವವಾಗಾತ್ಮಕ್ವವನ್ನು ಒಪ್ಪಿ ಟೀಕೆಯಲ್ಲಿ 'ಸರ್ವವಾಗರ್ಥ' ಎಂದು ಹೇಳಿರುತ್ತಾರೆ.

ಭಾಷ್ಯದಲ್ಲಿ 'ಸರ್ವವಾಗಾತ್ಮಾ' ಎಂಬುದಾಗಿ ಸಕಲಶಬ್ದ ಸ್ವರೂಪತ್ವವನ್ನು ಆಕಾರಕ್ಕೆ ಹೇಳಿದ್ದಾರೆ. ಇದು ಹೇತುಗರ್ಭಿತವಾಗಿವೆ. ಆಕಾರವು ಸಕಲ ವಾಗಾತ್ಮಕವಾಗಿರುವುದರಿಂದ ಪರಬ್ರಹ್ಮವಾಚಕ ಎಂದು ಇದರ ಅರ್ಥ. ಆಕಾರಕ್ಕೆ ಸಕಲಶಬ್ದಗಳ ಜೊತೆ ಐಕ್ಯವನ್ನು ಹೇಳಿರುವುದು ಅರ್ಥೈಕ್ಯದ ಅಭಿಪ್ರಾಯದಿಂದ ಮಾತ್ರ. 'ಅರ್ಥೈಕ್ಯಾದೈಕ್ಯೋಕ್ತಿಃ' 'ಸಕಲ ಶಬ್ದಗಳ ಅರ್ಥಕ್ಕೂ 'ಆ' ಎಂಬ ಅಕ್ಷರದ ಅರ್ಥಕ್ಕೂ ಐಕ್ಯವಿರುವುದರಿಂದ ಆಕಾರಕ್ಕೂ, ಸಕಲಶಬ್ದಗಳಿಗೂ ಐಕ್ಯವನ್ನು ಹೇಳಲಾಗಿದೆ.' ಇಷ್ಟು ಭಾಷ್ಯದ ಅಭಿಪ್ರಾಯ.

## ಅಭಿಮನ್ಯ ಅಭಿಮಾನಿಗಳಿಗೆ ಐಕ್ಯ ವ್ಯವಹಾರ ಕಂಡಿದೆ

**ಭಾವದೀಪಃ – ಪ್ರಾಣಪದಸ್ಯ ವಾಯುರ್ವಿಷ್ವರ್ಥತ್ವಮುಪೇತ್ಯಾಹ – ಪ್ರಾಣೇತ್ಯಾದಿ ।। ಮಹತ ಇತಿ ।। 'ಅನ್ತರಾವಿಜ್ಞಾನಮನಸೀ' ಇತ್ಯತ್ರ 'ವಿಜ್ಞಾನತತ್ವಂ ಮಹತಃ ಸಮುತ್ಪನ್ನಂ ಚತುರ್ಮುಖಾತ್' ಇತಿ ಭಾಷ್ಯೋಕ್ತಸ್ಮೃತೌ ಯಥಾ 'ಮಹತ್ತತ್ವಾಭಿಮಾನಿಚತುರ್ಮುಖಾತ್' ಇತ್ಯರ್ಥೇ 'ಮಹತಶ್ಚತುರ್ಮುಖಾತ್' ಇತಿ ಪ್ರಯೋಗಃ ತಥಾ - ಇತ್ಯರ್ಥಃ । ಅಯಂ ವೈ ಲೋಕ ಇತಿ ।। ಮಹನ್ನಾಮ ಯಾಸು ಋಕ್ಷು ವಿದ್ಯತೇ ತಾ ಮಹಾನಾಮ್ನ್ಯಃ । 'ಪರಸ್ಯ ಬ್ರಹ್ಮಣೋ ಯನ್ನಾಮೇನ್ದ್ರಾದಿಕಂ ತನ್ಮಹಾರ್ಥತ್ವಾತ್ ಮಹತ್' ಇತಿ ಕರ್ಮನಿರ್ಣಯೋಕ್ತದಿಶಾ ಪ್ರಥಮಾ ಮಹಾನಾಮ್ನೀತ್ಯುಚ್ಯಮಾನಾ 'ವಿದಾಮಘವನ್' ಇತ್ಯಾದಿಕಾ ಋಗಿತ್ಯರ್ಥಃ ।**

ಪ್ರಾಣಪದಕ್ಕೆ ವಾಯು ಹಾಗೂ ವಿಷ್ಣು ಎಂಬೆರಡು ಅರ್ಥಗಳನ್ನು ಅಂಗೀಕರಿಸಿ 'ಪ್ರಾಣಾತ್ಮಕಾ' ಎಂದು ಹೇಳಿದ್ದಾರೆ.

ಅಭಿಮನ್ಯವಾದ ವಸ್ತುವಿಗೂ, ಅಭಿಮಾನಿದೇವತೆಗೂ ಐಕ್ಯವ್ಯಪದೇಶವು 'ಮಹತಶ್ಚತುರ್ಮುಖಾತ್' ಎಂಬಲ್ಲಿ ಕಂಡಿದೆ ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು - 'ಅಂತರಾ ವಿಜ್ಞಾನಮನಸೀ ಕ್ರಮೇಣ ತಲ್ಲಿಂಗಾದಿತಿ ಚೇನ್ನಾವಿಶೇಷಾತ್' (೩-೨-೧೫) ಈ ಸೂತ್ರದಿಂದ ಅಂತರಾಧಿಕರಣವು ಪ್ರಾರಂಭವಾಗಿದೆ. ಇದರ ಮುಂದಿನ ಸೂತ್ರ 'ಚರಾಚರವ್ಯಪಾಶ್ರಯಸ್ತು ಸ್ಯಾತ್ ತದ್ವ್ಯಪದೇಶೋ ಭಾಕ್ತಸ್ತದ್ಭಾವಭಾವಿತ್ವಾತ್' ಎಂದು ಈ ಸೂತ್ರದಲ್ಲಿ ಶ್ರೀಮದಾಚಾರ್ಯರು ಸ್ಕಾಂದಪುರಾಣದ ಶ್ಲೋಕವನ್ನು ಉಲ್ಲೇಖಿಸಿದ್ದಾರೆ -

ಪರಾದವ್ಯಕ್ತಮುತ್ಪನ್ನಮದ್ಯಕ್ಕಾತ್ತು ಮಹಾಂಸ್ತಥಾ।
ವಿಜ್ಞಾನತತ್ತ್ವಂ ಮಹತಃ ಸಮುತ್ಪನ್ನಂ ಚತುರ್ಮುಖಾತ್ ॥
ವಿಜ್ಞಾನತತ್ತ್ವಾತ್ತು ಮನೋ ಮನಸಸ್ತತ್ತ್ವಾಚ್ಚ ಖಾದಿಕಮ್।
ಏವಂ ಬಾಹ್ಯಾ ಪರಾ ಸೃಷ್ಟಿರಂತಸ್ತದ್ವ್ಯಕ್ಷ್ಯಪೇಕ್ಷಯಾ।
ವಿಪರೀತಕ್ರಮೋ ಜ್ಞೇಯೋ ಯಸ್ಮಾದಂತೇ ಹರೇರ್ದೃಶಿಃ' ॥

ಪರಮಾತ್ಮನಿಂದ ಪ್ರಕೃತಿಯು ಹುಟ್ಟಿತು, ಪ್ರಕೃತಿಯಿಂದ ಮಹತತ್ತ್ವ ಹುಟ್ಟಿತು. ಚತುರ್ಮುಖನಿಂದ ಅಭಿಮನ್ಯಮಾನವಾದ ಮಹತತ್ತ್ವದಿಂದ ವಿಜ್ಞಾನತತ್ವವು ಹುಟ್ಟಿತು. ಸರಸ್ವತಿದೇವಿಯಿಂದ ಅಭಿಮನ್ಯಮಾನವಾದ ವಿಜ್ಞಾನತತ್ವದಿಂದ ಮನಸ್ತತ್ತ್ವ ಹುಟ್ಟಿತು. ಮನಸ್ತತ್ತ್ವದಿಂದ ಆಕಾಶಾದಿಗಳು ಹುಟ್ಟಿದವು. ಈ ಕ್ರಮದಲ್ಲಿ ತತ್ವಗಳ ಉತ್ಪತ್ತಿಯು ಬ್ರಹ್ಮಾಂಡದ ಹೊರಗಡೆ ನಡೆಯುತ್ತದೆ. ಈ ಸೃಷ್ಟಿಯೇ ತಾರತಮ್ಯದ ಜ್ಞಾಪಕವಾದ್ದರಿಂದ ಪರಾಸೃಷ್ಟಿಯೆಂದು ಕರೆಸಿಕೊಳ್ಳುತ್ತದೆ. ಪ್ರಾಣದಿಂದ ಮನಸ್ಸು, ಮನಸ್ಸಿನಿಂದ ವಿಜ್ಞಾನ ಎಂಬ ಪ್ರಕಾರದಲ್ಲಿರುವ ಸೃಷ್ಟಿಯು ಬ್ರಹ್ಮಾಂಡದ ಅಥವಾ ದೇಹದ ಒಳಗಡೆ ಜ್ಞಾನಿಗಳಿಗೆ ತತ್ವಾಭಿವ್ಯಕ್ತಿಯಾಗುವ ಕ್ರಮವನ್ನಷ್ಟೇ ಹೇಳುತ್ತದೆ. ಏಕೆಂದರೆ ಹರಿಯ ದರ್ಶನವು ಅಧಮದೇವತೆಗಳ ದರ್ಶನವಾದ ಮೇಲೆ ಆಗುತ್ತದೆ ಎಂದು.

ಈ ಸ್ಕಾಂದ ಪುರಾಣದ ಮಾತಿನಲ್ಲಿ ಮಹತತ್ತ್ವಕ್ಕೆ ಅಭಿಮಾನಿಯಾದ ಚತುರ್ಮುಖನಿಂದ ಎಂದು ಹೇಳುವ ಬದಲು, 'ಮಹತಃ ಚತುರ್ಮುಖಾತ್' ಎಂದು ಹೇಳಲಾಗಿದೆ. ಮಹತತ್ತ್ವವು ಚತುರ್ಮುಖನಿಂದ ಅಭಿಮನ್ಯಮಾನವಾಗಿದೆ. ಅದಕ್ಕೂ ಚತುರ್ಮುಖನಿಗೂ ಅಭೇದ ಪ್ರಭೇದವನ್ನು ಹೇಗೆ ಮಾಡಿದ್ದಾರೋ, ಅದೇ ರೀತಿಯಾಗಿ ಪ್ರಕೃತದಲ್ಲಿಯೂ 'ತ' 'ಥ' ಈ ಎರಡು ಅಕ್ಷರಗಳಿಗೆ ಮುಖ್ಯಪ್ರಾಣ ಹಾಗೂ ಭಗವಂತನಿಂದ ಐಕ್ಯವನ್ನು ಹೇಳಲಾಗಿದೆ.

ವಾಕ್ಯ ವಾಚಕಗಳಿಗೂ ಐಕ್ಯವ್ಯಪದೇಶವು 'ಅಯಂ ವೈ ಲೋಕಃ' ಇತ್ಯಾದಿ ಸ್ಥಳದಲ್ಲಿ ಕಂಡಿದೆ. ಅದು ಹೀಗೆ - 'ಮಹನ್ನಾಮ ಯಾಸು ಋಕ್ಷು ವಿದ್ಯತೇ ತಾ ಮಹಾನಾಮ್ನ್ಯಃ। 'ಪರಸ್ಯ ಬ್ರಹ್ಮಣೋ ಯನ್ನಾಮೇಂದ್ರಾದಿಕಂ ತನ್ಮಾಹಾರ್ಥತ್ವಾತ್ ಮಹತ್' ಯಾವ ಋಕ್‌ಗಳಲ್ಲಿ 'ಮಹತ್' ಎಂಬ ಪದವಿದೆಯೋ, ಅದನ್ನು 'ಮಹಾನಾಮ್ನೀ' ಎಂದು ಕರೆಯುತ್ತಾರೆ. ಪರಬ್ರಹ್ಮನ ನಾಮವಾದ ಇಂದ್ರಾದಿಗಳು 'ಮಹತ್' ಎಂದು ಕರೆಸಿಕೊಳ್ಳುತ್ತವೆ.' ಹೀಗೆ ಕರ್ಮನಿರ್ಣಯದಲ್ಲಿ ಹೇಳಿದಂತೆ 'ಪ್ರಥಮಾ ಮಹಾನಾಮ್ನೀ' 'ಮಹಾನಾಮ್ನೀ' ಎಂಬ ಹೆಸರುಳ್ಳ ಋಕ್ ಈ ಲೋಕವು ಎಂಬರ್ಥವು ತೋರುವ ಈ ವಾಕ್ಯಕ್ಕೆ ಮೊದಲ 'ಮಹಾನಾಮ್ನೀ' ಎಂದು ಪ್ರಸಿದ್ಧವಾದ 'ವಿದಾ ಮಘವನ್' ಎಂಬ ಶ್ರುತಿಯಿಂದ ವಾಚ್ಯನಾದವನು ಈ ಭೂಲೋಕದಲ್ಲಿರುವ ಮಹಾವಿಷ್ಣುವಾಗಿದ್ದಾನೆ ಎಂಬರ್ಥವನ್ನು ತಿಳಿಯಬೇಕು.

ಒಟ್ಟು ಇಷ್ಟು ಅಭಿಪ್ರಾಯ - 'ಮಹತಶ್ಚತುರ್ಮುಖಾತ್' ಎಂದರೆ 'ಮಹತ್' ತತ್ವಕ್ಕೆ ಅಭಿಮಾನಿಯಾದ ಚತುರ್ಮುಖನ ದೆಸೆಯಿಂದ ಎಂದರ್ಥ. 'ಅಯಂ ವೈ ಲೋಕಃ ಪ್ರಥಮಾ ಮಹಾನಾಮ್ನಿ' 'ಈ ಲೋಕವೇ ಮೊದಲನೆಯ ಮಹಾನಾಮ್ನಿ' ಎಂಬ ಪ್ರಯೋಗದಲ್ಲಿ ವಾಚ್ಯವಾಚಕಗಳಿಗೆ ಅಭೇದ ವ್ಯವಹಾರ ತೋರುತ್ತಿದೆ.' ಎಂದು ಟೀಕೆಯಲ್ಲಿ ಹೇಳಲಾಗಿದೆ. ಇಲ್ಲಿ 'ವಿದಾ ಮಘವನ್' ಮೊದಲಾದ 'ಋಕ್ 'ಗಳು 'ಅಯಂ ಲೋಕಃ' ಎನಿಸುವ ವಿಷ್ಣುವಾಚಕಗಳು ಎಂಬರ್ಥವನ್ನು ತಿಳಿಯಬೇಕು.

**ಭಾವದೀಪಃ –** ऐतरेयोपनिषद्गत'विदामघवन्' इति । 'आभिष्ठमभिष्टिभिः' इति, 'राय' इति च ऋक्त्रयमिति यावत् । पृथिवीस्थविष्णुवाचकम्

इत्यर्थः । तदुक्तं कर्मनिर्णये 'तृचविभागेन ....तिस्रो महानाम्न्यः'(१) इति । तथा प्रथमा या महानाम्नी तद्वाच्यः पार्थिवो हरिः इति च ।

೧. ಐತರೇಯೋಪನಿಷತ್ತಿನಲ್ಲಿರುವ 'ವಿದಾ ಮಘವನ್ ವಿದಾ' ೨. ಅಭಿಷ್ಟ್ವಂ ಅಭಿಷ್ಟಿಭಿಃ ೩. ರಾಯಃ ಈ ಮೂರೂ ಋಕ್ಕುಗಳು ಪೃಥಿವಿಯಲ್ಲಿರುವ ವಿಷ್ಣುವನ್ನು ಪ್ರತಿಪಾದಿಸುತ್ತವೆ ಎಂದರ್ಥ. ಇದನ್ನೇ ಕರ್ಮನಿರ್ಣಯದಲ್ಲಿ 'ತೃಚವಿಭಾಗೇನ ವಿದಾಮಘವನ್, ಸಮೂತಯೇ, ನೂನಮಿತಿ ವಾ ತಿಸ್ರೋ ಮಹಾನಾಮ್ನ್ಯಃ' ಎಂದು ಮತ್ತು 'ಪ್ರಥಮಾ ಯಾ ಮಹಾನಾಮ್ನೀ ತದ್ವಾಚ್ಯಃ ಪಾರ್ಥಿವೋ ಹರಿಃ' ಎಂದು ಹೇಳಿದ್ದಾರೆ.

**भावदीपः – उपसंहार इति ।।** तेन न पुनरुक्तिरिति भावः । 'तावेवादौ' इति भाष्ये 'संहिततया' इति योज्यम् । 'ओङ्कारं त्वसंहिततया' इति भावः ।

'ಅತಃ ಇತಿ ಉಪಸಂಹಾರಃ' ಎಂದು ಟೀಕೆಯಲ್ಲಿ ಹೇಳಿದ್ದರಿಂದ ಪುನರುಕ್ತಿ ಬರುವುದಿಲ್ಲ. 'ತಾವೇವಾದೌ' ಎಂಬ ಭಾಷ್ಯದಲ್ಲಿ 'ಸಂಹಿತತಯಾ' ಎಂಬುದನ್ನು ಶೇಷಪೂರಣೆ ಮಾಡಿಕೊಳ್ಳಬೇಕು. ಓಂಕಾರವನ್ನು ಅಸಂಹಿತತಯಾ ಉಚ್ಚಾರ ಮಾಡಬೇಕು. 'ಅಥ' 'ಅತಃ'ಶಬ್ದಗಳನ್ನು ಸಂಹಿತತಯಾ ಉಚ್ಚಾರ ಮಾಡಬೇಕೆಂದು ಇದರ ಅರ್ಥ. ಆದ್ದರಿಂದ ಓಂಕಾರವನ್ನು ಬಿಟ್ಟು ''ತಾವೇವ'' ಎಂದು 'ಅಥ', 'ಅತಃ' ಎಂಬೆರಡು ಶಬ್ದಗಳನ್ನಷ್ಟೇ ವಿವಕ್ಷಿಸಿದ್ದಾರೆ.

**भावदीपः – यद्वा, 'स्रवत्यनोङ्कृतं ब्रह्म परस्ताच्च विशीर्यते' इत्यर्थवादबलादेव ओङ्कारस्य प्राप्या सूत्रकृतः प्रयत्नानपेक्षत्वात् तदारम्भापेक्षया तावेवादौ इत्युक्तिः - इत्यदोषः ।**

ಅಥವಾ 'ಸ್ರವತ್ಯನೋಂಕೃತಂ ಬ್ರಹ್ಮ ಪರಸ್ತಾಚ್ಚ ವಿಶೀರ್ಯತೇ' ಎಂಬ ಪ್ರಮಾಣದಿಂದ ಓಂಕಾರವು ಸೂತ್ರದ ಪ್ರಾರಂಭದಲ್ಲಿ ಅವಶ್ಯ ಉಚ್ಚರಿಸಬೇಕೆಂದು ಅರ್ಥಾಪತ್ತಿ-ಪ್ರಮಾಣದಿಂದಲೇ ಸಿದ್ಧವಾಗುತ್ತದೆ. ಪುನಃ ಆದರ ಉಚ್ಚಾರಣೆಯನ್ನು ವಿಧಿಸ-

(೧) 'तृचविभागेन विदामघवन्, समूतये, नूनमिति वा तिस्रो महानाम्न्यः'- पूर्णपाठः
जिज्ञास्याधिकरण (೧-೧-೧)

ಬೇಕಾಗಿಲ್ಲವೆಂಬ ಅಭಿಪ್ರಾಯದಿಂದ 'ತಾವೇವ' ಎಂದು 'ಅಥ' ಮತ್ತು 'ಅತಃ' ಶಬ್ದಗಳನ್ನಷ್ಟೇ ಉಲ್ಲೇಖಿಸಿದ್ದಾರೆ. ಆದ್ದರಿಂದ ಯಾವ ದೋಷಕ್ಕೂ ಅವಕಾಶವಿಲ್ಲ.

## ಓಂಕಾರ ವಾದ

ವಿಶೇಷ ವಿಚಾರ - 'ಸ್ರವತ್ಯನೋಂಕೃತಂ ಬ್ರಹ್ಮ' ಎಂಬ ವಚನಾನುಸಾರ ಬ್ರಹ್ಮಸೂತ್ರದಲ್ಲಿ ಪ್ರತಿಸೂತ್ರವೂ ಬ್ರಹ್ಮವಿದ್ಯೆಯಾಗಿರುವುದರಿಂದ ಆದ್ಯಂತಗಳಲ್ಲಿ ಓಂಕಾರ ಊಹೆ ಮಾಡಿಕೊಳ್ಳಬೇಕು. ಯದ್ಯಪಿ ಪೂರ್ವಮೀಮಾಂಸೆಯಲ್ಲಿ ಮಂತ್ರ ಸಾಮ ಸಂಸ್ಕಾರಗಳನ್ನು ಒಂದು ಬಗೆಯಾಗಿ ಪ್ರಕೃತಿಯಾಗದಲ್ಲಿ ಹೇಳಿದ್ದರೆ ವಿಕೃತಿಯಾಗದಲ್ಲಿ ಇನ್ನೊಂದು ಬಗೆಯಾಗಿ ಅನುಷ್ಠಾನ ಮಾಡುವುದನ್ನು 'ಊಹೆ' ಎಂದು ಕರೆಯಲಾಗಿದೆ. ಉದಾ: 'ಅಗ್ನಿ' ಪದಯುಕ್ತವಾದ ಮಂತ್ರ ಪ್ರಕೃತಿಯಾಗದಲ್ಲಿ ಇದೆ. ಅಲ್ಲಿ ಅಗ್ನಿ ದೇವತೆ. ಸೂರ್ಯದೇವತಾಕ ವಿಕೃತಿಯಾಗದಲ್ಲಿ ಆ ಮಂತ್ರವನ್ನೇ 'ಅಗ್ನಿ' ಪದದ ಸ್ಥಾನದಲ್ಲಿ 'ಸೂರ್ಯ' ಪದವನ್ನಿಟ್ಟು ಹೇಳಬೇಕು. ಹೀಗೆ ಪ್ರಕೃತದಲ್ಲಿ ಓಂಕಾರ ಊಹಕ್ಕೆ ಆದರ ಸ್ಥಾನದಲ್ಲಿ ಬೇರೆ ಶಬ್ದವಿಲ್ಲ ಎಂಬ ಸಮಸ್ಯೆ ಬರಬಹುದು. ಆದರೆ ಇಲ್ಲಿ 'ಊಹೆ' ಎಂದರೆ ಅಧ್ಯಾಹಾರ. ಊಹ ಧಾತುವಿನ ಮೇಲೆ ಭಾವಾರ್ಥದಲ್ಲಿ ಪ್ರತ್ಯಯ ಬಂದಿದೆ. ಕರ್ಮಾರ್ಥದಲ್ಲಿ ಅಲ್ಲ.

ಅಧ್ಯಾಹಾರಕ್ಕೂ ಆಕಾಂಕ್ಷೆ ಬೇಕಲ್ಲವೆ? 'ಸಂ ಯಜ್ಞಪತಿರಾಶಿಷಾ' ಎಂಬಲ್ಲಿ 'ಯಜಮಾನನಿಗೆ ಅಭೀಷ್ಟ' ಎಂದಿಷ್ಟೇ ಹೇಳಿದೆ. 'ಸಿದ್ಧಿಸಲಿ' ಎಂದು ಅಧ್ಯಾಹಾರ ಮಾಡದಿದ್ದರೆ ಆಕಾಂಕ್ಷೆ ಶಾಂತವಾಗುವುದಿಲ್ಲ. ಇಲ್ಲಿ ಸೂತ್ರದಲ್ಲಿ ಓಂಕಾರದ ಅಧ್ಯಾಹಾರಕ್ಕೆ ಆಕಾಂಕ್ಷೆ ಇಲ್ಲ ಎಂದು ಆಕ್ಷೇಪ ಬಂದರೆ ಆಕಾಂಕ್ಷೆ ಇಲ್ಲದಿದ್ದರೂ 'ಸ್ರವತ್ಯನೋಂಕೃತಂ ಬ್ರಹ್ಮ' ಎಂಬ ವಚನದಲ್ಲಿ ವಿಹಿತವಾದ್ದರಿಂದ ಅಧ್ಯಾಹಾರ ಮಾಡುತ್ತೇವೆ ಎಂದು ಸಮಾಧಾನ.

ಅಧ್ಯಾಹಾರ ಮಾಡಿದ ಶಬ್ದಕ್ಕೆ ವಾಕ್ಯದಲ್ಲಿ ಅನ್ವಯ ಬೇಕು. 'ಓಂ' ಎಂದರೆ ಗುಣಪೂರ್ಣ ಎಂದರ್ಥ. ಇದನ್ನು ಬ್ರಹ್ಮಶಬ್ದದೊಂದಿಗೇ ಅನ್ವಯ ಮಾಡಬೇಕು. 'ಗುಣಪೂರ್ಣನಾದ ಬ್ರಹ್ಮ' ಎಂದು. ಆದರೆ 'ಬ್ರಹ್ಮಜಿಜ್ಞಾಸಾ' ಎಂಬ ಸಮಾಸದಲ್ಲಿ ಸೇರಿ ಹೋಗಿರುವ ಬ್ರಹ್ಮಶಬ್ದದೊಡನೆ ಹೊರಗಿರುವ ಓಂಕಾರದ ಅನ್ವಯವಾಗಲು ಶಕ್ಯವಿಲ್ಲ ಎಂದು ಆಕ್ಷೇಪ ಬರುತ್ತದೆ. ಆದರೆ 'ಹದಿನೇಳು ಮೊಳ ವಾಜಪೇಯದ ಯೂಪ' ಎಂದು ಶ್ರುತಿಯು ಹೇಳಿದಾಗ ವಾಜಪೇಯದಲ್ಲಿ ಯೂಪವೇ ಇಲ್ಲ. ಆದರ ಅಂಗವಾದ ಪಶುಯಾಗದಲ್ಲಿ ಇದೆ. ಆದರಿಂದ ಅನ್ವಯ ಕೂಡುವುದಿಲ್ಲ. ಆದರೂ 'ದೇವದತ್ತನ

ಮೊಮೃಗ'. ಇಲ್ಲಿ ಮೊಮೃಗನಿಗೆ ದೇವದತ್ತನ ನೇರ ಸಂಬಂಧವಿಲ್ಲದಿದ್ದರೂ ಮಗನ ಮೂಲಕ ಇದೆ. ಹಾಗೇ ಯೂಪಕ್ಕೆ ವಾಜಪೇಯದ ಸಂಬಂಧ ಅದರ ಅಂಗವಾದ ಪಶುಯಾಗದ ಮೂಲಕ ಇದೆ. ಅದರಿಂದ ಹದಿನೇಳು ಮೊಳ ಎತ್ತರ ಪ್ರಮಾಣ ಪ್ರಧಾನವಾದ ವಾಜಪೇಯಕ್ಕೆ ಸಂಬಂಧಿಸಿದಂತೆ ಮೊದಲಿಗೆ ಕಂಡರೂ ಅದು ಅಶಕ್ಯವಾದ್ದರಿಂದ ಅಂಗವಾದ ಪಶುಯಾಗಕ್ಕೆ ಸಂಬಂಧಿಸುತ್ತದೆ. ಹಾಗೆಯೆ ಸಮಾಸದಲ್ಲಿ ಪ್ರಧಾನವಾದ ಜಿಜ್ಞಾಸೆ ಗುಣಪೂರ್ಣವೆನಿಸದಿರುವುದರಿಂದ ಅಂಗವಾದ ಬ್ರಹ್ಮ ಗುಣಪೂರ್ಣ ಎಂದು ಅನ್ವಯ ಹೊಂದುತ್ತದೆ. 'ಯಜೇತ' 'ಯಾಗದಿಂದ ಇಷ್ಟ ಸಂಪಾದಿಸಬೇಕು' ಇಲ್ಲಿ ಅರ್ಥವಾದವು ಹೇಳುವ ಪ್ರಾಶಸ್ತ್ಯ ಅಪ್ರಧಾನವಾದ ಯಾಗದಲ್ಲಿ ಸಂಬಂಧಿಸುತ್ತದೆ. 'ದಂಡವನ್ನು ಹಿಡಿದ ಮೈತ್ರಾವರುಣನು ಪೈಷ ಅನುವಾಕ್ಯಗಳನ್ನು ಪಠಿಸಬೇಕು' ಇಲ್ಲಿ ಮೈತ್ರಾವರುಣ ದಂಡ ಹಿಡಿಯಬೇಕೆನ್ನುವುದೂ ಅವನು ಪೈಷಾದಿಮಂತ್ರ ಪಠಿಸಬೇಕೆನ್ನುವುದೂ ಬೇರೆ ವಿಧಿ ವಾಕ್ಯಗಳಿಂದ ಸಿದ್ಧವಾಗಿದೆ. ಪಠನ ಕಾಲದಲ್ಲಿ ದಂಡ ಹಿಡಿಯಬೇಕೆಂದು ವಿಧಿಸುವ ಅಭಿಪ್ರಾಯ ಈ ವಾಕ್ಯಕ್ಕೆ ಇದೆ. ಅದರಿಂದ 'ದಂಡಿ' ಎಂಬಲ್ಲಿ ದಂಡ ವಿಶೇಷಣವಾಗಿದ್ದರೂ ಅದಕ್ಕೇ ವಿಧಿಯ ಅನ್ವಯವಾಗುತ್ತದೆ. ಪ್ರಕೃತದಲ್ಲಿಯೂ ಓಂಕಾರ ಸಮಾಸದಲ್ಲಿ ವಿಶೇಷಣವಾದ ಬ್ರಹ್ಮನಿಗೆ ಅನ್ವಯಿಸುತ್ತದೆ.

ಬ್ರಹ್ಮಶಬ್ದಕ್ಕೂ ಗುಣಪೂರ್ಣ ಎಂದೇ ಅರ್ಥ. ಓಂಕಾರಕ್ಕೂ ಅದೇ ಅರ್ಥವೆಂದರೆ ವ್ಯರ್ಥವಾಗುವುದಿಲ್ಲವೆ? ಎಂದರೆ, ಬ್ರಹ್ಮ ಜೀವನಿಗಿಂತ ಭಿನ್ನನಾಗಿದ್ದು ವಿಚಾರಯೋಗ್ಯನೆನ್ನಲು 'ತದ್ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬಲ್ಲಿ ಗುಣಪೂರ್ಣ ಎಂಬ ಅರ್ಥದ ಬ್ರಹ್ಮಶಬ್ದವಿರುವಂತೆ 'ಓಮಿತ್ಯೇತದಕ್ಷರ ಮುದ್ಗೀಥಮುಪಾಸೀತ' ಎಂಬಲ್ಲಿ ಆದೇ ಅರ್ಥದ ಓಂಕಾರವಿದೆ. ಇದು ಉಪಲಕ್ಷಣ. 'ನಾರಾಯಣಂ ಮಹಾಜ್ಞೇಯಂ' ಎಂಬಲ್ಲಿ ಅದೇ ಅರ್ಥದ ನಾರಾಯಣ ಶಬ್ದವಿದೆ. ಹೀಗೆ ಅನೇಕ ವಿಚಾರವಿಧಿ ವಾಕ್ಯಗಳಲ್ಲಿ ಅನೇಕ ಸಿದ್ಧಾಂತ ಯುಕ್ತಿಗಳಿವೆ ಎಂದು ಸೂಚಿಸಲು ಓಂಕಾರ ಸೂತ್ರದಲ್ಲಿ ಬೇಕು.

ಒಂದೇ ಅರ್ಥದ ಎರಡು ಶಬ್ದಗಳಿಗೆ ಅನ್ವಯ ಹೇಳಿದರೆ 'ಗುಣಪೂರ್ಣನಾದ ಗುಣಪೂರ್ಣ' ಎಂದಾದೀತೆಂಬ ಸಮಸ್ಯೆ ಬಂದರೆ ಎರಡೂ ವಿಷ್ಣು ಎಂಬರ್ಥದಲ್ಲಿ ಯೋಗರೂಢವಾಗಿರುವುದರಿಂದ ಒಂದರ ಯೋಗಾಂಶವನ್ನು ಇನ್ನೊಂದರ ರೂಢ್ಯಂಶವನ್ನೂ ಇಟ್ಟುಕೊಂಡು ಅನ್ವಯ ಹೇಳಬೇಕು. 'ಆತ್ಮೇತಿ ತೂಪಗಚ್ಛಂತಿ' ಸೂತ್ರದಲ್ಲಿ ಸುಧೆಯಲ್ಲಿ ಎರಡು ಆತ್ಮಶಬ್ದಗಳಿಗೆ ಹಾಗೇ ಅನ್ವಯವೆಂದು ಹೇಳಿದೆ. 'ಪರಿಯದಿಂದ್ರ ರೋದಸೀ ಉಭೇ' ಎಂಬ ಮಂತ್ರವ್ಯಾಖ್ಯಾನದಲ್ಲಿ ಋಗ್ಭಾಷ್ಯ ಟೀಕೆಯಲ್ಲಿ ಎರಡು ಇಂದ್ರಶಬ್ದಗಳಿಗೆ ಹಾಗೇ ಅನ್ವಯ ಉಕ್ತವಾಗಿದೆ.

ಜಿಜ್ಞಾಸಾಧಿಕರಣ (೧-೧-೧)

ಓಂಕಾರಪ್ರತಿಪಾದ್ಯನಾದ ಬ್ರಹ್ಮನನ್ನು ಜಿಜ್ಞಾಸೆ ಮಾಡಬೇಕೆಂದು ಹೇಳುವುದಕ್ಕೆ ಇನ್ನೊಂದು ಪ್ರಯೋಜನವಿದೆ. ಓಂಕಾರಾರ್ಥವೆ ವ್ಯಾಹೃತಿ ಗಾಯತ್ರಿ ಪುರುಷಸೂಕ್ತಗಳ ಮೂಲಕ ಸಮಸ್ತವೇದಾರ್ಥ. ಆದರಿಂದ ಸಮಸ್ತವೇದಗಳು ಈ ವಿಚಾರಶಾಸ್ತ್ರದಲ್ಲಿ ವಿಚಾರಕ್ಕೊಳಪಡುವ ಪ್ರಮಾಣಗಳು ಎಂದು ಸೂಚಿಸಿದಂತಾಗುತ್ತದೆ. 'ಸ್ರವತ್ಯನೋಂಕೃತಂ ಬ್ರಹ್ಮ' ಎನ್ನುವಂತೆ ಅದೃಷ್ಟಫಲಕ್ಕಾಗಿಯೂ ಓಂಕಾರ ಬೇಕು.

ಹೀಗೆ ಪ್ರಥಮಸೂತ್ರದ ಆದಿಯ ಓಂಕಾರಕ್ಕೆ ಅನ್ವಯವಿರುವುದರಿಂದ ದೃಷ್ಟಫಲವೂ ಇದೆ, 'ಸ್ರವತಿ' ಎಂಬಂತೆ ಅದೃಷ್ಟ ಫಲವೂ ಇದೆ. ಸ್ವಿಷ್ಟಕೃತ್ ಮುಂತಾದ ಯಾಗಗಳಲ್ಲಿ ಮಂತ್ರೋಚ್ಚಾರಣೆಯ ಅಂಶದಲ್ಲಿ ದೇವತಾಸ್ಮರಣ, ಹವಿಸ್ಸನ್ನು ಹಾಕುವ ಅಂಶದಲ್ಲಿ ಹವಿಸ್ಸಿನ ವಿನಿಯೋಗಗಳೆಂದು ದೃಷ್ಟಫಲಗಳಿರುವಾಗಲೆ ಜೊತೆಗೆ ತ್ಯಾಗಾಂಶದಲ್ಲಿ ಅದೃಷ್ಟಫಲವೂ ಇದೆ. ಸೂತ್ರದ ಕೊನೆಯಲ್ಲಿ ಓಂಕಾರಕ್ಕೆ ಕೇವಲ ಅದೃಷ್ಟ ಫಲ. ಹಾಗೇ ಮುಂದಿನ ಸೂತ್ರಗಳಲ್ಲಿಯೂ ಕೇವಲ ಅದೃಷ್ಟ ಫಲ. ಒಂದು ಕಡೆ ದೃಷ್ಟ ಫಲವಿದ್ದ ಮಾತ್ರಕ್ಕೇ ಬೇರೆ ಕಡೆಯೂ ದೃಷ್ಟ ಫಲವೆ ಇರಬೇಕೆಂದಿಲ್ಲ. ಕರ್ಮಾಂಗ ಮಂತ್ರಗಳಿಗೆ ಕರ್ಮಕಾಲದಲ್ಲಿ ದೇವತಾಸ್ಮರಣ ರೂಪ ದೃಷ್ಟ ಫಲ. ಪಾರಾಯಣ ಜಪಾದಿ ಕಾಲದಲ್ಲಿ ಅದೃಷ್ಟ ಫಲವಿರುವುದುಂಟು. ಏಕಪಶುಕ ಯಾಗದಲ್ಲಿ 'ಅನ್ವೇನಂ ಮಾತಾ ಮನ್ಯತಾಂ' ಎಂದು ಏಕವಚನಾಂತ ಮಾತೃ ಶಬ್ದ ದೃಷ್ಟ ಫಲಕವಾದರೂ ಅನೇಕ ಪಶುಕವಾದ ಯಾಗಗಳಲ್ಲಿ ಅದೃಷ್ಟ ಫಲಕವಾಗುತ್ತದೆ. ಅಲ್ಲಿ ಮಾತೃ ಶಬ್ದವನ್ನು ಬಹುವಚನಾಂತವಾಗಿ ಪರಿಣಾಮ ಮಾಡಿಕೊಳ್ಳುವುದಿಲ್ಲ. 'ಮಾತುಃ ಪಯೋಧರರಸಂ ನ ಪುನಃ ಪಿಬಂತಿ' ಎಂಬಲ್ಲಿ ಮಾತೃಶಬ್ದಕ್ಕೆ 'ಆಯಾ ಮಾನವನ ತಾಯಿ' ಎಂದರ್ಥ. ಹಾಗೇ 'ಅನ್ವೇನಂ ಮಾತಾ' ಎಂಬಲ್ಲಿಯೂ 'ಆಯಾ ಪಶುವಿನ ತಾಯಿ' ಎಂದು ಅರ್ಥ ಕೊಡುವುದರಿಂದ ದೃಷ್ಟ ಫಲಕವೆ ಆಗಿದೆ ಎಂದು ಆಕ್ಷೇಪಿಸವುದು ಸರಿಯಲ್ಲ. ಅನೇಕ ತಾಯಂದಿರು ನೀಡುವ ಅನುಮತಿಯನ್ನು ಒಬ್ಬಳು ನೀಡಲಾರರು. ಆದಕ್ಕೆ ಬಹುವಚನಾಂತವಾಗಿಯೆ ಮಾಡಬೇಕಾಗುತ್ತದೆ. 'ಮಾತುಃ ಪಯೋಧರ ರಸಂ' ಎಂಬುದು ಗೌಣಪ್ರಯೋಗವೆ. 'ಬಹುಗಣ ವತುಡತಿ ಸಂಖ್ಯಾ' ಎಂಬಲ್ಲಿ 'ಸಂಖ್ಯಾ'ಎಂಬುದು ಒಂದು ಹೆಸರು. 'ಷ್ಣಾಂತಾಃ ಷಟ್' ಎಂಬಲ್ಲಿ ಬರುವ ಅದೇ ಶಬ್ದಕ್ಕೆ ಆ ಹೆಸರಿನ ಶಬ್ದಗಳು ಎಂದರ್ಥ. ಹೀಗೆ ಓಂಕಾರಕ್ಕೆ ಬೇರೆ ಬೇರೆ ಸೂತ್ರಗಳಲ್ಲಿ ಬೇರೆ ಬೇರೆ ಪ್ರಯೋಜನಗಳಿರಬಹುದು.

ಹೀಗೆ ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳುವ ಈ ಓಂಕಾರ ಸೂತ್ರದ ಭಾಗವೆ. ಅಂದರೆ ಸೂತ್ರದೊಡನೆ ಸೇರಿ ವಾಕ್ಯಾರ್ಥ ಬೋಧವನ್ನಾಗಲಿ ಅದೃಷ್ಟ ಫಲವನ್ನಾಗಲಿ ಮಾಡಿಕೊಡಬಹುದು, ಅಥವಾ ಎರಡನ್ನೂ ಮಾಡಿಕೊಡಬಹುದು. ಇದನ್ನು ಒಪ್ಪದಿದ್ದರೆ 'ಸಂ ಯಜ್ಞಪತಿರಾಶಿಷಾ' ಎಂಬಲ್ಲಿ ಅಧ್ಯಾಹಾರ ಮಾಡಿಕೊಳ್ಳುವ 'ಗಚ್ಛತಾಂ' ಎಂಬ

ಪದ ಅನನ್ವಿತವೆನ್ನಬೇಕಾದೀತು. ಈ ಅಭಿಪ್ರಾಯದಿಂದ ಸುಧಾದಲ್ಲಿ 'ಅಧ್ಯಾಹೃತವಾದ ಶಬ್ದವಾಕ್ಯಘಟಕವಲ್ಲವೆನ್ನುವಂತಿಲ್ಲ' ಎನ್ನಲಾಗಿದೆ.

'ಪೃಥಗೋಂಕ್ರಿಯತೇऽಖಿಲೈಃ' ಎಂಬ ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನ ಮಾಡುತ್ತ ಸನ್ಯಾಯರತ್ನಾವಳಿಯಲ್ಲಿ 'ಓಂಕಾರವು ಸೂತ್ರದಲ್ಲಿ ಅಥಶಬ್ದದಂತೆ ಸೇರಿಕೊಂಡಿಲ್ಲ. ಪ್ರತ್ಯೇಕವಾಗಿ ಉಚ್ಚರಿಸಬೇಕು' ಎಂದಿದೆ. ಈ ಸಮಸ್ಯೆಗೆ ಪರಿಹಾರ - ಅಷ್ಟಾಕ್ಷರ ಮಂತ್ರದಲ್ಲಿ ಒಂದು ಓಂಕಾರ ಮಂತ್ರಘಟಕ. ಇನ್ನೆರಡು ಆದ್ಯಂತಗಳಲ್ಲಿ ಆದೃಷ್ಟಫಲಕ್ಕಾಗಿ. ಹೀಗೆ ಮೂರು ಓಂಕಾರಗಳು. ಹಾಗೇ ಪ್ರಥಮ ಸೂತ್ರದಲ್ಲಿಯೂ ಮೂರು ಓಂಕಾರಗಳು. 'ಓಂಕಾರಶ್ಚಾಥಶಬ್ದಶ್ಚ' ಎಂದು ಸ್ಮೃತಿ ಇರುವುದರಿಂದ ಅಥಶಬ್ದದ ಮೊದಲಿಗೆ ಒಂದು ಓಂಕಾರ, ಅಥಶಬ್ದದಂತೆಯೆ ಸೂತ್ರಘಟಕವಾಗಿದೆ. ಅಂದರೆ ಗುಣಪೂರ್ಣತ್ವವನ್ನು ಹೇಳಿ ಅನ್ವಯ ಹೊಂದುತ್ತದೆ. ಇದನ್ನು ಸುಧೆಯಲ್ಲಿ ಹೇಳಿದೆ. ಇನ್ನೆರಡು ಓಂಕಾರಗಳು ಆದ್ಯಂತಗಳಲ್ಲಿ 'ಸ್ರವತ್ಯನೋಂಕೃತಂ' ಎಂದು ಶ್ರುತಿವಿಹಿತವಾದವುಗಳು. ಇವು ಸೂತ್ರಘಟಕವಲ್ಲ. ಸನ್ಯಾಯರತ್ನಾವಳಿ ಹೇಳುವುದು ಇದನ್ನೆ.

ಅಥವಾ ಆದಿಯಲ್ಲಿ ಶ್ರುತಿವಿಹಿತವಾದ ಓಂಕಾರವನ್ನೆ ಸ್ಮೃತಿಯೂ ಹೇಳುತ್ತದೆ. ಒಂದೇ ಓಂಕಾರ. ಆದನ್ನು ಒಮ್ಮೆ ಉಚ್ಚರಿಸಿದರೂ ಎಲ್ಲಾ ಸೂತ್ರಗಳಿಗೂ ಸಂಬಂಧಿಸುವಂತೆ ಬಿಡಿಸಿ ಉಚ್ಚಾರ ಮಾಡಿದೆ. ಅಥಶಬ್ದದಂತೆ ಸೇರಿಸಿ ಅಲ್ಲ ಎಂಬುದು ಸನ್ಯಾಯರತ್ನಾವಳಿಯ ಅಭಿಪ್ರಾಯ. ತನ್ನ ಅರ್ಥವನ್ನು ಬೋಧಿಸಿ ಅನ್ವಯ ಹೊಂದುವುದರಿಂದ ಸೂತ್ರ ಘಟಕವಾಗಿದೆ ಎಂದು ಸುಧೆ ಹೇಳುತ್ತದೆ. ಪರಸ್ಪರ ವಿರೋಧವಿಲ್ಲ.

ಭಾಷ್ಯದಲ್ಲಿ 'ಅಥ ಅತಃ ಶಬ್ದಗಳನ್ನೇ ಆದಿಯಲ್ಲಿ ಹೇಳುತ್ತಾರೆ' 'ತಾವೇವಾದೌ ಪ್ರಯುಂಜತೇ' ಎಂದಿದ್ದು ಓಂಕಾರ ಇಲ್ಲವೆಂಬ ಅಭಿಪ್ರಾಯದಿಂದಲ್ಲ. ಬ್ರಹ್ಮಜಿಜ್ಞಾಸಾದಿ ಪದಗಳು ಆದಿಯಲ್ಲಿ ಬರುವುದಿಲ್ಲ ಎಂದರ್ಥ. ಅಥವಾ ಏವಕಾರಕ್ಕೆ 'ಅಥ' 'ಅತಃ' ಶಬ್ದಗಳು ಆದಿಯಲ್ಲಿ ಬಂದೇ ಬರುತ್ತವೆ' ಎಂದು ಅರ್ಥ. ಅಥವಾ ಆದಿಯಲ್ಲಿ ಎಂದರೆ ಬ್ರಹ್ಮಶಬ್ದದ ಆದಿಯಲ್ಲಿ 'ಅಥ' 'ಅತಃ' ಶಬ್ದಗಳೇ ಬರುತ್ತವೆ ಎಂದರ್ಥ. ಭಾಷ್ಯದಲ್ಲಿ ಓಂಕಾರಕ್ಕೆ ವ್ಯಾಖ್ಯಾನ ಮಾಡದಿರುವುದು, ಅನುವ್ಯಾಖ್ಯಾನದಲ್ಲಿ ವ್ಯಾಖ್ಯಾನ ಮಾಡಲಿದ್ದೇವೆ, ಛಾಂದೋಗ್ಯಾದಿ ಭಾಷ್ಯಗಳಲ್ಲಿ ಮಾಡಿದ್ದೇವೆ ಮತ್ತು ಪೂರ್ವಪಕ್ಷದ ಎಲ್ಲ ಯುಕ್ತಿಗಳನ್ನೂ ಅಥಾದಿ ಶಬ್ದಗಳೇ ಸೂಚಿಸುವುದರಿಂದ ಅವುಗಳಿಗೆ ವ್ಯಾಖ್ಯಾನ

ಮಾಡಿದರೆ ಸಾಕು ಎಂಬ ಅಭಿಪ್ರಾಯದಿಂದ. ಅದೃಷ್ಟಫಲಕ್ಕಾಗಿ ಉಚ್ಚರಿಸುವ ಓಂಕಾರಕ್ಕೆ ವಾಕ್ಯಾರ್ಥದಲ್ಲಿ ಅನ್ವಯವೂ ಇದೆ ಎಂದು ತೋರಿಸಲು ಅನುವ್ಯಾಖ್ಯಾನ ವ್ಯಾಖ್ಯಾನ ಮಾಡಿದೆ.

## ಬ್ರಹ್ಮಮೀಮಾಂಸಾಶಾಸ್ತ್ರವನ್ನು ಓದಲು ಯಾರಿಗೆ ಅಧಿಕಾರ ?

**ಭಾಷ್ಯಮ್ –**

**अधिकारश्चोक्तो भागवततन्त्रे –**

**मन्दमध्योत्तमत्वेन त्रिविधा ह्यधिकारिणः ।**
**तत्र मन्दा मनुष्येषु य उत्तमगणा मताः ।।**
**मध्यमा ऋषिगन्धर्वा देवास्तत्रोत्तमा मताः ।**
**इति जातिकृतो भेदस्तथाऽन्यो गुणपूर्वकः ।।**
**भक्तिमान् परमे विष्णौ यस्त्वध्ययनवान्नरः ।**
**अधमः शमादिसंयुक्तो मध्यमः समुदाहृतः ।।**
**आब्रह्मस्तम्बपर्यन्तमसारं चाप्यनित्यकम् ।**
**विज्ञाय जातवैराग्यो विष्णुपादैकसंश्रयः ।।**
**स उत्तमोऽधिकारी स्यात् सन्यस्ताखिलकर्मवान् ।।' इति ।**

ಅನುವಾದ - ಅಧಿಕಾರ ಎಂದರೆ ಏನು ? ಅಧಿಕಾರವು ಎಷ್ಟು ಬಗೆ ? ಇದರ ಬಗ್ಗೆ ಭಾಗವತತಂತ್ರ ವಿವರಿಸಿದೆ --

'ಅಧಮ, ಮಧ್ಯಮ, ಉತ್ತಮ ಎಂದು ಮೂರು ಬಗೆಯ ಅಧಿಕಾರಿಗಳಿದ್ದಾರೆ. ಮನುಷ್ಯೋತ್ತಮರು ಅಧಮಾಧಿಕಾರಿಗಳು; ಋಷಿಗಳು ಗಂಧರ್ವರು ಪಿತೃಗಳು ಚಕ್ರವರ್ತಿಗಳು ಮಧ್ಯಮಾಧಿಕಾರಿಗಳು; ದೇವತೆಗಳು ಉತ್ತಮಾಧಿಕಾರಿಗಳು'' ಈ ವಿಂಗಡನೆಯು ಜಾತಿಮೂಲಕವಾದದ್ದು.

ಗುಣಕ್ಕೆ ಅನುಗುಣವಾದ ಅಧಿಕಾರಭೇದ ಮತ್ತೊಂದಿದೆ -- ಶಾಸ್ತ್ರಾಧ್ಯಯನದಲ್ಲಿ ಆಸಕ್ತನಾಗಿ ಸರ್ವೋತ್ತಮನಾದ ವಿಷ್ಣುವಿನಲ್ಲಿ ಭಕ್ತಿಯುಳ್ಳವನು ಅಧಮಾಧಿಕಾರಿ. ಈ ಗುಣಗಳಿದ್ದು ಹೆಚ್ಚಿನ ಶಮಾದಿಗುಣಗಳನ್ನು ಹೊಂದಿದ್ದರೆ ಮಧ್ಯಮಾಧಿಕಾರಿ. ಹಿಂದಿನ ಗುಣಗಳನ್ನು ಹೊಂದಿ 'ಬ್ರಹ್ಮನಿಂದ ಹಿಡಿದು ತೃಣಪರ್ಯಂತ ಸಕಲಜೀವರಾಶಿಗಳು ಸಾರವಿಲ್ಲದ್ದು ಮತ್ತು ಅನಿತ್ಯವಾದದ್ದೆಂದು ತಿಳಿದು ವೈರಾಗ್ಯಶಾಲಿಯಾಗಿ ಭಗವಂತನನ್ನೇ ಯಾರು ನಂಬಿ ಬದುಕುತ್ತಾನೋ ಅವನೇ ಉತ್ತಮಾಧಿಕಾರಿ.

ಅಂತಹವನು ಸಕಲಪ್ರವೃತ್ತಿಕರ್ಮಗಳನ್ನು ಬಿಟ್ಟು ಹರಿಪ್ರೀತಿಕರವಾದ ಕರ್ಮಗಳನ್ನಷ್ಟೇ ಆಚರಿಸುತ್ತಾನೆ. -- ಎಂದು.

ಪ್ರತಿಪದಾರ್ಥ -- ಭಾಗವತತಂತ್ರೇ = ಭಾಗವತತಂತ್ರ ಎಂಬ ಗ್ರಂಥದಲ್ಲಿ, ಅಧಿಕಾರಶ್ಚ = ಅಧಿಕಾರವಾದರೋ, ಉಕ್ತಃ = ಹೀಗೆ ಹೇಳಲ್ಪಟ್ಟಿದೆ.

(ಅಧಿಕಾರಿಯ ಬಗ್ಗೆ ಕೇಳಿದ್ದರೂ ವಿಶೇಷಣವಾದ ಅಧಿಕಾರವನ್ನೂ ಹೇಳಿದಂತಾಯಿತು)

ಅಧಿಕಾರಿಯ ವಿಭಾಗ ಹೇಗೆ? ಎಂದರೆ 'ಮಂದ = ಅಧಮರು, ಮಧ್ಯ = ಮಧ್ಯಮರು, ಉತ್ತಮತ್ವೇನ = ಉತ್ತಮರು ಎಂಬುದಾಗಿ, ತ್ರಿವಿಧಾಃ = ಮೂರು ಬಗೆಯ, ಅಧಿಕಾರಿಣಃ = ಶಾಸ್ತ್ರಾಧಿಕಾರಿಗಳು, ಹಿ = ಪ್ರಸಿದ್ಧರಷ್ಟೇ.

ತತ್ರ = ಮೂರುವಿಧ ಬ್ರಹ್ಮಜಿಜ್ಞಾಸೆಯ ಅಧಿಕಾರಿಗಳ ಮಧ್ಯದಲ್ಲಿ, ಯೇ = ಯಾರು, ಮನುಷ್ಯೇಷು = ಮನುಷ್ಯರಲ್ಲಿ, ಉತ್ತಮಗಣಾಃ = ಉತ್ತಮವರ್ಗದವರೆಂದು, ಮತಾಃ = ತಿಳಿಯಲ್ಪಟ್ಟಿದ್ದಾರೋ, ತೇ = ಅಂತಹ ಮನುಷ್ಯೋತ್ತಮರು, ಮಂದಾಃ = ಅಧಮಾಧಿಕಾರಿಗಳು; ಋಷಿಗಂಧರ್ವಾಃ = ಋಷಿಗಳು ಮತ್ತು ಗಂಧರ್ವರು (ಪಿತೃಗಳು ಮತ್ತು ಚಕ್ರವರ್ತಿಗಳು), ಮಧ್ಯಮಾಃ = ಮಧ್ಯಮಾಧಿಕಾರಿಗಳು, ದೇವಾಃ = ಇಂದ್ರಾದಿದೇವತೆಗಳು, ಉತ್ತಮಾಃ = ಉತ್ತಮಾಧಿಕಾರಿಗಳು; ಇತಿ = ಹೀಗೆ, ಭೇದಃ = ಶಾಸ್ತ್ರಾಧಿಕಾರಿಗಳ ಪ್ರಕಾರವು, ಜಾತಿಕೃತಃ = ಜಾತಿಮೂಲಕವಾದದ್ದು.

ತಥಾ = ಇದರಂತೆ, ಗುಣಪೂರ್ವಕಃ = ಗುಣಮೂಲಕವಾದ, ಭೇದಃ = ವಿಭಾಗವು, ಅನ್ಯಃ = ಮತ್ತೊಂದು ಪ್ರಕಾರದಲ್ಲಿದೆ -

ಯತ್ತು = ಯಾರು, ಅಧ್ಯಯನವಾನ್ = ಸ್ವಶಾಖಾಧ್ಯಯನವುಳ್ಳವನಾಗಿ, ಪರಮೇ = ಉತ್ಕೃಷ್ಟವಾದ, ವಿಷ್ಣೌ = ಪರಮಾತ್ಮನಲ್ಲಿ, ಭಕ್ತಿಮಾನ್= ಭಕ್ತಿವುಳ್ಳವನೋ, ಸಃ = ಅವನು, ಅಧಮಃ = ಅಧಮಾಧಿಕಾರಿಯು, ಶಮಾದಿಸಂಯುಕ್ತಃ = ಹಿಂದೆ ಹೇಳಿದ ಎಲ್ಲ ಗುಣಗಳ ಜೊತೆಗೆ ಶಮದಮಾದಿಗುಣವನ್ನು ಹೊಂದಿದವನು, ಮಧ್ಯಮಃ = ಮಧ್ಯಮಾಧಿಕಾರಿಯು, ಯಃ = ಯಾರು, ಆಬ್ರಹ್ಮಸ್ತಂಬಪರ್ಯಂತಂ = ಚತುರ್ಮುಖದೇವರಿಂದ ಪ್ರಾರಂಭಿಸಿ ತೃಣಜೀವಿಪರ್ಯಂತವಾಗಿ, ಅಸಾರಂ = ಸಾರವಿಲ್ಲದ್ದು, ಚ = ಮತ್ತು, ಅನಿತ್ಯಕಮ್ = ನಾಶಶೀಲವಾದದ್ದೆಂದು, ವಿಜ್ಞಾಯ = ತಿಳಿದು, ಜಾತವೈರಾಗ್ಯಃ = ವಿರಕ್ತನಾಗಿ, ಸನ್ನ್ಯಸ್ತಾಖಿಲಕರ್ಮವಾನ್ = ಪ್ರವೃತ್ತಿಕರ್ಮಗಳನ್ನು ತೊರೆದು (ಎಲ್ಲ ಕರ್ಮಗಳನ್ನೂ ಭಗವಂತನೇ

ಮಾಡಿಸುತ್ತಾನೆ, ಮಾಡುವ ಕೆಲಸಗಳೆಲ್ಲವೂ ಭಗವಂತನ ಪೂಜೆ ಎಂಬ ನಿಷ್ಕಾಮಕರ್ಮವುಳ್ಳವನಾಗಿ), ವಿಷ್ಣುಪಾದೈಕಸಂಶ್ರಯಃ = ಭಗವಂತನೇ ಮುಖ್ಯವಾಗಿ ಆಶ್ರಯನೆಂದು ಶರಣಾಗತನಾದವನು, ಉತ್ತಮಃ = ಉತ್ತಮಾಧಿಕಾರಿಯು, ಇತಿ = ಹೀಗೆ.

## ಮೂರುಬಗೆಯ ಅಧಿಕಾರಿಗಳು

**तत्वप्रकाशिका – ननु कोऽसावधिकारः, कतिविधश्च ब्रह्मजिज्ञासायां ? यद् आनन्तर्यमथशब्दो वक्ति? इत्यत आह – अधिकारश्चेति ।।**

ಬ್ರಹ್ಮಜಿಜ್ಞಾಸಾವಿಷಯದಲ್ಲಿ ಯಾವ ಅಧಿಕಾರದ ಆನಂತರ್ಯವನ್ನು ಅಥಶಬ್ದ ಹೇಳುತ್ತಿದೆಯೋ ಅಂಥ ಅಧಿಕಾರ ಯಾವುದು? ಅದು ಎಷ್ಟು ಬಗೆ? ಎಂಬ ಪ್ರಶ್ನೆಗೆ 'ಅಧಿಕಾರಶ್ಚ' ಎಂಬ ಭಾಷ್ಯವು ಉತ್ತರಿಸುತ್ತಿದೆ.

**तत्वप्रकाशिका – अत्राधिकारिकथनेऽपि तद्विशेषणतयाऽधिकारोप्युक्तो भवति । अनेन मोक्षयोग्यत्वं सामान्यलक्षणमभिप्रेतम्।**

ಭಾಗವತತಂತ್ರದಲ್ಲಿ ಅಧಿಕಾರಿಯ ಬಗ್ಗೆ ಹೇಳಿದ್ದರೂ ವಿಶೇಷಣವಾದ ಅಧಿಕಾರವನ್ನು ಹೇಳಿದಂತಾಯಿತು. ಇದರಿಂದ ಮೋಕ್ಷಯೋಗ್ಯತ್ವವು ಅಧಿಕಾರಿಯ ಸಾಮಾನ್ಯಲಕ್ಷಣವೆಂದು ಅಭಿಪ್ರಾಯಪಟ್ಟಿದ್ದಾರೆ.

**तत्वप्रकाशिका – अस्य च सच्छूद्रादौ व्याप्तेः प्रायिकत्वादरुच्या प्रकारान्तरेणाधिकारिणः स्वरूपमाह – तथेति ।।**

ಈ ಮೋಕ್ಷಯೋಗ್ಯತೆ ಎಂಬ ಲಕ್ಷಣವು ಸಜ್ಜನರಾದ ಶೂದ್ರರಲ್ಲಿ ಮತ್ತು ಪಶು ಪಕ್ಷಿ ಮೊದಲಾದ ಜನ್ಮ ಪಡೆದವರಲ್ಲಿ ಬರುವುದರಿಂದ ಅಸಮಾಧಾನದಿಂದ ಮತ್ತೊಂದು ಪ್ರಕಾರದಲ್ಲಿ ಅಧಿಕಾರಿಗಳ ಸ್ವರೂಪವನ್ನು 'ತಥಾऽನ್ಯೋ' ಇತ್ಯಾದಿಯಾಗಿ ನಿರೂಪಿಸುತ್ತಿದ್ದಾರೆ.

**तत्वप्रकाशिका – अत्राध्ययनलब्धाऽपि विष्णुभक्तिरन्याप्याऽध्ययननिवृत्त्यर्थं पृथगुक्ता ।**

ಅಧ್ಯಯನ ಶಬ್ದದಲ್ಲಿಯೇ ವಿಷ್ಣುಭಕ್ತಿಯೂ ಸೇರಿದೆ. ಆದರೂ ವಿಷ್ಣುಭಕ್ತಿಯನ್ನು ಪ್ರತ್ಯೇಕವಾಗಿ ಹೇಳಲು ಕಾರಣವೇನೆಂದರೆ, ಅನ್ಯಾಯಮಾರ್ಗದಲ್ಲಿ ಅಧ್ಯಯನವನ್ನು ಮಾಡಿರಬಾರದೆಂದು ತಿಳಿಸಲು.

**तत्वप्रकाशिका – तथाच हरिभक्तिपूर्वकाध्ययनवत्त्वं सामान्यतो ब्रह्मविद्याऽधिकार इत्युक्तं भवति ।**

ಆದ್ದರಿಂದ ಹರಿಭಕ್ತಿಪೂರ್ವಕವಾದ ಅಧ್ಯಯನವೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರವೆಂದು ಹೇಳಿದಂತಾಯಿತು.

**तत्वप्रकाशिका – 'शमादिसंयुक्तः' इत्यादौ पूर्वसङ्ग्रहः, पूर्वत्र चोत्तरोक्तानुकर्षश्च कर्तव्यः । न चैवं साङ्कर्यम् । उत्तरोक्ताप्राचुर्येणासाङ्कर्यात् ।**

ಮಧ್ಯಮಾಧಿಕಾರಿಗಳ ಲಕ್ಷಣವನ್ನು 'ಶಮಾದಿಸಂಯುಕ್ತಃ' ಎಂದು ಹೇಳಿದ್ದಾರೆ. ಹಿಂದೆ ಹೇಳಿದ ಅಧಮಾಧಿಕಾರಿಗಳ ಲಕ್ಷಣವನ್ನು ಮಧ್ಯಮಾಧಿಕಾರಿಗಳಲ್ಲಿಯೂ ವಿವಕ್ಷಿಸಬೇಕು. ಮತ್ತು ಹಿಂದಿನವರ ಲಕ್ಷಣದ ಜೊತೆಗೆ ಮುಂದಿನವರ ಲಕ್ಷಣವನ್ನು ಆನುಕರ್ಷ ಮಾಡಬೇಕು. ಇದರಿಂದ ಎಲ್ಲ ಅಧಿಕಾರಿಗಳ ಗುಣಗಳಿಗೆ ಸಾಂಕರ್ಯ ಬರುವುದರಿಂದ ಲಕ್ಷಣವು ದುಷ್ಟವಾಗುತ್ತದೆಂದು ತಿಳಿಯಬಾರದು. ಮುಂದಿನ ಅಧಿಕಾರಿಗಳಲ್ಲಿ ಹೇಳಿದ ಲಕ್ಷಣವು ಹಿಂದಿನ ಅಧಿಕಾರಿಗಳಲ್ಲಿ ಪ್ರಚುರವಾಗಿ ಇರುವುದಿಲ್ಲ. ಆದ್ದರಿಂದ ಸಾಂಕರ್ಯದೋಷಕ್ಕೆ ಪ್ರಸಕ್ತಿ ಇಲ್ಲ.

**तत्वप्रकाशिका – ब्रह्माद्यसारता नाम तेषामसर्वोत्तमत्वं, तत्पदादीनां मोक्षावरत्वं च ज्ञेयम् ।**

'ಬ್ರಹ್ಮಾದ್ಯಸಾರತಾ' ಎಂಬ ಶಬ್ದಕ್ಕೆ ''ಬ್ರಹ್ಮಾದಿಗಳು ಸರ್ವೋತ್ತಮರಲ್ಲ; ಮತ್ತು ಅವರ ಸ್ಥಾನಗಳು ಮೋಕ್ಷಕ್ಕಿಂತ ಬಹಳ ನೀಚವಾಗಿರುತ್ತವೆ'' ಎಂದು ಅರ್ಥ.

## ಮುಕ್ತಿಯೋಗ್ಯತ್ವವು ಅಧಿಕಾರಿಲಕ್ಷಣವಾಗುತ್ತದೆಯೇ?

**भावदीपः – अनेनेति ।। 'मोक्षाधिकारिणः त्रिविधाः' इति वचनेन मुक्तियोग्यत्वं जिज्ञासामात्राधिकारिलक्षणं लब्धम् इत्यर्थः ।**

ಟೀಕೆಯಲ್ಲಿ 'ಅನೇನ ಮೋಕ್ಷಯೋಗ್ಯತ್ವಂ ಸಾಮಾನ್ಯಲಕ್ಷಣಮಭಿಪ್ರೇತಂ' ಎಂದು ಹೇಳಿದ್ದಾರೆ 'ಅನೇನ' ಎಂದರೆ ಮೋಕ್ಷಾಧಿಕಾರಿಗಳು ಮೂರು ವಿಧ ಎಂದು ಹೇಳಿದ್ದರಿಂದ ಎಂದರ್ಥ. ಹೀಗೆ ಹೇಳಿದ್ದರಿಂದ ವ್ಯಾಪ್ಯೆಯೋಚಿತ್ವವು ಜಿಜ್ಞಾಸೆಯಿರುವ ಅಧಿಕಾರಿಗಳಲ್ಲಿ ಇರಬೇಕಾದ ಸಾಮಾನ್ಯಲಕ್ಷಣವೆಂದು ಹೇಳಿದಂತಾಯಿತು.

## ಮುಕ್ತಿಯೋಗ್ಯತ್ವದ ವ್ಯಾಪ್ತಿ

**ಭಾವದೀಪಃ** – **व्याप्तेः** इति - व्याप्तिः व्यापिनम् । 'यस्य व्यापनं लक्ष्यमात्रेऽस्ति तद्धि लक्षणम् 'यो धर्मो लक्ष्ये व्याप्या वर्तते' इत्युक्तेः ।

ಟೀಕೆಯಲ್ಲಿ 'ಅಸ್ಯ ಚ ಸಚ್ಛೂದ್ರಾದೌ ವ್ಯಾಪ್ತೇಃ' ಎಂದು ಹೇಳಿದ್ದಾರೆ. ಇಲ್ಲಿರುವ ವ್ಯಾಪ್ತಿಶಬ್ದಕ್ಕೆ ಎಲ್ಲರಲ್ಲಿಯೂ ಇರುವುದರಿಂದ ಎಂದರ್ಥ. ಯಾವುದು ಲಕ್ಷ್ಯದಲ್ಲಷ್ಟೇ ಇರುತ್ತದೋ, ಅದು ಲಕ್ಷ್ಯವೆಂದು ಕರೆಸಿಕೊಳ್ಳುತ್ತದೆ. ಹೀಗೆ 'ಯೋ ಧರ್ಮೋ ಲಕ್ಷ್ಯೇ ವ್ಯಾಪ್ಯಾ ವರ್ತತೇ' ಇತ್ಯಾದಿಯಾಗಿ ಪ್ರಮಾಣ ಪದ್ಧತಿ ಗ್ರಂಥದಲ್ಲಿ ಹೇಳಿದ್ದಾರೆ.

## ಅಧಿಕಾರ ಲಕ್ಷಣಕ್ಕೆ ಅತಿವ್ಯಾಪ್ತಿ

**ಭಾವದೀಪಃ** – अस्य च मुक्तियोग्यत्वस्य व्याप्तिस्तु सच्छूद्रे असमर्थेषु अन्यार्थिष्विदानीन्तनपशुपक्ष्यादिष्वलक्ष्यभूतेषु बाहुल्येन वर्तते इति 'व्याप्तेः प्रायिकत्वात्' इत्युक्तम् ।

ಪ್ರಕೃತ ಮುಕ್ತಿಯೋಗ್ಯತ್ವ ಎಂಬ ಲಕ್ಷಣವು ಲಕ್ಷ್ಯದಲ್ಲಿ ಮಾತ್ರ ಇಲ್ಲದೇ ಸಜ್ಜನರಾದ ಶೂದ್ರರಲ್ಲಿ ಅಸಮರ್ಥವಾದ ಪಶು-ಪಕ್ಷಿ ಮುಂತಾದ ಜನ್ಮಪಡೆದವರಲ್ಲಿಯೂ ಬರುವುದರಿಂದ ಅಲಕ್ಷ್ಯದಲ್ಲಿಯೂ ಬಂದಂತಾಯಿತು. ಆದ್ದರಿಂದ 'ವ್ಯಾಪ್ತೇಃ ಪ್ರಾಯಿಕತ್ವಾತ್' ಎಂದು ಟೀಕೆಯಲ್ಲಿ ಹೇಳಿದ್ದಾರೆ.

**ಭಾವದೀಪಃ** – विदुरधर्मव्याधजरितार्यादौ ब्रह्मविद्याधिकारदृष्ट्या तत्र व्याप्तिरिष्टैव इत्यतः 'प्रायिकत्वात्' इत्युक्तम् ।

ವಿದುರ, ಧರ್ಮವ್ಯಾಧ, ಜರಿತಾರಿ ಪಕ್ಷಿ ಮೊದಲಾದವರಲ್ಲಿ ಬ್ರಹ್ಮವಿದ್ಯೆಯ ಅಧಿಕಾರವಿರುವುದು ಕಂಡಿದೆ. ಅವರಲ್ಲಿ ಅಧಿಕಾರಲಕ್ಷಣವಿರುವುದು ಇಷ್ಟವೇ ಆಗಿದೆ ಎಂಬ ಪ್ರಶ್ನೆಗೆ 'ಪ್ರಾಯಿಕತ್ವಾತ್' ಎಂದು ಉತ್ತರಿಸಿದ್ದಾರೆ.

**ಭಾವದೀಪಃ** – तानतिक्रम्यानुत्पन्नज्ञानेष्वपि बाहुल्येन वर्तमानत्वादित्यर्थः । सच्छूद्रादेः देहान्तरे वैदिकब्रह्मविद्याधिकारेपि नैतद्देहे अधिकारः । देहान्तरेऽधिकारश्च नेदानीं प्रवृत्त्युपयोगीत्यरुच्या इत्यर्थः ।

ವಿದುರಾದಿಗಳಷ್ಟೇ ಅಲ್ಲದೇ ಅನುತ್ಪನ್ನಜ್ಞಾನಿಗಳಾದ ಬೇರೆಯವರಲ್ಲಿಯೂ ಬಹುಳವಾಗಿ ಅಧಿಕಾರದ ಲಕ್ಷಣವು ಇರುವುದರಿಂದ ಎಂದರ್ಥ. ಸಜ್ಜನರಾದ ಶೂದ್ರರಲ್ಲಿ ಶೂದ್ರರಿಗೆ ದೇಹಾಂತರದಲ್ಲಿ ವೈದಿಕಬ್ರಹ್ಮವಿದ್ಯಾಧಿಕಾರವಿದ್ದರೂ ಈ ದೇಹದಲ್ಲಿ ಅಧಿಕಾರವಿರುವುದಿಲ್ಲ. ದೇಹಾಂತರದಲ್ಲಿರುವ ಅಧಿಕಾರವು ಪ್ರಕೃತ ಅಧ್ಯಯನಕ್ಕೆ ಅಧ್ಯಯನದ ಪ್ರವೃತ್ತಿಗೆ ಉಪಯೋಗಿಯಾಗುವುದಿಲ್ಲ. ಹೀಗೆ ಅಸ್ವಾರಸ್ಯವಿರುವುದರಿಂದ ಎಂಬುದನ್ನು 'ಅರುಚ್ಯಾ' ಎಂಬುದರಿಂದ ಹೇಳಿರುತ್ತಾರೆ.

**ಭಾವದೀಪಃ** – प्रकारान्तरेणाधिकारिस्वरूपमिति । एतच्च वेदजिज्ञासारूपजिज्ञासा-विशेषाभिप्रायम् ।

ಮೇಲೆ ಹೇಳಿದಂತೆ ಅತಿವ್ಯಾಪ್ತಿದೋಷವು ಬರುವುದರಿಂದ ಮತ್ತೊಂದು ರೀತಿಯಲ್ಲಿ ಅಧಿಕಾರಿಗಳ ಸ್ವರೂಪವನ್ನು ಹೇಳಲು 'ಪ್ರಧಾನ್ಯೋಗುಣಪೂರ್ವಕಃ' ಇತ್ಯಾದಿ ಭಾಷ್ಯವಾಕ್ಯವು ಹೊರಟಿದೆ. ಹಿಂದೆ ಹೇಳಿದ್ದು ಅಧಿಕಾರಿಗಳಲ್ಲಿ ಜಾತಿನಿಮಿತ್ತವಾದ ಪ್ರಭೇದ. ಈಗ ಅದಕ್ಕಿಂತ ವಿಭಿನ್ನವಾಗಿ ಗುಣನಿಮಿತ್ತವಾದ ಪ್ರಭೇದವನ್ನು ಹೇಳಿದ್ದಾರೆ.

## ಅಪಶೂದ್ರಾಧಿಕರಣದಿಂದ ಅಥಶಬ್ದಾರ್ಥವು ಗತಾರ್ಥವಲ್ಲ

**ಭಾವದೀಪಃ** – ननु मुक्तियोग्यत्वमेवाधिकारिलक्षणमस्तु । 'शुगस्य' इति वक्ष्यमाणापशूद्राधिकरणन्यायेनाधिकारस्य त्रैवर्णिकमात्रपर्यवसानोपपत्तेः । व्यर्थश्चायम् अथशब्दः । जीवान्यविषयार्पकब्रह्मपदेनैव मुमुक्षुमात्राधिकारिणः तदपशूद्रत्वस्यापशूद्रनयन्यायेनैव लाभसम्भवात् । तत्

सिद्धस्यैवापशूद्राधिकारस्यात्र सूचनम्' इत्यपि नातीव तुष्टिकरम् । तथा 'अन्यो गुणपूर्वकः' इत्यादिभाष्यं च व्यर्थम् । 'अरुच्या इत्यादि टीका चायुक्ता' इति कस्यचिद्बोद्यमयुक्तम् ।

ಮುಕ್ತಯೋಗ್ಯತ್ವವೇ ಅಧಿಕಾರಿಯ ಲಕ್ಷಣವೆಂದು ಪರಿಗಣಿಸಿದರೆ ತಪ್ಪಿಲ್ಲ. ಏಕೆಂದರೆ ಅಪಶೂದ್ರಾಧಿಕರಣದಲ್ಲಿರುವ 'ಶುಗಸ್ಯ' ಇತ್ಯಾದಿ ಸೂತ್ರದಲ್ಲಿ ಅಧಿಕಾರವು ತ್ರೈವರ್ಣಿಕರಿಗಷ್ಟೇ ಇರುತ್ತದೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಅದೇ ವಿಷಯವನ್ನು ಇಲ್ಲಿ 'ಅಥ' ಶಬ್ದದಿಂದ ತಿಳಿಸುವ ಅವಶ್ಯಕತೆಯಿರುವುದಿಲ್ಲ. ಮತ್ತು ಸೂತ್ರದಲ್ಲಿರುವ ಬ್ರಹ್ಮಪದದಿಂದ ಜೀವನಿಗಿಂತ ಭಿನ್ನನಾದ ಬ್ರಹ್ಮನು ಜಿಜ್ಞಾಸ್ಯನೆಂದು ಮುಮುಕ್ಷುನಾದವನು ಅಧಿಕಾರಿಯೆಂದು ಸಹಜವಾಗಿ ಸಿದ್ಧವಾಗುತ್ತದೆ. ಇದು ಶೂದ್ರನಲ್ಲಿ ಇರಬಾರದೆಂಬುದು ಅಪಶೂದ್ರಾಧಿಕರಣ ನ್ಯಾಯದಿಂದಲೇ ಸಿದ್ಧವಾಗುತ್ತದೆ. ಆದ್ದರಿಂದ ಅಪಶೂದ್ರಾಧಿಕರಣದಿಂದ ಸಿದ್ಧವಾದ ವಿಚಾರವನ್ನೇ ಪುನಃ ಇದನ್ನು 'ಅಥ'ಶಬ್ದದಿಂದ ಸೂಚನೆ ಮಾಡುವುದು ಸಂತೋಷ ನೀಡುವ ವಿಚಾರವಲ್ಲ. ಮತ್ತು 'ಅನ್ಯೋ ಗುಣಪೂರ್ವಕಃ' ಇತ್ಯಾದಿ ಭಾಷ್ಯವೂ ಕೂಡ ವ್ಯರ್ಥವಾಗಿದೆ. 'ಅರುಚ್ಯಾ' ಇತ್ಯಾದಿ ಟೀಕಾ ವಾಕ್ಯವೂ ಕೂಡ ಅಯುಕ್ತವಾಗಿದೆ. ಹೀಗೆ ಕೆಲವರು ಆಕ್ಷೇಪ ಮಾಡುತ್ತಾರೆ. ಇದು ತಪ್ಪು.

## ಅಥಶಬ್ದಾರ್ಥದ ವ್ಯಾಪ್ತಿ

**भावदीपः** – त्वदुक्तदिशा त्रैवर्णिकाधिकारलाभेऽपि त्रैवर्णिकेष्वपि केषाञ्चिदनधिकारिणां भावेन तत्परिवर्जनस्यापशूद्रनयेनाप्राप्तेः ।

ಇವರ ಪ್ರಕಾರ ತ್ರೈವರ್ಣಿಕರಿಗೆ ಅಪಶೂದ್ರಾಧಿಕರಣದಿಂದ ಅಧಿಕಾರವು ಲಾಭವಾದರೂ ತ್ರೈವರ್ಣಿಕರಿಗೆಲ್ಲಾ ವೇದಾಧಿಕಾರವಿರುವುದಿಲ್ಲ. ಅವರಲ್ಲಿಯೂ ಕೆಲವರು ಅನಧಿಕಾರಿಗಳಿರುತ್ತಾರೆ. ಈ ವಿಷಯವು ಅಪಶೂದ್ರಾಧಿಕರಣದಿಂದ ಸಿದ್ಧವಾಗುವುದಿಲ್ಲ.

**भावदीपः** – 'अध्ययनमात्रवतः' इत्यधिकरणे तादृशाधिकारिविशेषस्य प्राप्तत्वेपि, तस्यैवेह 'तथाऽन्यो गुणपूर्वकः' इत्यादिभाष्येण विविच्य कीर्तनात् ।

'ಅಧ್ಯಯನಮಾತ್ರವತಃ' ಎಂಬ ಅಧಿಕರಣದಲ್ಲಿ ಅಂತಹ ಅಧಿಕಾರಿವಿಶೇಷವು ಪ್ರಾಪ್ತವಾದರೂ ಅದನ್ನೇ ಇಲ್ಲಿ 'ತಥಾऽನ್ಯೋ ಗುಣಪೂರ್ವಕಃ' ಇತ್ಯಾದಿ ಭಾಷ್ಯದಿಂದ ಸ್ಪಷ್ಟಪಡಿಸಿದ್ದಾರೆ.

**ಭಾವದೀಪಃ – श्रोतृप्रवृत्तिसौकर्याय वक्ष्यमाणस्यैवादौ अथपदेन निर्देशोपपत्तेश्च, इत्यथशब्दो अर्थवानेव । भाष्यं चार्थवत् । तदेतदाह । सच्छूद्रादौ इत्यादिपदेन । अन्यथा सच्छूद्र इत्येवावक्ष्यत् ।**

ಶ್ರೋತೃಗಳ ಪ್ರವೃತ್ತಿಯ ಸೌಕರ್ಯಕ್ಕೋಸ್ಕರ ಮುಂದೆ ಹೇಳುವ ವಿಚಾರವನ್ನು ಮೊದಲು 'ಅಥ' ಪದದಿಂದ ನಿರ್ದೇಶ ಮಾಡುವುದು ಉಪಪನ್ನವಾಗಿದೆ. ಆದ್ದರಿಂದ 'ತಥಾऽನ್ಯೋ ಗುಣಪೂರ್ವಕಃ' ಎಂಬ ಭಾಷ್ಯವೂ ಕೂಡ ವ್ಯರ್ಥವಲ್ಲ. 'ಅಥ' ಶಬ್ದವೂ ಕೂಡ ವ್ಯರ್ಥವಲ್ಲ. ಇದನ್ನೇ ಟೀಕೆಯಲ್ಲಿ 'ಸಚ್ಛೂದ್ರಾದೌ' ಎಂದು ಆದಿಪದದಿಂದ ಹೇಳಿರುತ್ತಾರೆ. ಇಲ್ಲದಿದ್ದರೆ 'ಸಚ್ಛೂದ್ರ' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು.

## ತ್ರೈವರ್ಣಿಕರಲ್ಲಿ ಎಲ್ಲರಿಗೂ ವೇದಾಧಿಕಾರವಿಲ್ಲ

**ಭಾವದೀಪಃ – तथा च त्रैवर्णिकमात्राधिकारित्वेऽपि –**

'अवैष्णवस्य वेदेऽपि ह्यधिकारो न विद्यते ।
गुरुभक्तिविहीनस्य शमादिरहितस्य च ।।'

इत्यादिप्रमाणविरोधात् मुक्तियोग्यत्रैवर्णिकमात्रस्यापि न वेदजिज्ञासाधिकारि ।

ಆದ್ದರಿಂದ ತ್ರೈವರ್ಣಿಕರು ಅಧಿಕಾರಿಗಳಾಗುವುದಾದರೂ ಕೂಡ ಎಲ್ಲರಿಗೂ ಅಧಿಕಾರವಿರುವುದಿಲ್ಲ.

'ಅವೈಷ್ಣವಸ್ಯ ವೇದೇऽಪಿ ಹ್ಯಧಿಕಾರೋ ನ ವಿದ್ಯತೇ।
ಗುರುಭಕ್ತಿವಿಹೀನಸ್ಯ ಶಮಾದಿರಹಿತಸ್ಯ ಚ ॥'

ಜಿಜ್ಞಾಸಾಧಿಕರಣ (೧-೧-೧)

ತ್ರೈವರ್ಣಿಕನಾಗಿದ್ದರೂ ವಿಷ್ಣುಭಕ್ತನಾಗದಿದ್ದರೆ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ. ಮತ್ತು ಶಮದಮಾದಿಗುಣಗಳಿಂದ ರಹಿತನಾದವನಿಗೆ ಗುರುಭಕ್ತಿವಿಹೀನನಾದವನಿಗೂ ವೇದವಿದ್ಯೆಯಲ್ಲಿ ಅಧಿಕಾರವಿರುವುದಿಲ್ಲ.

ಇವೇ ಮೊದಲಾದ ಪ್ರಮಾಣವಿರೋಧ ಬರುವುದರಿಂದ ಮುಕ್ತಿಯೋಗ್ಯರಾದ ತ್ರೈವರ್ಣಿಕರೆಲ್ಲರಿಗೂ ವೇದಜಿಜ್ಞಾಸೆಯಲ್ಲಿ ಅಧಿಕಾರವಿರುವುದಿಲ್ಲವೆಂದು ನಿರ್ಣಯವಾಗುತ್ತದೆ.

**ಭಾವದೀಪಃ** – ಕಿನ್ತು 'ರಾಜಸೂಯಾದೌ ರಾಜತ್ವಾದಿಮಾನಿವ, 'ತಥಾನ್ಯಃ' ಇತ್ಯಾದಿ ವಚನಸಿದ್ಧಶಾನ್ತ್ಯಾದಿಮಾನಪಿ' ಇತಿ ವಕ್ತುಂ ಪ್ರಕಾರಾನ್ತರೇಣಾಧಿಕಾರಸ್ವರೂಪಮಾಹ ಇತಿ ಟೀಕಾರ್ಥೋ ಬೋಧ್ಯಃ ।।

ಆದ್ದರಿಂದ ರಾಜಸೂಯಯಾಗ ಮಾಡಲು ರಾಜನೇ ಆಗಿರಬೇಕೆಂಬ ನಿಯಮ ಹೇಗಿದೆಯೋ, ಆದೇರಿತಿಯಾಗಿ 'ತಥಾऽನ್ಯೋ ಗುಣಪೂರ್ವಕಃ' ಇತ್ಯಾದಿ ಮಾತಿನಿಂದ ಶಮದಮಾದಿ ಗುಣಸಂಪದ್ಭರಿತನಾದವನು ಮಾತ್ರ ಅಧಿಕಾರಿಯಾಗಿರುತ್ತಾನೆಂದು ಸಿದ್ಧವಾಗುತ್ತದೆ. ಹೀಗೆ ಮತ್ತೊಂದು ಪ್ರಕಾರದಿಂದ ಅಧಿಕಾರಸ್ವರೂಪವನ್ನು ಹೇಳಿದ್ದಾರೆಂದು ಟೀಕೆಯ ಅಭಿಪ್ರಾವನ್ನು ತಿಳಿಯಬೇಕು.

## ಅಧ್ಯಯನಗಳೆಲ್ಲವೂ ಸಾರ್ಥಕವಲ್ಲ

**ಭಾವದೀಪಃ – ಅಧ್ಯಯನಲಬ್ಧಾಪೀತಿ ।।**

> ಅವೈಷ್ಣವಸ್ಯ ವೇದೇऽಪಿ ह्यधिकारो न विद्यते ।
> ಗುರುಭಕ್ತಿವಿಹೀನಸ್ಯ ಶಮಾದಿರಹಿತಸ್ಯ ಚ ।
> ನ ಚ ವರ್ಣಾವರಸ್ಯಾಪೀತ್ಯಧ್ಯಯನಮಾತ್ರವತಃ ।।'

ಇತ್ಯತ್ರ ಭಾಷ್ಯೋಕ್ತದಿಶಾ ಇತಿ ಭಾವಃ ।। **'ಭಕ್ತಿಃ'** ಇತ್ಯುಪಲಕ್ಷಣಮ್ । ಅಧ್ಯಯನವಾನ್' ಇತ್ಯಸ್ಯ ಅಗ್ರೇऽಪ್ಯನ್ವಯಾತ್ । ಅಧ್ಯಯನಲಬ್ಧೋऽಪಿ ಶಮಾದಿರಿತ್ಯಪಿ ಧ್ಯೇಯಮ್ । **ಅನ್ಯಾ(ಧ್ಯೇ)ಯೇತಿ** ।। ಅಭಕ್ತಾನಧಿಕಾರಿಕೃತತ್ವಾದಿಕಮನ್ಯಾಧ್ಯಮ್ ।

**हरिभक्तीति ।। शमादिकमपि अत्र ग्राह्यम् । अध्ययनशमादिवैराग्येष्वन्यतम-प्राचुर्येण त्रिविधाधिकारि व्यवस्थोक्तिरग्रेतनवाक्यानुरोधात् । उत्तरोक्तेति ।। पूर्वपूर्वमस्मिन्' इति शेषः ।**

ಟೀಕೆಯಲ್ಲಿ 'अत्र अध्ययनलब्धापि विष्णुभक्तिः' ಎಂದು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ -

'अवैष्णवस्य वेदेऽपि ह्यधिकारो न विद्यते ।
गुरुभक्तिविहीनस्य शमादिरहितस्य च ।
न च वर्णावरस्यापीत्यध्ययनमात्रवतः ।।'

ವಿಷ್ಣುಭಕ್ತಿ, ಗುರುಭಕ್ತಿ, ಶಮದಮಾದಿಗುಣಗಳಿಲ್ಲದವನಿಗೆ ವೇದಾದಿಗಳ ಅಧ್ಯಯನಕ್ಕೆ ಅಧಿಕಾರವಿಲ್ಲ ಎಂದು ಭಾಷ್ಯೋಕ್ತ ಮಾತು ತಿಳಿಸುತ್ತಿರುವುದರಿಂದ ಅಧ್ಯಯನವುಳ್ಳವನು ಎಂದರೆ ವಿಷ್ಣುಭಕ್ತಿ ಉಳ್ಳವನು ಎಂದೂ ಕೂಡ ಸಿದ್ಧವಾಗುತ್ತದೆ. ಆದ್ದರಿಂದ ವಿಷ್ಣುಭಕ್ತಿವುಳ್ಳವನು ಮತ್ತು ಅಧ್ಯಯನವುಳ್ಳವನು ಎಂದು ಪ್ರತ್ಯೇಕವಾಗಿ ಏಕೆ ಹೇಳಿದರು? ಯಾರಿಗೆ ವಿಷ್ಣುಭಕ್ತಿಯಿರುವುದಿಲ್ಲವೋ, ಮತ್ತು ಯಾರಿಗೆ ಅಧಿಕಾರವಿರುವುದಿಲ್ಲವೋ, ಅವರು ಅಧ್ಯಯನವನ್ನ ಮಾಡಿದರೂ ಅದು ಬ್ರಹ್ಮವಿದ್ಯೆಗೆ ಅಧಿಕಾರವಾಗುವುದಿಲ್ಲ. ಮತ್ತು ಭಕ್ತರಾಗಿದ್ದರೂ ಅಕಾಲದಲ್ಲಿ ಮಾಡಿದ ಅಧ್ಯಯನವು ವ್ಯರ್ಥ. ಅಯೋಗ್ಯಪುರುಷದಿಂದ ಮಾಡಿದ ಅಧ್ಯಯನವೂ ವ್ಯರ್ಥ. ಅಥವಾ ಗುರುಗಳಿಲ್ಲದ ಮಾಡಿದ ಅಧ್ಯಯನವೂ ಕೂಡ ವ್ಯರ್ಥ. ಇದನ್ನು ತಿಳಿಸುವುದಕ್ಕಾಗಿಯೇ ವಿಷ್ಣುಭಕ್ತಿವಾನ್ ಮತ್ತು ಅಧ್ಯಯನವಾನ್ ಎಂದು ಬೇರೆ ಬೇರೆಯಾಗಿ ಹೇಳಿರುತ್ತಾರೆ. ಆದ್ದರಿಂದ ಹರಿಭಕ್ತಪೂರ್ವಕವಾಗಿ ಶಮದಮಾದಿ ವೈರಾಗ್ಯಾದಿಗಳನ್ನು ಹೊಂದಿ ಅಧ್ಯಯನ ಮಾಡುವಿಕೆಯೇ ಸಾಮಾನ್ಯವಾದ ಬ್ರಹ್ಮವಿದ್ಯೆಯ ಅಧಿಕಾರವೆಂದು ಹೇಳಿದಂತಾಗುತ್ತದೆ.

ಮಧ್ಯಮಾಧಿಕಾರಿಯ ಲಕ್ಷಣದಲ್ಲಿ 'ಭಕ್ತಿಮಾನ್ ಪರಮೇ ವಿಷ್ಣೌ ಯಸ್ತು ಅಧ್ಯಯನವಾನ್ ನರಃ' ಎಂಬ ಅಧಮಾಧಿಕಾರಿಯ ಲಕ್ಷಣದಲ್ಲಿ ಹೇಳಲ್ಪಟ್ಟ ಭಕ್ತಿಪೂರ್ವಕ ಅಧ್ಯಯನಾದಿಗಳನ್ನೂ ಕೂಡ ವಿವಕ್ಷಿಸಬೇಕು. ಆದರಂತೆ 'ಜಾತವೈರಾಗ್ಯ'

'ವಿಷ್ಣುಪಾದೈಕಸಂಶ್ರಯತ್ವ' ಎಂಬ ಉತ್ತಮಾಧಿಕಾರಿಯ ಲಕ್ಷಣದಲ್ಲಿ ಹಿಂದೆ ಹೇಳಿದ ಅಧಮಾಧಿಕಾರಿ, ಮತ್ತು ಮಧ್ಯಮಾಧಿಕಾರಿಗಳ ಲಕ್ಷಣವಾಗಿರುವ ಭಕ್ತಿಪೂರ್ವಕ ಅಧ್ಯಯನ ಶಮದಮಾದಿಗಳನ್ನು ವಿವಕ್ಷಿಸಬೇಕು. ಇದರಂತೆ ಭಕ್ತಿಮಾನ್ ಎಂಬ ಅಧಮಾಧಿಕಾರಿ ಲಕ್ಷಣದಲ್ಲಿ ಮುಂದೆ ಹೇಳಿರುವ ಶಮಾದಿಸಂಯುಕ್ತತ್ವ, 'ವಿಷ್ಣುಪಾದೈಕಸಂಶ್ರಯತ್ವ' ಎಂಬ ಮಧ್ಯಮಾಧಿಕಾರಿ, ಉತ್ತಮಾಧಿಕಾರಿಯ ಲಕ್ಷಣವನ್ನು ಸೇರಿಸಿಕೊಳ್ಳಬೇಕು. 'ಶಮಾದಿಸಂಯುಕ್ತಃ' ಎಂಬ ಮಧ್ಯಮಾಧಿಕಾರಿಯ ಲಕ್ಷಣದಲ್ಲಿ ಮುಂದಿರುವ 'ಜಾತವೈರಾಗ್ಯ' 'ವಿಷ್ಣುಪಾದೈಕಸಂಶ್ರಯತ್ವ' ಎಂಬ ಉತ್ತಮಾಧಿಕಾರಿಯ ಲಕ್ಷಣವನ್ನು ಸೇರಿಸಿಕೊಳ್ಳಬೇಕು.

ಹೀಗೆ ಅಧಮಾಧಿಕಾರಿಯ ಲಕ್ಷಣವನ್ನು ಮಧ್ಯಮಾಧಿಕಾರಿ ಹಾಗೂ ಉತ್ತಮಾಧಿಕಾರಿಯ ಲಕ್ಷಣದ ಜೊತೆ ಅದರಂತೆ ಮಧ್ಯಮಾಧಿಕಾರಿ ಮತ್ತು ಉತ್ತಮಾಧಿಕಾರಿಯ ಲಕ್ಷಣವನ್ನು ಅಧಮಾಧಿಕಾರಿಯ ಲಕ್ಷಣದಜೊತೆ ಸೇರಿಸಿದಾಗ, ಎಲ್ಲಾ ಲಕ್ಷಣಗಳೂ ಎಲ್ಲಾ ಅಧಿಕಾರಗಳಲ್ಲಿಯೂ ಬರುವುದರಿಂದ ಸಾಂಕರ್ಯದೋಷ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು.

ಏಕೆಂದರೆ ಹಿಂದೆ ಹೇಳಿದ ಲಕ್ಷಣಗಳಲ್ಲಿ ಮುಂದೆ ಹೇಳಿದ ಲಕ್ಷಣಗಳ ಅಪ್ರಾಚುರ್ಯದಿಂದ ಸಾಂಕರ್ಯದೋಷವು ಪರಿಹಾರವಾಗುತ್ತದೆ.

## ಮೂರು ಬಗೆಯ ಅಧಿಕಾರಿಗಳ ಸ್ಪಷ್ಟ ಲಕ್ಷಣ

**ಭಾವದೀಪಃ** – ತತಶ್ಚಾಯಮರ್ಥಃ – ಸಮಾನಾಧಿಕರಣಾನಾಮಧ್ಯಯನಶಮಾದಿವಿಷ್ಣುಪಾದೈಕ-ಸಂಶ್ರಯತ್ವಾದೀನಾಂ ಮಧ್ಯೇ ಯಸ್ಯಾಧ್ಯಯನಂ ಪ್ರಚುರಮನ್ಯದಪ್ರಚುರಂ ಸೋऽಧಮಃ । ಯಸ್ಯ ವಿಷ್ಣುಪಾದೈಕಸಂಶ್ರಯತ್ವಾದಿಕಮೇವಾಪ್ರಚುರಮಧ್ಯಯನಶಮಾದಿಕೇ ತು ಪ್ರಚುರೇ ಸ ಮಧ್ಯಮಃ । ಯಸ್ಯ ವಿಷ್ಣುಪಾದೈಕಸಂಶ್ರಯತ್ವಾದಿಕಮೇವ ಪ್ರಚುರಮ್ ಅಧ್ಯಯನಶಮಾದಿಕೇ ತ್ವಪ್ರಚುರೇ ಸ ಉತ್ತಮಃ ಇತಿ । ಭಾಷ್ಯೇ 'ಸನ್ಯಸ್ತಾ' ಇತಿ 'ವಿಷ್ಣವರ್ಪಿತಾ' ಇತ್ಯರ್ಥಃ ।

ಒಟ್ಟು ಇಷ್ಟು ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯಬೇಕು.

೧. ಅಧಮಾಧಿಕಾರಿ - ಅಧ್ಯಯನ, ಶಮದಮಾದಿಗುಣಗಳು, ವಿಷ್ಣುಪಾದೈಕಸಂಶ್ರಯತ್ವ ಇವುಗಳ ಮಧ್ಯದಲ್ಲಿ ಯಾರಿಗೆ ಅಧ್ಯಯನವು ಪ್ರಚುರವಾಗಿದ್ದು ಶಮಾದಿದಮಾದಿಗುಣಗಳು ಹಾಗೂ ವಿಷ್ಣುಪಾದೈಕಸಂಶ್ರಯತ್ವವು ಅಪ್ರಚುರವಾಗಿರುತ್ತದೋ, ಅವನು ಅಧಮಾಧಿಕಾರಿ.

೨. ಮಧ್ಯಮಾಧಿಕಾರಿ - ಯಾವ ವ್ಯಕ್ತಿಯಲ್ಲಿ ವಿಷ್ಣುಪಾದೈಕಸಂಶ್ರಯತ್ವವು ಅಪ್ರಚುರವಾಗಿದ್ದು, ಶಮದಮಾದಿಗುಣಗಳು ಹಾಗೂ ಅಧ್ಯಯನವು ಪ್ರಚುರವಾಗಿರುತ್ತದೋ, ಅವನು ಮಧ್ಯಮಾಧಿಕಾರಿ.

೩. ಉತ್ತಮಾಧಿಕಾರಿ - ಯಾವ ವ್ಯಕ್ತಿಯಲ್ಲಿ ವಿಷ್ಣುಪಾದೈಕಸಂಶ್ರಯತ್ವವೇ ಹೆಚ್ಚಾಗಿದ್ದು, ಅಧ್ಯಯನ ಹಾಗೂ ಶಮದಮಾದಿಗಳು ಅಪ್ರಚುರವಾಗಿರುತ್ತವೋ, ಅವನು ಉತ್ತಮಾಧಿಕಾರಿ.

ಭಾಷ್ಯದಲ್ಲಿ 'ಸನ್ನ್ಯಸ್ತ' ಎಂಬ ಪದಕ್ಕೆ 'ವಿಷ್ಣುವಿನಲ್ಲಿ ಅರ್ಪಣೆ ಮಾಡಲ್ಪಟ್ಟ' ಎಂಬರ್ಥವನ್ನು ತಿಳಿಯಬೇಕು.

ವಿವರಣೆ - 'ಅಥ ಅತಃ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದ ವ್ಯಾಖ್ಯಾನ ಮಾಡುವಾಗ ಶ್ರೀಮದಾಚಾರ್ಯರು 'ಅಥ' ಶಬ್ದದ ವಿವರಣೆಯನ್ನು ಹೀಗೆ ಮಾಡಿದ್ದಾರೆ.

ಬ್ರಹ್ಮನ ಬಗ್ಗೆ ವಿಚಾರ ಮಾಡುವಾಗ ಅಧಿಕಾರಿಗಳು ಉತ್ತಮ - ಮಧ್ಯಮ - ಅಧಮ ಎಂಬುದಾಗಿ ಮೂರು ಬಗೆಯಾಗಿ ಇದ್ದಾರೆ. ದೇವತೆಗಳು ಬ್ರಹ್ಮಜ್ಞಾನದ ಸಂಪಾದನೆಯಲ್ಲಿ ಉತ್ತಮಾಧಿಕಾರಿಗಳು. ಋಷಿಗಂಧರ್ವರು ಮಧ್ಯಮಾಧಿಕಾರಿಗಳು; ಮನುಷ್ಯೋತ್ತಮರು ಉತ್ತಮಾಧಿಕಾರಿಗಳು. ಇದು ಜಾತ್ಯಾಧಾರಿತವಾದ ಅಧಿಕಾರಿಗಳ ವಿಂಗಡನೆ. ''ಮುಕ್ತಿಯೋಗ್ಯರೇ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಗಳು'' ಎಂಬುದು ಒಟ್ಟು ತಾತ್ಪರ್ಯ.

ಆದರೆ ಇಲ್ಲಿ ಒಂದು ಸಮಸ್ಯೆ ಇದೆ. ಮುಕ್ತಿಯೋಗ್ಯರಾದ ದೇವತೆಗಳು ಋಷಿಗಳು ಶಾಪವೇ ಮೊದಲಾದ ಯಾವುದೋ ನಿಮಿತ್ತದಿಂದ ಭೂಮಿಯಲ್ಲಿ ಶೂದ್ರರಾಗಿ ಅಥವಾ ಅದಕ್ಕಿಂತ ಕೆಳವರ್ಗದಲ್ಲಿ ಅಥವಾ ಪಶುಪಕ್ಷಿಗಳಾಗಿ ಜನಿಸುವುದು ಕಂಡಿದೆ. ಅಂತಹ ಪ್ರಸಂಗದಲ್ಲಿ ಅವರು ಮುಕ್ತಿಯೋಗ್ಯರಾದರೂ ವೇದ ಮತ್ತು ಬ್ರಹ್ಮಸೂತ್ರಗಳ ಮೂಲಕ

ಬ್ರಹ್ಮಜ್ಞಾನಸಂಪಾದನೆಗೆ ಅರ್ಹರಾಗಿರುವುದಿಲ್ಲ. ಮುಕ್ತಿಯೋಗ್ಯರು ಬ್ರಹ್ಮಜಿಜ್ಞಾಸೆಗೆ ಅಧಿಕಾರಿಗಳು ಎಂದರೆ, ಇಂತಹ ಸಚ್ಛೂದ್ರಾದಿಗಳಲ್ಲಿ ಅತಿವ್ಯಾಪ್ತಿ ಬರುತ್ತದೆ. ಆದ್ದರಿಂದ ಇನ್ನೊಂದು ಬಗೆಯಿಂದ ಭಾಷ್ಯಕಾರರು ಅಧಿಕಾರವನ್ನು ನಿರೂಪಿಸಿದ್ದಾರೆಂದು ಟೀಕೆಯಲ್ಲಿದೆ.

ಗುಣಗಳ ಆಧಾರದಿಂದ ಬ್ರಹ್ಮಜ್ಞಾನಕ್ಕೆ ಮೂರು ಬಗೆಯ ಅಧಿಕಾರಿಗಳಿದ್ದಾರೆ. ವಿಷ್ಣುಭಕ್ತಿಯುಳ್ಳವರು ವೇದಾಧ್ಯಯನಸಂಪನ್ನರು (ಅಂದರೆ ಕೇವಲ ತ್ರೈವರ್ಣಿಕರು ಮಾತ್ರವೇ) ಬ್ರಹ್ಮಜಿಜ್ಞಾಸೆಗೆ ಅಧಮಾಧಿಕಾರಿಗಳೆನಿಸಿದ್ದಾರೆ. ಈ ಗುಣಗಳ ಜೊತೆಗೆ ಹೆಚ್ಚಿನ ಶಮದಮಾದಿಗುಣಸಂಪನ್ನರು ಮಧ್ಯಮಾಧಿಕಾರಿಗಳಾಗಿದ್ದಾರೆ. ವಿಶ್ವವೆಲ್ಲ ಅಸಾರವೆಂದರಿತು ವಿರಕ್ತರಾಗಿ ಹರಿಚರಣಶರಣರಾದವರು ಉತ್ತಮಾಧಿಕಾರಿಗಳೆನ್ನಿಸಿದ್ದಾರೆ. ಈ ಅಧಿಕಾರಿಗಳಲ್ಲಿ ಎಲ್ಲರಲ್ಲೂ ಎಲ್ಲರ ಗುಣಗಳಿದ್ದರೂ ಉತ್ತಮಾಧಿಕಾರಿಗಳ ಗುಣ ಮಧ್ಯಮ, ಅಧಮರಲ್ಲಿ ಕಮ್ಮಿ ಇರುವ ಹಿನ್ನೆಲೆಯಲ್ಲಿ, ಹಿಂದಿನವರ ಗುಣಗಳ ಜೊತೆಗೆ ಆಯಾಯಾ ಅಧಿಕಾರಿಗಳಲ್ಲಿ ತಿಳಿಸಿದ ಗುಣಗಳು ವ್ಯಾಪಕವಾಗಿರುವ ಕಾರಣ ಲಕ್ಷಣಸಾಂಕರ್ಯವಿಲ್ಲ.

ಪ್ರಕೃತ ತ್ರೈವರ್ಣಿಕರಿಗೆ ಮಾತ್ರವೇ ವೇದಾಧಿಕಾರವಿರುವುದರಿಂದ, ದೇವತೆಗಳೇ ಮೊದಲಾದವರು ಶೂದ್ರ ಅಥವಾ ಪಶುಜನ್ಮ ಪಡೆದಾಗ ವೇದವಿದ್ಯಾಧಿಕಾರಿಗಳಾಗುವುದಿಲ್ಲ. ಉತ್ತಮ ಜನ್ಮ ಪಡೆದಾಗ ವೇದಾಧಿಕಾರ ಮತ್ತು ಅದರ ಸಹಾಯದಿಂದ ಬ್ರಹ್ಮಜಿಜ್ಞಾಸಾಧಿಕಾರ ಇರುವುದಾದರೂ ಶೂದ್ರಾದಿಗಳಿಗೆ ಆಯಾಯ ಜನ್ಮದಲ್ಲಿ ವೇದಾಧ್ಯಯನದ ಮೂಲಕ ಬ್ರಹ್ಮಜ್ಞಾನಸಂಪಾದನೆಗೆ ಅವಕಾಶವಿರುವುದಿಲ್ಲ.

ಆದ್ದರಿಂದ ಜಾತಿಕೃತ ಅಧಿಕಾರವಿಭಾಗದಲ್ಲಿ 'ಮುಕ್ತಿಯೋಗ್ಯರು ಬ್ರಹ್ಮಜಿಜ್ಞಾಸಾಧಿಕಾರಿಗಳು' ಎಂದಾಗ ಮುಕ್ತಿಯೋಗ್ಯರಾದ ಅವರ (ಕೆಳಗಿನ) ವರ್ಣದವರಿಗೂ ವೇದಾಧ್ಯಯನಾದಿಗಳ ಮೂಲಕ ಬ್ರಹ್ಮಜಿಜ್ಞಾಸಾಧಿಕಾರ ಪ್ರಾಪ್ತವಾಗುತ್ತದೆ. ಈ ತಪ್ಪುಗ್ರಹಿಕೆಯನ್ನು ನಿವಾರಿಸಿ, ತ್ರೈವರ್ಣಿಕರು ಮತ್ತು ಅವರಿಗಿಂತ ಉತ್ತಮರಾದವರಿಗೆ ಎರಡನೆಯ ರೀತಿಯಲ್ಲಿ ನಿರೂಪಿಸಿದ ಅಧಿಕಾರಸಂಪತ್ತಿ ಪಡೆದವರಿಗೆ ಮಾತ್ರವೇ ಬ್ರಹ್ಮವಿದ್ಯಾಧಿಕಾರವೆಂದು ತಿಳಿಸಲು ಶ್ರೀಮದಾಚಾರ್ಯರು ಗುಣಾಧಾರಿತವಾದ ಅಧಿಕಾರವಿಭಾಗವನ್ನು ಪ್ರತಿಪಾದಿಸಿದ್ದಾರೆ. ಟೀಕಾಚಾರ್ಯರೂ ಇದನ್ನು ಸ್ಫುಟಪಡಿಸಿದ್ದಾರೆ.

ಈ ವಿಷಯದ ಮೇಲೆ ಟೀಕಾಚಾರ್ಯರ ನಂತರದ ಪರಕೀಯರು ಹೀಗೆ ಆಕ್ಷೇಪವನ್ನು ಮಾಡಿದ್ದಾರೆ. ಅದರ ಸಾರ ಹೀಗಿದೆ --

ಜಾತಿಕೃತ ಅಧಿಕಾರದ ಹಿನ್ನೆಲೆಯಲ್ಲಿ ಸಿದ್ಧವಾಗುವ ಮುಕ್ತಿಯೋಗ್ಯತೆಯೇ ಅಧಿಕಾರಿಯ ಲಕ್ಷಣವಾಗಲಿ. ಇದು ಸತ್‌ಶೂದ್ರಾದಿಗಳಲ್ಲಿ ಅತಿವ್ಯಾಪ್ತವಾಗುತ್ತದೆ ಎಂಬ ಆಕ್ಷೇಪ ಸಹಜ. ಇದನ್ನು ಅಪಶೂದ್ರಾಧಿಕರಣ ನ್ಯಾಯದಿಂದಲೇ ಪರಿಹರಿಸಲು ಸಾಧ್ಯವಿದೆ. ತ್ರೈವರ್ಣಿಕರಿಗೆ ಮಾತ್ರ ವೇದ ಹಾಗೂ ಅದರ ಜ್ಞಾನದಲ್ಲಿ ಅಧಿಕಾರವನ್ನು ಅಲ್ಲಿ ನಿರೂಪಿಸಲಾಗಿದೆ. ಮೊದಲ ಸೂತ್ರದಲ್ಲಿರುವ 'ಬ್ರಹ್ಮ'ಪದದಿಂದ ಜೀವನಿಗಿಂತ ಭಿನ್ನವಾದ ಬ್ರಹ್ಮನು ಜಿಜ್ಞಾಸ್ಯನೆಂದೂ, ಮುಕ್ತಿಯೋಗ್ಯನು ತ್ರೈವರ್ಣಿಕನು ಅಧಿಕಾರಿಯೆಂದೂ ತಾನಾಗಿಯೇ ಸಿದ್ಧವಾಗುವುದು. ಈ ಹಿನ್ನೆಲೆಯಲ್ಲಿ ಮಧ್ವರು ಮತ್ತು ಅವರ ವ್ಯಾಖ್ಯಾನಕಾರರ ಪ್ರಕಾರ ಅಧಿಕಾರ ಸೂಚಕವಾದ ಅಥಶಬ್ದ ಮತ್ತು ಗುಣಾಧಾರಿತ ಅಧಿಕಾರನಿರೂಪಣೆಯು ಅನುಪಯುಕ್ತ ಮತ್ತು ಅಸಂಗತ'' ಎಂದು.

ಈ ಆಕ್ಷೇಪಕ್ಕೆ ಹೀಗೆ ಸಮಾಧಾನ -- ''ಈಗಾಗಲೇ ವಿವರಿಸಿದ ಪ್ರಕಾರ ತ್ರೈವರ್ಣಿಕರಿಗೆ ಮಾತ್ರವೇ ವೇದಾಧ್ಯಯನ ಮತ್ತು ಅರ್ಥಜಿಜ್ಞಾಸೆಗೆ ಅವಕಾಶ ದೊರಕುವುದು ನಿಜ. ಆದರೆ, ತ್ರೈವರ್ಣಿಕರೆಲ್ಲರೂ ವೇದಾಧಿಕಾರಿಗಳಲ್ಲ. ವಿಷ್ಣುಭಕ್ತಿಶಮದಮಾದಿ-ಗುಣಗಳುಳ್ಳವರು ಮಾತ್ರವೇ ವೇದಾಧಿಕಾರಿಗಳು. ಈ ಗುಣಗಳಿಲ್ಲದ ತ್ರೈವರ್ಣಿಕರೂ ವೇದಾಧ್ಯಯನ ಮತ್ತು ಬ್ರಹ್ಮಮೀಮಾಂಸೆಗೆ ಅನರ್ಹರು ಎಂಬ ಅಂಶ ಅಪಶೂದ್ರಾಧಿ-ಕರಣದಿಂದ ಸಿದ್ಧವಾಗುವುದಿಲ್ಲ. ಈ ಪ್ರಮೇಯವನ್ನು ಸ್ಫುಟವಾಗಿ ಸೂಚಿಸಲು, ಮೊದಲ ಸೂತ್ರದಲ್ಲಿ 'ಅಥ'ಶಬ್ದ ಮತ್ತು ಅದರ ವಿವರಣರೂಪವಾದ ಅಧಿಕಾರದ್ವೈವಿಧ್ಯ ನಿರೂಪಿಸುವ ಭಾಷ್ಯ ಮತ್ತು ಟೀಕಾಗಳು ಆವಶ್ಯಕ ಮತ್ತು ಅನಿವಾರ್ಯವಾಗಿವೆ. 'ಅಧ್ಯಯನಮಾತ್ರವತಃ' ಎಂಬ ಸೂತ್ರದಲ್ಲಿ ವಿಮರ್ಶಿಸಿದ ಗುಣಾಧಾರಿತ ಅಧಿಕಾರಸಂಪತ್ತಿಯ ವಿವರಣೆಯ ಮೂಲಬೀಜವೇ 'ಅಥ'ಶಬ್ದವಾಗಿದೆ. ಆದ್ದರಿಂದ ಮುಕ್ತಿಯೋಗ್ಯರೆಲ್ಲರೂ ವೇದಾಧಿಕಾರಿಗಳಲ್ಲ ಮತ್ತು ವಿಷ್ಣುಭಕ್ತ್ಯಾದಿ ಗುಣಸಂಪನ್ನರಾದ ತ್ರೈವರ್ಣಿಕರಿಗೆ ಮಾತ್ರವೇ ವೇದಾಧಿಕಾರ ಮತ್ತು ಬ್ರಹ್ಮಜಿಜ್ಞಾಸಾಧಿಕಾರವಿದೆ ಎಂಬುದನ್ನು ಅಥಶಬ್ದವು ನಿರೂಪಿಸುತ್ತಿರುವ ಕಾರಣ ನಮ್ಮ ವ್ಯಾಖ್ಯಾನದಂತೆ ಎಲ್ಲವೂ ಸಾರ್ಥಕವೂ ಸಮಂಜಸವೂ ಆಗಿದೆ. ಈ ಆಕ್ಷೇಪ ಮಾತ್ರ ಅಜ್ಞಾನಮೂಲಕವಾಗಿದೆ'' ಎಂದು.

ಜಿಜ್ಞಾಸಾಧಿಕರಣ (೧-೧-೧)

ಅಥ ಶಬ್ದದಿಂದ ಯಾವುದರ ಆನಂತರ್ಯವನ್ನು ಹೇಳಿದೆಯೋ ಆ 'ಅಧಿಕಾರ' ಎಂದರೆ ಏನು? ಅದು ಎಷ್ಟು ವಿಧವಾಗಿದೆ? ಎಂಬುದನ್ನು 'ಅಧಿಕಾರಶ್ಚೋಕ್ತೋ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ.

'ಮಂದಮಧ್ಯಮೋತ್ತಮತ್ವೇನ' ಇತ್ಯಾದಿಯಾಗಿ ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ. ನೀವು ಅಧಿಕಾರದ ಬಗ್ಗೆ ಹೇಳಲಾಗಿದೆ ಎಂದು ಪ್ರತಿಜ್ಞೆ ಮಾಡಿದ್ದೀರಿ. ಇದು ಹೇಗೆ? ಎಂದರೆ ಇಲ್ಲಿ ಅಧಿಕಾರಿಗಳನ್ನು ಕುರಿತು ಹೇಳಿದ್ದರೂ ಅದಕ್ಕೆ ವಿಶೇಷಣವಾಗಿ ಅಧಿಕಾರದ ಬಗ್ಗೆಯೂ ಹೇಳಿದೆ.

ಪ್ರಶ್ನೆ - ''ತ್ರಿವಿಧಾ ಹಿ ಅಧಿಕಾರಿಣಃ'' ಎಂದು ಹೇಳಿದ್ದರಿಂದ ಅಧಿಕಾರವು ಎಷ್ಟು ವಿಧ? ಎಂಬ ಪ್ರಶ್ನೆಗೆ ಉತ್ತರಿಸಿದಂತಾಯಿತು. ಆದರೆ ಅಧಿಕಾರದ ಲಕ್ಷಣವನ್ನು ಈ ಶ್ಲೋಕದಲ್ಲಿ ಹೇಳಿಲ್ಲ?

ಉತ್ತರ - ಮೋಕ್ಷಕ್ಕೆ ಅಯೋಗ್ಯರಾದವರಲ್ಲಿ ಇಲ್ಲದ ಮನುಷ್ಯೋತ್ತಮತ್ವವೇ ಮೊದಲಾದ ವಿಶೇಷಧರ್ಮಗಳನ್ನು ಇಲ್ಲಿ ಹೇಳಿದ್ದರಿಂದ 'ಮೋಕ್ಷಯೋಗ್ಯತ್ವವು' ಅಧಿಕಾರಿಯ ಸಾಮಾನ್ಯಲಕ್ಷಣವೆಂದು ಹೇಳಿದಂತಾಯಿತು.

ಪ್ರಶ್ನೆ - 'ಮೋಕ್ಷಯೋಗ್ಯತ್ವವನ್ನು' ಸಾಮಾನ್ಯಲಕ್ಷಣವೆನ್ನಲು ಬರುವುದಿಲ್ಲ. ಯಾರು ಬ್ರಹ್ಮಜಿಜ್ಞಾಸೆಗೆ ಅಧಿಕಾರಿಗಳೋ ಅವರಲ್ಲಿ ಮಾತ್ರ ಅಧಿಕಾರಿಯ ಲಕ್ಷಣ ಬರಬೇಕು. ಆದರೆ ಸಜ್ಜನರಾದ ಶೂದ್ರಾದಿಗಳೂ ಸಹ ಮೋಕ್ಷಯೋಗ್ಯರಾಗಿದ್ದಾರೆ. ಅವರು ಬ್ರಹ್ಮವಿದ್ಯಾಧಿಕಾರಿಗಳಾಗಿಲ್ಲ. ಲಕ್ಷಣವು ಲಕ್ಷ್ಯದಲ್ಲಷ್ಟೇ ಬರಬೇಕು. ಈಗ ಬ್ರಹ್ಮವಿದ್ಯೆಗೆ ಅನಧಿಕಾರಿಗಳಾದ್ದರಿಂದ ಅಲಕ್ಷ್ಯರಾದ ಸಜ್ಜನಶೂದ್ರಾದಿಗಳಲ್ಲಿ ಮೋಕ್ಷಯೋಗ್ಯತ್ವವೆಂಬ ಸಾಮಾನ್ಯ ಲಕ್ಷಣ ಬರುವುದರಿಂದ ಅತಿವ್ಯಾಪ್ತಿದೋಷ ಬರುತ್ತದೆ.

ವಿದುರ, ಧರ್ಮವ್ಯಾಧ, ಜರಿತಾರ್ಯಾದಿಗಳೇ ಮೊದಲಾದವರು ಶೂದ್ರರೇ ಆಗಿದ್ದರೂ ವೈದಿಕಬ್ರಹ್ಮವಿದ್ಯೆಯಲ್ಲಿ ಅಧಿಕಾರಿಗಳಾಗಿರುವುದು ಕಂಡಿದೆ. ಆದ್ದರಿಂದ ಸಜ್ಜನಶೂದ್ರರು ಲಕ್ಷ್ಯಭಿನ್ನರೇ ಅಲ್ಲವೆಂಬ ಪ್ರಶ್ನೆಗೆ 'ಪ್ರಾಯಿಕತ್ವಾತ್' ಎಂದು ಹೇಳಿದ್ದಾರೆ. ವಿದುರ

ಮೊದಲಾದ ಕೆಲವು ದೇವತಾಪುರುಷರನ್ನು ಬಿಟ್ಟು ಉಳಿದವರಿಗೆ ಅಧಿಕಾರವಿಲ್ಲವೆಂದು ಅಭಿಪ್ರಾಯ.

ಉಳಿದ ಸಾಮಾನ್ಯ ಸಜ್ಜನಶೂದ್ರರಿಗೆ ಈ ಜನ್ಮದಲ್ಲಿ ಅಧಿಕಾರವಿಲ್ಲದಿರಬಹುದು. ಆದರೆ ದೇಹಾಂತರ ಬಂದಾಗ ಅವರೂ ಸಹ ಅಧಿಕಾರಿಗಳಾಗುತ್ತಾರೆ ಎಂಬ ಪ್ರಶ್ನೆಗೆ 'ಅರುಚ್ಯಾ' ಎಂದು ಉತ್ತರಿಸುತ್ತಿದ್ದಾರೆ. ದೇಹಾಂತರದಲ್ಲಿರುವ ಅಧಿಕಾರವು ಪ್ರಕೃತ ಉಪಯುಕ್ತವಲ್ಲ. ಪ್ರವೃತ್ತಿಗೆ ಉಪಯುಕ್ತವಾದ ಅಧಿಕಾರವನ್ನೇ ಇಲ್ಲಿ ವಿಚಾರ ಮಾಡಲಾಗಿದೆ ಎಂದರ್ಥ. ಹೀಗೆ ಅತಿವ್ಯಾಪ್ತವಾದದ್ದು ಹೇಗೆ ಸಾಮಾನ್ಯ ಲಕ್ಷಣವೆನಿಸುತ್ತದೆ.

ಉತ್ತರ - ಈ ಪ್ರಶ್ನೆಯ ಪರಿಹಾರಕ್ಕೋಸ್ಕರ 'ತಥಾऽನ್ಯೋ ಗುಣಪೂರ್ವಕಃ' ಎಂದು ಮತ್ತೊಂದು ಪ್ರಕಾರದಿಂದ ಅಧಿಕಾರಿಯ ಸ್ವರೂಪವನ್ನು ಹೇಳುತ್ತಿದ್ದಾರೆ. ವಿಷ್ಣುಭಕ್ತಿಯು ಸಾಧಾರಣವಾಗಿ ಇದ್ದರೂ ಅಧ್ಯಯನ ಶಬ್ದದಿಂದ ವಿಷ್ಣುಭಕ್ತಿವಿಹೀನನಾದ ಪುರುಷನಿಗೆ ಅಧ್ಯಯನದಲ್ಲಿ ಅಧಿಕಾರವಿಲ್ಲವೆಂದು -

ಅವೈಷ್ಣವಸ್ಯ ವೇದೇऽಪಿ ಹ್ಯಧಿಕಾರೋ ನ ವಿದ್ಯತೇ।
ಗುರುಭಕ್ತಿವಿಹೀನಸ್ಯ ಶಮಾದಿರಹಿತಸ್ಯ ಚ ॥

ಎಂಬ ಪ್ರಮಾಣದಿಂದ ತಿಳಿಯುತ್ತದೆ. ಹೀಗೆ ವಿಷ್ಣುಭಕ್ತಿ ಇರಬೇಕೆಂದು ಅಧ್ಯಯನಶಬ್ದದಿಂದಲೇ ತಿಳಿಯುತ್ತದೆ. ಆದರೂ ಪುನಃ 'ಭಕ್ತಿಮಾನ್ ಪರಮೇ ವಿಷ್ಣೌ' ಎಂದೇಕೆ ಹೇಳಿದ್ದೆಂದರೆ ಅಯೋಗ್ಯಗುರುವಿನಿಂದ ಅಧ್ಯಯನ ಮಾಡಬಾರದು. ಅಥವಾ ತಾನೇ ಪುಸ್ತಕಾದಿಗಳನ್ನು ಓದಿ ತಿಳಿದ ಅಧ್ಯಯನವಾಗಿರಬಾರದೆಂದು ತಿಳಿಸುವ ಉದ್ದೇಶದಿಂದ ಅಧ್ಯಯನಶಬ್ದವನ್ನು ಪ್ರತ್ಯೇಕವಾಗಿ ಹೇಳಿದ್ದಾರೆ.

ಆದ್ದರಿಂದ ಹರಿಭಕ್ತಿಪೂರ್ವಕವಾಗಿ ಅಧ್ಯಯನ ಮಾಡುವುದೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರವೆಂದಂತಾಯಿತು. 'ಹರಿಭಕ್ತಿಪೂರ್ವಕಾಧ್ಯಯನವತ್ತ್ವಂ' ಎಂಬುದು ಬ್ರಹ್ಮವಿದ್ಯೆಯ ಸಾಮಾನ್ಯಲಕ್ಷಣ. 'ಭಕ್ತಿಮಾನ್ ಪರಮೇ ವಿಷ್ಣೌ' ಎಂಬ ವಿಶೇಷಣದಿಂದ ಮೋಕ್ಷಕ್ಕೆ ಅಯೋಗ್ಯರಾದ ಬ್ರಾಹ್ಮಣರನ್ನು ವ್ಯಾವೃತ್ತಿ ಮಾಡಿದಂತಾಯಿತು. 'ಅಧ್ಯಯನವಾನ್' ಎಂಬ ವಿಶೇಷಣದಿಂದ ಸಜ್ಜನರಾದ ಶೂದ್ರರನ್ನು ವ್ಯಾವೃತ್ತಿ ಮಾಡಿದಂತಾಯಿತು.

ಪ್ರಶ್ನೆ - ಭಕ್ತಿಯುಕ್ತ: ಪರೇ ವಿಷ್ಣೌ ತಥಾऽಧ್ಯಯನವಾನಪಿ ।
ಅಧಮೋಧಿಯಮಿತಿ ಜ್ಞೇಯ ಏತತ್ ಪೂರ್ವಶಮಾದಿಮಾನ್ ॥
ಮಧ್ಯಃ ಸ್ಯಾದ್ ಬ್ರಹ್ಮಣೋ ವಿಷ್ಣೋರ್ವಶೇ ಬ್ರಹ್ಮಾದಿಪೂರ್ವಕಃ ।
ವಿಜ್ಞಾಯ ಭಕ್ತಿಸಂಪನ್ನೋ ವಿಷ್ಣ್ವರ್ಥಂ ಮೋಕ್ಷಮರ್ಥಯನ್ ।
ನ ಮೋಕ್ಷಾರ್ಥಂ ಚ ವಿಷ್ಣುಃ ಸ್ಯಾದಿತಿ ಜ್ಞಾನೀ ಸ ಉತ್ತಮಃ ॥

ಈ ಪ್ರಮಾಣವಚನದಿಂದ ಮಧ್ಯಮಾಧಿಕಾರಿಯಲ್ಲೂ ಅಧಮಾಧಿಕಾರಿಯಲ್ಲಿರಬೇಕಾದ ಅಧ್ಯಯನಾದಿಗಳಿರಬೇಕೆಂದು ತಿಳಿಯುತ್ತದೆ. ಹೀಗಿರುವಾಗ ಶಮಾದಿಗುಣಯುಕ್ತತ್ವವನ್ನಷ್ಟೇ ಮಧ್ಯಮಾಧಿಕಾರಿಗಳ ಲಕ್ಷಣವೆಂದದ್ದು ಹೇಗೆ ಉಪಪನ್ನವಾಗುತ್ತದೆ? ಅಷ್ಟೇ ಅಲ್ಲದೆ, ಹಿಂದೆ ಹೇಳಿದ 'ಹರಿಭಕ್ತಿಪೂರ್ವಕಾಧ್ಯಯನವತ್ತ್ವಂ' ಎಂಬ ಸಾಮಾನ್ಯಲಕ್ಷಣವು ಕೇವಲ ಅಧಮಾಧಿಕಾರಿಗಳಲ್ಲಷ್ಟೇ ಬರಬೇಕಾದೀತು?

ಉತ್ತರ - ಈ ಪ್ರಶ್ನೆಗೆ ಉತ್ತರವಾಗಿ 'ಶಮಾದಿಸಂಯುಕ್ತಃ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಮಧ್ಯಮಾಧಿಕಾರಿಗಳು ಶಮದಮಾದಿಯುಕ್ತರೆಂದರೆ ಇದರ ಜೊತೆಗೆ ಅಧಮಾಧಿಕಾರಿ-ವಿಷಯದಲ್ಲಿ ಹೇಳಿದ ಅಧ್ಯಯನ ಮತ್ತು ವಿಷ್ಣುಭಕ್ತಿಯನ್ನೂ ಸಂಗ್ರಹಿಸಿಕೊಳ್ಳಬೇಕು. ಪೂರ್ವಗುಣದಲ್ಲಿ ಉತ್ತರಗುಣದ ಅನುಕರ್ಷವನ್ನೂ ಮಾಡಬೇಕು. ಮುಂದಿನ ಗುಣವನ್ನು ಹಿಂದೆಯೂ ಇಟ್ಟುಕೊಳ್ಳಬೇಕು. ಇದರಿಂದ ಇಂದು ಗುಣದಲ್ಲಿ ಮತ್ತೊಂದು ಗುಣದ ಸಾಂಕರ್ಯವನ್ನು ಹೇಳಿದಂತಾಗುವುದಿಲ್ಲ. ಏಕೆಂದರೆ ಮುಂದಿನ ಅಧಿಕಾರಿಯಲ್ಲಿರುವ ಲಕ್ಷಣವು ಹಿಂದಿನ ಅಧಿಕಾರಿಯಲ್ಲಿ ಪ್ರಚುರವಾಗಿ ಇರುವುದಿಲ್ಲ.

೧) ಶಾಸ್ತ್ರಾಧ್ಯಯನ ೨) ಶಮಾದಿಗುಣಗಳು ೩) ವಿಷಯವೈರಾಗ್ಯ, ಈ ಮೂರೂ ಗುಣಗಳು ಮಂದಾಧಿಕಾರಿಗಳಲ್ಲಿ ಇರಲೇಬೇಕು. ಇಷ್ಟು ಮಾತ್ರ ವ್ಯತ್ಯಾಸ ಈ ಮೂರೂ ಗುಣಗಳು ಯಾರಲ್ಲಿ ಸಾಮಾನ್ಯವಾಗಿ ಇರುತ್ತದೋ ಅವನು ಅಧಮಾಧಿಕಾರಿ, ಅಧಿಕ ಮಟ್ಟದಲ್ಲಿ ಯಾರಲ್ಲಿ ಇರುತ್ತವೋ, ಅವನು ಮಧ್ಯಮಾಧಿಕಾರಿ, ಅತ್ಯಧಿಕಮಟ್ಟದಲ್ಲಿ ಯಾರಲ್ಲಿ ಇರುತ್ತವೋ ಅವನು ಉತ್ತಮಾಧಿಕಾರಿಯೆಂದು ತಿಳಿಯಬೇಕು.

ಅಥವಾ ಶಾಸ್ತ್ರಾಧ್ಯಯನವು ಪ್ರಧಾನವಾಗಿದ್ದು ಉಳಿದೆರೆಡು ಗುಣಗಳು ಗೌಣವಾಗಿದ್ದರೆ ಅಧಮಾಧಿಕಾರಿ. ಶಮಾದಿಗುಣಗಳು ಪ್ರಧಾನವಾಗಿದ್ದು ಶಾಸ್ತ್ರಾಧ್ಯಯನ ವಿಷಯವೈರಾಗ್ಯಗಳು ಅಪ್ರಧಾನವಾಗಿದ್ದರೆ ಮಧ್ಯಮಾಧಿಕಾರಿ.

ವಿಷ್ಣುಪಾದೈಕಸಂಶ್ರಯತ್ವವು ಪ್ರಧಾನವಾಗಿದ್ದು ಶಾಸ್ತ್ರಾಧ್ಯಯನ, ಶಮಾದಿಗುಣಗಳು ಅಪ್ರಧಾನವಾಗಿದ್ದರೆ ಉತ್ತಮಾಧಿಕಾರಿ.

ಹಾಗಾಗಿ ಗುಣಗಳ ಸಾಂಕರ್ಯದೋಷಕ್ಕೆ ಅವಕಾಶವಿಲ್ಲ. 'ಬ್ರಹ್ಮಾದ್ಯಸಾರತಾ' ಎಂದರೆ ''ಬ್ರಹ್ಮಾದಿಚೇತನರು ಸರ್ವೋತ್ತಮರಲ್ಲವೆಂಬ ತಿಳಿವಳಿಕೆ ಮತ್ತು ಬ್ರಹ್ಮಲೋಕಾದಿಗಳು ಮೋಕ್ಷಕ್ಕಿಂತ ಬಹಳ ನೀಚವೆಂಬ ತಿಳುವಳಿಕೆ''.

ವಿಶೇಷ ವಿಚಾರ - ಟೀಕಾ - ''ಅನೇನ ಮೋಕ್ಷಯೋಗ್ಯತ್ವಂ ಸಾಮಾನ್ಯಲಕ್ಷಣಂ ಅಭಿಪ್ರೇತಮ್. ಅಸ್ಯ ಚ ಸಚ್ಛೂದ್ರಾದೌ ವ್ಯಾಪ್ತೇಃ ಪ್ರಾಯಿಕತ್ವಾದರುಚ್ಯಾ ಪ್ರಕಾರಾಂತರೇಣಾಧಿಕಾರಿಣಃ ಸ್ವರೂಪಮಾಹ ॥ ತಥೇತಿ ॥''

''ಬ್ರಹ್ಮವಿದ್ಯೆಗೆ ಯಾರು ಅಧಿಕಾರಿಗಳು? ಅವರ ಲಕ್ಷಣವೇನು? ಎಂಬ ಪ್ರಶ್ನೆಗೆ ''ಮೋಕ್ಷದಲ್ಲಿ ಅಪೇಕ್ಷೆ ಇರುವಿಕೆ'' ಯನ್ನೇ ಸಾಮಾನ್ಯಲಕ್ಷಣವೆಂದು ಹೇಳಿದರು.

ಆದರೆ ಈ ಲಕ್ಷಣವು ಸಾತ್ವಿಕರಾದ ಶೂದ್ರಾದಿಗಳಲ್ಲಿಯೂ ಬರುತ್ತದೆ. ಹೀಗೆ ಅತೃಪ್ತಿ ಇರುವುದರಿಂದ ಭಾಷ್ಯಕಾರರು ಮತ್ತೊಂದು ಬಗೆಯಲ್ಲಿ ಬ್ರಹ್ಮವಿದ್ಯಾಧಿಕಾರಿಗಳ ಲಕ್ಷಣವನ್ನು ಹೇಳುತ್ತಿದ್ದಾರೆಂದು ಟೀಕೆಯಲ್ಲಿ ಹೇಳಿದೆ.

ಪ್ರಶ್ನೆ - ಅತೃಪ್ತಿಗೆ ಕಾರಣವೇನು? ಏಕೆಂದರೆ ಶೂದ್ರನು ಸಾತ್ವಿಕನಾಗಿದ್ದಲ್ಲಿ ಜನ್ಮಾಂತರದಲ್ಲಿ ಬ್ರಾಹ್ಮಣದೇಹವನ್ನು ಹೊಂದುತ್ತಾನೆ. ಆವಾಗ ಬ್ರಹ್ಮವಿದ್ಯೆಯಲ್ಲಿ ಅವನೂ ಅಧಿಕಾರಿಯಾಗುತ್ತಾನೆ. ಹಾಗಾಗಿ 'ಮೋಕ್ಷಾಭಿಲಾಷೆ' ಎಂಬ ಸಾಮಾನ್ಯಲಕ್ಷಣವನ್ನು ಹೇಳಿದರೆ ಏನು ತಪ್ಪು ?

ಉತ್ತರ - ಆದರೂ ಸಹ ಆ ಶೂದ್ರನಿಗೆ ಈ ಜನ್ಮದಲ್ಲಿ ಅಧಿಕಾರವಿಲ್ಲ. ಜನ್ಮಾಂತರದಲ್ಲಿ ದೊರೆಯುವ ಅಧಿಕಾರವು ಈ ಜನ್ಮದಲ್ಲಿ ಉಪಯುಕ್ತವಾಗುವುದಿಲ್ಲ. ಈ ಅತೃಪ್ತಿ ಇರುವುದರಿಂದ ಈಗಿನ ಜನ್ಮದಲ್ಲಿಯೇ ಉಪಯುಕ್ತವಾಗುವ ಅರ್ಹತೆಯ ಸ್ವರೂಪವನ್ನು ಬೇರೆ ರೀತಿಯಿಂದ ವರ್ಣಿಸುತ್ತಾರೆ.

ಟೀಕಾ - 'ಅತ್ರ ಅಧ್ಯಯನಲಬ್ಧಾಽಪಿ ವಿಷ್ಣುಭಕ್ತಿಃ ಅನ್ಯಾಧ್ಯಾಧ್ಯಯನನಿವೃತ್ಯರ್ಥಂ ಪೃಥಗುಕ್ತಾ. ತಥಾ ಚ ಹರಿಭಕ್ತಿಪೂರ್ವಕಾಧ್ಯಯನವತ್ವಂ ಸಾಮಾನ್ಯತೋ ಬ್ರಹ್ಮವಿದ್ಯಾಧಿಕಾರ ಇತ್ಯುಕ್ತಂ ಭವತಿ'.

ಬ್ರಹ್ಮವಿದ್ಯಾಧಿಕಾರಿಗಳು ಮೂರುವಿಧರಾಗಿದ್ದಾರೆ. ಆ ಮೂರುವಿಧರಲ್ಲಿ ಅಧಮಾಧಿಕಾರಿಗಳ ಲಕ್ಷಣವನ್ನು ''ಭಕ್ತಿಮಾನ್ ಪರಮೇ ವಿಷ್ಣೌ ಯಸ್ತು ಅಧ್ಯಯನವಾನ್ನರಃ ಅಧಮಃ'' ಸರ್ವೋತ್ತಮನಾದ ವಿಷ್ಣುವಿನಲ್ಲಿ ಭಕ್ತಿಯುಳ್ಳವನು

ವೇದಾಧ್ಯಯನ ಮಾಡಿದವನು ಯಾರು ಇರುತ್ತಾನೋ ಅಂತಹವನು ಬ್ರಹ್ಮವಿದ್ಯೆಯಲ್ಲಿ ಅಧಮಾಧಿಕಾರಿಯಾಗುತ್ತಾನೆ'' ಎಂದು ಭಾಷ್ಯದಲ್ಲಿ ಹೇಳಿದ್ದಾರೆ.

''ವಿಷ್ಣುಭಕ್ತಿಮತ್ತ್ವೇ ಸತಿ ವೇದಾಧ್ಯಯನವತ್ತ್ವಂ'' ಎಂದು ಅಧಮಾಧಿಕಾರಿಯ ಲಕ್ಷಣವನ್ನು ಹೇಳಿದಂತಾಯಿತು. ಇಲ್ಲಿ ''ವೇದಾಧ್ಯಯನವತ್ತ್ವಂ'' ಎಂದಷ್ಟೇ ಲಕ್ಷಣ ಹೇಳಿದರೆ ಸಾಕು. ವಿಷ್ಣುಭಕ್ತಿಯೂ ಇರಬೇಕೆಂದು ತಿಳಿಯುತ್ತದೆ. ಪುನಃ ''ವಿಷ್ಣುಭಕ್ತಿಮತ್ತ್ವಂ'' ಎಂದು ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ -

ಅವೇಷ್ಣವಸ್ಯ ವೇದೇಪಿ ಹ್ಯಧಿಕಾರೋ ನ ವಿದ್ಯತೇ ।
ಗುರುಭಕ್ತಿವಿಹೀನಸ್ಯ ಶಮಾದಿರಹಿತಸ್ಯ ಚ ॥

''ಯಾವ ವ್ಯಕ್ತಿಯಲ್ಲಿ ವಿಷ್ಣುಭಕ್ತಿ, ಗುರುಭಕ್ತಿ, ಶಮದಮಾದಿಗುಣಗಳು ಇರುವುದಿಲ್ಲವೋ ಅಂತಹ ವ್ಯಕ್ತಿಯು ವೇದವಿದ್ಯೆಯಲ್ಲಿ ಅಧಿಕಾರನಲ್ಲ.'' ಎಂಬ ಪ್ರಮಾಣವಚನದಂತೆ ವೇದಾಧ್ಯಯನ ಮಾಡುವಂತಹ ವ್ಯಕ್ತಿಯಲ್ಲಿ ವಿಷ್ಣುಭಕ್ತಿಯೇ ಮೊದಲಾದ ಗುಣಗಳು ಇದ್ದೇ ಇರುತ್ತವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ''ವೇದಾಧ್ಯಯನಶೀಲನಾಗಿರಬೇಕು'' ಎಂಬಷ್ಟೇ ಲಕ್ಷಣದಿಂದ ವಿಷ್ಣುಭಕ್ತಿ ಮೊದಲಾದ ಗುಣಗಳಿರುತ್ತವೆಂದು ತಿಳಿಯುವಾಗ ಪುನಃ ಆಚಾರ್ಯರು ಭಾಷ್ಯದಲ್ಲಿ ''ಭಕ್ತಿಮಾನ್ ಪರಮೇ ವಿಷ್ಣೌ'' ಎಂದೇಕೆ ಹೇಳಿದರು? ಹೀಗೆ ಹೇಳುವ ಅವಶ್ಯಕತೆಯಾದರೂ ಏನಿತ್ತು? ಈ ಪ್ರಶ್ನೆಗೆ ಉತ್ತರ ನೀಡಲು ಟೀಕೆಯಲ್ಲಿ ''ಅತ್ರ ಅಧ್ಯಯನಲಬ್ಧಾಪಿ'' ಇತ್ಯಾದಿ ಮಾತುಗಳನ್ನು ಹೇಳಿದರು.

''ವೇದಾಧ್ಯಯನಶೀಲನಾಗಿರಬೇಕು'' ಎಂದಷ್ಟೇ ಹೇಳಿದರೂ ವಿಷ್ಣುಭಕ್ತಿಯೂ ಇರಬೇಕೆಂದು ತಿಳಿಯುತ್ತದೆ. ''ಅನ್ಯಾಯಾಧ್ಯಯನವು ಯೋಗ್ಯಾಧಿಕಾರಿಯ ಲಕ್ಷಣವಲ್ಲ'' ಎಂದು ತಿಳಿಸಲು ಭಾಷ್ಯದಲ್ಲಿ ''ಭಕ್ತಿಮಾನ್ ಪರಮೇ ವಿಷ್ಣೌ'' ಎಂದು ಹೇಳಿದ್ದಾರೆ.

ಈ ''ಅನ್ಯಾಯಾಧ್ಯಯನ'' ಶಬ್ದದ ಅರ್ಥವನ್ನು ಚಂದ್ರಿಕೆಯಲ್ಲಿ ಹೀಗೆ ವಿವರಿಸಿದ್ದಾರೆ - ''ಅಭಕ್ತ್ಯಾನಧಿಕಾರಿಕೃತತ್ವಮ್ ಅನ್ಯಾಯತ್ವಮ್'' ''ಭಕ್ತಿಯಿಲ್ಲದೆ ಅನಧಿಕಾರಿಯು ನಡೆಸುವ ಅಧ್ಯಯನವೇ ಅನ್ಯಾಯಾಧ್ಯಯನ'' ಎಂದು.

ಉತ್ತರದ ಅಭಿಪ್ರಾಯವಿಷ್ಟು - ಹೇಳಿದ್ದನ್ನೇ ಪುನಃ ಹೇಳಿದ್ದರಿಂದ ವಿಷ್ಣುಭಕ್ತಿಯು ಇರಲೇಬೇಕೆಂದು ತಿಳಿಯುತ್ತದೆ. ಕೆಲವರು ವಿಷ್ಣುಭಕ್ತಿ ಇಲ್ಲದೆ ಕೇವಲ ಡಂಬಾಚಾರದಿಂದ ವೇದಾಧ್ಯಯನವನ್ನು ಮಾಡುತ್ತಾರೆ. ಅಂತಹವರನ್ನು ಈಗ ನಿಷೇಧಿಸಿದಂತಾಯಿತು.

''ಅಧ್ಯಯನವಾನ್ ನರಃ'', ಎಂದಷ್ಟೇ ಹೇಳಿದ್ದಲ್ಲಿ ಈ ನಿವೃತ್ತಿಯು ತಿಳಿಯುತ್ತಿರಲಿಲ್ಲ. ಆದ್ದರಿಂದ ''ಭಕ್ತಿಮಾನ್ ಪರಮೇ ವಿಷ್ಣೌ ಯಸ್ತು ಅಧ್ಯಯನವಾನ್ನರಃ'' ಎಂದು ಶ್ರೀಮದಾಚಾರ್ಯರು ಹೇಳಿದ್ದು ಅತ್ಯಂತ ಸಾರ್ಥಕವಾಗಿದೆ.

ಶಮದಮಾದಿಗುಣಗಳನ್ನು ಸಹ ಅಧಮಾಧಿಕಾರಿಯಲ್ಲಿ ವಿವಕ್ಷಿಸಬೇಕು. ಆದ್ದರಿಂದ ಹರಿಭಕ್ತಿಯನ್ನು ಶಮದಮ ಮೊದಲಾದ ಸದ್ಗುಣಗಳನ್ನು ಹೊಂದಿ ವೇದಾಧ್ಯಯನವನ್ನು ಮಾಡಿದರೆ ಅದು ಬ್ರಹ್ಮವಿಚಾರಕ್ಕೆ ಬೇಕಾಗುವ ಸಾಮಾನ್ಯಯೋಗ್ಯತೆ ಎನಿಸುತ್ತದೆ. ಇಷ್ಟು ಅಧಮಾಧಿಕಾರಿಯ ಲಕ್ಷಣ.

ಟೀಕಾ - ''ಶಮಾದಿಸಂಯುಕ್ತ ಇತ್ಯಾದೌ ಪೂರ್ವಸಂಗ್ರಹಃ ಪೂರ್ವತ್ರ ಚ ಉತ್ತರೋಕ್ತಾನುಕರ್ಷಶ್ಚ ಕರ್ತವ್ಯಃ ನ ಚೈವಂ ಸಾಂಕರ್ಯಮ್. ಉತ್ತರೋಕ್ತಾಪ್ಯಾಚುರ್ಯೇಣ ಅಸಾಂಕರ್ಯಾತ್''

ಭಾಷ್ಯದಲ್ಲಿ ಬ್ರಹ್ಮವಿದ್ಯಾಧಿಕಾರಿಗಳನ್ನು ಮೂರು ಬಗೆಯಲ್ಲಿ ವಿಂಗಡಿಸಿದ್ದಾರೆ. - ಅದು ಹೀಗೆ -

೧) ಭಕ್ತಿಪೂರ್ವಕ ಅಧ್ಯಯನವು ಕನಿಷ್ಠಾ ಅರ್ಹತೆ.

೨) ಶಮದಮಾದಿಗುಣಗಳು - ಮಧ್ಯಮಾರ್ಹತೆ.

೩) ವಿವೇಕ, ವೈರಾಗ್ಯ, ವಿಷ್ಣು ಒಬ್ಬನೇ ಸರ್ವೋತ್ತಮನೆಂದು ನಂಬಿರುವುದು ಉತ್ತಮಾರ್ಹತೆ .

ಭಾಷ್ಯದಲ್ಲಿ ಹೇಳಿದ ಈ ವಿಭಾಗಗಳನ್ನು ಯಥಾವತ್ತಾಗಿ ಇಟ್ಟುಕೊಳ್ಳಬಾರದು. ಮೊದಲಿನ ವಿಭಾಗಗಳಲ್ಲಿ ಮುಂದಿನ ವಿಭಾಗಗಳನ್ನೂ ಸೇರಿಸಿಕೊಳ್ಳಬೇಕು. ಆದರಂತೆ ಮುಂದಿನ ವಿಭಾಗಗಳಲ್ಲಿ ಮೊದಲಿನ ವಿಭಾಗದ ಗುಣಗಳನ್ನು ಅನ್ವಯಿಸಿಕೊಳ್ಳಬೇಕು. ಈ ವಿಷಯವನ್ನು ಟೀಕೆಯಲ್ಲಿ ಹೇಳಿದ್ದಾರೆ.

ಹಾಗಾದರೆ ಮೂರು ವಿಭಾಗಗಳೆಂಬ ಪರಿಕಲ್ಪನೆಯೇ ತಪ್ಪಾಗುತ್ತದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಟೀಕೆಯಲ್ಲಿ ಹೀಗೆ ಉತ್ತರಿಸಿದ್ದಾರೆ- ''ಉತ್ತರೋಕ್ತಾಪ್ಯಾಚುರ್ಯೇಣ ಅಸಾಂಕರ್ಯಾತ್'' ಎಂದು. ಮುಂದಿನ ವಿಭಾಗಗಳಲ್ಲಿರುವ ಗುಣಗಳು ಹಿಂದಿನ ವಿಭಾಗದಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತವೆ. ಆದ್ದರಿಂದ ಎಲ್ಲಾ ವಿಭಾಗಗಳೂ ಒಂದೇ ಎಂಬ ಸಾಂಕರ್ಯ ದೋಷಕ್ಕೆ ಅವಕಾಶವಿಲ್ಲ.

ಇದನ್ನು ''ತತಶ್ಚಾಯಮರ್ಥಃ'' ಇತ್ಯಾದಿ ವಾಕ್ಯಗಳಿಂದ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಮೂರು ವಿಭಾಗಗಳನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು-

| ಅಧಿಕಾರಿವರ್ಗ | | ಹೆಚ್ಚು ಗುಣಗಳು | ಕಡಿಮೆ ಗುಣಗಳು |
|---|---|---|---|
| ಅಧಮಾಧಿಕಾರಿ | - | ವೇದಾಧ್ಯಯನ ಶಮದಮಾದಿಗುಣಗಳು | ವಿಷ್ಣುಪಾದೈಕಸಂಶ್ರಯತ್ವ |
| ಮಧ್ಯಮಾಧಿಕಾರಿ | - | ವೇದಾಧ್ಯಯನ ಶಮದಮಾದಿ ಗುಣಗಳು | ವಿಷ್ಣುಪಾದೈಕಸಂಶ್ರಯತ್ವ |
| ಉತ್ತಮಾಧಿಕಾರಿ | - | ವಿಷ್ಣುಪಾದೈಕಸಂಶ್ರಯತ್ವ ಶಮದಮಾದಿಗುಣಗಳು | ವೇದಾಧ್ಯಯನ |

ಹೀಗೆ ವಿಭಾಗಿಸಿದಾಗ ಯಾವ ಅಸಾಂಕರ್ಯವೂ ಬರಲಾರದು. ಇಷ್ಟು ವಿಷಯವು ''ಉತ್ತರೋಕ್ತಾಪ್ರಾಚುರ್ಯೇಣ ಅಸಾಂಕರ್ಯಾತ್'' ಎಂಬ ಟೀಕೆಯಿಂದ ಹೇಗೆ ಸಿಗುತ್ತದೆ.

ಕೊನೆಯ ವಿಭಾಗದಲ್ಲಿ 'ಉತ್ತರೋಕ್ತ ಅಪ್ರಾಚುರ್ಯೇಣ' ಎಂಬ ಪದಕ್ಕೆ ಹಿಂದಿನ ವಿಭಾಗದ ಗುಣಗಳು ಅಲ್ಪಪ್ರಮಾಣದಲ್ಲಿರುತ್ತವೆಂದು ಅರ್ಥ. ವಾಕ್ಯಯೋಜನೆಯನ್ನು ಸ್ಪಷ್ಟವಾಗಿ ಮೂರು ವಿಭಾಗಗಳಲ್ಲಿಯೂ ಹೀಗೆ ತಿಳಿಯಬೇಕು -

೧) ಪೂರ್ವಸ್ಮಿನ್ ಅಧಮೇ ಉತ್ತರೋಕ್ತಯೋಃ ಅಪ್ರಾಚುರ್ಯೇಣ ಅಸಾಂಕರ್ಯಾತ್ (ಮೊದಲನೆಯ ಪಕ್ಷದಲ್ಲಿ)

೨) ಪೂರ್ವಸ್ಮಿನ್ ಮಧ್ಯಮೇ ಉತ್ತರೋಕ್ತಸ್ಯ ಅಪ್ರಾಚುರ್ಯೇಣ ಅಸಾಂಕರ್ಯಾತ್ (ಎರಡನೆಯ ಪಕ್ಷದಲ್ಲಿ)

೩) ಉತ್ತರಸ್ಮಿನ್ ಉತ್ತಮೇ ಉಕ್ತಯೋಃ = ಪೂರ್ವೋಕ್ತಯೋಃ ಅಪ್ರಾಚುರ್ಯಮ್ (ಮೂರನೆಯ ಪಕ್ಷದಲ್ಲಿ)

ಹೀಗೆ ವಾಕ್ಯಯೋಜನೆಯನ್ನು ಮಾಡಬೇಕು. ಹೀಗೆ ಮಾಡಿದಾಗ ಯಾವ ದೋಷಕ್ಕೂ ಅವಕಾಶವಿಲ್ಲ. ಇಷ್ಟು ಸೂತ್ರದಲ್ಲಿರುವ 'ಅಥ' ಶಬ್ದದ ವ್ಯಾಖ್ಯಾನವು ಮುಗಿಯಿತು.

ಒಟ್ಟು ಅಭಿಪ್ರಾಯ - ಹರಿಭಕ್ತಿಯನ್ನೂ ಶಮದಮಾದಿಗಳನ್ನೂ ಸಂಪಾದಿಸಿ ವೇದಾಧ್ಯಯನ ಮಾಡಿದರೆ ಅದು ಬ್ರಹ್ಮವಿಚಾರಕ್ಕೆ ಬೇಕಾಗುವ ಕನಿಷ್ಠ ಅರ್ಹತೆ ಎನಿಸುವುದು. ಅಂದರೆ ಒಬ್ಬ ವ್ಯಕ್ತಿಯಲ್ಲಿರುವ ಅಧ್ಯಯನ ಶಮದಮಾದಿ ಮತ್ತು ವಿಷ್ಣುಪಾದಶರಣಾಗತಿ ಇವುಗಳಲ್ಲಿ ಶಮದಮಾದಿ ಮತ್ತು ವಿಷ್ಣುಪಾದಶರಣಾಗತಿಗಳು ಅಧ್ಯಯನಕ್ಕಿಂತ ಕಡಿಮೆ ಪ್ರಮಾಣದಲ್ಲಿದ್ದರೆ ಅದು ಕನಿಷ್ಠ ಅರ್ಹತೆ. ವಿಷ್ಣುಪಾದಶರಣಾಗತಿಯೊಂದೆ ಅಧ್ಯಯನ ಶಮದಮಾದಿಗಳಿಗಿಂತ ಕಡಿಮೆ ಇದ್ದರೆ ಅದು ಮಧ್ಯಮ ಅರ್ಹತೆ. ಅಧ್ಯಯನ ಶಮದಮಾದಿಗಳು ವಿಷ್ಣುಪಾದ ಶರಣಾಗತಿಗಿಂತ ಕಡಿಮೆ ಇದ್ದರೆ ಅದು ಉತ್ತಮ ಅರ್ಹತೆ.

## ಅನೇಕ ಶ್ರುತಿ ಸ್ಮೃತಿಗಳಿಂದ ಅರ್ಹತೆಯ ನಿರ್ಧಾರ

**ಬ್ರಹ್ಮಸೂತ್ರಭಾಷ್ಯಮ್ –**

**अध्ययनमात्रवतः । नाविशेषात् इति चोपरि ।**

ಅನುವಾದ -- ಸಕಲಶಾಖಾಧ್ಯಯನವನ್ನು ಯೋಗ್ಯತಾನುಸಾರ ಮಾಡಿದವನಿಗೆ ಮಾತ್ರ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಅಧಿಕಾರ. (ಈ ಅಧಿಕಾರದಲ್ಲಿಯೂ ತಾರತಮ್ಯವಿದೆ. ಇದನ್ನು ಮುಂದೆ ಸೂತ್ರಕಾರರೇ ಮೂರನೆಯ ಅಧ್ಯಾಯದಲ್ಲಿ ಹೇಳುತ್ತಾರೆ)

**ಬ್ರಹ್ಮಸೂತ್ರಭಾಷ್ಯಮ್ –**

**'शान्तो दान्त उपरतस्तितिक्षुः समाहितो भूत्वाऽऽत्मन्येवाऽऽत्मानं पश्येत्',**

ಹರಿನಿಷ್ಠನಾಗಿ, ಇಂದ್ರಿಯನಿಗ್ರಹವುಳ್ಳವನಾಗಿ, ವಿಷಯಭೋಗಗಳಲ್ಲಿ ಅನಾಸಕ್ತನಾಗಿ, ದ್ವಂದ್ವಾತೀತನಾಗಿ, ಯಥಾರ್ಥಜ್ಞಾನವನ್ನು ಪಡೆದು ತನ್ನ ಹೃದಯದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

**ಬ್ರಹ್ಮಸೂತ್ರಭಾಷ್ಯಮ್ –**

**'परीक्ष्य लोकान् कर्मचितान् ब्राह्मणो निर्वेदमायात् । नास्त्यकृतः कृतेन ।**

ಬ್ರಹ್ಮಜ್ಞಾನಕ್ಕೆ ಯೋಗ್ಯನಾದವನು ಕಾಮ್ಯಕರ್ಮಗಳಿಂದ ಲಭ್ಯವಾಗುವ ಸ್ವರ್ಗಾದಿಗಳನ್ನು ಅನಿತ್ಯವೆಂದು ತಿಳಿದು ಕಾಮ್ಯಕರ್ಮಗಳಲ್ಲಿ ಮತ್ತು ಅವುಗಳ ಫಲವಾದ ಸ್ವರ್ಗಾದಿಗಳಲ್ಲಿ ಅಲಂಬುದ್ಧಿಯನ್ನು ಕಾಣಬೇಕು. ಏಕೆಂದರೆ, ನಿತ್ಯವಾದ ಮೋಕ್ಷವು ಕೃತಕವಾದ ಯಜ್ಞಾದಿಕಾಮ್ಯಕರ್ಮಗಳಿಂದ ದೊರೆಯದು.

ಜಿಜ್ಞಾಸಾಧಿಕರಣ (೧-೧-೧)

**ಬ್ರಹ್ಮಸೂತ್ರಭಾಷ್ಯಮ್ –**

**तद्विज्ञानार्थं स गुरुमेवाभि-गच्छेत् समित्पाणिः श्रोत्रियं ब्रह्मनिष्ठम् ।'**

ಆ ಕಾರಣದಿಂದಲೇ ಹೆಚ್ಚಿನ ಬ್ರಹ್ಮಜ್ಞಾನಕ್ಕಾಗಿ ಸಮಿತ್ತನ್ನು ಹಿಡಿದು (ಕೈಜೋಡಿಸಿ) ವೇದಾಧ್ಯಯನದಲ್ಲಿ ನಿಷ್ಣಾತನಾದ, ಬ್ರಹ್ಮನಿಷ್ಠನಾದ ಗುರುವನ್ನು ಶರಣಾಗಬೇಕು.

**ಬ್ರಹ್ಮಸೂತ್ರಭಾಷ್ಯಮ್ –**

**'यमेवैष वृणुते तेन लभ्यस्तस्यैष आत्मा विवृणुते तनूं स्वाम् ।'**

ಭಗವಂತನು ಯಾರನ್ನು ತನ್ನವನನ್ನಾಗಿ ಸ್ವೀಕರಿಸುತ್ತಾನೋ ಅಂತಹವನಿಂದಲೇ ಪರಮಾತ್ಮನು ಹೊಂದಲ್ಪಡುತ್ತಾನೆ. ಅಂತಹ ಅಧಿಕಾರಿಗೆ ಪ್ರಸನ್ನನಾದ ಪರಮಾತ್ಮನು ತನ್ನ ಸ್ವರೂಪವನ್ನು ಪ್ರಕಟಗೊಳಿಸುತ್ತಾನೆ.

**ಬ್ರಹ್ಮಸೂತ್ರಭಾಷ್ಯಮ್ –**

**'यस्य देवे परा भक्तिर्यथा देवे तथा गुरौ ।**
**तस्यैते कथिता ह्यर्थाः प्रकाशन्ते (प्रकाश्यन्ते) महात्मनः ।।'**
**– इत्यादिश्रुतिभ्यश्च ।।**

ಯಾವ ಭಕ್ತರಿಗೆ ಕ್ರೀಡಾದಿಗುಣವಿಶಿಷ್ಟನಾದ ಪರಮಾತ್ಮನಲ್ಲಿ ನಿರವಧಿಕವಾದ ಭಕ್ತಿಯಿದೆಯೋ, ಹಾಗೂ ಗುರುಗಳಲ್ಲಿ ತಾರತಮ್ಯಾನುಸಾರಿಯಾದ ಭಕ್ತಿಯಿದೆಯೋ ಅವನಿಗೆ ಮಾತ್ರ ಗುರುಗಳು ಹೇಳಿದ ವಿಷಯವು ಮನಮುಟ್ಟುತ್ತದೆ.

ಇವೇ ಮೊದಲಾದ ಶ್ರುತಿಗಳಿಂದ ಅಧಿಕಾರಿಗಳಲ್ಲಿ ಇರುವ ಅರ್ಹತೆಯು ಸ್ಪಷ್ಟವಾಗುತ್ತದೆ.

ಪ್ರತಿಪದಾರ್ಥ - ಅಧ್ಯಯನವು ಬ್ರಹ್ಮವಿದ್ಯೆಗೆ ಅಧಿಕಾರವೆಂದು ಹೇಳಲಾಯಿತು. ಇದು ಹೇಗೆ? ಅಧ್ಯಯನಮಾತ್ರವತಃ = ಯಥಾಶಕ್ತಿವೇದಾಧ್ಯಯನ ಮಾಡಿದವನಿಗೆ ಮಾತ್ರ ಬ್ರಹ್ಮವಿದ್ಯೆಯಲ್ಲಿ ಅಧಿಕಾರ; ನಾವಿಶೇಷಾತ್ = ವೇದವಿದ್ಯಾಧಿಕಾರದಲ್ಲಿಯೂ ತಾರತಮ್ಯವಿದೆ. 'ಮೂರನೇ ಅಧ್ಯಾಯದ ನಾಲ್ಕನೇ ಪಾದದಲ್ಲಿ ಹೇಳುತ್ತಾರೆ'.

ಶಮಾದಿಗಳೂ ಸಹ ಬ್ರಹ್ಮವಿದ್ಯಾಧಿಕಾರದಲ್ಲಿ ಆವಶ್ಯಕವೆನ್ನಲು ಕಾಣ್ವಶ್ರುತಿಯನ್ನು ಉದಾಹರಿಸುತ್ತಿದ್ದಾರೆ. ಶಾಂತಃ = ಭಗವನ್ನಿಷ್ಠನಾದವನು,

ದಾಂತಃ = ಇಂದ್ರಿಯನಿಗ್ರಹವುಳ್ಳವನು, ಉಪರತಃ = ವಿಷಯಭೋಗದಲ್ಲಿ ಅಲಂಬುದ್ಧಿಯುಳ್ಳವನು, ತಿತಿಕ್ಷುಃ = ದ್ವಂದ್ವಸಹಿಷ್ಣುವಾದವನು, ಸಮಾಹಿತಃ = ತತ್ವಜ್ಞಾನವುಳ್ಳವನು, ಭೂತ್ವಾ = ಆಗಿ, ಆತ್ಮನಿ = ತನ್ನ ಹೃದಯದಲ್ಲಿ, ಆತ್ಮಾನಂ = ಪರಮಾತ್ಮನನ್ನು, ಪಶ್ಯೇತ್ = ಕಾಣಬೇಕು.

ಸಾರಾಸಾರ ಮತ್ತು ನಿತ್ಯಾನಿತ್ಯವಿವೇಕದಿಂದ ಹುಟ್ಟಿದ ವೈರಾಗ್ಯವು ಬ್ರಹ್ಮವಿದ್ಯಾಧಿಕಾರಿಗೆ ಆತ್ಯಾವಶ್ಯಕವೆನ್ನಲು ಆಥರ್ವಣಶ್ರುತಿಯನ್ನು ಉದಾಹರಿಸುತ್ತಿದ್ದಾರೆ. ಬ್ರಾಹ್ಮಣಃ = ಬ್ರಹ್ಮಜ್ಞಾನಿಯಾಗಲು ಬಯಸುವವನು, ಕರ್ಮಚಿತಾನ್ = ಕಾಮ್ಯಕರ್ಮಗಳಿಂದ ದೊರೆಯುವ, ಲೋಕಾನ್ = ಸ್ವರ್ಗಾದಿಲೋಕಗಳನ್ನು, ಪರೀಕ್ಷ್ಯ = ವಿವೇಕದಿಂದ ತಿಳಿದು, ನಿರ್ವೇದಂ = ಕಾಮ್ಯಕರ್ಮಗಳ ಫಲಗಳಲ್ಲಿ ಅಲಂಬುದ್ಧಿಯನ್ನು, ಆಯಾತ್ = ಹೊಂದಬೇಕು. ಏಕೆಂದರೆ ಅಕೃತಃ = ಕೃತಕವಲ್ಲದ ಮೋಕ್ಷವು, ಕೃತೇನ = ಯಜ್ಞಾದಿಕೃತಕಪ್ರಯತ್ನಗಳಿಂದ, ನಾಸ್ತಿ = ದೊರೆಯುವುದಿಲ್ಲ. ತತ್ = ಆ ಕಾರಣದಿಂದ, ವಿಜ್ಞಾನಾರ್ಥಂ = ವಿಶೇಷತತ್ವಜ್ಞಾನಾರ್ಥಕ್ಕಾಗಿ, ಸಃ = ಆ ಜ್ಞಾನೇಚ್ಛುವು, ಸಮಿತ್ಪಾಣಿಃ = ಸಮಿತ್ತನ್ನು ಕೈಯ್ಯಲ್ಲಿ ಹಿಡಿದು (ಸಂ = ಚೆನ್ನಾಗಿ, ಇತ್ = ಜೋಡಿಸಲ್ಪಟ್ಟ, ಪಾಣಿಃ = ಕೈಯ್ಯುಳ್ಳವನಾಗಿ) ಶ್ರೋತ್ರಿಯಂ = ವೇದಾಧ್ಯಯನಶೀಲನಾದ, ಬ್ರಹ್ಮನಿಷ್ಠಂ = ನಿರಂತರ ಹರಿನಿಷ್ಠನಾದ, ಗುರುಮೇವ = ಗುರುವನ್ನೇ, ಅಭಿಗಚ್ಛೇತ್ = ಹೊಂದಿ, ಶರಣಾಗಬೇಕು.

ವಿಷ್ಣುಭಕ್ತಿಯೂ ಸಹ ಬ್ರಹ್ಮವಿದ್ಯೆಯಲ್ಲಿ ಅಧಿಕಾರವೆಂದು ಕಠೋಪನಿಷತ್ ವಾಕ್ಯವನ್ನು ಉದಾಹರಿಸುತ್ತಿದ್ದಾರೆ. ಯಂ = ಯಾವನನ್ನು, ಏಷಃ = ಇಚ್ಛಾರೂಪಿಯಾದ, ಆತ್ಮಾ = ಪರಮಾತ್ಮನು, ವೃಣುತೇ = ಸ್ವೀಕರಿಸುತ್ತಾನೋ, ತೇನೈವ = ಅಂತಹ ಭಕ್ತನಿಂದಲೇ, ಸಃ = ಆ ಪರಮಾತ್ಮನು, ಲಭ್ಯಃ = ಪ್ರಸನ್ನನಾಗಿ ಹೊಂದಲ್ಪಡುತ್ತಾನೆ. ತಸ್ಯ = ಆ ಅಧಿಕಾರಿಗೆ, ಏಷಃ = ಪ್ರಸನ್ನನಾದ, ಆತ್ಮಾ = ಪರಮಾತ್ಮನು, ಸ್ವಾಂ = ತನ್ನ, ತನೂಂ = ಸ್ವರೂಪವನ್ನು, ವಿವೃಣುತೇ = ಪ್ರಕಟಪಡಿಸುತ್ತಾನೆ.

ಪ್ರತಿಪದಾರ್ಥ - ಅಂತಹ ಭಕ್ತಿಯು ವಿಷ್ಣುವಿನಲ್ಲಿ ಉತ್ಕೃಷ್ಟವಾಗಿರಬೇಕು, ಉಳಿದ ಬ್ರಹ್ಮಾದಿಗುರುಗಳಲ್ಲಿ ತಾರತಮ್ಯಾನುಸಾರಿಯಾಗಿರಬೇಕೆಂದು ಶ್ವೇತಾಶ್ವತರೋಪನಿಷದ್ವಾಕ್ಯವನ್ನು ಉದಾಹರಿಸುತ್ತಿದ್ದಾರೆ. ಯಸ್ಯ = ಯಾವ ಅಧಿಕಾರಿಗೆ, ದೇವೇ = ಕ್ರೀಡಾದಿಗುಣವಿಶಿಷ್ಟನಾದ ಪರಮಾತ್ಮನಲ್ಲಿ, ಪರಾ = ನಿರವಧಿಕವಾದ, ಭಕ್ತಿಃ = ಭಕ್ತಿಯು, ಯಥಾ = ಹೇಗಿದೆಯೋ, ಗುರೌ = ಗುರುಗಳಲ್ಲಿ, ತಥಾ = ಹಾಗೆಯೇ ಯೋಗ್ಯತಾನುಸಾರಿಯಾದ, ಭಕ್ತಿಃ =

ಭಕ್ತಿಯು ಇರುತ್ತದೋ, ತಸ್ಯ = ಅಂತಹ ಭಕ್ತರಿಗೆ, ಏತೇ ಕಥಿತಾಃ = ಗುರುಗಳಿಂದ ಉಪದೇಶಿಸಲ್ಪಟ್ಟದ್ದು, ಪ್ರಕಾಶಂತೇ = ಮನ ಮುಟ್ಟುತ್ತವೆ. ಅಥವಾ ಮಹಾತ್ಮನಃ = ಮಹಾತ್ಮರಿಗೆ, ಆಕಥಿತಾಃ = ಗುರುಗಳಿಂದ ಉಪದಿಷ್ಟವಾಗದಿದ್ದರೂ, ಅರ್ಥಾಃ = ಅರ್ಥಗಳು, ಪ್ರಕಾಶಂತೇ = ಪ್ರಕಾಶಿಸುತ್ತವೆ. ಇತ್ಯಾದಿ = ಇವೇ ಮೊದಲಾದ, ಶ್ರುತಿಭ್ಯಶ್ಚ = ಶ್ರುತಿಸ್ಮೃತಿಗಳಿಂದಲೂ ಹೇಳಲ್ಪಟ್ಟಿದೆ.

## ಶ್ರುತ್ಯಾದಿಗಳಲ್ಲಿ ಹೇಳಲ್ಪಟ್ಟ ಅಧಿಕಾರ ಬ್ರಹ್ಮವಿದ್ಯೆಗೆ ಸಂಬಂಧಿಸಿದ್ದು

**तत्वप्रकाशिका – नन्वत्र 'ब्रह्मविद्यायाम्' इत्यनुक्तेः कुतोऽयमधिकारः ? तत्त्रैविध्यं च ब्रह्मविद्यायाम्? इत्यत आह – अध्ययनेति ।।**

ಪ್ರಶ್ನೆ - ಭಾಗವತತಂತ್ರದ ಈ ಪ್ರಮಾಣವಚನದಲ್ಲಿ 'ಬ್ರಹ್ಮವಿದ್ಯೆ'ಯಲ್ಲಿ ಈ ಅಧಿಕಾರ ಪ್ರಭೇದ ಎಂದು ಹೇಳಿಯೇ ಇಲ್ಲ. ಆದ್ದರಿಂದ ಇಲ್ಲಿ ಹೇಳಲ್ಪಟ್ಟ ಅಧಿಕಾರವು ಬ್ರಹ್ಮವಿದ್ಯೆಗೆ ಸಂಬಂಧಪಟ್ಟಿದೆಯೆಂದು ಮತ್ತು ಮೂರು ಪ್ರಕಾರದಲ್ಲಿರುವುದೆಂದು ಹೇಗೆ ತಿಳಿಯುತ್ತದೆ?

ಉತ್ತರ - ಈ ಪ್ರಶ್ನೆಗೆ 'ಅಧ್ಯಯನ ಮಾತ್ರವತಃ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

**तत्वप्रकाशिका – उपरि तृतीये वक्ष्यते । 'शमादिसंयुक्तता च ब्रह्मविद्यायामेवाधिकारः' इति श्रुत्याऽऽह – शान्त इति ।।**

ಉಪರಿ = ತೃತೀಯಾಧ್ಯಾಯದ ನಾಲ್ಕನೆಯ ಪಾದದಲ್ಲಿ ಹೇಳುತ್ತಾರೆ. ಶಮಾದಿಸಂಯುಕ್ತತಾ = ಶಮಾದಿಗಳಿಂದ ಕೂಡಿರುವಿಕೆಯೂ ಸಹ, ಬ್ರಹ್ಮವಿದ್ಯೆಯಲ್ಲಿಯೇ ಅಧಿಕಾರವಾಗಿದೆ ಎಂಬುದನ್ನು ಭಾಷ್ಯಕಾರರು ಶ್ರುತಿಯಿಂದ ಹೇಳುತ್ತಿದ್ದಾರೆ - 'ಶಾಂತಃ' ಇತ್ಯಾದಿಯಾಗಿ.

**तत्वप्रकाशिका – शान्तो = भगवन्निष्ठबुद्धिः । दान्तः = निगृहीतेन्द्रियः । उपरतः = विषयालम्बुद्धिमान् । तितिक्षुः = द्वन्द्वसहिष्णुः । समाहितो यथावस्तुज्ञानादिमान् ।**

ಶಾಂತಃ = ಭಗವಂತನಲ್ಲಿ ನಿಶ್ಚಲವಾದ ಬುದ್ಧಿಯು, ದಾಂತಃ = ಇಂದ್ರಿಯಜಯವು, ಉಪರತಃ = ವಿಷಯಪದಾರ್ಥಗಳಲ್ಲಿ 'ಸಾಕು' ಎಂಬ ಬುದ್ಧಿಯು, ತಿತಿಕ್ಷುಃ = ಸುಖ-

ದುಃಖಾದಿಗಳನ್ನು ಸಮಾನವಾಗಿ ಕಾಣುವಿಕೆಯು, ಸಮಾಹಿತಃ = ವಸ್ತುವಿನ ಯಥಾರ್ಥ-ಜ್ಞಾನವುಳ್ಳವನು.

**तत्वप्रकाशिका – 'शान्तादिर्भूत्वा परमात्मानं स्वस्थितं विद्यात् इति तेषां तादर्थ्यमुक्तं भवति, 'उपनीतोऽधीयीत' इत्यादिवत् ।**

'ಯಾವಾತನು ಶಾಂತಾದಿಗುಣವುಳ್ಳವನಾಗಿ ತನ್ನ ಹೃದಯದಲ್ಲಿರುವ ಪರಮಾತ್ಮನನ್ನು ತಿಳಿಯುತ್ತಾನೋ' ಎಂದು ಹೇಳಿದ್ದರಿಂದ ಬ್ರಹ್ಮಜ್ಞಾನಕ್ಕೆ ಶಮದಮಾದಿಗುಣಗಳು ಕಾರಣವೆಂದು ಸಿದ್ಧವಾಯಿತು. 'ಉಪನೀತೋऽಧೀಯೀತ' (ಉಪನಯನ ಮಾಡಿದ ಮೇಲೆ ಅಧ್ಯಯನ ಮಾಡಬೇಕು) ಎಂದು ಹೇಳಿದಾಗ ಅಧ್ಯಯನಕ್ಕೆ ಉಪನಯನವು ಕಾರಣವೆಂದು.

**तत्वप्रकाशिका – अत्र 'आत्मनि' इत्युक्त्या मध्यमाधिकारित्वं सूचितम् । 'ऋषयोऽन्तःप्रकाशाः' इति श्रुतेः ।**

'ಆತ್ಮನಿ' ಎಂದು ಹೇಳಿರುವುದರಿಂದ ಇದು ಮಧ್ಯಮಾಧಿಕಾರಿಯ ಲಕ್ಷಣವೆಂದು ಸೂಚಿಸಿದ್ದಾರೆ. ಏಕೆಂದರೆ 'ಋಷಯೋऽಂತಃಪ್ರಕಾಶಾಃ' (ಋಷಿಗಳು ಹೃದಯದಲ್ಲಿ ಪರಮಾತ್ಮನನ್ನು ಕಾಣುತ್ತಾರೆ) ಎಂಬ ಶ್ರುತಿ ಇರುವುದರಿಂದ.

**तत्वप्रकाशिका – सारासारविवेकाद्यपि ब्रह्मविद्यायामेवाधिकार इति श्रुत्या दर्शयति – परीक्ष्येति ।।**

ಸಾರಾಸಾರವಿವೇಕವೂ ಕೂಡ ಬ್ರಹ್ಮವಿದ್ಯೆಗೆ ಅಧಿಕಾರವೆನಿಸಿದೆ ಎಂಬುದನ್ನು 'ಪರೀಕ್ಷ್ಯ' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ.

**तत्वप्रकाशिका – लोकान् विष्णुलोकेतरान् कर्मापादितान् असारानित्यतया परीक्ष्य वैराग्यं प्राप्नुयात् । स च मोक्षादितरत्र निर्विण्णो विज्ञानार्थं गुरुमेवाभिगच्छेत्।**

ಲೋಕಾನ್ = ವಿಷ್ಣುಲೋಕಕ್ಕಿಂತ ಭಿನ್ನವಾದ, ಕರ್ಮದಿಂದ ಸಂಪಾದಿಸಲ್ಪಟ್ಟ ಸ್ವರ್ಗಾದಿಲೋಕಗಳನ್ನು, ಸಾರವಿಲ್ಲದ್ದು ಮತ್ತು ಅನಿತ್ಯವೆಂದು ತಿಳಿದು ವಿರಕ್ತನಾಗಬೇಕು. ಹೀಗೆ ಮೋಕ್ಷಕ್ಕಿಂತ ಇತರವಾದ ಲೋಕಗಳಲ್ಲಿ ವೈರಾಗ್ಯವನ್ನು ತಾಳಿ ತತ್ವನಿಶ್ಚಯಕ್ಕಾಗಿ

ಗುರುವನ್ನೇ ಅರಸಿ ಹೊರಡಬೇಕು.

**तत्वप्रकाशिका – 'यस्मात् नित्यपुमर्थो मोक्षकर्मादिना न सिध्यति तस्मात्' इत्यर्थः । अत्रापि विज्ञानपदेनोत्तमाधिकारित्वं सूचितम् । 'देवादीनां तु यज्ज्ञानं विज्ञानमिति कीर्तितम्' (गी.भाष्ये) इत्युक्तेः ।**

ಏಕೆಂದರೆ, ನಿತ್ಯಪುರುಷಾರ್ಥರೂಪವಾದ ಮೋಕ್ಷವು ಕರ್ಮಾದಿಗಳಿಂದ ದೊರೆಯುವುದಿಲ್ಲವಾದ ಕಾರಣ ಎಂದು. ಇಲ್ಲಿಯೂ ಸಹ ವಿಜ್ಞಾನಪದದಿಂದ ಉತ್ತಮಾಧಿಕಾರಿಯನ್ನು ಸೂಚಿಸಿದ್ದಾರೆ. 'ದೇವಾದೀನಾಂ ತು ಯಜ್ಜ್ಞಾನಂ ವಿಜ್ಞಾನಮಿತಿ ಕೀರ್ತಿತಮ್' ಎಂದು ಹೇಳಿದ್ದರಿಂದ.

**तत्वप्रकाशिका – विष्णुभक्तिरपि ब्रह्मविद्यायामधिकार इति श्रुत्याऽऽह – यमिति ।। 'एष विष्णुः यं वृणुते तेन लभ्यस्तस्य प्रसन्नो भवति । ततश्च तस्याधिकारिणः स्वस्वरूपं प्रकाशयति' इत्यर्थः ।**

ವಿಷ್ಣುಭಕ್ತಿಯೂ ಸಹ ಬ್ರಹ್ಮವಿದ್ಯೆಯ ಅಧಿಕಾರದಲ್ಲಿ ಆವಶ್ಯಕವೆಂಬುದನ್ನು ಶ್ರುತಿಯಿಂದ ಹೇಳುತ್ತಿದ್ದಾರೆ 'ಯಮೇವೈಷ' ಎಂಬುದಾಗಿ. ಏಷಃ = ಈ ವಿಷ್ಣುವು, ಯಮ್ = ಯಾವ ಸಾಧಕನನ್ನು, ವೃಣುತೇ = ಭಕ್ತನೆಂದು ಸ್ವೀಕರಿಸುತ್ತಾನೋ, ತೇನ = ಆ ಸಾಧಕನಿಂದಷ್ಟೆ, ಲಭ್ಯಃ = ಪರಮಾತ್ಮನು ದೊರೆಯುತ್ತಾನೆ. ತಸ್ಯ = ಅವನಿಗೆ ಮಾತ್ರ, ಪ್ರಸನ್ನೋ ಭವತಿ = ಪ್ರಸನ್ನನಾಗುತ್ತಾನೆ. ಅನಂತರ ಆ ಸಾಧಕಪುರುಷನಿಗೆ ತನ್ನ ಸ್ವರೂಪವನ್ನು ಪ್ರಕಟಪಡಿಸುತ್ತಾನೆ ಎಂದರ್ಥ.

**तत्वप्रकाशिका – अत्र वृणुते इत्यनेन भक्तत्वं सूचितम् । 'सा च भक्तिर्विष्णौ सर्वाधिका, अन्येष्वपि यथायोग्या ब्रह्मविद्योपयोगिनी' इत्येतच्छ्रुत्याऽऽह – यस्येति ।।**

ಇಲ್ಲಿ 'ವೃಣುತೇ' ಎಂದು ಹೇಳಿದ್ದರಿಂದ ಭಕ್ತಿ ಎಂಬ ಗುಣವನ್ನು ಸೂಚಿಸಿದಂತಾಯಿತು. ಅಂತಹ ಭಕ್ತಿಯು ವಿಷ್ಣುವಿನ ವಿಷಯದಲ್ಲಿ ಸರ್ವೋತ್ಕೃಷ್ಟವಾಗಿರಬೇಕು. ಇತರ ವಿಷಯದಲ್ಲಿ ಯಥಾಯೋಗ್ಯವಾಗಿರಬೇಕು. ಇಂತಹ ಭಕ್ತಿಯೇ ಬ್ರಹ್ಮವಿದ್ಯೆಯಲ್ಲಿ ಉಪಯುಕ್ತವಾಗುತ್ತದೆ. ಇದನ್ನೇ ಶ್ರುತಿಯಿಂದ ''ಯಸ್ಯ ದೇವೇ'' ಎಂದು ಹೇಳುತ್ತಿದ್ದಾರೆ.

## ಅಧ್ಯಯನ ಮಾಡಿದರೆ ಮಾತ್ರ ಬ್ರಹ್ಮವಿದ್ಯಾಧಿಕಾರ

**ಭಾವದೀಪಃ – तृतीय इति ।। 'अध्याये' चतुर्थपादे इत्यर्थः । 'मात्रा' इति कात्स्न्र्यार्थमुच्यते । 'यथाशक्ति कृत्स्नाध्ययनवतोधिकारिता' इत्युक्त्या कुतोऽयमधिकारो ब्रह्मविद्यायाम्? इति शङ्कापास्ता ।**

ಮೂರನೆಯ ಅಧ್ಯಾಯದ ನಾಲ್ಕನೆಯ ಪಾದದ ಹನ್ನೆರಡು ಹಾಗೂ ಹದಿಮೂರನೆಯ 'ಅಧ್ಯಯನ ಮಾತ್ರವತಃ' ಮತ್ತು 'ನಾವಿಶೇಷಾತ್' ಎಂಬ ಸೂತ್ರವಿದೆ. ಇಲ್ಲಿರುವ 'ಮಾತ್ರ' ಪದವು ಕಾತ್ಸ್ನ್ಯರ್ಥದಲ್ಲಿದೆ. 'ಯಥಾಶಕ್ತಿ ಕೃತ್ಸ್ನಾಧ್ಯಯನವತೋಽಧಿಕಾರಿತಾ' ಎಂದು ಹೇಳಿರುವುದರಿಂದ ಬ್ರಹ್ಮವಿದ್ಯೆಗೆ ಸಂಬಂಧಪಟ್ಟ ಅಧಿಕಾರವನ್ನು ಹೇಳಲಾಗಿದೆ ಎಂದು ಹೇಗೆ ಹೇಳುವಿರಿ ? ಎಂಬ ಆಶಂಕೆಯನ್ನು ನಿರಾಕರಣೆ ಮಾಡಿದಂತಾಯಿತು.

ಅಸಾರ್ವತ್ರಿಕಾಧಿಕರಣದ 'ಅಧ್ಯಯನ ಮಾತ್ರವತಃ' ಎಂಬ ಸೂತ್ರದಲ್ಲಿ ಹೇಳಿದ ವಿಚಾರ ಹೀಗಿದೆ - ವಿಷ್ಣುಭಕ್ತಿಯಿಲ್ಲದವನಿಗೆ ವೇದದಲ್ಲಿ ಅಧಿಕಾರವಿರುವುದಿಲ್ಲ. ಅದರಂತೆ ಗುರುಭಕ್ತಿಯಿಲ್ಲದವನಿಗೆ ಶಮದಮಾದಿಗಳನ್ನು ಹೊಂದದವನಿಗೆ, ಕೀಳುಜಾತಿಯವರಿಗೆ, ವೇದಾಧ್ಯಯನದಲ್ಲಿ ಅರ್ಹತೆಯಿರುವುದಿಲ್ಲ. ಆದ್ದರಿಂದ ಅಧ್ಯಯನವನ್ನು ಮಾಡಿರುವವನೇ ವೇದವಿಹಿತವಾದ ಬ್ರಹ್ಮಜ್ಞಾನದಲ್ಲಿ ಅರ್ಹನಾಗಿರುತ್ತಾನೆಂಬುದು ಸಜ್ಜನರಿಗೆ ಸಮ್ಮತವಾಗಿದೆ ಎಂದು ಬ್ರಹ್ಮತರ್ಕದಲ್ಲಿ ಸಮರ್ಥಿಸಲಾಗಿದೆ. ಮೊದಲು ವೇದಗಳನ್ನು ಅಧ್ಯಯನ ಮಾಡಿ, ಅನಂತರ ಅದರ ಅರ್ಥಗಳನ್ನು ಗುರುಮುಖದಿಂದ ತಿಳಿದುಕೊಳ್ಳಬೇಕು. ಹೀಗೆ ಪರಬ್ರಹ್ಮನನ್ನು ತಿಳಿದು ಅವನನ್ನು ಹೊಂದಬೇಕೆಂದು ಪೌಷ್ಕರವಶ್ರುತಿಯು ಹೇಳುತ್ತಿದೆ. ಹೀಗೆ ಅಧ್ಯಯನ ಮಾಡಿದವನಿಗೆ ಮಾತ್ರ ಬ್ರಹ್ಮಜ್ಞಾನದಲ್ಲಿ ಅಧಿಕಾರವೆಂದು ಈ ಸೂತ್ರದಲ್ಲಿ ಸಮರ್ಥಿಸಲಾಗಿದೆ.

## ಅಧಿಕಾರಿಗಳಲ್ಲಿಯೂ ತಾರತಮ್ಯವಿದೆ

**ಭಾವದೀಪಃ – सा चाधिकारिता देवादीनामविशेषान्न भवति । अविशेषेण न भवति । एकरूपा न भवति । अविशेषात् । ज्ञानादेरप्यविशेषप्रसङ्गात्। सा च 'प्रज्ञान्तरपृथक्त्ववद्दृष्टिश्च तदुक्तम्' इत्यत्र निरस्त इति 'नाविशेषात्' इत्यनेन तत् त्रैविध्यं च कुतः? इति शङ्काऽपास्तेति भावः ।**

'ಆಧ್ಯಯನ ಮಾತ್ರವತಃ' ಎಂಬ ಸೂತ್ರದ ಅನಂತರ 'ನಾವಿಶೇಷಾತ್ ಇತಿ ಚೋಪರಿ' ಎಂಬ ಸೂತ್ರವಿದೆ. ಈ ಸೂತ್ರದಲ್ಲಿ ಬ್ರಹ್ಮಜ್ಞಾನದ ಅಧಿಕಾರವು ದೇವತೆಗಳಲ್ಲಿಯೂ ಸಾಧಾರಣವಾಗಿದೆ ಎಂದು ಹೇಳಿದೆ, ಈ ಸೂತ್ರದಲ್ಲಿ ಸಮರ್ಥಿಸಿದ ವಿಚಾರ ಹೀಗಿದೆ - ದೇವತೆಗಳೇ ಮೊದಲಾದವರುಗಳ ಅಧಿಕಾರಗಳಲ್ಲಿ ಯೋಗ್ಯತೆಯು ಸಮಾನವಾಗಿರುವುದಿಲ್ಲ. ಮೋಕ್ಷಸಾಧನವಾದುದು ಧನ, ಧರ್ಮ, ಜ್ಞಾನ ಈ ಮೂರು ಮೋಕ್ಷಸಾಧನೆಗಳು. ಈ ಮೂರರಲ್ಲಿ ಒಂದಕ್ಕಿಂತ ಮತ್ತೊಂದು ಪ್ರಧಾನವಾಗಿದೆ. ಇವುಗಳಲ್ಲಿ ಮನುಷ್ಯರು, ಋಷಿಗಳು, ದೇವತೆಗಳು, ಅಧಿಕಾರಿಗಳು ಇವರಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಪ್ರಧಾನರಾಗಿದ್ದಾರೆ. ಸಾಧನದಲ್ಲಿ ತಾರತಮ್ಯವಿರುವಂತೆ ಅಧಿಕಾರಿಗಳಲ್ಲಿಯೂ ತಾರತಮ್ಯವಿದೆ. ಒಂದು ವೇಳೆ, ಅಧಿಕಾರದಲ್ಲಿ ತಾರತಮ್ಯವಿಲ್ಲದಿದ್ದರೆ, ಜ್ಞಾನದಲ್ಲಿಯೂ ಕೂಡ ತಾರತಮ್ಯವಿಲ್ಲದಿರಬೇಕಾದೀತು ಎಂದು ಸಮರ್ಥಿಸಿದ್ದಾರೆ.

'ಪ್ರಜ್ಞಾಂತರಪೃಥಕ್ತ್ವವದ್ ದೃಷ್ಟಿಶ್ಚ ತದುಕ್ತಮ್' ಎಂಬ ಮೂರನೆಯ ಅಧ್ಯಾಯದ ಮೂರನೆಯ ಪಾದದಲ್ಲಿ ಈ ಸೂತ್ರವಿದೆ. ಇದರಲ್ಲಿ ಸಮರ್ಥಿಸಿದ ವಿಚಾರ ಹೀಗಿದೆ - ಮೋಕ್ಷಾನಂದದಲ್ಲಿಯೂ ತಾರತಮ್ಯವಿರುವುದರಿಂದ, ಅದಕ್ಕನುಗುಣವಾಗಿ ಉಪಾಸನಾ ತಾರತಮ್ಯವನ್ನು ತಜ್ಜನ್ಯ ಅಪರೋಕ್ಷಜ್ಞಾನದ ತಾರತಮ್ಯವನ್ನು ಒಪ್ಪಬೇಕು. ಭಗವದ್ರೂಪಗಳಲ್ಲಿ ಭೇದವಿಲ್ಲದಿರುವುದರಿಂದ ಭಗವತ್ ಅಪರೋಕ್ಷದಲ್ಲಿ ತಾರತಮ್ಯವಿಲ್ಲವೆಂದು ಪೂರ್ವಪಕ್ಷವು ಪ್ರಾಪ್ತವಾದರೆ, ಅದರ ಪರಿಹಾರಕ್ಕಾಗಿ ಈ ಸೂತ್ರ ಹೊರಟಿದೆ. ಕಾರಣಭೇದದಿಂದ ಕಾರ್ಯವು ಭಿನ್ನವಾಗಲೇ ಬೇಕು. ಉಪಾಸನೆಯಲ್ಲಿ ತಾರತಮ್ಯಪ್ರಭೇದವಿರುವುದರಿಂದ, ಭಗವದಪರೋಕ್ಷದಲ್ಲಿಯೂ ತಾರತಮ್ಯವಿರಲೇಬೇಕು. ಮತ್ತು ಪ್ರಮಾಣಗಳೂ ಸಹ ಸ್ಪಷ್ಟವಾಗಿ ಹಾಗೇ ಹೇಳುತ್ತಿವೆ. ಕಮಠ ಶ್ರುತಿ ಹೀಗಿದೆ - ಯೋಗಿಗಳು ಹೃದಯದಲ್ಲಿ ಶ್ರೀಹರಿಯನ್ನು ಕಾಣುತ್ತಾರೆ. ಕರ್ಮಯೋಗಿಗಳು ಅಜ್ಞಾನಿಗಳಲ್ಲಿ, ಅಪ್ರಬುದ್ಧರು ಪ್ರತಿಮೆಯಲ್ಲಿ ಶ್ರೀಹರಿಯನ್ನು ಕಾಣುತ್ತಾರೆ. ಹೀಗೆ ಅವರವರ ಯೋಗ್ಯತೆಗನುಗುಣವಾಗಿ ಭಗವಂತನನ್ನು ಸಾಧಿಸಲು ಉಪಾಸನೆಗೈಯುತ್ತಾರೆ. ಆದ್ದರಿಂದ ಭಗವದಪರೋಕ್ಷದಲ್ಲಿ ತಾರತಮ್ಯವನ್ನು ಒಪ್ಪಬೇಕು.

ಹೀಗೆ ಅಧಿಕಾರದಲ್ಲಿ ತಾರತಮ್ಯವಿದೆಯೆಂದು ಈ ಸೂತ್ರದಿಂದ ಸಿದ್ಧವಾಗಿದೆ. ಆದ್ದರಿಂದ 'ನವಿಶೇಷಾತ್' ಎಂಬ ಸೂತ್ರದಲ್ಲಿ ತ್ರೈವಿಧ್ಯವನ್ನು ಏಕೆ ಒಪ್ಪಬೇಕು ? ಎಂಬ ಆಶಂಕೆಯನ್ನು ಪರಿಹರಿಸಿದಂತಾಗುತ್ತದೆ.

## ಬ್ರಹ್ಮವಿದ್ಯೆ ಎಂದರೆ ?

**ಭಾವದೀಪಃ – ब्रह्मविद्यायां श्रवणादिरूपायाम् । श्रुत्येति ।। विस्पष्टं विवक्षितसर्वार्थलाभात् स्मृतिः पूर्वमुक्ता इति भावः ।**

'ಬ್ರಹ್ಮವಿದ್ಯಾಯಾಂ' ಎಂಬುದಾಗಿ ಟೀಕೆಯಲ್ಲಿ ಶಮಾದಿಗುಣವನ್ನು ಪಡೆದಿರುವ ವ್ಯಕ್ತಿಗೆ ಬ್ರಹ್ಮವಿದ್ಯೆಯಲ್ಲೇ ಅಧಿಕಾರವೆಂದು ಹೇಳಿರುತ್ತಾರೆ. 'ಬ್ರಹ್ಮವಿದ್ಯೆ' ಎಂದರೆ ಶ್ರವಣ-ಮನನಾದಿಗಳಲ್ಲಿ ಎಂದರ್ಥ. ಇದನ್ನೇ ಶ್ರುತಿಯಿಂದ ಸ್ಪಷ್ಟವಾಗಿ ಸಾಧನೆ ಮಾಡುತ್ತಿದ್ದಾರೆ. ತಮಗೆ ವಿವಕ್ಷಿತವಾದ ಸಕಲ ಅರ್ಥಗಳು ಶ್ರುತಿಗೆ ಸಮ್ಮತವಾಗಿವೆ ಎಂದು ಸ್ಪಷ್ಟಪಡಿಸುತ್ತಾರೆ. ಶ್ರುತಿ ಪ್ರಮಾಣವನ್ನು ಈಗಾಗಲೇ ಹಿಂದೆ ಪ್ರದರ್ಶಿಸಿದ್ದಾಗಿದೆ.

### ಟೀಕೆಯ ವ್ಯಾಖ್ಯಾನ ಭಾರದ್ವಾಜ ಸಂಹಿತೆಯನ್ನು ಅನುಸರಿಸಿದೆಯೇ?

**ಭಾವದೀಪಃ – अत्रैके कानिचिद्वचनान्युदाहृत्य तदनुरोधेन टीकायां श्रुत्यर्थोक्तिः इत्याहुः । तानि चाचार्यैर्न काप्युदाहृतानीति केचिन्न श्रद्दधते । अन्ये त्वाचार्यानुदाहृतत्वेऽपि पञ्चरात्रपञ्चाधिकरणीसूत्रभाव(भाष्य) विवृतिपरभारद्वाजसंहितादौ पठ्यमानत्वाददोष इत्याहुः ।**

ಕೆಲವರು ಕೆಲವು ಶ್ರುತಿಗಳನ್ನು ಉದಾಹರಿಸಿ ಅದಕ್ಕೆ ಅನುಗುಣವಾಗಿ ಟೀಕೆಯಲ್ಲಿ ಶ್ರುತಿಯ ಅರ್ಥವನ್ನು ಹೇಳುತ್ತಾರೆಂದು ವ್ಯಾಖ್ಯಾನ ಮಾಡುತ್ತಾರೆ. ಆದರೆ ಅವರು ಉದಾಹರಿಸುವ ಶ್ರುತಿಗಳನ್ನು ಶ್ರೀಮದಾಚಾರ್ಯರು ಬೇರೆ ಯಾವುದೇ ಗ್ರಂಥಗಳಲ್ಲಿಯೂ ಉದಾಹರಿಸಿಲ್ಲ. ಆದ್ದರಿಂದ ಅವರ ವ್ಯಾಖ್ಯಾನ ಅಸಮೀಚೀನವಾಗಿದೆ ಎಂದು ಇನ್ನೂ ಕೆಲವರ ಅಭಿಪ್ರಾಯ. ಮತ್ತು ಕೆಲವರು ಶ್ರೀಮದಾಚಾರ್ಯರು ಉದಾಹರಣೆ ಮಾಡದಿದ್ದರೂ, ಪಂಚರಾತ್ರದ ಐದು ಅಧಿಕರಣಗಳ ಸೂತ್ರದ ಅಭಿಪ್ರಾಯವನ್ನು ವಿವರಿಸಲು ಹೊರಟಿರುವ ಭಾರದ್ವಾಜಸಂಹಿತೆಯಲ್ಲಿ ಆ ಶ್ರುತಿಗಳ ಉಲ್ಲೇಖವಿರುವುದರಿಂದ

ಟೀಕೆಯಲ್ಲಿ ಅದನ್ನೇ ವ್ಯಾಖ್ಯಾನ ಮಾಡಿದ್ದಾರೆ ಎಂದು ಹೇಳುವುದು ತಪ್ಪಲ್ಲವೆಂದು ವ್ಯಾಖ್ಯಾನ ಮಾಡುತ್ತಾರೆ.

## 'ಶಮ' ಎಂದರೇನು ? - ತತ್ವಪ್ರದೀಪ

**ಭಾವದೀಪಃ** – 'ಶಮೋ ಮನ್ನಿಷ್ಠತಾ ಬುದ್ಧಿಃ' ಇತ್ಯೇಕಾದಶಸ್ಕನ್ಧೋಕ್ತೇರಾಹ – **ಭಗವನ್ನಿಷ್ಠೇತಿ** ।। **'ವೈಷ್ಣವಸಿದ್ಧಾನ್ತಾದಚಲನಮ್ ಇತ್ಯರ್ಥಃ' ಇತಿ ತತ್ವಪ್ರದೀಪೇ ।**

'ಶಮೋ ಮನ್ನಿಷ್ಠತಾ ಬುದ್ಧಿಃ' ಎಂಬುದಾಗಿ ಭಾಗವತದ ಏಕಾದಶಸ್ಕಂಧದಲ್ಲಿ ಹೇಳಿರುತ್ತಾರೆ. ಅದನ್ನು ವಿವಕ್ಷಿಸಿ, ಟೀಕೆಯಲ್ಲಿ 'ಭಗವನ್ನಿಷ್ಠ ಬುದ್ಧಿಃ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಇದಕ್ಕೆ ತತ್ವಪ್ರದೀಪದಲ್ಲಿ 'ವೈಷ್ಣವಸಿದ್ಧಾಂತಾಚಲನಮ್ ಇತ್ಯರ್ಥಃ' ಎಂದು ವ್ಯಾಖ್ಯಾನ ಮಾಡಿದ್ದಾರೆ. ವೈಷ್ಣವ ಸಿದ್ಧಾಂತವನ್ನು ದೃಢವಾಗಿ ನಂಬುವುದೇ 'ಭಗವನ್ನಿಷ್ಠತಾ ಬುದ್ಧಿ' ಎಂದು ಕರೆಸಿಕೊಳ್ಳುತ್ತದೆ.

## ನಾರಾಯಣತಂತ್ರದ ಆಧಾರದಲ್ಲಿ 'ಪಶ್ಯೇತ್' ಎಂಬುದರ ವ್ಯಾಖ್ಯಾನ

**ಭಾವದೀಪಃ** – 'ಪಶ್ಯೇತ್' ಇತ್ಯುಕ್ತ್ಯಾ ಶಮಾದೇರಪರೋಕ್ಷಾಙ್ಗತ್ವಪ್ರತೀತ್ಯಾ ಪ್ರಕೃತಾನುಪಯೋಗಮಾಶಙ್ಕ್ಯ, 'ಅನುಬನ್ಧಾದಿಭ್ಯಃ' ಇತ್ಯತ್ರ ತೃತೀಯೇ–

ದದ್ಯಾಚ್ಛಮದಮಾದೀಂಶ್ಚ ತೇನ ಚೈತೇ ಗುಣಾಃ ಪುನಃ ।
ತೈಃ ಸರ್ವೈರ್ದರ್ಶನಂ ವಿಷ್ಣೋಃ ಶ್ರವಣಾದಿಕೃತಂ ಭವೇತ್ ।।

ಇತ್ಯಾದಿಸ್ಮೃತ್ಯಾದೌ ವಕ್ಷ್ಯಮಾಣದಿಶಾ ಅಪರೋಕ್ಷಾಙ್ಗತ್ವಮಿವ ಪ್ರಶಾನ್ತಚಿತ್ತಾಯ ಶಮಾನ್ವಿತಾಯ 'ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಮ್' ಇತ್ಯಾದೌ ಶ್ರವಣಾದಿರೂಪಬ್ರಹ್ಮವಿದ್ಯಾಙ್ಗತ್ವಮಪಿ ಶ್ರುತಮಿತಿ ಭಾವೇನ ಪಶ್ಯೇದಿತಿ ಪದಂ ಶ್ರವಣಾದಿರೂಪಜ್ಞಾನಮಾತ್ರಾರ್ಥತಯಾ ವ್ಯಾಚಷ್ಟೇ – **ವಿದ್ಯಾದಿತಿ** ।।

ಶ್ರುತಿಯಲ್ಲಿ 'ಪಶ್ಯೇತ್' ಎಂದು ಹೇಳಿದ್ದರಿಂದ ಶಮದಮಾದಿಗಳು ಅಪರೋಕ್ಷಜ್ಞಾನಕ್ಕೆ ಅಂಗವಾಗಿವೆ ಎಂದು ಪ್ರತೀತವಾಗುತ್ತವೆ. ಇದರ ನಿರೂಪಣೆ ಪ್ರಕೃತ ಅನುಪಯುಕ್ತವಲ್ಲವೇ? ಎಂದು ಆಶಂಕಿಸಬಾರದು. ಏಕೆಂದರೆ ಶಮಾದಿಗಳು ಅಪರೋಕ್ಷಜ್ಞಾನಕ್ಕೆ ಅಂಗವಾಗುವಂತೆ ಬ್ರಹ್ಮವಿದ್ಯೆಗೂ ಕೂಡ ಅಂಗವಾಗಿವೆ. 'ಅನುಬಂಧಾದಿಭ್ಯಶ್ಚ' ಎಂಬುದಾಗಿ ಮೂರನೆಯ

ಅಧ್ಯಾಯದ ಮೂರನೆಯ ಪಾದದ ಐವತ್ತೊಂದನೆಯ ಸೂತ್ರದಲ್ಲಿ ಗುರುದೇವತಾ ಅನುಗ್ರಹದಿಂದ ಮಾತ್ರ ಮೋಕ್ಷವಾಗುವುದಲ್ಲ. ಹರಿ-ಗುರುಗಳಲ್ಲಿ ಮಾಡುವ ಭಕ್ತಿಯಿಂದಲೂ ಮತ್ತು ಶಮದಮಾದಿಗಳಿಂದಲೂ ಮೋಕ್ಷವಾಗುತ್ತದೆ ಎಂದು ಸಮರ್ಥಿಸಿದ್ದಾರೆ -

ದದ್ಯಾತ್ ಶಮದಮಾದೀಂಶ್ಚ ತೇನ ಚೈತೇ ಗುಣಾಃ ಪುನಃ ।
ತೈಃ ಸರ್ವೈರ್ದರ್ಶನಂ ವಿಷ್ಣೋಃ ಶ್ರವಣಾದಿಕೃತಂ ಭವೇತ್ ॥

ಭಕ್ತಿಯು ಗುರುವಿನ ಅನುಗ್ರಹದ ಜೊತೆಗೆ ಶಮದಮಾದಿಗುಣಗಳನ್ನೂ ಕೂಡ ನೀಡುತ್ತದೆ. ಇಂತಹ ಭಕ್ತಿಯಿಂದ ಅಪರೋಕ್ಷಸಾಧಕವಾದ ಗುಣಗಳು ಅಭಿವ್ಯಕ್ತವಾಗುತ್ತವೆ. ಅಂತಹ ಗುಣಗಳಿಂದ ಭಗವಂತನ ಅಪರೋಕ್ಷವು ಸುಲಭವಾಗುತ್ತವೆ. ಮಾಡಿದ ಶ್ರವಣಾದಿ ಸತ್ಕರ್ಮಗಳು ಸಾರ್ಥಕವಾಗುತ್ತವೆ.

ಹೀಗೆ ನಾರಾಯಣತಂತ್ರದಲ್ಲಿ ಸಮರ್ಥಿಸಲಾಗಿದೆ. ಆದ್ದರಿಂದ ಶಮದಮಾದಿಗಳು ಅಪರೋಕ್ಷಜ್ಞಾನಕ್ಕೆ ಅಂಗವಾಗಿವೆ ಎಂಬುದು ಇದರಿಂದ ನಿರ್ಣಯವಾಗುತ್ತದೆ. ಇಷ್ಟೇ ಆದರೆ 'ಪ್ರಶಾಂತಚಿತ್ತಾಯ ಶಮಾನ್ವಿತಾಯ ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಮ್' ಶಮದಮಾದಿ ಸಂಪತ್ತನ್ನು ಪಡೆದ ಭಗವನ್ನಿಷ್ಠನಾದವನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಮಾಡಿದರು ಎಂಬ ಮಾತಿನಂತೆ ಶ್ರವಣಾದಿರೂಪವಾದ ಬ್ರಹ್ಮವಿದ್ಯೆಯೂ ಕೂಡ ಶಮದಮಾದಿಗಳಿಗೆ ಅಂಗವಾಗಿವೆ ಎಂದು ಪ್ರಮಾಣದಿಂದ ಸಿದ್ಧವಾಗುತ್ತದೆ. ಈ ಅಭಿಪ್ರಾಯದಿಂದ 'ಪಶ್ಯೇತ್' ಎಂಬ ಪದದ ಅರ್ಥವನ್ನು ತಿಳಿಯಬೇಕು.

## 'ಏವಂವಿತ್' ಎಂದರೇನು ?

**ಭಾವದೀಪಃ** – तस्मात् 'एवंवित् शान्तः' इति पूर्ववाक्ये 'एवंवित्' शब्देन न श्रवणादिरूपं ज्ञानं विवक्षितं किन्तु तदङ्गमन्यदेव ज्ञानम् इति भावः ।

'ತಸ್ಮಾತ್ ಏವಂವಿತ್ ಶಾಂತಃ' ಎಂಬ ಹಿಂದಿನ ವಾಕ್ಯದಲ್ಲಿ 'ಏವಂವಿತ್' ಎಂಬ ಪದದಿಂದ ಶ್ರವಣಾದಿ ರೂಪವಾದ ಜ್ಞಾನವು ವಿವಕ್ಷಿತವಾಗಿಲ್ಲ. ಅದಕ್ಕೆ ಪೂರಕವಾದ ಮತ್ತೊಂದು ಜ್ಞಾನವು ವಿವಕ್ಷಿತವಾಗಿದೆ ಎಂದು ತಿಳಿಯಬೇಕು.

## ಪಾಣಿನೀ ಸೂತ್ರದಂತೆ 'ಪಶ್ಯೇತ್' ಎಂಬ ಪದದ ವ್ಯಾಖ್ಯಾನ

**ಭಾವದೀಪಃ** – 'अपरोक्षदृशो मिथ्यादर्शनं न क्वचिद्भवेत्' इत्येतद्व्याख्यानावसरे तत्वनिर्णयटीकादौ 'पश्यार्थैश्च नालोचने'(१) इति पाणिनीये चाक्षुषभिन्नज्ञानार्थैरित्यर्थोक्त्या दृशि धात्वादेशस्य पश्येदित्यस्य ज्ञानमात्रे प्रयोगादिति व्याख्यानादिति हृदयम् ।

'ಅಪರೋಕ್ಷದೃಶೋ ಮಿಥ್ಯಾದರ್ಶನಂ ನ ಕ್ವಚಿದ್ ಭವೇತ್' ಅಪರೋಕ್ಷಜ್ಞಾನಿಗೆ ಅನ್ಯಥಾಜ್ಞಾನವು ಎಂದೂ ಸಹ ಬರುವುದಿಲ್ಲ ಎಂಬ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ತತ್ವನಿರ್ಣಯದ ಟೀಕೆಯಲ್ಲಿ 'ಪಶ್ಯಾರ್ಥೈಶ್ಚ ನಾಲೋಚನೇ' ಎಂಬುದಾಗಿ ಪಾಣಿನಿ ಸೂತ್ರದ ಆಧಾರದಿಂದ 'ಪಶ್ಯೇತ್' ಎಂಬ ಪದಕ್ಕೆ 'ಜ್ಞಾನ' ಎಂಬರ್ಥವನ್ನಷ್ಟೇ ಹೇಳಲಾಗಿದೆ. ಚಾಕ್ಷುಷಜ್ಞಾನಕ್ಕಿಂತ ಬೇರೆಯಾದ ಜ್ಞಾನವು ವಿವಕ್ಷಿತವಾದಾಗ 'ದೃಶಿ' ಧಾತುವಿಗೆ 'ಪಶ್ಯ' ಎಂಬ ಆದೇಶವು ಬರುತ್ತದೆ ಎಂದು ಸೂತ್ರವು ಹೇಳಿದೆ. ಆದ್ದರಿಂದ ಜ್ಞಾನಸಾಮಾನ್ಯದಲ್ಲೇ 'ಪಶ್ಯೇತ್' ಎಂಬ ಪದವನ್ನು ಪ್ರಯೋಗಿಸಬೇಕು ಎಂಬುದು ಟೀಕೆಯ ಹೃದಯ.

## 'ಪಶ್ಯೇತ್' ಎಂಬ ಪ್ರಯೋಗ ಸರ್ವಥಾ ತಪ್ಪಲ್ಲ

**ಭಾವದೀಪಃ** – षष्ठे काण्वशाखायां 'पश्यति' इति पाठेऽपि तदर्थानुवादेन शाखान्तरस्थत्वेन भाष्ये 'पश्येत्' इति पाठः साधुरिति भावः ।

ಕಾಣ್ವಶಾಖೆಯ ಆರನೆಯ ಅಧ್ಯಾಯದಲ್ಲಿ 'ಪಶ್ಯತಿ' ಎಂಬ ಪ್ರಯೋಗವಿದೆ. ಆದರೂ ಪ್ರಕೃತ ಟೀಕೆಯಲ್ಲಿ 'ಪಶ್ಯೇತ್' ಎಂದು ಅನುವಾದ ಮಾಡಿದ್ದು ತಪ್ಪಲ್ಲ. ಏಕೆಂದರೆ 'ಪಶ್ಯತಿ' ಎಂಬ ಪದದ ಅರ್ಥವನ್ನು ಅನುವಾದ ಮಾಡಿ, ಬೇರೆ ಶಾಖೆಯ ಭಾಷ್ಯದಲ್ಲಿ 'ಪಶ್ಯೇತ್' ಎಂಬ ಪಾಠವನ್ನು ವಿವಕ್ಷಿಸಿದ್ದಾರೆ. ಆ ದೃಷ್ಟಿಯಿಂದ ಟೀಕೆಯಲ್ಲಿಯೂ 'ಪಶ್ಯೇತ್' ಎಂದೇ ಪ್ರಯೋಗಿಸಿದ್ದಾರೆ.

**ಭಾವದೀಪಃ** – इति श्रुतेरिति ।। चतुर्थाध्यायतृतीयपादान्ते 'विशेषं च दर्शयति' इत्यत्र भाष्योक्तश्रुतेरित्यर्थः ।

(१) ८/१/२५

ನಾಲ್ಕನೆಯ ಅಧ್ಯಾಯದ ಮೂರನೆಯ ಪಾದದಲ್ಲಿ 'ವಿಶೇಷಂ ಚ ದರ್ಶಯತಿ' ಎಂಬ ಸೂತ್ರದ ಭಾಷ್ಯದಲ್ಲಿ 'ಋಷಯೋಽಂತಪ್ರಕಾಶಾಃ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದಾರೆ.

## ವೈರಾಗ್ಯದಂತೆ ವಿವೇಕವು ಸಾಕ್ಷಾತ್ ಸಾಧಕವಲ್ಲ

**ಭಾವದೀಪಃ – ವಿವೇಕಾದ್ಯಾಪೀತಿ ।।** 'ಆದಿ'ಪದೋಕ್ತವೈರಾಗ್ಯದ್ವಾರಾऽಧಿಕಾರತ್ವಂ ವಿವೇಕಸ್ಯ ಜ್ಞೇಯಮ್ । ನತು ಪರಮತ ಇವ ವೈರಾಗ್ಯಾದಿವತ್ಸಾಕ್ಷಾತ್ । 'ಪರೀಕ್ಷ್ಯ' ಇತಿ ಶ್ರುತೌ 'ವಿಜ್ಞಾಯ ಜಾತವೈರಾಗ್ಯಃ' ಇತಿ ಸ್ಮೃತೌ ಚ ಲ್ಯಬಂತೋಕ್ತ್ಯಾ ತಥೈವ ಪ್ರತೀತೇಃ । ಉಕ್ತಂ ಚ ಪದ್ಧತ್ಯಾದೌ 'ತದೇವಂಭೂತೈಃ ಪ್ರಮಾಣೈಃ ಪದಾರ್ಥಾನಾಂ ನಿತ್ಯಾನಿತ್ಯತ್ವಾದಿಕಂ ನಿಶ್ಚಿತ್ಯ ವಿಷಯೇಷು ವಿರಕ್ತಸ್ಯ' ಇತ್ಯಾದಿ ।

'ವಿವೇಕಾದ್ಯಾಪಿ' ಎಂಬಲ್ಲಿರುವ ಆದಿಪದದಿಂದ ವೈರಾಗ್ಯವನ್ನು ವಿವಕ್ಷಿಸಬೇಕು. ಈ ವೈರಾಗ್ಯದ ಮೂಲಕ ವಿವೇಕವು ಬ್ರಹ್ಮವಿದ್ಯೆಯ ಅಧಿಕಾರಕ್ಕೆ ಅಂಗವಾಗಿದೆ ಎಂದು ತಿಳಿಯಬೇಕು. ಹೊರತು, ಪರವಾದಿಗಳು ಹೇಳುವಂತೆ ವಿವೇಕವು ನೇರವಾಗಿ ವೈರಾಗ್ಯದಂತೆ ಅಧಿಕಾರವಾಗುವುದಿಲ್ಲ. 'ಪರೀಕ್ಷ್ಯ ಲೋಕಾನ್' ಎಂಬ ಶ್ರುತಿಯಲ್ಲಿ 'ವಿಜ್ಞಾಯ ಜಾತವೈರಾಗ್ಯಃ' ಎಂಬ ಸ್ಮೃತಿಯಲ್ಲಿಯೂ ಲ್ಯಬಂತ ಎಂಬ ಶಬ್ದವನ್ನು ಪ್ರಯೋಗಿಸಿದ್ದರಿಂದ ನೇರವಾಗಿಯೇ ವಿವೇಕವು ಸಾಧನವಾಗುತ್ತದೆಂಬ ಪ್ರತೀತಿ ಬರುತ್ತದೆ. ಪ್ರಮಾಣ ಪದ್ಧತಿಯಲ್ಲಿ 'ತದೇವಂಭೂತೈಃ ಪ್ರಮಾಣೈಃ ಪದಾರ್ಥಾನಾಂ ನಿತ್ಯಾನಿತ್ಯತ್ವಾದಿಕಂ ನಿಶ್ಚಿತ್ಯ ವಿಷಯೇಷು ವಿರಕ್ತಸ್ಯ' ಇಲ್ಲಿಯತನಕ ನಿರೂಪಣೆ ಮಾಡಿದಂತೆ ಪ್ರಮಾಣಗಳಿಂದ ಪದಾರ್ಥಗಳ ನಿತ್ಯಾನಿತ್ಯತ್ವವನ್ನು ಅರಿತು, ವಿಷಯ ಪದಾರ್ಥಗಳಲ್ಲಿ ವಿರಕ್ತನಾದವನಿಗೆ ಇತ್ಯಾದಿಯಾಗಿ ಹೇಳಿರುತ್ತಾರೆ.

## ಗುರೂಪಸತ್ತಿಗಿಂತ ಮೊದಲೇ ವಿವೇಕವಿರಬೇಕು

**ಭಾವದೀಪಃ –** 'ತತ್' ಇತ್ಯಸ್ಯಾರ್ಥಃ 'ತಸ್ಮಾತ್' ಇತಿ । ಅತ್ರ ವಿವೇಕಾದೇಃ ಶ್ರವಣಾದ್ಯಙ್ಗಗುರೂಪಸತ್ತೇಃ ಪೂರ್ವಭಾವಶ್ರವಣಾತ್ ತಾದರ್ಥ್ಯೆ ಸಿದ್ಧಮಿತಿ ಸ್ಫುಟತ್ವಾತ್ ನೋಕ್ತಮ್ । ಭಾಷ್ಯೇ 'ಶ್ರೋತ್ರಿಯಮ್' ಇತ್ಯಸ್ಯ 'ಛಂದೋಧ್ಯಾಯಿನಮ್' ಇತ್ಯರ್ಥಃ । **ಇತ್ಯುಕ್ತೇರಿತಿ ।।** ಗೀತಾಭಾಷ್ಯೇ ಷಷ್ಠೇ ಅಧ್ಯಾಯೇ ಇತ್ಯರ್ಥಃ ।

'ತತ್' ಎಂಬ ಪದದ ಅರ್ಥವನ್ನು 'ತಸ್ಮಾತ್' ಎಂಬುದಾಗಿ ಉಲ್ಲೇಖಿಸಿದ್ದಾರೆ. ವಿವೇಕಾದಿಗಳು ಶ್ರವಣಾದಿಗಳಿಗೆ ಅಂಗವಾದ ಗುರೂಪಸತ್ತಿಗಿಂತ ಮೊದಲು ಇರುತ್ತವೆಂದು ಶ್ರುತಿಯಿಂದ ಸ್ಪಷ್ಟವಾಗಿ ತಿಳಿಯುತ್ತಿದೆ. ಆದ್ದರಿಂದ ಪುನಃ ಅದನ್ನು ವಿವರಿಸಿಲ್ಲ. ಭಾಷ್ಯದಲ್ಲಿ 'ಶ್ರೋತ್ರಿಯಮ್' ಎಂಬುದಕ್ಕೆ 'ಛಂದೋಧ್ಯಾಯಿನಮ್' ಎಂಬುದಾಗಿ ಅರ್ಥವನ್ನು ಬರೆದಿದ್ದಾರೆ. 'ಇತ್ಯುಕ್ತೇಃ' ಎಂಬ ಪದಕ್ಕೆ ಗೀತಾಭಾಷ್ಯದ ಆರನೆಯ ಅಧ್ಯಾಯದಲ್ಲಿ ಹೇಳಿರುತ್ತಾರೆ ಎಂದರ್ಥ.

## ವಿವೇಕಾದಿಗಳು ಯಾರಲ್ಲಿ ಇರಬೇಕು ?

**ಭಾವದೀಪಃ** – ನನ್ವತ್ರ 'आत्मन्येव' इति श्रुतौ 'तद्धि ज्ञानार्थम्' इति श्रुतौ च मध्यमोत्तमयोर्यथाक्रमं शमादिकं विवेकादि च विशेषणं प्राप्तं न त्वाद्यायामुत्तमाधमयोरन्त्यायां मध्यमाधमयोरिति प्राप्तं तथा मध्यमोत्तमयोरध्ययनादिकं च विशेषणमिति च श्रुतिद्वयेन न प्राप्तमिति चेन्न ।

ಪ್ರಶ್ನೆ - 'ಆತ್ಮನ್ಯೇವ' ಎಂಬ ಶ್ರುತಿಯಲ್ಲಿ ಮತ್ತು 'ತದ್ಧಿ ಜ್ಞಾನಾರ್ಥಮ್' ಎಂಬ ಶ್ರುತಿಯಲ್ಲಿ ಮಧ್ಯಮಾಧಿಕಾರಿಗಳಿಗೆ ಶಮಾದಿಗಳು, ಉತ್ತಮಾಧಿಕಾರಿಗಳಿಗೆ ವಿವೇಕಾದಿಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಹೊರತು, 'ಆತ್ಮನ್ಯೇವ' ಎಂಬ ಶ್ರುತಿಯಲ್ಲಿ ಉತ್ತಮಾಧಿಕಾರಿಗಳಿಗೆ ಮತ್ತು ಮಧ್ಯಮಾಧಿಕಾರಿಗಳಿಗೆ ಶಮಾದಿಗುಣಗಳನ್ನು ಹೇಳಿರುವುದಿಲ್ಲ. 'ತದ್ಧಿ ಜ್ಞಾನಾರ್ಥಮ್' ಎಂಬ ಶ್ರುತಿಯಲ್ಲಿ ಮಧ್ಯಮಾಧಿಕಾರಿಗಳಿಗೆ, ಮತ್ತು ಅದಮಾಧಿಕಾರಿಗಳ ಗುಣವನ್ನೂ ಕೂಡ ಹೇಳಿರುವುದಲ್ಲ. ಅದರಂತೆ ಮಧ್ಯಮಾಧಿಕಾರಿಗಳಿಗೆ ಮತ್ತು ಉತ್ತಮಾಧಿಕಾರಿಗಳಿಗೆ ಅಧ್ಯಯನಾದಿಗಳು ವಿಶೇಷಣವಾಗಿದೆ ಎಂಬುದೂ ಕೂಡ ಶ್ರುತಿಯ ಅಭಿಪ್ರಾಯವಲ್ಲ.

## ಬ್ರಹ್ಮವಿದ್ಯೆಗೆ ಶಮದಮಾದಿಗಳು ಅಂಗವೆ ?

**ಭಾವದೀಪಃ** – 'ब्रह्मविद्यायां शमदमादिकमङ्गम् उत न' इति विचारे 'शमदमादिकमङ्गम्' इत्येव वक्तुं प्रवृत्तत्वाच्छ्रुतिद्वयस्य । अत एव टीकायां 'शमादिसंयुक्तता च ब्रह्मविद्यायामेवाधिकारः' इत्येवोक्तम् । अध्ययनादिकं तु पूर्वोक्तविशेषस्मृतिबलादुपलक्षणत्वेन ग्राह्यम् ।

ಉತ್ತರ - 'ಬ್ರಹ್ಮವಿದ್ಯಾಯಾಂ ಶಮದಮಾದಿಕಮಂಗಮ್ ಉತ ನ' ಬ್ರಹ್ಮವಿದ್ಯೆಯಲ್ಲಿ ಶಮದಮಾದಿಗಳು ಅಂಗವೋ, ಅಲ್ಲವೊ? ಎಂಬ ಸಂದೇಹವು ಉಂಟಾದರೆ 'ಶಮದಮಾದಿಕಮಂಗಮ್' ಶಮದಮಾದಿಗಳು ಅಂಗವಾಗಿವೆ ಎಂದು ಹೇಳಲು ಎರಡು ಶ್ರುತಿಗಳು ಹೊರಟಿವೆ. ಆದ್ದರಿಂದಲೇ ಟೀಕೆಯಲ್ಲಿ 'ಶಮಾದಿಸಂಯುಕ್ತತಾ ಚ ಬ್ರಹ್ಮವಿದ್ಯಾಯಾಮೇವಾಧಿಕಾರಃ' ಶಮಾದಿಗುಣಗಳನ್ನು ಹೊಂದಿದವನಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರ ಎಂಬುದಾಗಿ ಹೇಳಿರುತ್ತಾರೆ. ಅಧ್ಯಯನಾದಿಗಳು ಹಿಂದಿನ ಹೇಳಿದ ವಿಶೇಷ-ಶ್ರುತಿಯ ಬಲದಿಂದ ಉಪಲಕ್ಷಣತ್ವೇನ ವಿವಕ್ಷಿಸಬೇಕು.

## ಗುಣತಾರತಮ್ಯದಿಂದ ಅಧಿಕಾರಿ ತಾರತಮ್ಯ

**ಭಾವದೀಪಃ – 'ಶಮಾದೇರ್ವಿವೇಕಾದೇಶ್ಚ ಸ್ವಶಬ್ದೇನೋಕ್ತಿಸ್ತು ಶ್ರುತಿದ್ವಯೇ ಮಧ್ಯಮೋತ್ತಮಯೋಃ ಸ್ವಗತಧರ್ಮೇಷ್ವಧ್ಯಯನಾದಿಷು ಯಥಾಕ್ರಮಂ ಶಮಾದೇರ್ವಿವೇಕಾದೇಃ ಪ್ರಾಚುರ್ಯಾಭಿಪ್ರಾಯೇಣ ಅತ ಏವ ಶ್ರುತಿಬಲಾತ್ ಪ್ರಾಚೀನಸ್ಮೃತಿರಪಿ ಬ್ರಹ್ಮವಿದ್ಯಾಧಿಕಾರಪರೇತಿ ದ್ವಯೋರಪ್ಯನ್ಯೋನ್ಯ ಸಾಹಾಯ್ಯೇನ ವಿವಕ್ಷಿತಾರ್ಥೇ ಸಾಧಕತ್ವಾತ್ ಶ್ರುತಿಸ್ಮೃತ್ಯೋರ್ದ್ವಯೋರಪ್ಯುಕ್ತಿರ್ಭಾಷ್ಯೇ ಅರ್ಥವತೀ' ಇತಿ ಭಾವಃ ।**

ಶಮಾದಿಗಳನ್ನು ಹಾಗೂ ವಿವೇಕಾದಿಗಳನ್ನು ಅದೇ ಪದದಿಂದ ಹೇಳದೇ, 'ಸ್ವ'ಶಬ್ದದಿಂದ ಹೇಳಲು ಕಾರಣವಿದೆ. ಎರಡು ಶ್ರುತಿಗಳಲ್ಲಿ ಮಧ್ಯಮಾಧಿಕಾರಿಗಳ ಹಾಗೂ ಉತ್ತಮಾಧಿ-ಕಾರಿಗಳ ಧರ್ಮಗಳೆನಿಸಿದ ಅಧ್ಯಯನಾದಿಗಳಲ್ಲಿ ಉತ್ತಮಾಧಿಕಾರಿಗಳಲ್ಲಿ ಶಮದಮಾದಿಗಳು ಅಧಿಕವಾಗಿರುತ್ತವೆ. ಮಧ್ಯಮಾಧಿಕಾರಿಗಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತವೆಂದು ತಿಳಿಸಬೇಕಾಗಿದೆ. ಆದ್ದರಿಂದಲೇ ಶ್ರುತಿಗೆ ಅನುಗುಣವಾಗಿ ಹಿಂದೆ ಉದಾಹರಿಸಿದ ಸ್ಮೃತಿವಾಕ್ಯಗಳನ್ನೂ ಕೂಡ ಬ್ರಹ್ಮವಿದ್ಯೆಯ ಅಧಿಕಾರಪರವಾಗಿ ವ್ಯಾಖ್ಯಾನಿಸಲಾಯಿತು. ಹೀಗೆ ಶ್ರುತಿ-ಸ್ಮೃತಿಗಳೆರಡು ಪರಸ್ಪರ ಸಹಾಯಕವಾಗಿ ವಿವಕ್ಷಿತಾರ್ಥದಲ್ಲಿ ಸಾಧಕವಾಗಿದೆ. ಆದ್ದರಿಂದಲೇ ಭಾಷ್ಯದಲ್ಲಿ ಶ್ರುತಿ-ಸ್ಮೃತಿಗಳೆರಡನ್ನು ಉದಾಹರಿಸಿದ್ದು ಅತ್ಯಂತ ಅರ್ಥಪೂರ್ಣವಾಗಿದೆ ಎಂದು ತಿಳಿಯಬೇಕು.

## ಭಕ್ತ್ಯೈಕಲಭ್ಯಃ

**ಭಾವದೀಪಃ –**

ಭಕ್ತ್ಯೈವ ವೃಣುತೇ ವಿಷ್ಣುರ್ಭಕ್ತ್ಯಾ ದದ್ಯಾನ್ನಿಜಂ ಪದಮ್ ।
ಭಕ್ತ್ಯೈವ ದೃಶ್ಯತೇ ನಿತ್ಯಂ ಭಕ್ತ್ಯಾ ಭೋಗಾನ್ ದದಾತಿ ಚ ।।

ಇತಿ ಪಾದ್ಮಸ್ಮೃತ್ಯಾ ಅನ್ಯತ್ರ ಭಾಷ್ಯೇ ಅನ್ಯಥಾವ್ಯಾಖ್ಯಾನೇऽಪಿ ಇಹ ಪ್ರಕೃತೋಪಯೋಗಿತಯಾ ಲಭ್ಯಪದೇನ ಪ್ರಸಾದोऽಭಿಮತಃ । 'ವಿವೃಣುತೇ' ಇತ್ಯನೇನ ಶ್ರವಣಾದಿಜನ್ಯಪ್ರಕಾಶವಿಷಯಂ ಸ್ವಾಂ ತನುಂ ಕರೋತೀತ್ಯರ್ಥ ಇತ್ಯಭಿಪ್ರೇತ್ಯಾಹ – ವಿಷ್ಣುರಿತಿ ।।

ಭಕ್ತ್ಯೈವ ವೃಣುತೇ ವಿಷ್ಣುರ್ಭಕ್ತ್ಯಾ ದದ್ಯಾನ್ನಿಜಂ ಪದಮ್ ।
ಭಕ್ತ್ಯೈವ ದೃಶ್ಯತೇ ನಿತ್ಯಂ ಭಕ್ತ್ಯಾ ಭೋಗಾನ್ ದದಾತಿ ಚ ।।

ಭಕ್ತಿಯಿಂದಲೇ ವಿಷ್ಣು ಪ್ರಸನ್ನನಾಗುತ್ತಾನೆ. ತನ್ನ ಸ್ಥಾನವನ್ನು ಭಕ್ತಿಗೆ ಒಲಿದು ನೀಡುತ್ತಾನೆ. ಭಕ್ತಿಯಿಂದಲೇ ತನ್ನ ದರ್ಶನವನ್ನು ನೀಡುತ್ತಾನೆ. ಭಕ್ತಿಗೆ ಮೆಚ್ಚಿ ಎಲ್ಲಾ ಬಗೆಯ ಭೋಗಗಳನ್ನು ನೀಡುತ್ತಾನೆ. ಹೀಗೆ ಪದ್ಮಪುರಾಣದಲ್ಲಿ ಹೇಳಲಾಗಿದೆ. ಮತ್ತೊಂದು ಕಡೆ ಭಾಷ್ಯದಲ್ಲಿ ಮತ್ತೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದರೂ ಪ್ರಕೃತಕ್ಕೆ ಉಪಯೋಗಿಯಾಗುವಂತೆ ಈ ಅರ್ಥವನ್ನು ತಿಳಿಯಬೇಕು. 'ವಿವೃಣುತೇ' ಎಂಬ ಪದದಿಂದ ಶ್ರವಣಾದಿ ಜನ್ಯವಾದ ಜ್ಞಾನಕ್ಕೆ ವಿಷಯವಾದ ತನ್ನ ಶರೀರವನ್ನು ತೋರಿಸುತ್ತಾನೆ ಎಂದರ್ಥ. ಈ ಅಭಿಪ್ರಾಯದಿಂದ 'ವಿಷ್ಣು' ಎಂಬ ವಾಕ್ಯವು ಹೊರಟಿದೆ.

## ಹರಿಪ್ರಸಾದೋ ಬಲವಾನ್

**ಭಾವದೀಪಃ –** ವೃಣುತೇ 'ತದೀಯಭಕ್ತ್ಯಾ ಸ್ವೀಕರೋತಿ' ಇತ್ಯರ್ಥಃ । ತತಶ್ಚ ಭಕ್ತಿಜನ್ಯಪ್ರಸಾದತಶ್ಚ ಇತ್ಯರ್ಥಃ । ಪರಸ್ಯ ಬ್ರಹ್ಮಣೋ ವಿಷ್ಣೋಃ ಪ್ರಸಾದಾದಿತಿ ವಾ ಭವೇತ್ । ತಜ್ಜಿಜ್ಞಾಸಾದಿಕಂ ಕಾರ್ಯಮಿತಿ ಪೂರ್ವೋಕ್ತದಿಶಾ ಶ್ರವಣಾದಿವಿಷಯತಾಯಾಮಪಿ ಪ್ರಸಾದಸ್ಯಾವಶ್ಯಕತ್ವಾದಿತಿ ಭಾವಃ ।

'ವೃಣುತೇ' ಎಂಬ ಪದಕ್ಕೆ ಭಕ್ತನ ಭಕ್ತಿಯಿಂದ ಭಕ್ತನನ್ನು ಸ್ವೀಕರಿಸುತ್ತಾನೆ ಎಂದರ್ಥ. ಭಕ್ತಿಜನ್ಯವಾದ ಪ್ರಸಾದವು ಅತ್ಯಂತ ಆವಶ್ಯಕವೆಂದು ಇದರಿಂದ ತಿಳಿಯುತ್ತದೆ. ಶ್ರೇಷ್ಠನಾದ

ಮಹಾವಿಷ್ಣುವಿನ ಪ್ರಸಾದದಿಂದಲೂ ಪರಮಾತ್ಮನು ದೊರೆಯುತ್ತಾನೆ ಎಂದು ತಿಳಿಯಬೇಕು. ಪರಮಾತ್ಮನ ಜಿಜ್ಞಾಸೆಯನ್ನು ಇಂತಹ ಪ್ರಸಾದಕ್ಕಾಗಿ ಆಚರಿಸಬೇಕೆಂದು ಹಿಂದೆ ಹೇಳಿದಂತೆ ತಿಳಿಯಬೇಕು. ಹರಿಪ್ರಸಾದಕ್ಕೆ ಶ್ರವಣಾದಿಗಳನ್ನೂ ಕೂಡ ಅವಶ್ಯ ಆಚರಿಸಬೇಕೆಂದು ಇದರಿಂದ ತಿಳಿಯುತ್ತದೆ.

## ಪರಮೋತ್ಕೃಷ್ಟ ಭಕ್ತಿ ಮಹಾವಿಷ್ಣುವಿನಲ್ಲಿ ಮಾತ್ರ

**ಭಾವದೀಪಃ** – **ಶ್ರುತ್ಯರ್ಥಂ ವ್ಯಞ್ಜಯನ್ನೇವ ತಾಮವತಾರಯತಿ – ಸಾ ಚೇತಿ ।। ಪರೇತ್ಯಸ್ಯಾರ್ಥಃ ಸರ್ವಾಧಿಕೇತಿ । 'ದೇವೇ ಗುರೌ' ಇತ್ಯೇತದ್ಬಹುವಚನಾನ್ತಂ ವ್ಯಾಚಷ್ಟೇ – ಅನ್ಯೇಷ್ವಪೀತಿ ।। ಯಥಾಯೋಗ್ಯೇತಿ ।। ದೇವೇಷು ದೇವಯೋಗ್ಯಾ ಗುರೌ ಗುರುಯೋಗ್ಯೇತ್ಯರ್ಥಃ ।**

ಶ್ರುತಿಯ ಅರ್ಥವನ್ನು ಸ್ಪಷ್ಟಪಡಿಸುತ್ತಾ 'ಸಾ ಚ' ಎಂಬುದರಿಂದ ಅವತಾರಿಕೆ ನೀಡುತ್ತಿದ್ದಾರೆ. 'ಪರ' ಎಂಬ ಪದಕ್ಕೆ 'ಸರ್ವಾಧಿಕ' ಎಂದರ್ಥ. 'ದೇವೇ ಗುರೌ' ಎಂಬ ಪದಗಳು ಬಹುವಚನಾಂತವಾಗಿದೆ ಎಂದು 'ಅನ್ಯೇಷ್ವಪಿ' ಎಂಬುದರಿಂದ ವ್ಯಾಖ್ಯಾನ ಮಾಡಿದ್ದಾರೆ. 'ಯಥಾಯೋಗ್ಯಮ್'ಎಂಬುದಕ್ಕೆ ದೇವತೆಗಳಲ್ಲಿ ಅವರ ಯೋಗ್ಯತೆಗನು-ಗುಣವಾಗಿ, ಗುರುಗಳಲ್ಲಿ ಅವರ ಯೋಗ್ಯತೆಗೆ ಅನುಗುಣವಾಗಿ ಎಂದರ್ಥ.

## ಉಳಿದವರಲ್ಲಿ ಯೋಗ್ಯತೆಗೆ ಅನುಗುಣವಾಗಿ

**ಭಾವದೀಪಃ** – **ಉಕ್ತಂ ಚ ಜ್ಞಾನಪಾದೀಯಸುಧಾಯಾಮ್ – 'ಯಥಾ ದೇವೇ ತಥಾ ಗುರೌ' ಇತಿ । ಯಥಾ ದೇವೇ ದೇವಯೋಗ್ಯಾ, ತಥಾ ಗುರೌ ಗುರುಯೋಗ್ಯೇತ್ಯರ್ಥ ಇತಿ ।**

ಇದನ್ನು ಜ್ಞಾನಪಾದದ ನ್ಯಾಯಸುಧೆಯಲ್ಲಿ 'ಯಥಾ ದೇವೇ ತಥಾ ಗುರೌ' ಎಂಬುದಾಗಿ ಹೇಳಿರುತ್ತಾರೆ. ಮತ್ತು 'ಯಥಾ ದೇವೇ ಯೋಗ್ಯ, ತಥಾ ಗುರೌ ಗುರುಯೋಗ್ಯ' ದೇವತೆಗಳಲ್ಲಿ ಅವರ ಯೋಗ್ಯತೆಗನುಗುಣವಾಗಿ, ಗುರುಗಳಲ್ಲಿ ಅವರ ಯೋಗ್ಯತೆಗನು-ಗುಣವಾಗಿ ಭಕ್ತಿಯನ್ನು ಆಚರಿಸಬೇಕೆಂದು ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ.

## ಭಕ್ತಿಯ ಪ್ರಕಾರ

**ಭಾವದೀಪಃ –**

**ವಿಷ್ಣುಭಕ್ತಿರ್ದೇವಭಕ್ತಿರ್ಗುರುಭಕ್ತಿಸ್ತಥೈವ ಚ ।**
**ತತ್ತಚ್ಛ್ರೈಷ್ಠ್ಯಾನುಸಾರೇಣ .....'**

**ಇತಿ ಪ್ರಥಮಾಧ್ಯಾಯ ಬೃಹದ್ಭಾಷ್ಯೋಕ್ತೇಶ್ಚ ಇತಿ ಜ್ಞೇಯಮ್ । ಬ್ರಹ್ಮವಿದ್ಯೇತಿ ।। 'ಪ್ರಕಾಶನ್ತೇ' ಇತಿ ಪ್ರಕಾಶಪದೇನ ಜ್ಞಾನರೂಪಪರತತ್ವಾದಿವಿದ್ಯೋಕ್ತೇರಿತಿ ಭಾವಃ ।**

'ವಿಷ್ಣುಭಕ್ತಿರ್ದೇವಭಕ್ತಿರ್ಗುರುಭಕ್ತಿಸ್ತಥೈವ ಚ । ತತ್ತತ್ ಶ್ರೇಷ್ಠ್ಯಾನುಸಾರೇಣ....' ವಿಷ್ಣುಭಕ್ತಿ, ದೈವಭಕ್ತಿ, ಗುರುಭಕ್ತಿ, ಉತ್ತಮರಲ್ಲಿ ಭಕ್ತಿಯನ್ನು ಆಚರಿಸಬೇಕು.

ಹೀಗೆ ಬೃಹದಾರಣ್ಯಕೋಪನಿಷತ್ತಿನ ಪ್ರಥಮಾಧ್ಯಾಯದ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿರುತ್ತಾರೆ. ಅದನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. 'ಬ್ರಹ್ಮವಿದ್ಯಾ' ಎಂಬ ಪದಕ್ಕೆ 'ಪ್ರಕಾಶಂತೇ' ಎಂಬುದಾಗಿ ಪ್ರಕಾಶಪದದಿಂದ ಜ್ಞಾನರೂಪವಾದ ಪರತತ್ವಾದಿ ವಿದ್ಯೆಯೆಂದು ತಿಳಿಯಬೇಕು.

## ಅನನ್ಯ ಭಕ್ತರಾಗಿರಿ

**ಭಾವದೀಪಃ – ಶ್ರುತ್ಯಾऽऽಹೇತಿ ।। ಏತೇನ ಭಾಷ್ಯೇ 'ಇತ್ಯಾದಿಶ್ರುತಿಭಿಶ್ಚ' ಇತ್ಯಸ್ಯ 'ಆಧಿಕಾರಶ್ಚೋಕ್ತಃ' ಇತಿ ಪೂರ್ವೇಣಾನ್ವಯಃ ಸೂಚಿತಃ । ತತ್ವಪ್ರದೀಪೇ ತು –**

**'ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋऽರ್ಜುನ ।**
**ಜ್ಞಾತುಂ ದ್ರಷ್ಟುಂ ಚ ....'**

**ಇತ್ಯಾದಿಸ್ಮೃತಿಶ್ಚ ಶಬ್ದಾದ್ ಗೃಹ್ಯತೇ ಇತ್ಯುಕ್ತಮ್ ।।**

'ಶ್ರುತ್ಯಾऽऽಹ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿ 'ಇತ್ಯಾದಿಶ್ರುತಿಭಿಶ್ಚ' ಎಂಬ ಮಾತಿಗೆ 'ಆಧಿಕಾರಶ್ಚೋಕ್ತಃ' ಎಂಬುದರ ಅನ್ವಯವನ್ನು ತಿಳಿಯಬೇಕು.

'ಭಕ್ತ್ಯಾ ತ್ವನನ್ಯಥಾ ಶಕ್ಯ ಅಹಮೇವಂವಿಧೋऽರ್ಜುನ । ಜ್ಞಾತುಂ ದ್ರಷ್ಟುಂ ಚ ....' ಇತ್ಯಾದಿ ಸ್ಮೃತಿವಾಕ್ಯಗಳನ್ನೂ ಕೂಡ ಸ್ವೀಕರಿಸಿದ್ದಾರೆ.

ವಿವರಣೆ - ಪ್ರಶ್ನೆ - ಭಾಗವತತಂತ್ರದ ಪ್ರಮಾಣವಚನದಲ್ಲಿ 'ಬ್ರಹ್ಮವಿದ್ಯೆ' ಎಂಬ ಪದವಿಲ್ಲ. ಹೀಗಿರುವಾಗ ಇಲ್ಲಿ ಹೇಳಿದ ಅಧಿಕಾರವು ಬ್ರಹ್ಮವಿದ್ಯೆಗೆ ಸಂಬಂಧಪಟ್ಟಿವೆ ಎಂದು ಮತ್ತು ಮೂರೂ ಪ್ರಕಾರಗಳನ್ನು ಹೊಂದಿದೆಯೆಂದು ಹೇಗೆ ತಿಳಿಯಬೇಕು?

ಉತ್ತರ - ಈ ಪ್ರಶ್ನೆಗೆ 'ಅಧ್ಯಯನಮಾತ್ರವತಃ' ಎಂದು ಉತ್ತರಿಸುತ್ತಾರೆ. ಇದನ್ನು ಮುಂದೆ ಮೂರನೇ ಅಧ್ಯಾಯದ ನಾಲ್ಕನೇ ಪಾದದ ಎರಡನೆಯ ಅಧಿಕರಣದಲ್ಲಿ ವಿವರಿಸಲಾಗುತ್ತದೆ.

(ಜ್ಞಾನಾಧಿಕಾರವು ಎಲ್ಲರಿಗೂ ಇದೆಯೋ? ಅಥವಾ ಕೆಲವರಿಗೆ ಮಾತ್ರವೋ? ಎಂದು ಸಂದೇಹ)

ಜ್ಞಾನಫಲದ ಅಪೇಕ್ಷೆ ಎಲ್ಲರಿಗೂ ಇರುವುದರಿಂದ ಪ್ರತಿಯೊಬ್ಬರೂ ಬ್ರಹ್ಮಜ್ಞಾನಾಧಿಕಾರಿಗಳೆಂದು ಪೂರ್ವಪಕ್ಷ

ಯಾವರೀತಿಯಾಗಿ ಒಂಬತ್ತುಕೋಟಿ ದೇವತೆಗಳಲ್ಲಿ ದೇವತ್ವವು ಸಮಾನವಾಗಿದ್ದರೂ ಅವರ ಮಧ್ಯದಲ್ಲಿ ಕೇವಲ ನೂರುಮಂದಿಗೆ ಮಾತ್ರ ಸೋಮಪಾನಕ್ಕೆ ಅರ್ಹತೆಯಿದೆಯೋ, ಅದೇ ರೀತಿ ಜ್ಞಾನಫಲಾಪೇಕ್ಷೆಯು ಎಲ್ಲರಿಗೂ ಸಮಾನವಾಗಿದ್ದರೂ ಎಲ್ಲರೂ ಬ್ರಹ್ಮಜ್ಞಾನಾಧಿಕಾರಿಗಳಾಗುವುದಿಲ್ಲ. ಕಿಂತು ಯಾರು ಯಥಾಶಕ್ತಿವೇದಾಧ್ಯಯನ ಮಾಡಿರುತ್ತಾರೋ ಅವರಷ್ಟೇ ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳೆಂದು ಸಿದ್ಧಾಂತ.

ಇದರಿಂದ ಬ್ರಹ್ಮವಿದ್ಯೆಗೆ ವೇದಾಧ್ಯಯನ ಮಾಡಿದವನೇ ಅಧಿಕಾರಿಯೆಂದು ಸ್ಪಷ್ಟವಾಗುತ್ತದೆ.

ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರವೋ? ಅಥವಾ ಅದರಲ್ಲಿ ತಾರತಮ್ಯವಿದೆಯೇ? ಎಂದು ಸಂದೇಹ.

ತಾರತಮ್ಯಕಲ್ಪನೆಯು ಅನಾವಶ್ಯಕ. ತಾರತಮ್ಯವಿಲ್ಲದೆ ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರವೆಂದು ಪೂರ್ವಪಕ್ಷ

ಹಾಗೆ ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರ ಹೇಳಬಾರದು. ಹಾಗಾದಲ್ಲಿ ಆತ್ಮಜ್ಞಾನದಲ್ಲಿ ಸಮಾನತೆ ಬರಬೇಕಾದೀತೆಂದು ಸಿದ್ಧಾಂತ.

## ಭಕ್ತಿಯ ಪ್ರಕಾರ

**ಭಾವದೀಪಃ –**

**ವಿಷ್ಣುಭಕ್ತಿರ್ದೇವಭಕ್ತಿರ್ಗುರುಭಕ್ತಿಸ್ತಥೈವ ಚ ।**
**ತತ್ತಚ್ಛ್ರೈಷ್ಠ್ಯಾನುಸಾರೇಣ .....'**

**ಇತಿ ಪ್ರಥಮಾಧ್ಯಾಯ ಬೃಹದ್ಭಾಷ್ಯೋಕ್ತೇಶ್ಚ ಇತಿ ಜ್ಞೇಯಮ್ । ಬ್ರಹ್ಮವಿದ್ಯೇತಿ ।। 'ಪ್ರಕಾಶನ್ತೇ' ಇತಿ ಪ್ರಕಾಶಪದೇನ ಜ್ಞಾನರೂಪಪರತತ್ವಾದಿವಿದ್ಯೋಕ್ತೇರಿತಿ ಭಾವಃ ।**

'ವಿಷ್ಣುಭಕ್ತಿರ್ದೇವಭಕ್ತಿರ್ಗುರುಭಕ್ತಿಸ್ತಥೈವ ಚ । ತತ್ತತ್ ಶ್ರೇಷ್ಠ್ಯಾನುಸಾರೇಣ....' ವಿಷ್ಣುಭಕ್ತಿ, ದೈವಭಕ್ತಿ, ಗುರುಭಕ್ತಿ, ಉತ್ತಮರಲ್ಲಿ ಭಕ್ತಿಯನ್ನು ಆಚರಿಸಬೇಕು.

ಹೀಗೆ ಬೃಹದಾರಣ್ಯಕೋಪನಿಷತ್ತಿನ ಪ್ರಥಮಾಧ್ಯಾಯದ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಹೇಳಿರುತ್ತಾರೆ. ಅದನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. 'ಬ್ರಹ್ಮವಿದ್ಯಾ' ಎಂಬ ಪದಕ್ಕೆ 'ಪ್ರಕಾಶಂತೇ' ಎಂಬುದಾಗಿ ಪ್ರಕಾಶಪದದಿಂದ ಜ್ಞಾನರೂಪವಾದ ಪರತತ್ವಾದಿ ವಿದ್ಯೆಯೆಂದು ತಿಳಿಯಬೇಕು.

## ಅನನ್ಯ ಭಕ್ತರಾಗಿರಿ

**ಭಾವದೀಪಃ – ಶ್ರುತ್ಯಾऽऽಹೇತಿ ।। ಏತೇನ ಭಾಷ್ಯೇ 'ಇತ್ಯಾದಿಶ್ರುತಿಭಿಶ್ಚ' ಇತ್ಯಸ್ಯ 'ಆಧಿಕಾರಶ್ಚೋಕ್ತಃ' ಇತಿ ಪೂರ್ವೇಣಾನ್ವಯಃ ಸೂಚಿತಃ । ತತ್ವಪ್ರದೀಪೇ ತು –**

**'ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋऽರ್ಜುನ ।**
**ಜ್ಞಾತುಂ ದ್ರಷ್ಟುಂ ಚ ....'**

**ಇತ್ಯಾದಿಸ್ಮೃತಿಶ್ಚ ಶಬ್ದಾದ್ ಗೃಹ್ಯತೇ ಇತ್ಯುಕ್ತಮ್ ।।**

'ಶ್ರುತ್ಯಾऽऽಹ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿ 'ಇತ್ಯಾದಿಶ್ರುತಿಭಿಶ್ಚ' ಎಂಬ ಮಾತಿಗೆ 'ಆಧಿಕಾರಶ್ಚೋಕ್ತಃ' ಎಂಬುದರ ಅನ್ವಯವನ್ನು ತಿಳಿಯಬೇಕು.

'ಭಕ್ತ್ಯಾ ತ್ವನನ್ಯಥಾ ಶಕ್ಯ ಅಹಮೇವಂವಿಧೋऽರ್ಜುನ । ಜ್ಞಾತುಂ ದ್ರಷ್ಟುಂ ಚ ....' ಇತ್ಯಾದಿ ಸ್ಮೃತಿವಾಕ್ಯಗಳನ್ನೂ ಕೂಡ ಸ್ವೀಕರಿಸಿದ್ದಾರೆ.

ವಿವರಣೆ - ಪ್ರಶ್ನೆ - ಭಾಗವತತಂತ್ರದ ಪ್ರಮಾಣವಚನದಲ್ಲಿ 'ಬ್ರಹ್ಮವಿದ್ಯೆ' ಎಂಬ ಪದವಿಲ್ಲ. ಹೀಗಿರುವಾಗ ಇಲ್ಲಿ ಹೇಳಿದ ಅಧಿಕಾರವು ಬ್ರಹ್ಮವಿದ್ಯೆಗೆ ಸಂಬಂಧಪಟ್ಟಿದೆ ಎಂದು ಮತ್ತು ಮೂರೂ ಪ್ರಕಾರಗಳನ್ನು ಹೊಂದಿದೆಯೆಂದು ಹೇಗೆ ತಿಳಿಯಬೇಕು?

ಉತ್ತರ - ಈ ಪ್ರಶ್ನೆಗೆ 'ಅಧ್ಯಯನಮಾತ್ರವತಃ' ಎಂದು ಉತ್ತರಿಸುತ್ತಾರೆ. ಇದನ್ನು ಮುಂದೆ ಮೂರನೇ ಅಧ್ಯಾಯದ ನಾಲ್ಕನೇ ಪಾದದ ಎರಡನೆಯ ಅಧಿಕರಣದಲ್ಲಿ ವಿವರಿಸಲಾಗುತ್ತದೆ.

(ಜ್ಞಾನಾಧಿಕಾರವು ಎಲ್ಲರಿಗೂ ಇದೆಯೋ? ಅಥವಾ ಕೆಲವರಿಗೆ ಮಾತ್ರವೋ? ಎಂದು ಸಂದೇಹ)

ಜ್ಞಾನಫಲದ ಅಪೇಕ್ಷೆ ಎಲ್ಲರಿಗೂ ಇರುವುದರಿಂದ ಪ್ರತಿಯೊಬ್ಬರೂ ಬ್ರಹ್ಮಜ್ಞಾನಾಧಿಕಾರಿಗಳೆಂದು ಪೂರ್ವಪಕ್ಷ

ಯಾವರೀತಿಯಾಗಿ ಒಂಬತ್ತುಕೋಟಿ ದೇವತೆಗಳಲ್ಲಿ ದೇವತ್ವವು ಸಮಾನವಾಗಿದ್ದರೂ ಅವರ ಮಧ್ಯದಲ್ಲಿ ಕೇವಲ ನೂರುಮಂದಿಗೆ ಮಾತ್ರ ಸೋಮಪಾನಕ್ಕೆ ಅರ್ಹತೆಯಿದೆಯೋ, ಅದೇ ರೀತಿ ಜ್ಞಾನಫಲಾಪೇಕ್ಷೆಯು ಎಲ್ಲರಿಗೂ ಸಮಾನವಾಗಿದ್ದರೂ ಎಲ್ಲರೂ ಬ್ರಹ್ಮಜ್ಞಾನಾಧಿಕಾರಿಗಳಾಗುವುದಿಲ್ಲ. ಕಿಂತು ಯಾರು ಯಥಾಶಕ್ತಿವೇದಾಧ್ಯಯನ ಮಾಡಿರುತ್ತಾರೋ ಅವರಷ್ಟೇ ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳೆಂದು ಸಿದ್ಧಾಂತ.

ಇದರಿಂದ ಬ್ರಹ್ಮವಿದ್ಯೆಗೆ ವೇದಾಧ್ಯಯನ ಮಾಡಿದವನೇ ಅಧಿಕಾರಿಯೆಂದು ಸ್ಪಷ್ಟವಾಗುತ್ತದೆ.

ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರವೋ? ಅಥವಾ ಅದರಲ್ಲಿ ತಾರತಮ್ಯವಿದೆಯೇ? ಎಂದು ಸಂದೇಹ.

ತಾರತಮ್ಯಕಲ್ಪನೆಯು ಅನಾವಶ್ಯಕ. ತಾರತಮ್ಯವಿಲ್ಲದೆ ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರವೆಂದು ಪೂರ್ವಪಕ್ಷ

ಹಾಗೆ ಎಲ್ಲರಿಗೂ ಏಕಪ್ರಕಾರವಾಗಿ ಜ್ಞಾನಾಧಿಕಾರ ಹೇಳಬಾರದು. ಹಾಗಾದಲ್ಲಿ ಆತ್ಮಜ್ಞಾನದಲ್ಲಿ ಸಮಾನತೆ ಬರಬೇಕಾದೀತೆಂದು ಸಿದ್ಧಾಂತ.

ಹೀಗೆ ಈ ಎರಡು ಅಧಿಕರಣಗಳಿಂದ ಅಧ್ಯಯನವು ಬ್ರಹ್ಮವಿದ್ಯೆಗೆ ಅಧಿಕಾರವೆಂದು ಮತ್ತು ಅವುಗಳಲ್ಲಿ ತಾರತಮ್ಯವಿದೆಯೆಂದು ತಿಳಿಯುತ್ತದೆ.

'ಶಮಾದಿಗುಣಗಳಿಂದ ಕೂಡಿರುವಿಕೆಯು ಬ್ರಹ್ಮವಿದ್ಯೆಯಲ್ಲಿಯೇ ಅಧಿಕಾರ' ಎಂಬುದನ್ನು ಶ್ರುತಿಯಿಂದ ಹೇಳುತ್ತಾರೆ. ಶ್ರುತ್ಯರ್ಥ ಹೀಗಿದೆ - ಶಾಂತಃ = ಭಗವಂತನಲ್ಲೇ ಬುದ್ಧಿಯುಳ್ಳವನು, ದಾಂತಃ = ಇಂದ್ರಿಯನಿಗ್ರಹವುಳ್ಳವನು, ತಿತಿಕ್ಷುಃ = ಸುಖ-ದುಃಖಾದಿಗಳಿಂದ ಹಿಗ್ಗುವಿಕೆ ಕುಗ್ಗುವಿಕೆ ಆಗದಿರುವನು ಅಥವಾ ದ್ವಂದ್ವಗಳನ್ನು ಸಹಿಸಿಕೊಳ್ಳುವ ಶಕ್ತಿಯಳ್ಳವನು, ಸಮಾಹಿತಃ = ವಸ್ತುಗಳ ನಿಜಸ್ವರೂಪ ತಿಳಿದವನು. 'ಹೀಗೆ ಶಾಂತಾದಿಗುಣಗಳನ್ನು ಹೊಂದಿ ತನ್ನಲ್ಲಿರುವ ಪರಮಾತ್ಮನನ್ನು ತಿಳಿಯಬೇಕು' ಎಂದು ಹೇಳಿದ್ದರಿಂದ ಬ್ರಹ್ಮಜ್ಞಾನಕ್ಕೆ ಶಮಾದಿಗುಣಗಳು ಕಾರಣವೆಂದಂತಾಯಿತು. 'ಪಶ್ಯೇತ್' ಎಂದರೆ ನೋಡಬೇಕೆಂಬ ಅರ್ಥವಿದ್ದರೂ ಇಲ್ಲಿ ತಿಳಿಯಬೇಕೆಂಬ ಅರ್ಥ ಹೇಳಬೇಕು. 'ಪಶ್ಯಾರ್ಥೈಶ್ಚ ಅನಾಲೋಚನೇ' ಎಂಬಲ್ಲಿ 'ಪಶ್ಯಾರ್ಥೈಃ' ಎಂದರೆ 'ಜ್ಞಾನಾರ್ಥೈಃ'. 'ಉಪನೀತೋऽಧೀಯೀತ' 'ಉಪನಯನವಾದ ಮೇಲೆ ಅಧ್ಯಯನ ಮಾಡಬೇಕು' ಎಂಬ ವಾಕ್ಯದಲ್ಲಿ ಅಧ್ಯಯನಕ್ಕೆ ಉಪನಯನವು ಹೇಗೆ ಕಾರಣವಾಗಿದೆಯೋ ಅದರಂತೆ ಇಲ್ಲಿಯೂ ತಿಳಿಯಬೇಕು.

ಇಲ್ಲಿ 'ಆತ್ಮನಿ' ಎಂದು ಹೇಳಿದ್ದರಿಂದ ಮಧ್ಯಮಾಧಿಕಾರಿಲಕ್ಷಣವೆಂದು ತಿಳಿಯಬೇಕು. ಏಕೆಂದರೆ ''ಋಷಯೋऽಂತಃಪ್ರಕಾಶಃ'' 'ಋಷಿಗಳು ತಮ್ಮ ಶರೀರದಲ್ಲಿರುವ ಭಗವಂತನನ್ನು ತಿಳಿದವರು' ಎಂಬ ಶ್ರುತಿ ಇರುವುದರಿಂದ ಋಷಿಗಳು ಮಧ್ಯಮಾಧಿಕಾರಿಗಳೆಂದು 'ಮಧ್ಯಮಾ ಋಷಿಗಂಧರ್ವಾಃ' ಎಂಬಲ್ಲಿ ಹೇಳಿದ್ದಾಗಿದೆ.

ಸಾರಾಸಾರವಿವೇಕವೂ ಬ್ರಹ್ಮವಿದ್ಯೆಗೆ ಕಾರಣವಾಗಿದೆಯೆಂದು 'ಪರೀಕ್ಷ್ಯ ಲೋಕಾನ್' ಎಂಬ ಶ್ರುತಿಯಿಂದ ತೋರಿಸುತ್ತಿದ್ದಾರೆ. ವಿಷ್ಣುಲೋಕಕ್ಕಿಂತ ಇತರವಾದ ಸ್ವರ್ಗಾದಿಲೋಕಗಳು ಕರ್ಮದಿಂದ ಲಭಿಸುವುದರಿಂದ ಅಸಾರ ಮತ್ತು ಅನಿತ್ಯಗಳಾಗಿವೆ ಎಂದು ತಿಳಿದು ಅವುಗಳಲ್ಲಿ ವೈರಾಗ್ಯ ಹೊಂದಬೇಕು. ಮೋಕ್ಷವನ್ನು ಬಿಟ್ಟು ಉಳಿದ ವಿಷಯಗಳಲ್ಲಿ ನಿರ್ವಿಣ್ಣಃ = ವಿರಕ್ತನಾಗಿ, ಬ್ರಹ್ಮಜ್ಞಾನವನ್ನು ಪಡೆಯಲು ಗುರುಗಳ ಬಳಿ ಹೋಗಬೇಕು. ಅಕೃತಃ = ನಿತ್ಯಪುರುಷಾರ್ಥರೂಪವಾದ ಮೋಕ್ಷವು, ಕೃತೇನ = ಕರ್ಮಾದಿಗಳಿಂದ, ನಾಸ್ತಿ = ದೊರೆಯುವುದಿಲ್ಲ. ತತ್ = ಆದ್ದರಿಂದ ಎಂದರ್ಥ. ಇಲ್ಲಿ ವಿಜ್ಞಾನಪದದಿಂದ ಇದು

ಉತ್ತಮಾಧಿಕಾರಿಗೆ ಸಂಬಂಧಿಸಿದ್ದೆಂದು ಸೂಚಿತವಾಗಿರುತ್ತದೆ. ಏಕೆಂದರೆ 'ದೇವತೆಗಳ ಜ್ಞಾನವು ವಿಜ್ಞಾನವೆಂದು ಕರೆಯಲ್ಪಡುತ್ತದೆ' ಎಂಬ ಪ್ರಮಾಣವಚನವಿದೆ. (ದೇವತೆಗಳು ಉತ್ತಮಾಧಿಕಾರಿಗಳೆಂದು ದೇವಾಸ್ತತ್ರೋತ್ತಮಾ ಮತಾಃ ಎಂಬಲ್ಲಿ ಹೇಳಿದ್ದಾಗಿದೆ)

ಬ್ರಹ್ಮವಿದ್ಯೆಯಲ್ಲಿ ಅಧಿಕಾರ ಬರಲು ವಿಷ್ಣುಭಕ್ತಿಯೂ ಆವಶ್ಯಕ ಎಂಬುದನ್ನು 'ಯಮೇವೈಷಃ' ಇತ್ಯಾದಿ ಶ್ರುತಿಯಿಂದ ವಿವರಿಸುತ್ತಿದ್ದಾರೆ. ಈ ವಿಷ್ಣುವು ಯಾರನ್ನು ತನ್ನ ಭಕ್ತರನ್ನಾಗಿ ಸ್ವೀಕಾರ ಮಾಡುತ್ತಾನೋ, ಅಂತಹ ಭಕ್ತನಿಗೆ ಮಾತ್ರ ವಿಷ್ಣುವು ಪ್ರಸನ್ನನಾಗುತ್ತಾನೆ. ಅನಂತರ ಆ ಅಧಿಕಾರಿಪುರುಷನಿಗೆ ತನ್ನ ಸ್ವರೂಪವನ್ನು ತೋರಿಸುತ್ತಾನೆಂದರ್ಥ. ಇಲ್ಲಿ 'ವೃಣುತೇ' ಎಂದು ಇರುವುದರಿಂದ ಭಕ್ತನಾದವನನ್ನು ಎಂದು ಸೂಚಿತವಾಗುತ್ತದೆ. ಅಭಕ್ತನನ್ನು ಸ್ವೀಕರಿಸುವುದಿಲ್ಲ. (ಕೇವಲ ಹರಿಭಕ್ತಿ ಇದ್ದರಷ್ಟೇ ಸಾಲದು. ದೇವತೆಗಳಲ್ಲಿ ಹಾಗೂ ಗುರುಗಳಲ್ಲಿ ತಾರತಮ್ಯಾನುಸಾರೇಣ ಭಕ್ತಿ ಇರಬೇಕೆಂದು ಹೇಳುತ್ತಿದ್ದಾರೆ) ಈ ಭಕ್ತಿಯು ವಿಷ್ಣುವಿಷಯದಲ್ಲಿ ಸರ್ವಾಧಿಕವಾಗಿದ್ದು ಇತರರ ವಿಷಯದಲ್ಲಿ ತಾರತಮ್ಯಾನುಸಾರಿಯಾಗಿರಬೇಕು. ಅಂತಹ ಭಕ್ತಿಯು ಬ್ರಹ್ಮವಿದ್ಯೆಗೆ ಉಪಯುಕ್ತವಾಗುತ್ತದೆಂದು 'ಯಸ್ಯ ದೇವೇ' ಎಂಬ ಶ್ರುತಿಯಿಂದ ವಿವರಿಸುತ್ತಿದ್ದಾರೆ.

## ಸ್ತ್ರೀಶೂದ್ರಾದಿಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲ

**ಬ್ರಹ್ಮಸೂತ್ರಭಾಷ್ಯಮ್ –**

**ವ್ಯೋಮಸಂಹಿತಾಯಾಂ ಚ—**

**अन्त्यजा अपि ये भक्ता नामज्ञानाधिकारिणः ।**
**स्त्रीशूद्रब्रह्मबन्धूनां तन्त्रज्ञानेऽधिकारिता ।।**
**एकदेशे परोक्ते तु नतु ग्रन्थपुरःसरे ।**
**त्रैवर्णिकानां वेदोक्ते सम्यक्भक्तिमतां हरौ ।।**
**आहुरप्युत्तमस्त्रीणामधिकारं तु वैदिके ।**
**यथोर्वशी यमी चैव शच्यायाश्च तथाऽपरा ।। इति ।**

ಅನುವಾದ – व्योमसंहितायाम् च = ಶಾಸ್ತ್ರಾಧ್ಯಯನವಿಲ್ಲದವರಿಗೂ ಮೋಕ್ಷದಲ್ಲಿ ಅಧಿಕಾರವಿದೆಯೆಂದು ವ್ಯೋಮಸಂಹಿತೆ ಹೇಳುತ್ತಿದೆ.

ಕೊನೆಯ ವರ್ಣದವರಾದ ಶೂದ್ರರು ಭಕ್ತರಾಗಿದ್ದರೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲ-

ದಿದ್ದರೂ ಹರಿನಾಮಸ್ಮರಣೆಯಲ್ಲಿ ಅಧಿಕಾರಿಗಳಾಗಿರುತ್ತಾರೆ. ಆದರಿಂದಲೇ ಅವರಿಗೆ ಮೋಕ್ಷವು ದೊರೆಯುತ್ತದೆ. ಆದರಿಂದಲೇ ಅವರಿಗೆ ಮೋಕ್ಷವಾಗುತ್ತದೆ. ಸ್ತ್ರೀಯರಿಗೆ ಶೂದ್ರರಿಗೆ ಭ್ರಷ್ಟಬ್ರಾಹ್ಮಣರಿಗೆ ಮಹಾಭಾರತಾದಿಪೌರುಷೇಯಗ್ರಂಥಗಳಲ್ಲಿ, ಅಧಿಕಾರವಿದೆ. ವೇದದಲ್ಲಿ ಅಧಿಕಾರವಿಲ್ಲ. ಮಹಾಭಾರತಾದಿಗ್ರಂಥಗಳಲ್ಲಿಯೂ ಸಂಪೂರ್ಣ ಅಧಿಕಾರವಿಲ್ಲ. ಗುರುಮುಖೇನ ಸಂಪೂರ್ಣವಾಗಿ ಪಾಠಕೇಳುವ ಅಧಿಕಾರವೂ ಇಲ್ಲ. (ಉತ್ತಮರಿಗೆ ಹೇಳುವಾಗ ಹೇಳಿದ್ದನ್ನು ಕೇಳಿಸಿಕೊಳ್ಳಬೇಕು).

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಇವರಿಗೆ ವೇದಾಧ್ಯಯನದಿಂದ ಬರುವ ಬ್ರಹ್ಮಜ್ಞಾನದಲ್ಲಿ ಅಧಿಕಾರವಿದೆ. ಆದರೆ ನಿಶ್ಚಲವಾದ ಅತ್ಯುತ್ತಮಭಕ್ತಿ ವಿಷ್ಣುವಿನಲ್ಲಿರಬೇಕು. ಮತ್ತು ಶಚೀದೇವಿ, ಊರ್ವಶೀ, ಶ್ಯಾಮಲಾ ಮೊದಲಾದ ದೇವತಾಸ್ತ್ರೀಯರು ಮನುಷ್ಯರಾಗಿ ಹುಟ್ಟಿದರೂ ವೇದವಿದ್ಯೆಯಲ್ಲಿ ಅಧಿಕಾರವಿದೆ.

ಪ್ರತಿಪದಾರ್ಥ -- ಅಧ್ಯಯನವುಳ್ಳವರಿಗೆ ಮಾತ್ರ ಬ್ರಹ್ಮವಿದ್ಯೆಯಲ್ಲಿ ಅಧಿಕಾರವು ಬರುವುದಾದರೆ ಶೂದ್ರಾದಿಗಳಿಗೆ ಅಧ್ಯಯನವಿಲ್ಲದ ಕಾರಣ ಬ್ರಹ್ಮವಿದ್ಯೆಗೆ ಅಧಿಕಾರವಿಲ್ಲವೆಂದಂತಾಯಿತು. ಆದ್ದರಿಂದ ಬ್ರಹ್ಮಜ್ಞಾನವಿಲ್ಲದ ಶೂದ್ರಾದಿಗಳಿಗೆ ಮೋಕ್ಷವೂ ಸಹ ದೊರೆಯದೆ ಇರಬೇಕಾದೀತು ಎಂಬ ಶಂಕೆಯನ್ನು ಪರಿಹರಿಸುತ್ತಿದ್ದಾರೆ.

ವ್ಯೋಮಸಂಹಿತಾಯಾಂ ಚ = ವ್ಯೋಮಸಂಹಿತೆಯೆಂಬ ಗ್ರಂಥದಲ್ಲಿಯೂ, ಅಂತ್ಯಜಾಃ = ಕೊನೆಯವರ್ಣದವರಾದ ಶೂದ್ರರು, ಭಕ್ತಾ ಅಪಿ = ಹರಿಭಕ್ತರಾಗಿದ್ದರೆ, ನಾಮಜ್ಞಾನ = ಪರಮಾತ್ಮನ ನಾಮಸ್ಮರಣೆಯಲ್ಲಿ, ಅಧಿಕಾರಿಣಃ = ಅಧಿಕಾರಿಗಳಾಗಿರುತ್ತಾರೆ. ಸ್ತ್ರೀ = ಸ್ತ್ರೀಯರು, ಶೂದ್ರ = ಶೂದ್ರರು, ಬ್ರಹ್ಮಬಂಧೂನಾಂ = ಭ್ರಷ್ಟಬ್ರಾಹ್ಮಣರು ಇವರೇ ಮೊದಲಾದವರಿಗೆ, ತಂತ್ರಜ್ಞಾನೇ = ಭಾರತಾದಿ ಪೌರುಷೇಯಗ್ರಂಥಗಳಲ್ಲಿ, ಅಧಿಕಾರಿತಾ = ಅಧಿಕಾರವಿರುತ್ತೆದೆ. ಪರೋಕ್ತೇ = ಬೇರೆ ಮತ್ತೊಬ್ಬ ಉತ್ತಮಪುರುಷನನ್ನು ಕುರಿತು ಹೇಳುವಾಗ, ಏಕದೇಶೇ = ಏಕದೇಶದಲ್ಲಿ ಮಾತ್ರ (ಅಧಿಕಾರವಿರುತ್ತದೆ), ನ ತು ಗ್ರಂಥಪುರಃಪರೇ = ಗ್ರಂಥವನ್ನು ಆಮೂಲಾಗ್ರವಾಗಿ (ಅಧ್ಯಯನ ಮಾಡಲು ಅಧಿಕಾರವಿರುವುದಿಲ್ಲ).

ವೇದಾಧ್ಯಯನದಿಂದ ಹುಟ್ಟುವ ಬ್ರಹ್ಮವಿದ್ಯೆಯಲ್ಲಿ ಯಾರಿಗೆ ಅಧಿಕಾರ? ಪರಿಶೇಷದಿಂದ ತ್ರೈವರ್ಣಿಕರಿಗೆಂದು ತಿಳಿಯುತ್ತದೆ. ಆದರೆ ಎಲ್ಲ ತ್ರೈವರ್ಣಿಕರಿಗೂ ಅಧಿಕಾರವಿರುವುದಿಲ್ಲ -- ಹರೌ = ಶ್ರೀಹರಿಯಲ್ಲಿ, ಸಮ್ಯಗ್ ಭಕ್ತಿಮತಾಂ =

ಅತ್ಯುತ್ತಮಭಕ್ತಿಯುಳ್ಳವರಾದ, ತ್ರೈವರ್ಣಿಕಾನಾಂ = ಬ್ರಾಹ್ಮಣಾದಿ ಮೂರು ವರ್ಣದವರಿಗೆ ಮಾತ್ರ, ವೇದೋಕ್ತೇ = ವೇದಾಧ್ಯಯನದ ಅಧಿಕಾರವು (ಇರುತ್ತದೆ). ಅಪಿ = ಮತ್ತು, ವೈದಿಕೇ = ವೇದವು ಹೇಳಲ್ಪಟ್ಟ ವಿಷಯದಲ್ಲಿ, ಉತ್ತಮಸ್ತ್ರೀಣಾಂ = ದೇವತಾಸ್ತ್ರೀಯರಿಗೆ, ಅಧಿಕಾರಂ ತು = ಅಧಿಕಾರವನ್ನು, ಆಹುಃ = ಹೇಳುತ್ತಾರೆ. ಯಥಾ = ಹೇಗೆ, ಊರ್ವಶಿ = ಊರ್ವಶಿಯೆಂಬ ಅಪ್ಸರೆಯು, ಯಮೀ = ಯಮನ ಪತ್ನಿಯಾದ ಶ್ಯಾಮಲೆಯು, ಶಚ್ಯಾದ್ಯಾಃ = ಇಂದ್ರನ ಪತ್ನಿಯರಾದ ಶಚೀ ಮೊದಲಾದವರು, ಅಪರಾಃ = ಬೇರೆ ಋಷಿಪತ್ನಿಯರು ಇವರಂತೆ, ಇತಿ = ಹೀಗೆ (ಹೇಳಲ್ಪಟ್ಟಿದೆ).

## ಅಪರೋಕ್ಷಜ್ಞಾನಕ್ಕಾಗಿ ಬ್ರಹ್ಮಜಿಜ್ಞಾಸೆಯು ಆವಶ್ಯಕ

**ಬ್ರಹ್ಮಸೂತ್ರಭಾಷ್ಯಮ್ –**

**यतो नारायणप्रसादमृते न मोक्षः, न च ज्ञानं विनाऽत्यर्थप्रसादः, अतो ब्रह्मजिज्ञासा कर्तव्या ।**

ಅನುವಾದ -- ನಾರಾಯಣನ ಪ್ರಸಾದವಿಲ್ಲದೇ ಮೋಕ್ಷವಾಗುವುದಿಲ್ಲ. ಅಪರೋಕ್ಷಜ್ಞಾನವಿಲ್ಲದೆ ಪ್ರಸಾದವಾಗುವುದಿಲ್ಲ. ಅಪರೋಕ್ಷಜ್ಞಾನಕ್ಕೋಸ್ಕರ ಬ್ರಹ್ಮವಿಚಾರವನ್ನು ಮಾಡಬೇಕು.

**ಬ್ರಹ್ಮಸೂತ್ರಭಾಷ್ಯಮ್ –**

**यत्रानवसरोऽन्यत्र पदं तत्र प्रतिष्ठितम् ।**
**वाक्यं वेति सतां नीतिः सावकाशे न तद् भवेत् ।। इति ब्रह्मसंहितायाम् ।**

''ಯಾವ ಪದವಿಲ್ಲದೆ ವಾಕ್ಯದ ಅರ್ಥವು ಪೂರ್ಣವಾಗುವುದಿಲ್ಲವೋ; ಅಂತಹ ಪದವನ್ನು ವಾಕ್ಯದಲ್ಲಿ ಅಧ್ಯಾಹಾರ ಮಾಡಬೇಕು. ಆದರಂತೆ ಆವಾಂತರವಾಕ್ಯವನ್ನು ಅಧ್ಯಾಹಾರ-ಮಾಡಿಕೊಳ್ಳದೇ ಮಹಾವಾಕ್ಯದ ಅರ್ಥವು ಪೂರ್ಣವಾಗುವುದಿಲ್ಲವೋ ಅಂತಹ ಆವಾಂತರವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಆದರೆ ಪದ ಅಥವಾ ಆವಾಂತರವಾಕ್ಯಗಳು ಇಲ್ಲದಿದ್ದರೂ ವಾಕ್ಯವಾಗಲೀ ಮಹಾವಾಕ್ಯವಾಗಲೀ ಪರಿಪೂರ್ಣ ಅರ್ಥವುಳ್ಳದ್ದಾಗುವುದಾದರೆ ಆವಾಗ ಪದವನ್ನು ಅಥವಾ ವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬಾರದು. ಹೀಗೆ ಜ್ಞಾನಿಗಳು ಹೇಳುತ್ತಾರೆ''. ಬೃಹತ್ಸಂಹಿತೆಯಲ್ಲಿ ಈ ನಿಯಮವು

ಹೇಳಲ್ಪಟ್ಟರುವುದರಿಂದ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮಸೂತ್ರದಲ್ಲಿ ಕರ್ತವ್ಯಾ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

ಪ್ರತಿಪದಾರ್ಥ -- ಇಲ್ಲಿಯ ತನಕ ಅಥಶಬ್ದವನ್ನು ಸಂಕ್ಷೇಪ ಹಾಗೂ ವಿಸ್ತಾರವಾಗಿ ವ್ಯಾಖ್ಯಾನಿಸಿ ಈಗ ಸೂತ್ರದಲ್ಲಿ ಕರ್ತವ್ಯಾ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಯತಃ = ಯಾವ ಕಾರಣದಿಂದ, ನಾರಾಯಣಪ್ರಸಾದಂ = ನಾರಾಯಣನ ಪ್ರಸಾದವು, ಋತೇ = ಇಲ್ಲದೆ, ಮೋಕ್ಷಃ = ಮೋಕ್ಷವು, ನ = ಆಗುವುದಿಲ್ಲವೋ, ಜ್ಞಾನಂ ಏನಾ = ಅಪರೋಕ್ಷಜ್ಞಾನವಿಲ್ಲದೆ, ಅತ್ಯರ್ಥಪ್ರಸಾದಃ = ಭಗವಂತನ ಮೋಕ್ಷಕಾರಣ ಪ್ರಸಾದವು, ನಚ = ದೊರೆಯುವುದೇ ಇಲ್ಲ. ಆದ್ದರಿಂದ ಬ್ರಹ್ಮಜಿಜ್ಞಾಸಾ = ಬ್ರಹ್ಮವಿಷಯಕವಿಚಾರವನ್ನು, ಕರ್ತವ್ಯಾ = ಮಾಡಲೇ ಬೇಕು. ಸೂತ್ರದಲ್ಲಿ 'ಕರ್ತವ್ಯಾ' ಎಂಬ ಪದವನ್ನೇ ಏಕೆ ಅಧ್ಯಾಹಾರ ಮಾಡಬೇಕು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಯತ್ರ = ಯಾವ ವಾಕ್ಯದಲ್ಲಿ, ಅನವಸರಃ = ಯಾವ ಪದವಿಲ್ಲದಿದ್ದರೆ, ಅರ್ಥವು ಪೂರ್ಣವಾಗುವುದಿಲ್ಲವೋ, ತತ್ರ = ಆ ವಾಕ್ಯದಲ್ಲಿ, ಅನ್ಯತ್ರಪದಂ = ಬೇರೆಡೆ ಇರುವ ಪದವನ್ನು, ಪ್ರತಿಷ್ಠಿತಮ್ = ಅಧ್ಯಾಹಾರಮಾಡಿ ಅರ್ಥವನ್ನು ತಿಳಿಯಬೇಕು. ವಾಕ್ಯಂ ವಾ = ಮಹಾವಾಕ್ಯವನ್ನಾದರೋ, ಇತಿ = ಇದೇ ರೀತಿಯಾಗಿ, ಸತಾಂ = ಸಜ್ಜನರ, ನೀತಿಃ = ನಿಯಮವು, ಸಾವಕಾಶೇ = ಅವಕಾಶದಿಂದ ಕೂಡಿದ್ದರೆ, ತತ್ = ಆ ವಿವಕ್ಷಿತಾರ್ಥವು, ಭವೇತ್ = ಆಗುತ್ತದೆ. ಇತಿ = ಈ ರೀತಿಯಾಗಿ ಬೃಹತ್ಸಂಹಿತೆಯಲ್ಲಿ ಹೇಳಿದ್ದಾರೆ.

## ಅತಃಶಬ್ದಾರ್ಥವಿಚಾರ ಹಾಗೂ ಕರ್ತವ್ಯಾಪದವಿಚಾರ

**तत्वप्रकाशिका – नन्वध्ययनवतामेव ब्रह्मविद्याधिकारित्वे त्रिवर्णेतरेषा-मध्ययनविधुराणां ज्ञानाभावेन मोक्षाभावः स्यात् इत्याशङ्कां प्रमाणेन परिहरति – व्योमसंहितायां चेति ।।**

ಅಧ್ಯಯನ ಮಾಡಿದರಷ್ಟೇ ಬ್ರಹ್ಮವಿದ್ಯೆಗೆ ಅಧಿಕಾರಿಗಳಾಗುವುದಾದರೆ ಅಧ್ಯಯನವಿಲ್ಲದ ಶೂದ್ರಾದಿಗಳಿಗೆ ಬ್ರಹ್ಮಜ್ಞಾನವೇ ಬರುವುದಿಲ್ಲವೆಂದಾಯಿತು. ಆದ್ದರಿಂದ ಅವರಿಗೆ ಮೋಕ್ಷವು ಬಾರದಿರಲಿ ಎಂಬ ಆಕ್ಷೇಪವನ್ನು ಪ್ರಮಾಣಪುರಃಸರವಾಗಿ 'ವ್ಯೋಮಸಂಹಿತಾಯಾಂ ಚ' ಎಂಬುದಾಗಿ ಪರಿಹರಿಸುತ್ತಿದ್ದಾರೆ.

**तत्वप्रकाशिका – अन्त्यजा = वर्णबाह्याः । 'भक्ताः' इत्यधिकारकथनम् । तन्त्रं = पञ्चरात्रादि । 'अध्ययनाभावेन वैदिकज्ञानानधिकारित्वेऽपि त्रिवर्णेतरेषां नामादिज्ञानाधिकारित्वात् मोक्षोपपत्तिः' इति भावः ।**

ಅಂತ್ಯಜಾಃ = ತ್ರಿವರ್ಣಬಾಹ್ಯರು, ಭಕ್ತಾಃ ಎಂಬ ಪದವು ಅಧಿಕಾರವನ್ನು ಹೇಳುತ್ತಿದೆ. ತಂತ್ರಂ = ಪಂಚರಾತ್ರಾದಿಗಳು. ತ್ರಿವರ್ಣಬಾಹ್ಯರಿಗೆ ಅಧ್ಯಯನವಿಲ್ಲದ ಕಾರಣ ವೇದಜ್ಞಾನವಿಲ್ಲದಿರಬಹುದು. ಆದರೆ ಪರಮಾತ್ಮನ ನಾಮಸ್ಮರಣೆಯಲ್ಲಿ ಅಧಿಕಾರ-ವಿರುವುದರಿಂದ ಅವರಿಗೂ ಮೋಕ್ಷ ದೊರೆಯುತ್ತದೆ.

**तत्वप्रकाशिका – 'सपत्नीं मे पराधम' इत्यादौ स्त्रीणामपि वेदाधिकारदर्शनात् कथं तासामनधिकारः? इत्यत उक्तस्यापवादमाह – आहुरिति ।। तथा परा मुनिस्त्रियो नरादिकुलजाश्च ।**

ಪ್ರಶ್ನೆ - 'ಸಪತ್ನೀಂ ಮೇ ಪರಾಧಮ' (ಸಪತ್ನಿಯಿಂದ ನನ್ನನ್ನು ಬಿಡಿಸು) ಇತ್ಯಾದಿ ಶಚೀದೇವಿಯು ಸಾಕ್ಷಾತ್ಕಾರ ಮಾಡಿಕೊಂಡ ವೇದಮಂತ್ರವರಿದೆ. ಈ ಶ್ರುತಿಪ್ರಮಾಣದಿಂದ ಸ್ತ್ರೀಯರಿಗೂ ಸಹ ವೇದವಿದ್ಯೆಯಲ್ಲಿ ಅಧಿಕಾರವಿರುತ್ತದೆಂದು ತಿಳಿಯುತ್ತದೆ. ಆದ್ದರಿಂದ ಸ್ತ್ರೀಶೂದ್ರಾದಿಗಳಿಗೆ ಅಧಿಕಾರವಿಲ್ಲವೆಂದು ಹೇಗೆ ಹೇಳಿದಿರಿ?

ಉತ್ತರ - ಈ ವಿಷಯದಲ್ಲಿ ಕೆಲವು ಅಪವಾದಗಳನ್ನು 'ಆಹುಃ' ಇತ್ಯಾದಿ ವಚನಗಳಿಂದ ಹೇಳುತ್ತಿದ್ದಾರೆ. ತಥಾऽಪರಾಃ = ಋಷಿಸ್ತ್ರೀಯರು ಮತ್ತು ಮನುಷ್ಯಕುಲದಲ್ಲಿ ಹುಟ್ಟಿದವರು.

**तत्वप्रकाशिका – एवमथशब्दं संक्षेपविस्ताराभ्यां व्याख्याय, 'अतःशब्दो हेत्वर्थः' इत्युक्तं व्यनक्ति – यत इति ।।**

ಈ ರೀತಿಯಾಗಿ 'ಅಥ'ಶಬ್ದವನ್ನು ಸಂಕ್ಷೇಪ ಹಾಗೂ ವಿಸ್ತಾರವಾಗಿ ವ್ಯಾಖ್ಯಾನ ಮಾಡಿ, ಮುಂದೆ 'ಅತಃ' ಎಂಬ ಶಬ್ದವನ್ನು ಹೇತ್ವರ್ಥದಲ್ಲಿ 'ಯತಃ' ಎಂಬಿತ್ಯಾದಿ ಭಾಷ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

**तत्वप्रकाशिका – 'सुखमेव मे स्याद् दुःखं मनागपि मा भूत्' इति सर्वाभिमतमोक्षस्य नारायणात्यर्थप्रसादमन्तरेणासम्भवात्, अत्यर्थप्रसादस्य च**

**तदपरोक्षज्ञानमन्तरेणालाभात्, अपरोक्षज्ञानस्य च ब्रह्मजिज्ञासां विनाऽनुदयात्, अत्यर्थप्रसादद्वारा मोक्षसाधनापरोक्षज्ञानोत्पादिका ब्रह्मजिज्ञासा कर्तव्या इत्यर्थः ।**

'' 'ನನಗೆ ಸುಖವೇ ಆಗಲಿ ದುಃಖದ ಲವಲೇಶವೂ ಬೇಡ' ಎಂಬ ಎಲ್ಲರಿಂದ ಅಪೇಕ್ಷಿತವಾದ ಮೋಕ್ಷವು ನಾರಾಯಣನ ಪ್ರಸಾದವಿಲ್ಲದೆ ದೊರೆಯುವುದಿಲ್ಲ. ನಾರಾಯಣನ ಪ್ರಸಾದವಾಗಬೇಕಾದರೆ ಅಪರೋಕ್ಷಜ್ಞಾನವಾಗಬೇಕು. ಅಪರೋಕ್ಷ ಜ್ಞಾನವು ಬ್ರಹ್ಮಜಿಜ್ಞಾಸೆಯಿಲ್ಲದೆ ಹುಟ್ಟುವುದಿಲ್ಲ. ಆದ್ದರಿಂದ ಪರಮಾತ್ಮನ ಅತ್ಯರ್ಥಪ್ರಸಾದದ ಮೂಲಕ ಮೋಕ್ಷವೇ ಫಲವಾಗಿ ಉಳ್ಳ ಅಪರೋಕ್ಷಜ್ಞಾನಕ್ಕೆ ಉಪಯೋಗಿಯಾದ ಬ್ರಹ್ಮಜಿಜ್ಞಾಸೆಯನ್ನು ಅವಶ್ಯ ಆಚರಿಸಬೇಕು'' ಎಂದು ಅಭಿಪ್ರಾಯ.

**तत्वप्रकाशिका – यदुक्तम् – 'असन्दिग्धत्वान्न ब्रह्मणो विषयत्वम्' इति तद् ब्रह्मपदप्रयोगेण परास्तम् ।**

ಹಿಂದೆ 'ಸಂದೇಹವಿಲ್ಲದ ಬ್ರಹ್ಮನು ವಿಷಯನಾಗಲಾರ'ನೆಂದು ಪೂರ್ವಪಕ್ಷ ಮಾಡಲಾಗಿತ್ತು. ಅದನ್ನು ಈಗ ಬ್ರಹ್ಮಪದದ ಪ್ರಯೋಗದಿಂದಲೇ ನಿರಾಕರಿಸಿದ್ದಾರೆ. ಅದು ಹೀಗೆ -- '' ಜಿಜ್ಞಾಸೆಗೆ ವಿಷಯನಾದ ಬ್ರಹ್ಮನು ಸ್ವಪ್ರಕಾಶನಾದ ಜೀವನಿಗಿಂತ ಅಭಿನ್ನನಾಗಿದ್ದರೆ ಅಸಂದಿಗ್ಧನಾದ ಕಾರಣ ವಿಷಯನಾಗುತ್ತಿರಲಿಲ್ಲ. ಆದರೆ ಬ್ರಹ್ಮನು ಅಸಂದಿಗ್ಧನಲ್ಲ. 'ತದ್ ವಿಜಿಜ್ಞಾಸ್ಸಸ್ವ , ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮನನ್ನು ಜಿಜ್ಞಾಸ್ಯನೆಂದು ಹೇಳಲಾಗಿದೆ. ಬ್ರಹ್ಮಶಬ್ದಕ್ಕೆ ಗುಣಪೂರ್ಣ ಎಂದರ್ಥ. ಈ ವಿಷಯದಲ್ಲಿ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ । ಬೃಹಂತೋ ಹ್ಯಸ್ಮಿನ್ ಗುಣಾಃ' ಎಂಬ ಶ್ರುತಿಯೇ ಆಧಾರ. ಆದ್ದರಿಂದ ಇಂತಹ ಗುಣಪೂರ್ಣನಾದ ಬ್ರಹ್ಮನು ಜೀವನಿಂದ ಅಭಿನ್ನನಾಗಲು ಹೇಗೆ ಸಾಧ್ಯ? ಏಕೆಂದರೆ ಜೀವನು ಅಲ್ಪಗುಣನೆಂದು ಅನುಭವಸಿದ್ಧನಾಗಿದ್ದಾನೆ.

**तत्वप्रकाशिका – तथाहि । भवेदेतदसन्दिग्धत्वं जिज्ञास्यस्य, यदि तत् स्वप्रकाशजीवाभिन्नं स्यात् । न चैतदस्ति जिज्ञास्ये ब्रह्मपदश्रवणात् 'तद् विजिज्ञासस्व' 'तद् ब्रह्म' इति । ब्रह्मशब्दश्च पूर्णगुणतां वक्ति । 'अथ कस्मादुच्यते ब्रह्मेति । बृहन्तो ह्यस्मिन् गुणाः' इति श्रुतेः । तथाच कथं तस्य जीवाभेदः जीवस्याल्पगुणत्वेनानुभवात् ।**

ಬ್ರಹ್ಮನಲ್ಲಿರುವ ಎಲ್ಲ ಗುಣಗಳು ಆರೋಪಿತವಾದ್ದರಿಂದ ಜೀವಾಭೇದವನ್ನು ಹೇಳಬಹುದೆಂದು ಶಂಕಿಸಬಾರದು. ಹೀಗಾದಲ್ಲಿ ಪಾರಮಾರ್ಥಿಕವಾಗಿ ಬ್ರಹ್ಮನು ಬ್ರಹ್ಮನಲ್ಲ ಎಂದಂತಾಯಿತು (ಇದು ವ್ಯಾಹತ). ದೇಶತಃ ಕಾಲತಃ ಅಪರಿಚ್ಛಿನ್ನತ್ವವನ್ನಷ್ಟೇ ಬ್ರಹ್ಮಪದವು ಹೇಳುತ್ತಿದೆ. ಗುಣಪೂರ್ಣತ್ವವನ್ನು ಹೇಳುತ್ತಿಲ್ಲವೆಂದು ಶಂಕಿಸಬಾರದು. ಹಾಗಾದರೆ 'ಅಥ ಕಸ್ಮಾದುಚ್ಯತೇ' ಎಂಬ ಶ್ರುತಿವಿರೋಧ ಬರುತ್ತದೆ.

**तत्वप्रकाशिका – न च ब्रह्मणि गुणध्यासः । परमार्थतोऽब्रह्मत्वप्रसङ्गात् । देशाद्यपरिच्छिन्नता ब्रह्मतेति चेन्न । उक्तश्रुतिविरोधात् । देशाद्यपरिच्छेदेन च जीवभेदसिद्धेः, जीवाणुत्वस्य च वक्ष्यमाणत्वात् । अतो जीवस्य स्वप्रकाशत्वेऽपि तच्चिन्नब्रह्मणः सन्दिग्धत्वाद् विषयत्वसिद्धेर्मुख्यप्रयोजनसद्भावात् तत एवाधिकार्यादिसम्भवाद् ब्रह्मजिज्ञासा कर्तव्येति । ब्रह्मपदव्याख्यानरूपं नारायणपदम् ।**

ಮತ್ತು ದೇಶಕಾಲಾದ್ಯಪರಿಚ್ಛೇದದಿಂದಲೂ ಜೀವಭೇದವೆಂಬ ನಮ್ಮ ಇಷ್ಟವು ಸಿದ್ಧಿಸುತ್ತದೆ. ಏಕೆಂದರೆ ಜೀವನು ಅಣುವೆಂದು ಮುಂದೆ ಉಪಪಾದಿಸಿದ್ದೇವೆ. ಆದ್ದರಿಂದ ಜೀವನು ಸ್ವಪ್ರಕಾಶನಾದರೂ ಜೀವಭಿನ್ನನಾದ ಬ್ರಹ್ಮನು ಸಂದಿಗ್ಧನಾಗುತ್ತಾನೆ. ಆದ್ದರಿಂದಲೇ ಶಾಸ್ತ್ರಕ್ಕೆ ವಿಷಯನೂ ಆಗುತ್ತಾನೆ. ಇದಕ್ಕೆ ಮೋಕ್ಷವೆಂಬ ಫಲವೂ ಇರುತ್ತದೆ. ಆದ್ದರಿಂದಲೇ ಅಧಿಕಾರಿಗಳೂ ಇರುತ್ತಾರೆ. ಹೀಗೆ ವಿಷಯಪ್ರಯೋಜನಾದಿಗಳೆಲ್ಲವೂ ಪರಿಪೂರ್ಣ-ವಾಗಿರುವುದರಿಂದ ಬ್ರಹ್ಮಜಿಜ್ಞಾಸೆಯು ಅವಶ್ಯಕರ್ತವ್ಯವೇ ಆಗಿದೆ'' ಎಂದು. ''ನಾರಾಯಣ''ಪದವು ಬ್ರಹ್ಮಪದವನ್ನೇ ವ್ಯಾಖ್ಯಾನಿಸುತ್ತಿದೆ.

**तत्वप्रकाशिका – ननु 'कर्तव्या' इति पदमत्र न श्रूयते; यदि अध्याहारस्तर्हि न कर्तव्येत्यध्याहारः किं न स्यात् अध्याहारस्य निरङ्कुशत्वात्? इत्यत आह – यत्रेति ।।**

''ಸೂತ್ರದಲ್ಲಿ 'ಕರ್ತವ್ಯಾ' ಎಂಬ ಪದವು ಕೇಳಿಸುತ್ತಿಲ್ಲ. ಅಧ್ಯಾಹಾರ ಮಾಡಿಕೊಳ್ಳುವುದಾದರೆ 'ನ ಕರ್ತವ್ಯಾ' ಎಂಬ ಪದವನ್ನೇ ಅಧ್ಯಾಹಾರ ಮಾಡಿಕೊಳ್ಳಬಹುದು. ಇದನ್ನೇ ಅಧ್ಯಾಹಾರ ಮಾಡಿಕೊಳ್ಳಬೇಕೆಂಬುದಕ್ಕೆ ನಿಯಮವಿಲ್ಲ'' ಎಂಬ ಪ್ರಶ್ನೆಗೆ ಆಚಾರ್ಯರು 'ಯತ್ರಾನವಸರೋ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

**तत्वप्रकाशिका – यत्र = वाक्ये महावाक्ये वा, यत् पदं वाक्यं वा विना, अन्यत्रर्थान्तरे अनवसरः, अर्थान्तरस्याघटना, तत्र = वाक्ये महावाक्ये वा, तदेव पदं वाक्यं वा प्रतिष्ठितं प्राप्तं, नान्यत् इति सतां न्यायः ।**

''ಯಾವ ವಾಕ್ಯದಲ್ಲಿ ಅಥವಾ ಮಹಾವಾಕ್ಯದಲ್ಲಿ ಯಾವ ಪದವಿಲ್ಲದೆ ಅಥವಾ ವಾಕ್ಯವಿಲ್ಲದೆ ಬೇರೆ ಅರ್ಥವು ತಿಳಿಯಲು ಸಾಧ್ಯವಿಲ್ಲವೋ, ಅಂತಹ ವಾಕ್ಯ ಮತ್ತು ಮಹಾವಾಕ್ಯಗಳಲ್ಲಿ ಅನಿವಾರ್ಯವಾದ ಅದೇ ಪದವನ್ನು ಮತ್ತು ಅದೇ ವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಬೇರೆ ಪದ ಮತ್ತು ಬೇರೆ ವಾಕ್ಯಗಳನ್ನು ಅಧ್ಯಾಹಾರ ಮಾಡಿಕೊಳ್ಳಬಾರದು' ಈ ನಿಯಮವು ಸಜ್ಜನಸಮ್ಮತವಾಗಿದೆ.

**तत्वप्रकाशिका – यत् पदं वाक्यं वा विनापि पदान्तरेण वाक्यान्तरेण वा वाक्ये महावाक्ये वा सावकाशे = अर्थान्तरे घटनावति, तदेव पदं वाक्यं वा नियमेन प्रतिष्ठितं न भवेत् इति न्यायात् कर्तव्यपदमेवाध्याहार्यम् । 'न कर्तव्या' इत्यादेरधिकारकथनादिनाऽयोगात्' इति भावः ।**

ಯಾವ ವಾಕ್ಯದಲ್ಲಿ ಯಾವ ಪದ ಇಲ್ಲದೇ ಆ ವಾಕ್ಯದ ಬೇರೆ ಪದಗಳಿಂದ ಆ ವಾಕ್ಯದ ಬೇರೆ ಪದಗಳಿಗೆ ಅನ್ವಯ ಮಾಡಲು ಬರುವುದಿಲ್ಲವೋ, ಆ ವಾಕ್ಯದಲ್ಲಿ ಆ ಪದವನ್ನು ಸೇರಿಸಿಕೊಳ್ಳಬೇಕು.

ಅಥವಾ ಯಾವ ಮಹಾವಾಕ್ಯದಲ್ಲಿ ಅವಾಂತರ ವಾಕ್ಯವಿಲ್ಲದೇ ಆ ವಾಕ್ಯದ ಬೇರೆ ಪದಗಳಿಂದ ಆ ವಾಕ್ಯದ ಬೇರೆ ಪದಗಳಿಗೆ ಅನ್ವಯ ಮಾಡಲು ಬರುವುದಿಲ್ಲವೋ, ಆ ಮಹಾವಾಕ್ಯದಲ್ಲಿ ಆ ಅವಾಂತರವಾಕ್ಯವನ್ನು ಸೇರಿಸಿಕೊಳ್ಳಬೇಕು.

ಯಾವ ವಾಕ್ಯದಲ್ಲಿ ಯಾವ ಪದ ಇಲ್ಲದಿದ್ದರೂ ಆ ವಾಕ್ಯದ ಬೇರೆ ಪದಗಳಿಂದ, ಆ ವಾಕ್ಯದ ಬೇರೆ ಪದಗಳಿಗೆ ಅನ್ವಯ ಹೇಳಲು ಬರುತ್ತದೋ, ಆಗ ಆ ವಾಕ್ಯದಲ್ಲಿ ಆ ಪದವನ್ನೇ ಸೇರಿಸಿಕೊಳ್ಳಬೇಕೆಂಬ ನಿಯಮವಿರುವುದಿಲ್ಲ.

ಅಥವಾ ಯಾವ ಮಹಾವಾಕ್ಯದಲ್ಲಿ ಯಾವ ಅವಾಂತರವಾಕ್ಯವಿಲ್ಲದಿದ್ದರೂ ಆ ವಾಕ್ಯದ ಬೇರೆ ಪದಗಳಿಂದ, ಆ ವಾಕ್ಯದ ಬೇರೆ ಪದಗಳಿಗೆ ಅನ್ವಯ ಹೇಳಲು ಬರುತ್ತದೋ, ಆಗ

ಆ ಮಹಾವಾಕ್ಯದಲ್ಲಿ ಆ ವಾಕ್ಯವನ್ನೇ ಸೇರಿಸಿಕೊಳ್ಳಬೇಕೆಂಬ ನಿಯಮವಿರುವುದಿಲ್ಲ. ಇದು ಸಜ್ಜನರು ಒಪ್ಪಿರುವ ನ್ಯಾಯವಾಗಿದೆ.

ಪ್ರಕೃತ 'ಅಥ ಅತಃ ಬ್ರಹ್ಮಜಿಜ್ಞಾಸಾ' ಎಂಬ ವಾಕ್ಯದಲ್ಲಿ 'ಕರ್ತವ್ಯಾ' ಎಂಬ ಪದವನ್ನು ಇಟ್ಟುಕೊಳ್ಳದಿದ್ದರೂ ಬ್ರಹ್ಮಜಿಜ್ಞಾಸೆಗೆ ಅಂಗವಾಗಿರುವ ವಿಷಯಪ್ರಯೋಜನ ಅಧಿಕಾರವನ್ನು ಹೇಳಿದ್ದು ಅನ್ವಿತವಾಗುತ್ತಿತ್ತು. ಆದ್ದರಿಂದ 'ಕರ್ತವ್ಯಾ' ಎಂಬ ಪದವನ್ನೇ ಅಧ್ಯಾಹಾರ ಮಾಡಿಕೊಳ್ಳ ಬೇಕು. 'ನ ಕರ್ತವ್ಯಾ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳುವುದರಿಂದ ವಿಷಯ ಪ್ರಯೋಜನ ಅಧಿಕಾರವನ್ನು ಹೇಳಿದ್ದಕ್ಕೆ ಅನ್ವಯವನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ 'ನ ಕರ್ತವ್ಯಾ' ಎಂಬ ಪದವನ್ನು ಅಧ್ಯಾಹಾರ ಮಾಡಬಾರದು. ಇಷ್ಟು 'ಯತ್ರಾऽನವಸರಃ' ಎಂಬ ಭಾಷ್ಯದ ಅಭಿಪ್ರಾಯವಾಗಿದೆ.

## ವ್ಯೋಮಸಂಹಿತೆಯಲ್ಲಿ ಅಧಿಕಾರವಿಚಾರ

**भावदीपः – व्योमसंहितायां चेति' इति ।।** ಭಾಷ್ಯೇ **'व्योमसंहितायां चाधिकार उक्तः' इत्यन्वयः । अयमपि सौत्राथशब्दार्थ एव । ब्रह्मजिज्ञासा नाम सर्ववेदान्तनये 'दर्शयति च' इति सूत्रभाष्यादिदिशा यथाधिकारं ब्रह्मज्ञानायामखिलवेदवेदानुसारिग्रन्थार्थविषयकश्रवणमननिदिध्यासनादि । तत्र अथपदेनोक्तानां मुक्तियोग्यानां मध्ये त्रैवर्णिकानां प्रागुक्तगुणयुक्तानां सर्वत्राधिकारः । तदन्येषां तु भक्तानां वेदानुसारिग्रन्थार्थजिज्ञासायामेव । तत्रापि केषाञ्चिन्नाममात्रादौ इत्यादिरूपोऽधिकारविशेषो व्योमसंहितायामुक्त इत्यर्थः ।**

'ವ್ಯೋಮಸಂಹಿತಾಯಾಂ ಚ' ಎಂದಿಷ್ಟೇ ಭಾಷ್ಯದಲ್ಲಿ ಹೇಳಿದ್ದಾರೆ. 'ಅಧಿಕಾರಃ ಶ್ಲುಕ್ತಃ' ಎಂಬುದನ್ನು ಶೇಷಪೂರಣ ಮಾಡಬೇಕು. ವ್ಯೋಮಸಂಹಿತೆಯಲ್ಲಿ ಹೇಳಲ್ಪಟ್ಟ ಅಧಿಕಾರವೂ ಸಹ ಸೂತ್ರದ ಅಥಶಬ್ದದ ಅರ್ಥವೇ ಆಗಿದೆ. ಬ್ರಹ್ಮಜಿಜ್ಞಾಸಾಶಬ್ದಕ್ಕೆ ಸರ್ವವೇದಾಂತಪ್ರತ್ಯಯಾಧಿಕರಣದಲ್ಲಿ ಮತ್ತು 'ದರ್ಶಯತಿ ಚ' ಎಂಬ ಅಧಿಕರಣದ ಭಾಷ್ಯದಲ್ಲಿ ಹೀಗೆ ಅರ್ಥವನ್ನು ಹೇಳಿದ್ದಾರೆ. -- 'ಯೋಗ್ಯತೆಗೆ ತಕ್ಕಂತೆ ಬ್ರಹ್ಮಜ್ಞಾನಕ್ಕೋಸ್ಕರ

ಸಕಲ ವೇದ ಮತ್ತು ವೇದಾನುಸಾರಿಯಾದ ಗ್ರಂಥಗಳ ಶ್ರವಣ ಮನನ, ನಿದಿಧ್ಯಾಸನಗಳು' ಎಂದು. ಆದರೆ ಇಲ್ಲಿ ಅಥಪದದಿಂದ ಹೇಳಿರುವಂತಹ ಮುಕ್ತಿಯೋಗ್ಯರ ಮಧ್ಯದಲ್ಲಿ ಹಿಂದೆ ಹೇಳಿದ ಪ್ರಕಾರ ತ್ರೈವರ್ಣಿಕರಿಗೆ ವೇದ ಹಾಗೂ ವೇದಾನುಸಾರಿ ಗ್ರಂಥಗಳ ಶ್ರವಣಾದಿಗಳಲ್ಲಿ ಅಧಿಕಾರವಿದೆ. ತ್ರೈವರ್ಣಿಕರನ್ನು ಬಿಟ್ಟು ಇತರ ಭಕ್ತರಿಗೆ ವೇದದಲ್ಲಿ ಅಧಿಕಾರವಿರುವುದಿಲ್ಲ. ಕೇವಲ ವೇದಾನುಸಾರಿಯಾದ ಗ್ರಂಥಗಳ ಜಿಜ್ಞಾಸೆಯಲ್ಲಷ್ಟೇ ಅಧಿಕಾರವಿರುತ್ತದೆ. ಆದರಲ್ಲಿಯೂ ಸಹ ಕೆಲವರಿಗೆ ಕೇವಲ ಭಗವಂತನ ನಾಮಸ್ಮರಣೆಯಲ್ಲಷ್ಟೇ ಅಧಿಕಾರವಿರುತ್ತದೆಯೆಂದು ವ್ಯೋಮಸಂಹಿತೆಯಲ್ಲಿ ಹೇಳಲ್ಪಟ್ಟಿದೆ.

## ಭಾಷ್ಯವು ಉತ್ಪೂತ್ರಿತವಲ್ಲ

**ಭಾವದೀಪಃ – 'अरुच्या प्रकारान्तरेण' इत्यादिटीका तु जिज्ञासाविशेषपरा। तेन एतद्भाष्यम् उत्सूत्रमिति न कस्यचिदुपालम्भावकाशः । वेदाधिकारेति।। अन्यथा तद्द्रष्टृत्वं न स्यादिति भावः ।**

ಟೀಕೆಯಲ್ಲಿ ಹಿಂದೆ 'ಅರುಚ್ಯಾ ಪ್ರಕಾರಾಂತರೇಣ' ಎಂದು ಅಧಿಕಾರಿಗಳ ಸ್ವರೂಪದ ಬಗ್ಗೆ ಮತ್ತೊಂದು ಬಗೆಯಾಗಿ ವ್ಯಾಖ್ಯಾನಿಸಿದ್ದರು. ಆದರೆ ಇಲ್ಲಿ ಅಂತಹ ಅಧಿಕಾರಿಗಳನ್ನು ಸೇರಿಸಿದ್ದರಿಂದ ಹಿಂದಿನ ಟೀಕೆಯು ಕೇವಲ ಜಿಜ್ಞಾಸಾವಿಷಯಕವೆಂದು ತಿಳಿಯಬೇಕು. ಇದರಿಂದ ''ಸೂತ್ರದಲ್ಲಿ ಹೇಳದ್ದನ್ನು ಭಾಷ್ಯಕಾರರು ವ್ಯಾಖ್ಯಾನಿಸಿದ್ದಾರೆಂಬ ಶಂಕೆಗೆ ಅವಕಾಶವಿಲ್ಲ''. ಸ್ತ್ರೀಯರಿಗೆ ವೇದಾಧಿಕಾರ ಇಲ್ಲದಿದ್ದರೆ 'ಸಪತ್ನೀಂ ಮೇ ಪರಾಧಮ' ಎಂಬ ವೇದದ ದ್ರಷ್ಟೃತ್ವವು ಶಚೀದೇವಿಗೆ ಕೂಡದಿರಬೇಕಾದೀತು.

## ಮನುಷ್ಯದೇವತಾಸ್ತ್ರೀಯರಿಗೆ ವೇದಾಧಿಕಾರವಿದೆ

**ಭಾವದೀಪಃ – मुनिस्त्रियः इति ।। काण्वश्रुतौ 'एतद् वै तदक्षरं गार्गि' इत्यस्य वा 'अक्षरस्य प्रशासने गार्गि' इत्यक्षरविद्यायां गार्ग्याः सम्बोधनात् । तथा 'आत्मा वा अरे द्रष्टव्यः' इत्यादौ 'अरे' इति मैत्रेय्याः सम्बोधनात् । तथा 'भवति ते व्याख्यास्यामि' इति मैत्रेयीं सम्बोध्य,**

**'ವ್ಯಾಚಕ್ಷಾಣಸ್ಯ ತು ಮೇ ನಿದಿಧ್ಯಾಸಸ್ವ' ಇತಿ ನಿದಿಧ್ಯಾಸನವಿಧಾನಾದಿತಿ ಭಾವಃ । ನರಾದಿಕುಲಜಾಶ್ಚೇತಿ ।। ತದುಕ್ತಂ ತಾತ್ಪರ್ಯನಿರ್ಣಯೇ ಏಕೋನತ್ರಿಂಶೇऽಧ್ಯಾಯೇ --**

ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ।
ಉತ್ತಮಾ ಇತಿ ವಿಜ್ಞೇಯಾಃ ಸಚ್ಛೂದ್ರೈರಪ್ಯವೈದಿಕಮ್ ।
ಜ್ಞೇಯಮನ್ಯೈರ್ಹರೇರ್ನಾಮ .... ।। - ಇತ್ಯಾದಿ ।

'ಮುನಿಸ್ತ್ರಿಯಃ' ಎಂಬ ಟೀಕೆಗೆ ಹೀಗೆ ಅರ್ಥ -- ಕಾಣ್ವಶ್ರುತಿಯಲ್ಲಿ 'ಏತದ್ ವೈ ತದಕ್ಷರಂ ಗಾರ್ಗಿ' ಎಂಬುದಾಗಿ ಅಕ್ಷರವಿದ್ಯೆಯಲ್ಲಿ ಗಾರ್ಗಿಯನ್ನು ಸಂಬೋಧಿಸಲಾಗಿದೆ. 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬ ಶ್ರುತಿಯಲ್ಲಿ 'ಅರೇ' ಎಂದು ಮೈತ್ರೇಯಿಯನ್ನು ಸಂಬೋಧಿಸಲಾಗಿದೆ. ಅದರಂತೆ 'ಭವತಿ ತೇ ವ್ಯಾಖ್ಯಾಸ್ಯಾಮಿ' ಎಂದು ಮೈತ್ರೇಯಿಯನ್ನು ಸಂಬೋಧಿಸಿ 'ವ್ಯಾಚಕ್ಷಾಣಸ್ಯ ತು ಮೇ ನಿದಿಧ್ಯಾಸಸ್ವ' ಎಂದು ನಿದಿಧ್ಯಾಸನವನ್ನು ವಿಧಾನಮಾಡಲಾಗಿದೆ. ಆದ್ದರಿಂದ ಮುನಿಸ್ತ್ರೀಯರಿಗೆ ವೇದಾಧಿಕಾರವಿದೆಯೆಂದು ಹೇಳಬೇಕಾದೀತು. ಇಂತಹ ಉತ್ತಮಸ್ತ್ರೀಯರು ಮನುಷ್ಯರಾಗಿ ಹುಟ್ಟಿದಾಗಲೂ ವೇದಾಧಿಕಾರವಿರುತ್ತದೆಂದು 'ನರಾದಿಕುಲಜಾ' ಎಂಬ ಟೀಕೆಯಲ್ಲಿ ಹೇಳಿದ್ದಾರೆ. ಇದನ್ನೇ ತಾತ್ಪರ್ಯನಿರ್ಣಯದ ಇಪ್ಪತ್ತಮೂರನೆಯ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ.

'ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ।
ಉತ್ತಮಾ ಇತಿ ವಿಜ್ಞೇಯಾಃ ಸಚ್ಛೂದ್ರೈರಪ್ಯವೈದಿಕಮ್ ।
ಜ್ಞೇಯಮನ್ಯೈರ್ಹರೇರ್ನಾಮ ....'

ದೇವತಾಸ್ತ್ರೀಯರು ಮತ್ತು ಮುನಿಸ್ತ್ರೀಯರು ಮನುಷ್ಯರಾಗಿ ಹುಟ್ಟಿದರೂ ಉತ್ತಮರೇ ಆಗಿರುತ್ತಾರೆ. ಉಳಿದ ಸಜ್ಜನರಾದ ಸ್ತ್ರೀಯರು, ಶೂದ್ರಾದಿಗಳು ಶ್ರೀಹರಿಯ ನಾಮಸ್ಮರಣೆಯಲ್ಲಿ ಅಧಿಕಾರಿಗಳಾಗಿರುತ್ತಾರೆ.

## ಸಂಕ್ಷೇಪಭಾಷ್ಯದ ಮಹಿಮೆ

**ಭಾವದೀಪಃ – ಸಙ್ಕ್ಷೇಪೇತಿ ।।** 'ಅಥಶಬ್ದೋऽಧಿಕಾರೇ' ಇತ್ಯಾದಿಸಙ್ಕ್ಷೇಪಃ । 'ಅಧಿಕಾರಶ್ಚೋಕ್ತೋ ಭಾಗವತತನ್ತ್ರೇ' ಇತಿ ವಿಸ್ತರಃ ।

'सङ्क्षेपविस्ताराभ्यां च प्रवदन्ति मनीषिणः ।
इत्यादेर्भाष्यत्वाच्च द्वाभ्यामुक्तिरर्थवति ।।' इति भावः ।

'ಅಥಶಬ್ದಃ ಅಧಿಕಾರೇ' ಎಂಬುದು ಸಂಕ್ಷೇಪಭಾಷ್ಯ. 'ಅಧಿಕಾರಶ್ಚೋಕ್ತೋ ಭಾಗವತತಂತ್ರೇ' ಎಂಬುದು ವಿಸ್ತಾರವಾದ ಭಾಷ್ಯ. (ಶಬ್ದದಿಂದಷ್ಟೇ ಹೊರತು ಅರ್ಥದಿಂದಲ್ಲ). 'ಸಂಕ್ಷೇಪ ಹಾಗೂ ವಿಸ್ತಾರವಾಗಿ ಜ್ಞಾನಿಗಳು ವ್ಯಾಖ್ಯಾನ ಮಾಡುತ್ತಾರೆ' ಆದ್ದರಿಂದ ಶ್ರೀಮದಾಚಾರ್ಯರು ಅಥಶಬ್ದವನ್ನು ಸಂಕ್ಷೇಪ ಹಾಗೂ ವಿಸ್ತಾರವಾಗಿ ವ್ಯಾಖ್ಯಾನಿಸಿದ್ದು ಸಾರ್ಥಕವಾಗಿದೆ.

## ಅಧಿಕಾರಿಯ ಸಾಮಾನ್ಯಲಕ್ಷಣ

**ಭಾವದೀಪಃ – व्याख्यायेति** ।। ब्रह्मज्ञानहेतुजिज्ञासामात्रे योग्यत्वमधिकारः। तद्विशेषे तु तद्विशेष इत्यर्थतया व्याख्याय इत्यर्थः । अनिर्वचनीयाविद्या-निवृत्तिरूपमोक्षस्य ज्ञानादेव सिद्धेः किं प्रसादेनेत्यतो वा, गौतमाद्यभिमतैकविंशति दुःखध्वंसादिरूपस्य मोक्षस्य पुरुषैरर्थ्यमानत्व रूपपुमर्थत्वाभावेन तदुद्देशेन जिज्ञासायाः कर्तव्यत्वायोगादित्यतो, कर्मसाध्यत्वसूचनाय वा मोक्षस्वरूपं वदन्नेव वाक्यं योजयति – **सुखमेवेति**।। 'सर्वाभिमता' इत्युक्त्या सर्वाविवादो वाऽस्य परमपुरुषार्थत्वं वा सूचितम्। तदुक्तं तत्वनिर्णयादौ 'मोक्षो हि सर्वपुरुषार्थोत्तमः' इत्यादि । अन्यत्रापि 'न मोक्षसदृशं किञ्चिदधिकं वा सुखं क्वचित्' इत्यादि । परोक्षमोक्षस्वरूपे तु न सर्वाभिमतिरस्तीति तन्न मोक्षस्वरूपं किन्तु दुःखनिवृत्तिविशिष्ट-सुखावाप्तिरूपमेवेति भावः ।

''ವ್ಯಾಖ್ಯಾಯ'' ಎಂಬ ಪದಕ್ಕೆ ''ಬ್ರಹ್ಮಜ್ಞಾನಕ್ಕೆ ಕಾರಣವಾದ ಜಿಜ್ಞಾಸಾಸಾಮಾನ್ಯದಲ್ಲಿ ಯೋಗ್ಯನಾಗಿರುವಿಕೆಯು ಅಧಿಕಾರಿಯ ಸಾಮಾನ್ಯಲಕ್ಷಣ ವಿಶೇಷಜಿಜ್ಞಾಸೆಯಲ್ಲಿ ಯೋಗ್ಯನಾಗಿರುವಿಕೆಯು ವಿಶೇಷಲಕ್ಷಣ'' ಎಂದರ್ಥ. ಅನಿರ್ವಚನೀಯವಾದ

ಅವಿದ್ಯಾನಿವೃತ್ತಿ ಎಂಬ ಮೋಕ್ಷವು ಜ್ಞಾನದಿಂದಲೇ ಲಭ್ಯವಾಗುವಾಗ ಪ್ರಸಾದವೇಕೆ? ಅಥವಾ, ಗೌತಮಾದಿತಾರ್ಕಿಕರಿಗೆ ಅಭಿಮತವಾದ ಏಕವಿಂಶತಿದುಃಖಧ್ವಂಸರೂಪವಾದ ಮೋಕ್ಷವು ಪುರುಷಾರ್ಥವಲ್ಲದ ಕಾರಣ ಅಂತಹ ಮೋಕ್ಷದ ಉದ್ದೇಶಕ್ಕಾಗಿ ಜಿಜ್ಞಾಸೆಯನ್ನು ಏಕೆ ಮಾಡಬೇಕು? ಎಂಬೆರಡು ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿ ಮತ್ತು ಮೋಕ್ಷವು ಕರ್ಮಸಾಧ್ಯವಲ್ಲ ಎಂಬುದನ್ನು ಸೂಚಿಸುವುದಕ್ಕಾಗಿ, ಮೋಕ್ಷಸ್ವರೂಪವನ್ನು ಹೇಳಲು ''ಸುಖಮೇವ'' ಇತ್ಯಾದಿ ವಾಕ್ಯವು ಹೊರಟಿದೆ. 'ಸರ್ವಾಭಿಮತಮೋಕ್ಷಸ್ಯ' ಎಂದು ಹೇಳಿದ್ದರಿಂದ ಪ್ರತಿಯೊಬ್ಬರಿಗೂ ಸುಖವೇ ಆಗಬೇಕು ದುಃಖವಾಗಬಾರದೆಂಬ ಬಯಕೆ ಇರುತ್ತದೆ. ಈ ವಿಚಾರದಲ್ಲಿ ವಿವಾದವಿಲ್ಲವೆಂದು ಸೂಚಿಸಿದ್ದಾರೆ. ಅಥವಾ ಇಂತಹ ಮೋಕ್ಷವು ಸರ್ವಾಭಿಮತವಾದದ್ದರಿಂದ ಪರಮಪುರುಷಾರ್ಥರೂಪವಾಗಿದೆ ಎಂದು ಸೂಚಿಸಿದ್ದಾರೆ. ಇದನ್ನೇ ತತ್ವನಿರ್ಣಯಾದಿಗಳಲ್ಲಿ 'ಮೋಕ್ಷೋ ಹಿ ಸರ್ವಪುರುಷಾರ್ಥೋತ್ತಮಃ' (ಮೋಕ್ಷವು ಸಕಲಪುರುಷಾರ್ಥಗಳಿಗಿಂತ ಉತ್ತಮವಾಗಿದೆ). ಬೇರೆಡೆ ಮೋಕ್ಷದಲ್ಲಿ ಇರುವಂತಹ ಸುಖವಾಗಲಿ, ಅಥವಾ ಮೋಕ್ಷಕ್ಕಿಂತ ಅಧಿಕವಾದ ಸುಖವಾಗಲೀ ದೊರೆಯಲು ಸಾಧ್ಯವಿಲ್ಲ. ಪರರು ಹೇಳಿದ ಮೋಕ್ಷಸ್ವರೂಪದಲ್ಲಿ ಸರ್ವಾಭಿಮತವು ಇಲ್ಲದ ಕಾರಣ ಪರರು ನಿರೂಪಿಸಿದ ಮೋಕ್ಷಸ್ವರೂಪವು ಅಸಾಧುವಾಗಿದೆ. ದುಃಖನಿವೃತ್ತಿವಿಶಿಷ್ಟವಾದ ಸುಖಾವಾಪ್ತಿರೂಪವಾದದ್ದನ್ನೇ ಮೋಕ್ಷವೆನ್ನಬೇಕು.

## ಅತಃ ಶಬ್ದಾರ್ಥ ವಿಚಾರ

ವಿಶೇಷ ವಿಚಾರ - ಟೀಕೆ - ಸುಖಮೇವ ಮೇ ಸ್ಯಾದ್ ದುಃಖಂ ಮನಾಗಪಿ ಮಾಭೂದಿತಿ ಸರ್ವಾಭಿಮತಮೋಕ್ಷಸ್ಯ ನಾರಾಯಣಾತ್ಪ್ರಸಾದ-ಮಂತರೇಣಾಸಂಭವಾದತ್ಯರ್ಥಪ್ರಸಾದದ್ವಾರಾ ಮೋಕ್ಷಸಾಧನ ಅಪರೋಕ್ಷ-ಜ್ಞಾನೋತ್ಪಾದಿಕಾ ಬ್ರಹ್ಮಜಿಜ್ಞಾಸಾ ಕರ್ತವ್ಯಾ ಇತ್ಯರ್ಥಃ।

''ಪ್ರತಿಯೊಬ್ಬರಿಗೂ ''ಸುಖವೇ ನನಗೆ ಬರಲಿ ದುಃಖವು ಸ್ವಲ್ಪವೂ ಬೇಡ''ವೆಂಬ ಮೋಕ್ಷದ ಆಸೆಯು ಇರುತ್ತದೆ. ಇಂತಹ ಮೋಕ್ಷವಾದರೂ ನಾರಾಯಣನ ಪರಮಪ್ರಸಾದವಾಗದೆ ದೊರೆಯುವುದಿಲ್ಲ. ಆದ್ದರಿಂದ ನಾರಾಯಣನ ಪರಮಪ್ರಸಾದ ದ್ವಾರಾ ಮೋಕ್ಷಸಾಧನವಾದ ಅಪರೋಕ್ಷಜ್ಞಾನವನ್ನು ಹುಟ್ಟಿಸುವ ಬ್ರಹ್ಮಜಿಜ್ಞಾಸೆಯು ಅವಶ್ಯ ಕರ್ತವ್ಯವಾಗಿದೆ'' ಹೀಗೆ ಟೀಕೆಯಲ್ಲಿ ಹೇಳಿದ್ದಾರೆ.

ಜಿಜ್ಞಾಸಾಧಿಕರಣ (೧-೧-೧)

'ಅತಃ' ಅದರಿಂದ, ಎಂದು ಹೇಳಿದರೆ 'ಯಾವುದರಿಂದ?' ಎಂಬ ಪ್ರಶ್ನೆ ಬರುತ್ತದೆ. ಹಿಂದೆ ಪಕೃತವಾದುದನ್ನೆ ಮನಸ್ಸಿನಲ್ಲಿಟ್ಟುಕೊಂಡು 'ಅದರಿಂದ' ಎಂದು ಸರ್ವನಾಮ ಶಬ್ದವನ್ನು ಪ್ರಯೋಗಿಸುತ್ತೇವೆ. ಸೂತ್ರದಲ್ಲಿ 'ಅತಃ' ಶಬ್ದಕ್ಕೆ ಭಾಷ್ಯದಲ್ಲಿ 'ನಾರಾಯಣನ ಅನುಗ್ರಹವಿಲ್ಲದೆ ಮೋಕ್ಷವಿಲ್ಲ. ಜ್ಞಾನವಿಲ್ಲದೆ ನಾರಾಯಣನ ಪರಮಾನುಗ್ರಹ ಲಭ್ಯವಿಲ್ಲ. ಅದರಿಂದ ಬ್ರಹ್ಮವಿಚಾರ ಮಾಡಬೇಕು' ಎಂದು ಅರ್ಥ ಉಕ್ತವಾಗಿದೆ. ಇಲ್ಲಿ ಮೋಕ್ಷಕ್ಕೆ ನಾರಾಯಣನ ಅನುಗ್ರಹವು ಕಾರಣ. ಅನುಗ್ರಹಕ್ಕೆ ಜ್ಞಾನ ಕಾರಣ. ಜ್ಞಾನಕ್ಕೆ ವಿಚಾರ ಕಾರಣ - ಇವೆಲ್ಲವೂ ಹಿಂದೆ ಪ್ರಕೃತವೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಏಳು ಬಗೆಯ ಪರಿಹಾರಗಳಿವೆ.

(೧) ಪ್ರಯೋಜವನವಿಲ್ಲದ ಈ ವಿಚಾರಶಾಸ್ತ್ರವೇಕೆ ? ಎಂಬ ಪೂರ್ವಪಕ್ಷಕ್ಕೆ ಸಮಾಧಾನ ಹೇಳಬಲ್ಲ ಶಬ್ದವು ಸೂತ್ರದಲ್ಲಿ ಬೇರೆ ಯಾವುದೂ ಇಲ್ಲ. ಶ್ರುತಿಗನುಗುಣವಾಗಿ ಭಾಷ್ಯದಲ್ಲಿ ಹೇಳಿದಂತೆ ಮೇಲಿನ ಎಲ್ಲ ಅಂಶಗಳನ್ನೂ ಅಧ್ಯಾಹಾರ ಮಾಡಿಕೊಳ್ಳಬೇಕು. ಅದರಿಂದ ಪ್ರಕೃತವಾದುದನ್ನು ಅತಃಶಬ್ದ ಹೇಳುತ್ತದೆ. 'ಸ್ರುವದಿಂದ ಬೇರ್ಪಡಿಸಿ ತೆಗೆಯಬೇಕು' ಎಂದು ಶ್ರುತಿವಾಕ್ಯವಿದೆ. ಏನನ್ನು? ಎಂದರೆ 'ದ್ರವ ಪದಾರ್ಥವನ್ನು' ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಸೂತ್ರದಲ್ಲಿ 'ಕರ್ತವ್ಯಾ' ಎಂಬ ಪದಾಧ್ಯಾಹಾರಕ್ಕೆ ಪ್ರಮಾಣವಾಗಿ ಭಾಷ್ಯದಲ್ಲಿ 'ಅವಶ್ಯಕವಾದ ಪದವನ್ನೋ ವಾಕ್ಯವನ್ನೋ ಅಧ್ಯಾಹಾರ ಮಾಡಿಕೊಳ್ಳಬೇಕು' ಎಂಬ ವಚನವನ್ನು ಉದಾಹರಿಸಲಾಗಿದೆ. ಇಲ್ಲಿ 'ವಾಕ್ಯವನ್ನೋ' ಎಂಬುದರಿಂದ ಅತಃ ಶಬ್ದಕ್ಕೆ ಅಪೇಕ್ಷವಾದ ಮೇಲೆ ಹೇಳಿದ ವಾಕ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂಚಿತವಾಗಿದೆ.

(೨) 'ಜನ್ಮಾದ್ಯಸ್ಯಯತಃ' ಎಂಬ ಸೂತ್ರದಲ್ಲಿ 'ಅಸ್ಯ' 'ಇದರ' ಎಂದರೆ. 'ಈ ಅನುಭವಸಿದ್ಧವಾದ ಪ್ರಪಂಚದ' ಜನ್ಮಾದಿಕರ್ತ ಎಂದು ಹೇಳಿದೆ. ಹಾಗೇ ಪ್ರಕೃತದಲ್ಲಿ 'ಅತಃ' ಎಂಬುದರಿಂದ 'ಮೋಕ್ಷ ಭಗವದನುಗ್ರಹ ಮುಂತಾದ ಪ್ರಮಾಣಸಿದ್ಧವಾದ ಪ್ರಯೋಜನವಿರುವುದರಿಂದ' ಎಂದು ಉಕ್ತವಾಗಬಹುದು. ಪ್ರಕೃತವಾಗುವುದೆಂದರೇನು? ಬುದ್ಧಿಸ್ಥವಾಗಿರುವುದು. ಪ್ರಮಾಣಸಿದ್ಧವಾದುದು ಆ ಪ್ರಮಾಣದ ಬಲದಿಂದಲೆ ಬುದ್ಧಿಸ್ಥವಾಗಿರುತ್ತದೆ.

ಜನ್ಮಾದಿಸೂತ್ರದಲ್ಲಿ 'ಅಸ್ಯ' ಎಂದಿರುವುದು ಅದರ ವಿಷಯ ವಾಕ್ಯದಲ್ಲಿ 'ಯತೋ ವಾ ಇಮಾನಿ ಭೂತಾನಿ' ಎಂದು ಹೇಳಿದ 'ಇಮಾನಿ' ಪದದ ರೂಪಾಂತರ ಹೊರತು 'ಅನುಭವಸಿದ್ಧವಾದ' ಎಂಬ ಅರ್ಥದಲ್ಲಿ ಅಲ್ಲ ಎಂಬ ಆಕ್ಷೇಪ ಬರಬಹುದು.

ಆದರೆ ವಿಷಯ ವಾಕ್ಯದಲ್ಲಿಯೂ 'ಇಮಾನಿ' 'ಈ ಚೇತನಗಳು' ಎಂದುದು ಅನುಭವಸಿದ್ಧವಾದುಗಳೆಂಬ ಅಭಿಪ್ರಾಯದಿಂದ.

(೩) ಈ ಸೂತ್ರಕ್ಕೆ ಅನೇಕ ವಿಚಾರವಿಧಾಯಕ ವಾಕ್ಯಗಳು ವಿಷಯವಾಕ್ಯಗಳಾಗಿವೆ. ಅವುಗಳಲ್ಲಿ ಅನೇಕ ಕಡೆ ಮೋಕ್ಷ ಭಗವದನುಗ್ರಹ ಮುಂತಾದುವನ್ನು ಹೇಳಿರುವುದರಿಂದ ಸೂತ್ರ ಅವುಗಳನ್ನು ಮನಸಿನಲ್ಲಿಟ್ಟುಕೊಂಡು 'ಅತಃ' ಎಂದಿದೆ.

(೪) ವಿಚಾರವು ಜ್ಞಾನ ಭಗವದನುಗ್ರಹಗಳಿಗೆ ಕಾರಣವಾಗುವುದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ. ಬ್ರಹ್ಮತರ್ಕ ಈ ವಿಚಾರಶಾಸ್ತ್ರಕ್ಕೆ ಅಂಗವಾಗಿದೆ. ಅಲ್ಲದೆ ಬ್ರಹ್ಮತರ್ಕವನ್ನು ರಚಿಸಿದವರೂ ಸೂತ್ರಕಾರರಾದ ಬಾದರಾಯಣರೆ. ಆದರಿಂದ ಬ್ರಹ್ಮತರ್ಕದಲ್ಲಿ ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಸೂತ್ರಕಾರರು 'ಅತಃ' ಎಂದಿದ್ದಾರೆ.

(೫) ಮುಂದೆ ಜನ್ಮಾದಿಸೂತ್ರದಲ್ಲಿ ವಿಚಾರದಿಂದ ಜ್ಞಾನ, ಭಗವದನುಗ್ರಹ, ಮೋಕ್ಷಗಳುಂಟಾಗುವುದನ್ನು ಹೇಳುತ್ತಿದೆ. ಅಲ್ಲಿ ಹೇಳಲಿರುವುದನ್ನು ಪ್ರಥಮ ಸೂತ್ರವು ಅತಃ ಎಂದು ನಿರ್ದೇಶಿಸಬಹುದು. 'ಅಥೈಷ ಜ್ಯೋತಿಃ ಅಥೈಷ ವಿಶ್ವಜ್ಯೋತಿಃ' ಎಂಬಲ್ಲಿ ಬರುವ 'ಏಷಃ' 'ಈ ಯಾಗವು' ಮುಂದೆ ಹೇಳುವ ಯಾಗವನ್ನು ನಿರ್ದೇಶಿಸುತ್ತಿದೆ ಎಂದು ಮೀಮಾಂಸಕರು ಒಪ್ಪಿದ್ದಾರೆ.

(೬) ಈ ಸೂತ್ರದಲ್ಲಿಯೆ ಅಥಶಬ್ದವು 'ಮೋಕ್ಷಾಭಿಲಾಷೆಯನ್ನು ಹೊಂದಿದ ಬಳಿಕ' ಬ್ರಹ್ಮವಿಚಾರ ಮಾಡಬೇಕೆಂದು ಹೇಳಿದೆ. ಮೋಕ್ಷವು ಜ್ಞಾನ ಭಗವದನುಗ್ರಹಗಳ ಮೂಲಕವೆ ವಿಚಾರದಿಂದ ಲಭ್ಯವೆಂಬುದು ಪ್ರಮಾಣಸಿದ್ಧ. ಯಾಗಕ್ಕೆ ಸ್ವರ್ಗವೆ ಫಲವೆಂದು ಶ್ರುತಿ ಹೇಳುವಾಗ ಸ್ವರ್ಗವು ಅದೃಷ್ಟದ ಮೂಲಕವೆ ಲಭ್ಯವಾದ್ದರಿಂದ ಅದನ್ನೂ ಶ್ರುತಿಯು ಹೇಳಿದಂತಾಗುವುದು. ಭತ್ತವು ಯಾಗ ಸಾಧನವೆಂದು ಶ್ರುತಿ ಹೇಳುವಾಗ ಪ್ರೋಕ್ಷಣ ಅವಹನನಾದಿಗಳ ಮೂಲಕವೆ ಭತ್ತವು ಯಾಗಸಾಧನವಾಗುವುದರಿಂದ ಅದನ್ನೂ ಶ್ರುತಿ ಹೇಳಿದಂತಾಗುವುದು. ಆದರಿಂದ ವಿಚಾರವು ಜ್ಞಾನ ಭಗವದನುಗ್ರಹಗಳ ಮೂಲಕ ಮೋಕ್ಷಸಾಧನವಾಗುವುದರಿಂದ ಅದನ್ನೂ ಅಥಶಬ್ದ ಹೇಳಿದಂತಾಗುವುದು. ಆಗ ಪ್ರಕೃತವಾದುದನ್ನು ಅತಃ ಶಬ್ದವು ನಿರ್ದೇಶಿಸುತ್ತದೆ.

(೭) ಮನನರೂಪವಾದ ವಿಚಾರಕ್ಕೆ ಶ್ರವಣ ಮೊದಲು ಆವಶ್ಯಕವೆಂದು ಅಥಶಬ್ದ ಹೇಳುತ್ತದೆ. ಶ್ರವಣಕಾಲದಲ್ಲಿ ಮೋಕ್ಷ ಭಗವದನುಗ್ರಹಕ್ಕೆ ಕಾರ್ಯಕಾರಣಭಾವವು ತಿಳಿಯುತ್ತದೆ. ಮನನ ಕಾಲದಲ್ಲಿ ಅದು ಬುದ್ಧಿಸ್ಥವಾಗಿದ್ದು ವಿಚಾರಕರ್ತವ್ಯತ್ವಕ್ಕೆ ಹೇತುವಾಗುತ್ತದೆ. ಆದ್ದರಿಂದ ಅದನ್ನು ಹೇತುವೆಂದು 'ಅತಃ' ಶಬ್ದವು ನಿರ್ದೇಶಿಸುತ್ತದೆ.

## ಅನುವ್ಯಾಖ್ಯಾನದ ಪ್ರಕಾರ 'ಅತಃ' ಶಬ್ದಾರ್ಥ

**ಭಾವದೀಪಃ** – ಉಪರಿ 'अत्यर्थ' इति भाष्यानुवादात् पूर्वत्रापि तथा ज्ञेयमिति भावेनोक्तम् – **नारायणात्यर्थेति ।। अत्यर्थप्रसादस्य चेति ।।** ಎತೇನ ಭಾಷ್ಯೇ 'अत्यर्थप्रसादश्च' ಇತಿ ಚಕಾರಾನ್ವಯಃ । **ज्ञानपदं** ಚಾಪರೋಕ್ಷಪರಮ್ । 'अपरोक्षज्ञानस्य चेत्याविशेषश्च ज्ञेयः' ಇತಿ ದರ್ಶಿತಮ್ । **जिज्ञासां** = ಶ್ರವಣಮನನನಿದಿಧ್ಯಾಸನರೂಪಾಮ್ । 'जिज्ञासोत्थज्ञानजात् तत्प्रसादादेव मुच्यते' ಇತ್ಯನುಭಾಷ್ಯೋಕ್ತೇಃ । ಅತ್ರಾಪ್ಯಗ್ರೇ ಸರ್ವಸ್ಯೋಕ್ತಸ್ಯ ಭಾಷ್ಯೇ ಯಥಾಕ್ರಮಂ ಸ್ಪಷ್ಟಯಿಷ್ಯಮಾಣತ್ವಾಚ್ಚೇತಿ ಭಾವಃ । ಭಾಷ್ಯಸ್ಥಾತಃಶಬ್ದಾರ್ಥಮಾಹ – **अत्यर्थेत्यादिना।।** उत्पादिकेत्यन्तेन हेतुगर्भविशेषणेन । पक्षधर्मताभिव्यक्त्यर्थं हेतुविभक्त्यनुक्तिः।

'ಅತ್ಯರ್ಥಪ್ರಸಾದಸ್ಯ ಚ' ಎಂದು ಟೀಕೆಯಲ್ಲಿ ಹೇಳಿದ್ದರಿಂದ ಭಾಷ್ಯದಲ್ಲಿ 'ಅತ್ಯರ್ಥಪ್ರಸಾದಶ್ಚ' ಎಂದು ಚಕಾರಕ್ಕೆ ಅನ್ವಯವು ತಿಳಿಯುತ್ತದೆ. ಮತ್ತು 'ಜ್ಞಾನಂ' ಎಂಬ ಭಾಷ್ಯದಲ್ಲಿರುವ ಪದಕ್ಕೆ 'ಅಪರೋಕ್ಷಜ್ಞಾನಮ್' ಎಂದು ವ್ಯಾಖ್ಯಾನಿಸಿದ್ದಾರೆ. 'ಅಪರೋಕ್ಷಜ್ಞಾನಸ್ಯ ಚ' ಇತ್ಯಾದಿ ವಾಕ್ಯಶೇಷಕ್ಕೆ ಜಿಜ್ಞಾಸಾ ಎಂಬ ಪದಕ್ಕೆ 'ಶ್ರವಣಮನನ-ನಿದಿಧ್ಯಾಸನರೂಪವಾದ ಜಿಜ್ಞಾಸೆಯನ್ನು' ಎಂದರ್ಥ. ಏಕೆಂದರೆ 'ಜಿಜ್ಞಾಸೋತ್ಥಜ್ಞಾನಜಾತ್ ತತ್ ಪ್ರಸಾದಾದೇವ ಮುಚ್ಯತೇ' ಎಂದು ಅನುಭಾಷ್ಯದಲ್ಲಿ ಹೇಳಿದ್ದರಿಂದ. ಮತ್ತು ಇಲ್ಲಿಯೇ ಮುಂದೆ ಭಾಷ್ಯದಲ್ಲಿ ಇದನ್ನು ಸ್ಪಷ್ಟಪಡಿಸುತ್ತಾರೆ. ಭಾಷ್ಯದಲ್ಲಿರುವ 'ಅತಃ' ಎಂಬ ಶಬ್ದದ ಅರ್ಥವನ್ನು 'ಅತ್ಯರ್ಥಪ್ರಸಾದ' ಎಂದು ಹೇಳಿದ್ದಾರೆ. 'ಉತ್ಪಾದಿಕಾ' ಎಂಬಲ್ಲಿಯ ತನಕ ಇರುವ ವಿಶೇಷಣಗಳು ಹೇತುಗರ್ಭವಿಶೇಷಣಗಳಾಗಿವೆ. ಪಕ್ಷಧರ್ಮತ್ವವನ್ನು ತೋರಿಸಲು ಹೇತುವಿಭಕ್ತಿಯನ್ನು ಸೂಚಿಸಿಲ್ಲ.

## ಜಿಜ್ಞಾಸಾ, ಜ್ಞಾನ ಪ್ರಸಾದ ಮೋಕ್ಷ

**ಭಾವದೀಪಃ** – ಎತೇನ ''सौत्रातःशब्दस्य सर्वनामत्वात् प्रकृतस्य हेतुत्व-वाचकेनातःशब्देन कथमेतावल्लभ्यम् । अथशब्दोक्ताधिकारिविशेषणत्वेन मोक्षस्येच्छाविषयतया प्रकृतत्वेऽपि तं प्रति नारायणप्रसादसाधनत्वादेर-

प्रकृतत्वेन, तस्य 'अतः' इत्यत्र प्रातिपदिकेन परामर्शासम्भवेन, तस्य जिज्ञासाकर्तव्यतायां हेतुत्वस्य तसिल्प्रत्ययरूपविभक्त्यौक्त्ययोगात्'' इति चोद्यं निरस्तम् । सूत्रे अथशब्दानन्तरमतःशब्दात् पूर्वं नारायणेत्यादिवाक्यस्य भाष्यकृताऽध्याहृतत्वेन मोक्षहेतुप्रसादजनकज्ञानोत्पादकत्वस्य प्रकृतत्व-सम्भवेनात इत्यत्राकाररूपप्रातिपदिकेनोक्तरूपोत्पादकत्वं परामृश्य 'पञ्चम्यास्तसिल्' इत्युक्ततसिल्प्रत्ययेन तस्य हेतुत्वं जिज्ञासां प्रति वक्तुं शक्यते । तादृशज्ञानोत्पादकत्वात् जिज्ञासा कर्तव्येति । न चैवमध्याहारो निष्प्रमाणकः । 'यत्रानवसरोऽन्यत्र' इति वक्ष्यमाणमूलकत्वादस्याध्याहारस्य। अत एव 'तत्र वाक्यं च' इत्युक्तम् । अत एव च मोक्षप्रसादज्ञानजिज्ञासानामुत्तरोत्तरेण विना पूर्वपूर्वस्याघटनोक्ता भाष्ये । 'तमेवम्' इत्यादि वक्ष्यमाणप्रमाणसिद्धत्वाच्चेति ।

'ಅತಃ' ಎಂಬ ಸೂತ್ರದಲ್ಲಿರುವ ಪದಕ್ಕೆ ಟೀಕೆಯಲ್ಲಿ ಹಾಗೂ ಭಾಷ್ಯದಲ್ಲಿ ಬಹಳ ದೀರ್ಘವಾದ ಅರ್ಥವನ್ನು ಹೇಳಿದ್ದಾರೆ. ಆದರೆ ಸೂತ್ರದಲ್ಲಿ ಉಲ್ಲೇಖಿಸಿದ 'ಅತಃ' ಎಂಬ ಪದವು ಸರ್ವನಾಮಶಬ್ದವಾದ್ದರಿಂದ ಕೇವಲ ಹೇತುವಾಚಿಯಾಗಿದೆ ಎನ್ನಬಹುದೇ ಹೊರತು ಇಷ್ಟೆಲ್ಲಾ ಅರ್ಥಗಳನ್ನು ಹೇಳುವುದು ಕಠಿಣವೇ ಆಗಿದೆ. ಇನ್ನು 'ಅಥ'ಶಬ್ದದಿಂದ ಹೇಳಿದ ಅಧಿಕಾರಿಗೆ ವಿಶೇಷಣವಾದ ಮೋಕ್ಷವು ಇಚ್ಛಾವಿಷಯವಾಗಿ ಪ್ರಸಕ್ತವಾಗಿದ್ದರೂ ಆ ಮೋಕ್ಷಕ್ಕೆ ಕಾರಣವಾದ ನಾರಾಯಣನ ಪ್ರಸಾದಾದಿಗಳು ಅಪ್ರಸ್ತುತವಾಗಿವೆ. ಅದನ್ನು 'ಅತಃ' ಎಂಬ ಪ್ರಾತಿಪದಿಕದಿಂದ ಪರಾಮರ್ಶಿಸಲು ಸಾಧ್ಯವಿಲ್ಲ. ನಾರಾಯಣನ ಪ್ರಸಾದಾದಿಗಳಿಗೆ ಜಿಜ್ಞಾಸಾಕರ್ತವ್ಯತ್ವವನ್ನು ಹೇಳಿದರೆ ತಸಿಲ್ಪ್ರತ್ಯಯದ ಅರ್ಥವು ಕೂಡುವುದಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಈಗ ಅವಕಾಶವಿಲ್ಲ. ಸೂತ್ರದಲ್ಲಿ ಅಥಶಬ್ದದ ಅನಂತರ 'ಅತಃ' ಎಂಬ ಶಬ್ದದ ಮೊದಲು ''ನಾರಾಯಣಪ್ರಸಾದಂ'' ಇತ್ಯಾದಿ ವಾಕ್ಯವನ್ನು ಭಾಷ್ಯಕಾರರು ಅಧ್ಯಾಹಾರ ಮಾಡಿದ್ದಾರೆ. ಆದ್ದರಿಂದ ಮೋಕ್ಷಹೇತುಪ್ರಸಾದ-ಜನಕಜ್ಞಾನೋತ್ಪಾದಕತ್ವವು ಪ್ರಕೃತವೇ ಆಗಿದೆ. ಮತ್ತು 'ಅತಃ' ಎಂಬಲ್ಲಿರುವ ಅಕಾರವೆಂಬ ಪ್ರಾತಿಪದಿಕದಿಂದ ಹಿಂದೆ ಪ್ರಸಕ್ತವಾದ ಜ್ಞಾನೋತ್ಪಾದಕತ್ವವನ್ನು ಪರಾಮರ್ಶೆಮಾಡಿ, 'ಪಂಚಮ್ಯಾಸ್ತಸಿಲ್' ಎಂಬಂತೆ

ತಸಿಲ್‌ಪ್ರತ್ಯಯವನ್ನು ಹೇಳಿದಾಗ ಜಿಜ್ಞಾಸೆಯನ್ನು ಕುರಿತು ಕಾರಣವೆಂದು ಸಹ ಹೇಳಿದಂತಾಗುತ್ತದೆ. ಅಂದರೆ ''ಅಂತಹ ಜ್ಞಾನಕ್ಕೆ ಉತ್ಪಾದಕವಾದ್ದರಿಂದ ಜಿಜ್ಞಾಸೆಯು ಕರ್ತವ್ಯವಾಗಿದೆ'' ಎಂದು ತಿಳಿಯಬೇಕು.

ಶ್ರೀಮದಾಚಾರ್ಯರು ಮಾಡಿಕೊಂಡ ಅಧ್ಯಾಹಾರಕ್ಕೆ ಪ್ರಮಾಣವಿಲ್ಲವೆಂದು ಶಂಕಿಸಬಾರದು. 'ಯತ್ರಾನವಸರೋऽನ್ಯತ್ರ' ಎಂದು ಮುಂದೆ ಉಲ್ಲೇಖಿಸುವ ಶ್ಲೋಕವೇ ಪ್ರಮಾಣವಾಗಿದೆ. ಕೇವಲ ಕರ್ತವ್ಯಪದದ ಅಧ್ಯಾಹಾರಕ್ಕಷ್ಟೇ ಆ ಶ್ಲೋಕವು ಆಧಾರವಲ್ಲ. 'ನಾರಾಯಣಪ್ರಸಾದಂ' ಎಂಬ ವಾಕ್ಯದ ಅಧ್ಯಾಹಾರಕ್ಕೂ ಆಧಾರವಾಗಿದೆ. ಆದ್ದರಿಂದಲೇ ಅಲ್ಲಿ 'ವಾಕ್ಯಂ ಚ' ಎಂದು ಹೇಳಿದ್ದಾರೆ. ಆದ್ದರಿಂದಲೇ ಮೋಕ್ಷ, ಪ್ರಸಾದ, ಜ್ಞಾನ, ಜಿಜ್ಞಾಸಾ ಇವುಗಳಲ್ಲಿ ಹಿಂದಿನವುಗಳನ್ನು ಕುರಿತು ಮುಂದಿನವುಗಳು ಕಾರಣಗಳಾಗುತ್ತವೆಂದು ಭಾಷ್ಯದಲ್ಲಿ ಹೇಳಿದ್ದಾರೆ. ಈ ವಿಚಾರದಲ್ಲಿ 'ತಮೇವಮ್' ಎಂಬ ಮುಂದಿನ ಭಾಷ್ಯದಲ್ಲಿ ಉದಾಹರಿಸುವ ಪ್ರಮಾಣಗಳು ಆಧಾರವಾಗಿದೆ.

## ನ್ಯಾಯವಿವರಣಾನುಸಾರಿ ಪೂರ್ವಪಕ್ಷದ ನಿರಾಕರಣೆ

**ಭಾವದೀಪಃ** – नन्वेतदयुक्तम् । मुक्त्यर्थिरूपाधिकारिसामान्ये सिद्धे सति तस्य मुक्तियोग्यत्वाध्ययनशमदमादिरूपविशेषणमर्पयितुम् 'अथ'पदम् । सिद्धे च मोक्षफले प्रसादादिद्वारा तद्धेतुत्वार्पकम् 'अतः'पदम् । न चैतदस्ति । अहमर्थान्यविषयाभावात् तस्मिंश्चाहमिति ज्ञायमानेऽपि मोक्षानुपलम्भात् प्रयोजनं नास्ति । तदभावान्नाधिकारीत्युक्तत्वात् इत्यतः सर्वमेतद्विषयाभावमूलम् । विषयसत्वे तु तज्ज्ञानात् मोक्षः, तदिच्छुरधिकारी च सिद्ध्यतीति भावेन 'जीवान्यविषयप्रदर्शनपरसौत्रब्रह्मपदव्याख्यानार्थं प्रवृत्तं ब्रह्मशब्देन गुणपूर्णत्वोक्तेर्नानुभवसिद्धाल्पगुणजीवाभेदः' इत्यादि न्यायविवरणं विवृण्वानः पूर्वपक्षं निराह – **यदुक्तमित्यादिना** ।।

ಶಂಕೆ - 'ಮೋಕ್ಷವನ್ನು ಬಯಸುವಿಕೆ' ಎಂಬ ಅಧಿಕಾರವು ಸಿದ್ಧವಾದ ಮೇಲೆ, ಮುಕ್ತಿಯೋಗ್ಯತ್ವ ಅಧ್ಯಯನ ಶಮದಮಾದಿ ವಿಶೇಷಣಗಳನ್ನು ತಿಳಿಸಲು ಅಥಪದವು

ಹೊರಟಿದೆ. ಮೋಕ್ಷಫಲವು ಸಿದ್ಧವಾದಮೇಲಷ್ಟೇ ಪ್ರಸಾದಾದಿಗಳ ಮೂಲಕ ಮೋಕ್ಷಕಾರಣತ್ವವನ್ನು ಸಮರ್ಥಿಸುವುದಕ್ಕಾಗಿ 'ಅತಃ' ಎಂಬ ಪದವು ಸಾರ್ಥಕವಾಗುತ್ತದೆ. ಆದರೆ ಅಹಮರ್ಥಕ್ಕಿಂತ ಭಿನ್ನನಾದ ಬ್ರಹ್ಮನೆಂಬ ವಿಷಯವೇ ಸಿದ್ಧವಾಗದಿರುವಾಗ ಮೋಕ್ಷಾದಿಫಲಗಳು ಸುತರಾಂ ಸಿದ್ಧವಾಗುವುದಿಲ್ಲ. ಏಕೆಂದರೆ, ಅಹಮರ್ಥನಾದ ಜೀವಾತ್ಮನು ಜ್ಞಾತನಾಗಿದ್ದರೂ ಮೋಕ್ಷವು ಇದುವರೆಗೂ ದೊರೆತಿಲ್ಲ. ಹೀಗೆ ಆತ್ಮಜ್ಞಾನದಿಂದ ಪ್ರಯೋಜನವಿಲ್ಲದ ಕಾರಣ ಅಧಿಕಾರಿಯು ಸಿದ್ಧವಾಗುವುದಿಲ್ಲ?

ಸಮಾಧಾನ – ಈ ಶಂಕೆಯು ವಿಷಯ ಇಲ್ಲದಿರುವುದರಿಂದಷ್ಟೇ ಬಂದಿದೆ. ವಿಷಯವು ಸಿದ್ಧವಾದರೆ ಅಂತಹ ವಿಷಯಜ್ಞಾನದಿಂದ ಮೋಕ್ಷವೆಂಬ ಪ್ರಯೋಜನವು ಅದನ್ನು ಬಯಸುವವನು ಅಧಿಕಾರಿ ಎಂದು ಸಿದ್ಧವಾಗುತ್ತದೆ. ಆದ್ದರಿಂದ ಮೊದಲು ಜೀವನಿಗಿಂತ ಭಿನ್ನವಾದ ವಿಷಯವನ್ನು ಸಮರ್ಥಿಸುವುದಕ್ಕಾಗಿ ಸೂತ್ರದಲ್ಲಿ ಬ್ರಹ್ಮಪದವು ನಿವಿಷ್ಟವಾಗಿದೆ. ಗುಣಪರಿಪೂರ್ಣತ್ವವನ್ನು ಬ್ರಹ್ಮಪದವು ಹೇಳುವುದರಿಂದ ಅಲ್ಪಗುಣನೆಂದು ಅನುಭೂತನಾದ ಜೀವಾಭೇದವನ್ನು ಬ್ರಹ್ಮನಿಗೆ ಹೇಳಲು ಸಾಧ್ಯವಿಲ್ಲ. ಆದ್ದರಿಂದ ವಿಷಯಪ್ರಯೋಜನಾದಿಗಳಿಲ್ಲವೆಂದು ಪೂರ್ವಪಕ್ಷ ಮಾಡಲಾಗದು. ಈ ವಿಚಾರವು ನ್ಯಾಯವಿವರಣದಲ್ಲಿ ವಿವರಿಸಲ್ಪಟ್ಟಿದೆ. ಅದನ್ನೇ ಪ್ರಕೃತ 'ಯದುಕ್ತಮ್' ಎಂಬಿತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ.

ವಿಶೇಷ ವಿಚಾರ – 'ಅಥ' ಶಬ್ದಕ್ಕೆ ಆರಂಭ ಎಂಬರ್ಥವು ಕೂಡದೇ ಇದ್ದರೂ 'ಮಂಗಲ' ಎಂಬರ್ಥವನ್ನು ಹೇಳಬಹುದೆ ಎಂದು ಆಶಂಕಿಸಿ ಉತ್ತರವನ್ನು ನೀಡುತ್ತಿದ್ದಾರೆ.

'ಅಥ' ಶಬ್ದಕ್ಕೆ ಮಂಗಳ ಎಂಬರ್ಥವು ಸಿಗಲಾರದು. ಏಕೆಂದರೆ ಶಬ್ದದ ಪ್ರಯೋಗ ಮತ್ತು ಶಬ್ದದಿಂದ ಉಂಟಾಗುವ ಅರ್ಥಪ್ರತೀತಿಯಿಂದಷ್ಟೇ ಶಬ್ದಕ್ಕೆ ಅರ್ಥನಿರ್ಣಯವು ಆಗುತ್ತದೆ. ಪ್ರಕೃತ 'ಅಥ' ಶಬ್ದಕ್ಕೆ ಶಕ್ತಿವೃತ್ತಿಯಿಂದಾಗಲೀ ಲಕ್ಷಣಾವೃತ್ತಿಯಿಂದಾಗಲೀ 'ಮಂಗಳ' ಎಂಬರ್ಥವು ತಿಳಿಯುತ್ತಿಲ್ಲ. ಹಾಗೆ ತಿಳಿದಿದ್ದರೆ 'ಅಥ' ಶಬ್ದಕ್ಕೆ ಮಂಗಳ ಎಂಬರ್ಥವನ್ನು ಹೇಳಬಹುದಿತ್ತು. ಮತ್ತು 'ಅಥ' ಶಬ್ದಿಂದ ಮಂಗಳವು ಸೂಚಿತವಾಗುತ್ತಿದೆಂದು ಹೇಳಿದರೆ ಅಧಿಕಾರಾದಿಗಳು ಸೂಚಿತವಾಗದೆ ಇರಬೇಕಾದೀತು.

ಆದ್ದರಿಂದ 'ಅಥ' ಶಬ್ದವನ್ನು ಕೇಳಿದ ಮಾತ್ರದಿಂದ ಮಂಗಳವು ಉಂಟಾಗುತ್ತದೆಂದು ಮಂಗಳವೇ ಪ್ರಯೋಜನವಾಗಿದೆಯೆಂದು ಹೇಳಬೇಕು. ಹೊರತು ಮಂಗಳ ಎಂಬ ಅರ್ಥವುಳ್ಳದ್ದೆಂದು ಅಥವಾ ವಿವಕ್ಷಿತವಾದ ಮಂಗಳವುಳ್ಳದ್ದೆಂದು ಹೇಳುವುದು ತಪ್ಪು. ಮಂಗಳವೇ ಪ್ರಯೋಜನವಾಗಿ ಉಳ್ಳದೆಂದು ಸ್ಮೃತಿಯು ಹೇಳುತ್ತಿದೆ.

ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ।
ಕಂಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾವುಭೌ ॥

ಓಂಕಾರ ಮತ್ತು ಅಥ ಶಬ್ದಗಳೆರಡು ಮೊದಲು ಬ್ರಹ್ಮನ ಕಂಠದಿಂದ ಹೊರಹೊಮ್ಮಿದವುಗಳು. ಆದ್ದರಿಂದ ಎರಡೂ ಶಬ್ದಗಳು ಮಾಂಗಲಿಕಗಳಾಗಿವೆ.

ಈ ಸ್ಮೃತಿಯಲ್ಲಿ ಓಂಕಾರ ಮತ್ತು ಅಥ ಶಬ್ದಗಳು ಮಂಗಳವೆಂಬ ಪ್ರಯೋಜನವುಳ್ಳವುಗಳೆಂದು 'ಮಾಂಗಲಿಕ' ಎಂಬಲ್ಲಿರುವ 'ಠಕ್' ಪ್ರತ್ಯಯದಿಂದ ತಿಳಿಯುತ್ತಿದೆ. ಏಕೆಂದರೆ 'ಠಕ್' ಪ್ರತ್ಯಯವು ಪ್ರಯೋಜನ ಎಂಬರ್ಥದಲ್ಲಿಯೇ ಬರುತ್ತದೆ. ಹೀಗೆ ನಮ್ಮ ಸಿದ್ಧಾಂತದ ಪ್ರಕಾರ 'ಅಥ' ಶಬ್ದಕ್ಕೆ ಮಂಗಳ ಎಂಬ ಪ್ರಯೋಜನವನ್ನು ಸಮರ್ಥಿಸಿದ್ದಾಯಿತು.

## ನ್ಯಾಯವಿವರಣೆ - ಭಾಷ್ಯಗಳ ಜೋಡಣೆ

**ಭಾವದೀಪಃ** – ಏತೇನ 'ಗ್ರನ್ಥಾನ್ತರೋಕ್ತಪೂರ್ವೋತ್ತರಪಕ್ಷಯೋರತ್ರ ಪ್ರಪಞ್ಚನಂ ನಿರ್ಬೀಜಮ್' ಇತಿ ಪ್ರತ್ಯುಕ್ತಮ್ । 'ಬ್ರಹ್ಮ'ಪದೇನ ವಿಷಯಾರ್ಪಣಪ್ರಕಾರಸ್ಯಾನ್ಯತ್ರೋಕ್ತಸ್ಯಾತ್ರಾನುಸನ್ಧಾನೇऽಥಾತಃ ಪದವ್ಯಾಖ್ಯಾನಸ್ಯಾತ್ರ ಪ್ರಕೃತೇನನ್ವಯಾದ್ ಬುದ್ಧಿಸೌಕರ್ಯಾಚ್ಚ । ಅತ ಏವ 'ಸಙ್ಗಮ್ಯನ್ತೇ ಗುರೋರ್ಗಿರಃ' ಇತಿ ಪೂರ್ವಪ್ರತಿಜ್ಞಾಪಿ ಯುಕ್ತೇತಿ । 'ಪ್ರಯೋಗೇಣ' ಇತ್ಯುಕ್ತಂ ವ್ಯನಕ್ತಿ – **ಶ್ರವಣಾದಿತಿ** ।। ನ್ಯಾಯವಿವರಣೋಕ್ತಶ್ರುತಿಮೇವಾಹ – **ಅಥೇತಿ** ।। ತಥಾಚ ನ ಜೀವಭೇದಸಿದ್ಧಿರಿತಿ ಭಾವಃ । **ದೇಶೇತಿ** ।। ಸಾ ಚಾಸ್ತ್ಯಧ್ಯಸ್ತಗುಣೇऽಪಿ ಬ್ರಹ್ಮಣೀತ್ಯಬ್ರಹ್ಮತಾಪತ್ತಿರ್ನ ಇತಿ ಭಾವಃ । **ಉಕ್ತೇತಿ** ।। ಶ್ರುತಿರಧ್ಯಸ್ತಗುಣಪರಾ ಇತಿ ಚೇನ್ನ । ನಿರ್ದೋಷತ್ವೇನ ಸಿದ್ಧಪ್ರಾಮಾಣ್ಯಭಙ್ಗಪ್ರಸಙ್ಗಾದಿತಿ ದೋಷೇ ಸತ್ಯೇವ ದೋಷಾನ್ತರಮಾಹ – **ದೇಶೇತಿ** ।। **ವಕ್ಷ್ಯಮಾಣತ್ವಾದಿತಿ** ।। 'ಉತ್ಕ್ರಾನ್ತಿಗತ್ಯಾಗತೀನಾಮ್' ಇತ್ಯತ್ರ ದ್ವಿತೀಯಸ್ಯ ತೃತೀಯಪಾದೇ ತತ್ರ 'ಸೋಸ್ಮಾಚ್ಛರೀರಾದುತ್ಕ್ರಮ್ಯಾಮುಂ ಲೋಕಮಭಿಗಚ್ಛತಿ ।

अमुष्मादिमं लोकमागच्छति' इत्युत्क्रमणगमनागमनक्रियावत्त्वहेतुनाऽणुत्वस्य वक्ष्यमाणत्वादित्यर्थः । नच एतदभेदवादिमते पूर्वपक्षसूत्रं चन्द्रिकायां निरस्तत्वात् । न्यायामृते जीवाणुत्वस्य जीवाणुत्ववादे समर्थनाच्च ।

''ಯದುಕ್ತಂ'' ಎಂಬ ವಾಕ್ಯದಿಂದ ನ್ಯಾಯವಿವರಣದ ಪೂರ್ವಪಕ್ಷವನ್ನು ವ್ಯಾಖ್ಯಾನಿಸಿದ್ದಾರೆ. ಇದರಿಂದ ಬೇರೆ ಗ್ರಂಥದಲ್ಲಿರುವ ಪೂರ್ವಪಕ್ಷಸಿದ್ಧಾಂತಗಳನ್ನು ಇಲ್ಲಿ ವಿವರಿಸಲು ಕಾರಣವಿಲ್ಲ ಎಂಬ ಶಂಕೆಯನ್ನು ಪರಿಹರಿಸಿದಂತಾಯಿತು. ಏಕೆಂದರೆ ನ್ಯಾಯವಿವರಣದಲ್ಲಿ ಬ್ರಹ್ಮಪದದಿಂದ ವಿಷಯಸಮರ್ಪಣೆಯ ಪ್ರಕಾರವು ಬಹಳ ಸುಂದರವಾಗಿ ವರ್ಣಿಸಲ್ಪಟ್ಟಿದೆ. 'ಅಥ' ಮತ್ತು 'ಅತಃ' ಎಂಬ ಪದಗಳ ವ್ಯಾಖ್ಯಾನವು ಭಾಷ್ಯದಲ್ಲಿ ಸುಂದರವಾಗಿ ವರ್ಣಿಸಲ್ಪಟ್ಟಿದೆ. ಇವೆರಡನ್ನೂ ಒಂದೇ ಕಡೆ ಜೋಡಿಸಿಕೊಂಡು ಅಧ್ಯಯನ ಮಾಡಿದಾಗ ಬುದ್ಧಿಗೆ ಸೂತ್ರದ ಅರ್ಥವು ಸ್ಪಷ್ಟವಾಗಿ ಅರ್ಥವಾಗುತ್ತದೆ. ಹೀಗೆ ಬುದ್ಧಿಯ ಸೌಕರ್ಯಕ್ಕಾಗಿ ಟೀಕಾರಾಯರು ನ್ಯಾಯವಿವರಣವನ್ನು ಇಲ್ಲಿ ವ್ಯಾಖ್ಯಾನಿಸಿದ್ದಾರೆ. ಆದ್ದರಿಂದಲೇ 'ಸಂಗಮ್ಯಂತೇ ಗುರೋರ್ಗಿರಃ' ಎಂಬ ಪ್ರತಿಜ್ಞೆಯ ಮಾತು ಅತ್ಯಂತ ಸಾರ್ಥಕವಾಗಿದೆ. ಬೇರೆ ಬೇರೆ ಗ್ರಂಥಗಳಲ್ಲಿರುವ ಗುರುಗಳ ಮಾತುಗಳಿಂದಲೇ ಪರಸ್ಪರಸಂಬಂಧವನ್ನು ಇಲ್ಲಿ ತೋರಿಸಿದ್ದಾರೆ. 'ಪ್ರಯೋಗೇಣ' ಎಂದು ಹೇಳಿದ್ದನ್ನೇ 'ಜಿಜ್ಞಾಸ್ಯೇ ಬ್ರಹ್ಮಪದಶ್ರವಣಾತ್' ಎಂದು ವ್ಯಾಖ್ಯಾನಿಸಿದ್ದಾರೆ. ನ್ಯಾಯವಿವರಣದಲ್ಲಿ ಹೇಳಿದ ಶ್ರುತಿಯನ್ನೇ 'ಅಥ ಕಸ್ಮಾದುಚ್ಯತೇ' ಎಂದು ಉಲ್ಲೇಖಿಸಿದ್ದಾರೆ. 'ಉಚ್ಯತೇ' ಎಂದರೆ 'ವಿಷ್ಣುವು ಹೇಳಲ್ಪಟ್ಟಿದ್ದಾನೆ' ಎಂದರ್ಥ. 'ನಚ ಬ್ರಹ್ಮಣಿ ಗುಣಾಧ್ಯಾಸಃ ತಥಾ ಚ ನ ಜೀವಭೇದಸಿದ್ಧಿಃ' ಎಂದು ಶೇಷಪೂರಣ ಮಾಡಬೇಕು. ಬ್ರಹ್ಮನು ಅಧ್ಯಸ್ತಗುಣವುಳ್ಳವನಾದರೂ ಬ್ರಹ್ಮನಾಗಲಾರನೆಂಬ ಶಂಕೆಗೆ ಅವಕಾಶವಿಲ್ಲ. ಇನ್ನು ಶ್ರುತಿಯನ್ನೇ ಅಧ್ಯಸ್ತಗುಣಪರವೆನ್ನಬೇಕು. ಆದರೆ ನಿರ್ದೋಷತ್ವದಿಂದ ಸಿದ್ಧವಾದ ಪ್ರಾಮಾಣ್ಯಕ್ಕೆ ಭಂಗಬರುವುದಷ್ಟೇ ಅಲ್ಲದೆ ಮತ್ತೊಂದು ದೋಷವನ್ನು 'ದೇಶ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. 'ಉತ್ಕ್ರಾಂತಿಗತ್ಯಾಗತೀನಾಂ' (೨/೩) ಎಂಬ ಸೂತ್ರದಲ್ಲಿ 'ಸೋಽಸ್ಮಾಚ್ಛರೀರಾದುತ್ಕ್ರಮ್ಯ ಅಮುಂ ಲೋಕಮಭಿಗಚ್ಛತಿ' ಮತ್ತು 'ಅಮುಷ್ಮಾದಿಮಂ ಲೋಕಮಾಗಚ್ಛತಿ' ಎಂಬುದರಿಂದ ಜೀವನಿಗೆ ಉತ್ಕ್ರಮಣತ್ವವೆಂಬ ಹೇತುವಿನಿಂದ ಅಣುತ್ವವನ್ನು

ಹೇಳುವವರಿದ್ದಾರೆ. ಹೀಗೆ ಅಭೇದವಾದಿಗಳ ಮತದಲ್ಲಿನ ಪೂರ್ವಪಕ್ಷಸೂತ್ರವನ್ನು ಚಂದ್ರಿಕೆಯಲ್ಲಿ ನಿರಾಕರಿಸಿದ್ದಾರೆ. ಮತ್ತು ನ್ಯಾಯಾಮೃತದಲ್ಲಿ ಜೀವಾಣುತ್ವವನ್ನು ಜೀವಾಣುತ್ವವಾದದಲ್ಲಿ ಸಮರ್ಥಿಸಿದ್ದಾರೆ.

## ಎರಡು ಬಾರಿ 'ಅತಃ' ಎಂದಿಟ್ಟುಕೊಳ್ಳಬೇಕು

**ಭಾವದೀಪಃ – 'ಯದುಕ್ತಮ್' ಇತ್ಯಾದಿನೋಕ್ತಮರ್ಥಂ ಭಾಷ್ಯಾರೂಢಂ ದರ್ಶಯನ್ 'ಅತೋ ಬ್ರಹ್ಮಜಿಜ್ಞಾಸಾ' ಇತ್ಯುಪಸಂಹಾರಭಾಷ್ಯಂ ಪ್ರಕಾರಾನ್ತರೇಣ ವ್ಯಾಚಷ್ಟೇ – ಅತ ಇತಿ ।। 'ಜಿಜ್ಞಾಸ್ಯೇ ಬ್ರಹ್ಮಪದಶ್ರವಣಾತ್' ಇತಿ ಪ್ರಾಗುಕ್ತಹೇತುಪರಾಮರ್ಶಿತ್ವಮೇಕೋऽರ್ಥಃ । ಅಸ್ಮಿನರ್ಥೇ ತದ್ಭಿನ್ನೇತಿ ಸಾಧ್ಯೇನಾನ್ವಯಃ । ಅರ್ಥಾನ್ತರಂ ಚಾಹ – ಜೀವಸ್ಯ ಇತ್ಯಾದಿನಾ ಸಮ್ಭವಾತ್ ಇತ್ಯನ್ತೇನ ।। ಏತೇನ ಭಾಷ್ಯೇ 'ಅತಃ' ಇತ್ಯಸ್ಯಾವೃತ್ತಿಃ ಆದ್ಯಸ್ಯ ಜೀವಭೇದಕಗುಣ-ಪೂರ್ತಿವಾಚಿಬ್ರಹ್ಮಪದಶ್ರವಣಾದಿತ್ಯರ್ಥಃ । ಅನ್ಯಸ್ಯ ತು ಜೀವಸ್ಯೇತ್ಯಾದಿರರ್ಥ ಇತಿ ಸೂಚಿತಮ್ । ಬುದ್ಧಿಸ್ಥಪರಾಮರ್ಶಿತ್ವಾದತಃಶಬ್ದಸ್ಯ । 'ಇತಿ'ಶಬ್ದೋ ವಾಕ್ಯವ್ಯಾಖ್ಯಾ-ಸಮಾಪ್ತೌ ।**

'ಯದುಕ್ತಮ್' ಎಂಬುದರಿಂದ ಪ್ರಾರಂಭಿಸಿ ಇಲ್ಲಿಯ ತನಕ ಹೇಳಿದ ಎಲ್ಲ ಅರ್ಥವನ್ನು ಭಾಷ್ಯಾರೂಢ ಮಾಡುತ್ತಿದ್ದಾರೆ. ಮತ್ತು 'ಬ್ರಹ್ಮಜಿಜ್ಞಾಸಾ' ಎಂಬ ಉಪಸಂಹಾರಭಾಷ್ಯವನ್ನು ಮತ್ತೊಂದು ಅರ್ಥದಲ್ಲಿ 'ಅತಃ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಅತಃ' ಎಂಬ ಪದದಿಂದ ಹಿಂದೆ ಪ್ರಸಕ್ತವಾದ 'ಜಿಜ್ಞಾಸ್ಯೇ ಬ್ರಹ್ಮಪದಶ್ರವಣಾತ್' ಎಂಬ ಹೇತುವನ್ನು ಪರಾಮರ್ಶಮಾಡಬೇಕು ಎಂಬುದು ಒಂದರ್ಥ. ಈ ಅರ್ಥದಲ್ಲಿ 'ತದ್ಭಿನ್ನಾ' ಎಂಬ ಪದವನ್ನು ಸಾಧ್ಯದ ಜೊತೆಗೆ ಅನ್ವಯಿಸಬೇಕು. ಮತ್ತೊಂದು ಅರ್ಥವನ್ನು 'ಜೀವಸ್ಯ' ಎಂಬಲ್ಲಿಂದ ಪ್ರಾರಂಭಿಸಿ 'ಸಂಭವಾತ್' ಎಂಬುದರ ತನಕ ಹೇಳುತ್ತಿದ್ದಾರೆ. ಇದರಿಂದ ಭಾಷ್ಯದಲ್ಲಿರುವ 'ಅತಃ' ಎಂಬ ಪದವನ್ನು ಎರಡು ಬಾರಿ ಇಟ್ಟುಕೊಳ್ಳಬೇಕೆಂದು ತಿಳಿಯುತ್ತದೆ. ಮೊದಲ ಅತಃಶಬ್ದಕ್ಕೆ 'ಜೀವಭೇದಕವಾದ ಗುಣಪೂರ್ಣತ್ವವಾಚಕವಾದ ಬ್ರಹ್ಮಪದವು ಕೇಳಿಸುತ್ತಿರುವುದರಿಂದ' ಎಂದರ್ಥ. ಎರಡನೆಯ ಅತಃಶಬ್ದಕ್ಕೆ 'ಜೀವಸ್ಯ ಸ್ವಪ್ರಕಾಶತ್ವೇತಿ' ಇತ್ಯಾದಿ ಗ್ರಂಥದಲ್ಲಿ ಹೇಳಲ್ಪಟ್ಟ ಅರ್ಥವನ್ನು ಇಟ್ಟುಕೊಳ್ಳಬೇಕು.

ಬುದ್ಧಿಯಲ್ಲಿರುವುದನ್ನೇ ಅತಃಶಬ್ದದಿಂದ ವಿವಕ್ಷಿಸಬೇಕಾದ್ದರಿಂದ. 'ಇತಿ'ಶಬ್ದವು ವಾಕ್ಯವ್ಯಾಖ್ಯಾನದ ಸಮಾಪ್ತಿಯನ್ನು ಹೇಳುತ್ತಿದೆ.

## ಬ್ರಹ್ಮಜಿಜ್ಞಾಸೆಯ ಫಲ

**ಭಾವದೀಪಃ** – ननु मुक्तिहेतुनारायणप्रसादस्य ज्ञानद्वारा जिज्ञासाजन्यत्वे तज्जिज्ञास्यैव कार्या, न ब्रह्मजिज्ञासा व्यधिकरणत्वात्, तस्मात् 'अतो ब्रह्मजिज्ञासा' इत्ययुक्तम् इत्यत आह – **ब्रह्मपदेति** ।। नारायणपदस्य गुणपूर्त्यर्थताया आद्यपद्यव्याख्यायामभिधानात् ।

दोषारच्छिद्रशब्दानां पर्यायत्वं यतस्ततः ।
ब्रह्मशब्दोऽपि हि गुणपूर्तिमेव वदत्ययम् ।।

इत्याद्यनुभाष्योक्तिश्चेति भावः । तेन 'नारायणोऽसौ परमो विचिन्त्यः' इत्यादि श्रुतिः सूचिता । भाष्ये 'इत्यादिश्रुतिस्मृतिभ्यः' इति वक्ष्यमाणस्य 'यतो नारायणप्रसादमृते' इत्यनेनान्वयः ।

ಮೋಕ್ಷಕ್ಕೆ ಕಾರಣವಾದದ್ದು ನಾರಾಯಣನ ಪ್ರಸಾದ; ನಾರಾಯಣನ ಪ್ರಸಾದಕ್ಕೆ ಅಪರೋಕ್ಷಜ್ಞಾನವು ಕಾರಣ; ಅಪರೋಕ್ಷಜ್ಞಾನಕ್ಕೆ ಜಿಜ್ಞಾಸೆಯು ಕಾರಣ. ಆದ್ದರಿಂದ ನಾರಾಯಣನ ಜಿಜ್ಞಾಸೆಯನ್ನೇ ಮಾಡಬೇಕು ಹೊರತು ಬ್ರಹ್ಮಜಿಜ್ಞಾಸೆಯನ್ನಲ್ಲ. ಬ್ರಹ್ಮಜಿಜ್ಞಾಸೆಯನ್ನು ಮಾಡುವುದರಿಂದ ನಾರಾಯಣನ ಪ್ರಸಾದವು ದೊರೆಯುತ್ತದೆಂಬುದು ವ್ಯಧಿಕರಣವಾಗಿದೆ. ಆದ್ದರಿಂದ 'ಅತೋ ಬ್ರಹ್ಮಜಿಜ್ಞಾಸಾ ಕರ್ತವ್ಯಾ' ಎಂದು ಹೇಳಿದ್ದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ಬ್ರಹ್ಮಪದ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ನಾರಾಯಣಪದದ ಅರ್ಥವನ್ನೇ ಬ್ರಹ್ಮಪದವು ಹೇಳುವುದರಿಂದ ಎರಡೂ ಪದಗಳಿಂದ ಪ್ರತಿಪಾದ್ಯನಾದವನು ನಾರಾಯಣನೇ ಆಗಿದ್ದಾನೆ. ಆದ್ದರಿಂದ ವೈಯ್ಯಧಿಕರಣ್ಯಕ್ಕೆ ಅವಕಾಶವಿಲ್ಲ. ನಾರಾಯಣ ಪದವು ಗುಣಪೂರ್ಣತ್ವವೆಂಬ ಅರ್ಥವನ್ನು ಹೇಗೆ ಹೇಳುತ್ತದೆಂಬುದನ್ನು ಮಂಗಳಪದ್ಯದ ವ್ಯಾಖ್ಯಾನದಲ್ಲಿ ವಿವರಿಸಲಾಗಿದೆ.

ದೋಷಾರಚ್ಛಿದ್ರಶಬ್ದಾನಾಂ ಪರ್ಯಾಯತ್ವಂ ಯತಸ್ತತಃ।
ಬ್ರಹ್ಮಶಬ್ದೋऽಪಿ ಓ ಗುಣಪೂರ್ತಿಮೇವ ವದತ್ಯಯಮ್ ॥

'ದೋಷ ಅರ ಛಿದ್ರಶಬ್ದಗಳು ಪರ್ಯಾಯಪದಗಳಾದ್ದರಿಂದ 'ನಾರಾಃ' ಎಂದರೆ ಗುಣಗಳು ಎಂದರ್ಥ. ಗುಣಗಳಿಂದ ಕೂಡಿರುವವನೇ ನಾರಾಯಣನಾಗಿದ್ದಾನೆ. ಹೀಗೆ ನಾರಾಯಣಶಬ್ದವು ಪ್ರತಿಪಾದಿಸುವ ಗುಣಪೂರ್ಣತ್ವವನ್ನೇ 'ಬ್ರಹ್ಮಶಬ್ದೋऽಪಿ ಓ ಗುಣಪೂರ್ತಿಮೇವ ವದತ್ಯಯಮ್' ಎಂಬ ಅಣುಭಾಷ್ಯದಲ್ಲಿ ಹೇಳಿದಂತೆ ಬ್ರಹ್ಮಶಬ್ದವು ಹೇಳುತ್ತಿದೆ. ಹೀಗೆ ಹೇಳಿದ್ದರಿಂದ 'ತದ್ ವಿಜಿಜ್ಞಾಸ್ಸಸ್ವ ತದ್ ಬ್ರಹ್ಮ' ಎಂಬುದು ಹೇಗೆ ವಿಷಯವಾಕ್ಯವಾಗಿದೆಯೋ, ಆದರಂತೆ 'ನಾರಾಯಣೋऽಸೌ ಪರಮೋ ವಿಚಿಂತ್ಯಃ' ಇತ್ಯಾದಿ ಶ್ರುತಿಗಳೂ ಸಹ ವಿಷಯವಾಕ್ಯಗಳಾಗಿವೆ ಎಂದು ಸೂಚಿಸಿದಂತಾಯಿತು. ಭಾಷ್ಯದಲ್ಲಿರುವ 'ಇತ್ಯಾದಿಶ್ರುತಿಸ್ಮೃತಿಭ್ಯಃ' ಎಂದು ಮುಂದೆ ಹೇಳಿರುವ ಮಾತಿಗೆ 'ಯತೋ ನಾರಾಯಣಪ್ರಸಾದಂ ಋತೇ' ಎಂಬುದರ ಜೊತೆಗೆ ಅನ್ವಯ ಮಾಡಬೇಕು.

## ಸಮಗ್ರ ಸೂತ್ರವ್ಯಾಖ್ಯಾನ

ವಿವರಣೆ - ಪ್ರಶ್ನೆ - ಅಧ್ಯಯನ ಮಾಡಿದವರಷ್ಟೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರಿಗಳೆಂದರೆ ವೇದಾಧ್ಯಯನರಹಿತರಾದ ತ್ರೈವರ್ಣಿಕರಲ್ಲದ ಸಜ್ಜನಶೂದ್ರಾದಿಗಳಿಗೆ ಜ್ಞಾನವೇ ಇಲ್ಲದ ಪ್ರಯುಕ್ತ ಮೋಕ್ಷವಿಲ್ಲದ ಪ್ರಸಂಗ ಬರುತ್ತದೆ.

ಉತ್ತರ - ಈ ಶಂಕೆಯನ್ನು ವ್ಯೋಮಸಂಹಿತೆಯಲ್ಲಿರುವ ಪ್ರಮಾಣವಚನದಿಂದ ಪರಿಹರಿಸುತ್ತಾರೆ.

ಅಂತ್ಯಜರೆಂದರೆ ವರ್ಣಬಾಹ್ಯರು. ಸಜ್ಜನರಾದ ಮ್ಲೇಚ್ಛರನ್ನು ಸಂಗ್ರಹಿಸಬೇಕು. ಭಕ್ತರು ಎಂಬ ಪದದಿಂದ ಅಧಿಕಾರವನ್ನು ಹೇಳಿದ ಹಾಗಾಯಿತು. ತಂತ್ರ ಎಂದರೆ ಪಂಚರಾತ್ರವೇ ಮೊದಲಾದವುಗಳು. ತ್ರೈವರ್ಣಿಕರಲ್ಲದವರಿಗೆ ಅಧ್ಯಯನವಿಲ್ಲದಿದ್ದರೂ ಭಗವಂತನ ನಾಮಸ್ಮರಣೆಯಲ್ಲಿ ಅಧಿಕಾರವಿದೆ. ಆದ್ದರಿಂದ ಅವರಿಗೂ ಮೋಕ್ಷವಾಗುತ್ತದೆ.

ಪ್ರಶ್ನೆ - 'ಸಪತ್ನೀಂ ಮೇ ಪರಾಧಮ' 'ನನ್ನನ್ನು ಸಪತ್ನಿಯಿಂದ ಬಿಡಿಸು' ಇತ್ಯಾದಿ ವೇದವಾಕ್ಯದಿಂದ ಸ್ತ್ರೀಯರಿಗೂ ವೇದಾಧಿಕಾರವಿದೆಯೆಂದು ತಿಳಿಯುತ್ತದೆ. ಹೀಗಿರುವಾಗ ಅವರಿಗೆ ವೇದಾಧಿಕಾರವಿಲ್ಲವೆಂದು ಹೇಗೆ ಹೇಳಿದಿರಿ?

ಉತ್ತರ - ಎಲ್ಲ ಸ್ತ್ರೀಯರಿಗೂ ವೇದಾಧಿಕಾರವಿಲ್ಲವೆಂದು ಹೇಳಿಲ್ಲ. ಉತ್ತಮಸ್ತ್ರೀಯರಿಗೆ ವೇದಾಧಿಕಾರವಿದೆ. 'ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ಉತ್ತಮಾ ಇತಿ ವಿಜ್ಞೇಯಾಃ' (೨೯/೩೮) ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳಿದಂತೆ ದೇವತಾಸ್ತ್ರೀಯರಿಗೆ ಮತ್ತು ಋಷಿಸ್ತ್ರೀಯರಿಗೆ ಮನುಷ್ಯಜನ್ಮದಲ್ಲಿ ಹುಟ್ಟಿದರೂ ವೇದವಿದ್ಯೆಯಲ್ಲಿ ಅಧಿಕಾರವಿದೆ. ಹೀಗೆ ಅಪವಾದವನ್ನು ತಿಳಿಯಬೇಕು.

ಇಲ್ಲಿಯ ತನಕ ಅಥಶಬ್ದವನ್ನು ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ವ್ಯಾಖ್ಯಾನ ಮಾಡಿದ್ದಾಯಿತು. ಈಗ ಹೇತ್ವರ್ಥದಲ್ಲಿ ಅತಃಶಬ್ದವು ಪ್ರಯುಕ್ತವಾಗಿದೆಯೆಂದು ಹಿಂದೆ ಹೇಳಿದ್ದನ್ನು 'ಯತಃ' ಇತ್ಯಾದಿಯಾಗಿ ವಿವರಿಸುತ್ತಿದ್ದಾರೆ. 'ಎಲ್ಲರಿಗೂ ಸುಖವೇ ಆಗಲಿ ದುಃಖವು ಸ್ವಲ್ಪವೂ ಆಗುವುದು ಬೇಡ' ಎಂದು ಎಲ್ಲರಿಗೂ ಮೋಕ್ಷದ ಅಭಿಲಾಷೆ ಇರುತ್ತದೆ. ಇಂತಹ ಮೋಕ್ಷವು ನಾರಾಯಣನ ಪರಮಪ್ರಸಾದವಿಲ್ಲದೇ ದೊರೆಯಲಾರದು. ನಾರಾಯಣನ ಪ್ರಸಾದವು ಅವನ ಅಪರೋಕ್ಷವಾದಾಗಲೇ ದೊರೆಯುತ್ತದೆ. ಆ ಅಪರೋಕ್ಷಜ್ಞಾನವು ಬ್ರಹ್ಮಜಿಜ್ಞಾಸೆಯಿಂದ ಮಾತ್ರ ದೊರೆಯುತ್ತದೆ. ಹೀಗೆ ಭಗವಂತನ ಮಹಾಪ್ರಸಾದದ ಮೂಲಕ ಮೋಕ್ಷಸಾಧನವಾದ ಅಪರೋಕ್ಷಜ್ಞಾನಕ್ಕೆ ಕಾರಣವಾದ್ದರಿಂದ ಎಂದು 'ಅತಃ' ಶಬ್ದಕ್ಕೆ ಅರ್ಥ. ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು.

ಪ್ರಶ್ನೆ - ವಿಷಯಪ್ರಯೋಜನಾದಿಗಳು ಇಲ್ಲದಿರುವುದರಿಂದ ಜಿಜ್ಞಾಸೆಯನ್ನು ಮಾಡಬೇಕಾಗಿಲ್ಲವೆಂದು ಹಿಂದೆ ಹೇಳಿದ್ದೇವೆ. ಹೀಗಿರುವಾಗ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಗೆ ಹೇಳುತ್ತಿದ್ದೀರಿ?

ಉತ್ತರ - ಈ ಪ್ರಶ್ನೆಗೆ ಉತ್ತರರೂಪವಾಗಿ ಸೂತ್ರಸೂಚಿತವಾದ ಯುಕ್ತಿಯಿಂದ ಪೂರ್ವಪಕ್ಷವನ್ನು ನಿರಾಕರಿಸುತ್ತಿದ್ದಾರೆ. ಅಸಂದಿಗ್ಧನಾದ್ದರಿಂದ ಬ್ರಹ್ಮನಿಗೆ ವಿಷಯತ್ವವಿಲ್ಲವೆಂದು ಏನು ಹೇಳಿದ್ದೀರೋ ಅದು ಸೂತ್ರದಲ್ಲಿರುವ ಬ್ರಹ್ಮಪದದಿಂದ ನಿರಾಕೃತವಾಯಿತು. ಅದು ಹೀಗೆ - ಜಿಜ್ಞಾಸೆಗೆ ವಿಷಯನಾದ ಬ್ರಹ್ಮನು ಸ್ವಪ್ರಕಾಶನಾದ ಜೀವನಿಗಿಂತ ಭಿನ್ನನಲ್ಲದಿದ್ದರೆ ಅಸಂದಿಗ್ಧನಾಗುತ್ತಿದ್ದ. ಆದರೆ ಬ್ರಹ್ಮನು ಅಸಂದಿಗ್ಧನಲ್ಲ. 'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಜಿಜ್ಞಾಸ್ಯನನ್ನು ಬ್ರಹ್ಮನೆಂದು ಹೇಳಿದ್ದಾರೆ. ಬ್ರಹ್ಮಶಬ್ದದ ಅರ್ಥ ಗುಣಪೂರ್ಣ ಎಂದು. ಈ ವಿಷಯದಲ್ಲಿ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ

ಹ್ಯಸ್ಮಿನ್ ಗುಣಾಃ' ಎಂಬ ಶ್ರುತಿಯು ಪ್ರಮಾಣವಾಗಿದೆ. (ಅಥ ಕಸ್ಮಾದುಚ್ಯತೇ ಬ್ರಹ್ಮೇತಿ = ಹರಿಯು ಯಾವ ಕಾರಣದಿಂದ ಬ್ರಹ್ಮಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ? ಎಂಬ ಪ್ರಶ್ನೆಗೆ ಹಿ = ಯಾವ ಕಾರಣದಿಂದ ಅಸ್ಮಿನ್ = ಹರಿಯಲ್ಲಿ, ಗುಣಾಃ = ಗುಣಗಳು, ಬೃಹಂತಃ = ಪೂರ್ಣವಾಗಿದೆಯೋ, ಆ ಕಾರಣದಿಂದ ಎಂದು ಶ್ರುತಿಗೆ ಅರ್ಥ) ಜೀವವಾದರೂ ಅಲ್ಪಗುಣನೆಂಬ ವಿಷಯದಲ್ಲಿ ಸಕಲರ ಅನುಭವವೇ ಪ್ರಮಾಣವಾಗಿದೆ. ಆದ್ದರಿಂದ ವಿರುದ್ಧಧರ್ಮಾಧಿಕರಣರಾದವರಿಗೆ ಅಭೇದವು ಸಮಂಜಸವಲ್ಲ.

ಶಂಕೆ - ಸತ್ಯಜ್ಞಾನಾದಿಗುಣಗಳೆಲ್ಲವೂ ಬ್ರಹ್ಮನಲ್ಲಿ ಆರೋಪಿತಗಳಾಗಿವೆ. ಆದರಂತೆ ಜೀವನಲ್ಲಿರುವ ಅಲ್ಪಜ್ಞತ್ವಾದಿಗಳೂ ಮಿಥ್ಯಾಭೂತಗಳಾಗಿವೆ. ಆದ್ದರಿಂದ ಚಿನ್ಮಾತ್ರಗಳಿಗೆ ಐಕ್ಯವನ್ನು ಹೇಳಬಹುದು.

ಸಮಾಧಾನ - ಬ್ರಹ್ಮನಲ್ಲಿರುವ ಗುಣಗಳು ಪಾರಮಾರ್ಥಿಕವಲ್ಲವೆಂದರೆ ಬ್ರಹ್ಮತ್ವವು ಪಾರಮಾರ್ಥಿಕವಲ್ಲವೆಂದಾಯಿತು.

ಶಂಕೆ - 'ಬೃಹ ವೃದ್ಧೌ' ಎಂಬ ಧಾತುವಿನ ಮೇಲೆ ಮನಿನ್ ಪ್ರತ್ಯಯ ಬಂದು ಬ್ರಹ್ಮಶಬ್ದವು ನಿಷ್ಪನ್ನವಾಗಿದೆ. ಇದು ಪೂರ್ಣತ್ವವೆನಿಸಿದ ಅಪರಿಚ್ಛಿನ್ನತ್ವವನ್ನಷ್ಟೇ ಹೇಳುತ್ತದೆ. ಅಪರಿಚ್ಛಿನ್ನತ್ವವನ್ನು ಗುಣಗಳಿಂದಲೇ ಹೇಳಬೇಕಾಗಿಲ್ಲ. ದೇಶತಃ ಕಾಲತಃ ಅಪರಿಚ್ಛಿನ್ನತ್ವವನ್ನು ಹೇಳುವುದರಿಂದಲೂ ಅಪರಿಚ್ಛಿನ್ನತ್ವರೂಪಬ್ರಹ್ಮತ್ವವು ಬ್ರಹ್ಮನಲ್ಲಿ ಬರುತ್ತದೆ. ಆದ್ದರಿಂದ ವಿರುದ್ಧಧರ್ಮಾಧಿಕರಣಗಳಾದ್ದರಿಂದ ಭೇದವನ್ನು ಹೇಳುತ್ತೇವೆಯೆಂದು ನಿಮಗೆ ಹೇಳಲಾಗದು.

ಸಮಾಧಾನ - ಹಾಗೆ ಹೇಳಿದರೆ 'ಬೃಹಂತೋ ಹ್ಯಸ್ಮಿನ್ಗುಣಾಃ' ಎಂಬ ಶ್ರುತಿಯ ವಿರೋಧ ಬರುತ್ತದೆ. ಹಾಗೆ ಒಪ್ಪಿದರೂ ಇದರಿಂದಲೇ ಜೀವಭೇದವು ಸಿದ್ಧವಾಗುತ್ತದೆ. ಏಕೆಂದರೆ ಬ್ರಹ್ಮನು ದೇಶಾದ್ಯಪರಿಚ್ಛಿನ್ನ, ಜೀವನಾದರೂ ಅಣುವಾದ್ದರಿಂದ ಪರಿಚ್ಛಿನ್ನನಾಗಿದ್ದಾನೆ. ಜೀವನು ಅಣುವಾಗಿದ್ದಾನೆಂಬ ವಿಷಯವನ್ನು ಮುಂದೆ 'ಉತ್ಕ್ರಾಂತಿಗತ್ಯಾಗತೀನಾಮ್' ಎಂಬ ಸೂತ್ರದಲ್ಲಿ ವಿವರಿಸಲಾಗುತ್ತದೆ. ಆದ್ದರಿಂದ ಸ್ವಪ್ರಕಾಶನೇ ಆಗಿದ್ದರೂ ಬ್ರಹ್ಮನಿಂದ ಭಿನ್ನನಾದ ಪ್ರಯುಕ್ತ ಸಂದಿಗ್ಧನಾದ್ದರಿಂದ ಶಾಸ್ತ್ರಕ್ಕೆ

ವಿಷಯನಾಗುತ್ತಾನೆ. ಈ ಶಾಸ್ತ್ರಾಧ್ಯಯನದಿಂದ ಮೋಕ್ಷರೂಪವಾದ ಫಲವೂ ದೊರೆಯುತ್ತದೆ. ಆದ್ದರಿಂದಲೇ ಅಧಿಕಾರಿ ಮತ್ತು ಸಂಬಂಧಗಳೂ ಇರುತ್ತವೆ. ಹೀಗೆ ಅನುಬಂಧ-ಚತುಷ್ಟಯವಿರುವುದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಸಿದ್ಧವಾಯಿತು.

ಪ್ರಶ್ನೆ - ಬ್ರಹ್ಮಜಿಜ್ಞಾಸೆಯು ಜ್ಞಾನಪ್ರಸಾದದ್ವಾರಾ ಮೋಕ್ಷಕ್ಕೆ ಕಾರಣವೆಂದರೆ ಹಿಂದೆ ಉದಾಹರಿಸಿದ 'ಯತೋ ನಾರಾಯಣಪ್ರಸಾದಮ್' ಎಂಬುದನ್ನು ಏಕೆ ಉದಾಹರಿಸಿದಿರಿ?

ಉತ್ತರ - ಬ್ರಹ್ಮಪದದ ವ್ಯಾಖ್ಯಾನರೂಪವೇ ನಾರಾಯಣಪದವು. ನಾರಾಯಣ ಪ್ರಸಾದವಿಲ್ಲದೆ ಮೋಕ್ಷವಿಲ್ಲ. ಇಲ್ಲಿ ನಾರಾಯಣಪದವಿರುವುದರಿಂದ, ಬ್ರಹ್ಮಜಿಜ್ಞಾಸೆಯಿಂದ ಬ್ರಹ್ಮಪ್ರಸಾದವೇ ಮೋಕ್ಷಹೇತು ಎಂದು ಹೇಳಿರುವುದರಿಂದಲೂ ಬ್ರಹ್ಮ ಹಾಗೂ ನಾರಾಯಣ ಪದಗಳ ಅರ್ಥ ಒಂದೇ ಎಂದು ಇಲ್ಲಿ ತಿಳಿಸುತ್ತಾರೆ. ಎರಡೂ ಪದಗಳಿಗೆ ಪೂರ್ಣಗುಣತ್ವ ಎಂದೇ ಅರ್ಥ.

ಆಕ್ಷೇಪ - 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಲ್ಲಿ 'ಕರ್ತವ್ಯಾ' ಎಂಬ ಪದವಿಲ್ಲ. ಅಧ್ಯಾಹಾರ ಮಾಡಿಕೊಳ್ಳಬೇಕೆಂದರೆ 'ನ ಕರ್ತವ್ಯಾ' ಎಂದೇ ಅಧ್ಯಾಹಾರ ಏಕೆ ಮಾಡಬಾರದು? ಈ ರೀತಿಯಾಗಿಯೇ ಅಧ್ಯಾಹಾರಮಾಡಬೇಕೆನ್ನಲು ಯಾವ ನಿಬಂಧವೂ ಇಲ್ಲ.

ಸಮಾಧಾನ - ಈ ಆಕ್ಷೇಪಕ್ಕೆ 'ಯತ್ರಾನವಸರೋ' ಇತ್ಯಾದಿಯಾಗಿ ಶ್ರೀಮದಾಚಾರ್ಯರು ಉತ್ತರಿಸುತ್ತಿದ್ದಾರೆ.

ಯಾವುದೇ ಒಂದು ವಾಕ್ಯದಲ್ಲಿ ಯಾವ ಪದವಿಲ್ಲದಿದ್ದರೆ ಇತರ ಪದಗಳ ಅರ್ಥವು ಸರಿ ಹೊಂದುವುದಿಲ್ಲವೋ ಆ ವಾಕ್ಯದಲ್ಲಿ ಆದೇ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಬೇರೆಯದನ್ನೆಲ್ಲ. ಯಾವ ಪದದ ಅಗತ್ಯವಿಲ್ಲದೆ ಬೇರೆ ಪದದಿಂದಲೇ ಅರ್ಥವು ಸರಿಹೊಂದುತ್ತದೋ ಅಂತಹ ಪದದ ಅಧ್ಯಾಹಾರವನ್ನು ಮಾಡಬೇಕಾಗಿಲ್ಲ.

ಆದೇ ರೀತಿಯಾಗಿ ಯಾವುದೇ ಒಂದು ಮಹಾವಾಕ್ಯದಲ್ಲಿ ಯಾವ ವಾಕ್ಯವಿಲ್ಲದಿದ್ದರೆ ಇನ್ನಿತರ ಅರ್ಥವು ಸರಿಹೊಂದುವುದಿಲ್ಲವೋ ಆ ಮಹಾವಾಕ್ಯದಲ್ಲಿ ಅಗತ್ಯವಾದ ಆ ವಾಕ್ಯವೇ ಅಧ್ಯಾಹಾರವಾಗುತ್ತದೆ ಬೇರೆಯದಲ್ಲ. ಯಾವ ವಾಕ್ಯದ ಅಗತ್ಯವಿಲ್ಲದೆ ಬೇರೆ

ವಾಕ್ಯದಿಂದಲೇ ಮಹಾವಾಕ್ಯದಲ್ಲಿ ಅರ್ಥವು ಸರಿಹೊಂದುವುದಾದರೆ ಅಂತಹ ವಾಕ್ಯದ ಅಧ್ಯಾಹಾರವಾಗುವುದಿಲ್ಲ. ಇದು ಬಲ್ಲವರು ಮಾಡಿದ ನ್ಯಾಯ.

ಪ್ರಕೃತ 'ನ ಕರ್ತವ್ಯಾ' ಎಂಬುದನ್ನು ಸೂತ್ರದಲ್ಲಿ ಅನುವೃತ್ತಿ ಮಾಡಿಕೊಂಡರೆ ಅಧಿಕಾರ ಮೊದಲಾದವುಗಳನ್ನು ಹೇಳಿದ್ದಕ್ಕೆ ಸಂಗತವಾಗುವುದಿಲ್ಲ. ಜಿಜ್ಞಾಸೆಯನ್ನು ಮಾಡಬಾರದೆಂದರೆ ಅಧಿಕಾರ ಪ್ರಯೋಜನಾದಿಗಳನ್ನು 'ಅಥ', 'ಅತಃ' ಶಬ್ದಗಳಿಂದ ಹೇಳಬೇಕಾಗಿರಲಿಲ್ಲ.

## ಶ್ರವಣಾದಿಗಳ ಬಗ್ಗೆ ಯಾಜ್ಞವಲ್ಕ್ಯರ ಉಪದೇಶ

**ಬ್ರಹ್ಮಸೂತ್ರಭಾಷ್ಯಮ್ –**

**'ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪನ್ಥಾ ಅಯನಾಯ ವಿದ್ಯತೇ'।। 'ಪ್ರಿಯೋ ಹಿ ಜ್ಞಾನಿನೋऽತ್ಯರ್ಥಮಹಂ ಸ ಚ ಮಮ ಪ್ರಿಯಃ' । 'ಯಮೇವೈಷ ವೃಣುತೇ ತೇನ ಲಭ್ಯಃ' । 'ಆತ್ಮಾ ವಾರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' ಇತ್ಯಾದಿಶ್ರುತಿಸ್ಮೃತಿಭ್ಯಃ ।।**

ಅನುವಾದ - 'ಅಧಿಕಾರಿವರ್ಗದಲ್ಲಿ ಪರಮಾತ್ಮನನ್ನು ಸರಿಯಾಗಿ ತಿಳಿದ ಜ್ಞಾನಿಯು ಮೋಕ್ಷವನ್ನು ಹೊಂದುತ್ತಾನೆ. ಜ್ಞಾನವನ್ನು ಬಿಟ್ಟು ಮೋಕ್ಷಕ್ಕೆ ಬೇರೆ ಸಾಧನವಿಲ್ಲ.' 'ಜ್ಞಾನಿಗಳಿಗೆ ನಾನು ಮೋಕ್ಷಕ್ಕೂಕ್ಕೂ ಅತ್ಯಂತಪ್ರಿಯನಾಗಿದ್ದೇನೆ. ನನಗೂ ಸಹ ಜ್ಞಾನಿಗಳೆಂದರೆ ಅತ್ಯಂತ ಪ್ರೀತ್ಯಾಸ್ಪದರು'. 'ಪರಮಾತ್ಮನು ಯಾರನ್ನು ಪ್ರಸನ್ನನಾಗಿ ಸ್ವೀಕರಿಸುತ್ತಾನೋ ಅಂತಹ ಭಕ್ತರಿಗೆ ಮಾತ್ರ ಪರಮಾತ್ಮನು ದೊರೆಯುತ್ತಾನೆ'. 'ಎಲೈ ಮೈತ್ರೇಯಿಯೇ! ಪರಮಾತ್ಮನನ್ನು ಶಾಸ್ತ್ರದಿಂದ ತಿಳಿಯಬೇಕು, ಗುರುಮುಖದಿಂದ ಕೇಳಿ ತಿಳಿಯಬೇಕು. ಅವನ ಬಗ್ಗೆ ತಿಳಿದ ಜ್ಞಾನವನ್ನು ಯುಕ್ತಿಗಳಿಂದ ಮಥನ ಮಾಡಬೇಕು. ಅನಂತರ ಧ್ಯಾನ ಮಾಡಬೇಕು'. ಇವೇ ಮೊದಲಾದ ಶ್ರುತಿಸ್ಮೃತಿಗಳಿಂದ ಭಗವಂತನ ಜ್ಞಾನದಿಂದ ದೊರೆಯುವ ಪ್ರಸಾದವೇ ಮೋಕ್ಷಸಾಧನವೆಂದು ತಿಳಿಯುತ್ತದೆ.

ಪ್ರತಿಪದಾರ್ಥ -- ಇಹ = ಈ ಅಧಿಕಾರಿವರ್ಗದಲ್ಲಿ, ತಂ = ಪುರುಷಶಬ್ದದಿಂದ ವಾಚ್ಯನಾದ ಪರಮಾತ್ಮನನ್ನು, ಏವಂ = ಸಹಸ್ರಶೀರ್ಷ ಇತ್ಯಾದಿಯಾಗಿ ಹೇಳಿದ ಪ್ರಕಾರದಿಂದ, ವಿದ್ವಾನ್ = ಪರೋಕ್ಷಜ್ಞಾನದ ಮೂಲಕ ಅಪರೋಕ್ಷಜ್ಞಾನವನ್ನು ಪಡೆದವನು, ಅಮೃತಃ = ಮುಕ್ತನು, ಭವತಿ = ಆಗುತ್ತಾನೆ. ಅಯನಾಯ = ಮೋಕ್ಷಕ್ಕೆ, ಅನ್ಯಃ = ಭಗವಂತನ ಜ್ಞಾನಕ್ಕಿಂತ ಅತಿರಿಕ್ತವಾದ, ಪಂಥಾ = ಮಾರ್ಗವು, ನ ವಿದ್ಯತೇ = ಇರುವುದಿಲ್ಲ.

ಶ್ರೀ ಮಂತ್ರಾಲಯಪ್ರಭುವಿರಚಿತ - ಭಾವದೀಪ

ಅಪರೋಕ್ಷಜ್ಞಾನವೇ ಪ್ರಸಾದಸಾಧನವೆಂದು ಏಕೆ ಒಪ್ಪಬೇಕು? ಎಂದರೆ ಅಹಂ = ನಾನು, ಜ್ಞಾನಿನಃ = ಜ್ಞಾನಿಗಳಿಗೆ, ಅತ್ಯರ್ಥಂ = ಅತ್ಯಂತವಾಗಿ (ಮೋಕ್ಷಕ್ಕೋಸ್ಕರ), ಪ್ರಿಯೋ ಽ = ಪ್ರೀತಿಪಾತ್ರನಾದವನು, ಸ ಚ = ಆ ಅಪರೋಕ್ಷಜ್ಞಾನಿಯಾದರೋ, ಮಮ = ನನಗೆ, ಪ್ರಿಯಃ = ಪ್ರೀತ್ಯಾಸ್ಪದನು. ಹೀಗೆ ಕೃಷ್ಣನು ಹೇಳಿದ್ದಾನೆ.

ಪ್ರಸಾದವು ಮೋಕ್ಷಸಾಧನವೆನ್ನಲು ಸ್ಪಷ್ಟವಾದ ಶ್ರುತಿಪ್ರಮಾಣವು ಇದೆ. ಏಷಃ = ಇಚ್ಛಾರೂಪಿಯಾದ ಪರಮಾತ್ಮನು, ಯಃ = ಯಾವ ಭಕ್ತನನ್ನು, ವೃಣುತೇ = ಪ್ರಸನ್ನನಾಗಿ ಅನುಗ್ರಹಿಸುತ್ತಾನೋ, ತೇನೈವ = ಅಂತಹ ಭಕ್ತನಿಂದಷ್ಟೇ, ಲಭ್ಯಃ = ಪರಮಾತ್ಮನು ದೊರೆಯುತ್ತಾನೆ. ಹೊರತು ಕರ್ಮದಿಂದಲ್ಲ.

ಯಾಜ್ಞವಲ್ಕ್ಯರು ಮೈತ್ರೇಯಿಗೆ ಹೀಗೆ ಹೇಳಿದ್ದಾರೆ. ಅರೇ = ಎಲೈ ಮೈತ್ರೇಯಿಯೇ!, ಆತ್ಮಾ = ಪರಮಾತ್ಮನು, ತ್ವಯಾ = ನಿನ್ನಿಂದ, ದ್ರಷ್ಟವ್ಯಃ = ಶಾಸ್ತ್ರದಿಂದ ತಿಳಿಯಲು ಅರ್ಹನು, ಶ್ರೋತವ್ಯಃ = (ಗುರೂಪದೇಶಮುಖದಿಂದ) ಕೇಳಲು ಅರ್ಹನು, ಮಂತವ್ಯಃ = ಯುಕ್ತನುಸಂಧಾನವೆಂಬ ಮನನದಿಂದ ತಿಳಿಯಲು ಅರ್ಹನು, ನಿದಿಧ್ಯಾಸಿತವ್ಯಃ = ಧ್ಯಾನಮಾಡಲು ಅರ್ಹನು.

ಇತ್ಯಾದಿ = ಇವೇಮೊದಲಾದಶ್ರುತಿಸ್ಮೃತಿಭ್ಯಃ = ಶ್ರುತಿಹಾಗೂಸ್ಮೃತಿಗಳಿಂದಲೂ ಭಗವಂತನ ಜ್ಞಾನದಿಂದ ಹುಟ್ಟಿದ ಪ್ರಸಾದವೇ ಮೋಕ್ಷಸಾಧನವೆಂದು ತಿಳಿಯುತ್ತದೆ.

## ಜಿಜ್ಞಾಸೆಯ ಫಲದಲ್ಲಿ ಪ್ರಮಾಣವಿಚಾರ

**तत्वप्रकाशिका – 'नारायणप्रसादमृते न मोक्षः' इत्येतत्कुतः? इति तत्राह – तमिति ।। अत्र ज्ञानान्मोक्षो नाम अनन्ययोपपत्त्या प्रसादादेवोक्तो भवति ।**

'ನಾರಾಯಣಪ್ರಸಾದವಿಲ್ಲದೇ ಮೋಕ್ಷವು ದೊರೆಯದು' ಈ ವಿಷಯದಲ್ಲಿ ಏನು ಪ್ರಮಾಣ ? ಎಂಬ ಪ್ರಶ್ನೆಗೆ 'ತಮೇವಂ' ಇತ್ಯಾದಿ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ. ಈ ಶ್ರುತಿಯಲ್ಲಿ 'ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆ' ಎಂದು ಹೇಳಲಾಗಿದೆ. ಮೋಕ್ಷ ಹರಿಪ್ರಸಾದವಿಲ್ಲದೆ ದೊರೆಯಲು ಸಾಧ್ಯವಿಲ್ಲ. (ಪ್ರಸಾದಂ ಅನ್ಯಥಾ ಮೋಕ್ಷೋ ನೋಪಪದ್ಯತೇ) ಎಂಬ ಅನ್ಯಥಾऽನುಪಪತ್ತಿಪ್ರಮಾಣದಿಂದ ಭಗವಂತನ ಪ್ರಸಾದದ ಮೂಲಕವೇ ಜ್ಞಾನದಿಂದ ಮೋಕ್ಷವು ದೊರೆಯುತ್ತದೆ' ಎಂದು ಹೇಳಿದಂತಾಯಿತು.

**तत्वप्रकाशिका – ज्ञानेन भगवत्प्रसाद इत्येतत् कुतः? इति तत्राह – प्रियो हीति ।। न केवलमर्थान् मोक्षस्य प्रसादैकसाध्यत्वं किन्तु श्रुतं चेति तां श्रुतिं चाह – यमिति ।। यमात्मा प्रसन्नः सन् वृणुते तेनैव प्राप्य इत्यर्थः ।**

'ಅಪರೋಕ್ಷ ಜ್ಞಾನದಿಂದ ಭಗವತ್ಪ್ರಸಾದವು ಹೇಗೆ ಉಂಟಾಗುತ್ತದೆ' ಎಂಬ ಪ್ರಶ್ನೆಗೆ 'ಪ್ರಿಯೋ ಹಿ' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ''ಅನ್ಯಥಾऽನುಪಪತ್ತಿಪ್ರಮಾಣದಿಂದಷ್ಟೇ ಮೋಕ್ಷವು ಕೇವಲ ಪ್ರಸಾದಸಾಧ್ಯ ಎಂಬುದು ನಿರ್ಣಯವಾಗಿಲ್ಲ ಸ್ಪಷ್ಟವಾಗಿ ಹೇಳುವ ಈ ವಿಷಯದಲ್ಲಿ ಶ್ರುತಿಗಳು ಪ್ರಮಾಣವಾಗಿವೆ'' ಎಂಬುದನ್ನು 'ಯಮೇವೈಷ ವೃಣುತೇ' ಇತ್ಯಾದಿಭಾಷ್ಯದಿಂದ ತೋರಿಸುತ್ತಿದ್ದಾರೆ. 'ಯಾವ ಪುರುಷನನ್ನು ಪರಮಾತ್ಮನು ಪ್ರಸನ್ನನಾಗಿ ಭಕ್ತನೆಂದು ಸ್ವೀಕಾರ ಮಾಡುತ್ತಾನೋ ಅಂತಹ ಭಕ್ತನಿಂದಲೇ ಪರಮಾತ್ಮನು ಲಭ್ಯ' ಎಂದು ಈ ಶ್ರುತಿಯ ಅರ್ಥ.

**तत्वप्रकाशिका – 'जिज्ञासा ज्ञानम्' इत्येतत् कुतः? इति तत्राह – आत्मेति ।। 'दर्शनार्थं श्रवणादिरूपा जिज्ञासा कार्या' इत्यर्थः ।**

ಜಿಜ್ಞಾಸೆಯಿಂದ ಬ್ರಹ್ಮಜ್ಞಾನವು ಹೇಗೆ ದೊರೆಯುತ್ತದೆ? ಎಂಬ ಪ್ರಶ್ನೆಗೆ 'ಆತ್ಮಾ ವಾ' ಎಂಬ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಶ್ರವಣಮನನಾದಿರೂಪವಾದ ಜಿಜ್ಞಾಸೆಯನ್ನು ಮಾಡಬೇಕು ಎಂದರ್ಥ.

**तत्वप्रकाशिका – नच श्रवणादेरसन्वाच्यता 'जिज्ञासितं सुसंपन्नम्' (भाग-१-५-३) इति विचारेऽपि तत्प्रयोगात्, इच्छाया अविधेयत्वाद्, 'भवति' इत्यादिकथनस्य वैयर्थ्यात्, सूत्रं च श्रुत्यनुसारीति ।**

'ಜ್ಞಾತುಂ ಇಚ್ಛಾ ಜಿಜ್ಞಾಸಾ' ಎಂದು ಜಿಜ್ಞಾಸಾಶಬ್ದದ ನಿಷ್ಪತ್ತಿ. ಇಲ್ಲಿ 'ಜ್ಞಾ'ಧಾತುವಿನ ಮೇಲೆ ಸನ್‌ಪ್ರತ್ಯಯ ಬಂದು ಜಿಜ್ಞಾಸಾ ಎಂದಾಗಿದೆ. ಭಾಗವತ ಪ್ರಥಮಸ್ಕಂದದಲ್ಲಿ 'ಜಿಜ್ಞಾಸಿತಂ ಸುಸಂಪನ್ನಮ್' ಎಂಬುದಾಗಿ 'ವಿಚಾರ' ಎಂಬರ್ಥದಲ್ಲಿ ಜಿಜ್ಞಾಸಾಶಬ್ದವನ್ನು ಪ್ರಯೋಗ ಮಾಡಲಾಗಿದೆ. ಆದ್ದರಿಂದ ಮನನರೂಪವಾದ ವಿಚಾರ ಎಂಬರ್ಥದಲ್ಲಿ ಜಿಜ್ಞಾಸಾ ಎಂಬ ಶಬ್ದವನ್ನು ಸೂತ್ರದಲ್ಲಿ ಹೇಳಿದ್ದಾರೆ. ಮನನಕ್ಕೆ ಅಂಗವಾಗಿ ಶ್ರವಣ ಮತ್ತು

ಮನನದ ಫಲವಾದ ಧ್ಯಾನವನ್ನೂ ಕೂಡ ಜಿಜ್ಞಾಸಾಶಬ್ದದಿಂದ ಸೂತ್ರದಲ್ಲಿ ಲಾಕ್ಷಣಿಕವಾಗಿ ವಿವಕ್ಷಿಸಲಾಗಿದೆ.

'ಜ್ಞಾನದ ಇಚ್ಛೆ' ಎಂಬರ್ಥದಲ್ಲಿ ಜಿಜ್ಞಾಸಾ ಶಬ್ದವನ್ನು ವಿವಕ್ಷಿಸಿದಾಗ ಆದರಲ್ಲಿ ಕರ್ತವ್ಯತ್ವವನ್ನು ವಿಧಾನ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇಚ್ಛೆ ಸಹಜವಾಗಿ ಬರುತ್ತದೆ ಹೊರತು, ವಿಧಾನ ಮಾಡಿದರೆ ಬರುವುದಿಲ್ಲ.

'ಕರ್ತವ್ಯಾ' ಎಂಬ ಪದದ ಬದಲು 'ಭವತಿ' ಎಂಬ ಧಾತುವನ್ನೇ ಅಧ್ಯಾಹಾರ ಮಾಡಿಕೊಳ್ಳಬಹುದು. ಆದರೆ ಅದು ವ್ಯರ್ಥವಾದ್ದರಿಂದ ಮತ್ತು ಸೂತ್ರವು ಶ್ರುತಿಗೆ ಅನುಸಾರಿಯಾಗಬೇಕಾದ್ದರಿಂದ 'ಕರ್ತವ್ಯಾ' ಎಂಬ ಪದವನ್ನೇ ಅಧ್ಯಾಹಾರ ಮಾಡಬೇಕು.

**ತತ್ವಪ್ರಕಾಶಿಕಾ – ಅಸ್ತು ಮೋಕ್ಷೋ ಭಗವತ್ಪ್ರಸಾದಸಾಧ್ಯಃ ತದರ್ಥೆ ನ ಜ್ಞಾನಮಪೇಕ್ಷಿತಮ್ । 'ತತ್ಕರ್ಮ ಹರಿತೋಷಂ ಯತ್' (ಭಾಗ - ೪,೨೯,೫೩)। 'ಯ ಇಮಂ ಪರಮಂ ಗುಹ್ಯಮ್' (ಭ.ಗೀ-೧೮-೬೮) ಇತ್ಯಾದೇಃ ಕರ್ಮಾದಿನಾऽಪಿ ಭಗವತ್ಪ್ರಸಾದಸಿದ್ಧೇಃ ।**

ಮೋಕ್ಷವು ಭಗವಂತನ ಪ್ರಸಾದದಿಂದ ದೊರೆಯುತ್ತದೆಂದು ಒಪ್ಪಿಕೊಳ್ಳೋಣ. ಆದರೆ ಭಗವಂತನ ಪ್ರಸಾದಕ್ಕಾಗಿ ಜ್ಞಾನವು ಬೇಕಾಗಿಲ್ಲ. 'ತತ್ಕರ್ಮ ಹರಿತೋಷಂ ಯತ್' (ಪರಮಾತ್ಮನಿಗೆ ಸಂತೋಷದಾಯಕವಾದದ್ದೇ ನಿಜವಾದ ಕರ್ಮ) ಭಗವದ್ಗೀತೆಯಲ್ಲಿ 'ಯ ಇಮಂ ಪರಮಂ ಗುಹ್ಯಮ್' 'ಗುಹ್ಯವಾದ ತತ್ವವನ್ನು ಯಾರು ನನ್ನ ಭಕ್ತರಲ್ಲಿ ಪ್ರವಚನ ಮಾಡುವನೋ ಅವನು ನನಗೆ ಬಲು ಪ್ರಿಯ' ಇತ್ಯಾದಿ ಪ್ರಮಾಣಗಳಂತೆ ಕರ್ಮಾದಿಗಳಿಂದಲೂ ಭಗವಂತನ ಪ್ರಸಾದವು ದೊರೆಯುತ್ತದೆ.

**ತತ್ವಪ್ರಕಾಶಿಕಾ – ಯದ್ಯಪಿ ಮೋಕ್ಷಸ್ಯ ಕರ್ಮಾದಿಸಾಧ್ಯತ್ವಂ ಶ್ರುತ್ಯಾದಿಸಿದ್ಧಮ್, ತಥಾಪಿ 'ತಮೇವಂ ವಿದ್ವಾನ್' (ತೈ-ಆ-೩-೧-೩) 'ಯಮೇವೈಷ ವೃಣುತೇ' (ಕ-ತ-೨-೨೨) ಇತ್ಯಾದಾವನ್ಯ ನಿಷೇಧಾಚ್ಚಶ್ಚಾऽಭಾವಃ ।**

ವಸ್ತುತಃ ಮೋಕ್ಷವು ಕರ್ಮಾದಿಗಳಿಂದ ದೊರೆಯುತ್ತದೆಂದು ಶ್ರುತ್ಯಾದಿಗಳಲ್ಲಿ ಹೇಳಲ್ಪಟ್ಟಿದೆ. ಆದರೂ ಸಹ 'ತಮೇವಂ ವಿದ್ವಾನ್' 'ಯಮೇವೈಷ ವೃಣುತೇ' ಇತ್ಯಾದಿ ಶ್ರುತಿಗಳಲ್ಲಿ ಏವಕಾರದಿಂದ ಅಥವಾ ಅವಧಾರಣದಿಂದ ಬೇರೆ ಸಾಧನೆಗಳನ್ನು ನಿಷೇಧ ಮಾಡಲಾಗಿದೆ. ಆದ್ದರಿಂದ ಈ ವಿಷಯದಲ್ಲಿ ಶಂಕಿಸಬಾರದು.

## ವಿಷ್ಣುಪ್ರಸಾದವೇ ಜಿಜ್ಞಾಸೆಯ ಮುಖ್ಯಪ್ರಯೋಜನ

**ಭಾವದೀಪಃ – ತತ್ರ ಕಯಾ ಕಿಂ ಸಿದ್ಧಮ್? ಇತ್ಯಪ್ರತೀತೇರಾಹ – ನಾರಾಯಣೇತಿ ।। ಅನನ್ಯಥೋಪಪತ್ಯೇತಿ ।। ಅನನ್ಯಥಾ ಪ್ರಸಾದಾತ್ಯಾಗೇನ ಜ್ಞಾನಸ್ಯ ಮೋಕ್ಷಜನಕತ್ವೋಪಪತ್ತ್ಯಾ ಇತ್ಯರ್ಥಃ ।**

ಯಾವ ಶ್ರುತಿಯಿಂದ ಏನು ಸಿದ್ಧವಾಯಿತು? ಎಂದು ತಿಳಿಯದ ಕಾರಣ ನಾರಾಯಣಪ್ರಸಾದಂ ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ. 'ಅನನ್ಯಥೋಪಪತ್ಯಾ' ಎಂಬ ಟೀಕೆಗೆ 'ಪ್ರಸಾದವನ್ನು ಬಿಡದೆ ಜ್ಞಾನವು ಮೋಕ್ಷಕ್ಕೆ ಜನಕವಾಗಿದೆ ಎಂಬ ಯುಕ್ತಿಯಿಂದ' ಎಂದರ್ಥ.

## ಪ್ರಸಾದವಿಲ್ಲದೇ ಮೋಕ್ಷವಾಗದು

**ಭಾವದೀಪಃ –**

**'ಅತೋ ಯಥಾರ್ಥಬನ್ಧಸ್ಯ ವಿನಾ ವಿಷ್ಣುಪ್ರಸಾದತಃ ।**
**ಅನಿವೃತ್ತೇಸ್ತದರ್ಥಂ ಹಿ ಜಿಜ್ಞಾಸಾऽತ್ರ ವಿಧೀಯತೇ ।।'**

**ಇತ್ಯನುಭಾಷ್ಯೋಕ್ತರೀತ್ಯಾ ಅನಾದಿಸತ್ಯಬನ್ಧನಿವೃತ್ತಿರೂಪಾಮೃತತ್ವಾಖ್ಯಸ್ಯ ಮೋಕ್ಷಸ್ಯ ಪ್ರಸಾದಂ ವಿನಾ ಜ್ಞಾನಮಾತ್ರೇಣಾಲಭ್ಯತ್ವಾತ್ ಪ್ರಸಾದದ್ವಾರೈವ ಜ್ಞಾನಸ್ಯ ಮೋಕ್ಷಜನಕೋಪಪತ್ತೇರಿತ್ಯರ್ಥಃ ।**

ಅತೋ ಯಥಾರ್ಥಬಂಧಸ್ಯ ವಿನಾ ವಿಷ್ಣುಪ್ರಸಾದತಃ।
ಅನಿವೃತ್ತೇಸ್ತದರ್ಥಂ ಹಿ ಜಿಜ್ಞಾಸಾऽತ್ರ ವಿಧೀಯತೇ ।।'

ಯಥಾರ್ಥವಾದ ಸಂಸಾರಬಂಧವು ವಿಷ್ಣುಪ್ರಸಾದವಿಲ್ಲದೇ ನಿವೃತ್ತಿಯಾಗುವುದಿಲ್ಲ. ವಿಷ್ಣುಪ್ರಸಾದಕ್ಕೋಸ್ಕರ ಜಿಜ್ಞಾಸೆಯನ್ನು ಸೂತ್ರವು ವಿವರಿಸುತ್ತಿದೆ.

ಈ ಅನುವ್ಯಾಖ್ಯಾನದ ಮಾತಿನಂತೆ 'ಅಮೃತಮಯವಾದ ಮೋಕ್ಷವು ಪ್ರಸಾದವಿಲ್ಲದೆ ಕೇವಲ ಜ್ಞಾನದಿಂದ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಪ್ರಸಾದದ ಮೂಲಕವೇ ಜ್ಞಾನವು ಮೋಕ್ಷಕ್ಕೆ ಜನಕವೆಂದು ಒಪ್ಪಬೇಕು' ಎಂದು 'ಅನನ್ಯಥೋಪಪತ್ಯಾ' ಎಂಬ ಮಾತಿನ ಅರ್ಥ.

## ಸುಧೆಯ ಪ್ರಕಾರ ಅನನ್ಯೋಥೋಪಪತ್ತಿ

**ಭಾವದೀಪಃ – ಯದ್ವಾ, 'ತಂ ವಿದ್ವಾನೇವ ಚಾಮೃತಃ' ಇತ್ಯನುಭಾಷ್ಯವ್ಯಾಖ್ಯಾನಾವಸರೇ** ಸುಧಾಯಾಂ - ಯದ್ಯಪಿ ತಮೇವಮಿತಿ ಪರಮಪುರುಷಪ್ರಸಾದೋ ನ ಶ್ರೂಯತೇ । ತಥಾಪಿ 'ಯಮೇವೈಷ' ಇತಿ ವಾಕ್ಯಾನುರೋಧೇನ ತತ್ರಾಪ್ಯನುಸನ್ಧೇಯಃ । ನಿಮಿತ್ತೇನ ನೈಮಿತ್ತಿಕೋಪಲಕ್ಷಣಾತ್ । ಮುಮುಕ್ಷುಸಮ್ಬನ್ಧಿ ಸಾಧನಾವಧಾರಣಾಯ ನ ಸಾಕ್ಷಾತ್ - ಇತ್ಯುಕ್ತದಿಶಾ ಅನನ್ಯಥೋಪಪತ್ತ್ಯಾ ಇತ್ಯರ್ಥಃ ।

ಅಥವಾ, 'ತಂ ವಿದ್ವಾನೇವ ಚಾಮೃತಃ' ಎಂಬ ಅನುವ್ಯಾಖ್ಯಾನಕ್ಕೆ ವ್ಯಾಖ್ಯಾನಿಸುವಾಗ ಸುಧೆಯಲ್ಲಿ ಹೀಗೆ ಹೇಳಿದ್ದಾರೆ. ''ವಸ್ತುತಸ್ತು ತಮೇವಂ'' ಎಂಬ ಶ್ರುತಿಯಲ್ಲಿ ಪರಮಪುರುಷನಾದ ಭಗವಂತನ ಪ್ರಸಾದವು ಕೇಳಿಸುತ್ತಿಲ್ಲ. ಆದರೂ ಸಹ 'ಯಮೇವೈಷ' ಎಂಬ ವಾಕ್ಯವನ್ನು ಅನುಸರಿಸಿ 'ತಮೇವಂ' ಎಂಬ ಶ್ರುತಿಗೆ ಅರ್ಥೈಸಬೇಕು. ನಿಮಿತ್ತದಿಂದ ನೈಮಿತ್ತಿಕವನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು. ಜ್ಞಾನವು ಪ್ರಸಾದದ ಮೂಲಕವೇ ಮೋಕ್ಷಕ್ಕೆ ಕಾರಣವಾಗುತ್ತದೆ ಎಂದರ್ಥ. ಮುಮುಕ್ಷುವಿನ ಸಾಧನೆಯನ್ನು ವಿಧಿಸುವುದಕ್ಕಾಗಿ ಪ್ರಸಾದವನ್ನು ಹೇಳದೇ ಜ್ಞಾನವನ್ನಷ್ಟೇ 'ತಮೇವಂ' ಎಂಬ ಶ್ರುತಿಯಲ್ಲಿ ಹೇಳಿದ್ದಾರೆ. ಹೀಗೆ ಸುಧೆಯ ಪ್ರಕಾರವೂ ಅನನ್ಯಥೋಪಪತ್ತಿಯನ್ನು ತಿಳಿಯಬೇಕು.

## ಪ್ರಸಾದಕ್ಕೆ ಜ್ಞಾನ ಬೇಕು

**ಭಾವದೀಪಃ – ತತ್ರಾಹೇತಿ ।। 'ಸ ಚ ಜ್ಞಾನೀ ಮಮ ಪ್ರಿಯಃ ಪ್ರೀತಿವಿಷಯಃ' ಇತ್ಯುಕ್ತ್ಯಾ** 'ಪ್ರಸಾದಹೇತುತಾ ಜ್ಞಾನಸ್ಯೋಕ್ತಾ' ಇತಿ ಭಾವಃ ।

'ತತ್ರಾಹ' ಎಂಬ ವಾಕ್ಯದ ಅಭಿಪ್ರಾಯ ಹೀಗಿದೆ -- 'ಪ್ರಿಯೋ ಹಿ' ಎಂಬ ಸ್ಮೃತಿಯಲ್ಲಿ ಜ್ಞಾನಿಯಾದವನು ನನಗೆ ಪ್ರಿಯನೆಂದು ಭಗವಂತನು ಹೇಳಿದ್ದಾನೆ. ಇದರಿಂದ ಜ್ಞಾನವು ಪ್ರಸಾದಕ್ಕೆ ಕಾರಣವೆಂದು ತಿಳಿಯುತ್ತದೆ'' ಎಂದು.

## ಜ್ಞಾನಿಗಳಿಗೆ ಮಾತ್ರ ದೊರೆಯುವ ಭಗವಂತ

**ಭಾವದೀಪಃ – ಅರ್ಥಾದಿತಿ ।। 'ಅನ್ಯಥೋಪಪತ್ತ್ಯೇತ್ಯುಕ್ತದಿಶಾ' ಇತಿ ಭಾವಃ ।** ಪ್ರಸನ್ನ ಇತಿ ।। ವೃಣುತೇ ಅಙ್ಗೀಕರೋತೀತ್ಯುಕ್ತ್ಯಾ ಪ್ರಸಾದೋ ಲಭ್ಯತ ಇತಿ ಭಾವಃ ।

**प्राप्य इति ।। पूर्वं लभ्यत्वं प्रसन्नत्वम् इत्युपेत्यार्थ उक्तः । प्राप्तेः प्रसादैक-साध्यत्वस्फोरणाय एवकारस्य 'तेनैव' इत्यन्वयमाह – तेनैव प्राप्य इति ।। 'नतु कर्मठेन' इत्यर्थः ।**

ಅರ್ಥಾತ್ = ಹಿಂದೆ ಹೇಳಿದಂತೆ ಅನನ್ಯಥೋಪಪತ್ತಿಯಿಂದ. ಪ್ರಸನ್ನಃ - ಶ್ರುತಿಯಲ್ಲಿ ವೃಣುತೇ ಎಂದು ಹೇಳಿದ್ದರಿಂದ ಪ್ರಸಾದವು ಆವಶ್ಯಕವೆಂದು ತಿಳಿಯುತ್ತದೆ. ವೃಣುತೇ = ಅಂಗೀಕರಿಸುತ್ತಾನೆ, ಪ್ರಾಪ್ಯಃ = ಹೊಂದಲ್ಪಡುತ್ತಾನೆ. ಭಗವಂತನ ಪ್ರಸಾದವಿದ್ದರಷ್ಟೇ ಹೊಂದಲು ಸಾಧ್ಯವೆಂದು ಅಭಿಪ್ರಾಯ. ಇದನ್ನು ತಿಳಿಸುವುದಕ್ಕಾಗಿಯೇ 'ತೇನೈವ' ಎಂಬಲ್ಲಿ ಏವಕಾರವನ್ನು ಹೇಳಿದ್ದಾರೆ. 'ಜ್ಞಾನಿಯಿಂದಷ್ಟೇ ಭಗವಂತನು ದೊರೆಯುತ್ತಾನೆ ಹೊರತು ಕರ್ಮಠನಿಂದಲ್ಲ' ಎಂದು ಅಭಿಪ್ರಾಯ.

## ಸಾಕ್ಷಾತ್ಕಾರಕ್ಕಾಗಿ ಶ್ರವಣಾದಿಗಳು

**भावदीपः – ज्ञानपादे 'ऐहिकमप्रस्तुतप्रतिबन्धे तद्दर्शनात्' इत्यत्र 'दर्शनार्थं श्रवणादि विधीयते' इति भाष्यं हृदि कृत्वाह – दर्शनार्थमिति ।।**

ಜ್ಞಾನಪಾದದಲ್ಲಿ 'ಐಹಿಕಮಪ್ರಸ್ತುತಪ್ರತಿಬಂಧೇ ತದ್ದರ್ಶನಾತ್' (೩-೪-೫೦) ಅಪ್ರಸ್ತುತಪ್ರತಿಬಂಧೇ = ಪ್ರಾರಬ್ಧಕರ್ಮವೇ ಇಲ್ಲದಿದ್ದರೆ, ಐಹಿಕಂ = ಈ ಜನ್ಮದಲ್ಲಿ ಅಪರೋಕ್ಷ ಜ್ಞಾನವು ದೊರೆಯುವುದು. ಏಕೆಂದರೆ ತದ್ದರ್ಶನಾತ್ = ಶ್ರುತಿಯಲ್ಲಿ ಹಾಗೇ ಹೇಳಿರುವುದರಿಂದ ಹೀಗೆ ಸೂತ್ರವ್ಯಾಖ್ಯಾನ ಮಾಡುವಾಗ ಇರುವ 'ಭಗವಂತನ ಸಾಕ್ಷಾತ್ಕಾರಕ್ಕೋಸ್ಕರ ಶ್ರವಣಾದಿಗಳು ವಿಹಿತವಾಗಿವೆ' ಎಂಬ ಭಾಷ್ಯದ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು 'ದರ್ಶನಾರ್ಥ೦' ಇತ್ಯಾದಿ ವಾಕ್ಯವನ್ನು ಹೇಳಿದ್ದಾರೆ.

## 'ಬ್ರಹ್ಮಜಿಜ್ಞಾಸಾ' ಎಂಬುದರ ಅರ್ಥ

**भावदीपः – एतेन 'ब्रह्मजिज्ञासा' इत्यत्र ब्रह्मज्ञानाय वेदार्थविषयश्रवण मननिदिध्यासनरूपा जिज्ञासा कार्या इति वचनव्यक्तिः सूचिता । उक्तं च 'जिज्ञासोऽयं विधीयते' इत्यत्र सुधायां - 'ज्ञानविधौ हि ब्रह्मणोऽप्राधान्यं स्यात् । ब्रह्मज्ञानोद्देशेन जिज्ञासाविधानात् कुतोऽप्राधान्यम्' इति ।**

ಹೀಗೆ ಹೇಳಿದ್ದರಿಂದ 'ಬ್ರಹ್ಮಜಿಜ್ಞಾಸಾ' ಎಂಬ ಸೂತ್ರದಲ್ಲಿ ಬ್ರಹ್ಮಜ್ಞಾನಕ್ಕೋಸ್ಕರ ವೇದಾರ್ಥವಿಷಯಕವಾದ ಶ್ರವಣ, ಮನನ, ನಿದಿಧ್ಯಾಸನರೂಪವಾದ ಜಿಜ್ಞಾಸೆಯನ್ನು ಆಚರಿಸಬೇಕು ಎಂದು ಸೂಚಿತವಾಯಿತು. 'ಜಿಜ್ಞಾಸೋಽಯಂ ವಿಧೀಯತೇ' ಎಂಬ ಸುಧೆಯಲ್ಲಿ ಇದನ್ನು ಹೇಳಿದ್ದಾರೆ -- ಜ್ಞಾನವನ್ನು ವಿಧಾನ ಮಾಡಿದರೆ ಬ್ರಹ್ಮನು ಅಪ್ರಧಾನನಾಗುತ್ತಾನೆ.' ಎಂದು.

## ಬ್ರಹ್ಮವಿಚಾರವನ್ನು ವಿಧಾನ ಮಾಡಿದಾಗ

**ಭಾವದೀಪಃ** – उक्तं च न्यायामृते तृतीयपरिच्छेदे 'ब्रह्मज्ञानाय ब्रह्मविचारः कर्तव्य इति न वचनव्यक्तिः । तथात्वे ब्रह्मणो विधेयविशेषणतापातात् । किन्तु ब्रह्मज्ञानाय वेदविचारः कर्तव्य इत्येव वचनव्यक्तिः । यद्यपि ब्रह्मपरविचार एव ब्रह्मविचारस्तथापि न ब्रह्मविचाररूपेण विधानम् । किन्तु वेदविचाररूपेण । तथा च श्रुतिः - 'तस्मादेनं सर्ववेदानधीत्य विचार्य च ज्ञातुमिच्छेदिति' इत्यादि । व्यक्तं चेदं सर्ववेदान्तनये भाष्यादौ।

ಇದನ್ನು ನ್ಯಾಯಾಮೃತದ ಮೂರನೆಯ ಪರಿಚ್ಛೇದದಲ್ಲಿ ಹೇಳಿದ್ದಾರೆ - 'ಬ್ರಹ್ಮಜ್ಞಾನಾಯ ಬ್ರಹ್ಮವಿಚಾರಃ ಕರ್ತವ್ಯಃ' ಎಂದು ಬ್ರಹ್ಮಜ್ಞಾನವನ್ನು ಉದ್ದೇಶಿಸಿ ಬ್ರಹ್ಮವಿಚಾರವನ್ನು ವಿಧಾನ ಮಾಡಿದರೆ ಬ್ರಹ್ಮನು ವಿಧೇಯವಿಶೇಷಣನಾಗುತ್ತಾನೆ. ಆದ್ದರಿಂದ 'ಬ್ರಹ್ಮಜ್ಞಾನಾಯ ವೇದವಿಚಾರಃ ಕರ್ತವ್ಯಃ' ಎಂದೇ ಹೇಳಬೇಕು. ವಸ್ತುತಃ ಇಲ್ಲಿಯೂ ಬ್ರಹ್ಮಪರವಾದ ವೇದವಿಚಾರವೇ ಬ್ರಹ್ಮವಿಚಾರವೆನಿಸಿದೆ. ಆದರೂ ಸಹ ಬ್ರಹ್ಮವಿಚಾರದ ಮೂಲಕ ಬ್ರಹ್ಮವಿಚಾರವನ್ನು ವಿಧಿಸುತ್ತಿಲ್ಲ ಹೊರತಾಗಿ ವೇದವಿಚಾರರೂಪವಾಗಿ ಬ್ರಹ್ಮವಿಚಾರವನ್ನು ವಿಧಿಸಲಾಗಿದೆ. ಆದ್ದರಿಂದಲೇ ಶ್ರುತಿಯು ''ತಸ್ಮಾದೇನಂ ಸರ್ವವೇದಾನಧೀತ್ಯ ವಿಚಾರ್ಯ ಚ ಜ್ಞಾತುಮಿಚ್ಛೇದಿತಿ' ಇತ್ಯಾದಿಯಾಗಿ ಹೇಳುತ್ತಿದೆ. ಇದನ್ನೇ ಸರ್ವವೇದಾಂತಾಧಿಕರಣದ ಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ.

## ಶ್ರವಣಮನನನಿದಿಧ್ಯಾಸನಗಳ ಪರಿಚಯ

**ಭಾವದೀಪಃ** – **श्रवणं नाम** उपनिषद्भाष्यादिरूपोपदेशजन्यवाक्यार्थज्ञानम्। **मननं** श्रुतवाक्यार्थे युक्त्यनुसन्धानम् । **निदिध्यासनं** तु निरन्तरतद्विषय-चिन्तनम् ।

'श्रवणं शब्दजं ज्ञानमुपपत्त्यनुचिन्तनम् ।
मतिर्निरन्तरा चिन्ता निदिध्यासनमुच्यते' इत्युक्तेः ।

ಶ್ರವಣಂ = ಉಪನಿಷದ್ಭಾಷ್ಯಾದಿರೂಪವಾದ ಉಪದೇಶದಿಂದ ಹುಟ್ಟಿದ ವಾಕ್ಯಾರ್ಥಜ್ಞಾನ; ಮನನಂ = ಶ್ರುತವಾದ ವಾಕ್ಯಾರ್ಥದಲ್ಲಿ ಬುದ್ಧಿಯ ಅನುಸಂಧಾನ- ರೂಪವಾದದ್ದು. ನಿದಿಧ್ಯಾಸನ = ನಿರಂತರ ಭಗವದ್ವಿಷಯಕವಾದ ಚಿಂತನೆ;

ಶ್ರವಣಂ ಶಬ್ದಜಂ ಜ್ಞಾನಮುಪಪತ್ತ್ಯನುಚಿಂತನಮ್ ।
ಮತಿರ್ನಿರಂತರಾ ಚಿಂತಾ ನಿದಿಧ್ಯಾಸನಮುಚ್ಯತೇ ॥

ಶಬ್ದದಿಂದ ಹುಟ್ಟಿದ ಜ್ಞಾನವೇ ಶ್ರವಣ; ಉಪಪತ್ತಿಯಿಂದ ವಿಮರ್ಶಿಸುವಿಕೆಯೇ ಮನನ; ನಿರಂತರ ಚಿಂತನೆಯೇ 'ನಿದಿಧ್ಯಾಸನ' ಎಂದು ಹೇಳಿದ್ದಾರೆ.

## 'ಮನನ' ಮಾಡಬೇಕೆಂದು ಹೇಳಿದರೆ ಸಾಕು

**ಭಾವದೀಪಃ** – अत्र मननमात्रस्यैव न्यायनिबन्धनरूपशास्त्रारम्भोपयोगितया कर्तव्यत्वे वाच्येऽपि 'श्रोतव्यो मन्तव्यो निदिध्यासितव्यः' इति भाष्योक्तश्रुतिमनुरुध्य त्रितयकर्तव्यतयोक्तेरनेकधा तात्पर्यं चन्द्रिकायां व्यक्तम् । जिज्ञासेति ।।

ವಸ್ತುತಃ ಕೇವಲ ಮನನವು ನ್ಯಾಯನಿಬಂಧನರೂಪವಾದ ಶಾಸ್ತ್ರದ ಆರಂಭಕ್ಕೆ ಉಪಯೋಗಿಯಾಗಿದೆ. ಆದ್ದರಿಂದ ಮನನವನ್ನಷ್ಟೇ ಕರ್ತವ್ಯವೆಂದು ಹೇಳಿದರೆ ಸಾಕು. ಆದರೂ ಸಹ ಭಾಷ್ಯದಲ್ಲಿ ಉದಾಹರಿಸಿದ 'ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ' ಎಂಬ ಶ್ರುತಿಯನ್ನು ಅನುಸರಿಸಿ ಶ್ರವಣಾದಿಗಳ ಕರ್ತವ್ಯವನ್ನು ವಿಧಿಸಿದ್ದಾರೆ. ಶ್ರವಣಾದಿಗಳ ಕರ್ತವ್ಯತ್ವದ ವಿಚಾರದಲ್ಲಿ ಅನೇಕ ಬಗೆಯ ಅಭಿಪ್ರಾಯಗಳನ್ನು ತಾತ್ಪರ್ಯಚಂದ್ರಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

## ಪುನಃ ಪುನಃ ಶ್ರವಣಾದಿಗಳೇಕೆ ?

**ಭಾವದೀಪಃ** – यद्यपि श्रुतौ 'तस्मा एतत् प्रोवाच । अन्नं प्राणम्' इत्यादिना ब्रह्मरूपाणि श्रुतवते 'तद् विजिज्ञासस्व' इत्यालोचनमेव

विधीयते । तथैव श्रुतावग्रे प्रतीतेः । तथापि श्रुतेऽपि ब्रह्मणि पुनःपुनः श्रवणादिकार्यमिति भावेन 'तद् विजिज्ञासस्व' इत्युक्तिरिति भावः । व्यक्तमेतदग्रे चतुर्थाध्याये 'आवृत्तिरसकृदुपदेशात्' 'लिङ्गाच्च' इत्यत्र ।

ವಸ್ತುತಃ ಶ್ರುತಿಯಲ್ಲಿ 'ತಸ್ಮಾ ಏತತ್ ಪ್ರೋವಾಚ । ಅನ್ನಂ ಪ್ರಾಣಮ್' ಇತ್ಯಾದಿಯಾಗಿ ಬ್ರಹ್ಮನ ರೂಪಗಳನ್ನು ಕೇಳಿ ತಿಳಿದವನಿಗೆ 'ತದ್ ವಿಜಿಜ್ಞಾಸಸ್ವ' ಎಂದು ಆಲೋಚನೆಯನ್ನಷ್ಟೇ ವಿಧಿಸಲಾಗಿದೆ. ಆದರೂ ಸಹ ಕೇಳಿ ತಿಳಿಯಲ್ಪಟ್ಟ ಬ್ರಹ್ಮನ ವಿಷಯದಲ್ಲಿ ಪುನಃಪುನಃ ಶ್ರವಣಮನನಾದಿಗಳನ್ನು ಮಾಡಬೇಕೆಂಬ ಅಭಿಪ್ರಾಯದಿಂದ 'ತದ್ ವಿಜಿಜ್ಞಾಸಸ್ವ' ಎಂಬ ಮಾತು ಹೊರಟಿದೆಯೆಂದು ಅಭಿಪ್ರಾಯ. ಈ ವಿಚಾರವು 'ಆವೃತ್ತಿರಸಕೃದುಪದೇಶಾತ್' (೪-೧-೧) 'ಲಿಂಗಾಚ್ಚ' (೪-೧-೨) ಎಂಬ ನಾಲ್ಕನೆಯ ಅಧ್ಯಾಯದ ಸೂತ್ರದಲ್ಲಿ ಸ್ಪಷ್ಟವಾಗುತ್ತದೆ.

ವಿವರಣೆ - 'ಆವೃತ್ತಿರಸಕೃದುಪದೇಶಾತ್' (೪-೧-೧)

ಆವೃತ್ತಿಃ = ಬ್ರಹ್ಮಜ್ಞಾನಕ್ಕೋಸ್ಕರ ಶ್ರವಣ, ಮನನಾದಿಗಳನ್ನು ಮತ್ತೆ ಮತ್ತೆ ಮಾಡಬೇಕು. ಈ ವಿಷಯದಲ್ಲಿ ಏನು ಪ್ರಮಾಣ ಎಂದರೆ, ಅಸಕೃದುಪಶೇತ್ = ಶ್ವೇತಕೇತುವನ್ನು ಕುರಿತು ಉದ್ದಾಲಕರು ಪುನಃ ಪುನಃ ಉಪದೇಶ ಮಾಡಿರುವುದರಿಂದ.

'ಲಿಂಗಾಚ್ಚ' (೪-೧-೨)

ಲಿಂಗಾತ್ = ಭೃಗುವು ಮಾಡಿರುವ ಶ್ರವಣಾದಿ ಆವರ್ತನರೂಪಲಿಂಗದಿಂದಲೂ ಸಹ ಶ್ರವಣಾದಿಗಳನ್ನು ಪುನಃ ಪುನಃ ಮಾಡಬೇಕೆಂದು ಸಿದ್ಧವಾಗುತ್ತದೆ. ಚ = ಕೇವಲ ಉಪದೇಶರೂಪವಾದ ಗುರುವ್ಯಾಪಾರವೆಂಬ ಹೇತುವಿನಿಂದ ಮಾತ್ರ ಆವೃತ್ತಿಯ ಕರ್ತವ್ಯತ್ವವು ಸಿದ್ಧವಾಗಿರುವುದಿಲ್ಲ. ಆವರ್ತನ ರಹಿತವಾದ ಶಿಷ್ಯವ್ಯಾಪಾರರೂಪ ಹೇತುವಿನಿಂದಲೂ ಆವೃತ್ತಿಯ ಕರ್ತವ್ಯತ್ವವು ಸಿದ್ಧವಾಗಿದೆ.

'ತಸ್ಮಾ ಏತತ್ ಪ್ರೋವಾಚ । ಅನ್ನಂ ಪ್ರಾಣಮ್ ಚಕ್ಷುಃ ಶ್ರೋತ್ರಂ ಮನೋ ವಾಚಮ್' ಈ ಶ್ರುತಿಯಲ್ಲಿ ಅನ್ನಾದಿಗಳ ಬಗ್ಗೆ ಭೃಗುವು ಪುನಃ ಪುನಃ ವರುಣನ ಬಳಿ ಪ್ರಶ್ನಿಸಿದ್ದಾನೆ. ವರುಣನು ಅನೇಕ ಬಗೆಯಲ್ಲಿ ಉತ್ತರಿಸಿದ್ದಾನೆ. ಇದರ ಮನನದಿಂದ ಭೃಗುವಿಗೆ

ಅಪರೋಕ್ಷಜ್ಞಾನವಾಗುತ್ತದೆ. ಆದ್ದರಿಂದ ಶ್ರವಣಾದಿಗಳ ಆವೃತ್ತಿಯನ್ನು ಮಾಡಬೇಕೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಶ್ರವಣಾದಿಗಳಿಗೆ ಜ್ಞಾನಸಾಧನತ್ವವು ಸಿದ್ಧವಾಯಿತು.

## ಜಿಜ್ಞಾಸಾಪದವು ಏನನ್ನು ಹೇಳುತ್ತದೆ?

**ಭಾವದೀಪಃ – असन्वाच्यतेति ।। धातोः कर्मणः समानकर्तृकात् इच्छायां वेति इच्छार्थकसन्प्रत्ययान्तजिज्ञासापदवाच्यता' इत्यर्थः । जिज्ञासितमिति।।**

ಅಸನ್ವಾಚ್ಯತಾ = ('ಧಾತೋಃ ಕರ್ಮಣಃ ಸಮಾನಕರ್ತೃಕಾದಿಚ್ಛಾಯಾಂ ವಾ' ಎಂಬ ಸೂತ್ರದಿಂದ ಇಚ್ಛೆ ಎಂಬರ್ಥದಲ್ಲಿ ಸನ್ಪ್ರತ್ಯಯವನ್ನು ವಿಧಿಸಲಾಗಿದೆ.) ಸನ್ ಪ್ರತ್ಯಯಾಂತವಾದ ಜಿಜ್ಞಾಸಾಪದದಿಂದ ಪ್ರತಿಪಾದ್ಯವಾಗುವಿಕೆ.

## 'ಜಿಜ್ಞಾಸಾ' ಎಂಬ ಪದ ವಿಚಾರವನ್ನು ಹೇಳುತ್ತದೆ

**ಭಾವದೀಪಃ – 'जिज्ञासितं सुसम्पन्नमपि ते महदद्भुतम्' इति प्रथमस्कन्धे। सुसम्पन्नं परिपूर्णं महदुत्तमं आश्चर्यतमं च ब्रह्म ते जिज्ञासितं विचारितं खल्विति नारदेन वेदव्यासं प्रत्युक्ते वाक्ये विचारेऽपि प्रयोगात् तस्य तत्र मीमांसापदवद्रूढिरित्यर्थः ।**

'ಜಿಜ್ಞಾಸಿತಂ ಸುಸಂಪನ್ನಮ್ ಅಪಿ ತೇ ಮಹದದ್ಭುತಮ್' (ಪರಿಪೂರ್ಣನಾದ, ಶ್ರೇಷ್ಠನಾದ, ಆಶ್ಚರ್ಯತಮನಾದ ಬ್ರಹ್ಮನು ನಿನ್ನಿಂದ ವಿಚಾರ ಮಾಡಲ್ಪಟ್ಟಿದ್ದಾನಷ್ಟೆ) ಎಂದು ಭಾಗವತ ಪ್ರಥಮಸ್ಕಂಧದ ನಾರದ-ವೇದವ್ಯಾಸಸಂವಾದದ ವಾಕ್ಯದಲ್ಲಿ ಜಿಜ್ಞಾಸಾಶಬ್ದವನ್ನು ವಿಚಾರ ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ. ಆದ್ದರಿಂದ ಮೀಮಾಂಸಾಪದದಂತೆ ಜಿಜ್ಞಾಸಾಪದವೂ ಸಹ ವಿಚಾರದಲ್ಲಿ ರೂಢವಾಗಿದೆ.

ವಿವರಣೆ - 'ಇಚ್ಛೆ' ಎಂಬರ್ಥದಲ್ಲಿ ಬಂದಿರುವ ಸನ್ ಪ್ರತ್ಯಯದಿಂದ 'ಜಿಜ್ಞಾಸಾ' ಎಂಬ ಪದವು ನಿಷ್ಪನ್ನವಾಗಿದೆ. ಇದರಿಂದ ಶ್ರವಣ-ಮನನ-ಧ್ಯಾನಗಳು ಪ್ರತಿಪಾದ್ಯವಲ್ಲ ಎಂದು ಹೇಳುವುದು ತಪ್ಪು. ಏಕೆಂದರೆ ಭಾಗವತ ಪ್ರಥಮಸ್ಕಂದದಲ್ಲಿ 'ಜಿಜ್ಞಾಸಿತಂ ಸುಸಂಪನ್ನಂ' ಎಂಬುದಾಗಿ ನಿನ್ನಿಂದ ಬ್ರಹ್ಮನು ವಿಚಾರ ಮಾಡಲ್ಪಟ್ಟಿದ್ದಾನೆ ಎಂದು ಹೇಳಲಾಗಿದೆ. ಮನನ ರೂಪವಾದ ವಿಚಾರ ಎಂಬರ್ಥದಲ್ಲಿ 'ಇಚ್ಛಾ' ಎಂಬ ಅರ್ಥದ ಸನ್ಪ್ರತ್ಯಯಾಂತವಾಗಿ 'ಜಿಜ್ಞಾಸಿತ' ಎಂಬ ಶಬ್ದವನ್ನು ಇಲ್ಲಿ ಪ್ರಯೋಗಿಸಲಾಗಿದೆ. ಆದ್ದರಿಂದ

ಮನನರೂಪವಾದ ವಿಚಾರ ಎಂಬರ್ಥದಲ್ಲಿ 'ಜಿಜ್ಞಾಸಾ' ಎಂಬ ಶಬ್ದವನ್ನು ಸೂತ್ರದಲ್ಲಿ ಹೇಳಿದ್ದಾರೆ. ಮನನಕ್ಕೆ ಅಂಗವಾಗಿ ಶ್ರವಣ ಮತ್ತು ಮನನದ ಫಲವಾದ ಧ್ಯಾನವನ್ನೂ ಕೂಡ 'ಜಿಜ್ಞಾಸಾ' ಶಬ್ದದಿಂದ ಸೂತ್ರದಲ್ಲಿ ಹೇಳಿದ್ದಾರೆ.

## ಶ್ರವಣ-ಮನನ-ನಿದಿಧ್ಯಾಸನಗಳು ಲಕ್ಷಣಯಾ ವಿವಕ್ಷಿತ

**ಭಾವದೀಪಃ –**

'यत्रार्थस्य विसंवादः प्रत्यक्षेणोपलभ्यते ।
स्वरसंस्कारमात्रार्था तत्र व्याकरणस्मृतिः ।।'

इत्युक्तेः साधुत्वमात्रपरा व्याकरणस्मृतिरिति भावः ।

तथाच मननरूपविचारे मुख्येन जिज्ञासाशब्देन छत्रिन्यायेन लक्षणया त्रितयोपादानं सूत्रे । 'तद् विजिज्ञासस्व' इत्यादिश्रुतौ च युक्तमिति भावः।

ಯತ್ರಾರ್ಥಸ್ಯ ವಿಸಂವಾದಃ ಪ್ರತ್ಯಕ್ಷೇಣೋಪಲಭ್ಯತೇ।
ಸ್ವರಸಂಸ್ಕಾರಮಾತ್ರಾರ್ಥಾ ತತ್ರ ವ್ಯಾಕರಣಸ್ಮೃತಿಃ॥

ಎಲ್ಲಿ ಅರ್ಥವಿಸಂವಾದವು ಪ್ರತ್ಯಕ್ಷದಿಂದ ಗೋಚರವಾಗುತ್ತದೋ, ಅಂಥ ಸಂದರ್ಭದಲ್ಲಿ ಸ್ವರಸಂಸ್ಕಾರಕ್ಕೋಸ್ಕರ ಮಾತ್ರ ವ್ಯಾಕರಣಶಾಸ್ತ್ರವು ಹೊರಟಿರುತ್ತದೆ.

ಈ ಮಾತಿನಂತೆ ವ್ಯಾಕರಣಸ್ಮೃತಿಯು ಕೇವಲ ಶಬ್ದಸಾಧುತ್ವಕ್ಕೋಸ್ಕರ ಹೊರಟಿರುತ್ತದೆ. ಹಾಗಾಗಿ ಜಿಜ್ಞಾಸಾಶಬ್ದದಿಂದ ಮುಖ್ಯವಾಗಿ ಮನನವೆಂಬ ವಿಚಾರವೇ ಪ್ರತಿಪಾದ್ಯವಾಗಿದೆ. ಆದರೂ ಸಹ ಛತ್ರಿನ್ಯಾಯದಿಂದ ಲಕ್ಷಣಯಾ ಶ್ರವಣನಿದಿಧ್ಯಾಸನಗಳನ್ನು ವಿವಕ್ಷಿಸಬೇಕು. ಹೀಗೆ ಸೂತ್ರದಲ್ಲಷ್ಟೇ ಅಲ್ಲದೆ 'ತದ್ ವಿಜಿಜ್ಞಾಸಸ್ವ' ಎಂಬ ಶ್ರುತಿಯಲ್ಲೂ ಸಹ ಜಿಜ್ಞಾಸಾಶಬ್ದದಿಂದ ಶ್ರವಣ-ಮನನ-ನಿದಿಧ್ಯಾಸನಗಳನ್ನು ವಿವಕ್ಷಿಸಬೇಕು.

## 'ಭವತಿ' ಎಂಬ ಪದದ ಅಧ್ಯಾಹಾರ ವ್ಯರ್ಥ

**ಭಾವದೀಪಃ** – नन्विच्छायामपि जिज्ञासापदप्रयोगादिच्छाऽत्र जिज्ञासाशब्दार्थः किं न स्यात्? इत्यत आह – **इच्छाया इति** ।। ननु

वाचस्पतिरीत्या भवतीत्यध्याहारे इच्छाऽत्रार्थः स्यादित्यत आह - भवतीत्यादीति ।।

ಜಿಜ್ಞಾಸಾಪದದಿಂದ ಕೆಲವೊಮ್ಮೆ ಇಚ್ಛೆಯೂ ಪ್ರತಿಪಾದ್ಯವಾಗುತ್ತದೆ. ಆ ಇಚ್ಛೆಯನ್ನೇ ಇಲ್ಲಿ ಜಿಜ್ಞಾಸಾಪದಪ್ರತಿಪಾದ್ಯವೆಂದು ಏಕೆ ತಿಳಿಯಬಾರದು? ಎಂಬ ಪ್ರಶ್ನೆಗೆ 'ಇಚ್ಛಾಯಾಃ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ. 'ವಾಚಸ್ಪತಿ' ಹೇಳಿದಂತೆ 'ಭವತಿ' ಎಂಬ ಕ್ರಿಯಾಪದದ ಅಧ್ಯಾಹಾರವನ್ನು ಸೂತ್ರದಲ್ಲಿ ಮಾಡಿದಾಗ ಜಿಜ್ಞಾಸಾಪದಕ್ಕೆ ಇಚ್ಛಾರ್ಥವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ಭವತೀತ್ಯಾದಿ' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ.

## ಇಚ್ಛೆಯ ವಿಧಾನ ಏಕೆ ತಪ್ಪು?

**भावदीपः** - ननु 'मुमुक्षानन्तरं ब्रह्मज्ञानेच्छा भवति' इत्युक्ते ज्ञानेच्छासन्दिग्धे विषये निर्णयाय भवतीति सन्दिग्धरूपविषयस्य निर्णयाख्यफलस्य च सूचनात् न वैयर्थ्यमिति चेन्न ।

ಶಂಕೆ - ಮೋಕ್ಷಬಯಕೆಯ ಅನಂತರ ಬ್ರಹ್ಮಜ್ಞಾನದಲ್ಲಿ ಇಚ್ಛೆಯು ಸಹಜವಾಗಿ ಬರುತ್ತದೆ. ಸಂದಿಗ್ಧವಿಷಯದಲ್ಲಿ ಬರುವ ಜ್ಞಾನೇಚ್ಛೆಯು ನಿರ್ಣಯಕ್ಕೆ ಕಾರಣವಾಗುತ್ತದೆ. ಹಾಗಾಗಿ ಇಚ್ಛಾ ಭವತಿ ಎಂದು ಸೂತ್ರದಲ್ಲಿ ವಿವಕ್ಷಿಸಿದಾಗ ವೈಯರ್ಥ್ಯವು ಹೇಗೆ ಬರುತ್ತದೆ?

## 'ಇಚ್ಛೆಯೇ ಹುಟ್ಟುವುದಿಲ್ಲ' ಎಂಬ ಆಕ್ಷೇಪಕ್ಕೆ 'ಭವತಿ' ಎಂಬುದು ಉತ್ತರವಲ್ಲ

**भावदीपः** - विषयाद्यभावादिच्छैव नोत्पत्तुमर्हतीति वदन्तं पूर्वपक्षिणं प्रतीच्छया विषयादिसूचनोक्त्ययोगेन तदुक्तेर्वैयर्थ्यमेव इत्याशयेनोक्तम् - इत्यादिकथनस्येति ।।

ಸಮಾಧಾನ - ವಿಷಯಾದಿಗಳಿಲ್ಲದ ಕಾರಣ ಬ್ರಹ್ಮಜ್ಞಾನದಲ್ಲಿ ಇಚ್ಛೆಯೇ ಬರುವುದಿಲ್ಲವೆಂದು ಪೂರ್ವಪಕ್ಷಿಯು ಆಕ್ಷೇಪಿಸುತ್ತಿದ್ದಾನೆ. ಇಂತಹ ಪೂರ್ವಪಕ್ಷಿಯನ್ನು ಕುರಿತು ಇಚ್ಛೆಯು ಸಂದಿಗ್ಧವಿಷಯಕವಾದ್ದರಿಂದ ನಿರ್ಣಯಕ್ಕೆ ಕಾರಣವಾಗುತ್ತದೆ ಎಂದು ಉತ್ತರಿಸುವುದು ವ್ಯರ್ಥವೇ ಆಗಿದೆ. ಈ ಅಭಿಪ್ರಾಯದಿಂದ 'ಇತ್ಯಾದಿಕಥನಸ್ಯ' ಎಂಬ ಟೀಕೆಯು ಹೊರಟಿದೆ.

ವಿವರಣೆ - ಮೋಕ್ಷದ ಇಚ್ಛೆಯು ಬಂದಮೇಲೆ 'ಬ್ರಹ್ಮಜಿಜ್ಞಾಸಾ ಭವತಿ' ಬ್ರಹ್ಮಜ್ಞಾನದ ಬಯಕೆಯು ಉಂಟಾಗುತ್ತದೆ ಎಂದು 'ಕರ್ತವ್ಯಾ' ಎಂಬ ಪದದ ಬದಲು 'ಭವತಿ' ಎಂಬ ಪದವನ್ನು ವಿವಕ್ಷಿಸಿ, ಅರ್ಥವನ್ನು ಹೇಳಿದರೆ ಏನು ತಪ್ಪು ?

ಹೀಗೆ ಅರ್ಥೈಸುವುದು ವ್ಯರ್ಥವೆಂದು ಪೇಳಬಾರದು. ಏಕೆಂದರೆ ಜ್ಞಾನದ ಬಯಕೆಯು ಸಂದಿಗ್ಧವಾದ ವಿಷಯದಲ್ಲಿ ನಿರ್ಣಯಕ್ಕೆ ಕಾರಣವಾಗುತ್ತದೆಂದರ್ಥವನ್ನು ಹೇಳಿದರೆ ಸಂದಿಗ್ಧವಿಷಯ ಹಾಗೂ ನಿರ್ಣಯರೂಪವಾದ ಪ್ರಯೋಜನ ಎರಡನ್ನೂ ಕೂಡ ಸೂಚನೆ ಮಾಡಿದಂತಾಗುತ್ತದೆ. ಆದ್ದರಿಂದ 'ಭವತಿ' ಎಂಬ ಪದವನ್ನು ಆವೃತ್ತಿ ಮಾಡಿಕೊಂಡು ಸೂತ್ರವನ್ನು ಅರ್ಥೈಸಬಹುದು. ಹೀಗಿರುವಾಗ ವೈಯರ್ಥ್ಯವನ್ನು ಹೇಳಲಾಗದು.

ಇದು ತಪ್ಪು. ವಿಷಯಪ್ರಯೋಜನಗಳು ಇಲ್ಲದಿರುವುದರಿಂದ ಬ್ರಹ್ಮಜ್ಞಾನದ ಇಚ್ಛೆಯೂ ಹುಟ್ಟುವುದಿಲ್ಲ ಎಂದು ಪೂರ್ವಪಕ್ಷಿಯು ಆಕ್ಷೇಪ ಮಾಡುತ್ತಿದ್ದಾನೆ. ಅವನನ್ನು ಕುರಿತು ಬ್ರಹ್ಮಜ್ಞಾನದ ಬಯಕೆಯುಂಟಾಗುತ್ತದೆ ಎಂದು ಹೇಳಿದ ಮಾತ್ರಕ್ಕೆ ವಿಷಯಪ್ರಯೋಜನಗಳನ್ನು ಸೂಚಿಸಿದಂತೆ ಆಗುವುದಿಲ್ಲ. ಆದ್ದರಿಂದ 'ಭವತಿ' ಎಂಬ ಪದವು ವ್ಯರ್ಥವಾಗಿದೆ ಎಂದು ತಿಳಿಯಬೇಕು.

ಮತ್ತು ಸೂತ್ರವು ಶ್ರುತ್ಯನುಸಾರಿಯಾಗಿರಬೇಕು. 'ತದ್ ವಿಜಿಜ್ಞಾಸಸ್ವ' ಎಂಬುದಾಗಿ ಶ್ರುತಿಯು ವಿಧಿರೂಪವಾಗಿದೆ. ಅದಕ್ಕೆ ಅನುಗುಣವಾಗಿ ಸೂತ್ರದಲ್ಲಿಯೂ ಕೂಡ ಬ್ರಹ್ಮಜಿಜ್ಞಾಸಾ ಮಾಡಬೇಕೆಂದು 'ಕರ್ತವ್ಯಾ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು ವಿಧಿರೂಪವಾಗಿ ಹೇಳುವುದೇ ಸಮಂಜಸವಾಗುತ್ತದೆ. ಕೇವಲ 'ಬ್ರಹ್ಮಜಿಜ್ಞಾಸಾ ಭವತಿ' ಎಂದು ಹೇಳುವುದು ಶ್ರುತಿಗೆ ಅನುಗುಣವಾಗುವುದಿಲ್ಲ.

### 'ಭವತಿ' ಪದದ ಅಧ್ಯಾಹಾರ ಶ್ರುತ್ಯನುಸಾರಿಯಲ್ಲ

**ಭಾವದೀಪಃ** – ದೋಷಾನ್ತರಂ ಚಾಹ – **ಸೂತ್ರಂ ಚೇತಿ** ।। 'तद् विजिज्ञासस्व' इति श्रुतौ विधिप्रत्ययश्रवणेन तद्व्याख्यानपरं सूत्रं कर्तव्यपदान्वितमेव तदनुसारि । अन्यथा तदननुगुणमेव स्यादिति भावः ।

ಮತ್ತೊಂದು ದೋಷವನ್ನು 'ಸೂತ್ರಂ ಚ' ಎಂಬ ಟೀಕೆಯಿಂದ ಹೇಳುತ್ತಿದ್ದಾರೆ. 'ತದ್ವಿಜಿಜ್ಞಾಸಸ್ವ,' ಎಂಬ ಶ್ರುತಿಯಲ್ಲಿ ವಿಧಿಪ್ರತ್ಯಯವು ಕೇಳಿಸುತ್ತಿರುವುದರಿಂದ ಶ್ರುತಿ ವ್ಯಾಖ್ಯಾನ ಮಾಡುವ ಸೂತ್ರದಲ್ಲಿಯೂ ವಿಧಿಪ್ರತ್ಯಯವನ್ನೇ ಹೇಳಬೇಕು. ಆದ್ದರಿಂದ ಕರ್ತವ್ಯಾ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡರಷ್ಟೇ ಸೂತ್ರವು ಶ್ರುತಿಗೆ ಅನುಸಾರಿಯಾಗುತ್ತದೆ. 'ಭವತಿ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡರೆ ಶ್ರುತಿಗೆ ಅನುಸಾರಿಯಾಗುವುದಿಲ್ಲವೆಂದು ಅಭಿಪ್ರಾಯ.

## ಪ್ರಥಮ ಸೂತ್ರಕ್ಕೆ ವಿಷಯವಾಕ್ಯಗಳು ಅನೇಕ

**ಭಾವದೀಪಃ** – यत् कश्चिदाह 'भवत्पक्षेऽपि श्रुतावनुक्तयोरधिकारिफलयोरथातःपदाभ्यामुक्तेः श्रुत्यननुसारिसूत्रम्' इति । तन्न । नहि 'तद् विजिज्ञासस्व तद् ब्रह्म' इत्येतदेकमेवोदाहरणम् । विश्वतोमुखत्वभङ्गापत्तेः सूत्राणाम् । किन्तु विचारविधायकनानावाक्यान्यपि । तेषु च क्वचित् 'शान्तो दान्तः' इत्यादावधिकारिविषयजिज्ञासानाम् ।

''ಸಿದ್ಧಾಂತದಲ್ಲಿ ಅಧಿಕಾರಿ ಮತ್ತು ಫಲಗಳನ್ನು 'ಅಥ' ಮತ್ತು 'ಅತಃ' ಪದಗಳಿಂದ ಹೇಳುತ್ತಾರೆ. ಆದರೆ ಶ್ರುತಿಯಲ್ಲಿ ಅಧಿಕಾರಿಫಲಗಳನ್ನು ಹೇಳದ ಕಾರಣ ಸೂತ್ರವು ಶ್ರುತಿಗೆ ಅನುಸಾರಿಯಾಗಿಲ್ಲ'' - ಎಂದು ಕೆಲವರ ಆಕ್ಷೇಪ. ಇದು ತಪ್ಪು. ಪ್ರಥಮಸೂತ್ರಕ್ಕೆ 'ತದ್ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಒಂದೇ ಶ್ರುತಿಯು ವಿಷಯವಾಕ್ಯವಲ್ಲ. ಒಂದುವೇಳೆ ಇದೊಂದೇ ವಿಷಯವಾಕ್ಯವಾದಲ್ಲಿ ವಿಶ್ವತೋಮುಖತ್ವವೆಂಬ ಸೂತ್ರದ ಲಕ್ಷಣವು ತಪ್ಪಾಗುತ್ತದೆ. ಆದ್ದರಿಂದ ವಿಚಾರವಿಧಾಯಕವಾದ ಅನೇಕವಾಕ್ಯಗಳು ಪ್ರಥಮಸೂತ್ರಕ್ಕೆ ವಿಷಯವಾಕ್ಯಗಳಾಗಿವೆ. ಅವುಗಳ ಮಧ್ಯದಲ್ಲಿ ಕೆಲವು ಶ್ರುತಿಗಳು 'ಶಾಂತೋ ದಾಂತಃ' ಇತ್ಯಾದಿಯಾಗಿ ಅಧಿಕಾರಿ, ವಿಷಯ, ಜಿಜ್ಞಾಸೆಗಳನ್ನು ವಿಧಿಸುತ್ತಿವೆ.

## ವಿಷ್ಣುರೇವ ವಿಜಿಜ್ಞಾಸ್ಯಃ

**ಭಾವದೀಪಃ** –

''यस्य प्रसादात् परमार्तिरूपादस्मात् संसारान्मुच्यते नापरेण ।
नारायणोसौ परमो विचिन्त्यो मुमुक्षुभिः कर्मपाशादमुष्मात् ।।''

इत्यादावधिकारिविषयफलजिज्ञासानां चतसृणामप्युक्तेः । 'तद् विजिज्ञासस्व' 'स विजिज्ञासितव्यः' इत्यादावपि 'वि'शब्देनाधिकारिफल-वैशिष्ट्यस्यापि सूचनाच्च । अत एव सङ्क्षेपभाष्ये कृत्स्नसूत्रार्थोक्त्यर्थं श्रुतिविसंवादार्थं च 'विष्णुरेव विजिज्ञास्यः' इत्युक्तम् ।

'यस्य प्रसादात् परमार्तिरूपात्
अस्मात् संसारान्मुच्यते नापरेण।
नारायणोऽसौ परमो विचिंत्यो
मुमुक्षुभिः कर्मपाशादमुष्मात्'

ಅತ್ಯಂತ ದುಃಖಮಯವಾದ ಈ ಸಂಸಾರದಿಂದ ಬಿಡುಗಡೆ ಪಡೆಯಲು ಶ್ರೀಹರಿಯ ಪ್ರಸಾದವನ್ನೇ ಪಡೆಯಬೇಕು. ಬೇರೆ ಉಪಾಯವಿಲ್ಲ. ಕರ್ಮಪಾಶದಿಂದ ಮೋಕ್ಷವನ್ನು ಬಯಸುವವರು ಸರ್ವೋತ್ತಮನಾದ ನಾರಾಯಣನನ್ನೇ ಚಿಂತನೆ ಮಾಡಬೇಕು. ಕೆಲವು ಶ್ರುತಿಗಳಲ್ಲಿ ಅಧಿಕಾರಿ, ವಿಷಯ, ಫಲ, ಜಿಜ್ಞಾಸೆ ನಾಲ್ಕನ್ನೂ ವಿಧಿಸಲಾಗಿದೆ. ವಸ್ತುತಃ 'ತದ್ವಿಜಿಜ್ಞಾಸಸ್ವ' 'ಸಃ ವಿಜಿಜ್ಞಾಸಿತವ್ಯಃ' ಎಂಬಲ್ಲಿಯೂ ಸಹ ವಿಶಬ್ದದಿಂದ ಅಧಿಕಾರಿಫಲಗಳ ವೈಶಿಷ್ಟ್ಯವನ್ನು ಶ್ರುತಿಯು ಸೂಚಿಸಿದೆ. ಆದ್ದರಿಂದಲೇ ಅಣುಭಾಷ್ಯದಲ್ಲಿ ಸೂತ್ರದ ಸಂಪೂರ್ಣ ಅರ್ಥವನ್ನು ಹೇಳಲು ಮತ್ತು ಶ್ರುತಿಸಂವಾದಿಯಾಗಿದೆ ಎಂದು ತಿಳಿಸಲು 'ವಿಷ್ಣುರೇವ ವಿಜಿಜ್ಞಾಸ್ಯಃ' ಎಂದು ಹೇಳಿದ್ದಾರೆ.

## ಸಂಬೋಧನೆಯಿಂದ ವಿಧಿಶಕ್ತಿ ಕುಂಠಿತವಾಗುವುದಿಲ್ಲ

**ಭಾವದೀಪಃ** – अत एव च पूर्वतन्त्रे द्वितीयस्याद्यपादे 'विधिमन्त्रयोरै-कार्थ्यमेकशब्दात्' इति विधिमन्त्राधिकरणे 'अग्नीन् विहर' इत्यादावामन्त्रणादियुक्ते विधिशक्तिप्रतिबन्धोक्तेरिह च 'तद् विजिज्ञासस्व' इति भृगोरामन्त्रणात् । 'आत्मा वा अरे' इत्यत्र मैत्रेय्या अर इत्यामन्त्रणादविधित्वमिति प्रत्युक्तम् । बहुश्रुत्यनुरोधेनात्रापि विधिरेवानुमानेन आमन्त्रणेन तन्मात्रं प्रत्युक्तावतात्पर्यमिति ।

ಹೀಗೆ ಹೇಳಿದ್ದರಿಂದ ಮತ್ತೊಂದು ಆಕ್ಷೇಪವು ಪರಿಹಾರವಾಯಿತು -- ಪೂರ್ವಮೀಮಾಂಸೆಯ ದ್ವಿತೀಯಾಧ್ಯಾಯದ ಮೊದಲನೆಯ ಪಾದದಲ್ಲಿ 'ವಿಧಿಮಂತ್ರಯೋರೈಕಾರ್ಥ್ಯಮೇಕಶಬ್ದಾತ್' ಎಂಬ ವಿಧಿಮಂತ್ರಾಧಿಕರಣದಲ್ಲಿ ಹೀಗೆ ಹೇಳಿದ್ದಾರೆ -- 'ಅಗ್ನೀನ್ ವಿಹರ' ಎಂಬಲ್ಲಿ ಆಮಂತ್ರಣವು (ಸಂಬೋಧನೆಯು) ಶ್ರುತವಾದ್ದರಿಂದ ವಿಧಿಶಕ್ತಿಯು ಕುಂಠಿತವಾಗಿದೆ - ಎಂದು. ಅದರಂತೆ ಇಲ್ಲಿಯೂ 'ತದ್ವಿಜಿಜ್ಞಾಸಸ್ವ' ಎಂಬಲ್ಲಿ ಭೃಗುವಿನ ಆಮಂತ್ರಣವು ಶ್ರುತವಾಗಿದೆ. ಮತ್ತು 'ಆತ್ಮಾ ವಾ ಅರೇ' ಎಂಬಲ್ಲಿ 'ಅರೇ' ಎಂಬುದಾಗಿ ಸಂಬೋಧನೆಯು ಇರುವುದರಿಂದ ವಿಧಿಶಕ್ತಿಯು ಕುಂಠಿತವಾಗಿದೆ. ಈ ಆಕ್ಷೇಪಕ್ಕೆ ಈಗ ಅವಕಾಶವಿಲ್ಲ. ಏಕೆಂದರೆ ಅನೇಕಶ್ರುತಿಗಳು ಹೇಳುವಂತೆ 'ತದ್ವಿಜಿಜ್ಞಾಸಸ್ವ' ಮತ್ತು 'ಆತ್ಮಾ ವಾ ಅರೇ' ಎಂಬ ಶ್ರುತಿಗಳು ವಿಧಾಯಕವೇ ಆಗಿವೆ. ಸಂಬೋಧನೆ ಇರುವ ಮಾತ್ರದಿಂದ ವಿಧಿಯಲ್ಲಿ ಶಕ್ತಿಯಿಲ್ಲ ಎನ್ನುವುದು ತಪ್ಪಾಗುತ್ತದೆ.

## ಕರ್ಮದಿಂದ ಅಥವಾ ಪ್ರವಚನದಿಂದ ಮೋಕ್ಷ ದೊರಕದು

**ಭಾವದೀಪಃ – ಭಾಷ್ಯೇ 'ಕರ್ಮಣಾ' ಇತ್ಯಾದೇಃ ಪ್ರಕೃತೋಪಯೋಗಾಪ್ರತೀತೇರಾಹ – ಅಸ್ತು ಮೋಕ್ಷ ಇತಿ ।। ಅನೇನ 'ನಚ ಜ್ಞಾನಂ ವಿನಾ' ಇತ್ಯಾದಿ ಸ್ವೋಕ್ತಿಸಮರ್ಥನಾರ್ಥಮಿದಂ ಭಾಷ್ಯಮಿತಿ ದರ್ಶಿತಮ್ । 'ತತ್ಕರ್ಮ ಹರಿತೋಷಂ ಯತ್' 'ಸಾ ವಿದ್ಯಾ ತನ್ಮತಿರ್ಯಯಾ' ಇತ್ಯದೃಶ್ಯತ್ವನಯಭಾಷ್ಯೋಕ್ತವಚನಾತ್ । 'ಯ ಇದಂ ಪರಮಂ ಗುಹ್ಯಮ್' 'ಮದ್ಭಕ್ತೇಷ್ವಭಿಧಾಸ್ಯತಿ' ಇತಿ ಗೀತಾಯಾಮಭಿಧಾಪದೋಕ್ತಪ್ರವಚನಸ್ಯ 'ನಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ' ಇತ್ಯುತ್ತರವಾಕ್ಯಸ್ಥಪ್ರಿಯಕೃತ್ತಮಪದೇನ ಪ್ರಸಾದಹೇತುತ್ವಲಾಭಾದಿತಿ ಭಾವಃ । ತದಾಹ 'ಕರ್ಮಾದಿನಾ' ಇತ್ಯಾದಿಪದೇನ ।**

ಭಾಷ್ಯದಲ್ಲಿ 'ಕರ್ಮಣಾ ತ್ವಧಮಃ ಪ್ರೋಕ್ತಃ' ಎಂಬ ನಾರದಪುರಾಣದ ಮಾತನ್ನು ಉದಾಹರಿಸಿದ್ದು ಅಪ್ರಸ್ತುತವೆಂಬ ಶಂಕೆ ಬರುತ್ತದೆ. ಅದರ ಪರಿಹಾರಕ್ಕಾಗಿ 'ಅಸ್ತು ಮೋಕ್ಷಃ' ಎಂಬ ಟೀಕೆಯು ಹೊರಟಿದೆ. ಆದ್ದರಿಂದ 'ಜ್ಞಾನವಿಲ್ಲದೆ ಮೋಕ್ಷವು ದೊರೆಯದು' ಎಂಬ ತಮ್ಮ ಮಾತಿಗೆ ಈ ನಾರದವಚನವು ಪೂರಕವಾಗಿದೆಯೆಂದು ತಿಳಿಸಿದ್ದಾರೆ. 'ತತ್ ಕರ್ಮ ಹರಿತೋಷಂ ಯತ್, ಸಾ ವಿದ್ಯಾ ತನ್ಮತಿರ್ಯಯಾ ...' ಎಂಬ ಅದೃಶ್ಯತ್ವಾಧಿಕರಣದ

ಭಾಷ್ಯದಲ್ಲಿ ಕರ್ಮವು ಪ್ರಸಾದಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ. 'ಯ ಇದಂ ಪರಮಂ ಗುಹ್ಯಂ ಮದ್‌ಭಕ್ತೇಷ್ವಭಿಧಾಸ್ಯತಿ' (ಅತ್ಯಂತ ನಿಗೂಢವಾದ ಈ ತತ್ವವಿಚಾರವನ್ನು ನನ್ನ ಭಕ್ತರಲ್ಲಿ ಯಾರು ಪ್ರವಚನ ಮಾಡುತ್ತಾರೋ) ಎಂದು ಅಭಿಧಾಪದಪ್ರಯೋಗದಿಂದ ಪ್ರವಚನವನ್ನು ಹೇಳಿ 'ನಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ' (ಅಂತಹ ಪ್ರವಚನ ಮಾಡುವ ಭಕ್ತರು ಮನುಷ್ಯರಲ್ಲಿ ಅತ್ಯಂತ ಪ್ರೀತಿಪಾತ್ರರು ಬೇರೆ ಯಾರೂ ಇಲ್ಲ) ಎಂದು 'ಪ್ರಿಯಕೃತ್ತಮಃ' ಪದದಿಂದ ಪ್ರವಚನವು ಪ್ರಸಾದಕ್ಕೆ ಕಾರಣವಾಗಿದೆಯೆಂದು ಹೇಳಿದ್ದಾರೆ. ಹೀಗೆ ಪ್ರವಚನವೂ ಸಹ ಪ್ರಸಾದಕಾರಣವಾಗಿದೆ ಎಂಬುದನ್ನು 'ಕರ್ಮಾದಿನಾ' ಎಂಬಲ್ಲಿರುವ ಆದಿಪದದಿಂದ ಟೀಕಾರಾಯರು ತಿಳಿಸಿದ್ದಾರೆ.

### ಮೋಕ್ಷವು ಪ್ರಸಾದಸಾಧ್ಯವಾದರೆ ಪ್ರಸಾದವು ಜ್ಞಾನಸಾಧ್ಯ ಆಗಲೇಬೇಕು

**ಭಾವದೀಪಃ – ತುಲ್ಯನ್ಯಾಯಸ್ಯ ಕಥಮಸ್ತು ಮೋಕ್ಷಃ? ಇತ್ಯಭ್ಯುಪಗಮಃ । ಪ್ರಮಾಣಸ್ಯೋಭಯತ್ರಾಪಿ ಪ್ರಾಗುಕ್ತೇರಿತ್ಯತೋ ವ್ಯನಕ್ತಿ – ಯದ್ಯಪೀತಿ ।।**

ಜ್ಞಾನದಿಂದ ಭಗವತ್ಪ್ರಸಾದವಾಗುತ್ತದೆ. ಭಗವತ್ಪ್ರಸಾದದಿಂದ ಮೋಕ್ಷವು ದೊರೆಯುತ್ತದೆಂಬುದು ಸಿದ್ಧಾಂತ. ಇದರ ಮೇಲೆ ಪೂರ್ವಪಕ್ಷಿಯು 'ಅಸ್ತು ಮೋಕ್ಷಃ' ಎಂಬ ವಾಕ್ಯದಿಂದ ಶಂಕಿಸುತ್ತಿದ್ದಾನೆ. ''ಮೋಕ್ಷವು ಪ್ರಸಾದ ಸಾಧ್ಯವಾಗಲಿ; ಆದರೆ ಪ್ರಸಾದವು ಜ್ಞಾನಸಾಧ್ಯವಾಗುವುದು ಬೇಡ'' ಎಂದು. ವಸ್ತುತಃ ಇಲ್ಲಿ ಪೂರ್ವಪಕ್ಷಿಯ ಶಂಕೆಯು ಅರ್ಧಜರತೀಯವಾಗಿದೆ. ಮೋಕ್ಷವನ್ನು ಪ್ರಸಾದಸಾಧ್ಯವೆಂದು ಒಪ್ಪಿದ್ದಾನೆ. ಆದರೆ ಪ್ರಸಾದವು ಜ್ಞಾನಸಾಧ್ಯವೆಂದು ಒಪ್ಪುತ್ತಿಲ್ಲ. ಎರಡು ವಿಷಯದಲ್ಲಿಯೂ ಪ್ರಮಾಣವು ಸಮಾನವಾಗಿರುವಾಗ ಒಂದನ್ನು ಒಪ್ಪಿ ಮತ್ತೊಂದನ್ನು ಒಪ್ಪದಿರಲು ಕಾರಣವಿಲ್ಲವೆಂಬ ಪ್ರಶ್ನೆ ಬಂದರೆ 'ಯದ್ಯಪಿ' ಎಂಬ ಗ್ರಂಥವು ಹೊರಟಿದೆ. ವಸ್ತುತಃ ಎರಡೂ ವಿಷಯದಲ್ಲಿ ಪ್ರಮಾಣ ಸಮಾನವಾಗಿದ್ದರೂ ಮೋಕ್ಷವು ಕರ್ಮಸಾಧ್ಯವೆನ್ನಲು ಶ್ರುತಿಪ್ರಮಾಣವಿದೆ. ಆದರೆ 'ತಮೇವಂ ವಿದ್ವಾನ್' ಇತ್ಯಾದಿ ಶ್ರುತಿಗಳಲ್ಲಿ ಕರ್ಮವನ್ನು ನಿಷೇಧ ಮಾಡಿದ್ದರಿಂದ ಕರ್ಮದಿಂದ ಮೋಕ್ಷ ದೊರೆಯುತ್ತದೆಂದು ಶಂಕಿಸಲು ಸಾಧ್ಯವಿಲ್ಲ. ಆದರೆ 'ಪ್ರಿಯೋ ಹಿ ಜ್ಞಾನಿನಃ' ಎಂಬ ಸ್ಮೃತಿಯಲ್ಲಿ ಅನ್ಯನಿಷೇಧವನ್ನು ಮಾಡದ ಕಾರಣ ಪ್ರಸಾದವು

ಜ್ಞಾನದಿಂದಲೇ ಲಭಿಸಬೇಕೆಂದು ನಿರ್ಣಯವಾಗುವುದಿಲ್ಲ. ಈ ಆಧಾರದಲ್ಲಿ ಪೂರ್ವಪಕ್ಷಿಯ ಶಂಕೆಯು ಹೊರಟಿದೆ ಎಂಬ ಸೂಕ್ಷ್ಮವನ್ನು ಗಮನಿಸಬೇಕು.

## ಕರ್ಮದಿಂದ ಮೋಕ್ಷ ಹೇಳುವ ವಾಕ್ಯಗಳ ಅರ್ಥವಿಚಾರ

**ಭಾವದೀಪಃ – ಶ್ರುತ್ಯಾದೀತಿ ।।** 'अपाम सोमममृता अभूम' इति श्रुतौ 'कर्मणैव हि संसिद्धिमास्थिताः जनकादयः' इति स्मृतौ च तथोक्तेरिति भावः ।

'ಅಪಾಮ ಸೋಮಮಮೃತಾ ಅಭೂಮ' ಎಂಬ ಶ್ರುತಿಯಲ್ಲಿ, 'ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾಃ ಜನಕಾದಯಃ' ಎಂಬ ಗೀತಾವಾಕ್ಯದಲ್ಲಿ ಮೋಕ್ಷವು ಕರ್ಮದಿಂದಲೇ ಲಭ್ಯವೆಂದು ಹೇಳಲಾಗಿದೆ.

## ಪ್ರಸಾದಗಳಲ್ಲಿ ವಿಭಾಗ

**ಭಾವದೀಪಃ – ಅನ್ಯನಿಷೇಧಾದಿತಿ ।।** अत एव भाष्ये 'नान्यः पन्था अयनाय' इत्यंशस्याप्युक्तिः । अत एव च प्राक् टीकायां 'यमेव' इत्येवशब्दस्य 'तेनैव' इत्यन्वय उक्तः । **शङ्काभाव इति ।।** तेन भाष्ये प्रसादविभागात् कर्मविभागपूर्वं तत्फलस्य मोक्षैकदेशादिरूपस्योक्तिः स्यात् । प्रकृतसमर्थनस्याविशेषादिति शङ्कापास्ता । 'तमेवम्' इत्यादिश्रुत्युक्तयैव कर्मजन्यत्वशङ्कानिरासेन 'यतो नारायणप्रसादमृतेन मोक्षः' इत्यंशस्य समर्थनात् ।

'ಅನ್ಯನಿಷೇಧಾತ್' - ಭಾಷ್ಯದಲ್ಲಿ 'ನಾನ್ಯಃ ಪಂಥಾ ಅಯನಾಯ' ಎಂಬ ಅಂಶವನ್ನು ಉಲ್ಲೇಖಿಸಿದ್ದರಿಂದ ಜ್ಞಾನವನ್ನು ಬಿಟ್ಟು ಬೇರೆ ಯಾವುದೂ ಮೋಕ್ಷಸಾಧನವಲ್ಲ ಎಂದು ಹೇಳಿದ್ದಾರೆ. ಮತ್ತು ಹಿಂದೆ ಟೀಕೆಯಲ್ಲಿ 'ಯಮೇವೈಷ' ಎಂಬ ಶ್ರುತಿಯಲ್ಲಿರುವ ಏವಕಾರಕ್ಕೆ ''ತೇನೈವ ಪ್ರಾಪ್ಯಃ'' ಎಂದು ಅನ್ವಯವನ್ನು ಹೇಳಿದ್ದಾರೆ. ಭಾಷ್ಯದಲ್ಲಿ ಮೂರುಬಗೆಯಲ್ಲಿ ಪ್ರಸಾದವನ್ನು ವಿಂಗಡಿಸಿದ್ದಾರೆ. ೧. ಉತ್ತಮಪ್ರಸಾದ ೨. ಮಧ್ಯಮಪ್ರಸಾದ,

೩. ಅಧಮಪ್ರಸಾದ. ವಸ್ತುತಃ ಇದರಂತೆ ಕರ್ಮದಲ್ಲಿಯೂ ವಿಭಾಗ ಮಾಡಬಹುದಿತ್ತು. ೧. ಅಧಮಕರ್ಮ, ೨. ಮಧ್ಯಮಕರ್ಮ, ೩. ಉತ್ತಮಕರ್ಮ ಎಂದು. ಹೀಗೆ ವಿಭಾಗ ಮಾಡುವುದರಿಂದಲೂ 'ನಾರಾಯಣಪ್ರಸಾದಮೃತೇ ನ ಮೋಕ್ಷಃ' ಎಂಬುದನ್ನು ಸಮರ್ಥಿಸಿದಂತಾಗುತ್ತದೆ. ಈ ಶಂಕೆಯನ್ನು ಈಗ ಪರಿಹರಿಸಿದಂತಾಯಿತು. ಏಕೆಂದರೆ 'ತಮೇವಂ ವಿದ್ವಾನ್' ಎಂಬ ಶ್ರುತಿಯಲ್ಲಿ 'ಮೋಕ್ಷವು ಕರ್ಮಜನ್ಯವಾಗಿದೆ' ಎಂಬ ಶಂಕೆಯನ್ನು ನಿರಾಕರಿಸಿದ್ದರಿಂದಲೇ ಮೂರು ಬಗೆಯ ಕರ್ಮವಿರುವುದಿಲ್ಲವೆಂದು ತಿಳಿಯಲು ಸಾಧ್ಯವಿರುತ್ತದೆ. ಆದ್ದರಿಂದ ಆಚಾರ್ಯರು ಪ್ರಸಾದದ ಮೂರು ಬಗೆಯನ್ನಷ್ಟೇ ನಿರೂಪಿಸುವ ಮೂಲಕ 'ನಾರಾಯಣಪ್ರಸಾದಮೃತೇ ನ ಮೋಕ್ಷಃ' ಎಂಬುದನ್ನು ಸಮರ್ಥಿಸಿದ್ದಾರೆ.

## ಕರ್ಮದಿಂದ ಮೋಕ್ಷವೆನ್ನುವ ಶ್ರುತಿಗಳ ಅರ್ಥ

**ಭಾವದೀಪಃ – 'अपाम सोमममृता अभूम' इत्यादिश्रुत्यादिगतिस्तु 'भाक्तं वानात्मवित्त्वात्' 'विद्यैव तु निर्धारणात्' इत्यादौ वक्ष्यत इति भावः ।**

ಇನ್ನು ಕರ್ಮದಿಂದಲೇ ಮೋಕ್ಷವೆನ್ನುವ 'ಅಪಾಮ ಸೋಮಮಮೃತಾ ಅಭೂಮ' ಇತ್ಯಾದಿ ಶ್ರುತಿಯ ನಿಜಾರ್ಥವನ್ನು 'ಭಾಕ್ತಂ ವಾऽನಾತ್ಮವಿತ್ವಾತ್' 'ವಿದ್ಯೈವ ತು ನಿರ್ಧಾರಣಾತ್' ಇತ್ಯಾದಿ ಸೂತ್ರಗಳಲ್ಲಿ ಪ್ರತಿಪಾದಿಸಿದ್ದಾರೆ - ಎಂದು ತಿಳಿಯಬೇಕು.

## ಕರ್ಮರು ಪ್ರಿಯರು; ಜ್ಞಾನಿಗಳು ಬಲುಪ್ರಿಯರು

**ಭಾವದೀಪಃ – 'प्रियो हि' इत्यादिपूर्वभाष्ये उदाहरणं तु तस्यापि तत्कर्म हरितोषं यत् इत्यादिविरोधमाशङ्क्य च 'अत्यर्थम्' इत्यस्यानुवर्तनेन स च ममात्यर्थ प्रियः कर्मकृत्तु प्रियमात्रमित्यर्थात् तस्यापि 'कर्मणा' इत्यादिस्मृत्या तात्पर्यं व्यक्तीकर्तुम्। एवमग्रेऽपि तत्रतत्र बोध्यम् ।।**

'ಪ್ರಿಯೋ ಹಿ' ಇತ್ಯಾದಿವಾಕ್ಯಗಳಲ್ಲಿ ಕರ್ಮವು ಮೋಕ್ಷಸಾಧನವಾಗಿದೆ ಎಂಬುದನ್ನು ನಿರಾಕರಣೆ ಮಾಡಿಲ್ಲ. ಆದರೂ ಸಹ ಭಾಷ್ಯದಲ್ಲಿ ಈ ಮಾತನ್ನು ಉದಾಹರಿಸಲು ಕಾರಣವೇನೆಂದರೆ 'ತತ್ಕರ್ಮ ಹರಿತೋಷಂ ಯತ್' ಎಂಬ ವಾಕ್ಯದಿಂದ ವಿರೋಧವನ್ನು ಆಶಂಕಿಸಿ 'ಅತ್ಯರ್ಥಂ' ಎಂಬ ಪದವನ್ನು 'ಪ್ರಿಯೋ ಹಿ' ಎಂಬಲ್ಲಿ ಉಲ್ಲೇಖಿಸಿದ್ದರಿಂದ

ಜ್ಞಾನಿಯಾದವನು ನನಗೆ ಅತ್ಯಂತ ಪ್ರೀತ್ಯಾಸ್ಪದನಾಗಿದ್ದಾನೆ, ಕರ್ಮಾಚರಣೆಯಲ್ಲಿ ಆಸಕ್ತನಾದವನು ಕೇವಲ ಪ್ರಿಯನಾಗಿದ್ದಾನೆ ಎಂಬಂಶವನ್ನು 'ಕರ್ಮಣಾ ತ್ವಧಮಃ ಪ್ರೋಕ್ತಃ' ಎಂಬ ಸ್ಮೃತಿಯಿಂದ ತಿಳಿಯಬೇಕೆಂದು ಸ್ಪಷ್ಟಪಡಿಸಿದ್ದಾರೆ. ಇದರಂತೆ ಮುಂದೆಯೂ ತಿಳಿಯಬೇಕು.

## ನಾರಾಯಣನ ಪ್ರಸಾದವಿಲ್ಲದೆ ಮೋಕ್ಷವಿಲ್ಲ

**ವಿಶೇಷ ವಿಚಾರ** - ನಾರಾಯಣನ ಪ್ರಸಾದವಿಲ್ಲದೇ ಮೋಕ್ಷವಾಗುವುದಿಲ್ಲವೆಂದು 'ತಮೇವಮ್' ಇತ್ಯಾದಿ ಶ್ರುತಿಯಿಂದ ವಿವರಿಸುತ್ತಿದ್ದಾರೆ.

**ಪ್ರಶ್ನೆ** - ಶ್ರುತಿಯಲ್ಲಿ ಹೇಳಿದಂತೆ ಯಾರು ಪರಮಾತ್ಮನನ್ನು ತಿಳಿಯುತ್ತಾರೋ ಅವರು ಮಾತ್ರ ಮುಕ್ತರಾಗುತ್ತಾರೆ. 'ಪರಮಾತ್ಮಜ್ಞಾನದ ಹೊರತು ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲ' ಎಂದು ಹೇಳುವ ಶ್ರುತಿಗಳನ್ನು ನೋಡಿದಾಗ ಪರಮಾತ್ಮನ ಜ್ಞಾನವೇ ಮೋಕ್ಷಸಾಧನವೆಂದು ತಿಳಿಯುತ್ತದೆ. ನೀವು ಪ್ರಸಾದವನ್ನು ಮೋಕ್ಷಸಾಧನವೆಂದು ಹೇಗೆ ಹೇಳಿದಿರಿ?

**ಉತ್ತರ** - ಈ ಪ್ರಶ್ನೆಗೆ 'ಅತ್ರ ಜ್ಞಾನಾತ್' ಇತ್ಯಾದಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಜ್ಞಾನದಿಂದ ಮೋಕ್ಷವೆಂದು ಶ್ರುತಿಯಲ್ಲಿ ಹೇಳಿದ್ದು ಸತ್ಯವೇ ಆಗಿದೆ. ಆದರೆ 'ಅನ್ಯಥಾನುಪಪತ್ತಿ'ಯಿಂದ ಅವನ ಪ್ರಸಾದದ್ವಾರವೇ ಮೋಕ್ಷವೆಂದು ಅಭಿಪ್ರಾಯ. (ಜ್ಞಾನದಿಂದ ಪ್ರಸಾದ, ಪ್ರಸಾದದಿಂದ ಮೋಕ್ಷವೆಂದು ಅಭಿಪ್ರಾಯ) ಹೀಗೆ ಒಪ್ಪದಿದ್ದರೆ 'ಯಸ್ಯ ಪ್ರಸಾದಾತ್' ಎಂಬ ಶ್ರುತಿಯು ಅನುಪಪನ್ನವಾಗುತ್ತದೆ. ಇನ್ನು ಜ್ಞಾನದಿಂದ ಭಗವತ್ಪ್ರಸಾದ ಹೇಗಾಗುತ್ತದೆ? ಎಂಬ ಪ್ರಶ್ನೆಗೆ 'ಪ್ರಿಯೋ ಹಿ' ಇತ್ಯಾದಿವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಮೋಕ್ಷವು ಪ್ರಸಾದದಿಂದಷ್ಟೇ ಲಭ್ಯವೆಂದು ಅರ್ಥಾತ್ ಸಿದ್ಧವೆಂದು ಹೇಳಿದ್ದಾಯಿತು. ಅಷ್ಟೇ ಅಲ್ಲ ಈ ವಿಷಯದಲ್ಲಿ ಸ್ಪಷ್ಟವಾದ ಶ್ರುತಿಗಳೇ ಇವೆಯೆಂದು 'ಯಮೇವೈಷ' ಇತ್ಯಾದಿ ಶ್ರುತಿಯಿಂದ ತೋರಿಸುತ್ತಿದ್ದಾರೆ. ಯಾವ ಪುರುಷನನ್ನು ಪ್ರಸನ್ನನಾಗಿ ಪರಮಾತ್ಮನು ಸ್ವೀಕಾರ ಮಾಡುತ್ತಾನೋ ಅಂತಹ ಭಕ್ತನಿಂದಲೇ ಪರಮಾತ್ಮನು ಲಭ್ಯನೆಂದರ್ಥ.

ಶ್ರುತಿಯಲ್ಲಿರುವ 'ಏಷ' ಶಬ್ದಕ್ಕೆ ಪ್ರಸನ್ನನಾಗಿ ಎಂದರ್ಥ. 'ಇಷು ಇಚ್ಛಾಯಂ' ಎಂಬ ಧಾತುವಿನ ಮೇಲೆ 'ಅರ್ಶ ಆದಿಭ್ಯೋಽಚ್' ಎಂಬುದರಿಂದ ಗುಣ ಬಂದು 'ಏಷ' ಎಂದಾಗಿದೆ. 'ಇಷ್' ಧಾತುವಿಗೆ ಇಚ್ಛೆಯೆಂಬರ್ಥವು ಪ್ರಸಿದ್ಧವಾದ್ದರಿಂದ

ಪ್ರಸಾದವು ಇಚ್ಛಾವಿಶೇಷವಾದ್ದರಿಂದ ಪ್ರಸನ್ನನಾಗಿ ಎಂಬರ್ಥವು ಲಭ್ಯವಾಗುತ್ತದೆ. ಹೀಗೆ ಹೇಳಿದ್ದರಿಂದ ಒಂದು ಆಕ್ಷೇಪವು ನಿರಸ್ತವಾಯಿತು. '' 'ಯಮೇವೈಷ' ಎಂಬಲ್ಲಿ ಪ್ರಸಾದವಾಚಕವಾದ ಪದವಿಲ್ಲ. 'ವೃಣುತೇ' ಎಂಬುದರಿಂದ ಪ್ರಸಾದವು ಲಭ್ಯವಾಗುತ್ತದೆಂದು ಸುಧೆಯಲ್ಲಿ ಹೇಳಿದಂತೆ ಹೇಳಬೇಕು. ಆದರೆ ಇದು ಅರ್ಥಾತ್ ಲಭ್ಯವಾದ ಅರ್ಥವೇ ಹೊರತು ಸಾಕ್ಷಾತ್ ಲಭ್ಯವಾದ ಅರ್ಥವಲ್ಲ''. ಈ ಆಕ್ಷೇಪಕ್ಕೆ ಈಗ ಅವಕಾಶವಿಲ್ಲ. 'ಏಷಃ' ಎಂಬ ಪದದ ಯೋಗವೃತ್ತಿಯಿಂದಲೇ ಪ್ರಸಾದವು ಲಭ್ಯವಾಗುತ್ತದೆಂದು ಹೇಳಿದ್ದೇವೆ.

## ಸುಧಾವಿರೋಧಪರಿಹಾರ

ಇನ್ನು ಜಿಜ್ಞಾಸೆಯಿಂದ ಬ್ರಹ್ಮಜ್ಞಾನವು ಹೇಗೆ ಆಗುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸಲು 'ಆತ್ಮಾ ವಾऽರೇ' ಎಂಬ ಶ್ರುತಿಯನ್ನು ಉದಾಹರಿಸುತ್ತಾರೆ. ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಲು ಶ್ರವಣಮನನಾದಿರೂಪವಾದ ಜಿಜ್ಞಾಸೆಯನ್ನು ಮಾಡಬೇಕು ಎಂದರ್ಥ.

ಶ್ರವಣಂ ಶಬ್ದಜಂ ಜ್ಞಾನಮುಪಪತ್ತ್ಯಾऽನುಚಿಂತನಮ್ ।
ಮತಿರ್ನಿರಂತರಾ ಚಿಂತಾ ನಿಧಿಧ್ಯಾಸನಮುಚ್ಯತೇ ॥

ಶಬ್ದದಿಂದ ಹುಟ್ಟುವ ಜ್ಞಾನವು ಶ್ರವಣ. ಯುಕ್ತಿಯಿಂದ ಚಿಂತಿಸುವುದು ಮನನ. ನಿರಂತರವಾದ ಚಿಂತನೆಯೇ ನಿದಿಧ್ಯಾಸನ ಎಂದೆನಿಸುತ್ತದೆ. ಈ ಪ್ರಮಾಣದ ಅನುಸಾರಿಯಾಗಿ ಶ್ರವಣಮನನ ಶಬ್ದಗಳ ಅರ್ಥವನ್ನು ತಿಳಿಯಬೇಕು.

ಪ್ರಶ್ನೆ - ಶ್ರವಣ ಮನನ ನಿದಿಧ್ಯಾಸನ ಮೂರರಿಂದ ಕೂಡಿದ್ದು ಜಿಜ್ಞಾಸಾ ಎಂದು ಹೇಳಿದರೆ ಮುಂದೆ ಕೇವಲ ಮನನವನ್ನೇ ಜಿಜ್ಞಾಸೆಯೆಂದು ಹೇಳಲಾಗುತ್ತದೆ ಅದರ ವಿರೋಧ ಬರುತ್ತದೆ. ಮತ್ತು 'ಜಿಜ್ಞಾಸೆಯೆಂದರೆ ಯುಕ್ತ್ಯನುಸಂಧಾನಾತ್ಮಕವಾದ ವಿಚಾರರೂಪವಾದ ಮನನ' ಎಂದು ಸುಧೆಯಲ್ಲಿ ಹೇಳಿದೆ. ಅದರ ವಿರೋಧವೂ ಬರುತ್ತದೆ. ಅಷ್ಟೇ ಅಲ್ಲದೆ ಶ್ರವಣದಿಂದ ಹುಟ್ಟಿದ ಜ್ಞಾನವು ಜಿಜ್ಞಾಸೆಗಿಂತ ಮೊದಲಿರುತ್ತದೆಂದು ಸುಧೆಯಲ್ಲಿ ಹೇಳಿದ ಮತ್ತೊಂದು ಮಾತೂ ಸಹ ಅನುಪಪನ್ನವಾಗುತ್ತದೆ.

ಸುಧೆಯಲ್ಲಿರುವ 'ಶ್ರವಣಾದಿ' ಶಬ್ದಕ್ಕೆ ಆತದ್ಗುಣಸಂವಿಜ್ಞಾನಬಹುವ್ರೀಹಿಸಮಾಸವನ್ನು ಮಾಡಿದಾಗ ಶ್ರವಣದ ಜೊತೆಗೆ ಮನನವೂ ಲಭ್ಯವಾಗುತ್ತದೆ. ಎಂದು ನಿಮಗೆ

ಉತ್ತರಿಸಲಾಗದು. ಹಾಗೆ ಹೇಳಿದರೆ ಶ್ರವಣ, ಮನನ, ನಿದಿಧ್ಯಾಸನರೂಪವಾದದ್ದೇ ಜಿಜ್ಞಾಸೆ ಎಂದು ಮೂರನೆಯ ಅಧ್ಯಾಯದಲ್ಲಿ ಹೇಳಿದ್ದಕ್ಕೆ ವಿರೋಧ ಬರುತ್ತದೆ.

ಹಾಗಾದರೆ ಶ್ರವಣಾದಿರೂಪವಾದ ಜಿಜ್ಞಾಸೆಯು ಕರ್ತವ್ಯವಾಗಿದೆ ಎಂದು ಹೇಳಿದ್ದು ಸುಧೆಗೆ ವಿರುದ್ಧವಾಯಿತಲ್ಲವೆ? ಈ ಪ್ರಶ್ನೆಗೆ ಬಹುಬಗೆಯಲ್ಲಿ ಸಮಾಧಾನ ಹೇಳಬಹುದು.

## 'ಶ್ರವಣಾದಿ' ಎಂಬ ಪದದ ಅರ್ಥವಿಚಾರ

ಶ್ರವಣಾದಿ ಎಂಬಲ್ಲಿ ಅತದ್ಗುಣಸಂವಿಜ್ಞಾನಬಹುವ್ರೀಹಿಸಮಾಸವನ್ನು ಮಾಡಬೇಕು. ಶ್ರವಣವು ಯಾವುದಕ್ಕೆ ಆದಿಯಾಗಿದೆಯೋ ಅಂತಹ ಮನನ ಎಂದರ್ಥ. ಆದ್ದರಿಂದ ಮನನರೂಪವಾದ ವಿಚಾರವನ್ನು ಮಾಡಬೇಕೆಂದು ಸುಧೆಯ ಅಭಿಪ್ರಾಯ. ಈ ಅರ್ಥ ಟೀಕೆಗೆ ವಿರುದ್ಧವಲ್ಲ. 'ವಿಚಾರ ಎಂಬರ್ಥದಲ್ಲಿಯೂ ಜಿಜ್ಞಾಸಾಶಬ್ದದ ಪ್ರಯೋಗ-ವಿರುವುದರಿಂದ' ಎಂದು ಟೀಕೆಯಲ್ಲಿಯೇ ಮುಂದೆ ಹೇಳಿದ್ದಾರೆ.

ಅಥವಾ 'ಶ್ರವಣಾದಿರೂಪಾ' ಎಂಬುದಕ್ಕೆ ಮತ್ತೊಂದು ಅರ್ಥ. ಶ್ರವಣ, ಮನನ, ನಿದಿಧ್ಯಾಸನ ಇವು ಮೂರೂ ಜಿಜ್ಞಾಸೆಗಳೇ ಆಗಿವೆ. ಆದರೆ ಶ್ರವಣ ಮತ್ತು ನಿದಿಧ್ಯಾಸನಗಳು ಶಾಸ್ತ್ರದಲ್ಲಿ ವಿಹಿತವಾದ್ದರಿಂದ ಮುಮುಕ್ಷುವಿಗೆ ಹೇಗೆ ಅವಶ್ಯಕವೋ ಅದರಂತೆ ಮನನವೂ ಸಹ ಅವಶ್ಯಕವಾಗಿದೆಯೆಂದು ದೃಷ್ಟಾಂತಕ್ಕೋಸ್ಕರ ಶ್ರವಣಾದಿರೂಪಾ ಎನ್ನಲಾಗಿದೆ. ಹೊರತು ಶ್ರವಣನಿದಿಧ್ಯಾಸನಗಳು ಶಾಸ್ತ್ರದ ಆರಂಭಣೀಯತ್ವಕ್ಕೆ ಪ್ರಯೋಜಕಗಳೆಂಬ ಅಭಿಪ್ರಾಯದಿಂದಲ್ಲ.

ಅಥವಾ ಮತ್ತೊಂದು ಬಗೆಯಲ್ಲಿ ಸಮಾಧಾನ ಹೇಳಬಹುದು. ಶ್ರವಣಾದಿರೂಪಾ ಎಂದರೆ ಶ್ರವಣಮನನನಿದಿಧ್ಯಾಸನ ಮೂರನ್ನೂ ಇಟ್ಟುಕೊಳ್ಳಬೇಕು. ಅವುಗಳಲ್ಲಿ ನಿದಿಧ್ಯಾಸನವು ಅಕರ್ತವ್ಯವಾದರೆ ನಿದಿಧ್ಯಾಸನದ ಅಂಗವಾದ ಮನನವೂ ಅಕರ್ತವ್ಯ-ವಾಗುತ್ತದೆ. ಮನನವು ಅಕರ್ತವ್ಯವಾದರೆ ಶಾಸ್ತ್ರವು ಅನಾರಂಭಣೀಯವಾಗುತ್ತದೆ. ಹೀಗೆ ನಿದಿಧ್ಯಾಸನವು ಪರಂಪರೆಯಿಂದ ಶಾಸ್ತ್ರಾರಂಭಕ್ಕೆ ಪ್ರಯೋಜಕವಾಗಿದೆ. ಅದರಂತೆ ಶ್ರವಣವೂ ಶಾಸ್ತ್ರಾರಂಭಕ್ಕೆ ಪ್ರಯೋಜಕವಾಗುತ್ತದೆ. ಈ ವಾಕ್ಯದಲ್ಲಿ ಈ ಅರ್ಥವೇ ಸರಿಯೇ? ಅಥವಾ ಬೇರೆ ಅರ್ಥವಿದೆಯೋ? ಎಂಬ ಸಂಶಯದ ಪರಿಹಾರಕ್ಕೋಸ್ಕರ ಶಾಸ್ತ್ರವು ಯುಕ್ತಿಗಳನ್ನು

ಹೇಳುತ್ತದೆ. ಮೊದಲು 'ಈ ವಾಕ್ಯಕ್ಕೆ ಇದು ಅರ್ಥ' ಎಂಬ ಧರ್ಮಿಜ್ಞಾನವು ಶ್ರವಣದಿಂದ ಬರಬೇಕು. ಪ್ರಯತ್ನಪಟ್ಟರೆ ಮಾತ್ರ ವಾಕ್ಯಾರ್ಥಜ್ಞಾನ ಬರಲು ಸಾಧ್ಯ. ಶ್ರವಣವೂ ಸಹ ಶಾಸ್ತ್ರಾರಂಭಕ್ಕೆ ಪ್ರಯೋಜಕವಾಗುತ್ತದೆ.

ಒಂದೇ ಜಿಜ್ಞಾಸಾಶಬ್ದಕ್ಕೆ ಶ್ರವಣಮನನಾದ್ಯನೇಕಾರ್ಥಗಳನ್ನು ಹೇಳುವುದು ತಪ್ಪಲ್ಲ. ಏಕೆಂದರೆ 'ದ್ವೇ ವಾವ ಬ್ರಹ್ಮಣೋ ರೂಪೇ' ಎಂಬಲ್ಲಿ ಒಂದೇ ರೂಪಶಬ್ದಕ್ಕೆ ಸ್ವರೂಪ, ಪ್ರತಿಮಾ ಇತ್ಯಾದ್ಯನೇಕಾರ್ಥಗಳನ್ನು ಹೇಳಿದ್ದಾರೆ. ಆದರಂತೆ ಇಲ್ಲಿಯೂ ತಿಳಿಯಬೇಕು.

ಸರ್ವವೇದಾಂತಪ್ರತ್ಯಯಾಧಿಕರಣದ ಟೀಕೆಯಲ್ಲಿ "ಶ್ರವಣ ಮನನಗಳೆರಡನ್ನು ಅವಶ್ಯ ಆಚರಿಸಬೇಕೆಂದು ಪ್ರಥಮಸೂತ್ರದಲ್ಲಿ ಹೇಳಿದೆ" ಎಂದಿದೆ. ಆದರೆ ಮೂರನೆಯ ಪಕ್ಷದಲ್ಲಿ ಶ್ರವಣ, ಮನನ, ನಿದಿಧ್ಯಾಸನ ಮೂರಕ್ಕೂ ಕರ್ತವ್ಯತ್ವವನ್ನು ಹೇಳಿದ್ದರಿಂದ ಪರಸ್ಪರವಿರೋಧ ಬರುತ್ತದೆ. ಆದರೆ ಸರ್ವಶಾಖಾಧಿಕರಣದ ಟೀಕೆಯ ಅಭಿಪ್ರಾಯ ಹಾಗಲ್ಲ. ಅದರ ಮುಂದೆ ಉಪಸಂಹಾರಾಧಿಕರಣದಲ್ಲಿ ನಿದಿಧ್ಯಾಸನದ ಬಗ್ಗೆ ವಿಶೇಷ ವಿಚಾರವನ್ನು ಮಾಡಿದ್ದಾರೆ. ಆದ್ದರಿಂದ ಸರ್ವವೇದಾಂತಪ್ರತ್ಯಯಾಧಿಕರಣದಲ್ಲಿ ಅದನ್ನು ಬಿಟ್ಟು ಕೇವಲ ಶ್ರವಣ ಮನನಗಳ ಬಗ್ಗೆ ವಿಚಾರ ಮಾಡುತ್ತಿದ್ದಾರೆ. ಶ್ರವಣ ಮನನಗಳ ಬಗ್ಗೆ ವಿಚಾರವು ಪ್ರಸ್ತಾಪವಾದಾಗ ಜಿಜ್ಞಾಸಾಧಿಕರಣದಲ್ಲಿ ಹೇಳಿದ ಒಂದಂಶವನ್ನಷ್ಟೇ ಸ್ವೀಕರಿಸುತ್ತಿದ್ದಾರೆ. ಹೊರತು ಜಿಜ್ಞಾಸಾಧಿಕರಣದಲ್ಲಿ ಶ್ರವಣ, ಮನನ ಎರಡನ್ನು ಮಾತ್ರ ಹೇಳಿದ್ದಾರೆಂಬ ಅಭಿಪ್ರಾಯವಲ್ಲ. ಆದ್ದರಿಂದಲೇ ಉಪಾಸನೆ ಎಂದರೆ ಬ್ರಹ್ಮಜಿಜ್ಞಾಸೆ ಎಂದು ಶ್ರವಣ, ಮನನ ನಿದಿಧ್ಯಾಸನ ಮೂರನ್ನು ಜಿಜ್ಞಾಸಾಪದದ ಅರ್ಥವೆಂದು ಅಲ್ಲಿಯೇ ಹೇಳಿದ್ದಾರೆ.

ಒಂದೇ ಜಿಜ್ಞಾಸಾಶಬ್ದವು ಶ್ರವಣವೇ ಮೊದಲಾದ ಅನೇಕ ಅರ್ಥಗಳನ್ನು ಹೇಗೆ ಹೇಳುತ್ತದೆ? ಎಂಬ ಪ್ರಶ್ನೆಗೆ ಇಷ್ಟು ಉತ್ತರ.

ಜಿಜ್ಞಾಸಾಶಬ್ದಕ್ಕೆ 'ಜ್ಞಾನೇಚ್ಛೆ' ಎಂದರ್ಥ. ಲಕ್ಷಣಾವೃತ್ತಿಯಿಂದ ಮನನವೆಂದು ಅರ್ಥೈಸಬೇಕೆಂಬ ಪಕ್ಷದಲ್ಲಿ ದೋಷವಿಲ್ಲ. ಮನನರೂಪವಾದ ವಿಚಾರದಲ್ಲಿ ಶಕ್ತಿವುಳ್ಳದ್ದಾಗಿದೆ ಎಂಬ ಪಕ್ಷದಲ್ಲಿ ಮನನವೇ ಮುಖ್ಯಾರ್ಥವಾದರೂ ಲಕ್ಷಣಾವೃತ್ತಿಯಿಂದ ಶ್ರವಣನಿದಿಧ್ಯಾಸನಗಳನ್ನೂ ಛತ್ರಿನ್ಯಾಯದಿಂದ ಇಟ್ಟುಕೊಳ್ಳಬೇಕು.

ಅಥವಾ ಮತ್ತೊಂದು ಪರಿಹಾರ - ಟೀಕೆಯು ಜಿಜ್ಞಾಸೆಯೆಂದೂ ವಿಚಾರವೆಂದೂ ಕರೆದಿರುವುದು ಉಪಾಸನೆಯನ್ನು. ಈ ಉಪಾಸನೆಯು ಶ್ರವಣ, ಮನನ, ನಿದಿಧ್ಯಾಸನ ಮೂರರಲ್ಲಿಯೂ ಸೇರಿರುವ ಒಂದು ಅಂಶವಾಗಿದೆ. ಅಂದರೆ ಭಗವಂತನ ವಿಷಯದಲ್ಲಿನ ಏಕಾಗ್ರತೆ. ಇದು ನಿದಿಧ್ಯಾಸನದಿಂದ ಸಾಕ್ಷಾತ್ತಾಗಿ ಲಭಿಸುತ್ತದೆ. ಶ್ರವಣ, ಮನನಗಳಿಂದ ಪ್ರಮಾಣಗಳ ಮೂಲಕ ಲಭಿಸುತ್ತದೆ. ಹೀಗೆಯೇ ಹೊರತು ಸುಧೆಯಲ್ಲಿ ಹೇಳಿದಂತೆ ಮನನವೊಂದೇ ಉಪಾಸನೆ ಆನಿಸುವುದಿಲ್ಲ. ಸುಧೆಯು ಕೇವಲ ಮನನವನ್ನೇ ಜಿಜ್ಞಾಸಾ ವಿಚಾರಶಬ್ದಗಳಿಂದ ಕರೆದಿದೆ. ಏಕೆಂದರೆ ಮನನದ ಆವಶ್ಯಕತೆಯೊಂದನ್ನು ಒಪ್ಪಿದರೆ ಸಾಕು. ಶಾಸ್ತ್ರವನ್ನಾರಂಭಿಸುವುದಕ್ಕೆ ಬೇರೆ ಯಾವುದರ ಅವಶ್ಯಕತೆಯೂ ಇಲ್ಲ. ಕೇವಲ ಮನನದಿಂದಷ್ಟೇ ಶಾಸ್ತ್ರವು ಆರಂಭವಾಗುತ್ತದೆ. ಆದ್ದರಿಂದ ಮನನವನ್ನು ವಿಧಿಸುವ ಶ್ರುತಿವಾಕ್ಯದ ವಿಷಯದಲ್ಲಿ ಈ ಸೂತ್ರವು ವಿಚಾರ ಮಾಡುತ್ತಿದೆ. ಎಂದು ಹೇಳಬೇಕು. ಆವಾಗ ಶ್ರುತಿ ಮತ್ತು ಸೂತ್ರಗಳು ಒಂದೇ ಅಭಿಪ್ರಾಯವುಳ್ಳವುಗಳೆಂದು ತಿಳಿಯುತ್ತದೆ.

ಆದರೆ ವಿವರಣದಲ್ಲಿ ಇದಕ್ಕೆ ವಿರುದ್ಧವಾಗಿ ಹೇಳಿದೆ. ''ಈ ಸೂತ್ರವು ಶ್ರವಣವಿಧಾಯಕ ಶ್ರುತಿವಾಕ್ಯದ ಬಗ್ಗೆ ವಿಚಾರ ಮಾಡುತ್ತಿದೆ'' ಎಂದು. ಇದನ್ನು ಸಮರ್ಥಿಸುವುದು ಕಷ್ಟವೆಂದು ನ್ಯಾಯಾಮೃತದ ಮೂರನೆಯ ಪರಿಚ್ಛೇದದಲ್ಲಿ ವಿಸ್ತಾರವಾಗಿ ವಿಚಾರಮಾಡಲಾಗಿದೆ.

## ವಿಚಾರದಲ್ಲಿ ರೂಢಿ, ಲಕ್ಷಣಾ ಆಲ್ಲ. (ಸ್ವಮತ)

ಜಿಜ್ಞಾಸಾಪದವನ್ನು 'ಜ್ಞಾನೇಚ್ಛೆ' ಎಂಬರ್ಥದಲ್ಲಿ ಪ್ರಯೋಗಿಸಲಾಗುತ್ತದೆ. ಆ ಅರ್ಥವನ್ನೇ ಸೂತ್ರದಲ್ಲಿರುವ ಜಿಜ್ಞಾಸಾಪದಕ್ಕೆ ವಿವಕ್ಷಿಸಿದರೆ ಏನು ತಪ್ಪು? ಎಂಬ ಪ್ರಶ್ನೆಗೆ ಟೀಕೆಯಲ್ಲಿ 'ಇಚ್ಛ್ಯಾಃ ಅವಿಧೇಯತ್ವಾತ್' ಎಂದು ಉತ್ತರಿಸಲಾಗಿದೆ. ಇಚ್ಛೆಯನ್ನು ಮಾಡೆಂದು ವಿಧಿಸಲಾಗದು.

ಹಾಗಾದರೆ ನ್ಯಾಯಸುಧೆಯಲ್ಲಿ ಜ್ಞಾನೇಚ್ಛೆಯಿಂದ ಅರ್ಥಾತ್ ಸಿದ್ಧವಾದದ್ದು ವಿಚಾರ. ಇದು ಜಿಜ್ಞಾಸಾಪದದಿಂದ ಲಕ್ಷಣಯಾ ಲಭ್ಯವಾದ ಅರ್ಥವೆಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ ಇದನ್ನು ಪರಮತರೀತಿಯಿಂದ ಹೇಳಿದ್ದು. ನಮ್ಮ ಮತವನ್ನು ಅಲ್ಲಿಯೇ ಮುಂದೆ ಹೇಳಿದ್ದಾರೆ - ಯಾವ ರೀತಿಯಾಗಿ ಮೀಮಾಂಸಾಶಬ್ದವು 'ವಿಚಾರ'

ಎಂಬರ್ಥದಲ್ಲಿ ರೂಢವಾಗಿದೆಯೋ ಆದರಂತೆ ಜಿಜ್ಞಾಸಾಶಬ್ದವೂ ವಿಚಾರ ಎಂಬರ್ಥದಲ್ಲಿ ರೂಢವಾಗಿದೆ. ಎಂದು ಅಥವಾ ಶಕ್ತಿಪಕ್ಷದಲ್ಲಾಗಲೀ ಲಕ್ಷಣಾಪಕ್ಷದಲ್ಲಾಗಲೀ ಜಿಜ್ಞಾಸಾಪದಕ್ಕೆ ವಿಚಾರ ಎಂಬರ್ಥವೇ ಹೊರತು ಏನೂ ಅರ್ಥವ್ಯತ್ಯಾಸವಿಲ್ಲ. ಹೀಗಿರುವಾಗ ಎರಡರಲ್ಲಿ ಒಂದು ಪಕ್ಷವನ್ನು ಮಾತ್ರ ನಿರ್ಧಾರ ಮಾಡುವುದು ಅನಾವಶ್ಯಕ. ಆದ್ದರಿಂದ ಎರಡೂ ಪಕ್ಷಗಳನ್ನು ಹೇಳಿದ್ದಾರೆ.

ಸುಧೆಗೆ ಅನುಸಾರಿಯಾಗಿ ಟೀಕೆಗೂ ಅರ್ಥ ಹೇಳಬಹುದು. ಆವಾಗ ಲಕ್ಷಣಾ ಹಾಗೂ ರೂಢಿಗಳೆಂಬ ಅರ್ಥವು ತಿಳಿಯುತ್ತದೆ. ಸನ್ ಪ್ರತ್ಯಯದಿಂದ ವಾಚ್ಯವಾಗದಿದ್ದರೂ ಲಕ್ಷಣಾದಿಂದ ವಿಚಾರದಲ್ಲಿ ಪ್ರಯೋಗವಿದೆ. ಮುಖ್ಯಾರ್ಥವಾದ ಇಚ್ಛೆಯನ್ನು ಇಟ್ಟುಕೊಂಡರೆ ಅದಕ್ಕೆ ವಿಧಾನವು ಕೂಡುವುದಿಲ್ಲ. ಆದ್ದರಿಂದ ಅಮುಖ್ಯಾರ್ಥವಾದ ವಿಚಾರವನ್ನು ಇಟ್ಟುಕೊಳ್ಳಬೇಕು.

## ಜ್ಞಾನೇಚ್ಛೆ ಎಂಬರ್ಥವೂ ಅಲ್ಲ
## (ಭಾಮತೀ ವಿಮರ್ಶೆ)

ಭಾಮತಿಯಲ್ಲಿ ಹೀಗಿದೆ - 'ಜಿಜ್ಞಾಸಾ' ಶಬ್ದಕ್ಕೆ ವಿಚಾರ ಎಂದರ್ಥವಲ್ಲ. 'ಇಚ್ಛೆ' ಎಂಬರ್ಥದಲ್ಲಿ 'ಸನ್' ಪ್ರತ್ಯಯವನ್ನು ವಿಧಾನ ಮಾಡಿದ್ದರಿಂದ ಇಚ್ಛೆಯಲ್ಲಿ ಶಕ್ತಿಯನ್ನೇ ಅಂಗೀಕರಿಸಬಹುದು. ಇದರಿಂದ ಶಾಸ್ತ್ರಪ್ರವೃತ್ತಿಗೆ ಬೇಕಾಗುವ ವಿಷಯಪ್ರಯೋಜಗಳ ಲಾಭವೂ ಆಗುತ್ತದೆ. ಹೀಗೆ ಮುಖ್ಯಾರ್ಥವಾದ ಇಚ್ಛೆಯನ್ನು ಇಟ್ಟುಕೊಳ್ಳಲು ಬರುವಾಗ ಆದನ್ನು ಬಿಟ್ಟು ಲಕ್ಷಣಾದಿಂದ ವಿಚಾರವನ್ನಿಟ್ಟುಕೊಳ್ಳುವುದು ಸೂಕ್ತವಲ್ಲ. ಆದ್ದರಿಂದ 'ಮೋಕ್ಷೇಚ್ಛೆಯು ಬಂದಾಗ ಬ್ರಹ್ಮಜ್ಞಾನದಲ್ಲಿ ಇಚ್ಛೆಯು ಸಹಜವಾಗಿ ಬರುತ್ತದೆಂದು ಸೂತ್ರದ ಅರ್ಥ. ಇಲ್ಲಿ ವಿಚಾರವು ಅರ್ಥಾತ್ ತೋರುತ್ತಿದೆ. ಏಕೆಂದರೆ ಸಂದಿಗ್ಧವಾದ ವಿಷಯದಲ್ಲಷ್ಟೇ ನಿರ್ಣಯಕ್ಕೋಸ್ಕರ ಜ್ಞಾನೇಚ್ಛೆ ಬರುತ್ತದೆ. ಆ ನಿರ್ಣಯವು ವಿಚಾರದಿಂದಷ್ಟೇ ಸಾಧ್ಯ. ಇಲ್ಲಿ ಇಚ್ಛೆಯು ನಿಮಿತ್ತವಾಗಿದೆ. ನಿಮಿತ್ತವಾದ ಇಚ್ಛೆಯಿಂದ ನೈಮಿತ್ತಿಕವಾದ ವಿಚಾರವು ಆಕ್ಷೇಪದಿಂದ ಲಭ್ಯವಾಗುತ್ತದೆ. ಹೀಗೆ ಆಕ್ಷೇಪದಿಂದ ಲಭ್ಯವಾದ ವಿಚಾರದಲ್ಲಿ 'ಕರ್ತವ್ಯಾ' ಎಂಬ ಪದವನ್ನು ಸೂತ್ರದಲ್ಲಿ ಅಧ್ಯಾಹಾರ ಮಾಡಬೇಕು.

ಭಾಮತಿಯ ಈ ಅಭಿಪ್ರಾಯ ಸರಿಯಲ್ಲ. ಜಿಜ್ಞಾಸಾಶಬ್ದಕ್ಕೆ ವಿಚಾರವೆಂಬ ಅರ್ಥದಲ್ಲಿ ರೂಢಿಯನ್ನು ಹೇಳುವುದೇ ಸೂಕ್ತವೆಂದು ಹಿಂದೆ ಹೇಳಿದ್ದೇವೆ. ಹಾಗಾದರೆ ಇಚ್ಛಾರ್ಥದಲ್ಲಿ ಬಂದ 'ಸನ್' ಪ್ರತ್ಯಯದ ವಿರೋಧ ಬರುತ್ತದೆ. ಎಂದರೆ ವ್ಯಾಕರಣವು ಕೇವಲ ಶಬ್ದಸಾಧುತ್ವಕ್ಕೋಸ್ಕರ ಹೊರಟಿರುತ್ತದೆ. ಇಚ್ಛಾರ್ಥವನ್ನು ಇಟ್ಟುಕೊಳ್ಳಲೇಬೇಕೆಂಬ ನಿಯಮವಿಲ್ಲ.

ತಿಳಿದವರು ಹೀಗೆ ಹೇಳುತ್ತಾರೆ - ''ವ್ಯಾಕರಣದ ಪ್ರಕಾರ ಯಾವ ಶಬ್ದಕ್ಕೆ ಅರ್ಥವನ್ನು ಹೇಳಲು ಬರುವುದಿಲ್ಲವೆಂದು ಅನುಭವಸಿದ್ಧವಾಗಿರುತ್ತದೋ, ಅಂತಹ ಸ್ಥಳಗಳಲ್ಲಿ ವ್ಯಾಕರಣದ ಪ್ರವೃತ್ತಿಯು ಕೇವಲ ಸ್ವರಕ್ಕೋಸ್ಕರ ಅಥವಾ ಶಬ್ದಸಾಧುತ್ವಜ್ಞಾನಕ್ಕೋಸ್ಕರ'' ಎಂದು.

''ಮೋಕ್ಷೇಚ್ಛೆಯು ಯಾವಾಗ ಬರುತ್ತದೋ, ಆವಾಗ ಬ್ರಹ್ಮಜ್ಞಾನೇಚ್ಛೆಯೂ ಬರುತ್ತದೆ'' ಎಂದು ಸೂತ್ರಾರ್ಥ ಹೇಳಿದ್ದೂ ಸರಿಯಲ್ಲ. ಭವತಿ' ಎಂಬ ಶಬ್ದದ ಅಧ್ಯಾಹಾರವು ಸ್ವತಃ ಸಿದ್ಧವಾಗಿದೆ. ಆದರೂ ಅಧ್ಯಾಹಾರ ಮಾಡಿದರೆ ವಾಕ್ಯವು ಕೇವಲ ಅನುವಾದವಾಗುತ್ತದೆ. ವಿಧಿ ಎಂದಾಗುವುದಿಲ್ಲ. ಮತ್ತು ಶ್ರುತಿಗೆ ಅನುಗುಣವಾಗಿ ಸೂತ್ರ ಹೇಳಬೇಕು. 'ತದ್ ವಿಜಿಜ್ಞಾಸಸ್ವ' 'ಬ್ರಹ್ಮನ ಜಿಜ್ಞಾಸೆ ಮಾಡು' ಎಂದು ಶ್ರುತಿಯು ವಿಧಿಸುತ್ತಿದೆ. ಆದಕ್ಕನುಗುಣವಾಗಿ ಸೂತ್ರದಲ್ಲಿಯೂ ವಿಧಾನ ಮಾಡಬೇಕು. ಜಿಜ್ಞಾಸಾಪದಕ್ಕೆ 'ಇಚ್ಛೆ' ಎಂಬರ್ಥವನ್ನು ಇಟ್ಟುಕೊಂಡರೆ ವಿಧಿಯು ಕೊಡುವುದಿಲ್ಲ. ಆದಕ್ಕೋಸ್ಕರ ವಿಚಾರದಲ್ಲಿ ಲಕ್ಷಣಾವನ್ನು ಮಾಡಿ 'ವಿಚಾರ ಮಾಡು' ಎಂದು ವಿಧಿಯನ್ನೇ ಅಂಗೀಕರಿಸಬೇಕು.

ಮತ್ತು 'ವಿಷಯ ಪ್ರಯೋಜನಾದಿಗಳು ಇಲ್ಲದಿರುವುದರಿಂದ ಜ್ಞಾನೇಚ್ಛೆಯು ಬರುವುದಿಲ್ಲ' ಎಂದು ಪೂರ್ವಪಕ್ಷಿ ಹೇಳಿದ್ದಾನೆ. ಇಂತಹ ಇಚ್ಛೆಯನ್ನು ಒಪ್ಪದ ಪೂರ್ವಪಕ್ಷಿಯನ್ನು ಕುರಿತು ಜ್ಞಾನೇಚ್ಛೆ ಬರುವುದರಿಂದ ವಿಷಯಾದಿಗಳು ಇರಲೇಬೇಕೆಂದು ಹೇಳುವುದು ಕೂಡುವುದಿಲ್ಲ. (ಅನ್ಯೋನ್ಯಾಶ್ರಯ ಬರುತ್ತದೆ)

'ಮೋಕ್ಷದಲ್ಲಿ ಇಚ್ಛೆಯು ಯಾವಾಗ ಬರುತ್ತದೋ ಆವಾಗ ಬ್ರಹ್ಮಜ್ಞಾನೇಚ್ಛೆಯು ಸ್ವತಃ ಬರುತ್ತದೆಂಬುದು ಶ್ರೌತಾರ್ಥ. ವಿಚಾರವು ಆರ್ಥಿಕಾರ್ಥ' ಎಂದು ಭಾಮತಿಯಲ್ಲಿ ಹೇಳಿದ್ದೂ ಸರಿಯಲ್ಲ. ಏಕೆಂದರೆ ಶ್ರೌತಾರ್ಥವನ್ನು ಹೇಳುವುದರಿಂದಲೇ ಆಕಾಂಕ್ಷೆಯು

ಶಾಂತವಾಗುತ್ತದೆ. ಶ್ರೌತಾರ್ಥವಾದ ಬ್ರಹ್ಮಜ್ಞಾನೇಚ್ಛೆಯು ಬರುತ್ತದೆಂದು ಹೇಳಿದ್ದರಿಂದಲೇ ವಿಷಯಾದಿಗಳು ಸಿದ್ಧವಾಗುತ್ತವೆ. ಪುನಃ 'ವಿಚಾರ ಮಾಡು' ಎಂದು ಆರ್ಥಿಕಾರ್ಥವನ್ನು ಒಪ್ಪುವ ಆವಶ್ಯಕತೆ ಇಲ್ಲ. ಮತ್ತು ಯಾವ ರೀತಿಯಾಗಿ ಈ ಅಧಿಕರಣದ ಫಲವಾದ ಶಾಸ್ತ್ರಾರಂಭವು ಫಲರೂಪವಾಗಿಯೇ ಸಿದ್ಧವಾಗುತ್ತದೋ ಆದರಂತೆ ವಿಚಾರಕರ್ತವ್ಯತ್ವವೂ ಫಲರೂಪವಾಗಿಯೇ ಸಿದ್ಧವಾಗುತ್ತದೆ. ಸೂತ್ರದ ಆರ್ಥಿಕಾರ್ಥ ಎಂದು ಹೇಳುವುದು ಬೇಡ.

'ಇಚ್ಛೆಯು ಆಕ್ಷೇಪಕ, ವಿಚಾರವು ಆಕ್ಷಿಪ್ತ' ಎಂಬ ಭಾಮತಿಯ ಪ್ರಧಾನಕಲ್ಪನೆಯೇ ಸರಿಯಿಲ್ಲ. ವಿಚಾರವನ್ನು ಬಿಟ್ಟು ಇಚ್ಛೆಯು ಹೇಗೆ ತಾನೆ ಅನುಪಪನ್ನವಾಗುತ್ತದೆ? ಹಾಗಿದ್ದಲ್ಲಿ ವಿಚಾರಕ್ಕೆ ಇಚ್ಛೆಯು ಆಕ್ಷೇಪಕವಾಗುತ್ತಿತ್ತು. ಏಕೆಂದರೆ ದಂಡವೆಂಬ ಒಂದು ಕಾರಣವಿದ್ದ ಮಾತ್ರದಿಂದ ಘಟರೂಪ ಕಾರ್ಯವು ಸಿದ್ಧವಾಗಬೇಕಾಗಿಲ್ಲ. ಹೊರತಾಗಿ ಎಲ್ಲ ಕಾರಣಗಳೂ ಇರಬೇಕು. ವಿಚಾರಕ್ಕೆ ಜ್ಞಾನೇಚ್ಛೆ ಎಂಬ ಒಂದೇ ಕಾರಣವಿದ್ದಿದ್ದರೆ ವಿಚಾರವು ಸಿದ್ಧವಾಗಿಯೇ ಆಗುತ್ತದೆ ಎನ್ನಬಹುದಿತ್ತು. ಆದರೆ ಫಲೇಚ್ಛೆ ಇದ್ದಮಾತ್ರದಿಂದ ಯಾರೂ ಸಹ ಸಾಧನದಲ್ಲಿ ಪ್ರವೃತ್ತಿ ಮಾಡುವುದಿಲ್ಲ. ಉದಾಸೀನವಾಗಿಯೇ ಇರುತ್ತಾರೆ. ಆದ್ದರಿಂದ ಇಚ್ಛೆಯನ್ನು ವಿಚಾರಸಾಮಗ್ರಿ ಎಂದೂ ಹೇಳಲಾಗದು. ಆದ್ದರಿಂದ ಭಾಮತಿಯಲ್ಲಿ ಹೇಳಿದ್ದು ಅಯುಕ್ತವಾಗಿದೆ. ಇದನ್ನು ಟೀಕೆಯಲ್ಲಿ 'ಭವತೀತ್ಯಾದಿಕಥನಸ್ಯ ವೈಯರ್ಥ್ಯಾತ್' 'ಭವತಿ' ಮುಂತಾಗಿ ಸೂತ್ರದಲ್ಲಿ ಹೇಳುವುದು ವ್ಯರ್ಥ ಎಂದು ಹೇಳಿದ್ದಾರೆ.

ಪದಾರ್ಥಕೌಮುದಿಯಲ್ಲಿ ಸೂತ್ರಾರ್ಥ ಹೀಗಿದೆ - 'ಬ್ರಹ್ಮಜ್ಞಾನಾಧಿಕಾರಿಗಳಿಗೆ ಬ್ರಹ್ಮಜ್ಞಾನೇಚ್ಛೆ ಬರುವುದರಿಂದ ಬ್ರಹ್ಮವಿಚಾರ ಮಾಡಬೇಕು' ಎಂದು. ಇಲ್ಲಿ ಜಿಜ್ಞಾಸಾಶಬ್ದವನ್ನು ಎರಡು ಬಾರಿ ಇಟ್ಟುಕೊಳ್ಳಲಾಗಿದೆ. ಅವಾಂತರವಾಕ್ಯದಲ್ಲಿ ಜಿಜ್ಞಾಸಾಶಬ್ದಕ್ಕೆ ಶಕ್ತಿವೃತ್ತಿಯಿಂದ ಜ್ಞಾನೇಚ್ಛೆ ಎಂದರ್ಥ ಮಹಾವಾಕ್ಯದಲ್ಲಿ ಲಕ್ಷಣಾವೃತ್ತಿಯಿಂದ ವಿಚಾರ ಎಂದರ್ಥ. ಹೀಗೆ ಜಿಜ್ಞಾಸಾಶಬ್ದಕ್ಕೆ ಎರಡೂ ಅರ್ಥಗಳನ್ನು ಹೇಳಬೇಕು. ಆದ್ದರಿಂದ ಜಿಜ್ಞಾಸಾಶಬ್ದವು ಲಕ್ಷಣಾದಿಂದ ವಿಚಾರವನ್ನು ಹೇಳುತ್ತಿದ್ದರೂ ಜೊತೆಗೆ ಜ್ಞಾನೇಚ್ಛೆಯನ್ನೂ ಹೇಳುತ್ತಿರುವುದರಿಂದ ವಿಷಯಾದಿಗಳನ್ನು ಅದು ಸೂಚಿಸುತ್ತದೆ ಎಂದು.

ಇದೂ ಸಹ ತಪ್ಪು. ಹಾಗಾದಲ್ಲಿ ಒಂದೇ ಶಬ್ದಕ್ಕೆ ಶಕ್ತಿ ಮತ್ತು ಲಕ್ಷಣಾ ಎಂಬೆರಡು ವೃತ್ತಿಗಳನ್ನು ಏಕಕಾಲದಲ್ಲಿ ಒಪ್ಪಬೇಕಾದೀತು.

ಮತ್ತೊಂದು ದೋಷ - ಜಿಜ್ಞಾಸಾಶಬ್ದವು ಇಚ್ಛಾರ್ಥಕ ಎನ್ನಲು ಯಾವ ಪ್ರಮಾಣವೂ ಇಲ್ಲ. ವಿಷಯಾದಿಗಳ ಸೂಚನೆ ಮಾಡುವುದಕ್ಕೋಸ್ಕರವೂ ಬೇಕಾಗಿಲ್ಲ. ಹಿಂದೆ ಹೇಳಿದಂತೆ ವಿಷಯ ಪ್ರಯೋಜನಾದಿಗಳ ಸೂಚನೆಯು ಬೇರೆ ರೀತಿಯಿಂದಲೂ ಸಾಧ್ಯವಿರುವಾಗ ಜ್ಞಾನೇಚ್ಛಾಬೋಧಕವೆನ್ನಲು ಕಾರಣವಿಲ್ಲ. ಆದ್ದರಿಂದ 'ಗಂಗಾಯಾಂ ಮೀನಘೋಷೌ' ಎಂಬಲ್ಲಿ ಯಾವ ರೀತಿಯಾಗಿ ಬೇರೆ ಗತಿಯಿಲ್ಲದೆ ವೃತ್ತಿದ್ವಯವನ್ನು ಒಪ್ಪುತ್ತೇವೋ ಆದರಂತೆ ಇಲ್ಲಿಯೂ ವೃತ್ತಿದ್ವಯ ಒಪ್ಪುತ್ತೇವೆ ಎಂದು ಹೇಳಲಾಗದು. ಅಷ್ಟೇ ಅಲ್ಲದೇ 'ಯಸ್ಮಾತ್' ಇತ್ಯಾದಿಯಾಗಿ ಅಧ್ಯಾಹಾರ ಮಾಡಿ ಅವಾಂತರವಾಕ್ಯ, ಮಹಾವಾಕ್ಯ ಎಂದು ವಿಭಾಗ ಮಾಡುವುದೂ ಸರಿಯಲ್ಲ.

ಆದ್ದರಿಂದ ಜಿಜ್ಞಾಸಾಶಬ್ದವು ವಿಚಾರಾರ್ಥಕವೇ ಹೊರತು ಜ್ಞಾನೇಚ್ಛಾಪರವಲ್ಲ.

## ಭಗವಂತನ ಉತ್ತಮಪ್ರಸಾದವೇ ಮೋಕ್ಷಸಾಧಕ

**ಬ್ರಹ್ಮಸೂತ್ರಭಾಷ್ಯಮ್ –**

**'ಕರ್ಮಣಾ ತ್ವಧಮಃ ಪ್ರೋಕ್ತಃ ಪ್ರಸಾದಃ, ಶ್ರವಣಾದಿಭಿಃ ।**
**ಮಧ್ಯಮಃ, ಜ್ಞಾನಸಮ್ಪತ್ತ್ಯಾ ಪ್ರಸಾದಸ್ತ್ವುತ್ತಮೋ ಮತಃ ।।**
**ಪ್ರಸಾದಾತ್ ತ್ವಧಮಾದ್ ವಿಷ್ಣೋಃ ಸ್ವರ್ಗಲೋಕಃ ಪ್ರಕೀರ್ತಿತಃ ।**
**ಮಧ್ಯಮಾಜ್ಜನಲೋಕಾದಿಃ, ತ್ತಮಸ್ತ್ವೇವ ಮುಕ್ತಿದಃ ।।**
**ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಸ್ತಥೈವ ಚ ।**
**ಸಾಧನಂ ಜ್ಞಾನಸಮ್ಪತ್ತೌ ಪ್ರಧಾನಂ ನಾನ್ಯದಿಷ್ಯತೆ ।**
**ನ ಚೈತಾನಿ ವಿನಾ ಕಶ್ಚಿಜ್ಜ್ಞಾನಮಾಪ ಕುತಶ್ಚನ ।।' ಇತಿ ನಾರದೀಯೇ ।**

ಅನುವಾದ - ಸತ್ಕರ್ಮಾಚರಣೆಯಿಂದ ದೊರೆಯುವ ಭಗವಂತನ ಪ್ರಸಾದವು ಅಧಮ, ಶ್ರವಣಾದಿಗಳಿಂದ ದೊರೆಯುವ ಭಗವಂತನ ಪ್ರಸಾದವು ಮಧ್ಯಮ, ಅಪರೋಕ್ಷಜ್ಞಾನದಿಂದ ದೊರೆಯುವ ಪ್ರಸಾದವು ಉತ್ತಮ, ಅಧಮಪ್ರಸಾದದಿಂದ ಸ್ವರ್ಗಲೋಕವು, ಮಧ್ಯಮಪ್ರಸಾದದಿಂದ ಜನೋಲೋಕ ತಪೋಲೋಕ ಸತ್ಯಲೋಕಗಳು, ಉತ್ತಮಪ್ರಸಾದದಿಂದ ಮೋಕ್ಷವು ದೊರೆಯುತ್ತವೆ.

ಸಚ್ಛಾಸ್ತ್ರಶ್ರವಣವು, ಮನನವು, ಧ್ಯಾನವು ಮತ್ತು ಭಕ್ತಿ ಇವುಗಳು ಪರಮಾತ್ಮನ ಅಪರೋಕ್ಷಜ್ಞಾನವನ್ನು ಪಡೆಯಲು ಮುಖ್ಯವಾದ ಸಾಧನಗಳು. ಕರ್ಮವು ಮುಖ್ಯವಾದ

ಸಾಧನವಲ್ಲ. ಈ ಶ್ರವಣಾದಿಗಳನ್ನು ಹೊಂದದೆ ಯಾರೂ ಸಹ ಇಲ್ಲಿಯ ತನಕ ಪರಮಾತ್ಮನ ಅಪರೋಕ್ಷಜ್ಞಾನವನ್ನು ಹೊಂದಿಲ್ಲ. ಹೀಗೆ ನಾರದೀಯಪುರಾಣದಲ್ಲಿ ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- 'ತತ್ ಕರ್ಮ ಹರಿತೋಷಮ್' ಇತ್ಯಾದಿ ಸ್ಮೃತಿಗಳಂತೆ ಕರ್ಮಾದಿಗಳಿಂದಲೂ ಭಗವತ್‌ಪ್ರಸಾದವು ದೊರೆಯುತ್ತದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಕರ್ಮಣಾ = ಕಾಮ್ಯಕರ್ಮ ಮತ್ತು ನಿಷ್ಕಾಮಕರ್ಮಗಳಿಂದ, ಪ್ರಸಾದಃ = ದೊರೆಯುವ ಭಗವಂತನ ಅನುಗ್ರಹವು, ಅಧಮಃ = ಅಧಮವಾದದ್ದು, ಶ್ರವಣಾದಿಭಿಃ = ಶ್ರವಣ, ಮನನಾದಿಗಳಿಂದ ದೊರೆಯುವ, ಪ್ರಸಾದಃ = ಭಗವಂತನ ಪ್ರಸಾದವು, ಮಧ್ಯಮಃ = ಮಧ್ಯಮವಾದದ್ದು, ಜ್ಞಾನಸಂಪತ್ತ್ಯಾ = ಅಪರೋಕ್ಷಜ್ಞಾನದ ಪಕ್ವತೆಯಿಂದ ಹುಟ್ಟಿದ, ಪ್ರಸಾದಃ = ಭಗವಂತನ ಪ್ರಸಾದವು, ಉತ್ತಮಃ = ಉತ್ಕೃಷ್ಟವಾದದ್ದು.

ಈ ಮೂರುವಿಧ ಪ್ರಸಾದಗಳಿಂದ ಯಾವ ಯಾವ ಫಲಗಳು ದೊರೆಯುತ್ತವೆ? ಎಂದರೆ, ಅಧಮಾತ್ = ಅಧಮವಾದ, ಪ್ರಸಾದಾತ್ = ಕಾಮ್ಯಕರ್ಮದಿಂದ ದೊರೆತ ಪ್ರಸಾದದಿಂದ, ಸ್ವರ್ಗಲೋಕಃ = ಸ್ವರ್ಗಲೋಕವು, ಪ್ರಕೀರ್ತಿತಃ = ಹೇಳಲ್ಪಟ್ಟಿದೆ. ಮಧ್ಯಮಾತ್ = ಶ್ರವಣಜನ್ಯವಾದ ಮಧ್ಯಮಪ್ರಸಾದದಿಂದ, ಜನಲೋಕಾದಿ = ಜನೋಲೋಕವೇ ಮೊದಲಾದವುಗಳು, ಪ್ರಕೀರ್ತಿತಾಃ = ಹೇಳಲ್ಪಟ್ಟಿದೆ. ಉತ್ತಮಸ್ತು ಏವ = ಉತ್ತಮವಾದ ಅಪರೋಕ್ಷಜ್ಞಾನಜನ್ಯಪ್ರಸಾದವೇ, ಮುಕ್ತಿದಃ = ಮೋಕ್ಷದಾಯಕವಾದದ್ದು.

ಪ್ರತಿಪದಾರ್ಥ - ಕರ್ಮಾದಿಗಳಿಂದಲೂ ಅಪರೋಕ್ಷಜ್ಞಾನವು ದೊರೆಯುವಾಗ ಬ್ರಹ್ಮಜಿಜ್ಞಾಸೆಯು ಏಕೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಶ್ರವಣಂ = ಸಚ್ಛಾಸ್ತ್ರಶ್ರವಣವು, ಮನನಂ ಚೈವ = ಮನನವೂ ಸಹ, ಜ್ಞಾನಂ = ಶಾಸ್ತ್ರಜನ್ಯಜ್ಞಾನವು, ತಥೈವ ಚ = ಅದರಂತೆ, ಭಕ್ತಿಃ = ಹರಿಭಕ್ತಿಯು, ಜ್ಞಾನಸಂಪತ್ತ್ಯೈ = ಮೋಕ್ಷಕಾರಣವಾದ ಅಪರೋಕ್ಷಜ್ಞಾನದ ಸಂಪತ್ತಿನಲ್ಲಿ, ಪ್ರಧಾನ = ಮುಖ್ಯವಾದ, ಸಾಧನಂ = ಕಾರಣವು. ಅನ್ಯತ್ = ಬೇರೆ ಯಾವುದೂ, ನ ಇಷ್ಯತೇ = ಮೋಕ್ಷಕಾರಣವಾಗುವುದಿಲ್ಲ. ಏತಾನಿ = ಈ ಶ್ರವಣಾದಿಸಾಧನಗಳನ್ನು, ವಿನಾ = ಬಿಟ್ಟು, ಕಶ್ಚಿದ್ = ಯಾರೂ ಸಹ, ಕುತಶ್ಚನ = ಬೇರೆ ಕರ್ಮಾದಿಗಳಿಂದ, ಜ್ಞಾನಂ = ಅಪರೋಕ್ಷಜ್ಞಾನವನ್ನು, ನ ಆಪ ಚ = ಹೊಂದಿರುವುದೇ ಇಲ್ಲ. ಇತಿ = ಹೀಗೆ, ನಾರದೀಯೇ = ನಾರದಪುರಾಣದಲ್ಲಿ ಹೇಳಲ್ಪಟ್ಟಿದೆ.

ಜಿಜ್ಞಾಸಾಧಿಕರಣ (೧-೧-೧)

## ಪ್ರಸಾದಜ್ಞಾನಗಳಿಗೆ ಕರ್ಮವು ಅಮುಖ್ಯಕಾರಣ

**तत्वप्रकाशिका – अत्र पुनः 'प्रियो हि' (गी-७-१७) इतिवाक्येऽन्य-निषेधाभावात् भवेदेवं शङ्का' इत्याशङ्कां प्रमाणेन परिहरति – कर्मणेति ।।**

'ಪ್ರಿಯೋ ಹಿ' ಇತ್ಯಾದಿ ವಾಕ್ಯಗಳಲ್ಲಿ ಕರ್ಮಾದಿಗಳನ್ನು ನಿಷೇಧ ಮಾಡದಿರುವುದರಿಂದ 'ಕರ್ಮಾದಿಗಳಿಂದಲೂ ಮೋಕ್ಷವು ದೊರೆಯಲೆ'ಂಬ ಶಂಕೆಯು ಬಂದೇ ಬರುತ್ತದೆ. ಈ ಶಂಕೆಯನ್ನು ಪರಿಹಾರಮಾಡುವುದಕ್ಕಾಗಿ 'ಕರ್ಮಣಾ' ಇತ್ಯಾದಿ ವಾಕ್ಯಗಳಿಂದ ಪ್ರಮಾಣಗಳನ್ನು ನೀಡುತ್ತಿದ್ದಾರೆ.

**तत्वप्रकाशिका – सत्यं भवेदेव कर्मादिना भगवत्प्रसादः तथापि तस्यानुत्तमत्वात्, ज्ञानसाध्यस्यैवोत्तमत्वात् । अनुत्तमेन स्वर्गादिमात्रसिद्धेः, उत्तमेनैव मोक्षसिद्धेः, तत्साधनं ज्ञानमपेक्षितमिति भावः ।**

ಕರ್ಮಾದಿಗಳಿಂದ ಭಗವಂತನ ಪ್ರಸಾದವು ಲಭ್ಯವಾಗುತ್ತದೆಂಬುದು ನಿಜ. ಆದರೆ ಕರ್ಮಜನ್ಯವಾದ ಪ್ರಸಾದವು ಶ್ರೇಷ್ಠವಾಗಿರುವುದಿಲ್ಲ. ಜ್ಞಾನದಿಂದ ದೊರೆಯುವ ಪ್ರಸಾದವು ಶ್ರೇಷ್ಠವಾಗಿರುತ್ತದೆ. ಶ್ರೇಷ್ಠವಲ್ಲದ ಪ್ರಸಾದದಿಂದ ಸ್ವರ್ಗಾದಿಫಲಗಳಷ್ಟೇ ದೊರೆಯುತ್ತವೆ. ಶ್ರೇಷ್ಠಪ್ರಸಾದದಿಂದ ಮೋಕ್ಷವು ದೊರೆಯುತ್ತದೆ. ಆದ್ದರಿಂದ ಮೋಕ್ಷಕ್ಕೆ ಸಾಧನವಾದದ್ದು ಜ್ಞಾನವೇ ಆಯಿತು. ಆದ್ದರಿಂದಲೇ ಆ ಜ್ಞಾನವನ್ನು ಎಲ್ಲರೂ ಅಪೇಕ್ಷಿಸುತ್ತಾರೆಂದು ಅಭಿಪ್ರಾಯ.

**तत्वप्रकाशिका – ननु ज्ञानं च 'कर्मणा ज्ञानमातनोति' इत्यादेः कर्मादिनाऽपि सम्भवतीति न जिज्ञासया कृत्यम् ? 'आत्मा' (बृ -उ-४,४,५) इतिवाक्येऽन्यनिषेधाभावादित्याशङ्कां तच्छेषेण परिहरति – श्रवणमिति ।।**

'ಕರ್ಮಣಾ ಜ್ಞಾನಮಾತನೋತಿ' (ಕರ್ಮದಿಂದ ಜ್ಞಾನವು ದೊರೆಯುತ್ತದೆ) ಇತ್ಯಾದಿ ಪ್ರಮಾಣಗಳಂತೆ ಕರ್ಮದಿಂದ ಜ್ಞಾನವು ಹುಟ್ಟುತ್ತದೆ ಎಂದು ಹೇಳಿರುವುದರಿಂದ ಜ್ಞಾನವನ್ನು ಪಡೆಯಲು ಕರ್ಮವೇ ಸಾಕು; ಜಿಜ್ಞಾಸೆಯು ಬೇಕಾಗಿಲ್ಲ ಮತ್ತು 'ಆತ್ಮಾ ವಾ ಅರೇ ದ್ರಷ್ಟವ್ಯಃ' ಇತ್ಯಾದಿ ವಾಕ್ಯಗಳು ಭಗವಂತನ ಜ್ಞಾನಕ್ಕೆ ಬೇರೆ ಸಾಧನಗಳನ್ನು

ನಿಷೇಧಿಸುತ್ತಿಲ್ಲ. ಈ ಶಂಕೆಯನ್ನು 'ಶ್ರವಣಂ ಮನನಂ' ಎಂದು ಹಿಂದೆ ಹೇಳಿದ ಪ್ರಮಾಣಶೇಷದಿಂದ ಪರಿಹರಿಸುತ್ತಿದ್ದಾರೆ.

**तत्वप्रकाशिका – का गतिस्तर्ह्येतद्वचनस्य ? इत्यत आह – प्रधानमिति ।। अप्रधानसाधनं कर्मादीति भावः । विपरीतं किन्न स्यात्? इत्यत आह – न चेति।। एतानि = श्रवणादीनि । कुतश्चन = कर्मादेः ।**

ಹಾಗಾದರೆ 'ಕರ್ಮಣಾ ಜ್ಞಾನಮಾತನೋತಿ' ಎಂಬ ವಾಕ್ಯಕ್ಕೆ ಏನು ಗತಿ? ಎಂಬ ಪ್ರಶ್ನೆಗೆ 'ಪ್ರಧಾನಂ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಕರ್ಮಾದಿಗಳು ಅಪ್ರಧಾನ-ಸಾಧನವಾಗಿವೆ ಎಂದು ಅರ್ಥ. ಇದಕ್ಕೆ ವಿರುದ್ಧವಾಗಿ ಏಕೆ ಹೇಳಬಾರದು? ಎಂಬ ಪ್ರಶ್ನೆಗೆ 'ನ ಚೈತಾನಿ' ಎಂದು ಉತ್ತರಿಸಿದ್ದಾರೆ. ಏತಾನಿ = ಈ ಶ್ರವಣಾದಿಗಳು; ಕುತಶ್ಚನ = ಕರ್ಮಾದಿಗಳಿಂದ.

**तत्वप्रकाशिका –'ज्ञानस्य श्रवणाद्यन्वयव्यतिरेकित्वात् तदेव प्रधानसाधनम्, कर्मादेस्तदभावात् तत्पारम्पर्येण साधनम्' इति भावः।**

" 'ಶ್ರವಣಾದಿಗಳನ್ನು ಮಾಡಿದರೆ ಜ್ಞಾನವು ದೊರೆಯುತ್ತದೆ; ಶ್ರವಣಾದಿಗಳನ್ನು ಮಾಡದಿದ್ದರೆ ಜ್ಞಾನವು ದೊರೆಯುವುದಿಲ್ಲ' ಎಂಬ ಅನ್ವಯವ್ಯತಿರೇಕದಿಂದ ಜ್ಞಾನಕ್ಕೆ ಶ್ರವಣಾದಿಗಳೇ ಪ್ರಧಾನಸಾಧನವೆಂದು ತಿಳಿಯುತ್ತದೆ. ಕರ್ಮಾದಿಗಳಲ್ಲಿ ಈ ರೀತಿಯ ಅನ್ವಯವ್ಯತಿರೇಕಗಳಿಲ್ಲದ ಕಾರಣ ಅವುಗಳು ಕೇವಲ ಪರಂಪರೆಯಿಂದ ಕಾರಣವಾಗುತ್ತವೆ" ಎಂದು ಅಭಿಪ್ರಾಯ.

## ಕರ್ಮದಿಂದ ಉತ್ತಮ ಪ್ರಸಾದ ದೊರೆಯದು

**भावदीपः – ननु प्रसादस्य हेतुविभागपूर्वं विभागोक्त्या फलविभागकथनेन कथमुक्तशङ्कानिरासः? इत्यतो भावमाह – सत्यमिति ।। ज्ञानसाध्यस्यैवेति ।। अत एव भाष्ये प्राक् 'अत्यर्थप्रसादः' इत्यर्थपदप्रयोग उत्तमप्रसादोक्त्यै कृतः।**

ಆಚಾರ್ಯರು ಭಾಷ್ಯದಲ್ಲಿ ಹೇತುವಿಭಾಗಕ್ಕಿಂತ ಮೊದಲು ಪ್ರಸಾದದ ವಿಭಾಗವನ್ನು ಹೇಳಿದ್ದಾರೆ. ಮುಂದೆ ಪ್ರಸಾದದಿಂದ ದೊರೆಯುವ ಫಲವಿಭಾಗವನ್ನು ಹೇಳಿದ್ದಾರೆ. ಇದರಿಂದ ಹಿಂದಿನ ಶಂಕೆಯು ಹೇಗೆ ಪರಿಹಾರವಾಗುತ್ತದೆ? ಎಂಬ ಪ್ರಶ್ನೆಗೆ 'ಸತ್ಯಮ್' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ. ಅಂದರೆ ಕರ್ಮಾದಿಗಳಿಂದಲೂ ಭಗವತ್ಪ್ರಸಾದವು ದೊರೆಯುತ್ತದೆ. ಆದರೆ ಅದು ಉತ್ತಮವಾದದ್ದಲ್ಲ. ಜ್ಞಾನಸಾಧ್ಯವಾದದ್ದಷ್ಟೇ ಉತ್ತಮಪ್ರಸಾದವೆನಿಸುತ್ತದೆ. ಆದ್ದರಿಂದಲೇ ಭಾಷ್ಯದಲ್ಲಿ ಹಿಂದೆ 'ಅತ್ಯರ್ಥಪ್ರಸಾದಃ' ಎಂದು ಉತ್ತಮಪ್ರಸಾದವನ್ನೇ ಜ್ಞಾನಸಾಧ್ಯವೆಂದಿದ್ದಾರೆ.

## ಭಾಗವತತಾತ್ಪರ್ಯದ ವಿರೋಧಪರಿಹಾರ

**ಭಾವದೀಪಃ** – 'मध्यमाज्जनलोकादिः' इति भाष्यम् एके व्याचक्षते । जनलोकादिरिति बहुव्रीहितत्पुरुषौ । स्वबिम्बेतररूपसाक्षात्कारसहितान् मध्यमादिति वाच्यम् । 'न सामान्यादप्युपलब्धेर्मृत्युवन्नहि लोकापत्तिः' इत्यत्र भाष्ये सामान्यदर्शनात् लोकाः इति वक्ष्यमाणत्वात् । तथा च 'ईयुस्त्रीन् कर्मणा लोकान् ज्ञानेनैव तदुत्तरान्' इति द्वितीयस्कन्धतात्पर्यविरोध इति ।

ಕರ್ಮದಿಂದ ಅಧಮಪ್ರಸಾದ; ಶ್ರವಣಾದಿಗಳಿಂದ ಮಧ್ಯಮಪ್ರಸಾದ; ಜ್ಞಾನದಿಂದ ಉತ್ತಮಪ್ರಸಾದವು ದೊರೆಯುತ್ತದೆ. ಅಧಮಪ್ರಸಾದದಿಂದ ಸ್ವರ್ಗಲೋಕವು ಮಧ್ಯಮಪ್ರಸಾದದಿಂದ ಜನಲೋಕಾದಿಗಳು ಉತ್ತಮಪ್ರಸಾದದಿಂದ ಮೋಕ್ಷವು ದೊರೆಯುತ್ತದೆಂದು ಸಾಧನೆ ಹಾಗೂ ಫಲಗಳನ್ನು ತಿಳಿಯಬೇಕು. ಇಲ್ಲಿ 'ಮಧ್ಯಮಾಜ್ಜನಲೋಕಾದಿಃ' ಎಂಬ ಭಾಷ್ಯವನ್ನು ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ವ್ಯಾಖ್ಯಾನಿಸಿದ್ದಾರೆ. ಏಕೆಂದರೆ 'ಈಯುಃ ಸ್ತ್ರೀನ್ ಕರ್ಮಣಾ ಲೋಕಾನ್ ಜ್ಞಾನೇನೈವ ತದುತ್ತರಾನ್' (ಭಾಗ.ತಾ. ದ್ವಿತೀಯಸ್ಕಂಧ) ಎಂಬಲ್ಲಿ ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳು ಕರ್ಮದಿಂದ ದೊರೆಯುತ್ತವೆ; ಮೇಲಿನ ಮಹರ್ಲೋಕಾದಿಗಳು ಕೇವಲ ಜ್ಞಾನದಿಂದಲೇ ದೊರೆಯುತ್ತವೆಯೆಂದು ಹೇಳಿದ್ದಾರೆ. ಆದರೆ ಇಲ್ಲಿ ಶ್ರವಣದಿಂದ ಜನಲೋಕವು ದೊರೆಯುತ್ತವೆಂದು ಹೇಳುತ್ತಿದ್ದಾರೆ. ಇದು ಭಾಗವತತಾತ್ಪರ್ಯಕ್ಕೆ ವಿರುದ್ಧವಲ್ಲವೇ? ಎಂದು ಪ್ರಶ್ನೆ ಬರುತ್ತದೆ.

## ವಿರೋಧಪರಿಹಾರ - ೧

**ಭಾವದೀಪಃ** – अन्ये तु –

प्रादुर्भावानृते विष्णुमिन्द्रियैर्नैव पश्यति ।
प्रादुर्भावानपि यदा ज्ञानदृष्ट्यैव पश्यति ।
तदैव मुच्यते जीवो न दुष्टैरिन्द्रियैः क्वचित् ।।

इति काठकभाष्योक्तेरवतारविषयकज्ञानदर्शनसहितान् मध्यमादित्यर्थ इत्याहुः ।

ಕೆಲವರು ಹೀಗೆ ವ್ಯಾಖ್ಯಾನಿಸಿದ್ದಾರೆ -

'प्रादुर्भावानृतेऽविष्णुमिन्द्रियैर्नैव पश्यति।
प्रादुर्भावानपि यदा ज्ञानदृष्ट्यैव पश्यति।
तदैव मुच्यते जीवो न दुष्टैरिन्द्रियैः क्वचित् ॥

ಎಂದು ಆಚಾರ್ಯರು ಕಾಠಕಭಾಷ್ಯದಲ್ಲಿ ಹೇಳಿದ 'ಭಗವಂತನ ಪ್ರಾದುರ್ಭಾವರೂಪಗಳನ್ನು ದುಷ್ಟವಾದ ಇಂದ್ರಿಯಗಳಿಂದ ನೋಡಲು ಸಾಧ್ಯವಿಲ್ಲ; ಜ್ಞಾನದೃಷ್ಟಿಯಿಂದಲೇ ನೋಡಬೇಕು. ಆವಾಗ ಮಾತ್ರ ಜೀವನು ಮುಕ್ತನಾಗುತ್ತಾನೆ' ಎಂಬ ಪ್ರಮೇಯದಂತೆ ಭಗವಂತನ ಅವತಾರವಿಷಯಕವಾದ ಜ್ಞಾನದಿಂದ ಜೀವನು ಮಧ್ಯಮಲೋಕಗಳಾದ ಜನಲೋಕಾದಿಗಳನ್ನು ಪಡೆಯುತ್ತಾನೆ.

## ವಿರೋಧಪರಿಹಾರ - ೨

**ಭಾವದೀಪಃ** – अपरे तु – स्वबिम्बसाक्षात्कारवतामेव कार्यं ब्रह्म प्राप्तवतां मध्ये जनलोकादौ कियत्कालमवस्थानं न निर्हेतुकं भवितुमर्हतीति तत्कृतश्रवणादिजन्यमध्यमप्रसादात् जनलोकादीत्याहुः ।

ಬೇರೆ ಕೆಲವರು ಹೀಗೆ ವ್ಯಾಖ್ಯಾನಿಸಿದ್ದಾರೆ -- "ಯಾವ ಪುರುಷನಿಗೆ ಬಿಂಬಸಾಕ್ಷಾತ್ಕಾರವಾಗಿರುತ್ತದೋ ಆಂತಹವನು ಬ್ರಹ್ಮಲೋಕವನ್ನು ಕುರಿತು ಹೋಗುತ್ತಾನೆ.

ಆವಾಗ ಮಧ್ಯದಲ್ಲಿರುವ ಜನಲೋಕಾದಿಗಳಲ್ಲಿ ಸ್ವಲ್ಪಕಾಲ ವಾಸಿಸಿ ಮುಂದೆ ಹೋಗುತ್ತಾನೆ. ಈ ವಾಸವಾದರೋ ಆ ಪುರುಷನಿಂದ ಮಾಡಲ್ಪಟ್ಟ ಶ್ರವಣಾದಿಗಳಿಂದ ಪಡೆಯಲ್ಪಟ್ಟದ್ದು. ಆದ್ದರಿಂದಲೂ ಭಾಗವತದ ಮಾತಿಗೆ ವಿರೋಧವಿಲ್ಲ'' ಎಂದು.

## ವಿರೋಧಪರಿಹಾರ - ೩

**ಭಾವದೀಪಃ** – ಇತರೇ ತು – ಜನಲೋಕಾದಿರಿತಿ ತತ್ಪುರುಷ ಏವ, ತಥಾಚ ಯಥಾನ್ಯಾಸ ಏವ ಸಾಧುಃ । ಶ್ರವಣಾದೇರಪಿ ಜ್ಞಾನತ್ವಾತ್ 'ಜ್ಞಾನೇನೈವ ತದುತ್ತರಾನ್' ಇತಿ ವಾಕ್ಯಂ ನ ವಿರುಧ್ಯತ ಇತ್ಯಾಹುಃ ।

ಮತ್ತೂ ಕೆಲವರು 'ಜನಲೋಕಾದಿಃ' ಎಂಬಲ್ಲಿ ತತ್ಪುರುಷಸಮಾಸವನ್ನಾಶ್ರಯಿಸಿ ಯಥಾಶ್ರುತವಾದ ಅರ್ಥವನ್ನೇ ಹೇಳುತ್ತಾರೆ. ಶ್ರವಣಾದಿಗಳೂ ಕೂಡ ಜ್ಞಾನರೂಪವಾದ್ದರಿಂದ ಜ್ಞಾನದಿಂದಲೇ ಜನಲೋಕಾದಿಗಳನ್ನು ಪಡೆದಿದ್ದಾನೆ. ಆದ್ದರಿಂದ 'ಜ್ಞಾನೇನೈವ ತದುತ್ತರಾನ್' ಎಂಬ ಭಾಗವತವಾಕ್ಯಕ್ಕೆ ವಿರೋಧವಿಲ್ಲ -- ಎಂದು.

## ವಿರೋಧಪರಿಹಾರ - ೪

**ಭಾವದೀಪಃ** – 'ಆಧ್ಯಾನಾಯ' ಇತ್ಯತ್ರ ಟೀಕಾಯಾಂ ಶ್ರವಣಾದೇರ್ಜನಲೋಕಾದಿಫಲಕತ್ವೋಕ್ತಿರಪ್ಯೇವಂ ನೇಯೇತಿ । ಸ್ಮೃತಿಶೇಷೋಕ್ತೇರುಪಯೋಗಮಾಹ – **ನನ್ವಿತಿ** ।। 'ಕರ್ಮಣಾ ಜ್ಞಾನಮಾತನೋತಿ, ಜ್ಞಾನೇನಾಮೃತೀಭವತಿ' ಇತಿ, 'ಭಾಕ್ತಂ ವಾ' ಇತ್ಯತ್ರ ಭಾಷ್ಯೋಕ್ತವಚನಾದಿತ್ಯರ್ಥಃ । **ಅನ್ಯನಿಷೇಧೇತಿ** ।। ತದ್ವಾಕ್ಯಸ್ಯ ಪ್ರಾಗುಕ್ತಿಸ್ತು 'ಕರ್ಮಣಾ ಜ್ಞಾನಮ್' ಇತ್ಯೇತದ್ವಿರೋಧಮಾಶಙ್ಕ್ಯ 'ಶ್ರವಣಂ ಮನನಮ್' ಇತ್ಯಾದಿ ಸ್ಮೃತ್ಯಾ ಪ್ರಧಾನಸಾಧನತ್ವಂ ಶ್ರುತ್ಯಭಿಪ್ರಾಯ ಇತಿ ವಿವರಿತುಮ್ – **ತದಭಾವಾದಿತಿ** ।।

'ಆಧ್ಯಾನಾಯ' ಎಂಬ ಸೂತ್ರದ ಟೀಕೆಯಲ್ಲಿಯೂ ಶ್ರವಣಾದಿಗಳನ್ನು ಜನಲೋಕಾದಿಗಳನ್ನು ಹೇಳಿದ್ದಾರೆ. ಅಲ್ಲಿಯೂ ಈ ನಾಲ್ಕು ಬಗೆಯ ಸಮಾಧಾನಗಳನ್ನು ಅನುಸಂಧಾನ ಮಾಡಿಕೊಳ್ಳಬೇಕು.

ಮುಂದಿನ ಸ್ಮೃತಿಯನ್ನು ಉಲ್ಲೇಖಿಸಲು ಕಾರಣವನ್ನು 'ನನು' ಇತ್ಯಾದಿ ಗ್ರಂಥದಿಂದ ತಿಳಿಸಿದ್ದಾರೆ. 'ಭಾಕ್ತಂ ವಾ' ಎಂಬ ಸೂತ್ರದಲ್ಲಿ ಕರ್ಮದಿಂದ ಜ್ಞಾನವನ್ನು, ಜ್ಞಾನದಿಂದ ಮೋಕ್ಷವನ್ನು ಪಡೆಯುತ್ತಾನೆಂದು ಹೇಳಿದ್ದಾರೆ. ಆದರ ಆಧಾರದಲ್ಲಿ 'ನನು ಜ್ಞಾನಂ ಚ' ಎಂಬ ವಾಕ್ಯವನ್ನು ಹೇಳಲಾಗಿದೆ. 'ಆತ್ಮಾ ವಾ ಅರೇ' ಎಂಬ ವಾಕ್ಯವನ್ನು ಹಿಂದೆ ಏಕೆ ಹೇಳಿದರೆಂದರೆ? ಕರ್ಮದಿಂದ ಜ್ಞಾನವು ದೊರೆಯುತ್ತದೆಂದು ಶಂಕಿಸಿ, 'ಶ್ರವಣಂ ಮನನಂ ಚೈವ' ಇತ್ಯಾದಿ ಸ್ಮೃತಿಗಳಿಗೆ ಜ್ಞಾನಕ್ಕೆ ಶ್ರವಣಮನನಾದಿಗಳು ಪ್ರಧಾನಸಾಧನವಾಗಿದೆ ಎಂಬ ಅಭಿಪ್ರಾಯವಿದೆ ಎಂಬುದನ್ನು ವಿವರಿಸಲು ಉಲ್ಲೇಖಿಸಿದ್ದಾರೆ - ಎಂದರ್ಥ.

## ಅತಃ ಶಬ್ದಾರ್ಥದ ಉಪಸಂಹಾರ

**ಭಾವದೀಪಃ – 'ಸಾಕ್ಷಾತ್' ಇತಿ ಯೋಜ್ಯಮ್ । ತೇನ 'ನ ಪಾರಮ್ಪರ್ಯೇಣ' ಇತಿ ವಕ್ಷ್ಯಮಾಣವಿರೋಧಃ । ಪಾರಮ್ಪರ್ಯೇಣೇತಿ ।। 'ಚಿತ್ತಶುದ್ಧಿದ್ವಾರಾ ವಿವಿದಿಷನ್ತಿ ಯಜ್ಞೇನ ದಾನೇನ' ಇತ್ಯಾದೇರ್ವಕ್ಷ್ಯತಿ ಚ ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವದಿತಿ । 'ಉತ್ಕ್ರಮಿಷ್ಯತ ಏವಮ್ಭಾವಾದಿತಿ ಚ' ಇತಿ ಭಾವಃ । ಏತೇನ – ಜ್ಞಾನಪ್ರಸಾದಾದೇಸ್ತದ್ಧೇತುತ್ವಾದೇಶ್ಚ ಪ್ರಾಮಾಣಿಕತ್ವಾತ್ ಪ್ರಮಾಣೈಃ ಶ್ರುತ್ಯಾದಿಭಿಃ ಸರ್ವಸ್ಯ ಬುದ್ಧೌ ಸನ್ನಿಧಾಪಿತಸ್ಯ ಸೂತ್ರೇ 'ಅತಃ' ಇತಿ ಮೋಕ್ಷಹೇತುಪ್ರಸಾದಜನಕಜ್ಞಾನೋತ್ಪಾದಕತ್ವಾತ್ ಇತಿ ಪರಾಮರ್ಶೋ ಯುಕ್ತಃ ಇತ್ಯಪಿ ಸೂಚಿತಮ್ ।।**

ತದಭಾವಾತ್ - ಜ್ಞಾನಕ್ಕೆ ಕರ್ಮವು ಪ್ರಧಾನಸಾಧನವಾಗಿಲ್ಲ ಹೊರತು ಪರಂಪರೆಯಿಂದ ಸಾಧನವಾಗಿದೆ. ಆದ್ದರಿಂದ ಮುಂದೆ ಪರಂಪರೆಯಿಂದ ಹೇಳುವ ಸಾಧನಕ್ಕೆ ವಿರೋಧವಿಲ್ಲ. ಕರ್ಮವು ಚಿತ್ತಶುದ್ಧಿಯನ್ನು ಹುಟ್ಟಿಸುವ ಮೂಲಕ ಜ್ಞಾನಕ್ಕೆ ಸಾಧನವಾಗುತ್ತದೆ. ಚಿತ್ತಶುದ್ಧಿಗೋಸ್ಕರವೇ ಯಜ್ಞದಾನಾದಿ ಕರ್ಮಗಳೆಲ್ಲವೂ ಹೊರಟಿದೆ. ಈ ವಿಚಾರವನ್ನು 'ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇಃ ಅಶ್ವವತ್' 'ಉತ್ಕ್ರಮಿಷ್ಯತ ಏವಂಭಾವಾತ್' ಎಂಬ ಸೂತ್ರಗಳಲ್ಲಿ ಮುಂದೆ ಹೇಳುತ್ತಾರೆ.

ಇಲ್ಲಿಯ ತನಕ ಮೋಕ್ಷಕ್ಕೆ ಪ್ರಧಾನಸಾಧನವಾದದ್ದು ಪ್ರಸಾದ. ಪ್ರಸಾದಕ್ಕೆ ಪ್ರಧಾನಸಾಧನವಾದದ್ದು ಜ್ಞಾನ; ಜ್ಞಾನಕ್ಕೆ ಪ್ರಧಾನಸಾಧನವಾದದ್ದು ಶ್ರವಣ ಮನನಾದಿಗಳೆಂದು ಉಪಪಾದಿಸಿದ್ದಾಯಿತು. ಈ ವಿಷಯದಲ್ಲಿ ಅನೇಕಪ್ರಮಾಣಗಳನ್ನು

ಉದಾಹರಿಸಿ ಪ್ರಾಮಾಣಿಕವೆಂದು ಸಮರ್ಥಿಸಿದ್ದಾಯಿತು. ಮತ್ತು ಈ ಎಲ್ಲ ಶ್ರುತಿಗಳನ್ನು ಬುದ್ಧಿಯಲ್ಲಿ ಅನುಸಂಧಾನಮಾಡಿಕೊಂಡು ಸೂತ್ರದಲ್ಲಿರುವ 'ಅತಃ' ಎಂಬ ಪದಕ್ಕೆ ಮೋಕ್ಷಹೇತುಪ್ರಸಾದಜನಕಜ್ಞಾನೋತ್ಪಾದಕವಾದ್ದರಿಂದ ಎಂಬ ಅರ್ಥವನ್ನು ಸಮರ್ಥಿಸಿದಂತಾಯಿತು.

## ಅಪರೋಕ್ಷಜ್ಞಾನವು ಎರಡು ವಿಧ

ಶಂಕೆ - 'ಮಧ್ಯಮಾಜ್ಜನಲೋಕಾದಿಃ' ಎಂಬುದಾಗಿ ಶ್ರವಣದಿಂದ ಹುಟ್ಟಿದ ಪ್ರಸಾದದಿಂದಲೇ ಜನಲೋಕಾದಿಗಳು ಪ್ರಾಪ್ತವಾಗುತ್ತವೆಂದು ಹೇಳಿದಿರಿ. ಇದು ತಪ್ಪಲ್ಲವೇ? ಏಕೆಂದರೆ,

ಯೋಗಸ್ಯ ತಪಸಶ್ಚೈವ ಜ್ಞಾನಸ್ಯ ಗತಯೋಽಮಲಾಃ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್ಗತಿಃ॥

ಯೋಗ, ತಪಸ್ಸು, ಜ್ಞಾನ ಮೊದಲಾದವುಗಳಿಗೆ ಮಹಃ, ಜನಃ, ತಪಃ, ಸತ್ಯಮ್ ಎಂಬೀ ಲೋಕಪ್ರಾಪ್ತಿಯೇ ಫಲವು. ಭಕ್ತಿಯೋಗಕ್ಕೆ ವೈಕುಂಠಾದಿಪ್ರಾಪ್ತಿಯೇ ಫಲವು.' ಎಂದು ಏಕಾದಶಸ್ಕಂಧ ಭಾಗವತದಲ್ಲಿ ಹೇಳಿದ್ದಾರೆ. ಮತ್ತು,

ನಿತ್ಯಶೋ ಭಗವದ್ರೂಪಸ್ಯಾಪರೋಕ್ಷೀಕರಣ ದರ್ಶನಮ್।
ಮುಹೂರ್ತಮಾತ್ರಂ ಜ್ಞಾನಂ ಸ್ಯಾನ್ಮಹಾಜ್ಞಾನಂ ತತೋಽಧಿಕಮ್।
ಜ್ಞಾನೇನ ಬ್ರಹ್ಮಲೋಕಃ ಸ್ಯಾನ್ಮಹಾಜ್ಞಾನಾತ್ ಹರೇರ್ಗತಿಃ॥

ಮುಹೂರ್ತಪರ್ಯಂತ ಪ್ರತಿನಿತ್ಯವೂ ಭಗವದ್ರೂಪವನ್ನು ಪ್ರತ್ಯಕ್ಷೀಕರಿಸಿಕೊಳ್ಳುವುದು ಜ್ಞಾನವೆನಿಸುತ್ತದೆ. ಎರಡು ಮುಹೂರ್ತಪರ್ಯಂತ ನಿತ್ಯದಲ್ಲಿಯೂ ಭಗವದ್ದರ್ಶನವು ಮಹಾಜ್ಞಾನವು. ಜ್ಞಾನದಿಂದ ಸತ್ಯಲೋಕಪ್ರಾಪ್ತಿಯು. ಮಹಾಜ್ಞಾನದಿಂದ ವಿಷ್ಣುಲೋಕಪ್ರಾಪ್ತಿಯು.

ಸದೈವಾಖಂಡಿತಂ ಧ್ಯಾನಂ ತಪ ಇತ್ಯುಚ್ಯತೇ ಬುಧೈಃ।
ಅಪರೋಕ್ಷದೃಶಾ ಯುಕ್ತಂ ನಿತ್ಯಂ ಷಣ್ಮಾತ್ರಕಾಲಯಾ॥

ಆರು ಹ್ರಸ್ವಾಕ್ಷರೋಚ್ಚಾರಣಕಾಲಪರ್ಯಂತ ಇರತಕ್ಕ ಅಪರೋಕ್ಷಜ್ಞಾನದಿಂದ ಕೂಡಿದ ವಿಚ್ಛೇದರಹಿತವಾದ ಧ್ಯಾನವು ತಪಃ ಎನಿಸುತ್ತದೆ.

ಅಪರೋಕ್ಷದೃಶಾಯುಕ್ತಮೇಕಮಾತ್ರಾಯುಜಾ ಯುತಮ್ ।
ಯೋಗನಾಮ್ನಾ ಸಮುದ್ದಿಷ್ಟಂ ಧ್ಯಾನಂ ನಿತ್ಯಮಖಂಡಿತಮ್ ॥

ಒಂದು ಹ್ರಸ್ವಾಕ್ಷರೋಚ್ಚಾರಣಕಾಲಪರ್ಯಂತ ಇರತಕ್ಕ ಅಪರೋಕ್ಷಜ್ಞಾನದಿಂದ ಪ್ರತಿನಿತ್ಯ ಕೂಡಿದ ಅಖಂಡಿತಧ್ಯಾನವು ಯೋಗ ಎನಿಸುತ್ತದೆ.

ತಚ್ಚತುರ್ಭಾಗಯಾ ನಿತ್ಯಮಪರೋಕ್ಷದೃಶಾಯುತಮ್ ।
ಪಾದಯೋಗಾಖ್ಯಮುದ್ದಿಷ್ಟಂ ಧ್ಯಾನಂ ನಿತ್ಯಮಖಂಡಿತಮ್ ॥

ಒಂದು ಹ್ರಸ್ವಾಕ್ಷರೋಚ್ಚಾರಣಕಾಲದ ನಾಲ್ಕನೆಯ ಒಂದುಭಾಗದಲ್ಲಿ ಉಂಟಾಗತಕ್ಕ ಅಪರೋಕ್ಷ ಜ್ಞಾನದಿಂದ ಕೂಡಿದ ವಿಚ್ಛೇದರಹಿತವಾದ ಧ್ಯಾನವು ಪಾದಯೋಗವೆನಿಸುತ್ತದೆ.

ಪಾದಯೋಗಾನ್ಮಹರ್ಲೋಕೋ ಜನೋಲೋಕಸ್ತು ಯೋಗತಃ ।
ತಪಸಸ್ತು ತಪೋಲೋಕಃ ಪ್ರಾಪ್ಯತೇ ನಾನ್ಯತಃ ಕ್ವಚಿತ್ ॥

ಪಾದಯೋಗದಿಂದ ಮಹರ್ಲೋಕ, ಯೋಗದಿಂದ ಜನೋಲೋಕ, ತಪಸ್ಸಿನಿಂದ ತಪೋಲೋಕ, (ಜ್ಞಾನದಿಂದ ಸತ್ಯಲೋಕ, ಮಹಾಜ್ಞಾನದಿಂದ ವಿಷ್ಣುಲೋಕ)ಗಳು ಪ್ರಾಪ್ತಗಳಾಗುತ್ತವೆ'' ಎಂದು ಅದರ ತಾತ್ಪರ್ಯದಲ್ಲಿ ಹೇಳಿದ್ದಾರೆ.

ಮತ್ತು 'ಈಯುಃ ಸ್ತ್ರೀನ್ ಕರ್ಮಣಾ ಲೋಕಾನ್ ಜ್ಞಾನೇನೈವ ತದುತ್ತರಾನ್'' ಎಂದು ಮೊದಲ ಮೂರು ಲೋಕಗಳು ಕರ್ಮದಿಂದ, ಅನಂತರದ ಲೋಕಗಳು ಜ್ಞಾನದಿಂದ ಲಭಿಸುತ್ತವೆಂದು ದ್ವಿತೀಯಸ್ಕಂಧದ ತಾತ್ಪರ್ಯದಲ್ಲಿ ಹೇಳಿದ್ದಾರೆ. ಜನೋಲೋಕಾದಿಗಳು ಅಪರೋಕ್ಷಜ್ಞಾನದಿಂದಲೇ ದೊರೆಯುತ್ತವೆಯೆಂದು ಇದರಿಂದ ತಿಳಿಯುತ್ತದೆ. ಹೀಗೆ ಹೇಳಿದ್ದರಿಂದ 'ಜನೋಲೋಕಾದಿ'ಶಬ್ದದಿಂದ ಮಹರ್ಲೋಕವನ್ನೇ ಇಟ್ಟುಕೊಳ್ಳಬೇಕೆಂಬ ಶಂಕೆಯನ್ನು ನಿರಾಕರಿಸಿದಂತಾಯಿತು. ಹಿಂದೆ ಹೇಳಿದಂತೆ ಮಹರ್ಲೋಕವೂ ಸಹ ಅಪರೋಕ್ಷಜ್ಞಾನದಿಂದಲೇ ಸಾಧ್ಯವಾಗಿದೆಯಲ್ಲವೆ?

ಸಮಾಧಾನ - ಈ ಶಂಕೆಗೆ ಅವಕಾಶವಿಲ್ಲ. ಅಪರೋಕ್ಷಜ್ಞಾನವು ಎರಡು ವಿಧ. (೧) ಸ್ವಯೋಗ್ಯಬಿಂಬರೂಪದ ಸಾಕ್ಷಾತ್ಕಾರ. (೨) ಜ್ಞಾನಸಾಮರ್ಥ್ಯದಿಂದ ಲಭಿಸಿದ ಭಗವಂತನ ರೂಪದ ಸಾಮಾನ್ಯ ದರ್ಶನ. ಪ್ರಕೃತ 'ಶ್ರವಣಾದಿಭಿಃ' ಎಂಬಲ್ಲಿ ಆದಿಪದದಿಂದ

ಸಾಮಾನ್ಯದರ್ಶನವನ್ನು ವಿವಕ್ಷಿಸಬೇಕು. ಆದ್ದರಿಂದ ಸಾಮಾನ್ಯದರ್ಶನಕ್ಕೆ ಜನೋಲೋಕಾದಿ-ಹೇತುತ್ವವು ಅಪ್ರಾಮಾಣಿಕವೆಂದು ತಿಳಿಯುತ್ತದೆ. 'ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ' (೩/೩/೫೩) ಎಂಬ ಸೂತ್ರದಲ್ಲಿ 'ಸಾಮಾನ್ಯದರ್ಶನಾಲ್ಲೋಕಾನುಕ್ತಿ ಯೋಗ್ಯಾತ್ಮದರ್ಶನಾತ್' ಎಂಬ ಭಾಷ್ಯದಲ್ಲಿ ಈ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ 'ಜ್ಞಾನಸಂಪತ್ತ್ಯಾ' ಎಂಬ ಭಾಷ್ಯಕ್ಕೆ 'ಯೋಗ್ಯಜ್ಞಾನವೆಂಬ ಸಂಪತ್ತಿನಿಂದ' ಎಂದು ಅರ್ಥೈಸಬೇಕು. ಹೀಗೆ ಹೇಳಿದಾಗ ಯಾವ ವಿರೋಧವೂ ಬರುವುದಿಲ್ಲ.

## ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿದೆ

**ಬ್ರಹ್ಮಸೂತ್ರಭಾಷ್ಯಮ್ – 'ಬ್ರಹ್ಮ'ಶಬ್ದಶ್ಚ ವಿಷ್ಣಾವೇವ ।**

ಅನುವಾದ - ಬ್ರಹ್ಮ ಎಂಬ ಶಬ್ದವಾದರೂ ವಿಷ್ಣುವಿನಲ್ಲೇ ಮುಖ್ಯವಾಗಿದೆ.

**ಬ್ರಹ್ಮಸೂತ್ರಭಾಷ್ಯಮ್ –**

**'ಯಮನ್ತಃ ಸಮುದ್ರೇ ಕವಯೋऽವಯನ್ತಿ ಯದಕ್ಷರೇ ಪರಮೇ ಪ್ರಜಾಃ ।**
**ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಮ್' ಇತ್ಯುಕ್ತ್ವಾ**
**'ತದೇವರ್ತಂ ತದ್ಧ ಸತ್ಯಮಾಹುಸ್ತದೇವ ಬ್ರಹ್ಮ ಪರಮಂ ಕವೀನಾಮ್' ಇತಿ ಹಿ ಶ್ರುತಿಃ।। 'ತನ್ನೋ ವಿಷ್ಣುಃ' ಇತಿ ವಚನಾದ್ ವಿಷ್ಣುರೇವ ಹಿ ತತ್ರೋಚ್ಯತೇ ।।**

ಏಕೆಂದರೆ ''ಜ್ಞಾನಿಗಳು ಯಾರನ್ನು ಕ್ಷೀರಸಮುದ್ರದ ಮಧ್ಯದಲ್ಲಿ ತಿಳಿಯುತ್ತಾರೋ; ನಾಶರಹಿತನಾದ ಸರ್ವೋತ್ತಮನಲ್ಲಿ, ಬ್ರಹ್ಮಾದಿದೇವತೆಗಳು ಆಶ್ರಿತರಾಗಿದ್ದಾರೋ; ಸಮಸ್ತಜಗತ್ತಿಗೆ ತಾಯಿಯಾದ ಲಕ್ಷ್ಮೀದೇವಿಯೂ ಸಹ ಯಾರಿಂದ ಹುಟ್ಟಿದಳೋ; ನೀರು ಮೊದಲಾದ ಪಂಚಭೂತಗಳಿಂದ ಪೃಥಿವ್ಯಾದಿಲೋಕಗಳಲ್ಲಿ ವಿವಿಧವಾದ ಜೀವರಾಶಿಗಳನ್ನು ಸೃಷ್ಟಿಮಾಡಿದನೋ' ಎಂದು ವಿಷ್ಣುವಿನ ಅಸಾಧಾರಣಗುಣಗಳನ್ನು ಉಲ್ಲೇಖಿಸಿ, 'ಈ ಗುಣಗಳುಳ್ಳವನೇ ಋತಶಬ್ದವಾಚ್ಯನಾದವನು ಮತ್ತು ಸತ್ಯಶಬ್ದವಾಚ್ಯನಾದವನು' ಎಂದು ಹೇಳುತ್ತಾರೆ; 'ಅವನೇ ಕವಿಗಳಿಗೆ ಅತ್ಯಂತಶ್ರೇಷ್ಠನಾದ ಬ್ರಹ್ಮನು'. ಎಂದು ವೇದವು ಹೇಳಿದೆ.

ಹೀಗೆ ಶ್ರುತಿಯು ಹೇಳುತ್ತಿರುವುದರಿಂದ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ.

**ಬ್ರಹ್ಮಸೂತ್ರಭಾಷ್ಯಮ್ – ನ ಚೇತರಶಬ್ದಾತ್ ತತ್ಪ್ರಾಪ್ತಿಃ ।।**

ವಸ್ತುತಃ ಬೃಹದ್ಧಾತುವಿನ ಆಧಾರದಿಂದ ಜೀವ, ಶಬ್ದರಾಶಿ, ಚತುರ್ಮುಖ ಮೊದಲಾದ ಅರ್ಥಗಳು ತಿಳಿದರೂ ಅವುಗಳನ್ನು ಇಲ್ಲಿ ವಿವಕ್ಷಿಸಬಾರದು. ಗುಣಪೂರ್ಣನಾದ ವಿಷ್ಣುವನ್ನೇ

ವಿವಕ್ಷಿಸಬೇಕು. ಆದ್ದರಿಂದ ಶ್ರುತ್ಯುಕ್ತನಾದ ಬ್ರಹ್ಮನೇ ಜಿಜ್ಞಾಸ್ಯನಾಗಿದ್ದಾನೆ. ವಿಚಾರ ವಿಷಯನಾದ್ದರಿಂದ ಸೂತ್ರದಲ್ಲಿ ಹೇಳಿದ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ.

'ನಾರಾಯಣಾಯ ವಿದ್ಮಹೇ, ವಾಸುದೇವಾಯ ಧೀಮಹಿ, ತನ್ನೋ ವಿಷ್ಣುಃ ಪ್ರಚೋದಯಾತ್' (ನಮ್ಮೆಲ್ಲರನ್ನೂ ನಿರಂತರವಾಗಿ ಶುಭಕರ್ಮಗಳಲ್ಲಿ ಪ್ರೇರಿಸಲಿ) ಎಂಬ ವಿಷ್ಣುಶ್ರುತಿಯಲ್ಲಿ ವಿಷ್ಣು ಎಂಬ ಶಬ್ದವು ಸ್ಪಷ್ಟವಾಗಿ ಇರುವುದರಿಂದ ಋತ ಸತ್ಯಾದಿಗಳನ್ನು ಹೇಳಿದ ಶ್ರುತಿಯಲ್ಲಿಯೂ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

**ಬ್ರಹ್ಮಸೂತ್ರಭಾಷ್ಯಮ್ –**

**'नामानि विश्वाऽभि न सन्ति लोके यदाविरासीदनृतस्य सर्वम् ।**
**नामानि सर्वाणि यमाविशन्ति तं वै विष्णुं परममुदाहरन्ति ।।'**
**इति भाल्लवेयश्रुतिः।।**

'ತನ್ನೋ ರುದ್ರಃ ಪ್ರಚೋದಯಾತ್' ಎಂಬ ರುದ್ರಶ್ರುತಿಯೂ ಇರುವುದರಿಂದ ರುದ್ರಾದಿಗಳು ಏಕೆ ಪ್ರತಿಪಾದ್ಯರಾಗಬಾರದು? ಎಂಬ ಶಂಕೆ ಸರಿಯಲ್ಲ. ರುದ್ರನೆಂದರೆ ವಿಷ್ಣುವೇ ಆಗಿದ್ದಾನೆ. ಸಕಲನಾಮಗಳು ಬೇರೆಯವರಲ್ಲಿ ಮುಖ್ಯವಲ್ಲ. ಏಕೆಂದರೆ 'ವಿಷ್ಣುವಿಗಿಂತ ಅತಿರಿಕ್ತವಾದ ಸಮಸ್ತಜಗತ್ತಿನ ಸೃಷ್ಟ್ಯಾದಿಗಳೆಲ್ಲವೂ ವಿಷ್ಣುವಿನಿಂದಲೇ ಆಗುತ್ತವೆ. ಆದ್ದರಿಂದ ಎಲ್ಲ ಹೆಸರುಗಳು ಯಾರನ್ನು ಪ್ರತಿಪಾದಿಸುತ್ತವೋ ಅಂತಹ ವಿಷ್ಣುವನ್ನೇ ಸರ್ವೋತ್ತಮನೆಂದು ಜ್ಞಾನಿಗಳು ಹೇಳುತ್ತಾರೆ.

**ಬ್ರಹ್ಮಸೂತ್ರಭಾಷ್ಯಮ್ –**

**'यो देवानां नामधा एक एव तं सम्प्रश्नं भुवनायन्त्यन्या' इत्येवशब्दान्नान्येषां सर्वनामता । 'अजस्य नाभावध्येकमर्पितं यस्मिन् विश्वानि भुवनानि तस्थुः' इति विष्णोर्हि लिङ्गम् । न च प्रसिद्धार्थं विनाऽन्योऽर्थो युज्यते ।।**

**'अजस्य नाभाविति यस्य नाभेरभूच्छ्रुतेः पुष्करं लोकसारम् ।।**
**तस्मै नमो व्यस्तसमस्तविश्वविभूतये विष्णवे लोककर्त्रे' इति स्कान्दे ।**

'ಯಾರು ರುದ್ರಾದಿಸಕಲದೇವತೆಗಳ ಹೆಸರನ್ನು ಧರಿಸಿದ್ದಾನೋ, ಅವನು ಒಬ್ಬನೇ ಆಗಿದ್ದಾನೆ. ಅವನಲ್ಲಿ ಎಲ್ಲಲೋಕಗಳೂ ಲಯವನ್ನು ಹೊಂದುತ್ತವೆ' ಎಂಬ ಋಂತ್ರದಿಂದ ಬ್ರಹ್ಮಾದಿದೇವತೆಗಳು ಸಕಲಶಬ್ದಪ್ರತಿಪಾದ್ಯರಲ್ಲವೆಂದು ತಿಳಿಯುತ್ತದೆ. ಮುಂದಿನ ಋಙ್ಮಂತ್ರ ಹೀಗಿದೆ. 'ಸಕಲಲೋಕಗಳು ಯಾವ ವಸ್ತುವಿನಲ್ಲಿ ಆಶ್ರಯ ಹೊಂದಿವೆಯೋ, ಅವು ಜನನರಹಿತನಾದ ಪರಮಾತ್ಮನ

ಸಾಮಾನ್ಯದರ್ಶನವನ್ನು ವಿವಕ್ಷಿಸಬೇಕು. ಆದ್ದರಿಂದ ಸಾಮಾನ್ಯದರ್ಶನಕ್ಕೆ ಜನೋಲೋಕಾದಿ-ಹೇತುತ್ವವು ಅಪ್ರಾಮಾಣಿಕವೆಂದು ತಿಳಿಯುತ್ತದೆ. 'ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ' (೩/೩/೫೩) ಎಂಬ ಸೂತ್ರದಲ್ಲಿ 'ಸಾಮಾನ್ಯದರ್ಶನಾಲ್ಲೋಕಾನುಕ್ತಿ ಯೋಗ್ಯಾತ್ಮದರ್ಶನಾತ್' ಎಂಬ ಭಾಷ್ಯದಲ್ಲಿ ಈ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ 'ಜ್ಞಾನಸಂಪತ್ತ್ಯಾ' ಎಂಬ ಭಾಷ್ಯಕ್ಕೆ 'ಯೋಗ್ಯಜ್ಞಾನವೆಂಬ ಸಂಪತ್ತಿನಿಂದ' ಎಂದು ಅರ್ಥೈಸಬೇಕು. ಹೀಗೆ ಹೇಳಿದಾಗ ಯಾವ ವಿರೋಧವೂ ಬರುವುದಿಲ್ಲ.

## ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿದೆ

**ಬ್ರಹ್ಮಸೂತ್ರಭಾಷ್ಯಮ್ – 'ಬ್ರಹ್ಮ'ಶಬ್ದಶ್ಚ ವಿಷ್ಣಾವೇವ ।**

ಅನುವಾದ - ಬ್ರಹ್ಮ ಎಂಬ ಶಬ್ದವಾದರೂ ವಿಷ್ಣುವಿನಲ್ಲೇ ಮುಖ್ಯವಾಗಿದೆ.

**ಬ್ರಹ್ಮಸೂತ್ರಭಾಷ್ಯಮ್ –**

**'ಯಮನ್ತಃ ಸಮುದ್ರೇ ಕವಯೋऽವಯನ್ತಿ ಯದಕ್ಷರೇ ಪರಮೇ ಪ್ರಜಾಃ ।**
**ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಮ್' ಇತ್ಯುಕ್ತ್ವಾ**
**'ತದೇವರ್ತಂ ತದ್ಧ ಸತ್ಯಮಾಹುಸ್ತದೇವ ಬ್ರಹ್ಮ ಪರಮಂ ಕವೀನಾಮ್' ಇತಿ ಹಿ ಶ್ರುತಿಃ।। 'ತನ್ನೋ ವಿಷ್ಣುಃ' ಇತಿ ವಚನಾದ್ ವಿಷ್ಣುರೇವ ಹಿ ತತ್ರೋಚ್ಯತೇ ।।**

ಏಕೆಂದರೆ ''ಜ್ಞಾನಿಗಳು ಯಾರನ್ನು ಕ್ಷೀರಸಮುದ್ರದ ಮಧ್ಯದಲ್ಲಿ ತಿಳಿಯುತ್ತಾರೋ; ನಾಶರಹಿತನಾದ ಸರ್ವೋತ್ತಮನಲ್ಲಿ, ಬ್ರಹ್ಮಾದಿದೇವತೆಗಳು ಆಶ್ರಿತರಾಗಿದ್ದಾರೋ; ಸಮಸ್ತಜಗತ್ತಿಗೆ ತಾಯಿಯಾದ ಲಕ್ಷ್ಮೀದೇವಿಯೂ ಸಹ ಯಾರಿಂದ ಹುಟ್ಟಿದಳೋ; ನೀರು ಮೊದಲಾದ ಪಂಚಭೂತಗಳಿಂದ ಪೃಥಿವ್ಯಾದಿಲೋಕಗಳಲ್ಲಿ ವಿವಿಧವಾದ ಜೀವರಾಶಿಗಳನ್ನು ಸೃಷ್ಟಿಮಾಡಿದನೋ' ಎಂದು ವಿಷ್ಣುವಿನ ಅಸಾಧಾರಣಗುಣಗಳನ್ನು ಉಲ್ಲೇಖಿಸಿ, 'ಈ ಗುಣಗಳುಳ್ಳವನೇ ಋತಶಬ್ದವಾಚ್ಯನಾದವನು ಮತ್ತು ಸತ್ಯಶಬ್ದವಾಚ್ಯನಾದವನು' ಎಂದು ಹೇಳುತ್ತಾರೆ; 'ಅವನೇ ಕವಿಗಳಿಗೆ ಅತ್ಯಂತಶ್ರೇಷ್ಠನಾದ ಬ್ರಹ್ಮನು'. ಎಂದು ವೇದವು ಹೇಳಿದೆ.

ಹೀಗೆ ಶ್ರುತಿಯು ಹೇಳುತ್ತಿರುವುದರಿಂದ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ.

**ಬ್ರಹ್ಮಸೂತ್ರಭಾಷ್ಯಮ್ – ನ ಚೇತರಶಬ್ದಾತ್ ತತ್ಪ್ರಾಪ್ತಿಃ ।।**

ವಸ್ತುತಃ ಬೃಹದ್ಧಾತುವಿನ ಆಧಾರದಿಂದ ಜೀವ, ಶಬ್ದರಾಶಿ, ಚತುರ್ಮುಖ ಮೊದಲಾದ ಅರ್ಥಗಳು ತಿಳಿದರೂ ಅವುಗಳನ್ನು ಇಲ್ಲಿ ವಿವಕ್ಷಿಸಬಾರದು. ಗುಣಪೂರ್ಣನಾದ ವಿಷ್ಣುವನ್ನೇ

ವಿವಕ್ಷಿಸಬೇಕು. ಆದ್ದರಿಂದ ಶ್ರುತ್ಯುಕ್ತನಾದ ಬ್ರಹ್ಮನೇ ಜಿಜ್ಞಾಸ್ಯನಾಗಿದ್ದಾನೆ. ವಿಚಾರ ವಿಷಯನಾದ್ದರಿಂದ ಸೂತ್ರದಲ್ಲಿ ಹೇಳಿದ ಬ್ರಹ್ಮಶಬ್ದವು ವಿಷ್ಣುವನ್ನೇ ಹೇಳುತ್ತದೆ.

'ನಾರಾಯಣಾಯ ವಿದ್ಮಹೇ, ವಾಸುದೇವಾಯ ಧೀಮಹಿ, ತನ್ನೋ ವಿಷ್ಣುಃ ಪ್ರಚೋದಯಾತ್' (ನಮ್ಮೆಲ್ಲರನ್ನೂ ನಿರಂತರವಾಗಿ ಶುಭಕರ್ಮಗಳಲ್ಲಿ ಪ್ರೇರಿಸಲಿ) ಎಂಬ ವಿಷ್ಣುಶ್ರುತಿಯಲ್ಲಿ ವಿಷ್ಣು ಎಂಬ ಶಬ್ದವು ಸ್ಪಷ್ಟವಾಗಿ ಇರುವುದರಿಂದ ಋತ ಸತ್ಯಾದಿಗಳನ್ನು ಹೇಳಿದ ಶ್ರುತಿಯಲ್ಲಿಯೂ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

**ಬ್ರಹ್ಮಸೂತ್ರಭಾಷ್ಯಮ್ –**

**'नामानि विश्वाऽभि न सन्ति लोके यदाविरासीदनृतस्य सर्वम् ।**
**नामानि सर्वाणि यमाविशन्ति तं वै विष्णुं परममुदाहरन्ति ।।'**
**इति भाल्लवेयश्रुतिः।।**

'ತನ್ನೋ ರುದ್ರಃ ಪ್ರಚೋದಯಾತ್' ಎಂಬ ರುದ್ರಶ್ರುತಿಯೂ ಇರುವುದರಿಂದ ರುದ್ರಾದಿಗಳು ಏಕೆ ಪ್ರತಿಪಾದ್ಯರಾಗಬಾರದು? ಎಂಬ ಶಂಕೆ ಸರಿಯಲ್ಲ. ರುದ್ರನೆಂದರೆ ವಿಷ್ಣುವೇ ಆಗಿದ್ದಾನೆ. ಸಕಲನಾಮಗಳು ಬೇರೆಯವರಲ್ಲಿ ಮುಖ್ಯವಲ್ಲ. ಏಕೆಂದರೆ 'ವಿಷ್ಣುವಿಗಿಂತ ಅತಿರಿಕ್ತವಾದ ಸಮಸ್ತಜಗತ್ತಿನ ಸೃಷ್ಟ್ಯಾದಿಗಳೆಲ್ಲವೂ ವಿಷ್ಣುವಿನಿಂದಲೇ ಆಗುತ್ತವೆ. ಆದ್ದರಿಂದ ಎಲ್ಲ ಹೆಸರುಗಳು ಯಾರನ್ನು ಪ್ರತಿಪಾದಿಸುತ್ತವೋ ಅಂತಹ ವಿಷ್ಣುವನ್ನೇ ಸರ್ವೋತ್ತಮನೆಂದು ಜ್ಞಾನಿಗಳು ಹೇಳುತ್ತಾರೆ.

**ಬ್ರಹ್ಮಸೂತ್ರಭಾಷ್ಯಮ್ –**

**'यो देवानां नामधा एक एव तं सम्प्रश्नं भुवनायन्त्यन्या' इत्येवशब्दान्नान्येषां सर्वनामता । 'अजस्य नाभावध्येकमर्पितं यस्मिन् विश्वानि भुवनानि तस्थुः' इति विष्णोर्हि लिङ्गम् । न च प्रसिद्धार्थं विनाऽन्योऽर्थो युज्यते ।।**

**'अजस्य नाभाविति यस्य नाभेरभूच्छ्रुतेः पुष्करं लोकसारम् ।।**
**तस्मै नमो व्यस्तसमस्तविश्वविभूतये विष्णवे लोककर्त्रे' इति स्कान्दे ।**

'ಯಾರು ರುದ್ರಾದಿಸಕಲದೇವತೆಗಳ ಹೆಸರನ್ನು ಧರಿಸಿದ್ದಾನೋ, ಅವನು ಒಬ್ಬನೇ ಆಗಿದ್ದಾನೆ. ಅವನಲ್ಲಿ ಎಲ್ಲಲೋಕಗಳೂ ಲಯವನ್ನು ಹೊಂದುತ್ತವೆ' ಎಂಬ ಋಂತ್ರದಿಂದ ಬ್ರಹ್ಮಾದಿದೇವತೆಗಳು ಸಕಲಶಬ್ದಪ್ರತಿಪಾದ್ಯರಲ್ಲವೆಂದು ತಿಳಿಯುತ್ತದೆ. ಮುಂದಿನ ಋಜ್ಮಂತ್ರ ಹೀಗಿದೆ. 'ಸಕಲಲೋಕಗಳು ಯಾವ ವಸ್ತುವಿನಲ್ಲಿ ಆಶ್ರಯ ಹೊಂದಿವೆಯೋ, ಅವು ಜನನರಹಿತನಾದ ಪರಮಾತ್ಮನ

ನಾಭಿಯಲ್ಲಿವೆ' ಎಂದು. ಸಕಲಲೋಕಕ್ಕೆ ಆಧಾರವಾದ ಆ ವಸ್ತು ಕಮಲವೆಂದು ಪ್ರಸಿದ್ಧವಾಗಿದೆ. ಆದ್ದರಿಂದ ಜನನರಹಿತನ ನಾಭಿಯಲ್ಲಿ ಕಮಲ ಬಿಟ್ಟು ಬೇರೆ ವಸ್ತುವು ಇದೆಯೆಂಬ ಸಂದೇಹಕ್ಕೆ ಅವಕಾಶವಿಲ್ಲ.

ಸ್ಕಾಂದಪುರಾಣದಲ್ಲಿ ಹೀಗೆ ಹೇಳಿದೆ - 'ಅಜಸ್ಯ ನಾಭೌ' ಎಂಬ ಶ್ರುತಿಯಲ್ಲಿ ಹೇಳಿದಂತೆ ಯಾರ ನಾಭಿಯಿಂದ ಹುಟ್ಟಿದಾಲ್ಕು ಲೋಕಗಳಿಗೆ ಆಶ್ರಯವಾದ ಕಮಲವು ಹುಟ್ಟಿತೋ ಅಂತಹ ಜೀವಜಡಗಳ ಸೃಷ್ಟ್ಯಾದಿಗಳಿಗೆ ಕಾರಣನಾದ ಜಗತ್ತಿಗೆ ಸ್ವಾಮಿಯಾದ ವಿಷ್ಣುವಿಗೆ ನಮಸ್ಕಾರವು. ಇದರಿಂದ ಅಜಸ್ಯ ನಾಭೌ ಎಂಬ ಋಙ್ಮಂತ್ರವು ವಿಷ್ಣುಪರವೆಂದು ನಿರ್ಣಯವಾಗುತ್ತದೆ.

**ಬ್ರಹ್ಮಸೂತ್ರಭಾಷ್ಯಮ್ –**

**'परो दिवा पर एना पृथिव्या' इति समाख्याश्रुतौ ।। 'यं कामये तंतमुग्रं कृणोमि तं ब्रह्माणं तमृषिं तं सुमेधाम्', इत्युक्त्वा 'मम योनिरप्स्वँतःसमुद्रे' इत्याह ।**

ಮತ್ತು ವಿಶ್ವಕರ್ಮಸೂಕ್ತದಲ್ಲಿ ಹೀಗೆ ಹೇಳಿದೆ. 'ಪರೋ ದಿವಾ ಪರ ಏನಾ ಪೃಥಿವ್ಯಾ' ಎಂದು ಅದೇ ಋಙ್ಮಂತ್ರದ ಐದನೆಯ ಸೂಕ್ತ. ಅಂಭ್ರಣೀಸೂಕ್ತದಲ್ಲಿಯೂ ಹೀಗೆ ಹೇಳಿದೆ. 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ....' ಯಾರು ರುದ್ರನಾಗಬೇಕೆಂದು ನಾನು ಬಯಸುತ್ತೇನೋ ಅವನು ರುದ್ರನಾಗುತ್ತಾನೆ. ಬ್ರಹ್ಮನಾಗಬೇಕೆಂದು ಬಯಸಿದರೆ ಬ್ರಹ್ಮನಾಗುತ್ತಾನೆ. ಋಷಿಯಾಗುತ್ತಾನೆ. ಬಹುಮೇಧಾವಿಯೂ ಆಗುತ್ತಾನೆ' ಎಂದು ಬ್ರಹ್ಮಾದಿಗಳೂ ಸಹ ತನ್ನ ಅಧೀನರೆಂದು ಲಕ್ಷ್ಮೀದೇವಿಯು ಹೇಳಿದ್ದಾಳೆ. ಮುಂದೆ ಅಲ್ಲಿಯೇ ಏಳನೆಯ ಮಂತ್ರದಲ್ಲಿ 'ಇಂತಹ ನನಗೂ ಕಾರಣಪುರುಷನಾದವನು ಕ್ಷೀರಸಮುದ್ರಶಯನನಾದ ನಾರಾಯಣನು' ಎಂದು ಹೇಳಿ ಆ ಕ್ಷೀರಸಮುದ್ರಶಾಯಿಯ ಮಹಿಮೆಯನ್ನು 'ಪರೋ ದಿವಾ' ಎಂಬ ಕೊನೆಯ ಮಂತ್ರದಲ್ಲಿ ಹೇಳಿದ್ದಾಳೆ. ಆದ್ದರಿಂದ ಋಙ್ಮಂತ್ರದಲ್ಲಿರುವ ಮಂತ್ರಗಳಿಂದ ಪ್ರತಿಪಾದ್ಯನಾದವನು ಬ್ರಹ್ಮಾದಿಗಳಿಗಿಂತಲೂ ಉತ್ತಮನಾದ ವಿಷ್ಣುವೇ ಆಗಿದ್ದಾನೆ.

**ಬ್ರಹ್ಮಸೂತ್ರಭಾಷ್ಯಮ್ –**

**उग्रो रुद्रः । समुद्रेऽन्तर्नारायणः। प्रसिद्धत्वात् सूचितत्वाच्चास्यार्थस्य । न चाविरोधे प्रसिद्धः परित्यज्यते । उक्तन्यायेन च श्रुतय एतमेव वदन्ति ।**

ಅಂಭ್ರಣೀಸೂಕ್ತದಲ್ಲಿ ಲಕ್ಷ್ಮೀದೇವಿಯ ಅಧೀನರೆಂದು ಹೇಳಲ್ಪಟ್ಟ ಉಗ್ರನೆಂದರೆ ರುದ್ರನೇ ಆಗುತ್ತಾನೆ. ಸಮುದ್ರಸ್ಥನಾದವನು ನಾರಾಯಣನೇ ಆಗಿದ್ದಾನೆ; ವಿಷ್ಣುಸಹಸ್ರನಾಮದಲ್ಲಿ 'ಮಹೋದಧಿಶಯೋऽಂತಕಃ' ಎಂದು ಹೇಳಲಾಗಿದೆ. ಮತ್ತು ನಾರಾಯಣಶಬ್ದದಲ್ಲಿಯೇ ನೀರು

ಯಾರಿಗೆ ಆಶ್ರಯವಾಗಿದೆಯೋ? ಎಂಬರ್ಥವು ಸೂಚಿತವಾಗಿದೆ. ವಿರೋಧವಿಲ್ಲದಿದ್ದಾಗ ಆಯಾ ಶಬ್ದಗಳ ಪ್ರಸಿದ್ಧಾರ್ಥವನ್ನು ಬಿಡಬಾರದು.

**ಬ್ರಹ್ಮಸೂತ್ರಭಾಷ್ಯಮ್ –**

**'वेदे रामायणे चैव पुराणे भारते तथा ।**
**आदावन्ते च मध्ये च विष्णुः सर्वत्र गीयते' इति हरिवंशेषु ।।**

ಮೇಲೆ ಹೇಳಿದ ಯುಕ್ತಿಗಳಿಂದ ಸಕಲವೇದಗಳು ನಾರಾಯಣನಾದ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಮತ್ತು 'ವೇದಗಳಲ್ಲಿ ಮೂಲರಾಮಾಯಣಾದಿಗಳಲ್ಲಿ ಅಷ್ಟಾದಶ-ಪುರಾಣಗಳಲ್ಲೂ ಮತ್ತು ಮಹಾಭಾರತದಲ್ಲಿಯೂ ಆರಂಭ ಮಧ್ಯ ಕೊನೆಯಲ್ಲಿ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ' ಎಂದು ಹರಿವಂಶದ ಭಾಗತ್ರಯಗಳಲ್ಲಿ ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ನಾರಾಯಣಪ್ರಸಾದವಿಲ್ಲದೇ ಮೋಕ್ಷವಿಲ್ಲವೆಂದು ಹೇಳಿದಿರಿ. ಹಾಗಾದರೆ ನಾರಾಯಣನ ಜಿಜ್ಞಾಸವೇ ಕರ್ತವ್ಯವಾಯಿತು. ಬ್ರಹ್ಮಜಿಜ್ಞಾಸೆಯನ್ನು ಏಕೆ ಆಚರಿಸಬೇಕು? ಬ್ರಹ್ಮಶಬ್ದಕ್ಕೆ ನಾರಾಯಣವೆಂಬ ಅರ್ಥವನ್ನು ಹೇಗೆ ಹೇಳುವಿರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಬ್ರಹ್ಮಶಬ್ದಶ್ಚ = ಬ್ರಹ್ಮಶಬ್ದವಾದರೂ, ವಿಷ್ಣಾವೇವ = ಸರ್ವತ್ರ ವ್ಯಾಪ್ತನಾದ ಪರಮಾತ್ಮನಲ್ಲಿಯೇ ಸಮನ್ವಯವಾಗುತ್ತದೆ.

ಬ್ರಹ್ಮಶಬ್ದವು ಬೇರೆಡೆಯೂ ರೂಢವಾಗಿರುವುದರಿಂದ ವಿಷ್ಣುವನ್ನೇ ಹೇಗೆ ಪ್ರತಿಪಾದಿಸುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಯಂ = ಯಾವನನ್ನು, ಅಂತಃ ಸಮುದ್ರೇ = ಕ್ಷೀರಸಮುದ್ರದ ಮಧ್ಯದಲ್ಲಿ, ಅವಯಂತಿ = ತಿಳಿಯುತ್ತಾರೋ, ತದಕ್ಷರೇ = ಅಂತಹ ನಾಶರಹಿತನಾದ, ಪರಮೇ = ಪರಮಾತ್ಮನಲ್ಲಿ, ಪ್ರಜಾಃ = ಬ್ರಹ್ಮಾದಿ ಸಕಲಜೀವರಾಶಿಗಳು, ಆಶ್ರಿತರಾಗಿದ್ದಾರೆ; ಯತಃ = ಯಾರಿಂದ, ಜಗತಃ = ಸಮಸ್ತಜಗತ್ತಿನ, ಪ್ರಸೂತೀ = ಉತ್ಪಾದಕಳಾದ ಲಕ್ಷ್ಮೀದೇವಿಯು, ಪ್ರಸೂತಾ = ಹುಟ್ಟಿದಳೋ; ತೋಯೇನ = ನೀರುಮೊದಲಾದ ಪಂಚಮಹಾಭೂತಗಳಿಂದ (ಆಯಾ ಜೀವಿಗಳ ಕರ್ಮಕ್ಕೆ ಅನುಸಾರಿಯಾಗಿ ಅಥವಾ ತನ್ನ ವೀರ್ಯದಿಂದ), ಜೀವಾನ್ = ಅನೇಕವಿಧವಾದ ಜೀವರಾಶಿಗಳನ್ನು, ಭೂಮ್ಯಾಮ್ = ಪೃಥಿವ್ಯಾದಿ-ಲೋಕಗಳಲ್ಲಿ, ವ್ಯಸರ್ಜ = ವಿವಿಧಬಗೆಯಲ್ಲಿ ಸೃಷ್ಟಿಮಾಡಿದನು. ಇತ್ಯುಕ್ತ್ವಾ = ಹೀಗೆ ಹೇಳಿ, ತದೇವ = ಈ ಗುಣಗಳುಳ್ಳವನೇ, ಋತಂ = ಋತಶಬ್ದವಾಚ್ಯನಾದವನು (ಅನಾದಿಕಾಲದಿಂದ ಒಂದೇ ಪ್ರಕಾರದಲ್ಲಿ ತಿಳಿಯಲ್ಪಡುವವನು), ತದೇವ = ಅವನೇ, ಸತ್ಯಂ = ಸತ್ಯಶಬ್ದವಾಚ್ಯನಾದವನು ಎಂದು, ಆಹುಃ = ಜ್ಞಾನಿಗಳು

ಹೇಳುತ್ತಾರೆ. ತದೇವ = ಅವನೇ, ಕವೀನಾಂ = ಜ್ಞಾನಿಗಳಿಗೆ, ಪರಮಂ = ಅತ್ಯಂತಶ್ರೇಷ್ಠನಾದ, ಬ್ರಹ್ಮ = ಬ್ರಹ್ಮಶಬ್ದವಾಚ್ಯನಾದವನು. ಇತಿ = ಹೀಗೆ, ಶ್ರುತಿ ಹಿ = ಶ್ರುತಿಪ್ರಸಿದ್ಧಿಯಾಗಿದೆ.

'ತದೇವ' ಎಂಬ ವಾಕ್ಯದಲ್ಲಿ ತತ್ ಶಬ್ದದಿಂದ ವಿಷ್ಣುವನ್ನೇ ಏಕೆ ವಿವಕ್ಷಿಸಬೇಕು? ಅಲ್ಲಿ ಕೇಳಿಸುತ್ತಿರುವ ಸಮುದ್ರಾಂತಸ್ಥತ್ವಾದಿಲಿಂಗಗಳನ್ನು ರುದ್ರಾದಿಗಳಲ್ಲಿಯೂ ಕಥಂಚಿತ್ ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ ನಿರವಕಾಶವಿಷ್ಣುಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ತನ್ನೋ ವಿಷ್ಣುರಿತಿ = ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ತನ್ನೋ ವಿಷ್ಣುಃ ಪ್ರಚೋದಯಾತ್ ಎಂಬ, ವಚನಾತ್ = ವಾಕ್ಯವಿರುವುದರಿಂದ, ಅತ್ರ = ಋತ, ಸತ್ಯಾದಿಗಳನ್ನು ಹೇಳಿದ ಶ್ರುತಿಯಲ್ಲಿಯೂ, ವಿಷ್ಣುರೇವ = ವಿಷ್ಣುವೇ, ಉಚ್ಯತೇ = ಪ್ರತಿಪಾದ್ಯನಾಗಿದ್ದಾನೆ.

'ತನ್ನೋ ರುದ್ರಃ ಪ್ರಚೋದಯಾತ್' ಎಂಬ ಶ್ರುತಿಯಿರುವುದರಿಂದ ರುದ್ರಾದಿಗಳೇಕೆ ವಾಚ್ಯರಾಗಬಾರದು? ಎಂದರೆ, ಇತರಶಬ್ದಾತ್ = ಶ್ರುತಿಯಲ್ಲಿ ರುದ್ರಾದಿಶಬ್ದಗಳಿದ್ದರೂ, ತತ್ಪ್ರಾಪ್ತಿಃ = ರುದ್ರಾದಿಗಳ ಪ್ರಾಪ್ತಿಯು, ನ = ಆಗುವುದಿಲ್ಲವಷ್ಟೇ.

ಏಕೆಂದರೆ, ವಿಶ್ವಾ = ಸಕಲವಿಧವಾದ, ನಾಮಾನಿ = ಹೆಸರುಗಳು, ಲೋಕೇ = ರುದ್ರಾದಿಜಗತ್ತಿನಲ್ಲಿ, ಅಭ = ಮುಖ್ಯವಾಚಕವಾಗಿ, ನ ಸಂತಿ = ಇರುವುದಿಲ್ಲ. ಯದಾ = ಯಾವಕಾಲದಲ್ಲಿ, ಅವಿರಾಸೀತ್ = ಶಬ್ದಗಳು ಹೊರಹೊಮ್ಮಿದವೋ, ಸರ್ವಂ = ಆ ಎಲ್ಲ ಶಬ್ದಗಳು, ಅನೃತಸ್ಯ = ಋತ ಎನಿಸಿದ ಪರಮಾತ್ಮನಿಗಿಂತ ಭಿನ್ನವಾದ ಜಗದ್ವಾಚಕವಾದ, ಸರ್ವಾಣಿ = ಸಕಲನಾಮಾತ್ಮಕಶಬ್ದಗಳು, ಯಂ = ಯಾವ ಭಗವಂತನನ್ನು, ಅವಿಶಂತಿ = ಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೋ, ತಂ = ಅಂತಹ, ಪರಮಂ = ಸರ್ವೋತ್ತಮನಾದ, ವಿಷ್ಣುಂ = ವಿಷ್ಣುವನ್ನು, ಉದಾಹರಂತಿ = ಹೇಳುತ್ತವೆ. ಇತಿ = ಹೀಗೆ, ಭಾಲ್ಲವೇಯಶ್ರುತಿಃ = ಭಾಲ್ಲವೇಯಶ್ರುತಿಯು ಹೇಳುತ್ತದೆ.

ಯಃ = ಯಾರು, ದೇವಾನಾಂ = ರುದ್ರಾದಿಸಕಲದೇವತೆಗಳ, ನಾಮಧಾಃ = ಹೆಸರುಗಳನ್ನು ಧರಿಸಿದ್ದಾನೋ, ಸಃ = ಅವನು, ಏಕ ಏವ = ಮುಖ್ಯವಾಗಿ ಒಬ್ಬನೇ ಆಗಿದ್ದಾನೆ, ಇತಿ = ಹೀಗೆ, ಏವ- ಶಬ್ದಾತ್ = ಏವ ಕಾರವಿರುವುದರಿಂದ, ಅನ್ಯೇಷಾಂ = ಇತರದೇವತೆಗಳಿಗೆ, ಸರ್ವನಾಮತಾ = ಮುಖ್ಯವೃತ್ತಿಯಿಂದ ಆಯಾಯ ಶಬ್ದಗಳ ಪ್ರವೃತ್ತಿನಿಮಿತ್ತವು, ನ = ಇಲ್ಲ.

''ಯೋ ದೇವಾನಾಂ'' ಎಂಬ ಶ್ರುತಿಯಿಂದಲೂ ವಿಷ್ಣುವೇ ಏಕೆ ಪ್ರತಿಪಾದ್ಯನಾಗಬೇಕು. ವಿಶ್ವ- ಕರ್ಮಾದಿಗಳೇ ಪ್ರತಿಪಾದ್ಯರಾಗಲಿ? ಎಂಬ ಪ್ರಶ್ನೆಗೆ 'ಅಜಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಜಸ್ಯ = ಜನನರಹಿತನಾದ ಪರಮಾತ್ಮನ, ನಾಭೌ = ಹೊಕ್ಕಳಿನಲ್ಲಿ, ಏಕಂ = ಒಂದು ವಸ್ತುವು, ಅರ್ಪಿತಂ = ಹುಟ್ಟಿತು. ಯಸ್ಮಿನ್ = ಯಾವ ಆ ವಸ್ತುವಿನಲ್ಲಿ (ಕಮಲದಲ್ಲಿ), ವಿಶ್ವಾನಿ = ಸಕಲ, ಭುವನಾನಿ = ಚತುರ್ದಶಲೋಕಗಳು, (ಆಶ್ರಯಿಸಿ), ತಸ್ಥುಃ = ನಿಂತವು. ಇತಿ = ಹೀಗೆ, ವಿಷ್ಣೋಃ = ವಿಷ್ಣುವಿನ, ಲಿಂಗವು = ಪದ್ಮನಾಭತ್ವಲಿಂಗವು, ಹಿ = ಪ್ರಸಿದ್ಧವಷ್ಟೇ.

ನಾಭಿಯಲ್ಲಿರುವುದು ಪದ್ಮವೇ ಏಕಾಗಬೇಕು? ಎಂದರೆ, ಪ್ರಸಿದ್ಧಾರ್ಥಂ = ವಿಷ್ಣುವಿನ ನಾಭಿಯಲ್ಲಿ ಪ್ರಸಿದ್ಧವಾದ ಪದ್ಮವೆಂಬ ಅರ್ಥವನ್ನು, ವಿನಾ = ಬಿಟ್ಟು, ಅನ್ಯಃ = ಬೇರೆ, ಅರ್ಥಃ = ವಸ್ತುವು, ನ ಚ ಯುಜ್ಯತೇ = ಯುಕ್ತವಾಗುವುದಿಲ್ಲ.

ಪ್ರಸಿದ್ಧಿಯ ಜೊತೆಗೆ ಶ್ರುತಿಸ್ಮೃತಿಗಳ ಸಂವಾದವೂ ಇದೆ. ಅಜಸ್ಯ ನಾಭಾವಿತಿ = 'ಅಜಸ್ಯ ನಾಭಾವಧ್ಯೇಕಮರ್ಪಿತಮ್' ಎಂದು ಮುಂದುವರೆದ, ಶ್ರುತೇಃ = ವೇದಭಾಗದಿಂದ, ಯಸ್ಯ = ಯಾವ ಪರಮಾತ್ಮನ, ನಾಭೇಃ = ಹೊಕ್ಕಳ ದೆಸೆಯಿಂದ, ಲೋಕಸಾರಮ್ = ಹದಿನಾಲ್ಕು ಲೋಕಗಳಿಗೆ ಆಶ್ರಯವಾದ, ಪುಷ್ಕರಂ = ಕಮಲವು, ಅಭೂತ್ = ಹುಟ್ಟಿತೋ; ಎಂದು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ತಸ್ಯೈ = ಅಂತಹ, ವ್ಯಸ್ತ = ಸೃಷ್ಟ್ಯಾದ್ಯಷ್ಟಕಗಳಲ್ಲಿ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನಗಳು ಮಾತ್ರ ಜಡಪದಾರ್ಥಗಳಲ್ಲಿ, ಸಮಸ್ತ = ಸೃಷ್ಟ್ಯಾದ್ಯಷ್ಟಕಗಳು ಜೀವರಲ್ಲಿ, ಹೀಗೆ ವಿಶ್ವ = ಸಮಸ್ತಜಗತ್ತಿನ, ವಿಭೂತಯೇ = ಸೃಷ್ಟ್ಯಾದಿಗಳಿಗೆ ಕಾರಣನಾದ, ಲೋಕಕರ್ತ್ರೇ = ಲೋಕಸ್ವಾಮಿಯಾದ, ವಿಷ್ಣವೇ = ಮಹಾವಿಷ್ಣುವಿಗೆ, ನಮಃ = ನಮಸ್ಕಾರವು. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

ನಿರವಕಾಶಲಿಂಗವೇ ಶ್ರುತಿಬಾಧಕವಾಗುವಾಗ ಸಮಾಖ್ಯಾಸಹಿತವಾದ ನಿರವಕಾಶಲಿಂಗವು ಶ್ರುತಿಯನ್ನು ನಿಶ್ಚಯವಾಗಿ ಬಾಧಿಸುತ್ತದೆ. ದಿವಾ = ಸ್ವರ್ಗಲೋಕದಲ್ಲಿರುವ ಸಕಲ ದೇವತೆಗಳಿಗಿಂತ, ಪರಃ = ಉತ್ತಮನು, ಏನಾ = ಈ, ಪೃಥಿವ್ಯಾ = ಭೂಲೋಕದಲ್ಲಿರುವ ಸಕಲ ಜೀವಜಂತುಗಳಿಗಿಂತಲೂ, ಪರಃ = ಉತ್ತಮನು, ಇತಿ = ಹೀಗೆ, ಸಮಾಖ್ಯಾಶ್ರುತೌ = ಸಮಾನವಾದ ಅರ್ಥವುಳ್ಳ, ಪುರುಷಸೂಕ್ತದಲ್ಲಿ ಹೇಳಲ್ಪಟ್ಟಿದೆ.

ಸಮಾಖ್ಯಾಶ್ರುತಿಯಲ್ಲಿಯೂ ವಿಷ್ಣುವೇ ಏಕೆ ಪ್ರತಿಪಾದ್ಯನಾಗಬೇಕು? ಎಂದರೆ, ಯಂ = ಯಾವನನ್ನು, ಕಾಮಯೇ = ರುದ್ರ ಬ್ರಹ್ಮಾದಿಗಳನ್ನಾಗಿ ಮಾಡಲು

ಇಚ್ಛಿಸುತ್ತೇನೆಯೋ, ತಂ = ಅವನನ್ನು, ಉಗ್ರಂ = ರುದ್ರನನ್ನಾಗಿ, ಕೃಣೋಮಿ = ಮಾಡುತ್ತೇನೆ. ತಂ = ಅವನನ್ನು, ಬ್ರಹ್ಮಾಣಂ = ಚತುರ್ಮುಖಬ್ರಹ್ಮನನ್ನಾಗಿ, ತಂ = ಅವನನ್ನು, ಋಷಿಂ = ಋಷಿಯನ್ನಾಗಿ, ಸುಮೇಧಾಮ್ = ಪ್ರಜ್ಞಾವಂತನನ್ನಾಗಿ, ಕೃಣೋಮಿ = ಮಾಡುತ್ತೇನೆ. ಇತ್ಯುಕ್ತ್ವಾ = ಹೀಗೆ ಹೇಳಿ, ಮಮ = ಇಂತಹ ನನಗೂ (ಲಕ್ಷ್ಮೀದೇವಿಗೂ), ಯೋನಿಃ = ಕಾರಣಪುರುಷನು, ಸಮುದ್ರೇ ಅಪ್ಸು = ಕ್ಷೀರಸಮುದ್ರದ, ಅಂತಃ = ಒಳಗಡೆ ಇರುವ ಪುರುಷನು, ಇತಿ = ಹೀಗೆ, ಆಹ = ಅಂಭ್ರಣೀಸೂಕ್ತದಲ್ಲಿ ಲಕ್ಷ್ಮೀದೇವಿಯೇ ಹೇಳಿದ್ದಾಳೆ.

ಸಮುದ್ರದಲ್ಲಿರುವವನು ರುದ್ರನೇಕಾಗಬಾರದು? ಮತ್ತು ಉಗ್ರಶಬ್ದದಿಂದ ಬೇರೊಬ್ಬ ಕ್ರೂರನೇಕೆ ಪ್ರತಿಪಾದ್ಯನಾಗಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಉಗ್ರಃ = ಉಗ್ರನೆಂದರೆ, ರುದ್ರಃ = ಈಶ್ವರನು, ಸಮುದ್ರೇऽಂತಃ = ಕ್ಷೀರಸಮುದ್ರದ ಮಧ್ಯದಲ್ಲಿರುವವನು, ನಾರಾಯಣಃ = ನಾರಾಯಣನೇ, ಪ್ರಸಿದ್ಧತ್ವಾತ್ = ಹೀಗೆ ಶ್ರುತಿಪ್ರಸಿದ್ಧಿ ಇರುವುದರಿಂದ, ಅಸ್ಯ ಅರ್ಥಸ್ಯ = ಈ ಬ್ರಹ್ಮಶಬ್ದದ ಅಭಿಪ್ರಾಯವನ್ನೇ, ಸೂಚಿತತ್ವಾತ್ = ಸೂಚಿಸಿರುವುದರಿಂದ.

ಪ್ರಸಿದ್ಧಾರ್ಥವನ್ನು ಬಿಟ್ಟು ಬೇರೆ ಅರ್ಥವನ್ನೇಕೆ ಸ್ವೀಕರಿಸಬಾರದು? ಎಂದರೆ ಅವಿರೋಧೇ = ವಿರೋಧವಿಲ್ಲದಿದ್ದಾಗ, ಪ್ರಸಿದ್ಧಃ = ಪ್ರಸಿದ್ಧವಾದ ಅರ್ಥವನ್ನು, ನಚ ಪರಿತ್ಯಜ್ಯತೇ = ಬಿಡಬಾರದು. ಉಕ್ತನ್ಯಾಯೇನ ಚ = ಮೇಲೆ ಹೇಳಿದ ಯುಕ್ತಿಗಳಿಂದ, ಶ್ರುತಯಃ = ಸಕಲವೇದಗಳು, ಏಕಮೇವ = ನಾರಾಯಣನಾದ ಭಗವಂತನನ್ನೇ, ವದಂತಿ = ಪ್ರತಿಪಾದಿಸುತ್ತವೆ.

ಎಲ್ಲ ಶ್ರುತಿಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆನ್ನಲು ಸ್ಮೃತಿ-ಪ್ರಮಾಣವೂ ಇದೆ. ವೇದೇ = ಸಕಲವೇದಗಳಲ್ಲಿ, ರಾಮಾಯಣೇ ಚ = ಮೂಲರಾಮಾಯಣದಲ್ಲಿಯೂ, ಪುರಾಣೇ = ಅಷ್ಟಾದಶಪುರಾಣಗಳಲ್ಲಿ, ತಥಾ = ಹಾಗೇ, ಭಾರತೇ = ಮಹಾಭಾರತದಲ್ಲಿಯೂ, ಆದೌ = ಪ್ರಾರಂಭದಲ್ಲಿ, ಮಧ್ಯೇ ಚ = ಮಧ್ಯದಲ್ಲಿಯೂ, ಅಂತೇ ಚ = ಅಂತ್ಯದಲ್ಲಿಯೂ, ವಿಷ್ಣುಃ = ನಾರಾಯಣನು, ಸರ್ವತ್ರ = ಎಲ್ಲ ಶಬ್ದಗಳಿಂದಲೂ, ಗೀಯತೇ = ಗಾನಮಾಡಲ್ಪಡುತ್ತಾನೆ. ಇತಿ = ಹೀಗೆ, ಹರಿವಂಶೇಷು = ಹರಿವಂಶದ ಮೂರು ಭಾಗಗಳಲ್ಲಿ ಹೇಳಲಾಗಿದೆ.

## ಬ್ರಹ್ಮಶಬ್ದಾರ್ಥ ವಿಷ್ಣು ಎನ್ನಲು ಅನೇಕ ಆಧಾರಗಳು

**तत्वप्रकाशिका – ननु नारायणप्रसादमृते न मोक्षः चेत् तर्हि तज्जिज्ञासैव कर्तव्या, न ब्रह्मजिज्ञासा ? न च वाच्यं नारायण एव ब्रह्मपदेन विवक्षितः सूत्रकृता' इति । ब्रह्मशब्दस्य बहूर्थत्वेन सूत्रकारविवक्षाविशेषस्य दुर्ज्ञेयत्वादित्यत आह – ब्रह्मेति ।।**

ನಾರಾಯಣನ ಪ್ರಸಾದವಿಲ್ಲದೆ ಮೋಕ್ಷವು ದೊರೆಯುವುದಿಲ್ಲವೆಂದು ಹೇಳಿದಿರಿ. ಹಾಗಾದಲ್ಲಿ ನಾರಾಯಣನ ಜಿಜ್ಞಾಸೆಯನ್ನೇ ಮಾಡಬೇಕು; ಹೊರತು ಬ್ರಹ್ಮಜಿಜ್ಞಾಸೆಯನ್ನಲ್ಲ. ಸೂತ್ರಕಾರರು ಬ್ರಹ್ಮಪದದಿಂದ ನಾರಾಯಣನನ್ನೇ ಹೇಳುತ್ತಿದ್ದಾರೆಂದು ಹೇಳಬಾರದು. ಬ್ರಹ್ಮಪದಕ್ಕೆ ಅನೇಕ ಅರ್ಥವಿರುವುದರಿಂದ ಸೂತ್ರಕಾರರಿಗೆ ಇದೇ ವಿವಕ್ಷೆ ಇದೆ ಎಂದು ನಮ್ಮಿಂದ ತಿಳಿಯಲು ಹೇಗೆ ಸಾಧ್ಯ? ಎಂಬ ಶಂಕೆಗೆ 'ಬ್ರಹ್ಮಶಬ್ದಸ್ಯ' ಎಂಬ ಭಾಷ್ಯದಿಂದ ಆಚಾರ್ಯರು ಉತ್ತರಿಸುತ್ತಿದ್ದಾರೆ.

**तत्वप्रकाशिका – विष्णावेव 'मुख्यः' इति शेषः । 'ब्रह्मशब्दस्यानेकार्थत्वेऽपि तस्य विष्णावेव मुख्यत्वात्, मुख्यस्यैव ग्राह्यत्वात्, स एव सूत्रकारविवक्षितो ज्ञायते' इति भावः ।। 'स विष्णुराह हि', 'तं ब्रह्मेत्याचक्षते' इति । निरन्तरसूत्रद्वयेन ब्रह्मत्वेन नारायणस्यैव प्रस्तुतिं सूचयति विष्णुग्रहणेन ।**

'ವಿಷ್ಣಾವೇವ' ಎಂಬ ಪದದ ನಂತರ 'ಮುಖ್ಯಃ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕು. ಬ್ರಹ್ಮಶಬ್ದಕ್ಕೆ ಅನೇಕಾರ್ಥಗಳಿದ್ದರೂ ಅದು ವಿಷ್ಣುವಿನಲ್ಲಿಯೇ ಮುಖ್ಯವಾಗಿರುವುದರಿಂದ ಮುಖ್ಯಾರ್ಥವನ್ನು ಗ್ರಹಿಸಬೇಕು. ಆದ್ದರಿಂದ ಸೂತ್ರಕಾರರ ವಿವಕ್ಷೆಯು ವಿಷ್ಣುವೆಂದು ತಿಳಿಯುತ್ತದೆ. ಅದು ಹೀಗೆ - ಈ ಬ್ರಹ್ಮಮೀಮಾಂಸಾಶಾಸ್ತ್ರದ ಮೊದಲು ಸೂತ್ರಕಾರರು ದೈವೀಮೀಮಾಂಸಾಶಾಸ್ತ್ರವನ್ನು ಬರೆದಿದ್ದಾರೆ. ಆ ಶಾಸ್ತ್ರದ ಕೊನೆಯಲ್ಲಿ 'ಸ ವಿಷ್ಣುರಾಹ ಹಿ' 'ತಂ ಬ್ರಹ್ಮ ಇತ್ಯಾಚಕ್ಷತೇ' ಎಂಬ ಎರಡು ಸೂತ್ರಗಳನ್ನು ಹೇಳಿ ಅದರ ನಂತರವೇ ಈ ಶಾಸ್ತ್ರದ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರವನ್ನು

ಹೇಳಿದ್ದಾರೆ. ಆದ್ದರಿಂದ ಹಿಂದೆ ಪ್ರಸ್ತುತನಾದ ವಿಷ್ಣುವನ್ನೇ ಇಲ್ಲಿರುವ ಬ್ರಹ್ಮಪದವು ಹೇಳುತ್ತದೆಂದು ಸಿದ್ಧವಾಗುತ್ತದೆ.

**ತತ್ವಪ್ರಕಾಶಿಕಾ – ಬ್ರಹ್ಮಶಬ್ದಸ್ಯಾನ್ಯತ್ರಾಪಿ ರುಢತ್ವಾತ್ ರುಢೇರೇವ ಮುಖ್ಯತ್ವಾತ್ ಕುತೋ ವಿಷ್ಣಾವೇವಾಸೌ ಮುಖ್ಯಃ? ಇತ್ಯತ ಆಹ – ಯಮಿತಿ ।। ಯದ್ಯಪ್ಯನ್ಯತ್ರ ರುಢೋ ಬ್ರಹ್ಮಶಬ್ದಃ ತಥಾಪಿ ವಿಷ್ಣಾವೇವ ಮುಖ್ಯಃ । ಅನ್ಯತ್ರಾಜ್ಞರುಢಿತ್ವಾತ್, ಭಗವತಿ ಚ ವಿದ್ವದ್ರೂಢ್ಯಾ ಬ್ರಹ್ಮಶಬ್ದ ಇತಿ । ''ತದೇವ ಬ್ರಹ್ಮ ಪರಮಂ ಕವೀನಾಮ್'' ಇತಿ ಶ್ರುತ್ಯುಕ್ತತ್ವಾದ್, ವಿದ್ವದವಿದ್ವದ್ರೂಢ್ಯೋರ್ವಿದ್ವದ್ರೂಢೇರೇವ ಮುಖ್ಯತ್ವಾತ್ ।**

ಪ್ರಶ್ನೆ - ಬ್ರಹ್ಮಶಬ್ದವು ಚತುರ್ಮುಖಾದಿಗಳಲ್ಲಿಯೂ ರೂಢವಾಗಿದೆ. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ವಿಷ್ಣುವನ್ನೇ ಬ್ರಹ್ಮಶಬ್ದದಿಂದ ಮುಖ್ಯವಾಗಿ ಹೇಗೆ ಪರಿಗಣಿಸುತ್ತೀರಿ?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು 'ಯಮಂತಃಸಮುದ್ರೇ' ಎಂಬ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ವಸ್ತುತಃ ಬ್ರಹ್ಮಶಬ್ದವು ಬೇರೆಡೆ ರೂಢವಾಗಿದೆ. ಆದರೂ ವಿಷ್ಣುವಿನಲ್ಲಿಯೇ ಮುಖ್ಯವಾಗಿ ಇರುತ್ತದೆ. ಏಕೆಂದರೆ ಬೇರೆಡೆ ಬ್ರಹ್ಮಶಬ್ದವು ಅಜ್ಞರೂಢಿಯಿಂದ ಪ್ರಸಿದ್ಧವಾಗಿದೆ; ಆದರೆ ವಿಷ್ಣುವಿನಲ್ಲಿ ವಿದ್ವದ್ರೂಢಿಯಿಂದ ಪ್ರಸಿದ್ಧವಾಗಿದೆ. ಅಜ್ಞರೂಢಿಗಿಂತ ವಿದ್ವದ್ರೂಢಿಯೇ ಪ್ರಬಲವಾಗಿರುತ್ತದೆ. ವಿಷ್ಣುವಿನಲ್ಲಿ ಬ್ರಹ್ಮಶಬ್ದವು ವಿದ್ವದ್ರೂಢಿಯಿಂದ ಪ್ರಸಿದ್ಧವಾಗಿದೆ ಎಂದು 'ತದೇವ ಬ್ರಹ್ಮ ಪರಮಂ ಕವೀನಾಂ' ಎಂಬ ಶ್ರುತಿಯು ಪ್ರತಿಪಾದಿಸುತ್ತಿದೆ.

**ತತ್ವಪ್ರಕಾಶಿಕಾ – ತಚ್ಛಬ್ದೇನ ವಿಷ್ಣುರಿತಿ ಕುತಃ? ಇತಿ ಚೇತ್ । 'ಯಮನ್ತಃಸಮುದ್ರೇ ಸ್ಥಿತಂ ಜ್ಞಾನಿನೋ ಜಾನನ್ತಿ' ಇತಿ ವಿಷ್ಣುಲಿಙ್ಗಾದೇವ' ಇತಿ ಭಾವಃ ।**

ಈ ಶ್ರುತಿಯಲ್ಲಿರುವ ತತ್ ಶಬ್ದದಿಂದ ವಿಷ್ಣುವೇ ಏಕೆ ಪ್ರತಿಪಾದ್ಯನಾಗಿದ್ದಾನೆಂದರೆ 'ಸಮುದ್ರದೊಳಗಿರುವವನನ್ನು ಯಾವ ಜ್ಞಾನಿಗಳು ತಿಳಿಯುತ್ತಾರೋ' ಎಂದು ಶ್ರುತಿಯು ವಿಷ್ಣುಲಿಂಗವನ್ನು ಹೇಳಿದೆ.

**ತತ್ವಪ್ರಕಾಶಿಕಾ – ಸಮುದ್ರಸ್ಥತ್ವಲಿಙ್ಗಸ್ಯಾನ್ಯತ್ರ ಕಥಞ್ಚಿತ್ ಸಮ್ಭವಾತ್ ತಚ್ಛಬ್ದೇನ ಕುತೋ ವಿಷ್ಣುತ್ವನಿಶ್ಚಯಃ? ಇತ್ಯತೋ ನಿರವಕಾಶಶ್ರುತೇರೇವೇತ್ಯಾಹ – ತನ್ನ ಇತಿ ।। 'ಯತಸ್ತಂ ವಿಜ್ಮಹೇ ಧೀಮಹಿ, ಚ ತಸ್ಮಾದಸ್ಮಾನ್ ಶುಭಂ ಪ್ರತಿ ವಿಷ್ಣುಶ್ಚೋದಯತು' ಇತ್ಯರ್ಥಃ ।**

ಈ ಸಮುದ್ರಾಂತಃಸ್ಥತ್ವಲಿಂಗವು ಬೇರೆ ರುದ್ರಾದಿಗಳಲ್ಲಿಯೂ ಬರಬಹುದಾದ್ದರಿಂದ ತತ್ ಪದದಿಂದ ವಿಷ್ಣುವನ್ನೇ ತಿಳಿದುಕೊಳ್ಳಬೇಕೆಂದು ಹೇಗೆ ನಿರ್ಣಯಿಸುತ್ತೀರಿ? ಎಂದು ಶಂಕಿಸಿದರೆ ನಿರವಕಾಶಶ್ರುತಿಯಿಂದ ವಿಷ್ಣುವೆಂದು ನಿಶ್ಚಯವಾಗುತ್ತದೆ. ಈ ವಿಚಾರವನ್ನು ಆಚಾರ್ಯರು 'ತನ್ನೋ ವಿಷ್ಣುಃ' ಎಂಬ ಭಾಷ್ಯದಿಂದ ಉಪಪಾದಿಸುತ್ತಿದ್ದಾರೆ. 'ಯಾವ ಕಾರಣಕ್ಕಾಗಿ ನಾವು ವಿಷ್ಣುವನ್ನು ತಿಳಿಯುತ್ತೇವೆಯೋ, ಮತ್ತು ಧ್ಯಾನಮಾಡುತ್ತೇವೋ ಆ ಕಾರಣಕ್ಕಾಗಿ ವಿಷ್ಣುವು ನಮಗೆ ಸತ್ಕಾರ್ಯಗಳಲ್ಲಿ ಪ್ರೇರಣೆ ಮಾಡಲಿ' ಎಂಬರ್ಥವನ್ನು ಶ್ರುತಿಗೆ ತಿಳಿಯಬೇಕು.

**तत्वप्रकाशिका – यदि विष्णुशब्दात् स एवात्रोक्तं ब्रह्म; तर्हि 'तन्नो रुद्रः' इत्यादि इतरवाचकशब्दसद्भावात् तेषामपि मुख्यब्रह्मत्वं प्राप्तम्? इत्यत आह – न चेति ।।**

ಯಾವಕಾರಣದಿಂದ ವಿಷ್ಣುಶಬ್ದಬಲದಿಂದ ಬ್ರಹ್ಮಪದಕ್ಕೆ ವಿಷ್ಣು ಎಂದು ಅರ್ಥೈಸುತ್ತೀರೋ? ಅದರಂತೆ ತನ್ನೋ ರುದ್ರಃ ಇತ್ಯಾದಿಯಾಗಿ ರುದ್ರಾದಿವಾಕ್ಯದ ಶಬ್ದಗಳು ಈ ಪ್ರಕರಣದಲ್ಲಿರುವುದರಿಂದ ರುದ್ರಾದಿಗಳೂ ಸಹ ಬ್ರಹ್ಮಪದದಿಂದ ಪ್ರತಿಪಾದ್ಯರಾಗಲಿ? ಈ ಪ್ರಶ್ನೆಗೆ ಆಚಾರ್ಯರು 'ನ ಚ ಇತರಶಬ್ದಾತ್' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

**तत्वप्रकाशिका – कुतो नेतरेषां मुख्यब्रह्मत्वप्राप्तिः? इति चेत् 'तत्प्रापकशब्दानां विष्णावेव मुख्यत्वात्' इत्यभिप्रायेण तत्र श्रुतिमाह – नामानीति ।।**

ರುದ್ರಾದಿದೇವತೆಗಳಿಗೆ ಮುಖ್ಯಬ್ರಹ್ಮತ್ವವು ಏಕೆ ಇರುವುದಿಲ್ಲ? ಎಂದರೆ ಇತರ ದೇವತಾವಾಚಕಶಬ್ದಗಳೆಲ್ಲವೂ ವಿಷ್ಣುವಿನಲ್ಲಿಯೇ ಮುಖ್ಯವಾಗಿರುತ್ತವೆಂಬ ಅಭಿಪ್ರಾಯದಿಂದ ಶ್ರುತಿಪ್ರಮಾಣವನ್ನು 'ನಾಮಾನಿ' ಎಂಬುದರಿಂದ ತೋರಿಸುತ್ತಿದ್ದಾರೆ.

**तत्वप्रकाशिका – सर्वाणि नामानि रुद्रादिजगति मुख्यतो न सन्ति, यतो विष्ण्वितरस्य जगतः सर्वं नामप्रवृत्तिनिमित्तमुत्पत्तिमत् । तर्हि कस्मिन् तानि मुख्यतः ? सर्वाणि नामानि यं मुख्यतो वाचकत्वेन विशन्ति तमपरिच्छिन्न-प्रवृत्तिनिमित्तं विष्णुं वदन्ति विद्वांस इत्यर्थः ।**

ಹೇಳಿದ್ದಾರೆ. ಆದ್ದರಿಂದ ಹಿಂದೆ ಪ್ರಸ್ತುತನಾದ ವಿಷ್ಣುವನ್ನೇ ಇಲ್ಲಿರುವ ಬ್ರಹ್ಮಪದವು ಹೇಳುತ್ತದೆಂದು ಸಿದ್ಧವಾಗುತ್ತದೆ.

**ತತ್ವಪ್ರಕಾಶಿಕಾ – ಬ್ರಹ್ಮಶಬ್ದಸ್ಯಾನ್ಯತ್ರಾಪಿ ರುಢತ್ವಾತ್ ರುಢೇರೇವ ಮುಖ್ಯತ್ವಾತ್ ಕುತೋ ವಿಷ್ಣಾವೇವಾಸೌ ಮುಖ್ಯಃ? ಇತ್ಯತ ಆಹ – ಯಮಿತಿ ।। ಯದ್ಯಪ್ಯನ್ಯತ್ರ ರುಢೋ ಬ್ರಹ್ಮಶಬ್ದಃ ತಥಾಪಿ ವಿಷ್ಣಾವೇವ ಮುಖ್ಯಃ । ಅನ್ಯತ್ರಾಜ್ಞರುಢಿತ್ವಾತ್, ಭಗವತಿ ಚ ವಿದ್ವದ್ರೂಢ್ಯಾ ಬ್ರಹ್ಮಶಬ್ದ ಇತಿ । ''ತದೇವ ಬ್ರಹ್ಮ ಪರಮಂ ಕವೀನಾಮ್'' ಇತಿ ಶ್ರುತ್ಯುಕ್ತತ್ವಾದ್, ವಿದ್ವದವಿದ್ವದ್ರೂಢ್ಯೋರ್ವಿದ್ವದ್ರೂಢೇರೇವ ಮುಖ್ಯತ್ವಾತ್ ।**

ಪ್ರಶ್ನೆ - ಬ್ರಹ್ಮಶಬ್ದವು ಚತುರ್ಮುಖಾದಿಗಳಲ್ಲಿಯೂ ರೂಢವಾಗಿದೆ. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ವಿಷ್ಣುವನ್ನೇ ಬ್ರಹ್ಮಶಬ್ದದಿಂದ ಮುಖ್ಯವಾಗಿ ಹೇಗೆ ಪರಿಗಣಿಸುತ್ತೀರಿ?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು 'ಯಮಂತಃಸಮುದ್ರೇ' ಎಂಬ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ವಸ್ತುತಃ ಬ್ರಹ್ಮಶಬ್ದವು ಬೇರೆಡೆ ರೂಢವಾಗಿದೆ. ಆದರೂ ವಿಷ್ಣುವಿನಲ್ಲಿಯೇ ಮುಖ್ಯವಾಗಿ ಇರುತ್ತದೆ. ಏಕೆಂದರೆ ಬೇರೆಡೆ ಬ್ರಹ್ಮಶಬ್ದವು ಅಜ್ಞರೂಢಿಯಿಂದ ಪ್ರಸಿದ್ಧವಾಗಿದೆ; ಆದರೆ ವಿಷ್ಣುವಿನಲ್ಲಿ ವಿದ್ವದ್ರೂಢಿಯಿಂದ ಪ್ರಸಿದ್ಧವಾಗಿದೆ. ಅಜ್ಞರೂಢಿಗಿಂತ ವಿದ್ವದ್ರೂಢಿಯೇ ಪ್ರಬಲವಾಗಿರುತ್ತದೆ. ವಿಷ್ಣುವಿನಲ್ಲಿ ಬ್ರಹ್ಮಶಬ್ದವು ವಿದ್ವದ್ರೂಢಿಯಿಂದ ಪ್ರಸಿದ್ಧವಾಗಿದೆ ಎಂದು 'ತದೇವ ಬ್ರಹ್ಮ ಪರಮಂ ಕವೀನಾಂ' ಎಂಬ ಶ್ರುತಿಯು ಪ್ರತಿಪಾದಿಸುತ್ತಿದೆ.

**ತತ್ವಪ್ರಕಾಶಿಕಾ – ತಚ್ಛಬ್ದೇನ ವಿಷ್ಣುರಿತಿ ಕುತಃ? ಇತಿ ಚೇತ್ । 'ಯಮನ್ತಃಸಮುದ್ರೇ ಸ್ಥಿತಂ ಜ್ಞಾನಿನೋ ಜಾನನ್ತಿ' ಇತಿ ವಿಷ್ಣುಲಿಙ್ಗಾದೇವ' ಇತಿ ಭಾವಃ ।**

ಈ ಶ್ರುತಿಯಲ್ಲಿರುವ ತತ್ ಶಬ್ದದಿಂದ ವಿಷ್ಣುವೇ ಏಕೆ ಪ್ರತಿಪಾದ್ಯನಾಗಿದ್ದಾನೆಂದರೆ 'ಸಮುದ್ರದೊಳಗಿರುವವನನ್ನು ಯಾವ ಜ್ಞಾನಿಗಳು ತಿಳಿಯುತ್ತಾರೋ' ಎಂದು ಶ್ರುತಿಯು ವಿಷ್ಣುಲಿಂಗವನ್ನು ಹೇಳಿದೆ.

**ತತ್ವಪ್ರಕಾಶಿಕಾ – ಸಮುದ್ರಸ್ಥತ್ವಲಿಙ್ಗಸ್ಯಾನ್ಯತ್ರ ಕಥಞ್ಚಿತ್ ಸಮ್ಭವಾತ್ ತಚ್ಛಬ್ದೇನ ಕುತೋ ವಿಷ್ಣುತ್ವನಿಶ್ಚಯಃ? ಇತ್ಯತೋ ನಿರವಕಾಶಶ್ರುತೇರೇವೇತ್ಯಾಹ – ತನ್ನ ಇತಿ ।। 'ಯತಸ್ತಂ ವಿಜ್ಮಹೇ ಧೀಮಹಿ, ಚ ತಸ್ಮಾದಸ್ಮಾನ್ ಶುಭಂ ಪ್ರತಿ ವಿಷ್ಣುಶ್ಚೋದಯತು' ಇತ್ಯರ್ಥಃ ।**

ಈ ಸಮುದ್ರಾಂತಃಸ್ಥತ್ವಲಿಂಗವು ಬೇರೆ ರುದ್ರಾದಿಗಳಲ್ಲಿಯೂ ಬರಬಹುದಾದ್ದರಿಂದ ತತ್ ಪದದಿಂದ ವಿಷ್ಣುವನ್ನೇ ತಿಳಿದುಕೊಳ್ಳಬೇಕೆಂದು ಹೇಗೆ ನಿರ್ಣಯಿಸುತ್ತೀರಿ? ಎಂದು ಶಂಕಿಸಿದರೆ ನಿರವಕಾಶಶ್ರುತಿಯಿಂದ ವಿಷ್ಣುವೆಂದು ನಿಶ್ಚಯವಾಗುತ್ತದೆ. ಈ ವಿಚಾರವನ್ನು ಆಚಾರ್ಯರು 'ತನ್ನೋ ವಿಷ್ಣುಃ' ಎಂಬ ಭಾಷ್ಯದಿಂದ ಉಪಪಾದಿಸುತ್ತಿದ್ದಾರೆ. 'ಯಾವ ಕಾರಣಕ್ಕಾಗಿ ನಾವು ವಿಷ್ಣುವನ್ನು ತಿಳಿಯುತ್ತೇವೆಯೋ, ಮತ್ತು ಧ್ಯಾನಮಾಡುತ್ತೇವೋ ಆ ಕಾರಣಕ್ಕಾಗಿ ವಿಷ್ಣುವು ನಮಗೆ ಸತ್ಕಾರ್ಯಗಳಲ್ಲಿ ಪ್ರೇರಣೆ ಮಾಡಲಿ' ಎಂಬರ್ಥವನ್ನು ಶ್ರುತಿಗೆ ತಿಳಿಯಬೇಕು.

**तत्वप्रकाशिका – यदि विष्णुशब्दात् स एवात्रोक्तं ब्रह्म; तर्हि 'तन्नो रुद्रः' इत्यादि इतरवाचकशब्दसद्भावात् तेषामपि मुख्यब्रह्मत्वं प्राप्तम्? इत्यत आह – न चेति ।।**

ಯಾವಕಾರಣದಿಂದ ವಿಷ್ಣುಶಬ್ದಬಲದಿಂದ ಬ್ರಹ್ಮಪದಕ್ಕೆ ವಿಷ್ಣು ಎಂದು ಅರ್ಥೈಸುತ್ತೀರೋ? ಅದರಂತೆ ತನ್ನೋ ರುದ್ರಃ ಇತ್ಯಾದಿಯಾಗಿ ರುದ್ರಾದಿವಾಕ್ಯದ ಶಬ್ದಗಳು ಈ ಪ್ರಕರಣದಲ್ಲಿರುವುದರಿಂದ ರುದ್ರಾದಿಗಳೂ ಸಹ ಬ್ರಹ್ಮಪದದಿಂದ ಪ್ರತಿಪಾದ್ಯರಾಗಲಿ? ಈ ಪ್ರಶ್ನೆಗೆ ಆಚಾರ್ಯರು 'ನ ಚ ಇತರಶಬ್ದಾತ್' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ.

**तत्वप्रकाशिका – कुतो नेतरेषां मुख्यब्रह्मत्वप्राप्तिः? इति चेत् 'तत्प्रापकशब्दानां विष्णावेव मुख्यत्वात्' इत्यभिप्रायेण तत्र श्रुतिमाह – नामानीति ।।**

ರುದ್ರಾದಿದೇವತೆಗಳಿಗೆ ಮುಖ್ಯಬ್ರಹ್ಮತ್ವವು ಏಕೆ ಇರುವುದಿಲ್ಲ? ಎಂದರೆ ಇತರ ದೇವತಾವಾಚಕಶಬ್ದಗಳೆಲ್ಲವೂ ವಿಷ್ಣುವಿನಲ್ಲಿಯೇ ಮುಖ್ಯವಾಗಿರುತ್ತವೆಂಬ ಅಭಿಪ್ರಾಯದಿಂದ ಶ್ರುತಿಪ್ರಮಾಣವನ್ನು 'ನಾಮಾನಿ' ಎಂಬುದರಿಂದ ತೋರಿಸುತ್ತಿದ್ದಾರೆ.

**तत्वप्रकाशिका – सर्वाणि नामानि रुद्रादिजगति मुख्यतो न सन्ति, यतो विष्ण्वितरस्य जगतः सर्वं नामप्रवृत्तिनिमित्तमुत्पत्तिमत् । तर्हि कस्मिन् तानि मुख्यतः ? सर्वाणि नामानि यं मुख्यतो वाचकत्वेन विशन्ति तमपरिच्छिन्न-प्रवृत्तिनिमित्तं विष्णुं वदन्ति विद्वांस इत्यर्थः ।**

ಸಕಲನಾಮಗಳು ರುದ್ರಾದಿಜಗತ್ತಿನಲ್ಲಿ ಮುಖ್ಯವಾಗಿ ಇರುವುದಿಲ್ಲ. ಏಕೆಂದರೆ ವಿಷ್ಣುವನ್ನು ಬಿಟ್ಟು ಉಳಿದ ಜಗತ್ತಿನ ಸಕಲಶಬ್ದಗಳ ಪ್ರವೃತ್ತಿನಿಮಿತ್ತವು ಉತ್ಪತ್ತಿಯುಳ್ಳದ್ದಾಗಿದೆ. ಹಾಗಾದರೆ ಆ ಎಲ್ಲ ನಾಮಗಳು ಯಾರಲ್ಲಿ ಮುಖ್ಯವಾಗಿರುತ್ತವೆ ಎಂದರೆ ಯಾರ ವಿಷಯದಲ್ಲಿ ಸಕಲ ನಾಮಗಳು ಮುಖ್ಯವಾಚಕಗಳಾಗಿ ಪ್ರವೇಶಿಸುತ್ತವೋ ಮತ್ತು ಯಾರ ವಿಷಯದಲ್ಲಿ ಅಪರಿಚ್ಛಿನ್ನವಾದ ಪ್ರವೃತ್ತಿನಿಮಿತ್ತವನ್ನು ಹೊಂದಿರುತ್ತವೋ, ಅಂತಹವನನ್ನೇ ವಿದ್ವಾಂಸರು ವಿಷ್ಣುವೆಂದು ಹೇಳುತ್ತಾರೆ ಎಂದು ಶ್ರುತಿಗೆ ಅರ್ಥ.

**तत्वप्रकाशिका – यथा सर्वनामवत्त्वेन विष्णुरेवात्रोक्तं ब्रह्म, तथा रुद्रादीनामपि विष्ण्वादिशब्दवाच्यत्वेन त एवात्रोक्तं ब्रह्म किं न स्युः? इत्यत आह – य इति ।। नामधा = नामधारकः । 'यच्छब्देन विष्णुः' इति कुतः? अस्य सूक्तस्यान्यपरत्वात्, इत्यत आह – अजस्येति ।। पद्मनाभत्वलिङ्गादयं विष्णुरेव । उत्सर्गतो लिङ्गात् श्रुतेः प्राबल्येऽपि, निरवकाशलिङ्गेन सावकाशविश्वकर्मश्रुतेर्बाध-सम्भवादिति भावः ।**

ಪ್ರಶ್ನೆ - ಸಕಲನಾಮಗಳು ವಿಷ್ಣುವಿನಲ್ಲೇ ಇರುವುದರಿಂದ ಬ್ರಹ್ಮಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆಂದು ಹೇಗೆ ಹೇಳಿದಿರೋ, ಅದರಂತೆ ರುದ್ರಾದಿಗಳಲ್ಲಿಯೂ ವಿಷ್ಣು-ಮೊದಲಾದ ಸಕಲನಾಮಗಳು ಇರುವುದರಿಂದ ಇಲ್ಲಿ ಹೇಳಿದ ಬ್ರಹ್ಮಪದದಿಂದ ರುದ್ರಾದಿಗಳು ಏಕೆ ಪ್ರತಿಪಾದ್ಯರಾಗುವುದಿಲ್ಲ?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು 'ಯೋ ದೇವಾನಾಂ' ಎಂಬ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ನಾಮಧಾ ಎಂದರೆ ನಾಮಧಾರಕನೆಂದರ್ಥ. 'ಯತ್'ಶಬ್ದದಿಂದ ವಿಷ್ಣುವನ್ನೇ ಏಕೆ ಸ್ವೀಕರಿಸಬೇಕು? ಈ ಸೂಕ್ತವು ವಿಶ್ವಕರ್ಮಸೂಕ್ತವಾದ್ದರಿಂದ ವಿಶ್ವಕರ್ಮನನ್ನೇ ಪ್ರತಿಪಾದಿಸಬೇಕಲ್ಲವೇ? ಎಂಬ ಪ್ರಶ್ನೆಗೆ 'ಅಜಸ್ಯ ನಾಭೌ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪದ್ಮನಾಭತ್ವಲಿಂಗವಿರುವುದರಿಂದ ಇವನು ವಿಷ್ಣುವೇ ಆಗಿದ್ದಾನೆ. ವಸ್ತುತಃ ಲಿಂಗಕ್ಕಿಂತ ಶ್ರುತಿ ಪ್ರಬಲವಾಗಿದ್ದರೂ ನಿರವಕಾಶಲಿಂಗದಿಂದ ಸಾವಕಾಶವಾದ ವಿಶ್ವಕರ್ಮಶ್ರುತಿಯು ಬಾಧಿತವಾಗುತ್ತದೆಂದು ಅಭಿಪ್ರಾಯ.

**तत्वप्रकाशिका – नाभ्यर्पितं पद्मादन्यत् किं न स्यात्? इत्यत आह – न चेति ।। नाभ्यर्पितो विश्वाधारः पदार्थः प्रसिद्धपद्माख्यार्थं विनाऽन्यो न युज्यते, प्रसिद्धिबाधादित्यर्थः**

ನಾಭಿಯಲ್ಲಿರುವ ಪದಾರ್ಥವು ಪದ್ಮವೇ ಏಕಾಗಬೇಕು? ಬೇರೆ ಯಾವುದಾದರೂ ಏಕೆ ಆಗಬಾರದು? ಎಂಬ ಪ್ರಶ್ನೆಗೆ 'ನಚ' ಎಂಬುದರಿಂದ ಉತ್ತರಿಸಿದ್ದಾರೆ. ಸಕಲ ವಿಶ್ವಕ್ಕೆ ಆಧಾರವಾದ ನಾಭಿಯಲ್ಲಿರುವ ಪದಾರ್ಥವು ಪ್ರಸಿದ್ಧವಾದ ಪದ್ಮವೇ ಆಗಬೇಕು. ಇಲ್ಲದಿದ್ದರೆ ಪ್ರಸಿದ್ಧಿಗೆ ಬಾಧ ಬರುತ್ತದೆ.

**तत्वप्रकाशिका – विश्वकर्मश्रुतिवत् पद्मनाभत्वलिङ्गं चान्यस्यापि किं न स्यात्? इत्यतो वाऽऽह – न चेति ।। पद्मनाभत्वेन प्रसिद्धपदार्थं भगवन्तं विनाऽन्यः पद्मनाभो न युज्यते प्रसिद्धिबाधादित्यर्थः ।**

ಅಥವಾ ವಿಶ್ವಕರ್ಮಶ್ರುತಿಯಂತೆ ಪದ್ಮನಾಭತ್ವಲಿಂಗವನ್ನೂ ಸಹ ಬೇರೆ ದೇವತೆಗಳಿಗೆ ಏಕೆ ಹೇಳಬಾರದು? ಎಂಬ ಪ್ರಶ್ನೆಗೂ 'ನಚ' ಎಂಬ ವಾಕ್ಯದಿಂದಲೇ ಉತ್ತರಿಸುತ್ತಿದ್ದಾರೆ. ಭಗವಂತನು ಪದ್ಮನಾಭನೆಂದು ಪ್ರಸಿದ್ಧನಾಗಿದ್ದಾನೆ. ಈ ಪ್ರಸಿದ್ಧಿಯನ್ನು ಬಿಟ್ಟು ಬೇರೆ ಪದ್ಮನಾಭನನ್ನು ಒಪ್ಪುವುದು ಸರಿಯಲ್ಲ. ಹಾಗಾದಲ್ಲಿ ಪ್ರಸಿದ್ಧಿಗೆ ಬಾಧ ಬರುತ್ತದೆಂದು ಅಭಿಪ್ರಾಯ.

**तत्वप्रकाशिका – न केवलमेतच्छ्रुत्युक्तं पद्मं, पद्मनाभश्च हरिः प्रसिद्धत्वैव किन्तु तद्वाचित्वेन स्मृतिगृहीतत्वाचेत्याह – अजस्येति ।। 'अजस्य नाभौ' इतिश्रुतेरित्यन्वयः ।**

ಈ ಶ್ರುತಿಯಲ್ಲಿ ಹೇಳಿರುವ ಪದ್ಮ ಹಾಗೂ ಪದ್ಮನಾಭನಾದ ಶ್ರೀಹರಿ ಎಂಬೆರೆಡು ಅರ್ಥಗಳು ಕೇವಲ ಪ್ರಸಿದ್ಧಿಯೆಂದೇ ಒಪ್ಪಬೇಕೆಂದಲ್ಲ.

ಈ ವಿಷಯದಲ್ಲಿ ಸ್ಮೃತಿಪ್ರಮಾಣವೂ ಇರುತ್ತದೆಂದು 'ಅಜಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಜಸ್ಯ, ನಾಭೌ ಎಂಬೆರೆಡು ಪದಗಳಿಗೆ 'ಶ್ರುತೇಃ' ಎಂಬಲ್ಲಿ ಅನ್ವಯ ಮಾಡಬೇಕು.

**तत्वप्रकाशिका – क्वचिद्व्यस्ताः क्वचित्समस्ताः विश्वविभूतयो येनासौ तथोक्तः । पूर्वार्धे विष्णुवाचकाभावादुत्तरार्धोदाहरणम् । यदा निरवकाशत्वेन लिङ्गमात्रं श्रुतिबाधकं, तदा किं वाच्यं समाख्यायुक्तं तत् ! इतिभावेनाह – पर इति ।। 'परो दिवा पर एना पृथिव्या परो देवेभिरसुरैर्यदस्ति' इत्यनेन**

**विश्वकर्मसूक्तोक्तेन सूक्तान्तरे 'परो दिवा पर एना पृथिव्यैतावती महिना सम्बभूव' इति समाख्यानाच्च विष्णुरेव विश्वकर्मसूक्तोक्तः**

'ಕೆಲವು ವಿಶ್ವವಿಭೂತಿಗಳು ವ್ಯಸ್ತವಾಗಿವೆ. ಕೆಲವು ಸಮಸ್ತವಾಗಿವೆ. (ಸೃಷ್ಟ್ಯಾದ್ಯಷ್ಟಕರ್ತೃತ್ವಗಳು ಜೀವರ ವಿಷಯದಲ್ಲಿ ಸಂಪೂರ್ಣವಾಗಿ ಬಂದರೂ, ಜಡವಿಷಯದಲ್ಲಿ ಜ್ಞಾನಾಜ್ಞಾನಾದಿಗಳನ್ನು ಹೇಳಲು ಬರುವುದಿಲ್ಲ; ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನಗಳಷ್ಟೇ ಇರುತ್ತವೆ). ಶ್ರುತಿಯ ಪೂರ್ವಾರ್ಧದಲ್ಲಿ ವಿಷ್ಣುವಾಚಕವಾದ ಶಬ್ದವಿಲ್ಲದ ಕಾರಣ ಉತ್ತರಾರ್ಧವನ್ನು ಉದಾಹರಿಸಿದ್ದಾರೆ. ಲಿಂಗವು ಕೇವಲ ನಿರವಕಾಶವಾದರೆ ಸಾಕು ಸೃಷ್ಟಿಗೆ ಬಾಧಕವಾಗುತ್ತದೆ. ಇನ್ನು ಸಮಾಖ್ಯಾ ಪ್ರಮಾಣದ ಜೊತೆಗೆ ಸೇರಿದಾಗ ಅಂತಹ ಲಿಂಗವು ಶ್ರುತಿಯನ್ನು ಸುತರಾಂ ಬಾಧಿಸುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ಅಭಿಪ್ರಾಯದಿಂದ ಆಚಾರ್ಯರು 'ಪರೋ ದಿವಾ' ಇತ್ಯಾದಿಯಾಗಿ ಶ್ರುತಿಯನ್ನು ಹೇಳಿದ್ದಾರೆ. ವಿಶ್ವಕರ್ಮಸೂಕ್ತದಲ್ಲಿ 'ಪರೋ ದಿವಾ ಪರ ಏನಾ ಪೃಥಿವ್ಯಾ ಪರೋ ದೇವೇಭಿರಸುರ್ಯೈರ್ಯದಸ್ತಿ' ಎಂದು ಕೇಳಿಸುತ್ತಿದೆ. ಲಕ್ಷ್ಮೀಸೂಕ್ತದಲ್ಲಿಯೂ 'ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವ' ಎಂದು ಕೇಳಿಸುತ್ತಿದೆ. ಈ ಎರಡೂ ವಾಕ್ಯಗಳಿಗೆ ಹೊಂದಿಕೆಯಾಗುವುದನ್ನೇ ಸಮಾಖ್ಯಾ ಎನ್ನುತ್ತಾರೆ. ಈ ಸಮಾಖ್ಯಾಪ್ರಮಾಣದಿಂದ ವಿಶ್ವಕರ್ಮಸೂಕ್ತದಲ್ಲಿ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ ಎಂದು ಸಿದ್ಧವಾಗುತ್ತದೆ.

**तत्वप्रकाशिका – न च तत्रापि विष्णुः कुतः? इति शङ्क्यम् । यतः समाख्याश्रुतौ द्यावापृथिवीपरं 'मम योनिरप्स्वन्तःसमुद्रे' इति लक्ष्मीः स्वकारणत्वेन समुद्रस्थितत्वेन चाह । न चास्तु लक्ष्मीकारणं ब्रह्मायन्यतममिति वाच्यम् । 'यं कामये' इति लक्ष्म्या ब्रह्मादीनां स्वाधीनत्वोक्तेरित्यर्थः ।**

ಲಕ್ಷ್ಮೀಸೂಕ್ತದಲ್ಲಿ ವಿಷ್ಣುವೇ ಪ್ರತಿಪಾದ್ಯನೆಂದು ಹೇಗೆ ನಿರ್ಣಯಿಸುತ್ತೀರಿ? ಎಂದು ಶಂಕಿಸಬಾರದು. ಏಕೆಂದರೆ ಲಕ್ಷ್ಮೀಸೂಕ್ತದಲ್ಲಿ 'ಯಂ ಕಾಮಯೇ' ಇತ್ಯಾದಿಯಾಗಿ ಬ್ರಹ್ಮಾದಿಗಳು ಲಕ್ಷ್ಮಿಯ ಅಧೀನರಾಗಿದ್ದಾರೆಂದು ತಿಳಿಯುವುದರಿಂದ.

**तत्वप्रकाशिका – 'दिवा' इत्यादितृतीया पञ्चम्यर्थे । स विष्णुर्द्यावापृथिवीपरोः, अहं तु महिम्ना 'एतावती' परिमिता बभूवेत्यर्थः । यमुग्रं ब्रह्माणमृषिं सुमेधसं वा कर्तुं कामये, तं तमुग्रं ब्रह्माणमृषिं सुमेधसं वा करोमीत्यर्थः।**

ದಿವಾ ಎಂಬಲ್ಲಿರುವ ತೃತೀಯಾವಿಭಕ್ತಿಯು ಪಂಚಮ್ಯರ್ಥದಲ್ಲಿದೆ. ಆ ವಿಷ್ಣುವು ದ್ಯಾವಾಪೃಥಿವಿಗಳಿಗಿಂತ ಉತ್ತಮನಾಗಿದ್ದಾನೆ. ಆದರೆ ನಾನು ಮಾತ್ರ ಇಷ್ಟು ಮಾತ್ರ ಮಹಿಮೆಯುಳ್ಳವಳು ಎಂದು ಲಕ್ಷ್ಮ್ಯಯ ಮಾತು. 'ಯಾರನ್ನು ನಾನು ಉಗ್ರನಾದ ರುದ್ರನೆಂದು ಅಥವಾ ಬ್ರಹ್ಮನೆಂದು ಅಥವಾ ಪೃಥ್ವಿಯೆಂದು ಅಥವಾ ಜ್ಞಾನಿಯೆಂದು ಸೃಷ್ಟಿಸಲು ಇಚ್ಛಿಸುತ್ತೇನೋ ಅವರನ್ನು ಹಾಗೆಯೇ ಸೃಷ್ಟಿಸುತ್ತೇನೆ' ಎಂದು ಶ್ರುತಿಯ ಅರ್ಥ.

**तत्वप्रकाशिका – नन्वत्र समुद्रस्थो रुद्रः किं न स्यात्?, 'तप्यमानाय सलिले' इति भारतोक्तेः । न च रमाधीनत्वोक्तिविरोधः । उग्रशब्देन कस्यचित् क्रूरस्यैव ग्रहणसम्भवात्, इत्यत आह – उग्र इति ।। अत्र 'उग्रः' इति रुद्र एव भवेत् । 'उग्रः कपर्दी श्रीकण्ठः' इति तस्यैवोग्रत्वेन प्रसिद्धत्वात्, उग्रशब्देन रुद्रशब्दार्थस्य सूचितत्वाच्च । 'उग्रो रुद्रो रौद्रः' इत्येकार्थत्वात् ।**

ಪ್ರಶ್ನೆ - ಸಮುದ್ರದಲ್ಲಿರುವವನು ರುದ್ರನು ಏಕಾಗಬಾರದು? ಮಹಾಭಾರತದಲ್ಲಿ 'ತಪ್ಯಮಾನಾಯ ಸಲಿಲೇ' (ರುದ್ರನು ನೀರನಲ್ಲಿದ್ದು ತಪಸ್ಸು ಮಾಡಿದನೆಂದು) ಹೇಳಿದೆ. ಹಾಗಾದರೆ ರುದ್ರನು ರಮಾಧೀನನೆಂದು ಹೇಳಿದ್ದಕ್ಕೆ ವಿರೋಧ ಬರುತ್ತದಲ್ಲವೆ ಎಂದು ಪ್ರಶ್ನಿಸಬಾರದು. ಉಗ್ರಶಬ್ದದಿಂದ ರುದ್ರನೇ ಪ್ರತಿಪಾದ್ಯನಾಗಬೇಕಿಲ್ಲ. ಯಾರೋ ಒಬ್ಬ ಕ್ರೂರನು ಪ್ರತಿಪಾದ್ಯನಾಗಬಹುದು. ಆದ್ದರಿಂದ ರುದ್ರನು ಲಕ್ಷ್ಮ್ಯಸೂಕ್ತದಿಂದ ರಮಾಧೀನನೆಂದು ಸಿದ್ಧವಾಗುವುದಿಲ್ಲ.

ಉತ್ತರ - ಈ ಪ್ರಶ್ನೆಗೆ ಭಾಷ್ಯಕಾರರು 'ಉಗ್ರೋ ರುದ್ರಃ' ಎಂಬುದರಿಂದ ಉತ್ತರಿಸಿದ್ದಾರೆ. ಉಗ್ರಶಬ್ದಕ್ಕೆ ರುದ್ರನೇ ಅರ್ಥ. ಏಕೆಂದರೆ 'ಉಗ್ರಃ ಕಪರ್ದೀ ಶ್ರೀಕಂಠಃ' ಎಂಬ ನಿಘಂಟುವಿನಂತೆ ಉಗ್ರಶಬ್ದವು ರುದ್ರನಲ್ಲೇ ಪ್ರಸಿದ್ಧವಾಗಿದೆ. ಮತ್ತು ಉಗ್ರಶಬ್ದದಿಂದ ರುದ್ರಶಬ್ದದ ಅರ್ಥವು ಸೂಚಿತವೂ ಆಗಿದೆ. ಏಕೆಂದರೆ 'ಉಗ್ರಃ ರುದ್ರಃ ರೌದ್ರಃ' ಈ ಮೂರೂ ಶಬ್ದಗಳು ಏಕಾರ್ಥವಾಗಿವೆ.

**तत्वप्रकाशिका – तथा समुद्रस्थो नारायण एव भवेत् । समुद्रशयनत्वेन तस्यैव 'महोदधिशयोऽन्तकः' इत्यादौ प्रसिद्धत्वात् । तथा समुद्रान्तस्थत्वकथनेन नारायणशब्दार्थस्य सूचितत्वाच्च, 'आपो नाराः' (मनुसंहिता - १-१०) इति स्मृतेरित्यर्थः ।**

ಮತ್ತು ಸಮುದ್ರದಲ್ಲಿರುವವನು ನಾರಾಯಣನೇ ಆಗಬೇಕು. 'ಮಹೋದಧಿ-ಶಯೋऽಂತಕಃ' ಇತ್ಯಾದಿಯಾಗಿ ನಾರಾಯಣನಲ್ಲಿಯೇ ಸಮುದ್ರಶಾಯಿತ್ವವು ಸೂಚಿತವಾಗಿದೆ. ಮತ್ತು ಸಮುದ್ರಾಂತಃಸ್ಥತ್ವದಿಂದ ನಾರಾಯಣಶಬ್ದದ ಅರ್ಥವು ಸೂಚಿತವಾಗಿದೆ. 'ಆಪೋ ನಾರಾ' ಇತ್ಯಾದಿ ಸ್ಮೃತಿಯೇ ಈ ವಿಷಯದಲ್ಲಿ ಪ್ರಮಾಣ.

**तत्वप्रकाशिका – नन्वत्र प्रसिद्ध्यादिसद्भावेऽपि तत्परित्यागेनान्यस्वीकारे किं बाधकम्? इत्यत आह – न चेति ।। प्रसिद्धार्थस्य विरोधैकापोह्यत्वात् तदभावे तत्परित्यागो न युक्तः प्रसिद्धिबाधादित्यर्थः ।**

ಈ ಶ್ರುತಿಯಲ್ಲಿ ನಾರಾಯಣನಲ್ಲಿ ಪ್ರಸಿದ್ಧಿ ಇದ್ದರೂ ಅದನ್ನು ಬಿಟ್ಟು ಬೇರೆ ಅರ್ಥವನ್ನು ಸ್ವೀಕರಿಸಿದರೆ ಏನು ತೊಂದರೆ?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು 'ನ ಚಾವಿರೋಧೇ' ಎಂಬ ವಾಕ್ಯದಲ್ಲಿ ಉತ್ತರಿಸಿದ್ದಾರೆ. ವಿರೋಧ ಬಂದರೆ ಮಾತ್ರ ಪ್ರಸಿದ್ಧಾರ್ಥವನ್ನು ಬಿಡಬೇಕು. ಇಲ್ಲದಿದ್ದರೆ ಪ್ರಸಿದ್ಧಿಗೆ ಬಾಧ ಬರುತ್ತದೆ.

**तत्वप्रकाशिका – अत्रोग्रपदेन रुद्रग्रहणे 'विश्वाधिको रुद्रः' इत्यादिश्रुतिविरोधात् तत्परित्यागः? इत्यत आह – उक्तेति ।। 'नामानि विश्वा' इत्याद्युक्तन्यायेन वक्ष्यमाणन्यायैश्च विश्वाधिकादिश्रुतीनां विष्णुपरतया न बाधकत्वमिति भावः ।**

ಇಲ್ಲಿ 'ಉಗ್ರ'ಪದದಿಂದ ರುದ್ರನೆಂಬರ್ಥವನ್ನು ಸ್ವೀಕರಿಸಿದಾಗ 'ವಿಶ್ವಾಧಿಕೋ ರುದ್ರಃ' ಎಂಬ ಶ್ವೇತಾಶ್ವತರಶ್ರುತಿಯ ವಿರೋಧ ಬರುತ್ತದೆ. ಆದ್ದರಿಂದ ಪ್ರಸಿದ್ಧಾರ್ಥವನ್ನು ಪರಿತ್ಯಾಗ ಮಾಡಬೇಕಲ್ಲವೇ?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು 'ಉಕ್ತನ್ಯಾಯೇನ' ಎಂಬುದರಿಂದ ಉತ್ತರಿಸಿದ್ದಾರೆ. 'ನಾಮಾನಿ ವಿಶ್ವಾ' ಎಂಬಲ್ಲಿ ಹೇಳಿದ ನ್ಯಾಯದಿಂದ ಮತ್ತು ಮುಂದೆ ಹೇಳುವ ನ್ಯಾಯಗಳಿಂದಲೂ 'ವಿಶ್ವಾಧಿಕೋ ರುದ್ರಃ' ಎಂಬ ಶ್ರುತಿಗಳಿಗೆ ವಿಷ್ಣುಪರವಾಗಿ ಅರ್ಥಮಾಡಿದರೆ ಯಾವುದೇ ಬಾಧಕವಿರುವುದಿಲ್ಲವೆಂದು ಅಭಿಪ್ರಾಯ.

**तत्वप्रकाशिका – श्रुतीनां विष्णुवाचकत्वे स्मृतिं चाह – वेद इति ।। एतद्वचनस्य हरिवंशत्रयगतत्वसूचनाय बहुवचनम् ।**

ಈ ಶ್ರುತಿಯು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂಬ ವಿಷಯದಲ್ಲಿ ಸ್ಮೃತಿಯನ್ನು ಹೇಳುತ್ತಿದ್ದಾರೆ. 'ವೇದೇ' ಇತ್ಯಾದಿ ಮಾತಿನಿಂದ. ಶ್ಲೋಕದಲ್ಲಿ ಕೊನೆಯಲ್ಲಿ ಆಚಾರ್ಯರು 'ಹರಿವಂಶೇಷು' ಎಂದು ಹರಿವಂಶದ ಮೂರೂ ಭಾಗಗಳಲ್ಲಿ 'ವೇದೇ ರಾಮಾಯಣೇ' ಎಂಬ ಶ್ಲೋಕವು ಪ್ರಸಕ್ತವಾಗಿದೆ ಎಂದು ಸೂಚಿಸಲು ಬಹುವಚನವನ್ನು ಪ್ರಯೋಗಿಸಿದ್ದಾರೆ.

## ಸೂತ್ರದಲ್ಲಿರುವ ಬ್ರಹ್ಮಪದವ್ಯಾಖ್ಯಾನ

**भावदीपः – एवं सङ्क्षेपविस्ताराभ्यां सौत्राथातःपदार्थोक्तिपरं भाष्यं व्याख्याय, ब्रह्मपदार्थोक्तिपरं भाष्यं विवृण्वानः, ब्रह्मपदस्य नारायणपदेन व्याख्यातत्वात् 'ब्रह्मशब्दश्च विष्णावेव' इत्यादिभाष्यं किमर्थम्? इत्यत आह – नन्वित्यादिना ।। बह्वर्थत्वेनेति ।। 'बृह जातिजीवकमलासन-शब्दराशिषु' इत्यादेरिति भावः । मुख्य इति शेष इति ।। तेन 'बृह जातीत्यादेः ब्रह्माणि जीवाः सर्वेऽपि' इत्यादेः 'मम योनिर्महद् ब्रह्म' इत्यादेः, 'स एनान् ब्रह्म गमयति' इत्यादेः, 'कार्यं बादरिरस्य गत्युपपत्तेः'(ब्र.सू.४/३/७) इत्यादेश्चाविरोध इति भावः ।**

ಸೂತ್ರದಲ್ಲಿರುವ ಅಥ ಮತ್ತು ಅತಃಶಬ್ದಗಳನ್ನು ವ್ಯಾಖ್ಯಾನಿಸುವ ಭಾಷ್ಯವನ್ನು ಇಲ್ಲಿಯವರೆಗೆ ಸಂಕ್ಷೇಪವಾಗಿ ಮತ್ತು ವಿವರವಾಗಿ ವ್ಯಾಖ್ಯಾನಿಸಿದ್ದಾಯಿತು. ಪ್ರಕೃತ ಬ್ರಹ್ಮಪದದ ಅರ್ಥವನ್ನು ವಿವರಿಸುವ ಭಾಷ್ಯವನ್ನು ವ್ಯಾಖ್ಯಾನಿಸಲು ಹೊರಟಿದ್ದಾರೆ. ಬ್ರಹ್ಮಪದವನ್ನು ನಾರಾಯಣಪದದಿಂದಲೇ ವ್ಯಾಖ್ಯಾನಿಸಿದ್ದಾಯಿತು. ಪುನಃ 'ಬ್ರಹ್ಮಪದಶ್ಚ ವಿಷ್ಣಾವೇವ' ಎಂಬ ಭಾಷ್ಯವು ಬೇಕಾಗಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಲು 'ನನು ಇತ್ಯಾದಿ' ಟೀಕಾಗ್ರಂಥವು ಹೊರಟಿರುತ್ತದೆ. ಬಹ್ವರ್ಥತ್ವೇನ = 'ಬೃಹ ಜಾತಿಜೀವ-ಕಮಲಾಸನಶಬ್ದರಾಶಿಷು' ಎಂಬ ನಿಘಂಟಿನಂತೆ ಅನೇಕಾರ್ಥವಿರುವುದರಿಂದ. 'ಮುಖ್ಯ ಇತಿ ಶೇಷಃ' = ಮೂಲದಲ್ಲಿ 'ಮುಖ್ಯಃ' ಎಂಬ ಪದವನ್ನು ಅಧ್ಯಾಹಾರ ಮಾಡಬೇಕು. ಇದರಿಂದ 'ಬೃಹ ಜಾತಿ' 'ಬ್ರಹ್ಮಾಣಿ ಜೀವಾಃ ಸರ್ವೇಽಪಿ' 'ಮಮ ಯೋನಿರ್ಮಹದ್ ಬ್ರಹ್ಮ' 'ಸ

ಏನಾನ್ ಬ್ರಹ್ಮ ಗಮಯತಿ' 'ಕಾರ್ಯಂ ಬಾದರಿರಸ್ಯ ಗತ್ಯುಪಪತ್ತೇಃ' ಇತ್ಯಾದಿ ಸ್ಥಳಗಳಲ್ಲಿ ಚತುರ್ಮುಖ, ಜೀವಾದಿಗಳು ಪ್ರತಿಪಾದ್ಯವಾಗಿದ್ದರೂ ದೋಷವಿಲ್ಲ.

ವಿವರಣೆ - ಪ್ರಶ್ನೆ - ನಾರಾಯಣಪ್ರಸಾದವಿಲ್ಲದೇ ಮೋಕ್ಷವಿಲ್ಲ ಎಂಬುದಾಗಿ ಶ್ರುತಿ ಹೇಳುತ್ತಿದೆ. ಆದ್ದರಿಂದ ನಾರಾಯಣ ಜಿಜ್ಞಾಸೆಯನ್ನು ಮಾಡಬೇಕು, ಬ್ರಹ್ಮಜಿಜ್ಞಾಸೆಯನ್ನಲ್ಲ. ಹೀಗಿರುವಾಗ ಸೂತ್ರದಲ್ಲಿ ಬ್ರಹ್ಮಜಿಜ್ಞಾಸಾ ಕರ್ತವ್ಯಾ ಎಂದೇಕೆ ಹೇಳಿದರು ? ನಾರಾಯಣಜಿಜ್ಞಾಸಾ ಕರ್ತವ್ಯಾ ಎಂದು ಹೇಳಬೇಕಿತ್ತಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ಬ್ರಹ್ಮಶಬ್ದಕ್ಕೆ ಅನೇಕ ಅರ್ಥಗಳಿವೆ. ಅವುಗಳಲ್ಲಿ ನಾರಾಯಣ ಎಂಬ ಅರ್ಥವೇ ಮುಖ್ಯವಾಗಿದೆ. ಉಳಿದ ಅರ್ಥಗಳು ಅಮುಖ್ಯವಾಗಿವೆ. ಮುಖ್ಯಾರ್ಥ ಹಾಗೂ ಅಮುಖ್ಯಾರ್ಥಗಳ ನಡುವೆ ಮುಖ್ಯಾರ್ಥವನ್ನೇ ಸ್ವೀಕರಿಸಬೇಕೆಂಬ ನಿಯಮದಂತೆ ಸೂತ್ರಕಾರರಿಗೆ ನಾರಾಯಣನನ ಜಿಜ್ಞಾಸೆ ಮಾಡಬೇಕೆಂಬ ಅರ್ಥವೇ ಅಭಿಪ್ರೇತವಾಗಿದೆ ಎಂದು ಸ್ಪಷ್ಟವಾಗುತ್ತದೆ.

## ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕು

**ಭಾವದೀಪಃ – तत्र मुख्यत्वाभावादिति ।। विष्णुपदोक्तिसूचितं ज्ञापकमाह – स विष्णुरिति ।।**

ಏಕೆಂದರೆ ಇವುಗಳೆಲ್ಲ ಅಮುಖ್ಯವಾಗಿ ಪ್ರತಿಪಾದ್ಯಗಳಾಗಿವೆ ಎಂದು ತಿಳಿಯಬೇಕು. ಇದನ್ನು 'तत्र मुख्यत्वाभावात्' ಎಂದು ಟೀಕೆಯಲ್ಲಿಯೇ ಹೇಳಿದ್ದಾರೆ.

ವಿಷ್ಣುಪದದಿಂದ ಸೂಚಿತವಾದ ಪ್ರಮಾಣವನ್ನು 'स विष्णुराह हि' ಎಂದು ಟೀಕೆಯಲ್ಲಿ ತೋರಿಸಿದ್ದಾರೆ.

## ದೈವೀಮೀಮಾಂಸೆಯ ಅನಂತರ ಬ್ರಹ್ಮಮೀಮಾಂಸೆ

**ಭಾವದೀಪಃ – ननु द्वितीयसूत्रे 'तम्' इत्युद्देश्यो विष्णुरिति कुतः? येन तस्यैव ब्रह्मत्वं स्यात् इत्यत उक्तम् – निरन्तरेति ।।** अन्योन्याव्यवहिता इत्यर्थः । सूत्रद्वयमध्ये अन्यद् व्यवधायकं सूत्रं नेति, विष्णुरेव तमिति

परामृश्यते इति भावः । ब्रह्मत्वेन = ब्रह्मपदमुख्यार्थत्वेन । 'प्रस्तुतिं प्रकृतत्वम्' इत्युक्त्या देवमीमांसानन्तर्यमस्योक्तं भवति । 'निरन्तर' इत्यस्य जिज्ञासासूत्राव्यवहितेत्यर्थ इत्यप्याहुः ।

ದೈವೀಮೀಮಾಂಸೆಯ 'तं ब्रह्म इत्याचक्षते' ಎಂಬ ಎರಡನೆಯ ಸೂತ್ರದಲ್ಲಿ ತಂ ಎಂಬ ಉದ್ದೇಶವು ವಿಷ್ಣುವೇ ಏಕಾಗಬೇಕು? ಹಾಗಿದ್ದಲ್ಲಿ ವಿಷ್ಣುವೇ ಬ್ರಹ್ಮನೆಂದು ತೀರ್ಮಾನಿಸಬಹುದಿತ್ತಲ್ಲವೆ? ಎಂಬ ಪ್ರಶ್ನೆಗೆ 'ನಿರಂತರ' ಎಂಬ ಟೀಕೆಯಿಂದ ಉತ್ತರಿಸುತ್ತಿದ್ದಾರೆ. ನಿರಂತರ = ಪರಸ್ಪರವಾಗಿ ವ್ಯವಹಿತವಲ್ಲದ. ಎರಡು ಸೂತ್ರಗಳ ಮಧ್ಯದಲ್ಲಿ ವ್ಯವಹಿತವಾದ ಮತ್ತೊಂದು ಸೂತ್ರವಿಲ್ಲದ ಕಾರಣ ವಿಷ್ಣುವೇ 'ತಂ' ಎಂದು ಪರಾಮರ್ಶಿತನಾಗಿದ್ದಾನೆ ಎಂದಭಿಪ್ರಾಯ. ಬ್ರಹ್ಮತ್ವೇನ = ಬ್ರಹ್ಮಪದದ ಮುಖ್ಯಾರ್ಥವಾಗಿ. 'ಪ್ರಸ್ತುತಿ'ಶಬ್ದದಿಂದ ಪ್ರಕೃತವಾಗಿದೆಯೆಂದು ಹೇಳಿದ್ದರಿಂದ ದೈವೀಮೀಮಾಂಸದ ಆನಂತರ ಈ ಶಾಸ್ತ್ರ ಹೊರಟಿದೆಯೆಂದು ಹೇಳಿದಂತಾಯಿತು. ಕೆಲವರು 'ನಿರಂತರ' ಎಂಬ ಶಬ್ದಕ್ಕೆ ಜಿಜ್ಞಾಸಾಸೂತ್ರದಿಂದ ವ್ಯವಹಿತವಲ್ಲದ ಎಂಬರ್ಥವನ್ನು ಹೇಳುತ್ತಾರೆ.

## ವಿಷ್ಣುವೆ ಬ್ರಹ್ಮನೆನ್ನಲು ದೈವೀಮೀಮಾಂಸೆಯ ಕೊನೆಯ ಸೂತ್ರ

**भावदीपः – उक्तं चानुभाष्ये –**

स्वयं भगवता विष्णुर्ब्रह्मेत्येतत् पुरोदितम् ।
स विष्णुराह हीत्यन्ते देवशास्त्रस्य तेन हि ।।

**इति । श्रत्युक्तेरुपयोगाप्रतीतेराह – ब्रह्मेति ।।**

ಈ ವಿಷಯದಲ್ಲಿ ಅನುವ್ಯಾಖ್ಯಾನದ ಸಮ್ಮತಿ ಇದೆ.

ಸ್ವಯಂ ಭಗವತಾ ವಿಷ್ಣುರ್ಬ್ರಹ್ಮೇತ್ಯೇತತ್ಪುರೋದಿತಮ್ ।
ಸ ವಿಷ್ಣುರಾಹ ಹೀತ್ಯಂತೇ ದೇವಶಾಸ್ತ್ರಸ್ಯ ತೇನ ಹಿ ।।

ಸ್ವತಃ ಸೂತ್ರಕಾರರೇ ದೈವೀಮೀಮಾಂಸದ ಕೊನೆಯಲ್ಲಿ 'ಸ ವಿಷ್ಣುರಾಹ ಹಿ' ಎಂದು ಹೇಳಿದ್ದರಿಂದ ವಿಷ್ಣುವು ಬ್ರಹ್ಮನೇ ಆಗಿದ್ದಾನೆಂದು ತಿಳಿಸಿದ್ದಾರೆ.

ಶ್ರುತಿಯ ಉಲ್ಲೇಖಕ್ಕೆ ಕಾರಣವನ್ನು 'ಬ್ರಹ್ಮ' ಎಂಬ ಟೀಕೆಯಿಂದ ತೋರಿಸುತ್ತಿದ್ದಾರೆ.

## ಮಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ಬ್ರಹ್ಮನಲ್ಲಿ ಸಮನ್ವಯ

**ಭಾವದೀಪಃ – विद्वद्रूढ्येति ।। रूढियोगो योगरूढिः रूढोपचारो रूढलक्षणा उपचारो लक्षणेति लोकसिद्धसप्तवृत्तिभ्योऽन्यस्य महायोगविद्वद्रूढिरूपवृत्तिद्वयस्य ब्रह्मणि शब्दानां 'समाकर्षात्'(ब्र.सू.१/४/१६) इत्यत्र वक्ष्यमाणत्वात् 'विद्वद्रूढ्या' इति सिद्धवदुपन्यासः ।**

'ವಿದ್ವದ್ರೂಢ್ಯಾ ಬ್ರಹ್ಮಶಬ್ದಃ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಪ್ರಾಸಂಗಿಕವಾಗಿ ಇದನ್ನು ತಿಳಿಯಬೇಕು. ೧. ರೂಢಿ, ೨. ಯೋಗ, ೩. ಯೋಗರೂಢಿ, ೪. ರೂಢೋಪಚಾರ, ೫. ರೂಢಲಕ್ಷಣಾ, ೬. ಉಪಚಾರ, ೭. ಲಕ್ಷಣಾ ಹೀಗೆ ಲೋಕದಲ್ಲಿ ಏಳು ಶಬ್ದವೃತ್ತಿಗಳು ಪ್ರಸಿದ್ಧವಾಗಿವೆ. ಆದರೆ ಈ ಏಳೂ ವೃತ್ತಿಗಳನ್ನು ಮೀರಿ ಮಹಾಯೋಗ, ಹಾಗೂ ವಿದ್ವದ್ರೂಢಿ ಎಂಬ ಎರಡು ವೃತ್ತಿಗಳನ್ನು ಬ್ರಹ್ಮನಲ್ಲಿ ಹೇಳಬೇಕು. ಇದನ್ನು ಶ್ರೀಮದಾಚಾರ್ಯರು 'ಸಮಾಕರ್ಷಾತ್' ಎಂಬ ಸೂತ್ರದ ಭಾಷ್ಯದಲ್ಲಿ ಸಮರ್ಥಿಸಿದ್ದಾರೆ. ಆ ವಿಚಾರವನ್ನು ಸಿದ್ಧವತ್‌ಕೃತ್ಯ ಟೀಕೆಯಲ್ಲಿ 'ವಿದ್ವದ್ರೂಢ್ಯಾ' ಎಂದು ಹೇಳಿದ್ದಾರೆ.

ಒಟ್ಟು ಇಷ್ಟು ಅಭಿಪ್ರಾಯ - ದೈವೀಮಿಮಾಂಸಾ ಶಾಸ್ತ್ರದ ಕೊನೆಯಲ್ಲಿ ಎರಡು ಸೂತ್ರಗಳಿವೆ. ೧. ಸವಿಷ್ಣುರಾಹ ಹಿ ೨. ತಂ ಬ್ರಹ್ಮೇತಿ ಆಚಕ್ಷತೇ ಎಂದು. ಈ ಎರಡು ಸೂತ್ರಗಳು ಒಟ್ಟಿಗೆ ಇವೆ. ಯಾರು ವಿಷ್ಣುವೋ, ಅವನೇ ಬ್ರಹ್ಮನಾಗಿದ್ದಾನೆಂದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಪ್ರಕೃತ ಭಾಷ್ಯಕಾರರು ಬ್ರಹ್ಮಶಬ್ದಶ್ಚ ವಿಷ್ಣಾವೇವ ಎಂಬುದಾಗಿ ವಿಷ್ಣುಶಬ್ದವನ್ನು ಪ್ರಯೋಗಿಸುವ ಮೂಲಕ ಬ್ರಹ್ಮಶಬ್ದದಿಂದ ನಾರಾಯಣನೇ ಪ್ರಕೃತನಾಗಿದ್ದಾನೆಂದು ತಿಳಿಸಿರುತ್ತಾರೆ. 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬುದಾಗಿ ಉತ್ತರಮೀಮಾಂಸೆಯ ಪ್ರಾರಂಭದ ಸೂತ್ರವಿದು. ಹಿಂದೆ ದೈವೀಮೀಮಾಂಸಾದಲ್ಲಿ ವಿಷ್ಣು ಪ್ರಕೃತನಾಗಿದ್ದಾನೆ. ಅವನೇ ಇಲ್ಲಿ ಬ್ರಹ್ಮ ಎಂಬ ಶಬ್ದದಿಂದ ಪ್ರಕೃತನಾಗಬೇಕು. ಇದನ್ನು ತಿಳಿಸುವುದಕ್ಕಾಗಿಯೇ ನಾರಾಯಣಪ್ರಸಾದವಿಲ್ಲದೇ ಮೋಕ್ಷವಿಲ್ಲವೆಂದು ಭಾಷ್ಯಕಾರರು ಹಿಂದೆ ಭಾಷ್ಯಕಾರರು ಹೇಳಿರುತ್ತಾರೆ. ಮತ್ತು ಬ್ರಹ್ಮಶಬ್ದವು ನಾರಾಯಣನಲ್ಲಿ ಮುಖ್ಯವೆಂದು ಹೇಳುವ ಬದಲು ವಿಷ್ಣುವಿನಲ್ಲಿ ಮುಖ್ಯ ಎಂದು

ವಿಷ್ಣುಶಬ್ದವನ್ನು ಉಲ್ಲೇಖಿಸಿರುತ್ತಾರೆ. ಇದರಿಂದ ದೈವೀಮೀಮಾಂಸಾದಲ್ಲಿ ಪ್ರಸಕ್ತವಾದ ವಿಷ್ಣುವೇ ಇಲ್ಲಿ ಬ್ರಹ್ಮಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬುದು ಭಾಷ್ಯಕಾರರಿಗೆ ಅಭಿಪ್ರೇತವಾದ ಅರ್ಥ.

## ವಿದ್ವದ್ಧೂಢಿಯಿಂದ ಬ್ರಹ್ಮಶಬ್ದದ ಸಮನ್ವಯ

**ಭಾವದೀಪಃ – ಭಾಷ್ಯೇ ಹಿರ್ಹೇತೌ । ಬ್ರಹ್ಮಶಬ್ದಶ್ಚ ವಿಷ್ಣಾವೇವ ಇತ್ಯನ್ವಯಃ । ತತ್ರಚ 'ವಿದ್ವದ್ರೂಢ್ಯಾ' ಇತಿ ಶೇಷಃ । ಶ್ರುತೌ ಪರಮಪದೋಕ್ತಮುಖ್ಯತ್ವಸ್ಯ ರೂಢಿಂ ವಿನಾऽನುಪಪತ್ತೇರಿತಿ ಭಾವಃ । ಆಹುರಿತಿ ಪ್ರಯೋಗಬಾಹುಲ್ಯರೂಪರೂಢೇರಪ್ಯುಪಲಕ್ಷಣಮೇತತ್ ಇತಿ ಧ್ಯೇಯಮ್ । 'ಪ್ರಯೋಗಮಾತ್ರಬಾಹುಲ್ಯಂ ರೂಢಿರಿತ್ಯಭಿಧೀಯತೇ' ಇತ್ಯನುಭಾಷ್ಯೋಕ್ತೇಃ ।**

'ಇತಿಃ ಶ್ರುತಿಃ' ಎಂಬ ಭಾಷ್ಯದಲ್ಲಿರುವ ಹಿ ಶಬ್ದವು ಹೇತ್ವರ್ಥದಲ್ಲಿದೆ. 'ಬ್ರಹ್ಮಶಬ್ದಶ್ಚ ವಿಷ್ಣಾವೇವ' ಎಂಬಲ್ಲಿ ಇದಕ್ಕೆ ಅನ್ವಯ. ಅಲ್ಲಿಯೂ ವಿದ್ವದ್ಧೂಢ್ಯಾ ಎಂಬುದನ್ನು ಅಧ್ಯಾಹಾರ ಮಾಡಬೇಕು. ವಿದ್ವದ್ಧೂಢಿಯಿಂದ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ ಎಂದು ಭಾವ. 'ತದೇವ ಬ್ರಹ್ಮ ಪರಮಂ ಕವೀನಾಂ' ಎಂಬ ಶ್ರುತಿಯಲ್ಲಿ ಪರಮಪದದಿಂದ ಮುಖ್ಯವೃತ್ತಿಯನ್ನು ಭಗವಂತನಲ್ಲಿ ಹೇಳಿದ್ದಾರೆ. ರೂಢಿಯನ್ನು ಒಪ್ಪದೇ ಇದನ್ನು ಉಪಪಾದಿಸಲಾಗದು. ಶ್ರುತಿಯಲ್ಲಿರುವ 'ಆಹುಃ' ಎಂಬ ಪದದಿಂದ ಪ್ರಯೋಗಬಾಹುಲ್ಯರೂಪವಾದ ರೂಢಿಯನ್ನೂ ಸಹ ಉಪಲಕ್ಷಣಯಾ ಸ್ವೀಕರಿಸಬೇಕು. 'ಪ್ರಯೋಗಮಾತ್ರಬಾಹುಲ್ಯಂ ರೂಢಿರಿತ್ಯಭಿಧೀಯತೇ' ಎಂಬ ಅನುವ್ಯಾಖ್ಯಾನವೇ ಈ ವಿಷಯದಲ್ಲಿ ಆಧಾರವಾಗಿದೆ.

ವಿವರಣೆ - ವಾಸ್ತವಿಕವಾಗಿ ಬ್ರಹ್ಮಶಬ್ದವು ಬೇರೆ ಬೇರೆ ಅರ್ಥಗಳಲ್ಲಿ ರೂಢವಾಗಿದೆ. ಆದರೂ ಕೂಡ ವಿಷ್ಣುವಿನಲ್ಲಿ ಮಾತ್ರ ಮುಖ್ಯವೃತ್ತಿಯಿಂದ ಇರುತ್ತದೆ. ಜ್ಞಾನಿಗಳು ಬ್ರಹ್ಮಶಬ್ದವನ್ನು ವಿಷ್ಣುವಿನಲ್ಲಿ ಪ್ರಯೋಗಿಸುತ್ತಾರೆ. ಅಜ್ಞಾನಿಗಳು ಇತರರಲ್ಲಿ ಪ್ರಯೋಗಿಸುತ್ತಾರೆ. ಅನೇಕ ಮಂದಿ ಅಜ್ಞಾನಿಗಳ ಶಬ್ದಪ್ರಯೋಗವನ್ನು ಆಧಾರವಾಗಿಟ್ಟುಕೊಂಡು ಯಾವುದು ಮುಖ್ಯಾರ್ಥವೆಂದು ನಿರ್ಣಯ ಮಾಡಬಾರದು, ಹೊರತಾಗಿ ವಿದ್ವಾಂಸರು ಕೆಲವೇ ಮಂದಿಯಾಗಿದ್ದರೂ ಅವರು ಯಾವ ಅರ್ಥದಲ್ಲಿ ಶಬ್ದವನ್ನು ಪ್ರಯೋಗಿಸುತ್ತಾರೆಂಬುದರಿಂದ ಶಬ್ದದ ಮುಖ್ಯಾರ್ಥವನ್ನು ನಿರ್ಣಯ

ಮಾಡಬೇಕು. ಪ್ರಕೃತ ಬ್ರಹ್ಮ ಎಂಬ ಶಬ್ದವನ್ನು ಜ್ಞಾನಿಗಳು ವಿಷ್ಣುವಿನಲ್ಲಿ ಪ್ರಯೋಗಿಸುತ್ತಾರೆ. ಆದ್ದರಿಂದ 'ತದೇವ ಬ್ರಹ್ಮ ಪರಮಂಕವೀನಾಂ' ಎಂಬ ಶ್ರುತಿ ಹೇಳುವಂತೆ ಜ್ಞಾನಿಗಳ ಅಭಿಪ್ರಾಯದಲ್ಲಿ ಯಾವುದೋ ಅದೇ ಬ್ರಹ್ಮ ಎಂದು ವಿವಕ್ಷಿಸಬೇಕು. ಅದು ಎಂದರೆ ವಿಷ್ಣುವೇ ಆಗುತ್ತಾನೆ. ಸಮುದ್ರಶಾಯಿಯಾದ ಯಾರನ್ನು ಜ್ಞಾನಿಗಳು ತಿಳಿಯುತ್ತಾರೋ, ಅವನೇ ವಿಷ್ಣು ಎಂದು 'ಯಮಂತಃಸಮುದ್ರೇ' ಎಂಬ ಶ್ರುತಿ ಹೇಳುತ್ತಿದೆ. ಸಮುದ್ರಶಾಯಿತ್ವವು ಎಂಬುದು ವಿಷ್ಣುವಿನ ಅಸಾಧಾರಣಧರ್ಮವಾಗಿರುವುದರಿಂದ 'ತದೇವ' ಎಂಬಲ್ಲಿ 'ತತ್' ಎಂಬ ಪದದಿಂದ ವಿಷ್ಣುವನ್ನೇ ವಿವಕ್ಷಿಸಬೇಕು.

**ಭಾವದೀಪಃ – ಮುಖ್ಯತ್ವಾದಿತಿ ।।** 'ಅಸಮ್ಭಾವಿತಾಜ್ಞಾನಮೂಲತ್ವಾತ್' ಇತಿ ಭಾವಃ । 'ಯಮ್' ಇತ್ಯಾದ್ಯಂಶಸ್ಯ ಕೃತ್ಯಮಾಹ – **ತಚ್ಛಬ್ದೇನೇತಿ ।।** 'ಕವಯಃ' ಇತ್ಯಸ್ಯಾರ್ಥೌ 'ಜ್ಞಾನಿನಃ' ಇತಿ । 'ಅವಯನ್ತಿ' ಇತ್ಯಸ್ಯ 'ಜಾನನ್ತಿ' ಇತಿ । **ಯತ್ = ಯಸ್ಮಿನ್ । ಅಕ್ಷರೇ** = ಅವಿನಾಶಿನಿ । **ಪರಮೇ** = ಪ್ರಜಾಃ ಅಧೀನಾಃ । **ಜಗತಃ ಪ್ರಸೂತೀ** = ಪ್ರಸೂತಿರ್ಜನಿತ್ರೀ ಲಕ್ಷ್ಮೀಃ । ಯತೋ ಯಸ್ಮಾತ್ ಪ್ರಸೂತಾ ಉತ್ಪನ್ನಾ । ಯಚ್ಚ ವಸ್ತುತೋ ಯೇನ ತತ್ ತತ್ಕರ್ಮಣಾ ಸ್ವವೀರ್ಯೇಣ ವಾ । ತೋಯೋಪಲಕ್ಷಿತೈರ್ಭೂತೈರ್ವಾ । ಭೂಮ್ಯಾಂ ಪೃಥಿವ್ಯಾಂ ಪೃಥಿವ್ಯಾದಿಲೋಕೇಷು । ಜೀವಾನ್ ವ್ಯಸಸರ್ಜ ವಿಸಸರ್ಜ ವಿವಿಧಂ ಸಸರ್ಜೇತಿ ತತ್ವನಿರ್ಣಯಟೀಕೋಕ್ತದಿಶಾ ಭಾಷ್ಯಶೇಷಸ್ಯಾರ್ಥೌ ಜ್ಞೇಯಃ ।

ಟೀಕೆಯಲ್ಲಿ 'ರೂಢೇರೇವ ಮುಖ್ಯತ್ವಾತ್' ಎಂದು ಹೇಳಿದ್ದಾರೆ. ಅಸಂಭಾವಿತವಾದ ಅಜ್ಞಾನಮೂಲಕವಾಗಿದೆ ಎಂದು ಇದರ ಅಭಿಪ್ರಾಯ. 'ಯಮಂತಃಸಮುದ್ರೇ' ಎಂಬ ಶ್ರುತಿಯಲ್ಲಿರುವ 'ಯಂ' ಇತ್ಯಾದಿ ಪದಗಳ ಕೃತ್ಯವನ್ನು 'ತಚ್ಛಬ್ದೇನ' ಇತ್ಯಾದಿ ಟೀಕೆಯಿಂದ ವಿವರಿಸುತ್ತಿದ್ದಾರೆ. 'ಕವಯಃ' ಎಂಬ ಪದದ ಅರ್ಥವನ್ನು 'ಜ್ಞಾನಿನಃ' ಎಂಬ ಪದದಿಂದ ಹೇಳಿದ್ದಾರೆ. 'ಅವಯಂತಿ' ಎಂಬ ಪದದ ಅರ್ಥವನ್ನು 'ಜಾನಂತಿ' ಎಂಬ ಪದದಿಂದ ಹೇಳಿದ್ದಾರೆ. 'ಯಮಂತಃಸಮುದ್ರೇ' ಎಂಬ ಭಾಷ್ಯದ ಅರ್ಥವನ್ನು ತತ್ವನಿರ್ಣಯ ಟೀಕೆಯಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ತಿಳಿಯಬೇಕು.

'ಯತ್ ಯಸ್ಮಿನ್ । ಅಕ್ಷರೇ ಅವಿನಾಶಿನಿ । ಪರಮೇ ಪ್ರಜಾಃ ಅಧೀನಾಃ । ಜಗತಃ ಪ್ರಸೂತೀ ಪ್ರಸೂತಿರ್ಜನಿತ್ರೀ ಲಕ್ಷ್ಮೀಃ । ಯತೋ ಯಸ್ಮಾತ್ ಪ್ರಸೂತಾ ಉತ್ಪನ್ನಾ । ಯಚ್ಚ ವಸ್ತುತೋ ಯೇನ ತತ್ ತತ್ಕರ್ಮಣಾ ಸ್ವವೀರ್ಯೇಣ ವಾ ।

ತೋಯೋಪಲಕ್ಷಿತೈರ್ಭೂತೈರ್ವಾ । ಭೂಮ್ಯಾಂ ಪೃಥಿವ್ಯಾಂ ಪೃಥಿವ್ಯಾದಿಲೋಕೇಷು । ಜೀವಾನ್ ವ್ಯಸಸರ್ಜ । ವಿಸಸರ್ಜ ವಿವಿಧಂ ಸಸರ್ಜ' ।

ಜಗಜ್ಜನನಿಯಾದ ಮೂಲಪ್ರಕೃತಿಯ ಅಭಿಮಾನಿದೇವತೆಯಾದ ಮಹಾಲಕ್ಷ್ಮಿಯನ್ನು ಯಾವಾತನು ಸೃಷ್ಟಿಕಾರ್ಯದಲ್ಲಿ ತೊಡಗಿಸುತ್ತಾನೋ. ಯಾರು ಆಯಾ ಕರ್ಮಗಳೊಂದಿಗೆ ತನ್ನ ವೀರ್ಯದಿಂದ ಪಂಚಭೂತಾದಿಗಳಿಂದ ಪೃಥಿವ್ಯಾದಿ ಲೋಕಗಳಲ್ಲಿ ಜೀವರನ್ನು ಸೃಷ್ಟಿಮಾಡುತ್ತಿರುವನೋ ಅವನೇ ಮಹಾವಿಷ್ಣು.

## ಮಹಾನಾರಾಯಣೋಪನಿಷತ್ತಿನ ಆಧಾರದಿಂದ ಬ್ರಹ್ಮಶಬ್ದಾರ್ಥ ನಿರ್ಣಯ

**ಭಾವದೀಪಃ – ಇತಿ ವಿಷ್ಣುಲಿಙ್ಗಾದೇವೇತಿ ।।** ಸಮುದ್ರಾನ್ತಃಸ್ಥರೂಪಲಿಙ್ಗಾದಿತ್ಯರ್ಥಃ। ಲಿಙ್ಗಸಾಧಾರಣೋ ಧರ್ಮ ಇತಿ ವಕ್ಷ್ಯತೇ । 'ಶಬ್ದಾದೇವ ಪ್ರಮಿತಃ' (ಬ್ರ.ಸೂ. ೧/೩/೨೪) ಇತ್ಯತ್ರ ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಶ್ರುತ್ಯರ್ಥನಿರ್ಣಾಯಕತ್ವಂ ಚ ಸಮನ್ವಯಸೂತ್ರೇ ವಕ್ಷ್ಯತ ಇತಿ ಭಾವಃ । **ನಿರವಕಾಶಶ್ರುತೇರೇವೇತಿ ।।** ಅರ್ಥಾನ್ತರರಾಹಿತ್ಯ-ರೂಪನಿರವಕಾಶವಿಷ್ಣುಶಬ್ದರೂಪಶ್ರುತೇರೇವೇತ್ಯರ್ಥಃ । ವಕ್ಷ್ಯತಿ ನಾಮಮಾತ್ರೇಣ ನಿರ್ದೇಶಃ ಶ್ರುತಿರಿತಿ । ''ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್' ಇತಿ ಶ್ರುತೌ ಚತುರ್ಥ್ಯಾಃ ವಿಪರಿಣಾಮೇನಾರ್ಥಮಾಹ – **ತಮಿತಿ ।।** ತದಿತಿ ಶ್ರವಣಾದ್ಯತ ಇತಿ ಶೇಷೋಕ್ತಿಃ । ಶುಭಂ ಪ್ರತೀತಿ ಚ । ತನ್ನ ಇತ್ಯಸ್ಯಾರ್ಥಃ ತಸ್ಮಾದಸ್ಮಾನ್ ಇತಿ ।

ಇತಿ ವಿಷ್ಣುಲಿಂಗಾದೇವ - ಸಮುದ್ರಾಂತಸ್ಥರೂಪಲಿಂಗದಿಂದಲೇ. ಲಿಂಗಶಬ್ದಕ್ಕೆ ಅಸಾಧಾರಣಧರ್ಮ ಎಂಬರ್ಥವನ್ನು ಮುಂದೆ 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಹೇಳುತ್ತಾರೆ. ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯೆಗಳು ಶ್ರುತ್ಯರ್ಥನಿರ್ಣಾಯಕ ವಾಗಿವೆಯೆಂದು 'ತತ್ತು ಸಮನ್ವಯಾತ್' ಎಂಬ ಸೂತ್ರದಲ್ಲಿ ಪ್ರತಿಪಾದಿಸುತ್ತಾರೆ. 'ನಿರವಕಾಶಶ್ರುತೇರೇವ' - 'ಬೇರೆ ಅರ್ಥವನ್ನು ಪ್ರತಿಪಾದಿಸದ ಕಾರಣ ನಿರವಕಾಶ ಎನಿಸಿದ ವಿಷ್ಣು ಎಂಬ ಶ್ರುತಿಯಿಂದಲೇ' ಎಂದರ್ಥ. ಶ್ರುತಿಶಬ್ದಕ್ಕೆ ನಾಮಮಾತ್ರೇಣ ನಿರ್ದೇಶಃ ಎಂಬರ್ಥವನ್ನು ಮುಂದೆ ಹೇಳುತ್ತಾರೆ.

ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ।
ತನ್ನೋ ವಿಷ್ಣುಃ ಪ್ರಚೋದಯಾತ್ ॥

ಈ ಶ್ರುತಿಯಲ್ಲಿರುವ ಚತುರ್ಥೀವಿಭಕ್ತಿಯನ್ನು ದ್ವಿತೀಯಾವಿಭಕ್ತಿಯಾಗಿ ಪರಿಣಾಮಮಾಡಿಕೊಂಡು 'ಯತಸ್ತಂ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ತನ್ನಃ' ಎಂಬ ಶ್ರುತಿಯಲ್ಲಿರುವ ಅರ್ಥವನ್ನೇ 'ತಸ್ಮಾದಸ್ಮಾನ್' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ.

## ಸಕಲ ಶಬ್ದಗಳು ವಿಷ್ಣುವಾಚಕ

**ಭಾವದೀಪಃ – ವಿಷ್ಣಾವೇವೇತಿ ।।** ತತ್ತದನ್ತರ್ಯಾಮಿರೂಪಭೇದೇನ ವಾ । ಮಹಾದೇವತ್ವರುದ್ರತ್ವಾದಿಗುಣಭೇದೇನ ವಾ ತತ್ರ ತತ್ರ ಶ್ರುತೌ ವಿಷ್ಣುಪ್ರಾರ್ಥನಾಭೇದಾನ್ನ ಪೌನರುಕ್ತ್ಯಮಿತಿ ಭಾವಃ । 'ವಿಶ್ವ' ಇತ್ಯಸ್ಯಾರ್ಥಃ 'ಸರ್ವಾಣಿ' ಇತಿ । ಲೋಕ ಇತ್ಯಸ್ಯ ರುದ್ರೇತ್ಯಾದಿ । ಅಭೀತ್ಯಸ್ಯ ಮುಖ್ಯತ ಇತಿ । ಯದಿತ್ಯಸ್ಯ ಯತ ಇತಿ । ಅನೃತಸ್ಯೇತ್ಯಸ್ಯ 'ತದೇವರ್ತಮ್' ಇತಿ ಶ್ರುತ್ಯಾ ಋತಪದವಾಚ್ಯವಿಷ್ಣುಭಿನ್ನಸ್ಯೇತ್ಯಭಿಪ್ರೇತ್ಯ ವಿಷ್ಣಿತರಸ್ಯೇತ್ಯರ್ಥ ಉಕ್ತಃ । ಆಙೋರ್ಥೋ ಮುಖ್ಯತ ಇತಿ । 'ಪರಮ್' ಇತ್ಯಸ್ಯಾರ್ಥೋ 'ಪರಿಚ್ಛಿನ್ನಾ' ಇತಿ । ಧಾರಕ ಇತಿ । ದಧಾತೇಃ ಕಿಬಿತಿ ಭಾವಃ । ತಂ ಸಮ್ಪ್ರಶ್ನಂ ಪ್ರಶ್ನವಿಷಯಮ್ । ಅನ್ಯಾನಿ ಭುವನಾನಿ ಯಾನ್ತೀತ್ಯರ್ಥಃ । **ಅನ್ಯೇತಿ ।।** ವಿಶ್ವಕರ್ಮಶ್ರುತ್ಯಾ ತತ್ಪರತ್ವಾದಿತ್ಯರ್ಥಃ । ಹಿರ್ಹೇತ್ವರ್ಥೇ ಇತಿ ಮತ್ವಾಹ – **ಪಶ್ಚೇತಿ ।।**

'ವಿಷ್ಣಾವೇವ' - ಆಯಾ ದೇವತೆಗಳ ಅಂತರ್ಯಾಮಿರೂಪಗಳಿಂದ ವಿಷ್ಣುವಿನಲ್ಲೇ ಎಲ್ಲಾ ಶಬ್ದಗಳು ಮುಖ್ಯವಾಗಿವೆ. ಅಥವಾ ಮಹಾದೇವತ್ವ ರುದ್ರತ್ವ ಮೊದಲಾದ ಗುಣಗಳಲ್ಲಿರುವ ಭೇದದಿಂದ ಬೇರೆ ಬೇರೆ ಶ್ರುತಿಗಳಲ್ಲಿ ವಿಷ್ಣುಪ್ರಾರ್ಥನೆಯು ಬೇರೆಬೇರೆ ಶಬ್ದಗಳಿಂದ ಹೇಳಲ್ಪಟ್ಟಿರುತ್ತದೆ. ಆದ್ದರಿಂದಲೂ ಪುನರುಕ್ತಿಗೆ ಅವಕಾಶವಿಲ್ಲವೆಂದು ಅಭಿಪ್ರಾಯ. ಶ್ರುತಿಯಲ್ಲಿರುವ 'ವಿಶ್ವ' ಎಂಬ ಶಬ್ದಕ್ಕೆ 'ಸರ್ವಾಣಿ' ಎಂದು ವ್ಯಾಖ್ಯಾನಿಸಿದ್ದಾರೆ. 'ಲೋಕೇ' ಎಂಬ ಶಬ್ದಕ್ಕೆ 'ರುದ್ರಾದಿಜಗತಿ' ಎಂದು ವ್ಯಾಖ್ಯಾನಿಸಿದ್ದಾರೆ. 'ಅಭಿ' ಎಂಬ ಶಬ್ದಕ್ಕೆ 'ಮುಖ್ಯತಃ' ಎಂದು; 'ಯತ್' ಎಂಬುದಕ್ಕೆ 'ಯತಃ' ಎಂದು ವ್ಯಾಖ್ಯಾನಿಸಿದ್ದಾರೆ. 'ಅನೃತಸ್ಯ' ಎಂಬುದಕ್ಕೆ 'ತದೇವರ್ತಮ್' ಎಂಬ ಶ್ರುತಿಯಿಂದ ಋತಪದವಾಚ್ಯನಾದ ವಿಷ್ಣುಭಿನ್ನನಾದವನಿಗೆ ಎಂಬಭಿಪ್ರಾಯದಿಂದ 'ವಿಷ್ಣ್ವಿತರಸ್ಯ' ಎಂದು ವ್ಯಾಖ್ಯಾನಿಸಿದ್ದಾರೆ.

'ಅ' ಉಪಸರ್ಗಕ್ಕೆ ಮುಖ್ಯಿತಃ ಎಂದು; 'ಪರಮಮ್' ಎಂಬುದಕ್ಕೆ ಪರಿಚ್ಛಿನ್ನನೆಂದು ಅರ್ಥೈಸಿದ್ದಾರೆ. 'ಧಾರಕಃ' 'ಧಾಞ್ ಧಾತುವಿಗೆ ಕ್ವಿಪ್ ಪ್ರತ್ಯಯ ಬಂದು ಧಾರಕಃ ಎಂದಾಗಿದೆ. 'ತಂ ಸಂಪ್ರಶ್ನಂ' ಎಂದರೆ ಪ್ರಶ್ನೆಗೆ ವಿಷಯವಾದದ್ದು. '.. ಭುವನಾಯಂ ತ್ವನ್ಯೇ' ಬೇರೆ ಭೂಲೋಕಗಳನ್ನು ನಿಯಮಿಸುತ್ತಾನೆ ಎಂದರ್ಥ. 'ಅನ್ಯೇತಿ' ಎಂದರೆ ವಿಶ್ವಕರ್ಮಶ್ರುತಿಯ ಆಧಾರದಿಂದ ಬೇರೆಯವರನ್ನು ಪ್ರತಿಪಾದಿಸುವುದಿಲ್ಲ ಎಂದರ್ಥ. 'ಹಿ'ಶಬ್ದವು ಹೇತ್ವರ್ಥದಲ್ಲಿದೆ ಎಂಬಭಿಪ್ರಾಯದಿಂದ 'ಪದ್ಮನಾಭತ್ವೇನ' ಎಂದು ಹೇಳಿದ್ದಾರೆ.

**ಶ್ರುತಿಲಿಂಗಾದಿಗಳಲ್ಲಿ ಉತ್ತರೋತ್ತರ ಪ್ರಾಬಲ್ಯವು ಸಾಪವಾದ ನಿಯಮ**

**ಭಾವದೀಪಃ – ನನು –**

ಉಪಕ್ರಮಾದಿಲಿಙ್ಗಾನಾಂ ಬಲೀಯೋ ಹ್ಯುತ್ತರೋತ್ತರಮ್ ।
ಶ್ರುತ್ಯಾದೌ ಪೂರ್ವಪೂರ್ವಂ .....'

ಇತ್ಯುಕ್ತೇಃ ಕಥಂ ಲಿಙ್ಗಾತ್ ನಿರ್ಣಯಃ? ಇತ್ಯತ ಆಹ – **ಉತ್ಸರ್ಗತ ಇತಿ ಬಾಧೇತಿ** ।। ಪ್ರಸಿದ್ಧವಿಶ್ವಕರ್ಮರೂಪಾರ್ಥಪ್ರಚ್ಯಾವನರೂಪಬಾಧೇತ್ಯರ್ಥಃ । ವಕ್ಷ್ಯತೇ ಚಾऽಯಂ ನ್ಯಾಯಃ 'ಅನ್ತಸ್ತದ್ಧರ್ಮೋಪದೇಶಾತ್' ಇತ್ಯತ್ರ । ಶ್ರುತಿಬಾಧೇ ಚ ತದ್ಯುಕ್ತವಿಶ್ವಕರ್ಮಸೂಕ್ತರೂಪ-ಪ್ರಕರಣಸ್ಯಾಪಿ ಬಾಧಃ ಸಿದ್ಧ್ಯತಿ । 'ಜ್ಯೋತಿಶ್ಚರಣೇ'ತ್ಯತ್ರ ವಕ್ಷ್ಯಮಾಣನ್ಯಾಯೇನೇತಿ ಭಾವಃ ।

'ಉಪಕ್ರಮಾದಿಲಿಂಗಗಳು ಉತ್ತರೋತ್ತರಬಲಿಷ್ಠವಾಗಿವೆ. ಶ್ರುತಿಲಿಂಗಾದಿಗಳು ಪೂರ್ವಪೂರ್ವಬಲಿಷ್ಠವಾಗಿವೆ' ಎಂಬ ನ್ಯಾಯದಂತೆ ಪದ್ಮನಾಭತ್ವಲಿಂಗವು ಶ್ರುತಿಯನ್ನು ಬಾಧಿಸುತ್ತದೆ. ಲಿಂಗದಿಂದ ಶ್ರುತ್ಯರ್ಥ ವನ್ನು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಉತ್ಸರ್ಗತಃ ಇತಿ ಬಾಧಃ' ಎಂದು ಉತ್ತರಿಸಿದ್ದಾರೆ. ಈ ವಾಕ್ಯದಲ್ಲಿರುವ ಬಾಧ ಎಂಬ ಶಬ್ದಕ್ಕೆ 'ಪ್ರಸಿದ್ಧವಾದ ವಿಶ್ವಕರ್ಮ ಎಂಬರ್ಥವನ್ನು ಬಿಡುವಿಕೆ' ಎಂದರ್ಥ. ಲಿಂಗದಿಂದ ಶ್ರುತಿಯು ಬಾಧಿತವಾಗುತ್ತದೆ ಎಂಬ ನ್ಯಾಯವನ್ನು 'ಅಂತಸ್ತದ್ಧರ್ಮೋಪದೇಶಾತ್' ಎಂಬಲ್ಲಿ ನಿರೂಪಿಸುತ್ತಾರೆ. ಶ್ರುತಿಯು ಲಿಂಗದಿಂದ ಬಾಧಿತವಾದಾಗ ಶ್ರುತಿಯಿಂದ ಕೂಡಿದ ವಿಶ್ವಕರ್ಮಪ್ರಕರಣವು ಸಹ ಬಾಧಿತವಾಗುತ್ತದೆ. ಶ್ರುತಿಯು ಬಾಧಿತವಾದಾಗ ಪ್ರಕರಣವು

ಬಾಧಿತವಾಗುತ್ತದೆ ಎಂಬ ನ್ಯಾಯವನ್ನು 'ಜ್ಯೋತಿಶ್ಚರಣಾಭಿಧಾನಾತ್' ಎಂಬಲ್ಲಿ ನಿರೂಪಿಸುತ್ತಾರೆ.

ವಿಶೇಷ ವಿಚಾರ - 'ಅಜಸ್ಯ ನಾಭೌ' ಎಂಬ ವಿಶ್ವಕರ್ಮಸೂಕ್ತವು ಪದ್ಮನಾಭತ್ವ ಎಂಬ ಲಿಂಗವನ್ನು ಹೇಳುತ್ತಿದೆ. ಇದು ವಿಶ್ವಕರ್ಮಸೂಕ್ತವಾದ್ದರಿಂದ ವಿಶ್ವಕರ್ಮ ಎಂಬ ಶಬ್ದವು ವಿಶ್ವಕರ್ಮ ಎಂಬ ದೇವತೆಯು ಈ ಸೂಕ್ತದಿಂದ ಪ್ರತಿಪಾದ್ಯನೆಂದು ಹೇಳುತ್ತಿದೆ. ಆದ್ದರಿಂದ ನಮಗೆ ಸಂಶಯ ಬರುತ್ತದೆ. 'ಅಜಸ್ಯ ನಾಭೌ' ಎಂಬ ಶ್ರುತಿಯು ಪದ್ಮನಾಭತ್ವಲಿಂಗದಿಂದ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿದೆಯೋ, ಅಥವಾ ವಿಶ್ವಕರ್ಮನನ್ನು ಪ್ರತಿಪಾದನೆ ಮಾಡುತ್ತಿದೆಯೋ ಎಂದು.

ಶ್ರುತಿ, ಲಿಂಗ, ಸಮಾಖ್ಯಾ ಇವುಗಳ ನಡುವೆ ಶ್ರುತಿಯು ಬಹಳ ಪ್ರಬಲ ಇದರ ನಂತರ ಯುಕ್ತಿಯು ಪ್ರಬಲ, ಇದರ ನಂತರ ಸಮಾಖ್ಯೆಯು ಪ್ರಬಲವಾಗುತ್ತದೆ. ಆದ್ದರಿಂದ ಲಿಂಗಕ್ಕಿಂತಲೂ ಶ್ರುತಿಯೇ ಪ್ರಬಲವಾದ್ದರಿಂದ ವಿಶ್ವಕರ್ಮನನ್ನೇ ಇದು ಪ್ರತಿಪಾದನೆ ಮಾಡಬೇಕೆಂದು ತಿಳಿಯುತ್ತದೆ. ಆದ್ದರಿಂದ ಈ ಶ್ರುತಿಯಿಂದ ಮಹಾವಿಷ್ಣುವು ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ನಿರ್ಣಯಿಸುತ್ತೀರಿ ?

ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಹೀಗಿದೆ - ಶ್ರುತಿ, ಲಿಂಗ, ಸಮಾಖ್ಯಾ ಇವುಗಳ ನಡುವೆ ಯಾವುದು ಸಾವಕಾಶ, ಯಾವುದು ನಿರವಕಾಶ ಎಂಬುದನ್ನು ವಿಚಾರ ಮಾಡಬೇಕು. ಸಾವಕಾಶ ಎಂದರೆ ಬೇರೆರೀತಿಯಾಗಿಯೂ ಅರ್ಥವನ್ನು ಹೇಳಲು ಬರುತ್ತದೆಂದು ಅರ್ಥ. ನಿರವಕಾಶ ಎಂದರೆ ಬೇರೆ ಅರ್ಥವನ್ನು ಹೇಳಲು ಅವಕಾಶವಿಲ್ಲ ಎಂದರ್ಥ. ಪ್ರಕೃತ ವಿಶ್ವಕರ್ಮ ಎಂಬ ಶ್ರುತಿಯು ಸಾವಕಾಶವಾಗಿದೆ. ಏಕೆಂದರೆ ವಿಷ್ಣು ಸರ್ವಶಬ್ದವಾಚ್ಯನಾಗಿರುವುದರಿಂದ ವಿಶ್ವಕರ್ಮ ಎಂಬ ಶಬ್ದದಿಂದಲೂ ಕೂಡ ಪ್ರತಿಪಾದ್ಯನಾಗುತ್ತಾನೆ. ಆದರೆ ಪದ್ಮನಾಭತ್ವ ಎಂಬ ಲಿಂಗವು ಮಹಾವಿಷ್ಣು ಬಿಟ್ಟು ಬೇರೆ ಯಾರಲ್ಲಿಯೂ ಬರುವುದಿಲ್ಲ. ಆದ್ದರಿಂದ ನಿರವಕಾಶವಾಗಿದೆ. ಸಾವಕಾಶವಾದ ಶ್ರುತಿಗಿಂತ ನಿರವಕಾಶವಾದ ಯುಕ್ತಿಯೇ ಪ್ರಬಲವಾಗುತ್ತದೆ. ಆದ್ದರಿಂದ ನಿರವಕಾಶವಾದ ಪದ್ಮನಾಭತ್ವಲಿಂಗದಿಂದ ಇಲ್ಲಿ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗುತ್ತಾನೆ ಹೊರತು, ವಿಶ್ವಕರ್ಮನು ಪ್ರತಿಪಾದ್ಯನಾಗುವುದಿಲ್ಲ. ಹೀಗೆ ನಿರ್ಣಯ ಮಾಡಬೇಕು.

## 'ವ್ಯಸ್ತಸಮಸ್ತ' ಎಂದರೇನು ?

**ಭಾವದೀಪಃ – लिङ्गस्यासिद्धिनिरासपरतया भाष्यं व्याख्याय निरवकाशत्वा-भावनिरासपरतया व्याचष्टे – विश्वकर्मेति ।। व्यस्ता इति ।। क्वचिज्जडे**

**सृष्ट्यादयश्चतस्रो जीवेष्वष्टावित्येवंरूपेणेत्यर्थः । भाष्ये 'परो दिवा' इति श्रुतौ विष्णुलिङ्गोक्तेरुपयोगाप्रतीतेराह – यदेति ।। आदावपेक्षितं शेषमाह – 'परो दिवा' इत्यादिना 'समाख्यानाच्च' इत्यन्तेन । अपेक्षितपूर्तौ भाष्यवाक्यमवतार्य योजयति – न च तत्रेति ।।**

ಸಮುದ್ರಾಂತಃಸ್ಥತ್ವಲಿಂಗವು ಅಸಿದ್ಧವಾಗಿದೆ ಎಂಬ ಶಂಕೆಯನ್ನು ಪರಿಹರಿಸಿ ನಿರವಕಾಶವಾಗಿಲ್ಲವೆಂಬ ಶಂಕೆಯನ್ನು ಪರಿಹರಿಸುತ್ತಾ 'ವಿಶ್ವಕರ್ಮ' ಎಂಬ ವಾಕ್ಯದಿಂದ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ. 'ವ್ಯಸ್ತಾಃ' = ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಈ ಎಂಟನ್ನು ಜೀವಾದಿಗಳಲ್ಲಪ್ಪೇ ಹೇಳಬಹುದು. ಜಡದಲ್ಲಿ ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಈ ನಾಲ್ಕನ್ನು ಹೇಳಲಾಗದು. 'ಪರೋ ದಿವಾ' ಎಂಬ ಶ್ರುತಿಯಲ್ಲಿ ವಿಷ್ಣುಲಿಂಗವು ಹೇಳಲ್ಪಟ್ಟಿದೆ ಎಂದು ಭಾಷ್ಯದಲ್ಲಿ ಹೇಳಿದ್ದಾರೆ. ಅದಕ್ಕೆ ಪ್ರಕೃತೋಪಯೋಗವನ್ನು 'ಯದಾ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಭಾಷ್ಯದಲ್ಲಿ ಸೇರಿಸಿಕೊಳ್ಳಬೇಕಾದ ಶ್ರುತಿಯ ಮೊದಲ ಭಾಗವನ್ನು 'ಪರೋ ದಿವಾ' ಎಂಬ ಟೀಕೆಯಿಂದ ಹೇಳಿದ್ದಾರೆ. 'ಪರೋ ದಿವಾ' ಎಂಬುದರಿಂದ ಪ್ರಾರಂಭಿಸಿ 'ಸಮಾಖ್ಯಾನಾಚ್ಚ' ಎಂಬಲ್ಲಿಯವರೆಗೆ ಹೇಳಿದ್ದಾರೆ. ಸಂಪೂರ್ಣಶ್ರುತಿವಾಕ್ಯವು ಸಿದ್ಧವಾದ ಮೇಲೆ ಭಾಷ್ಯವಾಕ್ಯವನ್ನು ಜೋಡಿಸಿ 'ನಚ ತತ್ರ' ಎಂಬ ವಾಕ್ಯದಿಂದ ಯೋಜನೆ ಮಾಡುತ್ತಿದ್ದಾರೆ.

ಇಷ್ಟು ಸ್ಪಷ್ಟವಾಗಿ ತಿಳಿಯಬೇಕು - ಸೃಷ್ಟಿ, ಸ್ಥಿತಿ, ಲಯ, ನಿಯಮಗಳೆಂಬ ನಾಲ್ಕು ಧರ್ಮಗಳು ಜಡದಲ್ಲಿ ಸಂಕ್ಷೇಪವಾಗಿದೆ. ಜೀವರಲ್ಲಿ ವಿಸ್ತಾರವಾಗಿದೆ. ಅಂದರೆ ಸೃಷ್ಟಿ, ಸ್ಥಿತಿ, ಲಯ, ನಿಯಮಗಳ ಜೊತೆ ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳನ್ನೂ ಕೂಡ ಸೇರಿಸಿಕೊಳ್ಳಬೇಕು. ಈ ಎಂಟು ಬಗೆಯ ಧರ್ಮಗಳು ಯಾರಿಂದ ಉಂಟಾಗುತ್ತವೋ ಇದನ್ನು 'ವ್ಯಸ್ತಸಮಸ್ತವಿಶ್ವವಿಭೂತೇ' ಎಂಬ ಪದದಿಂದ ತಿಳಿಸಿದ್ದಾರೆ.

'ಪರೋ ದಿವಾ' ಎಂಬ ವಿಶ್ವಕರ್ಮ ಸೂಕ್ತಕ್ಕೆ, ಆಂಭ್ರಣೀ ಸೂಕ್ತದ ಸಂವಾದದಿಂದ ವಿಷ್ಣುವೇ ವಿಶ್ವಕರ್ಮಸೂಕ್ತ ಪ್ರತಿಪಾದ್ಯನೆಂದು ನಿರ್ಧಾರವಾಗುತ್ತದೆ. ವಿಶ್ವಕರ್ಮಸೂಕ್ತದ ಮಂತ್ರ ಹೀಗಿದೆ - 'ಪರೋ ದಿವಾ ಪರ ಏನಾ ಪೃಥಿವ್ಯಾ ಪರೋ ದೇವೇಭಿರಸುರೈರ್ಯದಸ್ತಿ' ದಿವಾ = ಶ್ರೀದೇವಿಗಿಂತ, ಪರ = ಶ್ರೇಷ್ಠನು, ಏನಾ ಪೃಥಿವ್ಯಾ = ಈ ಭೂಮಿಗಿಂತಲೂ,

ಪರಃ = ಶ್ರೇಷ್ಠನು, ದೇವೇಭಿಃ = ದೇವತೆಗಳಿಂದ, ಅಸುರೈಃ = ದಾನವರಿಂದಲೂ, ಯದಸ್ತಿ = ವಿಶ್ವದಲ್ಲಿರುವ ಸಮಸ್ತ ವಸ್ತುಗಳಿಗಿಂತಲೂ ಪರಃ ಶ್ರೇಷ್ಠನು.

## ಸಂವಾದ ಪ್ರಮಾಣದಿಂದ ವಿಶ್ವಕರ್ಮ ಸೂಕ್ತಪ್ರತಿಪಾದ್ಯ ನಾರಾಯಣನೇ

**ಭಾವದೀಪಃ** – 'ಇತ್ಯಾಹ' ಇತ್ಯತ್ರ ಭಾಷ್ಯೇऽಪೇಕ್ಷಿತಕರ್ಮಾರ್ಪಕಂ ಪರೋ ದಿವೇತ್ಯಾದೇವೇತಿ ಭಾವೇನಾಹ – **ಧಾವೇತಿ ।। ಲಕ್ಷ್ಮೀರಿತಿ ।।** ಅಸ್ಯ ಸೂಕ್ತಸ್ಯಾಮ್ಭ್ರಿಣೀವಾಕ್ಯತ್ವಾತ್ ಅಮ್ಭ್ರಿಣ್ಯಾಶ್ಚ 'ಶ್ರೀರ್ಭೂರ್ದುರ್ಗಾಮ್ಭ್ರಿಣೀಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ' ಇತಿ ಬೃಹದ್ಭಾಷ್ಯೋಕ್ತಶ್ರುತ್ಯಾ ಲಕ್ಷ್ಮೀಮೂರ್ತಿತ್ವಾದಿತಿ ಭಾವಃ । ಏವಮಗ್ರೇಪಿ । 'ಯಂ ಕಾಮಯೇ' ಇತ್ಯಾದೇಃ ಕೃತ್ಯಮಾಹ – **ನ ಚೇತಿ ।।** ಶ್ರುತ್ಯರ್ಥಮಾಹ – **ದಿವೇತಿ ।।** 'ಶ್ರೀಭೂಮಿಪರಃ' ಇತಿ ತತ್ವಪ್ರದೀಪೇ । 'ಬಭೂವ' ಇತ್ಯುತ್ತಮಪುರುಷಮ್ । ಶ್ರುತೌ 'ಏನಾ' ಇತಿ ಪೃಥಿವೀವಿಶೇಷಣಮ್ ಅಸ್ಯಾ ಇತ್ಯರ್ಥಃ । 'ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್' ಇತಿ ಶೇಷಸ್ಯಾರ್ಥಃ – **ಬ್ರಹ್ಮಾಣಮಿತ್ಯಾದಿ ।।** 'ಕೃಣೋಮಿ' ಇತಿ ವಿಕರಣವ್ಯತ್ಯಯೇನ 'ಕರೋಮಿ' ಇತ್ಯರ್ಥಃ ।

'ಇತ್ಯಾಹ' ಎಂಬ ಭಾಷ್ಯದಲ್ಲಿ ಅಪೇಕ್ಷಿತವಾದ ಕರ್ಮವು 'ಪರೋ ದಿವಾ' ಎಂಬುದೇ ಆಗಿದೆ ಎಂದು 'ದ್ಯಾವಾ' ಎಂದು ಹೇಳಿದ್ದಾರೆ. 'ಲಕ್ಷ್ಮೀಃ' ಈ ಸೂಕ್ತವು ಅಂಭೃಣೀಯಿಂದ ಹೇಳಲ್ಪಟ್ಟಿದೆ. 'ಶ್ರೀಭೂರ್ದುರ್ಗಾಂಭ್ರಿಣೀಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ' ಎಂಬ ಬೃಹದ್ಭಾಷ್ಯದ ಮಾತಿನಂತೆ ಲಕ್ಷ್ಮಿಯ ರೂಪವಿಶೇಷವೇ 'ಅಂಭ್ರಿಣೀ' ಎನಿಸಿದೆ. 'ಯಂ ಕಾಮಯೇ' ಎಂಬ ಪದದ ಕೃತ್ಯವನ್ನು 'ನಚ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಶ್ರುತಿಯ ಅರ್ಥವನ್ನು 'ದಿವಾ' ಎಂಬುದರಿಂದ ಹೇಳುತ್ತಾರೆ. 'ಬಭೂವ' ಎಂಬುದು ಉತ್ತಮಪುರುಷವೇ ಹೊರತು ಪ್ರಥಮಪುರುಷವಲ್ಲ. ಶ್ರುತಿಯಲ್ಲಿರುವ 'ಏನಾಂ' ಎಂಬುದು ಪೃಥಿವಿಗೆ ವಿಶೇಷಣವಾಗಿದೆ. 'ಅಸ್ಯಾಃ' ಎಂದು ಇದರ ಅರ್ಥ. 'ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್' ಎಂಬ ಶ್ರುತಿಯ ಉಳಿದ ಭಾಗದ ಅರ್ಥವನ್ನು 'ಬ್ರಹ್ಮಾಣಮ್' ಇತ್ಯಾದಿಯಾಗಿ ನಿರೂಪಿಸಿದ್ದಾರೆ. ವಿಕರಣಪ್ರತ್ಯಯದ ವ್ಯತ್ಯಾಸದಿಂದ 'ಕೃಣೋಮಿ' ಎಂಬುದನ್ನು 'ಕರೋಮಿ' ಎಂಬುದಾಗಿ ಇಟ್ಟುಕೊಳ್ಳಬೇಕು.

ವಿವರಣೆ - ಶ್ರುತ್ಯರ್ಥ - 'ಪರೋ ದಿವಾ ಪರ ಏನಾ ಪೃಥಿವ್ಯಾ'

'ಪರೋ ದೇವೇಭಿರಸುರೈರ್ಯದಸ್ತಿ'

ಶ್ರೀ ಮಂತ್ರಾಲಯಪ್ರಭುವಿರಚಿತ - ಭಾವದೀಪ

ದಿವಾ = ಲಕ್ಷ್ಮೀದೇವಿಗಿಂತ, ಪರಃ = ಶ್ರೇಷ್ಠನು, ಏನಾ = ಈ, ಪೃಥಿವ್ಯಾ = ಭೂದೇವಿಗಿಂತ, ಪರಃ = ಶ್ರೇಷ್ಠನು, ದೇವೇಭಿಃ = ಸಕಲ ದೇವತೆಗಳಿಗಿಂತಲೂ, ಪರಃ = ಶ್ರೇಷ್ಠನು, ಅಸುರೇಭಿಃ = ಅಸುರರಿಗಿಂತಲೂ, ಪರಃ = ಶ್ರೇಷ್ಠನು, ಅಷ್ಟೇ ಅಲ್ಲದೇ ಯದಸ್ತಿ = ಬೇರೆ ಯಾವ ಪದಾರ್ಥವಿದೆಯೋ, ತಸ್ಮಾತ್ಸರ್ವಸ್ಮಾತ್ ಅಪಿ = ಆ ಎಲ್ಲಾ ಪದಾರ್ಥಗಳಿಗಿಂತಲೂ, ಪರಃ = ಶ್ರೇಷ್ಠನು, ಇಂತಹ ಶ್ರೇಷ್ಠನಾದ ವ್ಯಕ್ತಿಯು ಶ್ರೀದೇವಿ ಭೂದೇವಿಗಿಂತಲೂ ಶ್ರೇಷ್ಠನಾಗಿದ್ದಾನೆ.

'ಪರೋ ದಿವಾ ಪರಾ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವ'

ಅಹಂತು = ನಾನಾದರೂ (ಲಕ್ಷ್ಮೀಯಾದರೂ) ಮಹಿನಾ = ಮಹಿಮೆಯಿಂದ, ಏತಾವತಿ = ಹಿಂದೆ ಹೇಳಿದಷ್ಟು ಪರಿಮಿತಿಯುಳ್ಳವಳು, ಬಭೂವ = ಆಗಿರುವೆನು.

'ಯಂ ಕಾಮಯೇ ತಂತಂ ಉಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ'

ಯಂ ಯಂ = ಯಾವ ರುದ್ರಪದವಿಗೆ ಯೋಗ್ಯರಾದ ಜೀವರನ್ನು ಉಗ್ರಂ ಕರ್ತುಂ = ರುದ್ರರನ್ನಾಗಿ ಮಾಡಲು, ಯಂ = ಆಯಾ ಪದವಿಗೆ ಯೋಗ್ಯರಾದವರನ್ನು, ಬ್ರಹ್ಮಾಣಂ = ಬ್ರಹ್ಮದೇವರನ್ನಾಗಿ, ಋಷಿಂ = ಋಷಿಯನ್ನಾಗಿ, ಸುಮೇಧಾಂ = ಜ್ಞಾನಿಯನ್ನಾಗಿ, ಕರ್ತುಂ = ಮಾಡಲು, ಕಾಮಯೇತ್ = ಬಯಸುವೆನು, ತಂ ತಂ = ಆಯಾ ಜೀವರನ್ನು, ಕೃಣೋಮಿ = ರುದ್ರನನ್ನಾಗಿ, ಬ್ರಹ್ಮನನ್ನಾಗಿ, ಋಷಿಯನ್ನಾಗಿ, ಬುದ್ಧಿವಂತನನ್ನಾಗಿ ಮಾಡುತ್ತೇನೆ.

'ಮಮ ಯೋನಿಃ ಅಪ್ಸ್ವಂತಃ ಸಮುದ್ರೇ'

ಮಮ = ನನಗೆ, ಯೋನಿಃ = ಕಾರಣನಾದ ವ್ಯಕ್ತಿಯು, ಸಮುದ್ರೇ = ಸಮುದ್ರದಲ್ಲಿ, ಅಪ್ಸ್ವಂತಃ = ನೀರಿನ ಒಳಗಡೆ ನೆಲೆಸಿದ್ದಾನೆ. (ಅವನೇ ನಾರಾಯಣ)

'ಸಮುದ್ರಶಾಯಿ' ನಾರಾಯಣನೇ

**ಭಾವದೀಪಃ – प्रसिद्धत्वादिति ।। 'अमरकोशादौ' इति भावः । महोदधीति।।** 'अम्भोनिधिरनन्तात्मा महोदधिशयोन्तकः' इति सहस्रनामसु । **इति स्मृतेरिति ।। 'अन्तस्तद्धर्मे'त्यत्र वक्ष्यमाणस्मृतेरिति ज्ञेयम् । यत्रेति ।। 'यं** कामये तंतमुग्रम्' इत्यत्रेत्यर्थः । **वक्ष्यमाणेति ।।** अन्तर्नयादौ प्रत्यधिकरणं

**वक्ष्यमाणेत्यर्थः । 'वेदे रामायणे इति वक्ष्यमाणे'ति चार्थः । एतेन भाष्ये 'चः समुच्चये' इति दर्शितम् । हरिवंशत्रये इति ।। 'खिलाखिलपारिजातरूपभागत्रये' इत्यर्थः ।।**

ಪ್ರಸಿದ್ಧತ್ವಾತ್ = ಅಮರಕೋಶಾದಿಗಳಲ್ಲಿ ಪ್ರಸಿದ್ಧವಾಗಿದೆ ಎಂದರ್ಥ. 'ಮಹೋದಧಿ' 'ಅಂಭೋನಿಧಿರನಂತಾತ್ಮಾ ಮಹೋದಧಿಶಯೋಂತಕಃ' ಎಂಬ ವಿಷ್ಣುಸಹಸ್ರನಾಮದಲ್ಲಿ. 'ಇತಿ ಸ್ಮೃತೇಃ' ಅಂತಃಸ್ತದ್ಧರ್ಮೋಪದೇಶಾತ್ ಎಂಬಲ್ಲಿ ಹೇಳುವ ಸ್ಮೃತಿಯ ಬಲದಿಂದ. ಅತ್ರ' = ಯಂ ಕಾಮಯೇ ತಂ ತಮುಗ್ರಂ' ಎಂಬಲ್ಲಿ. 'ವಕ್ಷ್ಯಮಾಣನ್ಯಾಯೈಃ' ಅಂತರಧಿಕರಣಗಳಲ್ಲಿ ಹೇಳುವ ನ್ಯಾಯದಿಂದ. ಅಥವಾ 'ವೇದೇ ರಾಮಾಯಣೇ' ಎಂದು ಮುಂದೆ ಹೇಳುವ ಪ್ರಮಾಣದಿಂದ. ಹೀಗೆ ಹೇಳಿದ್ದರಿಂದ 'ಉಕ್ತನ್ಯಾಯೇನ ಚ' ಎಂಬ ಭಾಷ್ಯದಲ್ಲಿರುವ ಚಶಬ್ದವು ಸಮುಚ್ಚಾಯಕವಾಗಿದೆ ಎಂದು ತಿಳಿಸಿದಂತಾಯಿತು. 'ಹರಿವಂಶತ್ರಯೇ ಇತಿ' -- ಖಿಲ, ಅಖಿಲ, ಪಾರಿಜಾತ ಎಂದು ಹರಿವಂಶವು ಮೂರು ಭಾಗಗಳಲ್ಲಿದೆ. ಈ ಮೂರೂ ಭಾಗಗಳಲ್ಲಿ 'ವೇದೇ ರಾಮಾಯಣೇ' ಎಂಬ ಶ್ಲೋಕವು ಪ್ರಸಕ್ತವಾಗಿದೆ ಎಂಬುದನ್ನು ತಿಳಿಸಲು ''ಹರಿವಂಶೇಷು'' ಎಂದು ಬಹುವಚನ ಪ್ರಯೋಗವನ್ನು ಮಾಡಿದ್ದಾರೆ.

## ವೈಷ್ಣವಶಾಸ್ತ್ರಗಳಿಗೆ ಶೈವಶಾಸ್ತ್ರಗಳ ವಿರೋಧವಿಲ್ಲ

**ಬ್ರಹ್ಮಸೂತ್ರಭಾಷ್ಯಮ್ – न चेतरग्रन्थविरोधः ।**

**'एष मोहं सृजाम्याशु यो जनान् मोहयिष्यति ।**
**त्वं च रुद्र महाबाहो मोहशास्त्राणि कारय ।।**
**अतथ्यानि वितथ्यानि दर्शयस्व महाभुज ।**
**प्रकाशं कुरु चात्मानमप्रकाशं च मां कुरु'इति वाराहवचनात् ।।**

**ಶೈವೇ ಚ ಸ್ಕಾನ್ದೇ–**

**'श्वपचादपि कष्टत्वं ब्रह्मेशानादयः सुराः ।**
**तदैवाच्युत यान्त्येव यदैव त्वं पराङ्मुखः'इति ।।**

ब्राह्मे च ब्रह्मवैवर्ते--

'नाहं न च शिवोऽन्ये च तच्छक्त्येकांशभागिनः ।
बालः क्रीडनकैर्यद्वत् क्रीडतेऽस्माभिरच्युतः' इति ।।

न च वैष्णवेषु तथा । तच्च 'एष मोहम्' इत्युक्तम् ।।

।। इति श्रीमदानन्दतीर्थभगवत्पादाचार्यविरचिते ब्रह्मसूत्रभाष्ये जिज्ञासाधिकरणम् ।।

ಅನುವಾದ - ಈ ವಿಚಾರದಲ್ಲಿ ಬೇರೆ ಶೈವಾದಿಗ್ರಂಥಗಳ ವಿರೋಧವಿರುವುದಿಲ್ಲ.

ಏಕೆಂದರೆ ''ಎಲೈ ರುದ್ರನೇ! ನಾನು ಭಕ್ತರಲ್ಲದ ಜನರನ್ನು ಮೋಹಿಸುವುದಕ್ಕಾಗಿ ನಟನೆ ಮಾಡುತ್ತೇನೆ. ಮೋಹಕವಾದ ಮಾತುಗಳನ್ನಾಡುತ್ತೇನೆ. ನೀನೂ ಸಹ ಅನ್ಯಥಾಜ್ಞಾನವನ್ನು ಉಂಟುಮಾಡುವ ಶಾಸ್ತ್ರಗಳನ್ನು ರಚನೆ ಮಾಡು; ಇತರ ಋಷಿಗಳಿಂದಲೂ ಅಂತಹ ಮೋಹಯುಕ್ತವಾದ ಶಾಸ್ತ್ರಗಳನ್ನು ರಚನೆ ಮಾಡಿಸು; ಸುಳ್ಳುವಿಷಯಗಳನ್ನು ಪರಸ್ಪರ ವಿರುದ್ಧವಿಷಯಗಳನ್ನು ಆ ಶಾಸ್ತ್ರಗಳಲ್ಲಿ ತೋರಿಸು. ನಿನ್ನನ್ನು ಸರ್ವೋತ್ತಮನೆಂದು ನಿರೂಪಿಸು. ನನ್ನನ್ನು ಅಸಮರ್ಥನೆಂದು ಮರೆಮಾಚು'' ಎಂದು ವರಾಹಪುರಾಣದಲ್ಲಿ ಹೇಳಲಾಗಿದೆ.

ಶೈವಪುರಾಣ ಹಾಗೂ ಸ್ಕಾಂದಪುರಾಣಗಳಲ್ಲಿ ಹೀಗೆ ಹೇಳಿದೆ -- ಎಲೈ ನಾಶವಿಲ್ಲದ ವಿಷ್ಣುವೇ! ಯಾವ ಕ್ಷಣದಲ್ಲಿ ನಿನ್ನ ಅನುಗ್ರಹ ತಪ್ಪುತ್ತದೋ ಅದೇ ಕ್ಷಣದಲ್ಲಿಯೇ ಚತುರ್ಮುಖಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳೂ ಸಹ ನಾಯಿಯನ್ನು ಬೇಯಿಸಿ ತಿನ್ನುವ ನಿರ್ಭಾಗ್ಯಶಾಲಿಗಿಂತಲೂ ಕಷ್ಟಸ್ಥಿತಿಯನ್ನು ನಿಶ್ಚಯವಾಗಿ ಹೊಂದುತ್ತಾರೆ'. ಎಂದು.

ಬ್ರಹ್ಮಪುರಾಣದಲ್ಲಿ ಮತ್ತು ಬ್ರಹ್ಮವೈವರ್ತಪುರಾಣದಲ್ಲಿಯೂ ''ಚತುರ್ಮುಖನಾದ ನಾನು, ರುದ್ರನೂ, ಮತ್ತು ಇತರ ಯಾರೇ ದೇವತೆಗಳಾಗಲೀ ಶ್ರೀಹರಿಯ ಅನಂತಶಕ್ತಿಯಲ್ಲಿ ಒಂದು ಶಕ್ತಿಯ ಅಂಶಕ್ಕೂ ಅರ್ಹರಲ್ಲ. ಆದರೂ ಬಾಲಕನು ಆಟದ ಸಾಮಗ್ರಿಗಳಿಂದ ಹೇಗೆ ಆಟವಾಡುತ್ತಾನೋ ಅದರಂತೆ ನಾಶರಹಿತನಾದ ಪರಮಾತ್ಮನು ನಮ್ಮೆಲ್ಲರ ಜೊತೆ ಆಟವಾಡುತ್ತಾನೆ'' ಎಂದು ಹೇಳಿರುವುದರಿಂದ ವೈಷ್ಣವಶಾಸ್ತ್ರಗಳಿಗೆ ಶೈವಶಾಸ್ತ್ರಗಳಿಂದ ವಿರೋಧವಿಲ್ಲ. ವೈಷ್ಣವಶಾಸ್ತ್ರಗಳಲ್ಲಿಯೂ ಪರಸ್ಪರವಿರೋಧಕ್ಕೆ ಅವಕಾಶವಿಲ್ಲ. ಕೆಲವೆಡೆ ಅಂತಹ ಪ್ರಸಂಗವಿದ್ದರೂ ಹಿಂದೆ ಹೇಳಿದಂತೆ ಅಯೋಗ್ಯಜನರನ್ನು ಮೋಹಪಡಿಸುವುದಕ್ಕಾಗಿ ಹೇಳಿದ ಮಾತು ಎಂದು ಈ ಹಿಂದೆಯೇ ಹೇಳಿದ್ದಾಗಿದೆ.

ಇಲ್ಲಿಗೆ ಶ್ರೀಮದಾಚಾರ್ಯರು ರಚಿಸಿದ ಬ್ರಹ್ಮಸೂತ್ರಭಾಷ್ಯದಲ್ಲಿ
ಜಿಜ್ಞಾಸಾಧಿಕರಣದ ಭಾವಾರ್ಥವು ಸಮಾಪ್ತವಾಯಿತು
ಜಿಜ್ಞಾಸಾಧಿಕರಣ (೧-೧-೧)

ಪ್ರತಿಪದಾರ್ಥ -- ಆದ್ದರಿಂದ ಇತರಗ್ರಂಥವಿರೋಧಃ = ಬೇರೆ ಪಾಶುಪತಾದಿಗ್ರಂಥಗಳ ವಿರೋಧವು, ನ ಚ = ಬರುವುದಿಲ್ಲವಷ್ಟೆ.

ಏಕೆಂದರೆ, ಅಹಂ = ನಾನು, ಮೋಹಂ = ಭಕ್ತರಲ್ಲದವರಿಗೆ ಮೋಹವನ್ನು, ಸೃಜಾಮಿ = ಹುಟ್ಟಿಸುತ್ತೇನೆ. ಏಷಃ = ಈ ಅಜ್ಞಾನವು, ಜನಾನ್ = ಅಭಕ್ತಜನರನ್ನು, ಮೋಹಯಿಷ್ಯತಿ = ವಂಚನೆ ಮಾಡುತ್ತದೆ. ಹೀಗೆ ರುದ್ರದೇವರಿಗೆ ನಾರಾಯಣನು ಹೇಳಿ, ಮಹಾಭಾಗೋ = ಮಹಾಬಲಶಾಲಿಯಾದ, ರುದ್ರ = ಎಲೈ ರುದ್ರನೇ! ತ್ವಂ ಚ = ನೀನು ಸಹ, ಮೋಹಶಾಸ್ತ್ರಾಣಿ = ನಿನ್ನನ್ನು ಸರ್ವೋತ್ತಮನೆಂದು ಪ್ರತಿಪಾದಿಸುವ ವಂಚಕಶಾಸ್ತ್ರಗಳನ್ನು, ಕಾರಯ = (ರಚಿಸು) ದಧೀಚಿ ಮೊದಲಾದವರಿಂದ ರಚನೆ ಮಾಡಿಸು, (ತೇಷು = ಆ ಮೋಹಶಾಸ್ತ್ರಗಳಲ್ಲಿ) ಅತಥ್ಯಾನಿ = ಎಲ್ಲೂ ಇಲ್ಲದ ಲಿಂಗಾನ್ವೇಷಣಾದಿ ವಿಷಯಗಳನ್ನು, ವಿತಥ್ಯಾನಿ = ವಿರುದ್ಧಾರ್ಥಗಳನ್ನು, ದರ್ಶಯಸ್ವ = ತೋರಿಸು, ಆತ್ಮಾನಂ = ನಿನ್ನನ್ನು, ಪ್ರಕಾಶಂ = ಸರ್ವೋತ್ತಮನೆಂದು, ಕುರು = ಪ್ರಸಿದ್ಧಿಗೊಳಿಸು, ಮಾಂ ಚ = ನನ್ನನ್ನು, ಅಪ್ರಕಾಶಂ ಚ = ಅಸಮರ್ಥನೆಂದು, ಕುರು = ಮಾಡು, ಇತಿ = ಹೀಗೆ, ವಾರಾಹವಚನಾತ್ = ವರಾಹಪುರಾಣದಲ್ಲಿರುವ ಮಾತಿನಿಂದ ತಿಳಿಯುತ್ತದೆ. ಮತ್ತು

ಶೈವೇ = ಶೈವ ಪುರಾಣದಲ್ಲಿ, ಸ್ಕಾಂದೇ ಚ = ಸ್ಕಾಂದಪುರಾಣದಲ್ಲಿಯೂ ಹೇಳಲ್ಪಟ್ಟಿದೆ. ಹೇ ಅಚ್ಯುತ = ನಾಶರಹಿತನಾದ ಎಲೈ ವಿಷ್ಣುವೇ!, ಯದೈವ = ಯಾವ ಕ್ಷಣದಲ್ಲಿ, ತ್ವಂ = ನೀನು, ಪರಾಙ್ಮುಖಃ = ವಿಮುಖನಾಗುತ್ತೀಯೋ, ತದೈವ = ಅದೇ ಕ್ಷಣದಲ್ಲಿಯೇ, ಬ್ರಹ್ಮೇಶಾನಾದಯಃ ಸುರಾಃ = ಬ್ರಹ್ಮರುದ್ರೇಂದ್ರಾದಿದೇವತೆಗಳು, ಶ್ವಪಚಾದಪಿ = ನಾಯಿಯನ್ನು ಬೇಯಿಸುವ ನಿರ್ಭಾಗ್ಯಶಾಲಿಗಿಂತಲೂ, ಕಷ್ಟತ್ವಂ = ಅಧಿಕಕಷ್ಟವನ್ನು, ಯಾಂತ್ಯೇವ = ನಿಶ್ಚಯವಾಗಿ ಹೊಂದುತ್ತಾರೆ. ಇತಿ = ಹೀಗೆ ಹೇಳಲ್ಪಟ್ಟಿದೆ.

ಮತ್ತು ಬ್ರಾಹ್ಮೇ = ಬ್ರಹ್ಮವಿಷಯಕವಾದ ಪುರಾಣದಲ್ಲಿ, ಚ = ಮತ್ತು, ಬ್ರಹ್ಮವೈವರ್ತೇ = ಬ್ರಹ್ಮವೈವರ್ತಪುರಾಣದಲ್ಲಿಯೂ, ಅಹಂ = ಚತುರ್ಮುಖನಾದ ನಾನು, ಶಿವಃ = ರುದ್ರನು, ಅನ್ಯೇ ಚ = ಉಳಿದ ದೇವತೆಗಳು, ತತ್ = ಆ ಪರಮಾತ್ಮನ, ಶಕ್ಯೇಕಾಂಶಭಾಗಿನಃ = ಅನಂತಶಕ್ತಿಯಲ್ಲಿ ಒಂದು ಶಕ್ತಿಯ ಅಂಶಕ್ಕೂ, ನ ಚ = ಅರ್ಹರಾದವರಲ್ಲ. ತಥಾಪಿ = ಹಾಗಿದ್ದರೂ, ಬಾಲಃ = ಹುಡುಗನು, ಕ್ರೀಡನಕೈಃ = ಆಟದ ಸಾಮಗ್ರಿಗಳಿಂದ, ಯದ್ವತ್ = ಯಾವರೀತಿಯಾಗಿ, ಕ್ರೀಡತೇ = ಆಟವಾಡುತ್ತಾನೋ, ತದ್ವತ್ = ಅದೇ ರೀತಿಯಾಗಿ, ಅಸ್ಮಾಭಿಃ = ನಮ್ಮ ಜೊತೆಗೆ, ಅಚ್ಯುತಃ = ನಾಶರಹಿತನಾದ ನಾರಾಯಣನು, ಕ್ರೀಡತೇ = ಆಟವಾಡುತ್ತಾನೆ. ಇತಿ = ಹೀಗೆ ಹೇಳಿರುವುದರಿಂದ ಶೈವಾಗಮಗಳ ವಿರೋಧವಿಲ್ಲ.

ವೈಷ್ಣವಪುರಾಣಗಳಲ್ಲಿ ಪರಸ್ಪರವಿರೋಧಕ್ಕೆ ಅವಕಾಶವಿಲ್ಲ. ವೈಷ್ಣವೇಷು = ವಿಷ್ಣುವಿನ ಪಾರಮ್ಯವನ್ನು ಸಾಧಿಸುವ ಆಗಮಗಳಲ್ಲಿ, ತಥಾ = ಅಂತಹ ಪರಸ್ಪರವಿರೋಧವು, ನ ಚ = ಇರುವುದಿಲ್ಲ. ತಚ್ಚ = ವಿಷ್ಣುವಿನಿಂದ ಕೃಷ್ಣಾವತಾರದಲ್ಲಿ ಮಾಡಿದ ಕೈಲಾಸಾದಿಯಾತ್ರೆಗಳು, ಶಿವಸ್ತುತಿಗಳು, ಮೋಹಃ = ಮೋಹಾರ್ಥಕವಾದದ್ದು ಎಂದು, 'ಏಷ ಮೋಹಮ್' = ಏಷ ಮೋಹಂ ಎಂಬ ಸ್ಮೃತಿಯಿಂದ, ಉಕ್ತಮ್ = ಹೇಳಲ್ಪಟ್ಟಿದೆ.

ಭಾಷ್ಯದೀಪಿಕಾನುಸಾರಿಯಾದ ಪ್ರತಿಪದಾರ್ಥದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತವಾಯಿತು

* * *

## ಸರ್ವೋತ್ತಮನಾದ ವಿಷ್ಣುವೇ ಜಿಜ್ಞಾಸ್ಯ

**तत्वप्रकाशिका – तथाप्यस्ति पाशुपतादिशास्त्रविरोधः । तत्र रुद्रादीनां सर्वोत्तमत्वादयुक्तेरित्यत आह – नचेति ।।**

ಆದರೂ ಸಹ ಪಾಶುಪತಾದಿಶಾಸ್ತ್ರಗಳ ವಿರೋಧವು ತಪ್ಪಿದ್ದಲ್ಲ. ಏಕೆಂದರೆ, ಪಾಶುಪತಾದಿಶಾಸ್ತ್ರಗಳಲ್ಲಿ ರುದ್ರಾದಿಗಳನ್ನೇ ಸರ್ವೋತ್ತಮರೆಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ಪ್ರಶ್ನೆಗೆ ಆಚಾರ್ಯರು 'ನಚ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

**तत्वप्रकाशिका – कुतो न विरोधः? इति चेत्, तेषां मोहार्थं कृतत्वादिति भावेनाह – एष इति ।। 'मुह्यतेऽनेन जनः' इति मोहः नटनं वञ्चनं वा । त्वं च सृज, दधीच्यादिभिः कारय च । अविद्यमानम् = अतथ्यम् । व्यधिकरणत्वेन विद्यमानं वितथ्यम् । आत्मानं मां च प्रति । प्रकाशं प्रसिद्धिम् ।**

ಪಾಶುಪತಾದಿಶಾಸ್ತ್ರಗಳಿಂದ ವಿರೋಧವು ಏಕಿಲ್ಲ? ಎಂದರೆ ಆ ಶಾಸ್ತ್ರಗಳನ್ನು ಕೇವಲ ಮೋಹಕ್ಕೋಸ್ಕರ ರಚಿಸಿದ್ದಾರೆಂಬ ಅಭಿಪ್ರಾಯದಿಂದ 'ಏಷಃ' ಎಂಬ ಭಾಷ್ಯವು ಹೊರಟಿದೆ. ಮೋಹಶಬ್ದಕ್ಕೆ 'ಮುಚ್ಯತೇ ಅನೇನ ಜನಃ' ಎಂಬ ವ್ಯುತ್ಪತ್ತಿಯಿಂದ ನಟನ ಅಥವಾ ವಂಚನ ಎಂದರ್ಥ. 'ಎಲೈ ರುದ್ರನೇ! ಮೋಹಶಾಸ್ತ್ರವನ್ನು ನೀನೂ ರಚಿಸು. ಮತ್ತು ದಧೀಚಿ ಮುಂತಾದವರಿಂದಲೂ ರಚನೆ ಮಾಡಿಸು'. ಅತಥ್ಯಶಬ್ದಕ್ಕೆ 'ಇಲ್ಲದಿರುವಿಕೆ' ಎಂದರ್ಥ. 'ವಿತಥ್ಯ'ಶಬ್ದಕ್ಕೆ 'ಬೇರೆ ಸ್ಥಳದಲ್ಲಿರುವಿಕೆ' ಎಂದರ್ಥ. 'ನಿನ್ನನ್ನು ಪ್ರಸಿದ್ಧಿ ಪಡಿಸಿಕೊ' 'ನನ್ನನ್ನು ಅಪ್ರಸಿದ್ಧನನ್ನಾಗಿ ಮಾಡು' 'ಪ್ರಕಾಶ' ಶಬ್ದಕ್ಕೆ ಪ್ರಸಿದ್ಧಿ ಎಂದರ್ಥ.

**ತತ್ವಪ್ರಕಾಶಿಕಾ – ಸ್ಕಾನ್ದಾದಿಪುರಾಣಾನಾಂ ಶಿವಾದಿವಿಷಯತ್ವಾತ್ ತದ್ವಿರೋಧಃ ಸ್ಯಾತ್? ಇತ್ಯತ ಆಹ – ಶೈವೇ ಚೇತಿ ।। ಬ್ರಾಹ್ಮೇ = ಬ್ರಹ್ಮವಿಷಯೇ । ಕ್ರೀಡನಕೈಃ = ಕ್ರೀಡಾಸಾಧನೈರಸ್ಮಾಭಿಃ ಕರಣೈಃ । ತೇಷಾಂ ಶೈವಾದಿತ್ವೇऽಪಿ ನ ವಿರೋಧಿತ್ವಮ್ । ತತ್ರಾಪಿ ವಿಷ್ಣೂತ್ತಮತ್ವಾದೇರೇವೋಕ್ತತಯಾ ಸ್ವವಿರೋಧೇನ ತತ್ರಾಪ್ರಾಮಾಣ್ಯಾತ್ ।**

'ಸ್ಕಾಂದಾದಿಪುರಾಣಗಳು ರುದ್ರಾದಿಗಳನ್ನು ಪ್ರತಿಪಾದಿಸುವುದರಿಂದ ಅವುಗಳ ವಿರೋಧ ಬರುತ್ತದೆ' ಎಂಬ ಪ್ರಶ್ನೆಗೆ 'ಶೈವೇ ಚ' ಎಂಬುದರಿಂದ ಉತ್ತರಿಸಿದ್ದಾರೆ. 'ಬ್ರಾಹ್ಮೇ' ಎಂದರೆ 'ಬ್ರಹ್ಮವಿಷಯಕವಾದ' ಎಂದರ್ಥ. 'ಕ್ರೀಡನಕೈಃ' 'ಕ್ರೀಡಾಸಾಧನಗಳಾದ ನಮ್ಮಿಂದ' ಎಂದರ್ಥ. ಸ್ಕಾಂದಾದಿಪುರಾಣಗಳಲ್ಲಿ ರುದ್ರಾದಿಗಳನ್ನು ಪ್ರತಿಪಾದಿಸಿದ್ದರೂ ಅವುಗಳ ವಿರೋಧವಿಲ್ಲ. ಅಲ್ಲಿಯೂ ಸಹ ವಿಷ್ಣುಸರ್ವೋತ್ತಮತ್ವವೇ ಹೇಳಲ್ಪಟ್ಟಿದೆ. ಆದ್ದರಿಂದ ತನ್ನ ವಾಕ್ಯಕ್ಕೆ ವಿರೋಧ ಬರುವುದರಿಂದ ಆ ಶಾಸ್ತ್ರಗಳು ಅಪ್ರಮಾಣವಾಗಬೇಕಾದೀತು.

**ತತ್ವಪ್ರಕಾಶಿಕಾ – ನ ಚ ವಿಪರೀತ ಕಿಂ ನ ಸ್ಯಾತ್? ಇತಿ ವಾಚ್ಯಮ್ । ಶಿವಾದ್ಯುತ್ಕರ್ಷಾದೇಃ ಶೈವಾದಿಪುರಾಣೇಷ್ವಸಾಧಾರಣ್ಯೇನ ಪ್ರಾಪ್ತತ್ವಾದಿತಿ ಭಾವಃ । ತಥಾಪಿ ವಿಷ್ಣೂತ್ತಮತ್ವ-ರುದ್ರಾಧಮತ್ವಯೋ ವೈಷ್ಣವಗ್ರನ್ಥವಿರೋಧೋऽಸ್ತೀತ್ಯತ ಆಹ – ನ ಚೇತಿ ।। ತಥಾ = ಸರ್ವೋತ್ತಮತ್ವಾದಿವಿರೋಧಃ ।**

**ನನು ತತ್ರಾಪಿ ವಿಷ್ಣುನಾ ರುದ್ರಸ್ತುತ್ಯಾದಿ ಕಥಮುಚ್ಯತೇ? ಇತ್ಯತ ಆಹ – ತಚ್ಚೇತಿ ।। ಯದುಚ್ಯತೇ 'ತಚ್ಚೈಷ ಮೋಹಮ್' ಇತಿ ವಚನಾತ್ ಮೋಹಾರ್ಥತ್ವೇನ ಪ್ರತ್ಯುಕ್ತಮಿತ್ಯರ್ಥಃ । ತಸ್ಮಾದ್ ರುದ್ರಾದೀನಾಮ್ ಅಧಮತ್ವೇ ಬಾಧಕಾಭಾವಾತ್, 'ಯಂ ಕಾಮಯೇ' ಇತ್ಯಾದೌ ತದ್ವಚನಾಲ್ಲಕ್ಷ್ಮೀಕಾರಣತ್ವೇನ 'ಮಮ ಯೋನಿಃ' ಇತ್ಯುಕ್ತೋ ವಿಷ್ಣುರೇವ । ತತಶ್ಚ ತತ್ಸಮಾಖ್ಯಾನಾದ್ ವಿಶ್ವಕರ್ಮಸೂಕ್ತವಾಚ್ಯೋऽಪಿ ಸ ಏವ । ತಥಾಚ । ತಸ್ಯೈವ 'ಯೋ ದೇವಾನಾಮ್' ಇತಿ ಸರ್ವನಾಮತ್ವೋಕ್ತೇಃ ನಾನ್ಯೇಷಾಂ ಸರ್ವನಾಮತಾ,**

ಹಾಗಾದರೆ ವಿಪರೀತವಾಗಿ ಶಿವಸರ್ವೋತ್ತಮತ್ವದಲ್ಲಿ ತಾತ್ಪರ್ಯವನ್ನು ಏಕೆ ಹೇಳಬಾರದು, ಏಕೆಂದರೆ ಶೈವಾದಿಪುರಾಣಗಳಲ್ಲಿ ರುದ್ರಾದಿಗಳ ಉತ್ಕರ್ಷವನ್ನೇ ಅಸಾಧಾರಣವಾಗಿ ಪ್ರತಿಪಾದಿಸಿರುತ್ತಾರೆಂದು ಅಭಿಪ್ರಾಯ. ಆದರೂ ಸಹ ವೈಷ್ಣವಗ್ರಂಥಗಳಲ್ಲಿ ವಿಷ್ಣುಸರ್ವೋತ್ತಮತ್ವವನ್ನು ಹೇಳಿ, ರುದ್ರಾದಿಗಳ ಅಧಮತ್ವವನ್ನು ಹೇಳಿದ್ದಾರೆ. ವೈಷ್ಣವಗ್ರಂಥಗಳ ವಿರೋಧ ಶೈವಗ್ರಂಥಗಳಿಗೆ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ನಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ನೀವು ಹೇಳಿದಂತೆ ವಿಷ್ಣುಸರ್ವೋತ್ತಮತ್ವಾದಿಗಳಿಂದ

ವಿರೋಧ ಬರುವುದಿಲ್ಲ. ವೈಷ್ಣವಶಾಸ್ತ್ರಗಳಲ್ಲಿಯೂ ಸಹ ವಿಷ್ಣುವಿನಿಂದ ರುದ್ರನು ಸ್ತುತನಾಗಿದ್ದಾನೆಂದು ಕಾಣಿಸುತ್ತಿದೆ. ಇದನ್ನು ಹೇಗೆ ಕೂಡಿಸುತ್ತೀರಿ? ಎಂಬ ಪ್ರಶ್ನೆಗೆ 'ತಚ್ಚ' ಎಂಬುದರಿಂದ ಉತ್ತರಿಸಿದ್ದಾರೆ. ಆದ್ದರಿಂದ ಸಕಲಶಬ್ದಗಳು ವಿಷ್ಣುವಾಚಕಗಳಾಗಿವೆ. ಇತರ ದೇವತೆಗಳನ್ನು ಪ್ರತಿಪಾದಿಸುವುದಿಲ್ಲ.

**तत्वप्रकाशिका – अतस्तेषां 'तन्नो विष्णुः' इत्यादावप्राप्तेर्विष्णुरेव परं ब्रह्म । ततो 'विष्णावेव ब्रह्म शब्दस्य मुख्यत्वेन स एव सूत्रकृता जिज्ञास्यतया विवक्षितः' इति । ''तदेवं जिज्ञास्ये 'तद् ब्रह्म' इति ब्रह्मपदश्रवणात्, तेन च तस्य पूर्णगुणत्वोक्तेः, नानुभवसिद्धाल्पगुणजीवाभेदस्तस्येति सन्दिग्धत्वेन विषयत्वसिद्धेः प्रयोजनादिसद्भावाच्च ब्रह्मजिज्ञासा कर्तव्यैव अतः शास्त्रमारम्भणीयमेव'' इति सिद्धम् ।।१।।अ-१।।**

**।। इति श्रीमज्जयतीर्थभिक्षुविरचितायां तत्वप्रकाशिकायां जिज्ञासाधिकरणम् ।।**

'तನ್ನೋ ವಿಷ್ಣುಃ' ಇತ್ಯಾದಿ ವಾಕ್ಯಗಳಲ್ಲಿ ರುದ್ರಾದಿಗಳು ಪ್ರಾಪ್ತರಾಗದ ಕಾರಣ ವಿಷ್ಣುವೇ ಪರಬ್ರಹ್ಮನೆಂದು ನಿರ್ಣಯವಾಯಿತು. ಆದ್ದರಿಂದ ಸೂತ್ರಕಾರರು ಹೇಳಿದ ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿ ಸಮನ್ವಯವಾಗುತ್ತದೆ. ಅಂತಹ ವಿಷ್ಣುವಿನ ಜಿಜ್ಞಾಸೆಯೇ ಸೂತ್ರಕಾರರಿಗೆ ವಿವಕ್ಷಿತವಾಗಿದೆ. 'ತದೇವಂ ಜಿಜ್ಞಾಸ್ಯೇ' 'ತದ್ಬ್ರಹ್ಮ' ಹೀಗೆ ಜಿಜ್ಞಾಸ್ಯನಾದ ವಿಷ್ಣುವಿನಲ್ಲಿ 'ತದ್ ಬ್ರಹ್ಮ' ಎಂಬ ಶ್ರುತಿಯಿಂದ ಬ್ರಹ್ಮಪದವು ಕೇಳಿಸುತ್ತಿದೆ. ಆದ್ದರಿಂದ ಜಿಜ್ಞಾಸ್ಯನು ಗುಣಪೂರ್ಣನಾಗಿದ್ದಾನೆಂಬ ಅರ್ಥವು ತಿಳಿಯುತ್ತದೆ. ಅನುಭವಸಿದ್ಧನಾದ ಜೀವನು ಅಲ್ಪಗುಣನೆಂದು ತಿಳಿಯಲ್ಪಡುತ್ತಿದ್ದಾನೆ. ಈ ಅಲ್ಪಗುಣನಾದ ಜೀವನಿಗೂ ಗುಣಪೂರ್ಣನಾದ ವಿಷ್ಣುವಿಗೂ ಅಭೇದವನ್ನು ಹೇಳಲು ಸಾಧ್ಯವೇ ಇಲ್ಲ. ಆದ್ದರಿಂದ ಗುಣಪೂರ್ಣನಾದ ವಿಷ್ಣುವು ಸಂದಿಗ್ಧನಾದ್ದರಿಂದ ವಿಷಯನಾಗಿದ್ದಾನೆ. ಆದ್ದರಿಂದಲೇ ಈ ಶಾಸ್ತ್ರಕ್ಕೆ ಪ್ರಯೋಜನ ಅಧಿಕಾರಿ ಸಂಬಂಧಗಳು ಸಹ ಇರುತ್ತವೆ. ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಅವಶ್ಯ ಮಾಡಲೇಬೇಕು. ಅದಕ್ಕೋಸ್ಕರ ಈ ಶಾಸ್ತ್ರದ ಆರಂಭವು ಆಗಲೇಬೇಕು.

ಶ್ರೀಜಯತೀರ್ಥಭಿಕ್ಷುಗಳಿಂದ ವಿರಚಿತವಾದ
ತತ್ವಪ್ರಕಾಶಿಕೆಯ ಅನುವಾದದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತಿಯಾಯಿತು.
ಜಿಜ್ಞಾಸಾಧಿಕರಣ (೧-೧-೧)

## ರುದ್ರಾದಿಗಳು ವಿವಕ್ಷಿತರಲ್ಲ

**ಭಾವದೀಪಃ – 'न चाविरोधः' इति पूर्वभाष्ये श्रुतिपुराणादिविरोधस्य प्रसिद्धरुद्रार्थत्याजनेन निरस्तत्वात् 'न चेतर' इति किमर्थम्? इत्यत आह – तथापीति ।।**

''ತನ್ನೋ ವಿಷ್ಣುಃ ಪ್ರಚೋದಯಾತ್'' ಎಂಬಲ್ಲಿರುವ ತತ್ ಪದದಿಂದ ರುದ್ರಾದಿಗಳನ್ನು ಇಟ್ಟುಕೊಳ್ಳಬಾರದು. ಮತ್ತು ಹಿಂದೆ ಪ್ರಸಕ್ತವಾದ ರುದ್ರಾದಿಶಬ್ದಗಳು ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಒಂದು ವೇಳೆ ಪ್ರಸಿದ್ಧರಾದ ರುದ್ರಾದ್ಯರ್ಥಗಳನ್ನೇ ಸ್ವೀಕರಿಸಿದರೆ ಶ್ರುತಿಪುರಾಣಾದಿಗಳ ವಿರೋಧವು ಬರುತ್ತದೆಂದು 'ನಚಾವಿರೋಧೇ' ಎಂಬ ಹಿಂದಿನ ಭಾಷ್ಯದಿಂದ ನಿರಾಕರಿಸಿದರು. ಹಾಗಾದರೆ 'ನಚ ಇತರಗ್ರಂಥವಿರೋಧಃ' ಎಂಬ ಭಾಷ್ಯವು ಪುನಃ ಅದೇ ವಿಚಾರವನ್ನು ಪ್ರತಿಪಾದಿಸುತ್ತದಲ್ಲವೇ? ಎಂಬ ಪ್ರಶ್ನೆಗೆ 'ತಥಾಪಿ' ಎಂಬ ಟೀಕಾಪಂಕ್ತಿಯಿಂದ ಉತ್ತರಿಸುತ್ತಿದ್ದಾರೆ.

**ಭಾವದೀಪಃ – अत्र 'उग्र'पदेन रुद्रग्रहणे इत्यनुषङ्गः । भाष्ये एषोहमित्यर्थः। नटनमिति ।। विद्यमानाकाराच्छादनेनाविद्यमानाकारप्रदर्शनं नटनम् । वञ्चनं तु अविद्यमानकथनम् । 'सृजामि' इत्यस्य विपरिणामेनान्वयमाह – सृजेति ।। गीताभाष्यटीकायां तु कारयेति स्वार्थे णिजित्युक्तं द्वितीये ।**

ಈ ವಾಕ್ಯದಲ್ಲಿ 'ಉಗ್ರಪದೇನ ರುದ್ರಗ್ರಹಣೇ' . (ಉಗ್ರಪದದಿಂದ ರುದ್ರನನ್ನು ಸ್ವೀಕರಿಸಿದರೆ) ಎಂಬುದನ್ನು ಅಧ್ಯಾಹಾರ ಮಾಡಬೇಕು. ಭಾಷ್ಯದಲ್ಲಿರುವ 'ಏಷಃ' ಎಂಬ ಶಬ್ದಕ್ಕೆ 'ಅಹಮ್' ಎಂದರ್ಥ. 'ನಟನಮ್' = ಇರುವ ಆಕಾರವನ್ನು ಮುಚ್ಚಿ ಇಲ್ಲದಿರುವ ಸ್ವರೂಪವನ್ನು ತೋರಿಸಿಕೊಳ್ಳುವಿಕೆ. ವಂಚನಮ್ = ಇಲ್ಲದ್ದನ್ನು ಹೇಳುವಿಕೆ. 'ಸೃಜಾಮಿ' ಎಂಬ ಕ್ರಿಯಾಪದವನ್ನು ವಿಪರಿಣಾಮ ಮಾಡಿ 'ಸೃಜ' ಎಂದಿದ್ದಾರೆ. ಗೀತಾಭಾಷ್ಯ ಟೀಕೆಯಲ್ಲಿ 'ಸ್ವಾರ್ಥೇ ಣಿಚ್ ಪ್ರತ್ಯಯ' ವನ್ನು ಹೇಳಿ 'ಕಾರಯ'ಶಬ್ದಕ್ಕೆ 'ಮಾಡು' ಎಂಬರ್ಥವನ್ನು ಹೇಳಿದ್ದಾರೆ.

## ರುದ್ರ ಸರ್ವೋತ್ತಮತ್ವ ಕೇವಲ ಅಸುರ ಮೋಹಕ್ಕಾಗಿ

**ಭಾವದೀಪಃ – 'क्वाप्यविद्यमानं लिङ्गमूलान्वेषणादिकमतथ्यम्' इति तत्वप्रदीपे । विष्ण्वादौ विद्यमानं रुद्रादिनिष्ठतयोच्यमानं स्वातन्त्र्यादिकं वितथ्यम् । आत्मानं मां चेति ।। कर्मप्रवचनीययुक्ते द्वितीया । 'आत्मानं प्रति प्रकाशं प्रसिद्धिं कुरु । मां च प्रति अप्रकाशम् अप्रसिद्धिं कुरु । आत्मप्रसिद्धिं ममाऽप्रसिद्धिं च कुरु' इत्यर्थः । भाष्ये इति वाराहवचनात् मोहार्थं कृतत्वावगमात् नेतरग्रन्थविरोधश्च इत्यन्वयः । 'शैवे च' इत्यादेः सङ्गत्य प्रतीतेराह – स्कान्देति ।। 'शिवादि' इत्यादिपदेन ब्रह्मादिः ।**

ತತ್ವಪ್ರದೀಪದಲ್ಲಿ 'ಅತಥ್ಯ'ಶಬ್ದಕ್ಕೆ ಎಲ್ಲಿಯೂ ಇಲ್ಲದ ಲಿಂಗಮೂಲದ ಅನ್ವೇಷಣಾದಿಗಳೆಂಬ ಅರ್ಥವನ್ನು ಹೇಳಿದ್ದಾರೆ. 'ವಿತಥ್ಯ'ಶಬ್ದಕ್ಕೆ ವಿಷ್ಣುವಿನಲ್ಲಿರುವ ಸ್ವಾತಂತ್ರ್ಯಾದಿಗಳನ್ನು ರುದ್ರಾದಿಗಳಲ್ಲಿ ಹೇಳುವಿಕೆ ಎಂದರ್ಥ. 'ಆತ್ಮಾನಂ ಮಾಂ ಚ' ಎಂಬಲ್ಲಿ 'ಕರ್ಮಪ್ರವಚನೀಯಯುಕ್ತೇ ದ್ವಿತೀಯಾ' ಎಂಬ ಸೂತ್ರದಿಂದ ದ್ವಿತೀಯಾವಿಭಕ್ತಿ ಬಂದಿದೆ. 'ಆತ್ಮಾನಂ ಪ್ರತಿ ಪ್ರಕಾಶಂ ಪ್ರಸಿದ್ಧಿಂ ಕುರು' (ನಿನ್ನನ್ನು ಪ್ರಸಿದ್ಧಿ ಮಾಡಿಕೋ) 'ಮಾಂ ಚ ಪ್ರತಿ ಅಪ್ರಸಿದ್ಧಿಂ ಕುರು' (ನನ್ನನ್ನು ಅಪ್ರಸಿದ್ಧನನ್ನಾಗಿ ಮಾಡು' ಎಂದರ್ಥ.) ಭಾಷ್ಯದಲ್ಲಿ 'ಇತಿ ವಾರಾಹವಚನಾತ್' ಎಂಬ ಪದಕ್ಕೆ 'ನ ಚೇತರಗ್ರಂಥವಿರೋಧಶ್ಚ' ಎಂಬಲ್ಲಿ ಆನ್ವಯ. ಅಂದರೆ, ಪಾಶುಪತಾದಿಶಾಸ್ತ್ರಗಳು ಮೋಹಕ್ಕಾಗಿ ಹೊರಟಿರುವುದರಿಂದ ಅವುಗಳ ವಿರೋಧವಿಲ್ಲವೆಂದು ತಿಳಿಯಬೇಕು. 'ಶೈವೇ ಚ' ಎಂಬ ಮುಂದಿನ ಭಾಷ್ಯಕ್ಕೆ ಸಂಗತಿಯು ಸ್ಪಷ್ಟವಾಗಿ ತಿಳಿಯದ ಕಾರಣ ''ಸ್ಕಾಂದೇ'' ಇತ್ಯಾದಿ ಟೀಕಾಪಂಕ್ತಿಯು ಹೊರಟಿದೆ. ''ಶಿವಾದಿ'' ಎಂಬಲ್ಲಿರುವ ಆದಿಪದದಿಂದ ಚತುರ್ಮುಖಾದಿಗಳನ್ನು ಇಟ್ಟುಕೊಳ್ಳಬೇಕು.

**ಭಾವದೀಪಃ – तद्विरोध इति ।। अत्र 'उग्र'पदेन रुद्रग्रहणे इति इहाप्यनुषङ्गः। ब्रह्मपुराणभ्रान्तिनिरासायाह – ब्राह्म इति ।। तेनाहमिति ब्रह्मोक्तिरितिदर्शितम् ।**

'ತದ್ವಿರೋಧಃ' = ಉಗ್ರಪದೇನ ರುದ್ರ-ಗ್ರಹಣೇ (ಉಗ್ರಪದದಿಂದ ರುದ್ರನನ್ನು ಸ್ವೀಕರಿಸಿದರೆ) ಎಂಬುದನ್ನು ಅಧ್ಯಾಹಾರ ಮಾಡಬೇಕು. 'ಬ್ರಾಹ್ಮ' - ಶಬ್ದಕ್ಕೆ ಬ್ರಹ್ಮಪುರಾಣ

ಎಂಬ ಭ್ರಾಂತಿಯನ್ನು ನಿರಾಸಮಾಡುವುದಕ್ಕಾಗಿ 'ಬ್ರಾಹ್ಮ' ಎಂಬ ಟೀಕೆಯು ಹೊರಟಿದೆ. ಆದ್ದರಿಂದ ಅಹಂ ಎಂಬುದು ಬ್ರಹ್ಮನ ಮಾತು ಎಂದು ತಿಳಿಸಿದಂತಾಯಿತು.

## ಶಿವಪಾರಮ್ಯದಲ್ಲಿ ಪ್ರಾಮಾಣ್ಯವಿಲ್ಲ

**ಭಾವದೀಪಃ** – एतेन 'शैवे' इत्यपि व्याख्यातम् । चोद्यनिरासप्रकारमाह – **तेषामिति** ।। तत्र शिवाद्युत्कर्षादावप्रामाण्यादिति भावः । तथेति व्याख्येयानुवादः – **वचनादिति** ।। भाष्ये वचनादित्यस्यानुवृत्तिः । **'उक्तम्'** इत्यस्य 'प्रत्युक्तम्' इत्यर्थः । मोहार्थत्वेनेति शेष इति दर्शितम् ।

ಆದ್ದರಿಂದಲೇ ಶೈವೇ ಎಂಬ ಹಿಂದಿನ ಭಾಷ್ಯದ ಮಾತನ್ನು ವ್ಯಾಖ್ಯಾನಿಸಿದಂತಾಯಿತು. ಶಂಕೆಯ ನಿರಾಸದ ಪ್ರಕಾರವನ್ನು 'तेषाम्' ಎಂಬ ಟೀಕೆಯು ವಿವರಿಸುತ್ತಿದೆ. ಪಾಶುಪತಾದಿಗಳಿಗೆ ಶಿವಾದಿಗಳ ಉತ್ಕರ್ಷದಲ್ಲಿ ಪ್ರಾಮಾಣ್ಯವಿಲ್ಲವೆಂದು ಅಭಿಪ್ರಾಯ. 'ತಥಾ'' ಎಂಬುದು ಭಾಷ್ಯದ ಮಾತು. 'वचनात्' ಎಂಬ ಪದದ ನಂತರ 'ಭಾಷ್ಯೇ' ಎಂಬುದನ್ನು ಅಧ್ಯಾಹಾರ ಮಾಡಬೇಕು. 'ಉಕ್ತಂ' ಎಂದರೆ ಪ್ರತ್ಯುಕ್ತಮ್ ಎಂದರ್ಥ. 'ಮೋಹಾರ್ಥತ್ವೇನ' ಎಂಬುದನ್ನು ಅಧ್ಯಾಹಾರ ಮಾಡಬೇಕು.

## 'ವಿಶ್ವಾಧಿಕೋ ರುದ್ರಃ' ಎಂಬದೂ ಕೂಡ ವಿಷ್ಣುಪದ

**ಭಾವದೀಪಃ** – ननु सूत्रं व्याचक्षाणस्य किं प्रसक्तानुप्रसक्तानुपयुक्तोक्त्या? इत्यतः सर्वस्य प्रकृतोपयोगमाह – **तस्मादिति** ।। पुराणादौ शिवाद्युत्कर्षोक्तेर्मोहार्थत्वात् 'विश्वाधिकः' इत्यादिश्रुतेर्विष्णुपरत्वादित्यर्थः। अयं च हेतुर्बाधकाभावे बोध्यः ।

ಸೂತ್ರವನ್ನಷ್ಟೇ ವ್ಯಾಖ್ಯಾನಿಸಬೇಕು. ಅಪ್ರಸಕ್ತವಾದದ್ದನ್ನೆಲ್ಲ ಹೇಳುತ್ತಿರುವುದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ತಸ್ಮಾತ್' ಎಂಬ ಟೀಕೆಯಿಂದ ಉತ್ತರಿಸಿದ್ದಾರೆ. ಪುರಾಣಾದಿಗಳಲ್ಲಿ ಶಿವಾದಿಗಳ ಉತ್ಕರ್ಷಯನ್ನು ಕೇವಲ ಮೋಹಕ್ಕೋಸ್ಕರ ಹೇಳಿರುತ್ತಾರೆ. ಆದ್ದರಿಂದ 'ವಿಶ್ವಾಧಿಕೋ ರುದ್ರಃ' ಎಂಬ ಶ್ರುತಿಯು ವಿಷ್ಣುಪರವೇ ಆಗಿದೆ. ಬಾಧಕವಿಲ್ಲದಿದ್ದಾಗ ಮಾತ್ರ ಈ ಅರ್ಥವನ್ನು ತಿಳಿಯಬೇಕು.

## ಅಧಿಕರಣದ ಉಪಸಂಹಾರ

**ಭಾವದೀಪಃ – ತಥಾಹೀತ್ಯಾದಿನೋಕ್ತಂ ಸಿದ್ಧಾನ್ತಪ್ರಮೇಯಮುನ್ಮೂಲಮಿತಿ ಭ್ರಮನಿರಾಸಾಯ 'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಇತಿ ಬ್ರಹ್ಮಶಬ್ದೇನ ಪೂರ್ಣಗುಣತ್ವೋಕ್ತೇರ್ನಾನುಭವ ಸಿದ್ಧಾಲ್ಪಗುಣಜೀವಾಭೇದ ಇತಿ ನ್ಯಾಯವಿವರಣಾರೂಢಂ ದರ್ಶಯನ್ ಅಧಿಕರಣಾರ್ಥಂ ಪ್ರಯೋಜನೋಕ್ತ್ಯಾ ಉಪಸಂಹರತಿ – ತದೇವಮಿತಿ ।।**

'ತಥಾಹಿ' ಎಂಬುದರಿಂದ ಪ್ರಾರಂಭಿಸಿ ಇಲ್ಲಿಯ ತನಕ ನಿರೂಪಿಸಿದ ಸಿದ್ಧಾಂತಪ್ರಮೇಯವು ಮೂಲದಲ್ಲಿ ಹೇಳಿಲ್ಲವೆಂಬ ಭ್ರಾಂತಿಯನ್ನು ಪರಿಹರಿಸಲು 'ತದೇವಮ್' ಇತ್ಯಾದಿ ಟೀಕೆಯು ಹೊರಟಿದೆ. 'ತದ್ವಿಜಿಜ್ಞಾಸಸ್ವ' 'ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವು ಗುಣಪೂರ್ಣತ್ವವನ್ನು ಹೇಳುತ್ತಿದೆ. ಅನುಭವದಿಂದ ಜೀವನು ಅಲ್ಪಗುಣನೆಂದು ಸಿದ್ಧನಾಗಿದ್ದಾನೆ. ಈ ಜೀವೇಶ್ವರರಿಗೆ ಅಭೇದವು ಕೂಡುವುದಿಲ್ಲ ಎಂಬ ನ್ಯಾಯವಿವರಣೆಯಲ್ಲಿ ಹೇಳಿದ್ದನ್ನೇ ನಾವು ಇಲ್ಲಿಯತನಕ ನಿರೂಪಿಸಿದ್ದೇವೆ ಎಂದು ತೋರಿಸುತ್ತಾ ಅಧಿಕರಣದ ತಾತ್ಪರ್ಯವನ್ನು ಮತ್ತು ಪ್ರಯೋಜನವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ.

## ಗುಣಪೂರ್ಣನಾದ ಮಹಾವಿಷ್ಣುವೇ ಜಿಜ್ಞಾಸ್ಯನು

**ಭಾವದೀಪಃ – ತಚ್ಛಬ್ದಾರ್ಥಂ ವ್ಯನಕ್ತಿ – ಬ್ರಹ್ಮಪದಶ್ರವಣಾದಿತಿ ।। ಏವಮ್ 'ಅಥ ಕಸ್ಮಾದುಚ್ಯತೇ' ಇತಿ ಶ್ರುತ್ಯುಕ್ತಪ್ರಕಾರೇಣ ಪೂರ್ಣತ್ವೋಕ್ತೇರಿತ್ಯನ್ವಯಃ । ಏತೇನ ನ್ಯಾಯವಿವರಣೇ ಬ್ರಹ್ಮಶಬ್ದೇನೇತ್ಯತ್ರ ಜಿಜ್ಞಾಸ್ಯೇ ಶ್ರುತೇನೇತಿ, 'ಪೂರ್ಣಗುಣತ್ವೋಕ್ತೇಃ' ಇತ್ಯತ್ರ ತಸ್ಯೇತ್ಯಪಿ ಯೋಜ್ಯಮಿತಿ ದರ್ಶಿತಮ್ ।**

ತತ್ ಶಬ್ದದ ಅರ್ಥವನ್ನು ಬ್ರಹ್ಮಪದಶ್ರವಣಾತ್ ಎಂಬುದರಿಂದ ನಿರೂಪಿಸಿದ್ದಾರೆ. ಇದರಂತೆ 'ಅಥ ಕಸ್ಮಾದುಚ್ಯತೇ ಇತಿ ಶ್ರುತ್ಯುಕ್ತಪ್ರಕಾರೇಣ ಪೂರ್ಣತ್ವೋಕ್ತೇಃ' ಎಂದು ಅನ್ವಯ. ಆದ್ದರಿಂದ ನ್ಯಾಯವಿವರಣದಲ್ಲಿ 'ಬ್ರಹ್ಮಶಬ್ದೇನ' ಎಂಬಲ್ಲಿ ಮತ್ತು 'ಜಿಜ್ಞಾಸ್ಯೇ ಶ್ರುತೇನೇತಿ ಪೂರ್ಣಗುಣತ್ವೇನ' ಎಂಬಲ್ಲಿ 'ತಸ್ಯ' ಎಂಬ ಪದವನ್ನು ಯೋಜನ ಮಾಡಿಕೊಳ್ಳಬೇಕೆಂದು ತಿಳಿಯಬೇಕು.

ತತ್ತ್ವಪ್ರಕಾಶಿಕೆಯನ್ನು ವ್ಯಾಖ್ಯಾನಿಸಲು ಶ್ರೀವ್ಯಾಸತೀರ್ಥರೇ ಸಮರ್ಥರು

**ಭಾವದೀಪಃ – ಸನ್ದಿಗ್ಧತ್ವೇನೇತಿ ।।** ಬ್ರಹ್ಮಶಬ್ದಾದಿನಾ ಆಪಾತಪ್ರತೀತಸ್ಯ ಸಗುಣ ನಿರ್ಗುಣಾಲ್ಪಗುಣತ್ವಾದಿನಾ ವಿಪ್ರತಿಪತ್ತ್ಯಾ ಸನ್ದಿಗ್ಧತ್ವೇನೇತ್ಯರ್ಥಃ । ಜಿಜ್ಞಾಸಾ ಶ್ರವಣಾದಿರೂಪಾ । ಶಾಸ್ತ್ರಂ = ನ್ಯಾಯಗ್ರಥನಾತ್ಮಕಮ್ ।

ಟೀಕಾತಾತ್ಪರ್ಯವಿವೃತೌ ವ್ಯಾಸತೀರ್ಥಾದಯಃ ಕ್ಷಮಾಃ ।
ವಯಂ ತು ತತ್ಕೃತವ್ಯಾಖ್ಯಾಲೇಶಭಾ(ಜೋ)ವಂ ವದಾಮಹೇ ।।

**।। ಇತಿ ಶ್ರೀಮದ್ರಾಘವೇನ್ದ್ರತೀರ್ಥವಿರಚಿತತತ್ತ್ವಪ್ರಕಾಶಿಕಾಭಾವದೀಪೇ ಜಿಜ್ಞಾಸಾಧಿಕರಣಮ್ ।।**

'ಸಂದಿಗ್ಧತ್ವೇನ' ಎಂಬುದಕ್ಕೆ ''ಬ್ರಹ್ಮಶಬ್ದದಿಂದ ಆಪಾತತಃ ಸಗುಣನೋ, ನಿರ್ಗುಣನೋ ಅಲ್ಪಗುಣನೋ ಇತ್ಯಾದಿಯಾಗಿ ವಿಪ್ರತಿಪತ್ತಿಗಳು ಇರುವುದರಿಂದ ಸಂದಿಗ್ಧವಾಗಿದೆ'' ಎಂದರ್ಥ. 'ಜಿಜ್ಞಾಸಾ' ಎಂದರೆ ಶ್ರವಣಾದಿರೂಪವಾದ ಜಿಜ್ಞಾಸೆ' ಎಂದರ್ಥ. ನ್ಯಾಯಗ್ರಥನಾತ್ಮಕವಾದದ್ದು ಶಾಸ್ತ್ರವೆನಿಸಿದೆ.

ಟೀಕಾತಾತ್ಪರ್ಯವಿವೃತೌ ವ್ಯಾಸತೀರ್ಥಾದಯಃ ಕ್ಷಮಾಃ।
ವಯಂ ತು ತತ್ಕೃತವ್ಯಾಖ್ಯಾಲೇಶಭಾ(ಜೋ)ವಂ ವದಾಮಹೇ ॥

ಟೀಕೆಯು ಅತ್ಯಂತಗಂಭೀರ. ಇದರ ತಾತ್ಪರ್ಯವನ್ನು ವಿವರಿಸಲು ಜ್ಞಾನಿಗಳಾದ ವ್ಯಾಸತೀರ್ಥಾದಿಗಳೇ ಸಮರ್ಥರು. ನಾವು ಸಮರ್ಥರಲ್ಲ. ಆದರೂ ವ್ಯಾಸತೀರ್ಥಾದಿಗಳ ವ್ಯಾಖ್ಯಾನದ ತುಣುಕಿನ ಅಭಿಪ್ರಾಯವನ್ನಷ್ಟೇ ಇಲ್ಲಿ ನಿರೂಪಿಸಿದ್ದೇವೆ.

ಶ್ರೀರಾಘವೇಂದ್ರತೀರ್ಥರಿಂದ ವಿರಚಿತವಾದ ತತ್ತ್ವಪ್ರಕಾಶಿಕಾವ್ಯಾಖ್ಯಾನವೆಂಬ
ಭಾವದೀಪಟಪ್ಪಣಿಯ ಕನ್ನಡಾನುವಾದದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತವಾಯಿತು.

## ಜಿಜ್ಞಾಸಾಧಿಕರಣದ ಸಮಾಪ್ತಿ

ವಿವರಣೆ - 'ವಿರೋಧ' ಎಂಬ ಪದದ ನಂತರ 'ಅತ್ರ ರುದ್ರಗ್ರಹಣೇ' ಎಂಬ ಪದವನ್ನು ಅನುವೃತ್ತಿ ಮಾಡಬೇಕು. ಆವಾಗ ಶ್ರುತಿಯಲ್ಲಿ ರುದ್ರನನ್ನು ಸ್ವೀಕರಿಸಿದರೆ ಪಾಶುಪತಾದಿಶಾಸ್ತ್ರಗಳ ವಿರೋಧ ಬರುತ್ತದೆ ಎಂದು ಅರ್ಥವಾಗುತ್ತದೆ. ಭಾಷ್ಯದಲ್ಲಿರುವ

'ಏಷಃ' ಎಂಬ ಪದಕ್ಕೆ 'ಏನಮ್' ಎಂದರ್ಥ. 'ಮೋಹ' ಶಬ್ದಕ್ಕೆ ಮಿಥ್ಯಾಜ್ಞಾನವೆಂದರ್ಥ; ಹೊರತು ಮೋಹಕ ಎಂಬರ್ಥ ತಿಳಿಯುವುದಿಲ್ಲ. ಆದಕ್ಕೋಸ್ಕರ 'ಮುಹ್ಯತೇ' ಎಂಬ ವಾಕ್ಯವು ಹೊರಟಿದೆ. 'ನಟನಂ ವಂಚನಂ ವಾ' ಇರುವಂತಹ ಆಕಾರವನ್ನು ಮುಚ್ಚಿ ಇಲ್ಲದ ಆಕಾರವನ್ನು ತೋರಿಸುವಿಕೆಯೇ ನಟನ ಎನ್ನಿಸುತ್ತದೆ. ಇಲ್ಲದ್ದನ್ನು ಹೇಳುವಿಕೆಯು ವಂಚನೆ ಎನ್ನಿಸುತ್ತದೆ. ಹೀಗೆ ಎರಡರಲ್ಲಿರುವ ಕ್ರಿಯೆಯ ವೈಲಕ್ಷಣ್ಯವನ್ನು ತಿಳಿಯಬೇಕು. ದಧೀಚ್ಯಾದಿ ಋಷಿಗಳಿಂದ ಎಲ್ಲಿಯೂ ಇಲ್ಲದ ಲಿಂಗಮೂಲಾನ್ವೇಷಣದ ಹೇಳುವಿಕೆಯು 'ಅತಥ್ಯ' ಎನ್ನಿಸುತ್ತದೆ. ''ವಿಷ್ಣುವಿನಲ್ಲಿರುವ ಸ್ವಾತಂತ್ರ್ಯಾದಿಗಳನ್ನು ರುದ್ರಾದಿಗಳಲ್ಲಿ ಹೇಳುವಿಕೆ''ಯು ವಿತಥ್ಯ ಎನ್ನಿಸುತ್ತದೆ.

'ಆತ್ಮಾನಂ ಮಾಂ' ಎಂಬಲ್ಲಿರುವ ಎರಡೂ ಪದಗಳಿಗೆ ಕರ್ಮಾರ್ಥದಲ್ಲಿ ದ್ವಿತೀಯಾವಿಭಕ್ತಿಯನ್ನು ಹೇಳಿದರೆ 'ಪ್ರಕಾಶವಂತಂ' ಎಂದಾಗಬೇಕು. 'ಪ್ರಕಾಶಂ' ಎಂದು ಹೇಳಿದ್ದು ತಪ್ಪಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ಆತ್ಮಾನಂ ಮಾಂ ಚ ಪ್ರತಿ' ಎಂದು ಉತ್ತರಿಸಿದ್ದಾರೆ. 'ಅಭಿತಃ ಪರಿತಃ ಸಮಯಾನಿಕಷಾ ಹ ಪ್ರತಿಯೋಗೇಷು' ಎಂಬ ಸೂತ್ರದಂತೆ ಕರ್ಮಪ್ರವಚನೀಯಸಂಜ್ಞೆಯಿರುವ ಶಬ್ದಕ್ಕೆ ದ್ವಿತೀಯಾವಿಭಕ್ತಿಯೇ ಬರುತ್ತದೆ.

ಪ್ರಕಾಶಶಬ್ದಕ್ಕೆ ಪ್ರಸಿದ್ಧಿಯೆಂದು ಅರ್ಥೈಸಿದ್ದರಿಂದ ಅಪ್ರಕಾಶಶಬ್ದಕ್ಕೆ ಅಪ್ರಸಿದ್ಧಿ ಎಂದು ವ್ಯಾಖ್ಯಾನಿಸಬೇಕು. ಅಂದರೆ 'ನಿನ್ನನ್ನು ಪ್ರಸಿದ್ಧಿಗೊಳಿಸು; ನನ್ನನ್ನು ಅಪ್ರಸಿದ್ಧನನ್ನಾಗಿ ಮಾಡು' ಎಂದರ್ಥ.

'ಶಿವಾದಿವಿಷಯತ್ವಾತ್' - ಸ್ಕಾಂದಪುರಾಣವನ್ನು ಶಿವವಿಷಯಕವೆಂದು ಹೇಳಿದ್ದರಿಂದ, ಶೈವೇ ಎಂಬ ಪದಕ್ಕೆ 'ಶಿವವಿಷಯಕ'ವೆಂದು ವ್ಯಾಖ್ಯಾನಿಸಿದಂತಾಯಿತು. ಸ್ಕಾಂದ-ಪುರಾಣಾದಿಗಳನ್ನು ವೇದವ್ಯಾಸದೇವರು ರಚಿಸಿದ್ದರಿಂದ ಮೋಹಕ್ಕೋಸ್ಕರ ರುದ್ರದೇವರಿಂದ ರಚಿಸಲ್ಪಟ್ಟ ಪಾಶುಪತಾದಿಶಾಸ್ತ್ರಗಳಿಗಿಂತ ವಿಲಕ್ಷಣವಾಗಿವೆ ಎಂದು ತಿಳಿಯುತ್ತದೆ. 'ಕರಣೈಃ' ಎಂಬ ಪದಕ್ಕೆ ಕ್ರೀಡಾಸಾಧನಗಳಿಂದ ಎಂದರ್ಥ. 'ಸ್ವವಿರೋಧೇನ'- ರುದ್ರದೇವರಿಂದಲೇ ಪ್ರತಿಪಾದಿಸಲ್ಪಟ್ಟ ವಿಷ್ಣುಸರ್ವೋತ್ತಮತ್ವದ ವಿರೋಧ ಬರುವುದರಿಂದ. ಒಂದು ವೇಳೆ ರುದ್ರಾದಿಗಳೇ ಉತ್ತಮರೆಂದು ಹೇಳಿದರೆ ವಿಷ್ಣುಸರ್ವೋತ್ತಮತ್ವದಿಂದ ವಿರೋಧ ಬರುತ್ತದೆ. 'ಅಸಾಧಾರಣ್ಯೇನ' - ಶೈವಾದ್ಯಾಗಮಗಳಲ್ಲಿ ರುದ್ರದೇವರೇ ಮುಖ್ಯವಾಗಿ ಪ್ರತಿಪಾದ್ಯರಾದ್ದರಿಂದ. ರುದ್ರಾದಿಗಳಿಗೆ ಸರ್ವೋತ್ತಮತ್ವವನ್ನು ಅಸಾಧಾರಣ್ಯದಿಂದ

ಪ್ರತಿಪಾದಿಸುವುದಕ್ಕಾಗಿ ಇಲ್ಲದ್ದನ್ನೂ ಸಹ ಹೇಳಬೇಕು ಎಂದು ಅಭಿಪ್ರಾಯ. 'ತಥಾ' ಎಂಬ ಶಬ್ದವು ಅನುವಾದವಾಗಿದೆ. ಭಾಷ್ಯದಲ್ಲಿರುವ 'ಉಕ್ತಮ್' ಎಂಬ ಶಬ್ದಕ್ಕೆ ಪ್ರತ್ಯುಕ್ತಮ್ ಎಂದು ವ್ಯಾಖ್ಯಾನಿಸಿದ್ದಾರೆ. ''ಉಚ್ಯತೇ''- ವೈಷ್ಣವಗ್ರಂಥಗಳಲ್ಲಿಯೂ ಸಹ ವಿಷ್ಣುವು ರುದ್ರನನ್ನು ಕುರಿತು ಮಾಡುವ ಅನೇಕ ಸ್ತೋತ್ರಗಳಿವೆಯಲ್ಲವೇ?

''ಆರಾಧ್ಯ ದೇವದೇವೇಶಂ ಶಂಕರಂ ಲೋಕಶಂಕರಮ್ ।
ತಪಸಾ ತೋಷಯಿತ್ವಾ ತಂ ಕೈಲಾಸಗಿರಿವಾಸಿನಮ್ ।
ರುಕ್ಮಿಣ್ಯಾಸ್ತನಯಂ ಲೇಭೇ ದಗ್ಧಂ ಕಾಮಂ ಪುನರ್ಹರಿಃ ॥''

''ಕೃಷ್ಣಪರಮಾತ್ಮನು ದೇವತೆಗಳಿಗೂ ದೇವತೆಯಾದ ಲೋಕಕ್ಕೆ ಸುಖವನ್ನುಂಟುಮಾಡುವ, ಕೈಲಾಸಪರ್ವತದಲ್ಲಿ ವಾಸಿಸುವ ಶಂಕರನನ್ನು ಆರಾಧಿಸಿ, ತಪಸ್ಸಿನಿಂದ ಸಂತೋಷಪಡಿಸಿ, ರುಕ್ಮಿಣಿಯಿಂದ ಭಸ್ಮೀಭೂತನಾದ ಕಾಮನನ್ನು ಮಗನನ್ನಾಗಿ ಪಡೆದನು'' ಎಂದು.

''ಬ್ರಹ್ಮಶಬ್ದಶ್ಚ ವಿಷ್ಣೋವೇವ' ಎಂದು ಪ್ರಾರಂಭಿಸಿದ ವಿಷಯವನ್ನು 'ತಸ್ಮಾತ್' ಎಂದು ಉಪಸಂಹಾರ ಮಾಡುತ್ತಿದ್ದಾರೆ. ಅಧಿಕರಣಪ್ರಮೇಯವನ್ನು 'ತದೇವಂ' ಎಂಬ ಗ್ರಂಥದಿಂದ ಉಪಸಂಹಾರ ಮಾಡುತ್ತಿದ್ದಾರೆ. ಸಿದ್ಧಾಂತದ ಫಲವನ್ನು 'ಅತಃ ಶಾಸ್ತ್ರಮಾರಂಭಣೀಯಮೇವ' ಎಂದು ಹೇಳಿದ್ದಾರೆ.

ತಸ್ಮಾತ್‌ಶಾಸ್ತ್ರೇಣ ಜಿಜ್ಞಾಸ್ಯಮ್ ಅಸ್ಮದೀಯಂ ಗುಣಾರ್ಣವಮ್ ।
ವಾಸುದೇವಾಖ್ಯಮದ್ವಂದ್ವಮ್ ಪರಂಬ್ರಹ್ಮಾಖಿಲೋತ್ತಮಮಮ್ ॥

ಇಲ್ಲಿಯ ತನಕ ಸಮರ್ಥಿಸಿದ ವಿಚಾರದಿಂದ ಸರ್ವೋತ್ತಮನೂ, ಅದ್ವಿತೀಯನೂ, ಪರಬ್ರಹ್ಮನೂ ಆಗಿರುವ, ಗುಣಪರಿಪೂರ್ಣನಾದ, ನಮ್ಮ ಪ್ರಿಯತಮನಾದ ವಾಸುದೇವನ ಬಗ್ಗೆ ಜಿಜ್ಞಾಸೆ ಮಾಡಬೇಕು.

॥ ಶ್ರೀಮದ್ಭೇಶಾರ್ಪಣಮಸ್ತು ॥

ಶ್ರೀವೇದವ್ಯಾಸಾಯ ನಮಃ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ

ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ
ಶ್ರೀಗುರುಭ್ಯೋ ನಮಃ

# ಬ್ರಹ್ಮಸೂತ್ರ

## ಜನ್ಮಾಧಿಕರಣ

**ಬ್ರಹ್ಮಸೂತ್ರಮ್ – ।। ಜನ್ಮಾದ್ಯಸ್ಯ ಯತಃ ।।೧-೧-೨।।**

ಸೂತ್ರಾರ್ಥ - ಪ್ರತ್ಯಕ್ಷಸಿದ್ಧವಾದ ಸಮಸ್ತಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳು ಯಾರಿಂದ ಉಂಟಾಗುತ್ತವೋ ಅವನೇ ಬ್ರಹ್ಮನಾಗಿದ್ದಾನೆ.

ಅಸ್ಯ = ಪ್ರಕೃತವಾದ ಜೀವಜಡಾತ್ಮಕವಾದ ಪ್ರಪಂಚಕ್ಕೆ, ಯತಃ = ಯಾರಿಂದ, ಜನ್ಮಾದಿ = ಸೃಷ್ಟ್ಯಾದ್ಯಷ್ಟಕಗಳು, ಆಗುತ್ತವೆಂದು ಶ್ರುತಿಸಿದ್ಧವಾಗಿದೆಯೋ ಅವನೇ ಜಿಜ್ಞಾಸ್ಯ ಬ್ರಹ್ಮ, ಬೇರೆಯವರಲ್ಲ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಜನ್ಮಾಧಿಕರಣವು ಸಮಾಪ್ತವಾಯಿತು ।।

* * * * * *

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

# ಬ್ರಹ್ಮಸೂತ್ರಭಾಷ್ಯ

## ಜಿಜ್ಞಾಸ್ಯಬ್ರಹ್ಮನ ಲಕ್ಷಣ

**ಬ್ರಹ್ಮಸೂತ್ರಭಾಷ್ಯಮ್ – (೧) ಬ್ರಹ್ಮಣೋ ಲಕ್ಷಣಮಾಹ–**

**।। ಜನ್ಮಾದ್ಯಸ್ಯ ಯತಃ ।। ೨ ।।**

**ಸೃಷ್ಟಿಸ್ಥಿತಿಸಂಹಾರನಿಯಮನಜ್ಞಾನಾಜ್ಞಾನಬನ್ಧಮೋಕ್ಷಾ ಯತಃ ।**

(೧) ಬ್ರಹ್ಮನ ಲಕ್ಷಣವನ್ನು ಸೂತ್ರಕಾರರು 'ಜನ್ಮಾದ್ಯಸ್ಯ ಯತಃ' ಎಂಬುದಾಗಿ ಹೇಳುತ್ತಿದ್ದಾರೆ.

'ಜಗತ್ತಿನ ಉತ್ಪತ್ತಿ, ಪಾಲನೆ, ನಾಶ, ಪ್ರೇರಣೆ, ಜ್ಞಾನ, ಅಜ್ಞಾನ, ಸಂಸಾರಬಂಧನ, ಸ್ವರೂಪಾನಂದಾವಿರ್ಭಾವಗಳು ಯಾರಿಂದ ಆಗುತ್ತವೋ' (ಅವನೇ ಬ್ರಹ್ಮನಾಗಿದ್ದಾನೆ.)

ಪ್ರತಿಪದಾರ್ಥ -- ಜನ್ಮಾದ್ಯಧಿಕರಣ ಪ್ರತಿಪಾದ್ಯವಾದ ಪ್ರಮೇಯವನ್ನು ಬ್ರಹ್ಮಣಃ ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ. ಬ್ರಹ್ಮಣಃ = ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮನ, ಲಕ್ಷಣಂ = ಲಕ್ಷಣ ಸಮುದಾಯವನ್ನು, ಆಹ = ಸೂತ್ರಕಾರರು 'ಜನ್ಮಾದ್ಯಸ್ಯ ಯತಃ ಎಂಬುದಾಗಿ ಹೇಳುತ್ತಿದ್ದಾರೆ.

ಸೃಷ್ಟಿ = ಅನೇಕವಿಧವಾದ ಜಗತ್ತಿನ ಉತ್ಪತ್ತಿಯು, ಸ್ಥಿತಿ = ರಕ್ಷಣೆಯು, ಸಂಹಾರ = ನಾಲ್ಕುವಿಧನಾಶವು, ನಿಯಮನ = ಪ್ರೇರಣೆಯು, ಜ್ಞಾನ = ಜ್ಞಾನವು, ಅಜ್ಞಾನ = ಅಜ್ಞಾನವು, ಬಂಧ = ಸಂಸಾರಬಂಧನವು, ಮೋಕ್ಷ = ಸ್ವರೂಪಾನಂದಾವಿರ್ಭಾವವು, ಯತಃ = ಯಾರಿಂದ, ಭವಂತಿ = ಆಗುತ್ತವೋ, (ತತ್ = ಅವನೇ ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮನು)

## ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕಾ

## ಜನ್ಮಾದ್ಯಧಿಕರಣಕ್ಕೆ ಸಂಗತಿವಿಚಾರ

**तत्वप्रकाशिका – अत्र श्रुत्यक्तब्रह्मणो विष्णुत्वसमर्थनादस्ति शास्त्रसङ्गतिः । श्रुत्यादिसङ्गतिस्तु 'तद् विजिज्ञासस्व तद् ब्रह्म' (तै-३-१) इति श्रुत्युक्तं ब्रह्म जिज्ञास्यमित्युक्तं तस्य च विष्णुत्वं यावन्न साध्यते तावत् तस्य गुणपूर्त्यसिद्धया भेदकाभावेन जिज्ञास्यता न सम्भवतीति ।**

ಈ ಜನ್ಮಾದ್ಯಧಿಕರಣದಲ್ಲಿ ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮನಿಗೆ ವಿಷ್ಣುತ್ವವನ್ನು ಸಮರ್ಥಿಸುತ್ತಿರುವುದರಿಂದ ಶಾಸ್ತ್ರಸಂಗತಿಯು ಇರುತ್ತದೆ.

'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮನು ವಿಚಾರಕ್ಕೆ ಅರ್ಹನಾಗಿದ್ದಾನೆಂದು ಹಿಂದಿನ ಅಧಿಕರಣದಲ್ಲಿ ಹೇಳಿದ್ದಾಯಿತು. ಆದರೆ ಬ್ರಹ್ಮಪದದಿಂದ

ವಿಷ್ಣುವೇ ಪ್ರತಿಪಾದ್ಯನೆಂದು ಎಲ್ಲಿಯ ತನಕ ಸಮರ್ಥಿಸುವುದಿಲ್ಲವೋ ಅಲ್ಲಿಯ ತನಕ ಬ್ರಹ್ಮನು ಗುಣಪೂರ್ಣನೆಂದು ನಿಶ್ಚಯವಾಗುವುದಿಲ್ಲ. ಇದು ನಿಶ್ಚಯವಾಗದ ಹೊರತು ಭೇದವನ್ನು ತಿಳಿಸುವ ಧರ್ಮವಿಲ್ಲದ ಪ್ರಯುಕ್ತ ಜೀವಭಿನ್ನನೆಂದು ನಿಶ್ಚಯವಾಗುವುದಿಲ್ಲ. ಆದ್ದರಿಂದ ಬ್ರಹ್ಮನಿಗೆ ಜಿಜ್ಞಾಸ್ಯತ್ವವೇ ಕೂಡುವುದಿಲ್ಲ. ಈ ಅಧಿಕರಣದಲ್ಲಿ ಬ್ರಹ್ಮನಿಗೆ ಗುಣಪೂರ್ಣತ್ವವನ್ನು ಸಮರ್ಥಿಸುವುದರಿಂದ ಶ್ರುತಿಸಂಗತಿ ಅಧಿಕರಣ ಸಂಗತಿಗಳು ಇವೆಯೆಂದು ತಿಳಿಯಬೇಕು.

## ಸಂಶಯ - ಪೂರ್ವಪಕ್ಷ

**तत्वप्रकाशिका – तच्छ्रुत्युक्तं ब्रह्माऽत्र विषयः । 'किं विष्णुरुत जीवः?' इति सन्देहः । उभयत्रापि ब्रह्मपदप्रयोग एव सन्देहबीजम् ।**

ತೈತ್ತಿರೀಯಶ್ರುತಿಯಲ್ಲಿ ಪ್ರತಿಪಾದ್ಯನಾದ ಬ್ರಹ್ಮನೇ ಈ ಅಧಿಕರಣಕ್ಕೆ ವಿಷಯ. ಬ್ರಹ್ಮಪದದ ಅರ್ಥ ವಿಷ್ಣುವೋ ಅಥವಾ ಜೀವನೋ ? ಎಂಬುದು ಸಂದೇಹ. ಎರಡೂ ಕಡೆಯಲ್ಲಿ ಬ್ರಹ್ಮಪದ ಪ್ರಯೋಗವಿರುವುದೇ ಸಂದೇಹಬೀಜ.

**तत्वप्रकाशिका – यद्यपि पूर्वाधिकरणे विष्णावेव ब्रह्मशब्दो मुख्य इत्युक्तम् तथापि स्वकृतव्याख्यानस्थापनाय भाष्यकारैरेवोक्तत्वाद् भवति सन्देहः ।**

ವಸ್ತುತಃ ಹಿಂದಿನ ಅಧಿಕರಣದಲ್ಲಿ ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿದೆಯೆಂದು ಹೇಳಿದ್ದಾಯಿತು. ಆದರೆ ಭಾಷ್ಯಕಾರರಷ್ಟೇ ತಮ್ಮ ವ್ಯಾಖ್ಯಾನ ಸಮರ್ಥಿಸಲು ಬ್ರಹ್ಮಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದರು. ಸೂತ್ರಕಾರರು ಸಮರ್ಥಿಸಿರಲಿಲ್ಲ. ಆದ್ದರಿಂದ ಸೂತ್ರಕಾರರಿಗೆ ಸಮ್ಮತವಿದೆಯೋ ಇಲ್ಲವೋ ? ಎಂಬ ಸಂದೇಹವು ಬರುತ್ತದೆ.

**तत्वप्रकाशिका – 'जीव एवेदं ब्रह्म' इति पूर्वः पक्षः । 'बृहजातिजीव....' इति ब्रह्मशब्दस्य जीवे रूढत्वात् । यद्यपि ब्रह्मशब्दो विष्णौ प्रवर्तते तथापि तस्य तत्र योगेनैव प्रवृत्तेः । 'रुढियोगयोश्च रुढेरेव बलवत्त्वात्' जीववाचित्वमेव मुख्यम् । न च रुढिपरित्यागेन योगाङ्गीकारो युक्तः । 'बाधकं विना मुख्यार्थत्यागायोगात्' । न चात्र तादृशं बाधकमस्ति । तस्मात् (जात्यादेर्मुख्यतोऽ-**

**जिज्ञास्यत्वात् देहात्मविवेकस्यावश्यकत्वात्)[1] जीव एवेदं ब्रह्म । तस्य च स्वप्रकाशत्वेनासन्दिग्धत्वादजिज्ञास्यतेति ।**

ಪೂರ್ವಪಕ್ಷ - 'तद् ब्रह्म' ಎಂಬ ಶ್ರುತ್ಯುಕ್ತಬ್ರಹ್ಮನು ಜೀವನೇ ಆಗಿದ್ದಾನೆ. ಏಕೆಂದರೆ 'ಬೃಹಜ್ಜಾತಿಜೀವ.....' ಎಂಬ ಕೋಶದಂತೆ ಬ್ರಹ್ಮಶಬ್ದವು ಜೀವನಲ್ಲಿ ರೂಢವಾಗಿದೆ. ವಸ್ತುತಃ ವಿಷ್ಣುವಿನಲ್ಲೇ ಬ್ರಹ್ಮಶಬ್ದವಿದ್ದರೂ ಯೋಗದಿಂದಷ್ಟೇ ಇದೆ ರೂಢಿಯಿಂದ ಇರುವುದಿಲ್ಲ. ರೂಢಿ ಮತ್ತು ಯೋಗಗಳಲ್ಲಿ ರೂಢಿಯೇ ಪ್ರಬಲವಾದ್ದರಿಂದ ಬ್ರಹ್ಮಶಬ್ದದಿಂದ ಜೀವನೇ ಮುಖ್ಯಪ್ರತಿಪಾದ್ಯನಾಗುತ್ತಾನೆ. ರೂಢಿಯನ್ನು ಪರಿತ್ಯಾಗ ಮಾಡಿ ಯೋಗವನ್ನು ಅಂಗೀಕರಿಸುವುದು ಸಮಂಜಸವಲ್ಲ. ಏಕೆಂದರೆ ಬಾಧಕಪ್ರಮಾಣವಿಲ್ಲದೆ ಮುಖ್ಯಾರ್ಥವೆನಿಸಿದ ರೂಢಿಯನ್ನು ಪರಿತ್ಯಾಗ ಮಾಡಬಾರದು. ಪ್ರಕೃತ ಅಂತಹ ಬಾಧಕವೇನೂ ಇರುವುದಿಲ್ಲ. ಆದ್ದರಿಂದ ಜೀವನೇ ಬ್ರಹ್ಮಶಬ್ದಪ್ರತಿಪಾದ್ಯನು. ಅಂತಹ ಜೀವನು ಸ್ವಪ್ರಕಾಶನಾದ್ದರಿಂದ ನಿಶ್ಚಿತನಾಗಿದ್ದಾನೆ. ನಿಶ್ಚಿತನಾದ ಜೀವನ ವಿಷಯದಲ್ಲಿ ವಿಚಾರವು ಕೂಡುವುದಿಲ್ಲ.

## ಸಿದ್ಧಾಂತ

**तत्वप्रकाशिका – अथ सिद्धान्तयत् सूत्रमवतारयति – ब्रह्मण इति[2] ।। 'निर्बाधरूढिबलात् जीव एवेदं ब्रह्मेति प्राप्ते तन्निराकर्तुं जीवग्रहणे बाधकं श्रुत्युक्तं जिज्ञास्यब्रह्मणो लक्षणमाह सूत्रकारः' इत्यर्थः ।**

ಈ ಪೂರ್ವಪಕ್ಷವನ್ನು ನಿರಾಕರಿಸುವ ಸಿದ್ಧಾಂತವನ್ನು ತೋರಿಸುವುದಕ್ಕಾಗಿ ಸೂತ್ರಕ್ಕೆ ಭಾಷ್ಯಕಾರರು ಅವತಾರಿಕೆಯನ್ನು ನೀಡುತ್ತಿದ್ದಾರೆ – 'ब्रह्मणः' ಎಂಬುದಾಗಿ. 'ಬಾಧಕವಿಲ್ಲದ

(1) ಈ ವಾಕ್ಯ ಪ್ರಕ್ಷಿಪ್ತವೆಂದು ಭಾವದೀಪದಲ್ಲಿ ಸಮರ್ಥಿಸಿದ್ದಾರೆ.

(೨) 'ब्रह्मणो लक्षणमाह' इति वदन् भाष्यकारः पूर्वाधिकरणोक्तसिद्धान्तसमर्थनार्थं तत्रैव स्वभाष्ये प्रपञ्चितमखिलमनुपमृद्यैव 'लक्षणप्रमाणाभ्यां वस्तुसिद्धिः' इति वचनात् तयोरभावात् कथं तस्य पूर्वाधिकरणोक्तजिज्ञासा इत्यभ्यधिकशङ्कां परिहर्तुं क्रमेण जन्मादिकारणत्वाख्यलक्षणं तद्वत्त्वे सच्छास्त्राख्यप्रमाणं च समर्थयितुमुत्तराधिकरणद्वय-मित्यपि सङ्गतिं सूचितवान् । अतो न ग्रन्थद्वयस्यापि वैयर्थ्यमिति ज्ञेयम् । (गुर्वर्थदीपिका)

ರೂಢಿಯ ಬಲದಿಂದ ಜೀವನೇ ಬ್ರಹ್ಮಶಬ್ದಪ್ರತಿಪಾದ್ಯನು' ಎಂಬ ಪೂರ್ವಪಕ್ಷವನ್ನು ನಿರಾಕರಿಸಲು ಜೀವನ ವಿಷಯದಲ್ಲಿ ಬಾಧಕವಾಗಿರುವ ಶ್ರುತಿಪ್ರತಿಪಾದ್ಯನಾದ ಜಿಜ್ಞಾಸ್ಯನಾದ ಬ್ರಹ್ಮನ ಲಕ್ಷಣವನ್ನು ಸೂತ್ರಕಾರರು ಹೇಳುತ್ತಿದ್ದಾರೆಂದು 'ಬ್ರಹ್ಮಣೋ ಲಕ್ಷಣಮಾಹ' ಎಂಬ ಮಾತಿಗೆ ಅರ್ಥ.

**तत्वप्रकाशिका – अस्य = जगतो जन्म । 'आदिपदोक्ते स्थितिसंहृती यतः, तद् ब्रह्म' इत्यादिप्रतीतिनिरासाय सूत्रं यथावद् व्याचष्टे – सृष्टीति ।।**

ಸೂತ್ರದಲ್ಲಿರುವ 'ಅಸ್ಯ' ಎಂಬ ಪದಕ್ಕೆ 'ಜಗತ್ತಿನ' ಎಂದರ್ಥ. 'ಜನ್' ಎಂಬ ಪದಕ್ಕೆ ಉತ್ಪತ್ತಿ ಎಂದರ್ಥ. ಆದಿ'ಪದದಿಂದ 'ಸ್ಥಿತಿ ಮತ್ತು ಸಂಹಾರಗಳೆರಡನ್ನೇ ಇಟ್ಟುಕೊಂಡಾಗ ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳು ಯಾರಿಂದ ಆಗುತ್ತವೋ ಅವನೇ ಬ್ರಹ್ಮನೆಂಬ ತಪ್ಪು ಅರ್ಥವು ತೋರುತ್ತದೆ. ಇದನ್ನು ನಿರಾಕರಿಸುವುದಕ್ಕಾಗಿ ಸೂತ್ರದ ಯಥಾರ್ಥವ್ಯಾಖ್ಯಾನವನ್ನು 'ಸೃಷ್ಟಿ' ಇತ್ಯಾದಿ ಭಾಷ್ಯವು ಮಾಡುತ್ತಿದೆ.

**तत्वप्रकाशिका – सृष्ट्याद्यष्टकम् अस्य = जगतो यतो भवति, तदेव जिज्ञास्यं ब्रह्मोच्यते । तल्लक्षणं च विष्णावेव सम्भवति, न जीवे । अतो ब्रह्मशब्दस्य जीवे रुढत्वेऽपि, बाधकसद्भावात् 'तद् ब्रह्म' इति श्रुत्युक्तं ब्रह्म विष्णुरेवेति युक्तैव प्रागुक्तजिज्ञासेत्यर्थः ।**[1]

(१) भावरत्नकोशः - 'जन्माद्यस्य यतः' इत्येकं सूत्रं एकमधिकरणम् । तच्छरीरमेवं द्रष्टव्यम् । अत्र 'तद्विजिज्ञासस्व तद्ब्रह्म' इति श्रुत्युक्तब्रह्मणो विष्णुत्वसमर्थनादस्ति शास्त्रसङ्गतिः । श्रुत्यादिसङ्गतिस्तु 'तद्विजिज्ञासस्व तद्ब्रह्म' इति श्रुत्युक्तं ब्रह्म जिज्ञास्यमित्युक्तं, तस्य विष्णुत्वं यावन्न साध्यत तावत्तस्य गुणपूर्त्यसिध्या जीवाद्भेदकाभावेन जिज्ञास्यत्वं न सम्भवतीति आक्षेपिकीसङ्गतिः । 'तद्विजिज्ञासस्व तद्ब्रह्म' इति तैत्तिरीयश्रुत्युक्तं ब्रह्म अत्र विषयः । किं जीवः उत विष्णुरिति सन्देहः ।
**पूर्वपक्षस्तु** - जीव एवेदं ब्रह्म 'बृहजातिजीवकमलासनशब्दराशिषु' इत्यभिधानेन ब्रह्मशब्दस्य जीवे रूढत्वात् 'तदेव ब्रह्म परमं कवीनाम्' इत्यादिश्रुत्या विष्णौ ब्रह्मशब्द-प्रवृत्त्या वेदनेऽपि तस्य 'अथ कस्मादुच्यते ब्रह्मेति, बृहन्तो ह्यस्मिन् गुणाः' इति श्रुतिप्रतिपन्नयोगवृत्त्यैव प्रवृत्तत्वात् । रूढियोगयोश्च रूढेरेव अवयवार्थनिरपेक्षायाः तत्सापेक्षायोगात् बलीयस्त्वस्य रथकाराधिकरणे स्थितत्वात् । न जीवेऽपि यौगिक एव

अयं न रूढः । अभिधानमपि योगवृत्त्याशयमस्त्विति वाच्यम् । यौगिकार्थस्य गुणपूर्ते। जीवेऽसम्भवात् । सम्भवे वा जिज्ञास्यत्वेनाभिमतस्य जीवाद्भेदासिद्धेः गुणपूर्तितोऽन्यस्य यौगिकार्थत्वे तु जिज्ञास्यस्यापि गुणपूर्त्यसिद्धेः । न च जिज्ञास्येऽपि रूढिस्तु इति वाच्यम् । तथात्वे गुणपूर्त्यसिद्धिप्रसङ्गात् । न च तत्र योगरूढिरस्तु, सा च केवलरूढितो बलवतीति वाच्यम् । 'बृहन्तो ह्यस्मिन् गुणाः' इति श्रुत्यनुसारिबृंहावयवशक्त्यैवोपपत्तौ समुदायशक्तौ मानाभावात् । न च 'तदेव ब्रह्म परमं कवीनाम्' इति श्रुतिः तत्र मानमिति वाच्यम् । केवलयोगेनापि तच्छ्रुत्युपपत्तेरित्युक्तत्वात् । किञ्च 'तदेव ब्रह्म परमम्' इत्यादौ जीवे रूढिबाधकसमुद्रज्ञायित्वलिङ्गात् विष्णुपरत्वेऽपि 'तद्विजिज्ञासस्व तद्ब्रह्म' इत्यत्र रूढिबाधकाभावात् न तत्परता स्वीकार्या । न चात्र जीवपरत्वे 'यतो वा इमानि' इति पूर्ववाक्योक्तकारणत्वमेव बाधकमिति वाच्यम् । विद्ध्युद्देशगत-ब्रह्मशब्दस्वारस्याय जीवस्यापि अदृष्टद्वारा वा जगतो जीवकल्पितत्वेनात्र हेतुत्वोपपत्तेः । ब्रह्मणो निष्क्रियत्वेन कर्तृत्वस्य निर्विकारत्वेन उपादानत्वस्य वा असम्भवेन कारणत्वस्य ब्रह्मपक्ष एव बाधकत्वाच्च । तस्मात् जीव एवेदं ब्रह्म । तस्य च स्वप्रकाशत्वेन असन्दिग्धत्वात् अजिज्ञास्यतेति ।

**सिद्धान्तस्तु** - विष्णुरेव इदं जिज्ञास्यं ब्रह्म 'स इदं सर्वमसृजत' इति, 'स हि सर्वस्य कर्ता' इति, 'सत्यकर्मा' इति, 'स इमान् लोकान् असृजत' इति, 'य उ त्रिधातु पृथिवीमुतद्यां एको दाधार भुवनानि विश्वा', 'चतुर्भिः साकं नवतिं च नामभिश्चक्रं न वृत्तं व्यतीरंवीविपत्' 'सर्वं वा अत्तीति च' 'यमप्येति भुवनं साम्परायें' 'य आत्मानमन्तरो यमयति' 'त्वं मुक्तिदो बन्धदोऽतो मतो नस्त्वं ज्ञानदोऽज्ञानदश्चासि विष्णो' इत्यादिश्रुतिभिः 'उत्पत्तिस्थितिसंहारनियतिर्ज्ञानमावृतिः बन्धमोक्षौ च पुरुषात् यस्मात् स हरिरेकराट्' इत्यादिस्मृतिभिश्च विष्णवेकनिष्ठतया अवगतस्य जगज्जन्मादि-कारणत्वस्य जिज्ञास्ये 'यतो वा इमानि भूतानि जायन्ते । येन जातानि जीवन्ति । यत्प्रयन्ति अभिसंविशन्ति' इति श्रवणात् । तस्य च जीवे अनुपपत्त्या रूढेरपि बाधात् । अदृष्टद्वारा कल्पकत्वेन वा जीवस्य कारणत्वाभ्युपगमे च जायन्ते जातानीत्यादि पदानां मुख्यार्थत्यागापत्तेः । अभिसंविशन्तीति श्रवणात् तत्पदोक्तमुक्तप्राप्यत्वस्य च सर्वथानुपपत्तेः । यत इति येनेति यदिति, तद्ब्रह्मेति च प्रतीतकारणैक्यस्य च बाधाभावात् । इमानीति सर्वनाम्नश्च सङ्कोचाभावेन जीवकर्तृककार्यजातस्यैव ग्रहणमित्यस्य च अयुक्तत्वात् । जीवकर्तृतायाश्च 'इतरव्यपदेशाद्धिताकरणादिदोषप्रसक्तिः' इत्यादिसूत्रेषु निराकरिष्यमाणत्वात् । 'सोऽन्वेष्टव्यः । स विजिज्ञासितव्य' इत्यन्वेषणविधिवाक्योपात्तापहतापाप्मत्वादीनां जीवे शुद्धरूपाभिप्रायेण सम्भवाशङ्कायामपि सत्यकामत्वादीनां सर्वथाऽनुपपत्तेः, निष्क्रियत्वश्रुतेश्च

'स हि सर्वस्य कर्ता' इत्याद्युदाहृतकर्तृत्वप्रतिपादकश्रुतिबाहुल्यात् 'अकर्माऽक्लिष्टकारित्वात्' इत्यादि स्मृत्यनुसारिणाक्लिष्टकारित्वादिनोपपत्तेश्च । किञ्च कवीनां मते 'तदेव ब्रह्म परमम्' इति श्रुतौ विद्वद्रूढिरेव विदिता तद्बलेनापि जिज्ञास्यश्रुतौ ब्रह्मशब्दो विष्णुवाचक इत्येव स्वीकार्यम् । न चैवं रूढत्वाङ्गीकारे तेन गुणपूर्त्यलाभप्रसङ्ग इति वाच्यम् । 'बृहन्तो ह्यस्मिन् गुणा' इति श्रुत्या योगस्याप्यावेदिततया गुणपूर्तिलाभात् । पङ्कजादिशब्देषु रूढेरनतिप्रसङ्गेऽपि प्रमितत्वात् योगवत्प्रकृते योगस्यानतिप्रसक्तत्वेऽपि 'तदेव' इति श्रुतिप्रमापिता रूढिरपि अस्तु । रूढिं विना परमपदोक्तमुख्यत्वानुपपत्तेः । विद्वद्रूढेश्च भूवराहादिशब्दानां प्रियङ्गुवायसादिषु म्लेच्छप्रसिद्धिशब्दिताङ्गरूढितोऽपि दीर्घशूकसूकरादिषु आर्यप्रसिद्धिशब्दितप्राङ्गरूढेः बलीयस्त्वस्य यववाराधिकरणे स्थितत्वात् मुख्यत्वाविशेषेऽपि लक्षणात् गौण्या इव लक्षणत्वाविशेषेऽपि लक्षणमात्रनिरूढलक्षणाया इव मुख्यत्वादिवशेषेऽपि योगरूढेरिव च रूढित्वाविशेषेऽपि अविद्वद्रूढितो विद्वद्रूढेरेव असम्भावितज्ञानमूलिकायाः बलीयस्त्वोपपत्तेश्च 'नारायणोऽसौ परमो विचिन्त्यः' 'नारायणं महाज्ञेयम्' इत्यादिश्रुतौ जिज्ञास्ये नारायणशब्दश्रवणाच्च तस्माद्विष्णुरेव जिज्ञास्यं ब्रह्म न जीवोऽतो युक्तैव ब्रह्मजिज्ञासा इति । फलं तु पूर्वोत्तरपक्षयोः पूर्वोक्तजिज्ञासापेक्षसमाधाने इति स्फुटम् ॥२॥

(सूत्रार्थसङ्ग्रहः)

**सूत्राक्षरार्थस्तु** - अस्य प्रत्यक्षादिप्रमाणसिद्धतया प्रकृतस्य चिदचिदात्मकप्रपञ्चस्य जन्मादीति तद्गुणसंविज्ञान बहुव्रीहिः । उत्पत्तिस्थिति विनाशहानोपादानादिप्रवृत्ति-ज्ञानाज्ञानबन्धमोक्षलक्षणधर्माष्टकं यथासम्भवं यतो भवति तदिति अध्याहर्तव्यम् । पूर्वसूत्रात् ब्रह्मेति बुद्ध्या विविक्तमनुवर्तते 'तद्ब्रह्मे'ति । यद्यपि चेतनस्यानि सुखदुःखादीनि, अचेतनस्थानि वृद्धिह्रासादीनि च प्रपञ्चगतानि भगवत्कर्तृकाणि धर्मजातानि सन्ति । तथापि विचारविधायकनानावाक्यपरामर्शेन स्कान्दे सूत्रकृतैव अष्टकर्तृत्वस्यैव लक्षणत्वेनोक्तत्वादत्रापि तस्यैव विवक्षणीयत्वमित्याशयेन भाष्यटीकयोरष्टकोक्तिर्युक्ता । अथवा सर्वैर्मुमुक्षुभिः विशिष्टजन्माद्यष्टकर्तृत्वस्यैव अन्यकर्तृत्वस्य ज्ञेयत्वनियमाभावात् न अन्यदादिशब्दार्थः ।

उक्तं च -

'सृष्टिराक्षाहृतिज्ञाननियत्यमानबन्धनान् ।
मोक्षं च विष्णुतश्चैव ज्ञात्वा मुक्तिर्नचान्यथा ॥' इति ।

'तस्मादष्टकमेवात्र सूत्रे जन्मादिशब्दार्थ' इति सुधाचन्द्रिकयोर्व्यक्तम् । यद्यपि जगज्जन्मकर्तृत्वं जगद्रक्षणकर्तृत्वमित्यादिकं प्रत्येकमेव लक्षणं लक्ष्यनिर्धारणस्येष्टे । तथापि

'ಜನ್ಮ'ಶಬ್ದದಿಂದ ಸೃಷ್ಟ್ಯಾದ್ಯಷ್ಟಕಗಳನ್ನು ವಿವಕ್ಷಿಸಬೇಕು. ''ಅಸ್ಯ = ಜಗತ್ತಿನ, ಜನ್ಮಾದಿ = ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಈ ಎಂಟು ಧರ್ಮಗಳು ಯಾರಿಂದ ಪ್ರಾಪ್ತವಾಗುತ್ತವೋ ಅವನೇ ಜಿಜ್ಞಾಸ್ಯನಾದ ಬ್ರಹ್ಮನಾಗಿದ್ದಾನೆ'' ಎಂದು. ಈ ಲಕ್ಷಣವು ವಿಷ್ಣುವಿನಲ್ಲೇ ಬರುತ್ತದೆ ಹೊರತು ಜೀವನಲ್ಲಿ ಬರುವುದಿಲ್ಲ. ಆದ್ದರಿಂದ ಜೀವನಲ್ಲಿ ಬ್ರಹ್ಮಶಬ್ದವು ರೂಢವಾಗಿದ್ದರೂ ಬಾಧಕವಿರುವುದರಿಂದ (ಸೃಷ್ಟ್ಯಾದ್ಯಷ್ಟಕರ್ತೃತ್ವಗಳಿಲ್ಲದಿರುವುದರಿಂದ) 'ತದ್ ಬ್ರಹ್ಮ' ಎಂಬ ಶ್ರುತಿಪ್ರತಿಪಾದ್ಯನಾದ ಬ್ರಹ್ಮನು ವಿಷ್ಣುವೇ ಆಗುತ್ತಾನೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಹೇಳಿದ ಜಿಜ್ಞಾಸೆಯು ಯುಕ್ತವೇ ಆಗಿದೆ. ಇಷ್ಟು ಭಾಷ್ಯದ ಅಭಿಪ್ರಾಯ.

## ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

## ಭಾವದೀಪ

### ಸಂಗತಿಯ ಬಗ್ಗೆ ಹೆಚ್ಚಿನ ಮಾಹಿತಿ

**भावदीपः – जन्माद्यस्य यतः ।। प्रत्यधिकरणं प्रतिपाद्यज्ञानेन स्पष्टत्वाद् भाष्यानुक्तामपि अन्तर्भावसङ्गतिं स्वयमाह – अत्रेति ।। 'एतदधिकरणे' इत्यर्थः ।**

ಪ್ರತಿಯೊಂದು ಅಧಿಕರಣದಲ್ಲಿಯೂ ಪ್ರತಿಪಾದಿಸಲ್ಪಡುವ ವಿಷಯವು ಸ್ಪಷ್ಟವಾಗಿರುವುದರಿಂದ ಭಾಷ್ಯದಲ್ಲಿ ಹೇಳದಿದ್ದರೂ ತಾವೇ ಅಂತರ್ಭಾವಸಂಗತಿಯನ್ನು

वैभवादष्टौ लक्षणान्यपि उक्तानीति ज्ञातव्यमिति ।।छ।।
'स्तोत्रं राधानां पते गिर्वाहो वीर यस्य ते । विभूतिरस्तु सूनृता'
'एतेनाग्ने ब्रह्मणा वावृधस्व शक्तीं वा यत् ते चकृमा विदा वा ।
उत प्रणेष्यभि वस्यो अस्मात्सन्नः सृज सुमत्या वाजवत्या ।।'
।। इति जन्माधिकरणटीका सेवा ।।

'ಅತ್ರ' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ. 'ಅತ್ರ' ಎಂಬ ಶಬ್ದಕ್ಕೆ 'ಈ ಅಧಿಕರಣದಲ್ಲಿ' ಎಂದು ಅರ್ಥ.

## 'ಶ್ರುತ್ಯುಕ್ತಬ್ರಹ್ಮಣಃ' ಎಂಬ ಟೀಕೆಯ ಸ್ವಾರಸ್ಯ

**भावदीपः – सङ्गतिरिति ।। 'अन्तर्भावरूपा' इत्यर्थः । तदुपपादनम् 'श्रुत्युक्ते'त्यादि । 'ब्रह्मपदवाच्यस्य' इत्येव वाच्ये 'श्रुत्युक्ता' इत्युक्तिः 'सौत्रब्रह्मपदोक्तस्य' इति भ्रमनिरासाय । 'तथा च श्रुत्यर्थनिर्णायक-न्यायग्रथनात्मके शास्त्रे अस्य श्रौत ब्रह्मपदार्थनिर्णायकन्याय-ग्रथनात्मकस्यान्तर्भावो युक्तः' इति भावः ।**

'ಸಂಗತಿ' ಎಂದರೆ ಅಂತರ್ಭಾವರೂಪವಾದ 'ಸಂಗತಿ' ಎಂದು ಅರ್ಥ. 'ಶ್ರುತ್ಯುಕ್ತ' ಇತ್ಯಾದಿ ವಾಕ್ಯಗಳಿಂದ ಅದನ್ನು ವಿವರಿಸುತ್ತಿದ್ದಾರೆ. 'ಬ್ರಹ್ಮಪದವಾಚ್ಯಸ್ಯ' ಎನ್ನದೆ 'ಶ್ರುತ್ಯುಕ್ತಬ್ರಹ್ಮಣಃ' ಎಂದು ಹೇಳಿದ್ದರಿಂದ ಇಲ್ಲಿ ಸೂತ್ರಗತವಾದ ಬ್ರಹ್ಮಪದವನ್ನು ವಿವರಿಸುತ್ತಿದ್ದಾರೆ ಎಂಬ ಭ್ರಮೆಯನ್ನು ನಿರಾಸಮಾಡಿದಂತೆ ಆಗುತ್ತದೆ. ಆದ್ದರಿಂದಲೇ ಶ್ರುತಿಯ ಅರ್ಥವನ್ನು ನಿರ್ಣಯ ಮಾಡುವ ನ್ಯಾಯಗಳ ಸಮೂಹರೂಪವಾದ ಈ ಶಾಸ್ತ್ರದಲ್ಲಿ ಶ್ರುತಿಯಲ್ಲಿ ಹೇಳಿದ ಬ್ರಹ್ಮ ಪದದ ಅರ್ಥವನ್ನು ನಿರ್ಣಯ ಮಾಡುವ ನ್ಯಾಯರೂಪವಾದ ಈ ಸೂತ್ರವು ಅಂತರ್ಭಾವವಾಗುವುದು ಯೋಗ್ಯವಾಗುತ್ತದೆ ಎಂದು ಅರ್ಥ.

ವಿಶೇಷ ವಿಚಾರ - ಭೇದಜ್ಞಾಪಕವಾದದ್ದು ಗುಣಪೂರ್ಣತ್ವವೇ ಆಗಿದೆ. ಆದರೆ ಆ ಗುಣಪೂರ್ಣತ್ವಧರ್ಮವು ಬ್ರಹ್ಮನಲ್ಲಿ ಸಿದ್ಧವಾಗಬೇಕಾದರೆ ಬ್ರಹ್ಮನು ವಿಶ್ವಕರ್ತೃತ್ವರೂಪಧರ್ಮದಿಂದ ಸಮಸ್ತವಸ್ತುಗಳಿಗಿಂತ ಭಿನ್ನನಾಗಿ ತಿಳಿಯಬೇಕು. ಆದ್ದರಿಂದ ಮೊದಲನೆಯ ಸೂತ್ರದಲ್ಲಿ ಹೇಳಿದ ಗುಣಪೂರ್ಣತ್ವಕ್ಕೆ ಉಪಪಾದಕವಾಗಿ ಎರಡನೆಯ ಸೂತ್ರದಲ್ಲಿ ವಿಶ್ವಕರ್ತೃತ್ವವನ್ನು ಹೇಳಲಾಗಿದೆ. ಸುಧಾದಲ್ಲಿಯೂ 'ಅನೇನ ಲಕ್ಷಣೇನ ಲಕ್ಷಿತೇ ಬ್ರಹ್ಮಣಿ ಸಮಸ್ತಗುಣಪೂರ್ಣತ್ವಂ ಪ್ರಥಮಲಕ್ಷಣಂ ಸಿಧ್ಯತಿ' 'ಪ್ರಕೃತವಾದ ವಿಶ್ವಕರ್ತೃತ್ವ ಲಕ್ಷಣದಿಂದ ಬ್ರಹ್ಮನು ಲಕ್ಷಿತನಾದ ಮೇಲೆ ಸಮಸ್ತಗುಣಪೂರ್ಣತ್ವವೆಂಬ ಪ್ರಧಾನಲಕ್ಷಣವು ಬ್ರಹ್ಮನಲ್ಲಿ ಸಿದ್ಧವಾಗುತ್ತದೆ' ಎಂದು.

ಈ ಮಾತುಗಳಿಂದ ಸಂಗತಿಟೀಕೆಯವನ್ನು ವಿವರಿಸಿದಂತಾಯಿತು. ಸಂಗತಿಟೀಕೆ ಹೀಗಿದೆ - 'ಶ್ರುತ್ಯಾದಿಸಂಗತಿಸ್ತು ತದ್ವಿಜಿಜ್ಞಾಸಸ್ವ ತದ್‌ಬ್ರಹ್ಮ' ಇತಿ ಶ್ರುತ್ಯುಕ್ತಂ ಬ್ರಹ್ಮ ಜಿಜ್ಞಾಸ್ಯಮಿತ್ಯುಕ್ತಂ ತಸ್ಯ ಚ ವಿಷ್ಣುತ್ವಂ ಯಾವನ್ನ ಸಾಧ್ಯತೇ ತಾವತ್ತಸ್ಯ ಗುಣಪೂರ್ಣತ್ವಸಿದ್ಧ್ಯಾ ಭೇದಕಾಭಾವೇನ ಜಿಜ್ಞಾಸ್ಯತಾ ನ ಸಂಭವತಿ' 'ತದ್ ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಿದ ಬ್ರಹ್ಮನು ಜಿಜ್ಞಾಸ್ಯನೆಂದು ಹಿಂದಿನ ಅಧಿಕರಣದಲ್ಲಿ ಹೇಳಿದೆ. ಆದರೆ ಬ್ರಹ್ಮಪದದ ಅರ್ಥ ವಿಷ್ಣು ಎಂದು ಎಲ್ಲಿಯ ತನಕ ನಿಶ್ಚಯವಾಗುವುದಿಲ್ಲವೋ ಅಲ್ಲಿಯತನಕ ಬ್ರಹ್ಮನು ಗುಣಪೂರ್ಣನೆಂದು ನಿಶ್ಚಯವಾಗುವುದಿಲ್ಲ. ಬ್ರಹ್ಮನು ಗುಣಪೂರ್ಣನೆಂದು ನಿಶ್ಚಯವಾಗದ ಹೊರತು ಬ್ರಹ್ಮನಿಗೆ ಜಿಜ್ಞಾಸ್ಯತ್ವವು ಕೂಡುವುದಿಲ್ಲ. ಈ ಅಧಿಕರಣದಲ್ಲಿ ಗುಣಪೂರ್ಣತ್ವವನ್ನು ಸಮರ್ಥಿಸುವುದರಿಂದ ಶ್ರುತ್ಯಾದಿಸಂಗತಿಯು ಇದೆಯೆಂದು ತಿಳಿಯಬೇಕು.

## 'ವಿಷ್ಣುತ್ವಸಮರ್ಥನಾತ್' ಎಂಬ ಟೀಕೆಯ ಸ್ವಾರಸ್ಯ

**ಭಾವದೀಪಃ – विष्णुत्वेति ।।** सिद्धान्ते तस्य रूढिनिरासेन यौगिकत्वमात्रोक्तावपि योगार्थस्य विष्णावेव सम्भवात् 'यौगिकत्व' इत्यनुक्त्या 'विष्णुत्व' इति फलितोक्तिः कृता ।

'ವಿಷ್ಣುತ್ವಸಮರ್ಥನಾತ್' ಎಂಬ ಪದದಿಂದ ಅಂತಿಮವಾದ ಆಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಸಿದ್ಧಾಂತದಲ್ಲಿ ಬ್ರಹ್ಮಪದಕ್ಕೆ ರೂಢಿಯ ಅರ್ಥವನ್ನು ಬಿಟ್ಟು, ಯೌಗಿಕವಾದ ಅರ್ಥವನ್ನೇ ಗ್ರಹಿಸಬೇಕು ಎಂದಷ್ಟೇ ಹೇಳಿದ್ದರೂ ಯೋಗಾರ್ಥವು ವಿಷ್ಣುವಿನಲ್ಲಿ ಮಾತ್ರ ಕೂಡುವುದರಿಂದ 'ಯೌಗಿಕತ್ವ' ಎಂದು ಹೇಳದೇ 'ವಿಷ್ಣುತ್ವ' ಎಂಬುದಾಗಿ ಹೇಳಿದ್ದಾರೆ.

## ಅಧಿಕರಣಸಂಗತಿ ಬಲು ಸ್ಪಷ್ಟ

**ಭಾವದೀಪಃ – श्रुत्यादीति ।।** 'अधिकरणम्' 'आदि'पदार्थः । सङ्गतिः पूर्वानन्तर्यरूपा । एकवचनं तु 'एकस्य प्रदर्शनेऽन्यस्य सा सुज्ञाना एकप्रकारत्वात् श्रुत्यधिकरणसङ्गत्योः' इति प्रकारैक्यबुद्ध्या । न तु सङ्गत्यैक्यबुद्ध्या । क्वचित् द्विवचनस्यापि प्रयोगात् । पूर्वाधिकरणतद्विषय वाक्याभ्यामेतदधिकरणविषयवाक्ययोः सङ्गती तु इत्यर्थः ।

'ಶ್ರುತ್ಯಾದಿಸಂಗತಿಸ್ತು' ಎಂಬಲ್ಲಿ ಆದಿಶಬ್ದಕ್ಕೆ 'ಅಧಿಕರಣ' ಎಂಬುದಾಗಿ ಅರ್ಥ. 'ಸಂಗತಿ' ಎಂಬ ಪದದಿಂದ ಪೂರ್ವಾನಂತರ್ಯರೂಪವಾದ ಸಂಗತಿಯನ್ನು ಗ್ರಹಿಸಬೇಕು. 'ಸಂಗತಿಃ' ಎಂಬುದಾಗಿ ಏಕವಚನವನ್ನು ಹೇಳಿದ್ದರಿಂದ ಇಲ್ಲಿ ಸಂಗತಿಯು ಒಂದೇ ಆಗಿದೆ ಎಂದು ತಿಳಿಯಬಾರದು. ಒಂದು ಕಡೆ ಸಂಗತಿಯನ್ನು ತೋರಿಸಿದರೆ ಎರಡು ಕಡೆಯ ಸಂಗತಿಗಳೂ ಒಂದೇ ರೀತಿಯಾದ್ದರಿಂದ ಇನ್ನೊಂದು ಕಡೆ ಸಂಗತಿಯನ್ನು ಸ್ಪಷ್ಟವಾಗಿ ಗ್ರಹಿಸಬಹುದು ಎಂಬ ಅಭಿಪ್ರಾಯದಿಂದ ಈ ರೀತಿ ಮಾಡಿದ್ದಾರೆ. ಕೆಲವೊಂದು ಕಡೆ ದ್ವಿವಚನವನ್ನೂ ಕೂಡ ಪ್ರಯೋಗಮಾಡಿದ್ದರಿಂದ ಹೀಗೆ ಗ್ರಹಿಸಬೇಕಾಗಿದೆ. ಹೀಗಾಗಿ ಈ ವಾಕ್ಯಕ್ಕೆ 'ಪೂರ್ವಾಧಿಕರಣ ಮತ್ತು ಅದರ ವಿಷಯವಾಕ್ಯಕ್ಕೂ ಈ ಅಧಿಕರಣ ಮತ್ತು ಇದರ ವಿಷಯವಾಕ್ಯಕ್ಕೂ ಪರಸ್ಪರಸಂಗತಿಗಳನ್ನು' ಎಂಬುದಾಗಿ ಅರ್ಥ.

## ಜಿಜ್ಞಾಸಾಧಿಕರಣ ಸಿದ್ಧಾಂತದ ಆಕ್ಷೇಪ

**ಭಾವದೀಪಃ – ಇತ್ಯುಕ್ತಮಿತಿ ।।** 'विषयादिन्यायैः पूर्वाधिकरणे साधितम्' इत्यर्थः । तस्य = श्रौतब्रह्मशब्दार्थस्य । न साध्यत इति ।। 'रूढित्याजकजन्मादिहेतुत्वरूपबाधकाख्यन्यायोपदर्शनेन' इति भावः ।

'ಇತ್ಯುಕ್ತಮ್' ಎಂದರೆ 'ವಿಷಯಾದಿ ನ್ಯಾಯಗಳಿಂದ ಹಿಂದಿನ ಅಧಿಕರಣಗಳಲ್ಲಿ ಸಾಧಿತವಾಗಿದೆ' ಎಂದು ಅರ್ಥ. 'ತಸ್ಯ' ಎಂಬ ಶಬ್ದಕ್ಕೆ 'ಶ್ರುತಿಯಲ್ಲಿ ಹೇಳಿದ ಬ್ರಹ್ಮಶಬ್ದದ ಅರ್ಥಕ್ಕೆ' ಎಂಬುದಾಗಿ ಅರ್ಥ. 'ನ ಸಾಧ್ಯತೇ' ಎಂಬಲ್ಲಿ ಸಾಧಿಸುವುದು ಎಂದರೆ 'ಜನ್ಮಾದಿಕಾರಣತ್ವರೂಪವಾದ ಬಾಧಕನ್ಯಾಯಗಳು ಇರುವುದರಿಂದ ರೂಢಿಯಲ್ಲಿ ಹೇಳಿದ ಅರ್ಥವನ್ನು ತ್ಯಜಿಸಬೇಕು ಎಂಬುದನ್ನು ಸಾಧಿಸುವುದು' ಎಂದು ಅರ್ಥ.

## ಆಕ್ಷೇಪಿಕಿ ಸಂಗತಿ

**ಭಾವದೀಪಃ – ಭೇದಕಾಭಾವೇನೇತಿ ।।** तथा च 'पूर्वपक्षे जीवस्यैव ब्रह्मतापत्त्या पूर्वत्रेव विषयादिशून्यत्वेन तज्जिज्ञासा पूर्वसूत्रोक्ता न कार्या' इत्याक्षेपाद् आक्षेपिकीसङ्गतिरित्यर्थः; **'पूर्वमाक्षिप्यते यत्र तत्र साक्षेपिकी मता'** इत्युक्तेः ।

ಟೀಕಾವಾಕ್ಯದಲ್ಲಿ 'ಭೇದಕಾಭಾವೇನ' ಎಂಬ ಪದದಿಂದ ಸಂಗತಿಗಳನ್ನು ಸ್ಪಷ್ಟಪಡಿಸಿದಂತೆ ಆಗುತ್ತದೆ. ಅದು ಹೇಗೆಂದರೆ ಪೂರ್ವಪಕ್ಷದಲ್ಲಿ ಜೀವನೇ ಬ್ರಹ್ಮನಾಗುವುದರಿಂದ ಹಿಂದಿನ ಸೂತ್ರದಲ್ಲಿ ಹೇಳಿದಂತೆ ವಿಷಯಾದಿಗಳು ಇಲ್ಲವಾಗುವುದರಿಂದ ಹಿಂದಿನ ಸೂತ್ರದಲ್ಲಿ ಹೇಳಿದ ಆ ಬ್ರಹ್ಮನ ಜಿಜ್ಞಾಸೆಯು ಮಾಡತಕ್ಕದ್ದಲ್ಲ ಎಂಬ ಆಕ್ಷೇಪ ಬರುವುದರಿಂದ ಇಲ್ಲಿ ಆಕ್ಷೇಪಿಕೀಸಂಗತಿ ಎಂದು ತಿಳಿಯಬೇಕು. ಇದನ್ನು 'ಪೂರ್ವಮಾಕ್ಷಿಪ್ಯತೇ ಯತ್ರ ತತ್ರ ಸಾಕ್ಷೇಪಿಕೀ ಮತಾ'(ಹಿಂದಿನ ಅಧಿಕರಣದ ಸಿದ್ಧಾಂತವನ್ನೇ ಆಕ್ಷೇಪಮಾಡಿಕೊಂಡು ಉತ್ತರಿಸುವುದನ್ನು ಆಕ್ಷೇಪಿಕೀಸಂಗತಿ ಎಂಬುದಾಗಿ ತಿಳಿಯಬೇಕು.) ಎಂಬ ಮಾತು ಸ್ಪಷ್ಟಪಡಿಸುತ್ತದೆ.

ವಿಶೇಷ ವಿಚಾರ - 'ತದ್‌ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿರುವ 'ಬ್ರಹ್' ಪದಕ್ಕೆ ಗುಣಪೂರ್ಣತ್ವವೆಂದರ್ಥ. ಆದ್ದರಿಂದ ಬ್ರಹ್ಮನೇ ಜಿಜ್ಞಾಸ್ಯನೆಂದು ಜಿಜ್ಞಾಸಾಧಿಕರಣದಲ್ಲಿ ಹೇಳಲಾಗಿತ್ತು. ಆದರೆ ಎಲ್ಲಿಯ ತನಕ ಜೀವಬ್ರಹ್ಮಭೇದಕವಾದ ಧರ್ಮವನ್ನು ಹೇಳುವುದಿಲ್ಲವೋ, ಅಲ್ಲಿಯತನಕ ಶ್ರುತಿಯಲ್ಲಿರುವ ಬ್ರಹ್ಮಪದಕ್ಕೆ ಜೀವನೆಂಬ ರೂಢ್ಯರ್ಥ ಬಿಡಲು ಯಾವುದೇ ಬಾಧಕವಿರುವುದಿಲ್ಲ. ರೂಢ್ಯರ್ಥವನ್ನೇ ಇಟ್ಟುಕೊಳ್ಳಲು ಬರುವಾಗ ಗುಣಪೂರ್ಣತ್ವವೆಂಬ ಯೋಗಾರ್ಥವನ್ನು ಇಟ್ಟುಕೊಳ್ಳಲು ಬರುವುದಿಲ್ಲ. ಜಿಜ್ಞಾಸೆಗೆ ಉಪಯುಕ್ತವಾದ ಗುಣಪೂರ್ಣತ್ವವೇ ಯಾವಾಗ ಸಿದ್ಧವಾಗುವುದಿಲ್ಲವೋ ಆವಾಗ ಜಿಜ್ಞಾಸೆಯು ಕೂಡುವುದಿಲ್ಲವೆಂದು ಹಿಂದಿನ ಅಧಿಕರಣದಲ್ಲಿ ಹೇಳಿದ ವಿಷಯದ ಮೇಲೆ ಈ ಅಧಿಕರಣದಲ್ಲಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಆಕ್ಷೇಪಿಕೀ ಸಂಗತಿಯೇ ಇದೆ.

ಸಂಗತಿಯು ಅಂತರ್ಭಾವ ಮತ್ತು ಆನಂತರ್ಯ ಎಂದು ಪ್ರಧಾನವಾಗಿ ಎರಡು ವಿಧವಾಗಿದೆ. ವೇದಾರ್ಥನಿರ್ಣಾಯಕವಾದ ನ್ಯಾಯಗ್ರಥನಾತ್ಮಕವಾಗಿರುವುದರಿಂದ ಈ ಸೂತ್ರಕ್ಕೆ ಶಾಸ್ತ್ರಾಂತರ್ಭಾವಸಂಗತಿಯಿದೆ. ಇನ್ನು ಅಧ್ಯಾಯಾಂತರ್ಭಾವಸಂಗತಿಯನ್ನಾಗಲೀ ಪಾದಾಂತರ್ಭಾವಸಂಗತಿಯನ್ನಾಗಲೀ ಈ ಅಧಿಕರಣಕ್ಕೆ ತೋರಿಸಬೇಕಾಗಿಲ್ಲ. ಅಧಿಕರಣದ ಆನಂತರ್ಯಸಂಗತಿಯನ್ನು ಆರು ಅಥವಾ ಏಳು ವಿಧದಲ್ಲಿ ವಿಭಾಗಿಸಲಾಗಿದೆ. ಅವುಗಳಲ್ಲಿ ಯಾವುದಾದರೊಂದರ ಸಂಗತಿಯನ್ನು ಹೇಳಿದರೆ ಮಾತ್ರ ಅಧಿಕರಣಕ್ಕೆ ಆನಂತರ್ಯಸಂಗತಿಯು ಕೂಡುತ್ತದೆ. ಪ್ರಕೃತ ತತ್ತ್ವಪ್ರಕಾಶಿಕಾದಲ್ಲಿ ಈ ಅಧಿಕರಣಕ್ಕೆ ಆಕ್ಷೇಪಿಕೀಸಂಗತಿಯನ್ನು ಹೇಳಿದ್ದಾರೆ. 'ಪೂರ್ವಮಾಕ್ಷಿಪ್ಯತೇ ಯತ್ರ ತತ್ರ ಆಕ್ಷೇಪಿಕೀ ಮತಾ' ಎಂಬಂತೆ ಪೂರ್ವಾಧಿ-

ಕರಣದ ವಿಷಯದ ಮೇಲೆ ಆಕ್ಷೇಪ ಮಾಡಿಕೊಂಡು ಉತ್ತರ ನೀಡಿರುವುದರಿಂದ ಆಕ್ಷೇಪಿಕೀಸಂಗತಿಯನ್ನು ತಿಳಿಯಬೇಕು. ಇದರಿಂದ ಗುಣಪೂರ್ಣತ್ವವು ಪ್ರಸಿದ್ಧವಾಗುವುದರಿಂದ ಬ್ರಹ್ಮನು ಜಿಜ್ಞಾಸ್ಯನೆಂದು ಸಿದ್ಧವಾಗುತ್ತದೆ. ಇದನ್ನು ಫಲವೆಂದು ತಿಳಿಯಬೇಕು.

ಶಂಕೆ - ಒಂದು ವೇಳೆ ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಆಕ್ಷೇಪಿಕೀಸಂಗತಿಯನ್ನು ಹೇಳುವುದಾದರೆ ಆವಾಗ ಸುಧಾವಿರೋಧ ಬರುತ್ತದೆ. ಏಕೆಂದರೆ ಸುಧೆಯಲ್ಲಿ ಆಕ್ಷೇಪಿಕೀ ಸಂಗತಿಯನ್ನು ಹೇಳದೆ ಬೇರೆ ಸಂಗತಿಯನ್ನು ಹೇಳಿದ್ದಾರಲ್ಲ?

ಸಮಾಧಾನ -ತತ್ವಪ್ರಕಾಶಿಕೆಯಲ್ಲಿ ಹೇಳಿದ ಸಂಗತಿ ಒಂದುರೀತಿ; ಸುಧೆಯಲ್ಲಿ ಹೇಳಿದ ಸಂಗತಿ ಮತ್ತೊಂದು ರೀತಿ. 'ಪ್ರಕಾರಾಂತರಸ್ಯ ಪ್ರಕಾರಾಂತರಾದೂಷಕತ್ವಾತ್ ನ ವಿರೋಧಃ' 'ಒಂದು ಬಗೆಯು ಮತ್ತೊಂದು ಬಗೆಯನ್ನು ದೂಷಿಸಲಾರದಾದ್ದರಿಂದ ವಿರೋಧವಿಲ್ಲ'.

ಬ್ರಹ್ಮಸ್ವರೂಪದ ವಿಚಾರ ಎಂದರೆ ಬ್ರಹ್ಮನ ಲಕ್ಷಣ ಹೇಳಿ, ಆನಂತರ ಅಂತಹ ಬ್ರಹ್ಮನ ಬಗ್ಗೆ ಪ್ರಮಾಣವನ್ನು ಹೇಳಬೇಕು. ಲಕ್ಷಣವನ್ನು ಹೇಳಿದರಷ್ಟೇ ಪ್ರಮಾಣದ ಆಕಾಂಕ್ಷೆ ಬರುತ್ತದೆ. ಆದ್ದರಿಂದ ಲಕ್ಷಣ ಪ್ರಮಾಣಗಳ ಮಧ್ಯದಲ್ಲಿ ಮೊದಲು ಲಕ್ಷಣವನ್ನು ಹೇಳಬೇಕು.ಆನಂತರ ಪ್ರಮಾಣವನ್ನು ಹೇಳಬೇಕು. ಈ ಸೂತ್ರದಲ್ಲಿ ವಿಶ್ವಕರ್ತೃತ್ವವೆಂಬ ಅಸಾಧಾರಣಲಕ್ಷಣವನ್ನು ಬ್ರಹ್ಮನಿಗೆ ಹೇಳಿರುವುದು ಸಂಗತವೇ ಆಗಿದೆ. ಈ ಕ್ರಮದಲ್ಲಿ ಸುಧೆಯು ಅಧಿಕರಣಸಂಗತಿಯನ್ನು ನಿರೂಪಿಸಿದೆ.

ಇದರಿಂದ ಪ್ರಪಂಚ್ಯಪ್ರಪಂಚಕಭಾವವೆಂಬ ಸಂಗತಿಯನ್ನು ಹೇಳಿದಂತಾಯಿತು. - ಮೊದಲನೆಯ ಸೂತ್ರದಲ್ಲಿ ಬ್ರಹ್ಮವಿಚಾರವನ್ನು ಮಾಡುತ್ತೇವೆಂದು ತಿಳಿಸಿದ್ದಾಯಿತು. ಅದರ ವಿವರಣೆಯನ್ನೇ 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರವು ಮಾಡುತ್ತಿದೆ. ಜನ್ಮಾದ್ಯಧಿಕರಣವು ಪ್ರಪಂಚಕವಾಯಿತು ಜಿಜ್ಞಾಸಾಧಿಕರಣವು ಪ್ರಪಂಚ್ಯವಾಯಿತು. ಪ್ರಪಂಚಕ ಎಂದರೆ ವಿವರಿಸುವಂತಹದ್ದು. ಪ್ರಪಂಚ್ಯ ಎಂದರೆ ವಿವರಿಸಲ್ಪಡುವಂತಹದ್ದು ಎಂದರ್ಥ. ಅಥವಾ 'ಹೇತುಹೇತುಮದ್ಭಾವ' ಎಂಬ ಆನಂತರ್ಯಸಂಗತಿಯನ್ನು ಹೇಳಬಹುದು. ಪ್ರಥಮ ಸೂತ್ರದಲ್ಲಿ ವಿಷಯಾದಿಗಳನ್ನು ಮಂಡಿಸಿ ಬ್ರಹ್ಮವಿಚಾರವನ್ನು ಮಾಡಬೇಕೆಂದು ಹೇಳಿದ್ದಾರೆ. ವಿಷಯಾದಿಗಳು ಇಲ್ಲದೆ ಹೋದರೆ ಜನ್ಮಾದಿ ಅಧಿಕರಣಗಳು ಹೊರಟಿದ್ದೇ ವ್ಯರ್ಥವಾಗುತ್ತವೆ. ಆದ್ದರಿಂದ ಮುಂದಿನ ಈ ಜನ್ಮಾದಿ

ಅಧಿಕರಣಗಳಿಗೆ ಜಿಜ್ಞಾಸಾಧಿಕರಣವು ಹೇತುವಾಯಿತು. ಆದರ ಹೇತುಮತ್ = ಕಾರ್ಯ ಈ ಜನ್ಮಾದಿ ಅಧಿಕರಣಗಳು. ಹೀಗೆ ಆನಂತರ್ಯಕ್ಕೆ ಪ್ರಯೋಜಕವಾದ ಸಂಗತಿಯನ್ನು ಎರಡು ಪ್ರಕಾರದಲ್ಲಿ ತಿಳಿಯಬಹುದು. ಈ ಎರಡುವಿಧ ಸಂಗತಿಗಿಂತ ವಿಭಿನ್ನವಾದ ಆಕ್ಷೇಪಿಕೀಸಂಗತಿಯನ್ನು ತತ್ವಪ್ರಕಾಶಿಕೆಯಲ್ಲಿ ಹೇಳಿದ್ದಾರೆ. ತತ್ವಪ್ರಕಾಶಿಕೆಯಲ್ಲಿ ಹೇಳಿದ್ದೂ ತಪ್ಪಲ್ಲ. ಸುಧೆಯಲ್ಲಿ ಹೇಳಿದ್ದೂ ತಪ್ಪಲ್ಲ.

## ಶ್ರುತಿಸಂಗತಿಯೂ ಇದೆ

**ಭಾವದೀಪಃ** – ಏತೇನ 'तद् विजिज्ञासस्व' इत्युक्ता जिज्ञासा कार्येत्युक्तं पूर्वं तदसङ्गतम् । 'तद् ब्रह्म-इत्युक्तब्रह्मणोऽविष्णुत्वेन रूढ्या जीवत्वात्' इति पूर्वश्रुत्यात्र विचार्यश्रुतेरपि सङ्गतिः सिद्धा ।

ಇದರಿಂದಲೇ ಶ್ರುತಿಸಂಗತಿಯನ್ನು ತಿಳಿಯಬೇಕು. 'ತದ್ ವಿಜಿಜ್ಞಾಸಸ್ವ' ಎಂಬ ಶ್ರುತಿಯಲ್ಲಿ ಹೇಳಿದಂತೆ 'ಬ್ರಹ್ಮನ ಜಿಜ್ಞಾಸೆಯು ಮಾಡತಕ್ಕದ್ದು' ಎಂದು ಹಿಂದೆ ಹೇಳಿದ ಅಂಶವು ಸರಿಯಲ್ಲ. ಏಕೆಂದರೆ 'ತದ್ ಬ್ರಹ್ಮ' ಎಂಬ ವಾಕ್ಯದಲ್ಲಿ ಹೇಳಿದ ಬ್ರಹ್ಮನು ವಿಷ್ಣುವಲ್ಲ. ರೂಢಿಯಿಂದ ಆ ಬ್ರಹ್ಮಪದಕ್ಕೆ ಜೀವ ಎಂಬುದಾಗಿಯೇ ಅರ್ಥ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಈ ಸೂತ್ರವಿರುವುದರಿಂದ ಹಿಂದಿನ ಅಧಿಕರಣದ ಶ್ರುತಿಯಿಂದ ಈ ಅಧಿಕರಣದಲ್ಲಿ ವಿಮರ್ಶೆ ಮಾಡುವ ಶ್ರುತಿಗೆ ಆಕ್ಷೇಪಿಕೀಸಂಗತಿ ಇದೆ ಎಂದು ತಿಳಿಯಬೇಕು.

## ಎರಡು ಅಧಿಕರಣಗಳ ವಿಷಯವಾಕ್ಯ ಒಂದೇ; ಆದರೂ ತಪ್ಪಿಲ್ಲ

**ಭಾವದೀಪಃ** – वाक्यैक्येपि पूर्वत्र 'तद् विजिज्ञासस्व' इत्यंशः 'तद् ब्रह्म' इति ब्रह्मश्रुतिरूपहेतूक्त्या विचारितः, अत्र तु पूर्वत्र हेतूकृत'तद् ब्रह्म' इत्यंशः, उत्तरत्र तु अत्र हेतूकृतो 'यतो वा' इत्यादि पूर्वांशो विचार्यत इत्यंशभेदाद् भेद इति भावः । 'इति'शब्दस्य 'इति सङ्गतिः' इति पूर्वेणान्वयः । एवमग्रेपि सङ्गतिग्रन्थव्याख्या ध्येया ।

ಹಿಂದಿನ ಸೂತ್ರ ಮತ್ತು ಈ ಸೂತ್ರಗಳಲ್ಲಿ ವಿಷಯವಾಕ್ಯ ಒಂದೇ ಆಗಿದ್ದರೂ ಹಿಂದಿನ ಸೂತ್ರದಲ್ಲಿ 'ತದ್ ವಿಜಿಜ್ಞಾಸಸ್ವ' ಎಂಬ ಅಂಶವು 'ತದ್ ಬ್ರಹ್ಮ' ಎಂಬ ಬ್ರಹ್ಮಶ್ರುತಿರೂಪವಾದ ಹೇತುವಾಕ್ಯದಿಂದ ವಿಮರ್ಶಿತವಾಗಿದೆ. ಈ ಸೂತ್ರದಲ್ಲಿ ಹಿಂದೆ ಹೇತುವಾಕ್ಯವಾಗಿದ್ದ 'ತದ್

ಬ್ರಹ್ಮ' ಎಂಬ ಅಂಶವು ಆನಂತರ ಇಲ್ಲಿ ಹೇತುವಾಗಿರುವ 'ಯತೋ ವಾ' ಇತ್ಯಾದಿ ಪೂರ್ವಾಂಶವು ವಿಮರ್ಶಿತವಾಗುತ್ತಿದೆ. ಹೀಗೆ ವಾಕ್ಯಗತವಾದ ಅಂಶಗಳ ಭೇದವಿರುವುದರಿಂದ ವಿಷಯವಾಕ್ಯಗಳು ಭಿನ್ನ ಎಂದು ತಿಳಿಯಬೇಕು. 'ಇತಿ'ಶಬ್ದಕ್ಕೆ ಸಂಗತಿಃ ಎಂಬುದಾಗಿ ಪೂರ್ವಶಬ್ದದೊಂದಿಗೆ ಅನ್ವಯವನ್ನು ಹೇಳಬೇಕು. ಇದೇ ರೀತಿಯಾಗಿ ಮುಂದೆಯೂ ಕೂಡ ಸಂಗತಿಗ್ರಂಥವನ್ನು ಅರ್ಥೈಸಿಕೊಳ್ಳಬೇಕು.

## ವಿಷಯವಾಕ್ಯದಲ್ಲಿ ಸುಧೆ ಟೀಕೆಗಳ ಅಭಿಪ್ರಾಯ

**ಭಾವದೀಪಃ – तच्छ्रुक्तमिति ।।** 'न तु सुधायामिव सर्वश्रुत्युक्तं ब्रह्मपदार्थमात्रं जीव इति पूर्वपक्ष्यते' इति तच्छब्दप्रयोगाभिप्रायः । **उभयत्रापीति ।।** '' 'तदेव ब्रह्म' इति श्रुतौ विष्णौ 'बृहजातिजीव-कमलासनशब्दराशिषु' इति जीवे प्रयोगः'' इत्यर्थः । कारणत्वश्रवणात् जात्यादेरिहासन्देहनिविष्टत्वं व्यक्तम् । यद्वा तदप्युपलक्ष्यम् । **उत जीवादिरिति ।।** यथोक्तं न्यायविवरणटीकायाम् - 'जीव एवेति जात्यादेरुपलक्षणम् । एवशब्दस्तु भगवन्तं व्यावर्तयति' इति । **स्वकृतेति ।।** 'यतो नारायणप्रसादमृते' इत्यादिना स्वकृतेत्यर्थः । तथा चेतःपूर्वसूत्रे विष्णुत्वासाधनात् सन्देहो युक्त इति भावः ।

ಸುಧಾದಲ್ಲಿ 'ಸರ್ವಶ್ರುತಿಗಳಲ್ಲಿ ಹೇಳಿದ ಬ್ರಹ್ಮಪದದ ಅರ್ಥವು ಜೀವ' ಎಂಬುದಾಗಿ ಪೂರ್ವಪಕ್ಷವನ್ನು ಮಾಡಿದ್ದಾರೆ. ಇಲ್ಲಿ 'ತಚ್ಛ್ರುತ್ಯುಕ್ತಮ್' ಎಂಬುದಾಗಿ 'ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಿದ ಬ್ರಹ್ಮಪದಕ್ಕೆ ಮಾತ್ರ 'ಜೀವ' ಎಂಬುದಾಗಿ ಪೂರ್ವಪಕ್ಷ ಮಾಡುತ್ತಿದ್ದಾರೆ. ಅದಕ್ಕಾಗಿಯೇ ತತ್‌ಶಬ್ದವನ್ನು ಪ್ರಯೋಗಮಾಡಿದ್ದಾರೆ. 'ತದೇವ ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದವು ವಿಷ್ಣು ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. 'ಬೃಹಜಾತಿಜೀವಕಮಲಾಸನ-ಶಬ್ದರಾಶಿಷು' ಎಂಬಲ್ಲಿ 'ಜೀವ' ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಇದನ್ನು 'ಉಭಯತ್ರಾಪಿ' ಎಂಬುದರಿಂದ ಹೇಳುತ್ತಿದ್ದಾರೆ. ಇಲ್ಲಿ ಕಾರಣತ್ವವನ್ನು ಹೇಳಿದ್ದರಿಂದ ಜಾತ್ಯಾದಿಗಳನ್ನು ಸಂದೇಹದಲ್ಲಿ ಸೇರಿಸಿಕೊಳ್ಳಬೇಕಾಗಿಲ್ಲ. ಅಥವಾ ಜಾತ್ಯಾದಿಗಳನ್ನೂ ಕೂಡ 'ಉತ ಜೀವಾದಿಃ' ಎಂಬುದಾಗಿ ಸಂದೇಹದಲ್ಲಿ ಸೇರಿಸಿಕೊಳ್ಳಬೇಕು. ಇದನ್ನು

ನ್ಯಾಯವಿವರಣಟೀಕೆಯಲ್ಲಿ 'ಜೀವ ಏವೇತಿ ಜಾತ್ಯಾದೇರುಪಲಕ್ಷಣಮ್ । ಏವಶಬ್ದಸ್ತು ಭಗವಂತಂ ವ್ಯಾವರ್ತಯತಿ' (ಜೀವ ಏವ ಎಂಬಲ್ಲಿ ಜಾತ್ಯಾದಿಗಳನ್ನೂ ಕೂಡ ಉಪಲಕ್ಷಣಾ ಸ್ವೀಕರಿಸಬೇಕು. ಏವಶಬ್ದದಿಂದ ಭಗವಂತನನ್ನು ಮಾತ್ರ ಬಿಡಬೇಕು) ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. 'ಸ್ವಕೃತ' ಎಂಬ ಶಬ್ದಕ್ಕೆ 'ಯತೋ ನಾರಾಯಣಪ್ರಸಾದಮೃತೇ' ಇತ್ಯಾದಿ ವಾಕ್ಯಗಳಿಂದ ಎಂದು ಅರ್ಥ. ಆದ್ದರಿಂದ ಈ ಹಿಂದಿನ ಸೂತ್ರದಲ್ಲಿ 'ಬ್ರಹ್ಮಶಬ್ದಕ್ಕೆ ವಿಷ್ಣು ಎಂಬುದಾಗಿ ಅರ್ಥ' ಎಂಬ ವಿಷಯವನ್ನು ಸಾಧಿಸದಿರುವುದರಿಂದ ಈ ಸಂಶಯವು ಯುಕ್ತವಾಗಿದೆ ಎಂದು ಅಭಿಪ್ರಾಯ.

ವಿಶೇಷ ವಿಚಾರ - ಪ್ರಶ್ನೆ :- 'ತದೇವ ಬ್ರಹ್ಮ' ಇತ್ಯಾದಿ ಕಡೆಯಲ್ಲಿರುವ ಬ್ರಹ್ಮಶಬ್ದವು ವಿಷ್ಣುಪರವಾದರೂ 'ತದ್ ವಿಜಿಜ್ಞಾಸಸ್ವ ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವು ವಿಷ್ಣುಪರವಾಗುವುದಿಲ್ಲವೆಂದು ಚಂದ್ರಿಕೆಯಲ್ಲಿ ಹೇಳಿದೆ. ಆದರೆ ಸುಧೆಯಲ್ಲಿ ಸಮಸ್ತ ಶ್ರುತಿಗಳಲ್ಲಿ ಎಲ್ಲೆಲ್ಲಿ ಬ್ರಹ್ಮಶಬ್ದವಿದೆಯೋ ಆ ಎಲ್ಲಾ ಬ್ರಹ್ಮಶಬ್ದಗಳಿಂದಲೂ ವಿಷ್ಣುವು ವಾಚ್ಯನಲ್ಲವೆಂದು ಪೂರ್ವಪಕ್ಷ ಮಾಡಿಕೊಳ್ಳಲಾಗಿದೆ. ಆದ್ದರಿಂದ ಸುಧೆಗೂ ಚಂದ್ರಿಕೆಗೂ ವಿರೋಧ ಬಂತಲ್ಲವೇ?

ಉತ್ತರ : - ಸುಧೆಯಲ್ಲಿ ಹಾಗೆ ಹೇಳಿದ್ದರೂ ಟೀಕೆಯಲ್ಲಿ ಎಲ್ಲೆಡೆ ಬ್ರಹ್ಮಶಬ್ದವಾಚ್ಯತ್ವವನ್ನು ವಿಷ್ಣುವಿಗೆ ಒಪ್ಪಿ 'ತದ್ಬ್ರಹ್ಮ' ಎಂಬ ಶ್ರುತಿಯಲ್ಲಿರುವ ಬ್ರಹ್ಮಶಬ್ದದಿಂದ ವಿಷ್ಣುವು ವಾಚ್ಯನಲ್ಲವೆಂದಷ್ಟೇ ಹೇಳಿದ್ದರಿಂದ ಸುಧೆಯ ವಿರೋಧವಿಲ್ಲ. ಅನೇಕಪ್ರಕಾರಗಳಲ್ಲಿ ಪೂರ್ವಪಕ್ಷ ಮಾಡಬಹುದು. ಸುಧೆಯಲ್ಲಿ ಮಾಡಿದ ಕ್ರಮವೇ ಬೇರೆ. ಟೀಕೆಯಲ್ಲಿ ಮಾಡಿದ ಕ್ರಮವೇ ಬೇರೆ. ಸುಧೆಯಲ್ಲಿ ಮಾಡಿದ ಪೂರ್ವಪಕ್ಷಕ್ರಮವನ್ನು ಚಂದ್ರಿಕೆಯಲ್ಲಿ ಇಟ್ಟುಕೊಂಡಿಲ್ಲ.

ಶಂಕೆ - ಕೆಲವು ಕಡೆ ಇರುವ ಬ್ರಹ್ಮಶಬ್ದವು ಯೋಗವೃತ್ತಿಯಿಂದ ವಿಷ್ಣುಪರವೆಂದು ಅಂಗೀಕರಿಸಿದರೆ ಶಾಖಾಂತರಾಧಿಕರಣನ್ಯಾಯದಿಂದ 'ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವೂ ವಿಷ್ಣುಪರವೆಂದು ತಿಳಿಯುತ್ತದೆ.

ಸಮಾಧಾನ - ಶಾಖಾಂತರಾಧಿಕರಣನ್ಯಾಯವನ್ನು ಹೇಳಬೇಕಾದರೆ ಎರಡುಕಡೆಯೂ ಸಮಾನನ್ಯಾಯ ಇರಬೇಕು. ಉಳಿದೆಡೆ ಸಮುದ್ರಶಾಯಿತ್ವಾದಿ-ಲಿಂಗಗಳಿರುವುದರಿಂದ ವಿಷ್ಣುಪರತ್ವವು ಸಿದ್ಧವಾಗಿದೆ. ಆದರೆ ಅಂತಹ ಲಿಂಗಗಳು ಇಲ್ಲಿ

ಇಲ್ಲದಿರುವುದರಿಂದ ಶಾಖಾಂತರಾಧಿಕರಣನ್ಯಾಯವನ್ನು ಹೇಳಲಾಗದು. 'ತದ್‌ಬ್ರಹ್ಮ' ಎಂಬಲ್ಲಿನ ಬ್ರಹ್ಮಶಬ್ದವು ವಿಷ್ಣುಪರವಾಗದು.

## 'ಬ್ರಹ್ಮ'ಶಬ್ದಕ್ಕೆ ಯೌಗಿಕಾರ್ಥ ಸಿದ್ಧವಾಗಿಲ್ಲ

**ಭಾವದೀಪಃ** – यत् तु 'स विष्णुराह हि' इत्यादावेतत् पूर्वभाविसूत्रद्वये ब्रह्मशब्दस्य विष्णौ मुख्यत्वं सिद्धम् । अस्मिन्नपि शास्त्रे 'स्याच्चैकस्य ब्रह्मशब्दवत्' इत्यत्र द्वितीये, 'परं जैमिनिर्मुख्यत्वात्' इति चतुर्थे च मुख्यत्वं सूत्र एव सिद्धमिति । तन्न । योगेनैव तत्र मुख्यत्वस्याभिमतत्वात्। इह 'तद् ब्रह्म' इति श्रुतौ योगार्थस्यैव पूर्वपक्षिणाऽऽक्षेपात् । विष्णौ विद्वद्रूढिसत्त्वेपि इह तदभावाभ्युपगमेन केवलयौगिकत्वोपगमेनोत्तर-पक्षप्रवृत्तेः इति तात्पर्यात् । अभ्युपगमकृत्यं तु 'अभ्युपगम्योक्तिरियम्' इति टीकाव्याख्याने वक्ष्यामः ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು – 'ಸ ವಿಷ್ಣುರಾಹ ಹಿ' ಇವೇ ಮೊದಲಾದ ಈ ಮೊದಲು ಬಂದ ಎರಡು ಸೂತ್ರಗಳಲ್ಲಿ ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿ ಮುಖ್ಯತ್ವವು ಸಿದ್ಧವಾಗಿದೆ. ಈ ಶಾಸ್ತ್ರದಲ್ಲಿಯೂ ಕೂಡ ಎರಡನೇ ಅಧ್ಯಾಯದಲ್ಲಿ 'ಸ್ಯಾತ್ ಚ ಏಕಸ್ಯ ಬ್ರಹ್ಮಶಬ್ದವತ್' ಎಂಬ ಸೂತ್ರದಲ್ಲಿ ನಾಲ್ಕನೆಯ ಅಧ್ಯಾಯದಲ್ಲಿ 'ಪರಂ ಜೈಮಿನಿರ್ಮುಖ್ಯತ್ವಾತ್' ಎಂಬ ಸೂತ್ರದಲ್ಲಿ ಕೂಡ ಸೂತ್ರದಲ್ಲಿಯೇ ಮುಖ್ಯತ್ವವು ಸಿದ್ಧವಾಗಿದೆ – ಎಂಬುದಾಗಿ. ಇದು ಸರಿಯಲ್ಲ. ಈ ಸೂತ್ರಗಳಲ್ಲಿ ಯೋಗದಿಂದಲೇ ಮುಖ್ಯತ್ವವು ಅಭಿಪ್ರೇತವಾಗಿದೆ. ಇಲ್ಲಿ 'ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಯೋಗಾರ್ಥವನ್ನೇ ಪೂರ್ವಪಕ್ಷಿಗಳು ಆಕ್ಷೇಪಿಸುತ್ತಿದ್ದಾರೆ. ವಿಷ್ಣುವಿನಲ್ಲಿ ವಿದ್ವದ್‌ರೂಢಿ ಇದ್ದರೂ ಕೂಡ ಅದು ಇಲ್ಲ ಎಂಬುದಾಗಿ ಒಪ್ಪಿಕೊಂಡು, ಕೇವಲ ಯೌಗಿಕತ್ವವನ್ನು ಒಪ್ಪಿಕೊಳ್ಳುವುದರ ಮೂಲಕ ಉತ್ತರಪಕ್ಷವು ಪ್ರವೃತ್ತವಾಗಿದೆ. ಎಂದು ಅಭಿಪ್ರಾಯ. ಹೀಗೆ ಒಪ್ಪಿಕೊಳ್ಳುವುದಕ್ಕೆ ಪ್ರಯೋಜನವನ್ನು 'ಅಭ್ಯುಪಗಮ್ಯೋಕ್ತಿಃ' ಎಂಬ ಟೀಕಾವ್ಯಾಖ್ಯಾನದಲ್ಲಿ ವಿವರಿಸುತ್ತೇವೆ.

## ನ್ಯಾಯವಿವರಣ ವ್ಯಾಖ್ಯಾನ

**ಭಾವದೀಪಃ – 'ನ ಚ ಜೀವ ಏವಾಯಂ ಬ್ರಹ್ಮಶಬ್ದಃ' ಇತಿ ನ್ಯಾಯವಿವರಣಂ ವಿವೃಣ್ವಾನ ಆಹ – ಜೀವ ಏವೇತಿ ।। ತತ್ರಸ್ಥ 'ಏವ'ಕಾರಸೂಚಿತಹೇತುಮಾಹ – ರೂಢತ್ವಾದಿತಿ ।। ಗುಣಪೂರ್ತಿರೂಪಯೋಗಸ್ಯ ಜೀವೇ ಅಯೋಗಾತ್ । ಅನ್ಯಸ್ಯ ಚಾನತಿಪ್ರಸಕ್ತಸ್ಯಾಭಾವಾತ್ ಜಾತ್ಯಾದಿಸಾಹಚರ್ಯಾಚ್ಚ ರೂಢತ್ವಮೇವೇತಿ ಭಾವಃ ।**

ನ್ಯಾಯವಿವರಣದಲ್ಲಿ ಹೇಳಿದ 'ನ ಚ ಜೀವ ಏವಾಯಂ ಬ್ರಹ್ಮಶಬ್ದಃ' ಎಂಬ ವಾಕ್ಯವನ್ನು ವಿವರಿಸುವುದಕ್ಕಾಗಿ 'ಜೀವ ಏವ' ಇತ್ಯಾದಿ ವಾಕ್ಯವನ್ನು ಹೇಳುತ್ತಿದ್ದಾರೆ. ಇಲ್ಲಿರುವ 'ಏವ'ಕಾರದಿಂದ ಸೂಚಿತವಾದ ಹೇತುವನ್ನೇ ''ರೂಢತ್ವಾತ್' ಎಂಬುದಾಗಿ ವಿವರಿಸಿದ್ದಾರೆ. ''ಗುಣಪೂರ್ತಿರೂಪವಾದ ಯೋಗಾರ್ಥವು ಜೀವನಲ್ಲಿ ಹೊಂದದಿರುವುದರಿಂದ ಅತಿಪ್ರಸಕ್ತಿ ಇಲ್ಲದ ಬೇರೆ ಅರ್ಥವು ಇಲ್ಲದಿರುವುದರಿಂದ ಜಾತ್ಯಾದಿಗಳ ಸಾಹಚರ್ಯ ಇರುವುದರಿಂದ ರೂಢತ್ವವೇ ಇಲ್ಲಿ ಹೇತುವಾಗಿದೆ'' ಎಂದು ಅಭಿಪ್ರಾಯ.

## ಬ್ರಹ್ಮಶಬ್ದದ ರೂಢಿ ಜೀವನಲ್ಲಿ ಮಾತ್ರ

**ಭಾವದೀಪಃ – ಪ್ರವರ್ತತ ಇತಿ ।। 'ತದೇವ ಬ್ರಹ್ಮ' ಇತ್ಯಾದಿಶ್ರುತಾವಿತಿ ಭಾವಃ । ಯೋಗೇನೈವೇತಿ ।। ರೂಢತ್ವೇ ಗುಣಪೂರ್ತ್ಯಸಿದ್ಧೇರಿತಿ ಭಾವಃ । 'ಏವ'ಕಾರಸ್ತು ಯೋಗರೂಢಿವ್ಯುದಾಸಾರ್ಥಃ । 'ಬೃಹನ್ತೋ ಹ್ಯಸ್ಮಿನ್ ಗುಣಾಃ' ಇತಿ ಶ್ರುತ್ಯನುಸಾರಿಕೃಪಾವಯವ-ಶಕ್ತಿರೂಪಯೋಗೇನೈವೋಪಪತ್ತೌ ಸಮುದಾಯಶಕ್ತಿರೂಪರೂಢೇಃ 'ತದೇವ ಬ್ರಹ್ಮ' ಇತ್ಯಾದಾವಪಿ ಸರ್ವತ್ರಾಕಲ್ಪಕತ್ವಾದಿತಿ ಭಾವಃ । ಏತೇನ ವಿಷ್ಣೌ ಬ್ರಹ್ಮಶಬ್ದಸ್ಯ ರೂಢಿರಪ್ಯಾಕ್ಷಿಪ್ತಾ । ರೂಢೇರೇವೇತಿ ।। ಅವಯವಾರ್ಥನಿರಪೇಕ್ಷಾಯಾಃ ಶೀಘ್ರಮರ್ಥೋಪಸ್ಥಾಪಕತ್ವಾದಿತಿ ಭಾವಃ ।**

'ಪ್ರವರ್ತತೇ' ಎಂದರೆ 'ತದೇವ ಬ್ರಹ್ಮ' ಇತ್ಯಾದಿಶ್ರುತಿಯಲ್ಲಿ ಪ್ರವೃತ್ತವಾಗಿದೆ ಎಂದು ಅಭಿಪ್ರಾಯ. 'ಯೋಗೇನೈವ' ಎಂಬುದರಿಂದ ''ರೂಢತ್ವವನ್ನು ಒಪ್ಪಿಕೊಂಡರೆ ಗುಣಪೂರ್ಣತ್ವವು ಸಿದ್ಧವಾಗುವುದಿಲ್ಲ'' ಎಂದು ಅರ್ಥ. ಇಲ್ಲಿರುವ 'ಏವ'ಕಾರವನ್ನು ಯೋಗರೂಢಿಯನ್ನು ನಿರಾಸಮಾಡಲು ಬಳಸಿದ್ದಾರೆ. 'ಬೃಹಂತೋ ಹ್ಯಸ್ಮಿನ್‌ಗುಣಾಃ' ಎಂಬ ಶ್ರುತಿಗೆ ಅನುಸಾರಿಯಾಗಿ ಸ್ಪಷ್ಟವಾಗಿ ಅವಯವಶಕ್ತಿರೂಪವಾದ ಯೋಗಾರ್ಥದಿಂದಲೇ ಅರ್ಥವನ್ನು ಹೊಂದಿಸಲು ಬರುತ್ತಿರುವಾಗ, ಸಮುದಾಯಶಕ್ತಿರೂಪವಾದ ರೂಢಿಯು

'ತದೇವ ಬ್ರಹ್ಮ' ಇತ್ಯಾದಿ ಕಡೆಗಳಂತೆ ಎಲ್ಲಾ ಕಡೆ ಹೊಂದಾಣಿಕೆಯಾಗಲಾರದು. ಇದರಿಂದ ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿ ರೂಢಿಯನ್ನು ಕೂಡ ಆಕ್ಷೇಪಿಸಿದಂತೆ ಆಯಿತು. 'ರೂಢೇರೇವ' ಎಂಬ ಪದದಿಂದ ಅವಯವದ ಅರ್ಥವನ್ನು ಅಪೇಕ್ಷಿಸದೆ ಶೀಘ್ರವಾಗಿ ಅರ್ಥವನ್ನು ತಿಳಿಸುವುದರಿಂದ ರೂಢಿಯೇ ಪ್ರಬಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಿಶೇಷ ವಿಚಾರ - 'ತದ್‌ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿರುವ ಬ್ರಹ್ಮಶಬ್ದಪ್ರತಿಪಾದ್ಯನು ಜೀವನೇ ಹೊರತು ವಿಷ್ಣುವಲ್ಲ. ಈ ವಿಷಯದಲ್ಲಿ 'ಯೋಗಾದ್ರೂಢೇರ್ಬಲೀಯಸೀ' ಎಂಬ ನ್ಯಾಯವೇ ಪ್ರಬಲಪ್ರಮಾಣವಾಗಿದೆ. ವಿಷ್ಣುವಿನಲ್ಲಿ ಕೇವಲ ಯೋಗವಿದೆ ಹೊರತು ರೂಢಿ ಇಲ್ಲ. ಜೀವನಲ್ಲಿ ಕೇವಲ ರೂಢಿ ಇದೆ ಹೊರತು ಯೋಗವಿಲ್ಲ. ಈ ಯೋಗಾರ್ಥ ಮತ್ತು ರೂಢ್ಯರ್ಥಗಳಲ್ಲಿ ತತ್ ಕ್ಷಣ ತಿಳಿಯುವಂತಹದ್ದು ರೂಢ್ಯರ್ಥವಾದ್ದರಿಂದ ಬ್ರಹ್ಮಶಬ್ದಪ್ರತಿಪಾದ್ಯನು ಜೀವನೇ ಆಗುತ್ತಾನೆ.

ಶಂಕೆ - ಜೀವನಂತೆ ವಿಷ್ಣುವೂ ಸಹ ರೂಢ್ಯರ್ಥನೇ ಆಗಿದ್ದಾನೆ. 'ಯೋಗಾದ್ರೂಢೇರ್ಬಲೀಯಸೀ' ಎಂಬ ನ್ಯಾಯದಂತೆ ರೂಢ್ಯರ್ಥನಾದ ಜೀವನನ್ನು ಬ್ರಹ್ಮಶಬ್ದಪ್ರತಿಪಾದ್ಯನೆಂದು ಹೇಳುವುದಾದರೆ ಅದೇ ನ್ಯಾಯದಿಂದಲೇ ರೂಢ್ಯರ್ಥನಾದ ವಿಷ್ಣುವನ್ನು ಬ್ರಹ್ಮಶಬ್ದಪ್ರತಿಪಾದ್ಯನೆಂದು ಹೇಳಿದಾಗ ನಿಮಗೆ ಉತ್ತರಿಸಲಾಗದು.

ಸಮಾಧಾನ - ಪ್ರತಿಯೊಂದು ಶಬ್ದಗಳು ಒಂದೊಂದು ಗುಣಗಳನ್ನು ಹೇಳುತ್ತವೆ. ಬ್ರಹ್ಮಶಬ್ದವು 'ಗುಣಪರಿಪೂರ್ಣತ್ವ' ಎಂಬ ಗುಣವನ್ನು ಹೇಳುತ್ತದೆ. ಆದರೆ ಶಬ್ದಕ್ಕೆ ಯೋಗವನ್ನು ಒಪ್ಪಿದಾಗ ಮಾತ್ರ ಅದರಿಂದ ಗುಣವು ತಿಳಿಯಲು ಸಾಧ್ಯ. ರೂಢಿಯಿಂದ ಯಾವ ಗುಣವೂ ತಿಳಿಯಲಾರದು. ಪ್ರಕೃತ ನೀವು ಬ್ರಹ್ಮಶಬ್ದಕ್ಕೆ ರೂಢ್ಯರ್ಥವನ್ನು ಹೇಳಿದರೆ ಗುಣಪರಿಪೂರ್ಣತ್ವವೆಂಬ ಗುಣವು ಸಿದ್ಧಿಸುವುದಿಲ್ಲ. ಜೀವನಲ್ಲಿ ಗುಣಪೂರ್ಣತ್ವವು ಇಲ್ಲವಾದ್ದರಿಂದ ರೂಢಿಯನ್ನು ಒಪ್ಪಿದರೆ ಬಾಧಕವಿಲ್ಲ. ಆದರೆ ವಿಷ್ಣುವಿನಲ್ಲಿ ಗುಣಪೂರ್ಣತ್ವವನ್ನು ಒಪ್ಪಿದ್ದರಿಂದ ಯೋಗವನ್ನೇ ಹೇಳಬೇಕಾಗುತ್ತದೆ.

ಶಂಕೆ - ಗುಣಪೂರ್ಣತೆಗೋಸ್ಕರ ಯೋಗವನ್ನು ಹೇಳುತ್ತೇವೆ. ಇದರ ಜೊತೆಗೆ ರೂಢಿಯನ್ನೂ ಹೇಳುತ್ತೇವೆ. ರೂಢಿಯನ್ನು ಹೇಳುವುದರಿಂದ ಜೀವನಂತೆ ಇವನೂ ಬ್ರಹ್ಮಶಬ್ದಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತದೆ. ಶಬ್ದದಲ್ಲಿ ಹೀಗೆ ಯೋಗಯುಕ್ತವಾದ ರೂಢಿಯನ್ನು ಹೇಳುವುದು ಪಂಕಜಾದಿಶಬ್ದಗಳಲ್ಲಿ ಕಂಡಿದೆ. ಕಮಲವು ಕೆಸರಿನಿಂದ ಹುಟ್ಟಿರುವುದರಿಂದ ಯೋಗವು ಇದೆ. ಕಮಲದಲ್ಲೇ ಪಂಕಜಶಬ್ದವನ್ನು ಹೆಚ್ಚಾಗಿ ಬಳಸುವುದರಿಂದ ರೂಢಿಯೂ ಇದೆ. ಅದರಂತೆ ಇಲ್ಲಿಯೂ ಯೋಗರೂಢಿಯನ್ನು

ಅಂಗೀಕರಿಸೋಣ. ಯೋಗಕ್ಕಿಂತ ರೂಢಿಯು ಪ್ರಬಲವಾದರೂ ರೂಢಿಗಿಂತಲೂ ಯೋಗರೂಢಿಯು ಪ್ರಬಲವಾಗಿದೆ. ಆದ್ದರಿಂದ ಈ ಯೋಗರೂಢಿಯು ಯುಕ್ತವೂ ಪ್ರಬಲವೂ ಆಗಿದೆ.

ಸಮಾಧಾನ- ಇದು ಸರಿಯಲ್ಲ. ಜಿಜ್ಞಾಸ್ಯನಾದ ವಿಷ್ಣುವಿನಲ್ಲಿ ಅವಯವಶಕ್ತಿಯನ್ನು ಒಪ್ಪಬೇಕೆಂದು 'ಬೃಹಂತೋ ಹ್ಯಸ್ಮಿನ್ ಗುಣಾಃ' ಎಂಬ ಶ್ರುತಿಯು ಹೇಳುತ್ತಿದೆ. ಹೀಗೆ ಪ್ರಮಾಣಸಿದ್ಧವಾದ ಅವಯವಶಕ್ತಿಯನ್ನು ಒಪ್ಪಿಯೇ ಬ್ರಹ್ಮಶಬ್ದವನ್ನು ವಿಷ್ಣುವಿನಲ್ಲಿ ಕೂಡಿಸಲು ಬರುವಾಗ ಸಮುದಾಯಶಕ್ತಿ (ರೂಢಿ)ಯನ್ನು ಅಂಗೀಕರಿಸಲು ಯಾವುದೇ ಪ್ರಮಾಣವಿಲ್ಲ. ಆದ್ದರಿಂದ ಯೋಗರೂಢಿಯು ಇಲ್ಲಿ ಅಪ್ರಾಮಾಣಿಕವೇ ಆಗಿದೆ.

## ನ್ಯಾಯವಿವರಣಕ್ಕನುಗುಣವಾದ ಟೀಕೆಯ ಪೂರ್ವಪಕ್ಷ

**ಭಾವದೀಪಃ – 'ತದೇವ ಬ್ರಹ್ಮ' ಇತ್ಯಾದಾವಿವಾತ್ರಾಪ್ಯಸ್ತು, ಇತ್ಯತ ಆಹ – ನ ಚಾತ್ರೇತಿ ।। 'ತದ್ ಬ್ರಹ್ಮ' ಇತ್ಯಾದಿಶ್ರುತೌ – ಇತ್ಯರ್ಥಃ । ತಾದೃಶಂ ಸಮುದ್ರಶಾಯಿತ್ವಾದಿರೂಪಮ್। ಕಾರಣತ್ವಂ ತ್ವದೃಷ್ಟದ್ವಾರಾ ಜೀವೇಪಿ ಯುಕ್ತಮಿತಿ ಭಾವಃ । ಉಕ್ತಂ ಪ್ರಮೇಯಂ ಪೂರ್ವಪಕ್ಷನ್ಯಾಯವಿವರಣಾರೂಢಂ ಕುರ್ವನ್ ಉಪಸಂಹರತಿ – ತಸ್ಮಾದ್ ರೂಢೌ ಬಾಧಕಾಭಾವಾದಿತಿ।।**

''ತದೇವ ಬ್ರಹ್ಮ'' ಇತ್ಯಾದಿ ವಾಕ್ಯಗಳಂತೆ ಇಲ್ಲೂ ಕೂಡ ರೂಢಿಯನ್ನೇ ಒಪ್ಪಿಕೊಳ್ಳಬಹುದಲ್ಲವೇ? ಎಂದರೆ ಇದಕ್ಕೆ ಉತ್ತರವಾಗಿ 'ನ ಚಾತ್ರ' ಇತ್ಯಾದಿಯಾಗಿ ವಾಕ್ಯವನ್ನು ಹೇಳುತ್ತಿದ್ದಾರೆ. ಇಲ್ಲಿ 'ಅತ್ರ' ಎಂಬ ಪದದಿಂದ 'ತದ್ ಬ್ರಹ್ಮ' ಎಂಬ ಶ್ರುತಿಯನ್ನು ಸ್ವೀಕರಿಸಬೇಕು. ತಾದೃಶಂ ಎಂಬ ಪದದಿಂದ ಸಮುದ್ರಶಾಯಿತ್ವಾದಿ ಹೇತುವನ್ನು ಇಟ್ಟುಕೊಳ್ಳಬೇಕು. 'ಜನ್ಮಾದಿಕಾರಣತ್ವವು ಅದೃಷ್ಟದ್ವಾರಾ ಜೀವನಲ್ಲಿಯೂ ಹೊಂದಬಲ್ಲದು' ಎಂದು ಅಭಿಪ್ರಾಯ. ಈ ಪ್ರಮೇಯವನ್ನು ನ್ಯಾಯವಿವರಣದ ಪೂರ್ವಪಕ್ಷಕ್ಕೆ ಹೊಂದಿಸುತ್ತಾ ''ತಸ್ಮಾತ್'' ಎಂಬ ವಾಕ್ಯದಿಂದ ಉಪಸಂಹಾರ ಮಾಡುತ್ತಿದ್ದಾರೆ.

ವಿಶೇಷ ವಿಚಾರ - ಹಿಂದಿನ ಸೂತ್ರದಲ್ಲಿ ಗುಣಪೂರ್ಣತ್ವಪ್ರಕಾರಕನಾದ ಬ್ರಹ್ಮನ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಲಾಯಿತು. ಆದರೆ ವಿಷಯವಾಕ್ಯವಾದ 'ತದ್ವಿಜಿಜ್ಞಾಸಸ್ವ ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದದಿಂದ ವಿಷ್ಣುವು ವಾಚ್ಯನಾದರೆ ಮಾತ್ರ ಗುಣಪರಿಪೂರ್ಣತ್ವಪ್ರಕಾರಕನಾದ ಬ್ರಹ್ಮನ ಜಿಜ್ಞಾಸೆಯು ಕೂಡುತ್ತದೆ. ಇಲ್ಲಿರುವ ಬ್ರಹ್ಮಶಬ್ದದಿಂದ ವಾಚ್ಯನಾದವನು ಜೀವನೇ ಹೊರತು ವಿಷ್ಣುವಲ್ಲ. ಏಕೆಂದರೆ 'ಯೋಗಾದ್ಯೂಢೇರ್ಬಲೀಯಸೀ' ಎಂಬ ನ್ಯಾಯದಂತೆ

ರೂಢ್ಯರ್ಥವನ್ನು ಯೋಗವು ಬಾಧಿಸಲಾರದು. ಆದ್ದರಿಂದ 'ತದ್‌ಬ್ರಹ್ಮ' ಎಂಬಲ್ಲಿ ಬ್ರಹ್ಮಶಬ್ದವಾಚ್ಯನಾದವನು ಜೀವನೇ ಆಗಿದ್ದಾನೆ. ಹಾಗಾದರೆ 'ತದೇವ ಬ್ರಹ್ಮ ಪರಮಂ ಕವೀನಾಮ್' ಎಂಬಲ್ಲಿಯೂ ಬ್ರಹ್ಮಶಬ್ದದಿಂದ ಜೀವನೇ ವಾಚ್ಯನಾಗಲಿ? ಎಂದರೆ ವಿಷ್ಣುವು ಇಲ್ಲಿ ಬ್ರಹ್ಮಶಬ್ದವಾಚ್ಯನಾಗಲು 'ಸಮುದ್ರಶಾಯಿತ್ವ' ಎಂಬ ಲಿಂಗವಿದೆ. ಲಿಂಗವು ರೂಢಿಯನ್ನು ಬಾಧಿಸುವುದರಿಂದ 'ಯೋಗಾದ್ರೂಢೇರ್ಬಲೀಯಸೀ' ಎಂಬ ನ್ಯಾಯವು ಇಲ್ಲಿ ಪ್ರಾಪ್ತವಾಗುವುದಿಲ್ಲ. ಆದರೆ 'ತದ್‌ಬ್ರಹ್ಮ' ಎಂಬಲ್ಲಿ ಈ ರೀತಿಯಾದ ಬಾಧಕಲಿಂಗಗಳೇನು ಇರುವುದಿಲ್ಲವಾದ್ದರಿಂದ ನ್ಯಾಯಾನುಸಾರಿಯಾಗಿ ಬ್ರಹ್ಮಶಬ್ದದಿಂದ ಜೀವನೇ ವಾಚ್ಯನಾಗುತ್ತಾನೆ.

## ಶ್ರುತ್ಯುಕ್ತಬ್ರಹ್ಮ ಜೀವನೆಂದು ಪೂರ್ವಪಕ್ಷ

**ಭಾವದೀಪಃ** – 'जीव एवेदं ब्रह्म' इत्यनेन 'जीव एवायं ब्रह्मशब्दः' इति न्यायविवरणमुक्तार्थम् । इदं ब्रह्म । 'तद् ब्रह्मेति श्रुत्युक्तं ब्रह्म' इत्यर्थः । अत्राप्येवकारेण पूर्वोक्तदिशा जात्यादिकमपि वा (विष्णुमात्रमेव वा) व्यावर्त्यं बोध्यम् । जीवादावनेकत्र ब्रह्मत्वबुद्धिप्रसक्तावेव लक्षणोक्त्या विष्णुरेवेदं ब्रह्मेति सिद्धान्तयितव्यत्वात् ।

'ಜೀವ ಏವೇದಂ ಬ್ರಹ್ಮ' ಎಂಬ ವಾಕ್ಯದಿಂದ ನ್ಯಾಯವಿವರಣದಲ್ಲಿ ಹೇಳಿದ 'ಜೀವ ಏವಾಯಂ ಬ್ರಹ್ಮಶಬ್ದಃ' ಎಂಬ ವಾಕ್ಯವನ್ನು ವಿವರಿಸುತ್ತಾರೆ. 'ಇದಂ ಬ್ರಹ್ಮ' ಎಂದರೆ 'ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಿದ ಬ್ರಹ್ಮ ಎಂದರ್ಥ. ಇಲ್ಲೂ ಕೂಡ ಏವಕಾರದಿಂದ ಹಿಂದೆ ಹೇಳಿದಂತೆ ಕೇವಲ ವಿಷ್ಣುವನ್ನು ಅಥವಾ ಜಾತ್ಯಾದಿಗಳನ್ನೂ ಕೂಡ ವ್ಯಾವೃತ್ತಿಮಾಡಿದಂತೆ ಆಗುತ್ತದೆ. 'ಜೀವನೇ ಮೊದಲಾದ ಅನೇಕ ಕಡೆಗಳಲ್ಲಿ ಬ್ರಹ್ಮತ್ವಬುದ್ಧಿಯು ಬಂದಾಗ ಮಾತ್ರ ಲಕ್ಷಣವನ್ನು ಹೇಳುವುದರ ಮೂಲಕ ಈ ಬ್ರಹ್ಮನು ವಿಷ್ಣುವೇ' ಎಂದು ಸಿದ್ಧಾಂತ-ಮಾಡಬೇಕಾಗಿರುವುದರಿಂದ ಹೀಗೆ ಅರ್ಥೈಸಬೇಕು.

## ಸ್ವಪ್ರಕಾಶನ ಜಿಜ್ಞಾಸೆ ಅನಾವಶ್ಯಕ

**ಭಾವದೀಪಃ** – तस्य स्वप्रकाशत्वान्न जिज्ञास्यतेति पूर्वाधिकरणपूर्वपक्षन्यायविवरणशेषं 'जीव एवायं ब्रह्मशब्दः' इत्यत्राप्यनुवर्त्य योज्यमिति भावेन वाक्यं पूरयति – **तस्य चेति** ।। एतेन फलं दर्शितम् । अत्र 'स्वप्रकाशत्वेन'

इति जात्यादेः सुप्रसिद्धत्वेनेत्यस्योपलक्षणम् वा (अध्याहारो वा) । 'इति'शब्दः पूर्वपक्षसमाप्तौ । एवमग्रेपि ।

'ತಸ್ಯ ಚ' ಎಂಬ ವಾಕ್ಯದಿಂದ ಹಿಂದಿನ ಅಧಿಕರಣದಲ್ಲಿ ನ್ಯಾಯವಿವರಣದಲ್ಲಿ ಹೇಳಿದ ಪೂರ್ವಪಕ್ಷದ ವಿವರಣರೂಪವಾದ 'ತಸ್ಯ ಸ್ವಪ್ರಕಾಶತ್ವಾತ್ ನ ಜಿಜ್ಞಾಸ್ಯತಾ' ಎಂಬ ಅಂಶವನ್ನು 'ಜೀವ ಏವಾಯಂ ಬ್ರಹ್ಮಶಬ್ದಃ' ಎಂಬಲ್ಲೂ ಕೂಡ ಅನುವೃತ್ತಿಮಾಡಿ ಹೊಂದಿಸಿಕೊಳ್ಳಬೇಕು ಎಂಬ ಅಭಿಪ್ರಾಯದಿಂದ ವಾಕ್ಯವನ್ನು ಪೂರ್ತಿಗೊಳಿಸುತ್ತಿದ್ದಾರೆ. ಇದರಿಂದ ಪೂರ್ವಪಕ್ಷದ ನಿರ್ಣಯವನ್ನು ಹೇಳಿದ್ದಾರೆ. ಇಲ್ಲಿ 'ಸ್ವಪ್ರಕಾಶತ್ವೇನ' ಎಂಬುದರಿಂದ ಜೀವನನ್ನು ಹೇಳಿದರೂ ಜಾತ್ಯಾದಿಗಳ ವಿಷಯದಲ್ಲಿ 'ಸುಪ್ರಸಿದ್ಧತ್ವೇನ' ಎಂಬ ಅಂಶವನ್ನು ಉಪಲಕ್ಷಣತಯಾ ಸ್ವೀಕರಿಸಬೇಕು. ಅಥವಾ ಆ ಅಂಶವನ್ನು ಅಧ್ಯಾಹಾರ ಮಾಡಬೇಕು. ''ಇತಿ'' ಶಬ್ದವು ಪೂರ್ವಪಕ್ಷವು 'ಇಲ್ಲಿಗೆ ಮುಗಿಯಿತು' ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ. ಮುಂದೆಯೂ ಕೂಡ ಇಲ್ಲಿ ಹೇಳಿದ ಕ್ರಮದಂತೆ ಅರ್ಥೈಸಿಕೊಳ್ಳಬೇಕು.

ಒಟ್ಟು ಅಭಿಪ್ರಾಯ - ಇಲ್ಲಿ ಒಂದು ಸಂದೇಹ - ಬ್ರಹ್ಮಶಬ್ದದ ರೂಢಿಯನ್ನು ಜೀವನಲ್ಲಿ ಹೇಗೆ ಹೇಳುತ್ತಿರಿ? 'ತದ್‌ವಿಜಿಜ್ಞಾಸಸ್ವ' ಎಂದು ಜಿಜ್ಞಾಸ್ಯತ್ವವು ಬ್ರಹ್ಮನಲ್ಲಿ ಕೇಳಿಸುತ್ತಿದೆ. ಜೀವನೇ ಬ್ರಹ್ಮನಾದಲ್ಲಿ ಜಿಜ್ಞಾಸ್ಯತ್ವ ಕೂಡುವುದಿಲ್ಲ. ಜೀವನು 'ಅಹಂ' ಎಂದು ನಿತ್ಯಸಿದ್ಧನಾದ್ದರಿಂದ ಸಂದಿಗ್ಧನಾಗಿಲ್ಲ. ಆದ್ದರಿಂದಲೇ ಜಿಜ್ಞಾಸ್ಯನೂ ಆಗಲಾರ. ಹೀಗೆ ರೂಢಿಗೆ ಬಾಧಕವಿರುವುದರಿಂದ ಯೋಗವನ್ನೇ ಆಶ್ರಯಿಸ ಬೇಕಲ್ಲವೇ?

ಈ ಸಂದೇಹಕ್ಕೆ ಅವಕಾಶವಿಲ್ಲ - ಜೀವನು ಸ್ವಪ್ರಕಾಶನಾದ್ದರಿಂದ ನಿತ್ಯಸಿದ್ಧನಾಗಿದ್ದರೂ ದೇಹಕ್ಕಿಂತ ಭಿನ್ನನಾಗಿದ್ದಾನೋ, ಅಭಿನ್ನನಾಗಿದ್ದಾನೋ ನಿತ್ಯನೋ, ಅನಿತ್ಯನೋ? ಅಣುನೋ, ವ್ಯಾಪ್ತನೋ? ಹೀಗೆ ಅನೇಕ ಪ್ರಕಾರಗಳಲ್ಲಿ ಜೀವನ ಬಗ್ಗೆ ಸಂದೇಹವಿರುವುದರಿಂದ ಜೀವನು ಜಿಜ್ಞಾಸ್ಯನೇ ಆಗುತ್ತಾನೆ.

ಹಾಗಾದರೆ ಈ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಆಕ್ಷೇಪ ಮಾಡಿಕೊಂಡೇ ಪೂರ್ವಪಕ್ಷಮಾಡಲಾಗಿದೆ - ಹಿಂದಿನ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿದ್ದಿರಿ. ಆದರೆ ಆ ಜಿಜ್ಞಾಸೆಯು ಕೂಡುವುದಿಲ್ಲ. ಏಕೆಂದರೆ 'ತದ್‌ಬ್ರಹ್ಮ' ಎಂಬಲ್ಲಿ ಬ್ರಹ್ಮಶಬ್ದಕ್ಕೆ ಜೀವ ಎಂದರ್ಥ. ಜೀವನ ಜಿಜ್ಞಾಸೆಯಂತೂ ಕೂಡುವುದಿಲ್ಲ. ಹೀಗೆ ಜಿಜ್ಞಾಸೆಯ ಆಕ್ಷೇಪವೇ ಈ ಅಧಿಕರಣದ ಪೂರ್ವಪಕ್ಷದ ಫಲ. ಹೀಗಿರುವಾಗ ನೀವು

ಜೀವನು ದೇಹಕ್ಕಿಂತ ಭಿನ್ನನೋ? ಅಭಿನ್ನನೋ? ಎಂದು ಜಿಜ್ಞಾಸ್ಯನಾಗಿದ್ದಾನೆಂದು ಹೇಳಿದರೆ ಆವಾಗ ಈ ಅಧಿಕರಣದ ಪೂರ್ವಪಕ್ಷವೇ ಹೊರಡಲು ಸಾಧ್ಯವಿಲ್ಲ. ಹಿಂದಿನ ಅಧಿಕರಣದಲ್ಲಿ ಹೇಳಿದ ಜಿಜ್ಞಾಸೆಯನ್ನು ತಪ್ಪೆಂದು ಆಕ್ಷೇಪಿಸಲು ಸಾಧ್ಯವಿಲ್ಲ.

ಹಿಂದಿನ ಸೂತ್ರದಲ್ಲಿ ಶಮದಮಾದಿಸಂಪನ್ನನಾದ ಅಧಿಕಾರಿಯು ಮೋಕ್ಷವೆಂಬ ಫಲಕ್ಕೋಸ್ಕರ ಜೀವಾನ್ಯನಾದ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದಷ್ಟೇ ಹೇಳಿದರು. ಆದರೆ 'ತದ್‌ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದಕ್ಕೆ ರೂಢಿಯಿಂದ ಜೀವನೆಂದರ್ಥ. ಜೀವನ ಜಿಜ್ಞಾಸೆಯನ್ನು ಶ್ರುತಿಯು ಹೇಳುತ್ತಿರುವಾಗ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದು ಸರಿಯಿಲ್ಲ. ಹೀಗೆ ಪೂರ್ವಾಧಿಕರಣದಲ್ಲಿ ಹೇಳಿದ ವಿಷ್ಣುಜಿಜ್ಞಾಸೆಯನ್ನು ಈ ಅಧಿಕರಣದಲ್ಲಿ ಆಕ್ಷೇಪ ಮಾಡಲಾಗಿದೆ. ಹೊರತು ಜೀವನ ಜಿಜ್ಞಾಸೆಯನ್ನು ಆಕ್ಷೇಪ ಮಾಡುತ್ತಿಲ್ಲ.

## ಟೀಕೆಯ ಒಂದು ವಾಕ್ಯ ಪ್ರಕ್ಷಿಪ್ತ

**भावदीपः** – अत्र क्वचित् 'जात्यादेर्मुख्यतोऽजिज्ञास्यत्वात् देहात्मविवेकस्यावश्यकत्वात्' इति टीकापाठो नात्रत्यटीकापाठः । 'तस्य च' इत्याद्युत्तरवाक्यानानुगुण्याच्चन्द्रिकावाक्यानानुगुण्याच्च । किन्तु न्यायविवरणटीकास्थ एवात्र कैश्चित् प्रक्षिप्तो बहुकोशेष्वदर्शनादित्याहुः ।

ಇಲ್ಲಿ ಕೆಲವೊಂದು ಕೋಶದಲ್ಲಿ 'ಜಾತ್ಯಾದೇಃ ಮುಖ್ಯತಃ ಅಜಿಜ್ಞಾಸ್ಯತ್ವಾತ್ ದೇಹಾತ್ಮವಿವೇಕಸ್ಯಾವಶ್ಯಕತ್ವಾತ್' ಎಂಬ ವಾಕ್ಯವು ಟೀಕಾಪಾಠವಾಗಿ ಬಂದಿದೆ. ಇದು ಇಲ್ಲಿಗೆ ಸಂಬಂಧಪಟ್ಟ ವಾಕ್ಯವಲ್ಲ. 'ತಸ್ಯ ಚ' ಇತ್ಯಾದಿ ಉತ್ತರವಾಕ್ಯಕ್ಕೆ ಇದು ಹೊಂದಾಣಿಕೆಯಾಗುವುದಿಲ್ಲ. ಹಾಗೆಯೇ ಚಂದ್ರಿಕಾವಾಕ್ಯಕ್ಕೂ ಕೂಡ ಹೊಂದಾಣಿಕೆಯಾಗುವುದಿಲ್ಲ. ಆದ್ದರಿಂದ ನ್ಯಾಯವಿವರಣಟೀಕಾದಿ ಗ್ರಂಥಗಳಲ್ಲಿ ಇರುವ ಈ ವಾಕ್ಯವನ್ನು ಕೆಲವರು ಇಲ್ಲಿ ಸೇರಿಸಿದ್ದಾರೆ. ಹೆಚ್ಚಿನ ಕೋಶಗಳಲ್ಲಿ ಈ ವಾಕ್ಯವು ಇರುವುದಿಲ್ಲ ಎಂಬುದಾಗಿ ಜ್ಞಾನಿಗಳು ಹೇಳುತ್ತಿದ್ದಾರೆ.

ವಿಶೇಷ ವಿಚಾರ - ಪೂರ್ವಪಕ್ಷಕ್ಕೆ ಒಟ್ಟು ಇಷ್ಟು ಅಭಿಪ್ರಾಯ - ಜೀವನು ಅಸಂದಿಗ್ಧನಾದ್ದರಿಂದ ಜಿಜ್ಞಾಸ್ಯನಲ್ಲ. ಆವನ ಧರ್ಮಗಳಾದ ದೇಹಭಿನ್ನತ್ವಾದಿಗಳು

इति जात्यादेः सुप्रसिद्धत्वेनेत्यस्योपलक्षणम् वा (अध्याहारो वा) । 'इति'शब्दः पूर्वपक्षसमाप्तौ । एवमग्रेपि ।

'तस्य च' ಎಂಬ ವಾಕ್ಯದಿಂದ ಹಿಂದಿನ ಅಧಿಕರಣದಲ್ಲಿ ನ್ಯಾಯವಿವರಣದಲ್ಲಿ ಹೇಳಿದ ಪೂರ್ವಪಕ್ಷದ ವಿವರಣರೂಪವಾದ 'तस्य स्वप्रकाशत्वात् न जिज्ञास्यता' ಎಂಬ ಅಂಶವನ್ನು 'ಜೀವ ಏವಾಯಂ ಬ್ರಹ್ಮಶಬ್ದಃ' ಎಂಬಲ್ಲೂ ಕೂಡ ಅನುವೃತ್ತಿಮಾಡಿ ಹೊಂದಿಸಿಕೊಳ್ಳಬೇಕು ಎಂಬ ಅಭಿಪ್ರಾಯದಿಂದ ವಾಕ್ಯವನ್ನು ಪೂರ್ತಿಗೊಳಿಸುತ್ತಿದ್ದಾರೆ. ಇದರಿಂದ ಪೂರ್ವಪಕ್ಷದ ನಿರ್ಣಯವನ್ನು ಹೇಳಿದ್ದಾರೆ. ಇಲ್ಲಿ 'ಸ್ವಪ್ರಕಾಶತ್ವೇನ' ಎಂಬುದರಿಂದ ಜೀವನನ್ನು ಹೇಳಿದ್ದರೂ ಜಾತ್ಯಾದಿಗಳ ವಿಷಯದಲ್ಲಿ 'ಸುಪ್ರಸಿದ್ಧತ್ವೇನ' ಎಂಬ ಅಂಶವನ್ನು ಉಪಲಕ್ಷಣತಯಾ ಸ್ವೀಕರಿಸಬೇಕು. ಅಥವಾ ಆ ಅಂಶವನ್ನು ಅಧ್ಯಾಹಾರ ಮಾಡಬೇಕು. ''ಇತಿ'' ಶಬ್ದವು ಪೂರ್ವಪಕ್ಷವು 'ಇಲ್ಲಿಗೆ ಮುಗಿಯಿತು' ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ. ಮುಂದೆಯೂ ಕೂಡ ಇಲ್ಲಿ ಹೇಳಿದ ಕ್ರಮದಂತೆ ಅರ್ಥೈಸಿಕೊಳ್ಳಬೇಕು.

ಒಟ್ಟು ಅಭಿಪ್ರಾಯ - ಇಲ್ಲಿ ಒಂದು ಸಂದೇಹ - ಬ್ರಹ್ಮಶಬ್ದದ ರೂಢಿಯನ್ನು ಜೀವನಲ್ಲಿ ಹೇಗೆ ಹೇಳುತ್ತಿರಿ? 'तद्विजिज्ञासस्व' ಎಂದು ಜಿಜ್ಞಾಸ್ಯತ್ವವು ಬ್ರಹ್ಮನಲ್ಲಿ ಕೇಳಿಸುತ್ತಿದೆ. ಜೀವನೇ ಬ್ರಹ್ಮನಾದಲ್ಲಿ ಜಿಜ್ಞಾಸ್ಯತ್ವ ಕೂಡುವುದಿಲ್ಲ. ಜೀವನು 'ಅಹಂ' ಎಂದು ನಿತ್ಯಸಿದ್ಧನಾದ್ದರಿಂದ ಸಂದಿಗ್ಧನಾಗಿಲ್ಲ. ಆದ್ದರಿಂದಲೇ ಜಿಜ್ಞಾಸ್ಯನೂ ಆಗಲಾರ. ಹೀಗೆ ರೂಢಿಗೆ ಬಾಧಕವಿರುವುದರಿಂದ ಯೋಗವನ್ನೇ ಆಶ್ರಯಿಸ ಬೇಕಲ್ಲವೇ?

ಈ ಸಂದೇಹಕ್ಕೆ ಅವಕಾಶವಿಲ್ಲ - ಜೀವನು ಸ್ವಪ್ರಕಾಶನಾದ್ದರಿಂದ ನಿತ್ಯಸಿದ್ಧನಾಗಿದ್ದರೂ ದೇಹಕ್ಕಿಂತ ಭಿನ್ನನಾಗಿದ್ದಾನೋ, ಅಭಿನ್ನನಾಗಿದ್ದಾನೋ ನಿತ್ಯನೋ, ಅನಿತ್ಯನೋ? ಅಣುನೋ, ವ್ಯಾಪ್ತನೋ? ಹೀಗೆ ಅನೇಕ ಪ್ರಕಾರಗಳಲ್ಲಿ ಜೀವನ ಬಗ್ಗೆ ಸಂದೇಹವಿರುವುದರಿಂದ ಜೀವನು ಜಿಜ್ಞಾಸ್ಯನೇ ಆಗುತ್ತಾನೆ.

ಹಾಗಾದರೆ ಈ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಆಕ್ಷೇಪ ಮಾಡಿಕೊಂಡೇ ಪೂರ್ವಪಕ್ಷಮಾಡಲಾಗಿದೆ - ಹಿಂದಿನ ಅಧಿಕರಣದಲ್ಲಿ ಜಿಜ್ಞಾಸೆಯನ್ನು ಮಾಡಬೇಕೆಂದು ಹೇಳಿದ್ದಿರಿ. ಆದರೆ ಆ ಜಿಜ್ಞಾಸೆಯು ಕೂಡುವುದಿಲ್ಲ. ಏಕೆಂದರೆ 'तद्ब्रह्म' ಎಂಬಲ್ಲಿ ಬ್ರಹ್ಮಶಬ್ದಕ್ಕೆ ಜೀವ ಎಂದರ್ಥ. ಜೀವನ ಜಿಜ್ಞಾಸೆಯಂತೂ ಕೂಡುವುದಿಲ್ಲ. ಹೀಗೆ ಜಿಜ್ಞಾಸೆಯ ಆಕ್ಷೇಪವೇ ಈ ಅಧಿಕರಣದ ಪೂರ್ವಪಕ್ಷದ ಫಲ. ಹೀಗಿರುವಾಗ ನೀವು

ಜೀವನು ದೇಹಕ್ಕಿಂತ ಭಿನ್ನನೋ? ಅಭಿನ್ನನೋ? ಎಂದು ಜಿಜ್ಞಾಸ್ಯನಾಗಿದ್ದಾನೆಂದು ಹೇಳಿದರೆ ಆವಾಗ ಈ ಅಧಿಕರಣದ ಪೂರ್ವಪಕ್ಷವೇ ಹೊರಡಲು ಸಾಧ್ಯವಿಲ್ಲ. ಹಿಂದಿನ ಅಧಿಕರಣದಲ್ಲಿ ಹೇಳಿದ ಜಿಜ್ಞಾಸೆಯನ್ನು ತಪ್ಪೆಂದು ಆಕ್ಷೇಪಿಸಲು ಸಾಧ್ಯವಿಲ್ಲ.

ಹಿಂದಿನ ಸೂತ್ರದಲ್ಲಿ ಶಮದಮಾದಿಸಂಪನ್ನನಾದ ಅಧಿಕಾರಿಯು ಮೋಕ್ಷವೆಂಬ ಫಲಕ್ಕೋಸ್ಕರ ಜೀವಾನ್ಯನಾದ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದಷ್ಟೇ ಹೇಳಿದರು. ಆದರೆ 'ತದ್‌ವಿಜಿಜ್ಞಾಸಸ್ವ ತದ್‌ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮಶಬ್ದಕ್ಕೆ ರೂಢಿಯಿಂದ ಜೀವನೆಂದರ್ಥ. ಜೀವನ ಜಿಜ್ಞಾಸೆಯನ್ನು ಶ್ರುತಿಯು ಹೇಳುತ್ತಿರುವಾಗ ವಿಷ್ಣುವಿನ ಜಿಜ್ಞಾಸೆಯನ್ನು ಮಾಡಬೇಕೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದು ಸರಿಯಿಲ್ಲ. ಹೀಗೆ ಪೂರ್ವಾಧಿಕರಣದಲ್ಲಿ ಹೇಳಿದ ವಿಷ್ಣುಜಿಜ್ಞಾಸೆಯನ್ನು ಈ ಅಧಿಕರಣದಲ್ಲಿ ಆಕ್ಷೇಪ ಮಾಡಲಾಗಿದೆ. ಹೊರತು ಜೀವನ ಜಿಜ್ಞಾಸೆಯನ್ನು ಆಕ್ಷೇಪ ಮಾಡುತ್ತಿಲ್ಲ.

## ಟೀಕೆಯ ಒಂದು ವಾಕ್ಯ ಪ್ರಕ್ಷಿಪ್ತ

**भावदीपः – अत्र क्वचित् 'जात्यादेर्मुख्यतोऽजिज्ञास्यत्वात् देहात्मविवेकस्यावश्यकत्वात्' इति टीकापाठो नात्रत्यटीकापाठः । 'तस्य च' इत्याद्युत्तरवाक्यानानुगुण्याच्चन्द्रिकावाक्यानानुगुण्याच्च । किन्तु न्यायविवरणटीकास्थ एवात्र कैश्चित् प्रक्षिप्तो बहुकोशेष्वदर्शनादित्याहुः ।**

ಇಲ್ಲಿ ಕೆಲವೊಂದು ಕೋಶದಲ್ಲಿ 'ಜಾತ್ಯಾದೇಃ ಮುಖ್ಯತಃ ಅಜಿಜ್ಞಾಸ್ಯತ್ವಾತ್ ದೇಹಾತ್ಮವಿವೇಕಸ್ಯಾವಶ್ಯಕತ್ವಾತ್' ಎಂಬ ವಾಕ್ಯವು ಟೀಕಾಪಾಠವಾಗಿ ಬಂದಿದೆ. ಇದು ಇಲ್ಲಿಗೆ ಸಂಬಂಧಪಟ್ಟ ವಾಕ್ಯವಲ್ಲ. 'ತಸ್ಯ ಚ' ಇತ್ಯಾದಿ ಉತ್ತರವಾಕ್ಯಕ್ಕೆ ಇದು ಹೊಂದಾಣಿಕೆಯಾಗುವುದಿಲ್ಲ. ಹಾಗೆಯೇ ಚಂದ್ರಿಕಾವಾಕ್ಯಕ್ಕೂ ಕೂಡ ಹೊಂದಾಣಿಕೆಯಾಗುವುದಿಲ್ಲ. ಆದ್ದರಿಂದ ನ್ಯಾಯವಿವರಣಟೀಕಾದಿ ಗ್ರಂಥಗಳಲ್ಲಿ ಇರುವ ಈ ವಾಕ್ಯವನ್ನು ಕೆಲವರು ಇಲ್ಲಿ ಸೇರಿಸಿದ್ದಾರೆ. ಹೆಚ್ಚಿನ ಕೋಶಗಳಲ್ಲಿ ಈ ವಾಕ್ಯವು ಇರುವುದಿಲ್ಲ ಎಂಬುದಾಗಿ ಜ್ಞಾನಿಗಳು ಹೇಳುತ್ತಿದ್ದಾರೆ.

ವಿಶೇಷ ವಿಚಾರ – ಪೂರ್ವಪಕ್ಷಕ್ಕೆ ಒಟ್ಟು ಇಷ್ಟು ಅಭಿಪ್ರಾಯ – ಜೀವನು ಅಸಂದಿಗ್ಧನಾದ್ದರಿಂದ ಜಿಜ್ಞಾಸ್ಯನಲ್ಲ. ಆವನ ಧರ್ಮಗಳಾದ ದೇಹಭಿನ್ನತ್ವಾದಿಗಳು

ಸತ್ಯವೇ ಆಗಿದ್ದರೂ ಸಿದ್ಧವೇ ಆದ್ದರಿಂದ ಅವುಗಳ ವಿಷಯದಲ್ಲಿಯೂ ಸಂದೇಹ ಕೂಡುವುದಿಲ್ಲ. ಜೀವನಲ್ಲಿರುವ ನಿತ್ಯತ್ವ ಅಣುತ್ವಾದಿಧರ್ಮಗಳ ಉಳಿದ ಜಡಪದಾರ್ಥಗಳ ಜಿಜ್ಞಾಸೆ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಇನ್ನು ಜೀವಾನ್ಯನಾದ ವಿಷ್ಣುವಿನ ಜಿಜ್ಞಾಸೆ ಮಾಡಬೇಕು. ಆದರೆ ವಿಷ್ಣುವಿನ ಜಿಜ್ಞಾಸೆ ಮಾಡಬೇಕೆಂದು ಯಾವ ವಾಕ್ಯಗಳೂ ಹೇಳುತ್ತಿಲ್ಲ. 'ತದ್ವಿಜಿಜ್ಞಾಸಸ್ವ' ಇತ್ಯಾದಿ ವಾಕ್ಯಗಳೆಲ್ಲ ಜೀವಪರವೇ ಆಗಿವೆ. ಆದ್ದರಿಂದ ಯಾವ ವಿಷಯದಲ್ಲೂ ಜಿಜ್ಞಾಸೆಯೇ ಕೂಡುವುದಿಲ್ಲವೆಂದು ಜನ್ಮಾಧಿಕರಣದ ಪೂರ್ವಪಕ್ಷ.

## ಸಿದ್ಧಾಂತ ಪ್ರಾರಂಭ

**भावदीपः – अथेति ।।** 'अथ केन प्रयुक्तोऽयम्' इत्यादाविव प्रकृतादर्थान्तरेऽयमथशब्दः, 'विष्णुरिति सिद्धान्तयितुम्' इत्यर्थः । एवमन्यत्रापि। **ब्रह्मलक्षणोक्तौ सङ्गत्यप्रतीतेः** 'जीव एवायं ब्रह्मशब्दः' इत्यन्यत्रोक्तं संयोजयंस्तामाह – **निर्बाधेति ।।** उक्तं च 'सङ्गम्यन्ते गुरोर्गिरः' इति । **इत्यादीति ।।** 'आद्यस्य चतुर्मुखस्य जन्म यतः' इत्येतत् 'आदि'पदार्थः ।

ಇಲ್ಲಿ 'ಅಥ'ಶಬ್ದಕ್ಕೆ 'ಅಥ ಕೇನ ಪ್ರಯುಕ್ತೋಽಯಂ' ಇತ್ಯಾದಿ ಕಡೆಗಳಲ್ಲಿ ಇರುವಂತೆ 'ಪ್ರಕೃತವಿಷಯವನ್ನು ಮುಗಿಸಿ ಇನ್ನೊಂದು ಅರ್ಥವನ್ನು ಪ್ರಾರಂಭಿಸುವುದು' ಎಂಬ ಅರ್ಥವಿದ್ದು ಬ್ರಹ್ಮಶಬ್ದದಿಂದ ಜೀವನನ್ನು ಹೇಳುವುದನ್ನು ಬಿಟ್ಟು ಬ್ರಹ್ಮಶಬ್ದಕ್ಕೆ ವಿಷ್ಣುವೇ ಅರ್ಥ ಎಂದು ಸಿದ್ಧಾಂತಮಾಡುವುದಕ್ಕೋಸ್ಕರ ಅಥಶಬ್ದವನ್ನು ಬಳಸಿದ್ದಾರೆ. ಮುಂದೆಯೂ ಕೂಡ ಇದೇ ರೀತಿ ಅನುವಾದ ಮಾಡಬೇಕು. ನೇರವಾಗಿ ಬ್ರಹ್ಮಲಕ್ಷಣವನ್ನೇ ಹೇಳಿದರೆ ಪರಸ್ಪರ ಸಂಗತಿಯು ತಿಳಿಯದಿರುವುದರಿಂದ 'ಜೀವ ಏವಾಯಂ ಬ್ರಹ್ಮಶಬ್ದಃ' ಎಂಬುದಾಗಿ ಬೇರೆ ಕಡೆ ಹೇಳಿದ ಅಂಶವನ್ನು ಹೊಂದಿಸುತ್ತಾ, ''ನಿರ್ಬಾಧ'' ಇತ್ಯಾದಿ ವಾಕ್ಯವನ್ನು ಹೇಳುತ್ತಿದ್ದಾರೆ. ಈ ಅಂಶವನ್ನು ''ಸಂಗಮ್ಯಂತೇ ಗುರೋರ್ಗಿರಃ'' ಎಂಬುದಾಗಿ ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ.

''ಇತ್ಯಾದಿ'' ಎಂಬಲ್ಲಿ 'ಆದಿ'ಶಬ್ದದಿಂದ 'ಆದ್ಯಸ್ಯ ಚತುರ್ಮುಖಸ್ಯ ಜನ್ಮ ಯತಃ' ಎಂಬ ಇನ್ನೊಬ್ಬರ ವ್ಯಾಖ್ಯಾನವನ್ನೂ ಕೂಡ ಸ್ವೀಕರಿಸಬೇಕು.

## ವ್ಯಸ್ತಸಮಸ್ತ ಎಂದರೇನು?

**ಭಾವದೀಪಃ – ನನು ಸೂತ್ರೇ 'ಜನ್ಮಾದಿ' ಇತ್ಯೇಕವಚನಮ್, ಭಾಷ್ಯೇ ತು 'ಮೋಕ್ಷಾಃ' ಇತಿ ಬಹುವಚನಂ ಕಥಂ ವ್ಯಾಖ್ಯಾನಮ್? ಇತ್ಯತಃ 'ಸಮುದಾಯಾಶಯಂ ಸೂತ್ರಮ್' ಇತಿ ಭಾವೇನಾಕಾಙ್ಕ್ಷಿತಪೂರ್ತ್ಯಾ ಭಾಷ್ಯಸೂತ್ರಯೋರರ್ಥಮಾಹ – ಸೃಷ್ಟ್ಯಾದೀತಿ ।। 'ಯಥಾಯೋಗ್ಯಂ(ಗಂ) ವ್ಯಸ್ತಂ ಸಮಸ್ತಂ ಚ' ಇತಿ ಭಾವಃ । 'ವ್ಯಸ್ತಸಮಸ್ತವಿಭೂತಯೇ' ಇತಿ ಪ್ರಾಕ್ ಸ್ಫುಟತ್ವಾದತ್ರಾನುಕ್ತಿಃ । ಭಾಷ್ಯೇ ಬಹುವಚನಂ ತು - 'ಸೌತ್ರೈಕವಚನಾತ್ ಸರ್ವಮೇಕಂ ಲಕ್ಷಣಮ್' ಇತಿ ಪರರೀತ್ಯಾ ನ ಭ್ರಮಿತವ್ಯಮ್ – ಇತಿ ಬಹ್ವಲಕ್ಷಣಸೂಚನಾಯ । ವ್ಯಕ್ತಮೇತತ್ ಸುಧಾಚನ್ದ್ರಿಕಯೋಃ ।**

ಸೂತ್ರದಲ್ಲಿ 'ಜನ್ಮಾದಿ' ಎಂಬುದಾಗಿ ಏಕವಚನವನ್ನು ಹೇಳಿದ್ದಾರೆ. ಭಾಷ್ಯದಲ್ಲಿಯಾದರೋ 'ಮೋಕ್ಷಾಃ' ಎಂಬುದಾಗಿ ಬಹುವಚನವನ್ನು ಹೇಳಿದ್ದು; ಇದು ಸೂತ್ರದ ವ್ಯಾಖ್ಯಾನ ಹೇಗೆ? ಎಂಬ ಪ್ರಶ್ನೆಗೆ 'ಸೂತ್ರವು ಜನ್ಮಾದಿಗಳ ಸಮುದಾಯವನ್ನು ಹೇಳುತ್ತಿದ್ದು, ಭಾಷ್ಯಕಾರರು ಅವುಗಳನ್ನು ಬಿಡಿಸಿ ಹೇಳುತ್ತಿದ್ದಾರೆ' ಎಂಬ ಅಭಿಪ್ರಾಯದಿಂದ ಇಲ್ಲಿ ಬರಬಹುದಾದ ಇತರ ಆಕಾಂಕ್ಷೆಗಳಿಗೂ ಉತ್ತರವನ್ನು ಸೇರಿಸಿಕೊಂಡು ''ಸೃಷ್ಟ್ಯಾದಿ'' ಎಂಬ ವಾಕ್ಯದಿಂದ ಭಾಷ್ಯಸೂತ್ರಗಳಿಗೆ ಜೊತೆಯಾಗಿ ಅರ್ಥವನ್ನು ಹೇಳುತ್ತಿದ್ದಾರೆ.

ಸೃಷ್ಟ್ಯಾದಿಗಳಲ್ಲಿ ಜೀವ ಮತ್ತು ಜಡಗಳಿಗೆ ಅನ್ವಯವಾಗುವಂತೆ ವ್ಯಸ್ತವಾಗಿ ಅಥವಾ ಸಮಸ್ತವಾಗಿ ಅನ್ವಯವನ್ನು ತಿಳಿದುಕೊಳ್ಳಬೇಕು. ಇದನ್ನು ಈ ಮೊದಲು 'ವ್ಯಸ್ತಸಮಸ್ತವಿಶ್ವವಿಭೂತಯೇ' ಎಂಬಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಇಲ್ಲಿ ಅದನ್ನು ವಿವರಿಸಿಲ್ಲ. ಸೂತ್ರದಲ್ಲಿ ಏಕವಚನವನ್ನು ಹೇಳಿದ್ದರೂ ಪರರು ಹೇಳುವಂತೆ ಸೃಷ್ಟ್ಯಾದಿಗಳು ಸಮ್ಮಿಳಿತವಾಗಿ ಒಂದೇ ಲಕ್ಷಣ ಎಂಬುದಾಗಿ ತಿಳಿದುಕೊಳ್ಳಬಾರದು. ಈ ಉದ್ದೇಶದಿಂದಲೇ ಭಾಷ್ಯದಲ್ಲಿ ಬಹುವಚನವನ್ನು ಬಳಸಿದ್ದಾರೆ. ಇದರಿಂದ ಈ ಎಲ್ಲವೂ ಕೂಡ ಪ್ರತ್ಯೇಕವಾಗಿ ಬ್ರಹ್ಮನ ಲಕ್ಷಣಗಳಾಗುತ್ತವೆ. ಈ ವಿಷಯವು ಸುಧಾ ಮತ್ತು ಚಂದ್ರಿಕೆಗಳಲ್ಲಿ ಸ್ಪಷ್ಟವಾಗಿದೆ.

> ವಿಶೇಷ ವಿಚಾರ - ಆದ್ವೈತಿಗಳು 'ಜನ್ಮಾದಿ' ಶಬ್ದದಿಂದ ಉತ್ಪತ್ತಿ ಸ್ಥಿತಿ, ಹಾಗೂ ಸಂಹಾರಗಳನ್ನಷ್ಟೇ ತೆಗೆದುಕೊಳ್ಳಬೇಕು. ನಿಯಮನಾದಿಗಳನ್ನು ತೆಗೆದುಕೊಳ್ಳಬಾರದು. 'ಯತೋ ವಾ ಇಮಾನಿ' ಇತ್ಯಾದಿ ಶ್ರುತಿಯಲ್ಲಿ ಮೂರನ್ನೇ ಹೇಳಿರುವುದರಿಂದ ಇಲ್ಲಿಯೂ ಮೂರನ್ನೇ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ.
>
> ಜನ್ಮಾದ್ಯಧಿಕರಣ (೧-೧-೨)

ಈ ವ್ಯಾಖ್ಯಾನವು ತಪ್ಪು . 'ಯತೋ ವಾ' ಇತ್ಯಾದಿ ಶ್ರುತಿಯಲ್ಲಿ ಮೂರನ್ನು ಹೇಳಿಯೇ ಇಲ್ಲ ಮೋಕ್ಷವನ್ನೂ ಸೇರಿಸಿಕೊಂಡು ನಾಲ್ಕನ್ನು ಹೇಳಿದ್ದಾರೆ. ಇನ್ನು ಬೇರೆ ಶ್ರುತಿಗಳಲ್ಲಿಯೂ ಒಂದೊಂದನ್ನೇ ಹೇಳಿದ್ದಾರೆ. 'ತಮೇವೈಕಂ ಜಾನಥ' ಎಂಬಲ್ಲಿ ಕೇವಲ ಜ್ಞಾನವನ್ನು 'ಯಸ್ಮಿನ್ ದ್ಯೌಃ' ಎಂಬಲ್ಲಿ ಕೇವಲ ಸ್ಥಿತಿಯನ್ನು ಹೇಳಿದ್ದಾರೆ. 'ಯತೋ ವಾ' ಎಂಬಲ್ಲಿರುವ 'ಅಭಿಸಂವಿಶಂತಿ' ಪದವು ಮೋಕ್ಷವನ್ನು ಹೇಳುತ್ತಿಲ್ಲ. ಪ್ರಲಯವನ್ನು ಹೇಳುತ್ತಿದೆಯೆಂದು ಆಕ್ಷೇಪಿಸಬಾರದು. ಹಾಗಾದಲ್ಲಿ 'ಪ್ರಯಂತಿ' ಎಂಬುದರಿಂದ ಪುನರುಕ್ತವಾಗುತ್ತದೆ. ಆದ್ದರಿಂದ ಮೋಕ್ಷಪರವಾಗಿಯೇ ಅರ್ಥೈಸಬೇಕು. 'ಪ್ರಯಂತಿ' ಎಂಬುದರಿಂದ ಪ್ರಲಯವನ್ನು ಹೇಳಿಲ್ಲ. ಸುಷುಪ್ತವಸ್ಥೆಯಲ್ಲಿ ಆಗುವ ಬ್ರಹ್ಮಪ್ರಾಪ್ತಿಯನ್ನಷ್ಟೇ ಹೇಳಿದ್ದಾರೆಂದು ಹೇಳಬಾರದು, ಹಾಗೆ ಹೇಳಿದರೂ ನಾಲ್ಕನ್ನು ಹೇಳಿದಂತೆಯೇ ಆಗುತ್ತದೆ. ಮತ್ತು ಜಗತ್ತಿಗೆ ನೀವು ಜನ್ಮವನ್ನಂಗೀಕರಿಸಿದರೆ ಜಗತ್ತನ್ನು ಅನಿತ್ಯವೆಂದಂತಾಯಿತು. ಹಾಗಾದಲ್ಲಿ ಮಿಥ್ಯಾತ್ವವು ಸಿದ್ಧಿಸಲಾರದೆಂದು ಜಿಜ್ಞಾಸಾಧಿಕರಣದಲ್ಲಿ ಹೇಳಿದ್ದೇವೆ. ಆದ್ದರಿಂದ 'ಜನ್ಮಾದಿ' ಎಂಬ ಪದದಿಂದ ಸೃಷ್ಟ್ಯಾದ್ಯಷ್ಟಕಗಳನ್ನೂ ಇಟ್ಟುಕೊಳ್ಳಬೇಕು.

'ಯತೋ ವಾ' ಇತ್ಯಾದಿ ಶ್ರುತಿಯಲ್ಲಿ ಸೃಷ್ಟಿ, ಸ್ಥಿತಿ, ಪ್ರಲಯ, ಮೋಕ್ಷಗಳನ್ನು ಹೇಳಿದ್ದಾರೆ. ಮತ್ತು 'ಯ ಆತ್ಮಾನಮಂತರೋ ಯಮಯತಿ ತ್ವಂ ಮುಕ್ತಿದೋ ಬಂಧದೋऽತೋ ಮತೋ ನಸ್ತ್ವಂ ಜ್ಞಾನದೋऽಜ್ಞಾನಶ್ಚಾಸಿ ವಿಷ್ಣೋ' ಎಲೈ ವಿಷ್ಣುವೇ! ಯಾವ ಕಾರಣದಿಂದ ನೀನು ಒಳಗಡೆ ನಿಂತು ಜೀವರನ್ನು ಜೀವಾಭಿಮಾನಿ ಚತುರ್ಮುಖನನ್ನು ಪ್ರೇರಿಸುತ್ತಿ, ಮೋಕ್ಷವನ್ನು ಕೊಡುತ್ತಿ, ಬಂಧನವನ್ನು ಕೊಡುತ್ತಿ, ಜ್ಞಾನ ಹಾಗು ಅಜ್ಞಾನಗಳನ್ನೂ ಕೊಡುತ್ತಿ ಆ ಕಾರಣದಿಂದ ನಮ್ಮಿಂದ ವಿಚಾರ ಮಾಡಲ್ಪಡುವವನಾಗಿದ್ದಿ' ಎಂಬ ಶ್ರುತಿಯು ನಿಯಮನಾದಿಗಳನ್ನು ಹೇಳುತ್ತಿದೆ. ಅಷ್ಟೇ ಅಲ್ಲದೇ ಸೂತ್ರಕಾರರು ಸ್ಕಾಂದಪುರಾಣದಲ್ಲಿ ಅಷ್ಟಕರ್ತೃತ್ವವನ್ನು ಬ್ರಹ್ಮನ ಲಕ್ಷಣವೆಂದು ಸ್ವತಃ ಹೇಳಿದ್ದಾರೆ. ನಿಯಮನಾದಿಗಳು ಜನ್ಮಾದಿಗಳಲ್ಲೇ ಅಂತರ್ಭಾವ . ಹೊಂದುತ್ತವೆಂದು ಹೇಳಬಾರದು. ತಮ್ಮ ತಮ್ಮ ವ್ಯಾಪಾರಗಳಲ್ಲಿ ಪ್ರವೃತ್ತ್ಯಾದಿರೂಪವಾದ ನಿಯಮನಾದಿಗಳನ್ನು ಪ್ರತ್ಯೇಕವಾಗಿ ಅಂಗೀಕರಿಸಲೇಬೇಕು. ಯಾವ ರೀತಿಯಾಗಿ ವಿನಾಶಕ್ಕೆ ಜನ್ಯವಿದ್ದರೂ ಜನ್ಮದಲ್ಲಿ ಸೇರದೇ ಪ್ರತ್ಯೇಕವಾಗಿದೆಯೆಂದು ಅನುಭವವಿದೆಯೋ ಹಾಗೆಯೇ ನಿಯಮನಾದಿಗಳಿಗೆ ಜನ್ಯವಿದ್ದರೂ ಸಹ ಜನ್ಮದಲ್ಲಿ ಸೇರದೆ ಪ್ರತ್ಯೇಕವಾಗಿ ಇರುವುದು ಅನುಭವಸಿದ್ಧವಾಗಿದೆ.

ಇನ್ನು ಮೋಕ್ಷವನ್ನು ಬಂಧಧ್ವಂಸರೂಪವೆಂದು ಹೇಳಿದರೆ ಉತ್ಪತ್ತಿಯು ಪ್ರಾಗಭಾವನಿವೃತ್ತಿರೂಪವಾಗಬೇಕಾದೀತು. ಉತ್ಪತ್ತಿಯು ಪ್ರಾಗಭಾವದ ಧ್ವಂಸವಾಗಿದೆ

ಹೊರತು ಹುಟ್ಟುವ ವಸ್ತುವಿನ ಧ್ವಂಸರೂಪವಾಗಿಲ್ಲವೆಂದು ಆಕ್ಷೇಪಿಸಬಾರದು, ಹಾಗಾದರೆ ಮೋಕ್ಷವೂ ಸಹ ಬಂಧದ ಧ್ವಂಸವೆಂದೇ ಹೊರತು ಬದ್ಧನಾದ ವ್ಯಕ್ತಿಯ ಧ್ವಂಸವೆಂದಲ್ಲ. ಮತ್ತು ಮೋಕ್ಷವು ಪರಮಪುರುಷಾರ್ಥವಾದ್ದರಿಂದ ಪ್ರತ್ಯೇಕವಾಗಿ ಹೇಳಲೇಬೇಕು.

## ಜಗತ್ಕಾರಣನೆಂದರೆ ಉಪಾದಾನಕಾರಣನೆಂದಲ್ಲ

**ಭಾವದೀಪಃ – 'ಜನ್ಮಾದಿಕಾರಣತ್ವಲಕ್ಷಣಯುಕ್ತಮೇವ' ಇತ್ಯರ್ಥಃ ತದೇವೇತಿ ।। 'ಜನ್ಮಾದಿ-ಕಾರಣತ್ವಸ್ಯೈವ ಲಕ್ಷಣತ್ವೋಕ್ತೇರಿತಿ ನ್ಯಾಯವಿವರಣೋಕ್ತೇಃ' ಇತಿ ಭಾವಃ । 'ಯತಃ' ಇತ್ಯುಕ್ತೇಃ 'ತದಿ'ತಿ ಲಭ್ಯತೇ । ಭಾಷ್ಯಟೀಕಯೋಃ 'ಸೃಷ್ಟಿಸ್ಥಿತಿ' ಇತ್ಯಾದಿಪ್ರಯೋಜಕವ್ಯಾಪಾರವಾಚಿನಾ ಸೃಷ್ಟ್ಯಾದಿಶಬ್ದೇನ ಪ್ರಯೋಜ್ಯವ್ಯಾಪಾರೋ ಜನ್ಮಾದಿರ್ಲಕ್ಷ್ಯತೇ । ಲಕ್ಷಣಾಫಲಂ ತು 'ಬ್ರಹ್ಮಣಃ ಸ್ರಷ್ಟೃತ್ವಾದಿಕಮೇವ ನ ತೂಪಾದಾನತ್ವಮಿತಿ ಪ್ರದರ್ಶನಮ್' ಇತಿ ಚನ್ದ್ರಿಕೋಕ್ತೇಃ । ಅತ ಏವ ವಕ್ಷ್ಯತಿ – ಯೋ ನಃ ಪಿತೇತಿ ।।**

''ತದೇವ'' ಎಂಬ ಶಬ್ದಕ್ಕೆ ಜನ್ಮಾದಿಕಾರಣಲಕ್ಷಣದಿಂದ ಕೂಡಿದ್ದು ಎಂದರ್ಥ. ನ್ಯಾಯವಿವರಣದಲ್ಲಿ 'ಜನ್ಮಾದಿಕಾರಣತ್ವಸ್ಯೈವ ಲಕ್ಷಣತ್ವೋಕ್ತೇಃ' ಎಂದು ಹೇಳಿದ್ದರಿಂದ ಹೀಗೆಯೇ ಅರ್ಥೈಸಬೇಕು. 'ಯತಃ' ಎಂಬುದಾಗಿ ಹೇಳಿದ್ದರಿಂದ 'ತತ್' ಎಂಬುದಾಗಿ ಸಿಗುತ್ತದೆ. ಭಾಷ್ಯ ಮತ್ತು ಟೀಕೆಯಲ್ಲಿ ಸೃಷ್ಟಿಸ್ಥಿತಿ ಇವೇ ಮೊದಲಾದ ಪ್ರಯೋಜಕವ್ಯಾಪಾರವನ್ನು ಹೇಳುವ ಸೃಷ್ಟ್ಯಾದಿ ಶಬ್ದಗಳಿಂದ ಪ್ರಯೋಜ್ಯವ್ಯಾಪಾರವಾದ ಜನ್ಮಾದಿಗಳನ್ನು ಲಕ್ಷಣತಯಾ ಸ್ವೀಕರಿಸಬೇಕು. ಈ ರೀತಿ ಲಕ್ಷಣಾ ಮಾಡಿದ್ದರಿಂದ ''ಬ್ರಹ್ಮನಿಗೆ ಈ ಜಗತ್ತಿನ ವಿಷಯದಲ್ಲಿ ಸ್ರಷ್ಟೃತ್ವವೇ ಮೊದಲಾದ ಕಾರಣತ್ವವಿದೆ ಹೊರತು ಉಪಾದಾನತ್ವರೂಪವಾದ ಕಾರಣತ್ವವು ಅಲ್ಲ'' ಎಂದು ತಿಳಿಯುತ್ತದೆ ಎಂಬುದಾಗಿ ಚಂದ್ರಿಕಾದಲ್ಲಿ ಹೇಳಲಾಗಿದೆ. ಇದಕ್ಕಾಗಿಯೇ ''ಯೋ ನಃ ಪಿತಾ'' ಎಂಬುದಾಗಿ ಶ್ರುತಿಯನ್ನು ಮುಂದೆ ಉದಾಹರಿಸಿದ್ದಾರೆ.

## ಸೂತ್ರಭಾಷ್ಯಗಳ ಫಲಿತಾರ್ಥ

**ಭಾವದೀಪಃ – ಬ್ರಹ್ಮೋಚ್ಯತೇ ಇತಿ ।। ತೇನ ಪೂರ್ವಸ್ಮಾದ್ ಬ್ರಹ್ಮಪದಾನುವೃತ್ತಿಃ ಸೂಚಿತಾ । ತತಃ ಕಿಮ್? ಇತ್ಯತೋ ವಕ್ಷ್ಯಮಾಣಂ ಭಾಷ್ಯಂ ಸರ್ವಂ ಹೃದಿ ಕೃತ್ವಾ, ಸೂತ್ರಭಾಷ್ಯಯೋಃ**

**फलितार्थमाह – तल्लक्षणं चेति ।। सम्भवति 'वक्ष्यमाणदिशा' इति भावः । न जीव इति ।। 'न जीवादौ' इत्यर्थः ।**

'ಬ್ರಹ್ಮೋಚ್ಯತೇ' ಎಂದು ಹೇಳಿದ್ದರಿಂದ ಹಿಂದಿನ ವಾಕ್ಯದಿಂದ ಬ್ರಹ್ಮಪದದ ಅನುವೃತ್ತಿಯನ್ನು ಮಾಡಬೇಕು ಎಂದು ಸೂಚಿತವಾಗಿದೆ. 'ಮುಂದೇನು?' ಎಂಬ ಪ್ರಶ್ನೆಗೆ ಉತ್ತರವಾಗಿ ಭಾಷ್ಯದಲ್ಲಿ ಮುಂದೆ ಹೇಳಲಿರುವ ಎಲ್ಲಾ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಸೂತ್ರ ಮತ್ತು ಭಾಷ್ಯಗಳಿಗೆ ಅಂತಿಮನಿರ್ಣಯರೂಪವಾದ ಅರ್ಥವನ್ನು ''ತಲ್ಲಕ್ಷಣಂ ಚ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. 'ಸಂಭವತಿ' ಎಂಬ ಪದಕ್ಕೆ 'ಮುಂದೆ ಹೇಳುವ ಕ್ರಮದಂತೆ ಸಂಭವಿಸುತ್ತದೆ' ಎಂದು ಅರ್ಥ. 'ನ ಜೀವಃ' ಎಂಬ ವಾಕ್ಯಕ್ಕೆ 'ಜೀವಾದಿಗಳಲ್ಲಿ ಇಲ್ಲ' ಎಂದು ಅರ್ಥ.

## ಸೃಷ್ಟ್ಯಾದ್ಯಷ್ಟಕರ್ತೃತ್ವವು ವಿಷ್ಣುವಿನಲ್ಲಿ ಮಾತ್ರ ಇದೆ

**ब्रह्मसूत्रभाष्यम् –**

**'उत्पत्तिस्थितिसंहारा नियतिर्ज्ञानमावृतिः ।**
**बन्धमोक्षौ च पुरुषाद्यस्मात्स हरिरेकराट्' इति स्कान्दे ।**

'ಉತ್ಪತ್ತಿ, ಸಂರಕ್ಷಣೆ, ಪ್ರಳಯ, ಪ್ರೇರಣೆ, ಜ್ಞಾನ, ಅಜ್ಞಾನ, ಸಂಸಾರಬಂಧನ, ಮೋಕ್ಷ ಇವುಗಳು ಯಾರಿಂದ ಆಗುತ್ತವೋ ಅವನೇ ಶ್ರೀಹರಿಯು ಮತ್ತು ಸರ್ವತಂತ್ರಸ್ವತಂತ್ರನು.' ಹೀಗೆ ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ಸೃಷ್ಟ್ಯಾದ್ಯಷ್ಟಕರ್ತೃತ್ವವು ವಿಷ್ಣುವಿನಲ್ಲಿರುವುದಾದರೆ ಬ್ರಹ್ಮಶಬ್ದದಿಂದ ಜೀವನನ್ನು ಸ್ವೀಕರಿಸಲು ಬರುತ್ತಿರಲಿಲ್ಲ. ಆದರೆ ವಿಷ್ಣುವಿನಲ್ಲೇ ಸೃಷ್ಟ್ಯಾದ್ಯಷ್ಟಕರ್ತೃತ್ವವು ಇದೆಯೆಂದು ಹೇಗೆ ತಿಳಿಯುತ್ತದೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಸೃಷ್ಟಿ= ಉತ್ಪತ್ತಿಯು, ಸ್ಥಿತಿ = ರಕ್ಷಣೆಯು, ಸಂಹಾರ = ನಾಲ್ಕುವಿಧಪ್ರಳಯವು, ನಿಯತಿಃ = ಪ್ರೇರಣೆಯು, ಜ್ಞಾನ = ಜ್ಞಾನವು, ಆವೃತಿಃ = ಅಜ್ಞಾನವು, ಬಂಧ = ಸಂಸಾರವೆಂಬ ಬಂಧನವು, ಮೋಕ್ಷೌ ಚ = ಮೋಕ್ಷ ಇವುಗಳು, ಯಸ್ಮಾತ್ = ಸರ್ವಸಮರ್ಥನಾದ ಯಾವ, ಪುರುಷಾತ್ = ಪುರುಷಶಬ್ದಪ್ರತಿಪಾದ್ಯನಾದವನಿಂದ, (ಆಗುತ್ತವೋ), ಸಃ = ಅವನೇ, ಹರಿಃ = ಪಾಪಪರಿಹಾರಕನಾದ

ನಾರಾಯಣನು, ಏಕರಾಟ್ = ಸ್ವತಂತ್ರನು. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

## 'ಸ್ಥಿತ್ಯಾದ್ಯಸ್ಯ' ಎಂದೇಕೆ ಸೂತ್ರವಿಲ್ಲ?

**तत्वप्रकाशिका – यद्यपि विष्णौ ब्रह्मशब्दो विद्वद्रूढियुक्तः, तथाप्यभ्युगम्योक्तिरियमिति ज्ञातव्यम् । 'जन्माद्यस्य' इति तद्गुणसंविज्ञानम् । 'लब्धजन्मनो हि स्थित्यादिः' इत्यतो जन्मत आदित्वम् । ननु जगज्जन्मादिकर्तृत्वं यदि विष्ण्वेकनिष्ठं तर्हि भवेत् जीवापबाधकं, तदेव कुतः? इत्यत आह – उत्पत्तीति ।। आवृतिः अज्ञानम् । एकराट् स्वतन्त्रः ।**

ವಸ್ತುತಃ ಬ್ರಹ್ಮಶಬ್ದವು ವಿದ್ವದ್ರೂಢಿಯಿಂದ ಯುಕ್ತವಾಗಿದೆ. ಆದರೂ ಸಹ ಪೂರ್ವಪಕ್ಷದ ಯೌಗಿಕಾರ್ಥವನ್ನು ಅಂಗೀಕರಿಸಿ ಇಲ್ಲಿ ಉತ್ತರಿಸಲಾಗಿದೆ ಎಂದು ತಿಳಿಯಬೇಕು. 'ಜನ್ಮಾದ್ಯಸ್ಯ' ಎಂಬ ಪದದಲ್ಲಿ ತದ್ಗುಣಸಂವಿಜ್ಞಾನಬಹುವ್ರೀಹಿಯನ್ನು ತಿಳಿಯಬೇಕು. 'ಲಬ್ಧಜನ್ಮನೋ ಹಿ ಸ್ಥಿತ್ಯಾದಿ' (ಜನ್ಮವನ್ನು ಹೊಂದಿದವನಿಗಷ್ಟೇ ಸ್ಥಿತ್ಯಾದಿಗಳನ್ನು ಹೇಳಲು ಸಾಧ್ಯ). ಆದ್ದರಿಂದ ಸ್ಥಿತ್ಯಾದಿಗಳನ್ನು ವಿವಕ್ಷಿಸದೆ 'ಜನ್ಮಾದಿ' ಎಂದೇ ಸೂತ್ರಕಾರರು ಹೇಳಿದ್ದಾರೆ.

ಜಗಜ್ಜನ್ಮಾದಿಕರ್ತೃತ್ವವು ವಿಷ್ಣುವಿನಲ್ಲಷ್ಟೇ ಬಂದಿದ್ದಲ್ಲಿ ಬ್ರಹ್ಮನ ಲಕ್ಷಣವು ವಿಷ್ಣುವಿನಲ್ಲಿ ಬರುತ್ತಿತ್ತು. ಮತ್ತು ಜೀವನನ್ನು ವಿವಕ್ಷಿಸಲು ಬಾಧಕವಾಗುತ್ತಿತ್ತು. ಆದರೆ ವಿಷ್ಣುವಿನಲ್ಲಷ್ಟೇ ಈ ಧರ್ಮವು ಹೇಗೆ ಬರುತ್ತದೆ? ಎಂಬ ಪ್ರಶ್ನೆಗೆ "ಉತ್ಪತ್ತಿ" ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ. ಆವೃತಿಃ = ಅಜ್ಞಾನ, ಏಕರಾಟ್ = ಸ್ವತಂತ್ರ.

## ವಿಷ್ಣುವಿನಲ್ಲಿ ರೂಢಿಯಿಲ್ಲವೆಂದದ್ದು ಅಭ್ಯುಪಗಮವಾದ

**भावदीपः – ननु रूढ्या जीव इति प्राप्ते सूत्रे विद्वद्रूढ्युक्त्यैव समाधिः कार्यः । 'तदेव ब्रह्म' इत्यादि श्रुत्या ब्रह्मशब्दस्य विष्णौ विद्वद्रूढेः सत्वात् । न तु रूढौ बाधकोक्त्येत्याशङ्क्याह – यद्यपीति ।। 'इयम्' इति सौत्री बाधकोक्तिः । 'पूर्वपक्ष्युक्तदिशा विष्णौ रूढ्यभावमङ्गीकृत्यैव न तु**

वस्तुतः' इत्यर्थः । अभ्युपगमवादफलं तु जीवभेदकगुणपूर्तिलाभेन पूर्वोक्तविषयसिद्धिरिति ज्ञेयम् । रूढ्युक्तौ तदलाभात् ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು – ಪೂರ್ವಪಕ್ಷದಲ್ಲಿ 'ರೂಢಿಯಿಂದ ಬ್ರಹ್ಮಪದಕ್ಕೆ ಜೀವ' ಎಂಬರ್ಥ ಪ್ರಾಪ್ತವಾದಾಗ ಸೂತ್ರದಲ್ಲಿ ವಿದ್ವದ್ಗೂಢಿಯನ್ನು ಹೇಳುವ ಮೂಲಕವೇ ಸಮಾಧಾನವನ್ನು ನೀಡಬೇಕು. 'ತದೇವ ಬ್ರಹ್ಮ' ಇತ್ಯಾದಿಶ್ರುತಿಯಲ್ಲಿ ಬ್ರಹ್ಮಶಬ್ದಕ್ಕೆ ವಿಷ್ಣುವಿನಲ್ಲಿ ವಿದ್ವದ್ಗೂಢಿ ಇರುವುದರಿಂದ ಹೀಗೆ ಮಾಡುವುದೇ ಸೂಕ್ತವಾಗುತ್ತದೆ. ಹೊರತು ನೀವು ಹೇಳುವಂತೆ ರೂಢಾರ್ಥದಲ್ಲಿ ಬಾಧಕವನ್ನು ಹೇಳುವ ಮೂಲಕ ಸಮಾಧಾನವನ್ನು ಹೇಳುವುದು ಸರಿಯಲ್ಲ ತಾನೆ? ಈ ಪ್ರಶ್ನೆಗೆ ಉತ್ತರವಾಗಿ ''ಯದ್ಯಪಿ'' ಎಂಬ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. ''ಇಯಮ್'' ಎಂಬ ಪದಕ್ಕೆ 'ಸೂತ್ರದಲ್ಲಿ ಹೇಳಿದ ಬಾಧಕವಚನ' ಎಂಬುದಾಗಿ ಅರ್ಥ. 'ಪೂರ್ವಪಕ್ಷಿಗಳು ಹೇಳುವಂತೆ ವಿಷ್ಣುವಿನಲ್ಲಿ ರೂಢಿ ಇಲ್ಲ ಎಂದು ಒಪ್ಪಿಕೊಂಡೇ ಈ ರೀತಿ ಹೇಳಲಾಗಿದೆ. ಹೊರತು ವಾಸ್ತವಿಕವಾಗಿ ರೂಢಿ ಇದ್ದೇ ಇದೆ' ಎಂದು ಅಭಿಪ್ರಾಯ. ಈ ರೀತಿ ಒಪ್ಪಿಕೊಂಡು ಹೇಳಿದ್ದರಿಂದ 'ಬ್ರಹ್ಮಪದಕ್ಕೆ ಜೀವ ಎಂದು ಅರ್ಥ ಎಂಬ ಶಂಕೆಯನ್ನು ದೂರಮಾಡುವ ಗುಣಪೂರ್ತಿ ಎಂಬರ್ಥವು ಸಿಗುವುದರಿಂದ ಸಂಗತಿಯಲ್ಲಿ ಹೇಳಿದಂತೆ ವಿಷಯವು ಸ್ಪಷ್ಟವಾಗುತ್ತದೆ' ಎಂದು ತಿಳಿಯಬೇಕು. ರೂಢಿಯಿಂದಲೇ ಸಮಾಧಾನವನ್ನು ಹೇಳಿದರೆ ಈ ರೀತಿಯ ಸ್ಪಷ್ಟತೆಯು ಸಿಗುವುದಿಲ್ಲ.

ವಿಶೇಷ ವಿಚಾರ - ಬ್ರಹ್ಮಶಬ್ದದ ರೂಢ್ಯರ್ಥನು ಜೀವನಲ್ಲ. ಯೌಗಿಕಾರ್ಥನಾದ ವಿಷ್ಣುವೇ ಆಗಿದ್ದಾನೆ. ರೂಢಿಗೆ ಬಾಧಕವಾಗಿ ಯೌಗಿಕಾರ್ಥಕ್ಕೆ ಸಾಧಕವಾಗಿ ಜಗತ್ ಕಾರಣತ್ವಲಕ್ಷಣವನ್ನು ವಿಷ್ಣುವಿನಲ್ಲಿ ಸೂತ್ರಕಾರರು ಹೇಳಿದ್ದಾರೆ ಎಂದು.

ಹೀಗೆ ಹೇಳಿದ್ದರಿಂದ ವಿಷ್ಣುವಿನಲ್ಲಿ ಬ್ರಹ್ಮಶಬ್ದದ ವಿದ್ವದ್ಗೂಢಿಯನ್ನು ಸೂಚಿಸಿದಂತಾಯಿತು. ಏಕೆಂದರೆ 'ವಿದ್ವದ್ಗೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ' 'ವೇದೋಕ್ತವಾದ ವಿದ್ವದ್ಗೂಢಿಯು ಯೋಗದಿಂದಷ್ಟೇ ಸರಿಹೊಂದುತ್ತದೆ' ಎಂದು ಜಿಜ್ಞಾಸಾಧಿಕರಣಭಾಷ್ಯದ ಮಾತಿನಿಂದ ಸ್ಪಷ್ಟವಾಗುತ್ತದೆ. ಬ್ರಹ್ಮಶಬ್ದಕ್ಕೆ ಜೀವನಲ್ಲಿ ರೂಢಿ ವಿಷ್ಣುವಿನಲ್ಲಿ ಯೋಗವಿರುವುದರಿಂದ ಯೋಗಾರ್ಥನಾದ ವಿಷ್ಣುವಿಗಿಂತ ರೂಢ್ಯರ್ಥನಾದ ಜೀವನನ್ನೇ ಬ್ರಹ್ಮಶಬ್ದಪ್ರತಿಪಾದ್ಯನೆಂದು ಪೂರ್ವಪಕ್ಷ

ಮಾಡಲಾಯಿತು. ಆದರೆ ಬಾಧಕವಿಲ್ಲದಿದ್ದಾಗಷ್ಟೇ ರೂಢ್ಯರ್ಥವು ಪ್ರಬಲವಾಗುತ್ತದೆ. ಪ್ರಕೃತ ಜಗತ್‌ಕಾರಣರೂಪವಾದ ಬಾಧಕವಿರುವುದರಿಂದ ರೂಢ್ಯರ್ಥವನ್ನು ಸ್ವೀಕರಿಸಲು ಆಗುವುದಿಲ್ಲ. 'ಯೋಗಾದ್ರೂಢೇರ್ಬಲೀಯಸೀ' ಎಂಬ ನ್ಯಾಯವು ಪೂರ್ವಪಕ್ಷಕ್ಕೆ ಉಪೋದ್‌ಬಲಕವಾಗಲು ಸಾಧ್ಯವಿಲ್ಲವೆಂದು ಸಿದ್ಧಾಂತ ಮಾಡಲಾಯಿತು. ಈಗ ಬ್ರಹ್ಮಶಬ್ದಕ್ಕೆ ವಿಷ್ಣುವು ಯೋಗಾರ್ಥನಷ್ಟೇ ಅಲ್ಲ. ವಿದ್ವದ್ರೂಢ್ಯರ್ಥನೂ ಆಗಿದ್ದಾನೆಂದು ಸಮರ್ಥಿಸಲಾಗಿದೆ. ಯಾವಾಗ ವಿದ್ವದ್ರೂಢಿ ಇರುತ್ತದೋ ಆವಾಗ ಆ ಶಬ್ದಕ್ಕೆ ಅಜ್ಞರೂಢಿಯನ್ನು ಅನುಸರಿಸಲು ಬರುವುದಿಲ್ಲ. ಆದ್ದರಿಂದ ಬ್ರಹ್ಮಶಬ್ದಕ್ಕೆ ರೂಢ್ಯರ್ಥವನ್ನು ಸ್ವೀಕರಿಸಲು ವಿದ್ವದ್ರೂಢಿಯು ಬಾಧಕವಾಗುತ್ತದೆ.

ಶಂಕೆ - ಹಾಗಾದರೆ ಸೂತ್ರದಲ್ಲಿ ರೂಢ್ಯರ್ಥನಾದ ಜೀವನನ್ನು ಸ್ವೀಕರಿಸಬಾರದೆನ್ನಲು ವಿದ್ವದ್ರೂಢಿಯನ್ನೇ ಬಾಧಕವನ್ನಾಗಿ ಹೇಳಬೇಕಾಗಿತ್ತು. ಆದರೆ ಜಗತ್‌ಕಾರಣತ್ವವನ್ನೇ ಅಲ್ಲಿ ಬಾಧಕವನ್ನಾಗಿ ಹೇಳಿ ರೂಢ್ಯರ್ಥ ಸ್ವೀಕರಿಸಬಾರದು ಯೋಗಾರ್ಥವನ್ನು ಸ್ವೀಕರಿಸಬೇಕೆಂದು ಹೇಳಲಾಗಿದೆಯೇ ಹೊರತು ವಿದ್ವತ್‌ಪ್ರಸಿದ್ಧಿಯನ್ನು ಬಾಧಕವನ್ನಾಗಿ ಹೇಳಿಲ್ಲ. ಪ್ರಕೃತದಲ್ಲಿ ನೀವು ವಿದ್ವದ್ರೂಢಿಯು ಲೋಕಪ್ರಸಿದ್ಧಿಗೆ ಬಾಧಕವೆಂದು ಹೇಳಿದರೆ ಸೂತ್ರಕ್ಕೆ ಆನಾನುಗುಣ್ಯದೋಷ ಬರುತ್ತದಲ್ಲವೆ?

ಸಮಾಧಾನ - ಯೋಗಾರ್ಥವನ್ನು ಸ್ವೀಕರಿಸಬೇಕೆಂದು ಹೇಳಿದ್ದರಿಂದಲೇ ಸೂತ್ರದಲ್ಲಿ ವಿದ್ವದ್ರೂಢಿಯನ್ನು ಸೂಚನೆ ಮಾಡಿದ್ದಾರೆ. ಆದ್ದರಿಂದಲೇ ತತ್ತ್ವಪ್ರಕಾಶಿಕೆಯಲ್ಲಿ -

'ಯದ್ಯಪಿ ವಿಷ್ಣೌ ಬ್ರಹ್ಮಶಬ್ದೋ ವಿದ್ವದ್ರೂಢಿಯುಕ್ತಃ।
ತಥಾಪ್ಯಭ್ಯುಪಗಮ್ಯೋಕ್ತಿರಿಯಮ್ ॥'

''ವಾಸ್ತವಿಕವಾಗಿ ಬ್ರಹ್ಮಶಬ್ದಕ್ಕೆ ವಿದ್ವದ್ರೂಢಿಯೇ ಇದೆ. ಆದರೂ ರೂಢಿಯಿಲ್ಲವೆಂದು ಹೇಳಿದ್ದು ಅಭ್ಯುಗಮವಾದ'' ಎಂದು ಹೇಳಲಾಗಿದೆ. ವಿದ್ವದ್ರೂಢಿಯನ್ನೇ ಹೇಳಿ ಅಜ್ಞರೂಢಿಗೆ ಬಾಧಕವನ್ನಾಗಿ ಹೇಳಲು ಬರುವಾಗ ಸೂತ್ರದಲ್ಲಿ ಜಗತ್‌ಕಾರಣತ್ವವನ್ನು ಹೇಳಿದ್ದು ವಿಷ್ಣುವಿನಲ್ಲಿ ಯೋಗಮಾತ್ರ ಇರುವುದೇ ಹೊರತು ರೂಢಿಯೇ ಇಲ್ಲವೆಂಬ ಅಭಿಪ್ರಾಯದಿಂದಲ್ಲ. ರೂಢಿಯನ್ನು ಅಂಗೀಕರಿಸದಿದ್ದರೂ ಯೋಗದಿಂದಲೇ ಬ್ರಹ್ಮಶಬ್ದವಾಚ್ಯನು ವಿಷ್ಣುವೆಂದು ನಿರ್ಣಯವಾಗುತ್ತದೆಂದು ಅಭ್ಯುಪಗಮ್ಯ ಹೇಳಿದ್ದಾರೆ. ವಿದ್ವದ್ರೂಢಿಯಿಂದ ಅಜ್ಞರೂಢಿಗೆ ಬಾಧಕ ಹೇಳಿದರೆ ಯೋಗವನ್ನು ಒಪ್ಪದ ಕಾರಣ ಜಿಜ್ಞಾಸೆಗೆ ಕಾರಣವಾದ ಗುಣಪೂರ್ಣತ್ವವು ಸಿದ್ಧಿಸುತ್ತಿರಲಿಲ್ಲ. ಈ

ಗುಣಪೂರ್ಣತ್ವಸಿದ್ಧಿರೂಪಪ್ರಯೋಜನ ಇರುವುದರಿಂದ ಹಾಗೆ ಅಭ್ಯುಪಗಮವಾದ ಮಾಡಿದ್ದಾರೆ.

ಯೋಗಾರ್ಥವನ್ನು ಅಂಗೀಕರಿಸಿದ್ದರಿಂದ ಗುಣಪೂರ್ಣತ್ವವು ವಿಷ್ಣುವಿನಲ್ಲಿ ಸಿದ್ಧಿಸಿ ಜೀವಬ್ರಹ್ಮಭೇದವು ಸ್ಥಾಪಿತವಾಗುತ್ತದೆ. ಈ ಅಭಿಪ್ರಾಯದಿಂದ ಸೂತ್ರಕಾರರು ಯೋಗಾರ್ಥವನ್ನು ಹೇಳಿದ್ದಾರೆ. ವಿದ್ವದ್ರೂಢಿಯೂ ಸಹ ಸೂತ್ರಕಾರರಿಗೆ ಅಭಿಪ್ರೇತವೇ ಆಗಿದೆ. ಆದರೆ ಸಾಕ್ಷಾತ್ತಾಗಿ ವಿದ್ವದ್ರೂಢಿಯನ್ನು ಹೇಳಿದರೆ ಗುಣಪೂರ್ಣತ್ವವು ಸಪ್ಷವಾಗಿ ಸಿದ್ಧಿಸುವುದಿಲ್ಲವೆಂದು ಸೂತ್ರಕಾರರು ಯೋಗವನ್ನು ಹೇಳಿದ್ದಾರೆಂದು ತಿಳಿಯಬೇಕು. ಈ ಅಭಿಪ್ರಾಯದಿಂದ ಭಾಷ್ಯಟೀಕಾಗಳಲ್ಲಿ ವಿದ್ವದ್ರೂಢಿಯನ್ನು ಅಂಗೀಕರಿಸಿ ಸಿದ್ಧಾಂತ ಮಾಡಿದ್ದಾರೆ. ಹಾಗಾಗಿ ಭಾಷ್ಯಟೀಕಾಗಳಿಗೆ ಸೂತ್ರದ ಅನಾನುಗುಣ್ಯದೋಷ ಬರುವುದಿಲ್ಲ.

## ಜನ್ಮಾದ್ಯಷ್ಟಕಗಳನ್ನು ಸ್ವೀಕರಿಸಲು ಮಾಡಬೇಕಾದ ಸಮಾಸ

**ಭಾವದೀಪಃ – ಅಷ್ಟಕಲಾಭಾಯಾಹ – ತದ್ಗುಣೇತಿ ।। 'तस्य गुणस्य उपसर्जनीभूतस्यान्यपदार्थे सम्यग्विज्ञानं विशेषणज्ञानोपादानं यस्मिन् बहुव्रीहौ स तद्गुणसंविज्ञानो बहुव्रीहिः' इति शेषः । 'तद्गुणसंविज्ञानम्' इति पाठे 'तद्गुणस्यान्यपदार्थे संविज्ञानं विशेषणत्वेनोपादानम्' इत्यर्थः ।**

ಸೂತ್ರದಲ್ಲಿ ಹೇಳಿದ ಜನ್ಮಾದಿಪದದಿಂದ ಸೃಷ್ಟಿಸ್ಥಿತ್ಯಾದಿ ಎಂಟು ವಿಷಯಗಳನ್ನು ಸ್ವೀಕರಿಸಬೇಕು ಎಂಬ ಅಭಿಪ್ರಾಯವನ್ನು ಸೂಚಿಸಲು 'ತದ್ಗುಣ' ಇತ್ಯಾದಿ ವಾಕ್ಯವನ್ನು ಹೇಳುತ್ತಿದ್ದಾರೆ. ''ಸಮಾಸದಲ್ಲಿ ಗೌಣವಾದ ವಿಷಯವನ್ನು ತಿಳಿಸುವ ಗುಣಕ್ಕೆ ಪ್ರಧಾನವಾದ ಅನ್ಯಪದಾರ್ಥದಲ್ಲಿ ವಿಶೇಷಣತ್ವರೂಪವಾಗಿ ಯಾವ ಬಹುವ್ರೀಹಿಯಲ್ಲಿ ಸರಿಯಾಗಿ ತಿಳಿಯಲ್ಪಡುತ್ತದೋ ಅದು 'ತದ್ಗುಣಸಂವಿಜ್ಞಾನಬಹುವ್ರೀಹಿ'' ಎಂಬುದಾಗಿ ಶೇಷಪೂರಣೆ ಮಾಡಿಕೊಳ್ಳಬೇಕು. 'ತದ್ಗುಣಸಂವಿಜ್ಞಾನಮ್' ಎಂಬ ಪಾಠದಲ್ಲಿ 'ಉಪಸರ್ಜನೀಭೂತವಾದ ಗುಣಕ್ಕೆ ಅನ್ಯಪದಾರ್ಥದಲ್ಲಿ ವಿಶೇಷಣತ್ವೇನ ಅನ್ವಯವು ತದ್ಗುಣಸಂವಿಜ್ಞಾನ' ಎನಿಸುತ್ತದೆ.

ವಿಶೇಷ ವಿಚಾರ - ಸಿದ್ಧಾಂತದಲ್ಲಿ ಯಾವ ಸಮಾಸ? ಕರ್ಮಧಾರಯ ಸಮಾಸವಂತೂ ಸಾಧ್ಯವಿಲ್ಲ. ಕರ್ಮಧಾರಯಸಮಾಸ ಮಾಡುವುದಿದ್ದರೆ ಎರಡೂ

ವಸ್ತುಗಳಿಗೆ ಅಭೇದಾನ್ವಯವನ್ನು ಹೇಳಬೇಕು. ಬ್ರಹ್ಮರೂಪವಾದ ಜಿಜ್ಞಾಸೆಯೆಂದು ಅಭೇದಾನ್ವಯವನ್ನು ಮಾಡಲು ಬರುವುದಿಲ್ಲ.

ದ್ವಿತೀಯಾತತ್ಪುರುಷವೂ ತಪ್ಪು. 'ಶ್ರಿತ' ಮೊದಲಾದ ಕೆಲವು ಶಬ್ದಗಳ ಜೊತೆಗೆ ಮಾತ್ರ ದ್ವಿತೀಯಾತತ್ಪುರುಷವನ್ನು ಹೇಳಿದ್ದಾರೆ. 'ಜಿಜ್ಞಾಸಾಶಬ್ದವು ಅವುಗಳಲ್ಲಿ ಸೇರಿಲ್ಲ. ಕೃದಂತಶಬ್ದವಾಗಿದೆ. ಕೃದಂತಶಬ್ದಯೋಗವಿದ್ದಾಗ ಷಷ್ಠೀಯನ್ನೇ ವಿಧಿಸಿದ್ದಾರೆ. ದ್ವಿತೀಯಾ ಬರುವುದಿಲ್ಲ.

ತೃತೀಯಾತತ್ಪುರುಷವೂ ತಪ್ಪು - ಬ್ರಹ್ಮನಿಂದ ಜಿಜ್ಞಾಸೆ ಎಂದು ಹೇಳಿದಂತಾಯಿತು. ಇದರಿಂದ ಬ್ರಹ್ಮನು ಜಿಜ್ಞಾಸೆಗೆ ವಿಷಯನೆಂದು ತಿಳಿಯುವುದಿಲ್ಲ. ಬ್ರಹ್ಮನಿಗೆ ವಿಷಯತ್ವ ಬರುವುದಿಲ್ಲವೆಂಬುದರಿಂದಲೇ ಪಂಚಮೀತತ್ಪುರುಷವೂ ಕೂಡುವುದಿಲ್ಲ.

ಇಲ್ಲಿ ಚತುರ್ಥೀತತ್ಪುರುಷವೂ ತಪ್ಪು. ವೃತ್ತಿಕಾರರು ಚತುರ್ಥೀ-ಸಮಾಸವನ್ನು ಹೇಳಿದ್ದರೂ ಸಹ ಅದನ್ನು ಇಟ್ಟುಕೊಳ್ಳವುದು ಶಕ್ಯವಿಲ್ಲ. ತಾದರ್ಥ್ಯಸಮಾಸವಾಗುವುದಾದರೆ ಉಪಾದಾನ ಉಪಾದೇಯಭಾವವಿರಬೇಕು. ಅದು ಇಲ್ಲಿ ಇಲ್ಲ. ಸಪ್ತಮೀತತ್ಪುರುಷವೂ ತಪ್ಪು. ಅಧಿಕರಣಾರ್ಥದಲ್ಲಿ ಸಪ್ತಮೀ ಬರಬೇಕು. ''ಆಧಾರೋ ಅಧಿಕರಣಂ'' ಎಂಬಂತೆ ಆಧಾರವೇ ಅಧಿಕರಣವಾಗಿದೆ. ಆಗ ಬ್ರಹ್ಮನು ಜಿಜ್ಞಾಸೆಗೆ ಆಧಾರ ಎಂದಂತಾಯಿತು. ಆಧಾರವು ಬಹುವಿಧವಾಗಿದೆ. ಅವುಗಳಲ್ಲಿ ವಿಷಯವೂ ಒಂದು ಆಧಾರ. ಸಾಮಾನ್ಯವಾಚಕವಾದ ಆಧಾರಶಬ್ದದಿಂದ ವಿಷಯವೆಂಬ ವಿಶೇಷವನ್ನು ತಿಳಿಯುವುದು ಕಷ್ಟಸಾಧ್ಯ.

ಮತ್ತು ಸಪ್ತಮೀಸಮಾಸಾದಿಗಳನ್ನೇ ಮಾಡುತ್ತೇವೆಂದರೆ 'ಸಪ್ತಮೀ' ಇತ್ಯಾದಿಯಾಗಿ ಯೋಗವಿಭಾಗ ಮಾಡಬೇಕಾದೀತು. ದ್ವಿತೀಯಾ, ತೃತೀಯಾ, ಸಪ್ತಮೀ ಎಲ್ಲಾ ಸೂತ್ರಗಳಲ್ಲಿಯೂ ಕೆಲವು ಶಬ್ದಗಳ ಯೋಗವಿದ್ದಾಗ ಮಾತ್ರ ದ್ವಿತೀಯಾದಿಸಮಾಸಗಳನ್ನು ಮಾಡಬೇಕೆಂದು ನಿಯಮವನ್ನು ಮಾಡಲಾಗಿದೆ. ಈಗ ಬ್ರಹ್ಮಜಿಜ್ಞಾಸಾ ಎಂಬುದು ಆ ನಿಯಮದಲ್ಲಿ ಒಳಪಡುವುದಿಲ್ಲ. ಆದರೂ ನೀವು ದ್ವಿತೀಯಾದಿಸಮಾಸವನ್ನೇ ಮಾಡುತ್ತೀರಾದರೆ ದ್ವಿತೀಯಾ, ಸಪ್ತಮೀ, ಇತ್ಯಾದಿಯಾಗಿ ಸೂತ್ರಗಳನ್ನು ಬೇರ್ಪಡಿಸಿ, ಅಂತಹ ಬೇರ್ಪಟ್ಟ ಸೂತ್ರದಿಂದ ಇಲ್ಲಿ ಸಮಾಸವಿಧಾನ ಮಾಡಬೇಕು. ಈ ದೋಷವು ಸಪ್ತಮೀ ಸಮಾಸದಲ್ಲಿ ಮಾತ್ರವಲ್ಲ. ಸಕಲ ಸಮಾಸಗಳಲ್ಲಿಯೂ ಬರುತ್ತದೆ. ಈ ರೀತಿಯಾದ ಯೋಗವಿಭಾಗವು ಅಪ್ರಾಮಾಣಿಕ.

ಇನ್ನು ಕರ್ಮಣಿ ಷಷ್ಠೀಸಮಾಸವನ್ನು ಹೇಳಲಾಗದು. ''ಬ್ರಹ್ಮನನ್ನು ಜಿಜ್ಞಾಸೆ ಮಾಡಬೇಕು'' ಎಂದಂತಾಯಿತು. ಆವಾಗ ಮುಂದಿನ ಶಾಸ್ತ್ರದಲ್ಲಿ ಬ್ರಹ್ಮಸ್ವರೂಪದ ವಿಚಾರವನ್ನಷ್ಟೇ ಮಾಡಬೇಕೆಂದಾಗುತ್ತದೆ. ಆವಾಗ ಪ್ರಮಾಣಾದಿಗಳ ವಿಚಾರ ಮಾಡಿದ್ದು ತಪ್ಪಾಗುತ್ತದೆ.

ಪ್ರಶ್ನೆ - ಶೇಷಷಷ್ಠೀಸಮಾಸವನ್ನು ಮಾಡಬಹುದು. ಮೇಲಿನ ಯಾವ ದೋಷಗಳೂ ಈ ಪಕ್ಷದಲ್ಲಿ ಇಲ್ಲ. ಏಕೆಂದರೆ ಸಂಬಂಧಸಾಮಾನ್ಯವಷ್ಟೇ ಪ್ರಾಪ್ತವಾಗುತ್ತದೆ. ಬ್ರಹ್ಮಸ್ವರೂಪ ಜಿಜ್ಞಾಸೆಯೂ ಸಾಕ್ಷಾತ್ ಬ್ರಹ್ಮನ ಸಂಬಂಧಿಯಾಗಿದೆ. ಅದಕ್ಕೆ ಸಂಬಂಧಪಟ್ಟ ಪ್ರಮಾಣಾದಿಗಳ ಜಿಜ್ಞಾಸೆಯೂ ಪರಂಪರವಾಗಿ ಬ್ರಹ್ಮಸಂಬಂಧಿಯಾಗಿದೆ. ಹೀಗೆ ಎಲ್ಲವೂ ಬ್ರಹ್ಮವಿಚಾರವೆಂದೇ ಆಗುತ್ತದೆ. ಯಾವ ವಿಚಾರವೂ ಅಸಂಗತವಾಗುವುದಿಲ್ಲ. ಆದ್ದರಿಂದ ಶೇಷಷಷ್ಠೀಯು ಸಮಂಜಸವಾಗಿದೆ.

ಆಗಲಿ ಶೇಷಷಷ್ಠಿಯನ್ನೇ ಮಾಡೋಣ ಎಂದರೆ ಸುಧಾವಿರೋಧ ಬರುತ್ತದೆ ''ಕರ್ಮಣಿ ಷಷ್ಠಿಯನ್ನು ಸ್ವೀಕರಿಸಬೇಕೆಂದು ಸೂಚನೆ ಮಾಡುವುದಕ್ಕಾಗಿ 'ವಿಷ್ಣುವು ಜಿಜ್ಞಾಸ್ಯ'ನೆಂದು ಅನುವ್ಯಾಖ್ಯಾನವು ಹೇಳಿದೆ'' ಎಂದು ಸುಧೆಯಲ್ಲಿದೆ. ಆದರೆ ನೀವು ಶೇಷಷಷ್ಠೀಯನ್ನಿಟ್ಟುಕೊಂಡರೆ ಈ ವಾಕ್ಯದ ಗತಿಯೇನು?

ಉತ್ತರ - ಸುಧೆಯಲ್ಲಿ ಹೇಳಿದಂತೆ ಕರ್ಮಷಷ್ಠಿಯನ್ನೇ ಸ್ವೀಕರಿಸಬೇಕು. ಶೇಷಷಷ್ಠಿಯನ್ನು ಸ್ವೀಕರಿಸಬಾರದು. ಹಾಗಾದರೆ ಪ್ರಮಾಣಗಳ ವಿಚಾರ ಮಾಡಿದ್ದು ಅಸಂಗತವೆಂದಾಗುತ್ತದೆ. ಎಂಬುದು ತಪ್ಪು. ಬ್ರಹ್ಮಕರ್ಮಕಜಿಜ್ಞಾಸಾ ಎಂದರೆ ಬ್ರಹ್ಮಸ್ವರೂಪವನ್ನೇ ಜಿಜ್ಞಾಸೆ ಮಾಡಬೇಕು. ಉಳಿದ ಪ್ರಮಾಣಾದಿಗಳ ಜಿಜ್ಞಾಸೆ ಮಾಡಬಾರದೆಂದು ಅದರ ಅಭಿಪ್ರಾಯವಲ್ಲ. ಬ್ರಹ್ಮವಿಚಾರವನ್ನು ಪ್ರಧಾನವನ್ನಾಗಿ ಮಾಡಬೇಕೆಂದು ಹಾಗೆ ಪ್ರತಿಜ್ಞೆ ಮಾಡಲಾಗಿದೆ. ಅದಕ್ಕೆ ಸಂಬಂಧಪಟ್ಟ ಲಕ್ಷಣ ಪ್ರಮಾಣ ಪ್ರಯೋಜನ ಮೊದಲಾದ ಉಳಿದ ವಿಚಾರಗಳನ್ನು ಮಾಡಬೇಕೆಂದು ಪ್ರತಿಜ್ಞೆ ಮಾಡಿದಂತಾಯಿತು. ಇವುಗಳಿಲ್ಲದೆ ಕೇವಲ ಬ್ರಹ್ಮಸ್ವರೂಪವಿಚಾರ ಮಾಡಲು ಸಾಧ್ಯವೂ ಇಲ್ಲ. ಆದ್ದರಿಂದ ಕರ್ಮಷಷ್ಠೀಸಮಾಸವನ್ನೇ ಮಾಡಬೇಕು. ಉಳಿದ ಯಾವ ಸಮಾಸಗಳನ್ನೂ ಮಾಡಬಾರದು.

ಪ್ರಶ್ನೆ - ''ಬ್ರಹ್ಮಣಃ ಜಿಜ್ಞಾಸಾ'' ಎಂದು ಷಷ್ಠೀತತ್ಪುರುಷ ಸಮಾಸವನ್ನು ಮಾಡಬೇಕು. ಆದರಲ್ಲೂ ಕರ್ಮಷಷ್ಠಿಯನ್ನೇ ಮಾಡಬೇಕು ಹೊರತು ಶೇಷಷಷ್ಠಿಯನ್ನು

ಮಾಡಬಾರದೆಂದು ಇದುವರೆಗೂ ನಿರ್ಣಯಿಸಿದ ವಿಚಾರ. ಆದರೆ ವ್ಯಾಕರಣದಂತೆ ಕರ್ಮಷಷ್ಠಿಯನ್ನು ಮಾಡಲು ಬರುವುದಿಲ್ಲ. 'ಕರ್ಮಣಿ ಚ' ಎಂಬ ಸೂತ್ರದಲ್ಲಿ ಸಪ್ತಮ್ಯೇಕವಚನಾಂತವಾದ ಶಬ್ದವನ್ನು ಹೇಳಿ ವಿಧಿಸಿದ ಷಷ್ಠಿಗೆ ಸಮಾಸ ಮಾಡಬಾರದು ಎಂದು ಹೇಳಿದೆ. ಆದರಂತೆ ಇಲ್ಲಿ ಕರ್ಮಷಷ್ಠಿಯನ್ನು ಮಾಡಿದರೆ ''ಬ್ರಹ್ಮಜಿಜ್ಞಾಸಾ'' ಎಂಬ ಸಮಾಸವು ಅನುಪಪನ್ನವಾಗುತ್ತದೆ.

ಉತ್ತರ :- 'ಕರ್ಮಣಿ ಚ ' ಎಂಬ ನಿಷೇಧವು ಇಲ್ಲಿ ಅನ್ವಯಿಸುವುದಿಲ್ಲ. ''ಉಭಯಪ್ರಾಪ್ತೌ ಕರ್ಮಣಿ'' ಎಂಬ ಸೂತ್ರದಿಂದ ಷಷ್ಠಿಯು ಎಲ್ಲಿ ಬರುತ್ತದೋ, ಅಲ್ಲಿ ಮಾತ್ರ ಈ ಸೂತ್ರವು ನಿಷೇಧ ಮಾಡುತ್ತದೆ. ಕೃದಂತಶಬ್ದದ ಯೋಗವಿದ್ದಾಗ ಕರ್ತೃ ಹಾಗು ಕರ್ಮ ಎರಡರ್ಥಗಳಲ್ಲಿಯೂ ಷಷ್ಠಿಯು ಬರಲು ಪ್ರಸಕ್ತಿಯಿದ್ದಾಗ ಕರ್ಮಾರ್ಥದಲ್ಲಿ ಮಾತ್ರ ಷಷ್ಠಿಯು ಬರುತ್ತದೆಂದು ''ಉಭಯಪ್ರಾಪ್ತೌ'' ಇತ್ಯಾದಿ ಸೂತ್ರವು ಹೇಳುತ್ತಿದೆ. ಈ ಸೂತ್ರದಿಂದ ಯಾವ ಶಬ್ದಕ್ಕೆ ಷಷ್ಠಿಯು ಬರುತ್ತದೋ ಅಲ್ಲಿ ಮಾತ್ರ ''ಕರ್ಮಣಿ ಚ'' ಎಂಬ ಸೂತ್ರದಿಂದ ಹೇಳಿದ ಸಮಾಸನಿಷೇಧವು ಬರುತ್ತದೆ. ಆದರೆ 'ಬ್ರಹ್ಮಣಃ ಜಿಜ್ಞಾಸಾ' ಎಂಬಲ್ಲಿ ''ಉಭಯಪ್ರಾಪ್ತೌ ಕರ್ಮಣಿ'' ಎಂಬ ಸೂತ್ರಕ್ಕೆ ಅವಕಾಶವೇ ಇಲ್ಲ.

'ಉಭಯಪ್ರಾಪ್ತೌ ಕರ್ಮಣಿ' ಎಂಬ ಸೂತ್ರಕ್ಕೆ ಇದು ಉದಾಹರಣೆ - 'ಆಶ್ಚರ್ಯೋ ಗವಾಂ ದೋಹಃ ಅಗೋಪಾಲಕೇನ'' ''ಗೋಪಾಲಕನಲ್ಲದವನು ಹಾಲನ್ನು ಕರೆಯುವುದು ಆಶ್ಚರ್ಯ'' ಎಂಬಲ್ಲಿ 'ದೋಹಃ' ಎಂಬುದು ಕೃದಂತಶಬ್ದ. 'ದುಹ್' ಧಾತುವಿಗೆ 'ಅಃ' ಪ್ರತ್ಯಯ ಬಂದು ರೂಪವಾಗಿದೆ. ದೋಹನಕ್ಕೆ ಕರ್ಮ ಗೋ, ಅಗೋಪಾಲಕನು ಕರ್ತಾ. ಗೋಶಬ್ದಕ್ಕೆ ಷಷ್ಠಿವಿಭಕ್ತಿಯು ಅಗೋಪಾಲಕಶಬ್ದಕ್ಕೆ ತೃತೀಯಾ ವಿಭಕ್ತಿಯು ಬರುತ್ತದೆ. ಹೀಗೆ ಉಭಯ ಪ್ರಾಪ್ತವಾದಾಗ ಕರ್ಮಾರ್ಥದಲ್ಲಿ ಮಾತ್ರ ಷಷ್ಠಿಯು ಬಂದಿದೆ. 'ಬ್ರಹ್ಮಣಃ ಜಿಜ್ಞಾಸಾ' ಎಂಬಲ್ಲಿ ಹೀಗೆ ಸಮನ್ವಯ ಮಾಡಲು ಬರುವುದೇ ಇಲ್ಲ. ಆದ್ದರಿಂದ ಕರ್ಮಣಿ ಚ ಸೂತ್ರವೂ ಪ್ರಸಕ್ತವಾಗುವುದಿಲ್ಲ. ಒಂದು ವೇಳೆ ಸೂತ್ರದಲ್ಲಿ 'ಅಧಿಕಾರಿಣಾ ಬ್ರಹ್ಮಣಃ ಜಿಜ್ಞಾಸಾ' ಎಂದು ಸೂತ್ರದಲ್ಲಿ ಹೇಳಿದ್ದರೆ ಜಿಜ್ಞಾಸಾಶಬ್ದವು ಕೃದಂತವಾಗಿದೆ. ಬ್ರಹ್ಮನು ಕರ್ಮ. ಅಧಿಕಾರಿಯು ಕರ್ತಾ. ಹೀಗಿರುವುದರಿಂದ 'ಉಭಯಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಿಂದ ಕರ್ಮಾರ್ಥಕ ಬ್ರಹ್ಮಶಬ್ದಕ್ಕೆ ಷಷ್ಠಿಯು ಬರುತ್ತಿತ್ತು. 'ಕರ್ಮಣಿ ಚ' ಸೂತ್ರವು ಆವಾಗ ಸಮಾಸ ನಿಷೇಧ ಮಾಡುತ್ತಿತ್ತು. ಆದರೆ ಸೂತ್ರಕಾರರು ಹಾಗೆ ಹೇಳಿಲ್ಲ. ಕೇವಲ 'ಬ್ರಹ್ಮಜಿಜ್ಞಾಸಾ' ಎಂದು

ಕರ್ಮವನ್ನಷ್ಟೇ ಹೇಳಿರುವುದರಿಂದ ಸಮಾಸ ಬಾರದಿರಲು ಕಾರಣವೇ ಇಲ್ಲ. 'ಬ್ರಹ್ಮಣಃ ಜಿಜ್ಞಾಸಾ ಬ್ರಹ್ಮಜಿಜ್ಞಾಸಾ' ಎಂಬ ಕರ್ಮಾರ್ಥಕ ಷಷ್ಠೀತತ್ಪುರುಷವು ಸಾಧುವೇ ಆಗಿದೆ.

**ಪ್ರಶ್ನೆ** - ಅಧಿಕಾರಿಯನ್ನು ಸೂತ್ರಕಾರರು ಹೇಳಿದ್ದಾರೆ. 'ಅಥ' ಎಂದರೆ ''ಶಮದಮಾದ್ಯಧಿಕಾರಸಂಪತ್ಯನಂತರಮ್'' ಎಂದರ್ಥ. ಈ ಶಬ್ದದಿಂದ ಅಧಿಕಾರಿಯು ಪ್ರಾಪ್ತನಾಗಿದ್ದಾನೆ. ಬ್ರಹ್ಮಶಬ್ದವು ಜಿಜ್ಞಾಸೆಯ ಕರ್ಮವನ್ನು ಹೇಳುತ್ತಿದೆ. ಆದ್ದರಿಂದ ಮೇಲೆ ಹೇಳಿದ ನಿಷೇಧವು ಏಕೆ ಬರುವುದಿಲ್ಲ?

ಉತ್ತರ - ಈ ಪ್ರಶ್ನೆ ಮಾಡುವವರಿಗೆ ಬೇರೆ ಸಮಾಧಾನವನ್ನೇ ಹೇಳುತ್ತೇವೆ - ''ಅಕಾರಯೋಃ ಪ್ರಯೋಗೇನೇತಿ ವಕ್ತವ್ಯಂ'' ಎಂಬ ವಾರ್ತಿಕದಲ್ಲಿ ಸ್ತ್ರೀಲಿಂಗದಲ್ಲಿ ಕ್ತಿನ್‌ಪ್ರತ್ಯಯ ಬರುತ್ತದೆ. ಆಗ ಆ ಪ್ರಕರಣದಲ್ಲಿ ವಿಧಿಸಿದ 'ಅಕ' 'ಅ' ಎಂಬ ಕೃತ್ ಪ್ರತ್ಯಯಗಳ ಸಂಬಂಧ ಬಂದಾಗ 'ಉಭಯಪ್ರಾಪ್ತೌ ಕರ್ಮಣಿ' ಎಂಬ ಸೂತ್ರದಲ್ಲಿ ಹೇಳುವ ಷಷ್ಠಿಯು ಬರುವುದಿಲ್ಲ ಎಂದು ಹೇಳಿದೆ.

ಉದಾಹರಣೆ - 'ಚಿಕೀರ್ಷಾ ದೇವದತ್ತಸ್ಯ ಕಟಸ್ಯ' ''ದೇವದತ್ತನಿಗೆ ಚಾಪೆ ಮಾಡಬೇಕೆಂಬ ಇಚ್ಛೆ ಇದೆ'' ಎಂಬಲ್ಲಿ ಚಿಕೀರ್ಷಾ ಎಂಬುದು ಕೃದಂತವಾಗಿದೆ. 'ಕೃಞ್' ಧಾತುವಿಗೆ 'ಸನ್' ಪ್ರತ್ಯಯ 'ಆ'ಕಾರವೆಂಬ ಸ್ತ್ರೀಪ್ರತ್ಯಯ ಬಂದು ರೂಪವಾಗಿದೆ. ದೇವದತ್ತನು ಕರ್ತಾ, ಕಟವು ಕರ್ಮ. ಹೀಗೆ ಉಭಯಪ್ರಾಪ್ತವಾಗಿದ್ದರಿಂದ ಕರ್ಮದಲ್ಲಿಯೇ ಷಷ್ಠಿಯು ಬರುತ್ತದೆಂದು ಸೂತ್ರವು ಹೇಳಿದೆ. ಆದರೆ 'ದೇವದತ್ತಸ್ಯ ಕಟಸ್ಯ' ಎಂಬಲ್ಲಿ 'ಉಭಯ' ಇತ್ಯಾದಿ ಸೂತ್ರವು ಪ್ರವೃತ್ತಿ ಮಾಡುವುದಿಲ್ಲ. ಏಕೆಂದರೆ 'ಆ'ಕಾರಾದಿ ಸ್ತ್ರೀಪ್ರತ್ಯಯ ಬಂದಿರುವುದರಿಂದ ಸೂತ್ರಕ್ಕೆ ಅವಕಾಶವಿಲ್ಲವೆಂದು ವಾರ್ತಿಕವು ಹೇಳುತ್ತಿದೆ.

ಪ್ರಕೃತ 'ಜಿಜ್ಞಾಸಾ' ಎಂಬಲ್ಲಿಯೂ 'ಆ'ಕಾರವೆಂಬ ಸ್ತ್ರೀಪ್ರತ್ಯಯ ಬಂದಿದೆ. ವಾರ್ತಿಕದ ಆಧಾರದಿಂದ ಇಲ್ಲಿ 'ಉಭಯ' ಇತ್ಯಾದಿ ಸೂತ್ರಕ್ಕೆ ಅವಕಾಶವಿಲ್ಲವೆಂದು ತಿಳಿಯುತ್ತದೆ. 'ಜಿಜ್ಞಾಸಾ' ಶಬ್ದವು ಸನ್ ಪ್ರತ್ಯಯಾಂತವಾದ 'ಜ್ಞಾ' ಧಾತುವಿನಿಂದ ನಿಷ್ಪನ್ನವಾಗಿದೆ. ''ಅಃ ಪ್ರತ್ಯಯಾತ್'' ಎಂಬ ಸೂತ್ರವು ಯಾವುದೇ ಪ್ರತ್ಯಯಾಂತವಾದ ಧಾತುವಿಗೆ 'ಅ' ಪ್ರತ್ಯಯವನ್ನು ವಿಧಾನ ಮಾಡುತ್ತದೆ. ಇದು ಕೃತ್ ಪ್ರತ್ಯಯವಾಗಿದೆ. ಆದ್ದರಿಂದ ''ಕರ್ತೃಕರ್ಮಣೋಃ ಕೃತಿ'' 'ಕೃದಂತಶಬ್ದಯೋಗವಿದ್ದಾಗ ಕರ್ತೃಕರ್ಮ ಎಂಬೆರಡೂ ಅರ್ಥಗಳಲ್ಲಿ ಷಷ್ಠಿಯು ಬರುತ್ತದೆ'' ಎಂಬ ಸೂತ್ರದಿಂದಲೇ ಷಷ್ಠಿವಿಭಕ್ತಿಯು ಬರುತ್ತದೆ. ಹೊರತು 'ಉಭಯಪ್ರಾಪ್ತೌ ಕರ್ಮಣಿ'' ಎಂಬ ಸೂತ್ರದಿಂದ ಅಲ್ಲ.

ಮಂಜರಿಯನ್ನು ನೋಡಿದಾಗ ಈ ವಿಚಾರವು ಸಂವಾದಪ್ರಮಾಣದಿಂದ ದೃಢವಾಗುತ್ತದೆ. - ಆ ಮಂಜರಿಯಲ್ಲಿ ನೀಡಿದ ಉದಾಹರಣೆ - ದೇವದತ್ತನ ಧರ್ಮಜಿಜ್ಞಾಸೆ' ಎಂದು ಇಲ್ಲಿ ದೇವದತ್ತನೆಂದು ಕರ್ತನನ್ನು ಧರ್ಮವೆಂದು ಕರ್ಮವನ್ನು ಹೇಳಿದ್ದರೂ ಜಿಜ್ಞಾಸಾ ಶಬ್ದವು ಸ್ತ್ರೀಲಿಂಗದಲ್ಲಿರುವ ಆ ಪ್ರತ್ಯಯಾಂತವಾದ ಶಬ್ದವಾಗಿದೆ. ಆದ್ದರಿಂದ 'ಕರ್ತೃಕರ್ಮಣೋಃ ಕೃತಿ' ಎಂಬ ಸೂತ್ರದಿಂದ ಷಷ್ಠಿವಿಭಕ್ತಿಯು ಬರುತ್ತದೆ. ಇಲ್ಲಿ 'ಕರ್ಮಣಿ ಚ' ಎಂಬ ಸೂತ್ರದಿಂದ ಸಮಾಸನಿಷೇಧ ಮಾಡಲು ಬರುವುದಿಲ್ಲ. ಷಷ್ಠೀಸಮಾಸ ಮಾಡಲು ಯಾವ ತೊಂದರೆಯೂ ಇಲ್ಲ.

ಪ್ರಶ್ನೆ - ಆದರೂ 'ಬ್ರಹ್ಮಜಿಜ್ಞಾಸಾ' ಎಂಬ ಸಮಾಸವು ಯುಕ್ತವಾಗುವುದಿಲ್ಲ. ಏಕೆಂದರೆ ''ಪ್ರತಿಪದವಿಧಾನಾ ಷಷ್ಠೀ ನ ಸಮಸ್ಯತೇ'' ''ಪದವನ್ನು ಪ್ರತ್ಯೇಕವಾಗಿ ನಿರ್ದೇಶಮಾಡಿ ವಿಧಾನ ಮಾಡಿದ ಷಷ್ಠಿಗೆ ಸಮಾಸ ಮಾಡಬಾರದು'' ಎಂದು ಈ ವಿಧಿಯು ಹೇಳುತ್ತದೆ. ಪ್ರಕೃತ ''ಕರ್ತೃಕರ್ಮಣೋಃ ಕೃತಿ'' ಎಂಬ ಸೂತ್ರವು 'ಕೃತಿ' ಕೃದಂತವಾದ ಶಬ್ದದ ಯೋಗವಿದ್ದಾಗ ಎಂದು ಪದವನ್ನು ಪ್ರತ್ಯೇಕ ನಿರ್ದೇಶ ಮಾಡಿ ಷಷ್ಠಿಯನ್ನು ವಿಧಿಸುತ್ತಿದೆ. ಇಲ್ಲಿ ಸಮಾಸ ಮಾಡುವುದು ತಪ್ಪು.

ಉದಾಹರಣೆ - 'ಸರ್ಪಿಷೋ ಜ್ಞಾನಂ' 'ತುಪ್ಪದ ಕಾರ್ಯ ಜ್ಞಾನ' ಎಂಬಲ್ಲಿ ಜ್ಞಾನಶಬ್ದವು ಲ್ಯುಡಂತವಾಗಿದೆ. ಸರ್ಪಿಸ್ ಶಬ್ದಕ್ಕೆ ಕರ್ಮಾರ್ಥದಲ್ಲಿ ಷಷ್ಠಿಯು ಬರುತ್ತದೆ. ಏಕೆಂದರೆ ''ಜ್ಞೋऽವಿದರ್ಥಸ್ಯ ಕರಣೇ'' ಎಂಬ ಸೂತ್ರದಲ್ಲಿ ಜ್ಞಾನಾರ್ಥಕವಲ್ಲದ 'ಜ್ಞಾ' ಧಾತುವಿನ ಅರ್ಥಕ್ಕೆ ಯಾವುದು ಕರಣವೋ ಅದರ ಕರಣತ್ವವನ್ನು ವಿವಕ್ಷೆ ಮಾಡದೆ ಕೇವಲ ಸಂಬಂಧವನ್ನು ವಿವಕ್ಷೆ ಮಾಡಿದರೆ ಆ ಅರ್ಥದಲ್ಲಿ ಷಷ್ಠಿವಿಭಕ್ತಿಯು ಬರುತ್ತದೆಂದು ಹೇಳಿದೆ. ಈ ಸೂತ್ರದಿಂದ ಇಲ್ಲಿ ಷಷ್ಠೀವಿಭಕ್ತಿ ಬಂದಿದೆ. ಇದು ಪ್ರತಿಪದವಿಧಾನಾ ಷಷ್ಠಿ ಎನಿಸಿದೆ. ಹಾಗಾಗಿ ಇಲ್ಲಿ ಸಮಾಸ ಮಾಡದೆ 'ಸರ್ಪಿಷೋ ಜ್ಞಾನಂ'' ಎಂದೇ ಹೇಳಬೇಕು. ಹಾಗೆಯೇ 'ಬ್ರಹ್ಮಣಃ ಜಿಜ್ಞಾಸಾ' ಎಂದು ಬಿಡಿಸಿಯೇ ಹೇಳಬೇಕು. ಸಮಾಸ ಮಾಡಬಾರದು.

ಉತ್ತರ - ನೀವು ಹೇಳಿದ ವಿಷಯಕ್ಕೂ ಪುನಃ ಅಪವಾದವಿದೆ. ''ಕೃದ್ಯೋಗಲಕ್ಷಣಾ ಚ ಷಷ್ಠೀ ಸಮಸ್ಯತೇ'' ಎಂಬ ವಾರ್ತಿಕವು ಕೃದಂತಶಬ್ದದ ಸಂಬಂಧದಿಂದ ''ಕರ್ತೃಕರ್ಮಣೋಃ ಕೃತಿ'' ಎಂಬ ಸೂತ್ರದಿಂದ ಬಂದ ಷಷ್ಠಿಯು ಸಮಾಸವನ್ನು ಹೊಂದುತ್ತದೆಂದು ಹೇಳುತ್ತದೆ. ಇದಕ್ಕೆ ಪ್ರತಿಪ್ರಸವ ಎನ್ನುತ್ತಾರೆ. ಅಂದರೆ ''ಪ್ರತಿಪದವಿಧಾನ'' ಎಂಬ ನಿಷೇಧವನ್ನು ನಿಷೇಧಿಸುತ್ತಿದೆ.

## ಜನ್ಮಸ್ಥಿತ್ಯಾದಿಗಳಿಗೆ ಪೌರ್ವಾಪರ್ಯವಿಲ್ಲ

**ಭಾವದೀಪಃ – 'ಜನ್ಮ ಆದಿಃ ಪ್ರಥಮಂ ಯಸ್ಮಿನ್ ಸ್ಥಿತ್ಯಾದಿಜಾತಃ' ಇತ್ಯತ್ರ ಕಥಂ ಜನ್ಮನಸ್ತೇಷು ಪ್ರಾಥಮ್ಯಮ್? 'ನ ಪೌರ್ವಾಪರ್ಯಮಿಚ್ಛಂತಿ ನದ್ಯಾಂ ಭ್ರಾಮ್ಯದ್ಭ್ರಮೇರಿವ' ಇತಿ ತೃತೀಯಸ್ಕಂಧೋಕ್ತ್ಯಾ, ದರ್ಶಪೌರ್ಣಮಾಸೀತಿಥ್ಯೋರಿವ ಜನ್ಮಸಂಸಾರಯೋರನಾದಿತ್ವಾತ್, ಇತ್ಯತ ಆಹ – ಲಬ್ಧೇತಿ ।। ಸತ್ಯಮೇವಮ್, ತಥಾಪಿ 'ಲಬ್ಧಜನ್ಮನಃ ಸ್ಥಿತ್ಯಾ(ದೀ)ದಿಃ' ಇತಿವತ್, ಸ್ಥಿತಸ್ಯ ನಷ್ಟಸ್ಯ ವಾ ಜನ್ಮನೇತ್ಯೇಕವ್ಯಕ್ತ್ಯಪೇಕ್ಷಯಾ ಜನ್ಮನಃ ಪ್ರಾಥಮ್ಯಮ್ – ಇತಿ ಭಾವಃ । ವ್ಯಕ್ತಮೇತತ್ ಮಿಥ್ಯಾತ್ವಾನುಮಾನಖಂಡನಟೀಕಾಭಾವ-ಪ್ರಕಾಶಿಕಾಯಾಮ್ ।**

ಭಾಗವತತೃತೀಯಸ್ಕಂಧದಲ್ಲಿ 'ನ ಪೌರ್ವಾಪರ್ಯಮಿಚ್ಛಂತಿ ನದ್ಯಾಂ ಭ್ರಾಮ್ಯದ್ ಭ್ರಮೇರಿವ' (ನದಿಯ ನೀರಿನಲ್ಲಿ ಬರುವ ಅಲೆಗಳಂತೆ ಭಗವಂತನ ಗುಣಗಳಲ್ಲಿ ಈ ಗುಣ ಮೊದಲು, ಈ ಗುಣ ಅನಂತರದ್ದು ಎಂಬ ಪೌರ್ವಾಪರ್ಯಭಾವವನ್ನು ಜ್ಞಾನಿಗಳು ತಿಳಿಯವುದಿಲ್ಲ) ಎಂದು ಹೇಳಲಾಗಿದೆ. ಹಾಗೆಯೇ ದರ್ಶಪೂರ್ಣಮಾಸದಲ್ಲೂ ಕೂಡ ಮೊದಲು ಅಮಾವಾಸ್ಯೆಯನ್ನಾಗಲೀ, ಅಥವಾ ಹುಣ್ಣಿಮೆಯನ್ನಾಗಲೀ ಹೇಗೆ ಸ್ವೀಕರಿಸಲು ಬರುವುದಿಲ್ಲವೋ ಅದೇ ರೀತಿ ಜನ್ಮ ಮತ್ತು ಸಂಸಾರ ಇವುಗಳು ಎರಡೂ ಅನಾದಿವಿಷಯಗಳಾದ್ದರಿಂದ ''ಜನ್ಮಾದಿ'' ಎಂಬಲ್ಲಿ ಸ್ಥಿತ್ಯಾದಿಗಳಿಗಿಂತ ಮೊದಲಾಗಿ ಜನ್ಮವನ್ನು ಪ್ರಥಮತಯಾ ಹೇಳಿದ್ದು ಏಕೆ? ಎಂಬ ಪ್ರಶ್ನೆಗೆ ಉತ್ತರವಾಗಿ ''ಲಬ್ಧಜನ್ಮನಃ'' ಇತ್ಯಾದಿ ವಾಕ್ಯವನ್ನು ಹೇಳುತ್ತಿದ್ದಾರೆ. ಈ ವಾಕ್ಯಕ್ಕೆ ಹೀಗೆ ಅರ್ಥ – 'ಯಾರಿಗೆ ಜನ್ಮ ಇದೆಯೋ ಅಂತಹವನಿಗೆ ಮಾತ್ರ ಸ್ಥಿತ್ಯಾದಿಗಳು ಸಂಭವಿಸಬಹುದು. ಇದೇ ರೀತಿಯಾಗಿ ಇರುವ ವ್ಯಕ್ತಿಗೆ ಅಥವಾ ನಾಶವಾದ ವ್ಯಕ್ತಿಗೆ ಜನ್ಮ ಇಲ್ಲ' ಹೀಗೆ ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಜನ್ಮಕ್ಕೆ ಪ್ರಾಥಮ್ಯವನ್ನು ಹೇಳಿದ್ದಾರೆ. ಈ ವಿಷಯವನ್ನು ಮಿಥ್ಯಾತ್ವಾನುಮಾನಖಂಡನದ ಟೀಕಾಭಾಗಕ್ಕೆ ಭಾವಪ್ರಕಾಶಿಕೆಯಲ್ಲಿ ಸ್ಪಷ್ಟತೆಯನ್ನು ನೀಡಲಾಗಿದೆ.

ವಿಶೇಷ ವಿಚಾರ – ಸ್ವರೂಪತಃ ಅನಾದಿತ್ವದ ಪರಿಷ್ಕಾರ[೧]

(೧) ಮಿಥ್ಯಾತ್ವಾನುಮಾನಖಂಡನದ ಮಂದಾರಮಂಜರಿಯಲ್ಲಿ ಶ್ರೀವ್ಯಾಸತೀರ್ಥರು 'ಸ್ವರೂಪತಃ ಅನಾದಿತ್ವಪರಿಷ್ಕಾರ'ವನ್ನು ಮತ್ತು 'ಪ್ರವಾಹತಃ ಅನಾದಿತ್ವಪರಿಷ್ಕಾರ'ವನ್ನು ಸುಂದರವಾಗಿ ವರ್ಣಿಸಿದ್ದಾರೆ. ಅದನ್ನು ಇಲ್ಲಿ ಯಥಾವತ್ತಾಗಿ ಅನುವಾದಿಸಲಾಗಿದೆ.

ಆಕ್ಷೇಪ - ಅಜ್ಞಾನವು ಸ್ವರೂಪತಃ ಅನಾದಿಯಾಗಿದೆ. ಕಾಮ್ಯಕರ್ಮಾದಿಗಳೆಲ್ಲವೂ ಪ್ರವಾಹತಃ ಅನಾದಿಯಾಗಿವೆ. ''ಸ್ವರೂಪತಃ ಅನಾದಿ'' ಎಂದರೆ ಏನು? ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರಬಾರದೆಂದೋ? ಅಥವಾ ತನಗೆ ಯಾವುದೇ ಕಾರಣವಿರುವುದಿಲ್ಲವೆಂದೋ?

ಮೊದಲನೆಯ ಪಕ್ಷದಲ್ಲಿಯೂ ತನ್ನ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರುವುದಿಲ್ಲವೆಂದೋ ಅಥವಾ ಬೇರೆ ಪದಾರ್ಥಗಳ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರುವುದಿಲ್ಲವೆಂದೋ? ಅಥವಾ ಯಾವುದೇ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರುವುದಿಲ್ಲವೆಂದೋ?

ತನ್ನ ಪ್ರಾಗಭಾವಕ್ಕೆ ಪ್ರತಿಯೋಗಿಯಾಗದಿರುವುದೇ ಸ್ವರೂಪತಃ ಅನಾದಿಯೆಂದು ಹೇಳುವುದಾದರೆ, ತನ್ನ ಪ್ರಾಗಭಾವವು ಪ್ರಸಿದ್ಧವಾಗಿದೆಯೋ? ಅಥವಾ ಅಪ್ರಸಿದ್ಧವಾಗಿದೆಯೋ? ತನ್ನ ಪ್ರಾಗಭಾವವು ಪ್ರಸಿದ್ಧವಾಗಿದೆ ಎನ್ನುವುದಾದರೆ ಪ್ರಾಗಭಾವಾಪ್ರತಿಯೋಗಿತ್ವವು ಬರುವುದಿಲ್ಲವೆಂದು ಅನಾದಿತ್ವದ ಲಕ್ಷಣವೇ ಬಾರದಿರಬೇಕಾದೀತು. ಆದ್ದರಿಂದ ಅಸಂಭವದೋಷವು ಪ್ರಾಪ್ತವಾಗುತ್ತದೆ. ತನ್ನ ಪ್ರಾಗಭಾವವು ಅಪ್ರಸಿದ್ಧವಾಗಿದೆ ಎನ್ನುವುದಾದರೆ, ತನಗೆ ಪ್ರತಿಯೋಗಿಯಾದ ಪ್ರಾಗಭಾವವೇ ಅಪ್ರಸಿದ್ಧವಾದ ಮೇಲೆ ಪ್ರಾಗಭಾವಾಪ್ರತಿಯೋಗಿತ್ವಾಭಾವವನ್ನು ತಿಳಿಯಲು ಸಾಧ್ಯವೇ ಇಲ್ಲ.

ಬೇರೆ ಪದಾರ್ಥಗಳ ಪ್ರಾಗಭಾವಗಳಿಗೆ ಪ್ರತಿಯೋಗಿಯಾಗದಿರುವಿಕೆಯನ್ನು ಪ್ರಾಗಭಾವಾಪ್ರತಿಯೋಗಿತ್ವವೆನ್ನುತ್ತೇವೆ ಎಂಬ ಎರಡನೆಯ ಪಕ್ಷವನ್ನು ಹೇಳಬೇಕು. ಆದರೆ ಘಟವೂ ಸಹ ಪಟದ ಪ್ರಾಗಭಾವಕ್ಕೆ ಅಪ್ರತಿಯೋಗಿಯಾಗಿದೆ. ಬೇರೆ ಪದಾರ್ಥದ ಪ್ರಾಗಭಾವಕ್ಕೆ ಅಪ್ರತಿಯೋಗಿಯಾಗಿರುವುದನ್ನೇ ಅನಾದಿತ್ವ ಎನ್ನುವುದಾದರೆ ಘಟವೂ ಸಹ ಅನಾದಿಯಾಗಬೇಕಾದೀತು.

ಸಕಲ ಪ್ರಾಗಭಾವಗಳಿಗೆ ಅಪ್ರತಿಯೋಗಿಯಾಗಿರುವಿಕೆಯೇ ಪ್ರಾಗಭಾವಾಪ್ರತಿಯೋಗಿತ್ವವೆಂಬ ಮೂರನೆಯ ಪಕ್ಷವನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ''ಪ್ರಾಗಭಾವಮಾತ್ರಾಪ್ರತಿಯೋಗಿತ್ವಂ'' ಎಂಬಲ್ಲಿರುವ ''ಮಾತ್ರ'' ಶಬ್ದವು 'ಕೃತ್ಸ್ನ' (ಸಕಲ) ಎಂಬ ಅರ್ಥವನ್ನು ಹೇಳುತ್ತಿದೆಯೋ? ಅಥವಾ 'ಸಾಮಾನ್ಯ' ಎಂಬ ಅರ್ಥವನ್ನು ಹೇಳುತ್ತಿದೆಯೋ? ಎಂದರೆ ಪ್ರಾಗಭಾವವು ಎಲ್ಲೆಡೆ ಸಾಮಾನ್ಯವಾಗಿದೆಯೆಂದೊ?

ಮೊದಲನೆಯ ಪಕ್ಷ ತಪ್ಪು. 'ಮಾತ್ರ' ಶಬ್ದಕ್ಕೆ ಸಕಲಪ್ರಾಗಭಾವಗಳೆಂಬ ''ಸಾಕಲ್ಯ'' ಎಂಬ ಅರ್ಥವನ್ನು ಸ್ವೀಕರಿಸಿದರೆ ಘಟವೂ ಸಹ ಅನಾದಿಯಾಗಬೇಕಾದೀತು. ಏಕೆಂದರೆ ತನ್ನ ಪ್ರಾಗಭಾವಕ್ಕೆ ಮಾತ್ರ ಘಟವು ಪ್ರತಿಯೋಗಿಯಾಗಿದೆಯೇ ಹೊರತು ಸಕಲಪದಾರ್ಥಗಳ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರುವುದಿಲ್ಲ. ಈ ದೃಷ್ಟಿಯಿಂದ ಘಟವು ಸಕಲಪ್ರಾಗಭಾವಗಳಿಗೆ ಅಪ್ರತಿಯೋಗಿಯಾಗಿರುವುದರಿಂದ ಅನಾದಿತ್ವ ಲಕ್ಷಣ ಘಟದಲ್ಲಿಯೂ ಬರುತ್ತದೆ.

ಇನ್ನು 'ಕೃತ್ಸ್ನ' ಎಂಬ ಪದಕ್ಕೆ 'ಸಾಮಾನ್ಯ' ಎಂಬ ಅರ್ಥವನ್ನು ಒಪ್ಪಬೇಕು. ಇದೂ ಸಹ ತಪ್ಪು. ಘಟಾದಿಪ್ರತಿಯೋಗಿಕವಾದ ಪ್ರಾಗಭಾವವು ಪ್ರಾಮಾಣಿಕವಾಗಿದೆ. ಆದರೆ ಆಕಾಶಾದಿ ಪ್ರತಿಯೋಗಿಕವಾದ ಪ್ರಾಗಭಾವವು ಅಪ್ರಾಮಾಣಿಕವಾಗಿದೆ. ಪ್ರಾಮಾಣಿಕವಾದ ಪ್ರಾಗಭಾವ ಹಾಗೂ ಅಪ್ರಾಮಾಣಿಕವಾದ ಪ್ರಾಗಭಾವಗಳಲ್ಲಿ ಅನುಗತವಾದ ಸಾಮಾನ್ಯವನ್ನು ಹೇಳಲು ಸಾಧ್ಯವಿಲ್ಲ. 'ಗೋವಿಷಾಣ' ಹಾಗೂ 'ಶಶವಿಷಾಣ'ಗಳಲ್ಲಿ ಅನುಗತವಾದ ಸಾಮಾನ್ಯವನ್ನು ಹೇಗೆ ಹೇಳಲು ಸಾಧ್ಯವಿಲ್ಲವೋ ಅದರಂತೆ ಪ್ರಾಗಭಾವತ್ವವನ್ನು ಇಲ್ಲಿ ಹೇಳಲು ಸಾಧ್ಯವಿಲ್ಲ.

ಇದರಂತೆ ಕಾರಣಶೂನ್ಯತ್ವವನ್ನೇ ಅನಾದಿತ್ವದ ಲಕ್ಷಣವೆನ್ನುವ ಎರಡನೆಯ ಪಕ್ಷವನ್ನೂಸಹನಿರಾಕರಿಸಬೇಕು. ಪ್ರಕೃತ ಕಾರಣಶೂನ್ಯತ್ವವೆಂದರೆ''ಸ್ವಕಾರಣಾನಿರೂಪಿತ ಕಾರ್ಯತಾಶೂನ್ಯತ್ವ'' ಎಂದೋ? ಅಥವಾ ''ಅನ್ಯಾಕಾರಣನಿರೂಪಿತ ಅಕಾರ್ಯತ್ವ'' ಎಂದೋ?. ''ಕಾರಣಮಾತ್ರ ನಿರೂಪಿತಕಾರ್ಯತಾಶೂನ್ಯತ್ವ'' ಎಂದೋ? ಹೀಗೆ ವಿಕಲ್ಪಿಸಿ ಕ್ರಮವಾಗಿ ಪ್ರಾಗಭಾವದ ಅಪ್ರತಿಯೋಗಿತ್ವವನ್ನು ನಿರಾಕರಿಸಿದಂತೆ ಇದನ್ನೂ ಸಹ ನಿರಾಕರಿಸಬೇಕು.

ಆದ್ದರಿಂದಸ್ವರೂಪತಃಅನಾದಿತ್ವದಲಕ್ಷಣವನ್ನು''ಪ್ರಾಗಭಾವಾಪ್ರತಿಯೋಗಿತ್ವಂ'' ಎಂದಾಗಲಿ ಅಥವಾ ''ಕಾರಣಶೂನ್ಯತ್ವಂ'' ಎಂದಾಗಲಿ ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ಅಜ್ಞಾನ ಮೊದಲಾದವುಗಳನ್ನು ಸ್ವರೂಪತಃ ಅನಾದಿ ಎಂದು ಹೇಗೆ ಹೇಳುತ್ತೀರಿ?

ಸಮಾಧಾನ -

ಘಟಾದೌ ಪ್ರಮಿತಾ ತಾವತ್ ಪ್ರಾಗಾಭಾವೇನ ಯುಕ್ತತಾ।
ಆರೋಪ್ಯ ಬುದ್ಧಿಪೂರ್ವಂ ಸಾ ಗಗನಾದೌ ನಿಷಿದ್ಧ್ಯತೇ॥
ಶ್ರೀ ಮಂತ್ರಾಲಯಪ್ರಭುವಿರಚಿತ - ಭಾವದೀಪ

ಘಟಪಟಾದಿಗಳಲ್ಲಿ ಪ್ರಾಗಭಾವಪ್ರತಿಯೋಗಿತ್ವವು ಪ್ರಸಿದ್ಧವಾಗಿದೆ. ಅದನ್ನು ಅನಾದಿಯಾದ ಆಕಾಶ ಮೊದಲಾದವುಗಳಲ್ಲಿ ಬುದ್ದಿ ಪೂರ್ವಕವಾಗಿ ಆರೋಪಮಾಡಿ ನಿಷೇಧಿಸುತ್ತೇವೆ.

ಸ್ವಪ್ರಾಗಭಾವಾಪ್ರತಿಯೋಗಿತ್ವವನ್ನೇ ಸ್ವರೂಪತಃ ಅನಾದಿತ್ವದ ಲಕ್ಷಣವೆಂದು ಹೇಳುತ್ತೇವೆ. ಹೀಗೆ ಹೇಳಿದಾಗ ಅನೇಕ ಆಕ್ಷೇಪಗಳನ್ನು ಮಾಡಲಾಗಿತ್ತು - ''ತನ್ನ ಪ್ರಾಗಭಾವವು ಅಪ್ರಸಿದ್ಧವಾದರೆ ಸ್ವಪ್ರಾಗಭಾವಾಪ್ರತಿಯೋಗಿತ್ವವೂ ಸಹ ಅಸಿದ್ಧವೇ ಆಯಿತು'' ಎಂಬ ಆಕ್ಷೇಪಕ್ಕೆ ಈಗ ಅವಕಾಶವಿಲ್ಲ. ಇಲ್ಲಿ ಆಕ್ಷೇಪ ಮಾಡುವವರ ಅಭಿಪ್ರಾಯವೇನೆಂದು ಮೊದಲು ಸ್ಪಷ್ಟವಾಗಿ ತಿಳಿಯಬೇಕು. ಪ್ರತಿಯೋಗಿಯು ಅಸತ್ ಆದ್ದರಿಂದ ಅಭಾವವೂ ಸಹ ಅಸತ್ ಆಗಿದೆ ಎಂದೋ? ಅಥವಾ ಪ್ರತಿಯೋಗಿಯು ಅಸತ್ ಆಗಿದ್ದರೇ ಪ್ರತಿಯೋಗಿಯನ್ನು ತಿಳಿಯಲು ಕಾರಣವಿಲ್ಲದ್ದರಿಂದ ಪ್ರತಿಯೋಗಿ ಜ್ಞಾನಪೂರ್ವಕವಾದ ಅಭಾವಜ್ಞಾನ ಬರುವುದಿಲ್ಲವೆಂದೋ?

ಪ್ರತಿಯೋಗಿಯು ಅಸತ್ ಆದ್ದರಿಂದ ಅಭಾವವೂ ಸಹ ಇರುವುದಿಲ್ಲವೆಂಬ ಮೊದಲನೆಯ ಪಕ್ಷ ತಪ್ಪು. ಏಕೆಂದರೆ ಪ್ರಾಗಭಾವ ಹಾಗೂ ಪ್ರಧ್ವಂಸಗಳಿಗೆ ಪ್ರತಿಯೋಗಿಸತ್ವದ ಅಪೇಕ್ಷೆ ಇರುತ್ತದೆ. ಎಲ್ಲಿ ಎಲ್ಲಿ ಪ್ರಾಗಭಾವ ಹಾಗೂ ಪ್ರಧ್ವಂಸಗಳು ಇರುತ್ತವೊ ಅಲ್ಲೆಲ್ಲ ಪ್ರತಿಯೋಗಿಯು ಇದ್ದೇ ಇರುತ್ತದೆ ಎಂಬ ವ್ಯಾಪ್ತಿಯು ಸಿದ್ಧವಾಗಿದೆ. ಆದರೆ ಎಲ್ಲೆಲ್ಲಿ ಅತ್ಯಂತಾಭಾವವು ಇರುತ್ತದೆಯೋ ಅಲ್ಲಲ್ಲಿ ಪ್ರತಿಯೋಗಿಯು ಇದ್ದೇ ಇರುತ್ತದೆ ಎಂಬ ವ್ಯಾಪ್ತಿಯು ಇರುವುದಿಲ್ಲ. ಹೊರತಾಗಿ ಅತ್ಯಂತಾಭಾವವು ಪ್ರತಿಯೋಗಿಯ ಅಸತ್ವವನ್ನೇ ಅಪೇಕ್ಷಿಸುತ್ತದೆ. ಅಂದರೆ ಮೂರೂ ಕಾಲದಲ್ಲಿಯೂ ಸಹ ಪ್ರತಿಯೋಗಿ ಇಲ್ಲದಿದ್ದರೆ ಅತ್ಯಂತಾಭಾವವನ್ನು ಹೇಳಲು ಸಾಧ್ಯ. ಪ್ರಕೃತ ನಾವು ''ಸ್ವಪ್ರಾಗಭಾವಾಪ್ರತಿಯೋಗಿತ್ವಾತ್ಯಂತಾಭಾವಃ''ವನ್ನೇ ಅನಾದಿತ್ವದ ಲಕ್ಷಣ-ವೆನ್ನುತಿದ್ದೇವೆ.

ಇನ್ನು ಪ್ರತಿಯೋಗಿಯು ಅಸತ್ ಆದರೆ ಪ್ರತಿಯೋಗಿಯನ್ನು ತಿಳಿಯಬೇಕಾದ ಕಾರಣವಿಲ್ಲದ ಕಾರಣ ಪ್ರತಿಯೋಗಿಪೂರ್ವಕವಾದ ಅಭಾವದ ಜ್ಞಾನವೂ ಸಹ ಬರುವುದಿಲ್ಲವೆಂಬ ಎರಡನೆಯ ಪಕ್ಷವೂ ಸಹ ಅಯುಕ್ತವಾಗಿದೆ. ಏಕೆಂದರೆ ಘಟಾದಿಗಳಲ್ಲಿ ಸ್ವಪ್ರಾಗಭಾವಾಪ್ರತಿಯೋಗಿತ್ವವು ಪ್ರಮಿತವಾಗಿದೆ. ಅಂತಹ ಪ್ರಾಗಭಾವಾಪ್ರತಿಯೋಗಿತ್ವವನ್ನು ಗಗನಾದಿಗಳಲ್ಲಿ ಬುದ್ಧಿಪೂರ್ವಕವಾಗಿ ಆರೋಪ

ಮಾಡಿ ನಿಷೇಧ ಮಾಡುತ್ತೇವೆ. ನಿಷೇಧವು ಪ್ರಸಕ್ತಿಪೂರ್ವಕವಾಗಿರುತ್ತದೆ. ಬುದ್ಧಿಪೂರ್ವಕ ಆರೋಪದಲ್ಲಷ್ಟೇ ಪ್ರಸಕ್ತಿ ಇರುತ್ತದೆ.

ಏಕೆಂದರೆ ''ಈ ಭೂತಲದಲ್ಲಿ ಘಟವಿರುವುದಿಲ್ಲ'' ಎಂದು ಹೇಳಿದಾಗ ಬೇರೆ ಭೂತಲದಲ್ಲಿ ಪ್ರಮಿತವಾದ ಘಟವು ಈ ಭೂಮಿಯಲ್ಲಿ ಬುದ್ಧಿಪೂರ್ವಕವಾಗಿ ಆರೋಪಮಾಡಿ ನಿಷೇಧ ಮಾಡಲಾಗುತ್ತದೆ. ಆದ್ದರಿಂದ ಈ ಭೂತಲದಲ್ಲಿ ಘಟವಿಲ್ಲವೆಂದು ಸಿದ್ಧವಾಗುತ್ತದೆ. ಅದರಂತೆ ಪ್ರಕೃತದಲ್ಲಿಯೂ ಘಟಪಟಾದಿಗಳಲ್ಲಿ ಪ್ರಮಿತವಾದ ಸ್ವಪ್ರಾಗಭಾವಪ್ರತಿಯೋಗಿತ್ವವನ್ನು ಅನಾದಿಯಾದ ಗಗನಾದಿ-ಪದಾರ್ಥಗಳಲ್ಲಿ ಬುದ್ಧಿಪೂರ್ವಕವಾಗಿ ಆರೋಪಮಾಡಿ ನಿಷೇಧ ಮಾಡಬೇಕು. ಆದ್ದರಿಂದ ಸ್ವಪ್ರಾಗಭಾವಾಪ್ರತಿಯೋಗಿತ್ವಾಭಾವವು ಗಗನಾದಿಗಳಲ್ಲಿ ಇರುತ್ತದೆಂದು ಹೇಳಿದಂತಾಗುತ್ತದೆ. ಆದ್ದರಿಂದ ಅಪ್ರಸಕ್ತವಾದದ್ದನ್ನು ನಿಷೇಧ ಮಾಡಿದಂತಾಗುವುದಿಲ್ಲ.

ಅಥವಾ ಘಟಾದಿಗಳಲ್ಲಿ ಸ್ವಪ್ರಾಗಭಾವಪ್ರತಿಯೋಗಿತ್ವವು ಸಿದ್ಧವಾಗಿದೆ. ಈ ದೃಷ್ಟಾಂತದಿಂದ ''ಗಗನಂ ಸ್ವಪ್ರಾಗಭಾವಪ್ರತಿಯೋಗಿ ವಸ್ತುತ್ವಾತ್ ಘಟವತ್'' ಘಟವು ಹೇಗೆ ವಸ್ತುವಾಗಿರುವುದರಿಂದ ಸ್ವಪ್ರಾಗಭಾವ ಪ್ರತಿಯೋಗಿಯಾಗಿದೆಯೋ ಅದರಂತೆ ಗಗನವೂ ಸಹ ವಸ್ತುವಾದ್ದರಿಂದ ಸ್ವಪ್ರಾಗಭಾವಪ್ರತಿಯೋಗಿಯಾಗಿರಬೇಕು ಎಂಬ ಅನುಮಾನಾಭಾಸದಿಂದ ಗಗನಾದಿಗಳಲ್ಲಿ ಸ್ವಪ್ರಾಗಭಾವಪ್ರತಿಯೋಗಿತ್ವವು ಪ್ರಸಕ್ತವಾಗುತ್ತದೆ. ಗಗನಾದಿಗಳಲ್ಲಿ ಸ್ವಪ್ರಾಗಭಾವಪ್ರತಿಯೋಗಿತ್ವವು ಇಲ್ಲದ ಕಾರಣ ಅದನ್ನು ಅನುಮಾನದಿಂದ ತಿಳಿಯಲು ಸಾಧ್ಯವಿಲ್ಲ. ಹಾಗಾಗಿ ಅನುಮಾನಾಭಾಸದಿಂದ ಅಂದರೆ ದೋಷಯುಕ್ತವಾದ ಅನುಮಾನದಿಂದ ಗಗನವು ತನ್ನ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿದೆಯೆಂದು ತಿಳಿಯಬಹುದು. ಹೀಗೆ ಬುದ್ಧಿಯಲ್ಲಿ ಗಗನವೂ ತನ್ನ ಪ್ರಾಗಭಾವಕ್ಕೆ ಪ್ರತಿಯೋಗಿಯಾಗಿರುತ್ತದೆಂದು ಪ್ರಸಕ್ತವಾಗುತ್ತದೆ. ಪ್ರಸಕ್ತವಾದ ಸ್ವಪ್ರಾಗಭಾವಾಪ್ರತಿಯೋಗಿತ್ವವನ್ನು ನಿಷೇಧ ಮಾಡುತ್ತೇವೆ. ಆದ್ದರಿಂದಲೂ ಅಪ್ರಸಕ್ತವಾದದ್ದನ್ನು ನಿಷೇಧ ಮಾಡಿದಂತಾಗುವುದಿಲ್ಲ.

ಇದರಂತೆ ಸ್ವಕಾರಣರಾಹಿತ್ಯವನ್ನು, ಉತ್ಪತ್ತಿರಾಹಿತ್ಯವನ್ನು ಅನಾದಿಯ ಲಕ್ಷಣವೆಂದು ಊಹಿಸಿಕೊಳ್ಳಬೇಕು. ಮತ್ತು 'ಪ್ರಧ್ವಂಸಾಪ್ರತಿಯೋಗಿತ್ವಂ' ಮೊದಲಾದ ಲಕ್ಷಣಗಳನ್ನೂ ಸಹ ಸಮರ್ಥಿಸಬೇಕು.

ಒಟ್ಟು ಅನಾದಿತ್ವದ ಪರಿಷ್ಕಾರವನ್ನು ಅನೇಕ ಬಗೆಯಲ್ಲಿ ಹೇಳಿದಂತಾಯಿತು - ೧) ಸ್ವಪ್ರಾಗಭಾವಾಪ್ರತಿಯೋಗಿತ್ವಂ, ೨) ಸ್ವಕಾರಣರಾಹಿತ್ಯಂ, ೩) ಸ್ವ ಉತ್ಪತ್ತಿರಾಹಿತ್ಯಂ ೪) ಪ್ರಧ್ವಂಸಾಪ್ರತಿಯೋಗಿತ್ವಂ ಇತ್ಯಾದಿಯಾಗಿ.

ಸಾರಾಂಶ - ಪರಮಾತ್ಮ, ಜೀವ, ಆಕಾಶ, ಅವಿದ್ಯೆ ಮೊದಲಾದವುಗಳೆಲ್ಲವೂ ಅನಾದಿ ಪದಾರ್ಥಗಳೆಂದು ನಾವು ಒಪ್ಪುತ್ತೇವೆ. 'ಅನಾದಿ' ಎಂದರೆ ಪರಮಾತ್ಮ, ಜೀವ ಮೊದಲಾದವರ ಸ್ವರೂಪವೇ ಅನಾದಿಯಾಗಿದೆ ಎಂದರ್ಥ. ಇದನ್ನು ಸ್ವರೂಪತಃ 'ಅನಾದಿ' ಎಂದು ಪಾರಿಭಾಷಿಕಶಬ್ದದಿಂದ ಕರೆಯುತ್ತಾರೆ. ಯಾವುದನ್ನು ಸ್ವರೂಪತಃ 'ಅನಾದಿ' ಎನ್ನಬೇಕು ಎಂದರೆ ಯಾವ ಪದಾರ್ಥಕ್ಕೆ ಮತ್ತೊಂದು ಕಾರಣವಿರುವುದಿಲ್ಲವೋ, ಅಥವಾ ಉತ್ಪತ್ತಿ ಇರುವುದಿಲ್ಲವೋ ಅಥವಾ ಪ್ರಾಗಭಾವವಿರುವುದಿಲ್ಲವೋ ಅಥವಾ ಪ್ರಧ್ವಂಸವಿರುವುದಿಲ್ಲವೋ, ಅಥವಾ ಉತ್ಪತ್ತಿ, ಧ್ವಂಸ ಇವುಗಳಿಗೆಲ್ಲ ಮತ್ತೊಂದು ಕಾರಣವಿರುವುದಿಲ್ಲವೋ ಅಂತಹ ಪದಾರ್ಥವನ್ನೇ ಸ್ವರೂಪತಃ ಅನಾದಿ ಎಂದು ತಿಳಿಯಬೇಕು. ಪ್ರಕೃತ ಪ್ರಾಗಭಾವವಿಲ್ಲದಿರುವಿಕೆ ಎಂಬುದನ್ನು ಸ್ವರೂಪತಃ ಅನಾದಿ ಎಂಬುದಾಗಿ ವಿವರವಾಗಿ ತೋರಿಸಿದ್ದಾರೆ. ಇದರಂತೆ ಉಳಿದವುಗಳನ್ನೂ ಸಹ ನಾವೇ ಸ್ವತಃ ತಿಳಿದುಕೊಳ್ಳಬೇಕು. ಪ್ರಾಗಭಾವವಿಲ್ಲವೆಂದರೆ ಘಟಪಟಾದಿಗಳಲ್ಲಿ ಪ್ರಾಗಭಾವ-ಪ್ರತಿಯೋಗಿತ್ವವಿರುವುದು ಪ್ರಸಿದ್ಧವಾಗಿದೆ. ಅಂತಹ ಪ್ರಾಗಭಾವಪ್ರತಿಯೋಗಿತ್ವವು ಪರಮಾತ್ಮ, ಜೀವ ಮೊದಲಾದ ಅನಾದಿ ಪದಾರ್ಥಗಳಲ್ಲಿ ಇರುವುದಿಲ್ಲವೆಂದು ತಿಳಿಯಬೇಕು.

**ಗಮನಿಸಬೇಕಾದ ಶಾಸ್ತ್ರೀಯ ವಿಚಾರ** - ಆರೋಪ್ಯವಾದದ್ದು ಅತ್ಯಂತಾಸತ್ ಆಗಿರುತ್ತದೆಂದು ನಮ್ಮ ಸಿದ್ಧಾಂತ. ಶುಕ್ತಿಯಲ್ಲಿ ಆರೋಪ್ಯವಾದ ರಜತವು ಮೂರು ಕಾಲದಲ್ಲಿಯೂ ಅತ್ಯಂತ ಅಸತ್ತೇ ಆಗಿರುತ್ತದೆ. ಆದ್ದರಿಂದ ಯಾವ ಪದಾರ್ಥದಲ್ಲಿ ಮತ್ತೊಂದನ್ನು ನಿಷೇಧ ಮಾಡುತ್ತೇವೆಯೋ, ಆ ನಿಷೇಧಪ್ರತಿಯೋಗಿಯು ಅತ್ಯಂತ ಅಸತ್ತೇ ಆಗಬೇಕು. ಪ್ರಕೃತ ಗಗನಾದಿಗಳಲ್ಲಿ ಪ್ರಾಗಭಾವಪ್ರತಿಯೋಗಿತ್ವವನ್ನು ನಿಷೇಧ ಮಾಡುತ್ತಿದ್ದೇವೆ. ಘಟಪಟಾದಿಗಳಲ್ಲಿರುವ ಪ್ರಾಗಭಾವಪ್ರತಿಯೋಗಿತ್ವವು ಪ್ರಾಮಾಣಿಕ-ವಾಗಿದೆ, ಆದನ್ನೇ ಇಲ್ಲಿ ನಿಷೇಧ ಮಾಡುತ್ತಿದ್ದೇವೆ ಎಂದು ಹೇಳುವುದಕ್ಕಿಂತ, ಘಟಪಟಾದಿಗಳಲ್ಲಿರುವ ಪ್ರಾಗಭಾವಪ್ರತಿಯೋಗಿತ್ವಕ್ಕೆ ಸದೃಶವಾದ ಮತ್ತೊಂದು ಪ್ರಾಗಭಾವಪ್ರತಿಯೋಗಿತ್ವವನ್ನು ಪ್ರಕೃತ ಗಗನಾದಿಗಳಲ್ಲಿ ನಿಷೇಧ ಮಾಡುತ್ತಿದ್ದೇವೆ ಎಂದು ಹೇಳಬೇಕು. ಹೀಗೆ ಹೇಳಿದಾಗ ನಿಷೇಧಕ್ಕೆ ವಿಷಯವಾದ ಪ್ರಾಗಭಾವತ್ವವನ್ನು ಅತ್ಯಂತ ಅಸತ್ ಎಂದು ಹೇಳಿದಂತಾಗುತ್ತದೆ.

''ಪರಮಾತ್ಮನಲ್ಲಿ ಯಾವುದೇ ದೋಷಗಳು ಇಲ್ಲ'' ಎಂದು ವ್ಯವಹರಿಸುತ್ತೇವೆ. ಯಾವ ದೋಷಗಳ ನಿಷೇಧವನ್ನು ಮಾಡುತ್ತಿದ್ದೇವೋ ಆ ನಿಷೇಧಕ್ಕೆ ಪ್ರತಿಯೋಗಿಯಾದ ದೋಷಗಳು ಅತ್ಯಂತ ಅಸತ್ತೇ ಆಗಿವೆ. ಹೊರತಾಗಿ ಜೀವಾದಿಗಳಲ್ಲಿರುವ ದೋಷಗಳ

ನಿಷೇಧವನ್ನು ಮಾಡುತ್ತಿರುವುದಲ್ಲ, ಜೀವಾದಿಗಳಲ್ಲಿರುವ ದೋಷಕ್ಕೆ ಸದೃಶವಾದ ಮತ್ತೊಂದು ಅತ್ಯಂತ ಅಸತ್ತಾದ ದೋಷವನ್ನು ಅಂಗೀಕರಿಸಿ ಅದನ್ನು ಬುದ್ಧಿಪೂರ್ವಕವಾಗಿ ಪರಮಾತ್ಮನಲ್ಲಿ ನಿಷೇಧ ಮಾಡಬೇಕು. ಇದನ್ನೇ ಅಪ್ರಾಮಾಣಿಕಪ್ರತಿಯೋಗಿಕ ನಿಷೇಧ ಎಂದು ಕರೆಯುತ್ತಾರೆ. ಕೆಲವು ಟಪ್ಪಣಿಕಾರರು ವಿಷ್ಣುತತ್ತ್ವವಿನಿರ್ಣಯ, ತತ್ತ್ವೋದ್ಯೋತ ಮೊದಲಾದ ಗ್ರಂಥಗಳಲ್ಲಿ ಪ್ರಾಮಾಣಿಕಪ್ರತಿಯೋಗಿಕ ನಿಷೇಧವನ್ನು ಒಪ್ಪಿದ್ದಾರೆ. ಇನ್ನೂ ಕೆಲವರು ಅಪ್ರಾಮಾಣಿಕಪ್ರತಿಯೋಗಿಕ ನಿಷೇಧವನ್ನು ಒಪ್ಪಿದ್ದಾರೆ. ವಿದ್ಯಾರ್ಥಿಗಳು ಇದರ ಬಗ್ಗೆ ಇನ್ನು ಹೆಚ್ಚಿನ ಚರ್ಚೆಯನ್ನು ತಿಳಿದುಕೊಳ್ಳಬೇಕು.

ಮತ್ತೊಂದು ವಿಚಾರ - ''ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥಾಃ ನಿಖಿಲಾ ಅಪಿ'' ಎಂಬುದು ನಮ್ಮ ಸಿದ್ಧಾಂತ. ಅಂದರೆ ಒಂದೇ ಘಟತ್ವವೆಂಬ ಜಾತಿಯು ಸಾವಿರಾರು ಘಟಗಳಲ್ಲಿದೆ ಎಂದು ನಾವು ಒಪ್ಪುವುದಿಲ್ಲ. ಪ್ರತಿಯೊಂದು ಘಟದಲ್ಲಿರುವ ಘಟತ್ವವನ್ನು ಭಿನ್ನಭಿನ್ನವೆಂದು ಒಪ್ಪಿದ್ದೇವೆ. ಆದರಂತೆ ಯಾವ ಪ್ರಾಗಭಾವಪ್ರತಿಯೋಗಿತ್ವವು ಘಟದಲ್ಲಿದೆಯೋ ಅದೇ ಗಗನಾದಿಗಳಲ್ಲಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ಘಟದಲ್ಲಿರುವ ಪ್ರಾಗಭಾವಪ್ರತಿಯೋಗಿತ್ವವೇ ಬೇರೆ. ಪಟದಲ್ಲಿರುವ ಪ್ರಾಗಭಾವ-ಪ್ರತಿಯೋಗಿತ್ವವೇ ಬೇರೆ. ಇಂತಹ ಪ್ರಾಗಭಾವಪ್ರತಿಯೋಗಿತ್ವ ಸದೃಶವಾದ ಮತ್ತೊಂದು ಪ್ರಾಗಭಾವಪ್ರತಿಯೋಗಿತ್ವವನ್ನು ಒಪ್ಪಿ ಅದರ ನಿಷೇಧವನ್ನು ಗಗನಾದಿಗಳಲ್ಲಿ ಮಾಡಬೇಕಾಗುತ್ತದೆ. ನಿಷೇಧಕ್ಕೆ ವಿಷಯವಾದ ಪ್ರಾಗಭಾವಪ್ರತಿಯೋಗಿತ್ವವು ಅತ್ಯಂತಾಸತ್ ಎಂದು ಒಪ್ಪುವುದು ಅನಿವಾರ್ಯ. ಅಪ್ರಾಮಾಣಿಕಪ್ರತಿಯೋಗಿತ್ವವನ್ನು ಒಪ್ಪುವುದು ಈ ದೃಷ್ಟಿಯಿಂದ ಅನಿವಾರ್ಯವೆಂದೆನಿಸುತ್ತದೆ. ಇನ್ನೂ ಹೆಚ್ಚಿನ ವಿಷಯವನ್ನು ಚರ್ಚಿಸಬೇಕು.

ಪ್ರವಾಹತೋऽನಾದಿತ್ವಪರಿಷ್ಕಾರಃ

ಆಕ್ಷೇಪ - ಕಾಮ, ಕರ್ಮ ಮೊದಲಾದವುಗಳು ಪ್ರವಾಹತಃ ಅನಾದಿಯಾಗಿವೆ ಎಂದು ಹೇಳಿದಿರಿ. ಇದೂ ಸಹ ತಪ್ಪು. ''ಪ್ರವಾಹತಃ ಅನಾದಿ'' ಎಂಬುದಕ್ಕೆ ಏನರ್ಥ? ಅಂದರೆ ಪ್ರವಾಹವು - ಪರಂಪರೆಯು ಅನಾದಿಯಾಗಿದೆಯೆಂದು ಹೇಳಬೇಕು. ಆದರೆ ಆ ಪ್ರವಾಹವು ಪ್ರವಾಹಿಗಳಿಗಿಂತ ಭಿನ್ನವೋ? ಅಥವಾ ಅಭಿನ್ನವೋ? ಭಿನ್ನವೆಂದರೆ ಪ್ರವಾಹಿಗಳ ದೆಸೆಯಿಂದ ಹುಟ್ಟುತ್ತಿದೆಯೋ? ಅಥವಾ ಕೇವಲ ತಿಳಿಯುತ್ತಿದೆಯೋ?

ಪ್ರವಾಹವು ಪ್ರವಾಹಿಗಳಿಂದ ಹುಟ್ಟುತ್ತಿದೆ ಮತ್ತು ಭಿನ್ನವಾಗಿದೆಯೆಂದು ಹೇಳುವುದಾದರೆ ಪ್ರವಾಹವನ್ನು ಅನಾದಿ ಎಂದು ಹೇಳಲು ಹೇಗೆ ಸಾಧ್ಯ? ಏಕೆಂದರೆ ಪ್ರವಾಹಿಗಳಿಂದ ಹುಟ್ಟಿದ ಮೇಲೆ ಸಾದಿಯೇ ಆಗಬೇಕು.

ಪ್ರವಾಹವನ್ನು ಪ್ರವಾಹಿಗಳು ಕೇವಲ ತಿಳಿಸುತ್ತವೆ ಎಂದರೆ ಪ್ರತ್ಯೇಕವಾಗಿ ಒಂದೊಂದು ಪ್ರವಾಹಗಳನ್ನು ತಿಳಿಸುತ್ತವೆಯೋ? ಅಥವಾ ಮಿಲಿತವಾದ ಸಕಲಪ್ರವಾಹಿಗಳು ಪ್ರವಾಹವನ್ನು ತಿಳಿಸುತ್ತವೆಯೋ? ಮೊದಲನೆಯ ಪಕ್ಷ ಸರಿಯಿಲ್ಲ. ಏಕೆಂದರೆ ಒಂದೊಂದೇ ಪ್ರವಾಹಿಗಳ ಜ್ಞಾನವು ಬರುತ್ತಿದ್ದರೂ ಪ್ರವಾಹದ ಬುದ್ಧಿಯು ಬರುತ್ತಿಲ್ಲ. ಪ್ರಕೃತ ನಿಮ್ಮ ಪ್ರಕಾರ ಒಂದೊಂದೇ ಪ್ರವಾಹಿಯ ಜ್ಞಾನದಿಂದಲೂ ಪ್ರವಾಹದ ಬುದ್ಧಿಯು ಬರಬೇಕಾದೀತು. ಇನ್ನು ಸಕಲ ಪ್ರವಾಹಿಗಳು ಸೇರಿ ಪ್ರವಾಹದ ಬುದ್ಧಿಯನ್ನು ಹುಟ್ಟಿಸುತ್ತಿವೆ ಎನ್ನಬೇಕು. ಆದರೆ ಕ್ರಮಭಾವಿಯಾದ ಪ್ರವಾಹಿಗಳಿಗೆ ಮೇಲನವೇ ಯುಕ್ತವಾಗುವುದಿಲ್ಲ.

ಪ್ರವಾಹವು ಪ್ರವಾಹಿಗಳಿಗಿಂತ ಭಿನ್ನವಲ್ಲವೆಂಬ ಎರಡನೆಯ ಪಕ್ಷವೂ ಸಹ ಸರಿಯಲ್ಲ. ಏಕೆಂದರೆ ಪ್ರವಾಹಿಗಳೆಲ್ಲವೂ ಉತ್ಪತ್ತಿವುಳ್ಳವುಗಳಾಗಿವೆ. ಇಂತಹ ಪ್ರವಾಹಿಗಳಿಂದ ಅಭಿನ್ನವಾದ ಪ್ರವಾಹಗಳೂ ಸಹ ಉತ್ಪನ್ನವುಳ್ಳವುಗಳಾಗುತ್ತವೆ ಹೊರತು ಅನಾದಿಯಾಗುವುದಿಲ್ಲ. ಆದ್ದರಿಂದ ಕಾಮ, ಕರ್ಮಾದಿಗಳು ಪ್ರವಾಹತಃ ಅನಾದಿಯಾಗಿವೆ ಎಂದು ಹೇಳಿದ್ದು ಅಯುಕ್ತವೇ ಆಗಿದೆ.

ಸಮಾಧಾನ -

ಪ್ರವಾಹ ಇತಿ ಗೀಯತೇ ಸಜಾತೀಯಾಃ ಪ್ರವಾಹಿಣಃ।
ಕಾಲೇನೋಪಾಧಿನಾ ಗ್ರಸ್ತಾ ನಾನಾವೃಕ್ಷಾವನಂ ಯಥಾ ॥

ಅನೇಕ ವೃಕ್ಷಗಳು ಒಂದು ಪ್ರದೇಶದಲ್ಲಿ ಇದ್ದಾಗ ವನವೆಂದು ಹೇಗೆ ಕರೆಯುತ್ತಾರೆಯೋ, ಅದರಂತೆ ಸಜಾತೀಯವಾದ ಅನೇಕಪ್ರವಾಹಿಗಳು ಕಾಲವೆಂಬ ಉಪಾಧಿಯಿಂದ ಪ್ರವಾಹವೆಂದು ಕರೆಸಿಕೊಳ್ಳುತ್ತವೆ.

ಪ್ರವಾಹವು ಪ್ರವಾಹಿಗಳಿಂದ ಅತಿರಿಕ್ತವೆಂದು ನಾವು ಹೇಳುವುದಿಲ್ಲ. ಹೊರತಾಗಿ ಸಜಾತೀಯವಾದ ಅನೇಕ ಪ್ರವಾಹಿಗಳು ಪೂರ್ವಾಪರಕಾಲವೃತ್ತಿತ್ವವೆಂಬ ಉಪಾಧಿಯಿಂದ ಪ್ರವಾಹ ಎಂದು ಕರೆಸಿಕೊಳ್ಳುತ್ತವೆ. ಈ ವಿಷಯದಲ್ಲಿ ದೃಷ್ಟಾಂತವು ಕಂಡಿದೆ - ಅನೇಕಮರಗಳೇ ಏಕದೇಶಸ್ಥತ್ವ ಎಂಬ ಉಪಾಧಿಯಿಂದ ''ವನ'' ಎಂದು ಕರೆಸಿಕೊಳ್ಳುತ್ತವೆ. ಅದರಂತೆ ಪ್ರವಾಹಿಗಳೇ ಪ್ರವಾಹ ಎಂದು ಕರೆಸಿಕೊಳ್ಳುತ್ತವೆ ಎಂದು ಹೇಳಬೇಕು.

ಪ್ರವಾಹವನ್ನು ಪ್ರವಾಹಿಗಳಿಂದ ಅಭಿನ್ನವೆಂದು ಹೇಳುವುದಾದರೆ, ಉತ್ಪತ್ತಿವುಳ್ಳ ಪ್ರವಾಹಿಗಳಂತೆ ಪ್ರವಾಹಗಳಿಗೂ ಉತ್ಪತ್ತಿಯನ್ನು ಹೇಳಿದಂತಾಯಿತಲ್ಲವೇ?

ಎಂದು ಪ್ರಶ್ನಿಸಬಾರದು. ಪ್ರವಾಹತಃ ಅನಾದಿತ್ವದ ಪರಿಷ್ಕಾರವನ್ನು ಹೀಗೆ ಮಾಡುತ್ತೇವೆ - ''ಏಕಪ್ರವಾಹಮಧ್ಯಪತಿತಾನೇಕಪ್ರವಾಹಪ್ರತಿಯೋಗಿಕ-ಪ್ರಾಗಭಾವಾವಚ್ಛಿನ್ನಕಾಲಾವೃತ್ತಿತ್ವಾನಧಿಕರಣಧ್ವಂಸಪ್ರತಿಯೋಗಿಪ್ರವಾಹಿತ್ವಂ'' ಒಂದು ಪ್ರವಾಹದ ಮಧ್ಯದಲ್ಲಿ ಅನೇಕಪ್ರವಾಹಗಳಿರುತ್ತವೆ. ಯಾವ ಕಾಲದಲ್ಲಿ ಯಾವ ಪ್ರವಾಹಪ್ರತಿಯೋಗಿಕವಾದ ಪ್ರಾಗಭಾವವು ಇರುತ್ತದೋ, ಅದೇ ಕಾಲದಲ್ಲಿ ಮತ್ತೊಂದು ಪ್ರವಾಹದ ಧ್ವಂಸಪ್ರತಿಯೋಗಿತ್ವವು ಪ್ರವಾಹಿಯಲ್ಲಿ ಇರುತ್ತದೆ. ಆದ್ದರಿಂದ ಒಂದು ಪ್ರವಾಹಿಯ ಧ್ವಂಸವಾದರೆ, ಮತ್ತೊಂದು ಪ್ರವಾಹಿಯ ಪ್ರಾಗಭಾವವಿರುತ್ತದೆ. ಆದ್ದರಿಂದ ಏಕಪ್ರವಾಹಮಧ್ಯಪತಿತವಾದ ಅನೇಕಪ್ರವಾಹಿಪ್ರತಿಯೋಗಿಕವಾದ ಪ್ರಾಗಭಾವಾವಚ್ಛಿನ್ನವಾದ ಕಾಲದಲ್ಲಿ ಇರುವಂತಹ ಧ್ವಂಸಪ್ರತಿಯೋಗಿಪ್ರವಾಹಿತ್ವವನ್ನೇ ಪ್ರವಾಹತಃ ಅನಾದಿತ್ವವೆಂದು ಕರೆಯುತ್ತೇವೆ. ಆದ್ದರಿಂದ ಯಾವುದೇ ದೋಷಗಳು ಇರುವುದಿಲ್ಲ.

ಸಾರಾಂಶ - ಕಾಮ, ಕರ್ಮ, ಕ್ಷಣ ಮೊದಲಾದವುಗಳನ್ನು ಪ್ರವಾಹತಃ ಅನಾದಿ ಎಂದು ಕರೆಯುತ್ತೇವೆ. ಇವುಗಳಿಗೆ ಸ್ವರೂಪತಃ ನಾಶವಿದ್ದರೂ, ಪುನಃ ಪುನಃ ಹುಟ್ಟುತ್ತಲೇ ಇರುವುದರಿಂದ ಪ್ರವಾಹತಃ ಅನಾದಿ ಎಂದು ಕರೆಸಿಕೊಳ್ಳುತ್ತವೆ. ಮೊದಲು ತಿನ್ನುವ ಆಸೆಯು ಬರುತ್ತದೆ, ಅನಂತರ ಆಡುವ ಆಸೆಯು ಹುಟ್ಟುತ್ತದೆ, ಅನಂತರ ಮಲಗುವ ಆಸೆಯು ಹುಟ್ಟುತ್ತದೆ. ಹೀಗೆ ಮನಸ್ಸಿನಲ್ಲಿ ಒಂದು ಆಸೆ ಹುಟ್ಟಿ ನಾಶವಾದಾಗ ಮತ್ತೊಂದು ಆಸೆಯು ಹುಟ್ಟಿರುತ್ತದೆ. ಇದರಂತೆ ಕರ್ಮವೂ ಸಹ ಪ್ರತಿಕ್ಷಣದಲ್ಲಿ ಹುಟ್ಟುತ್ತಲೇ ಇರುತ್ತದೆ. ಈ ಕಾರಣದಿಂದ ಇದನ್ನು ಅನಾದಿ ಎಂದು ಕರೆಯಬೇಕು.

## ಕಠಿಣಪದಾರ್ಥ

**ಭಾವದೀಪಃ – ಅನ್ಧಕಾರಭ್ರಾನ್ತಿಂ ನಿರಾಹ – ಆವೃತಿರಿತಿ ।। ಏಕಾಕಿತ್ವಭ್ರಾನ್ತಿಂ ನಿರಾಹ – ಏಕರಾಡಿತಿ ।। ನಿಯತಿಃ = ವ್ಯಾಪಾರೇಷು ಪ್ರೇರಣಮ್ । ಬನ್ಧಃ ಪ್ರಕೃತಿತಃ । 'ಮೋಕ್ಷೋ ಬನ್ಧಾದಿತಿ ವ್ಯಕ್ತಮ್' ಇತಿ ಭಾವಃ । ಏತೇಷಾಮಸಾಙ್ಕರ್ಯೆ ಚನ್ದ್ರಿಕಾಯಾಂ ವ್ಯಕ್ತಮ್।**

'ಆವೃತಿ'ಶಬ್ದಕ್ಕೆ ಅಂಧಕಾರ ಎಂಬರ್ಥವೂ ಇರುವುದರಿಂದ ಇಲ್ಲಿ ಆ ಅರ್ಥವನ್ನು ಗ್ರಹಿಸಬಾರದೆಂದು ಆವೃತಿ ಶಬ್ದಕ್ಕೆ 'ಅಜ್ಞಾನ' ಎಂಬರ್ಥವನ್ನು ಹೇಳಿದ್ದಾರೆ. ಇದೇ ರೀತಿ 'ಏಕರಾಟ್' ಎಂಬ ಶಬ್ದದಿಂದ 'ಒಬ್ಬಂಟಿಗ' ಎಂಬ ಅರ್ಥವನ್ನು ಸ್ವೀಕರಿಸದೆ 'ಸ್ವತಂತ್ರ' ಎಂಬ ಅರ್ಥವನ್ನು ಸ್ವೀಕರಿಸಬೇಕು. 'ನಿಯತಿ'ಶಬ್ದಕ್ಕೆ 'ನಾನಾರೀತಿಯ ವ್ಯಾಪಾರಗಳಲ್ಲಿ

ಪ್ರೇರಣೆ' ಎಂಬುದಾಗಿ ಅರ್ಥ. 'ಬಂಧ'ಶಬ್ದಕ್ಕೆ 'ಪ್ರಕೃತಿಯಿಂದ ಬಂಧನ' ಎಂಬರ್ಥವನ್ನು ಹೇಳಬೇಕು. 'ಮೋಕ್ಷವು ಬಂಧದಿಂದ' ಎಂಬ ವಿಷಯವು ಸ್ಪಷ್ಟವಾಗಿದೆ. 'ಈ ಸೃಷ್ಟಿ, ಸ್ಥಿತ್ಯಾದಿಗಳಿಗೆ ಪರಸ್ಪರವಾಗಿ ಸಾಂಕರ್ಯವಿಲ್ಲ' ಎಂಬ ವಿಷಯವನ್ನು ಚಂದ್ರಿಕಾದಲ್ಲಿ ವಿವರಿಸಲಾಗಿದೆ.

ಒಟ್ಟು ಅಭಿಪ್ರಾಯ - ನಿಯಮನಾದಿಗಳನ್ನು ಜನ್ಮಾದಿಗಳಲ್ಲಿ ಅಂತರ್ಭಾವ ಮಾಡುವ ಸಾಹಸವೂ ವ್ಯರ್ಥ. ಹಾಗೆ ಮಾಡುವುದಾದರೆ ಲಯಕ್ಕೂ ಜನ್ಮವಿರುವುದರಿಂದ ಜನ್ಮದಲ್ಲಿಯೇ ಲಯವನ್ನು ಸೇರಿಸಬಹುದು. ಆವಾಗ ನಿಮ್ಮ ತ್ರಿವಿಧ ಕಾರಣತ್ವಕ್ಕೂ ಚ್ಯುತಿ ಬರುತ್ತದೆ.

ನಿಯಮನಾದಿಗಳನ್ನು ಜನ್ಮಾದಿಗಳಲ್ಲಿ ಸೇರಿಸಲಾಗದು. ಮೋಕ್ಷವನ್ನು ಬಂಧಧ್ವಂಸರೂಪವೆಂದರೆ ಉತ್ಪತ್ತಿಯೂ ಪ್ರಾಗಭಾವಧ್ವಂಸರೂಪವಾಗಲಿ. ಅಜ್ಞಾನವೂ ಬಂಧಕರೂಪವೇ ಹೊರತು ಬಂಧರೂಪವಲ್ಲ. ಆದ್ದರಿಂದ ಎಲ್ಲವನ್ನೂ ಪ್ರತ್ಯೇಕವಾಗಿ ಹೇಳಲೇಬೇಕು.

## ತತ್ವಸಂಖ್ಯಾನದ ವಿರೋಧವಿಲ್ಲ

**ಭಾವದೀಪಃ – ಏತೇನ**

'सृष्टिः स्थितिः संहृतिश्च नियमो ज्ञानबोधने ।
बन्धो मोक्षः सुखं दुःखमावृतिर्ज्योतिरेव च ।।

ಇತಿ ತತ್ವಸಙ್ಖ್ಯಾನೋಕ್ತ್ಯಾ ಸುಖಾದೀನ್ಯಪಿ ಕುತೋ ನ ಗೃಹೀತಾನಿ? ಇತಿ ನಿರಸ್ತಮ್ । ಸ್ಕಾನ್ದೇ ಸೂತ್ರಕೃತೈವಾಷ್ಟಕಕರ್ತೃತ್ವಸ್ಯೈವ ಲಕ್ಷಣತ್ವೇನೋಕ್ತತ್ವಾತ್ । ಸೂತ್ರೇ ತಾವತ ಏವ ವಿವಕ್ಷಣೀಯತ್ವಾತ್ ।

ತತ್ವಸಂಖ್ಯಾನದಲ್ಲಿ
'ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋ ಜ್ಞಾನಬೋಧನೇ।
ಬಂಧೋ ಮೋಕ್ಷಃ ಸುಖಂ ದುಃಖಮಾವೃತಿರ್ಜ್ಯೋತಿರೇವ ಚ ।।'

ಎಂಬುದಾಗಿ ಭಗವಂತನಲ್ಲಿರುವ ಗುಣಗಳನ್ನು ಹೇಳುತ್ತಾ ಸೃಷ್ಟಿ, ಸ್ಥಿತ್ಯಾದಿ ಹನ್ನೆರಡು ಗುಣಗಳನ್ನು ಹೇಳಿದ್ದು; ಇಲ್ಲಿ ಸುಖಾದಿಗಳನ್ನು ಏಕೆ ಸ್ವೀಕರಿಸಿಲ್ಲ? ಎಂಬ ಪ್ರಶ್ನೆಗೆ

'ಸ್ಕಾಂದಪುರಾಣದಲ್ಲಿ ಸ್ವಯಂ ಸೂತ್ರಕಾರರೇ ಸೃಷ್ಟ್ಯಾದಿಅಷ್ಟಕರ್ತೃತ್ವವನ್ನು ಲಕ್ಷಣತ್ವೇನ ಹೇಳಿರುವುದರಿಂದ ಸೂತ್ರದಲ್ಲಿ ಅಷ್ಟನ್ನು ಮಾತ್ರ ಸ್ವೀಕರಿಸಬೇಕು' ಎಂಬುದಾಗಿ ಉತ್ತರಿಸಿದಂತೆ ಆಗುತ್ತದೆ.

## ಬ್ರಹ್ಮನ ಈ ಲಕ್ಷಣಕ್ಕೆ ಅಸಂಭವದೋಷವಿಲ್ಲ

**ಬ್ರಹ್ಮಸೂತ್ರಭಾಷ್ಯಮ್ –**

**'यतो वा इमानि भूतानि जायन्ते । येन जातानि जीवन्ति ।**
**यत्प्रयन्त्यभिसंविशन्ति' 'तद्विजिज्ञासस्व तद्ब्रह्म' इति ।**

'ಯಾರಿಂದ ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧವಾದ ಚೇತನರಾಶಿಗಳು ಹುಟ್ಟುತ್ತವೋ, ಜೀವಿಸುತ್ತವೋ, ಮತ್ತು ಪ್ರಳಯಕಾಲದಲ್ಲಿ ಯಾರನ್ನು ಪ್ರವೇಶಿಸುತ್ತವೋ, ಸಂಸಾರಾವಸ್ಥೆಯ ಅನಂತರ ಸ್ವೇಚ್ಛೆಯಿಂದ ವಿಹರಿಸುತ್ತವೋ ಆ ವ್ಯಕ್ತಿಯನ್ನೇ ವಿಚಾರಮಾಡಬೇಕು. ಅವನೇ ಬ್ರಹ್ಮಶಬ್ದವಾಚ್ಯನಾಗಿದ್ದಾನೆ.'' ಹೀಗೆ ತೈತ್ತಿರೀಯಶ್ರುತಿಯಲ್ಲಿ ಹೇಳಿದೆ.

ಪ್ರತಿಪದಾರ್ಥ -- 'ಜಿಜ್ಞಾಸ್ಯಂ ಬ್ರಹ್ಮ ವಿಷ್ಣುರೇವ, ಜಿಜ್ಞಾಸ್ಯಸ್ಯ ಕರ್ತೃತ್ವಾತ್' ಎಂಬ ಅನುಮಾನದಲ್ಲಿ ಹೇತ್ವಸಿದ್ಧಿಯನ್ನು ಪರಿಹರಿಸಲು ಮತ್ತು ಬ್ರಹ್ಮನ ಲಕ್ಷಣಕ್ಕೆ ಅಸಂಭವದೋಷವನ್ನು ಪರಿಹರಿಸಲು ಮುಂದಿನ ಭಾಷ್ಯ ಹೊರಟಿದೆ.

ಯತೋ ವಾ = ಯಾರಿಂದಲೇ, ಇಮಾನಿ = ಪ್ರತ್ಯಕ್ಷಸಿದ್ಧವಾದ, ಭೂತಾನಿ = ಜೀವರಾಶಿಗಳು, ಜಾಯಂತೇ = ಹುಟ್ಟುತ್ತವೋ, ಯೇನ = ಯಾರಿಂದಲೇ, ಜಾತಾನಿ = ಹುಟ್ಟಿರುವ ಜೀವರಾಶಿಗಳು, ಜೀವಂತಿ = ಬದುಕುತ್ತಿವೆಯೋ, ಯತ್ = ಯಾರಲ್ಲಿಯೇ, ಪ್ರಯಂತಿ = ಪ್ರಳಯಕಾಲದಲ್ಲಿ ಪ್ರವೇಶಿಸುತ್ತವೆಯೋ, ಯತ್ = ಯಾರನ್ನು, ಅಭಿಸಂವಿಶಂತಿ = ಹೊಂದಿ ವಿಹರಿಸುತ್ತವೋ, ತತ್ = ಅವನನ್ನು, ವಿಜಿಜ್ಞಾಸ್ಯಸ್ವ = ವಿಚಾರ ಮಾಡು, ತತ್ = ಅವನೇ ಬ್ರಹ್ಮ = ಗುಣಪರಿಪೂರ್ಣನಾದ ಬ್ರಹ್ಮನು. ಹೀಗೆ ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟಿದೆ.

## ಲಕ್ಷಣವು ಬ್ರಹ್ಮನಲ್ಲಿದೆಯೆನ್ನಲು ಆಧಾರ

**ತತ್ತ್ವಪ್ರಕಾಶಿಕಾ –**

**नन्वेतल्लक्षणं जिज्ञास्ये नोपलभ्यते, अतः कथं जीवापबाधकम्? इत्यतस्तत्पूर्ववाक्ये कथितम्? इति तदुदाहरति – यत इति ।। यत्प्रयन्ति प्रलये । यदभिस्वेच्छया सम्यक् प्रविशन्ति मुक्तौ ।**

ಈ ಜಗಜ್ಜನ್ಮಾದಿಕರ್ತೃತ್ವಲಕ್ಷಣವು ಜಿಜ್ಞಾಸ್ಯಬ್ರಹ್ಮನಲ್ಲಿ ಕೂಡುವುದಿಲ್ಲ, ಆದ್ದರಿಂದ ಬ್ರಹ್ಮಶಬ್ದಕ್ಕೆ ಜೀವನೆಂದು ಅರ್ಥೈಸಿದರೆ ಏನು ಬಾಧಕ? ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಲಕ್ಷಣವು 'ತದ್ ವಿಜಿಜ್ಞಾಸಸ್ವ' ಎಂಬುದರ ಹಿಂದಿನ ವಾಕ್ಯದಲ್ಲಿ ಹೇಳಿದ್ದಾರೆಂದು ''ಯತಃ'' ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ. 'ಯತ್‌ಪ್ರಯಂತಿ' = ಪ್ರಳಯಕಾಲದಲ್ಲಿ ಯಾರನ್ನು ಕುರಿತು ಹೋಗುತ್ತಾರೋ; ಮತ್ತು ಮುಕ್ತಿಯಲ್ಲಿ ಸ್ವೇಚ್ಛೆಯಿಂದ ಚೆನ್ನಾಗಿ ಪ್ರವೇಶಿಸುತ್ತಾರೋ ಎಂದು ಇದರ ಅರ್ಥ.

## ಸೃಷ್ಟ್ಯಾದ್ಯಷ್ಟಕಗಳನ್ನು ಸ್ವೀಕರಿಸಬೇಕೆನ್ನಲು ತತ್ತ್ವಪ್ರದೀಪದ ಅನಿವಾರ್ಯತೆ

**भावदीपः – पूर्ववाक्ये कथितमिति ।। तेन लक्षणस्यासम्भवनिरासार्थमेतदिति दर्शितम् । अत एव वक्षत्युपसंहारे व्याप्त्यादीत्यादिपदम् । नन्वत्र वाक्ये जन्मस्थितिलयमुक्तिरूपव्यापारचतुष्टयकृत्त्वमात्रमेव श्रुतं न तु सृष्ट्याद्यष्टक-कर्तृत्वरूपम्, अतः कथमेतल्लक्षणं पूर्ववाक्ये कथितम्? इत्युक्तिः । मैवम् । एतद्वाक्योपक्षितेष्वेवंरूपवाक्यान्तरेषु । 'त्वं मुक्तिदो बन्धदोऽतो मतो नस्त्वं ज्ञानदो ज्ञानदश्चासि विष्णो' इत्यादिषु तत्र तत्र व्यापारान्तराणां श्रवणेनात्राप्युपलक्षणतया सृष्ट्याद्यष्टकस्य ग्राह्यत्वात्' इति तात्पर्यात् । विवृत्तमेतत् सृष्ट्याद्यष्टकस्य श्रौतत्वं तत्वप्रदीपचन्द्रिकयोः ।**

''ಪೂರ್ವವಾಕ್ಯೇ ಕಥಿತಮ್'' ಎಂಬ ಅಂಶದಿಂದ 'ಇಲ್ಲಿ ಹೇಳಿದ ಲಕ್ಷಣವು ಅಸಂಭಾವಿತವಾಗಿದೆ' ಎಂಬ ಶಂಕೆಗೆ ಉತ್ತರವನ್ನು ನೀಡಿದಂತೆ ಆಗುತ್ತದೆ. ಆದ್ದರಿಂದಲೇ ಉಪಸಂಹಾರದಲ್ಲಿ 'ಅತಿವ್ಯಾಪ್ತಾದಿ' ಎಂಬಲ್ಲಿ ಆದಿಪದವನ್ನು ಬಳಸಿದ್ದಾರೆ. ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು — 'ಈ ವಾಕ್ಯದಲ್ಲಿ ಜನ್ಮಸ್ಥಿತಿಲಯಮುಕ್ತಿರೂಪವಾದ ನಾಲ್ಕು ವ್ಯಾಪಾರಗಳನ್ನು ಮಾತ್ರ ಹೇಳಿದ್ದಾರೆ. ಹೊರತು ಸೃಷ್ಟ್ಯಾದಿ ಎಂಟು ವ್ಯಾಪಾರಗಳನ್ನು ಹೇಳಿಲ್ಲ. ಆದ್ದರಿಂದ 'ಪೂರ್ವವಾಕ್ಯೇ ಕಥಿತಮ್' ಎಂಬ ಹೇಳಿಕೆಯು ಹೇಗೆ ಕೂಡುತ್ತದೆ? ಇದಕ್ಕೆ ಉತ್ತರವಾಗಿ ಈ ವಾಕ್ಯದಿಂದ ಉಪಲಕ್ಷಿತವಾದ 'ತ್ವಂ ಮುಕ್ತಿದೋ ಬಂಧತೋऽತೋ ಮತೋ ನಃ, ತ್ವಂ ಜ್ಞಾನದೋ ಅಜ್ಞಾನದಶ್ಚಾಪಿ ವಿಷ್ಣೋ' ಇತ್ಯಾದಿ ಬೇರೆ ವಾಕ್ಯಗಳಲ್ಲಿ ಅಲ್ಲಲ್ಲಿ ಬೇರೆ ವ್ಯಾಪಾರಗಳನ್ನು ಹೇಳಿರುವುದರಿಂದ ಈ ವಾಕ್ಯದಲ್ಲೂ ಕೂಡ ಸೃಷ್ಟ್ಯಾದಿ

ಎಂಟು ವ್ಯಾಪಾರಗಳನ್ನು ಸ್ವೀಕರಿಸಬೇಕು ಎಂಬ ತಾತ್ಪರ್ಯವನ್ನು ಗ್ರಹಿಸಬೇಕು. ಈ ವಿಷಯವನ್ನು ತತ್ವಪ್ರದೀಪ ಮತ್ತು ಚಂದ್ರಿಕೆಗಳಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾರೆ[೧].

ವಿಶೇಷ ವಿಚಾರ - ಅಷ್ಟಕರ್ತೃತ್ವವು ಅನಿವಾರ್ಯವೆಂದು ಮೂರುವಿಧದಲ್ಲಿ ತಿಳಿಯಬಹುದು. ಜನ್ಮಾದಿಪದದಿಂದ ಅಷ್ಟಗುಣಗಳನ್ನೇ ಸ್ವೀಕರಿಸಬೇಕು, ಎಂಟಕ್ಕಿಂತ ಜಾಸ್ತಿ ಗುಣಗಳನ್ನಾಗಲೀ ಕಡಿಮೆ ಗುಣಗಳನ್ನಾಗಲೀ ಸ್ವೀಕರಿಸಬಾರದೆಂದು ಸಮರ್ಥಿಸಿದ್ದಾರೆ. ಸ್ಕಾಂದದ ಮಾತಿನಿಂದ ಸೂಚಿತವಾಗಿದೆ.

ಸೃಷ್ಟಿರಕ್ಷಾಹೃತಿರ್ಜ್ಞಾನನಿಯಮಾಜ್ಞಾನಬಂಧನಾನ್ ।
ಮೋಕ್ಷಂಚ ವಿಷ್ಣುತಶ್ಚೈವ ಜ್ಞಾತ್ವಾ ಮುಕ್ತಿ ರ್ನಚಾನ್ಯಥಾ ॥

'ಸೃಷ್ಟಿ, ರಕ್ಷಣೆ, ಸಂಹಾರ, ಜ್ಞಾನ, ನಿಯಮನ, ಅಜ್ಞಾನ, ಬಂಧ, ಮೋಕ್ಷ ಇವೆಲ್ಲವೂ ವಿಷ್ಣುವಿನಿಂದಲೇ ಆಗುತ್ತವೆ ; ಈ ಜ್ಞಾನ ಪಡೆಯದೆ ಮೋಕ್ಷವಾಗದು ಎಂದು.

ಯತೋ ಮೋಕ್ಷಾದಿದಾತಾವಸೌ ಜಿಜ್ಞಾಸ್ಯ ಏವ ಹಿ ।

ಮೋಕ್ಷಾದಿಗಳನ್ನು ಯಾವಾತನು ಕೊಡುತ್ತಾನೋ, ಆತನೇ ಜಿಜ್ಞಾಸ್ಯನು.

'ನರ್ತೇ ತ್ವತ್ಕ್ರಿಯತೇ ಕಿಂಚಿದಿತ್ಯಾದೇರ್ನ ಹರಿಂ ವಿನಾ ಜ್ಞಾನಸ್ವಭಾವತೋಽಪಿ ಸ್ಯಾನ್ಮುಕ್ತಿ : ಕಸ್ಯಾಪಿ ಹಿ ಕ್ವಚಿತ್'

(೧) **ತತ್ವಪ್ರದೀಪಃ** – ತಥಾಹಿ – 'ಯತಃ ಪ್ರಸೂತಾ ಜಗತಃ ಪ್ರಸೂತೀ' 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧೀ'ತಿ ಪ್ರಕೃತಿಕಾಲಸೃಷ್ಟ್ಯಭಿಧಾನೇನ ತಸ್ಮಾದೇವ ಸರ್ವಸೃಷ್ಟಿರುಕ್ತಾ । ತದಧೀನತ್ವಾದಿತರಸೃಷ್ಟೇಃ । 'ಯಸ್ಮಿನ್ನಿದಂ ಸಂಚ ವಿಚೈತಿ ಸರ್ವಂ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ' ಇತಿ ಸ್ಥಿತಿಃ । 'ವೇನಸ್ತತ್ಪಶ್ಯನ್ ವಿಶ್ವಾ ಭುವನಾನಿ ವಿದ್ವಾನ್ ಯತ್ರ ವಿಶ್ವಂ ಭವತ್ಯೇಕನೀಡಮ್' ಇತಿ ಜ್ಞಾನಂ ಸಂಹಾರಶ್ಚ । 'ವಿವೇಶ್ಞಾ ಭೂತಾನಿ ಚರಾಚರಾಣಿ' ಇತ್ಯರ್ಥಾತ್ ನಿಯಮನಮ್ । 'ಯೇನಾಽದಿತ್ಯಸ್ತಪತಿ ತೇಜಸಾ ಭ್ರಾಜಸಾ ಚ' ಇತಿ ಸ್ಪಷ್ಟಮ್ । 'ಋತಸ್ಯ ತನ್ತುಂ ವಿತತಂ ವಿವೃತ್ಯ ತದಪಶ್ಯತ್ ತದಭವತ್ ಪ್ರಜಾಸ್ವಿವ' ಇತ್ಯಜ್ಞಾನಂ ಬನ್ಧಶ್ಚ । 'ಯ ಏನಂ ವಿದುರಮೃತಾಸ್ತೇ ಭವನ್ತಿ' ಇತಿ ಮೋಕ್ಷಃ । 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ, ಯೇನ ಜಾತಾನಿ ಜೀವನ್ತಿ' 'ಯತ್ಪ್ರಯನ್ತ್ಯಭಿಸಂವಿಶನ್ತಿ, ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಇತಿ ತೈತ್ತಿರೀಯಶ್ರುತಿಃ ವಿಷ್ಣೋರೇವೈತಾನಿ ಸೃಷ್ಟ್ಯಾದೀನಿ ಪ್ರಸಿದ್ಧಲಕ್ಷಣಾನೀತ್ಯಾಹ ।

'ನಿನ್ನ ಹೊರತು ಏನನ್ನೂ ಮಾಡಲಾಗದು' ಇತ್ಯಾದಿ ಶ್ರುತಿಗಳಿಂದ ಏನು ತಿಳಿಯುತ್ತದೆಂದರೆ ಜೀವನು ಜ್ಞಾನಸ್ವರೂಪನೇ ಆಗಿರಬಹುದು. ಆದರೆ ಹರಿಯ ಅನುಗ್ರಹವಿಲ್ಲದೆ ಯಾವ ಜೀವರಿಗೂ ಎಲ್ಲಿಯೂ ಮುಕ್ತಿಯಾಗಿದ್ದು ಕಂಡಿಲ್ಲ. ಇವೆಲ್ಲವು ಅನುವ್ಯಾಖ್ಯಾನದ ಮಾತುಗಳು.

ಎಂಟು ಗುಣಗಳು ಆಕಾಂಕ್ಷಾಪೂರಕಗಳಾಗಿವೆ. ಪ್ರಕೃತಕ್ಕೆ ಉಪಯೋಗಿಗಳೂ ಆಗಿವೆ, ಇದರಿಂದ ಮೂರನೆಯ ಪರಿಹಾರ ಸೂಚಿತವಾಗಿದೆ. ಇದರ ಅರ್ಥವೆ ಅನುವ್ಯಾಖ್ಯಾನ ಮಾತುಗಳ ಅರ್ಥ. ಹೀಗೆ ಮೂರು ಪರಿಹಾರಗಳು ಭಾಷ್ಯ ಸಮ್ಮತವಾಗಿವೆ. ವ್ಯಾಖ್ಯಾನವು ವ್ಯಾಖ್ಯೇಯವನ್ನು ಅನುಸರಿಸಿಯೇ ಇದೆ. ಇಲ್ಲವೆಂಬ ಸಂಶಯಬೇಡ.

ಆಕ್ಷೇಪ - ಲಕ್ಷ್ಯನಿರ್ಧಾರಣೆಗೆ ಒಂದು ಲಕ್ಷಣ ಸಾಕು. ಒಂದರಿಂದಲೇ ಇಷ್ಟವು ನೆರವೇರುತ್ತದೆ. ಅನೇಕ ಲಕ್ಷಣಗಳು ಅನಾವಶ್ಯಕ, ಪ್ರಕೃತ ಬ್ರಹ್ಮಸ್ವರೂಪ-ನಿರ್ಧಾರವಾಗಬೇಕು. ಆದಕ್ಕಾಗಿ ಸ್ಪಷ್ಟವಾದ ಒಂದು ಲಕ್ಷಣ ಹೇಳಿರಿ, ಎಂಟೆಂಟು ಲಕ್ಷಣಗಳೇಕೆ?

ಸಮಾಧಾನ - ಬ್ರಹ್ಮಸ್ವರೂಪವಂತೂ ನಿರ್ಧಾರವಾಗಬೇಕು. ಆದಕ್ಕಾಗಿ ನೀವೂ ಪ್ರಯತ್ನಿಸುತ್ತಿದ್ದೀರಿ ನಾವೂ ಪ್ರಯತ್ನಿಸುತ್ತಿದ್ದೇವೆ. ನಮ್ಮ ಪ್ರಯತ್ನದ ಪರ್ಯವಸಾನ ಎಂಟು ಲಕ್ಷಣ ಹೇಳುವುದರಲ್ಲಿ. ನಿಮ್ಮ ಪ್ರಯತ್ನ ಮೂರು ಲಕ್ಷಣ ಹೇಳುವುದರಲ್ಲಿ. ಒಂದೇ ಲಕ್ಷಣ ಸಾಕೆನ್ನುವ ನೀವು ಮೂರು ಲಕ್ಷಣ ಹೇಳುವ ಸಾಹಸ ಏಕೆ ಮಾಡಿದಿರಿ? ಪರದೋಷವನ್ನು ಕಣ್ಣರಳಿಸಿ ನೋಡುತ್ತೀರಿ. ನಿಮ್ಮ ದೋಷಗಳಲ್ಲಿ ಕುರುಡಾಗಿದ್ದೀರಿ.

## ಲಕ್ಷಣಸಮುದಾಯವು ವಿಷ್ಣುವಿನ ಅಸಾಧಾರಣಲಕ್ಷಣವೆನ್ನಲು ಕೈಮುತ್ಯನ್ಯಾಯ

**ಬ್ರಹ್ಮಸೂತ್ರಭಾಷ್ಯಮ್ —**

**ಯ ಇ ತ್ರಿಧಾತು ಪೃಥಿವೀಮುತ ದ್ಯಾಮೇಕೋ ದಾಧಾರ ಭುವನಾನಿ ವಿಶ್ವಾ ।**
**ಚತುರ್ಭಿಸ್ಸಾಕಂ ನವತಿಂ ಚ ನಾಮಭಿಶ್ಚಕ್ರಂ ನ ವೃತ್ತಂ ವ್ಯತೀರೇವೀವಿಪತ್ ।**

**(ಋ-೧-೧೬೫-೬)**

ಅನುವಾದ - 'ಯಾವ ಸಮರ್ಥನಾದ ಒಬ್ಬನೇ ವಿಷ್ಣುವು ಪ್ರಕೃತಿ, ಪುರುಷ, ಕಾಲಗಳಿಗೆ ಆಧಾರನಾಗಿ; ಭೂಮಿಯನ್ನು, ಆಕಾಶವನ್ನು, ಮತ್ತು ಸಮಸ್ತಲೋಕಗಳನ್ನು ಧರಿಸಿದ್ದಾನೋ ಅವನೇ ಗುಣ-ಪೂರ್ಣನಾದ ಬ್ರಹ್ಮನು' ಎಂದು ಋಗ್ವೇದವು ಹೇಳುತ್ತದೆ.

ಮತ್ತು ವಾಸುದೇವ, ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನ ಎಂಬ ನಾಲ್ಕುರೂಪಗಳಿಂದ ವಸು, ರುದ್ರ, ಆದಿತ್ಯ, ಪ್ರಜಾಪತಿಗಳೆಂಬ ಹೆಸರುಗಳಿಂದ ಉತ್ತಮರಾದ ತೊಂಬತ್ತು ದೇವತೆಗಳನ್ನು ಚಕ್ರದಂತೆ ತಿರುಗಿಸುತ್ತಿರುವನೋ ಅವನೇ ಶ್ರುತ್ಯುಕ್ತನಾದ ಪರಬ್ರಹ್ಮನು - ಹೀಗೆ ಋಗ್ವೇದವು ಹೇಳಿದೆ.

ಪ್ರತಿಪದಾರ್ಥ – ಸೃಷ್ಟ್ಯಾದಿಕರ್ತೃತ್ವಗಳಲ್ಲಿ ಪ್ರತ್ಯೇಕವಾಗಿ ಒಂದೊಂದೂ ಸಹ ವಿಷ್ಣುವಿನ ಅಸಾಧಾರಣಲಕ್ಷಣವಾಗಿರುವಾಗ ಲಕ್ಷಣದ ಸಮುದಾಯವು ವಿಷ್ಣುವಿನ ಅಸಾಧಾರಣ ಲಕ್ಷಣವಾಗುತ್ತದೆಂಬುದನ್ನು ಪ್ರತ್ಯೇಕ ಹೇಳಬೇಕೇನು? ಎಂಬ ಕೈಮುತ್ಯವನ್ನು ಹೇಳುತ್ತಿದ್ದಾರೆ.

ಯಃ = ಯಾವ ವಿಷ್ಣುವು, ಏಕಃ ಉ = ಒಬ್ಬನೇ, ತ್ರಿಧಾತುಃ = ಪ್ರಕೃತಿ, ಪುರುಷ, ಕಾಲಗಳಿಗೆ ಆಧಾರನಾಗಿ, ಪೃಥಿವೀಂ = ಭೂಮಿಯನ್ನು, ಉತ = ಮತ್ತು, ದ್ಯಾವಾ = ಆಕಾಶವನ್ನು, ವಿಶ್ವಾ ಭುವನಾನಿ = ಸಮಸ್ತ ಲೋಕಗಳನ್ನು, ದಾಧಾರ = ಬೃಹಚ್ಛರೀರದಿಂದ ಧರಿಸಿರುವನೋ, ಅವನೇ ಗುಣಪೂರ್ಣನಾದ ಬ್ರಹ್ಮನು.

ಮತ್ತು ನಾಮಭಃ = ಸ್ವರೂಪಭೇದಶೂನ್ಯವಾದ, ಚತುರ್ಭಃ = ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ರೂಪಗಳಿಂದ, ನವತಿಂ = ತೊಂಬತ್ತು ಮಂದಿ, ವ್ಯತೀನ್ = ದೇವತೆಗಳನ್ನು, ವೃತ್ತಂ = ತಿರುಗುತ್ತಿರುವ, ಚಕ್ರಂ ನ = ಚಕ್ರದಂತೆ, ಅವೀವಿಪತ್ = ತಿರುಗಿಸುತ್ತಾನೋ, (ಅವನೇ ಶ್ರುತ್ಯುಕ್ತ ಬ್ರಹ್ಮನು).

## ತೊಂಬತ್ತು ಮಂದಿ ದೇವತೆಗಳು ವಿಷ್ಣುವಿನ ಕೈಗೊಂಬೆಗಳು

**ತತ್ವಪ್ರಕಾಶಿಕಾ –**

**'ಸೃಷ್ಟ್ಯಾದಿಕಕರ್ತೃತ್ವಂ ಪ್ರತ್ಯೇಕಮಪಿ ವಿಷ್ಣವೇಕನಿಷ್ಠಂ, ಕಿಮು ಸರ್ವಮ್?' ಇತ್ಯಭಿಪ್ರಾಯೇಣ ಸ್ಥಿತಿಕರ್ತೃತ್ವಸ್ಯ ತದೇಕನಿಷ್ಠತ್ವೇ ಶ್ರುತಿಮಾಹ – ಯ ಇತಿ ।। ಯ ಏಕ ಏವ ಪ್ರಕೃತಿಪುರುಷಕಾಲಾಧಾರಕಃ ಪೃಥಿವೀಂ ಯಾಂ ಸರ್ವಭುವನಾನಿ ಚ ದಧಾರೇತ್ಯರ್ಥಃ । ತಥಾ ನಿಯಮನಂ ಚ ತದೇಕಕರ್ತೃಕಮಿತಿ ಶ್ರುತಿಮಾಹ – ಚತುರ್ಭಿರಿತಿ ।। 'ಸ ಬೃಹಚ್ಛರೀರೋ ಮೂಲರೂಪೀ ಚತುರ್ಭಿಃ ವಾಸುದೇವಾದಿನಾಮಭಿನಾಮಮಾತ್ರೈಃ ಸ್ವರೂಪಭೇದಶೂನ್ಯೈಃ ಸಾಕಂ ನವತಿಂ ವಿಶೇಷೇಣಾಧಿಕಾನ್ ದೇವಾನ್**

**वृत्तं चक्रमिव पर्यवर्तयत्' इत्यर्थः । अष्टौ वसव एकादश रुद्रा एकादशादित्याः दश प्रजापतयः पञ्चाशन्मरुत इति नवतिः ।**

ಸೃಷ್ಟ್ಯಾದಿ ಕರ್ತೃತ್ವಗಳಲ್ಲಿ ಒಂದೊಂದೂ ಸಹ ಪ್ರತ್ಯೇಕವಾಗಿ ವಿಷ್ಣುವಿನ ಧರ್ಮಗಳೆಂದು ನಿರ್ಣಯವಾದ ಮೇಲೆ ಎಲ್ಲವೂ ಸೇರಿ ವಿಷ್ಣುವಿನ ಧರ್ಮಗಳೇ ಆಗಿವೆಯೆಂಬುದನ್ನು ಪ್ರತ್ಯೇಕ ಹೇಳಬೇಕೇನು? ಎಂಬ ಕೈಮುತ್ಯವನ್ನು ತೋರಿಸಲು ಮೊದಲು ಸ್ಥಿತಿಕರ್ತೃತ್ವವು ಕೇವಲ ವಿಷ್ಣುನಿಷ್ಠವಾಗಿದೆ ಎಂದು ''ಯ ಉ ತ್ರಿಧಾತು'' ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ. ''ಯಾರೊಬ್ಬನೇ ಪ್ರಕೃತಿ, ಪುರುಷ, ಕಾಲಗಳಿಗೆ ಆಧಾರನಾಗಿದ್ದು ಮತ್ತು ಪೃಥಿವಿ, ಸ್ವರ್ಗ ಮೊದಲಾದ ಎಲ್ಲ ಲೋಕಗಳನ್ನು ಧರಿಸಿದ್ದಾನೋ'' ಎಂದು ಈ ಶ್ರುತಿಯ ಅರ್ಥ. ಅದರಂತೆ ನಿಯಮನವೂ ಸಹ ಅವನಿಂದಲೇ ಆಗಿರುತ್ತದೆಂದು ಶ್ರುತಿಪ್ರಮಾಣವನ್ನು ''ಚತುರ್ಭಿಃ ಸಾಕಂ'' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ. 'ವಿಶಾಲಶರೀರನಾದ ಮೂಲರೂಪದ ವಾಸುದೇವಾದಿ ನಾಲ್ಕು ನಾಮಮಾತ್ರದಿಂದ ಅಂದರೆ ಸ್ವರೂಪತಃ ಭೇದವಿಲ್ಲದ ರೂಪಗಳಿಂದ ತೊಂಬತ್ತು ಸಂಖ್ಯೆಯುಳ್ಳ ವಿಶೇಷಯೋಗ್ಯತೆಯುಳ್ಳ ದೇವತೆಗಳನ್ನು ಚಕ್ರದಂತೆ ತಿರುಗಿಸುತ್ತಾನೋ' ಎಂದು ಶ್ರುತ್ಯರ್ಥ. ಆ ತೊಂಬತ್ತು ಮಂದಿ ದೇವತೆಗಳು ಯಾರೆಂದರೆ, ಎಂಟು ವಸುಗಳು, ಹನ್ನೊಂದು ರುದ್ರರು, ಹನ್ನೊಂದು ಆದಿತ್ಯರು (ವಿಷ್ಣುನಾಮಕ ಆದಿತ್ಯನನ್ನು ಬಿಟ್ಟು ಹನ್ನೊಂದು ಮಂದಿಯನ್ನು ಪರಿಗಣಿಸಬೇಕು), ಹತ್ತು ಪ್ರಜಾಪತಿಗಳು, ಐವತ್ತು ಮರುತ್ತುಗಳು (ವಾಸ್ತವವಾಗಿ ನಲವತ್ತೊಂಬತ್ತು ಮರುದ್ ದೇವತೆಗಳು, ಮುಖ್ಯವಾಯುವನ್ನು ವಿವಕ್ಷಿಸಿದಾಗ ಐವತ್ತು ಮರುತ್ತಗಳೆಂದು ಹೇಳಿದ್ದಾರೆ) ಎಂಬುದಾಗಿ ತಿಳಿಯಬೇಕು.

## ಪ್ರತ್ಯೇಕಶ್ರುತಿಗಳ ಉಲ್ಲೇಖಕ್ಕೆ ಏನು ಪ್ರಯೋಜನ?

**भावदीपः – एकैकव्यापारोक्तिपरश्रुत्युक्तेरुपयोगाप्रतीतेराह – सृष्ट्यादीति।। विष्वेकनिष्ठमिति ।। 'जीवापबाधकम्' इति अनुवर्तते ।**

ಇಲ್ಲಿ ಒಂದೊಂದೇ ವ್ಯಾಪಾರಗಳನ್ನು ಪ್ರತ್ಯೇಕವಾಗಿ ಹೇಳುವ ಶ್ರುತಿಯನ್ನು ಉದಾಹರಣೆ ಮಾಡಿದ್ದಕ್ಕೆ ಉಪಯೋಗವು ಗೊತ್ತಾಗದೇ ಇರುವುದರಿಂದ ಇದನ್ನು ಸ್ಪಷ್ಟಪಡಿಸುವುದಕ್ಕಾಗಿ

''ಸೃಷ್ಟ್ಯಾದಿ'' ಎಂಬ ವಾಕ್ಯ ಹೊರಟಿದೆ. ''ವಿಷ್ಣ್ವೈಕನಿಷ್ಠಮ್'' ಎಂಬಲ್ಲಿ 'ಜೀವಾಪಬಾಧಕಮ್' ಎಂಬ ಅಂಶವನ್ನು ಅನುವೃತ್ತಿಮಾಡಿಕೊಂಡು ಅರ್ಥವನ್ನು ವಿವರಿಸಬೇಕು.

## ಶ್ರುತಿಸ್ಮೃತಿಗಳ ವ್ಯಾಖ್ಯಾನ

**ಭಾವದೀಪಃ – ಕಿಮ್ವಿತಿ ।। ''ಸ್ಕಾನ್ದಸ್ಮೃತ್ಯಾ, 'ಪರೋ ಮಾತ್ರಯಾ' ಇತಿ ವಕ್ಷ್ಯಮಾಣಶ್ರುತ್ಯಾ ಚ ಸರ್ವೇ ವಿಷ್ಣ್ವೇಕನಿಷ್ಠಂ ಸಜ್ಜೀವಬಾಧಕಂ ಕಿಮು ವಾಚ್ಯಮ್?'' ಇತ್ಯರ್ಥಃ । 'ಸರ್ವಮ್' ಇತ್ಯನೇಕಪರಂ ವಾ । ಪ್ರಾಗುಕ್ತದಿಶಾ 'ಯತೋ ವಾ' ಇತ್ಯತ್ರೋಪಲಕ್ಷಿತಸೃಷ್ಟ್ಯಾದ್ಯಷ್ಟಕಪರಂ ವಾ ಜ್ಞೇಯಮ್ । ತದೇಕನಿಷ್ಠ ಇತಿ ।। 'ಏಕ ಏವ' ಇತಿ ಶ್ರುತಾವಧಾರಣಾದೇತಲ್ಲಾಭ ಇತಿ ಭಾವಃ । ಶ್ರುತಮಿತಿ ।। ಸ್ಮೃತೌ ಸರ್ವಸ್ಯ ತದೇಕನಿಷ್ಠತ್ವೋಕ್ತೇಃ ಸಾ ಪೂರ್ವಮುಕ್ತೇತಿ ಭಾವಃ । ಏತೇನ 'ಯತೋ ವಾ' ಇತಿ ವಾಕ್ಯೇ ಚತುರ್ಣಾಮಶ್ರವಣೇನಾಷ್ಟಕಾಶ್ರವಣೇಪಿ ತೇನ ತತ್ರ ಜೀವಬಾಧನಂ ಸಿದ್ಧ್ಯತೀತ್ಯೇತತ್ ಸ್ಮೃತ್ಯುಕ್ತೌ ಫಲಂ ಸೂಚಿತಮ್ ।**

ಸ್ಕಾಂದಸ್ಮೃತಿಯಲ್ಲಿ 'ಪರೋ ಮಾತ್ರಯಾ' ಇತ್ಯಾದಿ ಮುಂದೆ ಹೇಳಲಿರುವ ಶ್ರುತಿಯಲ್ಲೂ ಕೂಡ ಈ ಎಲ್ಲಾ ವ್ಯಾಪಾರಗಳು ವಿಷ್ಣುವಿನಲ್ಲಿಯೇ ಪ್ರಧಾನವಾಗಿದ್ದು ಜೀವನು ಬ್ರಹ್ಮ ಎಂಬ ಅಂಶವನ್ನು ಬಾಧಿಸುತ್ತವೆ. ಈ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ಎಂಬ ಅಂಶವನ್ನು ''ಕಿಮು'' ಎಂಬ ಶಬ್ದದಿಂದ ಸೂಚಿಸಿದ್ದಾರೆ. 'ಸರ್ವಮ್' ಎಂಬ ಪದಕ್ಕೆ 'ಅನೇಕ' ಎಂಬುದಾಗಿ ಅಥವಾ ಹಿಂದೆ ಹೇಳಿದಂತೆ 'ಯತೋ ವಾ ಇತ್ಯಾದಿವಾಕ್ಯದಲ್ಲಿ ಉಪಲಕ್ಷಣಯಾ ಸ್ವೀಕರಿಸಿದ 'ಸೃಷ್ಟ್ಯಾದಿ ಅಷ್ಟಕ' ಎಂಬುದಾಗಿ ಅರ್ಥವನ್ನು ಗ್ರಹಿಸಬೇಕು. ''ಏಕ ಏವ'' ಎಂಬುದಾಗಿ ಶ್ರುತಿಯಲ್ಲಿ ಅವಧಾರಣ ಅರ್ಥವನ್ನು ತಿಳಿಸಿರುವುದರಿಂದ ಈ ವ್ಯಾಪಾರಗಳು ವಿಷ್ಣುವಿನಲ್ಲಿ ಮಾತ್ರ ಇದೆ ಎಂಬಂಶವು ಸ್ಪಷ್ಟವಾಗುತ್ತದೆ ಎಂಬುದನ್ನು ತಿಳಿಸಲು ''ತದೇಕನಿಷ್ಠತ್ವೇ'' ಎಂಬ ಅಂಶ ಹೊರಟಿದೆ. ಹಿಂದೆ ಹೇಳಿದ ಸ್ಕಾಂದಸ್ಮೃತಿಯಲ್ಲಿ ಸೃಷ್ಟ್ಯಾದಿ ಅಷ್ಟಕವು ವಿಷ್ಣುವಿನಲ್ಲೇ ಇದೆ ಎಂಬಂಶವನ್ನು ಹೇಳಿರುವುದರಿಂದ ಇದನ್ನು ತಿಳಿಸುವ ಶ್ರುತಿಯನ್ನು ಮುಂದೆ ಹೇಳಲಿದ್ದಾರೆ ಎಂಬುದನ್ನು ''ಶ್ರುತಿಮ್'' ಎಂಬುದಾಗಿ ಸೂಚಿಸುತ್ತಿದ್ದಾರೆ. ಇದರಿಂದ 'ಯತೋ ವಾ' ಇತ್ಯಾದಿ

ವಾಕ್ಯದಲ್ಲಿ ಸೃಷ್ಟ್ಯಾದಿ ನಾಲ್ಕು ವ್ಯಾಪಾರಗಳು ಸ್ವೀಕರಿಸಲ್ಪಟ್ಟಿದ್ದರೂ ಲಕ್ಷಣಯಾ ಎಂಟು ವ್ಯಾಪಾರಗಳನ್ನು ಗ್ರಹಣಮಾಡಿ ಇದರಿಂದಲೇ 'ಜೀವನು ಬ್ರಹ್ಮನಲ್ಲ' ಎಂಬ ಅಂಶವು ಸಿದ್ಧವಾಗುತ್ತದೆ. ಇದು ಹಿಂದೆ ಸ್ಮೃತಿಯಲ್ಲಿ ಹೇಳಿದಂತೆ ಅಂತಿಮವಾದ ನಿರ್ಣಯವನ್ನು ಸೂಚಿಸಿದಂತೆ ಆಗುತ್ತದೆ.

## ''ಯ ಉ'' ಶ್ರುತ್ಯರ್ಥ

**ಭಾವದೀಪಃ – 'ಉ'ಇತಿ 'ಏಕಸ್ಯ' ಇತಿ ಪದೇನಾನ್ವಯಂ ಮತ್ವಾರ್ಥಮಾಹ – ಏಕ ಏವೇತಿ ।। 'ತ್ರಿಧಾತು' ಇತ್ಯಸ್ಯಾರ್ಥಃ 'ಪ್ರಕೃತೀ'ತಿ । ವಿಷ್ಣುಸೂಕ್ತಸ್ಥತ್ವಾತ್ ಯಚ್ಛಬ್ದೋ ವಿಷ್ಣುಪರಃ । ತಸ್ಯ 'ತದಸ್ಯ ಪ್ರಿಯಮ್' ಇತಿ ವಕ್ಷ್ಯಮಾಣೇನಾನ್ವಯ ಇತಿ ಭಾವಃ । ತದೇಕೇತಿ ।। 'ಶ್ರುತೌ ಬ್ರಹ್ಮರುದ್ರಾದಿಸರ್ವದೇವತಾನಿಯಮನೋಕ್ತ್ಯಾ ಏತಲ್ಲಾಭಃ' ಇತಿ ಭಾವಃ ।**

'ಯ ಉ ತ್ರಿಧಾತು' ಎಂಬ ಶ್ರುತಿಯಲ್ಲಿ 'ಉ' ಎಂಬ ಶಬ್ದಕ್ಕೆ 'ಏಕಃ' ಎಂಬ ಶಬ್ದದಿಂದ ಅನ್ವಯವನ್ನು ಹೇಳಬೇಕೆಂದು ತಿಳಿಸುವುದಕ್ಕಾಗಿ 'ಏಕ ಏವ' ಎಂದು ಪ್ರಯೋಗ ಮಾಡಿದ್ದಾರೆ. 'ಪ್ರಕೃತಿ' ಇತ್ಯಾದಿಶಬ್ದವು 'ತ್ರಿಧಾತು' ಎಂಬ ಪದದ ಅರ್ಥವಾಗಿದೆ. ಇದು ವಿಷ್ಣುಸೂಕ್ತವಾಗಿರುವುದರಿಂದ ಇಲ್ಲಿರುವ ಯತ್‌ಶಬ್ದವನ್ನು ವಿಷ್ಣುಪರವಾಗಿ ಅನ್ವಯಿಸಿಕೊಳ್ಳಬೇಕು. ಈ ಯತ್‌ಶಬ್ದಕ್ಕೆ ಸೂಕ್ತದಲ್ಲಿ ಮುಂದೆ ಬರುವ 'ತದಸ್ಯ ಪ್ರಿಯಮ್' ಎಂಬಲ್ಲಿ ಅನ್ವಯವನ್ನು ತಿಳಿದುಕೊಳ್ಳಬೇಕು. ಶ್ರುತಿಯಲ್ಲಿ 'ಬ್ರಹ್ಮರುದ್ರಾದಿ ಎಲ್ಲ ದೇವತೆಗಳನ್ನೂ ವಿಷ್ಣುವು ನಿಯಮನ ಮಾಡುತ್ತಾನೆ' ಎಂದು ಹೇಳಿರುವುದರಿಂದ ಈ ನಿಯಮನವು ವಿಷ್ಣುವಿನಲ್ಲಿ ಮಾತ್ರ ಇದೆ ಎಂಬುದನ್ನು ಸ್ಪಷ್ಟಪಡಿಸಲು 'ತದೇಕಕರ್ತೃಕಂ' ಎಂಬ ಶಬ್ದವನ್ನು ಬಳಸಿದ್ದಾರೆ.

**ಭಾವದೀಪಃ – 'ಚತುರ್ಭಿರ್ನಾಮಭಿಃ' ಇತ್ಯುಕ್ತೇರ್ಭಾವಃ 'ನಾಮಮಾತ್ರೈಃ' ಇತ್ಯಾದಿ । 'ವ್ಯತೀನ್' ಇತ್ಯಸ್ಯಾರ್ಥಃ 'ವಿಶೇಷೇಣಾಧಿಕಾನ್' ಇತಿ । ವಿಶೇಷೇಣಾಧಿಕತ್ವೇನ 'ವ್ಯತಯೋ ದೇವತಾಃ ಸ್ಮೃತಾಃ' ಇತಿ ಕರ್ಮನಿರ್ಣಯೋಕ್ತೇಃ । 'ನ' ಇತ್ಯಸ್ಯಾರ್ಥಃ 'ಇವ' ಇತಿ । ಪರ್ಯವರ್ತಯದಿತಿ ।। 'ವಿಪ ಪರಿವರ್ತನೇ' ಇತಿ ತತ್ವಪ್ರದೀಪೋಕ್ತಧಾತೋರ್ಣಿಚಿ ಲುಙಿ ರೂಪಮ್ ।**

'ಚತುರ್ಭಿರ್ನಾಮಭಿಃ' ಎಂಬ ವಾಕ್ಯದ ಅಭಿಪ್ರಾಯವನ್ನು 'ನಾಮಮಾತ್ರೈಃ' ಎಂಬ ಅಂಶದಿಂದ ವಿವರಿಸಿದ್ದಾರೆ. 'ವ್ಯತೀನ್' ಎಂಬ ಶಬ್ದದ ಅರ್ಥವನ್ನು 'ವಿಶೇಷೇಣಾಧಿಕಾನ್' ಎಂಬ ಶಬ್ದದಿಂದ ವಿವರಿಸಿದ್ದಾರೆ. ಈ ಅಂಶವು 'ವಿಶೇಷೇಣಾಧಿಕತ್ವೇನ ವ್ಯತಯೋ ದೇವತಾಃ ಸ್ಮೃತಾಃ' ಎಂಬ ಕರ್ಮನಿರ್ಣಯದ ವಾಕ್ಯವು ಹೇಳುತ್ತದೆ. 'ಚಕ್ರಂ ನ' ಎಂಬಲ್ಲಿರುವ 'ನ'ಶಬ್ದದ ಅರ್ಥವನ್ನು 'ಇವ' ಎಂಬುದಾಗಿ ವಿವರಿಸಿದ್ದಾರೆ. 'ಅವೀವಿಪತ್' ಎಂಬ ಶಬ್ದವು ತತ್ತ್ವಪ್ರದೀಪಿಕೆಯಲ್ಲಿ ಹೇಳಿದಂತೆ 'ವಿಪ ಪರಿವರ್ತನೇ' ಎಂಬ ಧಾತುವಿನ ಣಿಜಂತವಾದ ಲುಙ್ ಲಕಾರದ ರೂಪವಾಗಿದ್ದು ಇದರ ಅರ್ಥವನ್ನು 'ಪರ್ಯವರ್ತಯತ್' ಎಂಬುದಾಗಿ ತಿಳಿಸಿದ್ದಾರೆ.

ವಿಶೇಷ ವಿಚಾರ - ಬೇರೆ ಅಧಿಕರಣಗಳಲ್ಲಿಯೂ ಹೀಗೆಯೇ 'ಇತಿ ಶ್ರುತ್ಯಾದಿಸಂಗತಿಃ' ಎಂದು ಅನ್ವಯ ಮಾಡಿಕೊಳ್ಳಬೇಕು. 'ಪರ್ಯವರ್ತಯತ್' ಎಂದು ಟೀಕೆಯಲ್ಲಿದೆ. ಶ್ರುತಿಯಲ್ಲಿ 'ವ್ಯತೀನ್ ಅವೀವಿಪತ್' ಎಂದಿದೆ. ಇಲ್ಲಿರುವ 'ಅವೀವಿಪತ್' ಎಂಬ ಪದಕ್ಕೆ ಟೀಕೆಯಲ್ಲಿ 'ಪರ್ಯವರ್ತಯತ್' ಎಂಬರ್ಥವನ್ನು ಬರೆದಿದ್ದಾರೆ. ವಿಪ ಪರಿವರ್ತನೇ ಎಂಬ ಧಾತುವಿನಿಂದ ಈ ಅರ್ಥವು ದೊರೆಯುತ್ತದೆಂದು ಅಭಿಪ್ರಾಯ.

## ಏಕಾದಶಾದಿತ್ಯರು ಐವತ್ತು ಮರುತ್ತುಗಳು ಹೇಗೆ?

**ಭಾವದೀಪಃ** – 'यान्येतानि देवजातानि गणशः आख्यायन्ते' 'वसवो रुद्रा आदित्या विश्वेदेवा मरुतः' इति काण्वश्रुतौ तृतीये ।

'आदित्या वसवो रुद्रास्त्रिविधा हि सुरा यतः ।
मरुतश्चैव विश्वे च साध्याश्चैव च तद्गताः ।।'

इति सप्तमस्कन्धतात्पर्ये । 'नवचयं नवतिम्' इत्यत्र ऋग्भाष्ये च गणश उक्तान् देवानाह – **अष्टाविति** ।। आदित्यानां द्वादशत्वेपि विष्ण्व्यतिरिक्तानां निम्यानामेकादशत्वात् 'एकादशादित्याः' इत्युक्तिः । **पञ्चाशदिति** ।। 'एकोनपञ्चाशन्मरुतां मुख्यवायुना सह पञ्चाशत्वात्' इति भावः । एतेन चतुर्मुखस्यापि नियम्यत्वसिद्धिः । मुख्यवायोरेव तत्त्वात् ।

'ಯಾನ್ಯೇತಾನಿ ದೇವಜಾತಾನಿ ಗಣಶಃ ಆಖ್ಯಾಯಂತೇ' (ಕಾಣ್ವಶ್ರುತಿ)

'ವಸವೋ ರುದ್ರಾ ಆದಿತ್ಯಾ ವಿಶ್ವೇದೇವಾ ಮರುತಃ' (ತಾ.ನಿ.)

'ಆದಿತ್ಯಾ ವಸವೋ ರುದ್ರಾಃ ತ್ರಿವಿಧಾ ಹಿ ಸುರಾ ಯತಃ।
ಮರುತಶ್ಚೈವ ವಿಶ್ವೇ ಚ ಸಾಧ್ಯಾಶ್ಚೈವ ಚ ತದ್ಗತಾಃ ॥'' (ಸಪ್ತಮಸ್ಕಂಧ ತಾತ್ಪರ್ಯ)

ದೇವತೆಗಳು ವಸು, ರುದ್ರ, ಆದಿತ್ಯ ಎಂಬುದಾಗಿ ಮೂರು ಬಗೆಯಾಗಿದ್ದಾರೆ. ಇವರು ಯಜ್ಞದಲ್ಲಿ ಪ್ರಧಾನಭಾಗವನ್ನು ಪಡೆಯುವವರು. ಮರುತ್ತುಗಳು ವಿಶ್ವೇದೇವತೆಗಳು ಮತ್ತು ಸಾಧ್ಯರು ಯಜ್ಞದಲ್ಲಿ ಅಪ್ರಧಾನರಾದುದರಿಂದ ಇವರನ್ನು ಆದಿತ್ಯಾದಿಗಳಲ್ಲೇ ಸೇರಿಸಿಕೊಳ್ಳುವುದು. ಹೀಗೆ ತ್ರಿಭಿಃ ಎಂಬ ಭಾಗವತದ ಶಬ್ದದಿಂದ ಈ ಗಣದೇವತೆಗಳನ್ನು ಸ್ವೀಕರಿಸಿದ್ದಾರೆ.

'ನವಚಯಂ ನವತಿಮ್' (ಋಗ್ಭಾಷ್ಯ) ಎಂಬ ಮಂತ್ರಭಾಗದ ವ್ಯಾಖ್ಯಾನದಲ್ಲಿ 'ಅಷ್ಟೌ' ಇತ್ಯಾದಿ ವಾಕ್ಯದಿಂದ'' — ಗಣಶಃ ಹೇಳಿದ ದೇವತೆಗಳನ್ನು ವಿವರಿಸಿ ಹೇಳುತ್ತಿದ್ದಾರೆ. 'ಆದಿತ್ಯರು ಹನ್ನೆರಡು ಮಂದಿ ಆಗಿದ್ದರೂ ವಿಷ್ಣುವಿನಿಂದ ಅತಿರಿಕ್ತರಾದ, ಅವನಿಂದ ನಿಯಮ್ಯರಾದ ಹನ್ನೊಂದು ಮಂದಿಯನ್ನು ಮಾತ್ರ ಇಲ್ಲಿ ಸ್ವೀಕರಿಸಬೇಕು' ಎಂಬುದಕ್ಕಾಗಿ ''ಏಕಾದಶಾದಿತ್ಯಾಃ'' ಎಂಬುದಾಗಿ ಹೇಳಿದ್ದಾರೆ. ಮರುತ್ತುಗಳು ನಲವತ್ತೊಂಬತ್ತುಮಂದಿ ಆಗಿದ್ದರೂ ಮುಖ್ಯವಾಯುವನ್ನು ಸೇರಿಸಿಕೊಂಡಾಗ ೫೦ ಮಂದಿ ಎಂಬುದಕ್ಕಾಗಿ 'ಪಂಚಾಶನ್ಮರುತಃ' ಎಂಬುದಾಗಿ ಹೇಳಿದ್ದಾರೆ. ಮುಖ್ಯವಾಯುವೇ ಚತುರ್ಮುಖರಾದುದರಿಂದ ಚತುರ್ಮುಖರೂ ಕೂಡ ವಿಷ್ಣುವಿನಿಂದ ನಿಯಮ್ಯರಾಗಿದ್ದಾರೆ ಎಂಬ ಅಂಶವು ಸಿದ್ಧವಾಗುತ್ತದೆ.

## ತೊಂಬತ್ತು ಮಂದಿ ದೇವತೆಗಳ ವಿವರ

**ಭಾವದೀಪಃ** – तत्वप्रदीपे तु टीकोक्तमेकमर्थमुक्त्वा चतुर्भिर्नामभिः नामवद्भिः साकं नवतिं देवान् पर्यवर्तयत्' इति वान्वयः । तथा चोक्तम् –

'आदित्या वसवो रुद्रा मरुतश्चाश्विनावपि ।
बृहस्पतिश्च कामश्च मनुर्दक्षो विनायकः ।

ಭೃಗುಶ್ಚೈವಾನಿರುದ್ಧಶ್ಚ ಧರ್ಮೋ ನಿರ್ಋತಿರೇವ ಚ ।
ಕುಬೇರಸಹಿತಾ ದೇವಾ ನವತಿಃ ಸಮ್ಪ್ರಕೀರ್ತಿತಾಃ ।
ಅನನ್ತೋ ಗರುಡೋ ವಾಯುಶ್ಚತ್ವಾರೋ ಬ್ರಹ್ಮಣಾ ಸಹ'

ಇತ್ಯನ್ತೇನ ಗ್ರನ್ಥೇನ 'ನಾಮಭಿಶ್ಚತುರ್ಭಿಃ' ಇತ್ಯನೇನ ಅನನ್ತಾದಿಚತುರ್ಣಾಂ, ಏಕೋನಪಞ್ಚಾಶನ್ಮುರತಾಂ, ಅಶ್ವಿನೋರೈಕ್ಯವಿವಕ್ಷಯಾಶ್ವಿಪ್ರಭೃತ್ಯೇಕಾದಶದೇವಾನಾಂ ಚ 'ನವತಿ'ಪದೇನ ಗ್ರಹಣಮುಪೇತ್ಯ ಇಯಂ ಶ್ರುತಿರನ್ಯಥಾಪಿ ವ್ಯಾಖ್ಯಾತಾ ।

ತತ್ವಪ್ರದೀಪದಲ್ಲಿ ಟೀಕೆಯಲ್ಲಿ ಹೇಳಿದ ಈ ಒಂದು ಅರ್ಥವನ್ನು ತಿಳಿಸಿ, ಇನ್ನೊಂದು ಅರ್ಥವನ್ನು ವಿವರಿಸಿದ್ದಾರೆ. ಅದು ಹೀಗೆ — ಅನಂತ, ಗರುಡ, ವಾಯು, ಚತುರ್ಮುಖಬ್ರಹ್ಮದೇವರು ಹೀಗೆ ನಾಲ್ಕುಮಂದಿ ಹೆಸರಾಂತದೇವತೆಗಳೊಂದಿಗೆ ಕೂಡಿಕೊಂಡ ತೊಂಬತ್ತು ದೇವತೆಗಳನ್ನು ವಿಷ್ಣುವು ಚಕ್ರದಂತೆ ತಿರುಗಿಸುತ್ತಾನೆ. ಹೀಗೆ ಆ ಮಂತ್ರಕ್ಕೆ ಅರ್ಥವನ್ನು ಇಟ್ಟುಕೊಳ್ಳಬೇಕು. ಇದನ್ನು 'ಆದಿತ್ಯಾ ವಸವೋ ರುದ್ರಾ' ಇತ್ಯಾದಿ ಶ್ಲೋಕವು ಸ್ಪಷ್ಟಪಡಿಸುತ್ತದೆ.

ಆದಿತ್ಯಾ ವಸವೋ ರುದ್ರಾ ಮರುತಶ್ಚಾಶ್ವಿನಾವಪಿ ।
ಬೃಹಸ್ಪತಿಶ್ಚ ಕಾಮಶ್ಚ ಮನುರ್ದಕ್ಷೋ ವಿನಾಯಕಃ ।
ಭೃಗುಶ್ಚೈವಾನಿರುದ್ಧಶ್ಚ ಧರ್ಮೋ ನಿರ್ಋತಿರೇವ ಚ ।
ಕುಬೇರಸಹಿತಾ ದೇವಾ ನವತಿಃ ಸಂಪ್ರಕೀರ್ತಿತಾಃ ।
ಅನಂತೋ ಗರುಡೋ ವಾಯುಶ್ಚತ್ವಾರೋ ಬ್ರಹ್ಮಣಾ ಸಹ ॥'

ಹನ್ನೊಂದು ಮಂದಿ ಆದಿತ್ಯರು, ಎಷ್ಟವಸುಗಳು, ಏಕಾದಶರುದ್ರರು, ಜೊತೆಯಾಗಿ ಅಶ್ವಿನೀದೇವತೆಗಳು, ಬೃಹಸ್ಪತಿ, ಕಾಮ, ಮನು, ದಕ್ಷ, ವಿನಾಯಕ, ಭೃಗು, ಅನಿರುದ್ಧ, ಧರ್ಮ, ನಿರ್ಋತಿ, ಕುಬೇರ ಹೀಗೆ ತೊಂಬತ್ತುಮಂದಿ ದೇವತೆಗಳು ಇವರೊಂದಿಗೆ ಅನಂತ, ಗರುಡ, ವಾಯು, ಚತುರ್ಮುಖಬ್ರಹ್ಮದೇವರು ಹೀಗೆ ನಾಲ್ಕುಮಂದಿಯನ್ನು ಸೇರಿಸಿಕೊಂಡಾಗ ಒಟ್ಟು ತೊಂಬತ್ತನಾಲ್ಕುಮಂದಿ ದೇವತೆಗಳು ವಿಷ್ಣುವಿನಿಂದ ನಿಯಮ್ಯರಾಗಿದ್ದಾರೆ. ಇಲ್ಲಿ ಅಶ್ವಿನೀದೇವತೆಗಳು ಇಬ್ಬರು ಆಗಿದ್ದರೂ ಸದಾ ಜೊತೆಯಾಗಿಯೇ ಇರುವುದರಿಂದ ಅವರಿಬ್ಬರಲ್ಲಿ ಐಕ್ಯವನ್ನು ವಿವಕ್ಷೆಮಾಡಿ ಸಂಖ್ಯೆಯನ್ನು ಸರಿಪಡಿಸಿಕೊಳ್ಳಬೇಕು.

ವಿಶೇಷವಿಚಾರ- ಟೀಕೆಯಲ್ಲಿ 'ಪಂಚಾಶನ್‌ಮರುತಃ' ಐವತ್ತುಮರುದ್ದೇವತೆಗಳೆಂದು ಹೇಳಿದ್ದಾರೆ. ಆದರೆ ನಲ್ವತ್ತೊಂಬತ್ತು ಮರುದ್ದೇವತೆಗಳಿರಬೇಕಾದರೆ ಐವತ್ತೆಂದು ಹೇಗೆ ಹೇಳಿದರು? ಎಂದರೆ ಮುಖ್ಯಪ್ರಾಣದೇವರನ್ನೂ ಸೇರಿಸಿಕೊಂಡು ಐವತ್ತೆಂದು ಹೇಳಿದ್ದಾರೆ. ಅದರಂತೆ ದ್ವಾದಶ ಆದಿತ್ಯರು ಪ್ರಸಿದ್ಧರು. ಆದರೆ ಟೀಕೆಯಲ್ಲಿ ಏಕಾದಶಾದಿತ್ಯರೆಂದು ಹೇಳಿದ್ದಾರಲ್ಲ? ಎಂದರೆ ವಿಷ್ಣುವನ್ನು ಬಿಟ್ಟು ವಿಷ್ಣುವಿನಿಂದ ನಿಯಮ್ಯರಾದ ಏಕಾದಶಾದಿತ್ಯರನ್ನಷ್ಟೇ ಇಲ್ಲಿ ಇಟ್ಟುಕೊಳ್ಳಬೇಕು.

ತತ್ತ್ವಪ್ರದೀಪದಲ್ಲಿ ಮತ್ತೊಂದು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

| | | |
|---|---|---|
| ಆದಿತ್ಯರು | = | ೧೧ |
| ವಸುಗಳು | = | ೮ |
| ಮರುತ್‌ದೇವತೆಗಳು | = | ೪೯ |
| ಆಶ್ವಿನಿದೇವತೆಗಳು | = | ೨ |
| ಬೃಹಸ್ಪತಿ | = | ೧ |
| ಕಾಮ | = | ೧ |
| ಮನು | = | ೧ |
| ದಕ್ಷ | = | ೧ |
| ಗಣಪತಿ | = | ೧ |
| ಭೃಗು | = | ೧ |
| ಅನಿರುದ್ಧ | = | ೧ |
| ಧರ್ಮ | = | ೧ |
| ನಿರ್ಋತಿ | = | ೧ |
| ಕುಬೇರ | = | ೧ |
| ಒಟ್ಟು | = | ೯೦ |

ಅನಂತ, ಗರುಡ, ವಾಯು, ಬ್ರಹ್ಮರನ್ನು ಸೇರಿಸಿದರೆ ೯೪ ಆಗುತ್ತಾರೆ.

## ಶ್ರುತಿಗಳ ಆಧಾರದಿಂದಲೇ ಅತಿವ್ಯಾಪ್ತಿಯ ಪರಿಹಾರ

**ಬ್ರಹ್ಮಸೂತ್ರಭಾಷ್ಯಮ್ –**

**'परो मात्रया तन्वा वृधान न ते महित्वमन्वश्नुवन्ति ।**
**न ते विष्णो जायमानो न जातो देव महिम्नः परमन्तमाप'।**

**'यो नः पिता जनिता यो विधाता धामानि वेद भुवनानि विश्वा'**
**इत्यादि च ।। २ ।।**

**।। इति जन्माधिकरणम् ।। २ ।।**

"ಎಲೈ ವಿಷ್ಣುವೇ! ನೀನು ಅಳತೆಗೆ ಸಿಗುವವನಲ್ಲ. ನೀನು ದೇಹದಿಂದ ಪ್ರಪಂಚವನ್ನೇ ವ್ಯಾಪಿಸಿರುವಿ. ನಿನ್ನ ಸೃಷ್ಟ್ಯಾದಿಮಹಿಮೆಯನ್ನು ಮುಕ್ತರಾಗಲಿ, ಅಮುಕ್ತರಾಗಲಿ ಹೊಂದಲಾರರು. ಕ್ರೀಡಾದಿಗುಣವಿಶಿಷ್ಟನಾದ ಸ್ವಾಮಿಯೇ! ನಿನ್ನ ಈ ಅಗಾಧಮಹಿಮೆಯ ಕೊನೆಯನ್ನು ಇಲ್ಲಿಯ ತನಕ ಹುಟ್ಟಿದ ಬ್ರಹ್ಮಾದಿಗಳು, ಮುಂದೆ ಹುಟ್ಟುವ ಬ್ರಹ್ಮಾದಿಗಳಾಗಲೀ ಹೊಂದಲಿಲ್ಲ, ಈಗಲೂ ಹೊಂದಿಲ್ಲ ಮುಂದೆಯೂ ಹೊಂದಲು ಸಾಧ್ಯವಿಲ್ಲ" ಹೀಗೆ ಋಗ್ವೇದದಲ್ಲಿ ಹೇಳಲ್ಪಟ್ಟಿದೆ.

'ಯಾವ ಬ್ರಹ್ಮನು ನಮ್ಮೆಲ್ಲರಿಗೆ ತಂದೆಯಂತೆ ಜನಕನಾಗಿದ್ದಾನೋ, ಧಾರಕನೂ, ಪೋಷಕನೂ ಆಗಿದ್ದಾನೋ, ಅವನು ಸಮಸ್ತಜಗತ್ತಿನಲ್ಲಿರುವುದನ್ನೆಲ್ಲ ಸಂಪೂರ್ಣವಾಗಿ ತಿಳಿದಿದ್ದಾನೆ' ಎಂದು.

ಈ ಎಲ್ಲ ಪ್ರಮಾಣಗಳೂ ಸೂತ್ರಕಾರರು ಹೇಳಿದ ಬ್ರಹ್ಮನ ಲಕ್ಷಣದ ವಿಷಯದಲ್ಲಿ ಆಧಾರವಾಗಿವೆ.

।। ಇಲ್ಲಿಗೆ ಬ್ರಹ್ಮಸೂತ್ರಭಾಷ್ಯದಲ್ಲಿ ಜನ್ಮಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ।।

ಪ್ರತಿಪದಾರ್ಥ – ಈ ಪ್ರತ್ಯೇಕಲಕ್ಷಣಗಳು ಕೇವಲ ವಿಷ್ಣುವಿನಲ್ಲಿರುತ್ತವೆಂದು ಹೇಳಿದ್ದರಿಂದ ಅತಿವ್ಯಾಪ್ತಿ ಬರುವುದಿಲ್ಲವೆಂದು ಸಿದ್ಧವಾಯಿತು. ಆದರೂ ನೇರವಾಗಿ ಶ್ರುತಿಪ್ರಮಾಣದಿಂದಲೇ ಅತಿವ್ಯಾಪ್ತ್ಯಾದಿ ದೋಷಗಳನ್ನು ಪರಿಹರಿಸುತ್ತಿದ್ದಾರೆ.

ವಿಷ್ಣೋ = ಎಲೈ ವಿಷ್ಣುವೇ!, ತ್ವಂ = ನೀನು, ಮಾತ್ರಯಾ = ಅಳತೆಯಿಂದ, ಪರಃ = ಮೀರಿದ್ದಿ; ತನ್ವಾ = ನಿನ್ನ ದೇಹದಿಂದ, ವೃಧಾನ = ಪ್ರಪಂಚವನ್ನು

ವ್ಯಾಪಿಸಿದ್ದಿ; ತೇ = ನಿನ್ನ, ಮಹಿತ್ವಂ = ಜಗತ್ಸೃಷ್ಟ್ಯಾದಿಮಹಿಮೆಯನ್ನು, ಅನು = ಮುಕ್ತರೇ ಆಗಲಿ, ಅಮುಕ್ತರೇ ಆಗಲಿ, ನ ಆಶ್ನುವಂತಿ = ಅನುಭವಿಸಲಾರರು. ಹೇ ದೇವ = ಕ್ರೀಡಾದಿಗುಣವಿಶಿಷ್ಟನಾದ ಸ್ವಾಮಿಯೇ! ತೇ = ನಿನ್ನ, ಮಹಿಮ್ನಃ = ಸೃಷ್ಟ್ಯಾದಿ-ಕರ್ತೃತ್ವಮಹಿಮೆಯ, ಪರಂ ಅಂತಂ = ಕೊನೆಯನ್ನು, ಜಾತಃ = ಇಲ್ಲಿಯ ತನಕ ಹುಟ್ಟಿರುವ ಬ್ರಹ್ಮಾದಿ ಜೀವರಾಶಿಗಳು, ಜಾಯಮಾನಃ = ಮುಂದೆ ಹುಟ್ಟುವ ಬ್ರಹ್ಮಾದಿ ಜೀವರಾಶಿಗಳು, ನ ಆಪ = ಹೊಂದಲಿಲ್ಲ, ಹೊಂದಿಲ್ಲ, ಮುಂದೆಯೂ ಹೊಂದುವುದಿಲ್ಲ.

ಜಗತ್ಕಾರಣತ್ವವು ಬ್ರಹ್ಮನಿಗೆ ವಿಕಾರಮೂಲಕವಾಗಿ ಬರುವುದಿಲ್ಲ; ಹೊರತು ತಂದೆಯಂತೆ ನಿಮಿತ್ತಕಾರಣವಾಗಿ ಬರುತ್ತದೆ. ಯಃ = ಯಾವ ಪುರುಷಶಬ್ದವಾಚ್ಯನಾದ ಪರಮಾತ್ಮನು, ನಃ = ನಮಗೆ, ಪಿತಾ = ತಂದೆಯು, ಜನಿತಾ = ಉತ್ಪಾದಕನೂ, ಯಃ = ಯಾರು, ವಿಧಾತಾ = ಧಾರಕನು, ವಿಶ್ವಾ ಭುವನಾನಿ = ಎಲ್ಲಾ ಲೋಕಗಳೇ ಧಾಮಾನಿ = ಮನೆಯಾಗಿ ಉಳ್ಳವನೋ, ವೇದ = ಸಮಸ್ತವನ್ನೂ ತಿಳಿದವನೂ, ಇತ್ಯಾದಿ ಚ = ಇವೇ ಮೊದಲಾದ ಋಗ್ವೇದದ ವಾಕ್ಯಗಳಿಂದ, ಸೃಷ್ಟ್ಯಾದ್ಯಷ್ಟಕರ್ತೃತ್ವವು ಬ್ರಹ್ಮನಲ್ಲೇ ಬರುತ್ತದೆಂದು ತಿಳಿಯುತ್ತದೆ.

॥ ಭಾಷ್ಯದೀಪಿಕಾನುಸಾರಿಯಾದ ಪ್ರತಿಪದಾರ್ಥದಲ್ಲಿ ಜನ್ಮಾಧಿಕರಣವು ಸಮಾಪ್ತವಾಯಿತು ॥

## ವಿಷ್ಣುವಿನ ಮಹಿಮೆ ಹೊಂದಲು ತ್ರಿಕಾಲದಲ್ಲಿಯೂ ಯಾರಿಗೂ ಸಾಧ್ಯವಿಲ್ಲ

**ತತ್ವಪ್ರಕಾಶಿಕಾ –**

**एतान्यपि लक्षणाणि अन्यव्यावृत्तानि नेत्याह – पर इति ।। हे विष्णो स्वमूर्त्यैवापरिच्छिन्न त्वं मितेः परोऽस्यतोऽपरिमितत्वात् ते जगत्सृष्ट्यादिमहिमानं केऽपि न प्राप्नुवन्तीत्यर्थः । वर्तमाननिषेधात् स्यादतीतादावतिव्याप्तिः, इत्यत आह**

**– नेति ।। हे विष्णो देव ते महिम्नः परमन्तं सीमानं जायमानो न प्राप्तो ति जातो नाप जनिष्यमाणो नाप्स्यतीत्यर्थः । जगत्काणत्वं च ब्रह्मणो न विकारित्वेन किन्तु पितृवदेवेति श्रुत्या दर्शयति – य इति ।। नः सर्वेषां । न दत्तपुत्रपितृवत् पिता किन्तु जनिता जनकः । सर्वाणि भुवनानि तद् गतधामानि च वेदेत्यर्थः । अतोऽतिव्याप्त्यादिशून्यविष्णुलक्षणवत्त्वात् विष्णुरेव श्रुत्युक्तं ब्रह्म न जीवोऽतो युक्तैव ब्रह्मजिज्ञासेति स्थितम् ।।**

**।। इति श्रीमज्जयतीर्थभिक्षुविरचितायां तत्वप्रकाशिकायां जन्माधिकरणम् ।।२।।**

ಮೇಲೆ ಹೇಳಿದ ಲಕ್ಷಣಗಳು ಬೇರೆ ಯಾರಲ್ಲಿಯೂ ಪ್ರಾಪ್ತವಾಗುವುದಿಲ್ಲವೆಂದು 'परो मात्रया' ಎಂಬ ಶ್ರುತಿಯಿಂದ ಹೇಳುತ್ತಿದ್ದಾರೆ. ಎಲೈ ವಿಷ್ಣುವೇ! ನೀನು ಕೇವಲ ನಿನ್ನ ಮೂರ್ತಿಯಿಂದಲೇ ನೀನು ಅಪರಿಚ್ಛಿನ್ನಾಗಿದ್ದಿ. ಮತ್ತು ಎಲ್ಲ ಪರಿಮಿತಿಯನ್ನು ಮೀರಿದ್ದಿ. ಹೀಗೆ ನೀನುಅಪರಿಮಿತನಾಗಿದ್ದರಿಂದಲೇ ನಿನ್ನ ಜಗತ್ಕರ್ತೃತ್ವಾದಿಮಹಿಮೆಯನ್ನು ಯಾರೂ ಹೊಂದಲು ಅಥವಾ ತಿಳಿಯಲು ಸಾಧ್ಯವಿಲ್ಲ. ಈ ಶ್ರುತಿಯಲ್ಲಿ 'आन्वश्नवंति' ಎಂದು ಕೇವಲ ವರ್ತಮಾನಕಾಲವನ್ನು ಹೇಳುತ್ತಿರುವುದರಿಂದ ಭೂತಭವಿಷ್ಯತ್‌ಕಾಲಗಳಲ್ಲಿ ನಿನಗಿಂತ ಸರ್ವೋತ್ತಮರು ಮತ್ತೊಬ್ಬರು ಇರಬಹುದಲ್ಲವೇ? ಎಂಬ ಆಕ್ಷೇಪವನ್ನು ಪರಿಹರಿಸಲು 'न ते विष्णो' ಎಂಬ ಮತ್ತೊಂದು ಶ್ರುತಿಯನ್ನು ಉದಾಹರಿಸಿದ್ದಾರೆ. ''ಎಲೈ ವಿಷ್ಣುದೇವನೇ ! ನಿನ್ನ ಮಹಿಮೆಯ ಕೊನೆಯನ್ನು ಹೊಂದಿದವರು ವರ್ತಮಾನಕಾಲದಲ್ಲಿ ಯಾರೂ ಇಲ್ಲ; ಹಿಂದೆ ಯಾರೂ ಹೊಂದಿಲ್ಲ; ಮುಂದೆಯೂ ಸಹ ಹೊಂದುವವರು ಯಾರೂ ಇಲ್ಲ'' ಎಂದು ಈ ಶ್ರುತ್ಯರ್ಥ.

ಜಗತ್ಕಾರಣತ್ವವು ಬ್ರಹ್ಮನಿಗೆ ವಿಕಾರರೂಪದಿಂದಲೇ (ಉಪಾದಾನರೂಪದಿಂದ) ಹೇಳಬಾರದು. ಹೊರತಾಗಿ ಮಗನಿಗೆ ತಂದೆಯು ಹೇಗೆ ಕಾರಣನೋ ಅದರಂತೆ ನಿಮಿತ್ತಕಾರಣನೆಂದು ''योः नः पिता'' ಎಂಬ ಶ್ರುತಿಯಿಂದ ತೋರಿಸುತ್ತಿದ್ದಾರೆ. 'नः' = ಸಕಲಪ್ರಪಂಚಕ್ಕೆ. ದತ್ತ ಪುತ್ರನಿಗೆ ತಂದೆಯಿರುವಂತೆ ವಿಷ್ಣುವು ತಂದೆಯಾಗಿಲ್ಲ. ಹೊರತು

ಜನಕನಂತೆ ಉತ್ಪಾದಕನಾಗಿದ್ದಾನೆಂದು ತಿಳಿಯಬೇಕು. ಅವನು ಸಕಲ ಲೋಕಗಳಲ್ಲಿರುವ ಎಲ್ಲ ಸ್ಥಾನಗಳನ್ನು ತಿಳಿದಿದ್ದಾನೆಂದರ್ಥ. ಆದ್ದರಿಂದ ಅತಿವ್ಯಾಪ್ತಾದಿ ದೋಷಶೂನ್ಯವಾದ ಸೃಷ್ಟ್ಯಾದ್ಯಷ್ಟಕರ್ತೃತ್ವವು ವಿಷ್ಣುವಿನ ಲಕ್ಷಣವೇ ಆಗುತ್ತದೆ. ಶ್ರುತಿಪ್ರತಿಪಾದ್ಯನಾದ ಬ್ರಹ್ಮನೂ ಸಹ ವಿಷ್ಣುವೇ ಆಗಿದ್ದಾನೆ. ಜೀವರು ಎಂದೂ ಬ್ರಹ್ಮರಾಗುವುದಿಲ್ಲ. ಆದ್ದರಿಂದ ಬ್ರಹ್ಮಜಿಜ್ಞಾಸೆಯು ಕರ್ತವ್ಯವೇ ಆಗಿದೆಯೆಂದು ನಿರ್ಣಯವಾಯಿತು.

॥ ಇಲ್ಲಿಗೆ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಜನ್ಮಾಧಿಕರಣವು ಮುಗಿಯಿತು ॥

## 'परोः मात्रयाः' श्रुत्यर्थः

**भावदीपः – एतान्यपीति ।। 'सृष्टिकर्तृत्वादीन्यष्टावपि लक्षणानि' इत्यर्थः । 'विष्णो देवत्वम्' इत्युत्तरार्धे श्रवणादाह – हे विष्णो इति ।। 'तन्वा वृधान' इत्यस्यार्थः 'स्वमूर्त्या'दि । 'मात्रया' इत्यस्य 'मितेः परिमितेः' इत्यर्थः ।**

ಟೀಕೆಯಲ್ಲಿ ''ಏತಾನ್ಯಪಿ'' ಎಂಬ ಪದದಿಂದ 'ಸೃಷ್ಟಿಕರ್ತೃತ್ವವೇ ಮೊದಲಾದ ಎಂಟು ಲಕ್ಷಣಗಳನ್ನೂ' ಎಂಬ ಅರ್ಥವನ್ನು ಗ್ರಹಿಸಬೇಕು. ''ಪರೋ ಮಾತ್ರಯಾ'' ಎಂಬ ಮಂತ್ರದ ಉತ್ತರಾರ್ಧದಲ್ಲಿ 'ವಿಷ್ಣೋ ದೇವ ತ್ವಂ' ಎಂಬುದಾಗಿ ವಿಷ್ಣುಶಬ್ದದ ಶ್ರವಣವಿರುವುದರಿಂದ ''ಹೇ ವಿಷ್ಣೋ'' ಇತ್ಯಾದಿಯಾಗಿ ಅರ್ಥವನ್ನು ಬಿಡಿಸಿದ್ದಾರೆ. 'ಸ್ವಮೂರ್ತ್ಯಾ' ಇತ್ಯಾದಿಶಬ್ದದಿಂದ 'ತನ್ವಾ ವೃಧಾನ' ಎಂಬುದರ ಅರ್ಥವನ್ನು ಬಿಡಿಸಿದ್ದಾರೆ. 'ಮಾತ್ರಯಾ' ಎಂಬ ಪದಕ್ಕೆ 'ಮಿತಿ ಅಥವಾ ಪರಿಮಿತಿ' ಎಂಬುದಾಗಿ ಅರ್ಥ.

## 'योः नः पिता' श्रुत्यर्थः

**भावदीपः – 'पूर्वोक्तं हेतुगर्भम्' इति भावेनाह – अत इति ।। 'आप' इत्यस्य विपरिणामेनार्थमाह – प्राप्नोति इति ।। एतच्चोपलक्षणं मत्वाऽऽह – जनिष्यमाण इति ।। सर्वे च वयं च वयं । 'त्यदादीनि सर्वैर्नित्यम्' इति**

**ಏಕಶೇಷಂ ಮತ್ವಾऽऽಹ – ನ ಇತಿ ।। ನोऽस್ಮಾಕಮ್ ಅಸ್ಮದಾದಿಸರ್ವೇಷಾಮ್ ಇತ್ಯರ್ಥಃ । ಪುನರುಕ್ತೇರಾಹ – ನ ದತ್ತೇತಿ ।। ಜನಿತಾ = ಜನಯಿತಾ । 'ಜನಿತಾ ಮನ್ತ್ರೇ' ಇತಿ ಸೂತ್ರಾತ್ ಜನಕ ಇತ್ಯರ್ಥಃ । ವಿಧಾತಾ = ಧಾರಣಪೋಷಣಕರ್ತಾ ।**

ಮಂತ್ರದ ಪೂರ್ವಪಾದದಲ್ಲಿ ಹೇಳಿದ ಅಂಶವು ಹೇತುಗರ್ಭ ಎಂಬ ವಿಷಯವನ್ನು ''ಅತಃ'' ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. ಮಂತ್ರದಲ್ಲಿರುವ 'ಆಪ' ಎಂಬ ಶಬ್ದವನ್ನು 'ಜಾಯಮಾನಃ' ಎಂಬ ಶಬ್ದಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಂಡು 'ಪ್ರಾಪ್ನೋತಿ' ಎಂಬ ಅರ್ಥವನ್ನು ಹೇಳಿದ್ದಾರೆ. ಮಂತ್ರದಲ್ಲಿ 'ಜಾಯಮಾನಃ ಮತ್ತು ಜಾತಃ' ಎಂಬ ಅಂಶವನ್ನು ಭವಿಷ್ಯತ್‌ಕಾಲಕ್ಕೆ ಉಪಲಕ್ಷಣಯಾ ಹೊಂದಿಸಿಕೊಂಡು 'ಜನಿಷ್ಯಮಾಣಃ' ಎಂದು ಅರ್ಥವನ್ನು ಬಿಡಿಸಿದ್ದಾರೆ.

'ಯೋ ನಃ ಪಿತಾ' ಎಂಬ ಮಂತ್ರದಲ್ಲಿ 'ನಃ' ಎಂಬ ಶಬ್ದದಿಂದ 'ನಮ್ಮನ್ನೂ ಸೇರಿಸಿಕೊಂಡು ಎಲ್ಲರಿಗೂ ವಿಷ್ಣುವು ಜನಕನಾಗಿದ್ದಾನೆ' ಎಂಬರ್ಥವನ್ನು ಗ್ರಹಿಸಬೇಕು. ಇಲ್ಲಿ ನಃ ಎಂಬ ಪದವು 'ತ್ಯದಾದೀನಿ ಸರ್ವೈರ್ನಿತ್ಯಮ್' ಎಂಬ ವ್ಯಾಕರಣದ ನಿಯಮದಂತೆ ಏಕಶೇಷಸಮಾಸರೂಪವಾಗಿದೆ. ಆದ್ದರಿಂದ 'ನಃ' ಎಂಬ ಪದಕ್ಕೆ ''ಸರ್ವೇ ಚ ವಯಂ ಚ ವಯಂ ತೇಷಾಂ ನಃ' ಎಂಬುದಾಗಿ ವಿಗ್ರಹವನ್ನು ಇಟ್ಟುಕೊಳ್ಳಬೇಕು. 'ಯತೋ ವಾ ಇಮಾನಿ' ಇತ್ಯಾದಿವಾಕ್ಯದಿಂದ ಹೇಳಿದ ಸೃಷ್ಟಿಕರ್ತೃತ್ವಾದಿಗಳನ್ನೇ 'ಯೋ ನಃ ಪಿತಾ' ಎಂಬ ಮಂತ್ರದಿಂದ ಹೇಳುತ್ತಿರುವುದರಿಂದ ಪುನರುಕ್ತಿ ಬರುವುದಲ್ಲವೇ? ಎಂಬ ಪ್ರಶ್ನೆಗೆ ಉತ್ತರವಾಗಿ 'ನ ದತ್ತ' ಇತ್ಯಾದಿ ವಾಕ್ಯವನ್ನು ಹೇಳಿದ್ದಾರೆ. 'ಜನಿತಾ' ಎಂಬ ಶಬ್ದಕ್ಕೆ ಜನಯಿತಾ ಎಂಬುದಾಗಿ ಅರ್ಥ. ಅಂದರೆ 'ಜನಿತಾ ಮಂತ್ರೇ' ಎಂಬ ಸೂತ್ರದಂತೆ ಜನಕ ಎಂಬರ್ಥವನ್ನು ಇಟ್ಟುಕೊಳ್ಳಬೇಕು. 'ವಿಧಾತಾ' ಎಂಬ 'ಶಬ್ದಕ್ಕೆ ಧಾರಣೆಯನ್ನು, ಪೋಷಣೆಯನ್ನು ಮಾಡುವವನು' ಎಂದು ಅರ್ಥ.

## ಅಧಿಕರಣದ ಉಪಸಂಹಾರ[೧]

**ಭಾವದೀಪಃ – ನ ಚ 'ಜೀವ ಏವಾಯಂ ಬ್ರಹ್ಮಶಬ್ದಃ' 'ಯತೋ ವಾ' ಇತ್ಯಾದಿನಾ ಜನ್ಮಾದಿಕಾರಣತ್ವಸ್ಯೈವ ಬ್ರಹ್ಮಲಕ್ಷಣತ್ವೋಕ್ತೇಃ' – ಇತಿ ನ್ಯಾಯವಿವರಣಾರೂಢಂ ದರ್ಶಯಿತುಂ**

(೧) ತಸ್ಮಾತ್ ಸೃಷ್ಟ್ಯಾದಿಕರ್ತಾ ಯಃ ತದ್ಬ್ರಹ್ಮ ಸ ಹರಿಃ ಸ್ಮೃತಃ ।
ನ ಜೀವಾದಿರತೋ ವಿಷ್ಣುರ್ವಿಜಿಜ್ಞಾಸ್ಯ ಇತಿ ಸ್ಥಿತಮ್ ।। (ಭಾವಬೋಧಃ)

**तदर्थं व्युत्क्रमेणानुवदन्नधिकरणार्थं फलोक्त्योपसंहरति – अत इति ।। उक्तश्रुतिस्मृतिबलात् अतिव्याप्त्यादिशून्येत्यवधारणार्थोक्तिः । असम्भव आदिपदार्थः । स च 'यतो वा' इत्यादिवाक्योक्तितात्पर्यलब्धः । लक्ष्यैक्यादव्याप्तिशङ्का नास्त्येव । न च जीव एवेत्यवधारणं 'विष्णुरेव' इत्यध्याहृतविष्णुपदेनान्वेतीति भावेनोक्तम् – विष्णुरेव श्रुत्युक्तं ब्रह्म । न जीव इति ।। 'न जीवादि' इत्यर्थः । अतः ब्रह्मणो विष्णुत्वान्निश्चितजीवत्वाभावेन सन्दिग्धत्वसम्भवादित्यर्थः ।।**

ನ್ಯಾಯವಿವರಣೆಯಲ್ಲಿ ಹೇಳಿದ 'ನ ಚ ಜೀವ ಏವಾಯಂ ಬ್ರಹ್ಮಶಬ್ದಃ ಯತೋ ವಾ' ಇತ್ಯಾದಿ ವಾಕ್ಯದಿಂದ ಜನ್ಮಾದಿಕಾರಣತ್ವವನ್ನೇ ಬ್ರಹ್ಮನ ಲಕ್ಷಣವೆಂದು ಹೇಳಿದ್ದಾರೆ ಎಂಬ ಅಂಶದೊಡನೆ ಈ ಸೂತ್ರಾರ್ಥವನ್ನು ಹೊಂದಿಸುತ್ತಾ ಅಲ್ಲಿ ಹೇಳಿದ ಕ್ರಮವನ್ನು ಬಿಟ್ಟು ಹಿಂದು ಮುಂದಾಗಿ ನ್ಯಾಯವಿವರಣದ ಅರ್ಥವನ್ನು ಅನುವಾದ ಮಾಡುತ್ತಾ 'ಅತ' ಇತ್ಯಾದಿ ವಾಕ್ಯದಿಂದ ಅಧಿಕರಣದಿಂದ ಸೂಚಿತವಾಗುವ ನಿರ್ಣಯರೂಪವಾದ ಅರ್ಥವನ್ನು ಉಪಸಂಹಾರ ಮಾಡುತ್ತಿದ್ದಾರೆ. ''ಅತಿವ್ಯಾಪ್ತ್ಯಾದಿಶೂನ್ಯ'' ಎಂಬ ವಾಕ್ಯದಲ್ಲಿ, ಏವಕಾರವನ್ನು ಬಳಸಿದ್ದರಿಂದ ಈ ಮೊದಲು ಹೇಳಿದ ಶ್ರುತಿ ಮತ್ತು ಸ್ಮೃತಿಗಳಿಂದ ಅತಿವ್ಯಾಪ್ತ್ಯಾದಿ ದೋಷಗಳು ಬರುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಇಲ್ಲಿರುವ ಆದಿಪದದಿಂದ 'ಅಸಂಭವ'ವನ್ನು ಗ್ರಹಿಸಬೇಕು. ಈ ''ಅಸಂಭವರೂಪದೋಷ ಇಲ್ಲ'' ಎಂಬುದನ್ನು 'ಯತೋ ವಾ' ಇತ್ಯಾದಿ ವಾಕ್ಯದಿಂದ ಸಿಗುವ ತಾತ್ಪರ್ಯಾರ್ಥದಿಂದ ಸ್ಪಷ್ಟಪಡಿಸಿಕೊಳ್ಳಬೇಕು. ಎಲ್ಲ ಕಡೆಯಲ್ಲೂ ಲಕ್ಷ್ಯವಾದ ಪದಾರ್ಥವು ಒಂದೇ ಆಗಿರುವುದರಿಂದ ಅತಿವ್ಯಾಪ್ತಿಯ ಶಂಕೆಯೇ ಬರಲಾರದು. 'ನ ಚ ಜೀವ ಏವ' ಎಂಬ ನ್ಯಾಯವಿವರಣದ ವಾಕ್ಯದಲ್ಲಿ 'ಏವ' ಎಂಬ ಅವಧಾರಣಾರ್ಥವು ಅಧ್ಯಾಹೃತವಾದ ವಿಷ್ಣುಪದದಿಂದ ಅನ್ವಯವನ್ನು ಪಡೆಯುತ್ತದೆ. ಈ ಅಭಿಪ್ರಾಯದಿಂದಲೇ 'ವಿಷ್ಣುರೇವ' ಎಂಬುದಾಗಿ ಅರ್ಥವನ್ನು ವಿವರಿಸಿದ್ದಾರೆ. 'ನ ಜೀವಃ' ಎಂಬಲ್ಲಿ ಜೀವಕಮಲಾಸನಾದಿ ಎಲ್ಲರನ್ನೂ ಗ್ರಹಿಸಬೇಕು. ''ಹೀಗೆ ಬ್ರಹ್ಮಶಬ್ದಕ್ಕೆ ವಿಷ್ಣುವೆಂಬ ಅರ್ಥವೇ ಹೊರತು ಪೂರ್ವಪಕ್ಷಿಗಳು ಹೇಳಿದಂತೆ ಜೀವ ಎಂಬ ಅರ್ಥವು ಇರುವುದಿಲ್ಲ. ಆದ್ದರಿಂದ ವಿಷ್ಣುವಿನ (ಬ್ರಹ್ಮನ) ಬಗ್ಗೆ ಸಂದೇಹವು ಅಧಿಕಾರಿಗಳಿಗೆ ಇದ್ದೇ

ಇರುವುದರಿಂದ ಬ್ರಹ್ಮಜಿಜ್ಞಾಸೆಯು ಯುಕ್ತವಾಗಿದೆ'' ಎಂಬ ಅರ್ಥವನ್ನು ಇಲ್ಲಿ ಇಟ್ಟುಕೊಳ್ಳಬೇಕು.

ವಿಶೇಷ ವಿಚಾರ - 'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿರುವ ಬ್ರಹ್ಮಶಬ್ದದಿಂದ ಜೀವನು ಪ್ರತಿಪಾದ್ಯನೆಂದು ಹೇಳಬಾರದು. ಏಕೆಂದರೆ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' (ಯಾವ ವಿಷ್ಣುವಿನಿಂದ ಬ್ರಹ್ಮರುದ್ರ ಮೊದಲಾದ ಸಮಸ್ತ ಜೀವರು ಹುಟ್ಟುತ್ತಾರೋ) ಎಂಬೀ ಶ್ರುತಿಗಳಿಂದ ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನ ಲಕ್ಷಣವೆಂದು ಹೇಳಲಾಗಿದೆ. ಈ ಲಕ್ಷಣವು ಜೀವಾದಿಗಳಲ್ಲಿ ಸರ್ವಥಾ ಬರುವುದಿಲ್ಲ.

## ಟೀಕೆಯ ಗಾಂಭೀರ್ಯವರ್ಣನೆ

ಟೀಕಾಗಾಮ್ಭೀರ್ಯಮಾಹಾತ್ಮ್ಯಂ ಮರ್ಶಂ ಮರ್ಶಂ ಪುರೋ ಮನಃ ।
ನೈತಿ ತದ್ವಿಸ್ತರಭಯಾತ್ ಕರೋತ್ಯಗ್ರೇಸರಂ ಮತಿಃ ।।

ಟೀಕಾಗಾಂಭೀರ್ಯಮಾಹಾತ್ಮ್ಯಂ ಮರ್ಶಂ ಮರ್ಶಂ ಪುರೋ ಮನಃ ।
ನೈತಿ ತದ್ವಿಸ್ತರಭಯಾತ್ ಕರೋತ್ಯಗ್ರೇಸರಂ ಮತಿಃ ।।

ಟೀಕಾವಾಕ್ಯದಲ್ಲಿರುವ ಗಾಂಭೀರ್ಯದ ಗರಿಮೆಯನ್ನು ಮತ್ತೆ ಮತ್ತೆ ವಿಮರ್ಶೆ ಮಾಡುತ್ತಾ ಮನಸ್ಸು ಅಲ್ಲೇ ನಿಂತು ಬಿಡುತ್ತಿದೆ. ಮುಂದೆ ಹೋಗುತ್ತಿಲ್ಲ. ಆದರೂ ಗ್ರಂಥವು ವಿಸ್ತಾರವಾಗುತ್ತದೆ ಎಂಬ ಭಯದಿಂದ ನಾವು ಮನಸ್ಸನ್ನು ಮುಂದೆ ಕೊಂಡೊಯ್ಯುತ್ತಿದ್ದೇವೆ.

।। ಇಲ್ಲಿಗೆ ತತ್ವಪ್ರಕಾಶಿಕಾ ಭಾವದೀಪದಲ್ಲಿ ಜನ್ಮಾದಿಕರಣದ ಕನ್ನಡಾನುವಾದವು ಮುಗಿಯಿತು ।।

ಶ್ರೀವೇದವ್ಯಾಸಾಯ ನಮಃ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ

ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ

ಶ್ರೀಗುರುಭ್ಯೋ ನಮಃ

# ಬ್ರಹ್ಮಸೂತ್ರ

## ಶಾಸ್ತ್ರಯೋನಿತ್ವಾಧಿಕರಣ

**ಬ್ರಹ್ಮಸೂತ್ರಮ್ – ।। ಶಾಸ್ತ್ರಯೋನಿತ್ವಾತ್ ।। ೩ ।।**

ಅನುವಾದ - ಜಗತ್ಕಾರಣನನ್ನು ತಿಳಿಸುವ ವಿಷಯದಲ್ಲಿ ಋಗಾದಿಶಾಸ್ತ್ರಗಳೇ ಪರಮಪ್ರಮಾಣವಾಗಿವೆ. ಹೊರತು ಅನುಮಾನಾದಿಗಳಲ್ಲ. ಆದ್ದರಿಂದ ವಿಷ್ಣುವೇ ಜಗತ್ಕಾರಣನು.

ಅನುಮಾನದಿಂದ ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಕಲ್ಪಿಸಬಾರದು. ಏಕೆಂದರೆ ಶಾಸ್ತ್ರಯೋನಿತ್ವಾತ್ = ಜಗತ್ಕಾರಣನ ವಿಷಯದಲ್ಲಿ ಕೇವಲ ಶಾಸ್ತ್ರವೇ ಪ್ರಮಾಣವಾದುದರಿಂದ, 'ಶಾಸ್ತ್ರಮ್ ಯೋನಿಃ ಯಸ್ಯ ತತ್ ಶಾಸ್ತ್ರಯೋನಿಃ, ಶಾಸ್ತ್ರಯೋನೇಃ ಭಾವಃ ಶಾಸ್ತ್ರಯೋನಿತ್ವಮ್; ತಸ್ಮಾತ್ = ಶಾಸ್ತ್ರಯೋನಿತ್ವಾತ್' ಎಂದು ವಿಗ್ರಹ. (ಶಾಸ್ತ್ರಮ್ = ಋಗಾದಿಸಚ್ಛಾಸ್ತ್ರಗಳು, ಯೋನಿಃ = ಜಗತ್ಕಾರಣನನ್ನು ತಿಳಿಸುವುದಕ್ಕೆ ಕಾರಣ)

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಶಾಸ್ತ್ರಯೋನಿತ್ವಾಧಿಕರಣವು ಸಮಾಪ್ತವಾಯಿತು ।।

* * * * * *

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

# ಬ್ರಹ್ಮಸೂತ್ರಭಾಷ್ಯ

## ಜಗತ್ಕಾರಣನ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣ

**ಬ್ರಹ್ಮಸೂತ್ರಭಾಷ್ಯಮ್ – ಅನುಮಾನತೋऽನ್ಯೇ ನ ಕಲ್ಪನೀಯಾಃ ।**

**।। ಶಾಸ್ತ್ರಯೋನಿತ್ವಾತ್ ।। ೩ ।।**

ಅನುಮಾನಪ್ರಮಾಣದಿಂದ ರುದ್ರಾದಿಗಳು ಜಗತ್ಕಾರಣರೆಂದು ಊಹಿಸಬಾರದು. ಏಕೆಂದರೆ ಜಗತ್ಕಾರಣನನ್ನು ನಿರ್ಧರಿಸುವ ವಿಷಯದಲ್ಲಿ ಶಾಸ್ತ್ರವೇ ಮುಖ್ಯಪ್ರಮಾಣವಾಗಿದೆ.

ಪ್ರತಿಪದಾರ್ಥ - ಹಿಂದಿನ ಅಧಿಕರಣದಲ್ಲಿ ಜಗಜ್ಜನ್ಮಾದಿಕಾರಣತ್ವವನ್ನು ಬ್ರಹ್ಮನ ಲಕ್ಷಣವೆಂದು ಸಮರ್ಥಿಸಿದರು. ಈ ಲಕ್ಷಣಕ್ಕೆ ರುದ್ರಾದಿ-ದೇವತೆಗಳಲ್ಲಿ ಅತಿವ್ಯಾಪ್ತಿಯನ್ನು ಪರಿಹರಿಸಲು ಜಗತ್ಕಾರಣದ ವಿಷಯದಲ್ಲಿ ಪ್ರಮಾಣವನ್ನು ಹೇಳುವುದಕ್ಕಾಗಿ ಈ ಅಧಿಕರಣ ಹೊರಟಿದೆ.

ಅನುಮಾನತಃ = ಆಗಮಸಹಾಯವಿಲ್ಲದ ಅನುಮಾನಗಳಿಂದ, ಅನ್ಯೇ = ರುದ್ರಾದಿದೇವತೆಗಳು, ನ ಕಲ್ಪನೀಯಾಃ = ಜಗತ್ಕಾರಣರೆಂದು ಊಹಿಸಬಾರದು. ಏಕೆಂದರೆ, 'ಶಾಸ್ತ್ರಯೋನಿತ್ವಾತ್' = ಜಗತ್ಕಾರಣತ್ವ-ವಿಷಯದಲ್ಲಿ ಋಗಾದಿಶಾಸ್ತ್ರಗಳೇ ಮುಖ್ಯಪ್ರಮಾಣಗಳಾಗಿರುವುದರಿಂದ.

**भाष्यम् –'नावेदविन्मनुते तं बृहन्तम् । सर्वानुभुमात्मान५ साम्पराये'**
**(तै. ब्रा. ३-१२-९)**

**'औपनिषदः पुरुषः' इत्यादिश्रुतिभ्यश्च ।**

'ಯಾರು ವೇದಾರ್ಥವನ್ನು ತಿಳಿದಿರುವುದಿಲ್ಲವೋ ಅವರು ಮೋಕ್ಷಕ್ಕೋಸ್ಕರ ಪೂರ್ಣನಾದ, ಸರ್ವಜ್ಞನಾದ, ಅಂತಃಪ್ರೇರಕನಾದ ಆ ಪರಮಾತ್ಮನನ್ನು ತಿಳಿಯಲಾರರು' ಹೀಗೆ ತೈತ್ತಿರೀಯ-ಬ್ರಾಹ್ಮಣಶ್ರುತಿಯು ಹೇಳಿದೆ. ಮತ್ತು 'ಪುರುಷಶಬ್ದವಾಚ್ಯನಾದ ಪರಮಾತ್ಮನು ಉಪನಿಷದೈಕವೇದ್ಯ-ನಾಗಿದ್ದಾನೆ' ಎಂಬವೇ ಮೊದಲಾದ ಶ್ರುತಿಗಳಿರುವುದರಿಂದ ವಿಷ್ಣುವೇ ಜಗತ್ಕಾರಣನಾಗುತ್ತಾನೆ.

ಪ್ರತಿಪದಾರ್ಥ -- ಜಗತ್ಕಾರಣತ್ವವಿಷಯದಲ್ಲಿ ಕೇವಲ ಶಾಸ್ತ್ರಗಳೇ ಪ್ರಮಾಣಗಳಾಗಿವೆ ಎಂದು ಹೇಗೆ ನಿರ್ಧರಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಅವೇದವಿತ್ = ವೇದಾರ್ಥವನ್ನು ತಿಳಿಯದವನು, ಸಾಂಪರಾಯೇ = ಮೋಕ್ಷಕ್ಕೋಸ್ಕರ, ಬೃಹಂತಂ = ಪೂರ್ಣನಾದ, ಸರ್ವಾನುಭೂಮ್ = ಸರ್ವಜ್ಞನನ್ನು, ಆತ್ಮಾನಂ = ಅಂತಃಪ್ರೇರಕನಾದ, ತಂ = ಆ ಪರಮಾತ್ಮನನ್ನು, ನ ಮನುತೇ = ತಿಳಿಯಲಾರನು. ಮತ್ತು

ಪುರುಷಃ = ಪುರುಷನೆನಿಸಿಕೊಂಡ ಪರಮಾತ್ಮನು, ಔಪನಿಷದಃ = ಕೇವಲ ಉಪನಿಷತ್ತುಗಳಿಂದ ಪ್ರತಿಪಾದ್ಯನು, ಇತ್ಯಾದಿ = ಇವೇ ಮೊದಲಾದ, ಶ್ರುತಿಭ್ಯಶ್ಚ = ಶ್ರುತಿಗಳಿರುವುದರಿಂದಲೂ.

## ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ
## ತತ್ತ್ವಪ್ರಕಾಶಿಕಾ

### ಸಂದೇಹ ಹಾಗೂ ಪೂರ್ವಪಕ್ಷ

**तत्वप्रकाशिका –**

**अत्र जन्मादिकाणत्वस्यान्यनिष्ठत्वनिरासादस्ति शास्त्रसङ्गतिः । जगज्जन्मादि-कर्तृत्वस्य जिज्ञास्ये ब्रह्मणि श्रवणाद् 'विष्णुरेव ब्रह्म' इत्युक्तम् । जन्मादिकर्तृत्वस्य च यदाऽन्यनिष्ठता निवार्यते तदैव तेन विष्णुत्वनिश्चयः स्यादिति । तज्जन्मादिकारणत्वं विषयः । किं विष्णोरेवान्यस्याप्यस्ति वेति (रन्यस्याप्यस्ति न वेति) संदेहः । पूर्वोक्तन्यायः प्रसिद्धिश्च संशयबीजम् । अन्येषामप्यस्तीति पूर्वः पक्षः । अनुमानेन रुद्रादेरपि कारणतासाधनसौलभ्यात् । न चोदाहृतश्रुतिविरोधः । तासां युक्तिविरुद्धार्थे प्रमाण्यायोगात् । तथा च जन्मादिकारणत्वस्य भगवदेकनिष्ठताभावान्न तस्यैव तेन जिज्ञास्यब्रह्मतानिश्चय इति ।**

ಈ ಅಧಿಕರಣದಲ್ಲಿ ಜಗಜ್ಜನ್ಮಾದಿಕಾರಣತ್ವಲಕ್ಷಣವು ವಿಷ್ಣುವಿಗಿಂತ ಭಿನ್ನನಾದ ಬೇರೆಯವರಲ್ಲಿಲ್ಲವೆಂದು ತೋರಿಸುತ್ತಿರುವುದರಿಂದ ಶಾಸ್ತ್ರಸಂಗತಿಯು ಇರುತ್ತದೆ. ಹಿಂದಿನ ಅಧಿಕರಣದಲ್ಲಿ ಜಗಜ್ಜನ್ಮಾದಿ ಕರ್ತೃತ್ವವು ಜಿಜ್ಞಾಸ್ಯನಾದ ಬ್ರಹ್ಮನಲ್ಲಿ ಕೇಳಿಸುತ್ತಿರುವುದರಿಂದ ಜಿಜ್ಞಾಸ್ಯನು ವಿಷ್ಣುವಾದ್ದರಿಂದ ವಿಷ್ಣುವನ್ನೇ ಬ್ರಹ್ಮನೆಂದು ನಿರ್ಣಯಿಸಿದರು. ಆದರೆ ಈ ಜಗಜ್ಜನ್ಮಾದಿಕರ್ತೃತ್ವವು ಬೇರೆಯವರಲ್ಲಿ ಇಲ್ಲವೆಂಬುದನ್ನು ಎಲ್ಲಿಯ ತನಕ ಸಮರ್ಥಿಸುವುದಿಲ್ಲವೋ ಅಲ್ಲಿಯ ತನಕ ವಿಷ್ಣುವೇ ಬ್ರಹ್ಮನೆಂದು ನಿಶ್ಚಯವಾಗುವುದಿಲ್ಲ. ಆದ್ದರಿಂದ ಜಗಜ್ಜನ್ಮಾದಿಕರ್ತೃತ್ವವೇ ವಿಷಯವಾಗಿದೆ. ಅದು ವಿಷ್ಣುವಿನಲ್ಲಷ್ಟೇ ಇದೆಯೋ ಅಥವಾ ಬೇರೆಯವರಲ್ಲಿಯೂ ಇದೆಯೋ ಎಂಬುದೇ ಸಂದೇಹ. ಹಿಂದೆ ಉದಾಹರಿಸಿದ ಶ್ರುತಿಸ್ಮೃತಿಲೋಕಪ್ರಸಿದ್ಧಿಗಳು ಸಂದೇಹಕ್ಕೆ ಕಾರಣವಾಗಿವೆ.

ಶಾಸ್ತ್ರಯೋನಿತ್ವಾಧಿಕರಣ (೧-೧-೩)

ಬೇರೆಯವರಲ್ಲಿಯೂ ಜಗಜ್ಜನ್ಮಾದಿಕರ್ತೃತ್ವಲಕ್ಷಣವಿದೆಯೆಂದು ಪೂರ್ವಪಕ್ಷ. ಏಕೆಂದರೆ ಅನುಮಾನದಿಂದ ರುದ್ರಾದಿಗಳಲ್ಲಿಯೂ ಜಗತ್ಕಾರಣತ್ವವನ್ನು ಸುಲಭವಾಗಿ ಸಮರ್ಥಿಸಬಹುದು. ಹಿಂದೆ ಉದಾಹರಿಸಿದ ಶ್ರುತಿಯಿಂದ ಅನುಮಾನಕ್ಕೆ ವಿರೋಧ ಬರುವುದಿಲ್ಲ. ಅನುಮಾನಕ್ಕೆ ವಿರುದ್ಧವಾದ ಅರ್ಥದಲ್ಲಿ ಶ್ರುತಿಗಳಿಗೆ ಪ್ರಾಮಾಣ್ಯವೇ ಇರುವುದಿಲ್ಲ. ಆದ್ದರಿಂದ 'ಜನ್ಮಾದಿಕಾರಣತ್ವ'ಧರ್ಮವು ಕೇವಲ ಭಗವಂತನಲ್ಲಿರುವುದೆಂಬುದನ್ನು ನಿಶ್ಚಯಿಸಲು ಸಾಧ್ಯವಿಲ್ಲದ ಕಾರಣ ಜಿಜ್ಞಾಸ್ಯಬ್ರಹ್ಮನು ವಿಷ್ಣುವೇ ಆಗಿದ್ದಾನೆಂಬುದನ್ನು ನಿರ್ಣಯಿಸಲಾಗದು.

## ಅನೇಕ ಪ್ರಮಾಣಗಳ ಆಧಾರದಿಂದ ಸಿದ್ಧಾಂತ

**तत्वप्रकाशिका – सिद्धान्तयति – अनुमानत इति ।। कारणत्वेनेति शेषः । तत्र हेत्वाकाङ्क्षायां सूत्रमुपन्यस्यति – शास्त्रयोनित्वादिति ।। भवेदनुमानतोऽन्येषां कारणत्वकल्पना, यदि कारणमानुमानिकं स्यात् । न चैतदस्ति । शास्त्रैकसमधिगम्यत्वात् कारणस्य । न हि धर्मादिनिश्चयोऽनुमानेनेति सूत्रार्थः । कारणस्य शास्त्रैकवेद्यत्वं कुत इत्यत आह – नेति ।। तं पूर्णं सर्वज्ञं सर्वकर्तारं सर्वस्वामिनं मोक्षायाऽवेदविन्न जानाति । 'पुरुषो जगत्कर्ता, उपनिषदेकसमधिगम्यः' इत्यर्थः ।**[1]

---

(१) **भावरत्नकोशः** - शास्त्रयोनित्वादिति एकं सूत्रम् । एकमधिकरणम् । तच्छरीरमेवं द्रष्टव्यम् । तत्र ब्रह्मलक्षणस्य जगज्जन्मादिकारणत्वस्य अन्यनिष्ठत्वनिरासात् अस्ति शास्त्रादिसङ्गतिः । जगज्जन्मादिकर्तृत्वस्य जिज्ञास्ये ब्रह्मणि श्रवणात् विष्णुरेव ब्रह्म इत्युक्तम् । जन्मादिकारणत्वस्य च यदा अन्यनिष्ठता निवार्यते तदैव तेन विष्णुत्वनिश्चयः स्यादिति श्रुत्यन्तराधिकरणसङ्गती च । अत्र पूर्वाधिकरणोक्तं जगज्जन्मादिकारणत्वं विषयः । तत् किं विष्णोरन्यस्य रुद्रादेरप्यस्ति उत विष्णोरेवेति सन्देहः ।

**पूर्वपक्षस्तु** - जन्मादिकारणत्वं रुद्रादेरपि धर्मो भवितुमर्हति । तस्यापि जगत्कारणत्वानुमानेन साधनसौलभ्यात् । न च अनुमानं न प्रमाणं कामचारित्वादिति युक्तम् । अस्यैवानुमानस्य प्रामण्याप्रामाण्याभ्यां व्याघातात् । न च अन्यत्र प्रमाणभावं भजदपि जगत्कारणत्वे न प्रमाणमिति वाच्यम् । नियामकाभावात् । न ह्युपमानमिव अनुमानं नियतविषयम् । येन तद्वदेव क्वचित् प्रमाणं क्वचिन्नेति स्यात् । अनुमानं तु 'विमतं सकर्तृकं कार्यत्वात् घटवत्'

ಈ ಪೂರ್ವಪಕ್ಷವನ್ನು ನಿರಾಕರಿಸಲು ಭಾಷ್ಯಕಾರರು ಸಿದ್ಧಾಂತ ಮಾಡುತ್ತಿದ್ದಾರೆ.

इति यावत् । यद्यपि अनेनानुमानेन जगतः कर्तृत्वमात्रं सिद्ध्यति । न तु शिवादिः कर्ता इति । कर्तृत्वमात्रं च विष्णोः कर्तृत्वाविरोधिलोकप्रसिद्ध्यादेरप्युभयत्र तुल्यत्वात् । तथापि अनुमानस्य 'नेन्द्रियाणि नानुमानम्' इत्यादि स्वप्रामाण्यनिषेधक श्रुत्युक्तविष्ण्वसंस्पर्शितया आगमोक्ते रुद्रादौ कर्तर्येव पर्यवसानादित्यतिव्याप्तिः । यद्वा कार्यत्वानुमानेन नित्यज्ञानेच्छाप्रयत्नवतो नित्यप्रयत्नमात्रवतो वा कर्तृः सिद्धौ सिद्धान्तिना च अपूर्णगुणस्य तस्य विष्णुत्वानङ्गीकारात् रुद्रादेरेव तत्कर्तृत्वसिद्धिः । अथवा शिवो जगत्कर्ता सर्वज्ञत्वात्, यो न जगत्कर्ता नासौ सर्वज्ञः यथा यज्ञदत्तः इति केवलीयतिरेकेण साक्षादेव शिवस्य जगत्कारणत्वं अनुमातव्यम् । सर्वज्ञत्वं च पाशुपतागमसिद्धमिति न हेत्वसिद्धिः । एवं ब्रह्मस्कन्दादौ जगत्कारणत्वमनुमातव्यम् । न च विष्णोरन्यस्य जगत्कारणत्वनिषेधकपूर्वाधिकरणोदाहृतश्रुतिविरोधः । तासां उक्तयुक्तिविरोधेन विष्णोः कारणत्व विधिपरत्वे अन्यनिषेधे तात्पर्याभावात् । तथा च जगज्जन्मादिकारणत्वस्य विष्ण्वैकनिष्ठत्वाभावात् न तस्यैव तेन रूपेण जिज्ञास्यब्रह्मतानिश्चय इति ।

**सिद्धान्तस्तु** - भवेदनुमानतो रुद्रादेः कारणत्वकल्पना । यदि कारणं अनुमानगोचरं स्यात् । नैतदस्ति । 'नावेदविन्मनुते दं बृहन्तं सर्वानुभुं आत्मानं साम्पराये', 'औपनिषदः पुरुषः' इत्यादिश्रुत्या तं पूर्णं सर्वज्ञं सर्वकर्तारं सर्वस्वामिनं मोक्षाय यो वेदवित् जानाति । पुरुषो जगत्कर्ता इत्यर्थपरतया जगत्कारणस्य धर्मादिवत् शास्त्रमात्रगम्यत्वा-वेदनात् । न चौपनिषदस्यापि कारणस्य अनुमानेन सिद्धिः किं न स्यात् । स्वातन्त्र्यादिहेतुना तस्य पूर्णत्वसिद्धेः सिद्धान्तिना अङ्गीकारादिति चेत् । सत्यम् । अस्त्येव श्रुत्यादिसहकारयुक्तस्य अनुमानस्यापि औपनिषदार्थनिश्चायकत्वम् । न तु स्वतन्त्रस्य प्रतिपक्षादिसम्भवात् । पूर्वपक्ष्युत्प्रेक्षितानि च अनुमानानि श्रुत्यादिसहायरहितानि प्रत्युत बहुश्रुत्यादिबाधितनि । न तैः जगत्कारणत्ववस्तुसिद्धिः । श्रुतिस्मृत्यादिसहकारिरहितस्यापि अनुमानस्य साधकत्वानुमाने 'शशो विषाणी पादचतुष्टयवत्वात् सम्मतवत्', । 'चित्रिणी पुत्रवती स्त्रीत्वात्' । 'षष्ठो रसः सोत्तरः रसत्वात्' इत्याद्यनुमानैः तदर्थसिद्धिप्रसङ्गः । अतः चक्षुरादे रसगन्धादाविव परोत्प्रेक्षितानुमानस्य जगत्कारणत्वबोधने असमर्थत्वात् न तेन तत्सिद्धिः । तथा च चन्द्रिका -

चक्षुरादि यथाशक्तं रसगन्धादिवस्तुषु ।
अनुमापि तथाशक्ता धर्मब्रह्मादिवस्तुषु ।।' इति ।

नन्वेवं अनुमानस्य अनिश्चायकत्वेत शास्त्रादेः कारणत्वसिद्धिश्चेत् तर्हि पाशुपतादिशास्त्रेण

''ಅನುಮಾನತೋ ಅನ್ಯೇ ನ ಕಲ್ಪನೀಯಾಃ'' ಎಂದು. ಈ ವಾಕ್ಯದಲ್ಲಿ ಕಾರಣತ್ವೇನ

---

ರುದ್ರಾದೇಃ ಕಾರಣತ್ವಸಿದ್ಧಿರಸ್ತು ಇತಿ ಚೇನ್ನ ।
'ಋಗ್ಯಜುಃಸಾಮಾಥರ್ವಾಶ್ಚ ಭಾರತಂ ಪಞ್ಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ।
ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ ।
ಅತೋಽನ್ಯೋ ಗ್ರನ್ಥವಿಸ್ತಾರೋ ನೈವ ಶಾಸ್ತ್ರಂ ಕುವರ್ತ್ಮ ತತ್ ।।''

ಇತಿ ಸ್ಕಾನ್ದವಚನೇನ ಋಗಾದೇರೇವ ಶಾಸ್ತ್ರತ್ವಮುಕ್ತ್ವಾ ಪಾಶುಪತಾದ್ಯಾಗಮಸ್ಯ ಅಶಾಸ್ತ್ರತ್ವಾವೇದನೇನ ತೇನ ರುದ್ರಾದೇಃ ಕಾರಣತ್ವಪ್ರತ್ಯಾಶಾಯೋಗಾತ್ ।

ಅಪಿ ಚ ಮೋಕ್ಷಧರ್ಮೇ -

'ಸಾಙ್ಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।
ಉತಾಹೋ ನೇತಿ ಚೋಚ್ಯತೇ ।।' ಇತಿ ಜನಮೇಜಯಕರ್ತೃಕಪ್ರಶ್ನೇ -

'ಸಾಙ್ಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ ।।'

ಇತಿ ವೈಶಮ್ಪಾಯನಾಚಾರ್ಯೇಣ ಸಾಙ್ಖ್ಯಾದೀನಾಂ ಭಿನ್ನಮತತ್ವಮುಕ್ತ್ವಾ -

'ಸಾಙ್ಖ್ಯಸ್ಯ ವಕ್ತಾ ಕಪಿಲಃ ಪರಮೋ ಋಷಿರುಚ್ಯತೇ ।
ಹಿರಣ್ಯಗರ್ಭೋ ಯೋಗಸ್ಯ ವಕ್ತಾ ಚೈವ ಚತುರ್ಮುಖಃ ।
ಉಮಾಪತಿಃ ಪಶುಪತಿಃ ಶ್ರೀಕಣ್ಠೋ ಬ್ರಹ್ಮಣಃಸುತಃ ।
ಉಕ್ತವಾನಿದಮವ್ಯಗ್ರಂ ಜ್ಞಾನಂ ಪಾಶುಪತಂ ಶಿವಃ ।।'

ಇತಿ ತತ್ತನ್ಮತಕರ್ತೄನಭಿಧಾಯ -

'ಪಞ್ಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।
ಜ್ಞಾನೇಷ್ವೇತೇತು ರಾಜೇನ್ದ್ರ ಸರ್ವೇಷ್ವೇತದ್ವಿಶಿಷ್ಯತೇ ।।'

ಇತಿ ಪಞ್ಚರಾತ್ರಸ್ಯ ಪ್ರಸ್ತುತಸಾಙ್ಖ್ಯಾದಿಮತಾಪೇಕ್ಷಯಾ ವೈಶಿಷ್ಟ್ಯಮುಪವರ್ಣ್ಯತೇ । ತಚ್ಚ ಪೂರ್ವಪ್ರಸ್ತುತ ವೇದಾರಣ್ಯಕೈಕ್ಯಾಭಿಪ್ರಾಯೇಣೇತಿ ವಕ್ತವ್ಯಮ್ । ಅನ್ಯಥಾ ಪ್ರಕೃತಾಸಾಙ್ಗತ್ಯಾಪತ್ತೇಃ । ತತೋ ವಿಜ್ಞಾಯತೇ ಸಾಙ್ಖ್ಯಯೋಗಪಾಶುಪತಾಶಸ್ತ್ರಾಣಿ ದುರಾಗಮಾಃ । ವೇದಾರಣ್ಯಕಪದವಿವಕ್ಷಿತವೇದಾಃ ಆರಣ್ಯಕಾನಿ ಪಞ್ಚರಾತ್ರಂ ಚ ವಿಶಿಷ್ಟಾಗಮಾ ಇತಿ । ಅತೋಽಪಿ ಪಾಶುಪತಾದಿಕಮಶಾಸ್ತ್ರಮೇವೇತಿ ನೇ ತೇನಾಪ್ಯಾಗಮೇನ ರುದ್ರಾದೇಃ ಕಾರಣತ್ವಸಿದ್ಧಿರಿತಿ ನ ಪೂರ್ವೋಕ್ತಬ್ರಹ್ಮಲಕ್ಷಣಸ್ಯಾತಿವ್ಯಾಪ್ತಿ ಇತಿ ।

'ಜಗಜ್ಜನ್ಮಾದಿಕಾರಣತ್ವಂ ಪರಸ್ಯ ಬ್ರಹ್ಮಣೋ ವಿಷ್ಣೋಃ ಲಕ್ಷಣಮಿತ್ಯಭಿಹಿತಮ್ । ತಸ್ಯ ಹರಹಿರಣ್ಯಗರ್ಭಾದಿಚೇತನೇಷು ಪ್ರಾಧಾನಾದ್ಯಚೇತನೇಷು ಚ ಪಾಶುಪತಾದ್ಯಾಗಮಾನುಮಾನಾವಷ್ಟಮ್ಭೇನಾತಿ-ವ್ಯಾಪ್ತಿಮಾಶಙ್ಕ್ಯಾತ್ರ ಪರಿಹರತಿ ಭಗವಾನ್ ಸೂತ್ರಕಾರಃ' ಇತ್ಯವತಾರಿತಂ ಶಾಸ್ತ್ರಯೋನಿತ್ವಾದಿತಿ ಸೂತ್ರಂ ಟೀಕಾಕಾರೈಃ ನ್ಯಾಯಸುಧಾಯಾಮ್ ।

ಎಂಬುದನ್ನು ಸೇರಿಸಿಕೊಳ್ಳಬೇಕು. 'ರುದ್ರಾದಿಗಳು ಜಗತ್ಕಾರಣರಾಗುವುದಿಲ್ಲ' ಎಂಬ ವಿಷಯದಲ್ಲಿ ಹೇತುವಿನ ಆಕಾಂಕ್ಷೆಯು ಬಂದರೆ ಅದನ್ನು ಹೇಳಲು ಸೂತ್ರವನ್ನು ''ಶಾಸ್ತ್ರಯೋನಿತ್ವಾತ್'' ಎಂಬುದಾಗಿ ಉಲ್ಲೇಖಿಸುತ್ತಿದ್ದಾರೆ.

ಜಗತ್ಕಾರಣತ್ವವು ಅನುಮಾನದಿಂದ ನಿರ್ಣಯಿಸಬಹುದೆಂದಾಗಿದ್ದಲ್ಲಿ ಮಾತ್ರ ರುದ್ರಾದಿಗಳು ಜಗತ್ಕಾರಣರಾಗಿದ್ದಾರೆಂದು ಕಲ್ಪಿಸಬಹುದಿತ್ತು; ಆದರೆ ಹಾಗಿಲ್ಲ. ಜಗತ್ಕಾರಣತ್ವವು ಕೇವಲ ಶಾಸ್ತ್ರದಿಂದ ತಿಳಿಯುವ ವಿಷಯವಾಗಿದೆ. ಧರ್ಮಾದಿಗಳನ್ನು ಅನುಮಾನದಿಂದ ನಿಶ್ಚಯಿಸಲಾಗದೆಂದು ಸೂತ್ರಾರ್ಥ.

ಜಗತ್ಕಾರಣತ್ವವು ಕೇವಲ ಶಾಸ್ತ್ರದಿಂದಲೇ ತಿಳಿಯಬೇಕೆಂದು ಹೇಳಲು ಏನು ಆಧಾರ? ಎಂಬ ಪ್ರಶ್ನೆಗೆ 'ನಾವೇದವಿನ್ಮನುತೇ' ಎಂಬ ಭಾಷ್ಯವು ಉತ್ತರಿಸುತ್ತಿದೆ. ವೇದವನ್ನು

(सूत्राक्षरार्थः)

तत्सूत्राक्षरार्थस्तु - शास्त्रं =
'ऋग्यजुः सामार्थवाश्च भारतं पञ्चरात्रकम् ।
मूलरामायणं चैव शास्त्रमित्यभिधीयते ।
यच्चानुकूलमेतस्य तच्च शास्त्रं प्रकीर्तितम् ।
अतोऽन्यो ग्रनथविस्तारो नैव शास्त्रं कुवर्त्म तत् ।।'

इति स्कान्दवचनेनोक्तम् ऋगादिग्रन्थजातं योनि = 'योनिः कारणमेव च' गीतातात्पर्योक्ताभिधानात् कारणम्, 'प्रमायाः' इति योग्यतया सम्बन्धे प्रमाणमस्येति शास्त्रयोनिः तस्य भावः शास्त्रयोनित्वम् । तस्मादिति युक्तिनिर्देशः । शास्त्रयोनिशब्देन च 'मुख्यस्य निर्विशेषेण शब्दः' इति न्यायेन सच्छास्त्रप्रमाणकवस्तुवाचिना सच्छास्त्रेतर-शैवाद्यागमानुमानसमधिगम्यं नेति साध्यं लभ्यते । पूर्वसूत्रे प्रकृतं जगज्जन्मादिकारणं ब्रह्म, तल्लक्षणत्वेन प्रकृतं जगज्जन्मादिकारणत्वं वेद पक्षतया संयोजनीयम् । तथा च 'जगत्कारणं वस्तु ब्रह्म, लक्षणं जगज्जन्मादिकरणत्वं वा नानुमानदुरागमगोचरः शास्त्रप्रमाणकत्वात् । यच्छास्त्रप्रमाणकं न तत्तदितरगोचरम्' इति सामान्यव्याप्त्यभ्युपगमे वा जिह्वाघ्राणादिप्रमाणकः चक्षुरगोचरः रसगन्धादिदृष्टान्तो वेदितव्यः । अस्य स्मृतिनयादगतार्थता चन्द्रिकातोऽवसेया ।

'स्तोत्रं राधानां पते गिर्वाहो वीर यस्य ते । विभूतिरस्तु सूनृता'
'एतेनाग्ने ब्रह्मणा वावृधस्व शक्तीं वा यत् ते चकृमा विदा वा ।
उत प्रणेष्यभि वस्यो अस्मात्सन्नः सृज सुमत्या वाजवत्या ।।'

।। इति शास्त्रयोनित्वाधिकरणटीकासेवा ।।

ತಿಳಿಯದವರು, ಮೋಕ್ಷಕ್ಕೋಸ್ಕರ, ಪೂರ್ಣನಾದ, ಸರ್ವಜ್ಞನಾದ, ಸರ್ವಕರ್ತೃವಾದ, ಸರ್ವಸ್ವಾಮಿಯಾದ ವಿಷ್ಣುವನ್ನು ತಿಳಿಯಲಾರರು. 'ಜಗತ್ಕರ್ತೃವಾದ ಪುರುಷನು ಕೇವಲ ಉಪನಿಷತ್ತುಗಳಿಂದಲೇ ತಿಳಿಯಲ್ಪಡುತ್ತಾನೆ' ಎಂದು ಈ ಶ್ರುತಿಗಳ ಅರ್ಥ.

## ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

## ಹಿಂದಿನ ಅಧಿಕರಣದಿಂದ ಸಂಗತಿ

**ಭಾವದೀಪಃ – ಶಾಸ್ತ್ರಯೋನಿತ್ವಾತ್ ।।**

**ಸಙ್ಗತಿರಿತಿ ।।** ಅನ್ತರ್ಭಾವರೂಪಾ । ಅನ್ಯನಿಷ್ಠತ್ವನಿರಾಸಮಾತ್ರೇಣ ಕಥಂ ಸಾ ಲಬ್ಧಾ? ತನ್ನಿರಾಸಸ್ಯ ವಾ ಕಿಂ ಫಲಮ್? ಇತ್ಯತಃ ತನ್ನಿರಾಸಫಲಂ ವ್ಯಞ್ಜಯಸ್ತಾಂ ವ್ಯನಕ್ತಿ – **ಜಗದಿತಿ ।। ತದೈವ ತೇನೇತಿ ।।** ಏತೇನ 'ಅಸ್ಯ ಜಿಜ್ಞಾಸ್ಯಬ್ರಹ್ಮಣೋ ವಿಷ್ಣುತ್ವನಿರ್ಣಾಯಕಲಕ್ಷಣಃ ಅತಿವ್ಯಾಪ್ತಿನಿರಾಸಪರತ್ವಾದ್ ಬ್ರಹ್ಮಶಾಸ್ತ್ರೇನ್ತರ್ಭಾವಃ ಪ್ರಾಗುಕ್ತಜಿಜ್ಞಾಸ್ಯಬ್ರಹ್ಮಣೋ ವಿಷ್ಣುತ್ವನಿಶ್ಚಯಃ ಫಲಮ್' ಇತಿ ಸೂಚಿತಮ್ । 'ಇತಿ'ಶಬ್ದೋ ಹೇತ್ವರ್ಥಃ ಸನ್, 'ಇತಿ ಶಾಸ್ತ್ರಸ್ಯ ಸಙ್ಗತಿಃ' ಇತ್ಯನ್ವೇತಿ ।

।। ಶಾಸ್ತ್ರಯೋನಿತ್ವಾತ್ ।।

ಇಲ್ಲಿ ಸಂಗತಿಃ ಎಂದರೆ ಅಂತರ್ಭಾವರೂಪವಾದ ಸಂಗತಿ. ಅನ್ಯನಿಷ್ಠತ್ವವನ್ನು ನಿರಾಸಮಾಡುವುದರಿಂದ ಈ ಸಂಗತಿಯು ಹೇಗೆ ಲಭಿಸುವುದು. ಹೀಗೆ ನಿರಾಸಮಾಡುವುದಕ್ಕೆ ಏನು ಪ್ರಯೋಜನ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಆ ಅನ್ಯನಿಷ್ಠತ್ವವನ್ನು ನಿರಾಸಮಾಡುವುದಕ್ಕೆ ಪ್ರಯೋಜನವನ್ನು ತೋರಿಸುತ್ತಾ ''ಜಗತ್' ಇತ್ಯಾದಿ ವಾಕ್ಯಗಳಿಂದ ಅದನ್ನು ಸ್ಪಷ್ಟಪಡಿಸುತ್ತಿದ್ದಾರೆ. ''ತದೈವ ತೇನ' ಎಂಬ ವಾಕ್ಯಭಾಗದಿಂದ ಜಿಜ್ಞಾಸ್ಯನಾದ ಬ್ರಹ್ಮನಿಗೆ ವಿಷ್ಣುತ್ವವನ್ನು ನಿಶ್ಚಯಿಸುವ ಲಕ್ಷಣಕ್ಕೆ ಅತಿವ್ಯಾಪ್ತಿಯನ್ನು ನಿರಾಸಮಾಡುವುದು ಪ್ರಯೋಜನವಾಗಿದ್ದು, ಇದರಿಂದಲೇ ಬ್ರಹ್ಮಶಾಸ್ತ್ರದಲ್ಲಿ ಅಂತರ್ಭಾವವು ಸಿದ್ಧಿಸುತ್ತದೆ. ಹಾಗೆಯೇ ಹಿಂದೆ ಹೇಳಿದ ಜಿಜ್ಞಾಸ್ಯನಾದ ಬ್ರಹ್ಮನಿಗೆ ವಿಷ್ಣುತ್ವವು ನಿಶ್ಚಯವಾಗುವುದು ಪ್ರಯೋಜನವಾಗಿದೆ ಎಂಬುದಾಗಿ ಸೂಚಿತವಾಗುತ್ತದೆ. ಇಲ್ಲಿರುವ 'ಇತಿ'ಶಬ್ದವು

ಹೇತ್ವರ್ಥವನ್ನು ಸೂಚಿಸುತ್ತಾ, 'ಇತಿ ಶಾಸ್ತ್ರಸಂಗತಿಃ' ಎಂಬುದಾಗಿ ಅನ್ವಯವನ್ನು ಪಡೆಯುತ್ತದೆ.

ವಿಶೇಷ ವಿಚಾರ - 'ತದೈವ' ಎಂಬ ಟೀಕೆಗೆ ಜಗಜ್ಜನ್ಮಾದಿಕಾರಣತ್ವವು ಬೇರೆ ದೇವತೆಗಳಲ್ಲಿ ಇರುವುದರಿಂದ ಅತಿವ್ಯಾಪ್ತಿದೋಷ ಬರುತ್ತದೆ. ಆವಾಗ ವಿಷ್ಣುವಿನ ಲಕ್ಷಣ ಎಂದು ಸಿದ್ಧವಾಗುವುದಿಲ್ಲವೆಂದು ಅಭಿಪ್ರಾಯ.

ಅತಿವ್ಯಾಪ್ತಿದೋಷಕ್ಕೆ ಇಲ್ಲಿ ಅವಕಾಶ ಇಲ್ಲ, ಏಕೆಂದರೆ ಜಗಜ್ಜನ್ಮಾದಿಕಾರಣತ್ವ-ಲಕ್ಷಣವು ವಿಷ್ಣುವಿನಲ್ಲಿಯೇ ಇದೆ ಎಂದು ಹಿಂದಿನ ಅಧಿಕರಣದಲ್ಲಿ ಈಗಾಗಲೆ ಸಿದ್ಧಮಾಡಿದ್ದಾಗಿದೆಯಲ್ಲವೆ ? ಎಂದರೆ ಇಲ್ಲ. ಆದರೂ ಕೂಡ ದೋಷಕ್ಕೆ ಅವಕಾಶ ಇದೆ. ಏಕೆಂದರೆ ಅದು ಕೇವಲ ಭಾಷ್ಯಕಾರರಿಂದಷ್ಟೇ ಹೇಳಿದಂತಾಯಿತು. ಸೂತ್ರಕಾರರಿಂದ ಹೇಳಿದಂತಾಗದ ಕಾರಣ ಸಂದೇಹಕ್ಕೆ ಅವಕಾಶ ಇದೆ.

ಶಾಸ್ತ್ರಯೋನಿತ್ವಾಧಿಕರಣಕ್ಕೆ ಸಂಗತಿ ಮತ್ತು ಫಲವನ್ನು ಹೀಗೆ ತಿಳಿಯಬೇಕು - ಈ ಅಧಿಕರಣಕ್ಕೆ ಮೂರು ಬಗೆಯಲ್ಲಿ ಸಂಗತಿ ಹೇಳಬಹುದು - ೧) ಉಪಜೀವ್ಯ ಉಪಜೀವಕಭಾವಸಂಗತಿ, ೨) ಹೇತು ಹೇತುಮದ್‌ಭಾವರೂಪಸಂಗತಿ, ೩) ಆಕ್ಷೇಪಿಕೀ ಸಂಗತಿ

೧) ಹಿಂದಿನ ಅಧಿಕರಣದಲ್ಲಿ ಜಗತ್‌ಕಾರಣತ್ವವನ್ನು ಸಮರ್ಥಿಸಲಾಯಿತು. ಅದು ವಿಷ್ಣುವಿನಲ್ಲಿ ಕೂಡುತ್ತದೋ? ಇಲ್ಲವೋ? ಎಂದು ಈ ಅಧಿಕರಣದಲ್ಲಿ ವಿಮರ್ಶಿಸಲಾಗಿದೆ. ಹಿಂದಿನ ಅಧಿಕರಣದಲ್ಲಿ ಹೇಳಿದ ಜಗತ್‌ಕಾರಣತ್ವವನ್ನು ಉಪಜೀವಿಸಿ ಈ ಅಧಿಕರಣವು ಹೊರಟಿರುವುದರಿಂದ ಉಪಜೀವ್ಯ ಉಪಜೀವಕಭಾವಸಂಗತಿ ಇದೆ.

೨) ಈ ಅಧಿಕರಣದಲ್ಲಿ ಸಮರ್ಥಿಸುವ ಶಾಸ್ತ್ರಯೋನಿತ್ವದಿಂದ ಹಿಂದಿನ ಅಧಿಕರಣದ ಜಗತ್‌ಕಾರಣತ್ವ ಪ್ರಮೇಯವು ಸಿದ್ಧವಾಗುತ್ತದೆ. ಆದ್ದರಿಂದ ಶಾಸ್ತ್ರಯೋನಿತ್ವವು ಹೇತುವಾಯಿತು, ಹಿಂದಿನ ಅಧಿಕರಣದಲ್ಲಿ ಹೇಳಿದ ಜಗತ್ ಕಾರಣತ್ವವು ಹೇತುಮತ್ ಆಯಿತು. ಹೀಗೆ ಹೇತುಹೇತುಮದ್ಭಾವಸಂಗತಿಯು ಇದೆ.

೩) ಹಿಂದಿನ ಅಧಿಕರಣದಲ್ಲಿ ಹೇಳಿದ ಜಗತ್‌ಕಾರಣತ್ವಕ್ಕೆ ಜೀವಾದಿಗಳಲ್ಲಿ ಅತಿವ್ಯಾಪ್ತಿ ಬರುತ್ತದೆಂದು ಆಶಂಕಿಸಿ ಸಮಾಧಾನ ಮಾಡುತ್ತಿರುವುದರಿಂದ ಈ ಅಧಿಕರಣಕ್ಕೆ ಆಕ್ಷೇಪಿಕೀಸಂಗತಿಯು ಇದೆ.

## ಮೂರನೇ ಅಧ್ಯಾಯದ ಸೂತ್ರದಿಂದ ಪುನರುಕ್ತಿಪರಿಹಾರ

**ಭಾವದೀಪಃ –** ಯದ್ವಾ, ಪೂರ್ವಸ್ಮಾತ್ 'ಶ್ರುತ್ಯಧಿಕರಣಸಙ್ಗತಿಸ್ತು' ಇತಿ ಇಹೇತರತ್ರ ಚ 'ಶಾಸ್ತ್ರಸಙ್ಗತಿಃ' ಇತ್ಯನನ್ತರಮನುವರ್ತ್ಯ ತತ್ಪರತಯಾ ಏತದ್ ವಾಕ್ಯಂ ಪೂರ್ವಾಧಿಕರಣ ಇವ ಯೋಜ್ಯಮ್ । ತಥಾ ಚಾತ್ರ ಪೂರ್ವಪಕ್ಷೇ ಪೂರ್ವೋಕ್ತಸ್ಯಾऽಕ್ಷೇಪಾತ್ ಪೂರ್ವಾಧಿಕರಣತದ್ವಿಷಯ-ವಾಕ್ಯಾಭ್ಯಾಮ್ ಏತದಧಿಕರಣೈತದ್ವಿಷಯವಾಕ್ಯಯೋರಾಕ್ಷೇಪಿಕೀಸಙ್ಗತಿರಿತಿ ಭಾವಃ । ಅಸ್ಮಿನ್ ಪಕ್ಷೇ ಅನುವೃತ್ತೇನ ಪ್ರಕಾರಾರ್ಥಕಸ್ಯ 'ಇತಿ'ಶಬ್ದೇನಾನ್ವಯೋ ಜ್ಞೇಯಃ । ಯದ್ಯಪಿ ಪೂರ್ವತ್ರೈವ ಶ್ರುತಿಸ್ಮೃತ್ಯುಕ್ತ್ಯಾ ಜನ್ಮಾದಿಕರ್ತೃತ್ವಸ್ಯ ವಿಷ್ಣ್ವೇಕನಿಷ್ಠತೋಕ್ತಾ । ತಥಾಪಿ 'ಸಾ ಭಾಷ್ಯಕೃತೈವೋಕ್ತಾ ನ ತು ಸೂತ್ರಕೃತಾ ಇತಿ ವಾ, ತಾಸಾಮಿಹ ಪೂರ್ವಪಕ್ಷೇ ಯುಕ್ತಿನಿರೋಧೇನಾಕ್ಷೇಪಾದ್ವಾ ಭವತ್ಯನ್ಯನಿಷ್ಠತಾಶಙ್ಕಾ' ಇತಿ ಭಾವಃ । ಏತೇನ 'ಅನೇನ ಸರ್ವಗತತ್ವಮಾಯಾಮಯಶಬ್ದಾದಿಭ್ಯ ಇತ್ಯತ್ರೈವ ತೃತೀಯೇ ವಿಷ್ಣ್ವೇಕನಿಷ್ಠತಾಯಾ ವಕ್ಷ್ಯಮಾಣತ್ವಾತ್ ತೇನ ಗತಾರ್ಥಮಿದಮ್' ಇತಿ ನಿರಸ್ತಮ್ । ಆಗಮಾದ್ಯವಷ್ಟಮ್ಭೇನಾತ್ರ ತದುಕ್ತಸ್ಯಾಪ್ಯಾಕ್ಷೇಪಾದಿತಿ ಬೋಧ್ಯಮ್ ।

ಅಥವಾ, ಹಿಂದಿನ ಸೂತ್ರದ ಟೀಕಾಭಾಗದಿಂದ 'ಶ್ರುತ್ಯಧಿಕರಣಸಂಗತಿಃ ತು' ಎಂಬುದಾಗಿ ಇಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕು. ಮುಂದೆ, 'ಶಾಸ್ತ್ರಸಂಗತಿಃ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಹೀಗೆ ಅನುವೃತ್ತಿ ಮಾಡಿಕೊಂಡ ನಂತರ ಈ ವಾಕ್ಯವನ್ನು ಪೂರ್ವಾಧಿಕರಣದಲ್ಲಿ ಯೋಜನೆ ಮಾಡಿದಂತೆ ಅನ್ವಯಿಸಿಕೊಂಡು ಇಲ್ಲಿಯೂ ಅರ್ಥವನ್ನು ಹೇಳಬೇಕು. ಹೀಗೆ ಅರ್ಥ ಹೇಳುವುದರಿಂದ ಹಿಂದಿನ ಅಧಿಕರಣದಲ್ಲಿ ಪೂರ್ವಪಕ್ಷದವರು ಹೇಳಿದ ಆಕ್ಷೇಪಕ್ಕೂ, ಹಿಂದಿನ ಅಧಿಕರಣ ಮತ್ತು ಹಿಂದಿನ ಅಧಿಕರಣದ ವಿಷಯವಾಕ್ಯಗಳಿಗೂ, ಈ ಅಧಿಕರಣ ಮತ್ತು ಈ ಅಧಿಕರಣದ ವಿಷಯವಾಕ್ಯಗಳಿಗೂ ಆಕ್ಷೇಪಿಕೀಸಂಗತಿ ಎಂಬುದಾಗಿ ತಿಳಿಯಬೇಕು. ಈ ಪಕ್ಷದಲ್ಲಿ ಅನುವೃತ್ತಿ ಮಾಡಿಕೊಂಡ ಪದಗಳಿಗೆ 'ಇತಿ'ಶಬ್ದವು ಪ್ರಕಾರ ಎಂಬ ಅರ್ಥವುಳ್ಳದ್ದಾಗಿ ಅನ್ವಯವನ್ನು ಪಡೆಯುತ್ತದೆ. ''ಇಲ್ಲಿ ಜನ್ಮಾದಿಕರ್ತೃತ್ವವನ್ನು ಶ್ರುತಿಸ್ಮೃತಿಗಳನ್ನು ಹೇಳುವುದರ ಮೂಲಕ ವಿಷ್ಣುವಿನಲ್ಲಿಯೇ ಹಿಂದಿನ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದ್ದರೂ, ಇಲ್ಲಿ ಸಮನ್ವಯವು ಸೂತ್ರಕಾರರು ಹೇಳದೇ ಇರುವ ಸಮನ್ವಯವಾದುದರಿಂದ ಭಾಷ್ಯಕಾರರು ಮಾತ್ರ ಹೇಳಿರುವುದರಿಂದ ಈ ಜನ್ಮಾದಿಕರ್ತೃತ್ವವು ಬೇರೆಯವರಲ್ಲೂ ಇರಬಹುದು ಎಂಬ

ಶಂಕೆಯು ಬರಬಹುದು. ಆಥವಾ ಹಿಂದೆ ಹೇಳಿದ ಶ್ರುತಿಸ್ಮೃತಿಗಳಿಗೆ ಈ ಸೂತ್ರದಲ್ಲಿ ಪೂರ್ವಪಕ್ಷದಲ್ಲಿ ಯುಕ್ತಿಯ ವಿರೋಧವನ್ನು ಇಟ್ಟುಕೊಂಡು ಆಕ್ಷೇಪ ಮಾಡುತ್ತಿರುವುದರಿಂದ ಅನ್ಯನಿಷ್ಠತ್ವಶಂಕೆಗೆ ಅವಕಾಶವಿದೆ'' ಎಂಬ ಅಭಿಪ್ರಾಯವನ್ನು ಗ್ರಹಿಸಿಕೊಳ್ಳಬೇಕು. ಹೀಗೆ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರಿಂದ ಬ್ರಹ್ಮಸೂತ್ರದ ಮೂರನೆಯ ಅಧ್ಯಾಯದಲ್ಲಿ ''ಅನೇನಸರ್ವಗತ್ವಮಾಯಾಮಯಶಬ್ದಾದಿಭ್ಯಃ'' ಎಂಬ ಸೂತ್ರದಲ್ಲಿಯೇ ಜನ್ಮಾದಿಕರ್ತೃತ್ವವು ವಿಷ್ಣುವಿನಲ್ಲಿ ಮಾತ್ರ ಇದೆ ಎಂಬುದಾಗಿ ಹೇಳಲಿರುವುದರಿಂದ ಈ ಸೂತ್ರವು ಗತಾರ್ಥವಾಗುತ್ತದೆ ಎಂಬ ಆಕ್ಷೇಪವನ್ನು ನಿರಾಸ ಮಾಡಿದಂತೆ ಆಗುತ್ತದೆ. ''ಆಗಮಾದಿಗಳನ್ನು ಬದಿಗಿಟ್ಟು ಇಲ್ಲಿ ಆ ಸೂತ್ರದಲ್ಲಿ ಹೇಳಿದ ಅಂಶವನ್ನು ಯುಕ್ತಿಯಿಂದ ಆಕ್ಷೇಪ ಮಾಡುತ್ತಿದ್ದಾರೆ'' ಎಂಬುದಾಗಿ ಅಭಿಪ್ರಾಯವನ್ನು ಗ್ರಹಿಸಬೇಕು.

## 'ಅನ್ಯಸ್ಯ' ಎಂದೇಕೆ ಹೇಳಿದರು

**ಭಾವದೀಪಃ – ತದಿತಿ ।।** 'यतो वा' इत्यादिवाक्योक्तम् । **अन्यस्यापीति ।।** ಭಾಷ್ಯೇ 'अन्ये' इत्येवोक्तावपि 'न च रुद्रादौ सममेतल्लक्षणम्' इति न्यायविवरणे समपदेन साधारण्यस्योक्तेः अत्रापि ಭಾಷ್ಯೇऽन्येपीत्यभिमतमिति ಭಾವೇನ 'अन्यस्य' इत्यनुक्त्वा विष्णोरेव अन्यस्याप्यस्ति वेत्युक्तम् । क्वचिद् 'विष्णोरन्यस्याप्यस्ति न वा' इति पाठः । अत एव ಭಾಷ್ಯಾನುರೋಧಾತ್ 'अन्येषामपि' इति वाच्ये रुद्रादाविति एकवचनानुरोधेन 'अन्यस्य' इत्युक्तम् ।

ಟೀಕೆಯಲ್ಲಿನ 'ತತ್' ಎಂಬ ಶಬ್ದಕ್ಕೆ 'ಯತೋ ವಾ ಇತ್ಯಾದಿವಾಕ್ಯದಿಂದ ಹೇಳಲ್ಪಟ್ಟದ್ದು' ಎಂಬುದಾಗಿ ಅರ್ಥ. ಭಾಷ್ಯದಲ್ಲಿ 'ಅನ್ಯೇ' ಎಂಬುದಾಗಿ ಮಾತ್ರ ಹೇಳಿದ್ದರೂ; ನ್ಯಾಯವಿವರಣದಲ್ಲಿ 'ನ ಚ ರುದ್ರಾದೌ ಸಮಮೇತಲ್ಲಕ್ಷಣಮ್' ಎಂಬುದಾಗಿ ಸಮಪದದಿಂದ ಸಾಧಾರಣ್ಯವನ್ನು ಹೇಳಿರುವುದರಿಂದ ಇಲ್ಲೂ ಕೂಡ ಭಾಷ್ಯದಲ್ಲಿ 'ಅನ್ಯೇಪಿ' ಎಂಬುದಾಗಿ ಹೇಳುವುದೇ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವನ್ನು ಗ್ರಹಿಸಿಕೊಂಡು 'ಅನ್ಯಸ್ಯ' ಎಂದು ಹೇಳದೇ 'ವಿಷ್ಣೋರೇವ ಅನ್ಯಸ್ಯಾಪಿ ಅಸ್ತಿ ವಾ' ಎಂದು ಹೇಳಿದ್ದಾರೆ. ಕೆಲವೊಂದು ಕೋಶಗಳಲ್ಲಿ 'ವಿಷ್ಣೋರನ್ಯಸ್ಯಾಪ್ಯಸ್ತಿ ನ ವಾ' ಎಂಬುದಾಗಿ ಪಾಠಾಂತರವಿದೆ.

ಆದ್ದರಿಂದಲೇ ಭಾಷ್ಯಕ್ಕೆ ಅನುಗುಣವಾಗಿ 'ಅನ್ಯೇಷಾಮಪಿ' ಎಂದು ಹೇಳಬೇಕಾಗಿದ್ದರೂ ನ್ಯಾಯವಿವರಣದಲ್ಲಿ ಹೇಳಿದ 'ರುದ್ರಾದೌ' ಎಂಬಲ್ಲಿರುವ ಏಕವಚನವನ್ನು ಅನುಸರಿಸಿ 'ಅನ್ಯಸ್ಯ' ಎಂಬುದಾಗಿ ಹೇಳಿದ್ದಾರೆ.

ವಿಶೇಷ ವಿಚಾರ - ಜಗಜ್ಜನ್ಮಾದಿ ಕಾರಣತ್ವವೆಂಬ ಬ್ರಹ್ಮನ ಲಕ್ಷಣವು ರುದ್ರಮೊದಲಾದ ಜೀವವಿಶೇಷರಲ್ಲಿಯೂ ಪಾಶುಪತಾದ್ಯಾಗಮಗಳ ಆಧಾರದಿಂದ ಸಾಧಾರಣವಾಗಿದೆ. ಹೀಗೆ ಬ್ರಹ್ಮನ ಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆಂದು ಹೇಳಬಾರದು. ಋಗ್ವೇದ ಮೊದಲಾದ ಸಚ್ಛಾಸ್ತ್ರಗಳಿಂದಷ್ಟೇ ಜಗತ್ಕಾರಣನನ್ನು ತಿಳಿಯಬೇಕು. ಆವಾಗ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಮೊದಲಾದ ದೋಷಗಳು ಬರುವುದಿಲ್ಲ.

## ಶಾಸ್ತ್ರಪದದಲ್ಲಿರುವ ಗಾಂಭೀರ್ಯ

**ಭಾವದೀಪಃ –** **ಪೂರ್ವೋಕ್ತೇತಿ ।।** ಸ ಚ ನ್ಯಾಯಃ 'ಜಗಜ್ಜನ್ಮಾದಿಕರ್ತೃತ್ವಸ್ಯ' ಇತ್ಯಾದಿನಾ ಪ್ರಾಗ್ ವಿವೃತಃ । **ಪ್ರಸಿದ್ಧಿಶ್ಚೇತಿ ।।** 'ರುದ್ರಾದೌ ಜಗತ್ಕರ್ತೃತ್ವಸಂಹರ್ತೃತ್ವಾದಿ-ಪ್ರಸಿದ್ಧಶ್ಚ' ಇತ್ಯರ್ಥಃ । ಅತ್ರ ಸೌತ್ರಶಾಸ್ತ್ರಪದೇನಾನುಮಾನಮೂಲಕಂ ಪಾಶುಪತಾದ್ಯಾಗಮಮೂಲಕಂ ಚೇತಿ ಚೋದ್ಯದ್ವಯಂ ವ್ಯಾವರ್ತ್ಯಮ್ । ದ್ವಯೋರಪ್ಯಶಾಸ್ತ್ರತ್ವಾತ್ । 'ನೈವ ಶಾಸ್ತ್ರಂ ಕುವರ್ತ್ಮ ತತ್' ಇತಿ ವಕ್ಷ್ಯಮಾಣತ್ವಾತ್ ಪ್ರತ್ಯಕ್ಷಸ್ಯಾಪ್ರಸಕ್ತೇಃ ।

''ಪೂರ್ವೋಕ್ತನ್ಯಾಯ'' ಎಂದರೆ ಈ ಹಿಂದೆ ವಿವರಿಸಿದ 'ಜಗಜ್ಜನ್ಮಾದಿಕರ್ತೃತ್ವಸ್ಯ' ಇತ್ಯಾದಿ ವಾಕ್ಯದಿಂದ ಹೇಳಿದ ನ್ಯಾಯ ಎಂಬುದಾಗಿ ಅರ್ಥ. ''ಪ್ರಸಿದ್ಧಿಶ್ಚ'' ಎಂದರೆ ರುದ್ರಾದಿಗಳಲ್ಲಿ ಜಗತ್ಕರ್ತೃತ್ವ, ಜಗತ್‌ಸಂಹರ್ತೃತ್ವ ಇತ್ಯಾದಿಗಳ ಪ್ರಸಿದ್ಧಿ ಎಂಬುದಾಗಿ ಗ್ರಹಿಸಬೇಕು. ಇಲ್ಲಿ ಸೂತ್ರದಲ್ಲಿ ಹೇಳಿದ ಶಾಸ್ತ್ರಪದಕ್ಕೆ ಅನುಮಾನಮೂಲಕವಾದ ಮತ್ತು ಪಾಶುಪತಾದಿ ಆಗಮಮೂಲಕವಾದ ಆಕ್ಷೇಪಗಳನ್ನು ವ್ಯಾವೃತ್ತಿಮಾಡಬೇಕು. 'ನೈವ ಶಾಸ್ತ್ರಂ ಕುವರ್ತ್ಮ ತತ್' ಎಂಬುದಾಗಿ ಮುಂದೆ ಭಾಷ್ಯಕಾರರು ಸ್ಪಷ್ಟಪಡಿಸುವುದರಿಂದ ಇವೆರಡೂ ಶಾಸ್ತ್ರಗಳೇ ಅಲ್ಲ. ಪ್ರತ್ಯಕ್ಷವು ಈ ವಿಷಯದಲ್ಲಿ ಪ್ರಸಕ್ತಿಯನ್ನೇ ಪಡೆಯಲಾರದು.

## ಭಾಷ್ಯದಲ್ಲಿ ಶಾಸ್ತ್ರಪದ ವ್ಯಾಖ್ಯಾನ

**ಭಾವದೀಪಃ –** ತತ್ರಾದ್ಯಮ್ 'ಅನುಮಾನತಃ' ಇತಿ ಭಾಷ್ಯೇಣ ದ್ವಿತೀಯಂ ತು 'ಋಗ್ಯಜುಃ-ಸಾಮಾಥರ್ವಾಶ್ಚ' ಇತಿ ಭಾಷ್ಯೇಣ ಸೂಚಿತಮ್ । ತತ್ರಾದ್ಯಂ ವ್ಯನಕ್ತಿ – **ಅನುಮಾನೇನೇತಿ ।।**

'विमतं सकर्तृकं कार्यत्वात् घटवत्' इत्यनेन विश्वकर्तृसिद्धौ प्रसिद्धिबलाद् रुद्रादिरेव कश्चित् न तु विष्णुः । ''नावेदवित्' इति 'नैषा तर्केण' इति स्वप्रामाण्यनिषेधकश्रुत्युक्ते विष्णाख्यकर्तरि अनुमानस्यापर्यवसानादिति भावः । एतेन भाष्ये तसिल् तृतीयार्थः । तथा 'रुद्रादौ सममेतल्लक्षणम्' इति न्यायविवरणे च मया अनुमानेन सहितं समम् अनुमानेन सिद्धमिति समशब्दार्थो दर्शितः । अत एव भाष्यरीत्या अन्येषामपि प्रक्रमेपि 'रुद्रादेः' इत्युक्तम् ।

ಈ ಎರಡು ಅಂಶಗಳನ್ನು 'ಅನುಮಾನತಃ' ಎಂಬ ಭಾಷ್ಯಭಾಗದಿಂದ ಮತ್ತು 'ಋಗ್ಯಜುಃ ಸಾಮಾಥರ್ವಾಶ್ಚ' ಎಂಬ ಭಾಷ್ಯಭಾಗದಿಂದಲೂ ಭಾಷ್ಯಕಾರರೇ ಸೂಚಿಸಿದ್ದಾರೆ. ಇವುಗಳಲ್ಲಿ ಮೊದಲನೆಯದಾದ ಅನುಮಾನಮೂಲಕತ್ವ ನಿರಾಸವನ್ನು 'ಅನುಮಾನೇನ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ. 'ವಿಮತಂ ಸಕರ್ತೃಕಂ ಕಾರ್ಯತ್ವಾತ್ ಘಟವತ್' (ಸಂದೇಹಾಸ್ಪದವಾದ ಈ ಜಗತ್ತು ಕಾರ್ಯರೂಪವಾದ ವಸ್ತುವಾದ್ದರಿಂದ ಒಬ್ಬ ಕರ್ತೃವಿನಿಂದಲೇ ನಿಷ್ಪನ್ನವಾಗಿದೆ; ಹೇಗೆ ಕಾರ್ಯರೂಪವಾದ ಮಡಿಕೆಯು ಕುಂಬಾರನಿಂದ ನಿಷ್ಪನ್ನವಾಗಿದೆಯೋ ಹಾಗೆಯೇ ಈ ಜಗತ್ತೂ ಕೂಡ ಸಕರ್ತೃಕ) ಈ ಅನುಮಾನದಿಂದ ಜಗತ್ತಿಗೆ ಒಬ್ಬ ಕರ್ತೃವಿದ್ದಾನೆ ಎಂದು ಸಿದ್ಧವಾದ ಮೇಲೆ ಪ್ರಸಿದ್ಧಿಯ ಬಲದಿಂದ ರುದ್ರಾದಿಗಳಲ್ಲೇ ಯಾರೋ ಒಬ್ಬರು ಜಗತ್ಕರ್ತೃವಾಗಿದ್ದಾರೆ ಹೊರತು ವಿಷ್ಣುವಲ್ಲ. ಏಕೆಂದರೆ ವಿಷ್ಣು ಎಂಬ ಕರ್ತೃವಿನಲ್ಲಿ 'ನಾವೇದವಿನ್ಮನುತೇ' ಎಂಬ ಶ್ರುತಿಭಾಗದಿಂದಲೂ, 'ನೈಷಾ ತರ್ಕೇಣ' ಎಂಬ ಶ್ರುತಿಭಾಗದಿಂದಲೂ ಅನುಮಾನಪ್ರಾಮಾಣ್ಯವನ್ನು ನಿಷೇಧ-ಮಾಡಿರುವುದರಿಂದ ಅನುಮಾನದಿಂದ ಸ್ಪಷ್ಟವಾಗಿ ತಿಳಿಯಲು ಸಾಧ್ಯವಿಲ್ಲ. ಈ ವಿವರಣೆಯನ್ನು ನೀಡಿರುವುದರಿಂದ ಭಾಷ್ಯದಲ್ಲಿ 'ಅನುಮಾನತಃ' ಎಂಬ ಶಬ್ದದಲ್ಲಿ ಇರುವ ತಸಿಲ್ ಪ್ರತ್ಯಯಕ್ಕೆ ತೃತೀಯಾರ್ಥವನ್ನು ವ್ಯಾಖ್ಯಾನಿಸಿದಂತಾಯಿತು. ಹಾಗೆಯೇ 'ರುದ್ರಾದೌ ಸಮಮೇತಲ್ಲಕ್ಷಣಮ್' ಎಂಬುದಾಗಿ ನ್ಯಾಯವಿವರಣದಲ್ಲಿ ಬಳಸಿದ ಸಮಶಬ್ದಕ್ಕೆ 'ಮಯಾ ಸಹಿತಂ ಸಮಮ್' ಎಂಬ ವಿಗ್ರಹದಂತೆ ಅನುಮಾನದಿಂದ ಸಿದ್ಧವಾದದ್ದು ಎಂಬುದಾಗಿ

ಅರ್ಥವನ್ನು ಸೂಚಿಸಿದಂತಾಗುತ್ತದೆ. ಆದ್ದರಿಂದಲೇ ಭಾಷ್ಯದಲ್ಲಿ ಹೇಳಿದಂತೆ 'ಅನ್ಯೇಷಾಂ' ಎಂಬುದಾಗಿ ಪ್ರಾರಂಭ ಮಾಡಿದ್ದರೂ 'ರುದ್ರಾದೇಃ' ಎಂಬುದಾಗಿ ನಂತರ ವಿವರಿಸಿದ್ದಾರೆ.

ವಿಶೇಷ ವಿಚಾರ - 'ಅನುಮಾನೇನ' ಎಂದು ಟೀಕೆಯಲ್ಲಿದೆ. 'ಕ್ಷಿತ್ಯಾದಿಕಂ ಸಕರ್ತೃಕಂ ಕಾರ್ಯತ್ವಾತ್' (ಜಗತ್ತು ಕಾರ್ಯವಾಗಿರುವದರಿಂದ ಕರ್ತೃವನ್ನು ಹೊಂದಿರಲೇಬೇಕು) ಈ ಅನುಮಾನದಿಂದ ಕರ್ತೃ ಮಾತ್ರ ಸಿದ್ಧವಾಗುತ್ತದೆ. ಅಂತಹ ಕರ್ತೃ ವಿಷ್ಣುವೇ ಆಗಿದ್ದಾನೆಂದು ನಿರ್ಣಯಸಲಾಗದು. ಏಕೆಂದರೆ 'ನಾವೇದವಿತ್' ಎಂಬ ಶ್ರುತಿಯು ಅನುಮಾನಪ್ರಾಮಾಣ್ಯವನ್ನು ನಿಷೇಧಿಸುತ್ತಿದೆ. ಆದ್ದರಿಂದ ವಿಷ್ಣುವಿನಲ್ಲಿ ಪರ್ಯವಸಾನ ಮಾಡಲು ಅರ್ಹತೆಯಿರುವ ಶ್ರುತಿಯೇ ಅನುಮಾನವನ್ನು ನಿರಾಕರಿಸುತ್ತಿದೆ. ಅನಿವಾರ್ಯವಾಗಿ ಪಾಶುಪತಾದ್ಯಾಗಮಗಳನ್ನೇ ಆಶ್ರಯಿಸಬೇಕು. ಪಾಶುಪತವೇ ಮೊದಲಾದ ಆಗಮಗಳಿಂದ ಶಿವ ಮೊದಲಾದವರಿಗೆ ಕರ್ತೃತ್ವವು ಸಿದ್ಧವಾಗುತ್ತದೆ. ಹೇಗೆಂದರೆ 'ಶಿವಃ ಜಗತ್ಕರ್ತಾ ಸರ್ವಜ್ಞತ್ವಾತ್ ವ್ಯತಿರೇಕೇಣ ಕುಲಾಲವತ್' (ಶಿವನು ಸರ್ವಜ್ಞನಾಗಿರುವದರಿಂದ ಜಗತ್ತಿಗೆ ಕಾರಣನಾಗಿದ್ದಾನೆ. ವ್ಯತಿರೇಕದೃಷ್ಟಾಂತ ಕುಂಬಾರ) ಎಂಬ ಅನುಮಾನದಿಂದ ರುದ್ರರೇ ಮೊದಲಾದವರಿಗೆ ಕಾರಣತ್ವವು ಸಿದ್ಧವಾಗುತ್ತದೆ. 'ಶಿವಃ ಜಗತ್ಕರ್ತಾ ಸರ್ವಜ್ಞತ್ವಾತ್' ಎಂಬ ಎರಡನೆಯ ಅನುಮಾನಕ್ಕೆ ಆಸಿದ್ಧ ದೋಷವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಪಾಶುಪತವೇ ಮೊದಲಾದ ಆಗಮಗಳಿಂದ ಶಿವನಲ್ಲಿ ಸರ್ವಜ್ಞತ್ವವು ಸಿದ್ಧವಾಗುತ್ತದೆ ಎಂದು ಭಾವ.

## ರುದ್ರಾದಿಗಳಿಗೆ ಜಗತ್ಕಾರಣತ್ವಸಮರ್ಥನೆ

**ಭಾವದೀಪಃ –** **ಶ್ರುತೀತಿ ।। 'ಯ ಉ ತ್ರಿಧಾತು' ಇತ್ಯಾದಿಶ್ರುತೀತ್ಯರ್ಥಃ । ಯುಕ್ತಿವಿರುದ್ಧಾರ್ಥ ಇತಿ ।। 'ವಿಷ್ಣುರೇವ ಕರ್ತಾ ನಾನ್ಯಃ' ಇತ್ಯಸ್ಯೋಕ್ತಯುಕ್ತಿವಿರುದ್ಧತ್ವೇನ ವಿಷ್ಣುಕರ್ತೃತ್ವಮಾತ್ರ ಏವ ತಾತ್ಪರ್ಯೆ ಶ್ರುತ್ಯಾದೇಃ, ನತ್ವನ್ಯಕರ್ತೃತಾನಿಷೇಧೇ ಇತಿ ಶ್ರುತ್ಯಾದಿನಾ ವಿಷ್ಣೋಃ, ಅನುಮಾನೇನ ಚ ಶಿವಾದೇಃ ಕರ್ತೃತ್ವಂ ಪ್ರಾಪ್ತಮಿತಿ ದೇಶಾದಿಭೇದೇನಾವಿರುದ್ಧಂ ನೇಯಮಿತಿ ಭಾವಃ ।**

'ಉದಾಹೃತ ಶ್ರುತಿ ಎಂದರೆ 'ಯ ಉ ತ್ರಿಧಾತು' ಇವೇ ಮೊದಲಾದ ಶ್ರುತಿಗಳು ಎಂದರ್ಥ. ''ಯುಕ್ತಿವಿರುದ್ಧಾರ್ಥ'' ಎಂಬ ಅಂಶದಿಂದ 'ವಿಷ್ಣುವೇ ಕರ್ತೃವಾಗಿದ್ದಾನೆ ಬೇರೆ

ಯಾರೂ ಕರ್ತೃವಲ್ಲ' ಎಂಬ ವಿಷಯವು ಹಿಂದೆ ಹೇಳಿದಂತೆ ಯುಕ್ತಿವಿರುದ್ಧವಾದುದರಿಂದ ಶ್ರುತ್ಯಾದಿಗಳಿಗೆ ವಿಷ್ಣುವು ಕರ್ತೃವೆಂಬಲ್ಲಿ ಮಾತ್ರ ತಾತ್ಪರ್ಯವಾಗಿದ್ದು ಬೇರೆಯವರು ಕರ್ತೃವಲ್ಲ ಎಂಬ ವಿಷಯದಲ್ಲಿ ತಾತ್ಪರ್ಯವಿಲ್ಲ. ಹೀಗೆ ಶ್ರುತ್ಯಾದಿಗಳಿಂದ ವಿಷ್ಣುವಿಗೆ ಜನ್ಮಾದಿಕಾರಣತ್ವವನ್ನು, ಅನುಮಾನದಿಂದ ಶಿವಾದಿಗಳಿಗೆ ಕಾರಣತ್ವವನ್ನು ದೇಶಭೇದ ಕಾಲಭೇದಾದಿಗಳಿಂದ ವಿರೋಧ ಬರದಂತೆ ಹೊಂದಿಸಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ತಿಳಿಸುತ್ತಿದ್ದಾರೆ.

ಒಟ್ಟು ಅಭಿಪ್ರಾಯ - 'ಯ ಉ ತ್ರಿಧಾತು' ಇತ್ಯಾದಿ ಶ್ರುತಿಗಳಿಂದ ವಿಷ್ಣು ಜಗತ್ಕಾರಣನೆಂದು ಸಮರ್ಥಿಸಿದರೆ ಅನುಮಾನಗಳಿಂದ ಶಿವನು ಜಗತ್ಕಾರಣನೆಂದು ಸಮರ್ಥಿಸಬಹುದು. ಪ್ರತಿಯೊಂದು ಮನುಕಲ್ಪಗಳಿಗೂ ಒಬ್ಬೊಬ್ಬ ಕರ್ತೃಗಳಿದ್ದಾರೆಂದು ನಿರ್ಣಯವಾಗಿದೆ. ಅದರಂತೆ ಪ್ರತಿಯೊಂದು ಮಹಾಕಲ್ಪಗಳಿಗೂ ಬೇರೆ ಬೇರೆ ಕರ್ತೃಗಳೇ ಇರಬೇಕು. ಮತ್ತು ಘಟವನ್ನು ನಾಶಮಾಡುವ ಶಕ್ತಿ ಕುಂಬಾರನಲ್ಲೇ ಇರಬೇಕೆಂದೆನೂ ನಿಯಮವಿಲ್ಲ. ಅದರಂತೆ ಜಗತ್ತನ್ನು ಸೃಷ್ಟಿ ಮಾಡಿದವನೇ ಜಗತ್ತನ್ನು ಸಂಹಾರ ಮಾಡಬೇಕೆಂಬ ನಿಯಮವನ್ನು ಒಪ್ಪಬೇಕಾಗಿಲ್ಲ. ಆದ್ದರಿಂದ ವಿಷ್ಣು ಜಗತ್ತನ್ನು ಸೃಷ್ಟಿಸಲಿ, ಶಿವನು ಸಂಹರಿಸಲಿ ಏನು ತಪ್ಪು?

ಮತ್ತು ವಿಚಿತ್ರವಾದ ದೊಡ್ಡ ಕೆಲಸಗಳನ್ನು ಒಬ್ಬನಿಂದಲೇ ಮಾಡಲು ಸಾಧ್ಯವಿಲ್ಲವೆಂದು ಲೋಕದಲ್ಲಿ ಕಂಡಿದೆ. ಅದರಂತೆ ಜಗತ್ತಿನ ನಿರ್ಮಾಣವೂ ಸಹ ಅನೇಕರಿಂದಲೇ ನಡೆದಿರಬೇಕು. ವಿಷ್ಣುವೊಬ್ಬನೇ ಈ ಜಗತ್ತನ್ನು ನಿರ್ಮಿಸಲಾರ. ಮತ್ತು ಕರ್ತೃತ್ವ ಶಕ್ತಿ ವಿಷ್ಣು ಒಬ್ಬನಲ್ಲೇ ಇರಬೇಕಾಗಿಲ್ಲ. ಕುಂಬಾರನಲ್ಲಿಯೂ ಘಟಕರ್ತೃತ್ವ ಶಕ್ತಿ ಇರುವುದು ಕಂಡಿದೆ. ಅದರಂತೆ ಶಿವನಲ್ಲಿಯೂ ಜಗತ್‌ಕರ್ತೃತ್ವ ಶಕ್ತಿ ಏಕೆ ಇರಬಾರದು? ಈ ಎಲ್ಲಾ ಕಾರಣಗಳಿಂದ ವಿಷ್ಣುವಿನಂತೆ ಶಿವನೂ ಕಾರಣನಾಗಲಿ ಎಂದು ಅತಿವ್ಯಾಪ್ತಿದೋಷ ಬರುತ್ತದೆ.

ಅಷ್ಟೇ ಅಲ್ಲದೇ ರುದ್ರ, ಭವ, ಶಂಕರ ಮೊದಲಾದ ಹೆಸರುಗಳೇ ರುದ್ರನಲ್ಲಿ ಕರ್ತೃತ್ವ ಸಂಹರ್ತೃತ್ವ ಪಾಲಕತ್ವಗಳನ್ನು ಹೇಳುತ್ತಿವೆ. ಇನ್ನು ಶ್ರುತಿಸ್ಮೃತಿಗಳು ವಿಷ್ಣುವನಲ್ಲಿ ಜಗತ್‌ಕರ್ತೃತ್ವಾದಿಗಳನ್ನು ಪ್ರತಿಪಾದಿಸುತ್ತಿರಬಹುದು. ಆದರೆ ಅವೆಲ್ಲವೂ ಸಹ ರುದ್ರನ ಜಗತ್ಕಾರಣತ್ವಾದಿಗಳನ್ನೇನು ನಿಷೇಧಿಸುತ್ತಿಲ್ಲ. ಇಲ್ಲಿಗೆ ಪೂರ್ವಪಕ್ಷ ಮುಗಿಯಿತು.

## ನ್ಯಾಯವಿವರಣದಲ್ಲಿರುವ ಸಮಶಬ್ದದ ಸ್ವಾರಸ್ಯ

**भावदीपः – ततश्च किम्? इत्यत आह – तथा चेति ।। 'रुद्रादेरपि कारणत्वे सति' इत्यर्थः । एतेन 'रुद्रादौ समं साधारणम् इत्यपि समशब्दार्थो दर्शितो भवति ।**

ಮುಂದೇನು? ಎಂಬ ಪ್ರಶ್ನೆಗೆ ಉತ್ತರವಾಗಿ 'ತಥಾ ಚ' ಎಂಬ ವಾಕ್ಯದಿಂದ ವಿವರಣೆಯನ್ನು ನೀಡುತ್ತಿದ್ದಾರೆ. 'ತಥಾ ಚ' ಎಂಬ ಪದಕ್ಕೆ 'ರುದ್ರಾದಿಗಳಿಗೆ ಕಾರಣತ್ವವು ಸಿದ್ಧವಾದುದರಿಂದ' ಎಂದು ಅರ್ಥ. ಇದರಿಂದ ನ್ಯಾಯವಿವರಣದಲ್ಲಿ 'ರುದ್ರಾದೌ ಸಮಮ್' ಎಂಬಲ್ಲಿ 'ಸಮ'ಶಬ್ದಕ್ಕೆ 'ಸಾಧಾರಣಮ್' ಎಂಬುದಾಗಿ ಅರ್ಥವನ್ನು ಸೂಚಿಸಿದಂತೆ ಆಗುತ್ತದೆ.

ವಿಶೇಷ ವಿಚಾರ - ಮುಂದಿನ ಮುಂದಿನ ಶಂಕೆಗಳನ್ನು ಪರಿಹರಿಸುವುದರಿಂದ ಹಿಂದಿನ ಪ್ರಮೇಯವು ನಿರ್ಣಯವಾಗುತ್ತದೆ. ಆದ್ದರಿಂದ ಮುಂದಿನ ಶಂಕೆಯ ಪರಿಹಾರವನ್ನು ಸಮುಚ್ಚಯ ಮಾಡುವುದಕ್ಕಾಗಿ 'ನಚ' ಎಂಬುದಾಗಿ 'ಚ'ಶಬ್ದವನ್ನು ಹೇಳಿದ್ದಾರೆ. 'ರುದ್ರಾದೌ' ಎಂದರೆ ರುದ್ರ ಮೊದಲಾದ ಜೀವವಿಶೇಷರಲ್ಲಿ ಎಂದರ್ಥ. 'ಶೈವಾದ್ಯಾಗಮಸಂಪ್ರಾಪ್ತ' ಇತ್ಯಾದಿಯಾಗಿ ಹಿಂದೆ ಹೇಳಿದಂತೆ ಅನುಮಾನದಿಂದ ರುದ್ರಾದಿಗಳಲ್ಲಿಯೂ ಜಗತ್ಕಾರಣತ್ವವು ತಿಳಿಯುತ್ತಿದೆಯೆಂದು ಶೇಷಪೂರಣಮಾಡಿಕೊಳ್ಳಬೇಕು. 'ಸಮಂ' ಎಂಬ ಪದಕ್ಕೆ ಸಾಧಾರಣವಾಗಿದೆ ಎಂದರ್ಥ. 'ಲಕ್ಷಣಮ್' ಎಂಬ ಪದಕ್ಕೆ 'ಲಕ್ಷಣವೆಂದು ಹೇಳಲ್ಪಟ್ಟ' ಎಂದರ್ಥ.

ಅಥವಾ, 'ಸಹಮಾನೇನ ವರ್ತತೇ ಇತಿ ಸಮಮ್' ಎಂದು ವಿಗ್ರಹಮಾಡಿದಾಗ 'ಸಮಂ' ಎಂಬ ಪದಕ್ಕೆ ಅನುಮಾನದಿಂದ ಸಹಿತವಾದದ್ದು' ಎಂದರ್ಥ. ಆದ್ದರಿಂದ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿಯು ಬರುತ್ತದೆ. ಇದನ್ನು ಆಪಾತತಃ ಹೇಳಿದ್ದು; ವಸ್ತುತಸ್ತು ಜೀವವಿಶೇಷನಲ್ಲಿ ಬ್ರಹ್ಮನ ಲಕ್ಷಣವು ಸರ್ವಥಾ ಕೂಡದ ಕಾರಣ ಅಲೌಕಿಕವಾದದ್ದನ್ನು ಕಲ್ಪಿಸಬಾರದು. ಒಂದು ವೇಳೆ ರುದ್ರಾದಿಗಳೇ ವಿಷ್ಣುವಾದರೆ ಅಂತಹ ರುದ್ರಾದಿಗಳು ಸುಪ್ರಸಿದ್ಧರಾದ್ದರಿಂದ ಜಿಜ್ಞಾಸೆಯು ಕೂಡುವುದಿಲ್ಲ.

## ಭಗವಂತನೊಬ್ಬನೇ ಜಗತ್ಕಾರಣನಾಗಲಾರ

**ಭಾವದೀಪಃ – ಭಗವದೇಕೇತಿ ।। 'ಜನ್ಮಾದ್ಯಸ್ಯ' ಇತ್ಯತ್ರ ಕೃತ್ಸ್ನಜಗಜ್ಜನ್ಮಾದಿಕರ್ತೃತ್ವಸ್ಯ ವಿಷ್ಣುಲಕ್ಷಣತ್ವೇ ಅಸಮ್ಭವಾಪತ್ತ್ಯಾ ಕತಿಪಯಜಗಜ್ಜನ್ಮಾದಿಕರ್ತೃತ್ವೇ ಲಕ್ಷಣತ್ವೇನಾವಶ್ಯಂ ವಿವಕ್ಷಣೀಯೇ ಸತಿ ತದನ್ಯೇಷಾಮಿತಿ ಪ್ರಾಪ್ತಮಿತಿ ನ ಭಗವದೇಕನಿಷ್ಠತಾ ಇತಿ ಭಾವಃ ।**

''ಭಗವದೇಕನಿಷ್ಠತಾ'' ಎಂಬ ಭಾಗದಿಂದ 'ಜನ್ಮಾದ್ಯಸ್ಯ' ಎಂಬ ಸೂತ್ರದಲ್ಲಿ ಎಲ್ಲಾ ಜಗತ್ತನ್ನೂ ಸೃಷ್ಟಿಮಾಡಿರುವುದು ವಿಷ್ಣುವಿನ ಲಕ್ಷಣ ಎಂಬ ವಿಷಯದಲ್ಲಿ ಅಸಂಭವವು ಬರುವುದರಿಂದ ಜಗತ್ತಿನ ಕೆಲವೊಂದು ಭಾಗಗಳನ್ನು ಮಾತ್ರ ವಿಷ್ಣುವು ಸೃಷ್ಟಿಮಾಡುತ್ತಾನೆ ಎಂಬುದಾಗಿ ಅವಶ್ಯವಾಗಿ ಹೇಳಬೇಕಾಗಿರುವುದರಿಂದ ಈ ಅಂಶವು ವಿಷ್ಣುವಿಗಿಂತ ಇತರರಿಗೂ ಕೂಡ ಹೊಂದಿಕೆಯಾಗುವುದರಿಂದ ಭಗವದೇಕನಿಷ್ಠತೆಯು ಇಲ್ಲ ಎಂಬುದಾಗಿ ತಿಳಿದುಕೊಳ್ಳಬೇಕು.

ವಿಶೇಷ ವಿಚಾರ - ೧) 'ಮಹಾಕಲ್ಪತ್ವಮ್ ಕಲ್ಪತ್ವವ್ಯಾಪ್ಯಧರ್ಮೇಣ ಸ್ವಾಶ್ರಯಸಮಾನಜಾತೀಯಕಲ್ಪವೃತ್ತಿ ಆದಿಕರ್ತೃಭಿನ್ನಕರ್ತೃಕಾದಿಕಾರ್ಯವದ್‌ವೃತ್ತಿ ಕಲ್ಪತ್ವವ್ಯಾಪ್ಯತ್ವಾತ್ ಅವಾಂತರಕಲ್ಪತ್ವವತ್' ಬೇರೆ ಮನುಕಲ್ಪದ ಆದಿಕಾರ್ಯಕ್ಕೆ ಯಾರು ಕರ್ತೃವೋ, ಅವನಿಗಿಂತ ಭಿನ್ನನಾದ ಕರ್ತೃ ಈ ಮನುಕಲ್ಪದ ಆದಿಕಾರ್ಯಕ್ಕೆಂಬುದು ಸರ್ವಸಿದ್ಧವಾಗಿದೆ. ಅದರಂತೆ ಬೇರೆ ಮಹಾಕಲ್ಪದ ಆದಿಕಾರ್ಯಕ್ಕೆ ಯಾರು ಕರ್ತೃವೊ ಅವನಿಗಿಂತ ಭಿನ್ನನಾದವನು ಈ ಮಹಾಕಲ್ಪದ ಆದಿಕಾರ್ಯಕ್ಕೆ ಕರ್ತೃನಾಗಿದ್ದಾನೆಂದು ಸಾಧಿಸಲಾಗಿದೆ. ಈ ಅನುಮಾನದಿಂದ ಕರ್ತೃಭೇದ ಸಿದ್ಧವಾಗುತ್ತದೆ. ಹೀಗೆ ಮಹಾಕಲ್ಪದ ಭೇದದಿಂದ ಕರ್ತೃಭೇದಸಿದ್ಧವಾಗುವಂತೆ ಪಾಲಕಾದಿಭೇದವನ್ನೂ ಅನುಮಾನದಿಂದ ಸಾಧಿಸಬಹುದು. ಆದ್ದರಿಂದ ವಿಷ್ಣುವಿನ ಜನ್ಮಾದ್ಯಷ್ಟಕತ್ವಲಕ್ಷಣಕ್ಕೆ ರುದ್ರಾದಿಗಳಲ್ಲಿ ಅತಿವ್ಯಾಪ್ತಿ ಬರುತ್ತದೆ.

೨) 'ಜಗತ್‌ಸಂಹರ್ತೃತ್ವಮ್ ನ ಜಗತ್‌ಸ್ರಷ್ಟೈಕನಿಷ್ಠಮ್, ಸಂಹಾರಶಕ್ತಿತ್ವಾತ್ ಘಟಸಂಹಾರಶಕ್ತಿವತ್, ಘಟವನ್ನು ನಾಶಮಾಡುವ ಶಕ್ತಿ ಕುಂಬಾರನಲ್ಲೇ

ಇರಬೇಕೆಂದೇನು ನಿಯಮವಿಲ್ಲ. ಬೇರೆಯವರಲ್ಲಿಯೂ ಇರಬಹುದು. ಆದರಂತೆ ಸಂಹಾರಶಕ್ತಿಯೆನಿಸಿದ ಜಗತ್‌ಸಂಹಾರಶಕ್ತಿಯೂ ಜಗತ್ತನ್ನು ನಿರ್ಮಾಣಮಾಡಿದ ವಿಷ್ಣುವಿನಲ್ಲೇ ಇರಬೇಕೆಂದೇನು ನಿಯಮವಿಲ್ಲ. ರುದ್ರಾದಿಗಳಲ್ಲಿಯೂ ಬರಬಹುದು. ಈ ಅನುಮಾನದಿಂದ ಜಗತ್ತನ್ನು ನಿರ್ಮಿಸಿದವನೇ ಬೇರೆ ನಾಶಮಾಡುವವನೇ ಬೇರೆಂದು ಸಿದ್ಧವಾಯಿತು.

೩) ಮಹೀ-ಮಹೀಧರಾದಿ ನಾನಾಕರ್ತೃಕಮ್, ವಿಚಿತ್ರಕಾರ್ಯತ್ವಾತ್, ಪ್ರಾಸಾದಾದಿವತ್ (ಪ್ರಾಸಾದಾದಿಗಳು (ಮಹಡಿ ಮೊದಲಾದವು) ವಿಚಿತ್ರಕಾರ್ಯ-ಗಳಾಗಿವೆ. ಮತ್ತು ಅನೇಕ ವ್ಯಕ್ತಿಗಳಿಂದ ನಿರ್ಮಾಣವಾಗಿವೆ). ಆದರಂತೆ ಭೂಮಿ ಪರ್ವತಾದಿಗಳೂ ವಿಚಿತ್ರಕಾರ್ಯಗಳಾದ್ದರಿಂದ ಅನೇಕ ವ್ಯಕ್ತಿಗಳಿಂದ ನಿರ್ಮಾಣವಾಗಿರಲೇಬೇಕು. ಈ ಅನುಮಾನದಿಂದ ಒಂದೇ ಜಗತ್ತಿಗೆ ಅನೇಕಕರ್ತೃ-ಗಳಿದ್ದಾರೆಂದು ಸಾಧಿಸಿದಂತಾಯಿತು. ಆದ್ದರಿಂದ ಸಕಲಜಗತ್‌ಕಾರಣತ್ವವು ವಿಷ್ಣುವಿನ ಲಕ್ಷಣವೆಂದು ಹೇಳಿದರೆ, ಇದು ವಿಷ್ಣುವಿನಲ್ಲೂ ಇಲ್ಲದ ಕಾರಣ ಅಸಂಭವ. ಜಗತ್ತಿನ ಏಕದೇಶಕಾರಣತ್ವವನ್ನು ಲಕ್ಷಣವೆಂದು ಹೇಳಿದರೆ ರುದ್ರಾದಿಗಳಲ್ಲಿಯೂ ಬರುವುದರಿಂದ ಅತಿವ್ಯಾಪ್ತಿ.

ಪ್ರಶ್ನೆ - ಮೂರು ಅನುಮಾನಗಳಿಂದಲೂ ಅನೇಕರಿಗೆ ಜಗತ್ ಕರ್ತೃತ್ವವನ್ನು ಸಾಧಿಸಿದಿರಿ. ಇದರಿಂದ ಏಕದೇಶಜಗತ್‌ಕರ್ತೃತ್ವವನ್ನು ಬೇರೆಯವರಲ್ಲಿ ಹೇಳಿದಂತಾಯಿತೇ ಹೊರತು ಸಮಸ್ತಜಗತ್‌ಕರ್ತೃತ್ವವನ್ನು ಯಾರಲ್ಲಿಯೂ ಹೇಳಲಿಲ್ಲ. ಆದ್ದರಿಂದ ಸಕಲಜಗಜ್ಜನ್ಮಾದಿಕಾರಣತ್ವವೆಂಬ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಹೇಳಿದಂತಾಗಲಿಲ್ಲವಲ್ಲ?

ಉತ್ತರ - ಸಕಲಜಗಜ್ಜನ್ಮಾದಿಕಾರಣತ್ವವು ಯಾರಲ್ಲಿಯೂ ಇಲ್ಲದ ಕಾರಣ ವಿಷ್ಣುವಿನಲ್ಲೂ ಇಲ್ಲ. ಆದ್ದರಿಂದ ಅಸಂಭವ. ಏಕದೇಶಜಗತ್‌ಕರ್ತೃತ್ವವು ಬೇರೆಯವರಲ್ಲಿಯೂ ಬರುವುದರಿಂದ ಅತಿವ್ಯಾಪ್ತಿ. ಹೀಗೆ ವಿಕಲ್ಪ ಮಾಡಿಕೊಂಡು ಮೂರು ಅನುಮಾನಗಳಿಂದ ಅತಿವ್ಯಾಪ್ತಿ ಹೇಳಿದ್ದಾರೆ.

**भावदीपः – यथान्यासे विरोधादसङ्गतेश्चाह – कारणत्वेनेति शेष इति ।। कथमनेनोक्तार्थे हेतुरुक्तः? इत्यतो भाष्येऽनुक्तमपि 'शास्त्रैकसमधिगम्यत्वात्**

**कारणस्य' इति न्यायविवरणवाक्यमत्र संयोज्यम् इतिभावेन तदेव पठति – शास्त्रैकेति ।।**

ಭಾಷ್ಯದಲ್ಲಿ ಹೇಳಿದಷ್ಟೇ ಪದಗಳಿಗೆ ಅರ್ಥವನ್ನು ಹೇಳಹೊರಟರೆ ವಿರೋಧರೂಪ ದೋಷವು, ಅಭಿಧೇಯತ್ವ ಧರ್ಮದಿಂದ ಅನ್ಯರನ್ನೂ ಅನುಮಾನ ಮಾಡಬಹುದೆಂಬ ಅಸಂಗತಿರೂಪದೋಷವು ಬರಬಹುದು. ಅದಕ್ಕಾಗಿ 'ಕಾರಣತ್ವೇನ' ಎಂಬ ಅಂಶವನ್ನು ಶೇಷಪೂರಣೆ ಮಾಡಿಕೊಳ್ಳಬೇಕು. ''ಇಲ್ಲಿ ಬರಬಹುದಾದ ಹಿಂದೆ ಹೇಳಿದ ಅರ್ಥದ ವಿಷಯದಲ್ಲಿ ಯಾವ ಹೇತುವನ್ನು ತಿಳಿಸಿದಂತಾಗಿದೆ?' ಎಂಬ ಪ್ರಶ್ನೆಗೆ ಭಾಷ್ಯದಲ್ಲಿ ಉತ್ತರ ಹೇಳದಿದ್ದರೂ ನ್ಯಾಯವಿವರಣದಲ್ಲಿ ಹೇಳಿದ ವಾಕ್ಯವನ್ನು ಇಲ್ಲಿ ಸೇರಿಸಿಕೊಂಡು ಅರ್ಥ ಹೇಳಬೇಕು'' ಎಂಬ ಅಭಿಪ್ರಾಯದಿಂದ ''ಶಾಸ್ತ್ರೈಕಸಮಧಿಗಮ್ಯತ್ವಾತ್ ಕಾರಣಸ್ಯ'' ಎಂಬ ನ್ಯಾಯವಿವರಣವಾಕ್ಯವನ್ನೇ ಇಲ್ಲಿ ಬಳಸಿದ್ದಾರೆ.

## 'ಶಾಸ್ತ್ರೈಕ' ಎಂಬ ಪ್ರಯೋಗವು ಸಾಧುವೇ?

**भावदीपः –** वेदादिशास्त्रं च तदेकम् असहायं च शास्त्रैकं विशेषणविशेष्यभावस्य कामचारित्वात् सङ्ख्यावचनस्यैवैकशब्दस्य 'पूर्वकालैक' इति समासविधानात् । सूत्रे पूर्वत्र प्रकृतं कारणं कारणत्वस्येत्यनुवर्त्यं कारणवाचितयाऽध्याहृतं तत्पदं वा तस्येत्यनुवर्त्यमिति भावः । कचित् शास्त्रगम्यत्वस्यानुमानिकेपि दृष्टेर्व्यभिचार व्युदासायार्थ-लब्धस्याप्येकेत्यस्योक्तिः । अयं च सूत्रार्थोऽत्रापि भाष्ये सौत्रपदयो-र्विग्रहोक्त्यान्ते विवरिष्यते । अत्र च 'जगत्कर्ता नानुमानयोग्यः शास्त्रैकगम्यत्वात्' इत्यभिमतप्रयोगे धर्मादिदृष्टान्तः । तत्र 'चोदनालक्षणार्थो धर्मः' इति जैमिनिसूत्रात् शास्त्रैकगम्यत्वरूपहेतुसत्वं सिद्धं कृत्वा साध्यमुपपादयति – **न हीति ।।** चोदनैकप्रमाणकत्वभङ्गापत्तेरिति भावः ।

'ಶಾಸ್ತ್ರೈಕ' ಎಂಬಲ್ಲಿ ಶಾಸ್ತ್ರಶಬ್ದಕ್ಕೆ ವೇದಾದಿಗಳು ಎಂಬುದಾಗಿಯೂ, 'ಏಕ'ಶಬ್ದಕ್ಕೆ ಅಸಹಾಯ ಎಂಬುದಾಗಿಯೂ ಅರ್ಥವನ್ನಿಟ್ಟುಕೊಂಡು 'ಶಾಸ್ತ್ರಂ ಚ ತತ್ ಏಕಂ ಚ'

ಎಂಬುದಾಗಿ ವಿಗ್ರಹವನ್ನು ಮಾಡಬೇಕು. ಹೀಗೆ ವಿಗ್ರಹ ಮಾಡುವುದರಿಂದ 'ಬೇರೆ ಪ್ರಮಾಣಗಳ ಸಹಾಯವಿಲ್ಲದೆ ಅಂದರೆ ಕೇವಲ ವೇದಾದಿಶಾಸ್ತ್ರಗಳಿಂದ ಕಾರಣತ್ವವನ್ನು ತಿಳಿಯಬಹುದು' ಎಂಬುದಾಗಿ ಈ ವಾಕ್ಯಕ್ಕೆ ಅರ್ಥ ಹೇಳಬೇಕು. ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು. ಏಕಶಬ್ದವು ಶಾಸ್ತ್ರಶಬ್ದಕ್ಕೆ ವಿಶೇಷಣವಾಗಿದ್ದು ವಿಶೇಷಣಸೂಚಕವಾದ ಪದವು ಸಮಾಸವಾಕ್ಯದಲ್ಲಿ ಮೊದಲು ಬರಬೇಕು ಅಂದರೆ 'ಏಕಶಾಸ್ತ್ರಂ' ಎಂಬುದಾಗಿ ಸಮಾಸವಾಗಬೇಕು ಅಥವಾ, 'ಪೂರ್ವಕಾಲೈಕ' (೨/೧/೪೯) ಇತ್ಯಾದಿ ಪಾಣಿನಿಸೂತ್ರದಿಂದ ಏಕಶಬ್ದಕ್ಕೆ ಸಮಾಸದಲ್ಲಿ ಪೂರ್ವನಿಪಾತವಾಗಿರುವುದರಿಂದ 'ಏಕಶಾಸ್ತ್ರಂ' ಎಂಬುದಾಗಿಯೇ ಸಮಾಸವಾಗುವುದು ಉಚಿತವಾಗಿದೆ. ಇಲ್ಲಿ 'ಶಾಸ್ತ್ರೈಕಂ' ಎಂಬುದಾಗಿ ಸಮಾಸಮಾಡಿರುವುದು ಹೇಗೆ? ಅದಕ್ಕಾಗಿ ವಿಶೇಷಣವಿಶೇಷ್ಯಭಾವವು ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿರುವುದರಿಂದ ಇಲ್ಲಿ ಇದೇ ಶಬ್ದವನ್ನು ವಿಶೇಷಣ ಎಂದು ಹೇಳಬೇಕಾಗಿಲ್ಲ. ಮತ್ತು 'ಪೂರ್ವಕಾಲೈಕ' ಎಂಬ ಸೂತ್ರದಲ್ಲಿ ಸಂಖ್ಯಾವಾಚಕವಾದ ಏಕಶಬ್ದಕ್ಕೆ ಪೂರ್ವನಿಪಾತವನ್ನು ಹೇಳಿದ್ದರೂ ಇಲ್ಲಿ ಬಳಸಿದ ಏಕಶಬ್ದವು ಅಸಹಾಯ ಅಥವಾ ಕೇವಲ ಎಂಬ ಅರ್ಥವನ್ನು ಹೇಳುವುದರಿಂದ ಇಲ್ಲಿ ಪೂರ್ವನಿಪಾತವು ಆಗಬೇಕಿಲ್ಲ. ಆದ್ದರಿಂದ 'ಶಾಸ್ತ್ರೈಕಂ' ಎಂಬ ಪ್ರಯೋಗವು ಸರಿಯಾಗಿದೆ.

ಸೂತ್ರದಲ್ಲಿ ಈ ಹಿಂದೆ ಪ್ರಕೃತವಾದ 'ಕಾರಣ' ಎಂಬ ಅಂಶವನ್ನು 'ಕಾರಣತ್ವಸ್ಯ' ಎಂಬುದಾಗಿ ಅನುವೃತ್ತಿಮಾಡಿಕೊಳ್ಳಬೇಕು. ಅಥವಾ 'ತಸ್ಯ' ಎಂಬುದಾಗಿ ಕಾರಣ ಎಂಬ ಅರ್ಥವನ್ನು ತಿಳಿಸುವ 'ತತ್ ಎಂಬ ಪದವನ್ನು ಅನುವೃತ್ತಿ ಮಾಡಿಕೊಂಡು ಸೂತ್ರಕ್ಕೆ ಅರ್ಥವನ್ನು ಹೇಳಬೇಕು - ಎಂಬ ಅಭಿಪ್ರಾಯವನ್ನು ಇಲ್ಲಿ ತಿಳಿಸುತ್ತಿದ್ದಾರೆ. ಕೆಲವೊಂದು ಕಡೆ ಅನುಮಾನದಿಂದ ತಿಳಿಯಲ್ಪಡುವ ವಿಷಯವನ್ನು ಶಾಸ್ತ್ರದಿಂದಲೂ ತಿಳಿಯಲು ಸಾಧ್ಯವಾಗುವುದರಿಂದ ವ್ಯಭಿಚಾರ ಬರುವುದನ್ನು ನಿರಾಸಮಾಡುವುದಕ್ಕಾಗಿ 'ಶಾಸ್ತ್ರೈಕ' ಎಂಬುದಾಗಿ ಅರ್ಥಲಬ್ಧವಾದ ಏಕಶಬ್ದವನ್ನು ಇಲ್ಲಿ ಹೇಳಿದ್ದಾರೆ. ಈ ಸೂತ್ರಕ್ಕೆ ಅರ್ಥವನ್ನು ಸೂತ್ರಗತವಾದ ಪದಗಳಿಗೆ ವಿಗ್ರಹವನ್ನು ಹೇಳುವ ಮೂಲಕ ಭಾಷ್ಯದಲ್ಲಿಯೇ ಕೊನೆಗೆ ವಿವರಿಸಿದ್ದಾರೆ.

ಇಲ್ಲಿ 'ಜಗತ್ಕರ್ತಾ ನಾನುಮಾನಯೋಗ್ಯಃ ಶಾಸ್ತ್ರೈಕಗಮ್ಯತ್ವಾತ್' (ಶಾಸ್ತ್ರೈಕಗಮ್ಯ-ನಾಗಿರುವುದರಿಂದ ಜಗತ್ತಿಗೆ ಕರ್ತೃವಾಗಿರುವ ಬ್ರಹ್ಮನು ಅನುಮಾನಯೋಗ್ಯನಲ್ಲ) ಎಂಬ

ಅನುಮಾನಪ್ರಯೋಗವನ್ನು ಇಟ್ಟುಕೊಂಡು ಅಲ್ಲಿ ಧರ್ಮಾದಿಗಳನ್ನು ದೃಷ್ಟಾಂತತಯಾ ಇಟ್ಟುಕೊಳ್ಳಬೇಕು. ಈ ಧರ್ಮಾದಿಗಳಲ್ಲಿ 'ಚೋದನಾಲಕ್ಷಣಾರ್ಥೋ ಧರ್ಮಃ' ಎಂಬ ಜೈಮಿನಿಸೂತ್ರದಿಂದ ಶಾಸ್ತ್ರೈಕಗಮ್ಯತ್ವರೂಪವಾದ ಹೇತುವು ಇದ್ದೇ ಇದೆ ಎಂಬುದಾಗಿ ಸಿದ್ಧವತ್‌ಕೃತ್ಯ ಸಾಧ್ಯವನ್ನು ''ನ ಹಿ'' ಎಂಬುದಾಗಿ ವಿವರಿಸುತ್ತಿದ್ದಾರೆ.

''ಒಂದು ವೇಳೆ ಅನುಮಾನದಿಂದ ಧರ್ಮಾದಿಗಳು ನಿಶ್ಚಯವಾದರೆ ಚೋದನೈಕಪ್ರಮಾಣಕತ್ವವು ಧರ್ಮಾದಿಗಳಿಗೆ ಭಂಗವಾಗುವುದರಿಂದ ಅನುಮಾನದಿಂದ ಧರ್ಮಾದಿಗಳನ್ನು ತಿಳಿಯಲು ಸಾಧ್ಯವಿಲ್ಲ'' ಎಂಬ ಅಭಿಪ್ರಾಯವನ್ನು 'ನಹಿ' ಇತ್ಯಾದಿ ವಾಕ್ಯವು ಸ್ಪಷ್ಟಪಡಿಸುತ್ತದೆ.

ವಿಶೇಷ ವಿಚಾರ - ಸಿದ್ಧಾಂತ ಹೀಗಿದೆ - ಚಕ್ಷುರಿಂದ್ರಿಯವು ರೂಪವನ್ನಷ್ಟೇ ಗ್ರಹಿಸಲು ಸಮರ್ಥವಾಗಿದೆ. ರಸವನ್ನಾಗಲೀ, ಗಂಧವನ್ನಾಗಲೀ, ಶಬ್ದವನ್ನಾಗಲೀ ಗ್ರಹಿಸಲು ಸಮರ್ಥವಾಗಿಲ್ಲ. ಅದರಂತೆ ಅನುಮಾನವೂ ಕೂಡ ಪುಣ್ಯ ಪಾಪಾದಿ ಧರ್ಮಗಳನ್ನಾಗಲೀ, ಬ್ರಹ್ಮಾದಿದೇವತೆಗಳನ್ನಾಗಲೀ ಗ್ರಹಿಸಲು ಸಮರ್ಥವಾಗಿಲ್ಲ.

'ನಹಿ ಧರ್ಮಾದಿನಿಶ್ಚಯೋऽನುಮಾನೇನ' 'ಧರ್ಮಾದಿಗಳ ನಿಶ್ಚಯ ಅನುಮಾನದಿಂದ ಸಾಧ್ಯವಿಲ್ಲ' ಎಂಬ ಟೀಕೆಯಿಂದಲೇ 'ಮಹಾಕಲ್ಪತ್ವಮ್' ಇತ್ಯಾದಿ ಅನುಮಾನಗಳಿಗೆ ಶ್ರುತಿಬಾಧ ಹೇಳಿದ್ದಾರೆ. ಮತ್ತು ಆಗಮಾದಿಗಳ ಸಹಾಯವಿಲ್ಲದ ಅಂತಹ ಅನುಮಾನಗಳಿಂದ ಏನನ್ನು ಬೇಕಾದರೂ ಸಾಧಿಸಬಹುದು. 'ಶಶಾದೀನಾಂ ವಿಷಾಣಿತ್ವಾದೌ ಚ ಕರ್ತುಂ ಶಕ್ಯತ್ವಾತ್' 'ಮೊಲಕ್ಕೆ ಕೊಂಬು ಇದೆಯೆಂದೂ ಸಾಧಿಸಬಹುದು' ಹೀಗೆ ಟೀಕೆಯಲ್ಲಿ ಅತಿಪ್ರಸಂಗ ಹೇಳಿದ್ದಾರೆ. ಮತ್ತು ಅನೇಕವಿಧ ಅತಿಪ್ರಸಂಗಗಳನ್ನು ಅನುವ್ಯಾಖ್ಯಾನದಲ್ಲೂ ಹೇಳಿದ್ದಾರೆ.

'ಶೃಙ್ಗಂ, ಶೃಂಗೀ, ವಸ್ತುತ್ವಾತ್' 'ವಸ್ತುವಾದ್ದರಿಂದ ಕುದುರೆಗೆ ಕೊಂಬು ಇದೆ'. 'ಖಮ್, ಪುಷ್ಪವತ್, ವಸ್ತುತ್ವಾತ್' 'ವಸ್ತುವಾದ್ದರಿಂದ ಆಕಾಶವು ಹೂ ಬಿಟ್ಟಿದೆ.' 'ಚಿತ್ರಿಣೀ ಸುತೈರ್ಯುತಾ ಸ್ತ್ರೀತ್ವಾತ್' 'ಬಂಜೆಯು ಸ್ತ್ರೀಯಾದ್ದರಿಂದ ಮಕ್ಕಳುಳ್ಳವಳಾಗಿದ್ದಾಳೆ'. 'ಷಷ್ಠಃ ರಸಃ ಸೋತ್ತರಃ ರಸತ್ವಾತ್' ರಸವಾದ್ದರಿಂದ ಆರನೆಯ ರಸವು ಐಳನೆಯ ರಸದಿಂದ ಕೂಡಿದೆ. ಹೀಗೆಲ್ಲ ಅನುಮಾನದಿಂದ ಸಾಧಿಸಬೇಕಾಗುತ್ತದೆ.

ಮತ್ತು 'ನಾವೇದವಿತ್' ಇತ್ಯಾದಿ ಶ್ರುತಿಯು ಜಗತ್‌ಕಾರಣವಿಷಯದಲ್ಲಿ ಅನುಮಾನವು ಪ್ರಮಾಣವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದೆ. ಆದ್ದರಿಂದ ಜಗತ್‌ಕಾರಣವಿಷಯದಲ್ಲಿ ಅನುಮಾನವು ಪ್ರಮಾಣವಾಗುವುದಿಲ್ಲ.

## ಪೂರ್ವಪಕ್ಷಿಗಳ ಅನುಮಾನಕ್ಕೆ ಬಾಧ

**भावदीपः – 'ऋग्यजुः' इत्यादिस्मृत्या शास्त्रशब्दितस्य सर्वस्य विष्णौ प्रामाण्येपि 'अन्यार्थं तु जैमिनिः' इत्यादावपरममुख्यवृत्त्या धर्मादावपि प्रामाण्योपगमान्न तत्र साधनवैकल्यं शङ्क्यम् ।**

**'ऋगाद्या अपरा विद्या यदा विष्णोर्न वाचकाः ।**
**ता एव तु परामा विद्या यदा विष्णोस्तु वाचकाः ।।'**

**इत्याथर्वणभाष्योक्तेः । एतेन पूर्वपक्ष्यभिमतकार्यत्वादनुमानस्य बाधितविषयत्वं सूचितम् ।**

ಮುಂದೆ ಭಾಷ್ಯದಲ್ಲಿ ಹೇಳುವ 'ಋಗ್‌ಯಜುಃ' ಇತ್ಯಾದಿ ಸ್ಮೃತಿಯಿಂದ ಶಾಸ್ತ್ರಶಬ್ದದಿಂದ ಹೇಳಲ್ಪಡುವ ಎಲ್ಲವೂ ಕೂಡ ವಿಷ್ಣುವಿನಲ್ಲಿ ಪ್ರಮಾಣವಾಗಿದ್ದರೂ ''ಅನ್ಯಾರ್ಥಂ ತು ಜೈಮಿನಿಃ'' ಇತ್ಯಾದಿ ಬ್ರಹ್ಮಸೂತ್ರದಲ್ಲಿ ಧರ್ಮಾದಿಗಳಲ್ಲೂ ಪ್ರಾಮಾಣ್ಯವನ್ನು ಒಪ್ಪಿಕೊಂಡಿರುವುದರಿಂದ ಅಲ್ಲಿ ಹೇತುವಿಲ್ಲ ಎಂಬ ಶಂಕೆಯನ್ನು ಕಾಣಬಾರದು. ಧರ್ಮಾದಿಗಳಲ್ಲಿ ಮುಖ್ಯವೃತ್ತಿಯಿಂದ ಶಾಸ್ತ್ರವು ಪ್ರಮಾಣವಾಗಿದ್ದರೆ ಪರಮಮುಖ್ಯ-ವೃತ್ತಿಯಿಂದ ವಿಷ್ಣುವಿನಲ್ಲಿ ಪ್ರಮಾಣವಾಗಿದೆ. ಹೀಗೆ ವ್ಯತ್ಯಾಸವನ್ನು ಕಂಡುಕೊಳ್ಳಬೇಕು. ಇದನ್ನೇ ಆಥರ್ವಣಭಾಷ್ಯದಲ್ಲಿ ಹೇಳಿದ್ದಾರೆ.

ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ।
ತಾ ಏವ ತು ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ।।'

ಋಗಾದಿಶಾಸ್ತ್ರಗಳು ಯಾವ ಸಂದರ್ಭದಲ್ಲಿ ವಿಷ್ಣುವನ್ನೇ ತಿಳಿಸುವುದಿಲ್ಲವೋ ಅಂತಹ ಸಂದರ್ಭದಲ್ಲಿ ಅವುಗಳನ್ನು ಅಪರವಿದ್ಯೆಯೆಂಬುದಾಗಿ ಗ್ರಹಿಸಬೇಕು. ಕೇವಲ ವಿಷ್ಣುವನ್ನು

ಯಾವಾಗ ತಿಳಿಸುತ್ತವೋ ಅಂತಹ ಸಂದರ್ಭದಲ್ಲಿ ಅದೇ ಋಗಾದಿಶಾಸ್ತ್ರಗಳು ಪರವಿದ್ಯೆ ಎಂಬುದಾಗಿ ಗ್ರಹಿಸಬೇಕು.

ಇದರಿಂದಾಗಿ ('ಚೋದನಾರ್ಥೋ' ಎಂದು ಪ್ರಾರಂಭಿಸಿ ಹೇಳಿದ ವಿಷಯದಿಂದ) ಪೂರ್ವಪಕ್ಷಿಗಳಿಗೆ ಅಭಿಮತವಾದ ಕಾರ್ಯತ್ವಾದಿ ಅನುಮಾನವು ಬಾಧಿತವಿಷಯವುಳ್ಳದ್ದು ಎಂಬುದಾಗಿ ಸೂಚಿಸಿದ್ದಾರೆ.

## ಟೀಕೆಯಲ್ಲಿರುವ ಕಠಿಣಪದಗಳ ಅರ್ಥ

**ಭಾವದೀಪಃ –** 'सर्वानुभूम्' इत्यस्य सर्वमनुभवति अनुभावयति उत्पादयति चेत्यर्थद्वयमुपेत्याह – **सर्वज्ञं सर्वकर्तारमिति ।।** 'आत्मानम्' इत्यस्य 'स्वामिनम्' इत्यर्थः । 'सर्वे'ति योग्यतयोक्तम् । सम्यक् परस्मिन्नयनं साम्परायः । तादर्थ्ये सप्तमी । 'चर्मणि द्वीपिनं हन्ति' इत्यादिवदित्युपेत्याह – **मोक्षायेति ।।** प्रकृतोपयोगमाह – **पुरुषो जगत्कर्तेति ।।** 'जगृहे पौरुषं रूपमादौ लोकसिसृक्षया' इत्यादेरिति भावः ।

'ಸರ್ವಾನುಭೂಮ್' ಎಂಬಲ್ಲಿ 'ಸರ್ವಮ್ ಅನುಭವತಿ ಸರ್ವಮ್ ಅನುಭಾವಯತಿ' ಹೀಗೆ ಎರಡು ಅರ್ಥವನ್ನು ತೆಗೆದುಕೊಂಡು, 'ಅನುಭಾವಯತಿ' ಎಂಬ ಪದಕ್ಕೆ 'ಉತ್ಪಾದಯತಿ' ಎಂಬುದಾಗಿ ಅರ್ಥವನ್ನು ಗ್ರಹಿಸಿ, ಅರ್ಥವನ್ನು ಹೇಳಬೇಕು. ಇದನ್ನು 'ಸರ್ವಜ್ಞಂ ಸರ್ವಕರ್ತಾರಂ' ಇತ್ಯಾದಿ ಅಂಶಗಳಿಂದ ವಿವರಿಸಿದ್ದಾರೆ. 'ಆತ್ಮಾನಮ್' ಎಂಬ ಪದಕ್ಕೆ 'ಸ್ವಾಮಿಯನ್ನು' ಎಂಬುದಾಗಿ ಅರ್ಥ. ಸರ್ವಕ್ಕೂ ಸ್ವಾಮಿಯಾಗುವ ಯೋಗ್ಯತೆಯಿರುವುದರಿಂದ 'ಸರ್ವಸ್ವಾಮಿನಮ್' ಎಂಬುದಾಗಿ ಅರ್ಥವನ್ನು ಬಿಡಿಸಿದ್ದಾರೆ. 'ಸಾಂಪರಾಯ'ಶಬ್ದಕ್ಕೆ 'ಸಮ್ಯಕ್ ಪರಸ್ಮಿನ್ನಯನಮ್' ಎಂಬುದಾಗಿ ವಿಗ್ರಹಮಾಡಿಕೊಂಡು ಮೋಕ್ಷ ಎಂಬ ಅರ್ಥವನ್ನು ಗ್ರಹಿಸಬೇಕು. ಈ ಸಾಂಪರಾಯಶಬ್ದದಲ್ಲಿ ಸಪ್ತಮೀವಿಭಕ್ತಿಯನ್ನು 'ತಾದರ್ಥ್ಯ' ಎಂಬ ಅರ್ಥದಲ್ಲಿ ಗ್ರಹಿಸಬೇಕು. ಈ ಅರ್ಥವು 'ಚರ್ಮಣಿ ದ್ವೀಪಿನಂ ಹಂತಿ' ಇತ್ಯಾದಿ ಕಡೆಗಳಲ್ಲಿ ಪ್ರಸಿದ್ಧವಾಗಿದೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ''ಮೋಕ್ಷಾಯ'' (ಮೋಕ್ಷಕ್ಕೋಸ್ಕರ) ಎಂದು ಅರ್ಥವನ್ನು ಟೀಕೆಯಲ್ಲಿ ಹೇಳಿದ್ದಾರೆ.

ಸಾಂಪರಾಯೇ ಎಂಬ ಶಬ್ದಕ್ಕೆ ಮೋಕ್ಷಕ್ಕೋಸ್ಕರ ಎಂದರ್ಥ. ಚೆನ್ನಾಗಿ ಮತ್ತೊಂದೆಡೆ ಹೋಗುವಿಕೆಯೇ ಸಂಪರಾಯ. ಸಂಪರಾಯವೇ ಸಾಂಪರಾಯ ಎನಿಸುತ್ತದೆ. ಚತುರ್ಥೀವಿಭಕ್ತ್ಯರ್ಥದಲ್ಲಿ ಸಪ್ತಮೀ ಪ್ರಯೋಗವಿದೆ.

ಭಾಷ್ಯದಲ್ಲಿ ಹೇಳಿದ 'ಔಪನಿಷದಃ ಪುರುಷಃ' ಎಂಬಲ್ಲಿ ಪುರುಷಶಬ್ದಕ್ಕೆ ಬೇರೆ ಅರ್ಥಗಳು ಇದ್ದರೂ ಈ ಸೂತ್ರದ ಪ್ರಸಂಗದಲ್ಲಿ 'ಜಗತ್ಕರ್ತಾ' ಎಂಬ ಅರ್ಥವು ಉಪಯುಕ್ತವಾಗಿದೆ ಎಂಬ ಅಭಿಪ್ರಾಯದಿಂದ 'ಪುರುಷೋ ಜಗತ್ಕರ್ತಾ' ಎಂಬುದಾಗಿ ಅರ್ಥವನ್ನು ಬಿಡಿಸಿದ್ದಾರೆ. ಈ ಅರ್ಥವು 'ಜಗೃಹೇ ಪೌರುಷಂ ರೂಪಮಾದೌ ಲೋಕಸಿಸೃಕ್ಷಯಾ' (ಭಗವಂತನು ಸೃಷ್ಟಿಯ ಆದಿಭಾಗದಲ್ಲಿ ಲೋಕವನ್ನು ಸೃಷ್ಟಿಮಾಡುವ ಇಚ್ಛೆಯಿಂದ ಪುರುಷರೂಪವನ್ನು ಸ್ವೀಕಾರ ಮಾಡಿದನು) ಇತ್ಯಾದಿ ಕಡೆಗಳಲ್ಲಿ ಸ್ಪಷ್ಟವಾಗಿದೆ.

## ಶುಷ್ಕತರ್ಕಕ್ಕೆ ಜೋತುಬೀಳಬೇಡಿ

**ಬ್ರಹ್ಮಸೂತ್ರಭಾಷ್ಯಮ್ – ನ ಚಾನುಮಾನಸ್ಯ ನಿಯತಪ್ರಾಮಾಣ್ಯಮ್ ।**

**'ಶ್ರುತಿಸಾಹಾಯ್ಯರಹಿತಮನುಮಾನಂ ನ ಕುತ್ರಚಿತ್ ।**
**ನಿಶ್ಚಯಾತ್ ಸಾಧಯೇದರ್ಥಂ ಪ್ರಮಾಣಾನ್ತರಮೇವ ಚ ।।**

**ಶ್ರುತಿಸ್ಮೃತಿಸಹಾಯಂ ಯತ್ ಪ್ರಮಾಣಾನ್ತರಮುತ್ತಮಮ್ ।**
**ಪ್ರಮಾಣಪದವೀಂ ಗಚ್ಛೇನ್ನಾತ್ರ ಕಾರ್ಯಾ ವಿಚಾರಣಾ ।**
**ಪೂರ್ವೋತ್ತರಾವಿರೋಧೇನ ಕೋऽತ್ರಾರ್ಥೋऽಭಿಮತೋ ಭವೇತ್ ।**
**ಇತ್ಯಾಯಮೂಹನಂ ತರ್ಕಃ ಶುಷ್ಕತರ್ಕಂ ತು ವರ್ಜಯೇತ್ ।।' ಇತ್ಯಾದಿ ಮಹಾಕೌರ್ಮೇ ।**

**ಶಕ್ಯತ್ವಾಚ್ಚಾನುಮಾನಾಂ ಸರ್ವತ್ರ ।**

**'ಸರ್ವತ್ರ ಶಕ್ಯತೇ ಕರ್ತುಮಾಗಮಂ ಹಿ ವಿನಾऽನುಮಾ ।**
**ತಸ್ಮಾನ್ನ ಸಾ ಶಕ್ತಿಮತೀ ವಿನಾऽऽಗಮಮುದೀಕ್ಷಿತುಮ್ ।।' ಇತಿ ವಾರಾಹೇ ।**

ಭಾಷ್ಯಾರ್ಥ -- ಅನೇಕವಿಧವಾದ ಅನುಮಾನಗಳಿಗೆ ಅತೀಂದ್ರಿಯವಿಷಯದಲ್ಲಿ ನಿಯಮೇನ ಪ್ರಾಮಾಣ್ಯವಿರುವುದಿಲ್ಲ.

"ವೇದದ ಸಹಾಯವಿಲ್ಲದ ಅನುಮಾನವು ಯಾವುದೇ ಅತೀಂದ್ರಿಯ ವಿಷಯದಲ್ಲಿ ನಿಶ್ಚಾಯಕವಾಗಿ ಪ್ರಮೇಯವನ್ನು ಸಾಧಿಸುವುದಿಲ್ಲ. ಆದರೆ ಶ್ರುತಿಸ್ಮೃತಿ ಸಹಾಯ ಹೊಂದಿರುವ

ಅನುಮಾನವು ನಿರ್ದುಷ್ಟಪ್ರಮಾಣವಾಗುತ್ತದೆ. ಪ್ರತ್ಯಕ್ಷಪ್ರಮಾಣವೂ ಸಹ ಶ್ರುತಿಸ್ಮೃತಿ ಸಹಾಯ ಹೊಂದಿದ್ದಲ್ಲಿ ಅತೀಂದ್ರಿಯ ವಿಷಯದಲ್ಲಿ ಉತ್ತಮಪ್ರಮಾಣವೇ ಎನಿಸಿ ಶ್ರೇಷ್ಠವಾದ ಪ್ರಮಾಣಪಂಕ್ತಿಯನ್ನು ಹೊಂದುತ್ತದೆ. ಈ ವಿಷಯದಲ್ಲಿ ವಿಚಾರ ಮಾಡಬೇಕಾಗಿಲ್ಲ. ಉಪಕ್ರಮ ಮತ್ತು ಉಪಸಂಹಾರಗಳಿಗೆ ಆಪಾತತಃ ವಿರೋಧ ಕಂಡರೂ; ವಿರೋಧಬಾರದಂತೆ ಜ್ಞಾನಿಗಳಿಗೆ ಸಮ್ಮತವಾದ ಅರ್ಥವು ಯಾವುದು? ಇತ್ಯಾದಿ ವಿಷಯಗಳನ್ನು ಉಪಯುಕ್ತವಾಗುವಂತೆ ಊಹಿಸುವುದೇ 'ತರ್ಕ' ಎನಿಸುತ್ತದೆ. ಶುಷ್ಕತರ್ಕವನ್ನು ಪರಿತ್ಯಾಗ ಮಾಡಬೇಕು.''; ಇವೇ ಮೊದಲಾದ ವಿಷಯಗಳನ್ನು ಮಹಾಕೂರ್ಮಪುರಾಣದಲ್ಲಿ ಹೇಳಲಾಗಿದೆ.

''ಪ್ರತ್ಯಕ್ಷ, ಶ್ರುತಿವಿರುದ್ಧವಾದ ಅರ್ಥದಲ್ಲಿಯೂ ಅನುಮಾನವನ್ನು ಮಾಡಲು ಬರುತ್ತದೆ. ಆದ್ದರಿಂದ ಅನುಮಾನವನ್ನು ಆಶ್ರಯಿಸಬಾರದು'' ಎಂದು ವರಾಹಪುರಾಣಹೇಳುತ್ತದೆ.

ಆಗಮವಿರುದ್ಧವಾದ ಯಾವುದೇ ವಿಷಯದಲ್ಲಿಯೂ ಅನುಮಾನವನ್ನು ಪ್ರಯೋಗಿಸ-ಬಹುದು. ಆದ್ದರಿಂದ ಆಗಮಸಹಾಯವಿಲ್ಲದ ಅನುಮಾನವು ಅತೀಂದ್ರಿಯವಿಷಯವನ್ನು ತಿಳಿಸಲು ಸಮರ್ಥವಾಗುವುದಿಲ್ಲ.

ಪ್ರತಿಪದಾರ್ಥ -- ಜಗತ್ಕಾರಣತ್ವವು ವೇದಪ್ರತಿಪಾದ್ಯವಾಗಿದ್ದರೂ ಅನುಮಾನದಿಂದೇಕೆ ಸಿದ್ಧವಾಗಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಅನುಮಾನಸ್ಯ = ಸಕಲವಿಧ ಯುಕ್ತಿಸಮುದಾಯಕ್ಕೆ, ನಿಯತಪ್ರಾಮಾಣ್ಯಂ = ಅತೀಂದ್ರಿಯವಿಷಯದಲ್ಲಿ ನಿಯಮೇನ ಪ್ರಾಮಾಣ್ಯವು, ನ ಚ = ಇರುವುದಿಲ್ಲ.

ಶ್ರುತಿಸಾಹಾಯ್ಯರಹಿತಮ್ = ಶ್ರುತಿಸಹಾಯವಿಲ್ಲದಿರುವ, ಅನುಮಾನಂ = ಯುಕ್ತಿಯು, ಕುತ್ರಚಿತ್ = ಯಾವುದೇ ಅತೀಂದ್ರಿಯವಿಷಯದಲ್ಲಿ, ನಿಶ್ಚಯಾತ್ = ಇದಮಿತ್ಥಂ ಎಂದು ನಿರ್ಧಾರವಾಗಿ, ಅರ್ಥಂ = ಪ್ರಮೇಯವನ್ನು, ನ ಸಾಧಯೇತ್ = ಸಾಧಿಸಲಾರದು. ಚ = ಮತ್ತು, ಪ್ರಮಾಣಾಂತರಮೇವ = ಶ್ರುತಿಸಹಾಯವಿಲ್ಲದ ದೋಷಗ್ರಾಹಿಯಾದ ಮಾನುಷಪ್ರತ್ಯಕ್ಷವು ನಿಯಮೇನ ಅತೀಂದ್ರಿಯಾರ್ಥವನ್ನು ಸಾಧಿಸುವುದಿಲ್ಲ[೧].

(೧) ಔಪನಿಷದಸ್ಯಾಪಿ ಕಾರಣಸ್ಯಾನುಮಾನೇನ ಸಿದ್ಧಿಃ ಕಿಂ ನ ಸ್ಯಾದಿತ್ಯತ ಆಹ - ನಚೇತಿ ।। ಚೋऽವಧಾರಣೇ । ತಥಾ ಚ - 'ಅನುಮಾನಸ್ಯ' ಅನುಮಾನಮಾತ್ರಸ್ಯ 'ಪ್ರಾಮಾಣ್ಯಮ್' ಅತೀನ್ದ್ರಿಯಾರ್ಥಪ್ರಮಾಪಕತ್ವಂ
ಶಾಸ್ತ್ರಯೋನಿತ್ವಾಧಿಕರಣ (೧-೧-೩)

ಎಂತಹ ಪ್ರತ್ಯಕ್ಷ ಮತ್ತು ಅನುಮಾನಗಳು ಅರ್ಥನಿಶ್ಚಾಯಕಗಳಾಗುತ್ತವೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಯತ್ = ಯಾವ ಅನುಮಾನವು, ಶ್ರುತಿಸ್ಮೃತಿಸಹಾಯಂ = ಶ್ರುತಿಸ್ಮೃತಿಯನ್ನು ಅವಲಂಬಿಸಿದೆಯೋ, ತತ್ = ಆ ಅನುಮಾನವು, ಉತ್ತಮಂ = ನಿರ್ದುಷ್ಟಪ್ರಮಾಣವು, ಪ್ರಮಾಣಾಂತರಂ = ಪ್ರತ್ಯಕ್ಷಪ್ರಮಾಣವು, ಯತ್ = ಯಾವ ಅತೀಂದ್ರಿಯವಿಷಯದಲ್ಲಿ, ಶ್ರುತಿಸ್ಮೃತಿಸಹಾಯಂ = ಶ್ರುತಿಸ್ಮೃತಿಸಹಾಯವಿದ್ದಲ್ಲಿ, ಉತ್ತಮಂ = ಶ್ರೇಷ್ಠವಾದ, ಪ್ರಮಾಣಂ = ಪ್ರಮಾಣವಾಗಿ, ಪ್ರಮಾಣಪದವೀಂ = ಪ್ರಮಾಣಪಂಕ್ತಿಯನ್ನು, ಗಚ್ಛೇತ್ = ಹೊಂದುತ್ತದೆ. ಅತ್ರ = ಈ ವಿಷಯದಲ್ಲಿ, ವಿಚಾರಣಾ = ವಿಚಾರವು, ನ ಕಾರ್ಯಾ = ಮಾಡಬೇಕಾಗಿಲ್ಲ.

'ವ್ಯಾಪ್ಯಾರೋಪೇಣ ವ್ಯಾಪಕಾರೂಪಸ್ತರ್ಕಃ' ಎಂಬ ಅನ್ಯಥಾ-ಪ್ರತೀತಿಯನ್ನು ನಿರಾಕರಿಸುವುದಕ್ಕಾಗಿ ತರ್ಕಸ್ವರೂಪವನ್ನು ಹೇಳುತ್ತಿದ್ದಾರೆ.

---

नेत्यर्थः । तथा च – न तेनान्यस्य जगत्कर्तृतासाधनं युक्तमिति भावः । ननु कथमेतत् 'सर्वधर्मोपपत्तेश्च' (सू. २-१-३८) इत्यधिकरणे स्वातन्त्र्यादिहेतुना विष्णोः पूर्णत्वादिसिद्धचङ्गीकारादित्यत उक्तम् – 'नियत' इति । इदं च स्वातन्त्र्यार्थकं प्रमाण-रूपप्रकृत्यर्थविशेषणम् । अनुमानस्येति हेतुगर्भम् । तथा च - अनुमानत्वादेव न तस्य स्वातन्त्र्येणादृष्टार्थनिश्चायकत्वं, प्रतिपक्षादिसम्भवात्, किन्त्वस्वातन्त्र्येण । स्वातन्त्र्यं च सहायराहित्यम् । तच्च न स्वातन्त्र्यादिहेतावस्ति श्रुतिसहितत्वात् । पूर्वपक्ष्याशङ्कित-सर्वज्ञत्वकार्यत्वाद्यनुमानस्य तु श्रुतिसाहाय्यरहितत्वेन स्वतन्त्रत्वान्न प्रमाणत्वमिति भावः ।।

कुतो नानुमानस्य नियतप्रामाण्यमित्यत आह – **'श्रुति' इति ।** स्मृतेरप्युपलक्षकमेतत् । अत्र सहायशब्दो मूलवाची । तस्मात् स्वार्थे ष्यञ् । श्रुतिश्च तत्साहाय्यं चेति कर्मधारयः, ततस्तेन रहितमिति तत्पुरुषः । श्रुत्यनुग्राह्यत्वरहितमिति यावत् । चः समुच्चये । एवशब्दो भिन्नक्रमः । तथा च- 'कुत्रचित्' अस्मादाद्यदृष्टे श्रौतेऽर्थे 'श्रुतिसाहाय्यरहितमनुमानम्' ईश्वरो न स्वतन्त्रः चेतनत्वादित्यादि लिङ्गम्, तथा यज्ञहिंसाऽधर्मत्वानुमानं च तथा 'प्रमाणान्तरम्' अनुमानादन्यद् रामकृष्णादिदोषग्राहि मानुषत्वग्राहि च प्रत्यक्षं 'निश्चयात्' स्फुटमतीन्द्रियार्थं 'न साधयेत्' इति योजना ।।

यद्वा - अर्थं निश्चयान्न साधयेन्न साधयेदेवेत्यर्थः । उक्तं हि गीताभाष्ये - 'स निश्चयेन योक्तव्यः योक्तव्य एव बुभूषुणेत्यर्थः' इति । उक्तं हि प्रमेयदीपिकायाम् - 'अयोगव्यवच्छेदे निश्चयशब्दः' इति ।।

ಪೂರ್ವೋತ್ತರಾವಿರೋಧೇನ = ಉಪಕ್ರಮ, ಉಪಸಂಹಾರಗಳಲ್ಲಿ ವಿರೋಧಬಾರದಂತೆ, ಕಃ = ಯಾವ, ಅರ್ಥಃ = ಅರ್ಥವು, ಅಭಿಮತಃ = ಜ್ಞಾನಿಗಳಿಗೆ ಸಮ್ಮತವು, ಭವೇತ್ = ಆಗುತ್ತದೋ; ಇತ್ಯಾದ್ಯಮ್ = ಇವೇ ಮೊದಲಾದ ವಿಷಯಗಳನ್ನು, ಊಹನಂ = ಊಹಿಸುವುದೇ, ತರ್ಕಃ = ಯುಕ್ತಿಯು, ಶುಷ್ಕತರ್ಕಂ ತು = ಶ್ರುತಿಸ್ಮೃತಿಸಹಾಯವಿಲ್ಲದ ಶುಷ್ಕತರ್ಕವನ್ನಾದರೋ, ವರ್ಜಯೇತ್ = ಪರಿತ್ಯಾಗ ಮಾಡಬೇಕು. ಇತ್ಯಾದಿ = ಈ ವಿಚಾರಗಳನ್ನು, ಮಹಾಕೌರ್ಮೇ = ಮಹಾಕೂರ್ಮ-ಪುರಾಣದಲ್ಲಿ ಹೇಳಲ್ಪಟ್ಟವೆ.

ಶ್ರುತ್ಯಾದಿಗಳ ಸಹಾಯವಿಲ್ಲದ ಅನುಮಾನವು ಪ್ರಮಾಣವಿಲ್ಲವೆನಿಸಲು ಅನೇಕ ಸಾಧಕಗಳಿವೆ. ಅಷ್ಟೇ ಅಲ್ಲ ಅಂತಹ ಅನುಮಾನವು ಪ್ರಮಾಣವಾಗಲು ಬಾಧಕವನ್ನು ತೋರಿಸುತ್ತಿದ್ದಾರೆ. ಅನುಮಾನಾಮ್ = ಅನುಮಾನಗಳಿಗೆ, ಸರ್ವತ್ರ = ಶ್ರುತ್ಯಾದಿಸಹಕಾರವಿಲ್ಲದೆಡೆಯೂ, ಶಕ್ಯತ್ವಾಚ್ಚ = ಸ್ವೇಚ್ಛೆಯಿಂದ ಪ್ರಯೋಗಿಸಲು ಬರುವುದರಿಂದ ಪ್ರಮಾಣಗಳಲ್ಲ.

ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಿದ್ದಾರೆ. "ಹಿ = ಯಾವ ಕಾರಣದಿಂದ, ಆಗಮಂ ವಿನಾ = ಶ್ರುತಿಸ್ಮೃತಿಗಳನ್ನು ಬಿಟ್ಟು, ಅನುಮಾ = ದುಷ್ಟವಾದ ಅನುಮಾನವು, ಸರ್ವತ್ರ = ಎಲ್ಲೆಡೆಯೂ, ಕರ್ತುಂ = ಪ್ರಯೋಗಿಸಲು, ಶಕ್ಯತೇ = ಶಕ್ಯವಾಗುತ್ತದೆ. ತಸ್ಮಾತ್ = ಆ ಕಾರಣದಿಂದ, ಸಾ = ಅನುಮಾನವು, ಆಗಮಂ ವಿನಾ = ಶ್ರುತಿಯ ಸಹಕಾರವಿಲ್ಲದೆ, ಉದೀಕ್ಷಿತುಮ್ = ಅತೀಂದ್ರಿಯವಿಷಯವನ್ನು ಪ್ರತಿಪಾದಿಸುವುದರಲ್ಲಿ, ನ ಶಕ್ತಮಿತೀ = ಸಮರ್ಥವಾಗುವುದಿಲ್ಲ. ಇತಿ = ಹೀಗೆ, ವಾರಾಹೇ = ವರಾಹಪುರಾಣದಲ್ಲಿ ಹೇಳಲ್ಪಟ್ಟಿದೆ.

## ಅದೃಷ್ಟಾರ್ಥದಲ್ಲಿ ಅನುಮಾನವು ಪ್ರತ್ಯಕ್ಷದಂತೆ ದುಷ್ಟವಾಗಿದೆ

**तत्त्वप्रकाशिका –**

**औपनिषदस्यादि कारणस्यानुमानेन सिद्धिः किं न स्यात् स्वातन्त्र्यादिहेतुना पूर्णत्वादिसिद्ध्यङ्गीकारादित्यत आह – न चेति ।। सत्यमस्त्येव अनुमानस्यौपनिषदपदार्थनिश्चायकत्वं श्रुत्यादिसहकारियुक्तस्यैव न तु नियतप्रामाण्यम् ।**

**स्वातन्त्र्येणादृष्टार्थनिश्चायकत्वे प्रतिपक्षादिसम्भवात् । तादृशं च प्रकृतमिति भावः । अत्रैव स्मृतिसम्मतिमाह – श्रुतीति ।। कुत्रचिददृष्टे । यथा 'ईश्वरो न स्वतन्त्रश्चेतनत्वात्' इति । प्रमाणान्तरं प्रत्यक्षं यथा रामकृष्णादिदोषग्राहि ।**

'ಉಪನಿಷತ್ತುಗಳಿಂದ ಪ್ರತಿಪಾದ್ಯನಾದ ಜಗತ್ಕಾರಣನನ್ನು ಅನುಮಾನದಿಂದ ಏಕೆ ತಿಳಿಯಬಾರದು? ಸ್ವಾತಂತ್ರ್ಯ ಮೊದಲಾದ ಕಾರಣಗಳಿಂದ ಪೂರ್ಣತ್ವಮೊದಲಾದ ಭಗವಂತನ ಗುಣಗಳನ್ನು ಸಾಧಿಸಬಹುದಲ್ಲವೇ? ಎಂಬ ಪ್ರಶ್ನೆಗೆ 'ನಚ' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ. ಹೌದು, 'ಅನುಮಾನದಿಂದ ಉಪನಿಷತ್‌ಪ್ರತಿಪಾದ್ಯವಾದ ಪದಾರ್ಥವನ್ನು ಸುತರಾಂ ಸಾಧಿಸಬಹುದು. ಆದರೆ ಆ ಅನುಮಾನಕ್ಕೆ ಶ್ರುತಿಪ್ರಾಮಾಣ್ಯದ ಸಹಕಾರವಿರಬೇಕು[೧]. ಆವಾಗ ಮಾತ್ರ ಅನುಮಾನವು ಪ್ರಮಾಣವಾಗುತ್ತದೆ ಹೊರತು ಸ್ವತಂತ್ರವಾಗಿ ಅನುಮಾನಕ್ಕೆ ಪ್ರಾಮಾಣ್ಯವಿರುವುದಿಲ್ಲ. ಸ್ವತಂತ್ರವಾಗಿ ಅದೃಷ್ಟಾರ್ಥವನ್ನು ಅನುಮಾನವು ನಿಶ್ಚಯಿಸುವುದಾದರೆ ಸತ್‌ಪ್ರತಿಪಕ್ಷ ಮೊದಲಾದ ದೋಷಗಳು ಬರುವ ಸಂಭವವಿದೆ. ಪ್ರಕೃತ ಅನುಮಾನಕ್ಕೆ ಅಂತಹ ದೋಷಪ್ರಸಕ್ತಿಯು ಕಾಣಿಸುತ್ತಿದೆ. ಈ ವಿಷಯದಲ್ಲಿ ಶ್ರುತಿಸಮ್ಮತಿಯನ್ನು 'ಶ್ರುತಿಸಾಹಾಯ್ಯರಹಿತಮ್' ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ. 'ಕುತ್ರಚಿತ್' ಎಂಬ ಪದಕ್ಕೆ 'ಅದೃಷ್ಟಾರ್ಥದಲ್ಲಿ' ಎಂದರ್ಥ. ಉದಾಹರಣೆ 'ಈಶ್ವರಃ ನ ಸ್ವತಂತ್ರಃ ಚೇತನತ್ವಾತ್ ಪ್ರತ್ಯಕ್ಷವತ್' (ಚೇತನನಾದ್ದರಿಂದ ವಿಷ್ಣುವು ಸ್ವತಂತ್ರನಲ್ಲ). (ಪ್ರತ್ಯಕ್ಷಪ್ರಮಾಣವು ರಾಮಕೃಷ್ಣ ಮೊದಲಾದ ಭಗವಂತನ ರೂಪಗಳಲ್ಲಿ ಹೇಗೆ ದೋಷವನ್ನು ಕಾಣುತ್ತದೋ ಅದರಂತೆ ಅನುಮಾನವೂ ಸಹ ದೋಷಗ್ರಾಹಿಯಾಗಿದೆ.

**तत्वप्रकाशिका – तर्हि कीदृशस्य प्रत्यक्षादेरदृष्टार्थनिश्चायकत्वमिति तत्राह – श्रुतीति ।। अत्रापि प्रमाणान्तरं प्रत्यक्षम् । यथा यशोदायाः प्रत्यक्षम् । 'तर्कः प्रमाणपदवीं गच्छेत्' इत्यन्वयः । यथा विष्णुः स्वतन्त्रः पूर्णत्वादिति । (न केवलमेतत् स्मृतिबलेन केवलानुमानस्य प्रामाण्याभावोऽपि तु विपक्षे बाधकभावाच्चेत्याह ।) केवलानुमानस्य प्रामाण्येऽतिप्रसङ्गं चाह – शक्यत्वाच्चेति ।।**

(೧) न चानुमानस्य नियतप्रामाण्यम् । अनुमानत्वादेव । प्रमाणान्तरानुकूलत्वे यन्मानम्, नान्यथा, तद्धि अनुमानं नाम । – (तत्वप्रदीपः)

**श्रुत्यादिसाहित्यहीनानुमानस्य सर्वत्र जगत्कारणाभावादौ शशादीनां विषाणित्वे च कर्तुं शक्यत्वात् न अनुमानस्य नियतप्रामाण्यमित्यर्थः । तत्रैव प्रमाणमाह – सर्वत्रेति ।। उदीक्षितुमर्थमुदीक्षयितुम् । तस्मात् केवलानुमानस्यानिर्णायकत्वात् शास्त्रेणैव कर्तृत्वनिश्चय इति स्थितम् ।**

ಹಾಗಾದರೆ, ಯಾವ ಪ್ರಕಾರದ ಪ್ರತ್ಯಕ್ಷವು ಅದೃಷ್ಟಾರ್ಥನಿಶ್ಚಾಯಕವಾಗಿದೆ ಎಂಬ ಪ್ರಶ್ನೆಗೆ ''ಶ್ರುತಿಸಾಹಾಯ್ಯಂ'' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ. ಇಲ್ಲಿಯೂ ಕೂಡ ಪ್ರಮಾಣಾಂತರಶಬ್ದದಿಂದ ಪ್ರತ್ಯಕ್ಷವನ್ನೇ ವಿವಕ್ಷಿಸಬೇಕು. ಯಶೋದೆಯ ಪ್ರತ್ಯಕ್ಷವೇ ಇಲ್ಲಿ ಉದಾಹರಣೆಯಾಗಿದೆ.

'ತರ್ಕಃ ಪ್ರಮಾಣಪದವೀಂ ಗಚ್ಛೇತ್' (ತರ್ಕವು ಪ್ರಮಾಣವಾಗುತ್ತದೆ) ಎಂದು ವಾಕ್ಯವನ್ನು ಜೋಡಿಸಬೇಕು. ಉದಾಹರಣೆ 'ವಿಷ್ಣುವು ಸ್ವತಂತ್ರಃ ಪೂರ್ಣತ್ವಾತ್' (ಪರಿಪೂರ್ಣನಾದ್ದರಿಂದ ವಿಷ್ಣುವು ಸ್ವತಂತ್ರನಾಗಿದ್ದಾನೆ) ಶ್ರುತಿ ಸಹಾಯವಿಲ್ಲದ ಅನುಮಾನವು ಪ್ರಮಾಣವಾದಲ್ಲಿ ಅತಿಪ್ರಸಂಗದೋಷವನ್ನು 'ಶಕ್ಯತ್ವಾತ್ ಚ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಶ್ರುತ್ಯಾದಿಗಳ ಸಹಕಾರವಿಲ್ಲದ ಅನುಮಾನವು ಎಲ್ಲೆಡೆಯೂ ಅಪ್ರಮಾಣವಾಗಿದೆ. ಆದು ಹೀಗೆ -- ಜಗತ್ತು ಕಾರಣಶೂನ್ಯವಾಗಿದೆ, ಮೊಲಕ್ಕೆ ಕೊಂಬು ಇರುತ್ತದೆ, ಈ ಎಲ್ಲ ವಿಷಯಗಳನ್ನು ಅನುಮಾನದಿಂದ ಸಾಧಿಸಲು ಬರುವುದರಿಂದ ನಿಶ್ಚಿತಪ್ರಾಮಾಣ್ಯವು ಇರುವುದಿಲ್ಲ. ಈ ವಿಷಯದಲ್ಲಿ 'ಸರ್ವತ್ರ ಶಕ್ಯತೇ' ಎಂಬ ಭಾಷ್ಯವು ಪ್ರಮಾಣವನ್ನು ಉದಾಹರಿಸುತ್ತಿದೆ. 'ಉದೀಕ್ಷಿತುಂ' ಎಂಬ ಪದಕ್ಕೆ 'ಪದಾರ್ಥವನ್ನು ತಿಳಿಯುವ ವಿಷಯದಲ್ಲಿ' ಎಂದರ್ಥ. ಆದ್ದರಿಂದ ಕೇವಲ ಅನುಮಾನವು ಯಾವುದೇ ವಿಷಯವನ್ನು ನಿರ್ಣಯಿಸುವುದಿಲ್ಲ. ಆದ್ದರಿಂದ ಶಾಸ್ತ್ರದಿಂದಲೇ ಜಗತ್ಕರ್ತೃತ್ವವು ನಿಶ್ಚಯವಾಗುತ್ತದೆಂದು ಸಿದ್ಧವಾಯಿತು.

## ಭಾಷ್ಯದ ಆದಿಪದಾರ್ಥ

**भावदीपः –** भाष्यस्थादिपदेन 'तं चौपनिषदं पुरुषं पृच्छामि' इत्यादेर्ग्रहः सूत्रेणान्वयः । **स्वातन्त्र्यादिहेतुनेति** ।। तथा चोक्तम् 'सर्वधर्मोपपत्तेश्च' इत्यत्र न्यायविवरणे –

..... स्वतन्त्रस्य पूर्णगुणत्वनियमात् ।
अपूर्णोऽयं जीवसङ्घोऽस्वतन्त्रः पूर्णो हरिर्यः स्वतन्त्रः सदैव ।
न हि स्वतन्त्रोऽपूर्णतां कामयीत पूर्णो यदि स्यादस्वतन्त्रः कुतः सः'

इति श्रुतेरिति । 'आदि'पदेन 'कर्तृत्वात् सगुणं ब्रह्म पुरुषं पुरुषर्षभ' इत्याद्युक्तकर्तृत्वादिहेत्वादिग्रहः ।

भाष्यदल्लिरुव 'इत्यादि' एंब आदिपददिंद 'तं चौपनिषदं पुरुषं पृच्छामि' इत्यादि श्रुतिवाक्यगळन्नु ग्रहिसिकॊंडु ई वाक्यगळिंद सूत्रक्कॆ अन्वयवन्नु हेळबेकु. 'स्वातंत्र्यादि हेतुना' एंब अंशदिंद न्यायविवरणदल्लि हेळिद स्वातंत्र्यादिहेतुगळन्नु स्वीकरिसबेकु. न्यायविवरणदल्लि 'सर्वाधर्मोपपत्तेश्च' एंब सूत्रद व्याख्यानसंदर्भदल्लि

''..... स्वतंत्रस्य पूर्णगुणत्वनियमात् ।
अपूर्णोऽयं जीवसंघोऽस्वतंत्रः पूर्णो हरिर्यः स्वतंत्रः सदैव ।
न हि स्वतंत्रोऽपूर्णतां कामयीत पूर्णो यदि स्यादस्वतंत्रः कुतः सः ॥
इति श्रुतेः ॥'

(स्वतंत्रनादवनु पूर्णगुणवुळ्ळवनु एंब नियमविदॆ. इदन्नु 'अपूर्णोऽयं' इत्यादि श्रुतियु भद्रपडिसुत्तदॆ. अस्वतंत्रवाद ई जीवसंघवु अपूर्णवागिदॆ. यावa श्रीहरियु स्वतंत्रनागिद्दानो अवनु सदा पूर्णनागिद्दानॆ. एकॆंदरॆ स्वतंत्रनाद यावुदे व्यक्तियु अपूर्णतॆयन्नु बयसलारनु. ऒंदु वेळॆ अवनु पूर्णनागिद्दरॆ अस्वतंत्रनागलु साध्यवे इल्ल - एंदु श्रुतिय अर्थ.)

'आदि'पददिंद 'कर्तृत्वात् सगुणं ब्रह्म पुरुषं पुरुषर्षभम्' (भाग.ता.३/३३/०१) (जीवसंघवु 'जगत्सृष्ट्यादिकर्तृत्व' इरुवुदरिंद ज्ञानैश्वर्यादि अनंतगुणगळिंद कूडिद पूर्णषड्गुणनाद क्षराक्षरपुरुषरल्लि

ಉತ್ತಮನಾದ ಪರಬ್ರಹ್ಮನನ್ನು ಪ್ರಳಯಕಾಲದಲ್ಲಿ ಪ್ರವೇಶಿಸುತ್ತದೆ.) ಇತ್ಯಾದಿ ವಾಕ್ಯಗಳಲ್ಲಿ ಹೇಳಿದ ಕರ್ತೃತ್ವ ಮೊದಲಾದ ಹೇತುಗಳನ್ನು ಗ್ರಹಿಸಬೇಕು.

## ಪ್ರತ್ಯಕ್ಷ, ಅನುಮಾನಗಳಿಗೆ ದುಷ್ಟತ್ವಸಮರ್ಥನೆ

**ಭಾವದೀಪಃ – ಭಾಷ್ಯೇ ಚಸ್ತ್ವರ್ಥಃ । 'नियतप्रामाण्यं तु नास्ति' इत्युपेत्य तदन्वय, अर्थमाह – नत्विति ।।**

ಭಾಷ್ಯದಲ್ಲಿ ಪ್ರಯೋಗಿಸಿದ ಚಶಬ್ದವು 'ತು' ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ 'ನಿಯತಪ್ರಾಮಾಣ್ಯವಾದರೂ ಇಲ್ಲವೇ ಇಲ್ಲ' ಎಂಬ ರೀತಿಯಲ್ಲಿ ವಾಕ್ಯಯೋಜನೆ ಮಾಡಿಕೊಂಡು ಅದನ್ನು ಅನುಮಾನ ಮಾಡಿ ಅರ್ಥವನ್ನು 'ನತು' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ವಿಶೇಷ ವಿಚಾರ - ಕೆಲವರ ಆಕ್ಷೇಪ - ಅನುಮಾನವನ್ನು ಸ್ವತಂತ್ರವಾಗಿ ಪ್ರಮಾಣವೆಂದುದ್ವೈತಿಗಳು ಒಪ್ಪದಿರಬಹುದು. ಆದರೆ ಷಡ್‌ವಿಧತಾತ್ಪರ್ಯಲಿಂಗಗಳಲ್ಲಿ ಅನುಮಾನವನ್ನು ಸೇರಿಸಿದ್ದೀರಿ. ಮತ್ತು ಶ್ರುತಿಗೆ ಅನೇಕ ಅರ್ಥಗಳಿವೆಯೆಂದು ನೀವೇ ಒಪ್ಪಿದ್ದೀರಿ. ಶ್ರುತಿಗೆ ಒಂದೇ ಅರ್ಥವನ್ನು ಒಪ್ಪಬೇಕೆಂದು ನಿಯಮವಿಲ್ಲ. ಪ್ರಕೃತ ಅನೇಕಜಗತ್‌ಕರ್ತೃಗಳಿದ್ದಾರೆಂಬ ಅನುಮಾನಗಳ ವಿರೋಧದಿಂದ ಸೃಷ್ಟಿವಾಕ್ಯಗಳಿಗೆ ಅನೇಕಜಗತ್‌ಕರ್ತೃಪರವಾಗಿಯೇ ಅರ್ಥೈಸಬೇಕು. ಹೊರತು ಅನುಮಾನಗಳನ್ನೇ ನಿರಾಕರಿಸಬಾರದು.

ಮತ್ತೊಂದು ಕಾರಣ - ಎಲ್ಲ ಸಿದ್ಧಾಂತದವರಿಗೂ ಒಂದು ಮರ್ಯಾದೆ ಇದೆ. ಅದೇನೆಂದರೆ ಸಕಲಶಬ್ದಗಳು ವ್ಯವಸ್ಥಿತವಾಗಿ ಒಂದೇ ಅರ್ಥವುಳ್ಳವುಗಳು. ಒಂದು ವೇಳೆ ವಕ್ಯವಿವಕ್ಷೆ, ಕರ್ಮಕಾಂಡದಲ್ಲಿ ಮಾಡುವ ವಿನಿಯೋಗ, ಸ್ಮೃತಿ ಮೊದಲಾದ ಅಪವಾದಗಳಿದ್ದರೆ ಅನೇಕ ಅರ್ಥಗಳುಳ್ಳವುಗಳಾಗುತ್ತವೆಂದು. ಆದರೆ ದ್ವೈತಿಗಳಾದ ನೀವು ಸಕಲಮರ್ಯಾದೆಗಳನ್ನು ಮೀರಿ ಕಪೋಲಗಳಿಂದ ಇಚ್ಛೆ ಬಂದಂತೆ ಎಲ್ಲ ಶ್ರುತಿಗಳಿಗೆ ಯೋಗ, ರೂಢಿ ಇತ್ಯಾದಿ ರೀತಿಯಲ್ಲಿ ಅನೇಕ ಅರ್ಥಗಳನ್ನು ಅಂಗೀಕರಿಸುತ್ತೀರಿ. ಹೀಗಿರುವಾಗ ಸೃಷ್ಟಿವಾಕ್ಯಗಳಿಗೂ ವಿಷ್ಣು, ಬ್ರಹ್ಮ, ರುದ್ರ, ಇಂದ್ರ, ಇತ್ಯಾದಿಯಾಗಿ ಅನೇಕ ಅರ್ಥಗಳನ್ನು ಒಪ್ಪಿದರೆ ನಿಮಗೆ ಹಾನಿಯೇನು? 'वसन्तेवसन्तेज्योतिषा यजेत' ಎಂಬಲ್ಲಿ ಹೇಗೋ ಪದಚ್ಛೇದ ಮಾಡಿ ವಿಷ್ಣುಪರವಾಗಿ ಅರ್ಥಮಾಡುತ್ತೀರಿ.

ಆದರಂತೆ 'ಯತೋ ವಾ' ಇತ್ಯಾದಿ ವಾಕ್ಯಗಳಲ್ಲೂ ಅನೇಕರೀತಿ ಪದಚ್ಛೇದ ಮಾಡಿ ರುದ್ರಾದಿಪರವಾಗಿಯೂ ಅರ್ಥೈಸಬಹುದು. ಹಾಗೆ ರುದ್ರಾದಿಪರವಾಗಿ ಅರ್ಥೈಸಲು ಅನುಮಾನಗಳ ಬೆಂಬಲವಿದೆ. ಆದ್ದರಿಂದ ಸೃಷ್ಟಿವಾಕ್ಯಗಳು ಅನೇಕ ಸ್ರಷ್ಟೃಪರವಾಗಿವೆ.

ಇದು ತಪ್ಪು. ನಾವು ಅನುಮಾನವನ್ನು ತಾತ್ಪರ್ಯಲಿಂಗವೆಂದು ಒಪ್ಪಿದ್ದು ಸತ್ಯ. ಆದರೆ ಅದು ಎಂತಹ ಅನುಮಾನವೆಂದು ನೀವು ಸ್ವಲ್ಪ ವಿಚಾರ ಮಾಡಬೇಕು. ಯಾವ ಅನುಮಾನವು ಪ್ರತ್ಯಕ್ಷ ಮತ್ತು ಆಗಮಗಳ ಸಹಕಾರವನ್ನು ಹೊಂದಿಲ್ಲವೋ ಅಂತಹ ಅನುಮಾನವು ನಿಶ್ಚಯವಾಗಿ ತಾತ್ಪರ್ಯಲಿಂಗವಾಗುವುದಿಲ್ಲ. ಪ್ರತ್ಯಕ್ಷಾದಿ ಸಹಕೃತವಾದ ಅನುಮಾನವಷ್ಟೇ ತಾತ್ಪರ್ಯಲಿಂಗವಾಗುತ್ತದೆ. ಮತ್ತು ಟೀಕೆಯಲ್ಲಿ ಹೇಳಿದಂತೆ ಈಗ ಹೇಳುತ್ತಿರುವ ಅನುಮಾನಗಳು ಶ್ರುತಿಗೆ ವಿರುದ್ಧಾರ್ಥವಾದ ಅರ್ಥಗಳನ್ನು ಹೇಳಿ ಶ್ರುತಿಯಿಂದ ಬಾಧಿತವಾಗಿವೆ. ಇಂತಹ ಅನುಮಾನಗಳನ್ನು ತಾತ್ಪರ್ಯಲಿಂಗಗಳೆಂದು ಶಂಕಿಸುವುದೇ ತಪ್ಪು. 'ಶುಷ್ಕತರ್ಕ೦ ತು ವರ್ಜಯೇತ್' 'ತಸ್ಮಾತ್ಸಾ ಅನಪಗಾ ಶ್ರುತೇಃ' 'ಕಾಮಾಚ್ಚ ನಾನುಮಾನಾಪೇಕ್ಷಾ' ಇವೇ ಮೊದಲಾದ ಸ್ಮೃತಿ ಮತ್ತು ಸೂತ್ರಗಳು ಪ್ರತ್ಯಕ್ಷಾದಿಸಹಾಯವಿಲ್ಲದ ಅನುಮಾನಗಳನ್ನು ಶುಷ್ಕತರ್ಕವೆಂದು ಸ್ಪಷ್ಟವಾಗಿ ತಿರಸ್ಕರಿಸುತ್ತಿವೆ. ಆದ್ದರಿಂದ 'ಶ್ರುತಿಸ್ಮೃತಿಸಹಾಯಂ ಯತ್' ಇತ್ಯಾದಿಸ್ಮೃತಿಯಿಂದ ಪ್ರಮಾಣಾಂತರಮೂಲಕವಾದ ಅನುಮಾನಕ್ಕಷ್ಟೇ ತಾತ್ಪರ್ಯಲಿಂಗತ್ವವನ್ನು ಹೇಳಬೇಕು.

ಇದನ್ನೇ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ - ''ಸತ್ಯಮಸ್ಯೈವಾನುಮಾನ-ಸ್ಯೌಪನಿಷದಪದಾರ್ಥನಿಶ್ಚಾಯಕತ್ವಂ ಶ್ರುತ್ಯಾದಿಸಹಕಾರಿಯುಕ್ತಸ್ಯ, ನತು ನಿಯತ-ಪ್ರಾಮಾಣ್ಯಂ ಸ್ವಾತಂತ್ರ್ಯೇಣ ದೃಷ್ಟಾರ್ಥನಿಶ್ಚಾಯಕತ್ವಮ್ ತಾದೃಶಂ ಚ ಪ್ರಕೃತಮ್'' ಎಂದು.

**ಭಾವದೀಪಃ – प्रतिपक्षादीति ।।** तच्च व्यक्तमनुभाष्ये तत्वनिर्णय-तट्टीकयोस्तर्कताण्डवे च । प्रकृतं कार्यत्वादीत्यर्थः । धूमादौ व्यभिचारादाह **– कुत्रचिददृष्ट इति ।। यथा रामेति ।।** व्यक्तमेतत् 'अपरीक्षितदृष्टश्चैव सदोषो जायते हरिः' इत्यादिज्ञानपादीयानुव्याख्यानसुधयोः । **यशोदाया इति ।।** 'सा तत्र ददृशे विश्वं जगत् स्थास्नु च खं दिशः' इत्यादेः कृष्णानने विश्वग्राहिप्रत्यक्षम्, 'एको दाधार' इत्यादिविश्वम्भरश्रुतिसहायं

पूर्णत्वादित्यादि तु 'न हि स्वन्तत्रोऽपूर्णतां कामयीत' इति 'आत्मा हि परमः स्वतन्त्रोऽधिगुणः' 'पूर्णमदः पूर्णमिदम्' इत्यादिश्रुतिसहायम् । **केवलानुमानस्येति** ।। (न केवलमिति ।।) तेन भाष्ये चकारः उक्तस्मृतिसमुच्चायक इति सूचितम् । **जगत् कारणाभावादिति** ।। तथा चोक्तं विष्णुतत्वविनिर्णये – 'विमतं विकर्तृकमस्मत् सम्मतकर्तृरहितत्वात्' इति । 'आदि'पदेन 'वस्तुत्वात् तुरगः शृङ्गी' इत्यनुभाष्योक्तमश्व शृङ्गित्वादिकं ग्राह्यम् । पूर्वस्मात् साध्यानुवृत्तिं मत्वाह – **नानुमानस्येति** ।।

''ಪ್ರತಿಪಕ್ಷಾದಿಸಂಭವಾತ್'' ಎಂಬ ಅಂಶದಿಂದ ಹೇಳುವ ವಿಷಯವನ್ನು ಅನುವ್ಯಾಖ್ಯಾನ, ತತ್ವನಿರ್ಣಯ ಮತ್ತು ಇವುಗಳ ಟೀಕೆಯಲ್ಲಿ ಹಾಗೆಯೇ ತರ್ಕತಾಂಡವ ಗ್ರಂಥದಲ್ಲೂ ಕೂಡ ಸ್ಪಷ್ಟವಾಗಿ ವಿವರಿಸಿದ್ದಾರೆ. 'ಪ್ರಕೃತಂ' ಎಂಬ ಪದಕ್ಕೆ 'ಕಾರ್ಯತ್ವಾದಿ' ಎಂಬುದಾಗಿ ಅರ್ಥ. 'ಕುತ್ರಚಿದದೃಷ್ಟೇ' ಎಂಬ ಅಂಶವನ್ನು ಧೂಮಾದಿ ಅನುಮಾನದಲ್ಲಿ ವ್ಯಭಿಚಾರವನ್ನು ನಿವಾರಿಸುವುದಕ್ಕಾಗಿ ಹೇಳುತ್ತಿದ್ದಾರೆ. 'ಯಥಾ ರಾಮ' ಇತ್ಯಾದಿ ವಾಕ್ಯದಿಂದ ಹೇಳುವ ಅಂಶವು 'ಅಪರೀಕ್ಷಿತ ದೃಷ್ಟ್ಯೈವ ಸದೋಷೋ ಜಾಯತೇ ಹರಿಃ' (ಸರಿಯಾಗಿ ವಿಮರ್ಶೆ ಮಾಡದ ಪ್ರತ್ಯಕ್ಷದಿಂದಲೇ ಹರಿಯು ದೋಷವುಳ್ಳವನು ಎಂಬುದಾಗಿ ತಿಳಿಯುತ್ತದೆ) ಇವೇ ಮೊದಲಾದ ಜ್ಞಾನಪಾದದ ಅನುವ್ಯಾಖ್ಯಾನ ಮತ್ತು ಸುಧಾಗ್ರಂಥದಲ್ಲಿ ಸ್ಪಷ್ಟವಾಗಿದೆ. 'ಯಶೋದಾಯಾಃ' ಎಂಬ ಅಂಶದಿಂದ 'ಸಾ ತತ್ರ ದದೃಶೇ ವಿಶ್ವಂ ಜಗತ್ಸ್ಥಾಸ್ನು ಚ ಖಂ ದಿಶಃ' (ಆ ಯಶೋದೆಯು ಕೃಷ್ಣನ ಬಾಯಲ್ಲಿ ಜಡಾಜಡಾತ್ಮಕವಾದ ವಿಶ್ವವನ್ನು ಆಕಾಶಾದಿ ಮೊದಲಾದವುಗಳನ್ನು ನೋಡಿದಳು) ಇವೇ ಮೊದಲಾದ ಕೃಷ್ಣನ ಮುಖದಲ್ಲಿ ವಿಶ್ವವನ್ನು ನೋಡಿದ ಪ್ರತ್ಯಕ್ಷವು 'ಏಕೋ ದಾಧಾರ ಭುವನಾನಿ ವಿಶ್ವಾ' (ಎಲ್ಲಾ ಜಗತ್ತುಗಳನ್ನೂ ಒಬ್ಬನೇ ಧರಿಸಿದ್ದಾನೆ) ಎಂಬ ವಿಶ್ವಂಭರಶ್ರುತಿಯ ಸಹಾಯವುಳ್ಳದ್ದು. 'ಪೂರ್ಣತ್ವಾತ್' ಇತ್ಯಾದಿ ಹೇತುಗಳು 'ನ ಹಿ ಸ್ವತಂತ್ರೋಽಪೂರ್ಣತಾಂ ಕಾಮಯೀತ' 'ಆತ್ಮಾ ಹಿ ಪರಮಃ ಸ್ವತಂತ್ರೋಽಧಿಗುಣಃ' 'ಪೂರ್ಣಮದಃ ಪೂರ್ಣಮಿದಂ' ಇತ್ಯಾದಿ ಶ್ರುತಿಗಳ ಸಹಾಯವುಳ್ಳದ್ದು. ''ಕೇವಲಾನುಮಾನಸ್ಯ'' ಎಂಬ ಅಂಶದಿಂದ ಭಾಷ್ಯದಲ್ಲಿ ಬಳಸಿದ 'ಚ'ಕಾರವು ಅಲ್ಲಿ ಹೇಳಿದ ಸ್ಮೃತಿಯನ್ನು ಹೊಂದಿಸಿಕೊಳ್ಳುತ್ತದೆ ಎಂಬುದಾಗಿ ಸೂಚಿಸಿದ್ದಾರೆ. ''ಜಗತ್ಕಾರಣಾಭಾವಾದೌ'' ಎಂಬ ಅಂಶವು ವಿಷ್ಣುತತ್ವನಿರ್ಣಯಗ್ರಂಥದಲ್ಲಿ 'ವಿಮತಂ ವಿಕರ್ತೃಕಮ್ ಅಸ್ಮತ್‌ಸಮ್ಮತಕರ್ತೃರಹಿತತ್ವಾತ್' (ನಮಗೆ ಸಮ್ಮತನಾದ ಕರ್ತೃವು

ಇಲ್ಲದಿರುವುದರಿಂದ ವಿಮತವಾದ ಈ ಜಗತ್ತು ಕರ್ತೃವಿನಿಂದ ಸೃಷ್ಟಿಯಾದದ್ದಲ್ಲ) ಇತ್ಯಾದಿ ವಾಕ್ಯದಿಂದ ವಿವರಿಸಲ್ಪಟ್ಟಿದೆ. 'ಆದಿ'ಪದದಿಂದ ಅನುವ್ಯಾಖ್ಯಾನದಲ್ಲಿ ಹೇಳಿದ 'ವಸ್ತುತ್ವಾತ್ ತುರಗಃ ಶೃಂಗೀ' ಇತ್ಯಾದಿಗಳಿಂದ ವಿವರಿಸಿದ ಅಶ್ವಶೃಂಗಿತ್ವಾದಿಗಳನ್ನು ಸಾಧಿಸುವ ಅನುಮಾನಗಳನ್ನು ಗ್ರಹಿಸಬೇಕು. 'ನಾನುಮಾನಸ್ಯ' ಎಂಬ ಅಂಶದಿಂದ 'ಹಿಂದಿನ ಭಾಗದಿಂದ ಸಾಧ್ಯವನ್ನು ಅನುವೃತ್ತಿಮಾಡಿಕೊಳ್ಳಬೇಕು' ಎಂಬ ಅರ್ಥವನ್ನು ಹೇಳುತ್ತಿದ್ದಾರೆ.

ವಿಶೇಷ ವಿಚಾರ - ಅನುಮಾನವು ಅಶಕ್ತವಾಗಿದೆ ಎಂದರೆ ಸ್ವತಂತ್ರವಾಗಿ ಪ್ರಮಾಣವಲ್ಲ ಎಂದಷ್ಟೇ ಅರ್ಥ. ಪ್ರತ್ಯಕ್ಷಶ್ರುತಿಗಳ ಸಹಾಯವಿದ್ದರೆ ಪ್ರಮಾಣವಾಗುತ್ತದೆ. ಇಲ್ಲದಿದ್ದರೆ ಬ್ರಹ್ಮಮೀಮಾಂಸಾವೇ ಅಪ್ರಮಾಣವಾಗಬೇಕಾದೀತು. ಟೀಕೆಯಲ್ಲಿರುವ ಆದಿಪದದಿಂದ ಬಾಧದ ಜೊತೆಗೆ ವ್ಯಾಪ್ತಿಶೂನ್ಯತ್ವ, ಪಕ್ಷಧರ್ಮತಾಶೂನ್ಯತ್ವ, ಸೋಪಾಧಿಕತ್ವ, ಸತ್‌ಪ್ರತಿಪಕ್ಷ ಇವುಗಳನ್ನು ಮತ್ತು ಮುಖ್ಯವಾಗಿ ಆಭಾಸಸಮಾನ-ಯೋಗಕ್ಷೇಮವನ್ನೂ ಇಟ್ಟುಕೊಳ್ಳಬೇಕು.

ಪ್ರಶ್ನೆ - ಶ್ರುತಿಯಿಂದ ಅನುಮಾನವು ಬಾಧಿತವಾಗುತ್ತದೆಂದು ಹೇಳುತ್ತಿದ್ದೀರಿ. ಆದರೆ ಅನುಮಾನದಿಂದಲೇ ಶ್ರುತಿಯು ಏಕೆ ಬಾಧಿತವಾಗಬಾರದು?

ಉತ್ತರ - ಶ್ರುತಿಯು ನಿತ್ಯವಾಗಿದೆ. ನಿರ್ದುಷ್ಟವಾಗಿದೆ. ಸ್ವತಃ ಪ್ರಮಾಣವಾಗಿದೆ. ಆದ್ದರಿಂದ ಶ್ರುತಿಯು ಅನುಮಾನಕ್ಕಿಂತ ಬಹಳ ಬಲಿಷ್ಠವಾದ್ದರಿಂದ ಅನುಮಾನದಿಂದ ಬಾಧಿತವಾಗುವುದಿಲ್ಲ. 'ಪ್ರಾಬಲ್ಯಮಾಗಮಸ್ಯೈವ ಜಾತ್ಯಾ ತೇಷು ತ್ರಿಷು ಸ್ಮೃತಮ್' ಪ್ರತ್ಯಕ್ಷಾನುಮಾನಾಗಮಗಳ ಮಧ್ಯದಲ್ಲಿ ಸ್ವತಃ ಬಲಿಷ್ಠವಾದದ್ದು ಆಗಮ' ಎಂಬ ವಚನದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಒಂದು ವೇಳೆ ಕೇವಲ ಅನುಮಾನವು ಪ್ರಮಾಣವಾಗುವುದಾದರೆ ಅನೇಕ ಅತಿಪ್ರಸಂಗಗಳು ಬರುತ್ತವೆ ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

'ಷಷ್ಠೋ ರಸಃ ಸೋತ್ತರಃ' ಎಂಬಲ್ಲಿ 'ಸೋತ್ತರಃ' ಎಂಬ ಪದಕ್ಕೆ 'ಸಪ್ತಮರಸೋಪೇತಃ' ಎಂದು ಅರ್ಥೈಸಬೇಕು. ಇನ್ನು 'ರಸಃ' ಎಂದಷ್ಟೇ ಪಕ್ಷ ಮಾಡಿದರೆ ಪ್ರಥಮಾದಿರಸಗಳು ದ್ವಿತೀಯಾದಿರಸಗಳಿಂದ ಕೂಡಿವೆ ಎಂದಂತಾಗುತ್ತಿತ್ತು. ಆದರೆ ಇದು ಸಿದ್ಧವೇ ಆದ್ದರಿಂದ ಸಿದ್ಧಸಾಧನತಾದೋಷ ಬರುತ್ತಿತ್ತು. ಅದಕ್ಕೋಸ್ಕರ ಪಕ್ಷದಲ್ಲಿ 'ಷಷ್ಠಃ' ಎಂಬ ವಿಶೇಷಣವನ್ನು ಕೊಟ್ಟಿದ್ದಾರೆ.

ಆಕ್ಷೇಪ - 'ತುರಗಃ ಶೃಂಗೀ ವಸ್ತುತ್ವಾತ್' ಎಂಬ ಅನುಮಾನಕ್ಕೆ ಘಟಾದಿಗಳಲ್ಲಿ ವಸ್ತುತ್ವವಿದೆ ಆದರೆ ಶೃಂಗಿತ್ವ ಇಲ್ಲವೆಂದು ವ್ಯಭಿಚಾರ ಬರುತ್ತದಲ್ಲವೆ?

ಸಮಾಧಾನ - ಘಟವನ್ನೂ ಪಕ್ಷ ಮಾಡುತ್ತೇವೆ ಪಕ್ಷದಲ್ಲಾಗಲೀ ಪಕ್ಷಸಮದಲ್ಲಾಗಲೀ ವ್ಯಭಿಚಾರ ಬರುವುದಿಲ್ಲ.

ಆಕ್ಷೇಪ - ಘಟಪಟಾದಿಗಳಲ್ಲೂ ಶೃಂಗಿತ್ವವನ್ನು ಸಾಧಿಸುವುದಾದರೆ ಪ್ರತ್ಯಕ್ಷಾದಿಬಾಧ ಬರುತ್ತದಲ್ಲವೆ ?

ಸಮಾಧಾನ - ಕ್ಷಿತ್ಯಾದಿಕರ್ತೃವಿನಲ್ಲೂ ಇದು ಸಮಾನ. ಕ್ಷಿತ್ಯಾದಿಕರ್ತೃ ಕಾಣಿಸದ ಕಾರಣ ಬಾಧ ನಿಮಗೂ ತಪ್ಪಿದ್ದಲ್ಲ.

ಆಕ್ಷೇಪ - ಕ್ಷಿತ್ಯಾದಿಕರ್ತೃವು ಕಣ್ಣಿಗೆ ಕಾಣಿಸಲು ಅಯೋಗ್ಯನಾದ್ದರಿಂದ ಕಾಣಿಸುವುದಿಲ್ಲ. ಆದ್ದರಿಂದ ಕಣ್ಣಿಗೆ ಕಾಣಿಸಲು ಯೋಗ್ಯನಾಗಿದ್ದು ಕಾಣಿಸದಿದ್ದರೆ ನೀವು ಬಾಧ ಹೇಳಬಹುದಿತ್ತು ?

ಸಮಾಧಾನ - ಘಟಪಟಾದಿಗಳಲ್ಲೂ ನೀವು ಹೇಳಿದ್ದು ಸಮಾನ. ಘಟಪಟಾದಿಗಳಿಗೂ ಶೃಂಗವಿದೆ. ಕುದುರೆಗೂ ಶೃಂಗವಿದೆ. ಆದರೆ ಅದು ಪ್ರತ್ಯಕ್ಷಕ್ಕೆ ಅಯೋಗ್ಯವಾದ್ದರಿಂದ ಕಾಣಿಸುತ್ತಿಲ್ಲ. ಆದ್ದರಿಂದ ಇಲ್ಲಿಯೂ ಬಾಧ ಬರುವುದಿಲ್ಲ.

ಆಕ್ಷೇಪ - ಗೋಶೃಂಗಾದಿಗಳು ಮಹತ್ ಆಗಿವೆ. ಉದ್ಭೂತರೂಪವುಳ್ಳದ್ದಾಗಿವೆ. ಆದರಂತೆ ಘಟ-ಪಟಾದಿಗಳಿಗೂ ಶೃಂಗವಿರುವುದಾದರೆ ಆ ಶೃಂಗವೂ ಮಹತ್ ಆಗಬೇಕು. ಮತ್ತು ಉದ್ಭೂತರೂಪಿಯಾಗಬೇಕು. ಆದರೆ ಹಾಗಿಲ್ಲ.

ಸಮಾಧಾನ - ಹಾಗಾದರೆ ಕ್ಷಿತ್ಯಾದಿಕರ್ತನೂ ಕೂಡ ಕುಲಾಲಾದಿಗಳಂತೆ ದೇಹವುಳ್ಳವನಾಗಬೇಕು. ಕುಲಾಲಾದಿಗಳನ್ನು ಬಿಟ್ಟು ಅವನು ಮಾತ್ರ ಏಕೆ ಕಣ್ಣಿಗೆ ಅಯೋಗ್ಯನಾದ?

ಆಕ್ಷೇಪ - ಕ್ಷಿತ್ಯಾದಿ ಕರ್ತೃವಿಗೆ ದೇಹವೇ ಇಲ್ಲವಲ್ಲ ?

ಸಮಾಧಾನ - ಹಾಗಾದರೆ ಶೃಂಗಕ್ಕೂ ರೂಪವಿಲ್ಲ. ಕುಲಾಲಾದಿಗಳಿಗೆ ದೇಹವಿದೆ. ಕ್ಷಿತ್ಯಾದಿಕರ್ತೃವಿಗೆ ದೇಹವಿಲ್ಲವೆಂದು ನೀವು ಹೇಳುವುದಾದರೆ ಗೋ ಮಹಿಷಾದಿಗಳ ಶೃಂಗಕ್ಕೆ ಮಹತ್ವ ರೂಪತ್ವಗಳು ಇವೆ. ಆದರೆ ಕುದುರೆ ಮೊಲ ಮತ್ತು ಘಟಪಟಾದಿಗಳ ಶೃಂಗಕ್ಕೆ ರೂಪವಿಲ್ಲ ಮಹತ್ವವೂ ಇಲ್ಲವೆಂದು ನಾವೂ ಹೇಳುತ್ತೇವೆ.

ಆಕ್ಷೇಪ - ಲೋಕದಲ್ಲಿ ಎಲ್ಲ ಶೃಂಗಗಳಿಗೆ ರೂಪವಿರುವುದೇ ಕಂಡಿದೆ. ರೂಪವಿಲ್ಲದೆ ಶೃಂಗವಿರಲು ಸಾಧ್ಯವೇ ಇಲ್ಲ.

ಸಮಾಧಾನ - ಜಗತ್ತಿನಲ್ಲಿರುವ ಎಲ್ಲಾ ಕರ್ತೃಗಳೂ ದೇಹವಿರುವರೇ ಕಂಡಿದ್ದಾರೆ. ದೇಹವಿಲ್ಲದ ಒಬ್ಬ ಕರ್ತೃವಿರುವುದು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಕ್ಷಿತ್ಯಾದಿಕರ್ತನೂ ದೇಹವಿರುವನೇ ಆಗಿರಬೇಕು. ಆದ್ದರಿಂದ 'ಕ್ಷಿತ್ಯಾದಿಕಂ ಸಕರ್ತೃಕಂ ಕಾರ್ಯತ್ವಾತ್' ಎಂಬ ಅನುಮಾನಕ್ಕೂ 'ತುರಗಃ ಶೃಂಗೀ ವಸ್ತುತ್ವಾತ್' ಎಂಬ ಅನುಮಾನಕ್ಕೂ ಎಳ್ಳಷ್ಟೂ ವ್ಯತ್ಯಾಸವಿಲ್ಲ. 'ತುರಗಃ ಶೃಂಗೀ' ಎಂಬ ಅನುಮಾನದಲ್ಲಿ ಏನೇನು ದೋಷ ಬರುತ್ತದೋ, ಆ ಎಲ್ಲ ದೋಷಗಳು 'ಕ್ಷಿತ್ಯಾದಿಕಂ ಸಕರ್ತೃಕಂ' ಎಂಬ ಅನುಮಾನಕ್ಕೂ ಬರುತ್ತದೆ. ಇದೇ ತರಹ 'ಖಂ ಪುಷ್ಪವತ್' ಇತ್ಯಾದಿ ಅನುಮಾನಗಳನ್ನೂ ಆಭಾಸಸಮಾನಯೋಗಕ್ಷೇಮವನ್ನಾಗಿ ತಿಳಿಯಬೇಕು.

## ನಾಸ್ತಿಕರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ

**ಬ್ರಹ್ಮಸೂತ್ರಭಾಷ್ಯಮ್ –**

**'ರೇತೋ ಧಾತುರ್ವಟಕಣಿಕಾ ಘೃತಧೂಮಾಧಿವಾಸನಮ್ ।**
**ಜಾತಿಸ್ಮೃತಿರಯಸ್ಕಾನ್ತಃ ಸೂರ್ಯಕಾನ್ತೋऽಮ್ಬುಭಕ್ಷಣಮ್ ।**
**ಪ್ರೇತ್ಯ ಭೂತಾಪ್ಯಯಶ್ಚೈವ ದೇವತಾऽಭ್ಯುಪಯಾಚನಮ್ ।**
**ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ।।'**
**ಇತಿ ಮೋಕ್ಷಧರ್ಮವಚನಾನ್ನ ನಾಸ್ತಿಕ್ಯವಾದೋ ಯುಜ್ಯತೇ ।।**
**ದರ್ಶನಾಚ್ಚ ತಪ ಆದಿಫಲಸ್ಯ ।**

ರೇತಸ್ಸು, ವಾತ, ಪಿತ್ತ ಮೊದಲಾದ ಧಾತುಗಳು, ಆಲದ ಮರದ ಬೀಜಗಳು, ತುಪ್ಪ, ಹೊಗೆಯ ಸಂಸ್ಕಾರವು, ಜನ್ಮಾಂತರಸ್ಮರಣೆಯು, ಅಯಸ್ಕಾಂತವು, ಸೂರ್ಯಕಾಂತಮಣಿಯು, ನೀರು ಕುಡಿಯುವಿಕೆಯು, ಮೃತರಾದ ಮೇಲೆ ಪಂಚ ಭೂತಗಳಲ್ಲಿ ಶರೀರದ ಸೇರುವಿಕೆಯು, ದೇವತಾಪ್ರಾರ್ಥನೆ, ಸತ್ತ ವ್ಯಕ್ತಿಗಳಲ್ಲಿ ಚೇಷ್ಟಾದಿಗಳ ನಿಲ್ಲುವಿಕೆಯು ಇವೇ ಮೊದಲಾದ ಅನುಭವಗಳಿಂದ ಅತೀಂದ್ರಿಯ ವಿಷಯಗಳಲ್ಲಿ ಪ್ರಮಾಣವಾಗಿವೆಯೆಂದು ನಿಶ್ಚಯಿಸಬಹುದು; ಹೀಗೆ ಮೋಕ್ಷಧರ್ಮಪರ್ವದಲ್ಲಿ ಹೇಳಿದ್ದಾರೆ. ಆದ್ದರಿಂದ ಕಣ್ಣಿಗೆ ಕಾಣದ್ದು ಇಲ್ಲವೆಂಬ ನಾಸ್ತಿಕ್ಯವಾದವು ಯುಕ್ತವಲ್ಲ.

ಅಷ್ಟೇ ಅಲ್ಲದೆ ತಪಸ್ಸು ಮೊದಲಾದ ಅನುಷ್ಠಾನಗಳ ಫಲವು ಪ್ರತ್ಯಕ್ಷವಾಗಿ ಕಾಣುತ್ತಿರುವುದರಿಂದಲೂ ನಾಸ್ತಿಕ್ಯವಾದವು ಅಯುಕ್ತವಾಗಿದೆ.

ಪ್ರತಿಪದಾರ್ಥ -- ಅತೀಂದ್ರಿಯಪದಾರ್ಥಗಳೇ ಇಲ್ಲದ ಕಾರಣ ಪ್ರತ್ಯಕ್ಷಕ್ಕಿಂತ ಇತರವಾದ ಪ್ರಮಾಣವೇ ಇಲ್ಲದ ಕಾರಣ, ಶಾಸ್ತ್ರದಿಂದ ಈಶ್ವರನನ್ನು ತಿಳಿಯಲು ಹೇಗೆ ಸಾಧ್ಯ? ಎಂಬ ನಾಸ್ತಿಕ್ಯವಾದವನ್ನು ಮಹಾಭಾರತದ ಮೋಕ್ಷಧರ್ಮವಚನದಿಂದ ನಿರಾಕರಿಸುತ್ತಿದ್ದಾರೆ.

ರೇತಃ = ರೇತಸ್ಸು, ಧಾತುಃ = ವಾತಪಿತ್ತಾದಿಧಾತುವು, ವಟಕಣಿಕಾ = ಆಲದ ಬೀಜಗಳು, ಘೃತ = ತುಪ್ಪವು, ಧೂಮಾದಿವಾಸನಮ್ = ಹೊಗೆಯಿಂದ ಮಾಡಲ್ಪಡುವ ಸಂಸ್ಕಾರವಿಶೇಷವು, ಜಾತಿಸ್ಮೃತಿಃ = ಜನ್ಮಾಂತರಸ್ಮರಣೆಯು, ಅಯಸ್ಕಾಂತಃ = ಅಯಸ್ಕಾಂತವೆಂಬ ಕಲ್ಲಿನ ವಿಶೇಷವು, ಸೂರ್ಯಕಾಂತಃ = ಸೂರ್ಯಕಾಂತಮಣಿಯು, ಅಂಬುಭಕ್ಷಣಮ್ = ನೀರಿನ ಕುಡಿಯುವಿಕೆಯು, ಪ್ರೇತ್ಯಭೂತಾಪ್ಯಯಶ್ಚ = ಸತ್ತ ದೇಹವು ಪಂಚಭೂಗಳಲ್ಲಿ ಸೇರುವಿಕೆಯು, ದೇವತಾಭ್ಯುಪ-ಯಾಚನಮ್ = ದೇವತಾರಾಧನೆಯು, ಮೃತೇ = ಸತ್ತವನಲ್ಲಿ, ಕರ್ಮನಿವೃತ್ತಿಶ್ಚ = ಚೇಷ್ಟಾದಿಗಳ ಇಲ್ಲದಿರುವಿಕೆಯು, (ಇವೇ ಮೊದಲಾದ ಅನುಭವಗಳು), ಪ್ರಮಾಣಮ್ = ಅತೀಂದ್ರಿಯವಿಷಯಗಳಲ್ಲಿ ಪ್ರಮಾಣಗಳೆಂದು, ನಿಶ್ಚಯಃ = ನಿಶ್ಚಯವಾಗಿದೆ. ಇತಿ = ಹೀಗೆ, ಮೋಕ್ಷಧರ್ಮವಚನಾತ್ = ಮೋಕ್ಷಧರ್ಮದ ಮಾತಿನಂತೆ, ನಾಸ್ತಿಕ್ಯಪಾದಃ = ನಾಸ್ತಿಕ್ಯವಾದವು, ನ ಯುಜ್ಯತೇ = ಯುಕ್ತವಾಗುವುದಿಲ್ಲ.

ತಪ ಆದಿ ಫಲಸ್ಯ = ತಪಸ್ಸೇ ಮೊದಲಾದ ಅನುಷ್ಠಾನಗಳ ಫಲವು, ದರ್ಶನಾಚ್ಚ = ಪ್ರತ್ಯಕ್ಷವಾಗಿ ಕಾಣಿಸುತ್ತಿರುವುದರಿಂದಲೂ (ನಾಸ್ತಿಕ್ಯವಾದವು ಯುಕ್ತವಾಗುವುದಿಲ್ಲ).

## ಈಶ್ವರನ್ನೊಪ್ಪದೇ ಗತಿಯಿಲ್ಲ

**ತತ್ವಪ್ರಕಾಶಿಕಾ –**

**ನನ್ವತೀನ್ದ್ರಿಯಾರ್ಥಾಭಾವೇನ ಪ್ರತ್ಯಕ್ಷೇತರಸ್ಯ ಅಪ್ರಾಮಾಣ್ಯಾತ್ ಕಥಂ ಶಾಸ್ತ್ರಾದೀಶ್ವರಸಿದ್ಧಿಃ? ಇತಿ ನಾಸ್ತಿಕವಾದಂ ಮೋಕ್ಷಧರ್ಮವಚನೇನ ನಿರಾಚಷ್ಟೇ – ರೇತ ಇತಿ ।। ರೇತೋ ಧಾತ್ವಾದ್ಯತೀ-**

**ನ್ದ್ರಿಯಾರ್ಥಸತ್ತ್ವೇऽನುಮಾನಾದಿಪ್ರಮಾಣ್ಯೇ ಚ ಪ್ರಮಾಣಂ ಪ್ರಮಾಪಕಮಿತಿ ನಿಶ್ಚಯಃ । ತಥಾ ಹಿ । ರೇತಃ ಶರೀರಯೋಃ ಕಾರ್ಯಕಾರಣಭಾವोऽಸ್ತಿ । ನ ಚಾಸೌ ಪ್ರತ್ಯಕ್ಷೋऽತೋऽನ್ವಯವ್ಯತಿರೇಕಿತ್ವಾಖ್ಯಾನುಮಾನಸ್ಯ ಮಾನತ್ವಸಿದ್ಧಿಃ । ಮೃತಶರೀರೇ ಸಿಕ್ತಸ್ಯ ಅಕರಣತ್ವೇನ ಯದಧಿಷ್ಠಿತೇ ಪರಿಣಮತೇ ತತ್ ಜೀವಸಿದ್ಧಿಃ । ನ ಚ ಜೀವತ್ ಸರ್ವಶರೀರೇ ಪತಿತಂ ಕಾರ್ಯಕರಮತಸ್ತತ್ ಪ್ರೇರಕೇಶ್ವರಾದೃಷ್ಟಸಿದ್ಧಿಃ । ತತಸ್ತತ್ ಪ್ರತಿಪಾದಕಾಗಮಪ್ರಾಮಾಣ್ಯಸಿದ್ಧಿಃ**[1] ।

ಅತೀಂದ್ರಿಯಪದಾರ್ಥವೇ ಜಗತ್ತಿನಲ್ಲಿಲ್ಲದ ಕಾರಣ ಪ್ರತ್ಯಕ್ಷದಿಂದ ಅತಿರಿಕ್ತವಾದ ಪ್ರಮಾಣವೇ ಇರುವುದಿಲ್ಲ. ಆದ್ದರಿಂದ ಶಾಸ್ತ್ರಪ್ರಮಾಣದಿಂದ ಈಶ್ವರನು ಹೇಗೆ ಸಿದ್ಧನಾಗುತ್ತಾನೆ? ಎಂಬ ನಾಸ್ತಿಕ್ಯವಾದವನ್ನು ಮೋಕ್ಷಧರ್ಮದ ಮಾತಿನಿಂದ ''ರೇತಃ''; ಇತ್ಯಾದಿಯಾಗಿ ನಿರಾಕರಿಸುತ್ತಿದ್ದಾರೆ. ಪುರುಷನ ವೀರ್ಯ, ವಾತ, ಪಿತ್ತ ಮೊದಲಾದ ಧಾತು ಮೊದಲಾದ ಪದಾರ್ಥಗಳು ಅತೀಂದ್ರಿಯಪದಾರ್ಥಗಳ ಇರುವಿಕೆಯಲ್ಲಿ ಮತ್ತು ಅನುಮಾನಪ್ರಾಮಾಣ್ಯವಿಷಯದಲ್ಲಿ ಯಥಾರ್ಥಜ್ಞಾನವನ್ನು ಉಂಟು ಮಾಡುವುದರಿಂದ ಪ್ರಮಾಣಗಳಾಗಿವೆ ಎಂದು ನಿಶ್ಚಯವಾಗುತ್ತದೆ. ಆದು ಹೀಗೆ --

ಪುರುಷನ ವೀರ್ಯಕ್ಕೂ ಶರೀರಕ್ಕೂ ಕಾರ್ಯಕಾರಣಭಾವವಿರುತ್ತದೆ. ಈ ಕಾರ್ಯಕಾರಣ ಭಾವವು ಪ್ರತ್ಯಕ್ಷದಿಂದ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಅನ್ವಯವ್ಯತಿರೇಕರೂಪವಾದ ಅನುಮಾನವು ಪ್ರಮಾಣವೆಂದು ಸಿದ್ಧವಾಯಿತು. 'ಯಾವುದು ಯಾವುದು ಶರೀರವೋ ಅದೆಲ್ಲವೂ ಪುರುಷನ ವೀರ್ಯದಿಂದ ಜನ್ಯವಾಗಿದೆ'; ಎಂಬುದು ಅನ್ವಯವ್ಯಾಪ್ತಿ. 'ಯಾವುದು ಶರೀರವಲ್ಲವೋ ಆದು ವೀರ್ಯಜನ್ಯವಲ್ಲ ಎಂಬುದು

(೧) ನನ್ವೇವಮನುಮಾನಸ್ಯ ಅಪ್ರಾಮಾಣ್ಯಾತ್ ತನ್ಮಾಯೇನाऽಗಮಸ್ಯाप्यप्रामाण्यात् प्रत्यक्षमेव सम्मतं प्रमाणमस्तु । अतो न देहव्यतिरिक्तो जीवोऽस्ति, नापि जगत्कर्तेश्वरः, प्रमाणाभावात् इत्याशङ्क्याह – रेतोधातुरित्यादि ।। रेतःसिक्तं कालात् शरीरं भवति । न च तस्य शरीरभावः प्रत्यक्षग्राह्यः । वाक्याद्युक्त्या वा जायते, अतस्तयोः प्रामाण्यम् । न च तद्रेतो मृतशरीरे सिक्तं वर्धते । तस्माद्यधिष्ठित एव वर्धते स देहव्यतिरिक्तो जीवोऽभ्युपगन्तव्यः । न च जीवच्छरीरेऽपि नियमेन वर्धते । अतो यदिच्छया वर्धते न वर्धते च स ईश्वरः ।

– (तत्वप्रदीपः)

ವ್ಯತಿರೇಕವ್ಯಾಪ್ತಿ. ಈ ಅನ್ವಯ ವ್ಯತಿರೇಕಗಳಿಂದ ಕಾರ್ಯಕಾರಣ ಭಾವವು ಯುಕ್ತವಾಗುತ್ತದೆ. ಅಷ್ಟೇ ಅಲ್ಲದೆ ಎಲ್ಲಾಶರೀರದಲ್ಲಿಯೂ ರೇತಸ್ಸೇಚನವು ಶರೀರೋತ್ಪಾದಕವಾಗುವುದು ಕಂಡಿಲ್ಲ. ಏಕೆಂದರೆ ಸತ್ತ ಸ್ತ್ರೀದೇಹದಲ್ಲಿ ವೀರ್ಯವು ಸಿಕ್ತವಾದರೆ ಶರೀರಕಾರಣತ್ವವು ಇರುವುದಿಲ್ಲ. ಜೀವಂತಶರೀರದಲ್ಲಿ ವೀರ್ಯವು ಸಿಕ್ತವಾದರೆ ಶರೀರಕಾರಣತ್ವವು ಕಂಡಿರುತ್ತದೆ'; (ಆದರಲ್ಲೂ ಬಂಜೆಸ್ತ್ರೀಯಾಗಿರಬಾರದು). ಆದ್ದರಿಂದ ಈ ಎಲ್ಲ ಘಟನೆಗಳು ಪ್ರೇರಕನಾದ ಈಶ್ವರನ ಅಧೀನವೆಂದು ಒಪ್ಪಬೇಕು. ಇದರಿಂದ ಈಶ್ವರ ಹಾಗೂ ಅದೃಷ್ಟವು ಸಿದ್ಧವಾಗುತ್ತದೆ. ಆದ್ದರಿಂದಲೇ ಇವುಗಳನ್ನು ಪ್ರತಿಪಾದಿಸುವ ಆಗಮಗಳಿಗೆ ಪ್ರಾಮಾಣ್ಯವು ಸಿದ್ಧವಾಗುತ್ತದೆ.

## ಈಶ್ವರನ ಅಸ್ತಿತ್ವಕ್ಕೆ ಹನ್ನೆರಡು ದೃಷ್ಟಾಂತಗಳು

**तत्वप्रकाशिका – एवं वातादिधातुरपथ्याद् विक्रियते नापि मृतशरीरे न जीवच्छरीरेषु सर्वेषु ।**

ಇದರಂತೆ ವಾತ, ಪಿತ್ತ, ಕಫ ಎಂಬ ಧಾತುಗಳು ಅಪಥ್ಯಸೇವನೆಯಿಂದ ವಿಕಾರವಾಗುತ್ತವೆ. ಆದರೆ ಮೃತಶರೀರದಲ್ಲಿ ಇದು ಕಂಡಿಲ್ಲ. ಮತ್ತು ಎಲ್ಲ ಜೀವಚ್ಛರೀರಗಳಲ್ಲಿಯೂ ಈ ವಿಕಾರವು ಕಾಣುವುದಿಲ್ಲ.

[೧]ವಿವರಣೆ - ಅಪಥ್ಯ ಹಾಗೂ ಧಾತುವಿಕಾರಕ್ಕೆ ಕಾರ್ಯಕಾರಣಭಾವವಿದೆ. ಆದರೆ ಅದು ಪ್ರತ್ಯಕ್ಷದಿಂದ ಗೋಚರವಾಗುತ್ತಿಲ್ಲ. ಹಾಗಾಗಿ ವಾತಾದಿ ಧಾತುವಿಕಾರವು ಅಪಥ್ಯದಿಂದ ಜನ್ಯವಾಗಿದೆ. ಅಪಥ್ಯವಾದಾಗ ಧಾತುವಿಕಾರವಾಗುತ್ತದೆ. ಅಪಥ್ಯವಾಗದೇ ಇದ್ದಾಗ ಧಾತುವಿನಲ್ಲಿ ವಿಕಾರವಾಗುವುದಿಲ್ಲ. ಮೃತವಾದ ದೇಹದಲ್ಲಿ ಧಾತುವಿಕಾರ ಸರ್ವಥಾ ಆಗುವುದಿಲ್ಲ. ಆದ್ದರಿಂದ ಶರೀರಕ್ಕಿಂತಲೂ ಭಿನ್ನನಾದ ಅತೀಂದ್ರಿಯನಾದ ಆತ್ಮನು ಸಿದ್ಧನಾಗುತ್ತಾನೆ. ಬದುಕಿರುವ ಎಲ್ಲಾ ಶರೀರದಲ್ಲಿ ಅಪಥ್ಯವಾದರೂ ಕೂಡ ಧಾತುವಿಕಾರವಾಗುವುದಿಲ್ಲ. ಇದನ್ನೆಲ್ಲಾ ಗಮನಿಸಿದಾಗ ಇದಕ್ಕೊಬ್ಬ ಪ್ರೇರಕನಾದ

(೧) ಓದುಗರ ಅನುಕೂಲಕ್ಕಾಗಿ ತತ್ವಪ್ರಕಾಶಿಕೆಯ ವಿಷಯವನ್ನು ವಿವರಿಸಲಾಗಿದೆ.

ಈಶ್ವರನನ್ನು ಮತ್ತು ಅದಕ್ಕೆ ನಿಮಿತ್ತವಾದ ಅದೃಷ್ಟವನ್ನು ಅತೀಂದ್ರಿಯವಾಗಿದ್ದರೂ ಒಪ್ಪಲೇ ಬೇಕಾಗುತ್ತದೆ. ಇದನ್ನು ಪ್ರತಿಪಾದಿಸುವ ಶಾಸ್ತ್ರವನ್ನೂ ಕೂಡ ಪ್ರಮಾಣವೆಂದು ಒಪ್ಪಬೇಕಾಗುತ್ತದೆ.

**तत्वप्रकाशिका – वटकणिकातो वट उत्पद्यते न च भर्जिताया नाप्यभर्जिताभ्यः सर्वाभ्यः ।**

ಆದರಂತೆ ಆಲದ ಮರದ ಬೀಜದಿಂದ ಆಲದ ಮರವು ಹುಟ್ಟುತ್ತದೆ. ಆದರೆ ಹುರಿದ ಬೀಜದಿಂದ ಮರವು ಹುಟ್ಟುವುದಿಲ್ಲ. ಮತ್ತು ಎಲ್ಲ ಬೀಜಗಳಿಂದಲೂ ಮರವು ಹುಟ್ಟುವುದಿಲ್ಲ.

ವಿವರಣೆ - ಬೀಜ ಹಾಗೂ ವೃಕ್ಷಗಳ ಕಾರ್ಯಕಾರಣಭಾವವು ಕಣ್ಣಿಗೆ ಕಾಣಿಸುವುದಿಲ್ಲ. ಆದ್ದರಿಂದ ಮರವು ಬೀಜದ ಕಾರ್ಯವಾಗಿದೆ. ಬೀಜವಿದ್ದರೆ ಮಾತ್ರ ಆಲದಮರ ಹುಟ್ಟುತ್ತದೆ. ಬೀಜ ಇಲ್ಲದಿದ್ದರೆ ಆಲದಮರ ಹುಟ್ಟುವುದಿಲ್ಲ ಎಂಬ ಅನುಮಾನ ಪ್ರಮಾಣವನ್ನು ತಿಳಿಯಬೇಕು. ಹುರಿದ ಬೀಜದಿಂದ ವೃಕ್ಷ ಸರ್ವಥಾ ಬೆಳೆಯುವುದಿಲ್ಲ. ಹುರಿಯದೇ ಇರುವ ಎಲ್ಲಾ ಬೀಜದಿಂದಲೂ ಮರವು ಹುಟ್ಟುವುದಿಲ್ಲ. ಇದನ್ನು ಗಮನಿಸಿದಾಗ ಇದಕ್ಕೆ ಕಾರಣನಾಗಿ ಒಬ್ಬ ಈಶ್ವರನನ್ನು ಮತ್ತು ಅದೃಷ್ಟವನ್ನು ಒಪ್ಪಲೇಬೇಕು. ಇದನ್ನು ಪ್ರತಿಪಾದನೆ ಮಾಡುವ ಶಾಸ್ತ್ರಕ್ಕೂ ಕೂಡ ಪ್ರಾಮಾಣ್ಯವನ್ನು ಒಪ್ಪಲೇಬೇಕು.

**तत्वप्रकाशिका – घृतेन पीनता जायते न मृतशरीरे नापि जीवत् सर्वशरीरेषु ।**

ತುಪ್ಪವನ್ನು ತಿನ್ನುವುದರಿಂದ ದೇಹವು ಬೆಳೆಯುತ್ತದೆ. ಆದರೆ ಮೃತಶರೀರವು ಬೆಳೆಯುವುದಿಲ್ಲ. ಕೆಲವು ಜೀವಚ್ಛರೀರಗಳು ಎಷ್ಟೇ ತುಪ್ಪ ತಿಂದರೂ ಬೆಳೆಯುವುದಿಲ್ಲ.

ವಿವರಣೆ - ತುಪ್ಪ ತಿಂದರೆ ದೇಹ ದಪ್ಪವಾಗುತ್ತದೆ. ತುಪ್ಪ ಹಾಗೂ ದೇಹದ ದಪ್ಪವಾಗುವಿಕೆಗೆ ಪರಸ್ಪರ ಕಾರ್ಯಕಾರಣಭಾವವಿದೆ. ಇದು ಕಣ್ಣಿಗೆ ಕಾಣಿಸುವುದಿಲ್ಲ. ಆದ್ದರಿಂದ ಅನುಮಾನವನ್ನು ಹೀಗೆ ತಿಳಿಯಬೇಕು. ಪೀನತ್ವವು ಘೃತದ ಕಾರ್ಯವಾಗಿದೆ. ಘೃತವನ್ನು ಸೇವಿಸಿದಾಗ ಪೀನತ್ವ ಬರುತ್ತದೆ. ಘೃತವನ್ನು ಸೇವಿಸದೇ ಇದ್ದಾಗ ಪೀನತ್ವವು ಬರುವುದಿಲ್ಲ ಎಂಬ ಯುಕ್ತಿಯಿಂದ ಪೀನತ್ವ ಹಾಗೂ ಘೃತಗಳ ಕಾರ್ಯಕಾರಣಭಾವವು ಸ್ಪಷ್ಟವಾಗುತ್ತದೆ. ಆದ್ದರಿಂದ ಪ್ರತ್ಯಕ್ಷ ಪ್ರಮಾಣಕ್ಕಿಂತ, ಭಿನ್ನವಾದ ಯುಕ್ತಿಯನ್ನು

ಪ್ರಮಾಣವನ್ನಾಗಿ ಒಪ್ಪಬೇಕು. ಮತ್ತು ಮೃತಶರೀರದಲ್ಲಿ ತುಪ್ಪವನ್ನು ಹಾಕಿದರೂ ಯಾವುದೇ ಉಪಯೋಗವಾಗುವುದಿಲ್ಲ. ಶರೀರವು ಜೀವಂತವಾಗಿದ್ದರೆ ಮಾತ್ರ ಘೃತವು ಪೀನಕ್ಕೆ ಕಾರಣವಾಗುತ್ತದೆ. ಇದರಿಂದ ದೇಹಕ್ಕಿಂತ ಅತಿರಿಕ್ತವಾದ ಒಬ್ಬ ಜೀವನಿದ್ದಾನೆಂದು ಸಿದ್ಧವಾಗುತ್ತದೆ. ಆದರೆ ಜೀವಂತವಾದ ಎಲ್ಲಾ ಶರೀರದಲ್ಲಿಯೂ ತುಪ್ಪವನ್ನು ತಿನ್ನುವುದರಿಂದ ದಪ್ಪವಾಗುವಿಕೆ ಎಂಬ ಕಾರ್ಯವು ಉಂಟಾಗುವುದಿಲ್ಲ. ಆದ್ದರಿಂದ ಇದು ಪ್ರೇರಕನಾದ ಒಬ್ಬ ಈಶ್ವರನನ್ನು ಒಪ್ಪಲೇ ಬೇಕಾಗುತ್ತದೆ. ಅದಕ್ಕೆ ಕಾರಣವಾಗಿ ಅದೃಷ್ಟವನ್ನೂ ಕೂಡ ಒಪ್ಪಬೇಕು. ಇವುಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳಿಗೂ ಕೂಡ ಪ್ರಾಮಾಣ್ಯವನ್ನು ಅಂಗೀಕರಿಸಬೇಕು.

**तत्त्वप्रकाशिका – धूमाधिवासनेन वृक्षेषु पुष्पादिसंपत्तिर्जायते; न च शुष्केषु नाप्यशुष्केषु सर्वेषु ।**

ಹೊಗೆಯ ಸಂಸ್ಕಾರದಿಂದ ಮರಗಳಲ್ಲಿ ಹೂವು-ಹಣ್ಣು ಮೊದಲಾದ ಸಂಪತ್ತು ಹೆಚ್ಚಾಗುತ್ತದೆ. ಆದರೆ ಒಣಗಿದ ಮರದಲ್ಲಿ ಹೂವು ಮೊದಲಾದವು ಬಿಡುವುದಿಲ್ಲ. ಅಥವಾ ಒಣಗದ ಮರದಲ್ಲಿಯೂ ಪುಷ್ಪಾದಿಗಳ ಸಂಪತ್ತು ಕಾಣುವುದಿಲ್ಲ.

ವಿವರಣೆ - ಹೊಗೆಯ ಸಂಸ್ಕಾರ ಮಾಡುವುದರಿಂದ ಮರಗಳಲ್ಲಿ ಹೂವು-ಹಣ್ಣುಗಳು ಯಥೇಚ್ಛವಾಗಿ ಬಿಡುತ್ತವೆ. ಹೊಗೆಗೂ ಫಲ-ಪುಷ್ಪಗಳ ಸಂಪತ್ತಿಗೂ ಕಾರ್ಯಕಾರಣಭಾವವು ಕಣ್ಣಿಗೆ ಕಾಣಿಸುತ್ತಿಲ್ಲ. ಆದ್ದರಿಂದ ಇಲ್ಲಿ ಯುಕ್ತಿಯನ್ನು ಅನುಸರಿಸಬೇಕು. ಫಲ-ಪುಷ್ಪಗಳ ಸಮೃದ್ಧಿಗೆ ಹೊಗೆಯು ಕಾರಣವಾಗಿದೆ. ಹೊಗೆಯಿಂದ ಫಲ-ಪುಷ್ಪಗಳು ಉಂಟಾಗುತ್ತವೆ. ಹೊಗೆಯಿಲ್ಲದಿದ್ದರೆ ಫಲ-ಪುಷ್ಪಾದಿಗಳು ಉಂಟಾಗುವುದಿಲ್ಲ. ಹೀಗೆ ಪ್ರತ್ಯಕ್ಷದಿಂದ ಅತಿರಿಕ್ತವಾದ ಯುಕ್ತಿಯಿಂದ ಕಾರ್ಯಕಾರಣಭಾವವು ಸಿದ್ಧವಾಗುತ್ತದೆ. ಒಣಗಿರುವ ಮರಗಳಲ್ಲಿ ಹೊಗೆ ಹಾಕಿದರೂ ಪ್ರಯೋಜನವಿಲ್ಲ. ಆದ್ದರಿಂದ ಮರಕ್ಕಿಂತ ಬೇರೆಯಾದ ಜೀವವು ಹಸಿಯಾದ ಮರದಲ್ಲಿದೆ ಎಂದು ಸಿದ್ಧವಾಗುತ್ತದೆ. ಆದರೆ ಎಲ್ಲಾ ಮರಗಳಿಗೂ ಹೊಗೆ ಹಾಕಿದರೆ ಫಲ-ಪುಷ್ಪಾದಿಗಳು ಉಂಟಾಗುವುದಿಲ್ಲ. ಇದಕ್ಕೆ ಪ್ರೇರಕನಾಗಿ ಒಬ್ಬ ಈಶ್ವರನನ್ನು ಒಪ್ಪಬೇಕು. ಅವನನ್ನು ಹೇಳುವ ಶಾಸ್ತ್ರಕ್ಕೂ ಕೂಡ ಪ್ರಾಮಾಣ್ಯವನ್ನು ಒಪ್ಪಬೇಕು.

**तत्वप्रकाशिका – साधनविशेषात् जातिस्मृतिर्भवति न चेतनाभावे सा युक्ता न चास्ति सर्वेषाम् ।**

ತಪಸ್ಸೇ ಮೊದಲಾದ ಸಾಧನವಿಶೇಷಗಳಿಂದ ಪೂರ್ವಜನ್ಮದ ಸ್ಮರಣೆಯು ಉಂಟಾಗುತ್ತದೆ. ಆದರೆ ಚೈತನ್ಯವಿಲ್ಲದ ಶರೀರದಲ್ಲಿ ಇದು ಕಾಣುವುದಿಲ್ಲ. ಮತ್ತು ಸಾಧನವಿಶೇಷವನ್ನು ಅನುಷ್ಠಾನ ಮಾಡಿದ ಎಲ್ಲ ಶರೀರಗಳಲ್ಲಿಯೂ ಇದು ಕಾಣುವುದಿಲ್ಲ.

ವಿವರಣೆ - ಹಿಂದಿನ ಜನ್ಮದ ಸ್ಮರಣೆಯು ವಿಶೇಷ ಸಾಧನೆಯಿದ್ದಾಗ ಉಂಟಾಗುತ್ತದೆ. ಒಂದುವೇಳೆ ದೇಹಕ್ಕಿಂತ ಅತಿರಿಕ್ತನಾದ ಜೀವ ಇಲ್ಲವೆಂದಾದರೆ ಈ ಜನ್ಮದಲ್ಲಿ ಹಿಂದಿನ ಜನ್ಮದಲ್ಲಿ ಮಾಡಿದ್ದರ ಸ್ಮರಣೆ ಬರಲು ಹೇಗೆ ಸಾಧ್ಯ ? ದೇಹಕ್ಕಿಂತ ಅತಿರಿಕ್ತನಾಗಿ ಒಬ್ಬ ಜೀವನನ್ನು ಒಪ್ಪಲೇಬೇಕು. ಆದರೆ ಪ್ರತಿಯೊಬ್ಬರಿಗೂ ಹಿಂದಿನ ಜನ್ಮದ ಸ್ಮರಣೆ ಬರುತ್ತಿಲ್ಲ. ಇದಕ್ಕೆ ಪ್ರೇರಕನಾಗಿ ಈಶ್ವರನನ್ನು ಒಪ್ಪಬೇಕು. ಅದೃಷ್ಟಾದಿಗಳನ್ನೂ ಕೂಡ ಒಪ್ಪಬೇಕು. ಈಶ್ವರ, ಅದೃಷ್ಟ ಮೊದಲಾದವುಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳನ್ನು ಪ್ರಮಾಣವನ್ನಾಗಿಯೂ ಒಪ್ಪಬೇಕು. ಸಾಧನೆಯಿದ್ದರೆ ಮಾತ್ರ ಸ್ಮರಣೆ ಬರುತ್ತದೆ. ಸಾಧನೆಯಿಲ್ಲದಿದ್ದರೆ ಸ್ಮರಣೆ ಬರುವುದಿಲ್ಲ ಎಂಬ ಅನ್ವಯವ್ಯತಿರೇಕಿರೂಪವಾದ ಯುಕ್ತಿಯ ಪ್ರಾಮಾಣ್ಯವನ್ನೂ ಕೂಡ ಒಪ್ಪಬೇಕು.

**तत्वप्रकाशिका – अयस्कान्तेनायो भ्रमति न चाचेतने चेष्टकत्वं न च सर्वाचेतनानाम् ।**

ಅಯಸ್ಕಾಂತದಿಂದ ಕಬ್ಬಿಣವು ಚಲಿಸುತ್ತದೆ; ಅಚೇತನಪದಾರ್ಥದಲ್ಲಿ ಇಂತಹ ಚಲನೆಯು ಎಲ್ಲಿಯೂ ಕಂಡಿಲ್ಲ. ಮತ್ತು ಎಲ್ಲಾ ಅಚೇತನಪದಾರ್ಥಗಳಿಗೂ ಈ ಶಕ್ತಿ ಇರುವುದಿಲ್ಲ.

ವಿವರಣೆ - ಕಬ್ಬಿಣದಲ್ಲಿ ಅಯಸ್ಕಾಂತದಿಂದ ಕ್ರಿಯೆಯು ಉಂಟಾಗುತ್ತದೆ. ಬೇರೆ ಯಾವುದೇ ಜಡಪದಾರ್ಥಗಳಲ್ಲಿ ಕಾಣದ್ದು, ಈ ಅಯಸ್ಕಾಂತದಲ್ಲಿ ಕಾಣಿಸುತ್ತಿದೆ. ಜಡವಾದ ಅಯಸ್ಕಾಂತದಲ್ಲಿ ಕ್ರಿಯಾಜನಕತ್ವವು ಸಾಧ್ಯವಿಲ್ಲ. ಆದ್ದರಿಂದ ಅಯಸ್ಕಾಂತದಲ್ಲಿ ಈಶ್ವರನ ಪ್ರೇರಣೆಯಿಂದಲೂ ಕ್ರಿಯಾಜನಕತ್ವ ಶಕ್ತಿಯು ಬಂದಿದೆ ಎಂದು ಒಪ್ಪಬೇಕು. ಇದರಿಂದ ಈಶ್ವರನ ಅಸ್ತಿತ್ವವು ಸಿದ್ಧವಾಗುತ್ತದೆ. ಈಶ್ವರನಿದ್ದರೆ ಕಬ್ಬಿಣದಲ್ಲಿ ಕ್ರಿಯಾಜನಕತ್ವವು

ಬರುತ್ತದೆ. ಈಶ್ವರನಿಲ್ಲದಿದ್ದರೆ ಕ್ರಿಯಾಜನಕತ್ವವೂ ಬರುವುದಿಲ್ಲ ಎಂಬ ಯುಕ್ತಿಯೂ ಕೂಡ ಇದರಿಂದ ಸಿದ್ಧವಾದಂತಾಯಿತು.

**ತತ್ವಪ್ರಕಾಶಿಕಾ – ಸೂರ್ಯಕಾನ್ತೇನಾಗ್ನಿರ್ಜಾಯತೇ ನ ಚಾಸೌ ಶಕ್ತಿರಚೇತನೇ ಯುಕ್ತಾ ।**

ಸೂರ್ಯಕಾಂತಮಣಿಯಿಂದ ಅಗ್ನಿಯು ಹುಟ್ಟುತ್ತದೆ; ಬೇರೆ ಜಡಪದಾರ್ಥಗಳಲ್ಲಿ ಈ ಶಕ್ತಿ ಇರುವುದಿಲ್ಲ.

ವಿವರಣೆ - ಸೂರ್ಯಕಿರಣದ ಸಂಪರ್ಕವು ಸೂರ್ಯಕಾಂತಮಣಿಗೆ ಆದಾಗ ಅಗ್ನಿಯು ಪ್ರಜ್ವಲಿಸುತ್ತದೆ. ಅಚೇತನವಾದ ವಸ್ತುವಿನಲ್ಲಿ ಸ್ವಾಭಾವಿಕವಾಗಿ ಅಗ್ನಿಜನ್ಯಶಕ್ತಿಯಿರಲು ಸಾಧ್ಯವಿಲ್ಲ. ಆದರೆ ಸೂರ್ಯಕಾಂತಮಣಿಯಲ್ಲಿ ಇದು ಕಾಣಿಸುತ್ತಿರುವುದರಿಂದ ಇದಕ್ಕೆ ಪ್ರೇರಕನಾಗಿ ಈಶ್ವರನು ಸಿದ್ಧನಾಗುತ್ತಾನೆ. ಅವನನ್ನು ಪ್ರತಿಪಾದನೆ ಮಾಡುವ ಶಾಸ್ತ್ರಕ್ಕೆ ಪ್ರಾಮಾಣ್ಯವೂ ಕೂಡ ಸಿದ್ಧವಾಗುತ್ತದೆ. ಈಶ್ವರ ಇದ್ದರೆ ಮಾತ್ರ ಸೂರ್ಯಕಾಂತಮಣಿಯಲ್ಲಿ ಅಗ್ನಿಜನನ ಶಕ್ತಿಯು ಉತ್ಪತ್ತಿಯಾಗುತ್ತದೆ. ಈಶ್ವರನಿಲ್ಲದಿದ್ದರೆ ಸೂರ್ಯಕಾಂತಮಣಿಯಲ್ಲಿ ಅಗ್ನಿಜನನ ಶಕ್ತಿಯು ಉಂಟಾಗುವುದಿಲ್ಲ. ಈ ಯುಕ್ತಿಗೂ ಕೂಡ ಪ್ರಾಮಾಣ್ಯವು ಸಿದ್ಧವಾಗುತ್ತದೆ.

**ತತ್ವಪ್ರಕಾಶಿಕಾ – ಅಮ್ಬುಭಕ್ಷಣೇನ ತೃಷ್ಣಾ ನಿವರ್ತತೇ ನ ಚ ತನ್ಮೃತಶರೀರೇ ಪಚ್ಯತೇ ನ ಚ ಜೀವತ್ ಸರ್ವಶರೀರೇಷು ।**

ನೀರು ಕುಡಿಯುವುದರಿಂದ ಬಾಯಾರಿಕೆಯು ಹೋಗುತ್ತದೆ; ಆದರೆ ಮೃತಶರೀರದಲ್ಲಿ ಇದು ಆಗುವುದಿಲ್ಲ. ಮತ್ತು ಜೀವಂತ ಎಲ್ಲ ಶರೀರಗಳಲ್ಲಿಯೂ ಆಗುವುದಿಲ್ಲ.

ವಿವರಣೆ - ನೀರು ಕುಡಿಯುವುದರಿಂದ ಬಾಯಾರಿಕೆಯು ಹೋಗುವುದು ನಮ್ಮ ಅನುಭವದಿಂದ ಸಿದ್ಧವಾಗಿದೆ. ಆದರೆ ಸತ್ತ ದೇಹದಲ್ಲಿ ನೀರು ಪಚನವಾಗುವುದಿಲ್ಲ. ಹಾಗಂದ ಮಾತ್ರಕ್ಕೆ ಜೀವಂತವಾದ ಎಲ್ಲಾ ಶರೀರಗಳಲ್ಲಿಯೂ ನೀರು ಪಚನವಾಗುವುದಿಲ್ಲ. ಆದ್ದರಿಂದ ನೀರಿಗೂ, ಬಾಯಾರಿಕೆಯ ಪರಿಹಾರ ಎಂಬ ಕ್ರಿಯೆಗೂ ಕಾರ್ಯಕಾರಣಭಾವವು ಪ್ರತ್ಯಕ್ಷದಿಂದ ಸುತರಾಂ ಸಿದ್ಧವಾಗಿಲ್ಲ. ಇದಕ್ಕೆ ಯುಕ್ತಿಯನ್ನೇ ಮೊರೆಹೊಂದಬೇಕು. ಮತ್ತು ದೇಹಕ್ಕಿಂತ ಅತಿರಿಕ್ತನಾದ ಒಬ್ಬ ಜೀವನನ್ನು, ಅವನಿಗೆ ಪ್ರೇರಕನಾದ ಪರಮಾತ್ಮನನ್ನು,

ಅದೃಷ್ಟವನ್ನು ಇವುಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಪ್ರಾಮಾಣ್ಯವನ್ನು ಒಪ್ಪಲೇ ಬೇಕಾಗುತ್ತದೆ.

**तत्वप्रकाशिका – मरणेन देहस्य भूतेष्वप्ययो भवति न च जीवतो न स्वेच्छया ।**

ಮರಣದಿಂದ ದೇಹವು ಪಂಚಭೂತಗಳಲ್ಲಿ ಲಯವಾಗುತ್ತದೆ. ಆದರೆ ಜೀವಂತಶರೀರವು ಅಥವಾ ಸ್ವೇಚ್ಛೆಯಿಂದ ಪಂಚಭೂತಗಳಲ್ಲಿ ಲಯವಾಗುವುದಿಲ್ಲ.

ವಿವರಣೆ - ಜೀವನು ಯಾವಾಗ ಮರಣವನ್ನು ಹೊಂದುತ್ತಾನೋ, ಆವಾಗ ಪಾಂಚಭೌತಿಕವಾದ ಶರೀರವು ಪಂಚಭೂತಗಳಲ್ಲಿ ಲೀನವಾಗುತ್ತದೆ. ಆದರೆ ಬದುಕಿರುವಾಗ ಆ ದೇಹವು ಪಂಚಭೂತಗಳಲ್ಲಿ ಲಯವಾಗುವುದಿಲ್ಲ. ಜೀವನ ಇಚ್ಛೆಪಟ್ಟರೂ ಕೂಡ ಪಂಚಭೂತಗಳಲ್ಲಿ ಲಯವಾಗುವುದಿಲ್ಲ. ಇದರಿಂದ ದೇಹಕ್ಕಿಂತ ಅತಿರಿಕ್ತನಾದ ಒಬ್ಬ ಜೀವನನ್ನು ಒಪ್ಪಬೇಕು. ಮತ್ತು ಅವನ ಮರಣ, ಆ ದೇಹಕ್ಕೆ ಲಯವನ್ನುಂಟುಮಾಡುವ ಒಬ್ಬ ಈಶ್ವರನನ್ನು ಇದರ ಹಿಂದೆ ಒಪ್ಪಲೇ ಬೇಕಾಗುತ್ತದೆ. ಮತ್ತು ಮರಣ ಆದಾಗ ಮಾತ್ರ ದೇಹಕ್ಕೆ ಪಂಚಭೂತಗಳಲ್ಲಿ ಲಯವೆಂಬ ಕಾರ್ಯವು ಸಿದ್ಧವಾಗುವುದರಿಂದ ಮರಣಕ್ಕೂ, ದೇಹದ ಲಯಕ್ಕೂ ಕಾರ್ಯಕಾರಣಭಾವವನ್ನು ಒಪ್ಪುವ ಮೂಲಕ ಯುಕ್ತಿಯ ಪ್ರಾಮಾಣ್ಯವನ್ನು ಅಂಗೀಕರಿಸಬೇಕು. ಈಶ್ವರನನ್ನು ಪ್ರತಿಪಾದನೆ ಮಾಡುವ ಆಗಮಕ್ಕೆ ಪ್ರಾಮಾಣ್ಯವನ್ನೂ ಕೂಡ ಅಂಗೀಕರಿಸಬೇಕು.

**तत्वप्रकाशिका – देवताभ्युपयाचनेन सम्पदादिकं भवति न च सर्वेषाम् ।**

ದೇವತೆಗಳ ಪ್ರಾರ್ಥನೆಯಿಂದ ಸಂಪತ್ತು ಮೊದಲಾದವುಗಳು ಪ್ರಾಪ್ತವಾಗುತ್ತವೆ. ಆದರೆ ಎಲ್ಲರಿಗೂ ಆಗುವುದಿಲ್ಲ. ಮರಣದಿಂದ ಚೇಷ್ಟೆಯು ನಿಲ್ಲುತ್ತದೆ. ಆದರೆ ಸ್ವೇಚ್ಛೆಯಿಂದ ನಿಲ್ಲುವುದಿಲ್ಲ.

ವಿವರಣೆ - ನಮಗೆ ಇಷ್ಟನಾದ ದೇವತೆಯ ಬಳಿ ಪ್ರಾರ್ಥನೆ ಮಾಡಿದಾಗ ನಮ್ಮ ಅಭೀಷ್ಟೆಗಳು ಈಡೇರುತ್ತವೆ. ದುಃಖವು ಪರಿಹಾರವಾಗುತ್ತದೆ. ಆದರೆ ಎಷ್ಟೋ ಮಂದಿ ಪ್ರಾರ್ಥನೆ ಮಾಡಿಕೊಂಡರು ಅವರ ಅಭೀಷ್ಟೆ ನೆರವೇರುವುದಿಲ್ಲ. ದುಃಖವೂ ಕೂಡ ಪರಿಹಾರವಾಗುವುದಿಲ್ಲ. ಪ್ರಾರ್ಥನೆಗೂ ದುಃಖ ಪರಿಹಾರಕ್ಕೂ ಕಾರ್ಯಕಾರಣಭಾವವು

ಅನುಭವಸಿದ್ಧವಾಗಿದೆ. ಇದನ್ನು ಸಮರ್ಥಿಸುವ ಯುಕ್ತಿಯ ಪ್ರಾಮಾಣ್ಯವನ್ನು ಒಪ್ಪಬೇಕು. ಮತ್ತು ಫಲನೀಡುವ ದೇವರ ಕೆಲವರಿಗೆ ಮಾತ್ರ ಫಲಬರಲು ನಿಮಿತ್ತವಾದ ಅದೃಷ್ಟಫಲವನ್ನು ಅನುಭವಿಸುವ ಜೀವ, ಈಶ್ವರಬೋಧಕವಾದ ಶಾಸ್ತ್ರಪ್ರಾಮಾಣ್ಯ ಇವುಗಳನ್ನೂ ಕೂಡ ಅಂಗೀಕರಿಸಬೇಕು.

**तत्वप्रकाशिका – मरणेन चेष्टानिवृत्तिर्भवति न पुनः स्वेच्छया ।**

ಮರಣ ಹೊಂದಿದಾಗ ದೇಹದಲ್ಲಿ ಚೇಷ್ಟೆಯು ನಿಲ್ಲುತ್ತದೆ. ಇದು ತನ್ನ ಇಚ್ಛೆಯ ಪ್ರಕಾರ ನಿಲ್ಲುವುದಿಲ್ಲ.

ವಿವರಣೆ - ಯಾವಾಗ ಮರಣ ಪ್ರಾಪ್ತವಾಗುತ್ತದೋ, ಆವಾಗ ದೇಹವು ನಿಷ್ಕ್ರಿಯವಾಗುತ್ತದೆ. ಕ್ರಿಯಾನಿವೃತ್ತಿಗೆ ಮರಣವು ಕಾರಣವೆನ್ನುವುದು ಪ್ರತ್ಯಕ್ಷದಿಂದ ಸಿದ್ಧವಾಗಿಲ್ಲ. ಏಕೆಂದರೆ ಕ್ರಿಯಾಶೀಲವಾಗಿರುವುದು ದೇಹವಲ್ಲ. ಏಕೆಂದರೆ ಮರಣ ಹೊಂದಿದ ಮೇಲೂ ದೇಹವಿದೆ. ಆದರೂ ಕ್ರಿಯೆಯು ಕಾಣಿಸುತ್ತಿಲ್ಲ. ಮತ್ತು ಮರಣವು ಬಯಸಿದ ಮಾತ್ರಕ್ಕೆ ಬರುವುದಿಲ್ಲ. ಇದರಿಂದ ಏನು ತಿಳಿಯುತ್ತದೆಂದರೆ ದೇಹಕ್ಕಿಂತ ಅತಿರಿಕ್ತನಾದ ಒಬ್ಬ ಜೀವ ಇರುವುದರಿಂದ ಕ್ರಿಯೆಯು ದೇಹದಲ್ಲಿ ಉಂಟಾಗುತ್ತದೆಂದು ಒಪ್ಪಬೇಕು. ಇಚ್ಛಿಸಿದರೂ ಆವನಿಗೆ ಮರಣವು ಬಾರದ ಕಾರಣ, ಆ ಮರಣವನ್ನು ನೀಡುವ ಒಬ್ಬ ಈಶ್ವರನನ್ನು ಒಪ್ಪಬೇಕು. ಮರಣಕ್ಕೂ ಕ್ರಿಯಾನಿವೃತ್ತಿಗೂ ಇರುವ ಕಾರ್ಯಕಾರಣ-ಭಾವಸಂಬಂಧವನ್ನು ತಿಳಿಸಲು ಯುಕ್ತಿಯನ್ನು ಪ್ರಮಾಣವನ್ನಾಗಿ ಒಪ್ಪಬೇಕು. ಈಶ್ವರ, ಅದೃಷ್ಟ ಇವುಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳಿಗೂ ಕೂಡ ಪ್ರಾಮಾಣ್ಯವನ್ನು ಒಪ್ಪಬೇಕು.

**तत्वप्रकाशिका – एतैः प्रमापकैरनुमानजीवेश्वरागमादृष्टादिसिद्धेर्न नास्तिक्यवादो युज्यते इत्यर्थः ।**

ಈ ಎಲ್ಲ ದೃಷ್ಟಾಂತಗಳಿಂದ ಅನುಮಾನ, ಜೀವ, ಈಶ್ವರ, ವೇದ, ಅದೃಷ್ಟ ಮೊದಲಾದ ಪದಾರ್ಥಗಳು ಸಿದ್ಧವಾಗುತ್ತವೆ. ಆದ್ದರಿಂದ ನಾಸ್ತಿಕ್ಯವಾದವು ಅಯುಕ್ತವಾಗಿದೆ ಎಂದು ಅಭಿಪ್ರಾಯ.

**तत्वप्रकाशिका – इतश्चासौ न युज्यत इत्याह – दर्शनाच्चेति ।। अत्युत्कटतपःपापाभ्यां प्रत्यक्षत एव फलं दृश्यते । न च तत्र कारणरान्तरमस्ति । अतस्तत्कार्यकारणभावोऽनुमानवेद्य इति तन्मानत्वसिद्धिः । तप आदीनां वैदिकत्वादागममानत्वसिद्धिः । ततश्चेश्वरादिसिद्धिरिति न नास्तिक्यवादो युज्यते। तस्मात् शास्त्रादेवेश्वरादिसिद्धिरिति युक्तमेवेति भावः ।**

ಇನ್ನೂ ಕೆಲವು ಕಾರಣಗಳಿಂದ ನಾಸ್ತಿಕ್ಯವಾದವು ಯುಕ್ತವಲ್ಲವೆಂಬುದನ್ನು ''ದರ್ಶನಾಚ್ಚ'' ಎಂಬ ಮಾತುಗಳಿಂದ ತಿಳಿಸುತ್ತಿದ್ದಾರೆ.

ಅತ್ಯುತ್ಕೃಷ್ಟವಾದ ತಪಸ್ಸು ಹಾಗೂ ಪಾಪಗಳಿಂದ ಫಲ ಬರುವುದು ಪ್ರತ್ಯಕ್ಷದಿಂದಲೇ ಕಾಣಿಸುತ್ತಿದೆ. ಈ ಫಲಾನುಭವಕ್ಕೆ ಬೇರೆ ಯಾವುದೇ ಕಾರಣಗಳಿರುವುದಿಲ್ಲ. ಆದ್ದರಿಂದ ಈ ಎಲ್ಲ ಕಾರ್ಯಕಾರಣಭಾವವು ಅನುಮಾನದಿಂದ ತಿಳಿಯಬೇಕು. ಆದ್ದರಿಂದ ಅನುಮಾನವು ಪ್ರಮಾಣವೆಂದು ಸಿದ್ಧವಾಗುತ್ತದೆ. ತಪಸ್ಸೇ ಮೊದಲಾದವುಗಳು ವೇದಮೂಲಕವಾದ ಅನುಷ್ಠಾನಗಳಾದ್ದರಿಂದ ಆಗಮಪ್ರಾಮಾಣ್ಯವು ಸಿದ್ಧವಾಗುತ್ತದೆ. ಆಗಮವು ಪ್ರಮಾಣವಾದ್ದರಿಂದ ಈಶ್ವರನೂ ಸಹ ಸಿದ್ಧನಾಗುತ್ತಾನೆ. ಈ ಎಲ್ಲ ಕಾರಣಗಳಿಂದ ನಾಸ್ತಿಕ್ಯವಾದವು ಅಯುಕ್ತವಾಗಿದೆ. ಆದ್ದರಿಂದ ಶಾಸ್ತ್ರಪ್ರಮಾಣದಿಂದಲೇ ಈಶ್ವರನು ಸಿದ್ಧನಾಗುತ್ತಾನೆಂದು ಹೇಳಿದ್ದು ಯುಕ್ತವೇ ಆಗಿದೆ ಎಂದು ಅಭಿಪ್ರಾಯ.

ವಿವರಣೆ - ಪುಣ್ಯ , ಪಾಪ ಹಾಗೂ ಇವುಗಳ ಫಲಗಳಿಗೆ ಕಾರ್ಯ್ಯಕಾರಣಭಾವಸಂಬಂಧವು ಅನುಮಾನದಿಂದ ವೇದ್ಯವಾಗಿರುವುದರಿಂದ ಅನುಮಾನಕ್ಕೆ ಪ್ರಾಮಾಣ್ಯವನ್ನು ಒಪ್ಪಬೇಕು. ತಪಸ್ಸು, ಪುಣ್ಯ , ಪಾಪ ಇವುಗಳನ್ನು ಹೇಳುವ ವೇದಕ್ಕೂ ಕೂಡ ಪ್ರಾಮಾಣ್ಯವನ್ನು ಒಪ್ಪಬೇಕು. ಪ್ರಮಾಣಭೂತವಾದ ವೇದದಿಂದ ಈಶ್ವರನನ್ನು ಅತೀಂದ್ರಿಯಪದಾರ್ಥಗಳನ್ನು ಪ್ರಮಾಣವೆಂದು ಒಪ್ಪಬೇಕು. ಆದ್ದರಿಂದ ನಾಸ್ತಿಕ್ಯವಾದವು ಯಾವುದೇ ರೀತಿಯಲ್ಲಿ ಸಮಂಜಸವಾಗಿರುವುದಿಲ್ಲ. ಜಗಜ್ಜನ್ಮಾದಿಕಾರಣನಾದ ಈಶ್ವರನು ಹೀಗೆ ಶಾಸ್ತ್ರಪ್ರಮಾಣದಿಂದ ಸಿದ್ಧವಾಗುತ್ತಾನೆ.

## ನಾಸ್ತಿಕ್ಯವಾದನಿರಾಸವು ಸೂತ್ರಕಾರರಿಗೆ ಸಮ್ಮತವೇ ಆಗಿದೆ

**ಭಾವದೀಪಃ** – 'शास्त्र'पदव्यावर्त्यचोद्ययोरेकं निरस्य, अन्यं निरसिष्यन् इदानीं 'योनि'पदव्यावर्त्यचोद्यनिरासाय प्रवृत्तम् 'रेतः' इत्यादिभाष्यम् । तस्य सङ्गत्यप्रतीतेर्भाष्यस्थनास्तिक्यवादपदार्थं वदन्नेव तामाह – **नन्वतीन्द्रयेति** ।। एतेन 'रेतो धातुः' इत्यादिकमुत्सूत्रमिति कस्यचित् चोद्यं निरस्तम् । 'शास्त्रं योनिः प्रमाणम्' इत्युक्त्या तदप्रामाण्यापकृतेः सूचनात् ।

'ಶಾಸ್ತ್ರ'ಪದದಿಂದ ವ್ಯಾವೃತ್ತಿಮಾಡಬೇಕಾದ ಅನುಮಾನ ಮತ್ತು ದುಷ್ಟಾಗಮಗಳಲ್ಲಿ ಅನುಮಾನವನ್ನು ನಿರಾಸಮಾಡಿ ದುಷ್ಟಾಗಮಗಳನ್ನು ನಿರಾಸಮಾಡುವುದರ ಮೊದಲು ಸೂತ್ರಗತವಾದ 'ಯೋನಿ'ಪದದಿಂದ ವ್ಯಾವೃತ್ತಿಮಾಡಬೇಕಾದ ಚೋದ್ಯವನ್ನು ನಿರಾಸಮಾಡಲು 'ರೇತಃ' ಇತ್ಯಾದಿ ಭಾಷ್ಯವು ಪ್ರವೃತ್ತವಾಗಿದೆ. ಈ ವಾಕ್ಯಕ್ಕೆ ಸಂಗತಿಯು ತಿಳಿಯದಿರುವುದರಿಂದ ಭಾಷ್ಯದಲ್ಲಿರುವ 'ನಾಸ್ತಿಕ್ಯವಾದ'ದ ವಿಷಯವನ್ನು ಹೇಳುತ್ತಾ, 'ನನು ಅತೀಂದ್ರಿಯ' ಇತ್ಯಾದಿ ವಾಕ್ಯಗಳಿಂದ ನಾಸ್ತಿಕ್ಯವಾದವನ್ನು ವಿವರಿಸುತ್ತಿದ್ದಾರೆ. ಇದರಿಂದ 'ರೇತೋ ಧಾತುಃ' ಇತ್ಯಾದಿವಾಕ್ಯವು ಸೂತ್ರವನ್ನು ಬಿಟ್ಟು ಇದೆ ಎಂಬ ಯಾವುದೋ ಒಬ್ಬ ಗ್ರಂಥಕಾರನ ಆಶಯವು ನಿರಸ್ತವಾಯಿತು. 'ಶಾಸ್ತ್ರಂ ಯೋನಿಃ ಪ್ರಮಾಣಮ್' ಎಂಬ ವಿಗ್ರಹವಾಕ್ಯಪ್ರದರ್ಶನದಿಂದ 'ಶಾಸ್ತ್ರವು ಅಪ್ರಮಾಣ ಎಂಬ ಅರ್ಥವನ್ನು ಇಲ್ಲಿ ನಿರಾಸಮಾಡಲಾಗುತ್ತದೆ' ಎಂಬ ಸೂಚನೆಯನ್ನು ಭಾಷ್ಯಕಾರರೇ ಮಾಡಿದ್ದಾರೆ.

## ಯೋನಿಪದ ವ್ಯಾಖ್ಯಾನದ ವ್ಯತ್ಯಾಸಕ್ಕೆ ಕಾರಣ

**ಭಾವದೀಪಃ** – 'अनुक्तानां प्रमाणानां सङ्ग्रहश्च कुतो भवेत्' इत्यादिस्मृत्या अध्यायान्ते द्विरुक्त्या सर्वत्र सूचनाच्च शास्त्रपदव्यावर्त्य-चोद्यद्वयनिरासानन्तरं अस्य 'योनि'पदव्यावर्त्यचोद्यस्य निरस्यत्वेप्यत्र तन्निरासस्तु 'प्रमाणपदवीं गच्छेत्' इत्यनुमानप्रामाण्यप्रस्तावात् । भाष्ये

**'ಮೋಕ್ಷಧರ್ಮ' ಇತಿ । ತಂ ಪ್ರತ್ಯಸ್ಯಾನುಪಯೋಗೇऽಪಿ ಶಿಷ್ಯಂ ಪ್ರತ್ಯುಪಯೋಗಾದೇತದುಕ್ತಿರಿತಿ ಭಾವಃ ।**

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು — 'ಅನುಕ್ತಾನಾಂ ಪ್ರಮಾಣಾನಾಂ ಸಂಗ್ರಹಶ್ಚ ಕುತೋ ಭವೇತ್' (ಬ್ರ.ಸೂ.ಭಾ.೨/೪/೨೩) (ಅಧ್ಯಾಯದ ಕೊನೆಯಲ್ಲಿ ದ್ವಿರುಕ್ತಿಯನ್ನು ಹೇಳುವುದರಿಂದ ಗ್ರಂಥದಲ್ಲಿ ಅನುಕ್ತವಾದ ಪ್ರಮಾಣಗಳ ಸಂಗ್ರಹವನ್ನೂ ಮಾಡಿದಂತಾಗುತ್ತವೆ) ಇತ್ಯಾದಿ ಸ್ಮೃತಿಯಿಂದ ಅಧ್ಯಾಯಾಂತದಲ್ಲಿ ದ್ವಿರುಕ್ತಿಯನ್ನು ಹೇಳುವ ಮೂಲಕ ಎಲ್ಲ ಕಡೆಗಳಲ್ಲೂ ಇದೇ ರೀತಿಯಾಗಿ ಅರ್ಥವನ್ನು ಗ್ರಹಿಸಬೇಕು ಎಂಬ ಯೋಜನೆಯನ್ನೂ ನೀಡಿರುವುದರಿಂದ 'ಶಾಸ್ತ್ರ'ಪದದಿಂದ ವ್ಯಾವೃತ್ತಿಮಾಡಬೇಕಾದ ಎರಡು ಚೋದ್ಯಗಳನ್ನು ನಿರಾಸಮಾಡಿದ ನಂತರವೇ 'ಯೋನಿ'ಪದದಿಂದ ವ್ಯಾವರ್ತ್ಯವಾದ ಚೋದ್ಯವನ್ನು ನಿರಾಸಮಾಡಬೇಕಾದೀತು? ಇದಕ್ಕೆ ಉತ್ತರವಾಗಿ 'ಪ್ರಮಾಣಪದವೀಂ ಗಚ್ಛೇತ್' ಎಂಬುದಾಗಿ ಅನುಮಾನಪ್ರಾಮಾಣ್ಯದ ಪ್ರಸ್ತಾವವು ಇಲ್ಲಿ ಬಂದಿರುವುದರಿಂದ ಇಲ್ಲೇ ಯೋನಿಪದವ್ಯಾವೃತ್ಯವಾದ ಚೋದ್ಯವನ್ನು ನಿರಾಸಮಾಡುತ್ತಿದ್ದಾರೆ. ಭಾಷ್ಯದಲ್ಲಿ 'ಮೋಕ್ಷಧರ್ಮವಚನಾತ್' ಎಂಬ ಅಂಶವನ್ನು ಸೂತ್ರದಲ್ಲಿ ಹೇಳಬೇಕಾದ ಅಂಶಕ್ಕೆ ಇದರಿಂದ ಉಪಯೋಗವಿಲ್ಲದಿದ್ದರೂ ಶಿಷ್ಯರಿಗೆ ಇದು ಯಾವ ಗ್ರಂಥದಿಂದ ಸ್ವೀಕರಿಸಿದ್ದು ಎಂಬ ಜಿಜ್ಞಾಸೆಯನ್ನು ಪೂರ್ಣಗೊಳಿಸಲು ಹೇಳಿದ್ದಾರೆ.

## ಹನ್ನೆರಡು ದೃಷ್ಟಾಂತಗಳಿಗೆ ನಾಸ್ತಿಕ್ಯವಾದ ನಿರಾಸಕತ್ವಸಮರ್ಥನೆ

**ಭಾವದೀಪಃ – 'ಭಾಷ್ಯೇऽನ್ತಿಮಂ ಪ್ರಮಾಣಪದಂ ಕರಣಸಾಧನಂ ಸತ್ ರೇತಃಪ್ರಭೃತಿಷು ದ್ವಾದಶಸ್ವನ್ವೇತಿ' ಇತಿ ಕುತ್ರ ಪ್ರಮಾಣಮ್? ಇತ್ಯಾಕಾಙ್ಕ್ಷಾಂ ಪೂರಯನ್ ಯೋಜಯತಿ – ರೇತೋ ಧಾತ್ವಾದೀತಿ ।। 'ವಚನಾತ್' ಇತ್ಯಸ್ಯ ನಾಸ್ತಿಕ್ಯವಾದಾಯೋಗೇ ಹೇತುತ್ವಾಯೋಗಾದಾಹ – ಏತೈರಿತಿ ।। 'ವಚನಾತ್ ಪ್ರತೀತೈಃ' ಇತ್ಯರ್ಥಃ ।**

ಭಾಷ್ಯದಲ್ಲಿ ಹೇಳಿದ 'ಪ್ರಮಾಣ'ಪದವು ಜ್ಞಾನಸಾಧಕ ಎಂಬ ಅರ್ಥವುಳ್ಳದ್ದಾಗಿ, ರೇತಃಪ್ರಭೃತಿಯಾದ ಹನ್ನೆರಡು ಕಡೆಗಳಲ್ಲೂ ಕೂಡ ಅನ್ವಯವನ್ನು ಪಡೆಯುತ್ತದೆ. ಇದಕ್ಕಾಗಿ ಇವುಗಳು ಎಲ್ಲಿ ಪ್ರಮಾಣ? ಎಂಬ ಆಕಾಂಕ್ಷೆಯನ್ನು ಪೂರ್ಣಗೊಳಿಸುವ ರೀತಿಯಲ್ಲಿ

'ರೇತೋ ಧಾತು' ಇತ್ಯಾದಿ ವಾಕ್ಯಗಳಿಂದ ವಿವರಣೆಯನ್ನು ನೀಡುತ್ತಿದ್ದಾರೆ. ಭಾಷ್ಯದಲ್ಲಿ ಹೇಳಿದ 'ವಚನಾತ್' ಎಂಬ ಅರ್ಥವು ನಾಸ್ತಿಕ್ಯವಾದವನ್ನು ನಿರಾಸಮಾಡುವ ವಿಷಯದಲ್ಲಿ ಹೇತುವಾಗಲಾರದು ಎಂಬ ಪ್ರಶ್ನೆಗೆ 'ಏತೈಃ' ಎಂಬ ವಾಕ್ಯದಿಂದ ವಿವರಣೆಯನ್ನು ನೀಡುತ್ತಿದ್ದಾರೆ. 'ಏತೈಃ' ಎಂಬ ಪದಕ್ಕೆ ವಚನದಿಂದ ಪ್ರತೀತವಾದ ವಿಷಯಗಳಿಂದ ಎಂದರ್ಥ.

ವಿಶೇಷ ವಿಚಾರ - ಟೀಕೆಯಲ್ಲಿ 'ಕಾರ್ಯಕಾರಣಭಾವೋಽಸ್ತಿ' ಎಂದು ಇದೆ. ರೇತಸ್ಸಿಗೂ ಶರೀರಕ್ಕೂ ಕಾರ್ಯಕಾರಣಭಾವವಿಲ್ಲದಿದ್ದಲ್ಲಿ ಮಕ್ಕಳನ್ನು ಹುಟ್ಟಿಸುವುದಕ್ಕಾಗಿ ಸ್ತ್ರೀಶರೀರದಲ್ಲಿ ರೇತಸ್ಸೇಚನದ ಪ್ರವೃತ್ತಿಯೇ ಉಂಟಾಗದಿರಬೇಕಾದೀತು. ಆದ್ದರಿಂದ ಶರೀರಕ್ಕೂ ರೇತಸ್ಸಿಗೂ ಕಾರ್ಯಕಾರಣ ಬಾವವಿದೆಯೆಂದು ಒಪ್ಪಬೇಕು. 'ನ ಚಾಸೌ ಪ್ರತ್ಯಕ್ಷ' ಎಂದು ಟೀಕೆಯಲ್ಲಿದೆ. ರೇತಸ್ಸಿಗೂ ಶರಿರಕ್ಕೂ ಕಾರ್ಯಕಾರಣ ಭಾವವು ಏಕೆ ಕಣ್ಣಿಗೆ ಕಾಣಿಸುವುದಿಲ್ಲವೆಂದರೆ, ಕಣ್ಣಿಗೆ ಕಾಣದ ಕಾಲಾದಿಗಳಿಂದ ಘಟಿತವಾಗಿರುವುದರಿಂದ ಎಂದು ಅಭಿಪ್ರಾಯ.

ಟೀಕೆಯಲ್ಲಿ 'ಅನ್ವಯವ್ಯತಿರೇಕಿತ್ವಾಖ್ಯ' ಎಂದು ಅನುಮಾನವನ್ನು ಸೂಚನೆ ಮಾಡಿದ್ದಾರೆ. ಆ ಅನುಮಾನವು ಹೀಗಿದೆ - 'ಶರೀರಂ ರೇತೋಜನ್ಯಂ ತದನ್ವಯವ್ಯತಿರೇಕಪ್ರಯುಕ್ತಾನ್ವಯವ್ಯತಿರೇಕಪ್ರತಿಯೋಗಿತ್ವಾತ್' ಎಂದು.

## ಸಚ್ಛಾಸ್ತ್ರಗಳೇ ಮಾರ್ಗದರ್ಶಕಗಳು

**ಬ್ರಹ್ಮಸೂತ್ರಭಾಷ್ಯಮ್ –**

**'ಋಗ್ಯಜುಸ್ಸಾಮಾಥರ್ವಾಶ್ಚ ಭಾರತಂ ಪಞ್ಚರಾತ್ರಕಮ್ ।**
**ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ।।**

**ಯಚ್ಚಾನುಕೂಲಮೇತಸ್ಯ ತಚ್ಚ ಶಾಸ್ತ್ರಂ ಪ್ರಕೀರ್ತಿತಮ್ ।**
**ಅತೋಽನ್ಯೋ ಗ್ರನ್ಥವಿಸ್ತಾರೋ ನೈವ ಶಾಸ್ತ್ರಂ ಕುವರ್ತ್ಮ ತತ್ ।।' ಇತಿ ಸ್ಕಾನ್ದೇ ।**

ಅನುವಾದ -- ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವವೇದ ಮಹಾಭಾರತ ಪಂಚರಾತ್ರಾಗಮ, ಮೂಲರಾಮಾಯಣ ಈ ಏಳೂ ಶಾಸ್ತ್ರಗಳೆಂದು ಪ್ರಸಿದ್ಧವಾಗಿವೆ. ಮತ್ತು ಈ ಏಳು ಶಾಸ್ತ್ರಗಳಿಗೆ ಅನುಕೂಲವಾದ ಪ್ರಮೇಯಗಳನ್ನು ಪ್ರತಿಪಾದಿಸುವ ಪೌರುಷೇಯ

ಗ್ರಂಥಗಳೆಲ್ಲವೂ ಪ್ರಮಾಣಗಳೇ ಆಗಿವೆ. ಈ ಏಳು ಶಾಸ್ತ್ರಗಳಿಗೆ ವಿರುದ್ಧವಾದ ಪ್ರಮೇಯಗಳನ್ನು ಪ್ರತಿಪಾದಿಸುವ ಪಾಶುಪತಾದಿಶಾಸ್ತ್ರಗಳೆಲ್ಲವೂ ಶಾಸ್ತ್ರಗಳೇ ಆಗುವುದಿಲ್ಲ; ಹೊರತು ಆ ಎಲ್ಲಾ ಶಬ್ದಪ್ರಪಂಚವು ಅಪಮಾರ್ಗವನ್ನೇ ತೋರಿಸುತ್ತವೆ. ಹೀಗೆ ಸ್ಕಾಂದಪುರಾಣದಲ್ಲಿ ತೋರಿಸಲ್ಪಟ್ಟಿದೆ.

ಪ್ರತಿಪದಾರ್ಥ -- ಅನುಮಾನವು ನಿಶ್ಚಾಯಕವಲ್ಲದ ಕಾರಣ ಶಾಸ್ತ್ರದಿಂದ ಜಗತ್ಕಾರಣತ್ವವು ಸಿದ್ಧವಾಗುತ್ತದೆಂದು ಹೇಳಿದಿರಿ. ಹಾಗಾದಲ್ಲಿ ಪಾಶುಪತಾದಿ ಶಾಸ್ತ್ರದಿಂದಲೂ ರುದ್ರಾದಿಗಳ ಜಗತ್ಕಾರಣತ್ವವು ಸಿದ್ಧವಾಗಲಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಋಕ್ = ಋಗ್ವೇದ, ಯಜುಃ = ಯಜುರ್ವೇದ, ಸಾಮ = ಸಾಮವೇದ, ಅಥರ್ವಾಚ್ಚ = ಅಥರ್ವವೇದವೂ ಸಹ; ಭಾರತಂ = ಮಹಾಭಾರತವು, ಪಂಚರಾತ್ರಕಮ್ = ಪಂಚರಾತ್ರಾಗಮವು, ಚ = ಮತ್ತು, ಮೂಲರಾಮಾಯಣಂ = ಮೂಲರಾಮಾಯಣವು, ಏವ = ಇವುಗಳೇ, ಶಾಸ್ತ್ರಮಿತಿ = ಶಾಸ್ತ್ರಗಳೆಂದು, ಅಭಿಧೀಯತೇ = ಕರೆಯಲ್ಪಡುತ್ತವೆ.

ಏತಸ್ಯ = ಈ ಏಳು ಶಾಸ್ತ್ರಗಳಿಗೆ, ಯಸ್ಯ = ಯಾವುದು, ಅನುಕೂಲಂ = ಅನುಕೂಲವಾದ ಪೌರುಷೇಯಗ್ರಂಥವಿದೆಯೋ, ತಚ್ಚ = ಆ ಗ್ರಂಥವು, ಶಾಸ್ತ್ರಮಿತಿ = ಶಾಸ್ತ್ರವೆಂದು, ಪ್ರಕೀರ್ತಿತಮ್ = ಪ್ರಸಿದ್ಧವಾಗಿದೆ; ಅತಃ = ಈ ಏಳುಶಾಸ್ತ್ರಗಳಿಗಿಂತ, ಅನ್ಯಃ = ಭಿನ್ನವಾದ, ಗ್ರಂಥವಿಸ್ತಾರಃ = ಗ್ರಂಥಪ್ರಪಂಚವು, ನೈವ ಶಾಸ್ತ್ರಮ್ = ಶಾಸ್ತ್ರವೇ ಅಲ್ಲ; ಹೊರತಾಗಿ ತತ್ = ಆ ಗ್ರಂಥಪ್ರಪಂಚವು, ಕುವರ್ತ್ಮ = ಕೆಟ್ಟಮಾರ್ಗವು, ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

## ಶಾಸ್ತ್ರ ಎಂದರೇನು ?

**ತತ್ವಪ್ರಕಾಶಿಕಾ –**

**ನನು 'ಏವಮನುಮಾನಸ್ಯಾನಿಶ್ಚಾಯಕತ್ವೇನ ಶಾಸ್ತ್ರಾದೇವ ಕಾರಣತ್ವಸಿದ್ಧಿಶ್ಚೇತ್ತರ್ಹಿ ಪಾಶುಪತಾದಿಶಾಸ್ತ್ರೇಣ ರುದ್ರಾದೇಃ ಕಾರಣತ್ವಂ ಸ್ಯಾತ್ ?' ಇತ್ಯತ ಆಹ – ಋಗಿತಿ ।।**

ಹೀಗೆ ಜಗತ್ಕಾರಣತ್ವವಿಷಯದಲ್ಲಿ ಅನುಮಾನವು ಪ್ರಮಾಣವಾಗದಿದ್ದರೆ, ಕೇವಲ ಶಾಸ್ತ್ರದಿಂದಲೇ ಅದು ನಿಶ್ಚಯವಾಗಬೇಕಾಗುತ್ತದೆ. ಆ ಪಕ್ಷದಲ್ಲಿ ಪಾಶುಪತಾದಿಶಾಸ್ತ್ರಗಳಿಂದ

ರುದ್ರಾದಿಗಳಿಗೂ ಸಹ ಜಗತ್ಕಾರಣತ್ವವನ್ನು ಏಕೆ ಒಪ್ಪಬಾರದು? ಎಂಬ ಪ್ರಶ್ನೆಗೆ ಭಾಷ್ಯಕಾರರು 'ಋಗ್ಯಜುಃ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

## ಪಾಶುಪತಾದಿಗಳು ಶಾಸ್ತ್ರವಲ್ಲ

**ಭಾವದೀಪಃ – ಸೌತ್ರ'ಶಾಸ್ತ್ರ'ಪದವ್ಯಾವರ್ತ್ಯಪಾಶುಪತಾದ್ಯಾಗಮಮೂಲಕಚೋದ್ಯನಿರಾಸಾಯ ಪ್ರವೃತ್ತಂ 'ಋಗ್ಯಜುಃ' ಇತ್ಯಾದಿಭಾಷ್ಯಮ್ । ತಸ್ಯ ತಥಾತ್ವಾಪ್ರತೀತೇರಾಹ – ನನ್ವೇವಮಿತಿ।।**

ಸೂತ್ರದಲ್ಲಿ ಹೇಳಿದ ''ಶಾಸ್ತ್ರ''ಪದದಿಂದ ವ್ಯಾವೃತ್ತಿ ಮಾಡಬೇಕಾದ ಪಾಶುಪತಾದಿ ಆಗಮಮೂಲಕವಾದ ಚೋದ್ಯವನ್ನು ನಿರಾಸಮಾಡುವುದಕ್ಕಾಗಿ 'ಋಗ್ಯಜುಃ' ಇತ್ಯಾದಿ ಭಾಷ್ಯವು ಪ್ರವೃತ್ತವಾಗಿದೆ. ಆ ಭಾಷ್ಯದ ಭಾಗಕ್ಕೆ ಆ ರೀತಿಯ ಅರ್ಥವು ನೇರವಾಗಿ ಕಾಣದೇ ಇರುವುದರಿಂದ 'ನನ್ವೇವಂ' ಇತ್ಯಾದಿ ವಾಕ್ಯಗಳಿಂದ ಅವತರಣಿಕೆಯನ್ನು ಹೇಳುತ್ತಿದ್ದಾರೆ.

ವಿಶೇಷ ವಿಚಾರ - ಹಿತವನ್ನು ಶಾಸನ ಮಾಡುವುದರಿಂದ ಶಾಸ್ತ್ರವೆನಿಸುತ್ತದೆ. ಇಂತಹ ಹಿತವನ್ನು ಋಗಾದಿವೇದಗಳು ಪಂಚರಾತ್ರ ಮೊದಲಾದ ಸ್ಮೃತಿಗಳು ಮಾಡುತ್ತಿರುವುದರಿಂದ 'ಶಾಸ್ತ್ರ' ಎನಿಸುತ್ತವೆ. ಆದರೆ ಪಾಶುಪತಾದಿಗಳು ಕೆಟ್ಟಮಾರ್ಗವನ್ನು ತೋರಿಸುವುದರಿಂದ ಶಾಸ್ತ್ರಗಳಾಗುವುದಿಲ್ಲವೆಂದು ಸ್ಕಾಂದ-ಪುರಾಣದ ಮಾತಿನಿಂದ 'ಋಗ್' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ. 'ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಮ್' ಎಂದು ಶ್ರೀರಾಮನ ಚರಿತ್ರೆಯನ್ನು ವರ್ಣಿಸುವ ನೂರುಕೋಟಿಶ್ಲೋಕಗಳನ್ನು ಹೊಂದಿರುವ ಮೂಲರಾಮಾಯಣವನ್ನು ಇಲ್ಲಿ ವಿವಕ್ಷಿಸಬೇಕು.

## ಜಗತ್ಕರ್ತೃತ್ವಲಕ್ಷಣಕ್ಕೆ ಅತಿವ್ಯಾಪ್ತಿ

**ಭಾವದೀಪಃ – ರುದ್ರಾದೇರಿತಿ ।। ಶೈವಸ್ಕಾನ್ದಗಾಣಪತ್ಯಹೈರಣ್ಯಗರ್ಭಪ್ರಭೃತೀನಾಂ ಪ್ರತ್ಯೇಕಂ ತತ್ತದಾಗಮೇನ ತಸ್ಯ ತಸ್ಯ ಜಗತ್ಕರ್ತೃತ್ವಪ್ರತ್ಯವಸ್ಥಾನಂ ಧ್ಯೇಯಮ್ । ತಥಾ ಚ 'ಪಾಶುಪತಾದಿನಾ ರುದ್ರಾದೇಃ ಕರ್ತೃತ್ವೇ ಪ್ರಾಗುದಾಹೃತಶ್ರುತೀನಾಮಾಗಮವಿರೋಧೇನ ವಿಷ್ಣ್ವೇಕಕರ್ತೃತ್ವೇ ಪ್ರಾಮಾಣ್ಯಾಯೋಗೇನ ತಾಭಿಸ್ತಸ್ಯ ಕರ್ತೃತ್ವಮಾತ್ರಂ ಸಿಧ್ಯತೀತಿ**

ಗ್ರಂಥಗಳೆಲ್ಲವೂ ಪ್ರಮಾಣಗಳೇ ಆಗಿವೆ. ಈ ಏಳು ಶಾಸ್ತ್ರಗಳಿಗೆ ವಿರುದ್ಧವಾದ ಪ್ರಮೇಯಗಳನ್ನು ಪ್ರತಿಪಾದಿಸುವ ಪಾಶುಪತಾದಿಶಾಸ್ತ್ರಗಳೆಲ್ಲವೂ ಶಾಸ್ತ್ರಗಳೇ ಆಗುವುದಿಲ್ಲ; ಹೊರತು ಆ ಎಲ್ಲಾ ಶಬ್ದಪ್ರಪಂಚವು ಅಪಮಾರ್ಗವನ್ನೇ ತೋರಿಸುತ್ತವೆ. ಹೀಗೆ ಸ್ಕಾಂದಪುರಾಣದಲ್ಲಿ ತೋರಿಸಲ್ಪಟ್ಟಿದೆ.

ಪ್ರತಿಪದಾರ್ಥ -- ಅನುಮಾನವು ನಿಶ್ಚಾಯಕವಲ್ಲದ ಕಾರಣ ಶಾಸ್ತ್ರದಿಂದ ಜಗತ್ಕಾರಣತ್ವವು ಸಿದ್ಧವಾಗುತ್ತದೆಂದು ಹೇಳಿದಿರಿ. ಹಾಗಾದಲ್ಲಿ ಪಾಶುಪತಾದಿ ಶಾಸ್ತ್ರದಿಂದಲೂ ರುದ್ರಾದಿಗಳ ಜಗತ್ಕಾರಣತ್ವವು ಸಿದ್ಧವಾಗಲಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಋಕ್ = ಋಗ್ವೇದ, ಯಜುಃ = ಯಜುರ್ವೇದ, ಸಾಮ = ಸಾಮವೇದ, ಅಥರ್ವಾಚ್ಚ = ಅಥರ್ವವೇದವೂ ಸಹ; ಭಾರತಂ = ಮಹಾಭಾರತವು, ಪಂಚರಾತ್ರಕಮ್ = ಪಂಚರಾತ್ರಾಗಮವು, ಚ = ಮತ್ತು, ಮೂಲರಾಮಾಯಣಂ = ಮೂಲರಾಮಾಯಣವು, ಏವ = ಇವುಗಳೇ, ಶಾಸ್ತ್ರಮಿತಿ = ಶಾಸ್ತ್ರಗಳೆಂದು, ಅಭಧೀಯತೇ = ಕರೆಯಲ್ಪಡುತ್ತವೆ.

ಏತಸ್ಯ = ಈ ಏಳು ಶಾಸ್ತ್ರಗಳಿಗೆ, ಯಸ್ಯ = ಯಾವುದು, ಅನುಕೂಲಂ = ಅನುಕೂಲವಾದ ಪೌರುಷೇಯಗ್ರಂಥವಿದೆಯೋ, ತಚ್ಚ = ಆ ಗ್ರಂಥವು, ಶಾಸ್ತ್ರಮಿತಿ = ಶಾಸ್ತ್ರವೆಂದು, ಪ್ರಕೀರ್ತಿತಮ್ = ಪ್ರಸಿದ್ಧವಾಗಿದೆ; ಅತಃ = ಈ ಏಳುಶಾಸ್ತ್ರಗಳಿಗಿಂತ, ಅನ್ಯಃ = ಭಿನ್ನವಾದ, ಗ್ರಂಥವಿಸ್ತಾರಃ = ಗ್ರಂಥಪ್ರಪಂಚವು, ನೈವ ಶಾಸ್ತ್ರಮ್ = ಶಾಸ್ತ್ರವೇ ಅಲ್ಲ; ಹೊರತಾಗಿ ತತ್ = ಆ ಗ್ರಂಥಪ್ರಪಂಚವು, ಕುವರ್ತ್ಮ = ಕೆಟ್ಟಮಾರ್ಗವು, ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

## ಶಾಸ್ತ್ರ ಎಂದರೇನು ?

**ತತ್ವಪ್ರಕಾಶಿಕಾ –**

**ನನು 'ಏವಮನುಮಾನಸ್ಯಾನಿಶ್ಚಾಯಕತ್ವೇನ ಶಾಸ್ತ್ರಾದೇವ ಕಾರಣತ್ವಸಿದ್ಧಿಶ್ಚೇತ್ತರ್ಹಿ ಪಾಶುಪತಾದಿಶಾಸ್ತ್ರೇಣ ರುದ್ರಾದೇಃ ಕಾರಣತ್ವಂ ಸ್ಯಾತ್ ?' ಇತ್ಯತ ಆಹ – ಋಗಿತಿ ।।**

ಹೀಗೆ ಜಗತ್ಕಾರಣತ್ವವಿಷಯದಲ್ಲಿ ಅನುಮಾನವು ಪ್ರಮಾಣವಾಗದಿದ್ದರೆ, ಕೇವಲ ಶಾಸ್ತ್ರದಿಂದಲೇ ಅದು ನಿಶ್ಚಯವಾಗಬೇಕಾಗುತ್ತದೆ. ಆ ಪಕ್ಷದಲ್ಲಿ ಪಾಶುಪತಾದಿಶಾಸ್ತ್ರಗಳಿಂದ

ರುದ್ರಾದಿಗಳಿಗೂ ಸಹ ಜಗತ್ಕಾರಣತ್ವವನ್ನು ಏಕೆ ಒಪ್ಪಬಾರದು? ಎಂಬ ಪ್ರಶ್ನೆಗೆ ಭಾಷ್ಯಕಾರರು 'ಋಗ್ಯಜುಃ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

## ಪಾಶುಪತಾದಿಗಳು ಶಾಸ್ತ್ರವಲ್ಲ

**ಭಾವದೀಪಃ – ಸೌತ್ರ'ಶಾಸ್ತ್ರ'ಪದವ್ಯಾವರ್ತ್ಯಪಾಶುಪತಾದ್ಯಾಗಮಮೂಲಕಚೋದ್ಯನಿರಾಸಾಯ ಪ್ರವೃತ್ತಂ 'ಋಗ್ಯಜುಃ' ಇತ್ಯಾದಿಭಾಷ್ಯಮ್ । ತಸ್ಯ ತಥಾತ್ವಾಪ್ರತೀತೇರಾಹ – ನನ್ವೇವಮಿತಿ।।**

ಸೂತ್ರದಲ್ಲಿ ಹೇಳಿದ ''ಶಾಸ್ತ್ರ''ಪದದಿಂದ ವ್ಯಾವೃತ್ತಿ ಮಾಡಬೇಕಾದ ಪಾಶುಪತಾದಿ ಆಗಮಮೂಲಕವಾದ ಚೋದ್ಯವನ್ನು ನಿರಾಸಮಾಡುವುದಕ್ಕಾಗಿ 'ಋಗ್ಯಜುಃ' ಇತ್ಯಾದಿ ಭಾಷ್ಯವು ಪ್ರವೃತ್ತವಾಗಿದೆ. ಆ ಭಾಷ್ಯದ ಭಾಗಕ್ಕೆ ಆ ರೀತಿಯ ಅರ್ಥವು ನೇರವಾಗಿ ಕಾಣದೇ ಇರುವುದರಿಂದ 'ನನ್ವೇವಂ' ಇತ್ಯಾದಿ ವಾಕ್ಯಗಳಿಂದ ಅವತರಣಿಕೆಯನ್ನು ಹೇಳುತ್ತಿದ್ದಾರೆ.

ವಿಶೇಷ ವಿಚಾರ - ಹಿತವನ್ನು ಶಾಸನ ಮಾಡುವುದರಿಂದ ಶಾಸ್ತ್ರವೆನಿಸುತ್ತದೆ. ಇಂತಹ ಹಿತವನ್ನು ಋಗಾದಿವೇದಗಳು ಪಂಚರಾತ್ರ ಮೊದಲಾದ ಸ್ಮೃತಿಗಳು ಮಾಡುತ್ತಿರುವುದರಿಂದ 'ಶಾಸ್ತ್ರ' ಎನಿಸುತ್ತವೆ. ಆದರೆ ಪಾಶುಪತಾದಿಗಳು ಕೆಟ್ಟಮಾರ್ಗವನ್ನು ತೋರಿಸುವುದರಿಂದ ಶಾಸ್ತ್ರಗಳಾಗುವುದಿಲ್ಲವೆಂದು ಸ್ಕಾಂದ-ಪುರಾಣದ ಮಾತಿನಿಂದ 'ಋಗ್' ಇತ್ಯಾದಿಯಾಗಿ ತೋರಿಸುತ್ತಿದ್ದಾರೆ. 'ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಮ್' ಎಂದು ಶ್ರೀರಾಮನ ಚರಿತ್ರೆಯನ್ನು ವರ್ಣಿಸುವ ನೂರುಕೋಟಿಶ್ಲೋಕಗಳನ್ನು ಹೊಂದಿರುವ ಮೂಲರಾಮಾಯಣವನ್ನು ಇಲ್ಲಿ ವಿವಕ್ಷಿಸಬೇಕು.

## ಜಗತ್ಕರ್ತೃತ್ವಲಕ್ಷಣಕ್ಕೆ ಅತಿವ್ಯಾಪ್ತಿ

**ಭಾವದೀಪಃ –** ರುದ್ರಾದೇರಿತಿ ।। ಶೈವಸ್ಕಾನ್ದಗಾಣಪತ್ಯಹೈರಣ್ಯಗರ್ಭಪ್ರಭೃತೀನಾಂ ಪ್ರತ್ಯೇಕಂ ತತ್ತದಾಗಮೇನ ತಸ್ಯ ತಸ್ಯ ಜಗತ್ಕರ್ತೃತ್ವಪ್ರತ್ಯವಸ್ಥಾನಂ ಧ್ಯೇಯಮ್ । ತಥಾ ಚ 'ಪಾಶುಪತಾದಿನಾ ರುದ್ರಾದೇಃ ಕರ್ತೃತ್ವೇ ಪ್ರಾಗುದಾಹೃತಶ್ರುತೀನಾಮಾಗಮವಿರೋಧೇನ ವಿಷ್ವೇಕಕರ್ತೃತ್ವೇ ಪ್ರಾಮಾಣ್ಯಾಯೋಗೇನ ತಾಭಿಸ್ತಸ್ಯ ಕರ್ತೃತ್ವಮಾತ್ರಂ ಸಿಧ್ಯತೀತಿ

द्वयोरपि मानत्वेन कालादिभेदेन द्वयोरपि कर्तृत्वमविरुद्धमिति प्रागुक्तदिशा कतिपयकर्तृत्वरूपलक्षणस्यातिव्याप्तिः' इति भावः ।

''रुद्र्यादेः'' ಎಂಬ ಅಂಶದಿಂದ 'ಶೈವ, ಸ್ಕಾಂದ, ಗಾಣಪತ್ಯ, ಹಿರಣ್ಯಗರ್ಭ ಮೊದಲಾದ ದೇವತೆಗಳಿಗೆ ಪ್ರತ್ಯೇಕವಾಗಿ ಆಯಾಯಾ ಆಗಮಗಳಿಂದ ಆಯಾಯಾ ದೇವತೆಗಳಿಗೆ ಜಗತ್ಕರ್ತೃತ್ವವು ಸಿದ್ಧವಾಗಿದೆ' ಎಂದು ತಿಳಿಯಬೇಕು. ಆದ್ದರಿಂದ ಪಾಶುಪತಾದಿ ಆಗಮಗಳಿಂದ ರುದ್ರಾದಿಗಳಿಗೆ ಕರ್ತೃತ್ವವು ಸಿದ್ಧವಾದಾಗ ಹಿಂದೆ ಹೇಳಿದ ಶ್ರುತಿಗಳಿಗೆ ಆಗಮವಿರೋಧ ಬರುವುದರಿಂದ ಕೇವಲ ವಿಷ್ಣುವೇ ಕರ್ತೃ ಎಂಬ ವಿಷಯದಲ್ಲಿ ಪ್ರಾಮಾಣ್ಯವು ಸಿದ್ಧಿಸದೇ ಇರುವುದರಿಂದ ಆ ಶ್ರುತಿಗಳಿಂದ ವಿಷ್ಣುವಿಗೆ ಕೇವಲಕರ್ತೃತ್ವವು ಸಿದ್ಧಿಯಾಗುತ್ತದೆ. ಹೀಗೆ 'ಪಾಶುಪತಾದಿ ಆಗಮಗಳು ಮತ್ತು ಸ್ಮೃತಿಗಳು ಈ ಎರಡೂ ಪ್ರಮಾಣವಾಗಿರುವುದರಿಂದ ದೇಶಕಾಲಾದಿಭೇದಗಳಿಂದ ಇಬ್ಬರಿಗೂ ಕೂಡ ಕರ್ತೃತ್ವವು ಅವಿರುದ್ಧವಾಗಿದೆ ಎಂಬ ರೀತಿಯಿಂದ ಹಿಂದೆ ಹೇಳಿದಂತೆ ಕೆಲವೊಂದು ವಿಷಯಗಳಲ್ಲಿ ಕರ್ತೃತ್ವರೂಪಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆ' ಎಂಬುದಾಗಿ ತಾತ್ಪರ್ಯವನ್ನು ತಿಳಿಯಬೇಕು.

## ನ್ಯಾಯವಿವರಣದ ಸಮಶಬ್ದಾರ್ಥ

**भावदीपः –** एतेनैतल्लक्षणं रुद्रादौ समं मया पाशुपतादिरूपमानेन सहितं पाशुपतादिशास्त्रसिद्धं तथा च 'समं रुद्रादिसाधारणम्' इति न्यायविवरणयोजना सूचिता ।

**इत्यत आहेति ।।** स्मृतौ ऋगादितदनुकूलपुराणादिपौरुषेयग्रन्थस्यैव शास्त्रत्वेन शास्त्रैकसमधिगम्यत्वात् कारणस्य विष्णुः जगत्कर्तेति सूत्रकृदुक्त्याऽऽगमेनान्यस्य कर्तृत्वकल्पनं बाधितार्थमित्युक्तं भवति ।।

ಹೀಗೆ ವ್ಯಾಖ್ಯಾನ ಮಾಡಿರುವುದರಿಂದ ನ್ಯಾಯವಿವರಣದಲ್ಲಿ ಹೇಳಿದಂತೆ 'ಏತಲ್ಲಕ್ಷಣಂ ರುದ್ರಾದೌ ಸಮಮ್' ಎಂಬಲ್ಲಿ ಸಮಶಬ್ದಕ್ಕೆ 'ಮಯಾ ಸಹಿತಂ ಸಮಮ್' ಎಂಬ

ವಿಗ್ರಹವನ್ನು ಇಟ್ಟುಕೊಂಡು 'ಪಾಶುಪತಾದಿ ರೂಪವಾದ ಪ್ರಮಾಣದಿಂದ ಸಹಿತವಾದದ್ದು' ಅಂದರೆ 'ಪಾಶುಪತಾದಿ ಆಗಮಗಳಿಂದ ಸಿದ್ಧವಾದದ್ದು' ಎಂಬುದಾಗಿ ಅರ್ಥವು ಸಿಗುತ್ತದೆ. ಆದ್ದರಿಂದ 'ಸಮಮ್' ಎಂಬ ಶಬ್ದಕ್ಕೆ 'ರುದ್ರಾದಿಸಾಧಾರಣಮ್' ಎಂಬ ಅನ್ವಯವು ಸೂಚಿತವಾಗುತ್ತದೆ.

''ಇತ್ಯತ ಆಹ'' ಎಂಬ ಅಂಶದಿಂದ 'ಸ್ಮೃತಿಯಲ್ಲಿ ಋಗಾದಿವೇದಗಳಿಗೆ, ಆ ವೇದಗಳಿಗೆ ಅನುಕೂಲವಾದ ಪುರಾಣಾದಿಪೌರುಷೇಯಗ್ರಂಥಗಳಿಗೆ ಮಾತ್ರ ಶಾಸ್ತ್ರತ್ವವು ಸಿದ್ಧವಾಗಿರುವುದರಿಂದ, ಜಗತ್ಕಾರಣತ್ವವು ಕೇವಲ ಶಾಸ್ತ್ರದಿಂದ ತಿಳಿಯಲ್ಪಡುತ್ತಿದ್ದು, ವಿಷ್ಣುವು ಜಗತ್ತಿಗೆ ಕರ್ತೃವಾಗಿದ್ದಾನೆ ಎಂಬ ಅಂಶದಿಂದ ಸೂತ್ರಕಾರರ ಅಭಿಪ್ರಾಯದಂತೆ ಆಗಮಗಳಿಂದ ಇನ್ನೊಬ್ಬ ಕರ್ತೃವನ್ನು ಕಲ್ಪನೆ ಮಾಡುವುದು ಬಾಧಿತಾರ್ಥರೂಪವಾದ ದೋಷವುಳ್ಳದ್ದು' ಎಂದು ತಿಳಿಸಿದಂತೆ ಆಗುತ್ತದೆ.

## ಪಂಚರಾತ್ರಾಗಮವಷ್ಟೇ ಸ್ವೀಕಾರಾರ್ಹ

**ब्रह्मसूत्रभाष्यम् – 'साङ्ख्यं योगः पाशुपतं वेदारण्यकमेव च ।'**

**इत्यारभ्य वेदपञ्चरात्रयोरैक्याभिप्रायेण पञ्चरात्रस्यैव प्रामाण्यमुक्तमितरेषां भिन्नमतत्वं प्रदर्श्य मोक्षधर्मेष्वपि ।।**

**शास्त्रं योनिः प्रमाणमस्येति शास्त्रयोनि ।। ३ ।।**

**।। इति शास्त्रयोनित्वाधिकरणम् ।।**

ಮಹಾಭಾರತದ ಮೋಕ್ಷಧರ್ಮಪರ್ವದಲ್ಲಿಯೂ ಹೀಗೆ ಹೇಳಿದ್ದಾರೆ. ''ಸಾಂಖ್ಯಂ ಯೋಗಃ ಪಾಶುಪತಂ' ಎಂಬುದಾಗಿ ಸಾಂಖ್ಯಶಾಸ್ತ್ರ, ಯೋಗಶಾಸ್ತ್ರ, ಪಾಶುಪತಾಗಮ, ವೇದ, ಆರಣ್ಯಕ'; ಎಂದು ಪ್ರಾರಂಭಿಸಿ ಮುಂದೆ ವೇದಪಂಚರಾತ್ರಗಳಿಗೆ ಮಾತ್ರ ಒಂದೇ ಅಭಿಪ್ರಾಯವೆಂದು ಹೇಳಿ ಪಂಚರಾತ್ರಕ್ಕೆ ಮಾತ್ರ ಪ್ರಾಮಾಣ್ಯವನ್ನು ಸಮರ್ಥಿಸಿದ್ದಾರೆ. ಉಳಿದ ಪಾಶುಪತಾದ್ಯಾಗಮಗಳಿಗೆ ವೇದಕ್ಕಿಂತ ಭಿನ್ನಾಭಿಪ್ರಾಯವನ್ನು ಹೇಳಿದ್ದಾರೆ.

ಶಾಸ್ತ್ರಯೋನಿತ್ವಾಧಿಕರಣ (೧-೧-೩)

ಸೂತ್ರದಲ್ಲಿರುವ 'ಶಾಸ್ತ್ರಯೋನಿಃ' ಎಂಬ ಪದಕ್ಕೆ 'ಶಾಸ್ತ್ರಂ ಯೋನಿಃ ಯಸ್ಯ ತತ್'; ಎಂಬುದಾಗಿ ಬಹುವ್ರೀಹಿಸಮಾಸವನ್ನು ತಿಳಿಯಬೇಕು. 'ಯೋನಿ' ಎಂದರೆ ಪ್ರಮಾಣ ಎಂದರ್ಥ.

ಪ್ರತಿಪದಾರ್ಥ -- ಮತ್ತೊಂದು ಪ್ರಮಾಣದಿಂದಲೂ ಪಾಶುಪತಾದ್ಯಾಗಮಗಳು ದುಷ್ಟಮಾರ್ಗಗಳೆಂದು ತಿಳಿಯುತ್ತದೆ.

ಮೋಕ್ಷಧರ್ಮೇಷ್ವಪಿ = ಸ್ಕಾಂದಪುರಾಣದಲ್ಲಷ್ಟೇ ಅಲ್ಲ ಮೋಕ್ಷಧರ್ಮ-ಪರ್ವದಲ್ಲಿಯೂ (ಹೀಗೆ ಹೇಳಿದ್ದಾರೆ). ಸಾಂಖ್ಯಂ = ಸಾಂಖ್ಯಶಾಸ್ತ್ರ, ಯೋಗಃ = ಯೋಗಶಾಸ್ತ್ರ, ಪಾಶುಪತಂ = ಪಾಶುಪತಾಗಮ, ವೇದಾರಣ್ಯಕಮೇವ ಚ = ವೇದ ಮತ್ತು ಆರಣ್ಯಕಗಳೆಲ್ಲವೂ, ಇತ್ಯಾರಭ್ಯ = ಹೀಗೆ ಪ್ರಾರಂಭಿಸಿ, ವೇದಪಂಚರಾತ್ರಯೋಃ = ವೇದ ಮತ್ತು ಪಂಚರಾತ್ರಾಗಮಗಳಿಗೆ, ಏಕ್ಯಾಭಿಪ್ರಾಯೇಣ = ಒಂದೇ ಅಭಿಪ್ರಾಯ-ವಿರುವುದರಿಂದ, ಪಂಚರಾತ್ರಸ್ಯೈವ = ಪಂಚರಾತ್ರಕ್ಕೆ ಮಾತ್ರ, ಪ್ರಾಮಾಣ್ಯಂ = ಪ್ರಾಮಾಣ್ಯವು, ಉಕ್ತಂ = ಹೇಳಲ್ಪಟ್ಟಿದೆ. ಇತರೇಷಾಂ = ಪಾಶುಪತಾದ್ಯಾಗಮಗಳಿಗೆ, ಭಿನ್ನಮತತ್ವಂ = ವೇದವಿರುದ್ಧಾರ್ಥವನ್ನು, ಪ್ರದರ್ಶ್ಯ = ತೋರಿಸಿ, (ಹೇಳಿದ್ದಾರೆ).

ಇಲ್ಲಿಯ ತನಕ ಸೂತ್ರವನ್ನು ವ್ಯಾಖ್ಯಾನಿಸಿ ಪರರು ಹೇಳುವಂತೆ 'ಶಾಸ್ತ್ರಸ್ಯ ಯೋನಿಃ' ಎಂಬ ತತ್ಪುರುಷಸಮಾಸವನ್ನು ಅಯುಕ್ತವೆಂದು ತಿಳಿಸಲು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

ಶಾಸ್ತ್ರಂ = ವೇದಾದಿ ಶಾಸ್ತ್ರಸಮುದಾಯವು, ಯೋನಿಃ = ಪ್ರಮಾಣವು, ಅಸ್ಯ = ಈ ಜಗತ್ಕಾರಣವಿಷಯದಲ್ಲಿ, ಇತಿ = ಹೀಗೆ, ಶಾಸ್ತ್ರಯೋನಿ = ಬ್ರಹ್ಮನು 'ಶಾಸ್ತ್ರಯೋನಿ' ಎಂದು ಕರೆಸಿಕೊಳ್ಳುತ್ತಾನೆ.

## ಪಾಶುಪತಾದಿಗಳು ಕುಮಾರ್ಗಗಳೆನ್ನಲು ಮತ್ತೊಂದು ಕಾರಣ

**तत्वप्रकाशिका –**

**इतश्च पाशुपतादिकं कुवर्त्मेत्याह – साङ्ख्यमिति ।।**
**'पञ्चरात्रस्य कृत्स्नस्य वक्ता नारायणः स्वयम्' ।**
**'ज्ञानेष्वेतेषु राजेन्द्र सर्वेष्वेतद् विशिष्यते ।। '**

**ಇತಿ ಮೋಕ್ಷಧರ್ಮೇಷ್ವಪಿ ಸಾಙ್ಖ್ಯಾದಿಷು ಪ್ರಕೃತೇಷು ಪಞ್ಚರಾತ್ರಸ್ಯೈವ ಪ್ರಾಮಾಣ್ಯಮುಕ್ತಮ್ । ಅತಃ ಪಾಶುಪತಾದಿಕಮಮಾನಮೇವೇತ್ಯರ್ಥಃ ।**

ಮತ್ತೊಂದು ಕಾರಣದಿಂದಲೂ ಪಾಶುಪತಾದ್ಯಾಗಮಗಳು ಕುಮಾರ್ಗಗಳೆಂದು ಹೇಳುತ್ತಿದ್ದಾರೆ - 'ಸಾಂಖ್ಯಂ' ಎಂಬುದಾಗಿ.

''ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್ ।
ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ ವಿಶಿಷ್ಯತೇ ॥''

''ಸಮಗ್ರ ಪಂಚರಾತ್ರವನ್ನು ಉಪದೇಶಿಸಿದವನು ಸ್ವತಃ ನಾರಾಯಣನೇ ಆಗಿದ್ದಾನೆ. ಎಲೈ ನೃಪಶ್ರೇಷ್ಠನೇ! ಈ ಎಲ್ಲಾ ಜ್ಞಾನಗಳಲ್ಲಿಯೂ ಪಂಚರಾತ್ರದಿಂದ ಬರುವ ಜ್ಞಾನವೇ ಶ್ರೇಷ್ಠವಾಗಿರುತ್ತದೆ.'' ಹೀಗೆ ಮೋಕ್ಷಧರ್ಮಪರ್ವದಲ್ಲಿಯೂ ಜನಮೇಜಯನ ಪ್ರಶ್ನೆಗೆ ವೈಶಂಪಾಯನರು ಉತ್ತರಿಸಿದ್ದಾರೆ. ವಸ್ತುತಃ ಸಾಂಖ್ಯಾದಿಶಾಸ್ತ್ರಗಳು ಪ್ರಕೃತವಾಗಿದ್ದರೂ ಕೇವಲ ಪಂಚರಾತ್ರಕ್ಕೆ ಪ್ರಾಮಾಣ್ಯವನ್ನು ಹೇಳಿದ್ದರಿಂದ ಸಾಂಖ್ಯಪಾಶುಪತಾದಿಶಾಸ್ತ್ರಗಳು ಅಪ್ರಮಾಣಗಳೇ ಆಗಿವೆ ಎಂದು ತಿಳಿಯುತ್ತದೆ.

**ತತ್ತ್ವಪ್ರಕಾಶಿಕಾ – (ನನು) ಅನೇನ ಪಞ್ಚರಾತ್ರಪ್ರಾಮಾಣ್ಯಮೇವ ಭವೇತ್ ನಾನ್ಯಾಪ್ರಾಮಾಣ್ಯಮ್ ? ಇತ್ಯತ ಆಹ – ಇತರೇಷಾಮಿತಿ ।।**

**ಸಾಙ್ಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ ।**
**ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ ।।'**

**ಇತಿ ಪರಸ್ಪರವಿರುದ್ಧತಯೋಕ್ತಾನಾಮೇಕಪ್ರಾಮಾಣ್ಯೋಕ್ತಾವನ್ಯಾಪ್ರಾಮಾಣ್ಯಂ ಲಭ್ಯತೇ, ಇತಿ ಭಾವಃ ।**

ಮೋಕ್ಷಧರ್ಮದ ಮಾತಿನಿಂದ ಪಂಚರಾತ್ರಕ್ಕೆ ಮಾತ್ರ ಪ್ರಾಮಾಣ್ಯ ತಿಳಿಯುತ್ತದೆ ಹೊರತು ಉಳಿದ ಆಗಮಗಳಿಗೆ ಅಪ್ರಾಮಾಣ್ಯವು ಹೇಗೆ ತಾನೆ ತಿಳಿಯುತ್ತದೆ? ಎಂಬ ಪ್ರಶ್ನೆಗೆ ''ಇತರೇಷಾಂ'' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ಸಾಂಖ್ಯಂ ಯೋಗಃ ಪಾಶುಪತಂ ಚ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ ॥

''ಸಾಂಖ್ಯಶಾಸ್ತ್ರ, ಯೋಗಶಾಸ್ತ್ರ, ಪಾಶುಪತಶಾಸ್ತ್ರ, ವೇದ ಮತ್ತು ಉಪನಿಷತ್ತುಗಳು ಈ ಎಲ್ಲ ಶಾಸ್ತ್ರಗಳು ಪರಸ್ಪರವಿರುದ್ಧಗಳಾಗಿವೆ. ಈ ವಿಷಯದಲ್ಲಿ ವಿಚಾರ ಮಾಡಬೇಕಾಗಿಲ್ಲ.''

ಹೀಗೆ ಪರಸ್ಪರವಿರುದ್ಧವಾಗಿ ಹೇಳಲ್ಪಟ್ಟ ಮತಗಳಲ್ಲಿ ಒಂದಕ್ಕೆ ಮಾತ್ರ ಪ್ರಾಮಾಣ್ಯ ಹೇಳಿದರೆ ಉಳಿದೆಲ್ಲವೂ ಅಪ್ರಮಾಣವೆಂದು ಸಿದ್ಧವಾಗುತ್ತದೆ ಎಂದು ಭಾಷ್ಯದ ಅಭಿಪ್ರಾಯ.

**तत्वप्रकाशिका – तर्हि वेदारण्यकस्याप्यप्रामाण्यं स्यात् ? इत्यत आह – वेदेति ।। पञ्चरात्रस्य वेदार्थत्वेन तत्प्रामाण्योक्तौ वेदप्रामाण्यमेवोक्तं भवति । ऐक्याभिप्रायाभावे पञ्चरात्राधिक्यकथनमसङ्गतं स्यादिति भावः । वेदस्यैव प्रामाण्यं किं नोच्यते पञ्चरात्रप्रामाण्य सिध्यर्थम् ? पञ्चरात्रप्रामाण्योक्तौ तु वाक्यार्थान्यथाऽनुपपत्त्या वेदप्रामाण्योहसम्भवादिति । धर्मबहुत्वाद् बहुवचनम् । तस्मात् कारणस्य वेदादिशास्त्रैकसमधिगम्यत्वात् नानुमानेनान्यकारणत्वं शङ्क्यमिति न जिज्ञास्यस्य विष्णुत्वनिश्चयायोग इति ।**

ಹಾಗಾದರೆ ವೇದ ಮತ್ತು ಆರಣ್ಯಕಗಳಿಗೂ ಅಪ್ರಾಮಾಣ್ಯ ಬರಲಿ? ಎಂಬ ಪ್ರಶ್ನೆಗೆ ''ವೇದಪಂಚರಾತ್ರಯೋಃ'' ಎಂಬ ಭಾಷ್ಯದಿಂದ ಉತ್ತರಿಸಿದ್ದಾರೆ. ''ಪಂಚರಾತ್ರವು ವೇದದ ನೇರ ಅರ್ಥವನ್ನೇ ಹೇಳುತ್ತಿರುವುದರಿಂದ ಪ್ರಮಾಣವಾಗಿದೆ'' ಎಂದು ಹೇಳಿದಾಗ ವೇದಪ್ರಾಮಾಣ್ಯವನ್ನು ಹೇಳಿದಂತಾಗುತ್ತದೆ. 'ವೇದ ಮತ್ತು ಪಂಚರಾತ್ರಗಳಿಗೆ ಒಂದೇ ಅಭಿಪ್ರಾಯವಿಲ್ಲದಿದ್ದಲ್ಲಿ 'ಸರ್ವೇಷ್ವೇತದ್ ವಿಶಿಷ್ಯತೇ' ಎಂಬುದಾಗಿ 'ಪಂಚರಾತ್ರಕ್ಕೆ ಆಧಿಕ್ಯ ಹೇಳಿದ್ದು ಅಸಂಗತವಾಗುತ್ತಿತ್ತು' ಎಂದಭಿಪ್ರಾಯ.

ನೇರವಾಗಿ ವೇದಕ್ಕೇನೇ ಪ್ರಾಮಾಣ್ಯವನ್ನು ಏಕೆ ಹೇಳಲಿಲ್ಲ? ಎಂದರೆ ಪಂಚರಾತ್ರದ ಪ್ರಾಮಾಣ್ಯಸಿದ್ಧಿಗೋಸ್ಕರ ಎಂದು ಉತ್ತರ. ಪಂಚರಾತ್ರಕ್ಕೆ ಪ್ರಾಮಾಣ್ಯವನ್ನು ಹೇಳಿದಾಗ ವಾಕ್ಯಾರ್ಥಾನ್ಯಥಾನುಪಪತ್ತಿಯಿಂದ ('ವೇದಪ್ರಾಮಾಣ್ಯಮನ್ಯಥಾ ಪಂಚರಾತ್ರಪ್ರಾಮಾಣ್ಯಂ

ನೋಪಪದ್ಯತೇ') ಎಂದು ವೇದಪ್ರಾಮಾಣ್ಯವನ್ನು ಊಹಿಸಬಹುದು. ಅನೇಕ ಧರ್ಮಗಳನ್ನು ಹೇಳಿರುವುದರಿಂದ 'ಧರ್ಮೇಷು' ಎಂಬ ಬಹುವಚನವು ಯುಕ್ತವಾಗಿದೆ. ಆದ್ದರಿಂದ ಜಗತ್ಕಾರಣವಸ್ತುವನ್ನು ಕೇವಲ ವೇದಾದಿಶಾಸ್ತ್ರಗಳಿಂದಲೇ ತಿಳಿಯಬೇಕು. ಅನುಮಾನದಿಂದ ರುದ್ರಾದಿಗಳಲ್ಲಿ ಜಗತ್ಕಾರಣತ್ವವನ್ನು ಶಂಕಿಸಬಾರದು. ಆದ್ದರಿಂದ ಜಿಜ್ಞಾಸ್ಯಬ್ರಹ್ಮನಿಗೆ ವಿಷ್ಣುತ್ವದ ನಿಶ್ಚಯವು ಆಗುವುದಿಲ್ಲವೆಂದು ಹೇಳಲಾಗದು.

## 'ಶಾಸ್ತ್ರಯೋನಿ' ಎಂಬಲ್ಲಿ ಬಹುವ್ರೀಹಿಯನ್ನೇ ಮಾಡಬೇಕು

**ತತ್ವಪ್ರಕಾಶಿಕಾ –**

**सूत्रं व्याख्यायाऽथ यत् परेणोक्तं 'शास्त्रस्य योनिः' इति तदयुक्तमिति भावेनाह – शास्त्रमिति ।। शास्त्रं योनिर्ज्ञप्तिकारणं प्रमाणमित्येव शास्त्रयोनि न शास्त्रस्य योनिरिति भावः । समासप्राबल्यात् कुतो नासावर्थ इति चेत् वेदादिकर्तृत्वकथनस्योक्तानुपयुक्तत्वात् । न हि जन्मादिकर्तृत्वे शास्त्रयोनित्वं हेतुः । वैपरीत्यस्यैवोचितत्वात् । जगत् कारणत्वोक्त्यार्थलब्धं सार्वज्ञमेव शास्त्रयोनित्वोक्त्या स्फोरयतीति चेन्न । तत्रार्थलब्धशक्त्याद्यस्फुटीकृत्य सार्वज्ञमात्रस्फुटीकरणे विशेषकारणाभावात् । अनन्तजगन्निर्माणोक्त्याऽस्फुटीभूतं सार्वज्ञं तदेकदेशनिर्माणोक्त्या कथमाविर्भवेत् । किञ्च इदं शास्त्रस्येश्वरनिर्मितत्वमर्थमुपलभ्य रचितत्वं वा निःसृतत्वमात्रं वा । नाद्यः । कणादचरणानुसरणप्रसङ्गात् श्रुत्यादिविरोधाच्च । न द्वितीयः । शास्त्रयोनित्वस्य सार्वज्ञसाधकत्वाभावप्रसङ्गात् । अतोऽर्थान्तरमुक्तानुपयुक्तमयुक्तं चेत्युक्त एव सूत्रार्थ इति ।। ३ ।।**

**।। इति श्रीजयतीर्थभिक्षुविरचितायां तत्वप्रकाशिकायां शास्त्रयोनित्वाधिकरणम् ।।**

ಹೀಗೆ ಸ್ವಮತದಿಂದ ಸೂತ್ರವನ್ನು ವ್ಯಾಖ್ಯಾನಿಸಿ ಪರರು ಹೇಳಿರುವ 'ಶಾಸ್ತ್ರಸ್ಯ ಯೋನಿಃ' ಎಂಬ ತತ್ಪುರುಷ ಸಮಾಸವನ್ನು ನಿರಾಕರಿಸುವುದಕ್ಕಾಗಿ 'ಶಾಸ್ತ್ರಂ ಯೋನಿಃ' ಎಂದು

ಹೇಳುತ್ತಿದ್ದಾರೆ. 'ಶಾಸ್ತ್ರಂ ಯೋನಿಃ ಪ್ರಮಾಣಮಸ್ಯೇತಿ = ಶಾಸ್ತ್ರಯೋನಿ ಎಂದು ಭಾಷ್ಯಕಾರರು ಬಹುವ್ರೀಹಿ ಸಮಾಸವನ್ನು ಮಾಡಿದ್ದಾರೆ. ಶಾಸ್ತ್ರವೇ ಯೋನಿ = ಶಾಸ್ತ್ರವೇ ಜ್ಞಾನಕಾರಣವಾದ ಪ್ರಮಾಣವಾಗಿದೆ ಯಾರಿಗೋ ಅವನೇ 'ಶಾಸ್ತ್ರಯೋನಿ' ಎಂದಿದರರ್ಥ ಹೊರತು, ಶಾಸ್ತ್ರದ ಯೋನಿ = ಶಾಸ್ತ್ರವನ್ನು ರಚಿಸಿದವನು ಎಂದಿದರರ್ಥವಲ್ಲ.

ಬಹುವ್ರೀಹಿಸಮಾಸಕ್ಕಿಂತ ತತ್ಪುರುಷವೇ ಪ್ರಬಲವಾದ್ದರಿಂದ 'ಶಾಸ್ತ್ರಸ್ಯ ಯೋನಿಃ' ಎಂದೇಕೆ ಮಾಡಬಾರದು? ಎಂದರೆ ವೇದಾದಿಕರ್ತೃತ್ವವನ್ನು ಹೇಳುವುದರಿಂದ ಹಿಂದಿನ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ. ಜನ್ಮಾದಿಕರ್ತೃತ್ವಕ್ಕೆ ಶಾಸ್ತ್ರಯೋನಿತ್ವವು ಹೇತುವಲ್ಲ ಹೊರತಾಗಿ ಶಾಸ್ತ್ರಯೋನಿತ್ವಕ್ಕೇ ಜನ್ಮಾದಿಕರ್ತೃತ್ವವು ಹೇತುವಾಗುತ್ತದೆಂದು ಹೇಳಬಹುದು.

ಜಗತ್ಕಾರಣತ್ವಾದಿಗಳನ್ನು ಸ್ಪಷ್ಟಪಡಿಸದೆ ಸರ್ವಜ್ಞತ್ವವನ್ನೇ ಸ್ಪಷ್ಟಪಡಿಸಲು ವಿಶೇಷ ಕಾರಣವಿಲ್ಲ. ಅನಂತವಾದ ಜಗತ್ತನ್ನು ನಿರ್ಮಾಣ ಮಾಡುತ್ತಾನೆಂದು ಹೇಳಿದಾಗಲೂ ಅಸ್ಪಷ್ಟವಾದ ಸರ್ವಜ್ಞತ್ವವು; ಜಗತ್ತಿನ ಏಕದೇಶವನ್ನು ನಿರ್ಮಾಣ ಮಾಡುತ್ತಾನೆಂದು ಹೇಳಿದಾಗ ಹೇಗೆ ಸ್ಪಷ್ಟವಾಗುತ್ತದೆ? ಮತ್ತು ಭಗವಂತನ ಶಾಸ್ತ್ರವನ್ನು ನಿರ್ಮಾಣ ಮಾಡುತ್ತಾನೆಂಬುದರ ಅಭಿಪ್ರಾಯವೇನು? ಅರ್ಥವನ್ನು ತಿಳಿದು ಶಾಸ್ತ್ರವನ್ನು ರಚಿಸಿದ್ದಾನೆಂದೋ? ಅಥವಾ ಕೇವಲ ಮುಖದಿಂದ ಹೊರ ಹೊಮ್ಮಿದೆ ಎಂದೋ?

ಮೊದಲನೆಯ ಪಕ್ಷವು ತಪ್ಪು. ಹಾಗಾದಲ್ಲಿ ಕಣಾದನನ್ನು ಅನುಸರಿಸುವ ಪ್ರಸಂಗ ಬರುತ್ತದೆ. (ಪೌರುಷೇಯತ್ವವನ್ನು ಅಂಗೀಕರಿಸಿದರೆ ನೈಯಾಯಿಕರ ಮತವನ್ನು ಒಪ್ಪಬೇಕಾಗುತ್ತದೆ). ಮತ್ತು ಶ್ರುತ್ಯಾದಿಗಳ ವಿರೋಧವೂ ಇದೆ. ಎರಡನೆಯ ಪಕ್ಷವೂ ತಪ್ಪು. ಶಾಸ್ತ್ರಯೋನಿತ್ವವು ಸರ್ವಜ್ಞತ್ವವನ್ನು ಸಾಧಿಸಲು ಸಮರ್ಥವಾಗದಿರಬೇಕಾದೀತು. ಆದ್ದರಿಂದ ತತ್ಪುರುಷಸಮಾಸದಲ್ಲಿ ಹುರುಳಿಲ್ಲ. ಮತ್ತು ಹಿಂದಿನ ಅಧಿಕರಣದ ಪ್ರಮೇಯಕ್ಕೆ ಸಾಧಕವೂ ಅಲ್ಲ. ಬಹುವ್ರೀಹಿ ಸಮಾಸವನ್ನು ಮಾಡಿದಾಗ ಈ ಯಾವ ಸಮಸ್ಯೆಗಳೂ ಇರುವುದಿಲ್ಲ. ಆದ್ದರಿಂದ ಯಾರಿಗೆ ಶಾಸ್ತ್ರವೇ ಜ್ಞಾನಕಾರಣವಾಗಿದೆಯೋ ಅವನು ಬ್ರಹ್ಮ ಎಂದೇ ಸೂತ್ರಾರ್ಥವನ್ನು ಹೇಳಬೇಕು.

॥ ಇಲ್ಲಿಗೆ ಶ್ರೀಜಯತೀರ್ಥಭಿಕ್ಷುಗಳು ರಚಿಸಿದ ತತ್ತ್ವಪ್ರಕಾಶಿಕಾ
ಕನ್ನಡಾನುವಾದದಲ್ಲಿ ಶಾಸ್ತ್ರಯೋನಿತ್ವಾಧಿಕರಣವು ಮುಗಿಯಿತು ॥

## ಸ್ಕಾಂದವನ್ನೇಕೆ ಉಲ್ಲೇಖಿಸಿದರು?

**ಭಾವದೀಪಃ – ಇತಶ್ಚೇತಿ ।।** ಏತೇನ ''ಭಾಷ್ಯೇ 'ಮೋಕ್ಷಧರ್ಮೇಷ್ವಪಿ' ಇತಿ 'ಅಪಿ'ಶಬ್ದಃ ಪ್ರಾಗುಕ್ತಸ್ಕಾಂದಸ್ಮೃತಿಸಮುಚ್ಚಾಯಕಃ'' ಇತಿ ದರ್ಶಿತಮ್ । ಪೂರ್ವವಾಕ್ಯೇ ವಿಶಿಷ್ಯ ಪಾಶುಪತಾದೇರನುಕ್ತೇರಸ್ಯಾಪ್ಯುಕ್ತಿಃ । ಸೌತ್ರಶಾಸ್ತ್ರಶಬ್ದಿತಮೇತದಿತಿ ದರ್ಶಯಿತುಂ ಸಾಕ್ಷಾದನ್ಯಸ್ಯ ಕುವರ್ತ್ಮಲಾಭಾಯ ಚ ಪ್ರಾಚೀನಸ್ಯಾಪ್ಯುಕ್ತಿರಿತಿ ಭಾವಃ ।

''ಇತಶ್ಚ'' ಎಂಬ ಅಂಶದಿಂದ ಭಾಷ್ಯದಲ್ಲಿ 'ಬೌದ್ಧಧರ್ಮೇಷ್ವಪಿ' ಎಂಬಲ್ಲಿ 'ಅಪಿ'ಶಬ್ದವು ಅದಕ್ಕಿಂತ ಹಿಂದೆ ಹೇಳಿದ ಸ್ಕಾಂದಸ್ಮೃತಿಯನ್ನು ಹೊಂದಿಸಿಕೊಳ್ಳುತ್ತದೆ ಎಂಬುದಾಗಿ ಸ್ಪಷ್ಟಪಡಿಸಿದಂತೆ ಆಗುತ್ತದೆ. ಹಿಂದೆ ಹೇಳಿದ ಸ್ಕಾಂದವಾಕ್ಯದಲ್ಲಿ ಪಾಶುಪತಾದಿಗಳನ್ನು ಸ್ಪಷ್ಟವಾಗಿ ಹೇಳದಿರುವುದರಿಂದ ಈ ಮೋಕ್ಷಧರ್ಮವಚನವನ್ನು ಹೇಳಿದ್ದಾರೆ. ಸೂತ್ರದಲ್ಲಿ ಹೇಳಿದ ಶಾಸ್ತ್ರಶಬ್ದದಿಂದ ಸ್ವೀಕರಿಸಬೇಕಾದ ಪ್ರಮಾಣಗಳನ್ನು ತೋರಿಸಲು ಮತ್ತು ಉಳಿದ ಗ್ರಂಥಗಳಿಗೆ ಸ್ಪಷ್ಟವಾಗಿ ಕುವರ್ತ್ಮತ್ವವು(ದುಷ್ಪಶಾಸ್ತ್ರತ್ವವು) ಸಿದ್ಧಿಸುವುದಕ್ಕೋಸ್ಕರ ಸ್ಕಾಂದವಾಕ್ಯವನ್ನು ಹೇಳಿದ್ದಾರೆ ಎಂಬುದನ್ನು ಗ್ರಹಿಸಬೇಕು.

## ವೇದಾರಣ್ಯಕ ಎಂದರೇನು?

**ಭಾವದೀಪಃ – ಜ್ಞಾನೇಷು = ಜ್ಞಾನಸಾಧನೇಷು । ವೇದಾರಣ್ಯಕಮಿತಿ ।।** ವೇದಾಶ್ಚಾರಣ್ಯಕಾನಿ ಚ ತತ್ಸಮಾಹಾರೋ ವೇದಾರಣ್ಯಕಮ್ । ಆರಣ್ಯಕಪದೇನಾರಣ್ಯೇऽಧೀಯಮಾನವೇದಭಾಗ ಉಚ್ಯತೇ । ಕುರುಪಾಂಡವವದಯಂ ನಿರ್ದೇಶಃ । ಉಕ್ತಂ ಛಾಂದೋಗ್ಯಭಾಷ್ಯೇ ತೃತೀಯೇ 'ಆರಣ್ಯಕಮಾವರ್ತಯೇತ್'
ಇತ್ಯಾದಿ ।

ಭಾಷ್ಯದಲ್ಲಿರುವ 'ಜ್ಞಾನೇಷು' ಎಂಬ ಶಬ್ದಕ್ಕೆ 'ಜ್ಞಾನಸಾಧನಗಳಲ್ಲಿ' ಎಂಬುದಾಗಿ ಅರ್ಥ. 'ವೇದಾರಣ್ಯಕ' ಎಂಬ ಪದಕ್ಕೆ 'ವೇದಾಶ್ಚ ಆರಣ್ಯಕಾನಿ ಚ ತತ್ಸಮಾಹಾರೋ ವೇದಾರಣ್ಯಕಮ್' ಎಂಬುದಾಗಿ ವಿಗ್ರಹವನ್ನು ಇಟ್ಟುಕೊಳ್ಳಬೇಕು. ಆರಣ್ಯಕಪದದಿಂದ ಅರಣ್ಯದಲ್ಲಿ ಅಧ್ಯಯನ ಮಾಡಬೇಕಾದ ವೇದಭಾಗವನ್ನು ಸ್ವೀಕರಿಸಬೇಕು. ಆರಣ್ಯಕವೂ

ವೇದವೇ ಆಗಿದ್ದರೂ 'ಕುರುಪಾಂಡವ' ಎಂಬ ರೀತಿಯಲ್ಲಿ 'ವೇದಾರಣ್ಯಕಮ್' ಎಂಬುದಾಗಿ ನಿರ್ದೇಶ ಮಾಡಿದ್ದಾರೆ. ಇದನ್ನು ಛಾಂದೋಗ್ಯಭಾಷ್ಯದ ತೃತೀಯಾಧ್ಯಾಯದಲ್ಲಿ 'ಆರಣ್ಯಕ-ಮಾವರ್ತಯೇತ್' ಇತ್ಯಾದಿ ಗ್ರಂಥಭಾಗದಿಂದ ಸ್ಪಷ್ಟಪಡಿಸಿದ್ದಾರೆ.

## ಮೋಕ್ಷಧರ್ಮದಲ್ಲಿರುವ ಪ್ರಸಂಗನಿರೂಪಣೆ

**ಭಾವದೀಪಃ – ಪ್ರಕೃತೇಷ್ವಿತಿ ।। ಏವಂ ಹಿ ತತ್ರ ಕ್ರಮಃ ।**

ಜನಮೇಜಯಃ –
साङ्ख्यं योगः पाशुपतं वेदारण्यकमेव च ।
ज्ञानान्येतानि भिन्नानि उताहो नेति चोच्यताम् ।।

ವೈಶಮ್ಪಾಯನಃ –
साङ्ख्यं योगः पाशुपतं वेदारण्यकमेव च ।
ज्ञानान्येतानि भिन्नानि[1] नात्र कार्या विचारणा ।।

साङ्ख्यस्य वक्ता कपिलः परमर्षिः स उच्यते ।
प्राचीनगर्भं तमृषिं प्रवदन्तीह केचन ।।

हिरण्यगर्भो योगस्य वक्ता चैव चतुर्मुखः ।।

उमापतिर्भूतपतिः श्रीकण्ठो ब्रह्मणः सुतः ।
उक्तवानिदमव्यग्रं ज्ञानं पाशुपतं शिव ।।

पञ्चरात्रस्य कृत्स्नस्य वक्ता नारायणः स्वयम् ।
ज्ञानेष्वेतेषु राजेन्द्र सर्वेष्वेतद् विशिष्यते ।।

ಇತ್ಯದಿನಾ ತತ್ವಪ್ರದೀಪೋಕ್ತಃ[2] ।

---

(೧) 'ज्ञानान्येतानि भिन्नानि' ಇತ್ಯತ್ರ ವೇದಾರಣ್ಯಕಸ್ಯ ಪ್ರಮಾಣಶಾಸ್ತ್ರತ್ವಾತ್ ಸಾಙ್ಖ್ಯಾದಿತ್ರಿಕಾದ್ ಭಿನ್ನತಾ ತೇಷಾಂ ಚ ಪ್ರಕೃತೇರೇವ ಮೋಕ್ಷದಾಯಕತ್ವಮ್, ವಾಯುನಿರೋಧಸ್ಯೈವ ಮೋಕ್ಷದಾಯಕತ್ವಮ್, ಪಶುಪತೇರೇವ ಮೋಕ್ಷದಾಯಕತ್ವಮಿತ್ಯಾದಿರೂಪೇಣ ಪರಸ್ಪರಂ ವಿರೋಧೋ ಜ್ಞೇಯಃ । -(ಗುರ್ಥದೀಪಿಕಾ)

(೨) ತತ್ತ್ವಪ್ರದೀಪದಲ್ಲಿ ಉಕ್ತವಾದ ಈ ಶ್ಲೋಕಗಳ ಶೇಷಭಾಗವು ಹೀಗಿದೆ —

''ಪ್ರಕೃತೇಷು'' ಎಂಬ ಅಂಶದಿಂದ ಮೋಕ್ಷಧರ್ಮದಲ್ಲಿ ಹೇಳಿದ ಪ್ರಸಂಗವನ್ನು ಪೂರ್ತಿಯಾಗಿ ಗ್ರಹಿಸಿಕೊಳ್ಳಬೇಕು. ಅಲ್ಲಿ ಹೇಳಿದ ಕ್ರಮ ಈ ರೀತಿ ಇದೆ --

ಜನಮೇಜಯಃ -

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ।
ಜ್ಞಾನಾನ್ಯೇತಾನಿ ಭಿನ್ನಾನಿ ಉತಾಹೋ ನೇತಿ ಚೋಚ್ಯತಾಮ್ ॥

'ಸಾಂಖ್ಯ, ಯೋಗ ಪಾಶುಪತಾದಿಶಾಸ್ತ್ರಗಳು, ವೇದಾರಣ್ಯಕಗಳು ಇವುಗಳಲ್ಲಿ ಈ ಎಲ್ಲದರಿಂದ ಬರುವ ಜ್ಞಾನವು ಬೇರೆ ಬೇರೆಯಾಗಿದೆಯೋ ಅಥವಾ ಒಂದೇ ಆಗಿದೆಯೋ? ಇದನ್ನು ನನಗೆ ತಿಳಿಸಿರಿ' ಹೀಗೆ ಜನಮೇಜಯನು ಪ್ರಶ್ನೆ ಮಾಡಿದಾಗ; ಇದಕ್ಕೆ ವೈಶಂಪಾಯನರು ಈ ರೀತಿ ಉತ್ತರಿಸುತ್ತಿದ್ದಾರೆ.

ವೈಶಂಪಾಯನಃ -

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ।
ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ ॥

ಸಾಂಖ್ಯ, ಯೋಗ ಪಾಶುಪತ ಮತ್ತು ವೇದಾರಣ್ಯಕಗಳಲ್ಲಿ ಉಂಟಾಗುವ ಜ್ಞಾನವು ಪರಸ್ಪರ ಬೇರೆ ಬೇರೆಯಾಗಿಯೇ ಇದೆ; ಇದರಲ್ಲಿ ಯಾವುದೇ ಸಂಶಯವಿಲ್ಲ.

ಸಾಂಖ್ಯಸ್ಯ ವಕ್ತಾ ಕಪಿಲಃ ಪರಮರ್ಷಿಃ ಸ ಉಚ್ಯತೇ।
ಪ್ರಾಚೀನಗರ್ಭಂ ತಮೃಷಿಂ ಪ್ರವದಂತೀಹ ಕೇಚನ ॥

---

ज्ञानेष्वेतेषु सर्वेषु साङ्ख्ययोगादिषु ।
यथायोगं यथान्यायं निष्ठा नारायणः परः ।।
ससंशयास्ते सर्वेऽपि पञ्चरात्रमसंशयम् ।
निःसंशयेषु सर्वेषु नित्यं वसति केशवः ।।
ससंशयान् हेतुबलान् नाध्यावसति माधवः ।
पञ्चरात्रविदो ये तु यथाक्रमपरा नृप ।
एकान्तभावोपगता वासुदेवं विशन्ति ते ।।

'यथायोगं' - सर्वशब्दानां ब्रह्मणि वृत्त्या । 'यथान्यायं' यथा विष्णौ तात्पर्योपपत्तिः । 'निःसंशयेषु' यथानिश्चितार्थेषु । 'हेतुबलान्' हेतुमात्रबलान् । 'यथाक्रमपराः' यथोक्त-देवतातारतम्यक्रमपराः ।

ಸಾಂಖ್ಯಶಾಸ್ತ್ರವನ್ನು ಕಪಿಲರು ಹೇಳಿದ್ದಾರೆ; ಅವರನ್ನು ಪರಮರ್ಷಿ ಎಂದೂ ಕರೆಯುತ್ತಾರೆ. ಮತ್ತೆ ಕೆಲವರು ಅವರನ್ನು ಪ್ರಾಚೀನಗರ್ಭ ಎಂಬುದಾಗಿ ಹೇಳುತ್ತಾರೆ.

ಹಿರಣ್ಯಗರ್ಭೋ ಯೋಗಸ್ಯ ವಕ್ತಾ ನೈವ ಚತುರ್ಮುಖಃ।

ಹಿರಣ್ಯಗರ್ಭ ಎಂದು ಹೆಸರುಳ್ಳ ಚತುರ್ಮುಖಬ್ರಹ್ಮದೇವರು ಯೋಗಶಾಸ್ತ್ರದ ವಕ್ತೃವಾಗಿದ್ದಾರೆ.

ಉಮಾಪತಿರ್ಭೂತಪತಿಃ ಶ್ರೀಕಂಠೋ ಬ್ರಹ್ಮಣಃ ಸುತಃ।
ಉಕ್ತವಾನಿದಮವ್ಯಗ್ರಂ ಜ್ಞಾನಂ ಪಾಶುಪತಂ ಶಿವಃ॥

ಬ್ರಹ್ಮದೇವರ ಮಗನಾದ, ಉಮೆಯರಸನಾದ, ಭೂತಗಳ ನಾಥನಾದ, ಶ್ರೀಕಂಠನೆಂಬ ಹೆಸರುಳ್ಳ ರುದ್ರದೇವರು ಪಾಶುಪತವೆಂಬ ಅವ್ಯಗ್ರವಾದ ಜ್ಞಾನವನ್ನು ಉಪದೇಶಿಸಿದ್ದಾರೆ.

ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್।
ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ ವಿಶಿಷ್ಯತೇ॥

ಪಂಚರಾತ್ರಶಾಸ್ತ್ರವನ್ನು ಪೂರ್ಣವಾಗಿ ಸ್ವಯಂ ನಾರಾಯಣನೇ ಹೇಳಿದ್ದಾನೆ. ಈ ಎಲ್ಲ ಶಾಸ್ತ್ರಗಳಿಂದ ಬರುವ ಜ್ಞಾನಗಳಲ್ಲಿ ಪಂಚರಾತ್ರದಿಂದ ಬರುವ ಜ್ಞಾನವು ವಿಶಿಷ್ಟವಾಗಿದೆ.

ಇತ್ಯಾದಿ ವಾಕ್ಯಗಳಿಂದ ತತ್ವಪ್ರದೀಪದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ.

## ವೇದಕ್ಕೂ ಪಂಚರಾತ್ರಕ್ಕೂ ಐಕ್ಯಾಭಿಪ್ರಾಯವಿದೆ

**ಭಾವದೀಪಃ – ಐಕ್ಯಾಭಿಪ್ರಾಯಾಭಾವ ಇತಿ ।।** 'एतेष्वेतद् विशिष्यते' इति पञ्चरात्रस्याधिक्योक्तिर्हि पूर्वोक्तसाङ्ख्ययोगपाशुपतैक्यविवक्षया वा वेदारण्यकैक्यविवक्षया वा स्यात् । अन्यथा 'एतेषु' इति निर्धारणायोगात् पञ्चरात्रस्याधिक्यकथनमसङ्गतं स्यात् । प्रागस्यानिर्देशात् । तत्राद्ये पञ्चरात्रसाङ्ख्यादेर्वेदाद्प्या धिक्यमुक्तं स्यात् । तच्च न युक्तम् । वेदविरोधेना-लब्धप्रामाण्यस्य तस्य वेदादाधिक्यायोगात् द्वितीयमेष्टव्यमित्यर्थः । किं नोच्यते? इति प्रश्नस्योत्तरमाह – **पञ्चरात्रेति ।।** वेदप्रामाण्योक्तौ न पञ्चरात्रप्रामाण्यसिद्धिः । अनुपपत्त्यभावादिति भावः । अस्मिन् पक्षे

ವೇದಪ್ರಾಮಾಣ್ಯಂ ನ ಸಿಧ್ಯತಿ, ಇತ್ಯತ ಆಹ – **ಪಞ್ಚರಾತ್ರಪ್ರಾಮಾಣ್ಯೋಕ್ತೌ ತ್ವಿತಿ** ।। 'ಪಞ್ಚರಾತ್ರಸ್ಯಾವೇದಮೂಲತ್ವೇ ವಾ ತನ್ಮೂಲತ್ವೇಪಿ ಮೂಲಸ್ಯ ವೇದಸ್ಯಾಪ್ರಾಮಾಣ್ಯೇ ವಾ ಪ್ರಾಮಾಣ್ಯಾಯೋಗಾತ್ ಪಞ್ಚರಾತ್ರಪ್ರಾಮಾಣ್ಯೋಕ್ತೌ ವೇದಪ್ರಾಮಾಣ್ಯಸಿದ್ಧಿಃ' ಇತಿ(೧) ।

'ಐಕ್ಯಾಭಿಪ್ರಾಯಾಭಾವೇ' ಎಂಬ ಅಂಶದಿಂದ -- ಈ ಜ್ಞಾನಗಳಲ್ಲಿ ಪಂಚರಾತ್ರದಿಂದ ಬರುವ ಜ್ಞಾನವು ವಿಶಿಷ್ಟವಾದದ್ದು ಎಂಬುದಾಗಿ ಪಂಚರಾತ್ರಕ್ಕೆ ಆಧಿಕ್ಯವನ್ನು ಹೇಳಿದ್ದು ಹಿಂದೆ ಹೇಳಿದ ಸಾಂಖ್ಯಯೋಗ ಪಾಶುಪತಾದಿಗಳಲ್ಲಿ ಐಕ್ಯವನ್ನು ಹೇಳಿಯೂ ಅಥವಾ ವೇದಾರಣ್ಯಕಗಳೊಂದಿಗೆ ಐಕ್ಯವಿವಕ್ಷೆಯಿಂದಲೂ ಇರಬಹುದು. ಹಾಗಿಲ್ಲದಿದ್ದರೆ 'ಏತೇಷು' ಎಂಬುದಾಗಿ ಸ್ಪಷ್ಟವಾದ ನಿರ್ಧಾರವು ಹೊಂದುವುದಿಲ್ಲವಾದ್ದರಿಂದ ಪಂಚರಾತ್ರವು ಅಧಿಕವಾಗಿದೆ ಎಂಬ ಹೇಳಿಕೆಯು ಅಸಂಗತವಾಗುತ್ತದೆ. ಪ್ರಾರಂಭದಲ್ಲಿ ಪಂಚರಾತ್ರವನ್ನು ಹೇಳಿಲ್ಲವಾದ್ದರಿಂದ ಹೀಗೆ ಅರ್ಥಮಾಡಬೇಕು. ಈ ಎರಡು ಪಕ್ಷಗಳಲ್ಲಿ ಮೊದಲನೆಯ ಪಕ್ಷದಂತೆ ಪಂಚರಾತ್ರ ಮತ್ತು ಸಾಂಖ್ಯಾದಿಗಳಿಗೆ ವೇದಕ್ಕಿಂತಲೂ ಆಧಿಕ್ಯವು ಹೇಳಿದಂತೆ ಆಗುತ್ತದೆ. ಇದು ಸರಿಯಲ್ಲ. ವೇದವಿರೋಧವಿರುವುದರಿಂದ ಪ್ರಾಮಾಣ್ಯವೇ ಇಲ್ಲದಿರುವ ಆ ಸಾಂಖ್ಯಾದಿಶಾಸ್ತ್ರಗಳಿಗೆ ವೇದಕ್ಕಿಂತಲೂ ಆಧಿಕ್ಯವು ಹೊಂದುವುದಿಲ್ಲವಾದ್ದರಿಂದ ವೇದ ಮತ್ತು ಪಂಚರಾತ್ರಗಳಿಗೆ ಐಕ್ಯವನ್ನು ಹೇಳುವುದೇ ಸಮುಚಿತವಾಗಿದೆ -- ಎಂಬುದಾಗಿ ಅಭಿಪ್ರಾಯವನ್ನು ತಿಳಿಯಬೇಕು.

ವೇದಕ್ಕೇ ಪ್ರಾಮಾಣ್ಯವನ್ನು ಏಕೆ ಹೇಳುತ್ತಿಲ್ಲ? ಎಂಬ ಪ್ರಶ್ನೆಗೆ ಉತ್ತರವನ್ನು ''ಪಂಚರಾತ್ರಸ್ಯ'' ಇತ್ಯಾದಿ ಅಂಶದಿಂದ ಹೇಳುತ್ತಿದ್ದಾರೆ. 'ವೇದಕ್ಕೆ ಪ್ರಾಮಾಣ್ಯವನ್ನು

(೧) ಪ್ರಾಗ್ ವೇದಾರಣ್ಯಕಪದೇನೋಪನಿಷದಾಮೇವ ಗ್ರಹಣೇ ಸಂಹಿತಾರೂಪಬಹುತರವೇದಸ್ಯಾಸಙ್ಗ್ರಹಪ್ರಸಙ್ಗೇನ ಪುನರ್ನ್ಯೂನತೈವ ಸ್ಯಾತ್ । ಅತೋऽಜಹತ್ಸ್ವಾರ್ಥಲಕ್ಷಣಯಾ ವೇದಮಾತ್ರಬೋಧಕಂ ತತ್ ಇತಿ ಸೂಚನಾಯ 'ವೇದಪಞ್ಚರಾತ್ರಯೋಃ' ಇತ್ಯಾಹ ಭಗವಾನ್ ಭಾಷ್ಯಕಾರಃ । ಅನಯೈವ ದಿಶಾ ಪಞ್ಚರಾತ್ರಪದಮಪಿ ಸಕಲ-ಪೌರುಷೇಯಸದಾಗಮೋಪಲಕ್ಷಣಮ್ । ಸಾಙ್ಖ್ಯಾದಿಪದಂ ಚ ಸಕಲದುರಾಗೋಪಲಕ್ಷಣಮಿತಿ ಸೂಚಿತಮ್ । 'ಇತರೇಷಾಂ ಭಿನ್ನಮತತ್ವಂ ಪ್ರದರ್ಶ್ಯ' ಇತ್ಯುಪಲಕ್ಷಣಮ್ । 'ಪ್ರಮಾಣೀಭೂತಪಞ್ಚರಾತ್ರವಿರುದ್ಧತ್ವೇನಾಪ್ರಾಮಾಣ್ಯಂ ಚ ಪದರ್ಶ್ಯ' ಇತ್ಯಪಿ ದ್ರಷ್ಟವ್ಯಮ್ । ಅತಃ ಶ್ಲೋಕದ್ವಯೇನೈವ ದೂಷ್ಯಸಕಲದುರಾಗಮಾನಾಂ ಪೋಷ್ಯಸಕಲಸದಾಗಮಾನಾಂ ದೂಷಣಪೋಷಣಪ್ರಕಾರಸ್ಯ ಚ ಸಙ್ಗ್ರಹಃ ಇತಿ ಮಹತ್ಕೌಶಲಂ ವ್ಯಾಸವಾಕ್ಯಸ್ಯೇತ್ಯಭಿಸನ್ಧಿರ್ಭಾಷ್ಯಕಾರಸ್ಯ ।

-(ಗುರ್ವರ್ಥದೀಪಿಕಾ)

ಹೇಳಿದರೆ ಅನುಪಪತ್ತಿ ಯಾವುದೂ ಇಲ್ಲದಿರುವುದರಿಂದ ಪಂಚರಾತ್ರಕ್ಕೆ ಪ್ರಾಮಾಣ್ಯವು ಸಿದ್ಧವಾಗುವುದಿಲ್ಲ' ಎಂದು ಅಭಿಪ್ರಾಯ. ಈ ಪಕ್ಷದಲ್ಲಿ ವೇದಪ್ರಾಮಾಣ್ಯವು ಸಿದ್ಧವಾಗಲಾರದು? ಎಂಬುದಕ್ಕೆ ಉತ್ತರವಾಗಿ ''ಪಂಚರಾತ್ರಪ್ರಾಮಾಣ್ಯೋಕ್ತೌ ತು'' ಎಂಬ ಅಂಶವನ್ನು ಹೇಳಿದ್ದಾರೆ. ''ಪಂಚರಾತ್ರವು ವೇದಮೂಲವಲ್ಲದಿದ್ದರೆ ಅಥವಾ ವೇದಮೂಲವಾದರೂ ವೇದಕ್ಕೆ ಅಪ್ರಾಮಾಣ್ಯವಿದ್ದರೆ ಈ ಎರಡಕ್ಕೂ ಪ್ರಾಮಾಣ್ಯ ಸಿದ್ಧಿಸದೇ ಇರಬಹುದು. ಆದರೆ ಹಿಂದೆ ಹೇಳಿದಂತೆ ಪಂಚರಾತ್ರವು ವೇದಮೂಲವಾಗಿರುವುದರಿಂದ ಪಂಚರಾತ್ರವು ಪ್ರಮಾಣ ಎಂದು ಹೇಳಿದಾಗ ಅದಕ್ಕೆ ಮೂಲವಾದ ವೇದವೂ ಪ್ರಮಾಣ ಎಂಬುದಾಗಿಯೇ ಅರ್ಥ ಬರುವುದರಿಂದ ಇದರಿಂದಲೇ ವೇದಪ್ರಾಮಾಣ್ಯವು ಸಿದ್ಧವಾಗುತ್ತದೆ'' ಎಂಬುದಾಗಿ ಅಭಿಪ್ರಾಯ.

ವಿಶೇಷ ವಿಚಾರ -

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ।
ಜ್ಞಾನಾನ್ಯೇತಾನಿ ಭಿನ್ನಾನಿ ಉತಾಹೋ ವಿಕ ಏವ ತು॥
ಏತದಾಖ್ಯಾಹಿ ಮೇ ಬ್ರಹ್ಮನ್।

ಸಾಂಖ್ಯದರ್ಶನ, ಯೋಗದರ್ಶನ, ಪಾಶುಪತ, ಆಗಮ, ವೇದ ಇವುಗಳು ಪರಸ್ಪರ ವಿರುದ್ಧಗಳೋ ಅಥವಾ ಅವಿರುದ್ಧಗಳೋ? ಎಂದು ಜನಮೇಜಯನು ಪ್ರಶ್ನಿಸುತ್ತಾನೆ. ಅದಕ್ಕೆ ವೈಶಂಪಾಯನರು ಹೀಗೆ ಉತ್ತರಿಸುತ್ತಾರೆ. -

ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ।
ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯಾ ವಿಚಾರಣಾ॥

ಮೇಲೆ ಹೇಳಿದ ಎಲ್ಲ ದರ್ಶನಗಳು ಪರಸ್ಪರ ವಿರುದ್ಧಗಳಾಗಿವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಪುನಃ ವೈಶಂಪಾಯನರು ಹೇಳುತ್ತಾರೆ -

ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಮ್।
ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ವಿಶಿಷ್ಯತೇ॥

ಪಂಚರಾತ್ರವನ್ನು ಸ್ವತಃ ನಾರಾಯಣನೇ ರಚಿಸಿದ್ದಾನೆ. ಎಲ್ಲಾ ದರ್ಶನಗಳಿಗಿಂತ ಪಂಚರಾತ್ರವೇ ಶ್ರೇಷ್ಠವಾಗಿದೆ.

ಇಷ್ಟು ಭಾಷ್ಯದಲ್ಲಿ ಹೇಳಿದ ವಿಚಾರ.

ಆಕ್ಷೇಪ - ಪ್ರಶ್ನೆ ಮಾಡುವಾಗ ಸಾಂಖ್ಯಾದಿದರ್ಶನಗಳನ್ನಷ್ಟೇ ಹೇಳಿದ್ದಾರೆ. ಪಂಚರಾತ್ರದ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಉತ್ತರಿಸುವಾಗ ಕಪಿಲಾದಿಗಳು ಸಾಂಖ್ಯಾದಿ ದರ್ಶನಗಳನ್ನು ರಚಿಸಿದ್ದಾರೆ. ಪಂಚರಾತ್ರವನ್ನು ಸಾಕ್ಷಾತ್ ನಾರಾಯಣನೇ ರಚಿಸಿದ್ದಾನೆ. ಈ ಎಲ್ಲಾ ದರ್ಶನಗಳಲ್ಲಿ ಪಂಚರಾತ್ರವೇ ಶ್ರೇಷ್ಠವಾಗಿದೆಯೆಂದು ಹೇಳಿದ್ದಾರೆ. ಇದು ಹೇಗೆ ಕೂಡುತ್ತದೆ?

ಪಂಚರಾತ್ರವು ಶ್ರೇಷ್ಠವೋ? ಅಲ್ಲವೋ? ಎಂದು ಜನಮೇಜಯನು ಪ್ರಶ್ನೆಯನ್ನೇ ಮಾಡಿಲ್ಲ. ಹೀಗಿರುವಾಗ ಪಂಚರಾತ್ರವೇ ಶ್ರೇಷ್ಠವೆಂದು ಉತ್ತರಿಸುವುದು ತಪ್ಪಲ್ಲವೇ?

ಮತ್ತು ಪಂಚರಾತ್ರವನ್ನಷ್ಟೇ ಶ್ರೇಷ್ಠವೆಂದು ಹೇಳಿದ್ದರಿಂದ ಸಾಂಖ್ಯಾದಿದರ್ಶನಗಳಂತೆ ವೇದವೂ ಸಹ ಶ್ರೇಷ್ಠವಲ್ಲ ಎಂದಂತಾಯಿತು. ಹಾಗಾಗಿ ವೇದಕ್ಕೆ ಅಪ್ರಾಮಾಣ್ಯದೋಷ ಬಂತು.

ಸಮಾಧಾನ - ವೇದದಲ್ಲಿ ಹೇಳಿದ್ದನ್ನೇ ಪಂಚರಾತ್ರದಲ್ಲಿಯೂ ಹೇಳಿದ್ದರಿಂದ ಪಂಚರಾತ್ರ ಬೇರೆ ಅಲ್ಲ. ವೇದ ಬೇರೆಯಲ್ಲ. ಪಂಚರಾತ್ರಕ್ಕೂ ವೇದಕ್ಕೂ ಐಕ್ಯವನ್ನು ವಿವಕ್ಷಿಸಿ ಹಾಗೆ ಹೇಳಿದ್ದಾರೆ. ಪ್ರಶ್ನೆಯಲ್ಲಿರುವ ವೇದಾರಣ್ಯಕಶಬ್ದದಿಂದ ಪಂಚರಾತ್ರಕ್ಕೇ ವೈಶಂಪಾಯನರು ಮುಂದೆ ಉತ್ತರಿಸುವಾಗ ಶ್ರೇಷ್ಠತ್ವವನ್ನು ಹೇಳಿದ್ದಾರೆ. ಪಂಚರಾತ್ರಕ್ಕೆ ಶ್ರೇಷ್ಠತ್ವವನ್ನು ಹೇಳಿದ್ದರಿಂದಲೇ ವೇದಕ್ಕೂ ಶ್ರೇಷ್ಠತ್ವವನ್ನು ಹೇಳಿದಂತಾಗುತ್ತದೆ. ಆದ್ದರಿಂದ ಅಪ್ರಸಕ್ತವಾದ ಪಂಚರಾತ್ರಕ್ಕೆ ಶ್ರೇಷ್ಠತ್ವವನ್ನು ಹೇಗೆ ಹೇಳಿದರು? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಮತ್ತು ವೇದವು ಅಪ್ರಮಾಣವೆಂಬ ದೋಷದ ಶಂಕೆಗೆ ಆಸ್ಪದವಿಲ್ಲ. ಈ ಎಲ್ಲ ದೋಷಗಳ ವಿಚಾರವಾಗಿ ಪಂಚರಾತ್ರಕ್ಕೂ ವೇದಕ್ಕೂ ಐಕ್ಯವನ್ನು ವಿವಕ್ಷಿಸಲೇಬೇಕು. ಇಲ್ಲವಾದರೆ ಪಂಚರಾತ್ರಕ್ಕೆ ಅಧಿಕ್ಯ ಹೇಳಿದ್ದು ಅಸಂಗತವಾಗುತ್ತದೆ. ವೇದಕ್ಕೆ ಅಪ್ರಾಮಾಣ್ಯವೂ ತಪ್ಪಿದ್ದಲ್ಲ. ಮತ್ತು 'ಜ್ಞಾನೇಷ್ವೇತೇಷು ರಾಜೇಂದ್ರ ಸರ್ವೇಷ್ವೇತದ್ವಿಶಿಷ್ಯತೇ' ಎಂಬಲ್ಲಿ 'ಏತೇಷು' ಎಂದು ನಿರ್ಧಾರಣಾರ್ಥದಲ್ಲಿ ಸಪ್ತಮೀವಿಭಕ್ತಿ ಬಂದಿದೆ. ಇಂತಹ ಸಪ್ತಮ್ಯಂತವಾದ 'ಏತೇಷು' ಶಬ್ದದಿಂದ ಯಾವ ಯಾವ ದರ್ಶನಗಳು ಪರಾಮರ್ಶಿಸಲ್ಪಟ್ಟಿವೆಯೋ ಅವುಗಳ ಮಧ್ಯದಲ್ಲಿರುವ ಯಾವದಾದರೂ ಒಂದನ್ನು 'ಏತ್ ದ್ವಿಶಿಷ್ಯತೇ' ಎಂಬಲ್ಲಿರುವ 'ಏತದ್' ಶಬ್ದದಿಂದ ಪರಾಮರ್ಶಿಸಿ ಅದಕ್ಕೆ ಶ್ರೇಷ್ಠತ್ವವನ್ನು ಹೇಳಬೇಕು. ಈಗ ವೇದಾರಣ್ಯಕಪದದಿಂದಲೇ ಅದನ್ನು ಸ್ವೀಕರಿಸದಿದ್ದರೆ ನಿರ್ಧಾರಣಾರ್ಥದಲ್ಲಿ ಸಪ್ತಮೀವಿಭಕ್ತಿಯನ್ನೇ ಕೂಡಿಸಲು ಬರುವುದಿಲ್ಲ.

ಇಲ್ಲಿಯ ತನಕ ನಿರ್ಧಾರಣಾನ್ಯಥಾನುಪಪತ್ತಿಯಿಂದ ವೇದಾರಣ್ಯಕಪದದಿಂದ ಪಂಚರಾತ್ರವನ್ನು ಗ್ರಹಣಮಾಡಬೇಕೆಂದು ಹೇಳಿದ್ದಾಯಿತು. ಈಗ ನೇರವಾಗಿ ಆಧಿಕ್ಯಾನ್ಯಥಾನುಪಪತ್ತಿಯಿಂದಲೇ ವೇದಾರಣ್ಯಕ ಪದದಿಂದ ಪಂಚರಾತ್ರವನ್ನು ಗ್ರಹಣ ಮಾಡಬಹುದೆಂದು 'ಯದ್ವಾ' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಟೀಕೆಯಲ್ಲಿ 'ವೇದಸ್ಯೈವ ಪ್ರಾಮಾಣ್ಯಂ ಕಿಂ ನೋಚ್ಯತೇ ಪಂಚರಾತ್ರಪ್ರಾಮಾಣ್ಯಸಿದ್ಧ್ಯರ್ಥಮ್' ಎಂಬ ವಾಕ್ಯವಿದೆ. ಇದನ್ನು ನೋಡಿದಾಗ ಸಂಪೂರ್ಣ ಪ್ರಶ್ನವಾಕ್ಯವೆಂದನಿಸುತ್ತಿದೆ. ಆದರೆ 'ವೇದಸ್ಯೈವ ಪ್ರಾಮಾಣ್ಯಂ ಕಿಂ ನೋಚ್ಯತೇ' ಎಂಬುದಷ್ಟೇ ಪ್ರಶ್ನೆ. 'ಪಂಚರಾತ್ರಪ್ರಾಮಾಣ್ಯಸಿದ್ಧ್ಯರ್ಥಮ್' ಎಂಬುದು ಉತ್ತರವೆಂದು ತಿಳಿಯಬೇಕು. ಇಲ್ಲವಾದರೆ ಪಂಚರಾತ್ರದ ಪ್ರಾಮಾಣ್ಯಸಿದ್ಧಿಗೋಸ್ಕರ ವೇದಕ್ಕೆ ಪ್ರಾಮಾಣ್ಯವನ್ನು ಏಕೆ ಹೇಳಬಾರದು? ಎಂದಂತಾಗುತ್ತದೆ. ಇದು ತಪ್ಪು. ವೇದವು ಪ್ರಮಾಣವಾದ ಮಾತ್ರದಿಂದ ಪಂಚರಾತ್ರವೇಕೆ ಪ್ರಮಾಣವಾಗಬೇಕು? ಈ ರೀತಿಯಾದ ನಿರ್ಬೀಜಪ್ರಶ್ನೆಯೇ ಕೂಡುವುದಿಲ್ಲ. ಮತ್ತು ಸಂಪೂರ್ಣವಾಕ್ಯ ಪ್ರಶ್ನೆ ಆಗಿಬಿಟ್ಟರೆ ಉತ್ತರ ಹೇಳುವ ವಾಕ್ಯವೇ ಇಲ್ಲದಂತಾಗುತ್ತದೆ. ಮುಂದೆ ಬೇರೆ ಉತ್ತರ ನೀಡುವ ವಾಕ್ಯವೂ ಕಾಣುತ್ತಿಲ್ಲ.

ಒಟ್ಟು ಎರಡು ಮಾರ್ಗವಿದೆ. ವೇದಗಳಿಗೆ ಪ್ರಾಮಾಣ್ಯ ಹೇಳಿ ತನ್ಮೂಲಕ ಪಂಚರಾತ್ರಕ್ಕೆ ಪ್ರಾಮಾಣ್ಯ ಹೇಳಬೇಕು. ಅಥವಾ ಪಂಚರಾತ್ರಕ್ಕೆ ಪ್ರಾಮಾಣ್ಯ ಹೇಳಿ ತನ್ಮೂಲಕ ವೇದಗಳಿಗೆ ಪ್ರಾಮಾಣ್ಯ ಹೇಳಬೇಕು. ಇವುಗಳಲ್ಲಿ ವೇದಗಳ ಪ್ರಾಮಾಣ್ಯದಿಂದ ಪಂಚರಾತ್ರಕ್ಕೆ ಪ್ರಾಮಾಣ್ಯವೆಂಬ ಮೊದಲನೆಯ ಪಕ್ಷ ಕೂಡುವುದಿಲ್ಲ. ಆದರೆ ಪಂಚರಾತ್ರದ ಪ್ರಾಮಾಣ್ಯದಿಂದ ವೇದಗಳಿಗೆ ಪ್ರಾಮಾಣ್ಯ ಸಿದ್ಧವಾಗುತ್ತದೆಂದು ಟೀಕೆಯಲ್ಲಿ ಮುಂದೆ ಹೇಳಿದ್ದಾರೆ. ಈಗ 'ವೇದಸ್ಯೈವ' ಇತ್ಯಾದಿ ಸಂಪೂರ್ಣವಾಕ್ಯವನ್ನು ಪ್ರಶ್ನೆಯೆಂದು ವಿವಕ್ಷಿಸಿದರೆ ಟೀಕೆಯಲ್ಲಿ ಮುಂದೆ ಹೇಳುವ ಈ ವಿಷಯವೆಲ್ಲ ಅಸಂಗತವಾಗುತ್ತದೆ.

'ವೇದಸ್ಯೈವ' ಪ್ರಾಮಾಣ್ಯಂ ಕಿಂ ನೋಚ್ಯತೇ? ಎಂಬ ಟೀಕೆಗೆ ಹೀಗೆ ಅರ್ಥ. ಜನಮೇಜಯನು ವೇದ ಪ್ರಾಮಾಣ್ಯದ ಬಗ್ಗೆ ಪ್ರಶ್ನಿಸಿದ್ದಾನೆ. ಅದಕ್ಕೆ ಉತ್ತರಿಸಬೇಕಾದರೆ ನೇರವಾಗಿ ವೇದಪ್ರಾಮಾಣ್ಯವನ್ನೇ ಸಮರ್ಥಿಸಬೇಕು. ಅದನ್ನು ಬಿಟ್ಟು ಪಂಚರಾತ್ರಪ್ರಾಮಾಣ್ಯವನ್ನು ಸಮರ್ಥಿಸುವುದು ಅಸಂಗತ. ಎಂಬ ಶಂಕೆಗೆ

'ಪಂಚರಾತ್ರಪ್ರಾಮಾಣ್ಯಸಿದ್ಧ್ಯರ್ಥಮ್' ಎಂಬ ಮುಂದಿನ ಟೀಕೆ ಉತ್ತರಿಸುತ್ತಿದೆ. ಪಂಚರಾತ್ರಕ್ಕೂ ಪ್ರಾಮಾಣ್ಯದ ಸಿದ್ಧಿ ಆಗಬೇಕಾಗಿದೆ. ಅದಕ್ಕಾಗಿ ನೇರವಾಗಿ ವೇದಪ್ರಾಮಾಣ್ಯವನ್ನು ಹೇಳದೆ ಪಂಚರಾತ್ರಪ್ರಾಮಾಣ್ಯವನ್ನು ಹೇಳಿದ್ದಾರೆ. ಪಂಚರಾತ್ರಪ್ರಾಮಾಣ್ಯದಿಂದ ವೇದಪ್ರಾಮಾಣ್ಯ ಸಿದ್ಧವಾಗುತ್ತದೆ. ಆದರೆ ವೇದಪ್ರಾಮಾಣ್ಯದಿಂದ ಪಂಚರಾತ್ರಕ್ಕೆ ಪ್ರಾಮಾಣ್ಯ ಸಿದ್ಧವಾಗುವುದಿಲ್ಲವೆಂಬುದು ಇಲ್ಲಿ ಗಮನೀಯ ಅಂಶ.

ಆದ್ದರಿಂದ 'ವೇದಸ್ಯೈವ ಪ್ರಾಮಾಣ್ಯಂ ಕಂ ನೋಚ್ಯತೇ' ಎಂಬ ವಾಕ್ಯದಲ್ಲಿರುವ 'ಕಂ' ಶಬ್ದವನ್ನು ಬಿಟ್ಟು ಉಳಿದೆಲ್ಲ ಪದಗಳನ್ನು 'ಪಂಚರಾತ್ರಪ್ರಾಮಾಣ್ಯಸಿದ್ಧ್ಯರ್ಥಮ್' ಎಂಬ ಮುಂದಿನ ವಾಕ್ಯದಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕು. ಆಗ 'ಪಂಚರಾತ್ರಪ್ರಾಮಾಣ್ಯಸಿದ್ಧ್ಯರ್ಥಮ್ ವೇದಸ್ಯೈವ ಪ್ರಾಮಾಣ್ಯಂ ನೋಚ್ಯತೇ' 'ಪಂಚರಾತ್ರಪ್ರಾಮಾಣ್ಯದ ಸಿದ್ಧಿಗೋಸ್ಕರವೇ ನೇರವಾಗಿ ಕೇವಲ ವೇದಕ್ಕೆ ಪ್ರಾಮಾಣ್ಯವನ್ನು ಹೇಳಿಲ್ಲ' ಎಂದರ್ಥವಾಗುತ್ತದೆ.

ವೇದಪ್ರಾಮಾಣ್ಯದಿಂದ ಪಂಚರಾತ್ರಪ್ರಾಮಾಣ್ಯವು ಸಿದ್ಧವಾಗುತ್ತದೆಂದು ಅರ್ಥಾಪತ್ತಿಯಿಂದ ಹೇಳುತ್ತೀರೋ? ಅಥವಾ ಮೂಲಕ್ಕೆ ಪ್ರಾಮಾಣ್ಯ ಬಂದರೆ ಮೂಲಿಗೂ ಪ್ರಾಮಾಣ್ಯ ಬರಬೇಕೆಂಬ ಅಭಿಪ್ರಾಯದಿಂದ ಹೇಳುತ್ತೀರೋ? ಎರಡೂ ಪಕ್ಷಗಳನ್ನು ತಪ್ಪೆಂದು 'ನಹಿ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪಂಚರಾತ್ರಪ್ರಾಮಾಣ್ಯದಿಂದಲೂ ವೇದಪ್ರಾಮಾಣ್ಯ ಸಿದ್ಧವಾಗುವುದು ಬೇಡವೆಂಬ ಪ್ರಶ್ನೆಗೆ 'ಪಂಚರಾತ್ರಸ್ಯ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

## ಟೀಕೆಯಲ್ಲಿರುವ ಕಠಿಣಪದಾರ್ಥ

**ಭಾವದೀಪಃ –** **बहुवचनमिति ।। मोक्षधर्मेष्वपीत्यत्र इत्यर्थः । उक्तं प्रमेयं न्यायविवरणारूढं सौत्रहेतोः सम्बन्धभाष्योक्तसाध्येनान्वयं च दर्शयन् फलोत्त्याऽधिकरणार्थमुपसंहरति – तस्मादिति ।। '' 'नावेदविदित्यादिबलात्' इत्यनेन भाष्योक्तोपपादनं सूत्रोक्तहेतुसमर्थनार्थम्' इत्युपसंहारः सूचितः । नानुमानेनेति ।। 'पाशुपतादिना च' इत्युपलक्ष्यते ।**

''ಬಹುವಚನಮ್'' ಎಂದರೆ 'ಮೋಕ್ಷಧರ್ಮೇಷ್ವಪಿ' ಎಂಬಲ್ಲಿರುವ ಬಹುವಚನ ಎಂದರ್ಥ. ಈ ಹಿಂದೆ ಹೇಳಿದ ಪ್ರಮೇಯವು ನ್ಯಾಯವಿವರಣದಲ್ಲಿ ಹೇಳಿದ ಪ್ರಮೇಯಕ್ಕೆ ಹೊಂದಾಣಿಕೆಯಾಗುತ್ತದೆ. ಮತ್ತು ಸೂತ್ರದಲ್ಲಿ ಹೇಳಿದ ಹೇತುವಿಗೆ ಸಂಬಂಧಭಾಷ್ಯದಲ್ಲಿ ಅಂದರೆ ಈ ಸೂತ್ರದ ಅವತರಣಿಕೆಯಲ್ಲಿ ಹೇಳಿದ ಸಾಧ್ಯಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ತೋರಿಸುತ್ತಾ ''ತಸ್ಮಾತ್'' ಇತ್ಯಾದಿ ಭಾಗದಿಂದ ನಿರ್ಣಯಾರ್ಥವನ್ನು ತಿಳಿಸಿ ಅಧಿಕರಣಾರ್ಥವನ್ನು ಉಪಸಂಹಾರ ಮಾಡುತ್ತಿದ್ದಾರೆ. ಈ ಭಾಗದಿಂದ 'ನಾವೇದವಿತ್' ಇತ್ಯಾದಿ ಶ್ರುತಿಗಳ ಬಲದಿಂದ ಎಂಬುದಾಗಿ ಭಾಷ್ಯದಲ್ಲಿ ಮಾಡಿದ ವಿವರಣೆಯು ಸೂತ್ರದಲ್ಲಿ ಹೇಳಿದ ಹೇತುವನ್ನು ಸಮರ್ಥನೆ ಮಾಡಲಿಕ್ಕೋಸ್ಕರ ಎಂಬುದಾಗಿ ಉಪಸಂಹಾರವನ್ನು ಸೂಚಿಸಿದ್ದಾರೆ. ''ನ ಅನುಮಾನೇನ'' ಎಂಬ ಅಂಶದಿಂದ 'ಪಾಶುಪತಾದಿನಾ ಚ' ಎಂಬ ಅಂಶವನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು. ಇದರಿಂದ ನ್ಯಾಯವಿವರಣದಲ್ಲಿ ಹೇಳಿದ ಅನುಮಾನ ಮತ್ತು ಪಾಶುಪತಾದ್ಯಾಗಮಗಳನ್ನು ಎರಡನ್ನೂ ತಿಳಿಸುವ 'ಸಮ'ಶಬ್ದದ ಅರ್ಥವು ಈ ಸೂತ್ರದ ಭಾಷ್ಯದ ಅವತರಣಿಕೆಯಲ್ಲಿ ಹೇಳಿದ ಅರ್ಥವೂ ಒಂದೇ ಆಗುತ್ತದೆ.

ವಿಶೇಷ ವಿಚಾರ - ಭಾಷ್ಯದಲ್ಲಿ 'ಮೋಕ್ಷಧರ್ಮೇಷು' ಎಂಬುದಾಗಿ ಬಹುವಚನವನ್ನು ಪ್ರಯೋಗ ಮಾಡಿದ್ದಾರೆ. ಆದರೆ ಇಲ್ಲಿ ಬಹುವಚನವನ್ನು ಪ್ರಯೋಗ ಮಾಡುವ ಅವಶ್ಯಕತೆಯಿಲ್ಲ. ಏಕೆಂದರೆ 'ಮೋಕ್ಷಧರ್ಮಪರ್ವ' ಎಂಬುದು ಮಹಾಭಾರತದ ಶಾಂತಿಪರ್ವದಲ್ಲಿರುವ ಒಂದು ಉಪಪರ್ವ. ಆದ್ದರಿಂದ 'ಮೋಕ್ಷಧರ್ಮೇ' ಎಂದು ಉಲ್ಲೇಖಿಸಬಹುದಿತ್ತು. ಅಥವಾ 'ಮೋಕ್ಷಧರ್ಮಪರ್ವಣಿ' ಎಂದೂ ಕೂಡ ಏಕವಚನದಲ್ಲಿಯೇ ಭಾಷ್ಯಕಾರರು ಪ್ರಯೋಗ ಮಾಡಬಹುದಿತ್ತು. ಒಂದೇ ಮೋಕ್ಷಧರ್ಮ ಎಂಬ ಉಪಪರ್ವವನ್ನು ಬಹುವಚನದಲ್ಲಿ ಏಕೆ ಪ್ರಯೋಗಿಸಿದ್ದಾರೆ ?

ತತ್ವಪ್ರದೀಪಕಾರರು ಹೀಗೆ ಉತ್ತರಿಸಿದ್ದಾರೆ - 'ಮೋಕ್ಷಧರ್ಮೇಷ್ವಿತಿ ಬಹುವಚನಂ ಧರ್ಮಭೇದಾತ್' ಜೀವಯೋಗ್ಯತೆಗೆ ಅನುಗುಣವಾಗಿ ಮೋಕ್ಷಕ್ಕೆ ಉಪಯೋಗಿಯಾದ ಧರ್ಮಗಳು ಭಿನ್ನ-ಭಿನ್ನವಾಗಿರುವುದರಿಂದ 'ಮೋಕ್ಷಧರ್ಮೇಷು' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಿದ್ದಾರೆ.

ತತ್ವಪ್ರಕಾಶಿಕೆಯಲ್ಲಿ 'ಧರ್ಮಬಹುತ್ವಾತ್ ಬಹುವಚನಮ್' ಎಂದು ಉತ್ತರಿಸಿದ್ದಾರೆ. ವರ್ಣಾಶ್ರಮ ಮೊದಲಾದ ಪ್ರತಿಪಾದ್ಯವಾದ ಧರ್ಮಗಳು ಬಹಳವಾಗಿರುವುದರಿಂದ ಬಹುವಚನವನ್ನು ಪ್ರಯೋಗಿಸಿದ್ದಾರೆ.

## ಯೋನಿಶಬ್ದಾರ್ಥ

**ಭಾವದೀಪಃ –** तेनान्यत्रोक्तोभयार्थकसमशब्दार्थः सम्बन्धभाष्यार्थश्चैकः सम्पद्यते । योनिशब्दस्य कारणे शक्तेर्भाष्ये कथं प्रमाणमिति व्याख्या? इत्यतः करणसाधनं प्रमाणपदमिति भावेनाह – ज्ञप्तीति ।। 'योनि' इत्यस्य कारणमात्रार्थत्वेपि ज्ञप्तेर्योग्यतया अन्वयः । शास्त्रकारणकत्वस्य ब्रह्मणि बाधात् तत्पुरुषस्य च निरस्तत्वात् ।

'ಯೋನಿ'ಶಬ್ದಕ್ಕೆ ಕಾರಣ ಎಂಬ ಅರ್ಥವು ಪ್ರಸಿದ್ಧವಾಗಿದ್ದರೂ 'ಪ್ರಮಾಣಂ' ಎಂಬ ಅರ್ಥವನ್ನು ಭಾಷ್ಯದಲ್ಲಿ ಹೇಗೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ 'ಪ್ರಮಾಣಪದವು ಕರಣಸಾಧನ' ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ ಎಂಬ ಅಭಿಪ್ರಾಯದಿಂದ 'ಜ್ಞಪ್ತಿಕಾರಣಂ' ಎಂಬುದಾಗಿ ಹೇಳಿದ್ದಾರೆ. 'ಯೋನಿ' ಎಂಬ ಶಬ್ದಕ್ಕೆ ಕೇವಲ ಕಾರಣ ಎಂದು ಅರ್ಥವಿದ್ದರೂ 'ಜ್ಞಪ್ತಿ' ಎಂಬ ಅಂಶಕ್ಕೆ ಇಲ್ಲಿ ಯೋಗ್ಯತೆ ಇರುವುದರಿಂದ ಅದರೊಂದಿಗೆ ಅನ್ವಯವನ್ನು ಹೇಳಬೇಕು. 'ಬ್ರಹ್ಮನ ವಿಷಯದಲ್ಲಿ ಶಾಸ್ತ್ರವು ಕಾರಣ' ಎಂಬ ಅರ್ಥವು ಬಾಧಿತವಾಗಿದೆ. ಅಲ್ಲದೆ ತತ್ಪುರುಷಸಮಾಸವನ್ನು ಭಾಷ್ಯದಲ್ಲಿ ನಿರಾಕರಣೆ ಮಾಡಿದ್ದಾರೆ. ಆದ್ದರಿಂದ ಈ ರೀತಿಯಾಗಿಯೇ ಅರ್ಥವನ್ನು ಹೇಳಬೇಕು.

## 'ಜ್ಞಪ್ತಿ' ಎಂಬ ಪದಪ್ರಯೋಗಕ್ಕೆ ಏನು ಕಾರಣ?

**ಭಾವದೀಪಃ –** ''जन्माद्यस्य इत्युक्ते प्रमाणं हि तत्रापेक्ष्यते । न तु तस्य जातत्वम्'' इति तार्तीयगीताभाष्योक्त्या शास्त्रीयजनकत्वस्यानाकाङ्क्षितत्वाच्च । 'ज्ञानेष्वेतेषु' इति साधनत्वेन 'ज्ञान'पदस्य प्रकृतत्वात् भ्रान्तिनिरासाय ज्ञानेत्यनुक्त्वा ज्ञप्तीत्युक्तम् । शास्त्रजन्या ब्रह्मज्ञप्तिः प्रमितिरूपैव न कदाप्यप्रमितिरिति प्रमैकजननस्वभावत्वमेव शास्त्रस्य ।

ज्ञप्तिजननशक्तिप्रमाजननशक्त्योरेकत्वात् । तयोर्भेदे वा द्वयोः सहजत्वात् । अपवादकदोषस्य चापौरुषेये तदनुसारिणि चाभावादिति द्योतयितुं 'प्रमिति' इत्यनुक्त्वा 'ज्ञप्ति' इत्येवोक्तम् ।

'ಜನ್ಮಾದ್ಯಸ್ಯ' ಎಂಬುದಾಗಿ ಹೇಳಿದಾಗ ಈ ವಿಷಯದಲ್ಲಿ ಏನು ಪ್ರಮಾಣ? ಎಂಬ ಜಿಜ್ಞಾಸೆ ಬರುವುದು; ಹೊರತಾಗಿ ಈ ಪ್ರಮಾಣ ಹೇಗೆ ಹುಟ್ಟಿತು? ಎಂಬ ವಿಷಯದಲ್ಲಿ ಅಲ್ಲ. ಹೀಗೆ ತೃತೀಯಾಧ್ಯಾಯ ಗೀತಾಭಾಷ್ಯದಲ್ಲಿ ಹೇಳಿರುವುದರಿಂದ ಶಾಸ್ತ್ರೀಯಜನಕತ್ವವು ಇಲ್ಲಿ ಆಕಾಂಕ್ಷಿತವಾಗಿಲ್ಲ. 'ಜ್ಞಾನೇಷ್ವೇತೇಷು' ಎಂಬ ಮೋಕ್ಷಧರ್ಮವಚನದಲ್ಲಿ 'ಸಾಧನ' ಎಂಬ ಅರ್ಥದಲ್ಲಿ ಜ್ಞಾನಪದವು ಪ್ರಕೃತವಾಗಿರುವುದರಿಂದ ಸೂತ್ರದಲ್ಲಿ ಅದೇ ಅರ್ಥ ಎಂಬ ಭ್ರಾಂತಿಯನ್ನು ನಿರಾಸಮಾಡಲೋಸುಗ 'ಜ್ಞಾನ' ಎಂಬುದಾಗಿ ಹೇಳದೆ 'ಜ್ಞಪ್ತಿ' ಎಂಬ ಶಬ್ದವನ್ನು ಪ್ರಯೋಗ ಮಾಡಿದ್ದಾರೆ. ಅಷ್ಟೇ ಅಲ್ಲದೆ ಶಾಸ್ತ್ರದಿಂದ ಉಂಟಾದ ಬ್ರಹ್ಮನ ಜ್ಞಾನವು ಯಥಾರ್ಥಜ್ಞಾನವೇ ಆಗಿರುತ್ತದೆ ಹೊರತು ಯಾವಾಗಲೂ ಅಯಥಾರ್ಥಜ್ಞಾನ ಆಗಿರುವುದಿಲ್ಲ. ಏಕೆಂದರೆ ಶಾಸ್ತ್ರಕ್ಕೆ ಯಥಾರ್ಥಜ್ಞಾನವನ್ನು ಉಂಟುಮಾಡುವುದೇ ಸ್ವಭಾವವಾಗಿದೆ. ಜ್ಞಪ್ತಿಜನನಶಕ್ತಿಯು ಪ್ರಮಾಜನನಶಕ್ತಿಯು ಈ ಎರಡೂ ಒಂದೇ ಆಗಿರುವುದರಿಂದ ಹೀಗೆಯೇ ಅರ್ಥವನ್ನು ಹೇಳಬೇಕು. ಒಂದು ವೇಳೆ ಈ ಎರಡು ಶಕ್ತಿಗಳನ್ನು ಬೇರೆ ಬೇರೆ ಎಂದು ಒಪ್ಪಿಕೊಂಡರೂ ಇವೆರಡೂ ಸಹಜವಾದ ಜ್ಞಾನಗಳಾದುದರಿಂದ ಪ್ರಾಮಾಣ್ಯಕ್ಕೆ ಅಪವಾದಕಗಳಾದ ದೋಷಕ್ಕೆ ಅಪೌರುಷೇಯವಾದ ವೇದದಲ್ಲೂ, ಅದನ್ನು ಅನುಸರಿಸುವ ಇತರ ಶಾಸ್ತ್ರಗಳಲ್ಲೂ ಸ್ಥಾನವಿಲ್ಲ. ಇದನ್ನು ತಿಳಿಸುವುದಕ್ಕೋಸ್ಕರ 'ಪ್ರಮಿತಿ' ಎಂಬುದಾಗಿ ಹೇಳದೆ 'ಜ್ಞಪ್ತಿ' ಎಂಬುದಾಗಿಯೇ ಪದಪ್ರಯೋಗ ಮಾಡಲಾಗಿದೆ.

### ಗವ್ಯಪದವನ್ನು ಪ್ರಯೋಗಿಸದೆ ಯೋನಿ ಎಂದು ಪ್ರಯೋಗಿಸಲು ಏನುಕಾರಣ ?

**भावदीपः** – भाष्ये 'प्रमाणम्' इति पर्यवसितोक्तिः इति भावेन तदनुवदति – **प्रमाणमिति** ।। एतेन 'शास्त्रगम्यत्वात्' इत्यनुक्त्वा

'शास्त्रयोनित्वात्' इत्युक्त्या शास्त्रजनकत्वं सूचितमिति निरस्तम् । 'योनिः' इत्युक्त्या तदप्रामाण्यनिरासात् । अप्रामाण्यं हि सर्वात्मना ज्ञस्यजनकत्वेन वा संशयविपर्ययजनकत्वेन वा भवति । तत्र 'योनिर्ज्ञप्तिकारणम्' इत्युक्त्या 'बोधकत्वरूपस्य सा ज्ञप्तिः प्रमितिरूपैव' इति सूचनेन संशयविपर्ययजनकत्वरूपस्य चाप्रामाण्यस्य निरासात् । अत एव प्राक् 'समधिगम्यत्वात्' इति 'सं'शब्दप्रयोगः । उक्तं च – 'औत्पत्तिकस्तु शब्दस्यार्थेन सम्बन्धस्तस्य ज्ञानमुपदेशोऽव्यतिरेकश्चार्थेऽनुपलब्धे तत्प्रामाण्यम्' इत्यादि जैमिनिसूत्रे उपदेशो वेदः, तस्यार्थस्य ज्ञानं ज्ञानमव्यतिरेकश्च संशयविपर्ययाजनकश्चेति त्रिविधाप्रामाण्यनिरासेन प्रामाण्यम् ।

''ಪ್ರಮಾಣಂ'' ಎಂಬ ಭಾಗದಿಂದ ಭಾಷ್ಯದಲ್ಲಿ ಈ ವ್ಯಾಖ್ಯಾನವು ಅಂತಿಮವಾದ ಅರ್ಥವನ್ನು ತಿಳಿಸುತ್ತದೆ ಎಂಬ ಅಭಿಪ್ರಾಯದಿಂದ ಅದನ್ನು ಅನುವಾದ ಮಾಡುತ್ತಿದ್ದಾರೆ. ಇದರಿಂದ ಸೂತ್ರದಲ್ಲಿ 'ಶಾಸ್ತ್ರಗಮ್ಯತ್ವಾತ್' ಎಂಬುದಾಗಿ ಹೇಳದೆ 'ಶಾಸ್ತ್ರಯೋನಿತ್ವಾತ್' ಎಂದು ಹೇಳಿದ್ದು ಶಾಸ್ತ್ರಜನಕತ್ವವನ್ನು ಸೂಚಿಸುತ್ತದೆ ಎಂಬ ಅಭಿಪ್ರಾಯವು ನಿರಸ್ತವಾಗುತ್ತದೆ. 'ಯೋನಿ' ಎಂಬ ಶಬ್ದವನ್ನು ಬಳಸಿದ್ದರಿಂದ ಅದರ ಅಪ್ರಾಮಾಣ್ಯವು ನಿರಾಸವಾಗುತ್ತದೆ. ಅಪ್ರಾಮಾಣ್ಯವು ಸರ್ವಾತ್ಮನಾ ಜ್ಞಪ್ತಿಯನ್ನು ಉಂಟುಮಾಡದಿದ್ದರೆ ಅಥವಾ ಸಂಶಯವಿಪರ್ಯಯಗಳನ್ನು ಉಂಟುಮಾಡಿದರೆ ಅಂತಹ ಸಂದರ್ಭದಲ್ಲಿ ಮಾತ್ರ ಸಿಗುತ್ತದೆ. ಅಲ್ಲಿ 'ಯೋನಿಃ ಜ್ಞಪ್ತಿಕಾರಣಮ್' ಎಂಬುದಾಗಿ ಹೇಳಿದ್ದರಿಂದ ಬೋಧಕತ್ವರೂಪವಾದ ಆ ಜ್ಞಪ್ತಿಯು ಯಥಾರ್ಥಜ್ಞಾನವೇ ಆಗಿದೆ ಎಂಬ ಸೂಚನೆಯು ಲಭಿಸುವುದರಿಂದ ಸಂಶಯವಿಪರ್ಯಯಜನಕತ್ವರೂಪವಾದ ಅಪ್ರಾಮಾಣ್ಯವನ್ನು ನಿರಾಸ-ಮಾಡಿದಂತೆ ಆಗುತ್ತದೆ. ಆದ್ದರಿಂದಲೇ ಈ ಹಿಂದೆ 'ಸಮಧಿಗಮ್ಯತ್ವಾತ್' ಎಂಬುದಾಗಿ 'ಸಂ'ಶಬ್ದವನ್ನು ಪ್ರಯೋಗಮಾಡಿದ್ದಾರೆ. ಇದನ್ನು 'ಔತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬಂಧಸ್ತಸ್ಯ ಜ್ಞಾನಮುಪದೇಶೋऽವ್ಯತಿರೇಕಶ್ಚಾರ್ಥೇऽನುಪಲಬ್ಧೇ ತತ್ಪ್ರಮಾಣ್ಯಮ್' ಎಂಬ ಜೈಮಿನಿ-ಸೂತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

## ಗೀತಾಭಾಷ್ಯವನ್ನು ಸ್ಮರಿಸಿಕೊಳ್ಳಿರಿ

**भावदीपः – 'न हि वेदकारणत्वं जगत्कारणत्वे हेतुः' इत्यादि गीताभाष्योक्तं सर्वमिह योज्यमिति भावेन शङ्कामाह – समासेति ।। 'समस्यमानपदार्थत्यागेनान्यपदार्थप्रधानबहुव्रीहिः तत्पुरुषस्य तदत्यागेनोत्तर पदार्थप्रधानस्य प्राबल्यात्' इत्यर्थः ।**

'ನ ಹಿ ವೇದಕಾರಣತ್ವಂ ಜಗತ್ಕಾರಣತ್ವೇ ಹೇತುಃ' ಎಂಬುದಾಗಿ ಗೀತಾಭಾಷ್ಯದಲ್ಲಿ ವಿವರಿಸಿದ ಎಲ್ಲಾ ಅಂಶಗಳನ್ನೂ ಇಲ್ಲಿ ಹೊಂದಿಸಿಕೊಳ್ಳಬೇಕು ಎಂಬ ಅಭಿಪ್ರಾಯದಿಂದ ''ಸಮಾಸ'' ಇತ್ಯಾದಿ ವಾಕ್ಯದಿಂದ ಶಂಕೆಯನ್ನು ಮಾಡುತ್ತಿದ್ದಾರೆ. ''ಸಮಾಸಘಟಕವಾದ ಪದಗಳ ಅರ್ಥವನ್ನು ಬಿಟ್ಟು ಅನ್ಯಪದದ ಅರ್ಥವನ್ನು ಪ್ರಧಾನವಾಗಿ ಸ್ವೀಕರಿಸುವ ಬಹುವ್ರೀಹಿಸಮಾಸಕ್ಕಿಂತಲೂ ಸಮಾಸಘಟಕವಾದ ಪದಗಳ ಅರ್ಥವನ್ನು ಬಿಡದೆ ಉತ್ತರಪದಾರ್ಥವನ್ನು ಪ್ರಧಾನವಾಗಿ ಸ್ವೀಕರಿಸುವ ತತ್ಪುರುಷಸಮಾಸವು ಪ್ರಬಲವಾಗಿದೆ'' ಎಂಬುದಾಗಿ ಅಭಿಪ್ರಾಯವನ್ನು ಗ್ರಹಿಸಬೇಕು.

ವಿಶೇಷ ವಿಚಾರ - ಆಕ್ಷೇಪ - 'ಶಾಸ್ತ್ರಸ್ಯ ಯೋನಿಃ ಶಾಸ್ತ್ರಯೋನಿಃ' ಎಂದು ಷಷ್ಠೀ ತತ್ಪುರುಷ ಸಮಾಸವನ್ನು ಇತರ ಮತೀಯರು ಮಾಡುತ್ತಾರೆ. ಆದರೆ ಶ್ರೀಮದಾಚಾರ್ಯರು 'ಶಾಸ್ತ್ರಂ ಯೋನಿಃ ಅಸ್ಯ ಇತಿ ಶಾಸ್ತ್ರಯೋನಿಃ' ಎಂದು ಬಹುವ್ರೀಹಿ ಸಮಾಸವನ್ನು ಮಾಡಿದ್ದಾರೆ. ಇದು ತಪ್ಪಲ್ಲವೇ' ಏಕೆಂದರೆ, ತತ್ಪುರುಷ ಮತ್ತು ಬಹುವ್ರೀಹಿ ಸಮಾಸಗಳ ಮಧ್ಯದಲ್ಲಿ ತತ್‌ಪುರುಷ ಸಮಾಸವೇ ಶ್ರೇಷ್ಠವಾಗಿದೆ. ಅದು ಹೀಗೆ - 'ತಪೋಧನ'ವೇ ಮೊದಲಾದ ಶಬ್ದಗಳಲ್ಲಿ ಸಮಾಸವನ್ನು ಹೊಂದುವ ಎರಡು ಪದಗಳ ಅರ್ಥವನ್ನು ತ್ಯಾಗಮಾಡಿ ಅನ್ಯಪದಾರ್ಥವಾದ ತಪಸ್ವಿಯನ್ನು ಪ್ರಧಾನವನ್ನಾಗಿ ಬಹುವ್ರೀಹಿಸಮಾಸ ತಿಳಿಸುತ್ತದೆ. ಮತ್ತು 'ರಾಜಪುರುಷ' ಇವೇ ಮೊದಲಾದ ಶಬ್ದಗಳಲ್ಲಿ ಉತ್ತರಪದಾರ್ಥವು ಪ್ರಧಾನವಾಗಿದೆ. ಆದ್ದರಿಂದ ತಪೋಧನವು ಬಹುವ್ರೀಹಿ ಸಮಾಸ ಎನಿಸುತ್ತದೆ. ರಾಜಪುರುಷವು ಉತ್ತರಪದ ತತ್ಪುರುಷಸಮಾಸವೆನಿಸುತ್ತದೆ. ಅನ್ಯಪದಾರ್ಥಪ್ರಧಾನಬಹುವ್ರೀಹಿಃ ಸಮಾಸಕ್ಕಿಂತ ಉತ್ತರಪದಾರ್ಥಪ್ರಧಾನತತ್ಪುರುಷ ಸಮಾಸವು ಶ್ರೇಷ್ಠವಾಗಿದೆ. ಆದರಂತೆ ಪ್ರಕೃತದಲ್ಲಿಯೂ ಸಹ ''ಶಾಸ್ತ್ರಸ್ಯ ಯೋನಿಃ ಶಾಸ್ತ್ರಯೋನಿಃ'' ಎಂಬ ಷಷ್ಠೀ ತತ್ಪುರುಷಸಮಾಸವೇ ಉಚಿತವಾಗುತ್ತದೆ.

ಸಮಾಧಾನ - ಈ ಆಕ್ಷೇಪಕ್ಕೆ ಟೀಕಾದಲ್ಲಿ 'ಸಮಾಸಪ್ರಾಬಲ್ಯಾತ್' ಎಂಬ ವಾಕ್ಯದಿಂದ ಸಮಾಧಾನ ನೀಡುತ್ತಿದ್ದಾರೆ.

## ವೇದಗಳಿಗೆ ಪೌರುಷೇಯತ್ವವನ್ನು ಒಪ್ಪಬಾರದು

**ಭಾವದೀಪಃ – ಕಣಾದೇತಿ ।।** 'ಪೌರುಷೇಯತ್ವಾಪಾತಾತ್' ಇತ್ಯರ್ಥಃ । ಅಸ್ತು, ಇತ್ಯತ ಆಹ – **ಶ್ರುತ್ಯಾದೀತಿ**(೧) ।। 'ವಾಚಾ ವಿರೂಪನಿತ್ಯಯಾ । ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಮ್ಭುವಾ' ಇತ್ಯಾದಿಶ್ರುತಿಸ್ಮೃತಿಭಿರ್ದೇವತಾನಯೇ ಭಾಷ್ಯೋಕ್ತಯುಕ್ತ್ಯಾ ಚ ವಿರೋಧಾಚ್ಚ ಇತ್ಯರ್ಥಃ(೨) । **ಸಾರ್ವಜ್ಞೇತಿ** ।। 'ಅಧ್ಯಾಪಕತುಲ್ಯತ್ವಾತ್' ಇತಿ ಭಾವಃ । ವಿವೃತಮೇತತ್ಸರ್ವಂ ಚನ್ದ್ರಿಕಾಯಾಂ ಪರಮತದೂಷಣಪ್ರಸ್ತಾವೇ ।

''ಕಣಾದ'' ಇತ್ಯಾದಿ ವಾಕ್ಯದಿಂದ 'ವೇದಗಳಿಗೂ ಪೌರುಷೇಯತ್ವವು ಬರಬೇಕಾದೀತು' ಎಂಬ ಅಂಶವನ್ನು ತಿಳಿಸುತ್ತಿದ್ದಾರೆ. 'ವೇದಗಳಿಗೂ ಪೌರುಷೇಯತ್ವವು ಬರಲಿ' ಎಂಬ ಆಕ್ಷೇಪ ಮಾಡಿದರೆ ಅದಕ್ಕೆ ಉತ್ತರವನ್ನು 'ಶ್ರುತ್ಯಾದಿ' ಎಂಬ ಅಂಶದಿಂದ ಸ್ಪಷ್ಟಪಡಿಸುತ್ತಾರೆ. 'ವಾಚಾ ವಿರೂಪನಿತ್ಯಯಾ' 'ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ' ಇತ್ಯಾದಿಶ್ರುತಿಸ್ಮೃತಿಗಳಿಂದಲೂ, ದೇವತಾನಯ (ಅಧಿಕರಣದಲ್ಲಿ) ಭಾಷ್ಯದಲ್ಲಿ ಹೇಳಿದ ಯುಕ್ತಿಯಿಂದಲೂ ವಿರೋಧ ಬರುವುದರಿಂದ ವೇದಗಳಿಗೆ ಪೌರುಷೇಯತ್ವವನ್ನು ಒಪ್ಪಿಕೊಳ್ಳುವುದು ಸಮಂಜಸವಾಗುವುದಿಲ್ಲ - ಎಂದು ಅಭಿಪ್ರಾಯ. ''ಸಾರ್ವಜ್ಞ'' ಇತ್ಯಾದಿ ವಾಕ್ಯಭಾಗಕ್ಕೆ 'ಶಾಸ್ತ್ರವು ಈಶ್ವರನಿಂದ ನಿಃಸೃತವಾಗಿದೆ' ಎಂದು ಒಪ್ಪಿಕೊಂಡರೆ ಈಶ್ವರನು ಕೇವಲ ಒಬ್ಬ ಅಧ್ಯಾಪಕನಂತೆ ಹೊರತು ಸರ್ವಜ್ಞನಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತೆ ಆಗುತ್ತದೆ. ಈ ಎಲ್ಲಾ ಅಂಶಗಳನ್ನು ಚಂದ್ರಿಕೆಯಲ್ಲಿ ಅನ್ಯಮತವನ್ನು ನಿರಾಕರಣೆ ಮಾಡುವ ಸಂದರ್ಭದಲ್ಲಿ ವಿವರಿಸಿದ್ದಾರೆ.

(೧) ನನು ಮಹ್ಚರಣಾನುಸರಣಂ ವಿರೋಧೀತ್ಯತೋ ವೇದವಿರೋಧಾಚ್ಚ ತಸ್ಯ ಮಹತ್ವಮಿತಿ ಭಾವೇನ ದೂಷಣಾನನ್ತರಮಾಹ **– ಶ್ರುತ್ಯಾದೀತಿ ।।** **– ವಾಕ್ಯಾರ್ಥಮುಕ್ತಾವಲಿ**

(೨) 'ಯಾವದ್ ಬ್ರಹ್ಮ ವಿಷ್ಠಿತಂ ತಾವತೀ ವಾಗ್' ಇತ್ಯಾದಿವೇದಾಪೌರುಷೇಯಪ್ರತಿಪಾದಕಶ್ರುತ್ಯಾದೀತ್ಯರ್ಥಃ । **– ವಾಕ್ಯಾರ್ಥವಿವರಣಮ್**

## ಚಂದ್ರಿಕಾಪ್ರಕಾಶವನ್ನು ಓದಿರಿ

**ಭಾವದೀಪಃ –** **यत्तु 'योनिपदस्य ज्ञप्तिहेतुत्वार्थत्वेपि समासप्राबल्यात् शास्त्रस्य योनित्वं शास्त्रयोनित्वं तस्मात् शास्त्रस्य प्रमाण्याद् ब्रह्मैव जगत्कर्तृ इत्यर्थः' इति । तन्न । 'योनित्वशब्दस्य गुणवाचित्वेन पूरणगुणेतिसमास-निषेधात्' इत्यादिचन्द्रिका प्रकाशे ज्ञेयम् ।**

ಇಲ್ಲಿ ಕೆಲವರು ಯೋನಿಪದಕ್ಕೆ ಜ್ಞಪ್ತಿಕಾರಣ ಎಂಬುದಾಗಿ ಅರ್ಥವನ್ನು ಹೇಳಿದರೂ "ಸಮಾಸಪ್ರಾಬಲ್ಯದಿಂದ 'ಶಾಸ್ತ್ರಸ್ಯ ಯೋನಿತ್ವಂ ಶಾಸ್ತ್ರಯೋನಿತ್ವಂ' ಎಂಬುದಾಗಿ ವಿಗ್ರಹ ಮಾಡಿ ಶಾಸ್ತ್ರಕ್ಕೆ ಪ್ರಾಮಾಣ್ಯವಿರುವುದರಿಂದ ಬ್ರಹ್ಮನೇ ಜಗತ್ಕರ್ತಾ ಎಂಬುದಾಗಿ ಸಿದ್ಧಿಸುತ್ತದೆ" ಈ ರೀತಿಯಾಗಿ ವ್ಯಾಖ್ಯಾನ ಮಾಡುತ್ತಾರೆ. ಇದು ಸರಿಯಲ್ಲ. 'ಯೋನಿತ್ವಶಬ್ದವು ಗುಣವಾಚಕಶಬ್ದವಾದುದರಿಂದ 'ಪೂರಣಗುಣ' ಇತ್ಯಾದಿ ಸೂತ್ರದಿಂದ ಸಮಾಸನಿಷೇಧ-ವಿದ್ದುದರಿಂದ ಈ ರೀತಿ ಸಮಾಸವನ್ನೇ ಮಾಡಲಾಗುವುದಿಲ್ಲ. ಈ ಅಂಶವನ್ನು 'ಚಂದ್ರಿಕಾಪ್ರಕಾಶ'ದಲ್ಲಿ ತಿಳಿಯಬೇಕು.

ವಿಶೇಷ ವಿಚಾರ - 'ಯೋನೇಃ ಭಾವಃ ಯೋನಿತ್ವಮ್, ಶಾಸ್ತ್ರಸ್ಯ ಯೋನಿತ್ವಮ್' ಶಾಸ್ತ್ರಯೋನಿತ್ವಮ್' ಎಂದು ಷಷ್ಠೀತತ್ಪುರುಷವನ್ನೇ ಮಾಡಬೇಕು. 'ಶಾಸ್ತ್ರಂ ಯೋನಿಃ ಅಸ್ಯ ಇತಿ' ಎಂದು ಬಹುವ್ರೀಹಿಸಮಾಸವನ್ನು ಮಾಡಬಾರದು. ಎರಡು ಬಗೆಯ ಸಮಾಸಗಳಿಂದ ಒಂದೇ ಅರ್ಥ ದೊರೆಯುತ್ತದೆ. ಆದರೂ ಬಹುವ್ರೀಹಿಸಮಾಸವು ಜಘನ್ಯವಾದ್ದರಿಂದ ದುರ್ಬಲವಾಗಿದೆ. ಷಷ್ಠೀತತ್ಪುರುಷ ಪ್ರಬಲವಾಗಿದೆ. ಶಾಸ್ತ್ರವು ಪ್ರಮಾಣವಾಗಿರುವುದರಿಂದ ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನ ಲಕ್ಷಣವಾಗಿದೆಯೆಂದು ಅರ್ಥ. ಮತ್ತು 'ಶಾಸ್ತ್ರಸ್ಯ ಯೋನಿತ್ವಾತ್' ವೇದಕ್ಕೆ ಕಾರಣನಾದ್ದರಿಂದ ಬ್ರಹ್ಮನು ಸರ್ವಜ್ಞನಾಗಿದ್ದಾನೆಂಬ ಅದ್ವೈತಿಗಳ ವ್ಯಾಖ್ಯಾನವನ್ನೂ ಇಟ್ಟುಕೊಳ್ಳಬೇಕು.

ಸಮಾಧಾನ - ಇದು ತಪ್ಪು. ಸೂತ್ರದಲ್ಲಿ ಶಾಸ್ತ್ರಪದವನ್ನು ಹೇಳಿದ್ದರಿಂದ ಅನುಮಾನದ ಜೊತೆಗೆ ದುರಾಗಮವನ್ನೂ ನಿರಾಕರಿಸಿದ್ದಾರೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಹೀಗಿರುವಾಗ ನೀವು ಕೇವಲ ಅನುಮಾನವನ್ನು ನಿರಾಸಮಾಡುತ್ತಿರುವುದು ಸೂತ್ರವಿರುದ್ಧವಾಗಿದೆ.

ಮತ್ತು ತತ್ಪುರುಷವನ್ನು ಆಶ್ರಯಿಸಿದ್ದು ಅತ್ಯಂತ ಅಸಂಗತವಾಗಿದೆ. ಬ್ರಹ್ಮ, ಜಗತ್ಕಾರಣಮ್, ಶಾಸ್ತ್ರಸ್ಯ ಪ್ರಾಮಾಣ್ಯಾತ್' ಎಂದು ನಿಮ್ಮ ಅನುಮಾನ. ಇದು ಹೇಗಾಯಿತೆಂದರೆ ಪ್ರಾಸಾದಃ, ಧವಲಃ, ಕಾಕಸ್ಯ ಕಾಷ್ಣ್ಯಾತ್' 'ಕಾಗೆ ಕಪ್ಪಿರುವುದರಿಂದ ಮಹಡಿಯು ಬೆಳ್ಳಗಿದೆ' ಎಂದಂತಾಯಿತು. ಹೇತು ಸಾಧ್ಯಗಳಿಗೆ ಸಾಮಾನಾಧಿಕರಣ್ಯವೇ ಇಲ್ಲ. ಆದರಂತೆ ಪ್ರಾಮಾಣ್ಯವೆಂಬ ಹೇತು ಶಾಸ್ತ್ರದಲ್ಲಿದೆ ಹೊರತು ಪಕ್ಷದಲ್ಲಿಲ್ಲ. (ಪಕ್ಷಧರ್ಮತಾ ಇಲ್ಲ) ಆದ್ದರಿಂದ ಪ್ರಾಮಾಣ್ಯ ಶಾಸ್ತ್ರದಲ್ಲಿದ್ದ ಮಾತ್ರದಿಂದ ಬ್ರಹ್ಮನೇಕೆ ಜಗತ್ಕಾರಣನಾಗಬೇಕು? ಎಂಬ ಪ್ರಶ್ನೆ ಬರುತ್ತದೆ. ವ್ಯಧಿಕರಣವಾದ ಹೇತುವಿನಿಂದ ಸಾಧ್ಯದ ಸಾಧನೆ ಸಾಧ್ಯವೇ ಇಲ್ಲ.

(ಯದ್ಯಪಿ ನಮ್ಮ ಸಿದ್ಧಾಂತದಲ್ಲಿ ಹೇತುಸಾಧ್ಯಗಳಿಗೆ ಅವಿನಾಭಾವ ಇದ್ದರೆ ಸಾಕು. ಸಾಮಾನಾಧಿಕರಣ್ಯದ ಅವಶ್ಯಕತೆ ಇಲ್ಲ. ವೈಯ್ಯಧಿಕರಣ್ಯವನ್ನು ದೋಷವೆಂದು ನಾವು ಪರಿಗಣಿಸುವುದಿಲ್ಲ. ಆದರೆ ಇತರವಾದಿಗಳು ನಮ್ಮಂತೆ ಹೇಳುವುದಿಲ್ಲ. ಅವರ ಸಿದ್ಧಾಂತದಂತೆ ಇಲ್ಲಿ ದೋಷ ಹೇಳಿದ್ದಾರೆಂದು ತಿಳಿಯಬೇಕು)

ಅದಕ್ಕೋಸ್ಕರ ಬಹುವ್ರೀಹಿಸಮಾಸವನ್ನು ಅವಶ್ಯ ಆಶ್ರಯಿಸಬೇಕು. ಇವಾಗ 'ಜಗತ್‌ಕಾರಣಮ್ ವಿಷ್ಣುರೇವ ಶಾಸ್ತ್ರೈಕಸಮಧಿಗಮ್ಯತ್ವಾತ್' ಎಂದಂತಾಯಿತು. ಈ ಪಕ್ಷದಲ್ಲಿ ಸಾಮಾನಾಧಿಕರಣ್ಯವು ಸುಲಭವಾಗಿ ಬರುತ್ತದೆ.

ಷಷ್ಠಿತತ್ಪುರುಷಸಮಾಸ ವ್ಯಾಕರಣಕ್ಕೆ ವಿರುದ್ಧವೂ ಆಗಿದೆ - 'ಪೂರಣಗುಣ' ಇತ್ಯಾದಿ ಸೂತ್ರವು ಭಾವಪ್ರತ್ಯಯಾಂತಶಬ್ದದ ಜೊತೆಗೆ ಷಷ್ಠೀ ಸಮಾಸವನ್ನು ನಿಷೇಧ ಮಾಡುತ್ತಿದೆ. ಉದಾಹರಣೆ - 'ಸರ್ವಜ್ಞಸ್ಯ ಭಾವಃ ಸರ್ವಜ್ಞತ್ವಮ್, ವಿಷ್ಣೋಃ ಸರ್ವಜ್ಞತ್ವಮ್ ವಿಷ್ಣುಸರ್ವಜ್ಞತ್ವಮ್' ಎಂದು ಸಮಾಸ ಮಾಡಬಾರದು. 'ವಿಷ್ಣೋಃ ಸರ್ವಜ್ಞತ್ವಮ್' ಎಂದು ಬಿಡಿಸಿಯೇ ಹೇಳಬೇಕು. ವ್ಯಾಕರಣದ ಪ್ರಕಾರ ತ್ವ, ತಲ್, ಷ್ಯಞ್, ಯವನಿಚ್, ಇವೇ ಮೊದಲಾದ ಪ್ರತ್ಯಯಗಳು ಭಾವಪ್ರತ್ಯಯಗಳೆನಿಸಿವೆ. ಈ ಪ್ರತ್ಯಯಗಳು ಯಾವ ಶಬ್ದದ ಮೇಲೆ ಬರುತ್ತದೋ, ಆ ಶಬ್ದವು ಗುಣವಚನ (ಗುಣವಾಚಕ) ಆಗುತ್ತದೆ. ಆದಕ್ಕೆ ಷಷ್ಠೀಸಮಾಸವನ್ನು 'ಪೂರಣಗುಣ' ಇತ್ಯಾದಿ ಸೂತ್ರವು ನಿಷೇಧಿಸುತ್ತಿದೆ. ಆದ್ದರಿಂದ ಸರ್ವಜ್ಞತ್ವ ಶಬ್ದವು ಗುಣವಾಚಕವಾದ್ದರಿಂದ ವಿಷ್ಣುಶಬ್ದದ ಜೊತೆಗೆ ಸಮಾಸ ಆಗುವುದಿಲ್ಲ. ಆದರಂತೆ ಯೋನಿತ್ವಶಬ್ದವೂ ಕೂಡ ಗುಣವಾಚಕಶಬ್ದವಾದ್ದರಿಂದ ಶಾಸ್ತ್ರಶಬ್ದದ ಜೊತೆಗೆ ಸಮಾಸ ಆಗುವುದಿಲ್ಲ. ಆದ್ದರಿಂದ ನೀವು ಮಾಡುತ್ತಿರುವ ಷಷ್ಠೀತತ್ಪುರುಷಸಮಾಸವು ವ್ಯಾಕರಣಕ್ಕೆ ವಿರುದ್ಧವಾಗಿದೆ. ಬಹುವ್ರೀಹಿಸಮಾಸವನ್ನು ಆಶ್ರಯಿಸಿದಾಗ ಈ ಸಮಸ್ಯೆ ಬರುವುದಿಲ್ಲ.

ಆಕ್ಷೇಪ - ಶಾಸ್ತ್ರಯೋನಿತ್ವಮ್ ಎಂಬಲ್ಲಿ ಷಷ್ಠೀತತ್ಪುರುಷವು ವ್ಯಾಕರಣವಿರುದ್ಧವಲ್ಲ. 'ಪೂರಣಗುಣ' ಇತ್ಯಾದಿ ಸೂತ್ರಕ್ಕೆ ಅಪವಾದವಿದೆ. ಪಾಣಿನಿಯೇ ಒಂದು ಸೂತ್ರದಲ್ಲಿ 'ತದಶಿಷ್ಯಂ ಸಂಜ್ಞಾಪ್ರಮಾಣತ್ವಾತ್' ಎಂದು ಹೇಳಿದ್ದಾನೆ. ಇಲ್ಲಿ 'ಪ್ರಮಾಣ್ಯಸ್ಯಭಾವಃ ಪ್ರಮಾಣತ್ವಮ್, ಸಂಜ್ಞಾಯಾಃ ಪ್ರಮಾಣತ್ವಮ್ ಸಂಜ್ಞಾಪ್ರಮಾಣತ್ವಮ್, ತಸ್ಮಾತ್ ಸಂಜ್ಞಾಪ್ರಮಾಣತ್ವಾತ್' ಎಂದು ಷಷ್ಠೀತತ್ಪುರುಷಸಮಾಸ ಮಾಡಬೇಕು. ಇದರಿಂದ 'ಪೂರಣಗುಣ' ಎಂಬಲ್ಲಿ ವಿಧಿಸಿದ ಷಷ್ಠೀಸಮಾಸವು ಅನಿತ್ಯವೆಂದು ತಿಳಿಯುತ್ತದೆ.

ಸಮಾಧಾನ - ಬೇರೆ ಗತಿಯಿಲ್ಲದಾಗ 'ಸಂಜ್ಞಾಪ್ರಮಾಣತ್ವಾತ್' ಎಂಬಂತೆ ತತ್ಪುರುಷವನ್ನು ಮಾಡಬಹುದು. ಆದರೆ 'ಶಾಸ್ತ್ರಯೋನಿತ್ವಾತ್' ಎಂಬಲ್ಲಿ ಬಹುವ್ರೀಹಿಯನ್ನು ಸುಲಭವಾಗಿ ಮಾಡಲು ಬರುವಾಗ ಕ್ಲಿಷ್ಟಕರವಾದ ತತ್ಪುರುಷಸಮಾಸವನ್ನು ಆಶ್ರಯಿಸುವುದು ಸೂಕ್ತವಲ್ಲವೆಂದು ನಮ್ಮ ಅಭಿಪ್ರಾಯ.

## ಸ್ಮೃತ್ಯಧಿಕರಣದಿಂದ ಪುನರುಕ್ತಿ ಇಲ್ಲ

**ಭಾವದೀಪಃ –** यत् कश्चिदाह – 'सूत्रे प्रतिज्ञाध्याहारदोषः । शास्त्रपदव्यावर्त्ये च न पाशुपतादि ।

'साङ्गं योगः पञ्चरात्रं वेदाः पाशुपतं तथा ।
आत्मप्रामाण्येतानि न हातव्यानि हेतुभिः ।।'

इति भारतोक्त्या तस्यापि शास्त्रत्वात् । 'पत्युरसामञ्जस्यात्' इत्यत्र तदमानत्वस्य सिद्धत्वाच्च' इति । तन्न । साकाङ्क्षे सूत्रे योग्याध्याहारस्य सर्वसमाधेयत्वात् । 'यत्रानवसरः' इत्यादिस्मृतेः । 'नैव शास्त्रं कुवर्त्म तत्' इति, साक्षात् 'एतद् विशिष्यते' इत्यत्रार्थाच्च पाशुपतादेरशास्त्रत्वोक्त्या भारतोक्तेरन्यार्थवर्णनस्यावश्यकत्वात् समयपादस्य 'इतरेषां चानुपलब्धेः' इत्युक्तहेतुविस्तृतिरूपत्वात् । स्मृतिनये न चास्यापौनरुक्त्यं चन्द्रिकायामेवानेकधोक्तमिति यत्किञ्चिदेतत् ।।३।। अ. ३।।

।। इति श्रीमद्भाष्यटीकाभावदीपे राघवेन्द्रयतिकृते शास्त्रयोनित्वाधिकरणम् ।।

ಈ ವಿಷಯದಲ್ಲಿ ಯಾರೋ ಒಬ್ಬರು ಹೀಗೆ ಹೇಳುತ್ತಾರೆ — ''ಸೂತ್ರದಲ್ಲಿ ಪ್ರತಿಜ್ಞೆಯನ್ನು ಅಧ್ಯಾಹಾರ ಮಾಡಿಕೊಂಡದ್ದು ಇಲ್ಲಿ ತಪ್ಪು. ಅಲ್ಲದೇ ಶಾಸ್ತ್ರಪದದಿಂದ ವ್ಯಾವರ್ತ್ಯವಾದದ್ದು ಪಾಶುಪತಾದಿಶಾಸ್ತ್ರಗಳು ಅಲ್ಲ. ಏಕೆಂದರೆ —

'ಸಾಂಖ್ಯಂ ಯೋಗಃ ಪಂಚರಾತ್ರಂ ವೇದಾಃ ಪಾಶುಪತಂ ತಥಾ।
ಆತ್ಮಪ್ರಾಮಾಣ್ಯೇತಾನಿ ನ ಹಾತವ್ಯಾನಿ ಹೇತುಭಿಃ ॥'

(ಸಾಂಖ್ಯ, ಯೋಗ, ಪಂಚರಾತ್ರ, ವೇದ ಹಾಗೆಯೇ ಪಾಶುಪತಶಾಸ್ತ್ರಗಳು ಭಗವಂತನನ್ನು ತಿಳಿಸುವ ಪ್ರಮಾಣಗಳು; ಯುಕ್ತಿಗಳಿಂದ ಇವುಗಳನ್ನು ಬಿಡಬಾರದು.) ಹೀಗೆ ಭಾರತದಲ್ಲಿ ಹೇಳಿರುವುದರಿಂದ ಪಾಶುಪತಾದಿಗಳೂ ಕೂಡ ಶಾಸ್ತ್ರವೇ ಆಗಿವೆ. ಅಲ್ಲದೆ ಮುಂದೆ 'ಪತ್ಯುರಸಾಮಂಜಸ್ಯಾತ್' ಎಂಬ ಸೂತ್ರದಲ್ಲಿ ಪಾಶುಪತಶಾಸ್ತ್ರವನ್ನು ಅಪ್ರಮಾಣವೆಂಬುದಾಗಿ ಸಿದ್ಧಮಾಡುತ್ತಿರುವುದರಿಂದ ಇಲ್ಲಿ ಅದನ್ನು ನಿರಾಕರಣೆ ಮಾಡುವ ಅನಿವಾರ್ಯತೆ ಇಲ್ಲ'' - ಎಂಬುದಾಗಿ ಹೇಳುತ್ತಾರೆ. ಇದು ಸರಿಯಲ್ಲ. ಸೂತ್ರದಲ್ಲಿ ಬೇರೆ ಪದದ ಆಕಾಂಕ್ಷೆಯಿದ್ದಾಗ ಯೋಗ್ಯವಾದ ಅನ್ಯಪದವನ್ನು ಅಧ್ಯಾಹಾರ ಮಾಡುವುದು 'ಯತ್ರಾನವಸರೋಽನ್ಯತ್ರ' ಇತ್ಯಾದಿ ಸ್ಮೃತಿಯಿಂದ ಎಲ್ಲರೂ ಒಪ್ಪಿಕೊಂಡ ವಿಚಾರವಾಗಿದೆ. ಮತ್ತು 'ನೈವ ಶಾಸ್ತ್ರಂ ಕುವರ್ತ್ಮ ತತ್' ಎಂಬಲ್ಲಿ ನೇರವಾಗಿ 'ಏತದ್ ವಿಶಿಷ್ಯತೇ' ಎಂಬಲ್ಲಿ ಅರ್ಥದ ಮೂಲಕ ಪಾಶುಪತಾದಿಗಳನ್ನು ಅಶಾಸ್ತ್ರ ಎಂಬುದಾಗಿ ಹೇಳಿರುವುದರಿಂದ ಭಾರತದ ವಾಕ್ಯವನ್ನು ಬೇರೆ ಅರ್ಥ ಹೇಳುವ ಮೂಲಕ ಹೊಂದಿಸುವುದು ಆವಶ್ಯಕವಾದುದರಿಂದ ಮತ್ತು ಸಮಯಪಾದವು 'ಇತರೇಷಾಂ ಚ ಅನುಪಲಬ್ಧೇಃ' ಎಂಬಲ್ಲಿ ಹೇಳಿದ ಯುಕ್ತಿಯನ್ನು ವಿಸ್ತಾರಗೊಳಿಸುವುದರಿಂದ ಇಲ್ಲಿ ಯೋಗ್ಯಪದವನ್ನು ಅಧ್ಯಾಹಾರ ಮಾಡಿಕೊಂಡು ಪಾಶುಪತಾದಿಗಳನ್ನು ನಿರಾಕರಣೆ ಮಾಡಿರುವುದು ಯುಕ್ತವೇ ಆಗಿದೆ. ಸ್ಮೃತ್ಯಧಿಕರಣದಲ್ಲಿ ಈ ವಿಷಯವು ಪುನರುಕ್ತ ಅಲ್ಲ ಎಂಬುದನ್ನು ಚಂದ್ರಿಕಾಗ್ರಂಥದಲ್ಲಿ ಅನೇಕರೀತಿಯಿಂದ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಇದೊಂದು ಬಾಲಿಶ ಆರೋಪವಾಗಿದೆ.

ಒಟ್ಟು ಅಭಿಪ್ರಾಯ - ದುರಾಗಮಗಳ ನಿರಾಸವೇ ಈ ಅಧಿಕರಣದ ಮುಖ್ಯ ಉದ್ದೇಶವಾದಲ್ಲಿ ಸ್ಮೃತ್ಯಧಿಕರಣದಿಂದ ಪುನರುಕ್ತಿ ಬರುತ್ತದೆಂಬುದು ಒಂದು ದೊಡ್ಡ ಸಮಸ್ಯೆ. ಈ ಸಮಸ್ಯೆಯನ್ನು ಬಹಳ ಸುಂದರವಾಗಿ ಚಂದ್ರಿಕೆಯಲ್ಲಿ ಪರಿಹರಿಸಲಾಗಿದೆ.

ಶಾಸ್ತ್ರಯೋನಿತ್ವಾಧಿಕರಣ (೧-೧-೩)

ಪುನರುಕ್ತಿಯು ಹೇಗೆ ಬರುತ್ತದೆಂದು ಮೊದಲು ವಿಚಾರ ಮಾಡೋಣ. ಸ್ಮೃತ್ಯಧಿಕರಣವು ಯುಕ್ತಿಪಾದದಲ್ಲಿರುವುದರಿಂದ ಯುಕ್ತಿವಿರೋಧವನ್ನು ಪರಿಹರಿಸುತ್ತಿದೆ. ಆದರೆ ಈ ಅಧಿಕರಣದಲ್ಲಿಯೂ ಅಂತಹ ಯುಕ್ತಿಗಳ ವಿರೋಧ ಪರಿಹಾರವು ಕಾಣಿಸುತ್ತಿದೆ. ಮತ್ತು ಸ್ಮೃತ್ಯಧಿಕರಣದಲ್ಲಿ ಸಮಯವಿಗಾನವು ಸಂದೇಹಬೀಜವಾಗಿರುವಂತೆ ಈ ಅಧಿಕರಣದಲ್ಲಿಯೂ ಅದೇ ಸಂದೇಹಬೀಜವಾಗಿದೆ. ಸ್ಮೃತ್ಯಧಿಕರಣದಲ್ಲಿ ದುರಾಗಮಗಳನ್ನು ಕಂಠತಃ ನಿರಾಸಮಾಡಿದ್ದಾರೆಂದೂ ಸಹವೈಲಕ್ಷಣ್ಯ ತೋರಿಸಲಾಗದು. ಹಾಗಾದಲ್ಲಿ ದುಷ್ಟಾನುಮಾನಗಳನ್ನು ಕಂಠತಃ ನಿರಾಸ ಮಾಡಲು ಮತ್ತೊಂದು ಅಧಿಕರಣ ಬೇಕಾದೀತು. ಮತ್ತು ಎರಡೂ ಅಧಿಕರಣಗಳಲ್ಲಿ ದುರಾಗಮ ನಿರಾಕರಣೆಯು ಇದ್ದೇ ಇರುವುದರಿಂದ ಆ ಅಂಶದಲ್ಲಿ ಪುನರುಕ್ತಿ ಪರಿಹಾರವಾಗಲು ಸಾಧ್ಯವೇ ಇಲ್ಲ. ದುರಾಗಮಗಳಲ್ಲಿ ತೋರಿಸಿದ ಪರಸ್ಪರ ವಿಸಂವಾದವೆಂಬ ಸಿದ್ಧಾಂತನ್ಯಾಯವು ಎರಡೂ ಅಧಿಕರಣಗಳಲ್ಲಿ ಸಮಾನವಾಗಿದೆ. ಇನ್ನು ಈ ಅಧಿಕರಣದಲ್ಲಿ ಕೇವಲ ದುಷ್ಟಾನುಮಾನವನ್ನು ಮಾತ್ರ ನಿರಾಕರಿಸುತ್ತೇವೆಂದು ಹೇಳಬಾರದು. ಸೂತ್ರದಲ್ಲಿ ಶಾಸ್ತ್ರಶಬ್ದವನ್ನೂ ಪ್ರಯೋಗಿಸಿದ್ದರಿಂದ ದುರಾಗಮಗಳನ್ನು ಮತ್ತು ದುಷ್ಟಾಗಮಗಳನ್ನು ಎರಡನ್ನೂ ಇಲ್ಲಿ ನಿರಾಸ ಮಾಡುತ್ತಿದ್ದಾರೆಂದು ತಿಳಿಯಬೇಕು.

### ಸ್ಮೃತ್ಯಧಿಕರಣದಿಂದ ಪುನರುಕ್ತಿ ಪರಿಹಾರ

ಪುನರುಕ್ತಿದೋಷಕ್ಕೆ ಸ್ವಲ್ಪವೂ ಅವಕಾಶವಿಲ್ಲ. ಸ್ಮೃತ್ಯಧಿಕರಣದಲ್ಲಿ ಪಾಶುಪತಸ್ಮೃತಿಯ ಆಧಾರದಿಂದ ಪೂರ್ವಪಕ್ಷ ಮಾಡಿಕೊಂಡು ಪಂಚರಾತ್ರಸ್ಮೃತಿಯ ಆಧಾರದಿಂದ ಸಿದ್ಧಾಂತ ಮಾಡಿದ್ದಾರೆ. ಈ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಸ್ಮೃತಿ ಮತ್ತು ಅನುಮಾನಗಳ ಆಧಾರದಿಂದ ಪೂರ್ವಪ್ಪ ಮಾಡಿಕೊಂಡು ಶಾಸ್ತ್ರದ ಆಧಾರದಿಂದ ಸಿದ್ಧಾಂತ ಮಾಡಿದ್ದಾರೆ. ಇಷ್ಟೊಂದು ವೈಲಕ್ಷಣ್ಯವಿರುವಾಗ ಪುನರುಕ್ತಿ ಹೇಗೆ ತಾನೆ ಬರುತ್ತದೆ? ಹಾಗಾದರೆ ಇಲ್ಲಿ ಶ್ರುತಿಯಿಂದ ಸಿದ್ಧಾಂತ ಮಾಡಿದ ಮೇಲೆ ಪುನಃ ಸ್ಮೃತ್ಯಧಿಕರಣದಲ್ಲಿ ಸ್ಮೃತಿಯಿಂದ ಪೂರ್ವಪಕ್ಷ ಮಾಡಲಾಗದೆಂದು ಶಂಕಿಸಬಾರದು. ಆಪ್ತವಾಕ್ಯವು ಪರಮಪ್ರಮಾಣವೆಂದು ಎಲ್ಲರೂ ಒಪ್ಪಿದ್ದಾರೆ. ಶ್ರುತಿಯು ಅಪೌರುಷೇಯವಾದ್ದರಿಂದ ಆಪ್ತೋಕ್ತವಾಗಿಲ್ಲ. ಆದರೆ ಪಾಶುಪತಾದ್ಯಾಗಮಗಳು ಪರಮಾಪ್ತರಾದ ರುದ್ರಾದಿಗಳಿಂದ ಪ್ರಣೀತವಾದ ಕಾರಣ ಪ್ರಮಾಣವಾಗಿದೆಯೆಂದು ಸ್ಮೃತ್ಯಧಿಕರಣದಲ್ಲಿ ಪೂರ್ವಪಕ್ಷ ಮಾಡಬಹುದು.

॥ ಇಲ್ಲಿಗೆ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಭಾವದೀಪದ ಕನ್ನಡಾನುವಾದವು ಮುಗಿಯಿತು ॥

॥ ಶ್ರೀಮದ್ಗೋಪಾರ್ಪಣಮಸ್ತು ॥

ಶ್ರೀವೇದವ್ಯಾಸಾಯ ನಮಃ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ

ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ
ಶ್ರೀಗುರುಭ್ಯೋ ನಮಃ

# ಬ್ರಹ್ಮಸೂತ್ರ

## ಸಮನ್ವಯಾಧಿಕರಣ

**ಬ್ರಹ್ಮಸೂತ್ರಮ್ – ।। ತತ್ತು ಸಮನ್ವಯಾತ್ ।। ೪ ।।**

ಅನು - ಆ ವಿಷ್ಣುವೆಂಬ ಬ್ರಹ್ಮನೇ ಉಪಕ್ರಮ ಉಪಸಂಹಾರಗಳಿಂದ ಸಕಲಶಾಸ್ತ್ರಗಳ ಮುಖ್ಯಪ್ರತಿಪಾದ್ಯನು.

ಅನು - 'ತು'ಶಬ್ದಕ್ಕೆ ಅವಧಾರಣೆ ಎಂದರ್ಥ. ತತ್ ತು = ಆ ವಿಷ್ಣು ಎಂಬ ಬ್ರಹ್ಮನೇ, ಸಂ = ಮುಖ್ಯವಾಗಿ ಸಕಲಶಾಸ್ತ್ರಪ್ರತಿಪಾದ್ಯನು ಹೊರತು ರುದ್ರಾದಿಗಳಲ್ಲ. ಏಕೆಂದರೆ, ಸಮನ್ವಯಾತ್ = ಬಲಿಷ್ಠವಾದ ಉಪಕ್ರಮ ಮೊದಲಾದ ಷಡ್ವಿಧತಾತ್ಪರ್ಯಲಿಂಗಗಳಿರುವುದರಿಂದ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಸಮನ್ವಯಾಧಿಕರಣವು ಸಮಾಪ್ತವಾಯಿತು ।।

* * * * * *

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

# ಬ್ರಹ್ಮಸೂತ್ರಭಾಷ್ಯ

## ರುದ್ರಾದಿಗಳೇಕೆ ಶಾಸ್ತ್ರಪ್ರತಿಪಾದ್ಯರಲ್ಲ?

**ब्रह्मसूत्रभाष्यम् -**

**अज्ञानां प्रतीयमानमपि नेतरेषां शास्त्रयोनित्वम्, कुतः? ।**

**।। तत्तु समन्वयात् ।। ४ ।।**

**अन्वय उपपत्त्यादिलिङ्गम् ।**

ಅನುವಾದ - ವಿಚಾರ ಮಾಡದ ಅಜ್ಞಾನಿಗಳಿಗೆ ವಿಷ್ಣುವಿಗಿಂತ ಇತರರಾದ ರುದ್ರಾದಿಗಳಲ್ಲಿ ಜಗತ್ಕಾರಣತ್ವ, ವೇದಪ್ರತಿಪಾದ್ಯತ್ವಗಳು ಆಪಾತತಃ ತೋರಿದರೂ, ಆ ರುದ್ರಾದಿಗಳಿಗೆ ಶಾಸ್ತ್ರಪ್ರತಿಪಾದ್ಯತ್ವವು ಯುಕ್ತವಾಗುವುದಿಲ್ಲ. ಏಕೆಂದರೆ ತತ್ತು ಸಮನ್ವಯಾತ್ = ರುದ್ರಾದಿಸಕಲಶಬ್ದಗಳೆಲ್ಲವೂ, ವಿಷ್ಣುವಿನಲ್ಲೇ ಮುಖ್ಯವಾಗಿ ಸಮನ್ವಯವಾಗುವುದರಿಂದ.

ಸೂತ್ರದಲ್ಲಿರುವ ಅನ್ವಯ ಎಂಬ ಪದಕ್ಕೆ 'ಉಪಪತ್ತಿ ಮೊದಲಾದ ತಾತ್ಪರ್ಯಲಿಂಗಗಳು' ಎಂದರ್ಥ.

ಪ್ರತಿಪದಾರ್ಥ - ಈ ಅಧಿಕರಣದಲ್ಲಿ ಉಪಕ್ರಮಾದಿಷಡ್ವಿಧತಾತ್ಪರ್ಯ-ಲಿಂಗಗಳಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ಮತ್ತು ಜಗತ್ಕಾರಣತ್ವ, ಶಾಸ್ತ್ರಗಮ್ಯತ್ವಗಳು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರಲು ಸಾಧ್ಯವೇ ಇಲ್ಲವೆಂದು ಸಮರ್ಥಿಸುತ್ತಿದ್ದಾರೆ.

ಅಜ್ಞಾನಾಂ = ಶ್ರುತಿತಾತ್ಪರ್ಯವನ್ನು ತಿಳಿಯದ ಅಜ್ಞಾನಿಗಳಿಗೆ, ಇತರೇಷಾಂ = ರುದ್ರ ಮೊದಲಾದವರಿಗೆ, ಪ್ರತೀಯಮಾನಮಪಿ = ಜಗತ್ಕಾರಣತ್ವ, ವೇದವೇದ್ಯತ್ವವು ಆಪಾದತಃ ತೋರಿದರೂ, (ರುದ್ರಾದಿಗಳಿಗೆ), ಶಾಸ್ತ್ರಯೋನಿತ್ವಂ = ಶಾಸ್ತ್ರಪ್ರತಿಪಾದ್ಯತ್ವವು, ನ = ಯುಕ್ತವಾಗುವುದಿಲ್ಲ. ಕುತಃ? = ಏಕೆಂದರೆ,

ತತ್ ತು ಸಮನ್ವಯಾತ್ = ವಿಷ್ಣುವಿನಲ್ಲೇ ರುದ್ರಾದಿಸಕಲಶಬ್ದಗಳೂ ಷಡ್ವಿಧತಾತ್ಪರ್ಯಲಿಂಗಗಳಿಂದ ಮುಖ್ಯವಾಗಿ ಸಮನ್ವಯವಾಗುವುದರಿಂದ.

ಅನ್ವಯಃ = ಸೂತ್ರದಲ್ಲಿರುವ ಅನ್ವಯಶಬ್ದವು, ಉಪಪತ್ತ್ಯಾದಿಲಿಂಗಮ್ = ಉಪಕ್ರಮ ಮೊದಲಾದ ತಾತ್ಪರ್ಯಲಿಂಗಗಳ ಸಮುದಾಯ ಎಂಬರ್ಥದಲ್ಲಿದೆ.(೧).

---

(೧) ಸೂತ್ರಾಕ್ಷರಾಣಿ ವ್ಯಾಚಷ್ಟೇ – ಅನ್ವಯ ಇತಿ ।। ಅನ್ವೀಯತೇ ಸ್ವಾರ್ಥೇನ ಸಮ್ಬಧ್ಯತೇ ತತ್ಪರತಯಾ ಜ್ಞಾಯತೇ ಶಾಸ್ತ್ರಂ ಶಬ್ದೋ ವಾऽನೇನೇತ್ಯನ್ವಯಃ ಉಪಪತ್ತ್ಯಾದಿತಾತ್ಪರ್ಯಲಿಙ್ಗಮಿತ್ಯರ್ಥಃ। ಸೂತ್ರಾನುಸಾರಾದೇಕವಚನಂ ಸಮುದಾಯಾಭಿಪ್ರಾಯಮ್ । ತೇನ ಚೋಪಕ್ರಮಾದೀನಾಂ ಕ್ವಚಿದವಿರೋಧಂ ಸೂಚಯತಿ । ಆದಿಪದಂ ಶ್ರುತಿಲಿಙ್ಗವಾಕ್ಯ ಪ್ರಕರಣಸ್ಥಾನಸಮಾಖ್ಯಾನಾಮಪಿ ಗ್ರಾಹಕಮ್ ।।

ಅತ್ರ ಶ್ರುತ್ಯಾದಿಷಟ್ಕಂ ಚ ಗ್ರಾಹ್ಯಮಿತಿ ಟೀಕೋಕ್ತೇಃ । ಅತ್ರ ವಾಕ್ಯೇ ಶ್ರುತ್ಯಾದಿಷಟ್ಕಮಪ್ಯಾದಿಪದೇನ ಗ್ರಾಹ್ಯಮಿತಿ ಹಿ ತಸ್ಯಾರ್ಥಃ । ಪರನ್ತು ಶ್ರುತ್ಯಾದೀನಾಮುಪಕ್ರಮಾದಿವತ್ ತಾತ್ಪರ್ಯಗ್ರಾಹಕತ್ವಾಭಾವಾದಾಗಮಾರ್ಥಮಾತ್ರನಿರ್ಣಾಯಕತ್ವಾನ್ನಾತ್ರ ತನ್ನಿದರ್ಶಕಪ್ರಮಾಣೋಕ್ತಿಃ । ಅತ ಏವೋತ್ತರತ್ರ -

'ಶ್ರುತಿರ್ಲಿಙ್ಗಂ ಸಮಾಖ್ಯಾ ಚ ವಾಕ್ಯಂ ಪ್ರಕರಣಂ ತಥಾ ।
ಪೂರ್ವಂ ಪೂರ್ವಂ ಬಲೀಯಃ ಸ್ಯಾದೇವಮಾಗಮನಿರ್ಣಯೇ ।।'

ಇತಿ ತತ್ರಾಪಿ ಪ್ರಮಾಣಂ ವಕ್ಷ್ಯತಿ । ಉಕ್ತಂ ಹಿ ಪ್ರಮಾಣಲಕ್ಷಣಟೀಕಾಯಾಮ್ 'ಉಪಕ್ರಮಾದೀನಾಂ ತಾತ್ಪರ್ಯಲಿಙ್ಗತ್ವಮೇತೇಷಾಂ ಪುನರರ್ಥ ಏವೇತಿ ವಿಶೇಷಜ್ಞಾಪನಾರ್ಥೋ ಯೋಗವಿಭಾಗಃ' ಇತಿ । ನ ಚೈವಮ್ 'ಅತ್ರ ಶ್ರುತ್ಯಾದಿಷಟ್ಕಂ ಚ ಗ್ರಾಹ್ಯಮ್' ಇತಿ ಟೀಕಾಯಾಂ ತಾತ್ಪರ್ಯಗ್ರಾಹಕೇಷ್ವನ್ತರ್ಭಾವೋಕ್ತಿರಯುಕ್ತೇತಿ ವಾಚ್ಯಮ್, ಯತोऽತ್ರೇತ್ಯಸ್ಯ ಸಮನ್ವಯಶಬ್ದಾರ್ಥ ಇತ್ಯೇವಾರ್ಥೋ ನ ತಾತ್ಪರ್ಯಗ್ರಾಹಕೇಷ್ವಿತಿ, 'ಆಕಾಶಸ್ತಲ್ಲಿಙ್ಗಾತ್', 'ಶಬ್ದಾದೇವ ಪ್ರಮಿತಃ' (ಬ್ರ.ಸೂ. ೧-೧-೨೨, ೩-೨೪) ಇತ್ಯಾದೌ ಶ್ರುತಿಲಿಙ್ಗಾದಿಭಿರಾಗಮಾರ್ಥನಿರ್ಣಯದರ್ಶನೇನ ತೇಷಾಮಪಿ ಅನ್ವೀಯತೇ ಶಕ್ತಿರೂಪಸಮ್ಬನ್ಧವತ್ತಯಾ ಜ್ಞಾಯತೇ ಪದಜಾತಮೇಭಿರಿತಿ ವ್ಯುತ್ಪತ್ತ್ಯಾ ಅನ್ವಯಶಬ್ದಾರ್ಥತ್ವೌಚಿತ್ಯಾತ್ । ನ ಚೋಪಕ್ರಮೋಪಸಂಹಾರಾಭ್ಯಾಸಾಪೂರ್ವತಾಫಲಾರ್ಥವಾದೋಪಪತ್ತಯಃ ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನಸಮಾಖ್ಯಾಶ್ಚ ತಾತ್ಪರ್ಯಲಿಙ್ಗಾನೀತಿ ಜ್ಞಾನಪಾದೀಯಸುಧಾವಿರೋಧ ಇತಿ ವಾಚ್ಯಮ್, ಅತ್ರ ಶಕ್ತೇರಪಿ ಸಂಯೋಜನಾತ್ । ಅತ ಏವ ಚನ್ದ್ರಿಕಾಯಾಮುಪಕ್ರಮಾದಿಪ್ರಮಾಣಕಃ ಶಕ್ತಿತಾತ್ಪರ್ಯಲಕ್ಷಣಃ ಸಮ್ಬನ್ಧಃ ಸಮನ್ವಯ ಇತ್ಯುಕ್ತಮ್ । ಅತ್ರಾऽದಿಪದಂ ಶ್ರುತ್ಯಾದೀನಾಮಪಿ ಗ್ರಾಹಕಮ್ । ವ್ಯುತ್ಕ್ರಮೇಣಾನ್ವಯಃ । ಅನೇನಾತ್ರ ಬೃಹತ್ಸಂಹಿತಾವಚನೋದಾಹರಣಂ ವಕ್ಷ್ಯಮಾಣಸ್ಯ ಶ್ರುತಿರ್ಲಿಙ್ಗಮಿತಿ ವಚನಸ್ಯೋಪಲಕ್ಷಕಮಿತಿ ಸೂಚಿತಮ್ ।।

# ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ
# ತತ್ವಪ್ರಕಾಶಿಕಾ

## ಸಂಗತಿ ಮತ್ತು ಸಂಶಯ

**तत्वप्रकाशिका –**

**अत्र ब्रह्मणो जगत्कारणत्वेन शास्त्रप्रतिपाद्यत्वसमर्थनादस्ति शास्त्रसङ्गतिः । कारणस्य शास्त्रैकयोनित्वाद् यस्य शास्त्रं कारणतामाचष्टे, तदेव कारणम् इति वर्णितम् । तद् यदा विष्णोरेव तदैवोक्तलक्षणं सम्भवतीति । तत्कारणत्वेन शास्त्रयोनित्वं विषयः । विष्णोरन्यस्यापि वेति सन्देहः । पूर्वोक्तिरुभयथाऽपि शास्त्रप्रतीतिः सन्देहबीजम् ।**

ಈ ಅಧಿಕರಣದಲ್ಲಿ ಬ್ರಹ್ಮನಿಗೆ ಜಗತ್ಕಾರಣತ್ವದಿಂದ ಶಾಸ್ತ್ರಪ್ರತಿಪಾದ್ಯತ್ವವನ್ನು ಸಮರ್ಥಿಸುವುದರಿಂದ ಶಾಸ್ತ್ರಸಂಗತಿಯು ಇರುತ್ತದೆ. ಜಗತ್ಕಾರಣತ್ವವನ್ನು ಶಾಸ್ತ್ರದಿಂದಲೇ ತಿಳಿಯಬೇಕು. ಆದ್ದರಿಂದ ಶಾಸ್ತ್ರವು ಯಾರನ್ನು ಜಗತ್ಕಾರಣನೆಂದು ಹೇಳುತ್ತದೋ ಅವನೇ ಜಗತ್ಕಾರಣನೆಂದು ಹಿಂದಿನ ಅಧಿಕರಣದಲ್ಲಿ ವರ್ಣಿಸಲ್ಪಟ್ಟಿದೆ. ಅಂತಹ ಜಗತ್ಕಾರಣತ್ವವು ಒಂದು ವೇಳೆ ವಿಷ್ಣುವಿನಲ್ಲಿ ಬಂದರೆ ಆವಾಗ ಮಾತ್ರ ಜನ್ಮಾದ್ಯಧಿಕರಣದಲ್ಲಿ ಹೇಳಿದ ಜನ್ಮಾದಿಕಾರಣತ್ವಲಕ್ಷಣವು ವಿಷ್ಣುವಿನದ್ದು ಎಂದು ನಿರ್ಣಯವಾಗುತ್ತದೆ. ಆದರೆ ಜಗತ್ಕಾರಣತ್ವಪೂರ್ವಕವಾದ ಶಾಸ್ತ್ರಯೋನಿತ್ವವೇ ಈ ಅಧಿಕರಣದ ವಿಷಯ. ಈ ವಿಷಯವು ವಿಷ್ಣುವಿನಲ್ಲಿ ಇದೆಯೋ? ಅಥವಾ ಬೇರೆಯವರಲ್ಲಿ ಇದೆಯೋ? ಎಂಬುದು ಸಂದೇಹ. ಹಿಂದಿನ ಅಧಿಕರಣದಲ್ಲಿ ಪ್ರತಿಪಾದಿಸಲ್ಪಟ್ಟದ್ದು ವಿಷ್ಣುವಿನಲ್ಲದೇ ಬೇರೆಯವರಲ್ಲೂ ಬರುತ್ತದೆ ಎಂಬುದು ಸಂದೇಹಬೀಜ.

## ಪೂರ್ವಪಕ್ಷ, ಸಿದ್ಧಾಂತ

**तत्वप्रकाशिका – रुद्रादीनामपि कारणत्वेन शास्त्रयोनित्वमिति पूर्वः पक्षः । पाशुपतादिशास्त्रेषु रुद्रादिर्जगत्कारणत्वेन वेदादिवेद्य इति निगदितत्वात् । न च**

**तस्याप्रामाण्येनासाधकत्वम् । वेदेऽपि तेषां कारणतया प्रतीयमानत्वात्, प्रतीतिसध्रीचीनस्य च प्रामाण्योपपत्तेः । तथा च 'पाशुपताद्युक्तिप्रतीतिभ्या-मन्येषामपि कारणत्वेन शास्त्रयोनित्वे जगत्कारणत्वं न विष्णोरेव लक्षणम्' इति प्राप्ते सिद्धान्तयति – अज्ञानामिति ।। पाशुपतादावुक्तत्वेपि नेतरेषां शास्त्र-योनित्वम् । पाशुपताद्युक्तस्योक्तरीत्याऽयथार्थत्वसम्भवात्, प्रतीतैरज्ञानमूलत्व-सम्भवात्, प्रतीतमपि न इतरेषां शास्त्रयोनित्वमिति भावः ।**

ರುದ್ರಾದಿಗಳಿಗೂ ಜಗತ್ಕಾರಣತ್ವರೂಪವಾದ ಶಾಸ್ತ್ರಯೋನಿತ್ವವು ಬರುತ್ತದೆಂದು ಪೂರ್ವಪಕ್ಷ. ಏಕೆಂದರೆ ಪಾಶುಪತಾದಿಶಾಸ್ತ್ರಗಳಲ್ಲಿ ರುದ್ರಾದಿ ದೇವತೆಗಳಿಗೆ ಜಗತ್ಕಾರಣತ್ವೇನ ವೇದಪ್ರತಿಪಾದ್ಯತ್ವವನ್ನು ಹೇಳಲಾಗಿದೆ. ಪಾಶುಪತಾದಿಶಾಸ್ತ್ರಗಳು ಅಪ್ರಮಾಣಗಳಾದ್ದರಿಂದ ಅರ್ಥನಿರ್ಣಯವಿಷಯದಲ್ಲಿ ಸಾಧಕಗಳಲ್ಲ ಎಂದು ಹೇಳಬಾರದು? ಏಕೆಂದರೆ ವೇದಗಳಲ್ಲಿಯೂ ಸಹ ರುದ್ರಾದಿದೇವತೆಗಳಿಗೆ ಜಗತ್ಕಾರಣತ್ವವನ್ನು ಹೇಳಿರುವುದು ಕಾಣಿಸುತ್ತಿದೆ. ಆದ್ದರಿಂದ ಪಾಶುಪತಾದಿಶಾಸ್ತ್ರಗಳ ವಚನ ಮತ್ತು ವೇದಗಳಲ್ಲಿ ಕಂಡುಬರುವ ಆಪಾತಪ್ರತೀತಿಯಿಂದ ರುದ್ರಾದಿಗಳಿಗೆ ಜಗತ್ಕಾರಣತ್ವಪೂರ್ವಕವಾದ ಶಾಸ್ತ್ರಪ್ರತಿಪಾದ್ಯತ್ವವು ಸಿದ್ಧವಾಗುತ್ತದೆ. ಆದುದರಿಂದ ಜಗತ್ಕಾರಣತ್ವವು ವಿಷ್ಣುವಿನ ಲಕ್ಷಣವೇ ಆಗಿದೆಯೆಂದು ನಿರ್ಣಯಿಸಲಾಗದು. ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಭಾಷ್ಯಕಾರರು ''ಅಜ್ಞಾನಾಂ'' ಎಂಬುದರಿಂದ ಸಿದ್ಧಾಂತ ಮಾಡುತ್ತಿದ್ದಾರೆ.

ಪಾಶುಪತಾದಿಶಾಸ್ತ್ರಗಳಲ್ಲಿ ರುದ್ರಾದಿಗಳಿಗೆ ಶಾಸ್ತ್ರಪ್ರತಿಪಾದ್ಯತ್ವವು ಹೇಳಲ್ಪಟ್ಟಿದ್ದರೂ ಅದನ್ನು ಒಪ್ಪಬಾರದು. ಏಕೆಂದರೆ, ಹಿಂದೆ ಹೇಳಿದಂತೆ ಪಾಶುಪತಾದಿಗಳಲ್ಲಿ ಹೇಳಲ್ಪಟ್ಟ ಮಾತುಗಳು ಅಜ್ಞಾನಮೂಲಕವಾದ್ದರಿಂದ ಅಪ್ರಮಾಣಗಳಾಗಿರಬಹುದು.

## ಆಪಾತತಃ ತೋರಿದ್ದು ನಿಜಾರ್ಥವಲ್ಲ

**तत्वप्रकाशिका – ननु प्रतीत्यादेरज्ञानमूलत्वादि परिकल्प्याऽप्यन्येषां कारणत्वेन शास्त्रयोनित्वा- ग्रहणे को हेतुः? इति पृच्छति – कुत इति ।। 'प्रतीयमानमपि नेतरेषां शास्त्रयोनित्वम्' इति सम्बन्धः । तत्र हेतुकथनाय**

**सूत्रमुपन्यस्यति – तत्तु इति ।। सूत्राक्षराणि व्याचष्टे – अन्वय इति ।।**[१]

---

(१) **भावरत्नकोशः** - 'तत्तु समन्वयात्' इत्येकं सूत्रमेकमधिकरणम् । तच्छरीरमेवं द्रष्टव्यम् । अत्र ब्रह्मणो जगतकारणत्वेन शास्त्रप्रतिपाद्यत्वसमर्थनादस्ति शास्त्रसङ्गतिः । अनन्तरसङ्गतिस्तु - अस्तु शास्त्रैकसमधिगम्यं जगत्कारणं तथाप्यतिव्यापकमिदं लक्षणम् । शास्त्रत एव पशुपतिहिरण्यगर्भादीनां कारणत्वप्रतीतेरिति शङ्कनात्पूर्वाधिकरणेनाक्षेपिकी । पूर्वसूत्रप्रकृतं कारणत्वेन शास्त्रयोनित्वं विषयः । तद्विष्णोरन्यस्यापि उत विष्णोरेवेति सन्देहः । पूर्वपक्षस्तुहरहिरण्यगर्भादीनामपि कारणत्वेन शास्त्रयोनित्वमस्ति । पाशुपतादिशास्त्रेषु पशुपत्यादिर्जगत्कर्तृतया वेदादिवेद्य इति निगदितित्वात् । न च तस्या प्रामाण्येनासाधकत्वम् । 'अहमेकः प्रथममासं वर्तामि च भविष्यामि च' । 'ज्ञात्वा शिवं शान्तिमत्यन्तमेति' 'एको रुद्रो न द्वितीयाय' इति । 'हिरण्यगर्भः समवर्तताग्र' इत्यादौ च हरहिरण्यगर्भादेः कारणतया प्रतीयमानत्वात् । निराबाधप्रतीतिसाध्रीचीनस्य पाशुपतादिशास्त्रस्य प्रामाण्योपपत्तेः । तथा च पाशुपताद्युक्तिप्रतीतिभ्यां अन्येषामपि कारणत्वेन शास्त्रयोनित्वे जगत्कारणत्वं न विष्णोरेव लक्षणमिति शास्त्रगम्यमपि कारणत्वमिति व्याप्तमिति ।

सिद्धान्तस्तु । पाशुपतादिशास्त्रोक्तं प्रतीतमपि नान्येषां शास्त्रयोनित्वम् । पाशुपताद्युक्त्यादेः शास्त्रतात्पर्यनिश्चायकत्वाभावात् ।

'उपक्रमोपसंहारावभ्यासोऽपूर्वता फलम् ।
अर्थवादोपपत्ती च लिङ्गं तात्पर्यनिर्णये ।।'

इति वचनप्रतिपन्नानां उपक्रमादीनां श्रुतिलिङ्गवाक्यप्रकरणस्थानसमाख्यानां चैव तन्निर्णायकत्वात् । तैश्च सम्यक्शास्त्रे विचार्यमाणे विष्णवाख्यं ब्रह्मैव शास्त्रगम्यं निर्धार्यते। न रुद्रादि । अथोऽन्यथाप्रतीत्यादेरज्ञानमूलत्वाद्येव युक्तमिति नोक्तस्य शास्त्रयोनितया कारणत्वस्यातिव्याप्तिरिति ।

(समन्वयसूत्राक्षरर्थवर्णनम्)

**सूत्राक्षरार्थस्तु** - प्रथमसूत्रे ब्रह्मशब्देन प्रकृतं द्वितीयसूत्रे यच्छब्देनोपात्तं विष्णवाख्यं वस्तु अत्रत्यतच्छब्देन परामृश्यते । तेन तुशब्दस्यान्वयः । पूर्वसूत्राच्छास्त्रयोनीति बुद्ध्या विभज्यानुवर्तनीयम् । समित्येतच्छास्त्रपदेनान्वेति । तत्र कात्स्न्यं मुख्यस्वं चार्थः । तुशब्दोऽवधारणे । अन्वीयन्ते शक्तितात्पर्यगोचरेण सम्बध्यन्ते । तथा ज्ञायन्ते इति यावत्। वाक्यान्येतेनेत्यन्वय उपक्रमादिरूपशास्त्रतात्पर्यनिर्णायकलिङ्गसमुदायः । सावकाशत्वनिरवकाशत्वादिना विचारितत्वरूपसंशब्दार्थभूतसमत्वयुक्तस्तस्मात्तत्तु ब्रह्मैव

'ಪಾಶುಪತಾದಿಶಾಸ್ತ್ರಗಳಿಂದ ಪ್ರತೀತವಾದ ಅರ್ಥವು ಅಜ್ಞಾನಮೂಲಕವೆಂದು ಕಲ್ಪಿಸಿ ರುದ್ರಾದಿಗಳಿಗೆ ಶಾಸ್ತ್ರಯೋನಿತ್ವವನ್ನು ಇಲ್ಲವೆಂದು ಆಗ್ರಹಿಸಲು ಏನು ಕಾರಣ?' ಎಂಬ ಪ್ರಶ್ನೆಯನ್ನು 'ಕುತಃ' ಎಂಬುದರಿಂದ ಕೇಳುತ್ತಿದ್ದಾರೆ. 'ರುದ್ರಾದಿದೇವತೆಗಳಿಗೆ ಜಗತ್ಕಾರಣತ್ವದ ಮೂಲಕ ಶಾಸ್ತ್ರಯೋನಿತ್ವವು ಪ್ರತೀತವಾದರೂ ಅದನ್ನು ಒಪ್ಪಬಾರದು' ಎಂದು ಅನ್ವಯ. ಈ ವಿಷಯದಲ್ಲಿ ಕಾರಣವನ್ನು ಹೇಳಲು 'ತತ್ ತು' ಎಂಬುದಾಗಿ. ಸೂತ್ರವನ್ನು ಉಪನ್ಯಾಸ ಮಾಡುತ್ತಿದ್ದಾರೆ. ಸೂತ್ರಾಕ್ಷರಗಳನ್ನು 'ಅನ್ವಯಃ' ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ.

## ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಭಾವದೀಪ

## ಆಕ್ಷೇಪಿಕೀ ಸಂಗತಿ

**भावदीपः – 'ब्रह्मणः' इत्युक्त्या ब्रह्मपरे शास्त्रेऽन्तर्भावसङ्गतिरुपपादिता। 'कारणस्य' इत्यादिग्रन्थस्तु पूर्वत्रैव द्वेधा व्याख्येयः । एवमग्रेपि । तथा च पूर्वाधिकरणफलाक्षेपेण पूर्वपक्षोत्थानात् पूर्वेणाक्षेपिकीसङ्गतिरिति भावः ।**

'ಬ್ರಹ್ಮಣಃ' ಎಂಬ ಪದದಿಂದ ಬ್ರಹ್ಮಪರವಾದ ಈ ಶಾಸ್ತ್ರದಲ್ಲಿ ಈ ಸೂತ್ರಕ್ಕೆ ಅಂತರ್ಭಾವಸಂಗತಿಯನ್ನು ಹೇಳಿದ್ದಾರೆ. 'ಕಾರಣಸ್ಯ' ಇತ್ಯಾದಿ ಗ್ರಂಥಭಾಗವನ್ನು ಹಿಂದಿನ ಅಧಿಕರಣದಲ್ಲಿ ಹೇಳಿದಂತೆ ಎರಡು ರೀತಿಯಾಗಿ ವ್ಯಾಖ್ಯಾನ ಮಾಡಬೇಕು. ಮುಂದಿನ

शास्त्रयोनीति । अत्रोपक्रमादिति वाच्य अन्वयादिति यौगिकोक्तिः शास्त्रतात्पर्यज्ञप्तावापात-प्रतीतिर्व्याख्यातृवचनं वा न लिङ्गम् । तयोः शक्तितात्पर्यगोचरेण सह सम्बन्धाभावादिति सूचयितुम् । अन्वयेभ्य इत्यनुक्त्वा समुदायैकवचनाक्तिरुपक्रमादीनामविरोधसूचनार्था । उपक्रमादेस्तात्पर्याव्यभिचारद्योतनाय समित्युक्तिः । 'जन्मादिसूत्रप्रकृततद्ग्रहणे मण्डूकप्लुत्याऽनुवर्तमानेऽपि पुनस्तदित्युक्तिः अवधारणार्थक-तुशब्दान्वयाय' इत्यादि सुधाचन्द्रिकयोः स्फुटम् ।

'स्तोत्रं राधानां पते गिर्वाहो वीर यस्य ते । विभूतिरस्तु सूनृता'
'एतेनाग्ने ब्रह्मणा वावृधस्व शक्तौ वा यत् ते चकृमा विदा वा ।
उत प्रणेष्यभि वस्यो अस्मात्सन्नः सृज सुमत्या वाजवत्या ।।'

।। इति समन्वयाधिकरणटीकासेवा ।।

समन्वयाधिकरण (೧-೧-೪)

ಅಧಿಕರಣಗಳಲ್ಲೂ ಕೂಡ ಇದೇ ರೀತಿಯಾಗಿ ವ್ಯಾಖ್ಯಾನಕ್ರಮವನ್ನು ಅನುಸರಿಸಬೇಕು. ಹೀಗೆ ಪೂರ್ವಾಧಿಕರಣದಲ್ಲಿ ಬಂದ ನಿರ್ಣಯವನ್ನು ಆಕ್ಷೇಪ ಮಾಡುವುದರ ಮೂಲಕ ಇಲ್ಲಿ ಪೂರ್ವಪಕ್ಷವು ಹೊರಟಿರುವುದರಿಂದ ಆಕ್ಷೇಪಿಕೀ ಸಂಗತಿಯೆಂದು ಹೇಳಬೇಕು.

ವಿಶೇಷ ವಿಚಾರ - 'ಶಾಸ್ತ್ರೈಕಸಮಧಿಗಮ್ಯವಾದ್ದರಿಂದ ಜಗತ್‌ಕಾರಣತ್ವಲಕ್ಷಣಕ್ಕೆ ಅತಿವ್ಯಾಪ್ತಿ ಇಲ್ಲ' ಎಂಬುದು ಪೂರ್ವಾಧಿಕರಣದ ಫಲ. ಈ ಫಲವನ್ನು ಆಕ್ಷೇಪಿಸುತ್ತಿರುವುದರಿಂದ ಆಕ್ಷೇಪಿಕೀಸಂಗತಿ ಇದೆ. ಅಥವಾ ಹಿಂದಿನ ಅಧಿಕರಣಪ್ರಮೇಯ ಉಪಜೀವ್ಯವಾಗಿದೆ. ಈ ಅಧಿಕರಣಪ್ರಮೇಯ ಉಪಜೀವಕವಾಗಿದೆ. ಹೀಗೆ ಉಪಜೀವ್ಯ-ಉಪಜೀವ್ಯಕಭಾವ ಸಂಗತಿಯೂ ಇರುತ್ತದೆ.

## 'ಅನ್ಯಸ್ಯ' ಎಂಬಲ್ಲಿರುವ ಏಕವಚನಾರ್ಥ

**ಭಾವದೀಪಃ – अन्यस्यापि वेतीति ।। 'इतरेषाम्' इति भाष्योक्तावप्येकदा न बहुभिर्विवादः । किन्तु प्रत्येकं प्रत्येकं विष्णोरेव शिवस्यापि वेति, तथा विष्णोरेव वा हिरण्यगर्भस्यापि वेति एवंरूपेण पूर्वपक्षादिरप्येवमेव ज्ञेय इति सूचयितुम् 'अन्यस्यापि' इत्येकवचनोक्तिः पूर्वत्राप्येवं ध्येयम् ।**

''ಅನ್ಯಸ್ಯಾಪಿ ವಾ'' ಎಂಬ ಅಂಶದಿಂದ 'ಇತರೇಷಾಂ' ಎಂಬುದಾಗಿ ಭಾಷ್ಯದಲ್ಲಿ ಹೇಳಿದ್ದರೂ ಅನೇಕರೊಂದಿಗೆ ಒಂದೇ ಬಾರಿ ವಿವಾದವು ಇಲ್ಲ; ಪ್ರತ್ಯೇಕವಾಗಿ ವಿಷ್ಣುವಿಗೇ ಕಾರಣತ್ವವೋ? ಅಥವಾ ಶಿವನಿಗೂ ಕಾರಣತ್ವ ಇದೆಯೋ? ಎಂಬುದಾಗಿ. ಅದೇ ರೀತಿ ವಿಷ್ಣುವಿಗೇ ಕಾರಣತ್ವವೋ ಅಥವಾ ಹಿರಣ್ಯಗರ್ಭನಿಗೂ ಕಾರಣತ್ವವಿದೆಯೋ? ಎಂಬುದಾಗಿ ಪೂರ್ವಪಕ್ಷಾದಿಗಳು ಇದೇ ರೀತಿ ಇವೆ ಎಂಬುದನ್ನು ಸೂಚಿಸಲು ''ಅನ್ಯಸ್ಯಾಪಿ'' ಎಂಬುದಾಗಿ ಏಕವಚನವನ್ನು ಹೇಳಿದ್ದಾರೆ. ಹಿಂದೆ ಹೇಳಿರುವ ಏಕವಚನವನ್ನೂ ಕೂಡ ಇದೇ ರೀತಿ ಅರ್ಥೈಸಿಕೊಳ್ಳಬೇಕು.

## ಎರಡು ಭಾಷ್ಯಗಳಿಂದ ತಿಳಿಯುವ ಸ್ಪಷ್ಟ ಪೂರ್ವಪಕ್ಷ

**ಭಾವದೀಪಃ – 'विष्णोः' इत्यत्र 'विष्णोरेव' इति बोध्यम् । पूर्वोक्तिरिति।। 'कारणस्य शास्त्रयोनित्वाद् विष्णुरेव कारणम्' इति पूर्वोक्तिरित्यर्थः ।**

**ಉಭಯಥಾಪೀತಿ ।। 'ವಿಶ್ವಾಧಿಕೋ ರುದ್ರಃ' 'ಹಿರಣ್ಯಗರ್ಭಃ ಸಮವರ್ತತಾಗ್ರೇ' 'ನಾರಾಯಣೋ ವಾ ಇದಮಗ್ರ ಆಸೀತ್' ಇತ್ಯಾದಿನೇತ್ಯರ್ಥಃ । ಸೌತ್ರ'ಸಮನ್ವಯ'ಶಬ್ದೇನ ಕರಣವ್ಯುತ್ಪತ್ತ್ಯಾऽನ್ವಯಜ್ಞಾಪಕೋಪಕ್ರಮಾದಿವಾಚಿನಾ ಪಾಶುಪತಾದಿರೂಪವ್ಯಾಖ್ಯಾನೋಕ್ತತ್ವಂ ವೇದಾದಾವಾಪಾತಪ್ರತೀತಿತ್ವಂ ಚೇತಿ ದ್ವಯಂ ವ್ಯಾವರ್ತ್ಯಮ್ । ನ ಚ ಪಾಶುಪತಶಾಸ್ತ್ರೋದಿತತ್ವಾದಿ ಶಾಸ್ತ್ರಪ್ರತಿಪಾದ್ಯತ್ವೇ ಕಾರಣಮಿತಿ ನ್ಯಾಯವಿವರಣೋಕ್ತಮ್ । ತತ್ರಾದಿಪದೇನ ಹೈರಣ್ಯಗರ್ಭ-ಸೌರಶಾಕ್ತೇಯೋದಿತತ್ವಾದೇರಿವಾಪಾತಪ್ರತೀತತ್ವಂ ಪಾಶುಪತೋದಿತತ್ವಾದೇರುಪಲಕ್ಷಣಮ್ ಅಪಿನಾ ಸಮುಚ್ಚಾಯಕಂ ವೇತ್ಯಭಿಪ್ರೇತ್ಯೋಭಯಮೂಲಂ ಪೂರ್ವಪಕ್ಷಂ ವ್ಯನಕ್ತಿ – ರುದ್ರಾದೀನಾಮಪೀತಿ।।**

'ವಿಷ್ಣೋಃ' ಎಂಬಲ್ಲಿ 'ವಿಷ್ಣೋರೇವ' (ವಿಷ್ಣುವಿಗೇ) ಎಂಬ ಅಭಿಪ್ರಾಯವನ್ನು ಗ್ರಹಿಸಬೇಕು. ''ಪೂರ್ವೋಕ್ತಿಃ'' ಎಂದರೆ 'ಕಾರಣವು ಶಾಸ್ತ್ರಯೋನಿಯಿಂದ ತಿಳಿಯಲ್ಪಡುವುದರಿಂದ ಶಾಸ್ತ್ರದಲ್ಲಿ ಹೇಳಿರುವಂತೆ ವಿಷ್ಣುವೇ ಕಾರಣನಾಗಿದ್ದಾನೆ' ಎಂದು ಹಿಂದೆ ಹೇಳಿರುವ ಅಂಶ. ''ಉಭಯಥಾಪಿ'' ಎಂಬುದರಿಂದ 'ವಿಶ್ವಾಧಿಕೋ ರುದ್ರಃ' (ರುದ್ರನು ವಿಶ್ವದಲ್ಲಿ ಉತ್ತಮನಾಗಿದ್ದಾನೆ); 'ಹಿರಣ್ಯಗರ್ಭಃ ಸಮವರ್ತತಾಗ್ರೇ' (ಆರಂಭದಲ್ಲಿ ಹಿರಣ್ಯಗರ್ಭನೊಬ್ಬನೇ ಇದ್ದನು); 'ನಾರಾಯಣೋ ವಾ ಇದಮಗ್ರ ಆಸೀತ್' (ನಾರಾಯಣನೊಬ್ಬನೇ ಪ್ರಾರಂಭದಲ್ಲಿ ಇದ್ದನು) ಇತ್ಯಾದಿ ವಾಕ್ಯಗಳಿಂದ ಎಲ್ಲರಿಗೂ ಕಾರಣತ್ವಪ್ರತೀತಿ ಇದೆ ಎಂಬುದಾಗಿ ಅರ್ಥ. ಸೂತ್ರದಲ್ಲಿ ಹೇಳಿರುವ ಸಮನ್ವಯಶಬ್ದಕ್ಕೆ ಕರಣವ್ಯುತ್ಪತ್ತಿಯನ್ನು ಇಟ್ಟುಕೊಂಡು ಅನ್ವಯಜ್ಞಾಪಕವಾದ ಉಪಕ್ರಮಾದಿಗಳನ್ನು ತಿಳಿಸುವ ಆ ಶಬ್ದದಿಂದ ಪಾಶುಪತಾದಿರೂಪವಾದ ವ್ಯಾಖ್ಯಾನದಲ್ಲಿ ಹೇಳಿದ ಅಂಶವನ್ನು ವೇದಾದಿಗಳಲ್ಲಿ ಮೇಲ್ನೋಟಕ್ಕೆ ಕಾಣುವ ಅರ್ಥವನ್ನು ಹೀಗೆ ಈ ಎರಡನ್ನು ವ್ಯಾವೃತ್ತಿಗೊಳಿಸಬೇಕು. ನ್ಯಾಯವಿವರಣದಲ್ಲಿ 'ನ ಚ ಪಾಶುಪತಶಾಸ್ತ್ರೋದಿತತ್ವಾದಿಶಾಸ್ತ್ರಪ್ರತಿಪಾದ್ಯತ್ವೇ ಕಾರಣಮ್' ಎಂಬಲ್ಲಿ 'ಆದಿ'ಪದದಿಂದ ಹಿರಣ್ಯಗರ್ಭ, ಸೌರ, ಶಾಕ್ತೇಯ ಇವರಿಂದ ಹೇಳಲ್ಪಟ್ಟ ವಿಷಯವನ್ನು ಗ್ರಹಿಸಿದಂತೆ ಆಪಾತಪ್ರತೀತಿಯನ್ನೂ ಗ್ರಹಣ ಮಾಡಿದ್ದಾರೆ. ಆದ್ದರಿಂದ ಅದಕ್ಕೆ ಅನುಸಾರಿಯಾಗಿ ''ಅಜ್ಞಾನಾಂ'' ಎಂಬುದಾಗಿ ಭಾಷ್ಯದಲ್ಲಿ ಆಪಾತಪ್ರತೀತತ್ವವನ್ನು ಹೇಳಿದ್ದು; ಇದು ಪಾಶುಪತತ್ವೋದಿತತ್ವಾದಿಗಳಿಗೆ ಉಪಲಕ್ಷಣ-

ವಾಗಿದೆ. ಅಥವಾ 'ಅಪಿ'ಶಬ್ದದಿಂದ ಪಾಶುಪತಾದಿಗಳನ್ನು ಇಲ್ಲಿ ಸೇರಿಸಿಕೊಳ್ಳಬೇಕು - ಎಂಬ ಅಭಿಪ್ರಾಯದಿಂದ ಈ ಎರಡು ಗ್ರಂಥಗಳಿಂದಲೂ ಸ್ಪಷ್ಟವಾದ ಪೂರ್ವಪಕ್ಷವನ್ನು ''ರುದ್ರಾದೀನಾಮಪಿ'' ಎಂಬ ಭಾಗದಿಂದ ವಿವರಿಸುತ್ತಿದ್ದಾರೆ.

ವಿಶೇಷ ವಿಚಾರ - ಪೂರ್ವಪಕ್ಷ - ಜಗತ್ಕಾರಣತ್ವವು 'ಶಾಸ್ತ್ರೈಕ-ಸಮಧಿಗಮ್ಯ' ಎಂದು ಒಪ್ಪುತ್ತೇವೆ. ಆದರೂ ಅತಿವ್ಯಾಪ್ತಿ ಬರುತ್ತದೆ. ಶೈವಾದ್ಯಾಗಮಗಳು ವೇದವ್ಯಾಖ್ಯಾನರೂಪವಾಗಿದೆ. ವೇದದಿಂದ ತಿಳಿಯುವ ಅರ್ಥಕ್ಕೆ ಅನುಗುಣವಾಗಿದೆ. ಮಾನಾಂತರದಿಂದ ಅವಿರುದ್ಧವಾದ ಅರ್ಥವುಳ್ಳದ್ದಾಗಿದೆ. ಇಂತಹ ಶೈವಾದ್ಯಾಗಮದಿಂದ ವೇದಕ್ಕೆ ರುದ್ರನ ಜಗತ್ಕಾರಣತ್ವದಲ್ಲೇ ತಾತ್ಪರ್ಯವೆಂದು ನಿಶ್ಚಯಿಸಬಹುದು. ಕಾವ್ಯವ್ಯಾಖ್ಯಾನದಿಂದ ಕಾವ್ಯದ ಅರ್ಥವನ್ನು ತಿಳಿಯುವಂತೆ ವೇದವ್ಯಾಖ್ಯಾನವಾದ ಶೈವಾದ್ಯಾಗಮದಿಂದ ವೇದತಾತ್ಪರ್ಯವನ್ನು ನಿಶ್ಚಯಿಸುವುದು ತಪ್ಪಲ್ಲ. ಇದನ್ನೇ 'ವ್ಯಾಖ್ಯಾನತೋ ವಿಶೇಷಪ್ರತಿಪತ್ತಿಃ' 'ವ್ಯಾಖ್ಯಾನದಿಂದ ವಿಶೇಷಜ್ಞಾನ ಬರುತ್ತದೆಂದು ಮಹಾಭಾಷ್ಯದಲ್ಲಿ ಹೇಳಲಾಗಿದೆ. ಶೈವಾದ್ಯಾಗಮಗಳಲ್ಲಿ ವೇದವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - 'ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ, ಇತ್ಯಾದಿ ಶಾಸ್ತ್ರಂ ಶಿವಸ್ಯ ಮೋಕ್ಷದತ್ವಾದಿಪರಮ್' 'ಜ್ಞಾತ್ವಾ ಶಿವಂ' ಇತ್ಯಾದಿ ವೇದವು ಶಿವನು ಮೋಕ್ಷವನ್ನು ಕೊಡುತ್ತಾನೆ, ಜನ್ಮಾದಿಗಳನ್ನು ಕೊಡುತ್ತಾನೆ ಇತ್ಯಾದಿಯಾಗಿ ಪ್ರತಿಪಾದಿಸುತ್ತದೆ' ಎಂದು.

ಇನ್ನು ಶೈವಾದ್ಯಾಗಮಗಳನ್ನೇ ಅಪ್ರಮಾಣವೆಂದು ಹೇಳಬಾರದು. ಏಕೆಂದರೆ ವ್ಯಾಖ್ಯೇಯವಾದ ವೇದವು ಪ್ರಮಾಣರೂಪವಾಗಿದೆ. ಇಂತಹ ವೇದದಿಂದ ಆಪಾತತಃ ತೋರುವ ಅರ್ಥಕ್ಕೆ ಅನುಸಾರಿಯಾದ ಅರ್ಥವನ್ನೇ ಶೈವಾದ್ಯಾಗಮಗಳಲ್ಲಿ ಹೇಳಿದ್ದಾರೆ. ಆದ್ದರಿಂದ ಅಪ್ರಾಮಾಣ್ಯ ಹೇಳಲು ಸಾಧ್ಯವಿಲ್ಲ. ಮಾನಾಂತರವಿರೋಧವಿದ್ದರೆ ಮಾತ್ರ ಅಪ್ರಾಮಾಣ್ಯ ಹೇಳಬೇಕು. ಮಾನಾಂತರವಿರೋಧವಿಲ್ಲದಿದ್ದರೆ ಪ್ರಾಮಾಣ್ಯವನ್ನೇ ಹೇಳಬೇಕು. ಪ್ರಾಮಾಣ್ಯಕ್ಕೆ ಮಾನಾಂತರಾವಿರೋಧವೆಂಬ ಹೇತು ಬಿಟ್ಟು ಇನ್ನೊಂದು ಹೇತು. ಬೇಕಾಗಿಲ್ಲ. ಶೈವಾದ್ಯಾಗಮಗಳು ವ್ಯಾಖ್ಯೇಯಕ್ಕೆ ಅನುಸಾರಿಯೂ ಮಾನಾಂತರಾವಿರೋಧಿಯೂ ಆಗಿರುವುದರಿಂದ ಪ್ರಾಮಾಣ್ಯ ಬಂದೇ ಬರುತ್ತದೆ.

ಮತ್ತು ಜಗತ್‌ಕಾರಣತ್ವ ಕೇವಲ ಸಚ್ಛಾಸ್ತ್ರಗಳಿಂದಲೆ ತಿಳಿಯುತ್ತದೆಂದು ಹಿಂದಿನ ಅಧಿಕರಣದಲ್ಲಿ ಹೇಳಿದಿರಿ. ಆದರಂತೆ ವೇದತಾತ್ಪರ್ಯವೂ ಸಚ್ಛಾಸ್ತ್ರಗಳಿಂದಷ್ಟೇ

ತಿಳಿಯುತ್ತದೆಂದು ನಿಮಗೆ ಹೇಳಲಾಗದು. ಹಾಗೆ ಹೇಳಿದರೆ ಆತ್ಮಾಶ್ರಯ ಬರುತ್ತದೆ - 'ಈ ವಾಕ್ಯಕ್ಕೆ ಇಲ್ಲಿ ತಾತ್ಪರ್ಯ ಈ ವಾಕ್ಯದಿಂದ' ಎಂದು ಹೇಳಿದಂತಾಗಿ ಆತ್ಮಾಶ್ರಯ ಬರುತ್ತದೆ. ಒಂದು ವೇಳೆ ವೇದತಾತ್ಪರ್ಯವೂ ಶಾಸ್ತ್ರಗಮ್ಯವಾಗಿದ್ದರೆ ಶೈವಾದ್ಯಾಗಮಗಳು ತಾತ್ಪರ್ಯಾನಿಶ್ಚಾಯಕಗಳಾಗುತ್ತಿದ್ದವು. ಆದರೆ ಹಾಗಿಲ್ಲ.

'ಸರ್ವೇ ವೇದಾ ಯತ್ಪದಮಾಮನಂತಿ' ಇತ್ಯಾದಿ ಶ್ರುತಿಯ ಆಧಾರದಿಂದ ವಿಷ್ಣುವಿನಲ್ಲೇ ವೇದತಾತ್ಪರ್ಯವೆಂದು ನಿಶ್ಚಯಿಸಬಹುದಲ್ಲವೆ? ಎಂದು ಪ್ರಶ್ನಿಸಬಾರದು. ವೇದವು ವಿಷ್ಣುವಿನಲ್ಲಿ ತಾತ್ಪರ್ಯವೆಂದು ಹೇಳುತ್ತಲೇ ಇಲ್ಲ. 'ಯತ್' ಎಂದಷ್ಟೇ ಹೇಳಿದೆ. 'ಯತ್' ಶಬ್ದದಿಂದ ವಾಚ್ಯನಾದವನು ಶಿವನೇ ಹೊರತು ವಿಷ್ಣುವಲ್ಲವೆಂದು ಶೈವಾದ್ಯಾಗಮಗಳಲ್ಲಿ ವ್ಯಾಖ್ಯಾನ ಮಾಡಿದ್ದಾರೆ.

ಶೈವಾದ್ಯಾಗಮಗಳ ಸಮಕಕ್ಷ್ಯೆಯಲ್ಲಿರುವ ಪಂಚರಾತ್ರಾದಿ ಆಗಮಗಳಿಂದ ವಿಷ್ಣುವಿನಲ್ಲೂ ವೇದತಾತ್ಪರ್ಯವನ್ನು ನಿಶ್ಚಯಿಸಬಹುದಲ್ಲವೆ? ಎಂದರೆ ಆದರೂ ಸಿದ್ಧಾಂತಿಗೆ ಅಭಿಪ್ರೇತವಾದ ವಿಷ್ಣು ಒಬ್ಬನೇ ಜಗತ್‌ಕಾರಣನೆಂಬ ಅವಧಾರಣ ಸಿದ್ಧವಾಗುವುದಿಲ್ಲ. ಆದ್ದರಿಂದ ಶಿವಾದಿಗಳೂ ಜಗತ್‌ಕಾರಣರಾಗುತ್ತಾರೆಂಬ ಪೂರ್ವಪಕ್ಷ ಸಿದ್ಧವಾಯಿತು. ಇದರಂತೆ ಹಿರಣ್ಯಗರ್ಭ, ಸೂರ್ಯ, ಶಕ್ತಿ ಮೊದಲಾದವರೂ ಸಹ ಜಗತ್ಕಾರಣರಾಗಿದ್ದಾರೆಂದು ಪ್ರತ್ಯೇಕವಾಗಿ ಪೂರ್ವಪಕ್ಷ ಮಾಡಿಕೊಳ್ಳಬೇಕು.

## ಹಿಂದಿನ ಅಧಿಕರಣದಿಂದ ಗತಾರ್ಥತ್ವವಿಲ್ಲ

**ಭಾವದೀಪಃ –** **पूर्वेण गतार्थत्वं शङ्कते – न चेति ।।** 'कुवर्त्म तत्' इत्याद्युक्तदिशेति भावः । सध्रीचीनस्य = सहितस्य । 'अतएव पाशुपताद्युदितत्वहेतोर्दार्ढ्यापादकत्वात् भाष्ये आपातप्रतीतेः स्वशब्देनोक्तिः' इति भावः । सिद्धान्तसुधायां प्रत्येकमेव हेतुद्वयपरतयोक्तम् – **पाशुपतादीति ।।** 'पाशुपतादावुक्तिप्रतीतिभ्याम्' इत्यर्थः । 'तथा च' इत्यनन्तरं 'पञ्चरात्राद्युक्तिप्रतीतिभ्यां विष्णोरिव' इति योज्यम् । तदुक्तं न्यायविवरणटीकायाम् – यथाहि 'वेदैश्च सर्वैरहमेव वेद्यः' इत्यादि शास्त्रबलाद् वेदादिकं विष्णोः प्रतिपादकमिष्यते - इति । 'अन्येषामपि'

**इत्यनेन भाष्ये 'इतरेषामपि' इति योज्यमिति सूचितम् । कारणत्वेनेति ।। 'कालादिभेदेनाविरुद्धेन' इति भावः । न विष्णोरेवेति ।। एतेन न्यायविवरणे 'तथा च रुद्रादौ सममेतल्लक्षणम्' इति पूर्वन्यायविवरणवाक्यमनुवर्त्य योज्यमिति सूचितम् । एतच्च सौत्रावधारणार्थं तुशब्दव्यावर्त्यम् । 'प्रतीयमानम्' इति भाष्यमन्यत्रोक्तस्याप्युपलक्षणं मत्वाह – पाशुपतादाविति ।। उक्तरीत्येति ।। 'कुर्वर्त्म तत्' इत्याद्युक्तरीत्येत्यर्थः ।**

''ನ ಚ'' ಇತ್ಯಾದಿವಾಕ್ಯದಿಂದ ಇಲ್ಲಿ ಹೇಳಿದ ವಿಷಯವು ಹಿಂದಿನ ಅಧಿಕರಣದಲ್ಲೇ ಹೇಳಲಾಗಿದೆ ಎಂಬುದಾಗಿ ಗತಾರ್ಥತ್ವವನ್ನು ಶಂಕೆ ಮಾಡುತ್ತಿದ್ದಾರೆ. 'ಕುವರ್ತ್ಮ ತತ್' ಎಂಬುದಾಗಿ ಹಿಂದಿನ ಭಾಷ್ಯದಲ್ಲಿ ಹೇಳಿರುವುದರಿಂದ ಈ ಶಂಕೆಗೆ ಅವಕಾಶವಿದೆ. 'ಸದ್ರೀಚೀನಸ್ಯ'' ಎಂಬ ಪದಕ್ಕೆ 'ಸಹಿತವಾದ' ಎಂಬುದಾಗಿ ಅರ್ಥ. ಆದ್ದರಿಂದಲೇ ಪಾಶುಪತಾದಿ ಉದಿತತ್ವರೂಪವಾದ ಹೇತುವಿಗೆ ಆಪಾತಪ್ರತೀತಿಯು ದಾರ್ಢ್ಯವನ್ನು ತಂದುಕೊಡುವುದರಿಂದ ಭಾಷ್ಯದಲ್ಲಿ ಆಪಾತಪ್ರತೀತಿಯನ್ನು ಅದೇ ಶಬ್ದದಿಂದ ಹೇಳಿದ್ದಾರೆ. ಸಿದ್ಧಾಂತಸುಧೆಯಲ್ಲಿ ಈ ಎರಡನ್ನೂ ಕೂಡ ಪ್ರತ್ಯೇಕವಾಗಿ ಎರಡು ಹೇತುಗಳು ಎಂಬಂತೆ ವಿವರಿಸಿದ್ದಾರೆ. ''ಪಾಶುಪತಾದಿ'' ಎಂಬ ಪದಕ್ಕೆ 'ಪಾಶುಪತಾದಿಶಾಸ್ತ್ರಗಳಲ್ಲಿ ಹೇಳಿದ ಉಕ್ತಿ, ಮತ್ತು ಆಪಾತಪ್ರತೀತಿ ಈ ಎರಡರಿಂದ' ಎಂಬುದಾಗಿ ಅರ್ಥ. ''ತಥಾ ಚ'' ಎಂಬ ಪದದ ನಂತರ 'ಪಂಚರಾತ್ರಾದಿಯುಕ್ತಿಗಳಿಂದ ಮತ್ತು ಪ್ರತೀತಿಯಿಂದ ವಿಷ್ಣುವಿಗೇ ಜಗತ್ಕಾರಣತ್ವವನ್ನು ಹೇಳಿರುವಂತೆ' ಎಂಬ ಅಂಶವನ್ನು ಸೇರಿಸಿಕೊಳ್ಳಬೇಕು. ಇದನ್ನು ನ್ಯಾಯವಿವರಣ ಟೀಕೆಯಲ್ಲಿ 'ಯಥಾಹಿ ವೇದೈಶ್ಚ ಸರ್ವೈರಹಮೇವವೇದ್ಯಃ ಇತ್ಯಾದಿ ಶಾಸ್ತ್ರಬಲಾದ್ ವೇದಾದಿಕಂ ವಿಷ್ಣೋಃ ಪ್ರತಿಪಾದಕಮಿಷ್ಯತೇ'' ('ವೇದೈಶ್ಚ ಸರ್ವೈರಹಮೇವ ವೇದ್ಯಃ' ಇತ್ಯಾದಿ ಶಾಸ್ತ್ರಬಲದಿಂದ 'ವೇದಾದಿಗಳು ವಿಷ್ಣುವನ್ನು ಪ್ರತಿಪಾದಿಸುತ್ತವೆ' ಎಂಬುದನ್ನು ಹೇಗೆ ಹೇಳುತ್ತೀರೋ) ಎಂಬುದಾಗಿ ವಿವರಿಸಿದ್ದಾರೆ. ''ಅನ್ಯೇಷಾಮಪಿ'' ಎಂಬ ಅಂಶದಿಂದ ಭಾಷ್ಯದಲ್ಲಿ 'ಇತರೇಷಾಮಪಿ' ಎಂಬುದಾಗಿ ಅಪಿಶಬ್ದವನ್ನು ಸೇರಿಸಿಕೊಳ್ಳಬೇಕು ಎಂಬುದನ್ನು ಸೂಚಿಸಿದ್ದಾರೆ. ''ಕಾರಣತ್ವೇನ'' ಎಂಬ ಅಂಶದಿಂದ 'ಕಾಲಾದಿಭೇದದಿಂದ ಅವಿರುದ್ಧವಾದ ಕಾರಣತ್ವದಿಂದ' ಎಂಬ ಅರ್ಥವು ಸಿದ್ಧವಾಗುತ್ತದೆ.

''ನ ವಿಷ್ಣೋರೇವ'' ಎಂಬ ಅಂಶದಿಂದ ನ್ಯಾಯವಿವರಣದಲ್ಲಿ ಹೇಳಿದಂತೆ 'ನ ಚ ರುದ್ರಾದೌ ಸಮಮೇತಲ್ಲಕ್ಷಣಮ್' ಎಂಬುದಾಗಿ ಹಿಂದಿನ ಅಧಿಕರಣದ ನ್ಯಾಯವಿವರಣದ ವಾಕ್ಯವನ್ನು ಇಲ್ಲಿ ಅನುವೃತ್ತಿ ಮಾಡಿಕೊಂಡು ಅರ್ಥಯೋಜನೆ ಮಾಡಬೇಕು ಎಂಬುದನ್ನು ಸೂಚಿಸಿದ್ದಾರೆ. ಇದು ಸೂತ್ರದಲ್ಲಿ ಹೇಳಿದ ಅವಧಾರಣಾರ್ಥವನ್ನು ನೀಡುವ 'ತು' ಎಂಬ ಶಬ್ದದಿಂದ ವ್ಯಾವೃತ್ತಿಗೊಳಿಸಬೇಕಾದ ವಿಷಯವಾಗಿದೆ. 'ಪ್ರತೀಯಮಾನಮ್' ಎಂಬುದಾಗಿ ಭಾಷ್ಯದಲ್ಲಿ ಹೇಳಿದ ವಿಷಯವು ಬೇರೆಕಡೆಯಲ್ಲಿ ಹೇಳಿರುವ ವಿಷಯಕ್ಕೆ ಉಪಲಕ್ಷಣವಾಗಿದೆ ಎಂಬ ಅಭಿಪ್ರಾಯದಿಂದ ''ಪಾಶುಪತಾದೌ'' ಇತ್ಯಾದಿ ವಿವರಣೆಯನ್ನು ನೀಡಿದ್ದಾರೆ. ''ಉಕ್ತರೀತ್ಯಾ'' ಎಂಬುದಕ್ಕೆ 'ಕುವರ್ತ್ಮ ತತ್' ಇತ್ಯಾದಿಗಳಿಂದ ಹೇಳಿದಂತೆ - ಎಂಬುದಾಗಿ ಅರ್ಥ.

ವಿಶೇಷ ವಿಚಾರ - ರುದ್ರಾದಿಗಳು ಶಾಸ್ತ್ರಪ್ರತಿಪಾದ್ಯರಾಗಿದ್ದಾರೆನ್ನಲು ಪಾಶುಪತಶಾಸ್ತ್ರೋದಿತತ್ವ ಹಿರಣ್ಯಗರ್ಭಶಾಸ್ತ್ರೋದಿತತ್ವ ಮೊದಲಾದವು ಕಾರಣವಲ್ಲ; ಹೊರತಾಗಿ ಉಪಕ್ರಮಾದಿ ಷಡ್ವಿಧತಾತ್ಪರ್ಯಲಿಂಗಗಳಿಂದ ಸಿದ್ಧವಾದ ಸಮನ್ವಯವೇ ಕಾರಣವಾಗಿದೆ.

ಈ ಅಧಿಕರಣದಲ್ಲಿ ಯಾವರೀತಿಯಾಗಿ ಜಿಜ್ಞಾಸಾಧಿಕರಣದಲ್ಲಿ ಪೂರ್ವಪಕ್ಷನ್ಯಾಯ ಸಿದ್ಧಾಂತನ್ಯಾಯಗಳನ್ನು ಪ್ರತ್ಯೇಕವಾಗಿ ವಿವರಿಸಿದ್ದಾರೋ ಆದರಂತೆ ಇಲ್ಲಿಯೂ ವಿವರಿಸಿದ್ದಾರೆ. ಕೆಲವೊಮ್ಮೆ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಪೂರ್ವಪಕ್ಷದ ಮಾತಿನಿಂದ ಪೂರ್ವಪಕ್ಷನ್ಯಾಯವನ್ನು ವಿವರಿಸುವ ಮೂಲಕ ಸಿದ್ಧಾಂತನ್ಯಾಯವನ್ನು ವಿವರಿಸುತ್ತಾರೆ. ಇದನ್ನು ಜನ್ಮಾಧಿಕರಣದಲ್ಲಿ ಕಾಣಬಹುದು. ಕೆಲವೆಡೆ ಸಿದ್ಧಾಂತದ ಮಾತಿನಿಂದಲೇ ಸಿದ್ಧಾಂತದ ನ್ಯಾಯವನ್ನು ವಿವರಿಸುತ್ತಾರೆ. ಇದಕ್ಕೆ ಸಮನ್ವಯಾಧಿಕರಣವೇ ಉದಾಹರಣೆಯಾಗಿದೆ. ಅದು ಹೀಗೆ. ಜಗಜ್ಜನ್ಮಾದಿಕಾರಣನೆಂಬುದಾಗಿ ಶಾಸ್ತ್ರವು ರುದ್ರಾದಿಗಳನ್ನು ಪ್ರತಿಪಾದಿಸುತ್ತಿದೆ. ಪಾಶುಪತಾದಿಶಾಸ್ತ್ರಗಳಲ್ಲಿ ಹಾಗೆಯೇ ಸಮರ್ಥಿಸಿದ್ದಾರೆ. ಯಾವರೀತಿಯಾಗಿ 'ವೇದೈಶ್ಚ ಸರ್ವೈರಹಮೇವ ವೇದ್ಯಃ' ಎಂಬ ಗೀತಾಮಾತಿನಂತೆ ವಿಷ್ಣುವಿಗೆ ವೇದಪ್ರತಿಪಾದ್ಯತ್ವವನ್ನು ಅಂಗೀಕರಿಸಲಾಗುತ್ತದೋ ಆದರಂತೆ. (ಈ ವಿಷಯದಲ್ಲಿ ವೇದೈಶ್ಚ ಸರ್ವೈರಹಮೇವ ವೇದ್ಯಃ' ಎಂಬ ಮಾತಿನ ಬಲದಿಂದ ವಿಷ್ಣುವಿಗೆ ವೇದಪ್ರತಿಪಾದ್ಯತ್ವವನ್ನು ಒಪ್ಪಿರುವುದು ದೃಷ್ಟಾಂತವಾಗಿದೆ). ಪಾಶುಪತಾದಿ ಶಾಸ್ತ್ರಗಳ ಮಾತುಗಳನ್ನು ವಿಶ್ವಾಸಕ್ಕೆ ಅನರ್ಹ ಎನ್ನಬಾರದು. ನಮಗೆ ಬರುವ ಜ್ಞಾನವೇ ಈ ವಿಷಯದಲ್ಲಿ ಸಂವಾದಿಯಾಗಿದೆ. ಆದ್ದರಿಂದ ವಿಶ್ವಾಸ

ಮಾಡುವುದು ತಪ್ಪಲ್ಲ. ಯಾರಿಗೆ ಪದಪದಾರ್ಥಗಳ ಸಂಬಂಧಜ್ಞಾನವಿರುತ್ತದೋ ಅಂತಹವನಿಗೆ ರುದ್ರನು ಜಗತ್ಕಾರಣನೆಂಬ ಜ್ಞಾನವು ಬಂದೇ ಬರುತ್ತದೆ. 'ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ' 'ಹಿರಣ್ಯಗರ್ಭಃ ಸಮವರ್ತತಾತ್ರೇ' ಇತ್ಯಾದಿ ವಾಕ್ಯಗಳನ್ನು ನೋಡಿದಾಗ ರುದ್ರಾದಿಗಳು ಜಗತ್ಕಾರಣರೆಂದು ತಿಳಿಯುತ್ತದೆ. ಇಷ್ಟು ಪೂರ್ವಪಕ್ಷ. ಇದನ್ನು 'ನಚ ಪಾಶುಪತ' ಎಂಬ ಮಾತಿನಿಂದ ನಿರಾಕರಿಸುತ್ತಿದ್ದಾರೆ.

## ಭಾಷ್ಯದ ವಾಕ್ಯಕ್ಕೆ ಎರಡು ಬಗೆಯ ಯೋಜನೆ

**ಭಾವದೀಪಃ –** 'ಅಜ್ಞಾನಾಮ್' ಇತ್ಯುಕ್ತಿಲಬ್ಧಹೇತುಮಾಹ – **ಪ್ರತೀತೇರಿತಿ ।।** ಅನೇನ ಭಾಷ್ಯಂ ದ್ವೇಧಾ ಯೋಜಿತಮ್ । ಆಕ್ಷೇಪಾರ್ಥಸ್ಯ ಪ್ರಕೃತೇऽನನ್ವಯಾದಾಹ – **ಪೃಚ್ಛತೀತಿ ।। ಪ್ರತೀಯಮಾನಮಪೀತಿ ।।** ಪ್ರಾಗುಪಲಕ್ಷಿತಂ ಪಾಶುಪತಾದ್ಯುಕ್ತಮಪೀತ್ಯೇತದಪ್ಯತ್ರ ಯೋಜ್ಯಮ್ । **ವ್ಯಾಚಷ್ಟೇ ಇತಿ ।।** ಅನ್ವೀಯನ್ತೇ 'ಶಕ್ತಿತಾತ್ಪರ್ಯಗೋಚರೇಣ ಸಮ್ಬಧ್ಯನ್ತೇ ತಥಾ ಜ್ಞಾಯನ್ತ' ಇತಿ ಯಾವತ್ । 'ವಾಕ್ಯಾನ್ಯೇತೇನ' ಇತಿ ವ್ಯುತ್ಪತ್ತ್ಯೇತಿ ಭಾವಃ ।

''ಪ್ರತೀತೇಃ'' ಇತ್ಯಾದಿ ವಾಕ್ಯದಿಂದ ಭಾಷ್ಯದಲ್ಲಿ ಹೇಳಿದ 'ಅಜ್ಞಾನಾಮ್' ಎಂಬ ಪದದಿಂದ ಸಿಕ್ಕಿದ ಹೇತುವನ್ನು ತಿಳಿಸುತ್ತಿದ್ದಾರೆ. ಇದರಿಂದ ಭಾಷ್ಯವನ್ನು ಎರಡು ರೀತಿಯಲ್ಲಿ ಯೋಜನೆ ಮಾಡಿದಂತೆ ಆಗುತ್ತದೆ. ಆಕ್ಷೇಪದ ಅರ್ಥವು ಪ್ರಕೃತದಲ್ಲಿ ಅನ್ವಯವನ್ನು ಹೊಂದದೇ ಇರುವುದರಿಂದ ಅದು ಅನ್ವಯವನ್ನು ಪಡೆಯುವಂತೆ ''ಪೃಚ್ಛತಿ'' ಎಂಬುದಾಗಿ ಹೇಳುತ್ತಿದ್ದಾರೆ. ''ಪ್ರತೀಯಮಾನಮಪಿ'' ಎಂಬಲ್ಲಿ ಹಿಂದೆ ಉಪಲಕ್ಷಣಯಾ ವಿವಕ್ಷಿಸಿದ ''ಪಾಶುಪತಾದ್ಯುಕ್ತಮಪಿ'' ಎಂಬ ಅಂಶವನ್ನು ಸೇರಿಸಿಕೊಳ್ಳಬೇಕು. ''ವ್ಯಾಚಷ್ಟೇ'' ಎಂಬ ಅಂಶದಿಂದ 'ಅನ್ವೀಯಂತೇ ವಾಕ್ಯಾನಿ ಏತೇನ' ಎಂಬುದಾಗಿ ಅನ್ವಯಶಬ್ದಕ್ಕೆ ವ್ಯುತ್ಪತ್ತಿಯನ್ನು ಇಟ್ಟುಕೊಳ್ಳಬೇಕು. ಇಲ್ಲಿ 'ಅನ್ವೀಯಂತೇ' ಎಂಬುದಕ್ಕೆ ಶಕ್ತಿ ಮತ್ತು ತಾತ್ಪರ್ಯದಿಂದ ಸಂಬಂಧವನ್ನು ಪಡೆಯುತ್ತದೆ' ಎಂದರೆ ಶಕ್ತಿತಾತ್ಪರ್ಯವುಳ್ಳವುಗಳಾಗಿ ತಿಳಿಯಲ್ಪಡುತ್ತವೆ ಎಂಬುದಾಗಿ ಅರ್ಥ.

ಒಟ್ಟು ಅಭಿಪ್ರಾಯ - ಹಿಂದೆ ಹೇಳಿದ ಪೂರ್ವಪಕ್ಷಕ್ಕೆ ಸಿದ್ಧಾಂತ ಹೀಗಿದೆ- ಶೈವಾಗಮಗಳಿಂದ ಶಾಸ್ತ್ರದ ತಾತ್ಪರ್ಯನಿಶ್ಚಯ ಮಾಡುತ್ತವೆಂದು ಹೇಳಿದ್ದು ತಪ್ಪು. ಶೈವಾಗಮಗಳ ತಾತ್ಪರ್ಯವನ್ನು ಹೇಗೆ ನಿಶ್ಚಯ ಮಾಡುತ್ತೀರಿ? ಅವುಗಳ

ತಾತ್ಪರ್ಯ ನಿಶ್ಚಯವಾಗಿಲ್ಲವಾದರೆ ಅಂತಹವುಗಳಿಂದ ಶಾಸ್ತ್ರದ ತಾತ್ಪರ್ಯ ನಿಶ್ಚಯ ಮಾಡುವುದಾದರೂ ಹೇಗೆ? ಆದ್ದರಿಂದ ಬೇರೆ ದಾರಿ ಇಲ್ಲದೆ ಉಪಕ್ರಮಾದಿಗಳಿಂದಲೇ ಶೈವಾಗಮಗಳ ತಾತ್ಪರ್ಯನಿಶ್ಚಯ ಮಾಡುತ್ತೇವೆಂದು ಹೇಳಬೇಕು. ಹೀಗೆ ಹೇಳಿದರೆ ಆ ಉಪಕ್ರಮಾದಿಗಳಿಂದಲೇ ಶಾಸ್ತ್ರದ ತಾತ್ಪರ್ಯನಿರ್ಣಯ ಮಾಡಲು ಬರುತ್ತಿರುವಾಗ ಶೈವಾಗಮಗಳಿಂದ ತಾತ್ಪರ್ಯ ನಿಶ್ಚಯ ಮಾಡುತ್ತೇವೆಂಬುದು ಸರಿಯಲ್ಲ. ನಾವು ಉಪಕ್ರಮಾದಿಗಳಿಂದ ಶೈವಾಗಮಗಳ ತಾತ್ಪರ್ಯ ನಿಶ್ಚಯ ಮಾಡುವುದಿಲ್ಲ. ಹೊರತಾಗಿ ಗ್ರಂಥಕಾರರ ಉಪದೇಶದಿಂದ. ಅಥವಾ ವ್ಯಾಖ್ಯಾನದಿಂದ ನಿಶ್ಚಯಿಸುತ್ತೇವೆನ್ನುವುದೂ ಸರಿಯಲ್ಲ ಒಂದು ವೇಳೆ. ಯಾವುದೇ ವ್ಯಾಖ್ಯಾನವಿಲ್ಲದ ಗ್ರಂಥ, ಅಥವಾ ಗ್ರಂಥವನ್ನು ರಚಿಸಿ ತಾತ್ಪರ್ಯವನ್ನು ತಿಳಿಸದೆ ಮೃತನಾದವನ ಗ್ರಂಥವನ್ನು ನೋಡಿದಾಗ ವ್ಯುತ್ಪನ್ನನಿಗೆ ತಾತ್ಪರ್ಯಜ್ಞಾನ ಬರುತ್ತದೆ. ಅಲ್ಲಿ ಬೇರೇನೂ ಹೇಳಲು ಬರುವುದಿಲ್ಲವಾದ್ದರಿಂದ ಉಪಕ್ರಮಾದಿಗಳೇ ಎಂದು ಹೇಳಬೇಕು. ಹಾಗಾಗಿ ಎಲ್ಲಾ ಕಡೆಯಲ್ಲೂ ಅದೇ ಕಾರಣವೆಂದು ಹೇಳಲು ಬರುವಾಗ ಉಪಕ್ರಮಾದಿಗಳು ಕಾರಣಗಳು ಅಲ್ಲ ಎನ್ನುವುದು ಸರಿಯಲ್ಲ.

## ಷಡ್ವಿಧ ತಾತ್ಪರ್ಯಲಿಂಗಗಳು

**ಬ್ರಹ್ಮಸೂತ್ರಭಾಷ್ಯಮ್ –**

**ಉಕ್ತಂ ಚ ಬೃಹತ್ ಸಂಹಿತಾಯಾಮ್ –**

**ಉಪಕ್ರಮೋಪಸಂಹಾರಾವಭ್ಯಾಸೋऽಪೂರ್ವತಾ ಫಲಮ್ ।**
**ಅರ್ಥವಾದೋಪಪತ್ತೀ ಚ ಲಿಙ್ಗಂ ತಾತ್ಪರ್ಯನಿರ್ಣಯೇ ।। ಇತಿ**

**ಉಪಕ್ರಮಾದಿತಾತ್ಪರ್ಯಲಿಙ್ಗೈಃ ಸಮ್ಯಙ್ನಿರೂಪ್ಯಮಾಣೇ ತದೇವ ಶಾಸ್ತ್ರಗಮ್ಯಮ್ ।**

**'ಮಾಂ ವಿಧತ್ತೇऽಭಿಧತ್ತೇ ಮಾಂ ವಿಕಲ್ಪ್ಯೋऽಪೋಹ್ಯ ಇತ್ಯಹಮ್ ।**
**ಇತ್ಯಸ್ಯಾ ಹೃದಯಂ ಸಾಕ್ಷಾನ್ನಾನ್ಯೋ ಮದ್ವೇದ ಕಶ್ಚನ'**

**ಇತಿ ಭಾಗವತೇ ।।೪।।**

**।। ಇತಿ ಸಮನ್ವಯಾಧಿಕರಣಮ್ ।।೪।।**

ಸಮನ್ವಯಾಧಿಕರಣ (೧-೧-೪)

ಅನುವಾದ - ಉಪಕ್ರಮಾದಿಲಿಂಗಗಳೇ ಅನ್ವಯ ಎನಿಸುತ್ತವೆ. ಈ ವಿಷಯದಲ್ಲಿ ಬೃಹತ್ಸಂಹಿತೆಯ ವಚನ ಹೀಗಿದೆ - ''ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ, ಉಪಪತ್ತಿ- ಈ ಏಳು ತಾತ್ಪರ್ಯನಿರ್ಣಾಯಕವಾದ ಲಿಂಗಗಳು'' ಎಂದು.

ಉಪಕ್ರಮಾದಿತಾತ್ಪರ್ಯಲಿಂಗಗಳಿಂದ ಯಾವುದು ಬಲಿಷ್ಠವಾಗಿ ನಿರ್ಣಯಿಸಲ್ಪಡುತ್ತದೋ ಆ ವಸ್ತುವೇ ಪರಬ್ರಹ್ಮನು. ಜಗತ್ಕಾರಣತ್ವೇನ ಶಾಸ್ತ್ರಪ್ರತಿಪಾದ್ಯನು.

ಭಾಗವತದಲ್ಲಿ ಹೀಗಿದೆ - ''ಕರ್ಮಪ್ರತಿಪಾದಕವಾದ ಶ್ರುತಿಗಳು ನನ್ನನ್ನು ಉದ್ದೇಶಿಸಿ ಹೊರಟಿವೆ. ಇಂದ್ರರುದ್ರಾದಿಶಬ್ದಗಳು ನನ್ನನ್ನೇ ಪ್ರತಿಪಾದಿಸುತ್ತವೆ. 'ಚತ್ವಾರಿಶೃಂಗಾ' ಇತ್ಯಾದಿ ವೇದವಾಕ್ಯಗಳು ನನ್ನ ಬಹುರೂಪಗಳನ್ನೇ ವರ್ಣಿಸುತ್ತಿವೆ. ನಿಷೇಧವಾಕ್ಯಗಳು ನನಗೆ ಅಪ್ರಿಯವಾದದ್ದನ್ನು ಮಾಡಬಾರದು ಎನ್ನುತ್ತಿವೆ. ಹೀಗೆ ವೇದದ ಆಂತರ್ಯವನ್ನು ನನ್ನನ್ನು ಬಿಟ್ಟು ಬೇರೆ ಯಾರೂ ಸಹ ತಿಳಿಯಲಾರರು'' ಎಂದು. ಇದು ಶ್ರೀಕೃಷ್ಣನ ಮಾತು.

॥ ಇಲ್ಲಿಗೆ ಶ್ರೀಮದಾಚಾರ್ಯರು ರಚಿಸಿದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ
ಸಮನ್ವಯಾಧಿಕರಣವು ಸಮಾಪ್ತವಾಯಿತು ॥

ಪ್ರತಿಪದಾರ್ಥ -- ಅನ್ವಯಶಬ್ದಕ್ಕೆ ಉಪಕ್ರಮಾದಿ ಲಿಂಗಗಳೆಂದರ್ಥ. ಆ ಲಿಂಗಗಳು ಯಾವುದೆಂದು ಬೃಹತ್ಸಂಹಿತೆಯಲ್ಲಿ ಹೇಳಿದ್ದಾರೆ.

ಬೃಹತ್ಸಂಹಿತಾಯಾಂ = ಬೃಹತ್ಸಂಹಿತೆಯೆಂಬ ಗ್ರಂಥದಲ್ಲಿ, ಉಕ್ತಂ ಚ = ಹೇಳಲ್ಪಟ್ಟಿದೆ. ಉಪಕ್ರಮಃ = ಪ್ರಕರಣದ ಪ್ರಾರಂಭವು, ಉಪಸಂಹಾರಃ = ಪ್ರಕರಣದ ಮುಕ್ತಾಯವು, ಅಭ್ಯಾಸಃ = ಒಂದೇ ವಿಷಯವನ್ನು ಅನೇಕಬಾರಿ ಹೇಳುವಿಕೆಯು, ಅಪೂರ್ವತಾ = ಬೇರೆ ಪ್ರಮಾಣಗಳಿಂದ ಸಿದ್ಧವಾಗದ ವಿಷಯವನ್ನು ಹೇಳುವಿಕೆಯು, ಫಲಮ್ = ಫಲವತ್ತಾದ ಅರ್ಥವನ್ನು ಪ್ರತಿಪಾದಿಸುವಿಕೆಯು, ಅರ್ಥವಾದಃ = ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪ ಮೊದಲಾದವು, ಉಪಪತ್ತಿಃ = ಯುಕ್ತಿ ಇವುಗಳು, ತಾತ್ಪರ್ಯನಿರ್ಣಯೇ = ಒಂದು ಪ್ರಕರಣದ ತಾತ್ಪರ್ಯವನ್ನು ನಿಶ್ಚಯಿಸಲು, ಲಿಂಗಮ್ = ಜ್ಞಾಪಕಗಳು; ಇತಿ = ಹೀಗೆ[೧].

(೧) कानि तान्युपपत्त्यादीनि ? क्व च लिङ्गानि ? इत्यत आह — उक्तं चेति ॥ उपपत्त्यादीत्यनुषज्यते । न केवलमुपपत्त्याद्युक्तं निर्दिष्टं, किन्तु तज्ज्ञाप्यं चोक्तमिति चार्थः । अस्मदुक्तमुपपत्त्यादिलिङ्गं बृहत्संहितायामप्युक्तमिति वा । किमुक्तमित्यतस्तत्

ಉಪಕ್ರಮಾದಿತಾತ್ಪರ್ಯಲಿಂಗೈಃ = ಉಪಕ್ರಮಾದಿತಾತ್ಪರ್ಯಲಿಂಗಗಳಿಂದ, ಯತ್ = ಯಾವುದು, ಸಮ್ಯಕ್ = ಚೆನ್ನಾಗಿ (ಬಲಿಷ್ಠವಾಗಿ), ನಿರೂಪ್ಯಮಾಣೇ = ಪ್ರತಿಪಾದಿಸಲ್ಪಡುವುದೋ, ತದೇವ = ಅದೇ, ಶಾಸ್ತ್ರಗಮ್ಯಮ್ = ಜಗತ್ಕಾರಣತ್ವೇನ ಶಾಸ್ತ್ರಪ್ರತಿಪಾದ್ಯನಾದ ಪರಬ್ರಹ್ಮನು(೧).

---

ಪಠತಿ – **ಉಪಕ್ರಮೇತಿ ।।** ಪ್ರಕರಣಾದಿರುಪಕ್ರಮಃ, ತದನ್ತ ಉಪಸಂಹಾರಃ । ಉಪಕ್ರಮೋಪಸಂಹಾರಶ್ಚ ತೌ ತಥೋಕ್ತೌ । ಅತ್ರೋಪಕ್ರಮೋಪಸಂಹಾರತದೈಕರೂಪ್ಯಾಭ್ಯಾಸಾಪೂರ್ವತಾಫಲಾರ್ಥವಾದಾಶ್ಚೇತಿ ಪ್ರಮಾಣಲಕ್ಷಣೋಕ್ತೇಃ ಪ್ರತ್ಯೇಕವಿವಕ್ಷಯಾ ವಿಶಕಲಿತಾವುಪಕ್ರಮೋಪಸಂಹಾರೌ ದ್ವೌ ಸಮುದಾಯವಿವಕ್ಷಯಾ ಉಭಯಾವಿರೋಧಲಕ್ಷಣಂ ಏಕಾರ್ಥತ್ವಲಕ್ಷಣಂ ವಾ ತದೈಕರೂಪ್ಯಮಪಿ ಪೃಥಕ್ ತಾತ್ಪರ್ಯಗ್ರಾಹಕಮನುಸನ್ಧೇಯಮ್ । ಅತ ಏವ ದ್ವಿವಚನಪ್ರಯೋಗಃ । ಏಕಪ್ರಕಾರಾಸಕೃದುಕ್ತಿರಭ್ಯಾಸಃ । ಪ್ರಾಚುರ್ಯೇಣ ಪ್ರಮಾಣಾನ್ತರಾಸಿದ್ಧಾರ್ಥಬೋಧಕತಾ ಅಪೂರ್ವತಾ । ಫಲವದರ್ಥಪ್ರತಿಪಾದಕಂ ಫಲಮ್ । ಸ್ತುತಿಃ, ನಿನ್ದಾ, ಏಕಕರ್ತೃಕೋಪಾಖ್ಯಾನರೂಪಾ ಪರಕೃತಿಃ, ಅನೇಕಕರ್ತೃಕೋಪಾಖ್ಯಾನರೂಪಃ ಪುರಾಕಲ್ಪಶ್ಚ, ಅರ್ಥವಾದಃ । ಉಪಪತ್ತಿಃ ಯುಕ್ತಿಃ । 'ತಾತ್ಪರ್ಯನಿರ್ಣಯೇ' ವಾಕ್ಯತಾತ್ಪರ್ಯನಿಶ್ಚಯೇ 'ಲಿಙ್ಗಂ' ಸಾಧನಮಿತ್ಯರ್ಥಃ । ಯದ್ವಾ – ನಿರ್ಣೇತವ್ಯೇ ತಾತ್ಪರ್ಯೇ ಸಾಧ್ಯೇ 'ಲಿಙ್ಗ' ಹೇತುರಿತ್ಯರ್ಥಃ । ಲಿಙ್ಗಮಿತ್ಯಸ್ಯ ಉಪಕ್ರಮಾದಿಪದೈಃ ಯಥಾಯೋಗ್ಯಂ ಪ್ರತ್ಯೇಕಂ ಸಮ್ಬನ್ಧಃ । ಸ್ಮೃತೇರುಪ-ಕ್ರಮಾದಿತ್ವೇऽಪಿ ವಿರೋಧೇ ಉತ್ತರೋತ್ತರಪ್ರಾಬಲ್ಯಸೂಚನಾಯ ಭಾಷ್ಯೇ ಉಪಪತ್ತ್ಯಾದೀತಿ ವ್ಯತ್ಯಸ್ಯೋಕ್ತಿಃ । ಸಾಮಾನ್ಯವಿಶೇಷಭಾವೇನ ಉಪಪತ್ತೇರುಪಕ್ರಮಾದಿಭ್ಯಃ ಪೃಥಗುಕ್ತಿಃ ।।

ಯದ್ವಾ - ಏತಚ್ಚೋಪಕ್ರಮಾದಿ ಸ್ವಾರ್ಥೇ ಶಬ್ದಾತ್ಮಕಮಪಿ ಇದಮೇತತ್ಪರಮ್ ಅಬಾಧೇ ಸತ್ಯೇತದುಪಕ್ರಮತ್ವಾದ್ ಇತ್ಯಾದಿರೂಪೇಣ ವಾಕ್ಯತಾತ್ಪರ್ಯೇ ಲಿಙ್ಗಂ ಚ ಭವತಿ । ಉಪಪತ್ತಿಸ್ತು ಯಥಾऽಗ್ರಾದಿರೂಪಸ್ವಾರ್ಥೇ ತಥಾ ತಾತ್ಪರ್ಯೇऽಪಿ ಅಯಮೇತತ್ತಾತ್ಪರ್ಯವಿಷಯಃ ಉಪಪನ್ನತ್ವಾದ್ ಇತಿ ಪ್ರಕಾರೇಣ ಲಿಙ್ಗರೂಪೇತಿ ಪೃಥಗುಕ್ತಿಃ ।।

(೧) ಸೂತ್ರಂ ಯೋಜಯತಿ - **ಉಪಕ್ರಮಾದೀತಿ ।।** 'ಶಾಸ್ತ್ರೇ' ಇತಿ ಶೇಷಃ । ಸಮಿತ್ಯಸ್ಯಾರ್ಥಃ ಸಮ್ಯಗಿತಿ ।। ಸರ್ವಸ್ಮಿನ್ನಿತ್ಯಪಿ ದ್ರಷ್ಟವ್ಯಮ್ । 'ನಿರೂಪ್ಯಮಾಣೇ' ಇತ್ಯನೇನ ಸಂಶಬ್ದಾರ್ಥಸ್ಯಾಧ್ಯಾಹೃತಕ್ರಿಯಯಾऽನ್ವಯೋ ದರ್ಶಿತಃ । ತುಶಬ್ದಸ್ಯಾರ್ಥ ಏವೇತಿ । 'ಶಾಸ್ತ್ರಯೋನಿ' ಇತ್ಯನುಷಕ್ತಪದಸ್ಯಾರ್ಥಃ ಶಾಸ್ತ್ರಗಮ್ಯಮಿತಿ । ತಥಾ ಚ ಯತोऽತ್ರಾನ್ವಯಪದೋಕ್ತೈಃ ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನಸಮಾಖ್ಯೋಪಕ್ರಮಾದಿಭಿಃ ಶಕ್ತಿತಾತ್ಪರ್ಯಲಿಙ್ಗೈಃ 'ಸಂ ಸಮ್ಯಕ್' ಬಲಾಬಲವಿಮರ್ಶಪೂರ್ವಕಂ 'ಸರ್ವಸ್ಮಿನ್' ಶಾಸ್ತ್ರೇ ಕ್ರಮಾದಿರೂಪೇ 'ನಿರೂಪ್ಯಮಾಣೇ' ವಿಚಾರ್ಯಮಾಣೇ ಏಕಾರ್ಥೇ ಶಕ್ತಿತಾತ್ಪರ್ಯರೂಪವ್ಯಾಪಕಧರ್ಮವತ್ತಯाऽವಗಮ್ಯಮಾನೇ 'ತದೇವ' ವಿಷ್ಣವಾಖ್ಯಂ ಬ್ರಹ್ಮೈವ 'ಶಾಸ್ತ್ರಗಮ್ಯಂ' ತತ್ಪ್ರಮಾಣಕಂ ಪ್ರತೀಯತೇ, ನ ರುದ್ರಾದಿ, ಅತोऽज್ಞಾನಾಂ ಪ್ರತೀಯಮಾನಮಪಿ ನೇತರೇಷಾಂ ಶಾಸ್ತ್ರಯೋನಿತ್ವಮಿತಿ ಯೋಜನಾ । ಲಿಙ್ಗೈರಿತಿ ತೃತೀಯಯಾ, ನಿರೂಪ್ಯಮಾಣೇ ಇತಿ ಸಪ್ತಮೀಪ್ರಯೋಗೇ ಚ ಉಪಕ್ರಮಾದಿಕಂ ತಾತ್ಪರ್ಯ-ಹೇತುಃ । ತಾತ್ಪರ್ಯಂ ಚ ಶಾಸ್ತ್ರಪ್ರಮಾಣಕತ್ವೇ ಹೇತುರಿತಿ ಸೂಚಿತಂ ಭವತಿ । ನ ಕೇವಲಮುಪಪತ್ತ್ಯಾದಿಕಂ ಸಮನ್ವಯಶಬ್ದಾರ್ಥಃ, ಕಿನ್ತು ತದ್ಧೇತುಕಃ ಶಾಸ್ತ್ರಜನ್ಯಪ್ರಮಾಗोचरತ್ವರೂಪಃ ಶಾಸ್ತ್ರಯೋನಿತ್ವೇ ಹೇತುಭೂತಃ । 'ತತ್ಪರತ್ವಸಮ್ಬನ್ಧोऽಪಿ' ಇತಿ ಸುಧೋಕ್ತೇಃ । ಅನೇನ 'ಸಮನ್ವಯಾತ್' ಸಾವಕಾಶತ್ವನಿರವಕಾಶತ್ವಾದಿನಾ

ಕರ್ಮಾದಿಗಳನ್ನು ವಿಧಿಸುವ ಶಾಸ್ತ್ರವು ಹೇಗೆ ಬ್ರಹ್ಮಪರವಾಗುತ್ತದೆ? ಎಂಬ ಪ್ರಶ್ನೆಗೆ ಶ್ರೀಕೃಷ್ಣನ ಮಾತಿನಿಂದಲೇ ಉತ್ತರಿಸುತ್ತಿದ್ದಾರೆ -

ಮಾಂ = ನನ್ನನ್ನೇ (ಶ್ರೀಕೃಷ್ಣನನ್ನೇ) ಉದ್ದೇಶಿಸಿ, ವಿಧತ್ತೇ = ಕರ್ಮಪ್ರತಿಪಾದಕಶ್ರುತಿಗಳು ಕರ್ಮವನ್ನು ವಿಧಾನ ಮಾಡುತ್ತಿವೆ; ಅಭಿಧತ್ತೇ = ಇಂದ್ರರುದ್ರಾದಿಶಬ್ದಗಳು ನನ್ನನ್ನೇ ಪ್ರತಿಪಾದಿಸುತ್ತಿವೆ, ವಿಕಲ್ಪ್ಯಃ = ಚತ್ವಾರಿಶೃಂಗಾ ಇತ್ಯಾದಿಶ್ರುತಿಗಳೂ ಸಹ ಹೇಳುತ್ತಿವೆ, ಅಪೋಹ್ಯಃ = 'ನ ಸುರಾಂ ಪಿಬೇತ್' ಇತ್ಯಾದಿ ನಿಷೇಧವಾಕ್ಯಗಳು ನನಗೆ ಅಪ್ರಿಯವಾದದ್ದನ್ನು ಪ್ರತಿಪಾದಿಸುವ ಮೂಲಕ ನಿಷೇಧರೂಪದಿಂದ ಪ್ರತಿಪಾದಿಸುತ್ತಿವೆ, ಇತಿ = ಹೀಗೆ, ಅಹಮೇವ = ನಾನೇ, ವೇದ = ಎಲ್ಲವನ್ನೂ ತಿಳಿದವನು, ಅನ್ಯಃ ಕಶ್ಚನ = ಮತ್ತೊಬ್ಬ ಬೇರೆ ಯಾರೂ ಸಹ, ಸಾಕ್ಷಾತ್ = ಚೆನ್ನಾಗಿ, ನ ವೇದ = ತಿಳಿದಿರುವುದಿಲ್ಲ ಹೀಗೆ, ಭಾಗವತೇ = ಶ್ರೀಮದ್ಭಾಗವತಗ್ರಂಥದಲ್ಲಿ ಜಗಜ್ಜನ್ಮಾದಿಕರ್ತೃತ್ವ ಮತ್ತು ಶಾಸ್ತ್ರಗಮ್ಯತ್ವಗಳು, ಹಿ = ಪ್ರಸಿದ್ಧವಾಗಿವೆ. ಆದ್ದರಿಂದ ಸಕಲಗುಣಪರಿಪೂರ್ಣನೂ ಜಗಜ್ಜನ್ಮಾದಿಕಾರಣನೂ ಸಕಲಶಾಸ್ತ್ರ-ಪ್ರತಿಪಾದ್ಯನೂ ಮಹಾವಿಷ್ಣುವೇ ಆಗಿದ್ದಾನೆ.

॥ ಇಲ್ಲಿಗೆ ಸಮನ್ವಯಾಧಿಕರಣದಲ್ಲಿ ಭಾಷ್ಯಾದೀಪಿಕಾನುಸಾರಿಯಾದ ಪ್ರತಿಪದಾರ್ಥವು ಮುಗಿಯಿತು ॥[೧]

---

बलाबलनिश्चयपुरस्सरम् अन्यतरबाधया वाक्यार्थविमर्शरूपसम्यग्विचारितत्वलक्षणसम्यक्त्व-युक्तादुपक्रमादिशक्तितात्पर्यलिङ्गसमुदायात् समन्वयात् सर्वशास्त्रस्य भगवत्येव सम्यग्वचनवृत्त्या शक्तितात्पर्याख्यसम्बन्धावगमात् तद्विष्ण्वाख्यं ब्रह्मैव जगत्कारणतया शास्त्रयोनि न रुद्रादीति 'समन्वयात्' इत्यस्याऽवृत्त्या सूत्रयोजना दर्शिता भवति ।।

(१) ननु कर्मविधानादिरूपशास्त्रस्य कथं ब्रह्मपरतेत्याशङ्कां भगवद्वाक्येन प्रतिषेधति – **मामिति** ।। यद्यपि भागवते 'इत्यस्या हृदयं लोके' इति पाठः, तथा पूर्वोत्तरार्धयोर्व्युत्क्रमेण पाठश्च दृश्यते । तथाऽप्याचार्योक्तेरन्यकल्पीयोऽयमित्यदोषः । एकादशस्कन्धे उद्धवं प्रति कृष्णवचनमेतत् । अत्रास्मच्छब्देन कृष्ण उच्यते । तथा च 'वसन्ते वसन्ते' इत्यादि कर्मविधात्री श्रुतिः 'माम्' उद्दिश्यैव मत्पूजात्वेन कर्म विधत्ते । इन्द्राद्यभिधात्री 'माममिधत्ते' मद्गुणानैश्वर्यादीनभिधत्ते । 'अहं विकल्प्यः' कल्पनं विधानम् ।।

तथा च -

'चत्वारि वाक् परिमिता पदानि तानि विदुर्ब्राह्मणा ये मनीषिणः ।
गुहा त्रीणि निहिता नेङ्गयन्ति तुरीयं वाचो मनुष्या वदन्ति ।।'

(ऋ. १-१६४-४५) इति श्रुत्या या वाग् वक्तृत्वान्निमित्ताद् वाक्शब्दितो हरिः तस्या यानि स्थानापेक्षया 'परिमितानि' परिच्छिन्नानि 'चत्वारि पदानि' वासुदेवादिरूपाणि तानि ये मनीषिणः ब्राह्मणाः त एव विदुः । तत्र वाचो हृदयगुहायां निहितानि वासुदेवादित्रीणि रूपाणि 'मनुष्याः' साधारणाः 'नेङ्गयन्ति' न जानन्ति । 'तुरीयम्' अनिरुद्धाख्यं तु 'वदन्ति' जानन्तीत्यवंरूपेण अहमेव चतुष्ट्यसङ्ख्याविशिष्टवासुदेवादि-विविधरूपतया बहुत्वेन विधेय इत्यर्थः । 'अहमपोह्यः' 'न सुरां पिबेत्' (मनु. ११-९४) इत्यादिवाक्येनाप्रियादिति शेषः। तथा च 'निषेधबुद्धिविषयमप्रियं हि हरेः स्मृतम्' इति भागवततात्पर्योक्तेः सुरापानादिकं मदप्रीतिसाधनत्वान्निषिध्यते इत्यप्रियद्वारा 'न सुरां पिबेत्' इत्यादिना अहमेव निषेध्य इत्यर्थः ।।

अथवा - अहमप्रियादपोह्यः ममाप्रीतिकरात् सुरापानशब्दितात् 'सुरा हरेर्गुणा मे स्युः' इति चिन्तनात् तदपेक्ष्य अपोह्यो निषेध्य इत्यर्थः । तदुक्तं भागवततात्पर्ये – विधिरूपत्वेन कल्पनं विकल्पः चत्वारि वागित्यादि । तत्र वागित्यनुवादः ।

'विधिभागे हरेः पूजैवाभिधाने च तद्गुणाः ।
विकल्पे तद्वहुत्वं चाप्यपोहे तु तदप्रियम् ।
उच्यते सर्ववेदेषु तच्च वेद स एव हि ।।' इति ।। तथा -

'सुरा हरेर्गुणाः प्रोक्तास्ते मे स्युरिति चिन्तनम् ।
सुरापानमिति प्रोक्तं तन्न कुर्यात् कथञ्चन ।।' इति ।

तत्त्वप्रदीपे तु - 'द्वे वा व ब्रह्मणो रूपे' इति विकल्प्य विविधं कल्पयित्वा 'तत्र यः स आत्मा' (तलवकारब्राह्मणम्) इति सदोषादपोह्यो निर्दोषत्वेन विधेयोऽप्यहमेवेत्यर्थ उक्तः । अत्र तत्त्वप्रदीपपक्षे विकल्प्येति ल्यप् । टीकाकृत्पक्षे तु विकल्प्यशब्दः समासान्तर्गतो व्यस्तो वेति विशेषः । इयं च भगवति वाक्यसमन्वयरीतिः – आद्यस्य इतिशब्दस्य प्रकारार्थस्य हृदयमित्यनेनान्वयः । द्वितीयस्य एवम्भूताया इत्यर्थः । तथा च ह्येवम्भूताया विधिनिषेधादिरूपाया अन्यपरत्वेन प्रतीतायाश्चास्याः श्रुतेरिति 'मां विधत्ते' इत्याद्युक्तप्रकारेण 'हृदयं' तात्पर्यम् 'अहमेव वेद' जानामि 'मदन्यः कश्चन' कोऽपि विशेषतः प्रायः न वेद न जानातीत्यर्थः । भागवत इत्यनन्तरं तदेव शास्त्रगम्यमित्युक्तत्वान्न कथमिति शङ्कावकाश इति वाक्यशेषः ।। ४ ।।

।। इति समन्वयाधिकरणम् ।।

तत्वप्रकाशिका – कानि तान्युपपत्त्यादीनि? कुत्र च लिङ्गानि? इत्यत आह – उक्तं चेति ।। एकप्रकाराऽसकृदुक्तिरभ्यासः । प्रमाणान्तरा(रेणा) सिद्धता अपूर्वता । फलवत्वं फलम् । स्तुतिर्निन्दा परकृतिः पुराकल्पोऽर्थवादः । युक्तिरुपपत्तिः । उपक्रमादीनामुपपत्तित्वेऽपि ब्राह्मणपरिव्राजकन्यायेन पृथगुक्तिः । उपक्रमादीनामुपपत्त्यादित्वेन[१] भाष्यं तेषामुत्तरोत्तरप्राबल्याभिप्रायम् ।

'उपक्रमादिलिङ्गानां बलीयो ह्युत्तरोत्तरम्'।

इत्युक्तेः । उपसंहारस्य व्याख्यानरुपत्वेन तद् विरोध्युपक्रमाप्रामाण्यापत्तेः तस्य ततोऽपि प्राबल्यम् । एकत्रोक्तादपि बहुलोक्तेः प्राबल्यादभ्यासस्योपक्रमोपसंहाराभ्यां(रयोः) प्राबल्यम् । एकत्र बहुवारोक्तादपि मुख्यस्य प्राबल्यादपूर्वताया उपक्रमोपसंहाराभ्यासेभ्यः प्राबल्यम् । फलस्योद्देश्यत्वादुपक्रमादिभ्यः प्राबल्यम् । करणाकरणयोरिष्टानिष्टकथनादिरुपार्थवादस्य फलमात्राधिक्यादुपक्रमादिभ्यः प्राबल्यम् । उपपत्तेः सर्वमूलत्वेन सर्वतः प्राबल्यमिति । एतत् सर्वं वाक्यतात्पर्यार्थनिर्णये लिङ्गं भवति । विरोधे तु दुर्बलबाधकतया प्रबलं निर्णायकम् । साम्ये निरवकशेन सावकाशं बाध्यते । स्वभावदुर्बलेनापि निरवकाशेन स्वभावतः प्रबलस्यापि सावकाशस्य बाधो भवति एवमेकेनानेकेषां च बाधः ।

ಆ ಉಪಪತ್ತ್ಯಾದಿಲಿಂಗಗಳು ಯಾವುವು? ಯಾವ ವಿಷಯದಲ್ಲಿ ಲಿಂಗಗಳು? ಎಂಬ ಪ್ರಶ್ನೆಗೆ ಉತ್ತರಿಸಲು 'ಉಕ್ತಂ ಚ' ಎಂಬ ಭಾಷ್ಯವು ಹೊರಟಿದೆ. ಒಂದೇ ವಿಷಯವನ್ನು ಅನೇಕ ಬಾರಿ ಹೇಳುವಿಕೆಯೇ 'ಅಭ್ಯಾಸ'. ಬೇರೆ ಪ್ರಮಾಣದಿಂದ ಅಸಿದ್ಧವಾದದ್ದು 'ಅಪೂರ್ವತಾ'. ಫಲ ಇರುವಿಕೆಯು 'ಫಲ'. ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪ ಎಂದು ನಾಲ್ಕುವಿಧವಾದದ್ದು 'ಅರ್ಥವಾದ'. ಯುಕ್ತಿಯು ಉಪಪತ್ತಿ. ವಾಸ್ತವಿಕವಾಗಿ ಉಪಕ್ರಮಾದಿಗಳು ಉಪಪತ್ತಿಗಳಾಗಿದ್ದರೂ ಬ್ರಾಹ್ಮಣಪರಿವ್ರಾಜಕನ್ಯಾಯದಿಂದ

(१) उपक्रमोपसंहारयोर्विशेषसामान्योक्तितया यत्राविरोधस्तत्र क्वचिदुपक्रमो बलवान् । प्रथमप्राप्तत्वात् । तदनुरोध्युपसंहारः । यथा 'आत्मा वा इदम्' इत्युपक्रमसिद्ध आत्मा 'तन्मामवतु' इति सामान्योपसंहारेऽप्यनुगच्छति । यत्र विरोधस्तत्रोपसंहारानुरोधेन उपक्रमो व्याख्येयः । व्याख्यानरूपत्वात् उपसंहारस्य । -(तत्वप्रदीपः)

ಉಪಪತ್ತಿಯನ್ನು ಪ್ರತ್ಯೇಕವಾಗಿ ಹೇಳಿದ್ದಾರೆ. ಭಾಷ್ಯದಲ್ಲಿ 'ಅನ್ವಯಃ ಉಪಪತ್ತ್ಯಾದಿಲಿಂಗಮ್' ಎಂದು ಉಪಪತ್ತಿಯನ್ನು ಮೊದಲು ಹೇಳಿದ್ದು ''ಉಪಕ್ರಮಾದಿಲಿಂಗಾನಾಂ ಬಲೀಯೋ ಹ್ಯುತ್ತರೋತ್ತರಮ್' (ಉಪಕ್ರಮಾದಿಲಿಂಗಗಳಲ್ಲಿ ಉತ್ತರೋತ್ತರ ಪ್ರಾಬಲ್ಯವನ್ನು ತಿಳಿಯಬೇಕು) ಎಂಬ (ಅನುವ್ಯಾಖ್ಯಾನದ) ಮಾತಿನಂತೆ ಉಪಕ್ರಮಾದಿಗಳಿಗೆ ಉತ್ತರೋತ್ತರಪ್ರಾಬಲ್ಯವಿದೆ ಎಂಬ ಅಭಿಪ್ರಾಯದಿಂದ. ಉಪಸಂಹಾರವು ವ್ಯಾಖ್ಯಾನ-ರೂಪವಾದ್ದರಿಂದ ಅದಕ್ಕೆ ವಿರುದ್ಧವಾದ ಉಪಕ್ರಮವು ಅಪ್ರಮಾಣವಾಗುತ್ತದೆ. ಆದ್ದರಿಂದ ಉಪಕ್ರಮಕ್ಕಿಂತ ಉಪಸಂಹಾರವೇ ಬಲಿಷ್ಠವಾಗಿರುತ್ತದೆ. ಒಂದು ಕಡೆ ಒಮ್ಮೆ ಹೇಳುವುದಕ್ಕಿಂತ ಅನೇಕ ಕಡೆ ಬಹಳಬಾರಿ ಹೇಳುವುದು ಪ್ರಬಲವಾದ್ದರಿಂದ ಅಭ್ಯಾಸವು ಉಪಕ್ರಮ, ಉಪಸಂಹಾರಗಳಿಗಿಂತಲೂ ಬಲಿಷ್ಠವಾಗಿರುತ್ತದೆ. ಒಂದು ಪ್ರಕರಣದಲ್ಲಿ ಒಂದು ವಿಷಯವನ್ನು ಅನೇಕಬಾರಿ ಹೇಳುವುದಕ್ಕಿಂತ ಅಪೂರ್ವವಾದ ಅರ್ಥವನ್ನು ಪ್ರತಿಪಾದಿಸುವುದು ಇನ್ನೂ ಬಲಿಷ್ಠವಾಗಿರುತ್ತದೆ. ಆದ್ದರಿಂದ ಉಪಕ್ರಮ, ಉಪಸಂಹಾರ, ಅಭ್ಯಾಸಗಳಿಗಿಂತ ಅಪೂರ್ವತಾ ಎಂಬುದು ಬಲಿಷ್ಠವಾಗಿದೆ. ಫಲವನ್ನು ಉದ್ದೇಶಿಸಿ ಎಲ್ಲ ವ್ಯವಹಾರಗಳೂ ಇರುವುದರಿಂದ ಉಪಕ್ರಮಾದಿ ನಾಲ್ಕಕ್ಕಿಂತ ಫಲವೇ ಶ್ರೇಷ್ಠ. ಒಂದು ಕಾರ್ಯವನ್ನು ಮಾಡುವುದರಿಂದ ಇಷ್ಟಪ್ರಾಪ್ತಿಯಾಗುತ್ತದೆ; ಮಾಡದಿದ್ದರೆ ಅನಿಷ್ಟಪ್ರಾಪ್ತಿ-ಯಾಗುತ್ತದೆ ಎಂಬ ಅರ್ಥವಾದವು ಕೇವಲ ಫಲ ಹೇಳುವ ವಾಕ್ಯಕ್ಕಿಂತ ಮಹತ್ವವುಳ್ಳದ್ದರಿಂದ ಉಪಕ್ರಮಾದಿ ಐದು ಲಿಂಗಗಳಿಗಿಂತಲೂ ಹೆಚ್ಚು ಪ್ರಬಲವಾಗಿದೆ. ಆದರೆ ಉಪಪತ್ತಿಯು ಎಲ್ಲಕ್ಕೂ ಮೂಲವಾದ್ದರಿಂದ ಬಹಳ ಬಲಿಷ್ಠವಾಗಿದೆಯೆಂದು ತಿಳಿಯಬೇಕು. ಈ ಉಪಕ್ರಮಾದಿಗಳೆಲ್ಲವೂ ವಾಕ್ಯದ ತಾತ್ಪರ್ಯವನ್ನು ನಿಶ್ಚಯಿಸುವುದರಲ್ಲಿ ಲಿಂಗಗಳಾಗಿವೆ.

ಯಾವ ಸ್ಥಳದಲ್ಲಿ ಎರಡು ಲಿಂಗಗಳಿಗೆ ಪರಸ್ಪರ ವಿರೋಧ ಬರುತ್ತದೋ, ಅಲ್ಲಿ ಪ್ರಬಲವಾದದ್ದು ದುರ್ಬಲವನ್ನು ಬಾಧಿಸಿ, ನಿರ್ಣಾಯಕವಾಗುತ್ತದೆ. ಎರಡೂ ಲಿಂಗಗಳು ಸಮಬಲವಾಗಿದ್ದಲ್ಲಿ ನಿರವಕಾಶದಿಂದ ಸಾವಕಾಶವು ಬಾಧಿತವಾಗುತ್ತದೆ. ಕೆಲವೊಮ್ಮೆ ನಿರವಕಾಶವಾಗಿ ಸ್ವಭಾವತಃ ದುರ್ಬಲವಾದಾಗ ಸ್ವಭಾವತಃ ಪ್ರಬಲವಾದ ಸಾವಕಾಶಲಿಂಗವೇ ಗೆಲ್ಲುತ್ತದೆ. ಈ ರೀತಿಯಾಗಿ ಒಂದು ಲಿಂಗದಿಂದ ಅನೇಕ ಲಿಂಗಗಳಿಗೆ ಬಾಧ ಬರುವುದನ್ನು ತಿಳಿಯಬೇಕು.

## ಪ್ರಾಬಲ್ಯದೌರ್ಬಲ್ಯ ವಿಚಾರ

ननु सावकाशत्वनिरवकाशत्वाभ्यामेव निर्णयो स स्वभावप्राबल्यदौर्बल्यं नामास्ति । दुर्बलप्रबलयोः सावकाशत्वादिनियमात् । अन्यथा वाक्याप्रामाण्यापत्तेरिति । मैवम्, स्वभावप्रबलेन दुर्बलबाधने तत्प्रामाण्यायार्थान्तरकल्पनम् । सावकाशत्वं पुनः स्वयमर्थान्तरवाचित्वमिति भेदात् । अत्र श्रुत्यादिषट्कं च ग्राह्यम् । सूत्रं योजयति – उपक्रमादीति ।। पाशुपतादिशास्त्रोक्तं प्रतीतमपि नान्येषां शास्त्रयोनित्वम् । पाशुपताद्युक्त्यादेः शास्त्रनिर्णायकत्वाभावादुपक्रमादीनामेव निर्णायकत्वात् । तैश्च सम्यक् शास्त्रे विचार्यमाणे ब्रह्मैव शास्त्रगम्यं प्रतीयते, न रुद्रादि । अतोऽन्यथाप्रतीत्यादेरज्ञानमूलत्वाद्येव युक्तमिति भावः । ननु कर्मविधानादिरूपत्वात् शास्त्रस्य कथं ब्रह्मपरतेत्याशङ्कां भगवद् वाक्येन परिहरति – मामिति ।। कर्मविधात्री श्रुतिरपि मां प्रत्येव तद् विधत्ते । इन्द्राद्यभिधात्री च मामभिधत्ते 'चत्वारि वाक्' इत्यादिश्रुत्याऽहं विविधरूपत्वेन कल्प्यः, 'न सुरां पिबेत्' इत्यादिश्रुत्याऽहमेवाप्रियादपोह्यः । एवम्भूताया अस्याः श्रुतेरित्यभिप्रायमहमेव वेद न मत्तोऽन्यः इत्यर्थः । 'तस्मादुपक्रमादिवशाद् विष्णुरेव सर्वशास्त्रैर्जन्मादिकारणत्वोक्त्युपलक्षितानन्तगुणतयोच्यत इति तस्यैव तल्लक्षणम्' इति सिद्धम् ।।४।।

ಪ್ರಶ್ನೆ - ಸಾವಕಾಶ ನಿರವಕಾಶ ಎಂಬ ಪ್ರಭೇದದಿಂದಲೇ ನಿರ್ಣಯವು ಸಾಧ್ಯವಾಗುತ್ತಿರುವಾಗ ಸ್ವಭಾವಪ್ರಾಬಲ್ಯದೌರ್ಬಲ್ಯಗಳನ್ನೇಕೆ ಅಂಗೀಕರಿಸಬೇಕು? ಏಕೆಂದರೆ ದುರ್ಬಲವಾದದ್ದು ಸಾವಕಾಶ; ಪ್ರಬಲವಾದದ್ದು ನಿರವಕಾಶ ಎಂಬ ನಿಯಮವು ಸರ್ವಸಮ್ಮತವಾಗಿದೆ. ಎರಡೂ ನಿರವಕಾಶವಾದರೆ ವಾಕ್ಯಗಳಿಗೆ ಅಪ್ರಾಮಾಣ್ಯವು ಬರಬೇಕಾದೀತಲ್ಲವೇ?

ಉತ್ತರ - ಹೀಗೆ ಹೇಳಬಾರದು. ಸ್ವಭಾವತಃ ಪ್ರಬಲವಾದ್ದರಿಂದ ಸ್ವಭಾವತಃ ದುರ್ಬಲವಾದ ಲಿಂಗವು ಎಲ್ಲಿ ಬಾಧಿತವಾಗುತ್ತದೋ ಅಲ್ಲಿ ದುರ್ಬಲಲಿಂಗಕ್ಕೆ ಪ್ರಾಮಾಣ್ಯ

ಹೇಳುವುದಕ್ಕಾಗಿ ಬೇರೆ ಆರ್ಥವನ್ನು ಕಲ್ಪಿಸಬೇಕು. ಮತ್ತು ಎಲ್ಲಿ ನಿರವಕಾಶಲಿಂಗದಿಂದ ಸಾವಕಾಶಲಿಂಗಕ್ಕೆ ಬಾಧ ಬರುತ್ತದೋ ಅಲ್ಲಿ ಸಾವಕಾಶಲಿಂಗವು ಅನೇಕಾರ್ಥವುಳ್ಳದ್ದರಿಂದ ಸ್ವತಃ ಆರ್ಥಾಂತರಬೋಧಕವಾಗುತ್ತದೆ. ಹೀಗೆ ಸಾವಕಾಶ, ನಿರವಕಾಶಲಿಂಗಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು.

ಉಪಕ್ರಮಾದಿಗಳ ಜೊತೆಗೆ ಶ್ರುತ್ಯಾದಿ ಆರು ಪ್ರಮಾಣಗಳನ್ನು ತೆಗೆದುಕೊಳ್ಳಬೇಕು. ಪೂರ್ವಪಕ್ಷವನ್ನು ನಿರಾಸಮಾಡುವುದಕ್ಕಾಗಿ ಸೂತ್ರವನ್ನು 'ಉಪಕ್ರಮಾದಿ' ಎಂಬ ವಾಕ್ಯದಿಂದ ಯೋಜನೆ ಮಾಡುತ್ತಿದ್ದಾರೆ. ''ಪಾಶುಪತಾದಿಶಾಸ್ತ್ರಗಳಲ್ಲಿ ನಿರೂಪಣೆ ಮಾಡಿದ್ದರೂ ರುದ್ರಾದಿಗಳಿಗೆ ಶಾಸ್ತೃಯೋನಿತ್ವವನ್ನು ಅಂಗೀಕರಿಸಬಾರದು. ಏಕೆಂದರೆ, ಪಾಶುಪತಾದಿಗಳಲ್ಲಿ ಹೇಳಲ್ಪಟ್ಟ ಮಾತುಗಳು ಶಾಸ್ತ್ರನಿರ್ಣಾಯಕಗಳಾಗಿಲ್ಲ. ಹೊರತಾಗಿ ಉಪಕ್ರಮಾದಿ ಲಿಂಗಗಳೇ ನಿರ್ಣಾಯಕಗಳಾಗಿವೆ. ಉಪಕ್ರಮಾದಿಲಿಂಗಗಳಿಂದ ವೇದದ ಆರ್ಥವು ಸರಿಯಾಗಿ ವಿಚಾರ ಮಾಡಿದಾಗ ಬ್ರಹ್ಮನೇ ಶಾಸ್ತ್ರಪ್ರತಿಪಾದ್ಯನೆಂದು ತಿಳಿಯುತ್ತಾನೆ ಹೊರತು ರುದ್ರಾದಿಗಳಲ್ಲ. ಈ ಕಾರಣದಿಂದ ಅನ್ಯಥಾಪ್ರತೀತಿಯು ಅಜ್ಞಾನಮೂಲಕವಾಗಿದೆಯೆಂದು ತಿಳಿಯುವುದು ಸಮಂಜಸವಾಗಿದೆ'' ಎಂದು ಭಾಷ್ಯದ ಅಭಿಪ್ರಾಯ.

ಶ್ರುತಿಗಳೆಲ್ಲವೂ ಕರ್ಮವನ್ನು ವಿಧಿಸುತ್ತಿರುವುದರಿಂದ ಹೇಗೆ ಬ್ರಹ್ಮಪರವಾಗುತ್ತವೆ? ಎಂಬ ಪ್ರಶ್ನೆಯನ್ನು ಉದ್ಧವನಿಗೆ ಉಪದೇಶಿಸಿದ ಕೃಷ್ಣನ 'ಮಾಂ ವಿಧತ್ತೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

''ಕರ್ಮವಿಧಾಯಕಶ್ರುತಿಯೂ ಸಹ ನನ್ನ ಉದ್ದೇಶದಿಂದಲೇ ಕರ್ಮವನ್ನು ವಿಧಿಸುತ್ತಿದೆ. ಇಂದ್ರಾದಿದೇವತೆಗಳನ್ನು ಹೇಳುವ ಶ್ರುತಿಗಳೂ ಸಹ ವಿದ್ವದ್ಬೂಢಿಯಿಂದ ನನ್ನನ್ನೇ ಪ್ರತಿಪಾದಿಸುತ್ತಿವೆ. 'ಚತ್ವಾರಿ ವಾಗ್' ಇತ್ಯಾದಿ ಶ್ರುತಿಗಳಿಂದಲೂ ನಾನೇ ಬಣ್ಣಿಸಲ್ಪಟ್ಟಿದ್ದೇನೆ. 'ನ ಸುರಾಂ ಪಿಬೇತ್' ಇತ್ಯಾದಿ ನಿಷೇಧಶ್ರುತಿಗಳಿಂದಲೂ ನಾನೇ ನಿಷೇಧದ ಉದ್ದೇಶ್ಯನಾಗಿದ್ದೇನೆ. ಈ ಪ್ರಕಾರವಾಗಿ ಶ್ರುತಿಯ ಹಾರ್ದವನ್ನು ನಾನೊಬ್ಬನೇ ತಿಳಿಯಲು ಸಾಧ್ಯ. ಇತರರಿಗೆ ಸಾಧ್ಯವಿಲ್ಲ.'' (ಇದು ಕೃಷ್ಣನ ಮಾತಿನ ಅಭಿಪ್ರಾಯ).

ಆದ್ದರಿಂದ ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ವಿಷ್ಣುವೇ ಸಕಲಶಾಸ್ತ್ರಗಳಿಂದ ಜಗಜ್ಜನ್ಮಾದಿಕಾರಣನೆಂದು ನಿರ್ಣಯವಾಗುತ್ತದೆ. ಜಗಜ್ಜನ್ಮಾದಿಕಾರಣತ್ವವು ಕೇವಲ

ಉಪಲಕ್ಷಣವಾಗಿದೆ. ಇದರಿಂದ ಅನಂತಗುಣಪರಿಪೂರ್ಣತ್ವವನ್ನು ಭಗವಂತನ ಲಕ್ಷಣವೆಂದು ತಿಳಿಯಬೇಕು. ಆದ್ದರಿಂದ ಜಗಜ್ಜನ್ಮಾದಿಕಾರಣತ್ವವು ಭಗವಂತನ ಲಕ್ಷಣವೆಂದು ನಿರ್ಣಯವಾಯಿತು.

॥ ಇಲ್ಲಿಗೆ ಶ್ರೀಜಯತೀರ್ಥಶ್ರೀಮಚ್ಚರಣರಿಂದ ವಿರಚಿತವಾದ ತತ್ವಪ್ರಕಾಶಿಕೆಯಲ್ಲಿ
ಸಮನ್ವಯಾಧಿಕರಣದ ಕನ್ನಡಾನುವಾದವು ಮುಗಿಯಿತು ॥

## ತಾತ್ಪರ್ಯಲಿಂಗಗಳ ಸ್ವರೂಪ

**ಭಾವದೀಪಃ** – ಭಾಷ್ಯೇ 'ಲಿಙ್ಗಮ್' ಇತಿ ಸಮುದಾಯಾಭಿಪ್ರಾಯಂ ಸೂತ್ರಸ್ಮೃತ್ಯನುಸಾರ್ಯೈಕವಚನಮ್ । ಅನ್ಯಥಾ 'ಲಿಙ್ಗೈಃ' ಇತ್ಯಗ್ರೇತನೋಕ್ತಿವಿರೋಧಃ – ಇತಿ **ಮತ್ವೋಕ್ತಮ್ – ಕಾನಿ ತಾನೀತಿ** ।। 'ವಾಕ್ಯಸ್ಯಾದಿರುಪಕ್ರಮಃ । ತದನ್ತ ಉಪಸಂಹಾರಃ' ಇತಿ ಸ್ಫುಟತ್ವಾದನ್ಯಸ್ವರೂಪಮಾಹ – **ಏಕೇತಿ** ।। 'ಪ್ರಮಾಣಾನ್ತರಾಸಿದ್ಧತಾऽಪೂರ್ವತಾ' ಇತ್ಯೇವಾತ್ರ ಪಾಠಃ । 'ಪ್ರಾಚುರ್ಯೇಣ' ಇತಿ ತು ನ್ಯಾಯಕಲ್ಪಲತಾ ಪಾಠಃ । ಗುಣಾಭಿಧಾನಂ = ಸ್ತುತಿಃ । ದೋಷೋಕ್ತಿಃ = ನಿನ್ದಾ । ಏಕಕರ್ತೃಕೋಪಾಖ್ಯಾನಮ್ = ಪರಾಕೃತಿಃ । ಬಹುಕರ್ತೃಕೋಪಾಖ್ಯಾನಂ = ಪುರಾಕಲ್ಪಃ ।[೧]

ಉದಾಹರಣಮೇತೇಷಾಂ ಚನ್ದ್ರಿಕಾಯಾಂ ಪ್ರಕಾಶತೇ ।
ವಿಸ್ತರೋ ಭೀಷಯತ್ಯಸ್ಮಾಂಸ್ತಸ್ಮಾನ್ನಾತ್ರ ಯತಾಮಹೇ ।।

(೧) 'ಸ್ತುತಿರ್ನಿನ್ದಾ ಪರಕೃತಿಃ ಪುರಾಕಲ್ಪೋऽರ್ಥವಾದಃ' ಇತ್ಯತ್ರ, ಸ್ತುತಿಃ – 'ವಾಯವ್ಯಂ ಶ್ವೇತಮಾಲಭೇತ ಭೂತಿಕಾಮಃ' ಇತಿ ಸ್ವವಿಹಿತವಾಯವ್ಯಯಾಗೇ ರುಚ್ಯುತ್ಪಾದನಾಯ 'ವಾಯುರ್ವೈ ಕ್ಷೇಪಿಷ್ಠಾ ದೇವತಾ' ಇತ್ಯಾದಿನಾ ವಾಯೋರ್ಯತ್ಸ್ತವನಂ ಸಾ ಸ್ತುತಿಃ । 'ಅಸ್ತಿ ಬ್ರಹ್ಮೇತಿ ಚೇದ್ವೇದ' ಇತಿ ಸ್ವೋಕ್ತಬ್ರಹ್ಮಾಸ್ತಿತ್ವೇ ರುಚ್ಯುತ್ಪಾದನಾಯ ತದ್ವಿಪರೀತಾಸತ್ತ್ವಾಶ್ರಯಣೇ 'ಅಸನ್ನೇವ ಸ ಭವತಿ । ಅಸದ್ ಬ್ರಹ್ಮೇತಿ ವೇದ ಚ' ಇತಿ ಯಾऽನರ್ಥೋಕ್ತಿಃ ಸಾ ನಿನ್ದಾ । ಪರಕೃತಿಃ 'ಅಥಾತ ಐನ್ದ್ರೋ ಮಹಾಭಿಷೇಕಃ' ಇತಿ ಸ್ವವಿಹಿತಮಹಾಭಿಷೇಕೇ ರುಚ್ಯುತ್ಪಾದನಾಯ 'ಏತೇನ ಹತ್ವಾ ಐನ್ದ್ರೇಣ ಮಹಾಭಿಷೇಕೇಣ ತುರಃ ಕಾವಷೇಯೋ ಜನಮೇಜಯಂ ಪಾರಿಕ್ಷಿತಮಭಿಷಿಷೇಚ' ಇತ್ಯಾದಿನಾ ಯಾ ಪರೇಷಾಂ ಕೃತಿರುಚ್ಯತೇ ಸಾ ಪರಕೃತಿಃ । ಪುರಾಕಲ್ಪಃ 'ವಾಯುರ್ಹೈವ ಪ್ರಜಾಪತಿಃ' ಇತಿ ಸ್ವೋಕ್ತೇ ವಾಯುಪ್ರಜಾಪತ್ಯೈಕ್ಯೇ 'ತದಪ್ಯೇತದೃಷಿಣೋಕ್ತಂ ಪವಮಾನಃ ಪ್ರಜಾಪತಿರಿತಿ ಸ್ವಪೂರ್ವಾಚಾರ್ಯೈರ್ಯಾ ಜ್ಞಾನರೂಪ-ಕಲ್ಪನಾ ಸಾ ಪುರಾಕಲ್ಪ ಇತಿ ವಿವೇಕಃ । **-(ಗುರ್ವರ್ಥದೀಪಿಕಾ)**

तत्वप्रदीपे विवृतत्वात् टीकायामुदाहरणानुक्तिः । 'उपक्रमोपसंहारतदैकरूप्या' इति प्रमाणलक्षणोक्तैकरूप्यस्येहानुक्तिबीजं चन्द्रिकायां व्यक्तम् । उपपत्तित्वेपीति ।। 'तात्पर्यनिर्णयरूपसाध्ये' इति भावः । 'कुरुपाण्डववत् तेषामुपपत्तेः पृथग् वचनम्' इति भक्तिपादीयानुभाष्योक्तेरिति भावः ।

ಭಾಷ್ಯದಲ್ಲಿ 'ಲಿಂಗಮ್' ಎಂಬುದಾಗಿ 'ಉಪಕ್ರಮಾದಿಗಳ ಸಮುದಾಯ' ಎಂಬ ಅಭಿಪ್ರಾಯದಿಂದ ಸೂತ್ರ ಮತ್ತು ಸ್ಮೃತಿಗಳಿಗೆ ಅನುಸಾರಿಯಾಗಿ ಏಕವಚನವನ್ನು ಪ್ರಯೋಗಿಸಿದ್ದಾರೆ. ಹೀಗಲ್ಲದಿದ್ದರೆ ಮುಂದೆ 'ಲಿಂಗೈಃ' ಎಂಬುದಾಗಿ ಹೇಳಿದ್ದು ಇಲ್ಲಿ ಹೇಳಿದ ಏಕವಚನಕ್ಕೆ ವಿರೋಧ ಬರುತ್ತದೆ ಎಂಬ ಅಭಿಪ್ರಾಯದಿಂದ ''ಕಾನಿ ತಾನಿ'' ಎಂಬುದಾಗಿ ವ್ಯಾಖ್ಯಾನವನ್ನು ಮಾಡಿದ್ದಾರೆ. 'ಉಪಕ್ರಮ'ಶಬ್ದಕ್ಕೆ ವಾಕ್ಯದ ಆದಿ ಎಂಬುದಾಗಿ ಅರ್ಥ. ಉಪಸಂಹಾರಶಬ್ದಕ್ಕೆ ವಾಕ್ಯದ ಕೊನೆ ಎಂಬುದಾಗಿ ಅರ್ಥ. ಈ ಎರಡೂ ಅರ್ಥಗಳು ಸ್ಪಷ್ಟವಾಗಿರುವುದರಿಂದ ಇವೆರಡಕ್ಕೆ ಅರ್ಥವನ್ನು ಹೇಳದೆ ಉಳಿದವುಗಳಿಗೆ ಅರ್ಥವನ್ನು ''ಏಕಪ್ರಕಾರ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಟೀಕೆಯಲ್ಲಿ 'ಪ್ರಮಾಣಾಂತರಾಸಿದ್ಧಾ ಅಪೂರ್ವತಾ' ಎಂಬುದಾಗಿ ಇಲ್ಲಿ ಪಾಠವನ್ನು ಇಟ್ಟುಕೊಳ್ಳಬೇಕು. 'ಪ್ರಾಚುರ್ಯೇಣ ತು' ಎಂಬುದು ನ್ಯಾಯಕಲ್ಪಲತಾದ ಪಾಠವಾಗಿದೆ. 'ಸ್ತುತಿ'ಶಬ್ದಕ್ಕೆ 'ಗುಣಗಳನ್ನು ಹೇಳುವುದು' ಎಂಬುದಾಗಿ ಅರ್ಥ. 'ನಿಂದಾ'ಶಬ್ದಕ್ಕೆ ದೋಷಗಳನ್ನು ಹೇಳುವುದು ಎಂದರ್ಥ. 'ಪರಕೃತಿ' ಎಂದರೆ ಒಬ್ಬನೇ ಕರ್ತೃವುಳ್ಳ ಕಥಾಭಾಗ. 'ಪುರಾಕಲ್ಪ'ಶಬ್ದಕ್ಕೆ ಅನೇಕ ಜನರು ಕರ್ತೃವಾಗಿ ಉಳ್ಳ ಕಥಾಭಾಗ ಎಂಬುದಾಗಿ ಅರ್ಥ.

ಉದಾಹರಣಮೇತೇಷಾಂ ಚಂದ್ರಿಕಾಯಾಂ ಪ್ರಕಾಶತೇ।
ವಿಸ್ತರೋ ಭೀಷಯತ್ಯಸ್ಮಾಂಸ್ತಸ್ಮಾನ್ನಾತ್ರ ಯತಾಮಹೇ ॥

(ಇವುಗಳ ವಿವರಣೆಯು ಚಂದ್ರಿಕೆಯಲ್ಲಿ ಪ್ರಕಟವಾಗಿದೆ. ಗ್ರಂಥವಿಸ್ತಾರಭಯವು ನಮ್ಮನ್ನು ಬಾಧಿಸುತ್ತಿದೆ. ಆದ್ದರಿಂದ ಇಲ್ಲಿ ವಿವರಣೆಯನ್ನು ಹೇಳಲು ಪ್ರಯತ್ನಿಸುವುದಿಲ್ಲ).[೧]

(೧) ಜಿಜ್ಞಾಸುಗಳ ಕುತೂಹಲಕ್ಕಾಗಿ ತಾತ್ಪರ್ಯಚಂದ್ರಿಕೆಯಲ್ಲಿ ಹೇಳಿದ್ದನ್ನು ಸಂಕ್ಷೇಪ ಮಾಡಿ ವಿಶೇಷವಿಚಾರದಲ್ಲಿ ನೀಡಲಾಗಿದೆ.

ಇಲ್ಲಿ ಹೇಳಿದ ಉಪಕ್ರಮಾದಿ ತಾತ್ಪರ್ಯಲಿಂಗಗಳಿಗೆ ತತ್ವಪ್ರದೀಪದಲ್ಲಿ ಪ್ರತ್ಯೇಕವಾಗಿ ಉದಾಹರಣೆಯನ್ನು ನೀಡಿರುವುದರಿಂದ ಟೀಕೆಯಲ್ಲಿ ಉದಾಹರಣೆಯನ್ನು ಹೇಳುತ್ತಿಲ್ಲ. 'ಉಪಕ್ರಮೋಪಸಂಹಾರತದೈಕರೂಪ್ಯ' ಎಂಬುದಾಗಿ ಪ್ರಮಾಣಲಕ್ಷಣದಲ್ಲಿ ಹೇಳಿದ ಏಕರೂಪ್ಯವನ್ನು ಇಲ್ಲಿ ಹೇಳದೇ ಇರುವುದಕ್ಕೆ ಚಂದ್ರಿಕೆಯಲ್ಲಿ ಕಾರಣವನ್ನು ಸ್ಪಷ್ಟಪಡಿಸಿದ್ದಾರೆ. ''ಉಪಪತ್ತಿತ್ವೇಪಿ'' ಎಂಬ ಅಂಶಕ್ಕೆ 'ತಾತ್ಪರ್ಯನಿರ್ಣಯರೂಪವಾದ ಸಾಧ್ಯದಲ್ಲಿ ಉಪಪತ್ತಿಯೇ ಆಗಿದ್ದರೂ' ಎಂಬ ಅರ್ಥವನ್ನು ಇಟ್ಟುಕೊಳ್ಳಬೇಕು. ಭಕ್ತಿಪಾದದ ಅನುವ್ಯಾಖ್ಯಾನದಲ್ಲಿ ಹೇಳಿದ 'ಕುರುಪಾಂಡವವತ್ ತೇಷಾಮುಪಪತ್ತೇಃ ಪೃಥಗ್ವಚಃ' (ಕುರುಪಾಂಡವ - ನ್ಯಾಯದಂತೆ ಇವುಗಳಲ್ಲಿ ಉಪಪತ್ತಿಯನ್ನು ಪ್ರತ್ಯೇಕವಾಗಿ ಹೇಳಿದ್ದಾರೆ) ಎಂಬ ವಾಕ್ಯದಂತೆ ಈ ರೀತಿ ಅರ್ಥೈಸಬೇಕು.

ವಿಶೇಷ ವಿಚಾರ - ಕಷ್ಟಸಾಧ್ಯವಾದಂತಹ ವಿಷಯದಲ್ಲಿ ಅಥವಾ ಲೋಕದೃಷ್ಟಿಯಿಂದ ಅಸಂಭಾವಿತವಾದ ವಿಷಯದಲ್ಲಿ ಶ್ರುತಿಗಳು ಇದ್ದಾಗ ಅದನ್ನು ನೋಡಿದವರಿಗೆ ಶ್ರುತಿಯು ಇಂತಹ ವಿಷಯವನ್ನು ಪ್ರತಿಪಾದಿಸುತ್ತದೆಯೋ ಇಲ್ಲವೊ? ಎಂದು ಸಂದೇಹ ಬರುವುದು ಸಹಜ. ಅಂತಹ ಸಂದರ್ಭದಲ್ಲಿ ಪುನಃ ಪುನಃ ಹೇಳುವಿಕೆ ರೂಪವಾದ 'ಅಭ್ಯಾಸ'ವಿದ್ದಲ್ಲಿ ಆ ಶ್ರುತಿಗೆ ಅಲ್ಲಿ ತಾತ್ಪರ್ಯವಿದೆ ಎಂದು ಸಿದ್ಧವಾಗುತ್ತದೆ. ಹಾಗಾದರೆ ಎಲ್ಲಾ ಕಡೆ ಹೀಗೆಯೇ ಹೇಳಲು ಬರುವುದರಿಂದ ಪೌನರುಕ್ತ್ಯ ದೋಷವೇ ಇಲ್ಲದಂತಾಗುತ್ತದೆಂಬ ಪ್ರಶ್ನೆಗೆ ಅವಕಾಶವಿಲ್ಲ. ಯಾವ ವಾಕ್ಯದಲ್ಲಿ ಪ್ರತಿಜ್ಞಾರೂಪವಿಲ್ಲದೆ ಅಭ್ಯಾಸವಿರುತ್ತದೋ, ಹಾಗೆಯೇ ಅನುವಾದ ಮಾಡಿ ಉಪಸಂಹಾರರೂಪವಾಗಿ ಇರುವುದಿಲ್ಲವೋ, ಅಥವಾ ಮೊದಲು ಹೇಳಿದ್ದನ್ನು ಹೇಳಿ ಇನ್ನು ಹೆಚ್ಚಿನದನ್ನು ಹೇಳುವ ಪ್ರಸಂಗವಿರುವುದಿಲ್ಲವೊ ಅಂತಹ ಕಡೆಗಳಲ್ಲಿ ಪೌನರುಕ್ತ್ಯದೋಷ ಬಂದೇ ಬರುತ್ತದೆ. ಹಾಗಾಗಿ ಮೇಲೆ ಹೇಳಿದ ಮೂರು ಪ್ರಸಂಗ ಬಿಟ್ಟು ಬೇರೆ ಕಡೆಗಳಲ್ಲಿ ಅಭ್ಯಾಸವು ಖಂಡಿತ ತಾತ್ಪರ್ಯನಿರ್ಣಾಯಕವಾಗುತ್ತದೆ.

ಅಪೂರ್ವತ್ವ ಎಂದರೆ ಏನು?

ಅಪೂರ್ವತ್ವ ಎಂದರೆ ಬೇರೆ ಪ್ರಮಾಣದಿಂದ ತಿಳಿಸದ ವಿಷಯವನ್ನು ತಿಳಿಸಬೇಕು ಎಂದರ್ಥವಲ್ಲ ಹಾಗಿದ್ದರೆ ನೀವು ಹೇಳಿದ ಆಕ್ಷೇಪಕ್ಕೆ ಅವಕಾಶವಿದೆ, ಆದರೆ ನಾವು ಅಪೂರ್ವತಾವನ್ನು ಬೇರೆ ರೀತಿಯೇ ಹೇಳಿದ್ದೇವೆ.

ಅದೇನೆಂದರೆ ಪ್ರಮಾಣವು ಯಾರಿಗೆ ವಿಷಯವನ್ನು ಬೋಧಿಸಬೇಕು, ಅಂತಹ ವ್ಯಕ್ತಿಯಲ್ಲಿರುವ ಅಜ್ಞಾನಕ್ಕೆ ವಿರೋಧಿಯಾದಂತಹ, ಮತ್ತು ಆ ಪ್ರಮಾಣವನ್ನು ಉಪಜೀವಿಸಿಕೊಂಡಿರದ ಬೇರೆ ಪ್ರಮಾಣದಿಂದ ತಿಳಿಯಲು ಯೋಗ್ಯವಲ್ಲದ ವಿಷಯವನ್ನು ತಿಳಿಸುತ್ತಿರಬೇಕು. ಹೀಗಿದ್ದರೆ ಅದಕ್ಕೆ ಅಪೂರ್ವತ್ವ ಇದೆ ಎಂದರ್ಥ. ಹೀಗೆ ಹೇಳಿದಾಗ ಹಿಂದಿನ ದೋಷ ಬರುವುದಿಲ್ಲ. ವೇದವು ಹೇಳುವ ವಿಷಯವನ್ನು ಸ್ಮೃತಿಗಳು ಅಥವಾ ಅನುಮಾನವು ಹೇಳಿದರೂ ಕೂಡ ಅವುಗಳು ವೇದವನ್ನು ಉಪಜೀವಿಸಿಕೊಂಡೇ ಆ ವಿಷಯವನ್ನು ಹೇಳುತ್ತದೆ ಹೊರತು ಸ್ವತಂತ್ರವಾಗಿ ಅಲ್ಲ ಹೀಗಾಗಿ ಅಪೂರ್ವತ್ವಕ್ಕೆ ಭಂಗವಿಲ್ಲ. ಇನ್ನು ವೇದವು ಹೇಳುವ ವಿಷಯವನ್ನು ಈಶ್ವರನು ಪ್ರತ್ಯಕ್ಷವಾಗಿ ತಿಳಿದಿದ್ದರೂ. ಅವನ ಜ್ಞಾನವು ನಮ್ಮ ಅಜ್ಞಾನಕ್ಕೆ ವಿರೋಧಿಯಲ್ಲ. ಆದ್ದರಿಂದ ನಮ್ಮನ್ನು ಕುರಿತು ಬೋಧಿಸುವ ವೇದಕ್ಕೆ ಅಪೂರ್ವತ್ವ ಇದೆ. ಪ್ರತ್ಯಕ್ಷಯೋಗ್ಯವಾದ ಅರ್ಥವನ್ನು ಪ್ರತ್ಯಕ್ಷಕ್ಕಿಂತ ಮೊದಲು ವೇದವು ತಿಳಿಸಿದರೂ ಅದು ಪ್ರತ್ಯಕ್ಷಕ್ಕೆ ತಿಳಿಯಲು ಯೋಗ್ಯವಾದ ಅರ್ಥವನ್ನೇ ತಿಳಿಸುತ್ತಿರುವುದರಿಂದ ಆ ವೇದಭಾಗಕ್ಕೆ ಅಪೂರ್ವತಾ ಇಲ್ಲ. ಈ ವಿಷಯ ಪೂರ್ವಮೀಮಾಂಸಾ ಶಾಸ್ತ್ರವನ್ನು ಪರಿಶೀಲಿಸಿದಾಗ ಸಿದ್ಧವಾಗುತ್ತದೆ.

### ಅರ್ಥವಾದವೆಂದರೆ

ಅರ್ಥವಾದವೆಂದರೆ 'ಅಕ್ಷ' ಶಬ್ದಕ್ಕೆ ಹೇಗೆ ಇಂದ್ರಿಯ, ದಾಳ ಮುಂತಾದ ನಾನಾ ಅರ್ಥಗಳು ಇವೆಯೋ ಹಾಗೆಯೇ. ಒಂದು ವಿಷಯದ ಪ್ರಶಂಸೆ, ಅಥವಾ ನಿಂದನೆ, ಒಬ್ಬ ವ್ಯಕ್ತಿಯನ್ನು ಆಧರಿಸಿದ ಕಥೆ, ಬಹಳ ವ್ಯಕ್ತಿಯನ್ನು ಆಧರಿಸಿದ ಕಥೆ. ಎನ್ನುವ ಅರ್ಥದಲ್ಲಿ ಅರ್ಥವಾದ ಶಬ್ದವನ್ನು ಪ್ರಯೋಗಿಸುತ್ತಾರೆ. ಹಾಗಾಗಿ ಅರ್ಥವಾದ ಎಂದರೆ ಜ್ಞಾನಿಗಳು ಯಾವುದನ್ನು ಹೇಳುತ್ತಾರೋ ಅದು ಅರ್ಥವಾದ.

### ಉಪಕ್ರಮಾದಿಗಳಲ್ಲಿ ಬಲಾಬಲವ್ಯವಸ್ಥೆ

ಉಪಕ್ರಮಕ್ಕಿಂತಲೂ ಉಪಸಂಹಾರವೇ ಪ್ರಬಲ. ಏಕೆಂದರೆ ಉಪಕ್ರಮವು ವ್ಯಾಖ್ಯೇಯರೂಪವಾಗಿದ್ದರೆ, ಉಪಸಂಹಾರವು ವ್ಯಾಖ್ಯಾನರೂಪವಾಗಿರುವುದಿರಂದ ವ್ಯಾಖ್ಯಾನಾನುಸಾರವಾಗಿ ವ್ಯಾಖ್ಯೇಯಕ್ಕೆ ಅರ್ಥ ಮಾಡುವುದೇ ಯುಕ್ತವಾದ್ದರಿಂದ ಉಪಸಂಹಾರವು ಪ್ರಬಲ. ಇದು ಲೋಕದಲ್ಲೂ ವೇದದಲ್ಲೂ ಕಂಡಿರುವ ವಿಷಯ. ಲೋಕದಲ್ಲಿ 'ಗಾಂ ಆನಯ' ಎಂದು ಹೇಳಿ. ಬಲೀವರ್ದಮಾನಯ ಎಂದು ವಿವರಣೆ ಕೊಡುತ್ತಾರೆ. ಅಲ್ಲಿ ಮೊದಲು ಹೇಳಿದ್ದಕ್ಕೆ ಆನಂತರ ಹೇಳಿದ್ದು ಆಪಾತತಃ ವಿರೋಧವಿದ್ದಂತೆ ಕಂಡರೂ ಉಪಸಂಹಾರಕ್ಕೆ ಅನುಸಾರಿಯಾಗಿ ಮೊದಲಿನ ಗೊ

ಎಂದರೆ, ಗೋ ವಿಶೇಷವಾದ ಬಲೀವರ್ದವೇ ಎಂದು ಅರ್ಥೈಸುತ್ತಾರೆ. ಹೀಗೆ ವೇದದಲ್ಲೂ 'ವಾಸಃ ಪರಿಧತ್ತೇ', ಎಂಬುದರಿಂದ ಯಾವುದೇ ವಸ್ತ್ರ ಎಂದಿದ್ದರೂ ಉಪಸಂಹಾರದಲ್ಲಿ ''ಯತ್ ಕ್ಷೌಮಂ'' ಎಂದಿರುವುದರಿಂದ ಮೊದಲಿನ ವಾಸ ಶಬ್ದಕ್ಕೆ ಎಂದರೆ 'ಕ್ಷಾಮವಾಸ' ಎಂದೇ ಅರ್ಥೈಸಿದ್ದಾರೆ.

ಹಾಗಾದರೆ ಶೈವಾಗಮವು ವಾಖ್ಯಾನರೂಪವಾಗಿರುವುದರಿಂದ ಅದರ ಅನುಸಾರಿಯಾಗಿ ಶಾಸ್ತ್ರಕ್ಕೆ ಅರ್ಥೈಸಬೇಕಾಗುತ್ತದಲ್ಲವೆ? ಎಂದರೆ ಹಾಗಲ್ಲ ಆ ವ್ಯಾಖ್ಯಾನವು ಪ್ರಮಾಣವೆಂದು ಸಿದ್ಧವಾಗಿರಬೇಕು ಅಂತಹ ವ್ಯಾಖ್ಯಾನದಿಂದ ತಾತ್ಪರ್ಯವನ್ನೂ ನಿಶ್ಚಯಿಸಬಹುದು. ಆದರೆ ಶೈವಾಗಮಕ್ಕೆ ಪ್ರಾಮಾಣ್ಯ ಸಿದ್ಧವಾಗಿಲ್ಲ. ಆದ್ದರಿಂದ ನಿಮ್ಮ ಆಶೆ ಈಡೇರುವುದಿಲ್ಲ.

ನೀವು ಹೀಗೆ ಹೇಳಿದರೆ 'ವೇದೋಪಕ್ರಮಾಧಿಕರಣ'ದ ವಿರೋಧ ಬರುತ್ತದೆ ಅಲ್ಲಿ ಉಪಕ್ರಮಕ್ಕೆ ಪ್ರಾಬಲ್ಯವನ್ನು ನಿಶ್ಚಯಿಸಿರುತ್ತಾರೆಂದರೆ ಹಾಗಲ್ಲ ಅಲ್ಲಿ ಉಪಕ್ರಮಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದರೂ ಕೂಡ ಉಪಕ್ರಮದ ಜೊತೆಗೆ 'ಅಭ್ಯಾಸ'ವೂ ಇರುವುದರಿಂದ. ಹಾಗಾದಲ್ಲಿ 'ಅಶ್ವಪ್ರತಿಗ್ರಹೇಷ್ಟಿಯನ್ನು ಹೇಳುವ ಅಧಿಕರಣದ ವಿರೋಧ ಬರುತ್ತದೆಂದು ಶಂಕಿಸಬಹುದು. ಅಲ್ಲಿ ಉಪಕ್ರಮಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ಕಾಣುತ್ತದೆ. ಆದರೆ ಅಲ್ಲೂ ಕೂಡ ಉಪಕ್ರಮದಲ್ಲಿ ಹೇಳಿದೆಯೆಂಬ ಮಾತ್ರಕ್ಕೆ ಆ ವಿಷಯವನ್ನು ಸ್ವೀಕರಿಸಿಲ್ಲ. ಹೊರತಾಗಿ ಮೈತ್ರಾಯಣೀಶಾಖೆಯಲ್ಲಿ ಸ್ಪಷ್ಟವಾಗಿ ಆ ವಿಷಯವನ್ನು ಹೇಳುವ ಪ್ರಮಾಣವಿರುವುದರಿಂದ ಅದಕ್ಕೆ ಮಹತ್ವ ನೀಡಿದ್ದಾರೆ. ಹೀಗಾಗಿ ಉಪಕ್ರಮಕ್ಕಿಂತ ಉಪಸಂಹಾರವೇ ಪ್ರಬಲ.

ಉಪಸಂಹಾರಕ್ಕಿಂತ ಅಭ್ಯಾಸ ಪ್ರಬಲ

ಒಂದು ಬಾರಿ ಹೇಳುವ ಉಪಸಂಹಾರಕ್ಕಿಂತ ಅನೇಕ ಬಾರಿ ಒಂದೇ ವಿಷಯವನ್ನು ತಿಳಿಸುವ 'ಅಭ್ಯಾಸವು' ಪ್ರಬಲ. ಏಕೆಂದರೆ ಒಂದರಿಂದ ಅನೇಕಕ್ಕೆ ಅಪ್ರಾಮಾಣ್ಯವನ್ನು ಹೇಳುವುದು ಉಚಿತವಲ್ಲ. ಈ ವಿಷಯವನ್ನು ಬ್ರಹ್ಮಶಬ್ದಾಭ್ಯಾಸವನ್ನು ಹೇತುವನ್ನಾಗಿ ಒಪ್ಪುವ ಉತ್ತರಮೀಮಾಂಸಕಾರರುಮತ್ತು ಬಹಳ ಪ್ರಮಾಣಗಳ ವಿರೋಧ ಪರಿಹರಿಸಲು ಕೆಲವು ಪ್ರಮಾಣಗಳಿಗೆ ಅಪ್ರಾಮಾಣ್ಯವನ್ನು ಹೇಳುವ ಪೂರ್ವಮೀಮಾಂಸಕರು ಇಬ್ಬರೂ ಒಪ್ಪಿದ್ದಾರೆ.

ಅಪೂರ್ವತೆಯು ಅಭ್ಯಾಸಕ್ಕಿಂತ ಬಲಿಷ್ಠ

ಒಂದೇ ವಿಷಯವನ್ನು ಅನೇಕ ಸಲ ಹೇಳುವಂತಹ ಅಭ್ಯಾಸಕ್ಕಿಂತ ಅಪೂರ್ವತಾವು ಪ್ರಬಲ. ಹೇಗೆಂದರೆ ಒಂದೇ ವಿಷಯವನ್ನು ಅನೇಕ ಸಲ ಹೇಳಿದ್ದರೂ ಅದಕ್ಕೆ ಮೊದಲು

ಸಿದ್ಧವಾದ ಬೇರೆ ಅರ್ಥವನ್ನು ಹೇಳಿ ಕೂಡಿಸಲು ಬರುವಂತಿದ್ದರೆ ಅಂತಹ ಸಂದರ್ಭದಲ್ಲಿ ಮೊದಲು ಬೇರೆ ಪ್ರಮಾಣದಿಂದ ಸಿದ್ಧವಾಗದ ಅಪೂರ್ವವಾದ ಅರ್ಥವನ್ನು ಹೇಳುವ ವಾಕ್ಯಕ್ಕೆ ಪ್ರಾಶಸ್ತ್ಯ ಹೇಳುವುದೇ ಸೂಕ್ತ. ಇದನ್ನು 'ಜೀವಾದ್ ಭವಂತಿ ಭೂತಾನಿ' ಎಂಬ ಶ್ರುತಿಯನ್ನು ವ್ಯಾಖ್ಯಾನಿಸುವಾಗ ಐತರೇಯಭಾಷ್ಯದಲ್ಲಿ ಆಚಾರ್ಯರು ಹೇಳಿದ್ದಾರೆ. ಅಲ್ಲದೆ ಮೊದಲು ಸಿದ್ಧವಲ್ಲದ್ದನ್ನು ಹೇಳುವ ವಾಕ್ಯ ವಿಧಿವಾಕ್ಯ, ಸಿದ್ಧವಾಗಿರುವುದನ್ನು ತಿಳಿಸುವುದು ಗುಣವಾಕ್ಯ ಎಂದು ಹೇಳುವ ಮೀಮಾಂಸಕರೂ ಒಪ್ಪಿದ್ದಾರೆ.

ಅಪೂರ್ವತೆಗಿಂತ ಬಲಿಷ್ಠವಾದದ್ದು ಫಲ.

ಅಪೂರ್ವಕ್ಕಿಂತ ಫಲವೇ ಶ್ರೇಷ್ಠ. ಅದು ಹೀಗೆ -

ವೈದಿಕಲೌಕಿಕವಾಕ್ಯಗಳು ಹೊಸವಿಷಯವನ್ನು ತಿಳಿಸುವುದಕ್ಕಿಂತ ನಮಗೆ ಸಂತೋಷವಾಗುವ ವಿಷಯವನ್ನು ತಿಳಿಸಬೇಕು. ಆವಾಗ ಆ ವಾಕ್ಯಗಳಿಗೆ ಪರಮಪ್ರಾಮಾಣ್ಯ ಬರುತ್ತದೆ.

ಉದಾಹರಣೆಗಳು - ೧) 'ಕಾಗೆಗೆ ಎಂಟು ಹಲ್ಲುಗಳು' ಎಂಬ ವಾಕ್ಯವು ಹೊಸವಿಷಯವನ್ನು ಹೇಳುತ್ತದೆ. ಆದರೆ ಈ ವಾಕ್ಯಶ್ರವಣದಿಂದ ಯಾವ ಲಾಭವೂ ಆಗುವುದಿಲ್ಲ. ಆದರೆ 'ನಿಮ್ಮ ಮಗನು ಅತ್ಯಂತ ಮೇಧಾವೀ, ಮಹಾಬಲಿಷ್ಠ, ಪರೋಪಕಾರೀ' ಇತ್ಯಾದಿ ವಾಕ್ಯಗಳಿಂದ ಬಹಳ ಸಂತೋಷವಾಗುತ್ತದೆ. ಎಷ್ಟು ಬಾರಿ ಕೇಳಿದರೂ ಪುನಃ ಪುನಃ ಕೇಳಬೇಕೆನಿಸುತ್ತದೆ.

೨) 'ಅಸತಃ ಸದಜಾಯತ' ಎಂಬ ವಾಕ್ಯದಿಂದ ಶೂನ್ಯದಿಂದ ಬ್ರಹ್ಮನು ಹುಟ್ಟಿದನೆಂದು ತಿಳಿದರೆ ಯಾವ ಪ್ರಯೋಜನವೂ ಇಲ್ಲ. ಆದರೆ 'ಸದೇವ ಸೌಮ್ಯೇದಮಗ್ರೇ ಆಸೀತ್' ಎಂಬ ವಾಕ್ಯದಿಂದ ಬ್ರಹ್ಮನು ಉತ್ಪತ್ತಿ ಇಲ್ಲದವನೆಂದು ತಿಳಿದಾಗ ಮಹಾಫಲವೇ ದೊರೆಯುತ್ತದೆ.

೩) ಅಂಗವಾದ ಸಮಿಧಾದಿಯಾಗಗಳಿಂದ ಸ್ವರ್ಗಾದಿ ಪ್ರಯೋಜನಗಳು ಸಿಗುವುದಿಲ್ಲ. ಆದರೆ ಪ್ರಧಾನವಾದ ದರ್ಶಪೂರ್ಣಮಾಸಾದ್ಯಾಗಗಳಿಂದ ಸ್ವರ್ಗಾದಿಪ್ರಯೋಜನಗಳು ಸಿಗುತ್ತವೆ. ಸಮಿಧಾದಿಯಾಗಗಳು ಫಲವುಳ್ಳ ದರ್ಶಪೂರ್ಣಮಾಸಯಾಗಕ್ಕೆ ಅಂಗವಾದರೆ ಮಾತ್ರ ಪ್ರಮಾಣವಾಗುತ್ತವೆ.

೪) 'ಸಮಿಧೋ ಯಜತಿ' ಇತ್ಯಾದಿವಾಕ್ಯಗಳು ಫಲವನ್ನು ತಿಳಿಸುತ್ತಿಲ್ಲ. 'ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ' ಎಂಬ ವಾಕ್ಯವು ಫಲವನ್ನು

ತಿಳಿಸುತ್ತಿದೆ. 'ಸಮಿಧೋ ಯಜತಿ' ಇತ್ಯಾದಿವಾಕ್ಯಗಳು ಫಲವನ್ನು ತಿಳಿಸುವ 'ದರ್ಶಪೂರ್ಣಮಾಸಾಭ್ಯಾಂ' ಇತ್ಯಾದಿ ವಾಕ್ಯವನ್ನು ಅನುಸರಿಸಿದರೆ ಮಾತ್ರ ಪ್ರಮಾಣವಾಗುತ್ತವೆ.

೫) 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಹೊಸಕರ್ಮವನ್ನು ವಿಧಿಸಬಹುದಾದರೂ ಫಲವನ್ನು ಹೇಳುವ ಕಾರಣ ಪ್ರಮಾಣವಾಗುವುದಿಲ್ಲ. ಆದರೆ ಫಲವನ್ನು ಹೇಳುವ 'ಅಗ್ನಿಹೋತ್ರಂ ಜುಹುಯಾತ್ ಸ್ವರ್ಗಕಾಮಃ' ಎಂಬ ವಾಕ್ಯದ ಜೊತೆ ಸೇರಿದಾಗ ಪ್ರಮಾಣವಾಗುತ್ತದೆ.

ಈ ಎಲ್ಲಾ ದೃಷ್ಟಾಂತಗಳನ್ನು ಗಮನಿಸಿದಾಗ ಅಪೂರ್ವತ್ವ ಎಲ್ಲೆಡೆ ಇದ್ದರೂ ಅದಕ್ಕೆ ಬೆಲೆಯಿಲ್ಲ. ಫಲಕ್ಕಷ್ಟೇ ಬೆಲೆಯೆಂದು ತಿಳಿಯುತ್ತದೆ. ಅಪೂರ್ವತ್ವ ಇರಲಿ ಬಿಡಲಿ ಫಲವಿದ್ದರೆ ಸಾಕು ಆ ವಾಕ್ಯ ಪ್ರಮಾಣವಾಗುತ್ತದೆ. ಅಪೂರ್ವತ್ವದ ಜೊತೆಗೆ ಫಲವಿದ್ದರೆ ಇನ್ನೂ ಹೆಚ್ಚು ಪ್ರಮಾಣವಾಗುತ್ತದೆಂಬುದನ್ನು ಮರೆಯಬಾರದು.

**ಫಲಕ್ಕಿಂತ ಅರ್ಥವಾದ ಮತ್ತಷ್ಟು ಬಲಿಷ್ಠ**

**ಫಲಕ್ಕಿಂತ ಅರ್ಥವಾದವು ಶ್ರೇಷ್ಠ.**

ಉದಾಹರಣೆ :- ಕರ್ಮಾಚರಣೆಯಿಂದ ಸ್ವರ್ಗಾದಿಫಲಗಳು ದೊರೆಯುತ್ತವೆಂದು ಕೆಲವೆಡೆ ಇದೆ. ಇನ್ನು ಕೆಲವೆಡೆ ಕರ್ಮಾಚರಣೆಯಿಂದ ಜ್ಞಾನವನ್ನು ಪಡೆಯುತ್ತಾನೆ. ಜ್ಞಾನದ ಮೂಲಕ ಮೋಕ್ಷಾದಿ ಪುರುಷಾರ್ಥವನ್ನು ಪಡೆಯುತ್ತಾನೆಂದು ಹೇಳಲಾಗಿದೆ. ಸ್ವರ್ಗಾದಿಫಲಗಳನ್ನು ಹೇಳುವ ವಾಕ್ಯ ಫಲವಾಕ್ಯ ಎನಿಸಿದೆ. ಜ್ಞಾನಸಾಧನೆಯನ್ನು ಹೇಳುವ ವಾಕ್ಯ ಸ್ತುತಿ ರೂಪವಾದ ಅರ್ಥವಾದವಾಕ್ಯ ಎನಿಸಿದೆ. ಇವೆರಡರ ಮಧ್ಯದಲ್ಲಿ ಅರ್ಥವಾದವಾಕ್ಯವೇ ಶ್ರೇಷ್ಠವೆಂದು 'ಉತ್ಪತ್ತ್ಯಮಿಷ್ಯತಃ ಏವಂಭಾವಾದಿತ್ಯೌಡುಲೋಮಿಃ' ಎಂಬ ಸೂತ್ರದಲ್ಲಿ ಸೂತ್ರಕಾರರು ಹೇಳಿದ್ದಾರೆ.

ಕರ್ಮಗಳನ್ನು ಕಾಮ್ಯಫಲಕ್ಕೋಸ್ಕರ ಮಾಡಬಾರದು; ಜ್ಞಾನಕ್ಕೋಸ್ಕರ ಮಾಡಬೇಕು. ಜ್ಞಾನಕ್ಕೋಸ್ಕರವೇ ಕರ್ಮವನ್ನು ಮಾಡಬೇಕಾದ್ದರಿಂದ ಕಾಮ್ಯಫಲಕ್ಕೋಸ್ಕರ ಮಾಡಬಾರದಾದ್ದರಿಂದ ಅರ್ಥವಾದವನ್ನು ಫಲವು ಬಾಧಿಸಲಾರದು. ಅಂದರೆ ಅರ್ಥವಾದಕ್ಕಿಂತ ಫಲವು ಶ್ರೇಷ್ಠವಾಗುವುದಿಲ್ಲ. ಇದನ್ನು ಮೀಮಾಂಸಕರೂ ಒಪ್ಪುತ್ತಾರೆ. ಫಲವಾಕ್ಯವನ್ನು ಬಿಟ್ಟರೂ ಪರವಾಗಿಲ್ಲ. ಅರ್ಥವಾದವಾಕ್ಯವನ್ನು ಬಿಡಬಾರದು. ಹೀಗೆ 'ವಿಧಿರ್ವಾ ಸ್ಯಾದಪೂರ್ವತ್ವಾತ್' ಎಂಬ ಸೂತ್ರದಲ್ಲಿ ಮೀಮಾಂಸಕರು ತೀರ್ಮಾನಿಸಿದ್ದಾರೆ.

ಈ ಎಲ್ಲ ಕಾರಣಗಳಿಂದ ಮತ್ತು ಉದಾಹರಣೆಗಳಿಂದ ಫಲಕ್ಕಿಂತ ಅರ್ಥವಾದವೇ ಶ್ರೇಷ್ಠವೆಂಬುದರಲ್ಲಿ ಸಂದೇಹವಿಲ್ಲ.

ಸರ್ವಮೂಲ ಉಪಪತ್ತಿಯೇ ಸರ್ವಶ್ರೇಷ್ಠ

ಅರ್ಥವಾದಕ್ಕಿಂತಲೂ ಉಪಪತ್ತಿಯು ಶ್ರೇಷ್ಠವಾಗಿದೆ. ಉಪಪತ್ತಿಯು ಕೇವಲ ಅರ್ಥವಾದಕ್ಕಿಂತ ಮಾತ್ರ ಶ್ರೇಷ್ಠವಲ್ಲ. ಉಪಕ್ರಮಪಸಂಹಾರವೇ ಮೊದಲಾದ ಆರೂ ತಾತ್ಪರ್ಯಲಿಂಗಗಳಿಗಿಂತಲೂ ಶ್ರೇಷ್ಠವಾಗಿದೆ.

ಈ ವಿಷಯದಲ್ಲಿ ಅನೇಕ ಉದಾಹರಣೆಗಳಿವೆ -

'ಪೃಥಗುಪದೇಶಾತ್' ಎಂಬಲ್ಲಿ ಸೂತ್ರಕಾರರು ಅರ್ಥವಾದದಿಂದ ಸಹಿತವಾದ ಅಭೇದಶ್ರುತಿಗಿಂತ ಉಪಪತ್ತಿಸಹಿತವಾದ ಭೇದಶ್ರುತಿಯನ್ನೇ ಬಲಿಷ್ಠವೆಂದು ಹೇಳಿದ್ದಾರೆ.

ಭಾಷ್ಯದಲ್ಲಿಯೂ 'ಸೋಪಪತ್ತಿಕಕೌಶಿಕಶ್ರುತೇಃ' ಎಂದು ಆಗಮದ ಸಹಾಯ ಹೊಂದಿದ ಯುಕ್ತಿಯನ್ನು ಎತ್ತಿಕಟ್ಟಿದ್ದಾರೆ. ಅನುವ್ಯಾಖ್ಯಾನದಲ್ಲಂತು ಸ್ಪಷ್ಟವಾಗಿ ಶ್ರುತಿಯ ಸಹಕಾರ ಹೊಂದಿದ ಯುಕ್ತಿಯನ್ನು ಪರಮ ಪ್ರಮಾಣವೆಂದು ಸಾರಿದ್ದಾರೆ. ಸ್ವಾಧಿಕರಣದಲ್ಲಿ ವಿಧಿಯನ್ನೇ ಉಪಪತ್ತಿವಿರುದ್ಧವಾದಲ್ಲಿ ತ್ಯಾಜ್ಯವೆಂದು ಹೇಳಿದ ಮೀಮಾಂಸಕರು ವಿಧಿಗಿಂತ ನಿಕೃಷ್ಟವಾದ ಅರ್ಥವಾದವು ಉಪಪತ್ತಿವಿರುದ್ಧವಾದಲ್ಲಿ ತ್ಯಾಜ್ಯವೆಂದು ಹೇಳದೆ ಇರುತ್ತಾರೇನು?

ಈ ಎಲ್ಲ ಉದಾಹರಣೆಗಳಿಂದ ಯುಕ್ತಿಯು ಸರ್ವಶ್ರೇಷ್ಠವೆಂದು ನಿರ್ಣಯವಾಗುತ್ತದೆ.

ಕೇವಲ ಯುಕ್ತಿಯು ಪ್ರಮಾಣವಲ್ಲವೆಂಬುದು ಸಿದ್ಧವಾದ ವಿಚಾರ. ಪ್ರಕೃತ ಆಗಮದ ಸಹಾಯ ಹೊಂದಿದ ಯುಕ್ತಿಯು ಪರಮಪ್ರಮಾಣ ಸರ್ವಶ್ರೇಷ್ಠ, ಸರ್ವಕ್ಕೂ ಮೂಲವೆಂದು ಸಾಧಿಸಲಾಗಿದೆ.

ಯುಕ್ತಿಯನ್ನು ಅಪೇಕ್ಷಿಸುವ ಶ್ರುತಿಯು ಅಪ್ರಮಾಣವಾಗುವುದಿಲ್ಲ.

ಶ್ರುತಿಯು ಉಪಪತ್ತಿಯನ್ನು ಅಪೇಕ್ಷಿಸುವುದಾದರೆ ಅಪ್ರಾಮಾಣ್ಯ ಬರುತ್ತದೆಂದು ಹಿಂದೆ ಪೂರ್ವಪಕ್ಷ ಮಾಡಲಾಗಿತ್ತು.

ಇದು ಸರಿಯಲ್ಲ. ವೇದದತಾತ್ಪರ್ಯನಿಶ್ಚಯವಾಗಬೇಕೆಂದರೆ ಚೆನ್ನಾಗಿ ವಿಚಾರ ಮಾಡಬೇಕು. ವಿಚಾರ ಮಾಡಬೇಕಾದರೆ ಉಪಕ್ರಮಾದಿಯುಕ್ತಿಗಳು ಬೇಕೇ ಬೇಕು.

ಉಪಕ್ರಮಾದಿಯುಕ್ತಿಗಳ ಸಹಕಾರವಿಲ್ಲದೆ ವೇದತಾತ್ಪರ್ಯವನ್ನು ನಿಶ್ಚಯಿಸಲಾಗದು. ಆದರೆ ವೇದದ ಅರ್ಥನಿರ್ಣಯಕ್ಕೆ ಯಾವ ಯುಕ್ತಿಗಳನ್ನೂ ಆಶ್ರಯಿಸಬಾರದು. ಹಾಗೇನಾದರೂ ಯುಕ್ತಿಯ ಸಹಕಾರದಿಂದ ಅರ್ಥವನ್ನು ನಿಶ್ಚಯಿಸುವುದಾದರೆ ವೇದಕ್ಕೆ ಅಪ್ರಾಮಾಣ್ಯ ಬರುತ್ತದೆ.

'ತೇನ ಹ್ಯನ್ನಂ ಕ್ರಿಯತೇ' ಎಂಬುದು ಹೇತುವಾಕ್ಯವಾದಲ್ಲಿ ಇದರಿಂದ ಅನ್ವಿತವಾದ 'ಶೂರ್ಪೇಣ ಜುಹೋತಿ' ಎಂಬ ಶ್ರುತಿಗೆ ಅಪ್ರಾಮಾಣ್ಯ ಬರುತ್ತದೆಂದು ಹೇಳಿದ್ದೂ ಕೂಡ ತಪ್ಪು ಮೀಮಾಂಸಕರು ಅಪ್ರಾಮಾಣ್ಯದ ಹೆದರಿಕೆಯಿಂದ 'ತೇನ ಹ್ಯನ್ನಂ ಕ್ರಿಯತೇ' ಎಂಬುದನ್ನು ಹೇತುವಲ್ಲವೆಂದು ಹೇಳಿದ್ದಲ್ಲ. ವಿಕಲ್ಪದ ಭಯದಿಂದ; ಮೀಮಾಂಸಕರ ನಿಬಂಧನಗ್ರಂಥದಲ್ಲಂತೂ ಸ್ಪಷ್ಟವಾಗಿ ಹೇತುವಾಕ್ಯದ ಅನ್ವಯ ಒಪ್ಪಿದ್ದು ಕಂಡು ಬಂದಿದೆ.

ಆದ್ದರಿಂದ ಯುಕ್ತಿಯನ್ನು ಅಪೇಕ್ಷಿಸಿದ ವೇದವು ಪ್ರಮಾಣವಾಗುವುದಿಲ್ಲ.

ಉಪಕ್ರಮೋಪಸಂಹಾರೈಕ್ಯದ ಸ್ಥಾನ ಮಾನ.

ಉಪಕ್ರಮಾದಿಷಡ್ವಿಧತಾತ್ಪರ್ಯಲಿಂಗಗಳಲ್ಲಿ ಹಿಂದಿನದಕ್ಕಿಂತ ಮುಂದಿನದ್ದು ಪ್ರಬಲವೆಂದು ಶ್ರುತಿಲಿಂಗಾದಿ ತಾತ್ಪರ್ಯಲಿಂಗಗಳಲ್ಲಿ ಮುಂದಿನದಕ್ಕಿಂತ ಹಿಂದಿನದ್ದು ಪ್ರಬಲವೆಂದು ತಿಳಿಯಬೇಕು.

ಉಪಕ್ರಮಾದಿಷಡ್ವಿಧತಾತ್ಪರ್ಯಲಿಂಗಗಳ ಮಧ್ಯದಲ್ಲಿ ಗಮನಿಸಬೇಕಾದ ಒಂದು ಅಂಶ - ಉಪಕ್ರಮ ಮತ್ತು ಉಪಸಂಹಾರಗಳಿಗಿಂತಲೂ ಪ್ರಬಲವಾದದ್ದು ಉಪಕ್ರಮೋಪಸಂಹಾರೈಕರೂಪ್ಯ. ಇದರ ಬಗ್ಗೆ ಪ್ರಮಾಣ ಲಕ್ಷಣ ವಿವರಣೆ ನೀಡಿದೆ. ಪ್ರಕೃತ ಟೀಕೆಯೂ ಸೂಚ್ಯವಾಗಿ ಇದನ್ನು ಹೇಳಿದೆ.

ಉಪಪತ್ತಿಯನ್ನು ಪ್ರತ್ಯೇಕ ಹೇಳಿದ್ದರ ಸಾರ್ಥಕ್ಯ ಹೀಗಿದೆ - ಉಪಕ್ರಮಾದಿಗಳೆಲ್ಲವೂ ಮಹಾತಾತ್ಪರ್ಯದಲ್ಲಷ್ಟೇ ಲಿಂಗರೂಪಗಳಾಗಿವೆ. ಆದರೆ ಉಪಪತ್ತಿ ಮಾತ್ರ ಅವಾಂತರತಾತ್ಪರ್ಯ ಮತ್ತು ಮಹಾತಾತ್ಪರ್ಯ ಎರಡರಲ್ಲಿಯೂ ಲಿಂಗರೂಪವೇ ಆಗಿದೆ. ಈ ವ್ಯತ್ಯಾಸವನ್ನು ತಿಳಿಸಲು ಉಪಪತ್ತಿಯನ್ನು ಪ್ರತ್ಯೇಕ ಪರಿಗಣಿಸಿದ್ದಾರೆ.

ನಿರವಕಾಶಕ್ಕೆ ಎಲ್ಲೆಡೆ ಅದ್ವಿತೀಯಸ್ಥಾನ

ಉಪಕ್ರಮಾದಿಸಪ್ತವಿಧತಾತ್ಪರ್ಯಲಿಂಗಗಳಲ್ಲಿ ಹಿಂದಿನ ಲಿಂಗಗಳಿಗಿಂತ ಮುಂದಿನ ಲಿಂಗಗಳು ಪ್ರಬಲವಾಗಿರುತ್ತವೆ. ಆದರೆ ಎಲ್ಲೆಡೆ ಈ ನಿಯಮವಿಲ್ಲ. ಪ್ರಾಬಲ್ಯದೌರ್ಬಲ್ಯವಿಚಾರವನ್ನು ಸ್ಪಷ್ಟಪಡಿಸುವ ಒಂದು ಶ್ಲೋಕವಿದೆ -

ದ್ವಿವಿಧಂ ಬಲವತ್ತ್ವಂ ಹಿ ಬಹುತ್ವಾಚ್ಚ ಸ್ವಭಾವತಃ।
ತಯೋಃ ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ ॥

ಲಿಂಗಗಳು ಬಹುಬಗೆಯಲ್ಲಿ ಬಲಿಷ್ಠ ಎನಿಸುತ್ತವೆ - ೧) ಬಾಹುಲ್ಯ ಪ್ರಯುಕ್ತವಾಗಿ ೨) ಸ್ವಭಾವ ಪ್ರಯುಕ್ತವಾಗಿ ೩) ಉಪಜೀವ್ಯ ಪ್ರಯುಕ್ತವಾಗಿ ೪) ನಿರವಕಾಶ ಪ್ರಯುಕ್ತವಾಗಿ ಎಂದು. ಇವುಗಳಲ್ಲಿ ನಿರವಕಾಶಪ್ರಯುಕ್ತವಾದ ಪ್ರಾಬಲ್ಯವೇ ಬಹಳ ಶ್ರೇಷ್ಠ.

ಉಪಸಂಹಾರಕ್ಕಿಂತ ಉಪಕ್ರಮವು ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಉಪಕ್ರಮವೇ ಶ್ರೇಷ್ಠವಾಗುತ್ತದೆ. ಇದರಂತೆ ಉಪಜೀವಕವು ಉಪಜೀವ್ಯಕ್ಕಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಶ್ರೇಷ್ಠವಾಗುತ್ತದೆ. ಒಂದು ಲಿಂಗವು ಅನೇಕಲಿಂಗಗಳಿಗಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಪ್ರಬಲವಾಗುತ್ತದೆ.

ಹಾಗಾದಲ್ಲಿ ನಿರವಕಾಶದಿಂದ ಸಾವಕಾಶವು ಬಾಧಿತವಾಗುತ್ತದೆಂದಷ್ಟೇ ಹೇಳಿರಿ; ಉಪಕ್ರಮಾದಿಗಳ ವಿಭಾಗವೇಕೆ? ಎಂದು ಪ್ರಶ್ನಿಸಬಾರದು. ಉಪಕ್ರಮ ಹಾಗು ಉಪಸಂಹಾರಗಳಲ್ಲಿ ಎರಡೂ ನಿರವಕಾಶ- ಗಳಾಗದಿದ್ದಾಗ ಎರಡೂ ಸಾವಕಾಶಗಳಾಗುತ್ತವೆ. ಆವಾಗ ಸ್ವಭಾವಪ್ರಯುಕ್ತವಾಗಿಯೇ ಪ್ರಾಬಲ್ಯದೌರ್ಬಲವನ್ನು ವಿಚಾರಮಾಡಬೇಕಾಗುತ್ತದೆ. ಆದ್ದರಿಂದ ಉಪಕ್ರಮಾದಿಗಳ ವಿಭಾಗವು ಸಾರ್ಥಕವಾಗಿದೆ. ಶ್ರುತಿಲಿಂಗಾದಿತಾತ್ಪರ್ಯಲಿಂಗಗಳಲ್ಲಿಯೂ ನಿರವಕಾಶಲಿಂಗಕ್ಕೇ ಹೆಚ್ಚು ಸ್ಥಾನಮಾನ.

## ಭಾಷ್ಯದಲ್ಲಿ ಉಪಪತ್ತಿಯನ್ನು ಮೊದಲು ಹೇಳಿದ್ದೇಕೆ

**ಭಾವದೀಪಃ – ನನು ಸ್ಮೃತಾವುಪಪತ್ತೇರನ್ತ್ಯತ್ವೋಕ್ತಾವಪಿ ಭಾಷ್ಯೇ 'ಉಪಪತ್ತ್ಯಾದಿಲಿಙ್ಗಮ್' ಇತ್ಯುಪಕ್ರಮಾದಿಷ್ವಪಪತ್ತೇಃ ಪ್ರಾಥಮ್ಯಂ ಕುತಃ? ಇತ್ಯತ ಆಹ – ಉಪಕ್ರಮೇತಿ ।। ಉಕ್ತೇರಿತಿ ।। 'ಜ್ಞಾನಪಾದೀಯಾನುಭಾಷ್ಯೋಕ್ತೇಃ' ಇತ್ಯರ್ಥಃ । ಬೀಜಂ ವದನ್ ಪ್ರಾಬಲ್ಯಂ ವ್ಯನಕ್ತಿ – ಉಪಸಂಹಾರಸ್ಯೇತ್ಯಾದಿನಾ ।। 'ಆಪತ್ತೇಃ' ಇತ್ಯನನ್ತರಂ 'ತತ್ಪ್ರಾಮಾಣ್ಯಾರ್ಥಮುಪಸಂಹಾರಾನುಸಾರಿತ್ವಸ್ಯೋಪೇಯತ್ವಾತ್' ಇತಿ ಯೋಜ್ಯಮ್ । ತೃತೀಯಾದ್ಯಪಾದೇ ಪ್ರಥಮೇ 'ಶ್ರವಣಾದಿತಿ ಚೇತ್' ಇತ್ಯತ್ರ 'ಉಪಕ್ರಮಪ್ರಾಮಾಣ್ಯಾರ್ಥಮುಪಸಂಹಾರಾನುಸಾರಿತ್ವಮಙ್ಗೀಕರ್ತವ್ಯಮ್ । ವ್ಯಾಖ್ಯಾನಸ್ಯ ಪಶ್ಚಾತ್ತನತ್ವನಿಯಮಾತ್' ಇತಿ ನ್ಯಾಯವಿವರಣೋಕ್ತೇರಿತಿ ಭಾವಃ । ವಿಸ್ತೃತಮೇತತ್ ತರ್ಕತಾಣ್ಡವೇ । ಗುರುಪಾದಕೃತೋಪಸಂಹಾರವಿಜಯೇ ಚ । 'ಉಪಸಂಹಾರಯೋಃ'**

**इत्यनन्तरं 'सकाशात्' इति शेषः । बहुबाधस्यान्याय्यत्वादिति भावः । मुख्यस्येति ।। 'अप्राप्तस्य' इत्यर्थः । सर्वमेतत् चन्द्रिकायां सम्यग् विवृतम्।**

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು - ಸ್ಮೃತಿಯಲ್ಲಿ ಉಪಪತ್ತಿಯನ್ನು ಕೊನೆಗೆ ಹೇಳಿದ್ದನ್ನು ಭಾಷ್ಯದಲ್ಲಿ 'ಉಪಪತ್ತ್ಯಾದಿ ಲಿಂಗಮ್' ಎಂದು ಉಪಕ್ರಮಾದಿಗಳಲ್ಲಿ ಉಪಪತ್ತಿಯನ್ನು ಮೊದಲು ಸ್ವೀಕಾರ ಮಾಡಿದ್ದು ಏಕೆ? ಇದಕ್ಕೆ ಉತ್ತರವಾಗಿ 'ಉಪಕ್ರಮಾದೀನಾಂ' ಎಂಬ ವಾಕ್ಯ ಹೊರಟಿದೆ. 'ಉಕ್ತೇಃ' ಎಂಬುದಕ್ಕೆ 'ಜ್ಞಾನಪಾದದ ಅನುವ್ಯಾಖ್ಯಾನದಲ್ಲಿ ಹೇಳಿರುವುದರಿಂದ' ಎಂಬುದಾಗಿ ಅರ್ಥ. ಉಪಕ್ರಮಾದಿಗಳಲ್ಲಿ ಉತ್ತರೋತ್ತರಪ್ರಾಬಲ್ಯಕ್ಕೆ ಕಾರಣವನ್ನು ಹೇಳುತ್ತಾ, ''ಉಪಸಂಹಾರಸ್ಯ'' ಇತ್ಯಾದಿ ವಾಕ್ಯಗಳಿಂದ ಅದನ್ನು ಸ್ಪಷ್ಟಪಡಿಸುತ್ತಿದ್ದಾರೆ.

'ಉಪಸಂಹಾರಸ್ಯ' ಇತ್ಯಾದಿ ವಾಕ್ಯದಲ್ಲಿ ''ಆಪತ್ತೇಃ'' ಎಂಬ ಶಬ್ದದ ನಂತರ 'ತತ್ ಪ್ರಾಮಾಣ್ಯಾರ್ಥಮ್ ಉಪಸಂಹಾರಾನುಸಾರಿತ್ವಸ್ಯೋಪೇಯತ್ವಾತ್' (ಅದು ಪ್ರಮಾಣ ಎಂದು ಕರೆಸಿಕೊಳ್ಳಲು ಉಪಸಂಹಾರಕ್ಕೆ ಅನುಸಾರಿಯಾಗಿದೆ ಎಂಬ ಅಂಶವನ್ನು ಹೊಂದಿಸಿಕೊಳ್ಳಬೇಕಾಗಿರುವುದರಿಂದ) ಎಂಬುದನ್ನು ಸೇರಿಸಿಕೊಳ್ಳಬೇಕು. ಮೂರನೆ ಅಧ್ಯಾಯದ ಮೊದಲ ಪಾದದ ಮೊದಲನೆಯ ಸೂತ್ರದಲ್ಲಿ 'ಶ್ರವಣಾದಿತಿ ಚೇತ್' ಎಂಬಲ್ಲಿ ''ಉಪಕ್ರಮ ಪ್ರಾಮಾಣ್ಯಾರ್ಥಮುಪಸಂಹಾರಾನುಸಾರಿತ್ವಮ್ ಅಂಗೀಕರ್ತವ್ಯಮ್ । ವ್ಯಾಖ್ಯಾನಸ್ಯ ಪಶ್ಚಾತ್ತನತ್ವನಿಯಮಾತ್'' (ಉಪಕ್ರಮವನ್ನು ಪ್ರಮಾಣವೆಂದು ಒಪ್ಪಿಕೊಳ್ಳಲು ಉಪಸಂಹಾರಕ್ಕೆ ಅದು ಅನುಸಾರಿಯಾಗಿದೆ ಎಂಬುದಾಗಿ ಒಪ್ಪಿಕೊಳ್ಳಬೇಕು. ಏಕೆಂದರೆ ವ್ಯಾಖ್ಯಾನವು ನಂತರದ ಭಾಗದಲ್ಲಿ ಬರುತ್ತದೆ ಎಂಬ ನಿಯಮವಿರುವುದರಿಂದ ಹೀಗೆ ಒಪ್ಪಿಕೊಳ್ಳುವುದು ಅನಿವಾರ್ಯ) ಎಂಬುದಾಗಿ ನ್ಯಾಯವಿವರಣದಲ್ಲಿ ಹೇಳಿರುವುದರಿಂದ ಈ ರೀತಿಯಾಗಿ ವ್ಯಾಖ್ಯಾನ ಮಾಡುವುದು ಉಚಿತವಾಗಿದೆ. ಇದನ್ನು ತರ್ಕತಾಂಡವದಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಮತ್ತು ಗುರುಗಳಿಂದ ಮಾಡಲ್ಪಟ್ಟ 'ಉಪಸಂಹಾರವಿಜಯ' ಎಂಬ ಗ್ರಂಥದಲ್ಲೂ ಸ್ಪಷ್ಟವಾಗಿದೆ. ''ಉಪಸಂಹಾರಯೋಃ'' ಎಂಬ ಪದದ ಅನಂತರ 'ಸಕಾಶಾತ್' ಎಂಬ ಪದವನ್ನು ಶೇಷಪೂರಣ ಮಾಡಿಕೊಳ್ಳಬೇಕು. ಅನೇಕಬಾರಿ ಹೇಳಿದ್ದನ್ನು

ಒಂದು ಬಾರಿ ಹೇಳಿದ ಉಪಕ್ರಮ ಅಥವಾ ಉಪಸಂಹಾರವಾಕ್ಯವು ಬಾಧಿಸುವುದು ಸರಿಯಲ್ಲ ಎಂಬ ಅಭಿಪ್ರಾಯದಿಂದ ಆದಕ್ಕೆ ಪ್ರಾಬಲ್ಯವನ್ನು ಹೇಳಿದ್ದಾರೆ. ''ಮುಖ್ಯಸ್ಯ'' ಎಂಬ ಪದಕ್ಕೆ 'ಅಪ್ರಾಪ್ತಸ್ಯ' ಎಂಬುದಾಗಿ ಅರ್ಥ. ಈ ಎಲ್ಲವನ್ನೂ ಕೂಡ ಚಂದ್ರಿಕಾಗ್ರಂಥದಲ್ಲಿ ಚೆನ್ನಾಗಿ ವಿವರಿಸಿದ್ದಾರೆ.

ಒಟ್ಟು ಅಭಿಪ್ರಾಯ - ಉಪಕ್ರಮಕ್ಕಿಂತಲೂ ಉಪಸಂಹಾರವೇ ಪ್ರಬಲ. ಏಕೆಂದರೆ ಉಪಕ್ರಮವು ವ್ಯಾಖ್ಯೇಯರೂಪವಾಗಿದ್ದರೆ, ಉಪಸಂಹಾರವು ವ್ಯಾಖ್ಯಾನರೂಪವಾಗಿರುವುದಿರಂದ ವ್ಯಾಖ್ಯಾನಾನುಸಾರವಾಗಿ ವ್ಯಾಖ್ಯೇಯಕ್ಕೆ ಅರ್ಥ ಮಾಡುವುದೇ ಯುಕ್ತವಾದ್ದರಿಂದ ಉಪಸಂಹಾರವು ಪ್ರಬಲ. ಇದು ಲೋಕದಲ್ಲೂ ವೇದದಲ್ಲೂ ಕಂಡಿರುವ ವಿಷಯ. ಲೋಕದಲ್ಲಿ 'ಗಾಂ ಆನಯ' ಎಂದು ಹೇಳಿ. ಬಲೀವರ್ದಮಾನಯ ಎಂದು ವಿವರಣೆ ಕೊಡುತ್ತಾರೆ. ಅಲ್ಲಿ ಮೊದಲು ಹೇಳಿದ್ದಕ್ಕೆ ಅನಂತರ ಹೇಳಿದ್ದು ಆಪಾತತಃ ವಿರೋಧವಿದ್ದಂತೆ ಕಂಡರೂ ಉಪಸಂಹಾರಕ್ಕೆ ಅನುಸಾರಿಯಾಗಿ ಮೊದಲಿನ ಗೊ ಎಂದರೆ, ಗೋ ವಿಶೇಷವಾದ ಬಲೀವರ್ದವೇ ಎಂದು ಅರ್ಥೈಸುತ್ತಾರೆ. ಹೀಗೆ ವೇದದಲ್ಲೂ 'ವಾಸಃ ಪರಿಧತ್ತೇ', ಎಂಬುದರಿಂದ ಯಾವುದೇ ವಸ್ತ್ರ ಎಂದಿದ್ದರೂ ಉಪಸಂಹಾರದಲ್ಲಿ ''ಯತ್ ಕ್ಷೌಮಂ'' ಎಂದಿರುವುದರಿಂದ ಮೊದಲಿನ ವಾಸ ಶಬ್ದಕ್ಕೆ ಎಂದರೆ 'ಕ್ಷಾಮವಾಸ' ಎಂದೇ ಅರ್ಥೈಸಿದ್ದಾರೆ.

ಹಾಗಾದರೆ ಶೈವಾಗಮವು ವಾಖ್ಯಾನರೂಪವಾಗಿರುವುದರಿಂದ ಆದರ ಅನುಸಾರಿಯಾಗಿ ಶಾಸ್ತ್ರಕ್ಕೆ ಅರ್ಥೈಸಬೇಕಾಗುತ್ತದಲ್ಲವೆ? ಎಂದರೆ ಹಾಗಲ್ಲ ಆ ವ್ಯಾಖ್ಯಾನವು ಪ್ರಮಾಣವೆಂದು ಸಿದ್ಧವಾಗಿರಬೇಕು ಅಂತಹ ವ್ಯಾಖ್ಯಾನದಿಂದ ತಾತ್ಪರ್ಯವನ್ನೂ ನಿಶ್ಚಯಿಸಬಹುದು. ಆದರೆ ಶೈವಾಗಮಕ್ಕೆ ಪ್ರಾಮಾಣ್ಯ ಸಿದ್ಧವಾಗಿಲ್ಲ. ಆದ್ದರಿಂದ ನಿಮ್ಮ ಆಶೆ ಈಡೇರುವುದಿಲ್ಲ.

ನೀವು ಹೀಗೆ ಹೇಳಿದರೆ 'ವೇದೋಪಕ್ರಮಾಧಿಕರಣ'ದ ವಿರೋಧ ಬರುತ್ತದೆ ಅಲ್ಲಿ ಉಪಕ್ರಮಕ್ಕೆ ಪ್ರಾಬಲ್ಯವನ್ನು ನಿಶ್ಚಯಿಸಿರುತ್ತಾರೆಂದರೆ ಹಾಗಲ್ಲ ಅಲ್ಲಿ ಉಪಕ್ರಮಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದರೂ ಕೂಡ ಉಪಕ್ರಮದ ಜೊತೆಗೆ 'ಅಭ್ಯಾಸ'ವೂ ಇರುವುದರಿಂದ. ಹಾಗಾದಲ್ಲಿ 'ಅಶ್ವಪ್ರತಿಗ್ರಹೇಷ್ಟಿಯನ್ನು ಹೇಳುವ ಅಧಿಕರಣದ ವಿರೋಧ ಬರುತ್ತದೆಂದು ಶಂಕಿಸಬಹುದು. ಅಲ್ಲಿ ಉಪಕ್ರಮಕ್ಕೆ ಪ್ರಾಶಸ್ತ್ಯ ಕೊಟ್ಟಂತೆ ಕಾಣುತ್ತದೆ. ಆದರೆ ಅಲ್ಲೂ ಕೂಡ ಉಪಕ್ರಮದಲ್ಲಿ ಹೇಳಿದೆಯೆಂಬ ಮಾತ್ರಕ್ಕೆ ಆ ವಿಷಯವನ್ನು ಸ್ವೀಕರಿಸಿಲ್ಲ. ಹೊರತಾಗಿ ಮೈತ್ರಾಯಿಣೀಶಾಖೆಯಲ್ಲಿ ಸ್ಪಷ್ಟವಾಗಿ ಆ ವಿಷಯವನ್ನು ಹೇಳುವ

ಪ್ರಮಾಣವಿರುವುದರಿಂದ ಆದಕ್ಕೆ ಮಹತ್ವ ನೀಡಿದ್ದಾರೆ. ಹೀಗಾಗಿ ಉಪಕ್ರಮಕ್ಕಿಂತ ಉಪಸಂಹಾರವೇ ಪ್ರಬಲ.

## ಉಪಕ್ರಮಾದಿಗಳಿಗೆ ಲಿಂಗತ್ವ ಸಮರ್ಥನೆ

**भावदीपः** – ननु 'उपक्रमादीनां वाक्यैकदेशत्वात् कथं लिङ्गमित्युक्तिर्भाष्ये? इत्यतो 'लिङ्गं तात्पर्यनिर्णये' इति चतुर्थपादं व्याचष्टे – **एतत्सर्वमिति** ।। एतेन 'कुत्र च लिङ्गानि?' इति टीकायां कृता शङ्का दत्तोत्तरा । 'स्वार्थे शब्दात्मकमपि इदमेतत्परमबाधे सत्येतदुपक्रमत्वादित्यादिरूपेण महावाक्यतात्पर्यार्थनिर्णये लिङ्गम्' इत्यर्थः। वाक्यानां तात्पर्यं नाम न वृत्त्यन्तरम् । कर्मनिर्णये निरस्तत्वात् । किन्तु तत्प्रमितिशेषत्वम्; तथैव तर्कताण्डवे प्रथमपरिच्छेदेऽभिधानात् । उत्तरोत्तर प्राबल्योक्तेरुपयोगमाह – **विरोधे त्विति** ।। **साम्य इति** ।। उपक्रमादिद्विकस्य यथाकथञ्चित् साम्ये प्रतीते सतीति वा उपक्रमादेः श्रुत्यादिभिः साम्ये प्रतीते सतीति वार्थः । विस्तरस्तु चन्द्रिकाप्रकाशे ध्येयः ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು - ಉಪಕ್ರಮಾದಿಗಳು ವಾಕ್ಯದ ಒಂದು ಭಾಗವಾಗಿರುವುದರಿಂದ ಭಾಷ್ಯದಲ್ಲಿ 'ಲಿಂಗಮ್' ಎಂಬುದಾಗಿ ಹೇಗೆ ಹೇಳಿದರು? ಈ ಪ್ರಶ್ನೆಗೆ ಉತ್ತರವಾಗಿ 'ಲಿಂಗಂ ತಾತ್ಪರ್ಯನಿರ್ಣಯೇ' ಎಂಬ ನಾಲ್ಕನೆಯ ಪಾದವನ್ನು ''ಏತತ್ಸರ್ವಮ್'' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಹೀಗೆ ವ್ಯಾಖ್ಯಾನ ಮಾಡುವುದರಿಂದ ''ಕುತ್ರ ಚ ಲಿಂಗಾನಿ'' ಎಂಬ ಟೀಕೆಯಲ್ಲಿ ಮಾಡಿದ ಶಂಕೆಗೆ ಉತ್ತರವನ್ನು ನೀಡಿದಂತೆ ಆಗುತ್ತದೆ. ''ಈ ಉಪಸಂಹಾರ ಅಂಶವು ಶಬ್ದಾತ್ಮಕವಾಗಿದ್ದು ಕೇವಲ ಸ್ವಾರ್ಥವನ್ನು ತಿಳಿಸುವುದಾಗಿದ್ದರೂ, ಮಹಾವಾಕ್ಯದ ಅರ್ಥದಲ್ಲಿ ಬಾಧೆ ಬರಲಾಗಿ ಈ ರೀತಿಯ ಉಪಕ್ರಮ ಇರುವುದರಿಂದ ಈ ಮಹಾವಾಕ್ಯವನ್ನು ಹೀಗೇ ಅರ್ಥೈಸಬೇಕು ಎಂಬುದಾಗಿ ತಾತ್ಪರ್ಯವನ್ನು ತಿಳಿಸುವ ಮೂಲಕ ಉಪಕ್ರಮಾದಿಗಳು ಲಿಂಗವಾಗಿವೆ'' ಎಂದು ಅರ್ಥ. ವಾಕ್ಯಗಳಿಗೆ ತಾತ್ಪರ್ಯ ಎಂಬುದು ಇನ್ನೊಂದು ವೃತ್ತಿಯಲ್ಲ. ಕರ್ಮನಿರ್ಣಯದಲ್ಲಿ ಇನ್ನೊಂದು ವೃತ್ತಿಯೆಂಬ ಅಂಶವನ್ನು ನಿರಾಕರಣೆ ಮಾಡಿದ್ದಾರೆ.

ಹೊರತು ''ಆ ವಾಕ್ಯದಿಂದ ಬರುವ ಜ್ಞಾನದಲ್ಲಿ ಶೇಷಪೂರಣೆ ಮಾಡಿಕೊಂಡಂತೆ'' ಎಂಬ ಈ ಅಂಶವನ್ನು ತರ್ಕತಾಂಡವದ ಪ್ರಥಮಪರಿಚ್ಛೇದದಲ್ಲಿ ವಿವರಿಸಿದ್ದಾರೆ. ಉತ್ತರೋತ್ತರಪ್ರಾಬಲ್ಯವನ್ನು ಹೇಳುವುದಕ್ಕೆ ''ವಿರೋಧೇ ತು'' ಇತ್ಯಾದಿ ವಾಕ್ಯದಿಂದ ಉಪಯೋಗವನ್ನು ತಿಳಿಸುತ್ತಿದ್ದಾರೆ. ''ಸಾಮ್ಯೇ'' ಇತ್ಯಾದಿ ವಾಕ್ಯದಿಂದ 'ಉಪಕ್ರಮಾದಿ ಎರಡು ತಾತ್ಪರ್ಯಲಿಂಗಗಳಿಗೆ ಯಾವುದಾದರೂ ರೀತಿಯಿಂದ ಸಾಮ್ಯವು ಕಂಡುಬಂದರೆ' ಎಂಬುದಾಗಿ, ಅಥವಾ 'ಉಪಕ್ರಮಾದಿಗಳಿಗೆ ಶ್ರುತಿಮೊದಲಾದವುಗಳಿಂದ ಸಾಮ್ಯವು ಕಂಡುಬಂದರೆ' ಎಂಬುದಾಗಿ ಅರ್ಥ. ಇಲ್ಲಿ ವಿಶೇಷವಿವರಣೆಯನ್ನು 'ಚಂದ್ರಿಕಾಪ್ರಕಾಶ'ದಿಂದ ತಿಳಿದುಕೊಳ್ಳಬೇಕು.

## ನಿರವಕಾಶವೇ ಪ್ರಬಲ

**ಭಾವದೀಪಃ – ಸ್ವಭಾವೇತಿ ।।** ಉಪಜೀವಕತ್ವಾದಿನಾ ಸ್ವಭಾವದುರ್ಬಲೇನಾಪಿ ಉಪಜೀವ್ಯತ್ವಾದಿನಾ ಸ್ವಭಾವಪ್ರಬಲಸ್ಯಾಪಿ ಇತ್ಯರ್ಥಃ । **ಏವಮಿತಿ ।।** 'ಏಕೇನ ನಿರವಕಾಶೇನ ಸಾವಕಾಶಾನೇಕೇಷಾಂ ಬಾಧಃ' ಇತ್ಯರ್ಥಃ । **ಪ್ರಾಬಲ್ಯದೌರ್ಬಲ್ಯಮಿತಿ ।।** 'ವಿಪ್ರತಿಷಿದ್ಧಂ ಚಾನಧಿಕರಣವಾಚಿ' ಇತ್ಯೇಕವದ್ಭಾವಃ । 'ಶೀತೋಷ್ಣಮ್' ಇತಿವತ್ । **ಸಾವಕಾಶತ್ವಾದೀತಿ ।।** ದುರ್ಬಲಸ್ಯ ಪ್ರಬಲೇನ ಬಾಧೋ ನಾಮ 'ಅರ್ಥಾನ್ತರಪರತ್ವರೂಪ-ಸಾವಕಾಶತ್ವಕಲ್ಪನಮ್ । ಪ್ರಬಲಸ್ಯ ಯಥಾಶ್ರುತಾರ್ಥತ್ವರೂಪನಿರವಕಾಶತ್ವಮ್' ಇತ್ಯೇವ ವಾಚ್ಯಮ್ । ಅನ್ಯಥಾ ಅರ್ಥಾನ್ತರತಾऽಕಲ್ಪನೇ ಪಾಶುಪತಾದೇರ್ವೇದೇನೇವಾಪ್ರಾಮಾಣ್ಯಂ ಸ್ಯಾತ್ । ಸಾವಕಾಶತ್ವಾಪ್ರಾಮಾಣ್ಯಾಭ್ಯಾಮನ್ಯಸ್ಯ ಬಾಧಸ್ಯಾಭಾವಾದಿತ್ಯರ್ಥಃ ।

''ಸ್ವಭಾವ'' ಇತ್ಯಾದಿವಾಕ್ಯದಿಂದ 'ಉಪಜೀವಕತ್ವಾದಿ ಕಾರಣದಿಂದ ಸ್ವಾಭಾವಿಕವಾಗಿ ದುರ್ಬಲವಾಗಿದ್ದರೂ ಉಪಜೀವ್ಯತ್ವಾದಿಗಳಿಂದ ಸ್ವಾಭಾವಿಕವಾಗಿ ಪ್ರಬಲವಾಗಿರುವ ಅಂಶಕ್ಕೂ' ಎಂಬ ಅರ್ಥವನ್ನು ಇಟ್ಟುಕೊಳ್ಳಬೇಕು. ''ಏವಮ್'' ಇತ್ಯಾದಿ ವಾಕ್ಯಕ್ಕೆ 'ನಿರವಕಾಶವಾದ ಒಂದು ವಾಕ್ಯದಿಂದ ಸಾವಕಾಶವಾದ ಅನೇಕವಾಕ್ಯಗಳಿಗೆ ಬಾಧವನ್ನು ಹೇಳಬೇಕು' ಎಂದರ್ಥ.

''ಪ್ರಾಬಲ್ಯದೌರ್ಬಲ್ಯಂ'' ಎಂಬಲ್ಲಿ 'ವಿಪ್ರತಿಷಿದ್ಧಂ ಚಾನಧಿಕರಣವಾಚಿ' ಎಂಬ ಸೂತ್ರದಿಂದ 'ಶೀತೋಷ್ಣಮ್' ಎಂಬಂತೆ ಏಕವದ್ಭಾವ ಬಂದಿದೆ. 'ಸಾವಕಾಶತ್ವಾದಿ' ಎಂಬ

ಅಂಶದಿಂದ ದುರ್ಬಲಕ್ಕೆ ಪ್ರಬಲವಾದುದರಿಂದ ಬಾಧ ಎಂದರೆ 'ಅರ್ಥಾಂತರಪರತ್ವರೂಪವಾದ ಸಾವಕಾಶತ್ವವನ್ನು ಕಲ್ಪನೆ ಮಾಡುವುದು ಮತ್ತು ಪ್ರಬಲವಾದುದಕ್ಕೆ ವಾಕ್ಯದಲ್ಲಿ ಕಂಡಂತೆಯೇ ಅರ್ಥವನ್ನು ಹೇಳುವ ರೀತಿಯಲ್ಲಿ ನಿರವಕಾಶತ್ವವಿದೆ' ಎಂಬುದಾಗಿಯೇ ಹೇಳಬೇಕು. ಹೀಗೆ ಹೇಳದೆ ಅರ್ಥಾಂತರವನ್ನು ಕಲ್ಪನೆ ಮಾಡದೆ ಹೋದಾಗ ಪಾಶುಪತಾದಿಶಾಸ್ತ್ರಗಳಿಗೆ ವೇದದಿಂದ ಸಾವಕಾಶತ್ವವಿರುವುದರಿಂದ ಅಪ್ರಾಮಾಣ್ಯವು ಬಂದಂತೆ ಅಪ್ರಾಮಾಣ್ಯವು ಸಿದ್ಧಿಸಬೇಕಾದೀತು. ಏಕೆಂದರೆ ಸಾವಕಾಶತ್ವ ಮತ್ತು ಅಪ್ರಾಮಾಣ್ಯವನ್ನು ಹೊರತು ಪಡಿಸಿ ಬೇರೆ ರೀತಿಯ ಬಾಧವು ಇರುವುದಿಲ್ಲ - ಎಂದು ಅಭಿಪ್ರಾಯ.

ಒಟ್ಟು ಅಭಿಪ್ರಾಯ - ಉಪಕ್ರಮಾದಿಸಪ್ತವಿಧತಾತ್ಪರ್ಯಲಿಂಗಗಳಲ್ಲಿ ಹಿಂದಿನ ಲಿಂಗಗಳಿಗಿಂತ ಮುಂದಿನ ಲಿಂಗಗಳು ಪ್ರಬಲವಾಗಿರುತ್ತವೆ. ಆದರೆ ಎಲ್ಲೆಡೆ ಈ ನಿಯಮವಿಲ್ಲ. ಪ್ರಾಬಲ್ಯದೌರ್ಬಲ್ಯವಿಚಾರವನ್ನು ಸ್ಪಷ್ಟಪಡಿಸುವ ಒಂದು ಶ್ಲೋಕವಿದೆ -

ದ್ವಿವಿಧಂ ಬಲವತ್ತ್ವಂ ಹಿ ಬಹುತ್ವಾಚ್ಚ ಸ್ವಭಾವತಃ ।
ತಯೋಃ ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ ॥

ಲಿಂಗಗಳು ಬಹುಬಗೆಯಲ್ಲಿ ಬಲಿಷ್ಠ ಎನಿಸುತ್ತವೆ - ೧) ಬಾಹುಲ್ಯ ಪ್ರಯುಕ್ತವಾಗಿ ೨) ಸ್ವಭಾವ ಪ್ರಯುಕ್ತವಾಗಿ ೩) ಉಪಜೀವ್ಯ ಪ್ರಯುಕ್ತವಾಗಿ ೪) ನಿರವಕಾಶ ಪ್ರಯುಕ್ತವಾಗಿ ಎಂದು. ಇವುಗಳಲ್ಲಿ ನಿರವಕಾಶಪ್ರಯುಕ್ತವಾದ ಪ್ರಾಬಲ್ಯವೇ ಬಹಳ ಶ್ರೇಷ್ಠ.

ಉಪಸಂಹಾರಕ್ಕಿಂತ ಉಪಕ್ರಮವು ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಉಪಕ್ರಮವೇ ಶ್ರೇಷ್ಠವಾಗುತ್ತದೆ. ಇದರಂತೆ ಉಪಜೀವಕವು ಉಪಜೀವ್ಯಕ್ಕಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಶ್ರೇಷ್ಠವಾಗುತ್ತದೆ. ಒಂದು ಲಿಂಗವು ಅನೇಕಲಿಂಗಗಳಿಗಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಪ್ರಬಲವಾಗುತ್ತದೆ.

ಹಾಗಾದಲ್ಲಿ ನಿರವಕಾಶದಿಂದ ಸಾವಕಾಶವು ಬಾಧಿತವಾಗುತ್ತದೆಂದಷ್ಟೇ ಹೇಳಿರಿ; ಉಪಕ್ರಮಾದಿಗಳ ವಿಭಾಗವೇಕೆ? ಎಂದು ಪ್ರಶ್ನಿಸಬಾರದು. ಉಪಕ್ರಮ ಹಾಗು ಉಪಸಂಹಾರಗಳಲ್ಲಿ ಎರಡೂ ನಿರವಕಾಶಗಳಾಗದಿದ್ದಾಗ ಎರಡೂ ಸಾವಕಾಶಗಳಾಗುತ್ತವೆ. ಆವಾಗ ಸ್ವಭಾವಪ್ರಯುಕ್ತವಾಗಿಯೇ ಪ್ರಾಬಲ್ಯದೌರ್ಬಲವನ್ನು

ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಉಪಕ್ರಮಾದಿಗಳ ವಿಭಾಗವು ಸಾರ್ಥಕವಾಗಿದೆ. ಶ್ರುತಿಲಿಂಗಾದಿ-ತಾತ್ಪರ್ಯಲಿಂಗಗಳಲ್ಲಿಯೂ ನಿರವಕಾಶಲಿಂಗಕ್ಕೇ ಹೆಚ್ಚು ಸ್ಥಾನಮಾನ.

## ಸ್ವಭಾವತಃ ಪ್ರಬಲವಾದದ್ದಕ್ಕೆ ನಿರವಕಾಶತ್ವ ನಿಯಮವಿದೆಯೆ?

**ಭಾವದೀಪಃ – ವಾಕ್ಯೇತಿ ।।** 'ಉಪಕ್ರಮಾದಿರೂಪಾವಾನ್ತರವಾಕ್ಯೇ' ಇತ್ಯರ್ಥಃ । **ಅರ್ಥಾನ್ತರೇತಿ ।।** 'ಬಲಾಲ್ಲಕ್ಷಣಾದಿನಾರ್ಥಾನ್ತರಕಲ್ಪನಮ್' ಇತ್ಯರ್ಥಃ । **ಸ್ವಯಮರ್ಥಾನ್ತರೇತಿ ।।** 'ಸ್ವರಸತೋರ್ಥಾನ್ತರವಾಚಿತ್ವಮ್' ಇತ್ಯರ್ಥಃ । ಏವಂ ಸ್ವಭಾವದುರ್ಬಲ ಸ್ಯೋಕ್ತರೂಪಸಾವಕಾಶತ್ವನಿಯಮಾಭಾವವತ್ ಸ್ವಭಾವಪ್ರಬಲಸ್ಯ ನಿರವಕಾಶತ್ವ-ನಿಯಮಾಭಾವೋಪ್ಯೂಹ್ಯಃ' ಇತಿ ಭಾವಃ ।

''ವಾಕ್ಯ'' ಎಂಬ ಪದದಿಂದ ಉಪಕ್ರಮಾದಿರೂಪವಾದ ಅವಾಂತರವಾಕ್ಯವನ್ನು ಗ್ರಹಿಸಬೇಕು. ''ಅರ್ಥಾಂತರ'' ಎಂಬ ಅಂಶದಿಂದ 'ಬಲಾತ್ಕಾರವಾಗಿ ಲಕ್ಷಣಾದಿಗಳಿಂದ ಅರ್ಥಾಂತರವನ್ನು ಕಲ್ಪನೆ ಮಾಡುವುದು' ಎಂದರ್ಥ. ''ಸ್ವಯಮರ್ಥಾಂತರ'' ಎಂಬ ಪದದಿಂದ 'ಸ್ವರಸವಾಗಿ ಅರ್ಥಾಂತರವನ್ನು ಹೇಳುವುದು' ಎಂದರ್ಥ. ಈ ರೀತಿಯಾಗಿ ಸ್ವಭಾವದುರ್ಬಲವಾದ ವಾಕ್ಯಕ್ಕೆ ಹಿಂದೆ ಹೇಳಿದ ಸಾವಕಾಶತ್ವನಿಯಮವು ಇಲ್ಲದೆ ಇರುವಂತೆ ಸ್ವಭಾವಪ್ರಬಲವಾದ ವಾಕ್ಯಕ್ಕೆ ನಿರವಕಾಶತ್ವನಿಯಮವು ಇಲ್ಲ ಎಂಬುದಾಗಿ ಊಹಿಸಿಕೊಳ್ಳಬೇಕು.

## ಶ್ರುತಿಲಿಂಗಾದಿಗಳನ್ನು ವಿವಕ್ಷಿಸಬೇಕೆ?

**ಭಾವದೀಪಃ –** ನನ್ವಗ್ರೇ 'ತಲ್ಲಿಙ್ಗಾತ್' ಇತ್ಯಾದೌ ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನ ಸಮಾಖ್ಯಾಭಿರಪಿ ನಿರ್ಣಯೋ ದೃಶ್ಯತ ಇತಿ ಕಥಂ ಭಾಷ್ಯೇ ಸಪ್ತಾನಾಮೇವೋಕ್ತಿಃ? ಇತ್ಯತ ಆಹ – **ಅತ್ರೇತಿ ।।** 'ತಾತ್ಪರ್ಯಾರ್ಥನಿರ್ಣಯೇಃ' ಇತ್ಯರ್ಥಃ । 'ಉಪಪತ್ತ್ಯಾದಿಲಿಙ್ಗಮಿತಿ ಭಾಷ್ಯೇ' ಇತಿ ವಾರ್ಥಃ । ಶ್ರುತ್ಯಾದೀನಾಂ ಲಕ್ಷಣಬಲಾಬಲಬೀಜಾದಿಕಂ 'ತು ಶಬ್ದಾದೇವ' ಇತ್ಯತ್ರ ವಕ್ಷ್ಯಾಮ ಇತಿ ಭಾವಃ ।

ಅಂಶದಿಂದ ದುರ್ಬಲಕ್ಕೆ ಪ್ರಬಲವಾದುದರಿಂದ ಬಾಧ ಎಂದರೆ 'ಅರ್ಥಾಂತರಪರತ್ವರೂಪವಾದ ಸಾವಕಾಶತ್ವವನ್ನು ಕಲ್ಪನೆ ಮಾಡುವುದು ಮತ್ತು ಪ್ರಬಲವಾದುದಕ್ಕೆ ವಾಕ್ಯದಲ್ಲಿ ಕಂಡಂತೆಯೇ ಅರ್ಥವನ್ನು ಹೇಳುವ ರೀತಿಯಲ್ಲಿ ನಿರವಕಾಶತ್ವವಿದೆ' ಎಂಬುದಾಗಿಯೇ ಹೇಳಬೇಕು. ಹೀಗೆ ಹೇಳದೆ ಅರ್ಥಾಂತರವನ್ನು ಕಲ್ಪನೆ ಮಾಡದೆ ಹೋದಾಗ ಪಾಶುಪತಾದಿಶಾಸ್ತ್ರಗಳಿಗೆ ವೇದದಿಂದ ಸಾವಕಾಶತ್ವವಿರುವುದರಿಂದ ಅಪ್ರಾಮಾಣ್ಯವು ಬಂದಂತೆ ಅಪ್ರಾಮಾಣ್ಯವು ಸಿದ್ಧಿಸಬೇಕಾದೀತು. ಏಕೆಂದರೆ ಸಾವಕಾಶತ್ವ ಮತ್ತು ಅಪ್ರಾಮಾಣ್ಯವನ್ನು ಹೊರತು ಪಡಿಸಿ ಬೇರೆ ರೀತಿಯ ಬಾಧವು ಇರುವುದಿಲ್ಲ - ಎಂದು ಅಭಿಪ್ರಾಯ.

ಒಟ್ಟು ಅಭಿಪ್ರಾಯ - ಉಪಕ್ರಮಾದಿಸಪ್ತವಿಧತಾತ್ಪರ್ಯಲಿಂಗಗಳಲ್ಲಿ ಹಿಂದಿನ ಲಿಂಗಗಳಿಗಿಂತ ಮುಂದಿನ ಲಿಂಗಗಳು ಪ್ರಬಲವಾಗಿರುತ್ತವೆ. ಆದರೆ ಎಲ್ಲೆಡೆ ಈ ನಿಯಮವಿಲ್ಲ. ಪ್ರಾಬಲ್ಯದೌರ್ಬಲ್ಯವಿಚಾರವನ್ನು ಸ್ಪಷ್ಟಪಡಿಸುವ ಒಂದು ಶ್ಲೋಕವಿದೆ -

ದ್ವಿವಿಧಂ ಬಲವತ್ತ್ವಂ ಹಿ ಬಹುತ್ವಾಚ್ಚ ಸ್ವಭಾವತಃ ।
ತಯೋಃ ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ ॥

ಲಿಂಗಗಳು ಬಹುಬಗೆಯಲ್ಲಿ ಬಲಿಷ್ಠ ಎನಿಸುತ್ತವೆ - ೧) ಬಾಹುಲ್ಯ ಪ್ರಯುಕ್ತವಾಗಿ ೨) ಸ್ವಭಾವ ಪ್ರಯುಕ್ತವಾಗಿ ೩) ಉಪಜೀವ್ಯ ಪ್ರಯುಕ್ತವಾಗಿ ೪) ನಿರವಕಾಶ ಪ್ರಯುಕ್ತವಾಗಿ ಎಂದು. ಇವುಗಳಲ್ಲಿ ನಿರವಕಾಶಪ್ರಯುಕ್ತವಾದ ಪ್ರಾಬಲ್ಯವೇ ಬಹಳ ಶ್ರೇಷ್ಠ.

ಉಪಸಂಹಾರಕ್ಕಿಂತ ಉಪಕ್ರಮವು ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಉಪಕ್ರಮವೇ ಶ್ರೇಷ್ಠವಾಗುತ್ತದೆ. ಇದರಂತೆ ಉಪಜೀವಕವು ಉಪಜೀವ್ಯಕ್ಕಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಶ್ರೇಷ್ಠವಾಗುತ್ತದೆ. ಒಂದು ಲಿಂಗವು ಅನೇಕಲಿಂಗಗಳಿಗಿಂತ ದುರ್ಬಲವಾಗಿದ್ದರೂ ನಿರವಕಾಶವಾಗಿದ್ದರೆ ಪ್ರಬಲವಾಗುತ್ತದೆ.

ಹಾಗಾದಲ್ಲಿ ನಿರವಕಾಶದಿಂದ ಸಾವಕಾಶವು ಬಾಧಿತವಾಗುತ್ತದೆಂದಷ್ಟೇ ಹೇಳಿರಿ; ಉಪಕ್ರಮಾದಿಗಳ ವಿಭಾಗವೇಕೆ? ಎಂದು ಪ್ರಶ್ನಿಸಬಾರದು. ಉಪಕ್ರಮ ಹಾಗು ಉಪಸಂಹಾರಗಳಲ್ಲಿ ಎರಡೂ ನಿರವಕಾಶಗಳಾಗದಿದ್ದಾಗ ಎರಡೂ ಸಾವಕಾಶಗಳಾಗುತ್ತವೆ. ಆವಾಗ ಸ್ವಭಾವಪ್ರಯುಕ್ತವಾಗಿಯೇ ಪ್ರಾಬಲ್ಯದೌರ್ಬಲವನ್ನು

ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಉಪಕ್ರಮಾದಿಗಳ ವಿಭಾಗವು ಸಾರ್ಥಕವಾಗಿದೆ. ಶ್ರುತಿಲಿಂಗಾದಿ-ತಾತ್ಪರ್ಯಲಿಂಗಗಳಲ್ಲಿಯೂ ನಿರವಕಾಶಲಿಂಗಕ್ಕೇ ಹೆಚ್ಚು ಸ್ಥಾನಮಾನ.

## ಸ್ವಭಾವತಃ ಪ್ರಬಲವಾದದ್ದಕ್ಕೆ ನಿರವಕಾಶತ್ವ ನಿಯಮವಿದೆಯೆ?

**ಭಾವದೀಪಃ – ವಾಕ್ಯೇತಿ ।।** 'ಉಪಕ್ರಮಾದಿರೂಪಾವಾನ್ತರವಾಕ್ಯೇ' ಇತ್ಯರ್ಥಃ । **ಅರ್ಥಾನ್ತರೇತಿ ।।** 'ಬಲಾಲ್ಲಕ್ಷಣಾದಿನಾರ್ಥಾನ್ತರಕಲ್ಪನಮ್' ಇತ್ಯರ್ಥಃ । **ಸ್ವಯಮರ್ಥಾನ್ತರೇತಿ ।।** 'ಸ್ವರಸತೋರ್ಥಾನ್ತರವಾಚಿತ್ವಮ್' ಇತ್ಯರ್ಥಃ । ಏವಂ ಸ್ವಭಾವದುರ್ಬಲ ಸ್ಯೋಕ್ತರೂಪಸಾವಕಾಶತ್ವನಿಯಮಾಭಾವವತ್ ಸ್ವಭಾವಪ್ರಬಲಸ್ಯ ನಿರವಕಾಶತ್ವ-ನಿಯಮಾಭಾವೋಪ್ಯೂಹ್ಯಃ' ಇತಿ ಭಾವಃ ।

''ವಾಕ್ಯ'' ಎಂಬ ಪದದಿಂದ ಉಪಕ್ರಮಾದಿರೂಪವಾದ ಅವಾಂತರವಾಕ್ಯವನ್ನು ಗ್ರಹಿಸಬೇಕು. ''ಅರ್ಥಾಂತರ'' ಎಂಬ ಅಂಶದಿಂದ 'ಬಲಾತ್ಕಾರವಾಗಿ ಲಕ್ಷಣಾದಿಗಳಿಂದ ಅರ್ಥಾಂತರವನ್ನು ಕಲ್ಪನೆ ಮಾಡುವುದು' ಎಂದರ್ಥ. ''ಸ್ವಯಮರ್ಥಾಂತರ'' ಎಂಬ ಪದದಿಂದ 'ಸ್ವರಸವಾಗಿ ಅರ್ಥಾಂತರವನ್ನು ಹೇಳುವುದು' ಎಂದರ್ಥ. ಈ ರೀತಿಯಾಗಿ ಸ್ವಭಾವದುರ್ಬಲವಾದ ವಾಕ್ಯಕ್ಕೆ ಹಿಂದೆ ಹೇಳಿದ ಸಾವಕಾಶತ್ವನಿಯಮವು ಇಲ್ಲದೆ ಇರುವಂತೆ ಸ್ವಭಾವಪ್ರಬಲವಾದ ವಾಕ್ಯಕ್ಕೆ ನಿರವಕಾಶತ್ವನಿಯಮವು ಇಲ್ಲ ಎಂಬುದಾಗಿ ಊಹಿಸಿಕೊಳ್ಳಬೇಕು.

## ಶ್ರುತಿಲಿಂಗಾದಿಗಳನ್ನು ವಿವಕ್ಷಿಸಬೇಕೆ?

**ಭಾವದೀಪಃ –** ನನ್ವಗ್ರೇ 'ತಲ್ಲಿಙ್ಗಾತ್' ಇತ್ಯಾದೌ ಶ್ರುತಿಲಿಙ್ಗವಾಕ್ಯಪ್ರಕರಣಸ್ಥಾನ ಸಮಾಖ್ಯಾಭಿರಪಿ ನಿರ್ಣಯೋ ದೃಶ್ಯತ ಇತಿ ಕಥಂ ಭಾಷ್ಯೇ ಸಪ್ತಾನಾಮೇವೋಕ್ತಿಃ? ಇತ್ಯತ ಆಹ – **ಅತ್ರೇತಿ ।।** 'ತಾತ್ಪರ್ಯಾರ್ಥನಿರ್ಣಯೇಃ' ಇತ್ಯರ್ಥಃ । 'ಉಪಪತ್ತ್ಯಾದಿಲಿಙ್ಗಮಿತಿ ಭಾಷ್ಯೇ' ಇತಿ ವಾರ್ಥಃ । ಶ್ರುತ್ಯಾದೀನಾಂ ಲಕ್ಷಣಬಲಾಬಲಬೀಜಾದಿಕಂ 'ತು ಶಬ್ದಾದೇವ' ಇತ್ಯತ್ರ ವಕ್ಷ್ಯಾಮ ಇತಿ ಭಾವಃ ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು - ಮುಂದೆ 'ತಲ್ಲಿಂಗಾತ್' ಇತ್ಯಾದಿ ಕಡೆಗಳಲ್ಲಿ ಶ್ರುತಿ, ಲಿಂಗ, ವಾಕ್ಯ , ಪ್ರಕರಣ, ಸ್ಥಾನ, ಸಮಾಖ್ಯಾ ಇವುಗಳಿಂದಲೂ ಕೂಡ ನಿರ್ಣಯವನ್ನು ಮಾಡುವುದು ಕಂಡಿದೆ. ಆದ್ದರಿಂದ ಭಾಷ್ಯದಲ್ಲಿ ಉಪಕ್ರಮಾದಿ ಏಳನ್ನು ಮಾತ್ರ ಹೇಗೆ ಹೇಳಿದರು? ಇದಕ್ಕೆ ಉತ್ತರವಾಗಿ ''ಅತ್ರ'' ಇತ್ಯಾದಿ ವಾಕ್ಯ ಹೊರಟಿದೆ. ಇಲ್ಲಿ ಅತ್ರ ಎಂಬ ಪದಕ್ಕೆ 'ತಾತ್ಪರ್ಯಾರ್ಥನಿರ್ಣಯದಲ್ಲಿ' ಎಂದು ಅರ್ಥ. ಅಥವಾ 'ಉಪಪತ್ಯಾದಿಲಿಂಗಮ್ ಎಂಬ ಭಾಷ್ಯದಲ್ಲಿ' ಎಂದು ಅರ್ಥ. ಶ್ರುತಿಲಿಂಗಾದಿಗಳಿಗೆ ಲಕ್ಷಣವನ್ನು ಮತ್ತು ಬಲಾಬಲಗಳನ್ನು ಇದೇ ಸೂತ್ರದಲ್ಲಿ ಮುಂದೆ 'ತು ಶಬ್ದಾದೇವ' ಎಂಬಲ್ಲಿ ಹೇಳಲಿದ್ದೇವೆ ಎಂಬ ಅಭಿಪ್ರಾಯವನ್ನು ಗ್ರಹಿಸಬೇಕು.

## ನ್ಯಾಯವಿವರಣದಲ್ಲಿ ಸಮನ್ವಯಶಬ್ದಾರ್ಥ

**ಭಾವದೀಪಃ** – ननु ''प्रतीत्यादेरज्ञानमूलत्वादिपरिकल्प्यान्येषां कारणतया शास्त्रयोनित्वाग्रहणे को हेतुरिति कृतप्रश्नस्य कथमनेनोत्तरं लब्धम्? इत्यतः सौत्रसमन्वयादित्येतत्तात्पर्योक्तिपरस्य 'उपक्रमादिलक्षणः समन्वय एव शास्त्रप्रतिपाद्यत्वे कारणम्' इति न्यायविवरणस्यार्थमाह – **पाशुपतेति** ।। प्रतीतमपि आपातप्रतीतमपि इत्यर्थः । **पाशुपताद्युक्त्यादेरिति** ।। 'पाशुपतादावुक्तेरापातप्रतीतिश्च' इत्यर्थः ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು - ಪ್ರತೀತ್ಯಾದಿಗಳಿಗೆ ಅಜ್ಞಾನಮೂಲತ್ವಾದಿಗಳನ್ನು ಕಲ್ಪಿಸಿಕೊಂಡು, ವಿಷ್ಣುವನ್ನು ಬಿಟ್ಟು ಉಳಿದವರಿಗೆ ಕಾರಣತಯಾ ಶಾಸ್ತ್ರಯೋನಿತ್ವವನ್ನು ಸ್ವೀಕಾರ ಮಾಡದೇ ಇರುವುದಕ್ಕೆ ಏನು ಕಾರಣ? ಎಂಬುದಾಗಿ ಪ್ರಶ್ನೆ ಮಾಡಿದ ವ್ಯಕ್ತಿಗೆ ನಿಮ್ಮ ಈ ವ್ಯಾಖ್ಯಾನದಿಂದ ಏನು ಉತ್ತರ ಸಿಕ್ಕಿತು? ಇದಕ್ಕೆ ಉತ್ತರವಾಗಿ ಸೂತ್ರದಲ್ಲಿರುವ 'ಸಮನ್ವಯಾತ್' ಎಂಬ ಶಬ್ದವು 'ಉಪಕ್ರಮಾದಿತಾತ್ಪರ್ಯಲಿಂಗಗಳನ್ನು ಹೇಳುವುದರಿಂದ ಈ ರೀತಿಯಾದ ಸಮನ್ವಯವೇ ಶಾಸ್ತ್ರಪ್ರತಿಪಾದ್ಯತ್ವಕ್ಕೆ ಕಾರಣ' ಎಂಬ ನ್ಯಾಯವಿವರಣದ ಅಂಶವನ್ನು ''ಪಾಶುಪತ'' ಇತ್ಯಾದಿ ವಾಕ್ಯದಿಂದ ವಿವರಣೆಯನ್ನು ನೀಡುತ್ತಿದ್ದಾರೆ. ಈ ವಾಕ್ಯದಲ್ಲಿ 'ಪ್ರತೀತಮಪಿ' ಎಂಬ ಪದಕ್ಕೆ 'ಆಪಾತತಃ ಕಂಡು ಬಂದಿದ್ದರೂ' ಎಂದು ಅರ್ಥ.

''ಪಾಶುಪತಾದ್ಯುಕ್ತ್ಯಾದೇಃ'' ಎಂಬಲ್ಲಿ 'ಪಾಶುಪತಾದಿ ಶಾಸ್ತ್ರಗಳಲ್ಲಿ ಹೇಳಿರುವುದರಿಂದ ಮತ್ತು ವೇದಗಳಲ್ಲಿ ಆಪಾತತಃ ಪ್ರತೀತಿ ಇರುವುದರಿಂದ' ಎಂಬ ಅರ್ಥವನ್ನು ಗ್ರಹಿಸಿಕೊಳ್ಳಬೇಕು.

## ನ್ಯಾಯವಿವರಣವನ್ನು ಸೇರಿಸಿಕೊಂಡು ಭಾಷ್ಯವ್ಯಾಖ್ಯಾನ

**ಭಾವದೀಪಃ – ಏವಂ ಸೌತ್ರಸಮನ್ವಯಶಬ್ದಾರ್ಥೋಕ್ತಿಪರನ್ಯಾಯವಿವರಣಾರ್ಥಮುಕ್ತ್ವಾ, 'ತತಶ್ಚ ಕಿಮ್?' ಇತ್ಯತಃ ತದನ್ವಿತತ್ವೇನ ಭಾಷ್ಯಾರ್ಥಮಾಹ – ತೈಶ್ಚೇತಿ ।। 'ಶಾಸ್ತ್ರ' ಇತಿ ಭಾಷ್ಯೇ ಶೇಷ ಇತಿ ಭಾವಃ । ಬ್ರಹ್ಮೈವೇತಿ ।। ಏತೇನ ಸೂತ್ರೇ ತುಶಬ್ದಾರಣೇ ತದಿತಿ ಚ ಬ್ರಹ್ಮ ಪರಾಮೃಶ್ಯತೇ । ಶಾಸ್ತ್ರಯೋನೀತಿ ಪೂರ್ವಸ್ಮಾತ್ ಪ್ರಥಮಾನ್ತಂ ಸದನುವರ್ತತೇ ಇತಿ ದರ್ಶಿತಮ್ । ಶಾಸ್ತ್ರಸ್ಯ - ಋಗ್ಯಜುಃ ಸಾಮೇತ್ಯುಕ್ತಋಗಾದಿರೂಪಶಾಸ್ತ್ರಸ್ಯ ವಿವಿಧರೂಪತ್ವೇನ ಕಲ್ಪನಮ್ = ವಿಕಲ್ಪಃ ।**

ಈ ರೀತಿಯಾಗಿ ಸೂತ್ರದಲ್ಲಿರುವ ಸಮನ್ವಯಶಬ್ದದ ಅರ್ಥವನ್ನು ತಿಳಿಸುವ ನ್ಯಾಯವಿವರಣಕ್ಕೆ ಅರ್ಥವನ್ನು ಹೇಳಿ ಮುಂದೇನು? ಎಂಬ ಪ್ರಶ್ನೆಗೆ ಉತ್ತರವಾಗಿ ಆ ನ್ಯಾಯವಿವರಣದ ಅಭಿಪ್ರಾಯವನ್ನೂ ಸೇರಿಸಿಕೊಂಡು ''ತೈಶ್ಚ'' ಇತ್ಯಾದಿ ವಾಕ್ಯದಿಂದ ಭಾಷ್ಯದ ಅರ್ಥವನ್ನು ಹೇಳುತ್ತಿದ್ದಾರೆ. ಈ ವಾಕ್ಯದಲ್ಲಿ 'ಶಾಸ್ತ್ರೇ' ಎಂಬ ಪದವನ್ನು ಹೇಳಿರುವುದರಿಂದ ಈ ಪದವನ್ನು ಭಾಷ್ಯದಲ್ಲಿ ಶೇಷಪೂರಣೆ ಮಾಡಿಕೊಳ್ಳಬೇಕು ಎಂದು ಗ್ರಹಿಸಬೇಕು. ''ಬ್ರಹ್ಮೈವ'' ಎಂಬ ಪದದಿಂದ ಸೂತ್ರದಲ್ಲಿ ಹೇಳಿದ 'ತು'ಶಬ್ದವು ಅವಧಾರಣ ಎಂಬರ್ಥವನ್ನು ಹೊಂದಿದ್ದು, ತತ್ ಎಂಬ ಶಬ್ದದಿಂದ ಬ್ರಹ್ಮನನ್ನು ಸ್ವೀಕರಿಸಬೇಕು. ಹಿಂದಿನ ಸೂತ್ರದಿಂದ ಶಾಸ್ತ್ರಯೋನಿ ಎಂಬುದಾಗಿ ಪ್ರಥಮಾಂತವಾದ ಶಬ್ದವು ಅನುವೃತ್ತಿಯಾಗುತ್ತದೆ ಎಂಬುದನ್ನು ತೋರಿಸಿದಂತೆ ಆಯಿತು.

''ಶಾಸ್ತ್ರಸ್ಯ'' ಎಂಬ ಪದಕ್ಕೆ ಋಗ್ಯಜುಃಸಾಮ ಇತ್ಯಾದಿಗಳಿಂದ ಉಕ್ತವಾದ ಋಗಾದಿರೂಪವಾದ ಶಾಸ್ತ್ರಕ್ಕೆ ಎಂದು ಅರ್ಥ. ''ವಿಕಲ್ಪ'' ಎಂಬ ಶಬ್ದಕ್ಕೆ ವಿವಿಧರೂಪವುಳ್ಳವನನ್ನಾಗಿ ಕಲ್ಪಿಸುವುದು ಎಂದರ್ಥ.

ವಿಶೇಷ ವಿಚಾರ - ಉಪಕ್ರಮಾದಿಗಳು ಏಳೇ ತಾತ್ಪರ್ಯಲಿಂಗಗಳೆಂದು ಇಲ್ಲಿ ಹೇಳಿ, ಮುಂದೆ ಶ್ರುತ್ಯಾದಿಗಳನ್ನೂ ತಾತ್ಪರ್ಯಲಿಂಗಗಳೆಂದು ಹೇಗೆ ಹೇಳುತ್ತೀರಿ 'ಎಂಬ ಶಂಕೆಗೆ 'ಅತ್ರ 'ಎಂಬ ಟೀಕೆಯಿಂದ ಉತ್ತರ ನೀಡುತ್ತಿದ್ದಾರೆ. ''ಉಪಪತ್ಯಾದಿ'' ಎಂಬಲ್ಲಿರುವ ಆದಿ ಪದದಿಂದ ಶ್ರುತಿ ಪ್ರಕರಣ, ಸ್ಥಾನ, ಸಮಾಖ್ಯ ಮೊದಲಾದ ಆರು ಪ್ರಮಾಣಗಳನ್ನು ಗ್ರಹಣ ಮಾಡಬೇಕೆಂದು ತಿಳಿಯಬೇಕು. ಈ ಶ್ರುತ್ಯಾದಿಗಳ ಸ್ವರೂಪವನ್ನು ಮುಂದೆ ವಾಮನಾಧಿಕರಣದಲ್ಲಿ ವಿವರಣೆ ಮಾಡುತ್ತಾರೆ.

ಉಪಕ್ರಮಾದಿಗಳಿಂದ ರುದ್ರಾದಿಗಳೂ ಕೂಡ ಶಾಸ್ತ್ರದಿಂದ ಪ್ರತಿಪಾದ್ಯರಾಗಿದ್ದಾರೆಂದು ನಿರ್ಣಯ ಮಾಡಬಹುದಲ್ಲವೆ ? ಎಂಬ ಪ್ರಶ್ನೆಗೆ ''ತೈಶ್ಚ ಸಮ್ಯಕ್ ಶಾಸ್ತ್ರೇ'' ಎಂಬ ವಾಕ್ಯದಿಂದ ಉತ್ತರ ಕೂಟ್ಟಿದ್ದಾರೆ.

## ಎಲ್ಲವೂ ಹರಿಪರ

**भावदीपः – चत्वारि वागिति ।। तत्र वागित्यनुवादः ।**

'विधिभागे हरेः पूजैवाभिधाने च तद्गुणाः ।
विकल्पे तद् बहुत्वं चाप्यपोहे तु तदप्रियम् ।
उच्यते सर्ववेदेषु तच्च वेद स एव हि ।
सुरा हरेर्गुणाः प्रोक्तास्ते मे स्युरिति चिन्तनम् ।
सुरापानमिति प्रोक्तं तन्न कुर्यात् कथञ्चन ।
ब्राह्मणो विष्णुरुद्दिष्टः स नास्तीत्यभिचिन्तनम् ।
ब्रह्महत्या समुद्दिष्टा तां न कुर्यात् कथञ्चन ।
इत्याद्यपोहवाक्यार्थश्चिन्त्यो विष्णौ बुधैर्जनैः ।।'

**इत्येकादशस्कन्धतात्पर्यदिशाऽर्थमाह – कर्मेति ।।**

'ಚತ್ವಾರಿವಾಕ್' ಇತ್ಯಾದಿ ಪದಗಳಲ್ಲಿ 'ವಾಕ್' ಎಂಬ ಪದದಿಂದ ಆ ರೂಪವುಳ್ಳ ಭಗವಂತನನ್ನು ಅನುವಾದ ಮಾಡಿ ಅವನ ರೂಪಗಳನ್ನು ಚಿಂತಿಸುತ್ತಿದ್ದಾರೆ.

ವಿಧಿಭಾಗೇ ಹರೇಃ ಪೂಜೈವಾಭಿಧಾನೇ ಚ ತದ್ಗುಣಾಃ।
ವಿಕಲ್ಪೇ ತದ್ಬಹುತ್ವಂ ಚಾಪ್ಯಪೋಹೇ ತು ತದಪ್ರಿಯಮ್।
ಉಚ್ಯತೇ ಸರ್ವವೇದೇಷು ತಚ್ಚ ವೇದ ಸ ಏವ ಹಿ।

ಎಲ್ಲಾ ವೇದಗಳಲ್ಲಿ ವಿಧಿಯನ್ನು ತಿಳಿಸುವ ಭಾಗದಿಂದ ಹರಿಯ ಪೂಜೆಯನ್ನು ಮಾಡಬೇಕು ಇತ್ಯಾದಿಯಾಗಿ ಹರಿಯನ್ನೇ ಚಿಂತಿಸುತ್ತಾರೆ. ಇಂದ್ರಾದಿಶಬ್ದಗಳಿಂದ ಭಗವಂತನನ್ನು ಹೇಳಿದರೆ ಆ ಶಬ್ದಗಳಿಗೆ ಪ್ರವೃತ್ತಿನಿಮಿತ್ತವಾದ ಗುಣಗಳು ಭಗವಂತನಲ್ಲಿ ಇವೆ ಎಂದು ಅರ್ಥ. ಸಂಖ್ಯೆಗಳಿಂದ ವಿಕಲ್ಪ ಮಾಡಿದಾಗ ಭಗವಂತನಿಗೆ ಬಹುರೂಪಗಳು ಇವೆ ಎಂದು ಚಿಂತಿಸಬೇಕು. 'ಸುರಾಪಾನಾದಿಗಳನ್ನು ಮಾಡಬಾರದು' ಎಂಬ ರೀತಿಯಾಗಿ ಅಪೋಹ ಮಾಡಿದಾಗ ಇದು ಭಗವಂತನಿಗೆ ಪ್ರಿಯವಾದುದಲ್ಲ ಎಂದು ಚಿಂತಿಸಬೇಕು. ಹೀಗೆ ವೇದಗಳಲ್ಲಿ ಕಂಡುಬಂದಿರುವ ಎಲ್ಲಾ ವಿಷಯಗಳೂ ಕೂಡ ಭಗವಂತನನ್ನೇ ಹೇಳುತ್ತವೆ. ಇದನ್ನು ಅವನೊಬ್ಬನೇ ಸರಿಯಾಗಿ ತಿಳಿದಿದ್ದಾನೆ.

ಸುರಾ ಹರೇರ್ಗುಣಾಃ ಪ್ರೋಕ್ತಾಸ್ತೇ ಮೇ ಸ್ಯುರಿತಿ ಚಿಂತನಮ್ ।
ಸುರಾಪಾನಮಿತಿಪ್ರೋಕ್ತಂ ತನ್ನ ಕುರ್ಯಾತ್ ಕಥಂಚನ ॥

'ನ ಸುರಾಂ ಪಿಬೇತ್' ಎಂಬ ಅಪೋಹವಾಕ್ಯದಲ್ಲಿ ಸುರಾಶಬ್ದಕ್ಕೆ ಭಗವಂತನ ಗುಣಗಳು ಎಂದು ಅರ್ಥ. ಆ ಗುಣಗಳು ನನ್ನಲ್ಲಿವೆ ಎಂದು ತಿಳಿದುಕೊಳ್ಳುವುದೇ ಸುರಾಪಾನ ಎಂಬುದಾಗಿ ಕರೆದಿದ್ದಾರೆ. ಈ ರೀತಿಯಾದ ಸುರಾಪಾನವನ್ನು ಯಾವ ಬಗೆಯಲ್ಲಿಯೂ ಮಾಡಬಾರದು.

ಬ್ರಾಹ್ಮಣೋ ವಿಷ್ಣುರುದ್ದಿಷ್ಟಃ ಸ ನಾಸ್ತೀತ್ಯಭಿಚಿಂತನಮ್ ।
ಬ್ರಹ್ಮಹತ್ಯಾ ಸಮುದ್ದಿಷ್ಟಾತಾಂ ನ ಕುರ್ಯಾತ್ ಕಥಂಚ ॥

'ಬ್ರಾಹ್ಮಣೋ ನ ಹಂತವ್ಯಃ' ಇತ್ಯಾದಿ ಅಪೋಹವಾಕ್ಯದಲ್ಲಿ ಬ್ರಾಹ್ಮಣ ಎಂಬ ಶಬ್ದದಿಂದ ವಿಷ್ಣುವನ್ನು ಹೇಳುತ್ತಿದ್ದಾರೆ. ಅವನು ಇಲ್ಲ ಎಂದು ಚಿಂತಿಸುವುದನ್ನು 'ಬ್ರಹ್ಮಹತ್ಯಾ' ಎಂಬ ಪದದಿಂದ ಕರೆಯುತ್ತಿದ್ದು, ಈ ಬ್ರಹ್ಮಹತ್ಯೆಯನ್ನು ಯಾವ ಬಗೆಯಲ್ಲಿಯೂ ಮಾಡಬಾರದು. ಇವೇ ಮೊದಲಾದ ಅಪೋಹವಾಕ್ಯಗಳ ಅರ್ಥವನ್ನು ಪಂಡಿತಜನರು ವಿಷ್ಣುವಿನಲ್ಲೇ ಚಿಂತಿಸಬೇಕು. ಈ ರೀತಿಯಾಗಿ ಏಕಾದಶಸ್ಕಂಧತಾತ್ಪರ್ಯದಲ್ಲಿ ತಿಳಿಸಿದಂತೆ ''ಕರ್ಮ'' ಇತ್ಯಾದಿ ವಾಕ್ಯಗಳಿಂದ ಅರ್ಥವನ್ನು ಸ್ಪಷ್ಟಪಡಿಸುತ್ತಿದ್ದಾರೆ.

## ಕರ್ಮಕಾಂಡವೂ ಹರಿಪರ

**ಭಾವದೀಪಃ** – 'अस्याः' इत्यग्रे श्रवणादाह – श्रुतिरिति ।। मां प्रत्येवेति ।। 'तेषां दुःखप्रहाणाय श्रुतिरेषा प्रवर्तत' इत्युक्तेर्निःशेषदुःख-

**ಪ್ರಹಾಣರೂಪಮೋಕ್ಷಸ್ಯ 'ಪ್ರೀತ್ಯಾ ಮೋಕ್ಷಫಲತ್ವಾಚ್ಚ' ಇತ್ಯನುವ್ಯಾಖ್ಯಾನೋಕ್ತದಿಶಾ ವಿಷ್ಣುಪ್ರೀತಿಂ ವಿನಾऽಯೋಗಾತ್ ಜೀವಾನಾಂ ತಾದೃಙ್ಮೋಕ್ಷಹೇತುವಿಷ್ಣುಪ್ರೀತ್ಯುದ್ದೇಶೇನ ವಿಧತ್ತೇ । ಅವಾನ್ತರತಾತ್ಪರ್ಯೇಣ ಕರ್ಮವಿದಧದಪಿ ಕರ್ಮಕಾಣ್ಡಂ ಮಹಾತಾತ್ಪರ್ಯೇಣ ಮಯ್ಯೇವ ಪರ್ಯವಸ್ಯತೀತಿ ಭಾವಃ । ವಕ್ಷ್ಯತಿ ಚ 'ವಾಕ್ಯಾನ್ವಯಾತ್' ಇತ್ಯತ್ರ । ಅಭಿಧತ್ತ ಇತಿ।। 'ರೂಢಿಯೋಗಾದಿವೃತ್ತಿಭಿರಿನ್ದ್ರಾದ್ಯಭಿಧಾತ್ರೀ ಶ್ರುತಿರ್ಮಹಾಯೋಗವಿದ್ಭದ್ರೂಢಿಭ್ಯಾಂ ಮಾಮೇವಾಭಿಧತ್ತೇ' ಇತ್ಯರ್ಥಃ । ತದಪಿ ವಾಕ್ಯಾನ್ವಯಮುಪೇತ್ಯೈವ ಅಪ್ರಿಯಾದಪ್ರೀತೇರಪೋಹ್ಯಃ ಅಪ್ರೀತಿಮಾನ್ನ ಕಾರ್ಯಃ । 'ಅಪ್ರೀತಿಹೇತುತ್ವಾತ್ ಸುರಾಪಾನಂ ನ ಕಾರ್ಯಮಿತಿ ವಕ್ತಿ' ಇತ್ಯರ್ಥಃ । 'ಇತ್ಯಸ್ಯಾಃ' ಇತ್ಯೇತದ್ ವ್ಯಾಖ್ಯಾನಮ್ – ಏವಮ್ಭೂತಾಯಾಃ ಇತಿ । 'ಕರ್ಮಾದಿವಿಧಾತ್ರ್ಯಾದಿರೂಪಾಯಾಃ' ಇತ್ಯರ್ಥಃ । 'ಇತ್ಯಹಮ್' ಇತ್ಯತ್ರ 'ಇತಿ'ಶಬ್ದಸ್ಯ 'ಹೃದಯಮ್' ಇತ್ಯನೇನಾನ್ವಯಮಾಹ – ಇತ್ಯಭಿಪ್ರಾಯಮಿತಿ ।।**

''ಅಸ್ಯಾಃ'' ಎಂಬ ಪದವು ಮುಂದೆ ಕೇಳಿಬರುವುದರಿಂದ ಅದರ ಅರ್ಥವನ್ನು 'ಶ್ರುತಿಃ' ಎಂಬುದಾಗಿ ವಿವರಿಸಿದ್ದಾರೆ. ''ಮಾಂ ಪ್ರತ್ಯೇವ'' ಎಂಬ ಅಂಶದಿಂದ 'ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ' (ಸಂಸಾರದಲ್ಲಿ ಕಷ್ಟಪಡುತ್ತಿರುವ ಜೀವಿಗಳ ದುಃಖವನ್ನು ಪರಿಹಾರ ಮಾಡುವುದಕ್ಕಾಗಿ ಶ್ರುತಿಯು ಪ್ರವೃತ್ತವಾಗಿದೆ) ಎಂಬ ವಾಕ್ಯದಂತೆ ಎಲ್ಲಾ ದುಃಖಗಳ ಪರಿಹಾರರೂಪವಾದ ಮೋಕ್ಷಕ್ಕೆ ''ಪ್ರೀತ್ಯಾ ಮೋಕ್ಷಫಲತ್ವಾಚ್ಚ'' ಇತ್ಯಾದಿಯಾಗಿ ಅನುವ್ಯಾಖ್ಯಾನದಲ್ಲಿ ಹೇಳಿರುವಂತೆ ಭಗವತ್‌ಪ್ರೀತಿಯನ್ನು ಬಿಟ್ಟು ಬೇರೆ ದಾರಿ ಇಲ್ಲದಿರುವುದರಿಂದ ಜೀವಿಗಳಿಗೆ ಆ ರೀತಿಯಾದ ಮೋಕ್ಷಕ್ಕೆ ಕಾರಣವಾದ ಭಗವಂತನ ಪ್ರೀತಿಯನ್ನು ಉದ್ದೇಶವಾಗಿ ಇಟ್ಟುಕೊಂಡು ಕರ್ಮಾದಿಗಳನ್ನು ವಿಧಾನ ಮಾಡುತ್ತಿವೆ. ಕರ್ಮಕಾಂಡವು ಅವಾಂತರ-ತಾತ್ಪರ್ಯದಿಂದ ಕರ್ಮವನ್ನು ಹೇಳುತ್ತಿದ್ದರೂ ಮಹಾತಾತ್ಪರ್ಯದಿಂದ ಭಗವಂತನಲ್ಲೇ ಪರ್ಯವಸಾನವನ್ನು ಹೊಂದುತ್ತದೆ'' ಎಂಬ ಅಭಿಪ್ರಾಯವನ್ನು ಗ್ರಹಿಸಿಕೊಳ್ಳಬೇಕು. ಈ ಅಭಿಪ್ರಾಯವನ್ನು ''ವಾಕ್ಯಾನ್ವಯಾತ್'' ಎಂಬಲ್ಲಿ ಸ್ಪಷ್ಟಪಡಿಸಲಿದ್ದಾರೆ.

''ಅಭಿಧತ್ತೇ'' ಎಂಬ ಅಂಶಕ್ಕೆ 'ರೂಢಿಯೋಗಾದಿ ವೃತ್ತಿಗಳಿಂದ ಇಂದ್ರಾದಿಗಳನ್ನು ಶ್ರುತಿಯು ಹೇಳುತ್ತಿದ್ದರೂ ಮಹಾಯೋಗವಿದ್ವದ್‌ರೂಢಿಗಳಿಂದ ನನ್ನನ್ನೇ ಶ್ರುತಿಯು

ಹೇಳುತ್ತಿದೆ' ಎಂಬುದಾಗಿ ಅರ್ಥ. ಅದೂ ಕೂಡ ವಾಕ್ಯಾನ್ವಯವನ್ನು ಹೊಂದಿಸಿಕೊಂಡೇ ನನ್ನನ್ನು ಹೇಳುತ್ತಿದೆ. 'ಅಪ್ರಿಯಾತ್' ಎಂಬ ಶಬ್ದಕ್ಕೆ 'ಅಪ್ರೀತೇಃ' ಎಂಬುದಾಗಿ ಅರ್ಥ. ಹಾಗಾಗಿ 'ಅಪೋಹ್ಯಃ' ಎಂದರೆ ಅದು ಅಪ್ರಿಯವಾದದ್ದು ಎಂಬ ಅರ್ಥವಿದ್ದು, ಅದನ್ನು ಮಾಡಬಾರದು ಎಂಬ ಅರ್ಥವನ್ನು ಹೊಂದಿಸಿಕೊಳ್ಳಬೇಕು. ಅಂದರೆ ಭಗವಂತನ ಅಪ್ರೀತಿಗೆ ಕಾರಣವಾದುದರಿಂದ ಸುರಾಪಾನವನ್ನು ಮಾಡಬಾರದು ಎಂಬ ಅಭಿಪ್ರಾಯವನ್ನು ಶ್ರುತಿಯು ಹೇಳುತ್ತಿದೆ.

''ಇತ್ಯಸ್ಯಾಃ'' ಎಂಬ ಪದಕ್ಕೆ 'ಏವಂಭೂತಾಯಾಃ' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. ಹೀಗೆ ಈ ಪದಕ್ಕೆ 'ಕರ್ಮಾದಿಗಳನ್ನು ವಿಧಾನ ಮಾಡುವುದೇ ಸ್ವರೂಪವಾಗಿ ಉಳ್ಳ ಶ್ರುತಿಗೆ' ಎಂಬುದಾಗಿ ಅರ್ಥ. 'ಇತ್ಯಹಂ' ಎಂಬಲ್ಲಿ ಇರುವ ಇತಿಶಬ್ದಕ್ಕೆ ಹೃದಯಂ ಎಂಬ ಶಬ್ದದಿಂದ ಅನ್ವಯವನ್ನು ಮಾಡಿಕೊಂಡು 'ಇತ್ಯಭಿಪ್ರಾಯಮ್' ಎಂಬುದಾಗಿ ಹೇಳಿದ್ದಾರೆ.

ವಿಶೇಷ ವಿಚಾರ -''ಕರ್ಮವಿಧಾತ್ರೀ'' ಎಂದರೆ ''ಪ್ರಾತ ಸಂಧ್ಯಾಮುಪಾಸೀತ'' ಇವೇ ಮೊದಲಾದ ಕರ್ಮಗಳನ್ನು ವಿಧಾನಮಾಡುವ ವಾಕ್ಯಗಳು ಎಂದರ್ಥ. ಈ ಕರ್ಮಗಳನ್ನು ವಿಧಾನ ಮಾಡುವ ಈ ವಾಕ್ಯಗಳು ವಿಷ್ಣುಪರವಾಗಿದ್ದಲ್ಲಿ ಕರ್ಮಗಳನ್ನು ವಿಧಿಸಿದಂತಾಗುವುದಿಲ್ಲವಲ್ಲ ? ಎಂದು ಪ್ರಶ್ನೆ ಮಾಡಿದರೆ, ''ಮಾಂ ಪ್ರತ್ಯೇವ'' ಎಂಬ ವಾಕ್ಯದಿಂದ ಉತ್ತರವನ್ನು ಹೇಳುತ್ತಿದ್ದಾರೆ. ಭಗವಂತನ ಪ್ರೀತಿಯ ಸಲುವಾಗಿಯೇ ಈ ವಿಧಿವಾಕ್ಯಗಳು ಕರ್ಮಾದಿಗಳನ್ನು ವಿಧಾನ ಮಾಡುತ್ತಿರುವುದರಿಂದ ದೋಷವಿಲ್ಲ. ''ಮಾಮಭಿಧಾತ್ರಿ'' ಎಂದರೆ ಪರಮಮುಖ್ಯವೃತ್ತಿಯಿಂದ ಎಂದರ್ಥ. ''ವಿವಿಧರೂಪತ್ವೇನ'' ಎಂದರೆ ವಾಸುದೇವನೇ ಮೊದಲಾದ ರೂಪಗಳಿಂದ ಎಂದರ್ಥ.

''ಕಲ್ಪ್ಯಃ'' ಎಂದರೆ ಜ್ಞೇಯ ಎಂದರ್ಥ. ''ಅಪ್ರಿಯತ್ವಾದಪೋಹ್ಯಃ'' ಎಂದರೆ ಸುರಾ-ಪಾನಾದಿಗಳು ನನ್ನ ಪ್ರೀತಿಗೆ ಸಾಧಕವಾಗದಿರುವದರಿಂದ ಅವುಗಳನ್ನು ನಿಷೇಧ ಮಾಡಲ್ಪಟ್ಟದೆ ಎಂದರ್ಥ. ಭಾಗವತವಾಕ್ಯದಲ್ಲಿರುವ ''ಇತ್ಯಸ್ಯಾಃ'' ಎಂಬ ಪದದಲ್ಲಿರುವ ''ಇತಿ'' ಶಬ್ದದ ವ್ಯಾಖ್ಯಾನವನ್ನು ''ಏವಂ ಭೂತಾಯಾಃ'' ಎಂಬ ವಾಕ್ಯದಿಂದ ಮಾಡುತ್ತಿದ್ದಾರೆ. ''ಇತ್ಯಭಿಪ್ರಾಯಂ'' ಎಂದು ಹೇಳಿದ್ದರಿಂದ ''ಅಸ್ಯಾಃ'' ''ಹೃದಯಂ'' ಎಂಬೆರಡರ ಮಧ್ಯದಲ್ಲಿ ''ಮಾಂ ವಿಧತ್ತೇ'' ಇತ್ಯಾದಿ ವಾಕ್ಯವನ್ನು ಯೋಜನೆ ಮಾಡಿಕೊಳ್ಳಬೇಕು.

## ಕರ್ಮಕಾಂಡ ಪ್ರತಿಪಾದಕತ್ವವನ್ನು ಹೇಳುವುದು ಅನಿವಾರ್ಯವೆ?

**ಭಾವದೀಪಃ** – 'ನನು ಜಿಜ್ಞಾಸ್ಯಬ್ರಹ್ಮಣೋ ಜನ್ಮಾದಿಸೂತ್ರೋಕ್ತಜಗಜ್ಜನ್ಮಾದಿಕಾರಣತ್ವ ರೂಪಲಕ್ಷಣಸ್ಯಾತಿವ್ಯಾಪ್ತಿನಿರಾಸಾಯೋಪಕ್ರಮಾದಿನ್ಯಾಯೈಃ ಕಾರಣವಾಕ್ಯರಾಶಿಪ್ರತಿಪಾದ್ಯತ್ವ ಮಾತ್ರಂ ಪ್ರತಿಜ್ಞಾತವ್ಯಂ ನ ತು ಕರ್ಮಕಾಣ್ಡಾದಿಸರ್ವಶಾಸ್ತ್ರಪ್ರತಿಪಾದ್ಯತ್ವಮ್, ಶಾಸ್ತ್ರಯೋನಿಸೂತ್ರೇ ತಾವದೇವ ಹೇತೂಕರ್ತವ್ಯಮ್' ಇತ್ಯಾಶಙ್ಕಾಂ ನಿರಸ್ಯನ್ ಸಮಗ್ರಸೂತ್ರಾರ್ಥಂ ಚ ವ್ಯಞ್ಜಯನ್, ಫಲೋಕ್ತ್ಯಾ ಉಪಸಂಹರತಿ – **ತಸ್ಮಾದಿತಿ** ।। 'ಉಪಕ್ರಮಾದೀನಾಮೇವ ತಾತ್ಪರ್ಯಾರ್ಥ-ನಿರ್ಣಾಯಕತ್ವಾತ್' ಇತ್ಯರ್ಥಃ । 'ಅಯಂ ಚೋಪಕ್ರಮಾದಿಲಕ್ಷಣಃ ಸಮನ್ವಯ ಏವ ಶಾಸ್ತ್ರಪ್ರತಿಪಾದ್ಯತ್ವೇ ಕಾರಣಮ್' ಇತಿ ನ್ಯಾಯವಿವರಣೇ, 'ಲಿಙ್ಗಂ ತಾತ್ಪರ್ಯನಿರ್ಣಯ' ಇತಿ ಭಾಷ್ಯೇ ಚೋಕ್ತಾರ್ಥಸ್ಯ ಹೇತುತಯೋಪಸಂಹಾರಃ । 'ಸಮನ್ವಯಾತ್' ಇತಿ ಸೌತ್ರಹೇತ್ವರ್ಥಸ್ಯೋಪಸಂಹಾರಃ – **ಉಪಕ್ರಮಾದಿವಶಾದಿತಿ** ।। ತತ್ವಿಸ್ಯ ವಿಷ್ಣೋರೇವೇತಿ ।'ಸಂ'ಶಬ್ದೋತ್ರ ಸೂತ್ರೇ ಆವರ್ತಮಾನಃ ಸನ್ ಅನುವರ್ತಮಾನಶಾಸ್ತ್ರಯೋನಿಪದೇನಾಪ್ಯನ್ವೇತಿ, ತತ್ರ ಸಾಕಲ್ಯ ಮುಖ್ಯತ್ವಂ ಚಾಸ್ಯಾರ್ಥ ಇತ್ಯುಪೇತ್ಯಾಹ – **ಸರ್ವಶಾಸ್ತ್ರೈರಿತಿ** ।। **ಉಚ್ಯತ ಇತಿ** ।। 'ಸ್ವರವರ್ಣಪದವಾಕ್ಯಾತ್ಮನಾ ಮುಖ್ಯವೃತ್ತ್ಯಾ ಪ್ರತಿಪಾದ್ಯತೇ' ಇತ್ಯರ್ಥಃ । 'ಮುಖ್ಯಾರ್ಥೋ ಭಗವಾನ್ ವಿಷ್ಣುಃ ಸರ್ವಶಾಸ್ತ್ರಸ್ಯ ನಾಪರಃ' ಇತ್ಯನುಭಾಷ್ಯೋಕ್ತೇಃ । ಕಥಮ್ ಉಚ್ಯತೇ? ಇತ್ಯತಃ 'ಕಾರಣತ್ವೇ'ತ್ಯಾದಿ-ಪೂರ್ವಸೂತ್ರೇನ್ವಿತಂ ಕಾರಣಸ್ಯೇತ್ಯೇತದಿಹ ಕಾರಣತ್ವೇನೇತ್ಯೇವಮನ್ವೇತಿ ತಚ್ಚೋಪಲಕ್ಷಣಮಿತ್ಯರ್ಥಃ। 'ಕಾರಣತ್ವಾದ್ಯನನ್ತಗುಣತಯೇತಿ' ಇತಿ ಯಾವತ್ ।

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು. ''ಜಿಜ್ಞಾಸ್ಯನಾದ ಬ್ರಹ್ಮನಿಗೆ ಜನ್ಮಾದಿಸೂತ್ರದಲ್ಲಿ ಹೇಳಿದ ಜಗಜ್ಜನ್ಮಾದಿಕಾರಣತ್ವರೂಪವಾದ ಲಕ್ಷಣಕ್ಕೆ ಅತಿವ್ಯಾಪ್ತಿಯನ್ನು ನಿರಾಸ-ಮಾಡುವುದಕ್ಕಾಗಿ ಉಪಕ್ರಮಾದಿನ್ಯಾಯಗಳಿಂದ ಜಗಜ್ಜನ್ಮಾದಿಕಾರಣತ್ವವನ್ನು ತಿಳಿಸುವ ವಾಕ್ಯಗಳ ಸಮುದಾಯದಿಂದ ಭಗವಂತನು ಪ್ರತಿಪಾದ್ಯನಾಗಿದ್ದಾನೆ ಎಂದಷ್ಟೇ ಪ್ರತಿಜ್ಞೆ ಮಾಡಬೇಕಲ್ಲದೆ ಕರ್ಮಕಾಂಡಾದಿ ಸರ್ವಶಾಸ್ತ್ರದಿಂದ ಪ್ರತಿಪಾದ್ಯನಾಗಿದ್ದಾನೆ' ಎಂದು ಪ್ರತಿಜ್ಞೆ ಮಾಡಬಾರದು. ಶಾಸ್ತ್ರಯೋನಿಸೂತ್ರದಿಂದಲೂ ಕೂಡ ಅಷ್ಟಂಶವನ್ನು ಮಾತ್ರ ಹೇತುವಾಗಿಸಬೇಕು.'' ಎಂದು. ಈ ಪ್ರಶ್ನೆಗೆ ಉತ್ತರವನ್ನು ನೀಡುತ್ತಾ, ಸಮಗ್ರಸೂತ್ರಾರ್ಥವನ್ನು

ಸ್ಪಷ್ಟವಾಗಿ ತಿಳಿಸುತ್ತಾ ನಿರ್ಣಯದ ಫಲವನ್ನು ತಿಳಿಸುವ ಮೂಲಕ ''ತಸ್ಮಾತ್'' ಇತ್ಯಾದಿ ವಾಕ್ಯದಿಂದ ಉಪಸಂಹಾರ ಮಾಡುತ್ತಿದ್ದಾರೆ. 'ತಸ್ಮಾತ್' ಎಂಬ ಶಬ್ದಕ್ಕೆ ಉಪಕ್ರಮಾದಿಗಳೇ ತಾತ್ಪರ್ಯಾರ್ಥವನ್ನು ನಿರ್ಣಯ ಮಾಡುವುದರಿಂದ ಎಂಬುದಾಗಿ ಅರ್ಥ. ನ್ಯಾಯವಿವರಣದಲ್ಲಿ 'ಅಯಂ ಚ ಉಪಕ್ರಮಾದಿಲಕ್ಷಣಃ ಸಮನ್ವಯ ಏವ ಶಾಸ್ತ್ರಪ್ರತಿಪಾದ್ಯತ್ವೇ ಕಾರಣಮ್' ಎಂಬುದಾಗಿ ಭಾಷ್ಯದಲ್ಲಿ 'ಲಿಂಗಂ ತಾತ್ಪರ್ಯನಿರ್ಣಯೇ' ಎಂಬುದಾಗಿಯೂ ಹೇಳಿದ ಅರ್ಥವನ್ನೇ ಹೇತುತಯಾ ಇಟ್ಟುಕೊಂಡು ಈ ರೀತಿಯಾಗಿ ಉಪಸಂಹಾರ ಮಾಡಿದ್ದಾರೆ. ''ಸಮನ್ವಯಾತ್'' ಎಂಬ ಸೂತ್ರದಲ್ಲಿ ಹೇಳಿದ ಹೇತುವನ್ನು 'ಉಪಕ್ರಮಾದಿವಶಾತ್' ಎಂಬ ಅರ್ಥವನ್ನು ಹೇಳುವ ಮೂಲಕ ಉಪಸಂಹಾರ ಮಾಡಿದ್ದಾರೆ. 'ತತ್ತು' ಎಂಬ ಶಬ್ದಕ್ಕೆ 'ವಿಷ್ಣುರೇವ' ಎಂಬುದಾಗಿ ಅರ್ಥ. ಸೂತ್ರದಲ್ಲಿರುವ 'ಸಂ'ಶಬ್ದವನ್ನು ಇನ್ನೊಮ್ಮೆ ಆವೃತ್ತಿ ಮಾಡಿಕೊಂಡು ಹಿಂದಿನ ಸೂತ್ರದಿಂದ ಅನುವೃತ್ತಿಮಾಡಿದ ಶಾಸ್ತ್ರಯೋನಿಪದದಿಂದ ಅನ್ವಯವನ್ನು ಹೇಳಬೇಕು. ಅಲ್ಲಿ ಈ 'ಸಂ' ಎಂಬ ಪದಕ್ಕೆ ಸಾಕಲ್ಯವು ಮತ್ತು ಮುಖ್ಯತ್ವವು ಅರ್ಥವಾಗಿದೆ ಎಂಬುದಾಗಿ ಹೊಂದಿಸಿಕೊಂಡು ''ಸರ್ವಶಾಸ್ತ್ರೈಃ'' ಎಂಬುದಾಗಿ ಅಭಿಪ್ರಾಯವನ್ನು ಬಿಡಿಸಿದ್ದಾರೆ. ''ಉಚ್ಯತೇ'' ಎಂಬ ಶಬ್ದಕ್ಕೆ 'ಸ್ವರವರ್ಣಪದವಾಕ್ಯರೂಪವಾದ ಮುಖ್ಯವೃತ್ತಿಯಿಂದ ಪ್ರತಿಪಾದಿಸಲ್ಪಡುತ್ತದೆ' ಎಂಬುದಾಗಿ ಅರ್ಥ. ಇದನ್ನು ಅನುವ್ಯಾಖ್ಯಾನದಲ್ಲಿ 'ಮುಖ್ಯಾರ್ಥೋ ಭಗವಾನ್ ವಿಷ್ಣುಃ ಸರ್ವಶಾಸ್ತ್ರಸ್ಯ ನಾಪರಃ' (ಎಲ್ಲಾ ಶಾಸ್ತ್ರಗಳಿಗೂ ಕೂಡ ಸರ್ವೈಶ್ವರ್ಯಸಮನ್ವಿತನಾದ ವಿಷ್ಣುವೇ ಮುಖ್ಯವಾದ ಅರ್ಥ ಹೊರತು ಬೇರೆಯವರಲ್ಲ) ಎಂಬುದಾಗಿ ವಿವರಿಸಿದ್ದಾರೆ. ''ಉಚ್ಯತೇ'' ಎಂಬ ಅಂಶದಲ್ಲಿ ಹೇಗೆ ಹೇಳಲ್ಪಡುತ್ತಿದ್ದಾನೆ? ಎಂಬುದನ್ನು ಸ್ಪಷ್ಟಪಡಿಸಲು 'ಕಾರಣತ್ವ' ಎಂಬುದಾಗಿ ಹಿಂದಿನ ಸೂತ್ರದಲ್ಲಿ ಅನ್ವಯಿಸಿಕೊಂಡ 'ಕಾರಣಸ್ಯ' ಎಂಬ ಅಂಶವನ್ನು ಕಾರಣತ್ವೇನ ಎಂಬುದಾಗಿ ಈ ಸೂತ್ರದಲ್ಲಿ ಅನ್ವಯ ಮಾಡಿಕೊಳ್ಳಬೇಕು. ಇದನ್ನು ಉಪಲಕ್ಷಣತಯಾ ಇಟ್ಟುಕೊಂಡು ಕಾರಣತ್ವಾದಿ ಅನಂತಗುಣಗಳಿಂದ ಕೂಡಿಕೊಂಡು ಎಂದರ್ಥವನ್ನು ತಿಳಿಯಬೇಕು.

ವಿಶೇಷ ವಿಚಾರ- ''ಉಪಲಕ್ಷಿತಾನಂತ'' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - 'ಈ ಅಧಿಕರಣದಲ್ಲಿ ಶಾಸ್ತ್ರಪದದಿಂದ ವಾಚ್ಯವಾದ ಅನಂತವಾದ ವೇದಾದಿಸದಾಗಮಗಳು ಜನ್ಮಾದಿಕಾರಣತ್ವವೇ ಮೊದಲಾದ ಲಕ್ಷಣಗಳನ್ನು, ಮತ್ತು ಆನಂದವೇ ಮೊದಲಾದ

ಗುಣಗಳನ್ನು ಪ್ರತಿಪಾದನೆ ಮಾಡುವ ಪದಗಳ ಸಮನ್ವಯವನ್ನು ಹೇಳಲಾಗಿದೆಯೆಂದು ತಿಳಿಯಬೇಕು.

ಸಂಶಬ್ದದ ಸ್ವಾರಸ್ಯ

'ಓಂ ತತ್ತು ಸಮನ್ವಯಾತ್ ಓಂ' ಎಂಬಲ್ಲಿ 'ಸಂ' ಎಂದರೆ ಸಮ್ಯಕ್ ಸರಿಯಾಗಿ ಎಂದು ಅರ್ಥ. ಪ್ರವಿಚಾರಿತೇ ಎಂದು ಅಧ್ಯಾಹಾರ ಮಾಡಬೇಕು. ಆಗ ಉಪಕ್ರಮಾದಿ ಲಿಂಗಗಳಿಂದ ಸರಿಯಾಗಿ ಶಾಸ್ತ್ರವಿಚಾರ ಮಾಡಿದಾಗ ವಿಷ್ಣುವೇ ಸರ್ವಶಾಸ್ತ್ರದ ಮುಖ್ಯಾರ್ಥ ಎಂದು ತಿಳಿಯುತ್ತದೆ ಎಂದು ಸೂತ್ರಾರ್ಥ. ವಿಚಾರಣೆ ಎಂದರೆ ಬಲಾಬಲ ನಿರ್ಣಯ ಎಂದರ್ಥ.

ಸರಿಯಾಗಿ ವಿಚಾರ ಮಾಡದಿದ್ದರೆ ಉಪಕ್ರಮಾದಿಲಿಂಗಗಳೂ ಕೂಡ ವ್ಯಭಿಚರಿತವಾಗುತ್ತವೆ. ಹೇಗೆಂದರೆ, ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮ ಎಂಬಲ್ಲಿ ಉಪಕ್ರಮದಲ್ಲಿ ಪ್ರಾಣ ಪದವಿದೆ. ಆದರೂ ಇಲ್ಲಿ ಉಪಕ್ರಮವು ಇದು ಪ್ರಾಣವಿದ್ಯೆ ಎಂದು ಸಾಧಿಸಲು ಸಮರ್ಥವಾಗಿಲ್ಲ. ಹಾಗೆಯೇ ಹ್ವಯಾಮ್ಯಗ್ನಿಂ ಪ್ರಥಮಂ ಎಂಬ ವಾಕ್ಯದಲ್ಲಿ ಉಪಕ್ರಮದಲ್ಲಿ (ಆರಂಭದಲ್ಲಿ) ಅಗ್ನಿ ಪದವಿದೆ. ಆದರೂ ಇದು ಅಗ್ನಿ ವಿದ್ಯೆಯೆಂಬುದನ್ನು ಅದು ಸಾಧಿಸುವುದಿಲ್ಲ.

ಬ್ರಹ್ಮವಲ್ಲಿಯಲ್ಲಿ''ತಸ್ಯೈಷ ಏವ ಶಾರೀರ ಆತ್ಮಾ ಯ: ಪೂರ್ವಸ್ಯ ''ಎಂಬಲ್ಲಿ ಉಪಸಂಹಾರದಲ್ಲಿ ಜೀವವಾಚಕ ಶಾರೀರ ಪದವಿದ್ದರೂ ಇಲ್ಲಿ ಉಪಸಂಹಾರವು 'ಬ್ರಹ್ಮವಲ್ಲಿಯು ಜೀವಪರ ' ಎನ್ನುವುದಕ್ಕೆ ಹೇತುವಾಗುವುದಿಲ್ಲ.

ಇತರ ವ್ಯಪದೇಶಾತ್ ಹಿತಾಕರಣಾದಿ ದೋಷ ಪ್ರಸಕ್ತಿ: ಎಂಬಲ್ಲಿ ಪೂರ್ವಪಕ್ಷದಲ್ಲಿ ಉದಾಹರಿಸಲ್ಪಟ್ಟ ''ಜೀವಾದ್ ಭವಂತಿ ಭೂತಾನಿ ಜೀವೇ ತಿಷ್ಠಂತ್ಯಚಂಚಲಾ:'' ಎಂಬ ವಾಕ್ಯದಲ್ಲಿ ಜೀವ ಶಬ್ದದ ಅಭ್ಯಾಸ(ಆವೃತ್ತಿ) ಇದ್ದರೂ ಅದು ಆ ವಾಕ್ಯಕ್ಕೆ ಜೀವ ಪರತ್ವ ಸಾಧಕವಲ್ಲ.

''ಅಸದ್ವಾ ಇದಮಗ್ರ ಆಸೀತ್ ತತೋ ವೈ ಸದಜಾಯತ'' ಎಂಬಲ್ಲಿ ಅಸತ್ ನಿಂದ ಸನ್ನಾಮಕನಾದ ವಿಷ್ಣು ಜನಿಸಿದ ಎಂಬ ಅರ್ಥವನ್ನು ಹೇಳಿದರೆ ಅಪೂರ್ವತಾ ಬರುತ್ತದೆ. ಆದರೆ ಆ ಅಪೂರ್ವತಾ ಎಂಬುದು ಆ ಅರ್ಥಕ್ಕೆ ಸಾಧಕವಾದದ್ದು ಕಂಡಿಲ್ಲ.

'ಉದ್ಭಿದಾ ಯಜೇತ ಪಶುಕಾಮ: 'ಎಂಬಲ್ಲಿ ಪಶುಕಾಮ: ಎಂದು ಫಲವತ್ತ್ವ ಕಂಡಿದೆ. ಆದರೆ ಆ ಫಲವತ್ತ್ವವು ಆ ವಾಕ್ಯವು ಕಾಮ್ಯ ಕರ್ಮಪರ ಎಂಬುದಕ್ಕೆ

ಹೇತುವಲ್ಲ. ಏಕೆಂದರೆ ''ಉತ್ಕ್ರಮಿಷ್ಯತ ಏವಂ ಭಾವಾದಿತ್ಯೌಡುಲೋಮಿ:'' ಎಂಬ ಬ್ರಹ್ಮ ಸೂತ್ರದಲ್ಲಿ ಕರ್ಮಾದಿಗಳು ಅಂತ:ಕರಣ ಶುದ್ಧಿದ್ವಾರಾ ಜ್ಞಾನ ಪ್ರಯೋಜಕವಾದ್ದರಿಂದ ಜ್ಞಾನಾಂಗ ಎಂದು ಸಮರ್ಥಿಸಿದ್ದಾರೆ.

ಅದ್ವೈತಿಗಳಿಂದ ಅದ್ವೈತ ಪ್ರಕರಣ ಎಂದು ಪರಿಗಣಿಸಲ್ಪಟ್ಟ ಐತದಾತ್ಮ್ಯಮಿದಂ ಸರ್ವಂ ಎಂಬ ಪ್ರಕರಣದಲ್ಲಿ ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ (ಪ್ರಾರಬ್ಧ ಕರ್ಮನಾಶವಾಗುವವರೆಗೆ ಮಾತ್ರ ವಿಲಂಬ. ಪ್ರಾರಬ್ಧನಾಶವಾದ ಕೂಡಲೇ ಮೋಕ್ಷ) ಎಂದು ಪ್ರಶಂಸೆ ಮಾಡಿದ್ದಾರೆ. ಇಂತಹ ಅರ್ಥವಾದ ವಾಕ್ಯವಿದ್ದರೂ ಕೂಡ ಆ ಪ್ರಕರಣವು ಐಕ್ಯಪರವಲ್ಲ.

ಹಾಗೆಯೇ, ಅಗ್ನಿಗಳು ಉಪಕೋಸಲನಿಗೆ ವಿದ್ಯೆಯನ್ನುಪದೇಶಿಸಿ 'ಇದನ್ನು ತಿಳಿದವನನ್ನು ('ಉಪವಯಂ ತಂ ಭುಂಜಾಮ:') ಭೃತ್ಯರು ಯಾವಾಗಲೂ ಸೇವಿಸುತ್ತಾರೆ ಎಂದು ಪ್ರಶಂಸಿಸಿದ್ದಾರೆ ಮತ್ತು ಅಸ್ಮದ್ವಿದ್ಯಾ ಉಪದಿಷ್ಟಾ (ನಮ್ಮ ವಿದ್ಯೆಯನ್ನು ಉಪದೇಶಿಸಿದ್ದೇವೆ) ಎಂದಿದ್ದಾರೆ. ಇಲ್ಲಿ ಅರ್ಥವಾದವಿದ್ದರೂ ಅಸ್ಮದ್ವಿದ್ಯೆ ಎಂದರೆ ಅಗ್ನಿ ವಿದ್ಯೆಯನ್ನು ಇಟ್ಟುಕೊಂಡಿಲ್ಲ. ಏಕೆಂದರೆ ಮೇಲೆ ವಿವರಿಸಿದ ಎಲ್ಲ ಲಿಂಗಗಳೂ ದುರ್ಬಲ. ಆದ್ದರಿಂದ ಸಮನ್ವಯಾತ್ ಎನ್ನುವುದಕ್ಕೆ ಪ್ರಬಲವೆಂದು ನಿರ್ಣೀತವಾದ ಉಪಕ್ರಮಾದಿಗಳಿಂದ ವಿಷ್ಣುವೇ ಶಾಸ್ತ್ರ ಪ್ರತಿಪಾದ್ಯ ಎಂದು ಅರ್ಥ ಹೇಳಬೇಕು.

## ಸಕಲಶಬ್ದಗಳ ಸಮನ್ವಯದಿಂದ ಸಕಲಗುಣಪರಿಪೂರ್ಣತ್ವದ ಸಿದ್ಧಿ

**ಭಾವದೀಪಃ** – अयं भावः । जिज्ञास्यब्रह्मणो ब्रह्मपदोक्तमनन्तगुणत्वं प्रथमलक्षणम् । तत्प्रसिद्ध्यर्थं 'जन्मादिकारणत्वं लक्षणम्' इति सर्वशब्द-प्रवृत्तिनिमित्तवत्तया सर्वशास्त्रप्रतिपाद्यत्वस्याप्रतिज्ञायां प्रधानलक्षणं न सिद्ध्यतीति, तत् सिद्ध्यर्थं मुख्यवृत्त्या सर्वशास्त्रयोनित्वप्रतिज्ञा युक्तेति । तदुक्तमनुव्याख्याने –

'जन्माद्यस्येति सूत्रेण गुणसर्वस्वसिद्धये ।
ब्रह्मणो लक्षणं प्रोक्तं शास्त्रमूलं यतस्ततः ।
अन्वयं सर्वशब्दानां गुणसर्वस्ववेदकः ।।' इत्यादि ।

**'तस्यैव एतत् लक्षणम्' इति फलोक्तिः । 'एतत्कारणत्वमनन्तगुणत्वं च' इत्यर्थः । अत्रोपकमादिभिः शास्त्रप्रतिपाद्यत्वस्याबाधे सति मुख्यत्वस्य प्राप्तावपि न सर्वशास्त्रावस्य प्राप्तिः । तथापि तत्र 'गतिसामान्यात्' इति हेतुरग्रे स्पष्ट इति भावः ।**

ಈ ಸೂತ್ರದ ಅಭಿಪ್ರಾಯ ಹೀಗಿದೆ - ಜಿಜ್ಞಾಸ್ಯನಾದ ಬ್ರಹ್ಮನಿಗೆ ಬ್ರಹ್ಮಪದದಲ್ಲಿ ತಿಳಿಸಿದ ಅನಂತಗುಣತ್ವವು ಮೊದಲನೆಯ ಲಕ್ಷಣ. ಈ ಲಕ್ಷಣವು ಪ್ರಸಿದ್ಧವಾಗುವುದಕ್ಕೋಸ್ಕರ ಜನ್ಮಾದಿಕಾರಣತ್ವವು ಲಕ್ಷಣವಾಗಿದೆ. ಹೀಗೆ ಎಲ್ಲಾ ಶಬ್ದಗಳ ಪ್ರವೃತ್ತಿನಿಮಿತ್ತವಿರುವುದರಿಂದ ಸರ್ವಶಾಸ್ತ್ರಗಳಿಂದ ಪ್ರತಿಪಾದ್ಯನಾಗಿದ್ದಾನೆ ಎಂಬ ವಿಷಯವನ್ನು ಪ್ರತಿಜ್ಞೆ ಮಾಡದಿದ್ದರೆ ಪ್ರಧಾನಲಕ್ಷಣವು ಸಿದ್ಧವಾಗುವುದಿಲ್ಲ. ಇದಕ್ಕಾಗಿ ಈ ಪ್ರಧಾನಲಕ್ಷಣವು ಸಿದ್ಧವಾಗುವುದಕ್ಕೋಸ್ಕರ ಮುಖ್ಯವೃತ್ತಿಯಿಂದ ಸರ್ವಶಾಸ್ತ್ರಯೋನಿತ್ವವನ್ನು ಪ್ರತಿಜ್ಞೆ ಮಾಡಿರುವುದು ಯುಕ್ತವಾಗಿದೆ. ಇದನ್ನು ಅನುವ್ಯಾಖ್ಯಾನದಲ್ಲಿ ಹೀಗೆ ತಿಳಿಸಿದ್ದಾರೆ.

'ಜನ್ಮಾದ್ಯಸ್ಯೇತಿ ಸೂತ್ರೇಣ ಗುಣಸರ್ವಸ್ವಸಿದ್ಧಯೇ।
ಬ್ರಹ್ಮಣೋ ಲಕ್ಷಣಂ ಪ್ರೋಕ್ತಂ ಶಾಸ್ತ್ರಮೂಲಂ ಯತಸ್ತತಃ।
ಅನ್ವಯಃ ಸರ್ವಶಬ್ದಾನಾಂ ಗುಣಸರ್ವಸ್ವವೇದಕಃ॥'

''ಜನ್ಮಾದ್ಯಸ್ಯ'' ಎಂಬ ಸೂತ್ರದಿಂದ ಬ್ರಹ್ಮನು ಸರ್ವಗುಣಪರಿಪೂರ್ಣ ಎಂದು ಸಿದ್ಧವಾಗುವುದಕ್ಕೋಸ್ಕರ ಬ್ರಹ್ಮನ ಲಕ್ಷಣವನ್ನು ಹೇಳಿದ್ದಾರೆ. ಇದಕ್ಕೆ ಶಾಸ್ತ್ರವೇ ಮೂಲವಾಗಿರುವುದರಿಂದ ಶಾಸ್ತ್ರದಲ್ಲಿ ಕಂಡುಬರುವ ಕಾರಣತ್ವೇನ ಉಕ್ತವಾದ ಬೇರೆಯವರನ್ನು ನಿರಾಕರಣೆ ಮಾಡಬೇಕಾಗಿದೆ. ಹೀಗೆ 'ಸರ್ವಶಬ್ದಗಳ ಸಮನ್ವಯವು ಸರ್ವಗುಣಪರಿಪೂರ್ಣತ್ವವನ್ನು ಸಿದ್ಧಗೊಳಿಸುತ್ತದೆ.'' ಎಂಬುದಾಗಿ.

'ತಸ್ಯೈವ ಏತಲ್ಲಕ್ಷಣಮ್' ಎಂಬುದಾಗಿ ನಿರ್ಣಯರೂಪವಾದ ಫಲವನ್ನು ಹೇಳಿದ್ದಾರೆ. 'ಏತಲ್ಲಕ್ಷಣಮ್' ಎಂಬುದಕ್ಕೆ 'ಈ ಜಗತ್ತಿನ ಜನ್ಮಾದಿಗಳಿಗೆ ಕಾರಣನಾಗಿರುವುದು ಮತ್ತು ಅನಂತಗುಣಗಳಿಂದ ಕೂಡಿರುವುದು' ಎಂಬುದಾಗಿ ಅರ್ಥ. ಈ ಸೂತ್ರದಲ್ಲಿ ಉಪಕ್ರಮಾದಿ ನ್ಯಾಯಗಳಿಂದ ಶಾಸ್ತ್ರಪ್ರತಿಪಾದ್ಯತ್ವವನ್ನು ಅಬಾಧಿತ ಎಂಬುದಾಗಿ ತಿಳಿದರೂ ಅದರಿಂದಲೇ ಮುಖ್ಯತ್ವವು ಪ್ರಾಪ್ತವಾಗಿದ್ದರೂ ಧರ್ಮಶಾಸ್ತ್ರಗಳಿಗೂ ಇವನೇ ಅರ್ಥ ಎಂಬ ಅಂಶವು

ಪ್ರಾಪ್ತವಾಗುವುದಿಲ್ಲ. ಹಾಗಿದ್ದರೂ ಇದೇ ವಿಷಯದಲ್ಲಿ 'ಗತಿಸಾಮಾನ್ಯಾತ್' ಎಂಬ ನ್ಯಾಯವು ಮುಂದಿನ ಗ್ರಂಥಭಾಗದಲ್ಲಿ ಸ್ಪಷ್ಟವಾಗಿದೆ ಎಂಬ ಅಭಿಪ್ರಾಯವನ್ನು ಇಲ್ಲಿ ಗ್ರಹಿಸಬೇಕು.

## 'ಏತೇನ ಸರ್ವೇ' ಎಂಬ ಸೂತ್ರದಿಂದ ಪುನರುಕ್ತಿಯಿಲ್ಲ

**ಭಾವದೀಪಃ** – ಯತ್ತು – 'ಏತೇನ ಸರ್ವೇ ವ್ಯಾಖ್ಯಾತಾಃ' ಇತ್ಯನೇನೇದಂ ಗತಾರ್ಥಮ್ । ವಾಕ್ಯಾನ್ತರೇऽನ್ಯಸ್ಯಾಪಿ ಕಾರಣತ್ವಂ ಪ್ರತೀಯತ ಇತಿ ಚೋದ್ಯಸ್ಯ ಪ್ರಾಗುಕ್ತನ್ಯಾಯಾತಿದೇಶೇನ ನಿರಸಿಷ್ಯಮಾಣತ್ವಾದಿತ್ಯುಪಾಲಮ್ಭನಮ್ । ತನ್ನ । ತ್ವನ್ಮತೇ ತಥಾತ್ವೇಪ್ಯಸ್ಮನ್ಮತೇ ತತ್ರ ನಿಷೇಧಮುಖೇನ ವೇದ್ಯವಸ್ತುವಾಚಿಪದಘಟಿತವಾಕ್ಯಾನಾಮೇವ ವಿಚಾರ್ಯತ್ವೇನಾಗತಾರ್ಥತ್ವಾತ್ । ವಿರೋಧಿಸರ್ವಬಾಹುಲ್ಯಕಾರಣಶ್ರೀನಿಷೇಧಿನಾಮಿತ್ಯುಕ್ತೇಃ । ಕಿञ್ಚೇಹ ಆಪಾತಪ್ರತೀತ್ಯಾದಿನಾ ಪೂರ್ವಪಕ್ಷಃ ತತ್ರ ತು ಪ್ರವೃತ್ತಿನಿಮಿತ್ತಾಭಾವೇನ, ಕಿञ್ಚೇಹ ಕಾರಣತ್ವಂ ವಿಷ್ಣ್ವೇಕನಿಷ್ಠಂ ನೇತಿ ತತ್ರ ತು ಸರ್ವಶಬ್ದವಾಚ್ಯತ್ವಂ ನೇತಿ । ಅತ್ರೋಕ್ತಸ್ಯಾಗ್ರೇ ನ್ಯಾಯಾತಿದೇಶೇನ ಪ್ರಪಞ್ಚನಾಚ್ಚ ನ ಕಶ್ಚಿದ್ ದೋಷ ಇತಿ ।।೪।।

।। ಇತಿ ಶ್ರೀಮದ್ಭಾಷ್ಯಟೀಕಾಭಾವದೀಪೇ ರಾಘವೇನ್ದ್ರಯತಿಕೃತೇ ಸಮನ್ವಯಾಧಿಕರಣಮ್ ।।೧/೧/೪।।

ಇಲ್ಲಿ ಕೆಲವರು ಹೀಗೆ ಪ್ರಶ್ನೆ ಮಾಡುತ್ತಾರೆ. ಈ ಸೂತ್ರದಲ್ಲಿ ನೀವು ಈ ರೀತಿ ವ್ಯಾಖ್ಯಾನಮಾಡಿರುವುದರಿಂದ 'ಏತೇನ ಸರ್ವೇ ವ್ಯಾಖ್ಯಾತಾಃ' ಎಂಬ ಸೂತ್ರದಿಂದ ಇದು ಗತಾರ್ಥವಾಯಿತು. ವಾಕ್ಯಾಂತರದಿಂದ 'ವಿಷ್ಣುವನ್ನು ಬಿಟ್ಟು ಬೇರೆಯವರಿಗೂ ಕೂಡ ಕಾರಣತ್ವವು ಪ್ರತೀಯಮಾನವಾಗಿದೆ' ಎಂಬ ಚೋದ್ಯಕ್ಕೆ ಹಿಂದೆ ಹೇಳಿದ ನ್ಯಾಯವನ್ನು ಅತಿದೇಶಮಾಡಿಕೊಂಡು ಅದನ್ನು ನಿರಾಸ ಮಾಡುವುದರಿಂದ ಈ ಗತಾರ್ಥತ್ವವನ್ನು ನೀವು ಒಪ್ಪಿಕೊಳ್ಳಬೇಕು. ಈ ಪ್ರಶ್ನೆಗೆ ಉತ್ತರ ಹೀಗಿದೆ. ''ನಿಮ್ಮ ಮತದಂತೆ ಈ ಪ್ರಶ್ನೆಯು ಸರಿಯಾಗಿದ್ದರೂ ನಮ್ಮ ಅಭಿಪ್ರಾಯದಂತೆ ಮುಂದೆ ಹೇಳಲಿರುವ ಆ ಸೂತ್ರದಲ್ಲಿ ನಿಷೇಧಮುಖವಾಗಿ ವೇದ್ಯವಸ್ತುವನ್ನು ತಿಳಿಸುವ ಪದಗಳಿಂದ ಕೂಡಿದ ವಾಕ್ಯಗಳನ್ನೇ ವಿಚಾರ ಮಾಡುತ್ತಿರುವುದರಿಂದ ಗತಾರ್ಥತ್ವವು ಬರುವುದಿಲ್ಲ. ಇದನ್ನು ಅನುವ್ಯಾಖ್ಯಾನದಲ್ಲಿ

'ವಿರೋಧಿಸರ್ವಬಾಹುಲ್ಯಕಾರಣಸ್ತ್ರೀನಿಷೇಧಿನಾಮ್' ಎಂಬಲ್ಲಿ ನಿಷೇಧಮುಖವಾದ ವಾಕ್ಯಗಳನ್ನು ಅಲ್ಲಿ ಸಮನ್ವಯ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಈ ಸೂತ್ರದಲ್ಲಿ ಆಪಾತಪ್ರತೀತಿಯೇ ಮೊದಲಾದ ಹೇತುಗಳಿಂದ ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಮುಂದಿನ ಸೂತ್ರದಲ್ಲಿ ಪ್ರವೃತ್ತಿನಿಮಿತ್ತ ಇಲ್ಲದಿರುವುದರಿಂದ ಪೂರ್ವಪಕ್ಷವು ಉಂಟಾಗಿದೆ. ಅಲ್ಲದೆ ಈ ಸೂತ್ರದಲ್ಲಿ 'ಕಾರಣತ್ವವು ಕೇವಲ ವಿಷ್ಣುವಿನಲ್ಲಿರುವುದು ಅಲ್ಲ' ಎಂಬುದು ಪೂರ್ವಪಕ್ಷದ ಅಭಿಪ್ರಾಯವಾಗಿದ್ದರೆ ಆ ಸೂತ್ರದಲ್ಲಿ ವಿಷ್ಣುವು ಸರ್ವಶಬ್ದವಾಚ್ಯನಲ್ಲ ಎಂಬ ಪೂರ್ವಪಕ್ಷವಿದೆ. ಮತ್ತು ಈ ಸೂತ್ರದಲ್ಲಿ ಸೂಚಿಸಲಾದ ವಿಷಯವನ್ನು ಮುಂದೆ ನ್ಯಾಯವನ್ನು ಹೇಳುವುದರ ಮೂಲಕ ಸ್ಪಷ್ಟಪಡಿಸುತ್ತಿರುವುದರಿಂದ ಗತಾರ್ಥತಾ ಮೊದಲಾದ ಯಾವುದೇ ದೋಷವು ಇಲ್ಲ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಸಮನ್ವಯಾಧಿಕರಣವು ಮುಗಿಯಿತು ॥

# ಪರಿಶಿಷ್ಟ

**श्रीमदानन्दतीर्थभगवत्पादाचार्यविरचितम्**

# न्यायविवरणम्

**श्री जयतीर्थविरचिता**

# न्यायविवरणपञ्जिका

**प्रथमाध्याये प्रथमः पादः जिज्ञासाधिकरणम्-१-१-१**

जयन्ति जानकीभर्तृश्चरणाम्भोजरेणवः ।
नमत्सुरकिरीटस्थान् ये मणीनतिशेरते ।।१।।

ಅನುವಾದ -- ಸೀತಾಪತಿಯಾದ ಶ್ರೀರಾಮಚಂದ್ರನ ಪಾದಕಮಲಗಳಲ್ಲಿ ಭೃಂಗಾಯಮಾನವಾದ ಧೂಳಿನ ಕಣಗಳು ವಿಜಯಶಾಲಿಗಳಾಗಿವೆ. ಇಂತಹ ಪಾದಕಮಲದಲ್ಲಿ ಎಲ್ಲ ದೇವತೆಗಳು ತಮ್ಮ ಕಿರೀಟಗಳನ್ನು ಘಟ್ಟಿಸುತ್ತಾರೆ. ಕಿರೀಟದಲ್ಲಿ ಹೊಳೆಯುವ ಆ ಮಣಿಗಳ ಕಾಂತಿಗಿಂತಲೂ ಈ ಪಾದಧೂಳಿಗಳ ಕಾಂತಿಯೇ ಹೆಚ್ಚಾಗಿದೆ.

दुरन्तदुरितध्वान्तविपाटनपटीयसे ।
बादरायणसञ्ज्ञाय परस्मै महसे नमः ।।२।।

ದುಷ್ಟಮತಗಳನ್ನು ನಾಶಮಾಡುವುದರಲ್ಲಿ ಸಮರ್ಥರಾದ, ಶ್ರೇಷ್ಠರಾದ, ಬಾದರಾಯಣ ಎಂಬ ಹೆಸರನ್ನುಳ್ಳ ಕಾಂತಿಯುಕ್ತರಾದ ವೇದವ್ಯಾಸರಿಗೆ ನಮಸ್ಕಾರ.

नमामि श्रीमदानन्दतीर्थाचार्यं परं गुरुम् ।
यस्य वाणीकृपाणीयं निकृन्तति भवाटवीम् ।।३।।

ಯಾರ ಮಾತುಗಳೆಂಬ ಖಡ್ಗವು ಸಂಸಾರವೆಂಬ ಕಾಡನ್ನೇ ನುಚ್ಚುನೂರು ಮಾಡುತ್ತದೋ ಅಂತಹ ಶ್ರೀಮದಾನಂದತೀರ್ಥರೆಂಬ ಉತ್ತಮಗುರುಗಳಾದ ಆಚಾರ್ಯರನ್ನು ಸಾಷ್ಟಾಂಗ ನಮಸ್ಕರಿಸುತ್ತೇನೆ.

प्रणम्य चरणाम्भोजे गुरूणां तत्कृपाबलात् ।
सन्न्यायविवृतिव्याख्यां करिष्यामि यथामति ।।४।।

ಗುರುಗಳಾದ ಅಕ್ಷೋಭ್ಯತೀರ್ಥರ ಪಾದಕಮಲಗಳಲ್ಲಿ ನಮಸ್ಕರಿಸಿ ಅವರ ಕೃಪೆಯ ಬಲದಿಂದ ನ್ಯಾಯವಿವರಣವೆಂಬ ಶ್ರೀಮದಾಚಾರ್ಯರ ಗ್ರಂಥಕ್ಕೆ ಬುದ್ಧಿಗೆ ನಿಲುಕಿದಷ್ಟು ವ್ಯಾಖ್ಯಾನ ಮಾಡುತ್ತೇನೆ.

चेतनाचेतनजगन्नियन्त्रेऽशेषसंविदे ।
नमो नारायणायाजशर्वशक्रादिवन्दित ।।१।।

ಎಲೈ ಪರಮಾತ್ಮನೇ! ನೀನು ಚತುರ್ಮುಖಬ್ರಹ್ಮರುದ್ರಇಂದ್ರಆದಿತ್ಯ ಮೊದಲಾದವರಿಂದ ವಂದ್ಯನಾಗಿದ್ದಿ. ಚೇತನಾಚೇತನಾತ್ಮಕವಾದ ಸಮಸ್ತ ಜಗತ್ತನ್ನು ನಿಯಮನ ಮಾಡುವ, ಸರ್ವಜ್ಞನಾದ, ನಾರಾಯಣನೆನಿಸಿಕೊಂಡ ನಿನಗೆ ಸಾಷ್ಟಾಂಗನಮಸ್ಕಾರ.

ಟೀಕಾ – ಗ್ರನ್ಥಾರಮ್ಭೇ ವಿಘ್ನವಿಘಾತಾಯಾಚಾರ್ಯಃ ಸಮುಚಿತವಿಶಿಷ್ಟೇಷ್ಟದೇವತಾಂ ನಾರಾಯಣಮುಪಶ್ಲೋಕಯತಿ – चेतनेति ।। ಜನ್ಮಾದಿಸೂತ್ರೇ ಯತ್ 'ಸಕಲಜಗಜ್ಜನ್ಮಾದಿಹೇತುತ್ವಂ ಸಾರ್ವಜ್ಞ್ಯಾದ್ಯಶೇಷಗುಣವತ್ತ್ವಂ ಚ' ಇತಿ ದ್ವಿವಿಧಂ ಬ್ರಹ್ಮಲಕ್ಷಣಮಭಿಪ್ರೇತಂ ತದಾದ್ಯೇನ ಪದದ್ವಯೇನ ನಾರಾಯಣಸ್ಯ ಸೂಚಿತಮ್ । 'चेतना' ಇತಿ ಸಕಲಜಗತ್ಸಙ್ಗ್ರಹಾರ್ಥಮ್ । ತೇನ ಕಥಞ್ಚಿಜ್ಜಗದೇಕದೇಶನಿಯಮನವತಾಂ ವಿರಿಞ್ಚಾದೀನಾಂ ವ್ಯುದಾಸಃ । ಅತ್ರ ದ್ವಿತೀಯಾನ್ತಸ್ಯ जगच्छब्दस्य तृन्नन्तेन नियन्तृशब्देन समासः। ತೇನ ಜಗನ್ನಿಯಮನೇ ನಾರಾಯಣಸ್ಯ ಪ್ರಯೋಜನಸದ್ಭಾವೇ ಪ್ರಾಕ್ತದೂನತ್ವಾದಪೂರ್ಣತಾ । ಅನ್ಯಥಾ ತದೇವಾಯುಕ್ತಮಿತ್ಯೇತದಪಿ ನಿರಸ್ತಮ್ । ತೃನಸ್ತಾಚ್ಛೀಲ್ಯಾರ್ಥತ್ವಾತ್ । ಅಶೇಷವಿಷಯತ್ವಾದಶೇಷಾ ಸಂವಿದ್ಯಸ್ಯಾಸಾವಶೇಷಸಂವಿತ್ । ಅನೇನೈವ ವಿಶಿಷ್ಟತಾ ಚೋಪಪಾದಿತಾ ಭವತಿ । अजेत्यादिनेष्टदेवतात्वमुपपादयति । ಅಜಾದಯೋ ಹೀಶ್ವರಾ

न कस्यापि वन्दारव इति केषाञ्चिदभिमानः । तन्निरासायैषां ग्रहणम् । आदिपदेनादित्यानां ग्रहणम् । अत एव समासार्थतया प्राप्तयोरपि शर्वशक्रयोः स्वरूपेणोपादानम् । नान्येषामिव मम परोक्षो नारायण इति ज्ञापनाय सम्बुद्धचन्तप्र२३दु ಇದರ ಅರ್ಥ. ಜೀತನಾಚೇತನಜಗನ್ನಿಯಂತ್ರೇ; ಅಶೇಷಸಂವಿದೇ ಎಂಬೆರಡು ವಿಶೇಷಣಗಳಿಂದ ಸರ್ವೋತ್ಕೃಷ್ಟವು ತಿಳಿದು ವಿಶಿಷ್ಟನೆಂದು ಹೇಳಿದಂತಾಗುತ್ತದೆ. 'ಅಜ' ಇತ್ಯಾದಿ ವಿಶೇಷಣದಿಂದ ಇಷ್ಟದೇವತೆಯೆಂದು ಉಪಪಾದಿಸಿದ್ದಾರೆ. 'ಬ್ರಹ್ಮದೇವರು, ರುದ್ರದೇವರು ಇವರುಗಳನ್ನೇ ಸರ್ವೋತ್ತಮರು' ಎಂದು ಹೇಳುವ ಮತವನ್ನು ಈ ವಿಶೇಷಣದಿಂದ ನಿರಾಕರಿಸಿದ್ದಾರೆ. ಚತುರ್ಮುಖಾದಿಗಳು ಯಾರನ್ನೂ ನಮಸ್ಕರಿಸುವುದಿಲ್ಲವೆಂದು ಅವರ ವಾದ. ಆದರೆ ನಾರಾಯಣನಿಗೆ ಚತುರ್ಮುಖ, ರುದ್ರ, ಇಂದ್ರ ಮೊದಲಾದವರೆಲ್ಲರೂ ನಮಸ್ಕರಿಸುವುದರಿಂದ ಅವರ ಮತವು ಸರಿಯಲ್ಲವೆಂದು ತಿಳಿಸಿದ್ದಾರೆ. ಆದಿಪದದಿಂದ ಆದಿತ್ಯನನ್ನು ಸ್ವೀಕರಿಸಬೇಕು. ಪರವಾದಿಗಳನ್ನು ನಿರಾಕರಿಸುವ ವಿವಕ್ಷೆ ಆಚಾರ್ಯರಿಗೆ ಇಲ್ಲದಿದ್ದರೆ ಶರ್ವ, ಶಕ್ರ ಇತ್ಯಾದಿ ದೇವತೆಗಳ ಹೆಸರನ್ನು ಉಲ್ಲೇಖಿಸುವ ಅವಶ್ಯಕತೆ ಇರಲಿಲ್ಲ. ಕೇವಲ 'ಅಜಾದಿವಂದಿತ' ಎಂದಿಷ್ಟೇ ಸಾಕಿತ್ತು.

ಉಳಿದವರಂತೆ ನನಗೆ ನಾರಾಯಣನು ಪರೋಕ್ಷನಲ್ಲವೆಂದು ತಿಳಿಸಲು ಸಂಬುದ್ಧಂತ ಪ್ರಯೋಗವನ್ನು ಮಾಡಿದ್ದಾರೆ. 'ತುಭ್ಯಮ್' ಎಂದು ಅಧ್ಯಾಹಾರ ಮಾಡಿಕೊಂಡು ಅನ್ವಯಿಸಬೇಕು.

ವಿವರಣೆ - 'ಕರ್ತೃಕರ್ಮಣೋ ಕೃತಿಃ' (೨/೩/೬೫) ಎಂಬ ಸೂತ್ರವು ಕೃತ್‌ಪ್ರತ್ಯಯಯೋಗವಿದ್ದಾಗ ಷಷ್ಠೀವಿಭಕ್ತಿಯನ್ನು ವಿಧಿಸಿದೆ. ಆದರೆ 'ನಲೋಕಾವ್ಯಯನಿಷ್ಠಖಲರ್ಥತೃನಾಮ್' ಎಂಬ ಸೂತ್ರವು ತೃನ್‌ಪ್ರತ್ಯಯಯೋಗವಿದ್ದಾಗ ಷಷ್ಠೀವಿಭಕ್ತಿಯನ್ನು ನಿಷೇಧಿಸಿದೆ. ಆದ್ದರಿಂದ ದ್ವಿತೀಯಾವಿಭಕ್ತಿಯನ್ನೇ ಹೇಳಿ; 'ಜಗಂತೀ ನಿಯಂತಾ ಜಗನ್ನಿಯಂತಾ' ಎಂದೇ ಹೇಳಬೇಕು. ಇಲ್ಲಿರುವ ತೃನ್‌ಪ್ರತ್ಯಯವು ಸ್ವಭಾವಾರ್ಥದಲ್ಲಿದೆ. 'ಆಕ್ಷೇತಚ್ಛೀಲತದ್ಧರ್ಮತತ್ಸಾಧುಕಾರಿಷು' (೩/೩/೧೩೫) ಎಂಬ ಅಧಿಕಾರಸೂತ್ರದಲ್ಲಿ ತೃನ್' ಎಂಬ ಸೂತ್ರವು ಪ್ರಸಕ್ತವಾಗಿದೆ. ಈ ಸೂತ್ರದಲ್ಲಿ ತಾಚ್ಛೀಲ್ಯಾರ್ಥದಲ್ಲಿ ತೃನ್‌ಪ್ರತ್ಯಯವನ್ನು ವಿಧಿಸಲಾಗಿದೆ. ಆದ್ದರಿಂದ ಶೀಲಂ ಪ್ರಭಾವ ಎಂಬ ಅಮರಕೋಶದ ಮಾತಿನಂತೆ ನಿಯಂತುಂ

ಶೀಲಮಸ್ಯಾಸ್ತೀತಿ ಎಂಬ ವಿಗ್ರಹದಿಂದ ಜಗನ್ನಿಯಮನಾದಿಗಳನ್ನು ಭಗವಂತನ ಸ್ವಭಾವವೆಂದು ಹೇಳಬೇಕು. ಹೊರತು ಫಲಾಪೇಕ್ಷೆಯಿಂದ ಜಗತ್ತನ್ನು ನಿಯಮಿಸಲಾರ. ಫಲವೇ ಇಲ್ಲದಿದ್ದರೆ ನಿಯಮನಪ್ರವೃತ್ತಿ ಹೇಗೆ ಕೂಡುತ್ತದೆ? ಎಂದು ಪ್ರಶ್ನಿಸಬಾರದು. ಸ್ವಭಾವಪ್ರವೃತ್ತಿಗೆ ಫಲದ ಅಪೇಕ್ಷೆ ಇರುವುದಿಲ್ಲ. ಸುಡುವಿಕೆಯೆಂಬ ಸ್ವಭಾವವನ್ನು ಹೊಂದಿದ ಅಗ್ನಿಯು ಫಲಾಪೇಕ್ಷೆಯಿಂದ ಸುಡುವುದಿಲ್ಲ. ಆದ್ದರಿಂದ 'ದೇವಸ್ಯೇಷ ಸ್ವಭಾವೋಧಿಯಂ ಆಪ್ತಕಾಮಸ್ಯ ಕಾ ಸ್ಪೃಹಾ' ಎಂಬ ಮಾತಿನಂತೆ ಸೃಷ್ಟ್ಯಾದಿವ್ಯಾಪಾರಗಳಲ್ಲಿ ಭಗವಂತನು ಸ್ವಭಾವದಿಂದಷ್ಟೇ ಪ್ರವರ್ತಿಸುತ್ತಾನೆ.

**ನ್ಯಾಯವಿವರಣಮ್ –**

**ಕೃತ್ವಾ ಭಾಷ್ಯಾನುಭಾಷ್ಯೇऽಹಮಪಿ ವೇದಾರ್ಥಸತ್ಪತೇಃ ।**
**ಕೃಷ್ಣಸ್ಯ ಸೂತ್ರಾನುವ್ಯಾಖ್ಯಾಸನ್ಯಾಯವಿವೃತಿಂ ಸ್ಫುಟಮ್ ।।೨।।**

**ಕರೋಮಿ ಮನ್ದಬುದ್ಧೀನಾಂ ಬುಧಾನಾಂ ಚೋಪಕಾರಿಕಾಮ್ ।**
**ಪ್ರೀತ್ಯೈ ತಸ್ಯೈವ ದೈವಸ್ಯ ತತ್ಪ್ರಸಾದಪುರಃಸರಃ ।।೩।।**

ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನಗಳನ್ನು ನಾನು ರಚಿಸಿರುತ್ತೇನೆ. ಆದರೂ ಸಹ ವೇದಾರ್ಥಗಳ ಪಾಲಕನಾದ ಶ್ರೀವೇದವ್ಯಾಸರ ಸೂತ್ರಗಳಿಗೆ ಅನುಸಾರಿಯಾದ ಸನ್ಯಾಯವಿವರಣೆಯೆಂಬ ವ್ಯಾಖ್ಯಾನವನ್ನುಮಾಡಲುಹೊರಟಿದ್ದೇನೆ. ಇದುಮಂದಬುದ್ಧಿಗಳಿಗೂ ಮತ್ತು ಜ್ಞಾನಿಗಳಿಗೂ ಉಪಕಾರಿಯಾಗಿದೆ. ಭಗವಂತನ ಅನುಗ್ರಹದಿಂದ ಅವನ ಪ್ರೀತಿಗಾಗಿ ಇದನ್ನು ರಚಿಸುತ್ತಿದ್ದೇನೆ.

ಟೀಕಾ – **ಕೃತ್ವಾ** ಇತ್ಯಾದಿನಾ ಶ್ಲೋಕದ್ವಯೇನ ಗ್ರನ್ಥಾರಮ್ಭಂ ಸಮರ್ಥಯತೇ । ತಥಾ ಹಿ । ಸೂತ್ರಾರ್ಥಗ್ರಹಣಾಯ ಖಲ್ವಯಮಾರಮ್ಭಃ । ತಚ್ಚ ಭಾಷ್ಯಾನುವ್ಯಾಖ್ಯಾನಾಭ್ಯಾಮೇವ ಸಿದ್ಧಮಿತಿ ಕಿಮನೇನೇತ್ಯತ ಉಕ್ತಂ **'ಭಾಷ್ಯಾನುಭಾಷ್ಯೇ ಕೃತ್ವಾಪಿ ಸೂತ್ರಾನುವ್ಯಾಖ್ಯಾಸನ್ಯಾಯವಿವೃತಿಂ ಕರೋಮಿ'** ಇತಿ ।। ಸತ್ಯಂ ಸೂತ್ರಾರ್ಥಗ್ರಹಣಾಯ ಭಾಷ್ಯನುಭಾಷ್ಯೇ ಕೃತೇ ತಥಾಪ್ಯುವ್ಯಾಖ್ಯಾಯಾಮುಕ್ತಾ ಯೇ ಸನ್ಯಾಯಾಸ್ತೋಷಾಂ ವಿವೃತಿಂ 'ವಿವ್ರಿಯನ್ತೇऽನಯಾ' ಇತಿ ತದ್ವಿವರಣಾರ್ಥಂ ಗ್ರನ್ಥಂ ಕರೋಮೀತಿ । **ನ್ಯಾಯಶಬ್ದೇನ** ಪೂರ್ವೋತ್ತರಪಕ್ಷಯುಕ್ತಯೋऽಭಿಧೀಯನ್ತೇ । ಅತ್ರ ತಾಸಾಂ ಪ್ರತಿಪಾದಕಾನಿ ವಾಕ್ಯಾನ್ಯುಪಲಕ್ಷ್ಯನ್ತೇ । ಪೂರ್ವಪಕ್ಷನ್ಯಾಯಾನಾಂ ಸತ್ವಂ, ಸದಲತ್ವಂ ಸೂತ್ರಪ್ರಯೋಜಕತ್ವಮಿತಿ

यावत् । सिद्धान्तन्यायानां तु तत्वनिश्चयसामर्थ्यम् । अथवा सिद्धान्तयुक्तय एव **सन्न्यायाः** ।

न च तेषां विवरणमन्तरेण पूर्वपक्षन्यायविवरणं सुबोधमिति तेऽप्युपलक्षणीयाः । अत एव प्रायेण सिद्धान्तप्राधान्येनैव विवृतिर्वर्तिष्यते । 'लिङ्गं साधारणम्' इत्यादि विषयवाक्यविवरणं तु क्वचिदेवेति नोक्तम् । साध्यनिर्देशस्तु न्यायविवरणाङ्गमेवेति । न चैवं वाच्यं न सूत्राणामयङ्ग्रन्थ इति । परम्परया सूत्रार्थग्रहणोपायत्वादिति भावेन प्रसिद्धोऽप्यनुव्याख्यायाः सूत्रसम्बन्धो दर्शितः । एतच्च प्रारिप्सिताग्रन्थगौरवसम्पादनार्थम् ।

ननु सूत्राणामेव गौरवं कुतः । परमाप्तप्रणीतत्वादिति भावेनोक्तं – **कृष्णस्येति** ।। समासे गुणीभूतस्यापि सूत्रपदस्य बुद्ध्या विविक्तस्य भिन्नपदेन विशेषणं युज्यते ।

वेदार्थनिर्णयार्थत्वे श्रुतियुक्तिसम्पादितत्वाच्च गौरवं सूत्राणामिति भावेनोक्तं **वेदार्थसत्पतेरिति** । मुख्यपालकस्य । स्यादेतत् 'अथातो धर्मजिज्ञासा' इत्यादिनैव वेदार्थस्य निर्णीतत्वाद्वृतार्थानि सूत्राणीत्यतो वा तदुक्तं **वेदार्थसत्पतेरिति** ।। ब्रह्मैव हि सर्ववेदानां मुख्योऽर्थः । तन्निर्णयाय चैतानि सूत्राणि भगवता कृतानीति भगवति वेदार्थसत्पतित्वम् । अन्ये तु पुनरेतन्न्यायोपजीवनेन वेदैकदेशामुख्यार्थकर्मादिनिर्णयाय सूत्राणि प्रणीतवन्ति इति ।

ननु सन्न्यायविवृतिं शिष्या एव करिष्यन्ति किमनेन स्वकृतग्रन्थविवणेनेत्यतः उक्तम् – **अहमिति** ।। अनेनान्येषामसामर्थ्यं सूचयति । 'ईदूदेदितिप्रगृह्यत्वे मणीवादीनां प्रतिषेध' इति वचनाद्भाष्यानुभाष्येऽहमिति प्रकृतिभावाभावः । यद्वा अनुव्याख्यायाः सन्न्यायाः भाष्यानुभाष्ययोरेव विवृताः । यथा भाष्ये 'सर्वज्ञा हि रुद्रादयः'

इत्यादिना । अनुभाष्ये च 'आप्तैः प्रत्यक्षतो दृष्ट्वा' इत्यादिना । किमनेनेत्यत उक्तं सूत्रानुव्याख्यासन्न्यायानां विवरणं भाष्यानुभाष्ये कृत्वाऽप्यत्र स्फुटीकरोमीति । सामीप्याद्वर्तमानव्यपदेशः । स्फुटत्वं च सर्वविषयत्वेनाक्षरार्थव्याख्यानेन चेत्यादि । किमनेन स्फुटीकरणेन, येनायं ग्रन्थः कर्तव्यः स्यादित्यत उक्तम् – **मन्दबुद्धिनामुपकारिकामिति** ।। न चैवं महाबुद्धीनामनुपादेयात तदपेक्षितस्याप्यत्राभावादिति भावेनोक्तम् – **बुधानां चेति** ।

अस्तु परेषामिदं प्रयोजनं स्व(स्य तु)कृतग्रन्थप्रवृत्तिरेव नेत्यत आह – **प्रीत्या इति** ।। संक्षेपविस्ताराभ्यां स्वग्रन्थे विवृते सत्सु चोपकृतेषु सूत्रकृतो महती प्रीतिर्भवति । एतेनैतदपि निरस्तम् । आदौ दुर्गमार्थानि वाक्यानि विरच्य पुनस्तद्विवरणं, वृथा लवणं जग्ध्वा पुनः पानीयान्वेषणमनुसरतीति । **प्रीत्या एवेति** सम्बन्धः ।

न केवलं ग्रन्थनिर्माणफलं तत्प्रीतिरपि तु तत्कारणं चेत्याह – **तत्प्रसादेति** ।। **तत्प्रसादः पुरःसर इव कारणं यस्य ग्रन्थं कुर्वतो मम सोऽहं तथोक्त इति** ।। ३ ।।

'कृत्वा' ಇತ್ಯಾದಿಯಾಗಿ ಎರಡು ಶ್ಲೋಕಗಳಿಂದ ಗ್ರಂಥಪ್ರತಿಜ್ಞೆಯನ್ನು ಮಾಡಿ, ಆರಂಭಣೀಯತ್ವವನ್ನು ಸಮರ್ಥಿಸುತ್ತಿದ್ದಾರೆ. ಅದು ಹೀಗೆ --

ಸೂತ್ರಗಳ ಅರ್ಥವನ್ನು ತಿಳಿಸುವುದಕ್ಕಾಗಿ ಈ ಗ್ರಂಥವು ಹೊರಟಿದೆ. ಆದರೆ ಬ್ರಹ್ಮಸೂತ್ರಭಾಷ್ಯ ಅನುವ್ಯಾಖ್ಯಾನಗಳಿಂದಲೇ ಈ ಪ್ರಯೋಜನವು ಲಾಭವಾಗುವಾಗ ಪುನಃ ಈ ಗ್ರಂಥದ ಕೃತ್ಯವೇನು? ಎಂಬ ಪ್ರಶ್ನೆಗೆ 'ಭಾಷ್ಯಾನುಭಾಷ್ಯೇ ಕೃತ್ವಾऽಪಿ ಸೂತ್ರಾನುವ್ಯಾಖ್ಯಾಸನ್ನ್ಯಾಯವಿವೃತಿಂ ಕರೋಮಿ' ಎಂದು ಉತ್ತರಿಸಿದ್ದಾರೆ. ಹೌದು, ಸೂತ್ರಗಳ ಅರ್ಥವನ್ನು ತಿಳಿಸುವುದಕ್ಕಾಗಿ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನಗಳನ್ನು ರಚಿಸಿದ್ದಾಗಿದೆ. ಆದರೂ ಸಹ ಈ ಗ್ರಂಥವು ವ್ಯರ್ಥವಲ್ಲ. ಅನುವ್ಯಾಖ್ಯಾನದಲ್ಲಿ ಯಾವ

ಪೂರ್ವಪಕ್ಷನ್ಯಾಯ ಹಾಗೂ ಸಿದ್ಧಾಂತನ್ಯಾಯಗಳನ್ನು ಹೇಳಿದ್ದೇವೋ, ಅದನ್ನು ವಿವರಿಸುವುದಕ್ಕಾಗಿ ಈ ಗ್ರಂಥ ಹೊರಟಿದೆ.

ಶ್ಲೋಕದಲ್ಲಿರುವ ಸನ್ಯಾಯಶಬ್ದಕ್ಕೆ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಗಳನ್ನು ವಿವಕ್ಷಿಸಬೇಕು. ಅವುಗಳನ್ನು ಪ್ರತಿಪಾದಿಸುವ ವಾಕ್ಯಗಳನ್ನೂ ಸಹ ಉಪಲಕ್ಷಣಯಾ ಸ್ವೀಕರಿಸಬೇಕು. ಸಿದ್ಧಾಂತಯುಕ್ತಿಗಳಂತೆ ಪೂರ್ವಪಕ್ಷಯುಕ್ತಿಗಳನ್ನು ಸನ್ಯಾಯ ಎಂದು ಹೇಳಿದ್ದು ತಪ್ಪಲ್ಲ. ಪೂರ್ವಪಕ್ಷಯುಕ್ತಿಗಳೂ ಸಹ ಸೂತ್ರಪ್ರಯೋಜಕವಾದ್ದರಿಂದ ಸನ್ಯಾಯಗಳೆನ್ನಿಸುತ್ತವೆ. ಸಿದ್ಧಾಂತಯುಕ್ತಿಗಳಂತೂ ತತ್ವನಿಶ್ಚಾಯಕವಾದ್ದರಿಂದ ಸನ್ಯಾಯ-ಗಳೆನ್ನಿಸುತ್ತವೆ. ಅಥವಾ ಕೇವಲ ಸಿದ್ಧಾಂತಯುಕ್ತಿಗಳನ್ನೇ ಸನ್ಯಾಯಪದದಿಂದ ಇಟ್ಟುಕೊಳ್ಳಬೇಕು.

ಸಿದ್ಧಾಂತಯುಕ್ತಿಗಳನ್ನು ವಿವರಣೆ ಮಾಡದಿದ್ದರೆ ಪೂರ್ವಪಕ್ಷನ್ಯಾಯಗಳೇ ಅರ್ಥವಾಗಲಾರವು. ಆದ್ದರಿಂದ ಉಪಲಕ್ಷಣಯಾ ಪೂರ್ವಪಕ್ಷನ್ಯಾಯಗಳನ್ನು ಇಟ್ಟುಕೊಳ್ಳಬೇಕು. ಆದ್ದರಿಂದಲೇ ಈ ಗ್ರಂಥದಲ್ಲಿ ಮುಂದೆ ಸಿದ್ಧಾಂತನ್ಯಾಯಗಳನ್ನೇ ಪ್ರಧಾನವಾಗಿ ವಿವರಿಸಿದ್ದಾರೆ.

ಮುಂದೆ ತೃತೀಯಪಾದದಲ್ಲಿ 'ಲಿಂಗಂ ಸಾಧಾರಣಮ್' ಇತ್ಯಾದಿಯಾಗಿ ಅಧಿಕರಣಗಳ ವಿಷಯವಾಕ್ಯವನ್ನು ವಿವರಿಸಿದ್ದಾರೆ. ಆದರೆ ಆ ವಿಷಯವಾಕ್ಯದ ಉದಾಹರಣೆ ಕೆಲವೆಡೆ ಮಾತ್ರ ಮಾಡಿರುವುದರಿಂದ ಇಲ್ಲಿ ಅದರ ಪ್ರಸಿದ್ಧಿಯನ್ನು ಮಾಡಿಲ್ಲ. ನ್ಯಾಯವನ್ನು ವಿವರಿಸುವಾಗ ಆ ನ್ಯಾಯಗಳಿಂದ ದೊರೆಯುವ ಫಲರೂಪವಾದ ಸಾಧ್ಯವನ್ನೂ ಸಹ ಮುಂದೆ ನಿರ್ದೇಶಿಸುತ್ತಾರೆ. ಅಂತಹ ಸಾಧ್ಯನಿರ್ದೇಶವು ನ್ಯಾಯವಿವರಣಕ್ಕೆ ಅದು ಅಂಗವೇ ಆಗಿದೆ.

ಕೇವಲ ನ್ಯಾಯಗಳನ್ನಷ್ಟೇ ಈ ಅಧಿಕರಣದಲ್ಲಿ ಉಲ್ಲೇಖಿಸುವುದಾದರೆ ಈ ಗ್ರಂಥವು ಸೂತ್ರವ್ಯಾಖ್ಯಾನವೆನಿಸುವುದಿಲ್ಲವಲ್ಲ? ಎಂದು ಪ್ರಶ್ನಿಸಬಾರದು. ಪರಂಪರಯಾ ಸೂತ್ರವನ್ನೇ ಈ ಗ್ರಂಥವು ವ್ಯಾಖ್ಯಾನಿಸುತ್ತಿದೆ. ಅನುವ್ಯಾಖ್ಯಾನವಂತೂ ಸೂತ್ರವನ್ನು ನೇರವಾಗಿ ವ್ಯಾಖ್ಯಾನಿಸುತ್ತದೆಂಬ ವಿಷಯದಲ್ಲಿ ವಿಪ್ರತಿಪತ್ತಿಯಿಲ್ಲ. ಅಂತಹ ಅನುವ್ಯಾಖ್ಯಾನದಲ್ಲಿ

ಹೇಳಲ್ಪಟ್ಟ ನ್ಯಾಯಗಳನ್ನೇ ಇಲ್ಲಿ ವಿವರಿಸುತ್ತಿರುವುದರಿಂದ ಪರಂಪರೆಯಾ ಈ ಗ್ರಂಥವೂ ಸಹ ಸೂತ್ರವ್ಯಾಖ್ಯಾನವೇ ಆಗುತ್ತದೆ. ಇದನ್ನು ತಿಳಿಸುವುದಕ್ಕಾಗಿಯೇ 'ಅನುವ್ಯಾಖ್ಯಾ-ಸನ್ಯಾಯವಿವೃತಿಂ' ಎಂಬಲ್ಲಿ ಅನುವ್ಯಾಖ್ಯಾ ಎಂಬ ಪದವನ್ನು ನಿರ್ದೇಶಿಸಿದ್ದಾರೆ. ಈ ಗ್ರಂಥವು ಸೂತ್ರವ್ಯಾಖ್ಯಾನವಾಗಿದೆಯೆಂದು ಏಕೆ ಹೇಳಬೇಕೆಂದರೆ ಪ್ರಾರಿಪ್ಸಿತವಾದ ಈ ಗ್ರಂಥದಲ್ಲಿ ಎಲ್ಲರಿಗೂ ಗೌರವ ಹುಟ್ಟಬೇಕು. ಸೂತ್ರವ್ಯಾಖ್ಯಾನವೆಂದು ಹೇಳಿದಾಗ ಸಹಜವಾಗಿ ಗೌರವಬುದ್ಧಿಯು ಉಂಟಾಗುತ್ತದೆ.

ಸೂತ್ರಗಳೆಂದ ಮಾತ್ರಕ್ಕೆ ಏಕೆ ಗೌರವಬುದ್ಧಿ ಹುಟ್ಟಬೇಕು? ಎಂದು ಪ್ರಶ್ನಿಸಿದರೆ ಸೂತ್ರವನ್ನು ರಚಿಸಿದವರು ಅತ್ಯಂತ ಆಪ್ತರಾದ ವೇದವ್ಯಾಸದೇವರು. ಅದಕ್ಕಾಗಿಯೇ 'ಕೃಷ್ಣಸ್ಯ' ಎಂಬ ಪದವನ್ನು ಹೇಳಿದ್ದಾರೆ. 'ಕೃಷ್ಣಸ್ಯ' ಎಂಬ ಪದಕ್ಕೆ ಸಮಾಸದಲ್ಲಿ ವಿಶೇಷಣವಾದ ಸೂತ್ರದಲ್ಲಿ ಅನ್ವಯಿಸಬೇಕು. ಸಮಾಸಅಘಟಿತವಾದ ಪದಾರ್ಥಕ್ಕೆ ಸಮಾಸಘಟಿತವಾದ ಪದಾರ್ಥದಲ್ಲಿ ಅನ್ವಯವು ಹೇಗೆ ಸಾಧ್ಯ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಬುದ್ಧಿಯಿಂದ ಸೂತ್ರಪದವನ್ನು ಬೇರ್ಪಡಿಸಿದಾಗ ಭಿನ್ನಪದವಾಗುತ್ತದೆ. ಅಂತಹ ಸೂತ್ರದಲ್ಲಿ 'ಕೃಷ್ಣಸ್ಯ' ಎಂಬುದು ಅನ್ವಯ ಹೊಂದುತ್ತದೆ.

ವೇದಾರ್ಥಸತ್ಪತೇಃ ಎಂಬುದನ್ನು ವೇದವ್ಯಾಸರಿಗೆ ವಿಶೇಷಣವನ್ನಾಗಿ ಹೇಳಿದ್ದಾರೆ. ಇದಕ್ಕೆ ಎರಡು ಪ್ರಯೋಜನ. ೧. ವೇದಗಳ ಅರ್ಥವನ್ನು ನಿರ್ಣಯಿಸುವುದಕ್ಕಾಗಿ ಶ್ರುತಿ ಹಾಗೂ ಯುಕ್ತಿಗಳನ್ನು ಹೇಳಿದ್ದರಿಂದ ಸೂತ್ರಗಳಲ್ಲಿ ಗೌರವಬುದ್ಧಿಯುಂಟಾಗುತ್ತದೆ. ೨. 'ಅಥಾತೋ ಧರ್ಮಜಿಜ್ಞಾಸಾ' ಇತ್ಯಾದಿ ಜೈಮಿನಿಸೂತ್ರಗ್ರಂಥದಿಂದಲೇ ವೇದಾರ್ಥವು ನಿರ್ಣಯ-ವಾಗಿರುವಾಗ ಬ್ರಹ್ಮಸೂತ್ರಗಳಿಗೆ ಗತಾರ್ಥತ್ವವು ಬರುತ್ತದಲ್ಲವೇ? ಎಂಬ ಶಂಕೆಯನ್ನು ಪರಿಹರಿಸಲು 'ವೇದಾರ್ಥಸತ್ಪತೇಃ' ಎಂದು ಹೇಳಿದ್ದಾರೆ. ಬ್ರಹ್ಮನೇ ಸಕಲವೇದಗಳ ಮುಖ್ಯಾರ್ಥನು. ಇದನ್ನು ನಿರ್ಣಯಿಸುವುದಕ್ಕಾಗಿಯೇ ಈ ಸೂತ್ರಗಳು ವೇದವ್ಯಾಸದೇವರಿಂದ ರಚಿಸಲ್ಪಟ್ಟಿವೆ. ಹೀಗೆ ಬ್ರಹ್ಮನೇ ವೇದಗಳ ಮುಖ್ಯಾರ್ಥನೆಂದು ತಿಳಿಸಲು ವೇದಾರ್ಥಸತ್ಪತಿಯೆಂದು ಹೇಳಿದ್ದಾರೆ. ಆದರೆ ಜೈಮಿನಿಮೊದಲಾದವರು ಬ್ರಹ್ಮಸೂತ್ರಗಳಲ್ಲಿ ಹೇಳಿದ ನ್ಯಾಯವನ್ನೇ ಉಪಜೀವಿಸಿ ವೇದದ ಏಕದೇಶವನ್ನಷ್ಟೇ

ಅಮುಖ್ಯವಾದ ಕರ್ಮಾದಿಪರವಾಗಿ ಸಮರ್ಥಿಸಿದ್ದಾರೆ. ಆದ್ದರಿಂದ ಬ್ರಹ್ಮಸೂತ್ರಕ್ಕೆ ಗತಾರ್ಥತ್ವವು ಬರುವುದಿಲ್ಲ.

ಪೂರ್ವಪಕ್ಷ ಹಾಗೂ ಸಿದ್ಧಾಂತನ್ಯಾಯಗಳ ಸಂಗ್ರಹವನ್ನು ಶಿಷ್ಯರೇ ಮಾಡಬಹುದು. ತಾವು ಮಾಡಿರುವ ಅನುವ್ಯಾಖ್ಯಾನಗ್ರಂಥಕ್ಕೆ ತಾವೇ ವ್ಯಾಖ್ಯಾನಿಸಿಕೊಳ್ಳುವ ಆವಶ್ಯಕತೆ ಏನಿದೆ? ಎಂಬ ಸಂಶಯವನ್ನು ಪರಿಹರಿಸಲು ಅಹಂ ಎಂದಿದ್ದಾರೆ. ಇದರಿಂದ ಬೇರೆಯವರಿಗೆ ನ್ಯಾಯಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲವೆಂದು ಸೂಚಿಸಿದ್ದಾರೆ.

'ಭಾಷ್ಯಾನುಭಾಷ್ಯೇಹಂ' ಎಂದು ಒಟ್ಟಿಗೆ ಹೇಳಿದ್ದಾರೆ. ಇದು ಹೇಗೆ ಸರಿ? ಏಕೆಂದರೆ 'ಈದೂದೇದ್ವಿವಚನಂ ಪ್ರಗೃಹ್ಯಮ್' (೧/೧/೧೧) ಎಂಬ ಸೂತ್ರದಲ್ಲಿ ಈದಂತ, ಊದಂತ ಮತ್ತು ಏದಂತಶಬ್ದಗಳಿಗೆ ಪ್ರಗೃಹ್ಯಸಂಜ್ಞೆಯನ್ನು ಹೇಳಿದ್ದಾರೆ.

'ಭಾಷ್ಯಾನುಭಾಷ್ಯೇಹಂ' ಎಂದು ಒಟ್ಟಿಗೆ ಹೇಳಿದ್ದು ತಪ್ಪಲ್ಲ. 'ಈದೂದೇದ್ವಿವಚನಂ ಪ್ರಗೃಹ್ಯಮ್' ಎಂಬ ಸೂತ್ರದಿಂದ ಪ್ರಗೃಹ್ಯಸಂಜ್ಞೆ ಬಂದು ಪ್ರಕೃತಿಭಾವವು ಬರಬೇಕು. ಆದರೆ 'ಮಣೀವಾದೀನಾಂ ಪ್ರತಿಷೇಧಃ' ಎಂಬ ವಾರ್ತಿಕದಂತೆ ಪ್ರಗೃಹ್ಯಸಂಜ್ಞೆಯು ಅನಿತ್ಯವೆಂದು ತಿಳಿಯುತ್ತದೆ. ಆದ್ದರಿಂದ ಭಾಷ್ಯಾನುಭಾಷ್ಯೇ ಅಹಮ್ ಎಂದು ಬಿಡಿಸಿ ಹೇಳಬೇಕಾಗಿಲ್ಲ. ಅಥವಾ ಭಾಷ್ಯಾನುಭಾಷ್ಯ ಎಂಬುದು ದ್ವಿವಚನಾಂತಪದವೇ ಅಲ್ಲ. ಸಪ್ತಮ್ಯಂತ ಪದವಾಗಿದೆ. ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟ ಸನ್ಯಾಯಗಳನ್ನು ಭಾಷ್ಯ ಹಾಗೂ ಅನುವ್ಯಾಖ್ಯಾನಗಳಲ್ಲಿಯೇ ವಿವರಿಸಿದ್ದೇವೆ. 'ಸರ್ವಜ್ಞಾ ಹಿ ರುದ್ರಾದಯಃ' ಎಂದು ಭಾಷ್ಯದಲ್ಲಿ; 'ಆಪ್ತೈಃ ಪ್ರತ್ಯಕ್ಷತೋ ದೃಷ್ಟಾ' ಎಂಬ ಅನುವ್ಯಾಖ್ಯಾನದಲ್ಲಿ ಸನ್ಯಾಯಗಳನ್ನು ಹೇಳಿದ್ದು ಕಾಣಿಸುತ್ತದೆ. ಹಾಗಾದರೆ ಈ ಗ್ರಂಥವೇಕೆ? ಎಂಬ ಶಂಕೆಗೆ ಅವಕಾಶವಿಲ್ಲ. ಭಾಷ್ಯ ಅನುವ್ಯಾಖ್ಯಾನಗಳಲ್ಲಿ ಸನ್ಯಾಯಗಳನ್ನು ಹೇಳಿದ್ದರೂ ಈ ಗ್ರಂಥದಲ್ಲಿ ಸ್ಪಷ್ಟವಾಗಿ ಸಂಗ್ರಹಿಸಲಾಗಿದೆ. ಆದ್ದರಿಂದ ವ್ಯರ್ಥವಲ್ಲ.

ಭವಿಷ್ಯತ್‌ಕಾಲದಲ್ಲಿ ಸನ್ಯಾಯಗಳನ್ನು ಸಂಗ್ರಹಿಸುವುದಾದರೂ ಆ ಭವಿಷ್ಯತ್‌ಕಾಲದ ಸಾಮೀಪ್ಯ ವರ್ತಮಾನುಕಾಲಕ್ಕಿರುವುದರಿಂದ 'ಕರೋಮಿ' ಎಂಬ ವರ್ತಮಾನಪ್ರಯೋಗವು ತಪ್ಪಲ್ಲ. ಸ್ಪಷ್ಟತ್ವ ಎಂದರೆ ಎಲ್ಲಾ ನ್ಯಾಯಗಳನ್ನು ಮತ್ತು ಸೂತ್ರಗಳಲ್ಲಿ ಉಲ್ಲೇಖಿಸಿದ ಆ ನ್ಯಾಯಪದಗಳ ಅರ್ಥವನ್ನು ಹೇಳುವ ಮೂಲಕ ಸ್ಪಷ್ಟಪಡಿಸುತ್ತೇನೆ ಎಂದರ್ಥ. ಹೀಗೆ

ಸ್ಪಷ್ಟಪಡಿಸುವುದರಿಂದ ಏನು ಪ್ರಯೋಜನ? ಎಂಬ ಪ್ರಶ್ನೆಗೆ 'ಮಂದಬುದ್ಧೀನಾಂ ಉಪಕಾರಿಕಾಂ' ಎಂದಿದ್ದಾರೆ. ಹಾಗಾದರೆ ಬುದ್ಧಿವಂತರಿಗೆ ಈ ಗ್ರಂಥವು ಅನುಪಾದೇಯವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ಬುಧಾನಾಂ ಚ' ಎಂದು ಉತ್ತರಿಸಿದ್ದಾರೆ.

ಈ ಗ್ರಂಥದಿಂದ ಬೇರೆಯವರಿಗೆ ಪ್ರಯೋಜನವಿದ್ದರೂ, ತನಗೆ ಪ್ರಯೋಜನವಿಲ್ಲದ ಕಾರಣ ಏಕೆ ರಚಿಸಬೇಕು? ಎಂಬ ಪ್ರಶ್ನೆಗೆ 'ಪ್ರೀತ್ಯಾ' ಎಂಬ ಪದದಿಂದ ಉತ್ತರಿಸಿದ್ದಾರೆ. ಸಂಕ್ಷೇಪ ಹಾಗೂ ವಿಸ್ತಾರವಾಗಿ ತಮ್ಮ ಗ್ರಂಥವನ್ನು ವಿವರಿಸಿದಾಗ ಸಜ್ಜನರಿಗೆ ಉಪಕಾರ ಮಾಡಿದಂತಾಗಿ ಸೂತ್ರಕಾರರು ಪ್ರಸನ್ನರಾಗುತ್ತಾರೆ. ಹೀಗೆ ಹೇಳಿದ್ದರಿಂದ ಮತ್ತೊಂದು ಆಕ್ಷೇಪವೂ ನಿರಸ್ತವಾಯಿತು. 'ಮೊದಲು ವಾಕ್ಯಗಳನ್ನು ಕಠಿಣವಾಗಿ ರಚನೆ ಮಾಡಿ, ಪುನಃ ಅದನ್ನೇ ವಿವರಣೆ ಮಾಡಿದರೆ ವ್ಯರ್ಥವಾಗಿ ಉಪ್ಪನ್ನು ತಿಂದು ಪುನಃ ನೀರನ್ನು ಕುಡಿಯುವಂತಾಗುತ್ತದೆ' ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ಸಂಕ್ಷೇಪವಿಸ್ತಾರವಾಗಿ ಹೇಳಿದಾಗಲೇ ಬುಭುತ್ಸುಗಳಿಗೆ ಪ್ರವೃತ್ತಿ ಉಂಟಾಗಲು ಸಾಧ್ಯ.

**ನ್ಯಾಯವಿವರಣಮ್ – ಜೀವವ್ಯತಿರಿಕ್ತೇಶ್ವರಸ್ಯಾಭಾವಾತ್ತಸ್ಯ ಚ ಸ್ವಪ್ರಕಾಶತ್ವಾನ್ನ ಜಿಜ್ಞಾಸ್ಯತೇತಿ ಪ್ರಾಪ್ತೇ 'ಅಥಾತೋ ಬ್ರಹ್ಮಜಿಜ್ಞಾಸಾ' ಇತ್ಯಾಹ ।। 'ತದ್ವಿಜಿಜ್ಞಾಸಸ್ವ ತದ್ಬ್ರಹ್ಮ' ಇತಿ ಬ್ರಹ್ಮಶಬ್ದೇನ ಪೂರ್ಣಗುಣತ್ವೋಕ್ತೇರ್ನಾನುಭವಸಿದ್ಧಾಲ್ಪಗುಣಜೀವಾಭೇದಃ । ಅಥ ಕಸ್ಮಾದುಚ್ಯತೇ ಬ್ರಹ್ಮೇತಿ । 'ಬೃಹನ್ತೋ ಹ್ಯಸ್ಮಿನ್ ಗುಣಾಃ' ಇತಿ ಶ್ರುತೇಃ ।।೧।।**

ಅನುವಾದ -- ''ಜೀವವ್ಯತಿರಿಕ್ತನಾದ ಈಶ್ವರನೇ ಇಲ್ಲ. ಅಂತಹ ಜೀವನು ಸ್ವಪ್ರಕಾಶನಾಗಿ ನಿತ್ಯಸಿದ್ಧನಾಗಿದ್ದಾನೆ. ಆದ್ದರಿಂದ ಈಶ್ವರನು ಜಿಜ್ಞಾಸ್ಯನಲ್ಲ'' ಎಂದು ಪೂರ್ವಪಕ್ಷ. ಇದರ ನಿರಾಕರಣೆಗಾಗಿ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರವು ಹೊರಟಿದೆ. 'ತದ್ವಿಜಿಜ್ಞಾಸಸ್ವ ತದ್ಬ್ರಹ್ಮ' ಎಂಬಲ್ಲಿರುವ ಬ್ರಹ್ಮಶಬ್ದವು ಗುಣಪೂರ್ಣತ್ವವನ್ನು ಹೇಳುತ್ತಿರುವುದರಿಂದ ಅಲ್ಪಗುಣನಾದ ಜೀವನಿಂದ ಬ್ರಹ್ಮನಿಗೆ ಅಭೇದವನ್ನು ಹೇಳಲು ಸಾಧ್ಯವಿಲ್ಲ. 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ' ಎಂದು ಪ್ರಶ್ನಿಸಿದಾಗ 'ಬೃಹಂತೋ ಹ್ಯಸ್ಮಿನ್ ಗುಣಾಃ' ಎಂದು ಶ್ರುತಿಯು ಉತ್ತರಿಸಿದೆ. ಇದರಿಂದ ಬ್ರಹ್ಮಶಬ್ದವು ಗುಣಪೂರ್ಣತ್ವವನ್ನು ಹೇಳುತ್ತಿದೆ ಎಂದು ತಿಳಿಯುತ್ತದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ನ್ಯಾಯವಿವರಣದ
ಕನ್ನಡಾನುವಾದದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತವಾಯಿತು.

ಟೀಕಾ – ಏವಂ ನ್ಯಾಯವಿವರಣಾರಮ್ಭಮುಪದಾಯೋದಾನೀಂ ಪ್ರಥಮಾಧಿಕರಣಪೂರ್ವ-ಪಕ್ಷನ್ಯಾಯಂ ತಾವದ್ವಿವೃಣೋತಿ – ಜೀವೇತಿ ।।

ननु प्रथमद्वितीयपादयोर्युक्तिमालैव नास्ति । तत्कस्य विवरणमुच्यते । यद्यप्यत्र 'बाहुल्यं लिङ्गशब्दानां' इत्यादिवत् न न्यायाः सङ्ग्रहेणोक्ताः तथापि प्रत्यधिकरणं सिद्धान्तन्यायस्तावदुक्ता एव । पूर्वपक्षन्याया अपि क्वचिदुक्ताः क्वचिदनुमिताः सन्त्येवेति युक्तं विवरणम् । यद्यप्यत्र विषयप्रयोजनसम्बन्धाधिकारिणामनुपपत्त्या पूर्वपक्षः, तदुपपादनेन च सिद्धान्तः तथाप्युपलक्षणतया विषयनिराकरणसमर्थनयोरेव विवरणं क्रियते । एवमन्यत्रापि द्रष्टव्यम् । अत्र तावत् 'ओतत्वावाची' इत्यादिना सिद्धान्तन्यायोऽभिहितः । तेनानुमितश्चायं पूर्वपक्षन्यायोऽत्र विव्रियते । ईश्वरो हि विचारविषयतयाऽभिमतः । न चासौ जीवव्यतिरिक्तोऽस्ति प्रमाणाभावात् । प्रत्यक्षानुमानयोस्तद्विषयत्वानङ्गीकारात्। आगमस्य कार्यज्ञापकत्वात् । सिद्धज्ञापकत्वेऽपि तस्य जीवविषयत्वोपपत्तेरिति भावः । ततः किं स एव विचारविषयो भवत्वित्यत आह – **तस्य चेति** ।। उपलक्षणमेतत् । स्वप्रकाशज्ञाना-श्रयत्वेन मानसप्रत्यक्षेण वा निश्चितत्वादित्यपि द्रष्टव्यम् । जिज्ञास्यता विचारविषयता । सन्दिग्धो हि विचारस्य विषयो भवति । न हि निश्चिते संशयो युज्यते विरोधादिति । चः समुच्चये । समुच्चिताभ्यामेव द्वाभ्यां विषयाक्षेपसम्भवात् ।। एतन्निरासाय सूत्रमवतारयति – **प्राप्त इति** ।। तन्निरासार्थं सूत्रकार इति शेषः । अनुव्याख्यान्यायविवरणं प्रतिज्ञाय सूत्रोदाहरणसङ्गतमिति चेन्न, येऽनुव्याख्यायामुक्ता न्यायास्ते नोत्सूत्रिताः अपि तु सूत्र एवोक्तास्तदाक्षिप्ता अध्यायान्ते कृतया द्विरुक्त्या सूचिता एवेति ज्ञापनार्थत्वेन सङ्गतत्वात् ।

अत्र सूत्रे ब्रह्मशब्देन सूचितमनुव्याख्यया स एव ब्रह्मशब्दार्थ इति व्याख्यातं सिद्धान्तन्यायं विवृणोति – **तद्विजिज्ञासस्वेति** ।। कर्तव्यैव जिज्ञासा श्रुति- विहितत्वात् । न च विषयाभावः । ईश्वरस्य विचारविषयत्वात् । न च जीवव्यतिरिक्तेश्वरे प्रमाणाभावः । यतः

'तद्विजिज्ञासस्व' इति श्रुतिः जिज्ञासां विधाय 'तद्ब्रह्मे'ति जिज्ञास्ये ब्रह्मशब्दं प्रयुङ्क्ते । तेन ज्ञायते जीवातिरिक्तः परमेश्वरो विष्णुर्जिज्ञासा-विषयोऽस्तीति । कथम्? ब्रह्मशब्देन जिज्ञासाविषयस्य भगवतः पूर्णगुणत्वोक्तेः । जीवानां चाल्पगुणतया स्वस्यानुभवसिद्धत्वात् । न च पूर्णगुणोऽल्पगुणानतिरिक्त इति शक्यते वक्तुम्, विरोधात् । श्रुतेश्च सिद्धार्थत्वस्य सिद्धत्वात् ।

कुतो ब्रह्मशब्दस्य पूर्णगुणार्थत्वम्? इत्यत आह – **अथेति** ।। उच्यते विष्णुः । ततो जीवोऽस्तु निश्चितो मा वा भूत् । 'तद्ब्रह्म' इति वाक्येन जीवातिरिक्ततया प्रतीतस्य नानाविधविगानविषयतया सन्दिग्धप्रकारस्य वेदार्थस्य विष्णोर्मोक्षप्रयोजनजिज्ञासा मुमुक्षुणा कर्तव्येति सिद्धम् ।।

इदं सूत्रं शास्त्रव्यापारस्य विचारस्य कर्तव्यतासमर्थनद्वारेण शास्त्रस्यारम्भणीयतां प्रतिपादयदपि 'तद्विजिज्ञासस्व' इति वाक्यार्थ-विचारपरत्वात् वेदार्थमीमांसाशास्त्रान्तर्गतमपि भवतीति वेदितव्यम् । एतदर्थविचारणमेव चतुरध्याय्यां भविष्यतीति प्रायेण न्यायविवरणस्यैवात्र ग्रन्थे प्रक्रान्तत्वात् सङ्गत्यादिकमन्यतोऽवगन्तव्यम् ।।१।।

ಇಲ್ಲಿಯ ತನಕ ನ್ಯಾಯವಿವರಣಗ್ರಂಥಕ್ಕೆ ಆರಂಭಣೀಯತ್ವವನ್ನು ಸಮರ್ಥಿಸಿದ್ದಾಯಿತು. ಈಗ ಮೊದಲನೆಯ ಜಿಜ್ಞಾಸಾಧಿಕರಣದ ಪೂರ್ವಪಕ್ಷದ ನ್ಯಾಯವನ್ನು 'ಜೀವ' ಇತ್ಯಾದಿವಾಕ್ಯದಿಂದ ವಿವರಿಸುತ್ತಿದ್ದಾರೆ.

ಪ್ರಥಮ ಹಾಗೂ ದ್ವಿತೀಯಪಾದಗಳಲ್ಲಿ ನ್ಯಾಯಮಾಲೆಯನ್ನು ಹೇಳಿಯೇ ಇಲ್ಲ. ಅಲ್ಲಿ ಯಾವುದರ ವಿವರಣೆಯನ್ನು ಮಾಡುತ್ತೀರಿ? ಎಂದು ಪ್ರಶ್ನಿಸಬಾರದು. ವಸ್ತುತಃ 'ಬಾಹುಲ್ಯಂ ಲಿಂಗಶಬ್ದಾನಾಮ್' ಇತ್ಯಾದಿಯಾಗಿ ನ್ಯಾಯಗಳನ್ನು ಅಲ್ಲಿ ಸಂಗ್ರಹಿಸಿಲ್ಲ. ಆದರೂ ಸಹ ಪ್ರತಿಯೊಂದು ಅಧಿಕರಣಗಳ ಸಿದ್ಧಾಂತನ್ಯಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವೊಮ್ಮೆ

ಪೂರ್ವಪಕ್ಷನ್ಯಾಯಗಳನ್ನು ಹೇಳಿದ್ದಾರೆ. ಕೆಲವೊಮ್ಮೆ ಸೂಚಿಸಿದ್ದಾರೆ. ಆದ್ದರಿಂದ ಅಲ್ಲಿಯೂ ನ್ಯಾಯದ ವಿವರಣೆ ಇದ್ದೇ ಇದೆ.

ಈ ಅಧಿಕರಣದ ಪೂರ್ವಪಕ್ಷವನ್ನು ಕೇವಲ ವಿಷಯಾಭಾವದಿಂದಷ್ಟೇ ಇಲ್ಲಿ ಹೇಳಿದ್ದಾರೆ. ಆದರೆ ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿ ಈ ನಾಲ್ಕರ ಅನುಪಪತ್ತಿಯಿಂದಲೇ ಪೂರ್ವಪಕ್ಷ ಮಾಡಿ ಸಿದ್ಧಾಂತ ಮಾಡಬೇಕಲ್ಲವೆ? ಹೌದು, ಆದರೆ ವಿಷಯದ ನಿರಾಕರಣೆಯಿಂದ ಉಪಲಕ್ಷಣಯಾ ಪ್ರಯೋಜನಾದಿಗಳ ನಿರಾಕರಣೆಯನ್ನು ಇಟ್ಟುಕೊಳ್ಳಬೇಕು. ಇದರಂತೆ ಬೇರೆ ಅಧಿಕರಣಗಳಲ್ಲಿಯೂ ತಿಳಿಯಬೇಕು.

'ಓತತ್ವಾಚ' ಇತ್ಯಾದಿಯಾಗಿ ಅನುವ್ಯಾಖ್ಯಾನದಲ್ಲಿ ಸಿದ್ಧಾಂತನ್ಯಾಯವನ್ನು ಹೇಳಿದ್ದಾರೆ. ಅದರಿಂದ ಅನುಮಿತವಾದ ಪೂರ್ವಪಕ್ಷನ್ಯಾಯವನ್ನು ಇಲ್ಲಿ ವಿವರಿಸಿದ್ದಾರೆ. ಈಶ್ವರನು ವಿಚಾರವಿಷಯನೆಂದು ಸಮ್ಮತನಾಗಿದ್ದಾನೆ. ಆದರೆ ಇಂತಹ ಈಶ್ವರನು ಜೀವನಿಗಿಂತ ಭಿನ್ನನಾಗಿದ್ದಾನೆನ್ನಲು ಪ್ರಮಾಣವಿಲ್ಲ. ಪ್ರತ್ಯಕ್ಷ, ಅನುಮಾನಗಳಿಗೆ ಅವನು ಗೋಚರನಲ್ಲ. ಆಗಮವು ಕೇವಲ ಕಾರ್ಯಬೋಧಕವಾಗಿದೆ. ಸಿದ್ಧಬೋಧಕವೆಂದು ಒಪ್ಪಿದರೂ ಸಿದ್ಧನಾದ ಜೀವನನ್ನೇ ಪ್ರತಿಪಾದಿಸುತ್ತದೆ ಹೊರತು ಬ್ರಹ್ಮನನ್ನು ಪ್ರತಿಪಾದಿಸಲಾರದು ಎಂದು ಜೀವವ್ಯತಿರಿಕ್ತ ಈಶ್ವರಸ್ಯಾಭಾವಾತ್ ಎಂಬ ಪದದ ಅಭಿಪ್ರಾಯ. ಹಾಗಾದರೆ ಜೀವನೇ ವಿಚಾರವಿಷಯನಾಗಲಿ? ಎಂಬ ಪ್ರಶ್ನೆಗೆ 'ತಸ್ಯ ಚ' ಎಂಬುದರಿಂದ ಉತ್ತರಿಸಿದ್ದಾರೆ. ಜೀವನು ಸ್ವಪ್ರಕಾಶತ್ವೇನ ನಿತ್ಯಸಿದ್ಧನಾಗಿದ್ದಾನೆಂದು ಆಚಾರ್ಯರು ಹೇಳಿದ್ದಾರೆ. ಉಪಲಕ್ಷಣಯಾ ಸ್ವಪ್ರಕಾಶಜ್ಞಾನಕ್ಕೆ ಆಶ್ರಯನಾದ್ದರಿಂದ ಮತ್ತು ಮಾನಸಪ್ರತ್ಯಕ್ಷದಿಂದಲೂ ನಿಶ್ಚಿತನಾಗಿದ್ದರಿಂದ ನಿತ್ಯಸಿದ್ಧನಾಗಿದ್ದಾನೆಂದು ತಿಳಿಯಬೇಕು. ಜಿಜ್ಞಾಸ್ಯತಾ ಎಂಬ ಪದಕ್ಕೆ 'ವಿಚಾರ-ವಿಷಯನಾಗಿದ್ದಾನೆ' ಎಂದರ್ಥ. 'ಸಂದಿಗ್ಧವಾದದ್ದಷ್ಟೇ ವಿಚಾರಕ್ಕೆ ವಿಷಯವಾಗುತ್ತದೆ. ನಿಶ್ಚಿತವಾದರಲ್ಲಿ ಸಂಶಯವು ಕೂಡುವುದಿಲ್ಲ. ಹಾಗಾದಲ್ಲಿ ವಿರೋಧ ಬರುತ್ತದೆ. ಸಮುಚ್ಚಯಾರ್ಥದಲ್ಲಿ ಚಕಾರವಿದೆ. ಜೀವವ್ಯತಿರಿಕ್ತವಾದ ಈಶ್ವರಾಭಾವ ಹಾಗೂ ಜೀವನ ನಿತ್ಯಸಿದ್ಧತ್ವವು ವಿಷಯವನ್ನು ಆಕ್ಷೇಪಿಸುತ್ತಿದೆ. ಇಷ್ಟು ಪೂರ್ವಪಕ್ಷ.

ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ 'ಪ್ರಾಪ್ತೇ' ಎಂದು ನೇರವಾಗಿ ಸೂತ್ರವನ್ನೇ ಉಲ್ಲೇಖಿಸುತ್ತಿದ್ದಾರೆ. 'ಪ್ರಾಪ್ತೇ' ಎಂಬ ಪದದ ಅನಂತರ 'ಪೂರ್ವಪಕ್ಷದ ನಿರಾಸಕ್ಕೋಸ್ಯರ

ಸೂತ್ರಕಾರರು' ಎಂಬುದನ್ನು ಶೇಷಪೂರಣ ಮಾಡಬೇಕು. ಅನುವ್ಯಾಖ್ಯಾನದ ನ್ಯಾಯಗಳನ್ನು ವಿವರಿಸುತ್ತೇನೆಂದು ಪ್ರತಿಜ್ಞೆಗೈದು ಸೂತ್ರವನ್ನು ಉದಾಹರಿಸುವುದು ಅಸಂಗತವಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ''ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟ ನ್ಯಾಯಗಳು ಉತ್ಪೂತ್ರಿತಗಳಲ್ಲ. ಸೂತ್ರಕಾರರೇ ಆ ನ್ಯಾಯಗಳನ್ನು ಹೇಳಿದ್ದಾರೆ. ಕೆಲವೊಮ್ಮೆ ಸೂಚಿಸಿರುತ್ತಾರೆ'' ಎಂಬುದನ್ನು ತಿಳಿಸುವುದಕ್ಕಾಗಿ ಸೂತ್ರವನ್ನೇ ಇಲ್ಲಿ ಉಲ್ಲೇಖಿಸಿದ್ದಾರೆ.

ಸೂತ್ರದಲ್ಲಿರುವ 'ಬ್ರಹ್ಮ'ಶಬ್ದದಿಂದ ಯಾವ ಅರ್ಥವು ಸೂಚಿತವಾಗಿದೆಯೋ, ಅದೇ ಅರ್ಥವನ್ನೇ ಅನುವ್ಯಾಖ್ಯಾನದಲ್ಲಿ 'ಸ ಏವ ಬ್ರಹ್ಮಶಬ್ದಾರ್ಥಃ' ಎಂದು ವ್ಯಾಖ್ಯಾನಿಸಿದ್ದಾರೆ. ಆದರಿಂದ ತಿಳಿಯುವ ಸಿದ್ಧಾಂತನ್ಯಾಯವನ್ನು 'ತದ್ವಿಜಿಜ್ಞಾಸಸ್ವ' ಎಂದು ವಿವರಿಸಿದ್ದಾರೆ. ಶ್ರುತಿವಿಹಿತವಾದ್ದರಿಂದ ಬ್ರಹ್ಮಜಿಜ್ಞಾಸೆಯು ಕರ್ತವ್ಯವೇ ಆಗಿದೆ. ವಿಷಯವೇ ಇಲ್ಲವೆಂಬ ಗೊಂದಲ ಬೇಡ. ಈಶ್ವರನು ವಿಚಾರವಿಷಯನಾಗಿದ್ದಾನೆ. ಜೀವವ್ಯತಿರಿಕ್ತನಾದ ಈಶ್ವರನಿದ್ದಾನೆನ್ನಲು ಅನೇಕ ಪ್ರಮಾಣಗಳಿವೆ. 'ತದ್ವಿಜಿಜ್ಞಾಸಸ್ವ' ಎಂಬ ಶ್ರುತಿಯು ಜಿಜ್ಞಾಸೆಯನ್ನು ವಿಧಿಸಿ, 'ತದ್ಬ್ರಹ್ಮ' ಎಂದು ಬ್ರಹ್ಮಶಬ್ದವನ್ನು ಪ್ರಯೋಗಿಸಿದೆ. ಇದರಿಂದ ಜೀವವ್ಯತಿರಿಕ್ತನಾದ ಸರ್ವೋತ್ತಮನಾದ ವಿಷ್ಣುವು ಜಿಜ್ಞಾಸೆಗೆ ವಿಷಯನಾಗಿದ್ದಾನೆಂದು ತಿಳಿಯುತ್ತದೆ. ಏಕೆಂದರೆ ಬ್ರಹ್ಮಶಬ್ದವು ಜಿಜ್ಞಾಸಾವಿಷಯನಾದ ಭಗವಂತನಲ್ಲಿ ಗುಣಪೂರ್ಣತ್ವವನ್ನು ಹೇಳುತ್ತಿದೆ. ಆದರೆ ಜೀವನು ಅಲ್ಪಗುಣನೆಂದು ನಮ್ಮೆಲ್ಲರ ಅನುಭವ ಹೇಳುತ್ತಿದೆ. ಪೂರ್ಣಗುಣನಾದ ಭಗವಂತನಿಗೂ ಅಲ್ಪಗುಣನಾದ ಜೀವನಿಗೂ ಐಕ್ಯವನ್ನು ಹೇಳಿದರೆ ಪರಸ್ಪರವಿರೋಧ ಬರುತ್ತದೆ.

ಬ್ರಹ್ಮಶಬ್ದಕ್ಕೆ ಗುಣಪೂರ್ಣತ್ವವೆಂಬ ಅರ್ಥವನ್ನು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ 'ಅಥ' ಎಂದು ಉತ್ತರಿಸಿದ್ದಾರೆ. ಬ್ರಹ್ಮಶಬ್ದದಿಂದ ವಿಷ್ಣುವೇ ವಾಚ್ಯನಾಗಿದ್ದಾನೆ. ಜೀವನು ನಿಶ್ಚಿತನಾಗಲಿ, ಬಿಡಲಿ ಸಂದಿಗ್ಧನಾದ ವಿಷ್ಣುವು ಶಾಸ್ತ್ರಕ್ಕೆ ವಿಷಯನಾಗುತ್ತಾನೆ. 'ತದ್ಬ್ರಹ್ಮ' ಎಂಬ ವಾಕ್ಯದಿಂದ ಜೀವನಿಗಿಂತ ಅತಿರಿಕ್ತನಾಗಿ ಬ್ರಹ್ಮನು ಶ್ರುತನಾಗಿದ್ದಾನೆ. ಅನೇಕಪ್ರಕಾರಗಳಲ್ಲಿ ಈ ಬ್ರಹ್ಮನ ಬಗ್ಗೆ ಸಂದೇಹಗಳಿವೆ? ವೇದಾರ್ಥನಾದ ವಿಷ್ಣುವಿನ ಮೋಕ್ಷಪ್ರಯೋಜಕವಾದ ಜಿಜ್ಞಾಸೆಯು ಮುಮುಕ್ಷುವಿಗೆ ಕರ್ತವ್ಯವೇ ಆಗಿದೆ ಎಂದು ಸಿದ್ಧವಾಯಿತು.

ಈ ಸೂತ್ರವು ಶಾಸದ ವಿಚಾರಕರ್ತವ್ಯತ್ವವನ್ನು ಸಮರ್ಥಿಸುವ ಮೂಲಕ ಶಾಸ್ತ್ರಕ್ಕೆ ಆರಂಭಣೀಯತ್ವವನ್ನು ಸಮರ್ಥಿಸುತ್ತಿದೆ. ಆದರೂ ಸಹ 'ತದ್ವಿಜಿಜ್ಞಾಸಸ್ವ' ಎಂಬ

ಶ್ರುತ್ಯರ್ಥವನ್ನು ವಿಚಾರಮಾಡುತ್ತಿರುವುದರಿಂದ ವೇದಾರ್ಥಮೀಮಾಂಸಾಶಾಸ್ತ್ರದಲ್ಲಿ ಅಂತರ್ಭಾವ ಹೊಂದುತ್ತದೆಂದು ತಿಳಿಯಬೇಕು. ಇಂತಹ ಬ್ರಹ್ಮನ ವಿಚಾರಕ್ಕೋಸ್ಕರವೇ ನಾಲ್ಕು ಅಧ್ಯಾಯಗಳು ಹೊರಟಿರುವುದರಿಂದ ನ್ಯಾಯವಿವರಣವನ್ನು ಈ ಗ್ರಂಥದಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ಸಂಗತ್ಯಾದಿಗಳನ್ನು ಈ ಗ್ರಂಥದಲ್ಲಿ ಹೇಳಿಲ್ಲ. ಬೇರೆ ಗ್ರಂಥಗಳಿಂದಲೇ ಅವುಗಳನ್ನು ತಿಳಿಯಬೇಕು.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣಟೀಕೆಯ
ಕನ್ನಡಾನುವಾದದಲ್ಲಿ ಜಿಜ್ಞಾಸಾಧಿಕರಣವು ಸಮಾಪ್ತವಾಯಿತು.

* * * * * *

**ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತಮ್**

# ನ್ಯಾಯವಿವರಣಮ್

**ಶ್ರೀ ಜಯತೀರ್ಥವಿರಚಿತಾ**

# ನ್ಯಾಯವಿವರಣಪಞ್ಜಿಕಾ

**ಜನ್ಮಾಧಿಕರಣಮ್ – ೧-೧-೨**

**ನ್ಯಾಯವಿವರಣಮ್ – ನ ಜೀವ ಏವಾऽಯಂ ಬ್ರಹ್ಮಶಬ್ದಃ । ''ಯತೋ ವಾ ಇಮಾನಿ ಭೂತಾನಿ ಜಾಯನ್ತೇ'' ಇತ್ಯಾದಿನಾ ಜನ್ಮಾದಿಕಾರಣತ್ವಸ್ಯೈವ ಬ್ರಹ್ಮಲಕ್ಷಣತ್ವೋಕ್ತೇಃ ।।೨।।**

'ತದ್ ವಿಜಿಜ್ಞಾಸಸ್ವ ತದ್ ಬ್ರಹ್ಮ' ಎಂಬ ಶ್ರುತಿಯಲ್ಲಿರುವ ಬ್ರಹ್ಮಶಬ್ದದಿಂದ ಜೀವನು ಪ್ರತಿಪಾದ್ಯನೆಂದು ಹೇಳಬಾರದು. ಏಕೆಂದರೆ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' (ಯಾವ ವಿಷ್ಣುವಿನಿಂದ ಬ್ರಹ್ಮರುದ್ರ ಮೊದಲಾದ ಸಮಸ್ತ ಜೀವರು ಹುಟ್ಟುತ್ತಾರೋ) ಎಂಬೀ ಶ್ರುತಿಗಳಿಂದ ಜಗಜ್ಜನ್ಮಾದಿಕಾರಣತ್ವವು ಬ್ರಹ್ಮನ ಲಕ್ಷಣವೆಂದು ಹೇಳಲಾಗಿದೆ. ಈ ಲಕ್ಷಣವು ಜೀವಾದಿಗಳಲ್ಲಿ ಸರ್ವಥಾ ಬರುವುದಿಲ್ಲ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ನ್ಯಾಯವಿವರಣದ
ಕನ್ನಡಾನುವಾದದಲ್ಲಿ ಜನ್ಮಾಧಿಕರಣವು ಸಮಾಪ್ತವಾಯಿತು.

**न्यायविवरणटीका** – ।। जन्माद्यस्य यतः ।। अत्र पूर्वपक्षन्यायं सूचयन् प्रतिषेधति – **नेति** ।। जीव इति प्रथमान्तं सप्तम्यन्तं वा । आद्ये, ब्रह्मेति शब्दो यस्य असौ ब्रह्मशब्दः । द्वितीये, विषयसप्तमीयम् । ब्रह्मेति शब्दो ब्रह्मशब्दः । अयमिति ''तद् ब्रह्म'' इति श्रौतः ।

ಈ ಅಧಿಕರಣದ ಪೂರ್ವಪಕ್ಷನ್ಯಾಯವನ್ನು ತಿಳಿಸುತ್ತಾ ನಿರಾಕರಿಸುತ್ತಿದ್ದಾರೆ. ''ನ ಜೀವ'' ಇತ್ಯಾದಿಯಾಗಿ. ಮೂಲದಲ್ಲಿರುವ 'ಜೀವ' ಎಂಬುದನ್ನು 'ಜೀವಃ' ಎಂದು ಪ್ರಥಮಾಂತವಾಗಿ ಅಥವಾ 'ಜೀವೇ' ಎಂಬ ಸಪ್ತಮ್ಯಂತವಾಗಿ ಯೋಜಿಸಬಹುದು. ಪ್ರಥಮಾಂತಪದ ಎಂದು ವಿವಕ್ಷಿಸಿದಾಗ 'ಬ್ರಹ್ಮೇತಿ ಶಬ್ದೋ ಯಸ್ಯಾಸೌ ಬ್ರಹ್ಮಶಬ್ದಃ' ಎಂದು 'ಬ್ರಹ್ಮಶಬ್ದವುಳ್ಳವನು' ಎಂಬರ್ಥವನ್ನು ಹೇಳಿದಂತೆ ಆಗುತ್ತದೆ. ಸಪ್ತಮ್ಯಂತವಾಗಿ ವಿವಕ್ಷಿಸಿದಾಗ 'ಜೀವನೆಂಬ ವಿಷಯದಲ್ಲಿ' ಎಂಬುದಾಗಿ ವಿಷಯಸಪ್ತಮೀ ಎಂದು ತಿಳಿಯಬೇಕು. ಈ ಪಕ್ಷದಲ್ಲಿ 'ಬ್ರಹ್ಮ ಇತಿ ಶಬ್ದಃ = ಬ್ರಹ್ಮಶಬ್ದಃ' ಎಂದು ವಿಗ್ರಹ. 'ಅಯಮ್' ಎಂದರೆ 'ತದ್ ಬ್ರಹ್ಮ ಎಂಬ ಶ್ರುತಿಯಲ್ಲಿರುವ' ಎಂದರ್ಥ.

अयं भावः – ब्रह्मशब्दस्तावत् जाति-जीव-कमलासन-शब्दराशिषु प्रसिद्धः । तत्र, जातिपरत्वं नोपपद्यते । तस्याः सुप्रसिद्धत्वेन ''तद्विजिज्ञासस्व'' इति जिज्ञास्यताऽनुपपत्तेः । अत एव न शब्दराशिपरता। प्रामाण्यादिजिज्ञासा च लोकत एव सिद्धा । नापि कमलासनपरत्वं; तज्जिज्ञासाया निष्प्रयोजनत्वात् । अतः परिशेषात् जीव एवाऽयं ब्रह्मशब्दः।

ಅಭಿಪ್ರಾಯ ಹೀಗಿದೆ – ಜಾತಿ, ಜೀವ, ಚತುರ್ಮುಖಬ್ರಹ್ಮ, ಶಬ್ದರಾಶಿ ಇಷ್ಟು ಅರ್ಥಗಳಲ್ಲಿ ಬ್ರಹ್ಮಶಬ್ದವಿದೆ. ಇವುಗಳಲ್ಲಿ ಜಾತಿ ಎಂಬ ಅರ್ಥವು ಕೂಡುವುದಿಲ್ಲ. ಜಾತಿಯ ಬಗ್ಗೆ ಎಲ್ಲರಿಗೂ ಜ್ಞಾನವಿರುವುದರಿಂದ 'ತದ್ ವಿಜಿಜ್ಞಾಸಸ್ವ' ಎಂದು ಜಿಜ್ಞಾಸೆಯು ಅನುಪಪನ್ನವಾಗುತ್ತದೆ. ಈ ಕಾರಣದಿಂದಲೇ ಶಬ್ದರಾಶಿಯೆಂಬರ್ಥವೂ ತಪ್ಪಾಗುತ್ತದೆ. ಇನ್ನು ಜಾತಿ ಶಬ್ದರಾಶಿ ಇವುಗಳ ಪ್ರಾಮಾಣ್ಯವಿಷಯದಲ್ಲಿ ಜಿಜ್ಞಾಸೆಯೆಂದು ಹೇಳಬೇಕು. ಆದರೆ ಇದೂ ಸಹ ಲೋಕದಿಂದಲೇ ಸಿದ್ಧವಾಗಿದೆ. ಚತುರ್ಮುಖಬ್ರಹ್ಮ ಎಂಬರ್ಥವೂ ತಪ್ಪು.

ಅವನ ಜಿಜ್ಞಾಸೆಯಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ. ಆದ್ದರಿಂದ ಕೊನೆಗೆ ಉಳಿದವನಾದ ಜೀವನೇ ಪರಿಶೇಷಪ್ರಮಾಣದಿಂದ ಬ್ರಹ್ಮಶಬ್ದಪ್ರತಿಪಾದಿತನಾಗಿದ್ದಾನೆ.

ननु सोऽपि प्रसिद्ध एव । मैवं । देहादिविविक्ततयाऽप्रसिद्धत्वात् । विष्णौ तत्प्रयोगस्तु यौगिक एवेति । यद्वा, जीव एवेति जात्यादेरप्युपलक्षणम्। एवशब्दस्तु, भगवन्तं व्यावर्तयति । अयमभिप्रायः । जात्यादयो हि स्वरूपतो ब्रह्मशब्दवाच्यतया च प्रमिताः । केवलमन्यतमस्य तात्पर्यगोचरत्वं कल्प्यम् । अलौकिके विष्णौ सर्वमपि कल्पनीयम् ।

ಇಂತಹ ಜೀವನು ಕೂಡ ಅಹಂ ಎಂದು ಪ್ರಸಿದ್ಧನಾಗಿದ್ದಾನೆನ್ನಬಾರದು. ದೇಹಭಿನ್ನನಾಗಿ ಜೀವನಿದ್ದಾನೆ ಎಂಬ ವಿಷಯದಲ್ಲಿ ಅಪ್ರಸಿದ್ಧನೇ ಆಗಿದ್ದಾನೆ. ವಿಷ್ಣುವಿನಲ್ಲಿ ಬ್ರಹ್ಮಶಬ್ದದ ಪ್ರಯೋಗವನ್ನು ಯೋಗವೃತ್ತಿಯಿಂದಲೇ ಹೇಳಬೇಕು. ಅಥವಾ ನ್ಯಾಯವಿವರಣದಲ್ಲಿರುವ 'ಜೀವ ಏವ' ಎಂಬ ಪದದಿಂದ ಜಾತ್ಯಾದಿಗಳನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು. 'ಏವ'ಶಬ್ದವು ವಿಷ್ಣುವನ್ನು ವ್ಯಾವೃತ್ತಿಮಾಡುತ್ತಿದೆ. ಈ ಪಕ್ಷದಲ್ಲಿ ವಾಕ್ಯದ ಅಭಿಪ್ರಾಯ ಹೀಗಿದೆ – ಸ್ವಾಭಾವಿಕವಾಗಿ ಜಾತಿ ಮೊದಲಾದವುಗಳು ಬ್ರಹ್ಮಶಬ್ದವಾಚ್ಯಗಳೆಂದು ಪ್ರಮಿತವಾಗಿವೆ. ಇವುಗಳಲ್ಲಿ ಒಂದಕ್ಕೆ ಮಾತ್ರ ತಾತ್ಪರ್ಯಗೋಚರತ್ವವನ್ನು ಕಲ್ಪಿಸಬೇಕು. ಹೊರತು ಬ್ರಹ್ಮಶಬ್ದವಾಚ್ಯತ್ವವನ್ನು ಕಲ್ಪಿಸಬೇಕಾಗಿಲ್ಲ. ಆದರೆ ಲೋಕವ್ಯವಹಾರದಿಂದ ಸಿದ್ಧನಾಗದ ವಿಷ್ಣುವಿನಲ್ಲಿ ಬ್ರಹ್ಮಶಬ್ದವಾಚ್ಯತ್ವ ಮತ್ತು ತಾತ್ಪರ್ಯಗೋಚರತ್ವ ಎರಡನ್ನೂ ಕಲ್ಪಿಸಬೇಕು.

तथा च जात्यादेः प्रसिद्धत्वान्निष्प्रयोजनत्वात् 'तद् विजिज्ञासस्व' इति श्रुतिरनुपपन्नार्थेति कुतो नेत्येतत् सूत्रोक्तमनुव्याख्यायां सूत्रव्याख्याननैव व्याख्यातं न्यायं विवृणोति – यत इति ।। जन्मादिकारणत्वस्येति सकलजगज्जन्मादिनिमित्तत्वस्येत्यर्थः । 'एव'शब्देन 'जीवादावसम्भावितः' इति सूचयति । 'जिज्ञास्यब्रह्मणः श्रुत्योक्तं लक्षणमेव, प्रसिद्धान्यपि जीवादीनि त्याजयिष्यति, ग्राहयिष्यति चाऽप्रसिद्धम्' इति भावः ।।२।।

ಇಂತಹ ಜಾತಿ ಮೊದಲಾದವುಗಳು ಪ್ರಸಿದ್ಧವಾದ್ದರಿಂದ ಮತ್ತು ಅವುಗಳ ಜಿಜ್ಞಾಸೆಯ ಪ್ರಯೋಜನವೂ ಇಲ್ಲದ್ದರಿಂದ 'ತದ್ ವಿಜಿಜ್ಞಾಸಸ್ವ' ಎಂಬ ಶ್ರುತಿಯು ಅನುಪಪನ್ನವಾಯಿತು. ಹೇಗೆಂಬುದನ್ನು ಅನುವ್ಯಾಖ್ಯಾನದಲ್ಲಿ ಹೇಳಿದ ನ್ಯಾಯದಿಂದ ವಿವರಿಸುತ್ತಿದ್ದಾರೆ. ಸೂತ್ರವ್ಯಾಖ್ಯಾನದಿಂದಲೇ ತಿಳಿಯುವ ನ್ಯಾಯವನ್ನು ಯತಃ'' ಎಂಬುದಾಗಿ ವಿವರಿಸುತ್ತಿದ್ದಾರೆ. 'ಜನ್ಮಾದಿಕಾರಣತ್ವಸ್ಯ' ಎಂದರೆ 'ಸಕಲಜಗತ್ತಿನ ಜನ್ಮಾದಿಗಳಿಗೆ ನಿಮಿತ್ತಕಾರಣನು' ಎಂಬರ್ಥವನ್ನು ತಿಳಿಯಬೇಕು. 'ಏವ'ಶಬ್ದದಿಂದ ಈ ಲಕ್ಷಣವು ಜೀವಾದಿಗಳಲ್ಲಿ ಅಸಂಭಾವಿತಗಳೆಂದು ಸೂಚಿಸಿದ್ದಾರೆ. ''ಶ್ರುತಿಯಲ್ಲಿ ಹೇಳಲ್ಪಟ್ಟ ಜಿಜ್ಞಾಸ್ಯ ಬ್ರಹ್ಮನ ಲಕ್ಷಣವೇ ಪ್ರಸಿದ್ಧಾರ್ಥವಾದ ಜೀವಾದಿಗಳೆಂಬ ಅರ್ಥವನ್ನು ನಿರಾಕರಿಸುತ್ತದೆ, ಅಪ್ರಸಿದ್ಧವಾದ ವಿಷ್ಣುವೆಂಬ ಅರ್ಥವನ್ನು ಸ್ವೀಕರಿಸುತ್ತದೆ'' ಎಂದು ಅಭಿಪ್ರಾಯ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣಟೀಕೆಯ
ಕನ್ನಡಾನುವಾದದಲ್ಲಿ ಜನ್ಮಾದ್ಯಧಿಕರಣವು ಸಮಾಪ್ತವಾಯಿತು.

**श्रीमदानन्दतीर्थभगवत्पादाचार्यविरचितम्**

# न्यायविवरणम्

**श्री जयतीर्थविरचिता**

# न्यायविवरणपञ्जिका

**शास्त्रयोनित्वाधिकरणम् – १-१-३**

**न्यायविवरणम् – न च रुद्रादौ सममेतल्लक्षणम् । शास्त्रैकसमधिगम्यत्वात् कारणस्य ।**

ಜಗಜ್ಜನ್ಮಾದಿ ಕಾರಣತ್ವವೆಂಬ ಬ್ರಹ್ಮನ ಲಕ್ಷಣವು ರುದ್ರಮೊದಲಾದ ಜೀವವಿಶೇಷರಲ್ಲಿಯೂ ಪಾಶುಪತಾದ್ಯಾಗಮಗಳ ಆಧಾರದಿಂದ ಸಾಧಾರಣವಾಗಿದೆ. ಹೀಗೆ

ಬ್ರಹ್ಮನ ಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆಂದು ಹೇಳಬಾರದು. ಋಗ್ವೇದ ಮೊದಲಾದ ಸಚ್ಛಾಸ್ತ್ರಗಳಿಂದಷ್ಟೇ ಜಗತ್ಕಾರಣನನ್ನು ತಿಳಿಯಬೇಕು. ಆವಾಗ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಮೊದಲಾದ ದೋಷಗಳು ಬರುವುದಿಲ್ಲ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ನ್ಯಾಯವಿವರಣದ
ಕನ್ನಡಾನುವಾದದಲ್ಲಿ ಶಾಸ್ತ್ರಯೋನಿತ್ವಾಧಿಕರಣವು ಸಮಾಪ್ತವಾಯಿತು.

**न्यायविवरणटीका** – शास्त्रयोनित्वात् ।। **रुद्रादाविति** ।। उत्तरोत्तरशङ्का-निराससमुच्चितस्यैव पूर्वपूर्वोक्तार्थाभिमतसिध्यङ्गत्वात्, सर्वत्र समुच्चये चशब्दः । रुद्रादौ, जीवविशेष शैवाद्यागमेनेत्यादिनोक्तरीत्याऽनुमानेनेति शेषः । समं, साधारणम् । लक्षणं, लक्षणतयोक्तम् ।

ಮುಂದಿನ ಮುಂದಿನ ಶಂಕೆಗಳನ್ನು ಪರಿಹರಿಸುವುದರಿಂದ ಹಿಂದಿನ ಪ್ರಮೇಯವು ನಿರ್ಣಯವಾಗುತ್ತದೆ. ಆದ್ದರಿಂದ ಮುಂದಿನ ಶಂಕೆಯ ಪರಿಹಾರವನ್ನು ಸಮುಚ್ಚಯ ಮಾಡುವುದಕ್ಕಾಗಿ 'ನಚ' ಎಂಬುದಾಗಿ 'ಚ'ಶಬ್ದವನ್ನು ಹೇಳಿದ್ದಾರೆ. 'ರುದ್ರಾದೌ' ಎಂದರೆ ರುದ್ರ ಮೊದಲಾದ ಜೀವವಿಶೇಷರಲ್ಲಿ ಎಂದರ್ಥ. 'ಶೈವಾದ್ಯಾಗಮಸಂಪ್ರಾಪ್ತ' ಇತ್ಯಾದಿಯಾಗಿ ಹಿಂದೆ ಹೇಳಿದಂತೆ ಆನುಮಾನದಿಂದ ರುದ್ರಾದಿಗಳಲ್ಲಿಯೂ ಜಗತ್ಕಾರಣತ್ವವು ತಿಳಿಯುತ್ತಿದೆಯೆಂದು ಶೇಷಪೂರಣಮಾಡಿಕೊಳ್ಳಬೇಕು. 'ಸಮಂ' ಎಂಬ ಪದಕ್ಕೆ ಸಾಧಾರಣವಾಗಿದೆ ಎಂದರ್ಥ. 'ಲಕ್ಷಣಮ್' ಎಂಬ ಪದಕ್ಕೆ 'ಲಕ್ಷಣವೆಂದು ಹೇಳಲ್ಪಟ್ಟ' ಎಂದರ್ಥ.

यद्वा, सह मानेन, अनुमानेन वर्तत इति समम् । तथा च अतिव्यापकमित्यापाततः । वस्तुतस्तु, जीवविशेषेऽसम्भवान्नाऽलौकिकं कल्पयितुमलमिति । यदि च रुद्राद्येव विष्णुः, तदा तस्य सुप्रसिद्धत्वादिना न जिज्ञास्यत्वमिति ।।

ಅಥವಾ, 'ಸಹಮಾನೇನ ವರ್ತತೇ ಇತಿ ಸಮಮ್' ಎಂದು ವಿಗ್ರಹಮಾಡಿದಾಗ 'ಸಮಂ' ಎಂಬ ಪದಕ್ಕೆ ಆನುಮಾನದಿಂದ ಸಹಿತವಾದದ್ದು' ಎಂದರ್ಥ. ಆದ್ದರಿಂದ

ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿಯು ಬರುತ್ತದೆ. ಇದನ್ನು ಆಪಾತತಃ ಹೇಳಿದ್ದು; ವಸ್ತುತಸ್ತು ಜೀವವಿಶೇಷನಲ್ಲಿ ಬ್ರಹ್ಮನ ಲಕ್ಷಣವು ಸರ್ವಥಾ ಕೂಡದ ಕಾರಣ ಅಲೌಕಿಕವಾದದ್ದನ್ನು ಕಲ್ಪಿಸಬಾರದು. ಒಂದು ವೇಳೆ ರುದ್ರಾದಿಗಳೇ ವಿಷ್ಣುವಾದರೆ ಅಂತಹ ರುದ್ರಾದಿಗಳು ಸುಪ್ರಸಿದ್ಧರಾದ್ದರಿಂದ ಜಿಜ್ಞಾಸೆಯು ಕೂಡುವುದಿಲ್ಲ.

**शास्त्रेति ।। शास्त्रं, वेदाऽऽदिकम् । शास्त्रं च तदेकमसहायं चेति शास्त्रैकम् । विशेषणविशेष्यभावस्य कामचारित्वात् । संख्यावचनस्यैवैक-शब्दस्य ''पूर्वकालैके''ति समासनिषेधनात् । कारणत्वस्य, सकलजगज्जन्मा ऽऽदिनिमित्तत्वस्य ।**

'ಶಾಸ್ತ್ರ'ಶಬ್ದಕ್ಕೆ ಋಗಾದಿವೇದಗಳು ಎಂದರ್ಥ. 'ಶಾಸ್ತ್ರಂ ಚ ತತ್ ಏಕಂ ಚ' ಶಾಸ್ತ್ರೈಕಂ ಎಂದು ಸಮಾಸ ಮಾಡಬೇಕು. 'ಏಕ' ಶಬ್ದಕ್ಕೆ ಸಹಾಯವಿಲ್ಲದ್ದು ಎಂದರ್ಥ. ವಸ್ತುತಃ 'ಪೂರ್ವಕಾಲೈಕ' ಎಂಬ ಸೂತ್ರದಂತೆ ಏಕಶಬ್ದವು ಮೊದಲು ಬಂದು ಶಾಸ್ತ್ರಶಬ್ದವು ಅನಂತರ ಬರಬೇಕು. ಆದರೆ ಇಲ್ಲಿರುವ ಏಕಶಬ್ದವು ಸಂಖ್ಯಾರ್ಥಕದಲ್ಲಿಲ್ಲದ ಕಾರಣ ವಿಶೇಷಣ ವಿಶೇಷ್ಯಭಾವವನ್ನು ಯಥೇಚ್ಛವಾಗಿ ಪ್ರಯೋಗಿಸಬಹುದು. 'ಕಾರಣತ್ವಸ್ಯ' = ಸಕಲಜಗಜ್ಜನ್ಮಾದಿನಿಮಿತ್ತಕಾರಣಕ್ಕೆ ಎಂದರ್ಥ.

**अनुमानं खलु, रुद्रादिकं पक्षीकृत्य वा, कारणत्वाऽऽश्रयत्वं तस्य कारणत्वं वा पक्षीकृत्य, तस्य रुद्रादिनिष्ठत्वं साधयति । उभयथा, जगत्कारणत्वप्रसिध्या भाव्यम् । अन्यथा, प्रसिद्धविशेषणत्वाऽऽश्रयाऽ-सिध्योः प्राप्तेः । कुतस्तत्प्रसिद्धिः । अनुमानादितिचेन्न । अनुमानस्य प्रतिपक्षादिदुष्टतया, शास्त्रैकसमधिगम्यत्वात् कारणत्वस्य । अत एव, रीत्यन्तरेणाऽनुमानमपि रुद्राऽदेर्जगत्कारणत्वे निरस्तम् ।**

ಅನುಮಾನವು ರುದ್ರನನ್ನು ಪಕ್ಷವನ್ನಾಗಿಸಿ ಜಗತ್ಕಾರಣಕ್ಕೆ ಆಶ್ರಯನಾಗಿದ್ದಾನೆಂದು ಸಮರ್ಥಿಸುತ್ತದೆ. ಅಥವಾ ಜಗತ್ಕಾರಣತ್ವವನ್ನು ಪಕ್ಷವನ್ನಾಗಿ ಮಾಡಿ ಅದರಲ್ಲಿ ರುದ್ರಾದಿನಿಷ್ಠತ್ವವನ್ನು ಸಾಧಿಸುತ್ತದೆ. ಎರಡೂ ಬಗೆಯಲ್ಲಿ ಜಗತ್ಕಾರಣತ್ವವು ರುದ್ರನಲ್ಲಿ

ಬರುತ್ತದೆಂದು ತಿಳಿಯಬೇಕು. ಇಲ್ಲದಿದ್ದರೆ ಅಪ್ರಸಿದ್ಧವಿಶೇಷಣತ್ವ, ಆಶ್ರಯಾಸಿದ್ಧಿದೋಷಗಳು ಬರುತ್ತಿದ್ದವು. ಜಗತ್ಕಾರಣತ್ವವು ರುದ್ರನಲ್ಲಿ ಹೇಗೆ ಪ್ರಸಿದ್ಧವಾಗಿದೆಯೆಂದರೆ ಅನುಮಾನದಿಂದ ಎಂದು ಉತ್ತರಿಸಬೇಕು. ಆದರೆ ಅನುಮಾನವು ಸತ್ಪತ್ತಿಪಕ್ಷಾನುಮಾನದಿಂದ ದುಷ್ಟವಾದ ಕಾರಣ ಶಾಸ್ತ್ರದಿಂದಷ್ಟೇ ಜಗತ್ಕಾರಣತ್ವವು ಸಿದ್ಧವಾಗುತ್ತದೆಂದು ಹೇಳಬೇಕು. ಹೀಗೆ ಹೇಳಿದ್ದರಿಂದ ಮತ್ತೊಂದು ಪ್ರಕಾರದಲ್ಲಿ ಅನುಮಾನವು ರುದ್ರಾದಿಗಳಿಗೆ ಜಗತ್ಕಾರಣತ್ವವನ್ನು ಸಾಧಿಸುವುದೆಂಬುದನ್ನು ನಿರಾಕರಿಸಿ- ದಂತಾಯಿತು.

**अस्तु, शास्त्रेणैव जगत्कारणत्वसिद्धिः । ततः किमिति चेन्न । तर्ह्यनुमानस्य शास्त्रमुपजीव्यं स्यात् । न च तन्निरुद्धजगत्कारणत्वं प्रतिपादयति । तथा च, तच्छास्त्रमेव यज्जगत्कारणमेव प्रतिपादयति, तदेव तथाऽभ्युपगम्यताम् । किमनेनाऽनुमानेन । शास्त्रं च, विष्णुमेव जगत्कारणं प्रतिपादयतीत्यनन्तरेमेव वक्ष्याम इति भावः ।।३।।**

ಶಾಸ್ತ್ರದಿಂದ ಜಗತ್ಕಾರಣತ್ವವು ಸಿದ್ಧವಾಗಲಿ. ಇದರಿಂದೇನಾಯಿತು? ಎಂದರೆ ಅನುಮಾನಕ್ಕೆ ಶಾಸ್ತ್ರವು ಉಪಜೀವ್ಯವಾದ್ದರಿಂದ ಪ್ರಬಲವಾಗಿದೆ. ಅಂತಹ ಶಾಸ್ತ್ರವು ನಿರಾಧಾರವಾಗಿ ಜಗತ್ಕಾರಣತ್ವವನ್ನು ಪ್ರತಿಪಾದಿಸಲಾರದು. ಆದ್ದರಿಂದ ಆ ಶಾಸ್ತ್ರವು ಯಾರಲ್ಲಿ ಜಗತ್ಕಾರಣತ್ವವನ್ನು ಪ್ರತಿಪಾದಿಸುತ್ತಿದೆಯೋ ಅದನ್ನೇ ಒಪ್ಪಿಕೊಳ್ಳಬೇಕು. ಉಪಜೀವಕವಾಗಿ ದುರ್ಬಲವಾದ ಅನುಮಾನದಿಂದ ಜಗತ್ಕಾರಣತ್ವವು ಸಿದ್ಧವಾಗುವುದಿಲ್ಲ. ಶಾಸ್ತ್ರವಾದರೋ ವಿಷ್ಣುವನ್ನೇ ಜಗತ್ಕಾರಣನೆಂದು ಪ್ರತಿಪಾದಿಸುತ್ತದೆ. ಈ ವಿಚಾರವನ್ನು ಮುಂದೆ ಹೇಳುವ-ವರಿದ್ದೇವೆ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣಟೀಕೆಯ
ಕನ್ನಡಾನುವಾದದಲ್ಲಿ ಶಾಸ್ತ್ರಯೋನಿತ್ವಾಧಿಕರಣವು ಸಮಾಪ್ತವಾಯಿತು.

* * * * * * *

श्रीमदानन्दतीर्थभगवत्पादाचार्यविरचितम्

# न्यायविवरणम्

श्री जयतीर्थविरचिता

# न्यायविवरणपञ्जिका

अथ न्यायविवरणम्

**न च पाशुपतशास्त्रोदितत्वाऽऽदि, शास्त्रप्रतिपाद्यत्वे कारणम् । किं तपूक्रमाऽऽदिलक्षणः समन्वय एव ।। ४ ।।**

ರುದ್ರಾದಿಗಳು ಶಾಸ್ತ್ರಪ್ರತಿಪಾದ್ಯರಾಗಿದ್ದಾರೆನ್ನಲು ಪಾಶುಪತಶಾಸ್ತ್ರೋದಿತತ್ವವು ಕಾರಣವಲ್ಲ; ಹೊರತಾಗಿ ಉಪಕ್ರಮಾದಿ ಷಡ್ವಿಧತಾತ್ಪರ್ಯಲಿಂಗಗಳಿಂದ ಸಿದ್ಧವಾದ ಸಮನ್ವಯವೇ ಕಾರಣವಾಗಿದೆ.

तत्तु समन्वयात् ।। अत्र, क्वचित्पूर्वपक्षसिद्धान्तन्याययोः पृथग्विवरणं क्रियते । यथा प्रथमाऽधिकरणे । क्वचित्सिद्धान्तपुरस्कारेण पूर्वपक्षवचनेन, तन्न्यायविवरणपूर्वकं सिद्धान्तन्यायो विव्रियते । यथा द्वितीयाऽधिकरणे । क्वचित्तु, सिद्धान्तवचनेनैव । यथाऽत्राधिकरणे । तथा हि । शास्त्रं, जगज्जन्माऽदिकारणत्वेन रुद्रादीनां प्रतिपादकम् । पाशुपताऽदिशास्त्रेषु तथोदितत्वात् । यथा हि, ''वेदैश्च सर्वैरहमेव वेद्यः'' इत्यादिशास्त्रबलाद् विष्णोर्वेदादिकं प्रतिपादकमिष्यते । न च पाशुपताद्युक्तेर्नाऽऽश्वासः । अस्मत्प्रतीतिसंवादेनाऽऽश्वासोपपत्तेः । प्रतीयते हि, विदितपदपदार्थसङ्गतीनामस्माकं ''ज्ञात्वा शिवं शान्तिमत्यन्तमेति'' ''हिरण्यगर्भः'' इत्यादौ, रुद्रादीनां जगत्कारणत्वमित्येवं प्राप्ते, प्रतिविधीयते ।। न च पाशुपतेति ।।

ಈ ಅಧಿಕರಣದಲ್ಲಿ ಯಾವರೀತಿಯಾಗಿ ಜಿಜ್ಞಾಸಾಧಿಕರಣದಲ್ಲಿ ಪೂರ್ವಪಕ್ಷನ್ಯಾಯ ಸಿದ್ಧಾಂತನ್ಯಾಯಗಳನ್ನು ಪ್ರತ್ಯೇಕವಾಗಿ ವಿವರಿಸಿದ್ದಾರೋ ಅದರಂತೆ ಇಲ್ಲಿಯೂ ವಿವರಿಸಿದ್ದಾರೆ. ಕೆಲವೊಮ್ಮೆ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಪೂರ್ವಪಕ್ಷದ ಮಾತಿನಿಂದ ಪೂರ್ವಪಕ್ಷನ್ಯಾಯವನ್ನು ವಿವರಿಸುವ ಮೂಲಕ ಸಿದ್ಧಾಂತನ್ಯಾಯವನ್ನು ವಿವರಿಸುತ್ತಾರೆ. ಇದನ್ನು ಜನ್ಮಾದ್ಯಧಿಕರಣದಲ್ಲಿ ಕಾಣಬಹುದು. ಕೆಲವೆಡೆ ಸಿದ್ಧಾಂತದ ಮಾತಿನಿಂದಲೇ ಸಿದ್ಧಾಂತದ ನ್ಯಾಯವನ್ನು ವಿವರಿಸುತ್ತಾರೆ. ಇದಕ್ಕೆ ಸಮನ್ವಯಾಧಿಕರಣವೇ ಉದಾಹರಣೆಯಾಗಿದೆ. ಅದು ಹೀಗೆ. ಜಗಜ್ಜನ್ಮಾದಿಕಾರಣನೆಂಬುದಾಗಿ ಶಾಸ್ತ್ರವು ರುದ್ರಾದಿಗಳನ್ನು ಪ್ರತಿಪಾದಿಸುತ್ತಿದೆ. ಪಾಶುಪತಾದಿಶಾಸ್ತ್ರಗಳಲ್ಲಿ ಹಾಗೆಯೇ ಸಮರ್ಥಿಸಿದ್ದಾರೆ. ಯಾವರೀತಿಯಾಗಿ 'ವೇದೈಶ್ಚ ಸರ್ವೈರಹಮೇವ ವೇದ್ಯಃ' ಎಂಬ ಗೀತಾಮಾತಿನಂತೆ ವಿಷ್ಣುವಿಗೆ ವೇದಪ್ರತಿಪಾದ್ಯತ್ವವನ್ನು ಅಂಗೀಕರಿಸಲಾಗುತ್ತದೋ ಅದರಂತೆ. (ಈ ವಿಷಯದಲ್ಲಿ ವೇದೈಶ್ಚ ಸರ್ವೈರಹಮೇವ ವೇದ್ಯಃ' ಎಂಬ ಮಾತಿನ ಬಲದಿಂದ ವಿಷ್ಣುವಿಗೆ ವೇದಪ್ರತಿಪಾದ್ಯತ್ವವನ್ನು ಒಪ್ಪಿರುವುದು ದೃಷ್ಟಾಂತವಾಗಿದೆ). ಪಾಶುಪತಾದಿ ಶಾಸ್ತ್ರಗಳ ಮಾತುಗಳನ್ನು ವಿಶ್ವಾಸಕ್ಕೆ ಅನರ್ಹ ಎನ್ನಬಾರದು. ನಮಗೆ ಬರುವ ಜ್ಞಾನವೇ ಈ ವಿಷಯದಲ್ಲಿ ಸಂವಾದಿಯಾಗಿದೆ. ಆದ್ದರಿಂದ ವಿಶ್ವಾಸ ಮಾಡುವುದು ತಪ್ಪಲ್ಲ. ಯಾರಿಗೆ ಪದಪದಾರ್ಥಗಳ ಸಂಬಂಧಜ್ಞಾನವಿರುತ್ತದೋ ಅಂತಹವನಿಗೆ ರುದ್ರನು ಜಗತ್ಕಾರಣನೆಂಬ ಜ್ಞಾನವು ಬಂದೇ ಬರುತ್ತದೆ. 'ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ' 'ಹಿರಣ್ಯಗರ್ಭಃ ಸಮವರ್ತತಾತ್ರೇ' ಇತ್ಯಾದಿ ವಾಕ್ಯಗಳನ್ನು ನೋಡಿದಾಗ ರುದ್ರಾದಿಗಳು ಜಗತ್ಕಾರಣರೆಂದು ತಿಳಿಯುತ್ತದೆ. ಇಷ್ಟು ಪೂರ್ವಪಕ್ಷ. ಇದನ್ನು 'ನಚ ಪಾಶುಪತ' ಎಂಬ ಮಾತಿನಿಂದ ನಿರಾಕರಿಸುತ್ತಿದ್ದಾರೆ.

रुद्रो जगत्कारणत्वेन वेदादिशास्त्रप्रतिपाद्य इत्येव, पाशुपतोदितत्वं । आदिपदगृहीताऽस्मत्प्रतीतिश्च, रुद्रस्य जगज्जन्माऽदिकारणत्वेन वेदाऽऽदिशास्त्रप्रतिपाद्यत्वे, कारणं प्रमाणं, न भवति । हिरण्यगर्भादिष्वप्येतदुपलक्षणम् । कुतः । पाशुपतादिशास्त्रे विश्वासकारणाऽऽभावात् । प्रतीतेश्चाऽनैकान्तिकत्वात् । प्रतीतये च क्वचिदाशयादिदोषवशादन्यपरस्याऽपि वाक्यस्याऽन्योऽर्थः । क्वचित्तुल्यवदर्थद्वयम् ।

ಪಾಶುಪತೋದಿತತ್ವವೆಂದರೆ ಜಗತ್ಕಾರಣತ್ವೇನ ರುದ್ರನು ವೇದಪ್ರತಿಪಾದ್ಯನೆಂದಷ್ಟೇ ಅರ್ಥ. 'ಆದಿ'ಪದದಿಂದ ನಮ್ಮ ಅನುಭವವನ್ನು ಇಟ್ಟುಕೊಳ್ಳಬೇಕು. ರುದ್ರನು ಜಗತ್ಕಾರಣತ್ವೇನ ಶಾಸ್ತ್ರಪ್ರತಿಪಾದ್ಯನಾಗಿದ್ದಾನೆನ್ನಲು ಪಾಶುಪತೋದಿತತ್ವವು ಕಾರಣವಾಗುವುದಿಲ್ಲ. (ಪಾಶುಪತಾದ್ಯಾಗಮಗಳಲ್ಲಿ ಹೇಳಲ್ಪಟ್ಟರುವಿಕೆಯು) ಹಿರಣ್ಯಗರ್ಭಾದಿಗಳಲ್ಲೂ ಉಪಲಕ್ಷಣಯಾ ಹೀಗೆಯೇ ತಿಳಿಯಬೇಕು. ಏಕೆಂದರೆ ಪಾಶುಪತಾದಿಗಳಲ್ಲಿ ವಿಶ್ವಾಸಮಾಡಲು ಕಾರಣವಿಲ್ಲ. ಮತ್ತೊಂದು ಕಾರಣವೆಂದು ಹೇಳಿದ ಅನುಭವವು ವ್ಯಭಿಚರಿತವಾಗಿದೆ. ಏಕೆಂದರೆ ಅವರವರ ಇಚ್ಛೆಗೆ ತಕ್ಕಂತೆ ಅದೇ ವಾಕ್ಯವು ಮತ್ತೊಂದು ಅರ್ಥವನ್ನು ಹೇಳಬಹುದು. ಕೆಲವೊಮ್ಮೆ ಎರಡೂ ಅರ್ಥವನ್ನು ಹೇಳಬಹುದು. ಆದ್ದರಿಂದ ಅನುಭವವು ಕಾರಣವಾಗದು.

**नन्वेवं तर्हि, न शास्त्रतात्पर्यनिर्णयः, प्रसिद्धपुरुषाणां व्याख्यानं प्रतीतिं च विना, प्रमाणान्तराऽभावादित्याक्षिपति ।। किं त्विति ।।** किं तर्हि शास्त्रतात्पर्यनिर्णये प्रमाणमित्यर्थः । परिहरति ।। **उपक्रमादीति ।।** शास्त्रतात्पर्यानिर्णये कारणमिति सम्बन्धः । उपक्रमादय एवेति वक्तव्ये, यदेवं प्राह तेन नोत्सूत्रं सिद्धान्त इति सूचयति । एतच्च, लौकिकपरीक्षाऽनुभवसिद्धमेव । तथा चोपक्रमाऽऽदितात्पर्यलिङ्गैः सम्यङ्निरूप्यमाणो भगवानेव जगज्जन्मादिकारणत्वेन मुख्यया वृत्त्या सकलवेदाऽऽदिवेद्यः प्रतीयत इति भावः ।। ४ ।।

ಹಾಗಾದಲ್ಲಿ ಶಾಸ್ತ್ರಗಳ ತಾತ್ಪರ್ಯನಿರ್ಣಯವೇ ಅಸಾಧ್ಯ. ಪ್ರಸಿದ್ಧಪುರುಷರ ವ್ಯಾಖ್ಯಾನದಿಂದ ಬರುವ ಜ್ಞಾನವನ್ನು ಅವಲಂಬಿಸಿಯೇ ತಾತ್ಪರ್ಯವನ್ನು ನಿರ್ಣಯಿಸಲಾಗುತ್ತದೆ. ಮತ್ತೊಂದು ಪ್ರಮಾಣವಿರುವುದಿಲ್ಲವೆಂದು ಕಿಂತು ಎಂಬ ಗ್ರಂಥದಿಂದ ಆಕ್ಷೇಪಿಸುತ್ತಿದ್ದಾರೆ. ಹಾಗಾದಲ್ಲಿ ಶಾಸ್ತ್ರತಾತ್ಪರ್ಯವನ್ನು ನಿರ್ಣಯಿಸಲು ಏನು ಪ್ರಮಾಣ? ಎಂದು ಇದರ ಅರ್ಥ. 'ಉಪಕ್ರಮಾದಿಲಕ್ಷಣಯಾ' ಎಂದು ಆಕ್ಷೇಪವನ್ನು ಪರಿಹರಿಸಿದ್ದಾರೆ. ಉಪಕ್ರಮಾದಿಗಳು ಶಾಸ್ತ್ರತಾತ್ಪರ್ಯನಿರ್ಣಯಕ್ಕೆ ಕಾರಣಗಳಾಗಿವೆ ಎಂದು ಯೋಜನೆ ಮಾಡಿಕೊಳ್ಳಬೇಕು. ''ಏವ''ಕಾರವನ್ನು ಗ್ರಂಥಕಾರರು ಉಪಯೋಗಿಸಬೇಕಿತ್ತು.

ಆದರೆ ಹಾಗೆ ಹೇಳದಿರಲು ಉತ್ಪೂತ್ರಿತವಾಗಬಾರದೆಂಬುದೇ ಕಾರಣವಾಗಿದೆ. ಈ ವಿಚಾರವು ಲೌಕಿಕಜ್ಞಾನಿಗಳ ಅನುಭವದಿಂದಲೂ ಸಿದ್ಧವಾಗಿದೆ. ಆದ್ದರಿಂದ ಉಪಕ್ರಮಾದಿಷಡ್ವಿಧ ತಾತ್ಪರ್ಯಲಿಂಗಗಳಿಂದ ಯಥಾರ್ಥವಾಗಿ ಪ್ರತಿಪಾದ್ಯನಾದ ವಿಷ್ಣುವೇ ಜಗಜ್ಜನ್ಮಾದಿ-ಕಾರಣನಾಗಿ ಮುಖ್ಯವೃತ್ತಿಯಿಂದ ಸಕಲವೇದಪ್ರತಿಪಾದ್ಯನಾಗಿ ತಿಳಿಯಲ್ಪಡುತ್ತಾನೆಂದು ಹೃದಯ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣಟೀಕೆಯ
ಕನ್ನಡಾನುವಾದದಲ್ಲಿ ಸಮನ್ವಯಾಧಿಕರಣವು ಸಮಾಪ್ತವಾಯಿತು.

* * * * * * *

# ವಿಷಯಾನುಕ್ರಮಣಿಕೆ

## ಜಿಜ್ಞಾಸಾಧಿಕರಣ


| | |
|---|---|
| ಮಂಗಳಾಚರಣೆ | ೨ |
| ನಾರಾಯಣನಿಗೆ ನಮಸ್ಕಾರ | ೨ |
| ಅವತಾರಿಕೆ- ಮೋಕ್ಷಕ್ಕೋಸ್ಕರ ಈ ಶಾಸ್ತ್ರ ಹೊರಟಿದೆ | ೬ |
| ತತ್ವಪ್ರಕಾಶಿಕಾ ಮಂಗಳಾಚರಣೆ - ಸಮಗ್ರಶಾಸ್ತ್ರದ ಸಂಕ್ಷೇಪ ವ್ಯಾಖ್ಯಾನ | ೮ |
| ಮಂಗಳಾಚರಣೆಯಲ್ಲಿಯೂ ಗುರುಗಳ ಅನುಕರಣೆ | ೮ |
| ಪ್ರಥಮಾಧ್ಯಾಯದ ಸಾರ - ಪ್ರಥಮ ಪಾದ | ೯ |
| ''ಶುದ್ಧಾನಂದ' 'ಉರುದ್ಯುತಿ' 'ಉರುಬಲ' 'ಬಹುಲೌದಾರ್ಯ'-ವಿಶೇಷಣಗಳ ವ್ಯಾಖ್ಯಾನ | ೧೦ |
| 'ದ್ಯುತಿಬಲ' ವಿಶೇಷಣದ ವ್ಯಾಖ್ಯಾನ | ೧೨ |
| 'ವೀರ್ಯಾದಿದೇಹಂ' ವಿಶೇಷಣದ ವ್ಯಾಖ್ಯಾನ | ೧೨ |
| ಅನೇಕ ಸೂತ್ರಗಳ ಅಭಿಪ್ರಾಯ ತಾಳಿದೆ | ೧೪ |
| ಎರಡನೆಯ ಅಧ್ಯಾಯದ ಸಾರ - ಎರಡನೆಯ ಪಾದ | ೧೪ |
| ಸಮಾಸ ಹೇಗೆ ? | ೧೫ |
| ಮುಖರ ಶಬ್ದಕ್ಕೆ ಎರಡರ್ಥ | ೧೫ |
| ದೋಷಪದದಿಂದ ಕರ್ಮವೂ ವಿವಕ್ಷಿತ | ೧೭ |
| ಮೂರನೆಯ ಅಧ್ಯಾಯದ ಸಾರ - ಮೂರನೆಯ ಪಾದ | ೧೮ |
| ವೈರಾಗ್ಯ ಪಾದದ ಸಾರ | ೧೯ |
| ಭಕ್ತಿ ಪಾದದ ಸಾರ | ೧೯ |
| ಉಪಾಸನ ಪಾದದ ಸಾರ | ೧೯ |
| ನಾಲ್ಕನೆಯ ಅಧ್ಯಾಯದ ಸಾರ - ನಾಲ್ಕನೆಯ ಪಾದ | ೨೦ |
| 'ವೇದಾಂತವೇದ್ಯಮ್' ವಿಶೇಷಣದ ಅರ್ಥ | ೨೧ |
| 'ಮುಕುಂದಾಭಿಧಮ್' ವಿಶೇಷಣದ ಸ್ವಾರಸ್ಯ | ೨೧ |
| 'ಅಮಲಂ' ಪದದಿಂದ ಅದ್ವೈತ ನಿರಾಕರಣೆ | ೨೨ |
| ಅಮಲ ಪದಕ್ಕೆ ಎರಡರ್ಥ | ೨೨ |
| ಹೀಗೆ ಸಂಕ್ಷೇಪವಾಗಿ ಹೇಳಿರುವುದು ಶ್ರೋತೃಗಳ ಅನುಕೂಲಕ್ಕಾಗಿ | ೨೩ |

ಗುಣೈಸ್ಸರ್ವೈರುದೀರ್ಣಂ ಎಂದರೇನು? ೨೪
ನಾರಾಯಣನಲ್ಲಿರುವ ಗುಣಗಳು ಸರ್ವೋತ್ಕೃಷ್ಟವಾಗೂ ಅನಂತ ೨೫
ದೋಷವರ್ಜಿತಮ್ ಎಂದರೇನು ? ೨೫
ಜ್ಞೇಯಮ್ ಎಂದರೇನು? ೨೬
ಬ್ರಹ್ಮನು ಮಾಯಾವಿಷ್ಣುವಲ್ಲ ೨೭
ಟೀಕೆಯ ಪ್ರತಿಯೊಂದು ಪದಗಳಿಗೂ ಶ್ರುತಿ ಹಾಗೂ ಸೂತ್ರಪ್ರಮಾಣವಿದೆ ೨೭
ಮೊದಲು ಸಂಕ್ಷೇಪಶಾಸ್ತ್ರಾರ್ಥ ಹೇಳಬೇಕು ೨೯
ಶ್ರೀವೇದವ್ಯಾಸದೇವರಿಗೆ ನಮಸ್ಕಾರ (ಶಾಸ್ತ್ರಪ್ರಾಮಾಣ್ಯದ ಸಮರ್ಥನೆ) ೪೦
ಶ್ರೀಮದಾಚಾರ್ಯರ ಗುರುಗಳು ಯಾರು? ೪೧
ಈ ಶಾಸ್ತ್ರದಲ್ಲಿ ತ್ರಿವಿಧ ಪ್ರಮಾಣ್ಯವಿದೆ ೪೧
ಟೀಕಾರಾಯರು ನೀಡಿದ ಹೋಲಿಕೆಗಳು ೪೨
'ಸತಾಂ' ಎಂಬ ಪ್ರಯೋಗ ತಪ್ಪಲ್ಲ ೪೩
ಬ್ರಹ್ಮಸೂತ್ರದಂತೆ ಸ್ಮೃತಿಗಳೂ ಪ್ರಮಾಣ ೪೪
ಉಪಮಾನ - ಉಪಮೇಯ ೪೫
'ಸತಾಂ' ಎಂಬ ಪ್ರಯೋಗ ಸಾಧುವಾಗಿದೆ ೪೬
ಗುರುನಮಸ್ಕಾರದಿಂದ ಶಾಸ್ತ್ರಪ್ರಾಮಾಣ್ಯಸಮರ್ಥನೆ ೪೬
ಶ್ರೀಮದಾಚಾರ್ಯರಿಗೆ ನಮಸ್ಕಾರ (ಭಾಷ್ಯಕ್ಕೆ ವ್ಯಾಖ್ಯೇಯತ್ವಸಮರ್ಥನೆ) ೪೯
ಶ್ರೀಮದಾಚಾರ್ಯರ ಭಾಷ್ಯಕ್ಕೆ ಹೋಲಿಕೆಯೇ ಇಲ್ಲ ೫೦
ಭಾಷ್ಯದ ಮುಂದೆ ಸೂರ್ಯಚಂದ್ರರು ಸೋತರು ೫೦
ಅಗಾಧ ಸಮುದ್ರವೂ ಸೋತಿತು ೫೧
'ನಿರ್ಕರ್ತನೇ' ಎಂದು ಉಚ್ಚರಿಸಿ ೫೧
ಶ್ರೀಪದ್ಮನಾಭತೀರ್ಥರ ಕರುಣೆ ಎನಗಿರಲಿ ೫೬
ಕೆಲವರ ಪ್ರಕಾರ ಆಲುಚ್ ಪ್ರತ್ಯಯ (ಪ್ರಥಮ ಪಕ್ಷ) ೫೮
''ಆಲು ಎಂಬುದು ಪ್ರತ್ಯಯವಲ್ಲ ಹೊರತು ಶಬ್ದ'' (ದ್ವಿತೀಯ ಪಕ್ಷ) ೫೮
'ಲಾ' ಎಂಬುದು ಧಾತು (ಮೂರನೆಯ ಪಕ್ಷ) ೫೯
ಮೊದಲನೆಯ ಪಕ್ಷ ಬಲು ಕ್ಲಿಷ್ಟ ೫೯
ಎರಡನೆಯ ಹಾಗೂ ಮೂರನೆಯ ಪಕ್ಷಗಳು ಸ್ವರಸ ೫೯
'ಕೃಪಾಲು' ಶಬ್ದಸಾಧುತ್ವಸಮರ್ಥನೆ ೬೨
ಸ್ಪೃಹ್(ಧಾತು) ೬೩

'ಧಾ' ಧಾತು ೬೫
ಗೀತಾಭಾಷ್ಯದಲ್ಲಿ ಕೃಪಾಲು ಶಬ್ದಾರ್ಥವಿಚಾರ ೬೮
ಗುರು ಅಕ್ಷೋಭ್ಯತೀರ್ಥರೇ ! ನಿಮ್ಮ ಚರಣಕಮಲವ ನಂಬಿಹೆನು ೬೮
ಗ್ರಂಥಪ್ರತಿಜ್ಞೆ ೬೯
ಟೀಕಾರಾಯರಲ್ಲಿರುವ ವಿನಯ ಗುಣಭೂಷಣ ೭೦
ಅಹಂಕಾರ ಎಂದೂ ಬಾರದಿರಲಿ ೭೦
ಟೀಕಾರಾಯರಿಗೇನು ಪ್ರಯೋಜನ ? ೭೦
ಹರಿಪ್ರೀತಿಯೇ ಮುಖ್ಯಪ್ರಯೋಜನ ೭೧
ಆಚಾರ್ಯರ ಮಾತುಗಳೆಂಬ ಗಂಗಾಜಲದಲ್ಲಿ ನನ್ನ ಮಾತು ಸೇರಲಿ ೭೧
ಆಚಾರ್ಯರ ಮಾತುಗಳನ್ನು ಪರಸ್ಪರ ಹೊಂದಿಸುವುದಷ್ಟೇ ನನ್ನ ಕೆಲಸ ೭೨
'ತತ್ವಪ್ರದೀಪ' ಗ್ರಂಥವಿದ್ದರೂ ತತ್ವಪ್ರಕಾಶಿಕೆ ವ್ಯರ್ಥವಲ್ಲ ೭೨
ಭಾಷ್ಯದ ಮಂಗಳಾಚರಣಶ್ಲೋಕದ ಅವತಾರಿಕೆ ೭೪
ಅಥಶಬ್ದದಿಂದಲೇ ಟೀಕೆಯ ಪ್ರಾರಂಭ ೭೪
ಶ್ರೀಮದಾಚಾರ್ಯರ ಭಾಷ್ಯವು ಅನಾರಂಭಣೀಯವೇ? ೭೬
ಟೀಕೆಯ 'ಅಥ' ಶಬ್ದಕ್ಕೆ ಏನರ್ಥ? ೭೭
'ಅಥ' ಶಬ್ದಕ್ಕೆ ಅನೇಕಾರ್ಥಗಳಿವೆ ೭೭
೨೧ ಕುಭಾಷ್ಯಗಳು ೮೨
ಗ್ರಂಥಾರಂಭದಲ್ಲಿ ಮಂಗಳದ ಉಲ್ಲೇಖ ೮೩
ನಾರಾಯಣನಿಗೆ ನಮಸ್ಕಾರ ೮೪
ಮಂಗಳಶ್ಲೋಕದಲ್ಲಿರುವ ನಾಲ್ಕು ವಿಶೇಷಣಗಳ ವೈಶಿಷ್ಟ್ಯ ೮೪
ನಿರುಪಪದ ಸೂತ್ರ ಶಬ್ದವು ಮುಖ್ಯಾರ್ಥವಾಚಕ ೮೬
ಗುಣೈ ಸರ್ವೈರುದೀರ್ಣಂ ೮೭
ದೋಷವರ್ಜಿತಮ್ ೮೭
'ಜ್ಞೇಯಂ' 'ಗಮ್ಯಂ' ೮೮
ಭಾಷ್ಯದ ಮಂಗಳಶ್ಲೋಕದಲ್ಲಿರುವ ವಿಶೇಷಣಗಳ ಸಾರ್ಥಕ್ಯಚಿಂತನೆ ೮೯
ನಾರಾಯಣಪದದ ವ್ಯಾಖ್ಯಾನ ೯೩
ಬ್ರಹ್ಮಶಬ್ದಾರ್ಥವೇ ನಾರಾಯಣಶಬ್ದದ ಅರ್ಥ ೯೭
ನಾರಾಯಣ ಶಬ್ದಕ್ಕೆ ಬಹುಬಗೆಯ ನಿಷ್ಪತ್ತಿ ೯೮
'ನಾರಾಯಣ' ಎಂದರೆ ಜ್ಞಾನಕ್ಕೆ ಆಶ್ರಯ ೧೦೦

'ನಾರೀಯ' ಎಂದಾಗುವುದಿಲ್ಲ ೧೦೧
ಅನರಾಯಣ ಎಂದಾಗಬೇಕಲ್ಲವೇ? ೧೦೩
ನಿಪಾತವಾದ್ದರಿಂದ ನಾರಾಯಣ ಎಂದಾಗುತ್ತದೆ ೧೦೩
'ನಾರಾಯಣ' ಎಂಬಲ್ಲಿ ನಕಾರಕ್ಕೆ ಲೋಪವಿಲ್ಲ ೧೦೪
'ನಾರಾಯಣ' ಎಂಬಲ್ಲಿ ನಸಮಾಸ ೧೦೪
ನಾರಾಯಣಶಬ್ದದಲ್ಲಿ ನಮ್ಯತ್ವಪ್ರಯೋಜಕವಾದ ಗುಣಗಳು ೧೨೬
ಗುರುಗಳ ಹೆಸರನ್ನೇಕೆ ಉಚ್ಚರಿಸಬಾರದು ೧೨೭
'ಗುರೂನ್' ಎಂದು ಬಹುವಚನವೇಕೆ ? ೧೨೮
'ಚ' 'ಅಪಿ'ಶಬ್ದಗಳ ಸ್ವಾರಸ್ಯ ೧೨೯
ಅನುಬಂಧಚತುಷ್ಟಯವಿರುವುದರಿಂದ ಶಾಸ್ತ್ರವು ಅನಾರಂಭಣೀಯವಲ್ಲ ೧೩೦
ಮಂಗಳಾಚರಣೆಯ ಉಲ್ಲೇಖ ಬಹಳ ಮುಖ್ಯ ೧೩೨
ಬ್ರಹ್ಮಮೀಮಾಂಸಾಶಾಸ್ತ್ರ ರಚನೆಯ ಹಿನ್ನೆಲೆ ೧೩೪
ಎಂತಹ ಗ್ರಂಥವನ್ನು ಅಧ್ಯಯನ ಮಾಡಬೇಕು? ವ್ಯಾಖ್ಯೇಯಗ್ರಂಥದ ಲಕ್ಷಣವೇನು? ೧೩೬
ಉಪಾದೇಯಗ್ರಂಥವಷ್ಟೇ ವ್ಯಾಖ್ಯಾನಮಾಡಲು ಅರ್ಹ ೧೩೭
ತತ್ವಪ್ರದೀಪದ ವ್ಯಾಖ್ಯಾನ ಟೀಕೆಗೆ ಬಲು ಸಮ್ಮತ ೧೪೬
ಟೀಕೆಯ ಕಠಿಣಪದಾರ್ಥ ೧೪೬
ಭಾಷ್ಯದಲ್ಲಿ ವ್ಯಾಕ್ಯ ಯೋಜನೆ ೧೪೭
ವೇದವಿಭಾಗ ಹೇಗಾಯಿತು ? ೧೫೧
ಋಗ್ಭಾಷ್ಯದ ಸಮ್ಮತಿ ೧೫೧
ನಾಲ್ಕುವೇದಗಳ ಲಕ್ಷಣ ೧೫೨
ಋಗ್ಭಾಷ್ಯದಲ್ಲಿರುವ ಶ್ರುತಿಯ ವ್ಯಾಖ್ಯಾನ ೧೫೩
ವೇದವಿಭಾಗಕ್ಕೆ ಪುರಾಣದ ಆಧಾರ ೧೫೪
ಶಾಖಾಭೇದವೂ ಕೂಡ ವಿಭಕ್ತವಾಯಿತು ೧೫೫
ವೇದವಿಭಾಗಕಥನಕ್ಕೆ ಸಂಗತಿ ೧೫೫
ನಾಲ್ಕು ಎಂಬ ವಿಭಾಗ ಮೊದಲೇ ಇತ್ತು ೧೫೬
ಆದಿಪದಕ್ಕೆ ಮತ್ತೊಂದು ಅರ್ಥ ೧೫೬
ಹಿನ್ನೆಲೆ ನಿರೂಪಣೆಯ ಪ್ರಯೋಜನ ೧೫೮
'ಭಗವಾನ್' ಎಂದರೆ ವೇದವ್ಯಾಸರು ೧೫೯
ತತ್ವಪ್ರದೀಪದಲ್ಲಿ 'ಭಗವಾನ್' ಎಂಬ ಪದದ ವ್ಯಾಖ್ಯಾನ ೧೫೯

ಮೂರು ಬಗೆಯ ಆನುಕೂಲ್ಯಗಳು ಸ್ಪಷ್ಟವಾಗಿವೆ ೧೬೦
ಶ್ರುತಿ ಹಾಗೂ ಯುಕ್ತಿಮೂಲಕವೂ ಆಗಿದೆ ೧೬೦
ತ್ರಿವಿಧ ಪ್ರಾಮಾಣ್ಯವು ಸಮರ್ಥಿತವಾಯಿತು ೧೬೧
ಸೂತ್ರಾಗತಿವಿಚಾರಕ್ಕೆ ಸ್ಕಾಂದದ ಸಮ್ಮತಿ ೧೬೨
ತಾವು ನಿರೂಪಿಸಿದ ಪ್ರಮೇಯಕ್ಕೆ ಪುರಾಣದ ಉಲ್ಲೇಖ ೧೬೫
ಯುಗಕ್ಕೆ ತಕ್ಕಂತೆ ಮೇಧಾಶಕ್ತಿ ೧೬೭
ಬ್ರಹ್ಮಸೂತ್ರಗಳೇಕೆ ? ೧೬೮
'ಸೂತ್ರ' ಎಂದರೇನು ? ೧೬೮
ಶ್ರೀಮದಾಚಾರ್ಯರ ಭಾಷ್ಯ ಮಹಿಮೆ ೧೬೯
ಭಾಷ್ಯದ 'ಸ್ಥಿತಂ' ಪದದ ಅರ್ಥ ೧೭೦
'ಅನ್ಯಥಾಜಾತಂ' ಪದದ ಅರ್ಥ ೧೭೦
ಅಜ್ಞಾನಕ್ಕೆ ಕಾಲ ಹಾಗೂ ಶಾಪ, ಎರಡೂ ಕಾರಣಗಳು ೧೭೦
ಬರಗಾಲದಿಂದ ಪೀಡಿತರಾದ ಬ್ರಾಹ್ಮಣರು ಗೌತಮರ ಆಶ್ರಮ ಸೇರಿದರು ೧೭೨
ಗೋಹತ್ಯಾ ಅಪವಾದ ಹೊರಿಸಿ ಮರಳಿ ಬಂದರು ೧೭೩
ಗಂಗೆ ಗೋ-ದ-ವಾರಿ ಆಗಿ ಗೋದಾವರಿ ಆದಳು ೧೭೩
'ಜ್ಞಾನವು ನಾಶವಾಗಲಿ' ಎಂದು ಗೌತಮರು ಶಪಿಸಿದರು ೧೭೪
'ಉತ್ಸನ್ನಾನ್' ಎಂಬ ಪದದ ಅರ್ಥ ೧೭೪
ವೇದವಿಭಾಗ ಕಥನ ೧೭೫
'ತಸ್ಯ' ಎಂಬ ಭಾಷ್ಯದ ಏಕವಚನ ಪ್ರಯೋಗದ ಸ್ವಾರಸ್ಯ ೧೭೫
ಗೌತಮರ ಶಾಪದ ಕಥೆ ೧೭೬
'ಸೂತ್ರ' ಎಂದರೆ ಬ್ರಹ್ಮಸೂತ್ರವೇ ೧೭೯
ಸೂತ್ರಲಕ್ಷಣ ೧೮೨
''ಅಲ್ಪಾಕ್ಷರ'' ಎಂದರೆ ? ೧೮೬
''ಸಾರವತ್'' ಎಂದರೆ ?- ''ವಿಶ್ವತೋಮುಖ'' ಎಂದರೆ ? ೧೮೬
''ಅಸ್ತೋಭ'' ಎಂದರೆ ? ೧೮೭
ಸೂತ್ರಲಕ್ಷಣದಲ್ಲಿ ಎಲ್ಲಾ ವಿಶೇಷಣಗಳು ಸಾರ್ಥಕ ೧೮೭
ವಿಶೇಷಣವಿಲ್ಲದ್ದರಿಂದಲೇ ಬ್ರಹ್ಮಸೂತ್ರಗಳು ಮುಖ್ಯ ೧೯೧
ವ್ಯಾಪ್ತಿಯಿಂದ ಮುಖ್ಯತ್ವ ಪ್ರತಿಪಾದನೆ ೧೯೧
ಉಳಿದೆಲ್ಲ ಸೂತ್ರಗಳು ವಿಶೇಷಣಸಹಿತವಾಗಿದೆ ೧೯೨

'ಅನ್ಯೇ ವಿಶೇಷಣಾತ್' ಎಂಬ ಭಾಷ್ಯದ ಮಾತಿಗೆ ಸಾರ್ಥಕ್ಯ ಚಿಂತನೆ ೧೯೨
ಎರಡು ಬಗೆಯ ವ್ಯಾಪ್ತಿಯನ್ನು ಟೀಕೆಯಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು ೧೯೩
ಸೂತ್ರಲಕ್ಷಣ ಹೇಳಿದ್ದರ ಸಾರ್ಥಕ್ಯ ೧೯೩
'ಶಬ್ದಜಾತಸ್ಯ' ಎಂಬಲ್ಲಿರುವ ಷಷ್ಠೀವಿಭಕ್ತಿಯು ಕರ್ತೃರ್ಥದಲ್ಲಿದೆ ೧೯೫
ಪೂರ್ವಮೀಮಾಂಸೆಯು ಬ್ರಹ್ಮಮೀಮಾಂಸೆಯ ವ್ಯಾಖ್ಯಾನ ೧೯೬
ಭಾಷ್ಯದಲ್ಲಿ ಪುನರುಕ್ತಿ ಇಲ್ಲ ೧೯೬
ಜ್ಞಾನಸಂಪಾದನೆಯಲ್ಲಿ ಸಜ್ಜನರ ತವಕ ೧೯೭
ಋಷಿಮುನಿಗಳು ವೇದವ್ಯಾಸರ ಬಳಿ ಜ್ಞಾನ ಪಡೆದರು ೧೯೮
ಬ್ರಹ್ಮದೇವರಿಗೆ ಅಜ್ಞಾನ, ವಿಪರೀತಜ್ಞಾನ ಸರ್ವಥಾ ಇರುವುದಿಲ್ಲ ೧೯೮
ಉಳಿದೆಲ್ಲ ಸೂತ್ರಗಳು ಬ್ರಹ್ಮಸೂತ್ರಗಳ ವ್ಯಾಖ್ಯಾನ ೨೦೦
ಬ್ರಹ್ಮದೇವರ ಜ್ಞಾನ ಎಂದೂ ತಿರೋಹಿತವಾಗುವುದಿಲ್ಲ ೨೦೨
ಪ್ರಥಮಸೂತ್ರ ವ್ಯಾಖ್ಯಾನ ೨೦೫
ಅನುಬಂಧಚತುಷ್ಟಯವಿಲ್ಲದ ಕಾರಣ ಬ್ರಹ್ಮಜಿಜ್ಞಾಸೆ ಮಾಡಬೇಕಿಲ್ಲ!! ೨೦೫
ಅಧಿಕರಣಸಂಗತಿ ೨೦೭
ಪ್ರಧಾನವಾಗಿ ಸಂಗತಿಗಳು ಎರಡು ೨೦೭
ಅಧಿಕರಣ ಎನಿಸಲು ಐದು ಬೇಕು ೨೦೭
ಶಾಸ್ತ್ರಸಂಗತಿ ೨೦೯
ಈ ಐದು ಅಧಿಕರಣಗಳನ್ನು ಮೊದಲೇ ಉಲ್ಲೇಖಿಸಲು ಏನು ಕಾರಣ? ೨೦೯
ಅಧಿಕರಣದ ಸಂಶಯ ಹಾಗೂ ಸಂಶಯಬೀಜ ೨೨೦
ಹೆಚ್ಚಿನ ಸಂಶಯಕ್ಕಾಗಿ ತಾತ್ಪರ್ಯಚಂದ್ರಿಕಾ ೨೨೧
ಅಧಿಕರಣದ ಪೂರ್ವಪಕ್ಷ ೨೨೨
ನ್ಯಾಯವಿವರಣದಲ್ಲಿ ಹೇಳಿದ ಪೂರ್ವಪಕ್ಷ ೨೨೫
ನ್ಯಾಯವಿವರಣದಲ್ಲಿ ವಿಷಯಶೂನ್ಯತ್ವ ಹೇತುವಿನಿಂದಲೇ ಎಲ್ಲವೂ ಸೂಚಿತ ೨೨೫
ಬ್ರಹ್ಮನೇಕೆ ಅಸಂದಿಗ್ಧ? ೨೨೬
ಬ್ರಹ್ಮನ ಬಗ್ಗೆ ಪ್ರಮಾಣಗಳಿಲ್ಲ ೨೨೬
ಬ್ರಹ್ಮಪ್ರತಿಪಾದಕ ಶಬ್ದಗಳಿಂದ ಜೀವನೇ ಪ್ರತಿಪಾದ್ಯ ೨೨೭
ಜೀವ ಜಡಗಳ ಜಿಜ್ಞಾಸೆ ಅನಾವಶ್ಯಕ ೨೨೭
ಜೀವಜಿಜ್ಞಾಸೆ ಮಾಡಬಹುದೇ ? ೨೨೮
ಭಾಷ್ಯ ಹಾಗೂ ನ್ಯಾಯವಿವರಣೆಗಳ ಸಂಗಮ ೨೨೮

ಜೀವ ಸ್ವಪ್ರಕಾಶ ೨೩೦
ಪ್ರಾಭಾಕರರ ಪಕ್ಷ ತಪ್ಪು ೨೩೧
ಸುಷುಪ್ತಿಯಲ್ಲಿ ಎಲ್ಲವೂ ಉಪರತವಾಗುತ್ತವೆ ೨೩೨
ಸ್ವಪ್ರಕಾಶತ್ವ ಸಮರ್ಥನೆ ಪ್ರಾಸಂಗಿಕ ೨೩೨
ಸುಷುಪ್ತಿಯಲ್ಲಿನ ಅನುಭವ ಸಾಕ್ಷಿರೂಪ ೨೩೩
ಸಾಕ್ಷಿಜ್ಞಾನ ಸ್ಮರಣೆ ಆಗಲು ಸಾಧ್ಯವಿಲ್ಲ ೨೩೩
'ದೇವರು ಭಕ್ತರನ್ನು ಸ್ಮರಿಸುತ್ತಾನೆ' ಎಂಬುದಕ್ಕೆ ಏನರ್ಥ ? ೨೩೪
ಸುಷುಪ್ತಿಸುಖದ ಅನುಭವ ಮನೋವೇದ್ಯ ೨೩೫
ಶಾಸ್ತ್ರಕ್ಕೆ ವಿಷಯವಿಲ್ಲ ೨೩೭
ಪ್ರಯೋಜನ, ಅಧಿಕಾರಿ, ಸಂಬಂಧಗಳೂ ಇಲ್ಲ ೨೩೯
ಪೂರ್ವಪಕ್ಷದ ಫಲ ೨೪೦
ಬ್ರಹ್ಮಶಬ್ದದ ಬಲದಿಂದ ಅನುಬಂಧಚತುಷ್ಟಯ ೨೪೧
ವಿಷಯಾದಿಗಳ ನಿರೂಪಣಕ್ರಮದಲ್ಲಿ ಸ್ವಾರಸ್ಯ ೨೪೨
ತಾರ್ಕಿಕರ ಮತ್ತು ಪ್ರಾಭಾಕರರ ನಿರಾಕರಣೆ ೨೪೪
'ಅಥ' 'ಅತಃ' ಶಬ್ದಗಳ ಪ್ರಾಥಮ್ಯವಿಚಾರ ೨೪೫
ಅಧಿಕರಣದ ಸಿದ್ಧಾಂತ ೨೪೭
ಸೂತ್ರಕಾರರ ಮಂಗಳಾಚರಣೆ ೨೫೦
'ಅಥ' ಶಬ್ದವು ಹೇಗೆ ಮಂಗಳಮಯ ? ೨೫೧
'ಅಥ' ಶಬ್ದಾರ್ಥ ವಿಚಾರ ೨೫೫
'ಅಥ' ಶಬ್ದ ವ್ಯರ್ಥವೇ ? ೨೫೬
ಅಧಿಕಾರಿಯಲ್ಲಿ ಗುರುತಿಸಲು ಅಥಶಬ್ದ ಸಾರ್ಥಕ ೨೫೬
ಆನಂತರ್ಯಕ್ಕೆ ಯಾವುದು ಪ್ರತಿಯೋಗಿ ? ೨೫೭
'ಅತಃ' ಶಬ್ದಾರ್ಥ ವಿಚಾರ ೨೫೮
ಟೀಕೆಯಲ್ಲಿ ವಾಕ್ಯಯೋಜನೆ ೨೫೮
ಪಾಠಾಂತರದ ಬಗ್ಗೆ ೨೫೯
ಪಾಣಿನೀಸೂತ್ರದ ಪ್ರಾರಂಭದಲ್ಲಿ 'ಅಥಾತಃ' ಎಂದು ಹೇಳದಿದ್ದರೂ ವ್ಯಭಿಚಾರವಿಲ್ಲ ೨೫೯
ಟೀಕೆಯಲ್ಲಿ ಮಜಲಿನ ಅರ್ಥ ೨೬೦
ಓಂ, ಅಥ, ಅತಃ ಶಬ್ದಗಳ ವೈಶಿಷ್ಟ್ಯ ೨೬೦
'ಓಂ' 'ಅಥ' 'ಅತಃ' ಶಬ್ದಗಳು ಮೊದಲು ಹೊರಹೊಮ್ಮಿದವು ೨೬೨

'ಓಂ' 'ಅಥ' ಶಬ್ದಗಳಿಗೆ ಸ್ವರೂಪಾಧಿಕ್ಯ ಸಮರ್ಥನೆ ೨೬೫
'ಓಂ' ಶ್ರೀಹರಿಯಿಂದ ಮೊದಲು ಹೊರಹೊಮ್ಮಿದ್ದರಿಂದ ಸ್ವರೂಪತಃ ಉತ್ತಮವಾಗಿವೆ ೨೬೫
ಈ ವಿಷಯದಲ್ಲಿ ಸಾಮಾನ್ಯ ವ್ಯಾಪ್ತಿಯಿದೆ ೨೬೫
'ತೃತೀಯೋಽತ ಉದಾಹೃತಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ ೨೬೬
'ತದ್ಧೇತುತ್ವಮ್' ಎಂಬ ಭಾಷ್ಯದ ಪದಕ್ಕೆ ವ್ಯಾಖ್ಯಾನ ೨೬೬
ಓಂಕಾರವನ್ನು ಏಕೆ ಬಿಟ್ಟರಿ ? ೨೬೭
ಭಾಷ್ಯದಲ್ಲಿ ಓಂಕಾರವನ್ನು ವ್ಯಾಖ್ಯಾನಿಸದಿರಲು ಕಾರಣ ೨೬೭
ಸಕಲ ಶಬ್ದಗಳು 'ಅ'ಕಾರದ ವ್ಯಾಖ್ಯಾನ ೨೬೯
ಅಭಿಮನ್ಯ ಅಭಿಮಾನಿಗಳಿಗೆ ಐಕ್ಯ ವ್ಯವಹಾರ ಕಂಡಿದೆ ೨೭೦
ಓಂಕಾರ ವಾದ ೨೭೪
ಬ್ರಹ್ಮಮೀಮಾಂಸಾಶಾಸ್ತ್ರವನ್ನು ಓದಲು ಯಾರಿಗೆ ಅಧಿಕಾರ ? ೨೭೮
ಮೂರುಬಗೆಯ ಅಧಿಕಾರಿಗಳು ೨೮೦
ಮುಕ್ತಿಯೋಗ್ಯತ್ವವು ಅಧಿಕಾರಿಲಕ್ಷಣವಾಗುತ್ತದೆಯೇ? ೨೮೧
ಮುಕ್ತಿಯೋಗ್ಯತ್ವದ ವ್ಯಾಪ್ತಿ ೨೮೨
ಅಧಿಕಾರ ಲಕ್ಷಣಕ್ಕೆ ಅತಿವ್ಯಾಪ್ತಿ ೨೮೨
ಅಪಶೂದ್ರಾಧಿಕರಣದಿಂದ ಅಥಶಬ್ದಾರ್ಥವು ಗತಾರ್ಥವಲ್ಲ ೨೮೩
ಅಥಶಬ್ದಾರ್ಥದ ವ್ಯಾಪ್ತಿ ೨೮೪
ತ್ರೈವರ್ಣಿಕರಲ್ಲಿ ಎಲ್ಲರಿಗೂ ವೇದಾಧಿಕಾರವಿಲ್ಲ ೨೮೫
ಅಧ್ಯಯನಗಳೆಲ್ಲವೂ ಸಾರ್ಥಕವಲ್ಲ ೨೮೬
ಮೂರು ಬಗೆಯ ಅಧಿಕಾರಿಗಳ ಸ್ಪಷ್ಟ ಲಕ್ಷಣ ೨೮೮
ಅನೇಕ ಶ್ರುತಿ ಸ್ಮೃತಿಗಳಿಂದ ಅರ್ಹತೆಯ ನಿರ್ಧಾರ ೨೯೯
ಶ್ರುತ್ಯಾದಿಗಳಲ್ಲಿ ಹೇಳಲ್ಪಟ್ಟ ಅಧಿಕಾರ ಬ್ರಹ್ಮವಿದ್ಯೆಗೆ ಸಂಬಂಧಿಸಿದ್ದು ೩೦೨
ಅಧ್ಯಯನ ಮಾಡಿದರೆ ಮಾತ್ರ ಬ್ರಹ್ಮವಿದ್ಯಾಧಿಕಾರ ೩೦೫
ಅಧಿಕಾರಿಗಳಲ್ಲಿಯೂ ತಾರತಮ್ಯವಿದೆ ೩೦೫
ಬ್ರಹ್ಮವಿದ್ಯೆ ಎಂದರೆ ? ೩೦೭
ಟೀಕೆಯ ವ್ಯಾಖ್ಯಾನ ಭಾರದ್ವಾಜ ಸಂಹಿತೆಯನ್ನು ಅನುಸರಿಸಿದೆಯೇ? ೩೦೭
'ಶಮ' ಎಂದರೇನು ? - ತತ್ವಪ್ರದೀಪ ೩೦೮
ನಾರಾಯಣತಂತ್ರದ ಆಧಾರದಲ್ಲಿ 'ಪಶ್ಯೇತ್' ಎಂಬುದರ ವ್ಯಾಖ್ಯಾನ ೩೦೮
'ಏವಂವಿತ್' ಎಂದರೇನು ? ೩೦೯

| | |
|---|---|
| ಪಾಣಿನೀ ಸೂತ್ರದಂತೆ 'ಪಶ್ಯೇತ್' ಎಂಬ ಪದದ ವ್ಯಾಖ್ಯಾನ | ೩೧೦ |
| 'ಪಶ್ಯೇತ್' ಎಂಬ ಪ್ರಯೋಗ ಸರ್ವಥಾ ತಪ್ಪಲ್ಲ | ೩೧೦ |
| ವೈರಾಗ್ಯದಂತೆ ವಿವೇಕವು ಸಾಕ್ಷಾತ್ ಸಾಧಕವಲ್ಲ | ೩೧೧ |
| ಗುರೂಪಸತ್ತಿಗಿಂತ ಮೊದಲೇ ವಿವೇಕವಿರಬೇಕು | ೩೧೧ |
| ವಿವೇಕಾದಿಗಳು ಯಾರಲ್ಲಿ ಇರಬೇಕು ? | ೩೧೨ |
| ಬ್ರಹ್ಮವಿದ್ಯೆಗೆ ಶಮದಮಾದಿಗಳು ಅಂಗವೆ ? | ೩೧೨ |
| ಗುಣತಾರತಮ್ಯದಿಂದ ಅಧಿಕಾರಿ ತಾರತಮ್ಯ | ೩೧೩ |
| ಭಕ್ತ್ಯೈಕಲಭ್ಯಃ | ೩೧೪ |
| ಹರಿಪ್ರಸಾದೋ ಬಲವಾನ್ | ೩೧೪ |
| ಪರಮೋತ್ಕೃಷ್ಟ ಭಕ್ತಿ ಮಹಾವಿಷ್ಣುವಿನಲ್ಲಿ ಮಾತ್ರ | ೩೧೫ |
| ಉಳಿದವರಲ್ಲಿ ಯೋಗ್ಯತೆಗೆ ಅನುಗುಣವಾಗಿ | ೩೧೫ |
| ಭಕ್ತಿಯ ಪ್ರಕಾರ | ೩೧೬ |
| ಅನನ್ಯ ಭಕ್ತರಾಗಿರಿ | ೩೧೬ |
| ಸ್ತ್ರೀಶೂದ್ರಾದಿಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲ | ೩೧೯ |
| ಅಪರೋಕ್ಷಜ್ಞಾನಕ್ಕಾಗಿ ಬ್ರಹ್ಮಜಿಜ್ಞಾಸೆಯು ಆವಶ್ಯಕ | ೩೨೧ |
| ಅತಃಶಬ್ದಾರ್ಥವಿಚಾರ ಹಾಗೂ ಕರ್ತವ್ಯಾಪದವಿಚಾರ | ೩೨೨ |
| ವ್ಯೋಮಸಂಹಿತೆಯಲ್ಲಿ ಅಧಿಕಾರವಿಚಾರ | ೩೨೭ |
| ಭಾಷ್ಯವು ಉತ್ಪೂತ್ತಿತವಲ್ಲ | ೩೨೮ |
| ಮನುಷ್ಯದೇವತಾಸ್ತ್ರೀಯರಿಗೆ ವೇದಾಧಿಕಾರವಿದೆ | ೩೨೮ |
| ಸಂಕ್ಷೇಪಭಾಷ್ಯದ ಮಹಿಮೆ | ೩೨೯ |
| ಅಧಿಕಾರಿಯ ಸಾಮಾನ್ಯಲಕ್ಷಣ | ೩೩೦ |
| ಅತಃ ಶಬ್ದಾರ್ಥ ವಿಚಾರ | ೩೩೧ |
| ಅನುವ್ಯಾಖ್ಯಾನದ ಪ್ರಕಾರ 'ಅತಃ' ಶಬ್ದಾರ್ಥ | ೩೩೪ |
| ಜಿಜ್ಞಾಸಾ, ಜ್ಞಾನ ಪ್ರಸಾದ ಮೋಕ್ಷ | ೩೩೪ |
| ನ್ಯಾಯವಿವರಣಾನುಸಾರಿ ಪೂರ್ವಪಕ್ಷದ ನಿರಾಕರಣೆ | ೩೩೬ |
| ನ್ಯಾಯವಿವರಣೆ - ಭಾಷ್ಯಗಳ ಜೋಡಣೆ | ೩೩೮ |
| ಎರಡು ಬಾರಿ 'ಅತಃ' ಎಂದಿಟ್ಟುಕೊಳ್ಳಬೇಕು | ೩೪೦ |
| ಬ್ರಹ್ಮಜಿಜ್ಞಾಸೆಯ ಫಲ | ೩೪೧ |
| ಸಮಗ್ರ ಸೂತ್ರವ್ಯಾಖ್ಯಾನ | ೩೪೨ |

| | |
|---|---|
| ಶ್ರವಣಾದಿಗಳ ಬಗ್ಗೆ ಯಾಜ್ಞವಲ್ಕ್ಯರ ಉಪದೇಶ | ೩೪೬ |
| ಜಿಜ್ಞಾಸೆಯ ಫಲದಲ್ಲಿ ಪ್ರಮಾಣವಿಚಾರ | ೩೪೭ |
| ಶ್ರವಣಾದಿಗಳ ಬಗ್ಗೆ ಯಾಜ್ಞವಲ್ಕ್ಯರ ಉಪದೇಶ | ೩೪೭ |
| ವಿಷ್ಣುಪ್ರಸಾದವೇ ಜಿಜ್ಞಾಸೆಯ ಮುಖ್ಯಪ್ರಯೋಜನ | ೩೫೦ |
| ಪ್ರಸಾದವಿಲ್ಲದೇ ಮೋಕ್ಷವಾಗದು | ೩೫೦ |
| ಸುಧೆಯ ಪ್ರಕಾರ ಅನನ್ಯೋಪಪತ್ತಿ | ೩೫೧ |
| ಪ್ರಸಾದಕ್ಕೆ ಜ್ಞಾನ ಬೇಕು | ೩೫೧ |
| ಜ್ಞಾನಿಗಳಿಗೆ ಮಾತ್ರ ದೊರೆಯುವ ಭಗವಂತ | ೩೫೧ |
| ಸಾಕ್ಷಾತ್ಕಾರಕ್ಕಾಗಿ ಶ್ರವಣಾದಿಗಳು | ೩೫೨ |
| 'ಬ್ರಹ್ಮಜಿಜ್ಞಾಸಾ' ಎಂಬುದರ ಅರ್ಥ | ೩೫೨ |
| ಬ್ರಹ್ಮವಿಚಾರವನ್ನು ವಿಧಾನ ಮಾಡಿದಾಗ | ೩೫೩ |
| ಶ್ರವಣಮನನನಿದಿಧ್ಯಾಸನಗಳ ಪರಿಚಯ | ೩೫೩ |
| 'ಮನನ' ಮಾಡಬೇಕೆಂದು ಹೇಳಿದರೆ ಸಾಕು | ೩೫೪ |
| ಪುನಃ ಪುನಃ ಶ್ರವಣಾದಿಗಳೇಕೆ ? | ೩೫೪ |
| ಜಿಜ್ಞಾಸಾಪದವು ಏನನ್ನು ಹೇಳುತ್ತದೆ? | ೩೫೬ |
| 'ಜಿಜ್ಞಾಸಾ' ಎಂಬ ಪದ ವಿಚಾರವನ್ನು ಹೇಳುತ್ತದೆ | ೩೫೬ |
| ಶ್ರವಣ-ಮನನ-ನಿದಿಧ್ಯಾಸನಗಳು ಲಕ್ಷಣಯಾ ವಿವಕ್ಷಿತ | ೩೫೭ |
| 'ಭವತಿ' ಎಂಬ ಪದದ ಅಧ್ಯಾಹಾರ ವ್ಯರ್ಥ | ೩೫೭ |
| ಇಚ್ಛೆಯ ವಿಧಾನ ಏಕೆ ತಪ್ಪು? | ೩೫೮ |
| 'ಇಚ್ಛೆಯೇ ಹುಟ್ಟುವುದಿಲ್ಲ' ಎಂಬ ಆಕ್ಷೇಪಕ್ಕೆ 'ಭವತಿ' ಎಂಬುದು ಉತ್ತರವಲ್ಲ | ೩೫೮ |
| 'ಭವತಿ' ಪದದ ಅಧ್ಯಾಹಾರ ಶ್ರುತ್ಯನುಸಾರಿಯಲ್ಲ | ೩೫೯ |
| ಪ್ರಥಮ ಸೂತ್ರಕ್ಕೆ ವಿಷಯವಾಕ್ಯಗಳು ಅನೇಕ | ೩೬೦ |
| ವಿಷ್ಣುರೇವ ವಿಜಿಜ್ಞಾಸ್ಯಃ | ೩೬೦ |
| ಸಂಬೋಧನೆಯಿಂದ ವಿಧಿಶಕ್ತಿ ಕುಂಠಿತವಾಗುವುದಿಲ್ಲ | ೩೬೧ |
| ಕರ್ಮದಿಂದ ಅಥವಾ ಪ್ರವಚನದಿಂದ ಮೋಕ್ಷ ದೊರಕದು | ೩೬೨ |
| ಮೋಕ್ಷವು ಪ್ರಸಾದಸಾಧ್ಯವಾದರೆ ಪ್ರಸಾದವು ಜ್ಞಾನಸಾಧ್ಯ ಆಗಲೇಬೇಕು | ೩೬೩ |
| ಕರ್ಮದಿಂದ ಮೋಕ್ಷ ಹೇಳುವ ವಾಕ್ಯಗಳ ಅರ್ಥವಿಚಾರ | ೩೬೪ |
| ಪ್ರಸಾದಗಳಲ್ಲಿ ವಿಭಾಗ | ೩೬೪ |
| ಕರ್ಮದಿಂದ ಮೋಕ್ಷವೆನ್ನುವ ಶ್ರುತಿಗಳ ಅರ್ಥ | ೩೬೫ |

| | |
|---|---|
| ಕರ್ಮರು ಪ್ರಿಯರು; ಜ್ಞಾನಿಗಳು ಬಲುಪ್ರಿಯರು | ೩೬೫ |
| ನಾರಾಯಣನ ಪ್ರಸಾದವಿಲ್ಲದೆ ಮೋಕ್ಷವಿಲ್ಲ | ೩೬೬ |
| ಸುಧಾವಿರೋಧಪರಿಹಾರ | ೩೬೭ |
| 'ಶ್ರವಣಾದಿ' ಎಂಬ ಪದದ ಅರ್ಥವಿಚಾರ | ೩೬೮ |
| ವಿಚಾರದಲ್ಲಿ ರೂಢಿ, ಲಕ್ಷಣಾ ಅಲ್ಲ. (ಸ್ವಮತ) | ೩೭೦ |
| ಜ್ಞಾನೇಚ್ಛೆ ಎಂಬರ್ಥವೂ ಅಲ್ಲ (ಭಾಮತೀ ವಿಮರ್ಶೆ) | ೩೭೧ |
| ಭಗವಂತನ ಉತ್ತಮಪ್ರಸಾದವೇ ಮೋಕ್ಷಸಾಧಕ | ೩೭೪ |
| ಪ್ರಸಾದಜ್ಞಾನಗಳಿಗೆ ಕರ್ಮವು ಅಮುಖ್ಯಕಾರಣ | ೩೭೬ |
| ಕರ್ಮದಿಂದ ಉತ್ತಮ ಪ್ರಸಾದ ದೊರೆಯದು | ೩೭೭ |
| ಭಾಗವತತಾತ್ಪರ್ಯದ ವಿರೋಧಪರಿಹಾರ | ೩೭೮ |
| ವಿರೋಧಪರಿಹಾರ - ೧ | ೩೭೯ |
| ವಿರೋಧಪರಿಹಾರ - ೨ | ೩೭೯ |
| ವಿರೋಧಪರಿಹಾರ - ೩ | ೩೮೦ |
| ವಿರೋಧಪರಿಹಾರ - ೪ | ೩೮೦ |
| ಅತಃ ಶಬ್ದಾರ್ಥದ ಉಪಸಂಹಾರ | ೩೮೧ |
| ಅಪರೋಕ್ಷಜ್ಞಾನವು ಎರಡು ವಿಧ | ೩೮೨ |
| ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿದೆ | ೩೮೪ |
| ಬ್ರಹ್ಮಶಬ್ದಾರ್ಥ ವಿಷ್ಣು ಎನ್ನಲು ಅನೇಕ ಆಧಾರಗಳು | ೩೯೧ |
| ಸೂತ್ರದಲ್ಲಿರುವ ಬ್ರಹ್ಮಪದವ್ಯಾಖ್ಯಾನ | ೩೯೯ |
| ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕು | ೪೦೦ |
| ದೈವೀಮೀಮಾಂಸೆಯ ಅನಂತರ ಬ್ರಹ್ಮಮೀಮಾಂಸೆ | ೪೦೦ |
| ವಿಷ್ಣುವೆ ಬ್ರಹ್ಮನೆನ್ನಲು ದೈವೀಮೀಮಾಂಸೆಯ ಕೊನೆಯ ಸೂತ್ರ | ೪೦೧ |
| ಮಹಾಯೋಗ ಹಾಗೂ ವಿದ್ವದ್ಗೂಢಿಗಳಿಂದ ಬ್ರಹ್ಮನಲ್ಲಿ ಸಮನ್ವಯ | ೪೦೨ |
| ವಿದ್ವದ್ಗೂಢಿಯಿಂದ ಬ್ರಹ್ಮಶಬ್ದದ ಸಮನ್ವಯ | ೪೦೩ |
| ಮಹಾನಾರಾಯಣೋಪನಿಷತ್ತಿನ ಆಧಾರದಿಂದ ಬ್ರಹ್ಮಶಬ್ದಾರ್ಥ ನಿರ್ಣಯ | ೪೦೫ |
| ಸಕಲ ಶಬ್ದಗಳು ವಿಷ್ಣುವಾಚಕ | ೪೦೬ |
| ಶ್ರುತಿಲಿಂಗಾದಿಗಳಲ್ಲಿ ಉತ್ತರೋತ್ತರ ಪ್ರಾಬಲ್ಯವು ಸಾಪವಾದ ನಿಯಮ | ೪೦೭ |
| 'ವ್ಯಸ್ತಸಮಸ್ತ' ಎಂದರೇನು ? | ೪೦೮ |
| ಸಂವಾದ ಪ್ರಮಾಣದಿಂದ ವಿಶ್ವಕರ್ಮ ಸೂಕ್ತಪ್ರತಿಪಾದ್ಯ ನಾರಾಯಣನೇ | ೪೧೦ |

'ಸಮುದ್ರಶಾಯಿ' ನಾರಾಯಣನೇ ೪೧೧
ವೈಷ್ಣವಶಾಸ್ತ್ರಗಳಿಗೆ ಶೈವಶಾಸ್ತ್ರಗಳ ವಿರೋಧವಿಲ್ಲ ೪೧೨
ಸರ್ವೋತ್ತಮನಾದ ವಿಷ್ಣುವೇ ಜಿಜ್ಞಾಸ್ಯ ೪೧೫
ರುದ್ರಾದಿಗಳು ವಿವಕ್ಷಿತರಲ್ಲ ೪೧೮
ರುದ್ರ ಸರ್ವೋತ್ತಮತ್ವ ಕೇವಲ ಅಸುರ ಮೋಹಕ್ಕಾಗಿ ೪೧೯
ಶಿವಪಾರಮ್ಯದಲ್ಲಿ ಪ್ರಾಮಾಣ್ಯವಿಲ್ಲ ೪೨೦
'ವಿಶ್ವಾಧಿಕೋ ರುದ್ರಃ' ಎಂಬದೂ ಕೂಡ ವಿಷ್ಣುಪದ ೪೨೦
ಅಧಿಕರಣದ ಉಪಸಂಹಾರ ೪೨೧
ಗುಣಪೂರ್ಣನಾದ ಮಹಾವಿಷ್ಣುವೇ ಜಿಜ್ಞಾಸ್ಯನು ೪೨೧
ತತ್ವಪ್ರಕಾಶಿಕೆಯನ್ನು ವ್ಯಾಖ್ಯಾನಿಸಲು ಶ್ರೀವ್ಯಾಸತೀರ್ಥರೇ ಸಮರ್ಥರು ೪೨೨
ಜಿಜ್ಞಾಸಾಧಿಕರಣದ ಸಮಾಪ್ತಿ ೪೨೨

## ಜನ್ಮಾಧಿಕರಣ

ಜಿಜ್ಞಾಸ್ಯಬ್ರಹ್ಮನ ಲಕ್ಷಣ ೪೨೫
ಜನ್ಮಾಧಿಕರಣಕ್ಕೆ ಸಂಗತಿವಿಚಾರ ೪೨೬
ಸಂಶಯ - ಪೂರ್ವಪಕ್ಷ ೪೨೭
ಸಿದ್ಧಾಂತ ೪೨೮
ಸಂಗತಿಯ ಬಗ್ಗೆ ಹೆಚ್ಚಿನ ಮಾಹಿತಿ ೪೩೨
'ಶ್ರುತ್ಯುಕ್ತಬ್ರಹ್ಮಣಃ' ಎಂಬ ಟೀಕೆಯ ಸ್ವಾರಸ್ಯ ೪೩೩
'ವಿಷ್ಣುತ್ವ ಸಮರ್ಥನಾತ್' ಎಂಬ ಟೀಕೆಯ ಸ್ವಾರಸ್ಯ ೪೩೪
ಅಧಿಕರಣಸಂಗತಿ ಬಲು ಸ್ಪಷ್ಟ ೪೩೪
ಜಿಜ್ಞಾಸಾಧಿಕರಣ ಸಿದ್ಧಾಂತದ ಆಕ್ಷೇಪ ೪೩೫
ಆಕ್ಷೇಪಿಕೆ ಸಂಗತಿ ೪೩೫
ಶ್ರುತಿಸಂಗತಿಯೂ ಇದೆ ೪೩೮
ಎರಡು ಅಧಿಕರಣಗಳ ವಿಷಯವಾಕ್ಯ ಒಂದೇ; ಆದರೂ ತಪ್ಪಿಲ್ಲ ೪೩೮
ವಿಷಯವಾಕ್ಯದಲ್ಲಿ ಸುಧೆ ಟೀಕೆಗಳ ಅಭಿಪ್ರಾಯ ೪೩೯
'ಬ್ರಹ್ಮ'ಶಬ್ದಕ್ಕೆ ಯೌಗಿಕಾರ್ಥ ಸಿದ್ಧವಾಗಿಲ್ಲ ೪೪೧
ನ್ಯಾಯವಿವರಣ ವ್ಯಾಖ್ಯಾನ ೪೪೨

| | |
|---|---|
| ಬ್ರಹ್ಮಶಬ್ದದ ರೂಢಿ ಜೀವನಲ್ಲಿ ಮಾತ್ರ | ೪೪೨ |
| ನ್ಯಾಯವಿವರಣಕ್ಕನುಗುಣವಾದ ಟೀಕೆಯ ಪೂರ್ವಪಕ್ಷ | ೪೪೪ |
| ಶ್ರುತ್ಯುಕ್ತಬ್ರಹ್ಮ ಜೀವನೆಂದು ಪೂರ್ವಪಕ್ಷ | ೪೪೫ |
| ಸ್ವಪ್ರಕಾಶನ ಜಿಜ್ಞಾಸೆ ಅನಾವಶ್ಯಕ | ೪೪೫ |
| ಟೀಕೆಯ ಒಂದು ವಾಕ್ಯ ಪ್ರಕ್ಷಿಪ್ತ | ೪೪೭ |
| ಸಿದ್ಧಾಂತ ಪ್ರಾರಂಭ | ೪೪೮ |
| ವ್ಯಸ್ತಸಮಸ್ತ ಎಂದರೇನು? | ೪೪೯ |
| ಜಗತ್ಕಾರಣನೆಂದರೆ ಉಪಾದಾನಕಾರಣನೆಂದಲ್ಲ | ೪೫೧ |
| ಸೂತ್ರಭಾಷ್ಯಗಳ ಫಲಿತಾರ್ಥ | ೪೫೧ |
| ಸೃಷ್ಟ್ಯಾದ್ಯಷ್ಟಕರ್ತೃತ್ವವು ವಿಷ್ಣುವಿನಲ್ಲಿ ಮಾತ್ರ ಇದೆ | ೪೫೨ |
| 'ಸ್ಥಿತ್ಯಾದ್ಯಸ್ಯ' ಎಂದೇಕೆ ಸೂತ್ರವಿಲ್ಲ? | ೪೫೩ |
| ವಿಷ್ಣುವಿನಲ್ಲಿ ರೂಢಿಯಿಲ್ಲವೆಂದದ್ದು ಅಭ್ಯುಪಗಮವಾದ | ೪೫೩ |
| ಜನ್ಮಾದ್ಯಷ್ಟಕಗಳನ್ನು ಸ್ವೀಕರಿಸಲು ಮಾಡಬೇಕಾದ ಸಮಾಸ | ೪೫೬ |
| ಜನ್ಮಸ್ಥಿತ್ಯಾದಿಗಳಿಗೆ ಪೌರ್ವಾಪರ್ಯವಿಲ್ಲ | ೪೬೨ |
| ಕಠಿಣಪದಾರ್ಥ | ೪೭೦ |
| ತತ್ವಸಂಖ್ಯಾನದ ವಿರೋಧವಿಲ್ಲ | ೪೭೧ |
| ಬ್ರಹ್ಮನ ಈ ಲಕ್ಷಣಕ್ಕೆ ಅಸಂಭವದೋಷವಿಲ್ಲ | ೪೭೨ |
| ಲಕ್ಷಣವು ಬ್ರಹ್ಮನಲ್ಲಿದೆಯೆನ್ನಲು ಆಧಾರ | ೪೭೨ |
| ಸೃಷ್ಟ್ಯಾದ್ಯಷ್ಟಕಗಳನ್ನು ಸ್ವೀಕರಿಸಬೇಕೆನ್ನಲು ತತ್ವಪ್ರದೀಪದ ಅನಿವಾರ್ಯತೆ | ೪೭೩ |
| ಲಕ್ಷಣಸಮುದಾಯವು ವಿಷ್ಣುವಿನ ಅಸಾಧಾರಣಲಕ್ಷಣವೆನ್ನಲು ಕೈಮುತ್ಯನ್ಯಾಯ | ೪೭೫ |
| ತೊಂಬತ್ತು ಮಂದಿ ದೇವತೆಗಳು ವಿಷ್ಣುವಿನ ಕೈಗೊಂಬೆಗಳು | ೪೭೬ |
| ಪ್ರತ್ಯೇಕಶ್ರುತಿಗಳ ಉಲ್ಲೇಖಕ್ಕೆ ಏನು ಪ್ರಯೋಜನ? | ೪೭೭ |
| ಶ್ರುತಿಸ್ಮೃತಿಗಳ ವ್ಯಾಖ್ಯಾನ | ೪೭೮ |
| ''ಯ ಉ'' ಶ್ರುತ್ಯರ್ಥ | ೪೭೯ |
| ಏಕಾದಶಾದಿತ್ಯರು ಐವತ್ತು ಮರುತ್ತುಗಳು ಹೇಗೆ? | ೪೮೦ |
| ತೊಂಬತ್ತು ಮಂದಿ ದೇವತೆಗಳ ವಿವರ | ೪೮೧ |
| ಶ್ರುತಿಗಳ ಆಧಾರದಿಂದಲೇ ಅತಿವ್ಯಾಪ್ತಿಯ ಪರಿಹಾರ | ೪೮೪ |
| ವಿಷ್ಣುವಿನ ಮಹಿಮೆ ಹೊಂದಲು ತ್ರಿಕಾಲದಲ್ಲಿಯೂ ಯಾರಿಗೂ ಸಾಧ್ಯವಿಲ್ಲ | ೪೮೫ |

'ಪರೋ ಮಾತ್ರಯಾ' ಶ್ರುತ್ಯರ್ಥ ೪೮೭
'ಯೋ ನಃ ಪಿತಾ' ಶ್ರುತ್ಯರ್ಥ ೪೮೭
ಅಧಿಕರಣದ ಉಪಸಂಹಾರ ೪೮೮
ಟೀಕೆಯ ಗಾಂಭೀರ್ಯವರ್ಣನೆ ೪೯೦

## ಶಾಸ್ತ್ರಯೋನಿತ್ವಾಧಿಕರಣ

ಜಗತ್ಕಾರಣನ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣ ೪೯೨
ಸಂದೇಹ ಹಾಗೂ ಪೂರ್ವಪಕ್ಷ ೪೯೩
ಅನೇಕ ಪ್ರಮಾಣಗಳ ಆಧಾರದಿಂದ ಸಿದ್ಧಾಂತ ೪೯೪
ಹಿಂದಿನ ಅಧಿಕರಣದಿಂದ ಸಂಗತಿ ೪೯೮
ಮೂರನೇ ಅಧ್ಯಾಯದ ಸೂತ್ರದಿಂದ ಪುನರುಕ್ತಿಪರಿಹಾರ ೫೦೦
'ಅನ್ಯಸ್ಯ' ಎಂದೇಕೆ ಹೇಳಿದರು ೫೦೧
ಶಾಸ್ತ್ರಪದದಲ್ಲಿರುವ ಗಾಂಭೀರ್ಯ ೫೦೨
ಭಾಷ್ಯದಲ್ಲಿ ಶಾಸ್ತ್ರಪದ ವ್ಯಾಖ್ಯಾನ ೫೦೨
ರುದ್ರಾದಿಗಳಿಗೆ ಜಗತ್ಕಾರಣತ್ವ ಸಮರ್ಥನೆ ೫೦೪
ನ್ಯಾಯವಿವರಣದಲ್ಲಿರುವ ಸಮಶಬ್ದದ ಸ್ವಾರಸ್ಯ ೫೦೬
ಭಗವಂತನೊಬ್ಬನೇ ಜಗತ್ಕಾರಣನಾಗಲಾರ ೫೦೭
'ಶಾಸ್ತ್ರೈಕಂ' ಎಂಬ ಪ್ರಯೋಗವು ಸಾಧುವೇ? ೫೦೯
ಪೂರ್ವಪಕ್ಷಿಗಳ ಅನುಮಾನಕ್ಕೆ ಬಾಧ ೫೧೨
ಟೀಕೆಯಲ್ಲಿರುವ ಕಠಿಣಪದಗಳ ಅರ್ಥ ೫೧೩
ಶುಷ್ಕತರ್ಕಕ್ಕೆ ಜೋತುಬೀಳಬೇಡಿ ೫೧೪
ಅದೃಷ್ಟಾರ್ಥದಲ್ಲಿ ಅನುಮಾನವು ಪ್ರತ್ಯಕ್ಷದಂತೆ ದುಷ್ಟವಾಗಿದೆ ೫೧೭
ಭಾಷ್ಯದ ಆದಿಪದಾರ್ಥ ೫೧೯
ಪ್ರತ್ಯಕ್ಷ, ಅನುಮಾನಗಳಿಗೆ ದುಷ್ಟತ್ವ ಸಮರ್ಥನೆ ೫೨೧
ನಾಸ್ತಿಕರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ೫೨೬
ಈಶ್ವರನ್ನೊಪ್ಪದೇ ಗತಿಯಿಲ್ಲ ೫೨೭
ಈಶ್ವರನ ಅಸ್ತಿತ್ವಕ್ಕೆ ಹನ್ನೆರಡು ದೃಷ್ಟಾಂತಗಳು ೫೨೯
ನಾಸ್ತಿಕ್ಯವಾದನಿರಾಸವು ಸೂತ್ರಕಾರರಿಗೆ ಸಮ್ಮತವೇ ಆಗಿದೆ ೫೩೭

ಯೋನಿಪದ ವ್ಯಾಖ್ಯಾನದ ವ್ಯತ್ಯಾಸಕ್ಕೆ ಕಾರಣ ೫೩೭
ಹನ್ನೆರಡು ದೃಷ್ಟಾಂತಗಳಿಗೆ ನಾಸ್ತಿಕ್ಯವಾದ ನಿರಾಸಕತ್ವ ಸಮರ್ಥನೆ ೫೩೮
ಸಚ್ಛಾಸ್ತ್ರಗಳೇ ಮಾರ್ಗದರ್ಶಕಗಳು ೫೩೯
ಶಾಸ್ತ್ರ ಎಂದರೇನು ? ೫೪೦
ಪಾಶುಪತಾದಿಗಳು ಶಾಸ್ತ್ರವಲ್ಲ ೫೪೧
ಜಗತ್ಕರ್ತೃತ್ವಲಕ್ಷಣಕ್ಕೆ ಅತಿವ್ಯಾಪ್ತಿ ೫೪೧
ನ್ಯಾಯವಿವರಣದ ಸಮಶಬ್ದಾರ್ಥ ೫೪೨
ಪಂಚರಾತ್ರಾಗಮವಷ್ಟೇ ಸ್ವೀಕಾರಾರ್ಹ ೫೪೩
ಪಾಶುಪತಾದಿಗಳು ಕುಮಾರ್ಗಗಳೆನ್ನಲು ಮತ್ತೊಂದು ಕಾರಣ ೫೪೪
'ಶಾಸ್ತ್ರಯೋನಿ' ಎಂಬಲ್ಲಿ ಬಹುವ್ರೀಹಿಯನ್ನೇ ಮಾಡಬೇಕು ೫೪೭
ಸ್ಕಾಂದವನ್ನೇಕೆ ಉಲ್ಲೇಖಿಸಿದರು? ೫೪೯
ವೇದಾರಣ್ಯಕ ಎಂದರೇನು? ೫೪೯
ಮೋಕ್ಷಧರ್ಮದಲ್ಲಿರುವ ಪ್ರಸಂಗನಿರೂಪಣೆ ೫೫೦
ವೇದಕ್ಕೂ ಪಂಚರಾತ್ರಕ್ಕೂ ಐಕ್ಯಾಭಿಪ್ರಾಯವಿದೆ ೫೫೨
ಟೀಕೆಯಲ್ಲಿರುವ ಕಠಿಣಪದಾರ್ಥ ೫೫೮
ಯೋನಿಶಬ್ದಾರ್ಥ ೫೫೯
'ಜಪ್ತಿ' ಎಂಬ ಪದಪ್ರಯೋಗಕ್ಕೆ ಏನು ಕಾರಣ? ೫೬೦
ಗಮ್ಯಪದವನ್ನು ಪ್ರಯೋಗಿಸದೆ ಯೋನಿ ಎಂದು ಪ್ರಯೋಗಿಸಲು ಏನುಕಾರಣ ? ೫೬೧
ಗೀತಾಭಾಷ್ಯವನ್ನು ಸ್ಮರಿಸಿಕೊಳ್ಳಿರಿ ೫೬೨
ವೇದಗಳಿಗೆ ಪೌರುಷೇಯತ್ವವನ್ನು ಒಪ್ಪಬಾರದು ೫೬೩
ಚಂದ್ರಿಕಾಪ್ರಕಾಶವನ್ನು ಓದಿರಿ ೫೬೪

## ಸಮನ್ವಯಾಧಿಕರಣ

ರುದ್ರಾದಿಗಳೇಕೆ ಶಾಸ್ತ್ರಪ್ರತಿಪಾದ್ಯರಲ್ಲ? ೫೭೦
ಸಂಗತಿ ಮತ್ತು ಸಂಶಯ ೫೭೨
ಪೂರ್ವಪಕ್ಷ, ಸಿದ್ಧಾಂತ ೫೭೨
ಆಪಾತತಃ ತೋರಿದ್ದು ನಿಜಾರ್ಥವಲ್ಲ ೫೭೩

ಆಕ್ಷೇಪಿಕೀ ಸಂಗತಿ ೫೭೫
'ಅನ್ಯಸ್ಯ' ಎಂಬಲ್ಲಿರುವ ಏಕವಚನಾರ್ಥ ೫೭೬
ಎರಡು ಭಾಷ್ಯಗಳಿಂದ ತಿಳಿಯುವ ಸ್ವಪ್ನ ಪೂರ್ವಪಕ್ಷ ೫೭೬
ಹಿಂದಿನ ಅಧಿಕರಣದಿಂದ ಗತಾರ್ಥತ್ವವಿಲ್ಲ ೫೭೯
ಭಾಷ್ಯದ ವಾಕ್ಯಕ್ಕೆ ಎರಡು ಬಗೆಯ ಯೋಜನೆ ೫೮೨
ಷಡ್ವಿಧ ತಾತ್ಪರ್ಯಲಿಂಗಗಳು ೫೮೩
ತಾತ್ಪರ್ಯಲಿಂಗಗಳ ಪರಿಚಯ ೫೮೭
ಪ್ರಾಬಲ್ಯದೌರ್ಬಲ್ಯ ವಿಚಾರ ೫೯೦
ತಾತ್ಪರ್ಯಲಿಂಗಗಳ ಸ್ವರೂಪ ೫೯೨
ಭಾಷ್ಯದಲ್ಲಿ ಉಪಪತ್ತಿಯನ್ನು ಮೊದಲು ಹೇಳಿದ್ದೇಕೆ ೬೦೧
ಉಪಕ್ರಮಾದಿಗಳಿಗೆ ಲಿಂಗತ್ವ ಸಮರ್ಥನೆ ೬೦೪
ನಿರವಕಾಶವೇ ಪ್ರಬಲ ೬೦೫
ಸ್ವಭಾವತಃ ಪ್ರಬಲವಾದದ್ದಕ್ಕೆ ನಿರವಕಾಶತ್ವ ನಿಯಮವಿದೆಯೆ? ೬೦೭
ಶ್ರುತಿಲಿಂಗಾದಿಗಳನ್ನು ವಿವಕ್ಷಿಸಬೇಕೆ? ೬೦೭
ನ್ಯಾಯವಿವರಣದಲ್ಲಿ ಸಮನ್ವಯಶಬ್ದಾರ್ಥ ೬೦೮
ನ್ಯಾಯವಿವರಣವನ್ನು ಸೇರಿಸಿಕೊಂಡು ಭಾಷ್ಯವ್ಯಾಖ್ಯಾನ ೬೦೯
ಎಲ್ಲವೂ ಹರಿಪರ ೬೧೦
ಕರ್ಮಕಾಂಡವೂ ಹರಿಪರ ೬೧೧
ಕರ್ಮಕಾಂಡ ಪ್ರತಿಪಾದಕತ್ವವನ್ನು ಹೇಳುವುದು ಅನಿವಾರ್ಯವೆ? ೬೧೪
ಸಕಲಶಬ್ದಗಳ ಸಮನ್ವಯದಿಂದ ಸಕಲಗುಣಪರಿಪೂರ್ಣತ್ವದ ಸಿದ್ಧಿ ೬೧೭
'ಏತೇನ ಸರ್ವೇ' ಎಂಬ ಸೂತ್ರದಿಂದ ಪುನರುಕ್ತಿಯಿಲ್ಲ ೬೧೯
ಸಮನ್ವಯಾಧಿಕರಣದ ಸಮಾಪ್ತಿ ೬೨೦

ಅಸ್ಮದ್ಗುರ್ವಂತರ್ಗತ-ಶ್ರೀಮದ್-ರಾಘವೇಂದ್ರತೀರ್ಥಗುರುರ್ವಂತರ್ಗತ-ಶ್ರೀಮದ್-ಹನುಮ-ಭೀಮ-
ಮಧ್ವಾಂತರ್ಗತ-ರಾಮ-ಕೃಷ್ಣ-ವೇದವ್ಯಾಸಾತ್ಮಕ-ಶ್ರೀಲಕ್ಷ್ಮೀಹಯಗ್ರೀವಃ ಪ್ರೀಯತಾಮ್ ॥

॥ಶ್ರೀ ಮದ್ವೇಶಾರ್ಪಣಮಸ್ತು ॥

ಜಯ ಶ್ರೀರಾಘವೇಂದ್ರ ಗುರೋ !!



ವೇದವೆಂಬ ಭೂಮಿಯಲ್ಲಿ ಭಗವಾನ್ ವ್ಯಾಸರು
ಬ್ರಹ್ಮಸೂತ್ರವೆಂಬ ಬೀಜವನ್ನು ಬಿತ್ತಿದರು.
ಶ್ರೀಮಧ್ವಾಚಾರ್ಯರ ಭಾಷ್ಯದಿಂದ ಹೊಳೆಯುವ
ಮೊಳಕೆ ಹುಟ್ಟಿತು.
ಪ್ರಾಚೀನರ ವ್ಯಾಖ್ಯಾನಗಳಿಂದ ಕಿಂಚಿತ್ ಕವಲುಗಳು ಕಂಡವು.
ಶ್ರೀ ಜಯತೀರ್ಥರ ಟೀಕೆಗಳಿಂದ ಗಟ್ಟಿಮುಟ್ಟಾದ ಶಾಖೆಗಳು ಮೂಡಿದವು.
ಶ್ರೀ ವ್ಯಾಸರಾಜರ ಟಿಪ್ಪಣಿಗಳಿಂದ ಕಿಸಲಯವಾಯಿತು
ಶ್ರೀವಿಜಯೀಂದ್ರರ ವಿವರಣೆಗಳಿಂದ ಪುಷ್ಪಗಳು ಪುಟಿದೆದ್ದವು.
ಇಂದು ಶ್ರೀ ರಾಘವೇಂದ್ರಗುರುಸಾರ್ವಭೌಮರ
ಅಮೃತಮಯ ಕೃತಿಗಳಿಂದ ಫಲಗಳುಂಟಾಗಿ
ಮಧ್ವಸಿದ್ಧಾಂತವೆಂಬ ಮಹಾವೃಕ್ಷವು
ಸೊಭಗಿನಿಂದ ಕಂಗೊಳಿಸುತ್ತಿದೆ.

ಸ್ಫೂರ್ತಿ – ಗುರುಗುಣಸ್ತವನ

ಪ್ರಕಾಶನ
ಶ್ರೀ ಗುರುಸಾರ್ವಭೌಮ ಸಂಶೋಧನಾ ಮಂದಿರ, ಮಂತ್ರಾಲಯ